ರಿಜಿಸ್ಟರ್ಡ್. ನಂ. 798

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಅದ್ಭುತ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜಂಟರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1 [illegible]
ಶ್ರೀನಿವಾಸ [illegible] ಪೇಟೆ,
ಬೆಂಗಳೂರು -2

ಪುಟ : ೧೫] SADHVI ; MONDAY 1—10—1956 ಮೈಸೂರು ; ಸೋಮವಾರ ೧—೧೦—೧೯೫೬ [ಸಂಚಿಕೆ : ೩೦

ಂದೇ ಪ್ರದೇಶ ಕಾಂಗ್ರೆಸ್ ಸಮಿತಿಗೆ ಎಂ.ಪಿ.ಸಿ.ಸಿ. ಒಪ್ಪಿಗೆ

ಕನ್ನಡ ನಾಡಿಗೆಲ್ಲಾ ಒಂದೇ ಪ್ರದೇಶ ಕಾಂಗ್ರೆಸ್ ಸಮಿತಿ

ಎಂ. ಪಿ. ಸಿ. ಸಿ ಸಭೆಯಲ್ಲಿ ಒಪ್ಪಿಗೆ

ಇಡೀ ಕನ್ನಡ ಪ್ರಾಂತಕ್ಕೆ ಒಂದೇ ಪ್ರದೇಶ ಗ್ರೆಸ್ ಸಮಿತಿಯಿರಬೇಕೆಂದು ಕಾಂಗ್ರೆಸ್ ಮಾಂಡಿನವರು ಕಳುಹಿಸಿದ್ದ ನಿರ್ದೇಶನವ ತುಮಕೂರಿನಲ್ಲಿ ನೆನ್ನೆ ಸೇರಿದ್ದ ಪ್ರದೇಶ ಗ್ರೆಸ್ ಸಮಿತಿ ಸಭೆಯು ಸರ್ವಾನುಮತದಿಂ ಂಗೀಕರಿಸಿತು

ಮೇಲ್ಕಂಡ ನಿರ್ದೇಶನವನ್ನು ಸ್ವಾಗತಿಸುವ ಣಯವನ್ನು ಶ್ರೀ ವಿ ವೆಂಕಟಪ್ಪನವರು ಮಂ ದರು ಶ್ರೀ ಎ ಭೀಮಪ್ಪನಾಯಕರು ಅನು ದಿಸಿದರು

ಶ್ರೀ ಎ ಆರ್ ಬದರೀನಾರಾಯಣರಾಯರು ತನಾಡಿ ಕೊಳ್ಳೇಗಾಲವು ಮೈಸೂರು ಪ್ರದೇಶ ಪತಿ ವ್ಯಾಪ್ತಿಗೆ ಸೇರುವುದೇ ಎಂದು ಕೇಳಲಾ ಮೈಸೂರು ಆಡಳಿತದವರು ಆ ತಾಲ್ಲೂಕನ್ನು ಸೂರು ಪ್ರದೇಶಕ್ಕೆ ಸೇರಿಸಿರುವರೆಂದೂ, ಈ ರ್ಣವು ಈಗಾಗಲೇ ಇತ್ಯರ್ಥವಾಗಿರುವುದೆಂ ಅಧ್ಯಕ್ಷರು ತಿಳಿಸಿದರು

ಶ್ರೀ ಕೆ ಸಿ ರೆಡ್ಡಿಯವರು ಮಾತನಾಡಿ ಪ್ರಾ ಶಿಕ ಭಾವನೆಯನ್ನು ಬಿಟ್ಟು ಎಲ್ಲರೂ ಹೊಸ ಸೂರಿನ ಭವಿಷ್ಯಕ್ಕೆ ಗಮನ ಕೊಡಬೇಕೆಂದು ಸಿದರು

ಶ್ರೀ ಎಸ್ ನಿಜಲಿಂಗಪ್ಪನವರು ಮಾತನಾಡಿ ಕ್ಯದಿಂದಲೂ ತಾವು ಕಾಣುತ್ತಿದ್ದ ಕನಸು ನನ ಗುತ್ತಿರುವ ಬಗ್ಗೆ ಸಂತೋಷವನ್ನು ವ್ಯಕ್ತಪಡಿ ಎಲ್ಲ ಕನ್ನಡಿಗರಿಗೂ ಒಂದೇ ಪ್ರಾಂತವಿರುವು ಂದ ಕರ್ನಾಟಕ ಅಥವಾ ಮೈಸೂರು ಎಂಬ ರಿನಿಂದ ಹೆಚ್ಚಿನ ಪ್ರಭಾವವೇನೂ ಇರುವುದಿ ಂದು ಅಭಿಪ್ರಾಯಪಟ್ಟರು

ರ್ಣಯವು ಸರ್ವಾನುಮತದಿಂದ ಅಂಗೀಕೃ ಯಿತು

ಂತರ, ಈಗ ಇರುವ ಶ್ರೀ ಎಂ ಎ. ಗೋ ಸ್ವಾಮಿಯವರನ್ನೇ ಪ್ರದೇಶ ಕಾಂಗ್ರೆಸ್ ಚುನಾವಣಾಧಿಕಾರಿಯನ್ನಾಗಿ ನೇಮಿಸಲಾಯಿತು ಪ್ರದೇಶ ಕಾಂಗ್ರೆಸ್ಸಿಗೆ ಸೇರಿದಂತಹ ಸ್ಥಿರ ಆ ಗಾಗಿ ಒಬ್ಬ ಅಥವಾ ಹೆಚ್ಚಿನ ಧರ್ಮದರ್ಶಿ ಸಮಿತಿಗಳನ್ನು ನೇಮಿಸಲು ಪ್ರದೇಶ ಕಾ ಕಾರಿ ಸಮಿತಿಗೆ ಅಧಿಕಾರವೀಯಲಾ

ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿ ಅವರು ತಮ್ಮ ಪೀಠಿಕಾ ಭಾಷಣದಲ್ಲಿ ಬರ್ ೧ರಿಂದ ಕನ್ನಡ ಪ್ರದೇಶಗಳೆಲ್ಲಾ ಪ್ರದೇಶ ಸಮಿತಿಯಾಗುವುದೆಂದು ತಿಳಿಸಿ ಗ್ಗೆ ರಾಷ್ಟ್ರೀಯ ಮುಖಂಡರ ನಿರ್ಧಾರವ ಗತ ಮಾಡುವುದು ಎಲ್ಲರ ಕರ್ತವ್ಯ ನುಡಿದರು

ದೇಶ ಚುನಾವಣಾ ಸಮಿತಿಯ ಆಯ್ಕೆಯ ಯವನ್ನು ಮೊದಲು ಪರಿಶೀಲಿಸಿ ವಿಪುಲ ಚ ಮಾಡಿದನಂತರ ಈ ವಿಷಯವನ್ನು ಕಾರ್ಯ ಸಮಿತಿಯ ನಿರ್ಧಾರಕ್ಕೆ ಬಿಡಲು ರ್ಮಾನಿಸಲಾಯಿತು.

ಮಿತಿಯಲ್ಲಿ ೬ ಜನರಿರಬೇಕೆಂದು ಕಾರ್ಯ ಸಮಿತಿಯು ನಿರ್ಧರಿಸಿರುವುದಾಗಿ ಅಧ್ಯಕ್ಷರು ತಿಳಿಯಪಡಿಸಿದರು

ನೂತನ ಮೈಸೂರು ಗವರ್ನರ್‌ಗಿರಿ

ಮಹಾರಾಜರ ನೇಮಕದ ವಿಷಯ ಇನ್ನೂ ಇತ್ಯರ್ಥವಾಗಿಲ್ಲ

ತುಮಕೂರು ೧

ತುಮಕೂರಿನಲ್ಲಿ ಸೇರಿರುವ ಮೈಸೂರು ಪ್ರದೇಶ ಕಾಂಗ್ರೆಸ್ ಅಧಿವೇಶನದಲ್ಲಿ ಭಾಗವಹಿಸಿದ್ದ ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ಪತ್ರಿಕಾ ಪ್ರತಿನಿಧಿಗಳೊಡನೆ ನೆನ್ನೆ ಸಂಭಾಷಿಸಿ, ನವೆಂಬರ್ ೧ರಿಂದ ನೂತನ ಮೈಸೂರು ಸಂಸ್ಥಾನಕ್ಕೆ ಮೈಸೂರಿನ ರಾಜಪ್ರಮುಖರು ಪ್ರಥಮ ಗವರ್ನರರಾಗಿ ನೇಮಿಸಲ್ಪಡುವ ವಿಷಯವು ಕೇಂದ್ರ ಮಂತ್ರಿಮಂಡಲದ ಮಟ್ಟದಲ್ಲಿ ತೀರ್ಮಾನವಾಗಿಲ್ಲವೆಂದೂ, ರಾಜಪ್ರಮುಖರು ಗವರ್ನರರಾಗುವರೆಂದು ಬರುತ್ತಿರುವ ಸುದ್ದಿಯು ಇನ್ನೂ ಅಕಾಲಿಕವೆಂದೂ ತಿಳಿಸಿದ್ದಾರೆ

ಕಳೆದ ಬುಧವಾರ ಬೆಂಗಳೂರಿನ ಸಮಾರಂಭವೊಂದರಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಚ್ ಚನ್ನಯ್ಯನವರು ಮಹಾರಾಜರನ್ನು ಗವರ್ನರರಾಗಿ ನೇಮಿಸಲು ಕೇಂದ್ರ ಸರ್ಕಾರದವರು ಒಪ್ಪಿರುವರೆಂದು ತಿಳಿಸಿದ್ದರು

ಹೊಸ ಮೈಸೂರು ವಿಧಾನ ಪರಿಷತ್ತಿಗೆ ೮ ಸದಸ್ಯರ ಆಯ್ಕೆ

ನೂತನ ಮೈಸೂರು ಮತ್ತು ಬೊಂಬಾಯಿ ಸಂಸ್ಥಾನಗಳ ವಿಧಾನ ಪರಿಷತ್ತುಗಳಿಗೆ ಈ ತಿಂಗಳು ೩೧ ರೊಳಗೆ ವಿಧಾನ ಸಭೆಗಳಿಂದ ಚುನಾವಣೆಯಾಗಬೇಕೆಂದು ವಿಧಾಯಕ ಮಾಡಲಾಗಿದೆ ಅದರ ಪ್ರಕಾರ, ಮೈಸೂರು ವಿಧಾನ ಪರಿಷತ್ತಿಗೆ ಹೈದರಾಬಾದಿನ ಶಾಸನ ಸಭೆಯ ಸದಸ್ಯರು ೩ ಜನ, ಕೊಡಗು ವಿಧಾನ ಸಭೆಯವರು ಒಬ್ಬರು ಮತ್ತು ಮದ್ರಾಸಿನ ಸದಸ್ಯರು ಒಬ್ಬರನ್ನು ಆರಿಸಬೇಕಾಗಿದೆ. ಬರುವ ಗುರುವಾರ ನಾಮಪತ್ರಗಳ ಸ್ವೀಕಾರವೂ, ೧೧ನೇ ತಾರೀಕು ಅವಶ್ಯಕವಿದ್ದರೆ ಚುನಾವಣೆಯೂ ಆಗಲಿದೆ. ಬೊಂಬಾಯಿ ಶಾಸನ ಸಭೆಯಿಂದ ಮೈಸೂರು ವಿಧಾನ ಪರಿಷತ್ತಿಗೆ ಮೂವರು ಸದಸ್ಯರ ಆಯ್ಕೆಯು ೧೨ನೇ ತಾರೀಕು ನಡೆಯುವುದು. ಶುಕ್ರವಾರ ನಾಮಪತ್ರಗಳ ಸ್ವೀಕಾರವಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೦ ವೈಷ್ಣವಜನತೋ ಗೀತೆ ೭-೩ ಮಂಗಳವಾದ್ಯ-ನಾಗಸ್ವರ ೭-೧೫ [illegible] ಸಮಂತಕಮಣಿ-ಕನ್ನಡ ಗೀತೆ ೭-೩೦ ವೇದವಾಚನ-ಕನ್ನಡ ವ್ಯಾಖ್ಯಾನ ಸಮೇತ ೮ [illegible] ಕಾರ್ಯ ಮಧ್ಯಾಹ್ನ ೧೨ ಕೆ ಎಸ್ ಮುನಿವೆಂಕಟಪ್ಪ ವೀಣೆ ೧೨-೩೦ [illegible] ೧೨-೪೫ [illegible] ೧-೪೦ ಮುಖವೀಣೆ ೨-೧೫ ಮತ್ತು ೩- ೭ ರಿಕಾರ್ಡು ಸಂಜೆ ೫-೩೦ ಮತ್ತು ೮ ಎಂ ಎ ನರಸಿಂಹಾಚಾರ್-ಸಂಗೀತ ೬ ೧೦ ಪ್ರಾದೇಶಿಕ ಕನ್ನಡ ಸುದ್ದಿ ೭-೦ ಹರಿನಾರಾಯಣ್-ಕಾವ್ಯ ವಾಚನ ೭-೧೦ ಬಾಪೂಜಿ ಕನ್ನಡ ಭಾಷಣ ೮ ೬೦ ದೆಹಲಿಯಿಂದ ೯-೧೫ ಸಂಗೀತ [illegible] ಎ ಎಸ್ ಕೃಷ್ಣ ೧೦ ಅಮರವಾಣಿ-ಗಾಂಧೀಜಿ ಸ್ಮರಣಾ ಸಭೆ

ಚಿನ್ನದ ಗಣಿ ರಾಷ್ಟ್ರೀಕರಣ ಮಸೂದೆಯ ಮಂಡನೆ

ನವೆಂಬರ್ ೩೦ರೊಳಗೆ ಸರ್ಕಾರದ ವಶಕ್ಕೆ

ಬೆಂಗಳೂರು ೧

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಮಸೂದೆಯನ್ನು ಈ ದಿನ ವಿಧಾನ ಸಭೆಯಲ್ಲಿ ಮಂಡಿಸಲಾಯಿತು ಅದರ ಪ್ರಕಾರ, ಬರುವ ತಿಂಗಳು ೩೦ರೊಳಗೆ ಗಣಿಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗುವುದು

ಡೈರೆಕ್ಟರು, ಮ್ಯಾನೇಜಿಂಗ್ ಏಜೆಂಟರು, ಮುಂತಾದ ಆಡಳಿತದವರನ್ನು ಬಿಟ್ಟು, ಮಿಕ್ಕ ಎಲ್ಲ ನೌಕರರನ್ನೂ ಹೊಸ ಆಡಳಿತಕ್ಕೆ ಒಳಪಡಿಸಬೇಕೆಂದು ಸೂಚಿಸಲಾಗಿದೆ ಕಂಪೆನಿಯ ಆಸ್ತಿ ಅಥವಾ [illegible] ಕಾಗದಪತ್ರಗಳನ್ನು ಒಪ್ಪಿಸದಿದ್ದರೆ ಅದಕ್ಕೆ ೨ ವರ್ಷ ಸಜಾ, ೫,೦೦೦ ರೂ ದಂಡದ ಶಿಕ್ಷೆಯನ್ನು ವಿಧಿಸಲಾಗುವುದು ಅದೇ ಅಪರಾಧವನ್ನು ಮುಂದುವರಿಸಿದರೆ ದಿನಕ್ಕೆ ೫೦೦ ರೂ ನಂತೆ ಮುಂದೆ ದಂಡ ಹಾಕಲಾಗುವುದು

ರೇಷ್ಮೆ ಸಮಿತಿ ಕಛೇರಿ ಬೆಂಗಳೂರಿಗೆ

ಬೆಂಗಳೂರು ೧

ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ಮೊನ್ನೆ ಶಾಸನ ಸಭೆಯಲ್ಲಿ ಮಾತನಾಡಿ ಕೇಂದ್ರ ರೇಷ್ಮೆ ಸಮಿತಿಯ ಮುಖ್ಯ ಕಛೇರಿಯು ಬೊಂಬಾಯಿಯಿಂದ ಇಲ್ಲಿಗೆ ವರ್ಗಾಯಿಸಲ್ಪಡುವುದೆಂದು ತಿಳಿಸಿದರು

ಕಾಂಗ್ರೆಸ್ಸನ್ನು ಅಧಿಕಾರದಿಂದ ತಳ್ಳಲು ಸಾಧ್ಯವಿಲ್ಲ

ಕಮ್ಯೂನಿಸ್ಟ್ ನಾಯಕರ ಹೇಳಿಕೆ

ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯಘೋಷರು ಹೇಳಿಕೆಯಿತ್ತು ಬರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸನ್ನು ಅಧಿಕಾರದಿಂದ ತಳ್ಳಲು ಸಾಧ್ಯವಿಲ್ಲವೆಂದೂ, ಎಲ್ಲ ವಾಮ ಪಕ್ಷಗಳೂ ಒಂದುಗೂಡಿದರೆ ಕಾಂಗ್ರೆಸ್ಸಿನ ಬಹುಮತವನ್ನು ತೀವ್ರವಾಗಿ ಕಡಿಮೆ ಮಾಡಬಹುದೆಂದೂ ತಿಳಿಸಿರುತ್ತಾರೆ.

ಮದ್ರಾಸು ನಗರದಲ್ಲಿ ಕಾಡುಮೃಗಗಳ ಮೆರವಣಿಗೆ

ವನಮೃಗ ಜೀವನದ ವಾರಾಚರಣೆಯ ಅಂಗವಾಗಿ ಇಂದು ಮದ್ರಾಸಿನಲ್ಲಿ ನಾನಾ ಕಾಡು ಪ್ರಾಣಿಗಳನ್ನು ಬೀದಿಗಳಲ್ಲಿ ಮೆರವಣಿಗೆಯಲ್ಲಿ ಕರೆದೊಯ್ಯಲಾಗುವುದು. ಅದರಲ್ಲಿ ಹುಲಿಗಳು, ಹುಲ್ಲೆಕರುಗಳು, ಕೋತಿಗಳು ಮುಂತಾದುವು ಇರುವುವು

ಬಿ. ಟಿ ಸಿ ರಾಷ್ಟ್ರೀಕರಣದ ಸಮಾರಂಭ

ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ರಾಷ್ಟ್ರೀಕರಣೋತ್ಸವ ಇಂದು ಸಮಾರಂಭವೊಂದರಲ್ಲಿ ನಡೆಯಿತು ಸಚಿವ ಶ್ರೀ ಸಿದ್ದವೀರಪ್ಪನವರು ಮಾತನಾಡಿ ಕೆಲಸಗಾರರ ಸಂಬಳ, ಭತ್ಯ ಮುಂತಾದ ಸೌಲಭ್ಯಗಳನ್ನು ಮುಂದುವರಿಸಲಾಗುವುದೆಂದೂ, ಯಾರಿಗೂ ತೊಂದರೆಯಾಗುವುದಿಲ್ಲವೆಂದೂ ಹೇಳಿದರು ಶ್ರೀ ಕೆ ಆರ್ ಮಾಧವರಾಯರು ಕಂಪೆನಿಯ ಆಸ್ತಿ ಮತ್ತು ಜವಾಬ್ದಾರಿಗಳ ಲಿಕ್ವಿಡೇಟರ್ ಆಗಿ ಕೆಲಸ ಮಾಡುವರು

ಗಾಂಧಿ ಜಯಂತಿ ಕಾರ್ಯಕ್ರಮ

ಮೈಸೂರು ೧

ನಗರ ಕಾಂಗ್ರೆಸ್ ಸಮಿತಿ ಆಶ್ರಯದಲ್ಲಿ ನಾಳೆ ಟೌನ್‌ಹಾಲಿನಲ್ಲಿ ಮಹಾತ್ಮಾ ಗಾಂಧೀಜಿಯವರ ಜಯಂತಿಯನ್ನು ನೆರವೇರಿಸಲಾಗುವುದು. ಅದರ ಅಂಗವಾಗಿ ಬೆಳಿಗ್ಗೆ ೮ ಗಂಟೆಯಿಂದ ೧೨ರ ವರೆಗೆ ಸಾಮೂಹಿಕ ಸೂತ್ರಯಜ್ಞ, ಸಂಜೆ ಪ್ರಾರ್ಥನಾ ಸಭೆ ಮತ್ತು ಸಂಜೆ ೫ ರಿಂದ ೬ ರ ವರೆಗೆ ಸಾಮೂಹಿಕ ಸೂತ್ರಯಜ್ಞ ಮತ್ತು [illegible] ಪ್ರಾರ್ಥನಾ ಸಭೆಗಳು ನಡೆಯುವುವು. ಸಾರ್ವಜನಿಕರು ಈ ಕಾರ್ಯಕ್ರಮಗಳಲ್ಲಿ ಭಾಗವಹಿಸುವಂತೆಯೂ, ಸೂತ್ರಯಜ್ಞದಲ್ಲಿ ಭಾಗವಹಿಸುವವರು ತಮ್ಮ ಚರಖಗಳನ್ನು ತರಬೇಕೆಂದೂ ಸಂಚಾಲಕರಾದ ಶ್ರೀ ಹೆಚ್. ವಿ ಸುಬ್ಬರಾಮಯ್ಯನವರು ಪ್ರಾರ್ಥಿಸಿರುತ್ತಾರೆ

ವಿಧಾನ ಸೌಧದ ಗೋಪುರದ ಕೆಲಸ ನಿಂತಿದೆ

ವಿಧಾನ ಸಭೆಯಲ್ಲಿ ಈ ದಿನ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಮಾತನಾಡಿ, ವಿಧಾನ ಸೌಧದ ಗೋಪುರದ ಕೆಲಸವನ್ನು ನಿಲ್ಲಿಸಲಾಗಿದೆಯೆಂದೂ, ಅದರ ಎತ್ತರವನ್ನು ಇನ್ನಷ್ಟು ೧೮ ಅಡಿಯಷ್ಟು ಇಳಿಸಲಾಗುವುದೆಂದೂ ನುಡಿದರು ಸೌಧದ ಒಂದು ಬಾಗಿಲನ್ನು ಮಾಡಲು ೧೨,೦೦೦ ರೂ ಅಂದಾಜಾಗಿರುವುದೆಂದೂ ತಿಳಿಸಲಾಯಿತು

೧೭ನೇ ತಾರೀಕು ಘಟಿಕೋತ್ಸವವಿಲ್ಲ

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಇದೇ ತಿಂಗಳು ೧೭ನೇ ತಾರೀಕು ನಡೆಯುವುದೆಂದು ಪತ್ರಿಕೆಗಳಲ್ಲಿ ಬಂದಿದ್ದ ಸುದ್ದಿಯನ್ನು ವಿಶ್ವವಿದ್ಯಾಲಯದ ರಿಜಿಸ್ಟ್ರಾರರು ನಿರಾಕರಿಸಿದ್ದಾರೆ

ಟಿ. ನರಸೀಪುರ ರೇಷ್ಮೆ ಕಾರ್ಖಾನೆ ಇಂದಿನಿಂದ ಸರ್ಕಾರಕ್ಕೆ

ಸ್ವಂ ಸು ಫೋ:] ಬೆಂಗಳೂರು ೧

ಈ ದಿನ ವಿಧಾನ ಸಭೆಯಲ್ಲಿ ಶ್ರೀ ಹೆಚ್ ಸಿದ್ದವೀರಪ್ಪನವರು ಮಾತನಾಡಿ ಇಂದಿನಿಂದ ಟಿ. ನರಸೀಪುರದ ರೇಷ್ಮೆ ಫಿಲೇಚರನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳಲಾಗಿರುವುದೆಂದು ತಿಳಿಸಿದರು

ಚಿನ್ನದ ಗಣಿ ರಾಷ್ಟ್ರೀಕರಣದ ಮಸೂದೆ

ಸ್ವಂ ಸು ಫೋ:] ಬೆಂಗಳೂರು ೧

ಈ ದಿನ ವಿಧಾನ ಸಭೆಯಲ್ಲಿ ಶ್ರೀ ಸಿದ್ದವೀರಪ್ಪನವರು ಚಿನ್ನದ ಗಣಿಗಳ ರಾಷ್ಟ್ರೀಕರಣದ ಮಸೂದೆಯನ್ನು ಮಂಡಿಸಿ, ಗಣಿಗಳ ಆಸ್ತಿಯು [illegible] ಲಕ್ಷ ರೂ ಆಗುವುದೆಂದೂ, ಗಣಿ ಕೆಲಸ ನಿರ್ವಹಿಸುವುದರಲ್ಲಿ ತೊಂದರೆಯಿದ್ದರೂ ಅವನ್ನು ನಡೆಸಲಾಗುವುದೆಂದೂ, ೧ ವರ್ಷಕ್ಕೆ ೩ ಲಕ್ಷ ಔನ್ಸ್ ಚಿನ್ನವು ಉತ್ಪತ್ತಿಯಾಗುವುದೆಂದೂ, ಅಲ್ಲಿನ ನೌಕರರನ್ನೂ ತೆಗೆಯುವುದಿಲ್ಲವೆಂದೂ ನುಡಿದರು

ಈ ದಿನ ಸಭೆಯು ಮುಕ್ತಾಯವಾದುದರಿಂದ ೧೫ನೇ ತಾರೀಕು ಪುನಃ ಸೇರಿ ಈ ಮಸೂದೆಯನ್ನು ಚರ್ಚಿಸಲಾಗುವುದು.

ಬೇಲೂರು ಕೊಲೆ ಮೊಕದ್ದಮೆ

ಡಾ॥ ಶ್ರೀರಂಗಮ್ಮ ಮತ್ತು ವೈದ್ಯರ ಸಾಕ್ಷ್ಯ

ಬೆಂಗಳೂರು ೩೦

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ ಮೊಕದ್ದಮೆಯಲ್ಲಿ ಅವರ ಅತ್ತಿಗೆ ಡಾ॥ ಶ್ರೀರಂಗಮ್ಮ, ಡ್ರೈವರ್ ಬಾಷ್, ವಿಕ್ಟೋರಿಯಾ ಆಸ್ಪತ್ರೆ ಸೂಪರಿಂಟೆಂಡೆಂಟ್ ಡಾ॥ ಆದಿಶೇಷವೇಲು ಮತ್ತು ಮಾನಸಿಕ ರೋಗಗಳ ಆಸ್ಪತ್ರೆ ಸೂಪರಿಂಟೆಂಡೆಂಟ್ ಡಾ॥ ಎಂ ವಿ ಗೋವಿಂದಸ್ವಾಮಿಗಳವರ ಸಾಕ್ಷ್ಯಗಳಾದುವು ಇನ್ನೂ ಹಲವರು ಸಾಕ್ಷ್ಯ ನುಡಿದಿರುವರು

ಡಾ॥ ಶ್ರೀರಂಗಮ್ಮನವರು ತಮ್ಮ ಸಾಕ್ಷ್ಯದಲ್ಲಿ ಸತ್ತವರ ಬಗ್ಗೆ ವ್ಯಸನ ಸೂಚಿಸಲು ತಮ್ಮ ಸಂಬಂಧಿಕರಾರೂ ಬಂದಿರಲಿಲ್ಲವೆಂದು ಹೇಳಿದರು ಮಲಗುವ ಕೊಠಡಿಗೆ ಪೊಲೀಸು ಅಧಿಕಾರಿಗಳು ಹೋಗಲಿಲ್ಲವೆಂದು ಹೇಳಿದರು. ಬೇಲೂರ ಮನೆಗೆ ಅಂದು ಮುಖ್ಯ ಮಂತ್ರಿ ಮತ್ತು ಗೃಹ ಮಂತ್ರಿಗಳು ಬಂದಿದ್ದುದಾಗಿ ಹುಡುಗರು ತಮಗೆ ಹೇಳಿದುದಾಗಿಯೂ ಅವರು ನುಡಿದರು ಕಳುವು ಮಾಡಿದ ಪದಾರ್ಥವು ಶ್ರೀನಿವಾಸ ಎಂಬುವನ ಮನೆಯಲ್ಲಿ ಸಿಕ್ಕಿತೆಂದು ತಮ್ಮ ತಂಗಿ ವೇಂಗಡಮ್ಮನು ಹೇಳಿದುದಾಗಿಯೂ ಅವರು ತಿಳಿಸಿದರು ಮನೆಯಲ್ಲಿದ್ದ ಎಲ್ಲಾ ಆಭರಣಗಳನ್ನೂ ಅಪಹರಿಸಲಾಗಿತ್ತೆಂದು ತಿಳಿಸಿದರು

ಡಾ॥ ಆದಿಶೇಷವೇಲೂರವರು ತಮ್ಮ ಸಾಕ್ಷ್ಯದಲ್ಲಿ ಆಸ್ಪತ್ರೆಯಲ್ಲಿದ್ದ ರಂಗಲಕ್ಷ್ಮಿಯು ಜೂನ್ ೧೮ನೇ ತಾರೀಕು ಸ್ವಲ್ಪ ಮಟ್ಟಿಗೆ ಗೊತ್ತಾಗುವ ಹಾಗೆ ಮಾತನಾಡಿದಳೆಂದೂ ಯಾರೋ ಬಂದು ತನ್ನ ತಲೆಯ ಮೇಲೆ ಹೊಡೆದು ತನ್ನ ಎಡಗೈ ಕಿರುಬೆರಳಿನ ಪಕ್ಕದ ಬೆರಳನ್ನು ಕಿರುವಿದಂತಾಯಿತೆಂದು ಹೇಳಿದುದಾಗಿಯೂ ತಿಳಿಸಿದರು. ಆಕೆಗೆ ಆಗಿರುವ ಪೆಟ್ಟಿನಿಂದ ಮೆದುಳು ಸರಿಯಾಗಲು ವಿಪರೀತ ಕಾಲ ಹಿಡಿಯುವುದೆಂದೂ ಅವರು ಹೇಳಿದರು

ಡಾ॥ ಗೋವಿಂದಸ್ವಾಮಿಯವರು ಮಾತನಾಡಿ ಆಕೆಯು ಸೂಚಿಸಿದುದನ್ನು ಹೇಳಬಲ್ಲೆನೆಂದೂ, ಅನೇಕ ತಿಂಗಳ ವರೆಗೂ ಘಟನೆ ಬಗ್ಗೆ ಸರಿಯಾಗಿ ತಿಳಿಸುವ ಸ್ಥಿತಿಯಲ್ಲಿಲ್ಲವೆಂದೂ ನುಡಿದರು.

ದಶಮಾಂಶ ನಾಣ್ಯಗಳ ಪ್ರದರ್ಶನೆ

ದಶಮಾಂಶ ನಾಣ್ಯಗಳ ಬಗ್ಗೆ ಜನರಿಗೆ ಪರಿಚಯವಾಗುವಸಲುವಾಗಿ ಅವನ್ನು ಪ್ರದರ್ಶನ ಮಾಡಲು ಕೇಂದ್ರ ಸರಕಾರದವರು ೨,೦೦೦ ನಾಣ್ಯಗಳನ್ನು ಹೈದರಾಬಾದಿಗೆ ಕಳುಹಿಸಿದ್ದಾರೆ ಅಲ್ಲಿನ ಅಂಚೆ ಕಛೇರಿಗಳಲ್ಲಿ ಅವನ್ನು ಪ್ರದರ್ಶನಕ್ಕೆ ಇಡಲಾಗಿದೆ.

ಭಾವಸಾರ ಕ್ಷತ್ರಿಯರ ಸಭೆ

ಅಖಿಲ ಭಾರತ ಭಾವಸಾರ ಕ್ಷತ್ರಿಯ ವಿದ್ಯಾರ್ಥಿಗಳ ಮಹಾಧಿವೇಶನದ ಕಾರ್ಯಕ್ರಮದ ಬಗ್ಗೆ ವಿಚಾರ ಮಾಡಲು ಮೈಸೂರಿನಲ್ಲಿರುವ ಭಾವಸಾರ ಕ್ಷತ್ರಿಯ ವಿದ್ಯಾರ್ಥಿಗಳು ತಪ್ಪದೇ ಶ್ರೀ ಲಿಂಗೋಜಿರಾವ್ ಉತ್ತರ್‌ಕರ್‌ರವರ ಹಾಸ್ಟೆಲ್ಲಿಗೆ ನಾಳೆ ಮಧ್ಯಾಹ್ನ ೩ ಘಂಟೆಗೆ ಸರಿಯಾಗಿ ಬರಬೇಕಾಗಿ ಕೋರಲಾಗಿದೆ ಶ್ರೀ ಯು ಎಲ್ ರಾಮಚಂದ್ರರಾವ್ ಮತ್ತು ಶ್ರೀ ಎನ್ ವಿ ತಂಬರ್‌ಕರ್ ಇವರುಗಳು ಸಭೆಯಲ್ಲಿ ಭಾಗವಹಿಸಲು ಒಪ್ಪಿರುತ್ತಾರೆ

ಸಂಗೀತ ಮತ್ತು ನೃತ್ಯ

ನಗರದ ದೊಡ್ಡಪೇಟೆಯ ಕುಂಬಾರಗೇರಿಯಲ್ಲಿರುವ ದೊಡ್ಡ ಶ್ರೀ ರಾಮ ಮಂದಿರದ ಚಪ್ಪರದಲ್ಲಿ ಈ ಸಂಜೆ ೬-೩೦ ಘಂಟೆಗೆ, ಶ್ರೀಮತಿಯರಾದ ಎಸ್ [illegible] ಮತ್ತು ಎಸ್ ಪ್ರೇಮಕುಮಾರಿಯರ ಗಾಯನವೂ ಮತ್ತು ಎಸ್ ಗೀತಾ ಮತ್ತು ಎಸ್ ಶಾಂತಾರವರ ನೃತ್ಯವೂ ಏರ್ಪಾಡಾಗಿವೆ

ರಾಷ್ಟ್ರಾಭಿವೃದ್ಧಿ ವಿಸ್ತರಣೆ ಯೋಜನೆ ಪ್ರಾರಂಭೋತ್ಸವ

ಪಿರಿಯಾಪಟ್ಟಣದಲ್ಲಿರುವ ಜಿಲ್ಲಾ ಬೋರ್ಡು ಪ್ರಾಥಶಾಲೆಯಲ್ಲಿ ನಾಳೆ ಮಧ್ಯಾಹ್ನ ೩ ಗಂಟೆಗೆ ರೆವಿನ್ಯೂ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ತಾಲ್ಲೂಕಿನ ರಾಷ್ಟ್ರಾಭಿವೃದ್ಧಿ ಸೇವಾ ಪ್ರಾರಂಭೋತ್ಸವವನ್ನು ನೆರವೇರಿಸುವರು

ಮಂತ್ರಿಮಂಡಲದ ಬದಲಾವಣೆಯಿಂದ ಹಣದ ನೀತಿ ವ್ಯತ್ಯಾಸ

ವಿಧಾನ ಸಭೆಯಲ್ಲಿ ಇನಾಮರ ಪ್ರಶ್ನೆ

ಬೆಂಗಳೂರು ೧

ವಿಧಾನ ಸಭೆಯು ಮೊನ್ನೆ ೩ನೇ ಅಪ್ರೋಪ್ರಿಯೇಷನ್ ಮಸೂದೆಯನ್ನು ಅಂಗೀಕರಿಸಿತು ಅದರ ಪ್ರಕಾರ ಆರು ಲೆಕ್ಕ ಶೀರ್ಷಿಕೆಗಳು ಮತ್ತು ಹಲವು ಜೋಡಿ ೧೧ ತಿಂಗಳನ್ನು ವರೆಕ್ಕೆ ತೆಗೆದುಕೊಳ್ಳಲು ಒಟ್ಟುಗೂಡಿಸಿದ ನಿಧಿಯಿಂದ ೧೪,೮೭,೮೦೦ ರೂ ವನ್ನು ಸರ್ಕಾರದವರು ಬಳಸಬಹುದು

ಮಸೂದೆ ಬಗ್ಗೆ ವಿರೋಧ ಪಕ್ಷದವರು ಭಾಷಣ ಮಾಡಿ, ಸಂಸ್ಥಾನದ ಹಣಕಾಸಿನ ಪರಿಸ್ಥಿತಿ ಬಗ್ಗೆ ತೀವ್ರ ಆತಂಕವನ್ನು ವ್ಯಕ್ತಪಡಿಸಿದರು ಪಕ್ಷದ ನಾಯಕ ಶ್ರೀ ಇನಾಮರು ಮಾತನಾಡಿ ಮಂತ್ರಿಮಂಡಲದ ಬದಲಾವಣೆಯಿಂದ ಸರ್ಕಾರದ ಹಣಕಾಸಿನ ನೀತಿಯಲ್ಲಿ ವ್ಯತ್ಯಾಸವಾಗಿರುವುದೇ ಎಂದು ಪ್ರಶ್ನಿಸಿದರು. ಮಾಜಿ ಮುಖ್ಯ ಮಂತ್ರಿಯವರು ಸಹೋದ್ಯೋಗಿಗಳೊಡನೆ ಹಣಕಾಸಿನ ಅಥವಾ ವೈಯಕ್ತಿಕ ಕಾರಣಗಳಿಗಾಗಿ ರಾಜೀನಾಮೆ ಕೊಟ್ಟರೇ-ಎಂಬ ವಿಷಯವನ್ನು ತಿಳಿಯಲು ಅವರು ಅಪೇಕ್ಷಿಸಿದರು ಶ್ರೀ ಹನುಮಂತಯ್ಯನವರು ತಮ್ಮ ರಾಜೀನಾಮೆ ಬಗ್ಗೆ ಕಾರಣಗಳನ್ನು ಕೊಟ್ಟು ಮಾತನಾಡಬೇಕಾಗಿತ್ತೆಂದೂ, ಕೇಂದ್ರ ಹಣಕಾಸಿನ ಮಂತ್ರಿ ಶ್ರೀ ಸಿ ಡಿ. ದೇಶಮುಖ್‌ರವರು ತಮ್ಮ ರಾಜೀನಾಮೆ ಬಗ್ಗೆ ಹೇಳಿಕೆಯಿತ್ತಿದ್ದರೆಂದೂ ತಿಳಿಸಿದರು

ಅಧ್ಯಕ್ಷರು ಮಾತನಾಡಿ, ಹೇಳಿಕೆ ಕೊಡುವುದು ಶ್ರೀ ಹನುಮಂತಯ್ಯನವರಿಗೆ ಸೇರಿದುದೆಂದೂ, ಹಿಂದೆ ಅವರ ಎದುರಿನಲ್ಲೇ ಈ ವಿಷಯದ ಪ್ರಸ್ತಾಪವಾಗಿ ಅವರು ಹೇಳಿಕೆ ಕೊಡಲಿಲ್ಲವೆಂದೂ ತಿಳಿಸಿದರು.

ಸಭೆಯನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದಿರುವ ಬಗ್ಗೆ ಶ್ರೀ ಇನಾಮರು ವಿಷಾದ ವ್ಯಕ್ತಪಡಿಸಿದರು

ಇನಾಮರು ಮಾತನಾಡಿ ದ್ವಿತೀಯ ಯೋಜನೆಗೆ ೮೭ ಕೋಟಿ ರೂ ಬೇಕೆಂದೂ, ಸರ್ಕಾರದ ಬಳಿ ೧ ಕೋಟಿ ರೂ ಇರುವುದೆಂದೂ ತಿಳಿಸಿದರು ಮಿತವ್ಯಯವು ಅತ್ಯಗತ್ಯವೆಂದೂ ಒತ್ತಾಯಪಡಿಸಿದರು

ನೂತನ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷತೆ

ಕೆ. ಪಿ. ಸಿ ಸಿ. ಸಮಿತಿಯ ನಿರ್ಧಾರ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಗುರುವಾರ ಹುಬ್ಬಳ್ಳಿಯಲ್ಲಿ ಸೇರಿ ನೂತನ ಮೈಸೂರು ಸಂಸ್ಥಾನಕ್ಕೆಲ್ಲಾ ಒಂದೇ ಪ್ರದೇಶ ಸಮಿತಿಯಿರಬೇಕೆಂದು ಎ ಐ ಸಿ ಸಿಯವರಿಂದ ಬಂದಿದ್ದ ನಿರ್ದೇಶನವನ್ನು ಪರಿಶೀಲಿಸಲಾಯಿತು. ಹೊಸ ಸಮಿತಿಯು ನವೆಂಬರ್ ೧ ರಿಂದ ಸ್ಥಾಪಿತವಾಗುವುದು ಸಮಿತಿಯ ಅಧ್ಯಕ್ಷರನ್ನು ಚುನಾಯಿಸಲು ಅಕ್ಟೋಬರ್ ಮಧ್ಯ ಭಾಗದಲ್ಲಿ ದಾವಣಗೆರೆಯಂತಹ ಮಧ್ಯ ಪ್ರದೇಶದಲ್ಲಿ ಕೆ ಪಿ ಸಿ ಸಿ, ಎಂ ಪಿ ಸಿ ಸಿ ಮತ್ತು ಹೈದರಾಬಾದು ಸಮಿತಿಗಳ ಜಂಟಿ ಅಧಿವೇಶನವು ನಡೆಯಬೇಕೆಂದು ಸಮಿತಿಯು ನಿರ್ಧರಿಸಿರುವುದಾಗಿ ಗೊತ್ತಾಗಿದೆ

ನೂತನ ಮೈಸೂರು ಸಂಸ್ಥಾನದ ಮುಖ್ಯ ಹುದ್ದೆಗಳಿಗೆ ಆಗಿರುವ ನೇಮಕದ ಬಗ್ಗೆ ಸಮಿತಿಯು ಅಸಮಾಧಾನವನ್ನು ಸೂಚಿಸಿ ಕೇಂದ್ರ ಸರ್ಕಾರದವರು ಇದು ಮುಂದೆ ಹೊರಗಿನ ಐ. ಎ ಎಸ್ ಅಧಿಕಾರಿಗಳನ್ನು ಮುಖ್ಯ ಸ್ಥಾನಗಳಿಗೆ ನೇಮಿಸಬೇಕೆಂದು ಒತ್ತಾಯ ಮಾಡಿರುವುದಾಗಿ ಗೊತ್ತಾಗಿದೆ.

ನವೆಂಬರ್ ೧ಕ್ಕೆ ಮುಂಚೆ ಎನ್. ಜಿ ಓ. ಗಳಿಗೆ ತಾತ್ಕಾಲಿಕ ಪರಿಹಾರ

ನವೆಂಬರ್ ೧ಕ್ಕೆ ಮುಂಚೆ ನಾನ್ ಗೆಜೆಟೆಡ್ ನೌಕರರಿಗೆ ತಾತ್ಕಾಲಿಕ ಪರಿಹಾರವೀಯುವುದು ಸರ್ಕಾರದವರ ಉದ್ದೇಶವಾಗಿರುವುದೆಂದೂ, ಒಂದೇ ಮಟ್ಟದ ಸಂಬಳದ ದರ್ಜೆಯನ್ನು ಗೊತ್ತುಪಡಿಸುವ ವಿಷಯವನ್ನು ಮುಂದಿನ ಅಧಿವೇಶನದವರು ಪರಿಶೀಲಿಸುವರೆಂದೂ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿರುತ್ತಾರೆ

ಅಂತರ ಕಾಲೇಜು ಯುವಜನೋತ್ಸವ

ವಿದ್ಯಾರ್ಥಿಗಳಿಗೆ ವೈಸ್ ಚಾನ್ಸೆಲರ ಹಿತೋಕ್ತಿ

ಮೈಸೂರು ೩೦

ವಿಶ್ವವಿದ್ಯಾಲಯದ ಅಂತರ ಕಾಲೇಜು ಯುವ ಜನೋತ್ಸವ ಸಮಿತಿಯ ಆಶ್ರಯದಲ್ಲಿ ಮೊನ್ನೆ ಯುವಜನೋತ್ಸವವು ಆರಂಭವಾಯಿತು ವೈಸ್ ಚಾನ್ಸೆಲರ್ ಡಾ॥ ಕೆ ವಿ ಪುಟ್ಟಪ್ಪನವರು ಇದರ ಉದ್ಘಾಟನೆ ಮಾಡಿದರು ಪ್ರೊ॥ ಸಿ ಡಿ ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಮೊದಲು ಡಾ॥ ಪುಟ್ಟಪ್ಪನವರು ವಿದ್ಯಾರ್ಥಿಗಳ ಮಾರ್ಚ್ ಪಾಸ್ಟಿನಲ್ಲಿ ವಂದನೆಯನ್ನು ಸ್ವೀಕರಿಸಿದರು ಉತ್ಸವ ಸಮಿತಿ ಅಧ್ಯಕ್ಷರಾದ ಶ್ರೀ ಬಿ ಕೃಷ್ಣರವರು ಸ್ವಾಗತ ಭಾಷಣ ಮಾಡಿದರು

ಡಾ॥ ಪುಟ್ಟಪ್ಪನವರು ತಮ್ಮ ಭಾಷಣದಲ್ಲಿ ಭಾರತ ಸರ್ಕಾರದವರು ಏರ್ಪಡಿಸುವ ಯುವಜನೋತ್ಸವದಲ್ಲಿ ಭಾಗವಹಿಸಲಿರುವ ವಿದ್ಯಾರ್ಥಿಗಳು ಉತ್ತಮ ರೀತಿಯಲ್ಲಿ ನಡೆದುಕೊಂಡು ಮೈಸೂರಿನ ಕೀರ್ತಿಯನ್ನು ಬೆಳಗಬೇಕೆಂದು ತಿಳಿಸಿದರು

ಅಧ್ಯಕ್ಷರ ಭಾಷಣ ಮತ್ತು ಸಂಚಾಲಕ ಶ್ರೀ ಡಿ ಎಂ ನಂಜುಂಡಪ್ಪನವರಿಂದ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

" ದೇವ್‌ತಾ " ಚಿತ್ರದ ಪ್ರದರ್ಶನ

ನಗರದ ಫ್ರೆಡ್‌ಲ್ಯಾಂಡ್ಸ್ ಟಾಕೀಸಿನಲ್ಲಿ ಕಳೆದ ಶುಕ್ರವಾರದಿಂದ ಮೇಲ್ಕಂಡ ಚಿತ್ರ ಪ್ರದರ್ಶನವು ಆರಂಭವಾಗಿದೆ ಕಣವನೆ ಕಣ್‌ಕಂಡ ದೈವಂ ಎಂಬ ತಮಿಳು ಚಿತ್ರದ ಹಿಂದಿ ಅನುವಾದವಿದು ಪ್ರಣಯ ಮತ್ತು ಸಾಹಸಗಳಿಂದ ಒಡಗೂಡಿರುವ ಈ ಚಿತ್ರವು ಉತ್ತಮ ಹಿನ್ನೆಲೆಯಲ್ಲಿ ಮನೋಹರವಾದ ಗೀತಾವರ್ಣದ ನೃತ್ಯ ಮತ್ತು ದೃಶ್ಯಗಳೊಡಗೂಡಿ ವಿಶೇಷ ಮನರಂಜನೀಯವಾಗಿದೆ ಅಂಜಲಿದೇವಿ ಜೆಮಿನಿ ಗಣೇಶ ಮತ್ತು ವೈಜಯಂತಿಮಾಲಾರವರ ಪಾತ್ರಗಳು ಎದ್ದು ಕಾಣುತ್ತವೆ

ಪರ್ತಗಾಲ ಮಠದ ಮುಖ್ಯಾಧಿಕಾರಿಗೆ ಚಿತ್ರಹಿಂಸೆಯಿಂದಮೃತ್ಯು

ಪೋರ್ಚುಗೀಸ್ ಪೊಲೀಸರ ದೌರ್ಜನ್ಯ

ಗೋವಾದಲ್ಲಿರುವ ಪರ್ತಗಾಲ ಮಠದ ಆಡಳಿತದ ಮುಖ್ಯಾಧಿಕಾರಿಯಾದ ಪರಶುರಾಂ ಆಚಾರ್ಯ ಮತ್ತು ಇನ್ನಿಬ್ಬರು ಮಠದ ಕಾರ್ಯಕರ್ತರಿಗೆ ಪೋರ್ಚುಗೀಸ್ ಪೊಲೀಸರು ಕಳೆದ ವಾರ ಚಿತ್ರ ಹಿಂಸೆ ಕೊಟ್ಟು ಅವರನ್ನು ಸಾಯಿಸಿರುವುದಾಗಿ ವರದಿಯಾಗಿದೆ ಅವರನ್ನು ಗುಂಡು ಹೊಡೆದು ಕೊಲ್ಲಲಾಗಿತ್ತೆಂದು ಹೇಳಲಾಗಿತ್ತು ಸೆಪ್ಟೆಂಬರ್ ೨೨ನೇ ತಾರೀಕು ಆಚಾರ್ಯರನ್ನು ಹೊಡೆದು ಕೊಲ್ಲಲಾಯಿತೆಂದೂ, ಉಳಿದವರಿಬ್ಬರೂ ಮಾರನೇ ದಿನ ಮಡಿದರೆಂದೂ ಹೇಳಲಾಗಿದೆ

ಕ್ಯಾಮರಾ ಮಾರಾಟಕ್ಕಿದೆ

'ಜೆಸ್ ಇಕಾನ್', 4.5 F ಲೆನ್ಸುಳ್ಳ ಒಂದು ಫೋಲ್ಡಿಂಗ್ ಕ್ಯಾಮರಾವು, ಲೆದರ್ ಕೇಸಿನೊಡನೆ ಕೂಡಲೇ ಮಾರಾಟಕ್ಕಿದೆ. ಕೆಳಗೆ ಕಂಡವರಲ್ಲಿ ವಿಚಾರಿಸಿರಿ

ಅ ಬಿ ಜ್ಸ್

ಕ್ಯಾಪ್ಟ್ಯ ಚೌಕ :. ಮೈಸೂರು

ನಾಳೆ ಯಳಂದೂರು ಜಹಗೀರಿನ ರದ್ದು

ಬೆಂಗಳೂರು ೧

ಮೈಸೂರು ಸಂಸ್ಥಾನ ಮತ್ತು ಸಿಂಹಾಸನಕ್ಕೆ ಸಲ್ಲಿಸಿದ ಸೇವೆಗಾಗಿ ೧೮೦೭ ರಲ್ಲಿ ಪೂರ್ಣಯ್ಯನವರಿಗೆ ಕೊಡಲಾಗಿದ್ದ ಯಳಂದೂರು ಜಹಗೀರನ್ನು ನಾಳೆ ರದ್ದುಪಡಿಸಲಾಗುವುದೆಂದು ಸರ್ಕಾರದ ಗೆಜೆಟ್ ಪ್ರಕಟಣೆಯು ತಿಳಿಸಿದೆ

" ವಿಜಯಮಾಲ "

ಬೆಂಗಳೂರಿನ ಶ್ರೀ ಕೆ ಪಿ ಮುತ್ತುಸ್ವಾಮಿಯವರು ಪ್ರಕಟಿಸುತ್ತಿರುವ ಮೇಲ್ಮಟ್ಟದ ಹೊಸ ಕನ್ನಡ ಮಾಸಿಕ ಪತ್ರಿಕೆಯ ೪ನೇ ವಾರ್ಷಿಕೋತ್ಸವ ಸಂಚಿಕೆಯೊಂದನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ ಪತ್ರಿಕೆಯು ಹಲವಾರು ಕಥೆಗಳನ್ನು ಒಳಗೊಂಡಿದೆ ವ್ಯಾಮೋಹವೆಂಬ ಕೃಷ್ಣಾರ್ಜುನರಿಗೆ ಸಂಬಂಧಿಸಿದ ಏಕಾಂಕ ನಾಟಕವೂ ಇದೆ ಬೆಲೆ ೪ ಆಣೆ

ಭೂತ ಓಡಿಸಲು ಹೋಗಿ ತ್ರಿಶೂಲದಿಂದ ಮಹಿಳೆಯ ಕೊಲೆ

ಅಸ್ಸಾಮಿನ ದಿಬ್ರುಗಢದ ವಿವಾಹಿತ ಯುವತಿಯೊಬ್ಬಳಿಗೆ ದೆವ್ವ ಹಿಡಿದಿರುವುದೆಂದು ಭಾವಿಸಿ ಅದನ್ನು ಓಡಿಸುವ ಪ್ರಯತ್ನದಲ್ಲಿ ಆಕೆಯು ಇರಿದು ಕೊಲ್ಲಲ್ಪಟ್ಟಳೆಂದು ವರದಿಯಾಗಿದೆ. ಮನೆಯವರು ಹೆಂಗಸನ್ನು ದೇವಾಲಯಕ್ಕೆ ಕರೆದುಕೊಂಡು ಹೋದರೆಂದೂ, ಅದರ ಅರ್ಚಕರು ಆಕೆಯನ್ನು ತ್ರಿಶೂಲದಿಂದ ಇರಿಯಲು ಅವಳ ಪ್ರಾಣ ಹೋಯಿತೆಂದೂ, ಈ ಸಂದರ್ಭದಲ್ಲಿ ಹಲವರನ್ನು ಬಂಧಿಸಲಾಗಿದೆಯೆಂದೂ ಗೊತ್ತಾಗಿದೆ

ಮನೆಯ ಯಜಮಾನರ ಹೆಸರು ಹೇಳಿ ಮೋಸ

ಚಾಮುಂಡಿಪುರದ [illegible]ನೇ ನಂಬರ ಮನೆಯಲ್ಲಿರುವ ಶ್ರೀ ಬಿ ಎಸ್ ಸೀತಾರಾಮಯ ನವರ ಮನೆಗೆ ಅಪರಿಚಿತ ವ್ಯಕ್ತಿಯೊಬ್ಬನು ನೆ ಮನೆ ಯಜಮಾನರಿಲ್ಲದ ವೇಳೆ ಬಂದು ತನ ಹೆಂಡತಿಗೆ ಆಸ್ಪತ್ರೆಯಲ್ಲಿ ಶಸ್ತ್ರ ಚಿಕಿತ್ಸೆ ಮಾ ಬೇಕಾಗಿದೆಯೆಂದೂ, ಮನೆಯ ಯಜಮಾನ ಹೆಂಗಸರಿಂದ ೨೦ ರೂ ತೆಗೆದುಕೊಳ್ಳುವಂತೆ ತಿಳಿಸಿರುವರೆಂದೂ ಹೇಳಿ ೧೦ ರೂ ತೆಗೆದುಕೊ ಡು ಪರಾರಿಯಾಗಿರುವುದಾಗಿ ವರದಿಯಾಗಿದೆ

ಜಾಯಿಕಾಯಿ ಹಲಗೆಗಳು ದೊರೆಯುತ್ತವೆ

ಉತ್ತಮವಾದ ಜಾಯಿಕಾಯಿ ಹಲಗೆಗ
ಬಕರಿಗೆ ದೊರೆಯುತ್ತವೆ ಕೂಡಲೇ ವಿಚಾರಿ
ಸಾಧ್ವಿ ಆಫೀಸ್, ಮೈಸೂರು

ಹಾಸಿಗೆ-ದಿಂಬು

[illegible] ಹತ್ತಿಯಿಂದ ತಯಾರು ಮಾಡುತ್ತೇ
ಬಾಹುಸಾರ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

Edited, Printed and Published
A. R. Nagarajan at Sadhvi Pre
D. Subbiah Road, Mysore

THE NATIONAL INSTITUTE OF COMMERCE,
1677, Old Mysore Bank Road, Mysore
FRESH ADMISSIONS for TYPEWRITING and SHORT-HAND are now being received during the mornings &evenings.
For particulars, apply sharp

Prof: DEVAL'S CIRCUS

ಪ್ರೊ॥ ದೇವಾಲ್ಸ್ ಸರ್ಕಸ್

ಚೇಚಮ್ಮಲಯನ ಕಟ್ಟೆಯಲ್ಲಿ ಹಾಕಿರುವ ಡೇರಾದಲ್ಲಿ

6-10-56ನೇ ಶನಿವಾರ ರಾತ್ರಿ 9-30ಕ್ಕೆ ಅಮೋಘ ಪ್ರಾರಂಭ

7—10—56 ರಿಂದ ಪ್ರತಿ ದಿನ ಮೂರು ಪ್ರದರ್ಶನಗಳು
ಮಧ್ಯಾಹ್ನ 3 ಘಂಟೆಗೆ, ಸಂಜೆ 6-30 ಮತ್ತು ರಾತ್ರಿ 9-30ಕ್ಕೆ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿ ಪತ್ರಿಕೆ 3 ಕಾಸು

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಸ್ತಕ : ೦೫] SADHVI : TULSDAY 2—10—1956 ಮೈಸೂರು : ಮಂಗಳವಾರ ೨—೧೦—೧೯೫೬ [ಸಂಚಿಕೆ : [illegible]

ಫಾರ್ಮೋಸಾ ಧಾಳಿಗೆ ಸಿದ್ಧವಾಗಲು ಚೀಣಾ ಸೈನ್ಯಕ್ಕೆ ಆಜ್ಞೆ

ಾಂಧಿಜಿಯವರ ಉಪದೇಶದಂತೆ ನಡೆಯಲು ಕರೆ

[illegible] ಡಾ॥ ರಾಜೇಂದ್ರಪ್ರಸಾದರ ಸಂದೇಶ

ಇಂದು ಮಹಾತ್ಮ ಗಾಂಧಿಜಿಯವರ ಜಯಂ ಸಂಬಂಧವಾಗಿ ರಾಷ್ಟ್ರಾಧ್ಯಕ್ಷ ಡಾ॥ ರಾಜೇಂ ಪ್ರಸಾದರು ಸಂದೇಶವೊಂದನ್ನಿತ್ತು, ಗಾಂಧಿಜಿ ವರ ಉಪದೇಶ ಮತ್ತು ದಿವ್ಯ ಆದರ್ಶ [illegible] ಜನರು ಮನನ ಮಾಡಬೇಕೆಂದು ಸೂಚಿಸಿ ದ್ದಾರೆ ಗಾಂಧಿಜಿಯವರು ತಾವು ತ್ಯಾಗದ ಬೋಧ ಮು ಹೇಳಿಕೊಳ್ಳುತ್ತಿರಲಿಲ್ಲವೆಂದ [illegible] ವ್ಯವಹಾರದಲ್ಲಿ ಅವರು ಮೆಚ್ಚು ಆದರ್ಶ ತೋರಿ ತ್ತಿದ್ದರೆಂದೂ ರಾಷ್ಟ್ರಾಧ್ಯಕ್ಷರು ತಿಳಿಸಿದ್ದಾರೆ ಸೆ ಮತ್ತು ಸತ್ಯದ ಆಧಾರದ ಮೇಲೆ ಮಾ ದ ಪ್ರತಿ ಕಾರ್ಯವೂ ನೈತಿಕ ಮತ್ತು ಉತ್ತ ವಾದುದೆಂದು ಅವರು ಭಾವಿಸಿದ್ದರೆಂದು ರಾ ಂದ್ರ ಪ್ರಸಾದರು ಹೇಳಿದ್ದಾರೆ ಇಲ್ಲದ ಧ ವಾಹನದಲ್ಲಿ ಲಕ್ಷೋಪಲಕ್ಷ ಜನರು ಬಾಪೂಜಿ [illegible] ಪಡೆದಿರುವುದರಿಂದ ರಾಷ್ಟ್ರಪಿತನ [illegible] ನಮ್ಮ ಜನರು ತಮ್ಮ ಕರ್ತವ್ಯ ಪಾಲಿ ಬೇಕೆಂದೂ ನುಡಿದಿದ್ದಾರೆ

ಸೂಯೆಜ್ ಕಾಲುವೆ ಳಕೆಗಾರರ ಸಂಸ್ಥೆಯ ಸ್ಥಾಪನೆ

ಲಂಡನ್ನಿನಲ್ಲಿ ಸೂಯೆಜ್ ಕಾಲುವೆ ಬಿಕ್ಕಟ್ಟಿನ ಬಗ್ಗೆ ಸಮ್ಮೇಳನ ಸೇರಿದ್ದ ೧೮ ರಾಷ್ಟ್ರಗಳ ೧೫ ರಾಷ್ಟ್ರಗಳು ಕಾಲುವೆ ಬಳಕೆಗಾರರ ಯನ್ನು ರಚಿಸಿವೆ ನೆನ್ನೆ ಲಂಡನ್ನಿನಲ್ಲಿ ಆರಂಭೋತ್ಸವವನ್ನು ನೆರವೇರಿಸಲಾಯಿ ಜಪಾನು, ಪಾಕಿಸ್ತಾನ ಮತ್ತು ಇಥಿಯೋಪಿ ಗಳು ಸಂಘಕ್ಕೆ ಸೇರಿಲ್ಲ. ಡೆನ್ಮಾರ್ಕ್, ನಾ ಮತ್ತು ಹಾಲೆಂಡುಗಳು ತಮ್ಮ ಪಾರ್ಲಿ ಟುಗಳ ಅಂಗೀಕಾರದ ಷರತ್ತಿನ ಮೇಲೆ ಸಂ ಸೇರಿವೆ. ಬ್ರಿಟನ್, ಅಮೆರಿಕಾ, ಫ್ರಾನ್ಸ್, ರ್, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಪಶ್ಚಿ ರ್ಮನಿ, ಇಟಲಿ, ಪೋರ್ಚುಗಲ್, ಸ್ಪೇನ್, ನ್ ಮತ್ತು ತುರ್ಕಿಗಳು ಸದಸ್ಯ ರಾಷ್ಟ್ರ ಗಿವೆ

ಚ್ ಎಲ್ ದೇವರಾಜ ಅರಸರು ಪುನಃ ದರ್ಬಾರ್ ಭಕ್ಷಿ

ನಾರೋಗ್ಯದ ನಿಮಿತ್ತ ನಿವೃತ್ತರಾಗಿದ್ದ ಚ್. ಎಲ್. ದೇವರಾಜ ಅರಸಿನವರು ರಾಜಸಭಾ ಭಕ್ಷಿಯಾಗಿ ಅಧಿಕಾರ ವಹಿಸಿ ರೆ. ಅವರು ಈಗ ಪೂರ್ಣ ಗುಣ ಹೊಂದಿ . ಅವರ ಸ್ಥಾನದಲ್ಲಿದ್ದ ಶ್ರೀ ಟಿ ಬಿ ಸುಬ್ಬ ಅರಸಿನವರು ಭಕ್ಷಿ ಇನ್ ವೈಟಿಂಗ್ ಆಗಿ

ಸೀರೆಗೆ ಹೊಡೆದಾಟಕ್ಕಾಗಿ ದಂಡ

ಗರದ ಲಷ್ಕರ್ ಮೊಹಲ್ಲಾ ಕುರುಬಗೇರಿ ಜಯಮ್ಮ, ಮಾದಮ್ಮ, ಪುಟ್ಟಮ್ಮ ಎಂ ಬೀದಿಯಲ್ಲಿ ಸೀರೆಗಾಗಿ ಜಗಳವಾಡಿ ಹೊ ದರೆಂದು ಪೊಲೀಸರು ಹೂಡಿದ್ದ ಮೊಕದ್ದ ಲ್ಲಿ ಅವರುಗಳಿಗೆ ತಲಾ ೮ ಆಣೆ ದಂಡವ ಧಿಸಲಾಗಿದೆ

ರಾಷ್ಟ್ರಪಿತ ಮಹಾತ್ಮ ಗಾಂಧಿ

ಇಂದು ಇವರ ಜಯಂತಿ ಉತ್ಸವವು ದೇಶವೆಲ್ಲೆಲ್ಲಾ ಆಚರಿಸಲ್ಪಡುತ್ತಿದೆ

ಬೊಂಬಾಯಿ ಮಟ್ಟದ ಸಂಬಳ ಕೊಡುವ ಆಲೋಚನೆಯಿಲ್ಲ

ಎನ್. ಜಿ. ಓ. ಗಳಿಗೆ ಪರಿಹಾರದ ಬಗ್ಗೆ ಸಿದ್ಧವೀರಪ್ಪನವರ ವಿವರಣೆ

ಬೆಂಗಳೂರು ೩

ನೆನ್ನೆ ವಿಧಾನ ಸಭೆಯಲ್ಲಿ ಹಣಕಾಸಿನ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಮಾತನಾಡಿ ಸಂಸ್ಥಾನದ ನಾನ್ ಗೆಜೆಟೆಡ್ ನೌಕರರುಗಳಿಗೆ ಬೊಂಬಾಯಿ ಮಟ್ಟದ ಸಂಬಳವನ್ನು ಕೊಡುವ ಉದ್ದೇಶವಿಲ್ಲವೆಂದು ತಿಳಿಸಿದರು

ಸಂಸ್ಥಾನದ ಪುನರ್ವಿಂಗಡಣೆ ಪರಿಣಾಮವಾಗಿ ಮೈಸೂರಿನ ನೌಕರರುಗಳಿಗೆ ಪರಿಹಾರ ಕೊಡುವುದು ಅಗತ್ಯವೆಂದು ಕೇಂದ್ರ ಸರ್ಕಾರಕ್ಕೆ ವಿಶೇಷ ರೀತಿಯ ಅರಿಕೆ ಮಾಡಲಾಗಿರುವುದೆಂದು ಅವರು ಹೇಳಿದರು ಅಂತರ ಸಂಸ್ಥಾನ ಮಂತ್ರಿಗಳ ಸಮಿತಿಯು ಪರಿಹಾರವೀಯುವ ಬಗ್ಗೆ ನಿರ್ಧರಿಸಿತ್ತೆಂದೂ, ನಾನ್ ಗೆಜೆಟೆಡ್ ನೌಕರರಿಗಲ್ಲದೆ ಇತರ ಅಧಿಕಾರಿಗಳಿಗೂ ಪರಿಹಾರವೀಯುವ ವಿಷಯವು ಆಲೋಚನೆಯಲ್ಲಿರುವುದಾಗಿಯೂ ಅವರು ಸೂಚಿಸಿದರು

ಸಿನಿಮಾದಲ್ಲಿ ಧೂಮಪಾನಕ್ಕಾಗಿ ಮೊಕದ್ದಮೆ

ರಾಜಧಾನಿಯ ನ್ಯೂ ಇಂಗ್ಲೆಂಡ್ಸ್ ಟಾಕೀಸಿನಲ್ಲಿ ನೆನ್ನೆ ಚಿತ್ರ ಪ್ರದರ್ಶನದ ವೇಳೆಯಲ್ಲಿ ಬೀಡಿ ಸೇದುತ್ತಿದ್ದರೆಂದು ಅಹಮದ್ ಖಾನ್ ಮತ್ತು [illegible] ಜನರ ಮೇಲೆ ಮೊಕದ್ದಮೆ ಹೂಡಲಾಗಿದೆ.

ತರಕಾರಿ ಮತ್ತು ಫಲಪುಷ್ಪ ಪ್ರದರ್ಶನ

ಮೈಸೂರು ೩

ನಗರದ ಪೌರಸಭೆಯವರು ಇದೇ ೧೦ ಮತ್ತು ೧೧ನೇ ತಾರೀಕುಗಳಲ್ಲಿ ಬೆಳಿಗ್ಗೆ ೧೦ ಗಂಟೆವರೆಗೆ ದೇವರಾಜಾ ಮಾರ್ಕೆಟ್ಟಿನಲ್ಲಿ ತರಕಾರಿ ಮತ್ತು ಫಲಪುಷ್ಪ ಪ್ರದರ್ಶನವನ್ನು ಏರ್ಪಡಿಸಿರುವರು ಉತ್ತಮ ತರಕಾರಿ ಮತ್ತು ಹಣ್ಣುಗಳನ್ನು ಬೆಳೆಯುವುದನ್ನು ಪ್ರೋತ್ಸಾಹಪಡಿಸುವುದು ಈ ಪ್ರದರ್ಶನದ ಉದ್ದೇಶ. ಉತ್ತಮ ವಸ್ತುಗಳಿಗೆ ಬಹುಮಾನಗಳನ್ನು ಕೊಡಲಾಗುವುದು ಅದಕ್ಕೆ ಮಹಾಜನರ [illegible] ಸಹಾಯವನ್ನು ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಕೋರಿರುತ್ತಾರೆ

ರೇಡಿಯೋ ಸಂಗೀತದಲ್ಲಿ ಮೈಸೂರಿನ ಸ್ಪರ್ಧಗಾರರು

ಅಖಿಲ ಭಾರತ ರೇಡಿಯೋದವರು ನಡೆಸಲಿರುವ ಸಂಗೀತ ಸ್ಪರ್ಧೆಯ ಸಂಬಂಧವಾಗಿ ಮೈಸೂರು ಸಂಸ್ಥಾನದ ಪ್ರಾಥಮಿಕ ಸ್ಪರ್ಧೆಯನ್ನು ಬೆಂಗಳೂರು ರೇಡಿಯೋದವರು ಏರ್ಪಡಿಸಿದ್ದರು. ನಂಜನಗೂಡಿನ ಶ್ರೀಮತಿ ಡಿ ಆರ್ ಚಂದ್ರಕಲವರು ಶಾಸ್ತ್ರೀಯ ಸಂಗೀತದಲ್ಲೂ, ಬೆಂಗಳೂರಿನ ಶ್ರೀಮತಿ ಆರ್ ವೇದವಲ್ಲಿಯವರು ಲಘು ಸಂಗೀತದಲ್ಲೂ ಮತ್ತು ಆರ್ ಕೆ ಸೂರ್ಯನಾರಾಯಣರವರು ವೀಣಾವಾದನದಲ್ಲೂ ಉತ್ತೀರ್ಣರಾಗಿರುವರು. ಅವರು ಮದ್ರಾಸಿನಲ್ಲಿ ನಡೆಯುವ ಅಖೈರು ಸ್ಪರ್ಧೆಯಲ್ಲಿ ಭಾಗವಹಿಸುವರು

ಮಾರಾಟ ತೆರಿಗೆ ಶಾಸನದ ವಿರುದ್ಧ ಹೋಟೇಲುಗಳ ಅರ್ಜಿ

ಹೈಕೋರ್ಟಿನಲ್ಲಿ ಪುರಸ್ಕಾರ

ಬೆಂಗಳೂರು ೩

[illegible] ಹೋಟೇಲುಗಳ ಮಾಲೀಕರು ಹೈಕೋರ್ಟಿನಲ್ಲಿ ಮಾರಾಟ ತೆರಿಗೆ ಶಾಸನದ ೭ ಮತ್ತು ೯ನೇ ವಿಧಿ ಬಗ್ಗೆ ರಾಜ್ಯಾಂಗದ ೨೨೬ ಮತ್ತು ೨೨೭ನೇ ವಿಧಿಗಳ ಪ್ರಕಾರ ಹೂಡಿದ್ದ ಅರ್ಜಿಗಳನ್ನು ಮುಖ್ಯ ನ್ಯಾಯಾಧೀಶ ಶ್ರೀ ಆರ್ ವೆಂಕಟರಾಮಯ್ಯನವರು ಮತ್ತು ನ್ಯಾಯಾಧೀಶ [illegible] ಹೊಂಬೇಗೌಡರು ಸ್ವೀಕರಿಸಿ, [illegible] ವಾದವನ್ನು ಎತ್ತಿಹಿಡಿದಿರುವರು.

ಶಾಸನದ ೭ ಮತ್ತು ೯ನೇ ವಿಧಿಗಳು ನ್ಯಾಯ [illegible] ವಿರುದ್ಧವಾಗಿವೆ [illegible] ತೆರಿಗೆಯನ್ನು ವಸೂಲು ಮಾಡಬೇಕಾದ ಹಣವನ್ನು ಮಾರಾಟ ತೆರಿಗೆ [illegible] ಕೊಡಬೇಕಾಗುತ್ತದೆಯೋ ಅರ್ಜಿದಾರರು ತಿಳಿಸಿದ್ದರು ಮೂರನೇ ವಿಧಿಯು ರಾಜ್ಯಾಂಗದ [illegible] ನಿಬಂಧನೆಗೆ ವ್ಯತಿರೇಕವಾಗಿ [illegible] ನ್ಯಾಯಾಧೀಶರು ಸೂಚಿಸಿದ್ದಾರೆ [illegible] ವಿಧಿಯು ರಾಜ್ಯಾಂಗದ ಪ್ರಕಾರ ಸಕಲರಿಗೂ ಸಮಾನ ವರ್ತನೆಯ ನಿಬಂಧನೆಯನ್ನು ಉಲ್ಲಂಘಿಸುವುದೆಂಬ ವಾದವನ್ನು ನ್ಯಾಯಾಧೀಶರು ಒಪ್ಪಿದ್ದಾರೆ

ಟಿ ನರಸೀಪುರದ ಬೀಡ್ಸ್ ಫಿಲೇಚರಿನ ಮ್ಯಾನೇಜಿಂಗ್ ಡೈರೆಕ್ಟರಾದ ಶ್ರೀ ಎ ಸಾಂಬಮೂರ್ತಿಯವರನ್ನು ನೆನ್ನೆಯಿಂದ ಸರ್ಕಾರದ ವಶಕ್ಕೆ ಬಂದ ಫಿಲೇಚರಿನ ಜನರಲ್ ಮ್ಯಾನೇಜರಾಗಿ ನೇಮಿಸಲಾಗಿದೆ.

ಫಾರ್ಮೋಸಾ ವಿಮೋಚನೆಗೆ ಸಿದ್ಧವಾಗಲು ಚೀಣರಿಗೆ ಆಜ್ಞೆ

ರಿಪಬ್ಲಿಕ್ಕಿನ ವಾರ್ಷಿಕೋತ್ಸವದಲ್ಲಿ ರಕ್ಷಣಾ ಮಂತ್ರಿಯ ಸೂಚನೆ

ಚೀಣಾದ ರಕ್ಷಣಾ ಮಂತ್ರಿ ಜನರಲ್ ಪೆಂಗ್ ಟಿಹುವೆಯವರು ನೆನ್ನೆ ಪೀಕಿಂಗಿನಲ್ಲಿ ನಡೆದ ಚೀಣಾ ರಾಷ್ಟ್ರದ ಏಳನೇ ರಿಪಬ್ಲಿಕ್ ದಿನಾಚರಣೆಯಲ್ಲಿ ೫ ಲಕ್ಷ ಜನರನ್ನು ಉದ್ದೇಶಿಸಿ ಭಾಷಣ ಮಾಡಿ, ಅಮೆರಿಕವು ಫಾರ್ಮೋಸಾ ದ್ವೀಪವನ್ನು ಇನ್ನೂ ಆಕ್ರಮಿಸಿರುವುದೆಂದು ಹೇಳಿದರು

ದ್ವೀಪದ ವಿಮೋಚನೆ ಮಾಡಲು ಅವರು ತಮ್ಮ ರಾಷ್ಟ್ರದ ಭೂ, ನೌಕಾ ಮತ್ತು ವಿಮಾನ ಬಲಗಳಿಗೆ ಸೂಚನೆಯಿತ್ತು, ಧಾಳಿಗೆ ಸಿದ್ಧವಾಗುವಂತೆ ಆಜ್ಞೆ ಮಾಡಿದ್ದಾರೆ

ಅಮೆರಿಕವು ಯುದ್ಧ ನೀತಿಯನ್ನು ಮುಂದುವರಿಸುತ್ತಿರುವುದಾಗಿ ಅವರು ತಿಳಿಸಿ, ಚೀಣಾದ ಸೇನಾ ಬಲಗಳು ತಮ್ಮ ಆಧುನಿಕ ಶಸ್ತ್ರಾಸ್ತ್ರಗಳನ್ನು ಉತ್ತಮಪಡಿಸಿಕೊಂಡು ಪ್ರದೇಶದ ರಕ್ಷಣೆ ಮಾಡಬೇಕೆಂದು ಸೂಚಿಸಿದ್ದಾರೆ

ಸೂಚನೆ

ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ಶಾಂತಿ ಬಳಕೆಗಾಗಿ ಅಣುಶಕ್ತಿಯ ಉಪಯೋಗ

ದಸರಾ ವಸ್ತು ಪ್ರದರ್ಶನದ ವಿಶೇಷ ಆಕರ್ಷಣೆ

ಮೈಸೂರು ೩

ದಸರಾ ವಸ್ತು ಪ್ರದರ್ಶನ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟಿ ಮತ್ತು ಕಾರ್ಯದರ್ಶಿ ಶ್ರೀ ವಿ ಎಸ್ ಕೃಷ್ಣಯ್ಯರ್‌ರವರು ನೆನ್ನೆ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ, ಬರುವ ಶುಕ್ರವಾರದಿಂದ ಆರಂಭಿಸುವ ವಸ್ತು ಪ್ರದರ್ಶನದ ಬಗ್ಗೆ ವಿವರಗಳನ್ನು ಕೊಟ್ಟರು ೫೦೦ ಸ್ಟಾಲುಗಳನ್ನು ಏರ್ಪಡಿಸಲಾಗಿರುವುದೆಂದೂ, ಸುಮಾರು ೨೦೦ ಜನರಿಗೆ ಸ್ಟಾಲುಗಳು ದೊರೆಯಲಿಲ್ಲವೆಂದೂ ಅವರು ಹೇಳಿದರು

ವಸ್ತು ಪ್ರದರ್ಶನದಲ್ಲಿ ಅತಿ ಮುಖ್ಯವಾದ ವೈಶಿಷ್ಟ್ಯವೆಂದರೆ ಅಮೆರಿಕಾ ಸರ್ಕಾರದ ವಾರ್ತಾ ಸಂಸ್ಥೆಯವರು ಏರ್ಪಡಿಸಿರುವ ಶಾಂತಿಗಾಗಿ ಅಣುಶಕ್ತಿಯ ಉಪಯೋಗದ ಪ್ರದರ್ಶನ

ಮೈಸೂರು ಮೆಡಿಕಲ್ ಕಾಲೇಜು ಸಂಘದವರು ಇದೇ ಮೊದಲಾಗಿ ವೈದ್ಯ ಮತ್ತು ಆರೋಗ್ಯದ ಪ್ರದರ್ಶನವನ್ನು ತಮ್ಮ ಕಾಲೇಜಿನಲ್ಲಿ ವಸ್ತು ಪ್ರದರ್ಶನದ ಅಂಗವಾಗಿ ಏರ್ಪಡಿಸಿದ್ದಾರೆ

ಬೆಂಗಳೂರಿನ ಹಿಂದೂಸ್ತಾನ್ ಯಂತ್ರ ಸಾಧನ [illegible] ಕಾರ್ಖಾನೆ, ಕೆ ಎಲ್, ಹಡಗು ನಿರ್ಮಾಣ ಕೇಂದ್ರ, ಸಿಂದ್ರಿ ಕಾರ್ಖಾನೆ, ಅಖಿಲ ಭಾರತ ಕೈಮಗ್ಗದ ಸಮಿತಿ ಹುರಿ ಸಮಿತಿ, ಮುಂತಾದ ಕೇಂದ್ರ ಸರ್ಕಾರದ ಇಲಾಖೆಗಳೂ ಭಾಗವಹಿಸಲಿವೆ

ಪಶ್ಚಿಮ ಬಂಗಾಳ, ಮಧ್ಯ ಭಾರತ, ಅಸ್ಸಾಂ ಮತ್ತು ಕೊಡಗು ಸರ್ಕಾರಗಳು ತಮ್ಮ ವಿಶೇಷ ವಸ್ತುಗಳನ್ನು ಪ್ರದರ್ಶಿಸುವುವು

ಮೈಸೂರು ಸರ್ಕಾರದವರು ಎಂದಿನಂತೆ ತಮ್ಮ ನಾನಾ ಇಲಾಖೆಗಳ ವಸ್ತುಗಳಲ್ಲದೆ ಇತರ ಉಪಯುಕ್ತವಾದ ವಿಷಯಗಳನ್ನೂ ಪ್ರದರ್ಶಿಸುವರು ಇತ್ತೀಚೆಗೆ ಜಪಾನಿಗೆ ಭೇಟಿ ಕೊಟ್ಟ ನಗರದ ಕಲಾವಿದರಾದ ಶ್ರೀ ಎಂ ವೀರಪ್ಪನವರು ಆಕರ್ಷಕ ಮಕ್ಕಳ ಬೊಂಬೆ ಮತ್ತು ಬಿದಿರಿನ ಪದಾರ್ಥಗಳನ್ನು ಪ್ರದರ್ಶಿಸುವರು.

ಕೇರಳದ ಕೆ. ಪದ್ಮನಾಭ ಮೆನನ್ನರು ಗಾಂಧೀಜಿಯವರ ಜೀವನವನ್ನು ವಿವರಿಸುವ ಚಿತ್ರಪಟಗಳನ್ನು ನೋಟಕ್ಕೆ ಇಡುವರು

ಭೂದಾನ ಯಜ್ಞ ಮತ್ತು ಸರ್ವೋದಯ ಚಳುವಳಿ ಸಂಸ್ಥೆಗಳೂ ಭಾಗವಹಿಸುವುವು

ಮನರಂಜನೆಗಾಗಿ ಈ ಸಾರಿ ಅನೇಕ ವಿಶೇಷ ಕಾರ್ಯಕ್ರಮಗಳು ಏರ್ಪಾಡಾಗಿವೆ

ಪ್ರದರ್ಶನದ ಆರ್ಥಿಕ ಪರಿಸ್ಥಿತಿಯು ಸುಭದ್ರವಾಗಿರುವುದೆಂದೂ ಕಳೆದ ವರ್ಷ ಒಟ್ಟು [illegible]೬,೦೦೦ ರೂ ನಿವ್ವಳ ಲಾಭ ಬಂದಿತ್ತೆಂದೂ ಗೊತ್ತಾಗಿದೆ ಈ ವರ್ಷದ ಪ್ರದರ್ಶನವು ಎಲ್ಲಾ ವಿಧದಲ್ಲೂ ಅತ್ಯಂತ ಆಕರ್ಷಣೀಯವಾಗಿರುವುದೆಂದು ನಿರೀಕ್ಷಿಸಲಾಗಿದೆ

ಅನಾಥಾಲಯದ ಸಾಹಿತ್ಯ ಸಂಘದ ಉದ್ಘಾಟನೆ

ಮೈಸೂರು ಅನಾಥಾಲಯದ ಸಾಹಿತ್ಯ ಸಂಘದ ಉದ್ಘಾಟನಾ ಮಹೋತ್ಸವವನ್ನು ಕಳೆದ ಭಾನುವಾರ ಆಲಯದ ಗೌರವ ಕಾರ್ಯದರ್ಶಿ ಶ್ರೀ ಎಂ ಎಸ್ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ಆಲಯದ ಅಧ್ಯಕ್ಷರಾದ ಶ್ರೀ ಹೆಚ್ ಸುಬ್ಬರಾಯರು ನೆರವೇರಿಸಿದರು. ಶ್ರೀ ಎಂ ಕೃಷ್ಣಮೂರ್ತಿರಾಯರು ಸ್ವಾಗತ ಭಾಷಣ ಮಾಡಿದರು ಶ್ರೀ ಸುಬ್ಬರಾಯರು ಸಾಹಿತ್ಯ ಸಂಘದ ಧ್ಯೇಯ, ಉದ್ದೇಶ ಮತ್ತು ಸಾಧನೆಗಳನ್ನು ವಿವರಿಸಿದರು. ಅನಂತರ ಅಧ್ಯಕ್ಷರು ಮತ್ತು ಆಲಯದ ಸದಸ್ಯರಾದ ಶ್ರೀ ವಾಲ್ಟರ್ ಶ್ರೀನಿವಾಸಯ್ಯನವರಿಂದ ಭಾಷಣಗಳಾದುವು ಸಂಘದ ಕಾರ್ಯದರ್ಶಿಗಳು ವಂದನಾರ್ಪಣೆ ಮಾಡಿದರು ಆಲಯದ ವಿದ್ಯಾರ್ಥಿಗಳು ಕ್ಷೀರಸಾಗರ ವಿರಚಿತ '[illegible]' ಎಂಬ ನಾಟಕವನ್ನು ಅಭಿನಯಿಸಿದರು

ಸಾಲಿಗ್ರಾಮದ ಪೌರಸಭಾ ಉಪಾಧ್ಯಕ್ಷರು

ಸಾಲಿಗ್ರಾಮದ ಪೌರಸಭೆ ಉಪಾಧ್ಯಕ್ಷರ ಚುನಾವಣೆಯು ಕಳೆದ ಶನಿವಾರ ನಡೆದು ಶ್ರೀ ಎಸ್ ಹೆಚ್ ರಂಗೇಗೌಡರು ಉಪಾಧ್ಯಕ್ಷರಾಗಿ ಚುನಾಯಿತರಾದರು

ಭಾರತಕ್ಕೆ ಪೋರ್ಚುಗೀಸ್ ಪೋಲೀಸನ ಶರಣು

ಗೋವೆಯ ಪೋರ್ಚುಗೀಸ್ ಹೆಡ್ ಕಾನ್‌ಸ್ಟೇಬಲ್ ಒಬ್ಬನು ಭಾರತದ ಗಡಿಯನ್ನು ದಾಟಿ ಇಲ್ಲಿನ ಅಧಿಕಾರಿಗಳಿಗೆ ಶರಣು ಹೊಂದಿದ್ದಾನೆ. ಇದುವರೆಗೆ ಬಂದವರಲ್ಲಿ ಇವನು ೧೦ನೆಯವನು

ಭಾರತದಲ್ಲಿ ೧೯ [illegible] ಓಟರುಗಳು

ಮುಂದಿನ ಚುನಾವಣೆಗಳಲ್ಲಿ ಭಾರತದಲ್ಲಿ ೧೯ ಕೋಟಿ ಓಟರುಗಳು ಇರುವರೆಂದು ಗೊತ್ತಾಗಿದೆ ಕಳೆದ ಚುನಾವಣೆ ಸಮಯದಲ್ಲಿ ೧೭ ಕೋಟಿ ಜನರಿದ್ದರು

ಗೋವಾ ತ್ಯಜಿಸಲು ಸಾಲಜಾರರಿಗೆ ಕರೆ

ಬೊಂಬಾಯಿ ನಗರದಲ್ಲಿ ೭೦ ಮಂದಿ ಗೋವಾ ವೈದ್ಯರುಗಳು ಸಭೆ ನಡೆಸಿ ಪೋರ್ಚುಗೀಸರು ಗೋವಾದಿಂದ ತೊಲಗಬೇಕೆಂದು ಸೂಚಿಸುವ ಮನವಿಯನ್ನು ಪೋರ್ಚುಗಲ್ಲಿನ ಸರ್ವಾಧಿಕಾರಿ ಸಾಲಜಾರರಿಗೆ ಒಪ್ಪಿಸಲು ನಿರ್ಧರಿಸಿರುತ್ತಾರೆ

ಸಿ. ನರಸಿಂಹಯ್ಯ ಸ್ಮಾರಕ ಅಂತರ ಕಾಲೇಜುಗಳ ಚರ್ಚೆ

ಮೈಸೂರಿನ ಶಾರದಾವಿಲಾಸ ಕಾಲೇಜಿನ ಆಶ್ರಯದಲ್ಲಿ ಕಳೆದ ಶನಿವಾರ, ಸಿ ನರಸಿಂಹಯ್ಯ ಸ್ಮಾರಕ ಅಂತರ ಕಾಲೇಜುಗಳ ಚರ್ಚಾಸ್ಪರ್ಧೆಯು ನಡೆಯಿತು 'ಈಜಿಪ್ಟ್ ಸೂಯೆಜ್ ಕಾಲುವೆಯನ್ನು ರಾಷ್ಟ್ರೀಕರಣ ಮಾಡಿದುದು ಸರಿ ಮತ್ತು ಸೂಯೆಜ್ ಕಾಲುವೆಯ ಬಳಕೆದಾರರ ಆಲೋಚನೆಯಂತೆ ನಡೆದರೆ ಈಜಿಪ್ಟಿನ ಸಾರ್ವಭೌಮತ್ವಕ್ಕೆ ಚ್ಯುತಿಬರುತ್ತದೆ' ಎಂಬುದು ಚರ್ಚಾ ವಿಷಯವಾಗಿದ್ದಿತು ದೇಶದ ಹದಿನಾಲ್ಕು ಕಾಲೇಜುಗಳಿಂದ ಇಪ್ಪತ್ತೆಂಟು ವಿದ್ಯಾರ್ಥಿಗಳು ಭಾಗವಹಿಸಿದ್ದರು ಸಿ ನರಸಿಂಹಯ್ಯನವರ ನಿರಂತರ ಪರ್ಯಾಯ ಫಲಕವು ಬೆಂಗಳೂರಿನ ಮಹಾರಾಣಿ ಕಾಲೇಜಿಗೂ, ಮೊದಲನೇ ಬಹುಮಾನ ಮೈಸೂರು ಮಹಾರಾಜಾ ಕಾಲೇಜಿನ ಶ್ರೀ ವಿ ಕೆ ನಟರಾಜ್‌ರವರಿಗೂ, ಎರಡನೇ ಬಹುಮಾನ ಬೆಂಗಳೂರಿನ ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿ ಶ್ರೀಮತಿ ಜಯಂತಿ [illegible]ರವರಿಗೂ, ಮೂರನೆಯ ಬಹುಮಾನ ಬೆಂಗಳೂರಿನ ಬಿ ಎಂ ಎಸ್ ಕಾಲೇಜಿನ ಶ್ರೀ ಹರಿದಾಸ್‌ರವರಿಗೂ ಮತ್ತು ಮಹಿಳೆಯರ ವಿಶೇಷ ಬಹುಮಾನವು ಬೆಂಗಳೂರಿನ ಮಹಾರಾಣಿ ಕಾಲೇಜಿನ ಶ್ರೀಮತಿ ವಿ ಕೃಷ್ಣಸ್ವಾಮಿಯವರಿಗೂ ದೊರೆತುವು

ಹರಿಕಥೆ ಮತ್ತು ದೇವರಿಗೆ ಅಲಂಕಾರ

ಮಂಡಿಮೊಹಲ್ಲೆಯ ಕಾಳಮ್ಮನಗುಡಿ ಬೀದಿ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಮಹಾಲಯ ಅಮಾವಾಸ್ಯೆ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ಬೆಂಗಳೂರಿನ ಶ್ರೀ ಪಿ ರಾಮಸ್ವಾಮಿನಾಯ್ಡುರವರಿಂದ ಬಭ್ರುವಾಹನ ಚರಿತ್ರೆ ಎಂಬ ಹರಿಕಥೆಯೂ, ಅನಂತರ ಶ್ರೀ ಕೃಷ್ಣಾರ್ಜುನ ಅಲಂಕಾರವೂ ಏರ್ಪಾಡಾಗಿವೆ

ಸತ್ಕಾರ ಕೂಟ

ಮೈಸೂರು ಬ್ಯಾಂಕಿನ ನಗರ ಶಾಖಾ ನಿವೃತ್ತ ಮ್ಯಾನೇಜರ್ ಶ್ರೀ ಎಸ್ ಪಿ ವೀರಭದ್ರಶೆಟ್ಟಿ ಮತ್ತು ಈಗಿನ ಮ್ಯಾನೇಜರ್ ಶ್ರೀ ಶಂಕರಜಾವಳಿಯವರ ಗೌರವಾರ್ಥವಾಗಿ ನಗರದ ಮಹಾಜನರ ಪರವಾಗಿ ನೆನ್ನೆ ದಾಸಪ್ರಕಾಶದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಲಾಗಿತ್ತು ಮಹಾರಾಜರ ಹುಜೂರು ಕಾರ್ಯದರ್ಶಿಯವರಾದ ಶ್ರೀ ಜೆ ಬಿ ಮಲ್ಲಾರಾಧ್ಯರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಎಲ್. ಎಸ್ ವಿ ರಾಮಯ್ಯರ್ ಮತ್ತು ಎಂ ಆರ್ ಸಿ ಬಸಪ್ಪನವರು ಮುಖ್ಯ ಅತಿಥಿಗಳ ಗುಣಗಾನ ಮಾಡಿ ಅವರಿಗೆ ಸಕಲ ಸನ್ಮಂಗಳಗಳನ್ನೂ ಕೋರಿದರು ಪ್ರಾರಂಭದಲ್ಲಿ ಶ್ರೀ ಕೃಷ್ಣಯ್ಯಂಗಾರ್‌ರು ಸ್ವಾಗತ ಭಾಷಣ ಮಾಡಿದರು ಶ್ರೀಮತಿ ಲಕ್ಷಮ್ಮನವರಿಂದ ಸುಶ್ರಾವ್ಯವಾದ ಗಾಯನವಾಯಿತು. ಅತಿಥಿಗಳು ಸತ್ಕಾರಕ್ಕಾಗಿ ಧನ್ಯವಾದಗಳನ್ನು ಸಲ್ಲಿಸಿದರು ಶ್ರೀ ಬಿ ಎಸ್ ಸುಬ್ಬರಾಯರಿಂದ ವಂದನಾರ್ಪಣೆಯಾದನಂತರ ಸಮಾರಂಭವು ಮುಕ್ತಾಯವಾಯಿತು.

ಜರ್ಮನಿಗೆ ಸಾರ್ ಪ್ರದೇಶ ವಾಪಸು

ಜರ್ಮನಿಗೆ ಸಾರ್ ಪ್ರದೇಶವನ್ನು ವಾಪಸು ಕೊಡಲು ಫ್ರಾನ್ಸ್ ಒಪ್ಪಿ ಈ ಬಗ್ಗೆ ಉಭಯ ರಾಷ್ಟ್ರಗಳಲ್ಲೂ ಒಡಂಬಡಿಕೆಯಾಗಿದೆ

ಭದ್ರಾವತಿಯಲ್ಲಿ ಕರ್ನಾಟಕ ಪಿ. ಎಸ್. ಪಿ. ಸಮ್ಮೇಳನ

ಕರ್ನಾಟಕ ಪ್ರಜಾ ಸಮಾಜವಾದಿ ಪಕ್ಷದ ಪ್ರಥಮ ಸಮ್ಮೇಳನವು ಇದೇ ೭ನೇ ತಾರೀಕು ಭಾನುವಾರ ಭದ್ರಾವತಿಯಲ್ಲಿ ಸೇರುವುದು ವಿಧಾನ ಸಭಾ ಸದಸ್ಯರೂ, ಪಕ್ಷದ ಅಧ್ಯಕ್ಷರೂ ಆದ ಶ್ರೀ ಬಿ ಕುಚ್ಚೇಗೌಡರು ಅಧ್ಯಕ್ಷತೆ ವಹಿಸುವರು ಪಕ್ಷದ ರಾಷ್ಟ್ರೀಯ ಸಮಿತಿಯ ಸದಸ್ಯರಾದ ಅಶೋಕಮೆಹತಾರವರು ಅದರ ಆರಂಭೋತ್ಸವವನ್ನು ನೆರವೇರಿಸುವರು ಅದೇ ತಾರೀಕು ಸೇರುವ ರಾಜಕೀಯ ಸಮ್ಮೇಳನದ ಆರಂಭೋತ್ಸವವನ್ನು ಮಹಾರಾಷ್ಟ್ರದ ಮುಖಂಡರಾದ ಎಸ್ ಎಂ ಜೋಷಿಯವರು ನೆರವೇರಿಸುವರು ಕಾರ್ಮಿಕರ ಮತ್ತು ಯುವಕರ ಮತ್ತು ರೈತರ ಸಮ್ಮೇಳನಗಳೂ ಜರುಗುವುವು ಅವುಗಳಲ್ಲಿ ಕೆ ಆರ್ ಕಾರಂತ್ ಮತ್ತು ಎಂ ಎಸ್ ಗುರುಪಾದಸ್ವಾಮಿಯವರು ಭಾಗವಹಿಸುವರು [illegible]ನೇ ತಾರೀಕು ಸಹ ಸಮ್ಮೇಳನವು ನಡೆಯುವುದು

ಕಚ ದೇವಯಾನಿ ಚಿತ್ರ

ರಾಜಧಾನಿಯ ಪ್ರಭಾ ಚಿತ್ರ ಮಂದಿರದವರು ಪ್ರದರ್ಶಿಸುತ್ತಿರುವ ಕಚ-ದೇವಯಾನಿ ಎಂಬ ಕನ್ನಡ ಚಿತ್ರ ಪ್ರದರ್ಶನಕ್ಕೆ ನೆನ್ನೆ ಪತ್ರಿಕಾ ವರದಿಗಾರರುಗಳನ್ನೂ ಇತರ ಪ್ರಮುಖರನ್ನೂ ಆಹ್ವಾನಿಸಲಾಗಿದ್ದಿತು ದೈವಿಕ ಶಕ್ತಿಯನ್ನು ಹೀನವಾಗಿ ಉಪಯೋಗಿಸುವುದು ಪಾತಕವೆಂದು ಸೂಚಿಸುವ ಚಿತ್ರವಿದು ಪಾತ್ರಧಾರಿಗಳು ಉತ್ತಮವಾಗಿ ಅಭಿನಯಿಸಿದ್ದಾರೆ.

ಟೆಂಡರ್ ನೋಟಿಫಿಕೇಷನ್

ಚಾಮರಾಜನಗರದ ಶ್ರೀ ನಾರಾಯಣ ಅನ್ಯೋನ್ಯ ಸಹಾಯ ಸಂಘ (ಲಿಮಿಟೆಡ್) ಅವರಿಂದ

ಈ ಮೂಲಕ ತಿಳಿಯಪಡಿಸುವುದೇನೆಂದರೆ -ಇದೇ ಟೌನ್ [illegible] ಸಂಘದ ಕಟ್ಟಡದ ಹಿಂಭಾಗದಲ್ಲಿ ರೂಮು ಕಟ್ಟುವುದು, ಕಕ್ಕಸ್ಸು ಫೆನ್ಸಿಂಗ್ ವಗೈರೆ ಕೆಲಸಗಳನ್ನು ಮಾಡುವ ಬಗ್ಗೆ 24-10-1956ನೇ ಬುಧವಾರ ಸಾಯಂಕಾಲ ೫ ಘಂಟೆಯವರೆಗೆ ಟೆಂಡರ್ ಸ್ವೀಕರಿಸಲಾಗುವುದು ಈ ಕಂಟ್ರಾಕ್ಟ್ ಪಡೆಯಲು ಇಷ್ಟವುಳ್ಳವರು ತಮ್ಮ ಟೆಂಡರಿನಲ್ಲಿ ತಾವು ಈ ಕೆಲಸ ಮಾಡತಕ್ಕ ಮೊಬಲಗನ್ನು ಐಟಂವಾರ್ ಬರೆಯತಕ್ಕದ್ದು

ಟೆಂಡರ್ ಸ್ಯಾಂಕ್ಷನ್ ಆದವರು ತಮಗೆ ವರ್ತಮಾನ ತಲುಪಿದ ಒಂದು ವಾರದೊಳಗಾಗಿ ಛಾಪಾ ಕಾಗದದಲ್ಲಿ, ಕಂಟ್ರಾಕ್ಟನ್ನು ಸರಿಯಾಗಿ ನಡೆಸಿಕೊಂಡು ಹೋಗುವುದಕ್ಕೆ ಒಂದು ಕರಾರನ್ನು ಬರೆದುಕೊಡತಕ್ಕದ್ದು ಕಂಟ್ರಾಕ್ಟಿಗೆ ಸಂಬಂಧಪಟ್ಟ ವಿಷಯಗಳಲ್ಲೆಲ್ಲಾ ಮೇಲ್ಕಂಡ ಸಂಘದ ಕಮಿಟಿ ಮೆಂಬರುಗಳ ತೀರ್ಮಾನಕ್ಕೆ ಒಳಪಟ್ಟಿರತಕ್ಕದ್ದು ಈ ಕಂಟ್ರಾಕ್ಟ್ ಬಗ್ಗೆ ಬೇಕಾದ ಹೆಚ್ಚಿಗೆ ವಿವರಗಳನ್ನು ಮೇಲ್ಕಂಡ ಆಫೀಸಿನಿಂದ ಆಫೀಸು ಕೆಲಸ ಮಾಡುವ ಕಾಲದಲ್ಲಿ ತಿಳಿದುಕೊಳ್ಳಬಹುದು

ಕೆ. ಜಿ. ತಮ್ಮಣ್ಣಯ್ಯ,
ಗೌರವ ಕಾರ್ಯದರ್ಶಿ,
ಶ್ರೀ ನಾರಾಯಣ ಅನ್ಯೋನ್ಯ
ಸಹಾಯ ಸಂಘ (ಲಿಮಿಟೆಡ್),
ಚಾಮರಾಜನಗರ

ಕರ್ನಾಟಕದಲ್ಲಿ ಹನುಮಂತಯ್ಯನವ ಪ್ರವಾಸ

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನಾಳೆಯಿಂದ ಕರ್ನಾಟಕದಲ್ಲಿ ಪ್ರವಾಸ ಕೈಗೊಳ್ಳುವರು ದಾವಣಗೆರೆ, ಧಾ ಡ ಹುಬ್ಬಳ್ಳಿ ಬೆಳಗಾಂ, ಚಿಕ್ಕೋಡಿ, ಬ ಟ್ಟಿ, ರಬಕವಿ ಮತ್ತು ರಾಯಚೂರುಗಳಿಗೆ ರು ಭೇಟಿ ಕೊಡುವರು ಬೆಳಗಾಂ, ಚಿಕ್ಕೋ ಬನಹಟ್ಟಿ ಮತ್ತು ರಾಯಚೂರುಗಳಲ್ಲಿ ನಾಡ ಕ್ಕದ ಕಾರ್ಯಕ್ರಮಗಳಲ್ಲಿ ಭಾಗವಹಿಸುವ ರಬಕವಿಯಲ್ಲಿ ೭ನೇ ತಾರೀಕು ಪ್ರೌಢಶಾಲೆ ಶಂಕುಸ್ಥಾಪನೆಯನ್ನು ನೆರವೇರಿಸುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರ

ಬೆಳಗ್ಗೆ ೭-೫೫ ಸಿಟೀಲು ೭-೧೫ ಮ
೮-೧೫ ಆರ್ ಪರಮಶಿವಂ-ದೇವರನಾ
೮-೩೦ ಹಿಂದಿ ಪಾಠ. ಮಧ್ಯಾಹ್ನ ೧೨ ಆ
ರಾಜೇಶ್ವರಿ-ಸಂಗೀತ ೧೨-೩೦ ವಾದ್ಯ ಗಾ
ನ ೧ ಆರ್ ಪರಮಶಿವಂ-ಸಂಗೀತ ೧
ಸಿಟೀಲು ೨-೧೫ ರಿಕಾರ್ಡು ಸಂಜೆ ೫
ಮತ್ತು ಟ ಎಂ ಪುಟ್ಟಸ್ವಾಮಿ-ನಾಗಸ್ವರ ೬
ಗೀತಾವಳಿ ೭-೩೦ ನಾವು ಮತ್ತು ನಮ್ಮ
೮-೩೦ ರಾಷ್ಟ್ರೀಯ ಕಾರ್ಯಕ್ರಮ ೮-೫
ರಂಗಿ ೯-೧೫ ಡಿ ಕೆ ಪಟ್ಟಮ್ಮಾಳ್-ಸಂಗೀ

SREE GANES
TALKIES
Now being shown [illegible]
unprecedented crowds
THE COURT JEST
Daily 4 Shows
Next Change —
ULYSSES

ಜೀವನದ ಹರ್ಷವನ್ನು ಸವಿ
[illegible] !
[illegible] !!
ಯುವಕರಿಗೆ [illegible]
[illegible] ಶಕ್ತಿಯನ್ನು [illegible] ಅನುಭವಿಸಬೇಕೆ [illegible] ನವ ಯುವಕರ [illegible] ಭಾಗಗಳಲ್ಲಿರುವ ಕೆಟ್ಟು ಹೋದ [illegible] ಲೈಂಗಿಕ ಶಕ್ತಿಯ ಅಭಾವ [illegible] ಸ್ವಪ್ನಸ್ಖಲನ, ಮೂಲವ್ಯಾಧಿ ನರ [illegible] ಅಂದವಾದ [illegible] ಮೂತ್ರ ರೋಗಗಳಿಗೂ [illegible] ಇವುಗಳನ್ನು ಕೂಡಲೇ ಗುಣಪಡಿಸಲು [illegible] ತರಾಗಿರುವ ಡಾ|| ರಾಜಾರವರನ್ನು ([illegible]) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮ ಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿ ರು ಸ್ತ್ರೀ ಪುರುಷರಿಬ್ಬರ ಗುಪ್ತ, ಹಾಗೂ ಬಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳ ಹುವರು ನೂರಕ್ಕೆ ನೂರು ಖಾತರಿ ವುದು

ಅವರ ಸಲಹೆ ಪಡೆಯುವುದರಿಂದ ಹೊ ನವನ್ನು ಪಡೆವಂತೆಯೇ ಚಿಂತೆಗಳನ್ನು ಗೆ ದಲಾಗುವುದು ಕೆಳಗಿನ ವಿಳಾಸದಲ್ಲಿ ಭೇ ಡಿರಿ

ರಾಜಾ ಮೆಡಿಕಲ್ ಹಾ
ಲೇನ್ ನಂ 1-743 ಆರೋಗ್ಯ
(ಮೈಸೂರು ಬ್ಯಾಂಕ್ ಬಳಿ ಹಾಲಿ
ಮೂರನೇ ಕಟ್ಟಡ,)
ಮೈ ಸೂ ರು

Edited, Printed and Publis
A. R. Nagarajan at Sadhvi
D. Subbiah Road, Mysore

ಮೈಸೂರು ದಸರಾ ವಸ್ತು ಪ್ರದರ್ಶನ, 1956

5-10-1956ನೇ ಶುಕ್ರವಾರ ಸಂಜೆ 5 ಘಂಟೆಗೆ ಅಮೋಘ ಪ್ರಾರಂಭ
ಭಾರತ ಸರ್ಕಾರದ ಗೃಹ ಖಾತೆಯ ಸಚಿವ
ಶ್ರೀ ಬಿ. ಎನ್. ದಾತಾರ್ ರವರು
ಆರಂಭೋತ್ಸವವನ್ನು ನೆರವೇರಿಸುವರು
ಮೈಸೂರಿನ ಮುಖ್ಯ ಮಂತ್ರಿ
ಶ್ರೀ ಕಡಿದಾಳ್ ಮಂಜಪ್ಪನವರು
ಅಗ್ರಾಸನವನ್ನು ವಹಿಸಲಿರುವರು

[illegible] ಸಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಕೆಮ್ಮು
ರೋಗಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಇತರ ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
[illegible] ರಸ್ತೆ,
ಬೆಂಗಳೂರು –2

ಸಂಪುಟ : ೧೫] SADHVI : THURSDAY 4—10—1956 ಮೈಸೂರು : ಗುರುವಾರ ೪—೧೦—೧೯೫೬ [ಸಂಚಿಕೆ : ೬೦

ಬಂಗಾಳಾ ಪ್ರವಾಹದಲ್ಲಿ ೪೨ ಮರಣ : ೧೦ ಕೋಟಿ ನಷ್ಟ

ಬಂಗಾಳಾ ಪ್ರವಾಹದಲ್ಲಿ ೪೨ ಜನರ ಮರಣ

೧೦ ಕೋಟಿ ರೂ. ಆಸ್ತಿ ನಷ್ಟ

ಕಳೆದ ವಾರ ಪಶ್ಚಿಮ ಬಂಗಾಳದಲ್ಲಿ ವಿಪರೀತ ಪ್ರವಾಹದಿಂದ ೪೨ ಜನರು ಮೃತಪಟ್ಟರು. ಪ…ಳೆ ನಷ್ಟವೇ ೧೦ ಕೋಟಿ ರೂ ಆಗಿದೆ. ೩೫ … ಪ್ರಜೆಗಳು ತೊಂದರೆಗೀಡಾಗಿದ್ದಾರೆ ೭ ಲಕ್ಷ …ದಿ ಆಶ್ರಯವಿಲ್ಲದವರಾಗಿದ್ದಾರೆ ಈಗ ಸೂಚಿಸಿದ ೪೨ ಮರಣಗಳಲ್ಲದೆ, ಕಳೆದ ವಾರ ಕಲ್ಲಿದ್ದಲು ಗಣಿಗೆ ನೀರು ನುಗ್ಗಿ ೪೩ ಜನರು ಮೃತಪಟ್ಟರು ಪ್ರವಾಹದ ನೀರು ೩,೧೦೦ ಚದರ ಮೈಲಿ ಪ್ರದೇಶಕ್ಕೆ ವ್ಯಾಪಿಸಿದೆ.

೩೧ ಸಾವಿರ ಗ್ರಾಮಗಳಿಗೆ ಷ್ಟ್ರೀಯ ವಿಸ್ತರಣ ಯೋಜನೆ

ಮೊನ್ನೆ ಮಹಾತ್ಮ ಗಾಂಧಿಯವರ ಜಯಂತಿ …ಬಂಧವಾಗಿ ದೇಶಾದ್ಯಂತ ೩೧ ಸಾವಿರ ಗ್ರಾಮಗಳಲ್ಲಿ ರಾಷ್ಟ್ರೀಯ ವಿಸ್ತರಣ ಮತ್ತು ಸಾಮೂಹಿಕ ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಲಾಯಿತು ಇದರಿಂದ ೨ ಕೋಟಿ ಜನರಿಗೆ ಈ ಸೌಲಭ್ಯಗಳು ದೊರಕಲಿವೆ ಇದರಿಂದ ದೇಶದ ಪ್ರಜಾಸಂಖ್ಯೆಯಲ್ಲಿ ಕಾಲು ಭಾಗಕ್ಕಿಂತಲೂ ಹೆಚ್ಚಿನದ, ಅಂದರೆ ೧೦ ಕೋಟಿ ಪ್ರಜೆಗಳಿಗೆ ಈ ಯೋಜನೆಯ ಸೌಲಭ್ಯಗಳು ದೊರೆತಂತಾಗಿದೆ. …ನ್ನೆ ೩೧೮ ಹೊಸ ಕೇಂದ್ರಗಳು ತೆರೆದುವು. … ಕೇಂದ್ರದಲ್ಲೂ ನಡೆಯುವ ಕೆಲಸದಲ್ಲಿ ೪ … ರೂ. ವರೆಗೆ ಹಣ ವಿನಿಯೋಗವಾಗುವುದು

ದೆಹಲಿಯಲ್ಲಿ ಗಾಂಧಿ ಜಯಂತ್ಯುತ್ಸವ

ಮಹಾತ್ಮ ಗಾಂಧಿಯವರ ೮೭ನೇ ವರ್ಷದ ಜಯಂತಿಯು ಮೊನ್ನೆ ದೆಹಲಿಯ ರಾಜಘಾಟಿನಲ್ಲಿ ನೆರವೇರಿಸಲ್ಪಟ್ಟಿತು ಅದರ ಅಂಗವಾಗಿ ಪ್ರಾರ್ಥನೆ, ಸಾಮೂಹಿಕ ನೂಲುಯಜ್ಞ ಮತ್ತು ಭಜನೆ ನಡೆದುವು ಇದೇ ಸಂದರ್ಭದಲ್ಲಿ ಸರ್ಕಾರದ… ಅನೇಕ ಅಭಿವೃದ್ಧಿ ಯೋಜನೆಗಳನ್ನು ಆರಂಭಿಸಿದರು

ರಾಜಘಾಟಿನಲ್ಲಿ ಮಹಾತ್ಮ ಗಾಂಧಿಯವರ ಸಮಾಧಿಗೆ ಹೂಮಾಲೆಗಳನ್ನು ಅರ್ಪಿಸಲಾಯಿತು ರಾಷ್ಟ್ರಾಧ್ಯಕ್ಷರು, ಕೇಂದ್ರ ಮತ್ತು ಸಂಸ್ಥಾನ ಮಂತ್ರಿಗಳು ಭಾಗವಹಿಸಿದ್ದರು ಗೀತೆ, ಸಿಖ್ಖರ ಪವಿತ್ರ ಗ್ರಂಥ ಮತ್ತು ಕೊರಾನ್‌ಗಳ ಪಠಣ ನಡೆದುವು. ಜಯಂತಿ ಅಂಗವಾಗಿ ೨೪ ಗಂಟೆ ಸಾಮೂಹಿಕ ನೂಲು ಯಜ್ಞವನ್ನು ಏರ್ಪಡಿಸಲಾಗಿದೆ.

ನಗರದಲ್ಲಿ ಕಳ್ಳತನಗಳು

ರಾಜಧಾನಿಯ ಕೃಷ್ಣರಾಜ ಮೊಹಲ್ಲೆಯ ಶ್ರೀ … ಎಸ್. ರಾಜಯ್ಯಂಗಾರ್ಯರ ಮನೆ ಬೀಗ …ದು ಮೊನ್ನೆ ೩,೧೨೦ ರೂ ಬೆಲೆಯ ಚಿನ್ನ… ಸಾಮಾನುಗಳ ಅಪಹಾರವಾಗಿದೆಯೆಂದು …ಯಾಗಿದೆ. ಟೌನ್ ಹಾಲ್ ಬಳಿ ಇರುವ ಸಿಟಿ … ಸ್ಟಾಂಡಿನ ಬುಕಿಂಗ್ ಆಫೀಸ್ ಬೀಗ …ದು ಹಣದ ಪೆಟ್ಟಿಗೆ ಮತ್ತು ಟಿಕೇಟು ಪು…ಕಳ್ಳ, ಒಂಟಿಕೊಪ್ಪಲಿನ ಶ್ರೀ ಪುಟ್ಟಸ್ವಾ…ಅವರ ಮನೆಯಲ್ಲಿ ೩೫ ರೂ ಗಳ ಸಾಮಾನು … ಅಪಹರಿಸಲಾಗಿದೆಯೆಂದು ಗೊತ್ತಾಗಿದೆ

ವಸ್ತು ಪ್ರದರ್ಶನದಲ್ಲಿ ಚಿತ್ರಗಳಿಗೆ ಬಹುಮಾನಗಳು

ಮೈಸೂರು ೪

ಈ ಸಾರಿ ದಸರಾ ವಸ್ತು ಪ್ರದರ್ಶನದಲ್ಲಿ ಏರ್ಪಡಿಸಿರುವ ಲಲಿತ ಕಲಾ ಪ್ರದರ್ಶನಗಳಿಗಾಗಿ ಕೆಳಗಿನಂತೆ ಬಹುಮಾನಗಳು ದೊರೆತಿವೆ

ತಿಮ್ಮಪ್ಪದಾಸರ ಜಲ ವರ್ಣ [illegible] ವಿನ ಆರ್. ಸಿ. ಸತೀಷರವರು ಬರೆದಿರುವ ಊರ್ವಶಿ ಮತ್ತು ಪುರೂರವ ಚಿತ್ರಕ್ಕೆ.

ವಸ್ತು ಪ್ರದರ್ಶನ ಸಮಿತಿಯ ಚಿನ್ನದ ಪದಕ ಶ್ರೀ ಎ. ಹನುಮಂತ್ಯನವರ "ವಿಶ್ವರೂಪ" ಎಂಬ ಚಿತ್ರಕ್ಕೆ

ಕಲಾಭವನದ ಕೆ. ಕೇಶವಯ್ಯನವರ ಸ್ಮಾರಕ, ರಜತ ಕಲಂತವ ಬಹುಮಾನ ಎಸ್. ಎಸ್. ಕುಕ್ಕೆಯವರು ಬರೆದಿರುವ "ಮೈ ಲಾರ್ಡ್" ಎಂಬ ಪೂರ್ಣಾಕಾರದ ಚಿತ್ರಕ್ಕೆ.

ವೈ. ಶಿವಪ್ಪನವರ ಸ್ಮಾರಕ ಬಹುಮಾನ ಬೆಳ್ಳಿ ಕರಂಡ—ಎಂ. ಎಸ್. ಚಂದ್ರಶೇಖರ್‌ರವರ ಒಳ್ಳೆಯ ಪೆನ್ಸಿಲ್ ಚಿತ್ರಕ್ಕೆ.

ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ, ಬಿ ಟಿ ಮರದಲ್ಲಿ ಮಾಡಿದ ನವಿಲು ಮಾದರಿಯ ಕುರ್ಚಿಗೆ ಬೆಳ್ಳಿಯ ಕರಂಡ

ಸಾರ್ವಜನಿಕ ಸೇವಾ ಪ್ರಶಸ್ತಿ ಪಡೆದವರನ್ನು ಸತ್ಕರಿಸಲು ಸಮಾರಂಭ

ಮೈಸೂರು ಸರ್ಕಾರದ ಸಾರ್ವಜನಿಕ ಸೇವಾ ಪ್ರಶಸ್ತಿಗಳನ್ನು ಪಡೆದಿರುವ ಬೋರಯ್ಯ ಬಸವಯ್ಯ ಕಂಪನಿಯ ಮಾಲೀಕರಾದ ಶ್ರೀ ಎಂ ಬಿ ಬಸವಯ್ಯ, ವರ್ತಕರಾದ ಶ್ರೀ ಟಿ ತಮ್ಮಣ್ಣ ಮತ್ತು ಕಂಟ್ರಾಕ್ಟರ್ ಶ್ರೀ ಡಿ ಜಿ. ತಿರುವೆಂಗಡ ಮುದಲಿಯಾರವರುಗಳಿಗೆ ನಗರದ ಮಹಾಜನರ ಪರವಾಗಿ ಬರುವ ೬ನೇ ತಾರೀಖು ಶನಿವಾರ ಮಧ್ಯಾಹ್ನ ೪ ಗಂಟೆಗೆ ಟೌನ್‌ಹಾಲಿನಲ್ಲಿ ಮಾನ ಪತ್ರಗಳನ್ನು ಸಮರ್ಪಿಸಲಾಗುವುದು. ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸುವರು

ಮೆಡಿಕಲ್ ಕಾಲೇಜು ಅಧ್ಯಾಪಕರಿಗೆ ಹೆಚ್ಚು ವೇತನ

ಭಾರತದ ನಾನಾ ಮೆಡಿಕಲ್ ಕಾಲೇಜುಗಳಲ್ಲಿರುವ ಅಧ್ಯಾಪಕರುಗಳಿಗೆ ಹೆಚ್ಚಿನ ವೇತನದ ದರ್ಜೆಯನ್ನು ಏರ್ಪಡಿಸಲಾಗುವುದೆಂದೂ, ಈಗ ಅಧ್ಯಾಪಕರುಗಳಿಗೆ ಬರುತ್ತಿರುವ ಸಂಬಳಕ್ಕೂ ಹೆಚ್ಚಿನ ವೇತನಕ್ಕೂ ಇರುವ ವ್ಯತ್ಯಾಸವನ್ನು ಕೇಂದ್ರ ಸರ್ಕಾರದವರು ವಹಿಸಿಕೊಳ್ಳುವರೆಂದೂ ಕೇಂದ್ರ ಸರ್ಕಾರದ ವೈದ್ಯ ಇಲಾಖಾ ಡೈರೆಕ್ಟರಾದ ಡಾ|| ಎಲ್ ಡಿ ಖಾತ್ರಿಯವರು ತಿಳಿಸಿರುತ್ತಾರೆ.

○ ಯೂರೋಪಿನ ರಾಷ್ಟ್ರಗಳೆಲ್ಲವೂ ಸೇರಿ ಒಂದು ಸಂಯುಕ್ತ ರಾಷ್ಟ್ರವಾಗಿ ಪರಿಣಮಿಸಬೇಕೆಂದೂ, ಅದು ಸ್ಥಾಪನೆಯಾದರೆ ಅಮೆರಿಕಾ ಮತ್ತು ರಷ್ಯಗಳನಂತರ ಈ ಹೊಸ ರಾಷ್ಟ್ರವು ಮೂರನೇ ಪ್ರಭಾವಶಾಲಿ ರಾಷ್ಟ್ರವಾಗಲಿರುವುದಾಗಿಯೂ ಅಮೆರಿಕದ ವಿದೇಶಾಂಗ ಮಂತ್ರಿ ಡಲೆಸರು ತಿಳಿಸಿರುತ್ತಾರೆ

ತುಂಗಭದ್ರಾ ಹೈಲೆವಲ್ ಕಾಲುವೆಯ ಪ್ರಾರಂಭೋತ್ಸವ

ಮುಖ್ಯ ಮಂತ್ರಿ ಕಡಿದಾಳ್ ಮಂಜಪ್ಪನವರ ಭಾಷಣ

ಸುಮಾರು ನೂರು ವರ್ಷಗಳಿಂದಲೂ ಪದೇ ಪದೇ ಕ್ಷಾಮಪೀಡಿತವಾಗುತ್ತಿರುವ ರಾಯಲಸೀಮಾ ಪ್ರದೇಶವನ್ನು ಫಲವತ್ತಾಗಿ ಮಾಡುವ ತುಂಗಭದ್ರಾ ಯೋಜನೆಯ ಹೈಲೆವಲ್ ಕಾಲುವೆಯ ಪ್ರಾರಂಭೋತ್ಸವವನ್ನು ಮೊನ್ನೆ ಆಂಧ್ರದ ಗವರ್ನರ್ ಚಂದೂಲಾಲ್ ತ್ರಿವೇದಿಯವರು ನೆರವೇರಿಸಿದರು ಮೈಸೂರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಇದನ್ನು ನಿರ್ಮಿಸಲು ೨೦ ಕೋಟಿ ರೂ ವೆಚ್ಚವಾಗಿದೆ

ಮೈಸೂರು ಸಂಸ್ಥಾನದಲ್ಲಿರುವ ಹೊಸಪೇಟೆ, ಸಿರಗುಪ್ಪ ಮತ್ತು ಬಳ್ಳಾರಿ ತಾಲ್ಲೂಕುಗಳು ಮತ್ತು ಆಂಧ್ರದ ಆಲೂರು ಅನಂತಪುರ, ಪತ್ತಿಕೊಂಡ ಮತ್ತು ಕರ್ನೂಲು ತಾಲ್ಲೂಕುಗಳಿಗೆ ಉಪಯುಕ್ತವಾಗುವ ಲೋ ಲೆವಲ್ ಕಾಲುವೆಯು ಈಗಾಗಲೇ ಪೂರೈಸಿದೆ

ಶ್ರೀ ಕಡಿದಾಳ್ ಮಂಜಪ್ಪನವರು ಭಾಷಣ ಮಾಡಿ ಕೋಟ್ಯಾಂತರ ರೂ ವೆಚ್ಚದಿಂದ ನಿರ್ಮಿತವಾಗುತ್ತಿರುವ ತುಂಗಭದ್ರಾ ಯೋಜನೆಯು ಜಾಗ್ರತೆ ಮುಗಿದು, ಅದರ ಪ್ರಯೋಜನವು ಆ ಪ್ರದೇಶದ ಜನರಿಗೆ ಲಭಿಸಬೇಕೆಂದು ತಿಳಿಸಿದರು ತುಂಗಭದ್ರಾ ಬೋರ್ಡಿನಲ್ಲಿರುವ ಮೈಸೂರು ಮತ್ತು ಆಂಧ್ರ ಪ್ರತಿನಿಧಿಗಳು ಸುಗಮವಾಗಿ ಕೆಲಸ ನಡೆಸುತ್ತಿರುವರೆಂದೂ, ಎರಡು ಸಂಸ್ಥಾನ ಸರ್ಕಾರಗಳಿಗೂ ಕಳೆದ ಜೂನಿನಲ್ಲಿ ಆದ ಒಪ್ಪಂದವು ಯಾವ ಸ್ವಾಭಿಪ್ರಾಯಕ್ಕೂ ಎಡೆ ಕೊಟ್ಟಿಲ್ಲವೆಂದೂ ಹೇಳಿದರು

ಹೈಲೆವಲ್ ಕಾಲುವೆಯು ೫,೦೦೦ ಕೋಟಿ ಕ್ಯೂಸೆಕ್ಸ್ ನೀರನ್ನು ಒದಗಿಸಿ ೭ ಲಕ್ಷ ಎಕರೆ ಪ್ರದೇಶವನ್ನು ಫಲವತ್ತಾಗಿ ಮಾಡಲಿದೆ.

ಪೂರ್ವ ಪಾಕಿಸ್ತಾನದಲ್ಲಿ ಜಂಟಿ ಚುನಾವಣೆ ಪದ್ಧತಿ

ಶಾಸಕ ಸಭೆಯಲ್ಲಿ ಗೊಂದಲವಿದ್ದರೂ ಬಹುಮತದ ತೀರ್ಮಾನ

ಪೂರ್ವ ಪಾಕಿಸ್ತಾನದ ಶಾಸಕ ಸಭೆಯು ಕಳೆದ ಸೋಮವಾರ ಭಾರಿ ಬಹುಮತದಿಂದ ಜಂಟಿ ಚುನಾವಣಾ ಪದ್ಧತಿಯನ್ನು ಜಾರಿಗೆ ತರಬೇಕೆಂಬ ನಿರ್ಣಯವನ್ನು ಅಂಗೀಕರಿಸಿತು. ೧೫೯ ಮಂದಿ ಪರವಾಗಿಯೂ, ಒಬ್ಬರು ವಿರೋಧವಾಗಿಯೂ ಮತವಿತ್ತರು ೬೭ ಜನರು ತಟಸ್ಥರಾಗಿದ್ದರು ಸಭೆಯಲ್ಲಿ ಗೊಂದಲ ಮತ್ತು ಅವ್ಯವಸ್ಥೆಗಳಿದ್ದರೂ ಓಟು ನಡೆಯಿತು

ಪ್ಯಾಕಿಂಗ್ ಮಾಡುವ ವಿಧಾನದ ಶಿಕ್ಷಣ

ಪದಾರ್ಥಗಳನ್ನು ರವಾನೆ ಮಾಡುವಾಗ ಅವುಗಳನ್ನು ಭದ್ರವಾಗಿಡಲು ಸಾಧಕವಾಗುವಂತೆ ಪ್ಯಾಕಿಂಗ್ ಮಾಡುವ ಶಿಕ್ಷಣ ಶಾಲೆಯನ್ನು ನಗರದ ವಸ್ತು ಪ್ರದರ್ಶನಾಲಯದಲ್ಲಿ ಖಾಯಂ ಆಗಿ ಏರ್ಪಡಿಸಲಾಗುತ್ತದೆ ಬಡಗಿ, ಕಮ್ಮಾರ ಮುಂತಾದ ಕೆಲಸಗಳಲ್ಲಿ ಹೈಸ್ಕೂಲು ವಿದ್ಯಾರ್ಥಿಗಳಿಗೆ ಅಲ್ಲಿ ತರಬೇತು ಕೊಡಲಾಗುವುದು ಅಲ್ಲದೆ ಇದಕ್ಕಾಗಿಯೇ ಒಂದು ಕೇಂದ್ರವನ್ನು ಭಾರತ ಸರ್ಕಾರದವರು ಏರ್ಪಡಿಸಲಿರುವರು ಜಪಾನಿನಲ್ಲಿ ಪರಿಶ್ರಮ ಪಡೆದುಬಂದಿರುವ ಶ್ರೀ ಎಂ ವೀರಪ್ಪನವರು ಇದರ ಮೇಲ್ವಿಚಾರಣೆಯಲ್ಲಿರುವರು.

ಮುರುಘರಾಜೇಂದ್ರ ಸ್ವಾಮಿಗಳವರ ನಿಧನ

ಚಿತ್ರದುರ್ಗದ ಬೃಹನ್ಮಠದ ಶ್ರೀ ಜಯದೇವ ಮುರುಘರಾಜೇಂದ್ರಸ್ವಾಮಿಗಳು ಮೊನ್ನೆ ಮುಂಜಾನೆ ಶಿವೈಕ್ಯರಾದರು ಅವರಿಗೆ ೮೦ ವರ್ಷ ವಯಸ್ಸಾಗಿತ್ತು. ವೀರಶೈವರ ಮುಖ್ಯ ಮಠಗಳ ಪೈಕಿ ಅವರ ಮಠವೂ ಒಂದು ಅವರ ಅಂತ್ಯಕ್ರಿಯೆಯನ್ನು ದಾವಣಗೆರೆಯಲ್ಲಿ ನೆರವೇರಿಸಲಾಯಿತು

ಜಗದ್ಗುರುಗಳು ಸಂಸ್ಕೃತದಲ್ಲಿ ಮಹಾ ವಿದ್ವಾಂಸರಾಗಿದ್ದರು ೫೦ ವರ್ಷಗಳಿಂದ ಅವರು ಮಠಾಧ್ಯಕ್ಷರಾಗಿ, ಲಿಂಗಾಯತರ ಕೋಮಿನ ಜನರ ವಿದ್ಯಾಭ್ಯಾಸ ಮತ್ತು ಉನ್ನತಿಗೆ ವಿಶೇಷವಾಗಿ ಸಹಾಯ ಮಾಡುತ್ತಿದ್ದರು. ಕರ್ನಾಟಕದಲ್ಲಷ್ಟೆ, ಆಂಧ್ರ ಮತ್ತು ಮಹಾರಾಷ್ಟ್ರಗಳಲ್ಲೂ ಅವರ ಶಿಷ್ಯರು ಇರುವರು. ಅವರು ಅನೇಕ ವಿದ್ಯಾರ್ಥಿನಿಲಯಗಳನ್ನೂ, ಶಾಲೆಗಳನ್ನೂ ಏರ್ಪಡಿಸಿರುವರು. ಸಹಸ್ರಾರು ಬಡ ವಿದ್ಯಾರ್ಥಿಗಳಿಗೆ ಅವರು ಮಹಾ ಪೋಷಕರಾಗಿದ್ದರು ಆ ಪೈಕಿ ಲೋಕಸಭಾ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರೂ ಒಬ್ಬರು.

ಜಗದ್ಗುರುಗಳು ಮೈಸೂರಿನ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿರುವ ಪ್ಯಾಥಲಾಜಿಕಲ್ ಇನ್‌ಸ್ಟಿಟ್ಯೂಟಿಗಾಗಿ ೪೦ ಸಾವಿರ ರೂ ಹಣ ಕೊಟ್ಟಿದ್ದರು

ರಾಷ್ಟ್ರಾಭಿವೃದ್ಧಿ ವಿಸ್ತರಣ ಯೋಜನೆಯ ಪ್ರಾರಂಭೋತ್ಸವ

ಮೈಸೂರು ೪

ರೇಷ್ಮೆ ಮತ್ತು ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಂ ಚನ್ನಬಸಪ್ಪನವರು ಮೊನ್ನೆ ಪಿರಿಯಾಪಟ್ಟಣದಲ್ಲಿ ತಾಲ್ಲೂಕಿನ ರಾಷ್ಟ್ರಾಭಿವೃದ್ಧಿ ವಿಸ್ತರಣ ಯೋಜನೆಯ ಪ್ರಾರಂಭೋತ್ಸವವನ್ನು ನೆರವೇರಿಸಿದರು.

ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್ ಶಂಕರರಾಯರು ಸ್ವಾಗತ ಭಾಷಣ ಮಾಡಿ, ರೈತರಿಗೆ ೭ ಲಕ್ಷ ರೂ ಅಲ್ಪಾವಧಿ ಸಾಲವನ್ನು ಕೊಡಲಾಗುವುದೆಂದು ತಿಳಿಸಿದರು ಶ್ರೀಗಳಾದ ಕೆ ಪಿ. ಕರಿಯಪ್ಪ ಮತ್ತು ಅಲ್ಲಿನ ಪುರಸಭಾಧ್ಯಕ್ಷ ಶ್ರೀ ರಾಜಾರಾಯರು ಭಾಷಣ ಮಾಡಿ ತಾಲ್ಲೂಕಿಗೆ ರಾಷ್ಟ್ರೀಯ ವಿಸ್ತರಣಾ ಯೋಜನೆ ಸೌಲಭ್ಯವನ್ನು ಕಲ್ಪಿಸಿದ ಬಗ್ಗೆ ಸಂತೋಷವನ್ನು ಸೂಚಿಸಿದರು

ಸಚಿವರು ಭಾಷಣ ಮಾಡಿ, ೭ ಲಕ್ಷ ರೂ ವೆಚ್ಚದ ಈ ಯೋಜನೆಯ ಪರಿಣಾಮವಾಗಿ ೩ ವರ್ಷಗಳಲ್ಲಿ ಪಿರಿಯಾಪಟ್ಟಣವು ವಿಶೇಷವಾಗಿ ಅಭಿವೃದ್ಧಿ ಹೊಂದುವುದೆಂದು ಆಶಿಸಿದರು ಅಧಿಕಾರಿಗಳು ಸೇವಾ ಮನೋಭಾವದಿಂದ ಈ ಕೆಲಸವನ್ನು ನಡೆಸಬೇಕಾಗಿರುವುದೆಂದೂ, ಅಧಿಕಾರ ದರ್ಪ ಪಡೆಯುವವರಿಗೆ ಈ ಕ್ಷೇತ್ರದಲ್ಲಿ ಸ್ಥಾನವಿಲ್ಲವೆಂದೂ ನುಡಿದರು

ಮೈಸೂರು ರತ್ನ ಸಿಂಹಾಸನ

ರಾಜಧಾನಿಯ ಶ್ರೀ ಎಂ ಎಲ್ ಸುಬ್ರಹ್ಮಣ್ಯ ರಾಜೇ ಅರಸರವರು ಈ ರೀತಿ ಬರೆದಿರುತ್ತಾರೆ:-

ಆದಿಯಲ್ಲಿ ಪಾಂಡವರೂ, ಕಾಲಕ್ರಮದಲ್ಲಿ ಶ್ರೀ ವಿಕ್ರಮಾದಿತ್ಯ, ಶ್ರೀ ಭೋಜರಾಜಾದಿ ಮಹಾರಾಜರುಗಳೂ ಈ ರತ್ನ ಸಿಂಹಾಸನದಲ್ಲಿ ಅಭಿಷಿಕ್ತರಾಗಿ ರಾಜ್ಯಭಾರ ಮಾಡಿದರೆಂದೂ, ಆನಂತರ ಕಂಪಿಲರಾಯನ ರಾಜಧಾನಿಯ ನೆಲಮಾಳಿಗೆಯಲ್ಲಿ ನಿಕ್ಷಿಪ್ತವಾಗಿರಲು, ಶ್ರೀ ವಿದ್ಯಾರಣ್ಯ ಸ್ವಾಮಿಗಳು ಈ ಸಿಂಹಾಸನದ ಮೇಲೆ ಶ್ರೀ ಹರಿಹರ ಮಹಾರಾಯರಿಗೆ ಶಾಲೀವಾಹನ ಶಕ ೧೨೫೮ ನೇ ಧಾತು ಸಂವತ್ಸರದಲ್ಲಿ ಪಟ್ಟಾಭಿಷೇಕ ಮಾಡಿದರೆಂದೂ, ಆಮೇಲೆ ಕ್ರಮವಾಗಿ ಆಳಿದ ವಿಜಯನಗರದ ಅರಸುಗಳಿಗೆ ಪರಂಪರಾಗತವಾಗಿ ಈ ರತ್ನ ಸಿಂಹಾಸನವು ಶ್ರೀರಂಗಪಟ್ಟಣದ ರಾಜ್ಯಾಧಿಕಾರಿಯಾಗಿದ್ದ ರಾಜವಂಶದ ತಿರುಮಲರಾಯನಿಗೆ ಪ್ರಾಪ್ತವಾಯಿತೆಂದೂ ಐತಿಹ್ಯ ಇದೆ.

ತಿರುಮಲರಾಯನು ತನ್ನ ನಾಲ್ಕು ಜನ ಮಕ್ಕಳಿಗೆ ರಾಜ್ಯವನ್ನು ವಿಭಾಗ ಮಾಡಿಕೊಟ್ಟ ಕಾಲದಲ್ಲಿ, ತನ್ನ ೨ನೆಯ ಮಗ ಶ್ರೀರಂಗರಾಯನಿಗೆ ಈ ಸಿಂಹಾಸನವನ್ನೂ ಮತ್ತು ಶ್ರೀರಂಗಪಟ್ಟಣದ ಸೀಮೆಯನ್ನೂ ಕೊಟ್ಟನು. ಶ್ರೀರಂಗರಾಯನು ತನ್ನ ಅವಸಾನ ಕಾಲದಲ್ಲಿ ಮೈಸೂರು ರಾಜವಡೆಯರಿಗೆ ಈ ರತ್ನ ಸಿಂಹಾಸನವನ್ನೂ ಮತ್ತು ಶ್ರೀರಂಗಪಟ್ಟಣವನ್ನೂ ಶಾಲೀವಾಹನಶಕ ೧೫೩೧ ನೇ ಸೌಮ್ಯ ಸಂವತ್ಸರದ ಮಾಘ ಬಹುಳ ನವಮಿಯಲ್ಲಿ ಕೊಟ್ಟನೆಂದು ತಿಳಿದುಬರುತ್ತದೆ.

ಅಲ್ಲಿಂದ ಮುಂದೆ ಇದುವರೆವಿಗೂ ಈ ಪವಿತ್ರ ಸಿಂಹಾಸನವನ್ನು ಅವರ ವಂಶೀಯರಾದ ಮೈಸೂರು ಮಹಾರಾಜರುಗಳು ಪಟ್ಟಾಭಿಷೇಕ ಮಹೋತ್ಸವ ಕಾಲದಲ್ಲೂ, ನವರಾತ್ರಿಯ ಉತ್ಸವ ಕಾಲದಲ್ಲೂ ಆರೋಹಣ ಮಾಡುತ್ತಿರುವರು. ಮಹಾಸ್ವಾಮಿಯವರು ಈ ಸಿಂಹಾಸನವನ್ನು ಬೆಳ್ಳಿ ಭಂಗಾರದ ತಗಡುಗಳಿಂದಲೂ, ಪುತ್ಥಳಿಗಳಿಂದಲೂ, ನವರತ್ನಗಳಿಂದಲೂ ಅತಿಶಯವಾಗಿ ರಚಿಸಿರುತ್ತಾರೆ. ಈ ರತ್ನ ಸಿಂಹಾಸನವನ್ನು ಅಲಂಕರಿಸುವ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್‌ರವರಿಗೆ ಶ್ರೀ ಚಾಮುಂಡೇಶ್ವರಿ ಅಮ್ಮನವರು ಸನ್ಮಂಗಳವನ್ನು ದಯಪಾಲಿಸಲಿ

ಫುಟ್‌ಬಾಲ್ ಕ್ಲಬ್ಬಿನ ಸಾಮಾನ್ಯ ಸದಸ್ಯರ ಸಭೆ

ರಾಜಧಾನಿಯಲ್ಲಿರುವ ಯಂಗ್ ಮೆನ್ಸ್ ಫುಟ್‌ಬಾಲ್ ಕ್ಲಬ್ಬಿನ ಸರ್ವ ಸದಸ್ಯರ ಸಭೆಯು ಕಳೆದ ೩೦ನೇ ತಾರೀಖು ಪೌರಸಭಾ ಸದಸ್ಯ ಶ್ರೀ ಬಿ. ಎನ್ ಕೆಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಕ್ಲಬ್ಬಿನ ಮೇಲ್ವಿಚಾರಣೆಗಾಗಿ ತಾತ್ಕಾಲಿಕ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಆರ್. ರಾಮಪ್ರಸಾದ್‌ರವರು ಅಧ್ಯಕ್ಷರಾಗಿಯೂ, ಶ್ರೀ ಬಿ. ಶಿವಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಶ್ರೀಕಂಠಯ್ಯನವರು ಕಾರ್ಯದರ್ಶಿ ಮತ್ತು ಎಸ್. ಎ. ಖಾಲಿಕ್‌ರವರು ಉಪ ಕಾರ್ಯದರ್ಶಿಯಾಗಿಯೂ ಶ್ರೀ ಎಸ್ ಅಣ್ಣಾಜಿರಾಯರು ಕ್ಯಾಪ್ಟನ್ನರಾಗಿಯೂ ಆರಿಸಲ್ಪಟ್ಟರು.

ಮುರಾರ್ಜಿ ದೇಸಾಯರಿಗೆ ಬೊಂಬಾಯಿ ಮುಖ್ಯಮಂತ್ರಿಗಿರಿ

ನೂತನ ವ್ಯವಸ್ಥೆಯಲ್ಲೂ ಬೊಂಬಾಯಿಯ ಮುಖ್ಯ ಮಂತ್ರಿಯಾಗಿ ಮುರಾರ್ಜಿ ದೇಸಾಯರು ಮುಂದುವರಿಯುವರೆಂದೂ, ಅವರನ್ನೇ ದ್ವಿಭಾಷಾ ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಸರ್ವಾನುಮತದಿಂದ ಇದೇ ೧೯ನೇ ತಾರೀಖು ಆರಿಸಲಾಗುವುದೆಂದೂ ಗೊತ್ತಾಗಿದೆ. ಬರುವ ಮಹಾ ಚುನಾವಣೆಗಳವರೆಗೆ ಅವರು ಮುಖ್ಯ ಮಂತ್ರಿಯಾಗಿರಬೇಕೆಂದು ಒತ್ತಾಯಪಡಿಸಲಾಗಿ, ಅವರು ಅದಕ್ಕೆ ಸಮ್ಮತಿಸಿರುವರು

ಕನ್ನಡ ಗ್ರಂಥಗಳಿಗೆ ಕೇಂದ್ರ ಸರ್ಕಾರದ ಬಹುಮಾನ

ಜನಪ್ರಿಯ ಸಾಹಿತ್ಯಕ್ಕೆ ಪ್ರೋತ್ಸಾಹ ಕೊಡುವ ಯೋಜನೆ ಅಂಗವಾಗಿ ಭಾರತ ಸರ್ಕಾರದವರು ನಾನಾ ಭಾಷಾ ಗ್ರಂಥಗಳಿಗೆ ಈ ವರ್ಷ ಕೊಟ್ಟಿರುವ ಐನೂರು ರೂ.ಗಳ ೪೦ ಬಹುಮಾನಗಳ ಪೈಕಿ ಕನ್ನಡ ಭಾಷೆಯ–ಜನತಾ ವಿಜ್ಞಾನ, ದೇವರ ನೇಗಿಲು, ಸಕ್ಕರೆ ಮತ್ತು ಶ್ರೀರಾಮಕೃಷ್ಣ ಗ್ರಂಥಗಳಿಗೆ ನಾಲ್ಕು ಬಹುಮಾನಗಳು ಬಂದಿವೆ. ಗ್ರಂಥಗಳನ್ನು ಕ್ರಮವಾಗಿ ಯು. ಆರ್. ಆಚಾರ್ಯ, ಹೆಚ್. ಕೆ. ಕಮಟಗಿ, ಕೆ. ವಿತ್ತಲಶೆಟ್ಟಿ ಮತ್ತು ಸೋಮನಾಥಾನಂದರವರು ರಚಿಸಿರುವರು.

ಮದ್ರಾಸ್ ನೌಕರರಿಗೆ ಮುಂಚಿತವಾಗಿಯೇ ಈ ತಿಂಗಳ ಸಂಬಳ

ನವೆಂಬರ್ ೧ನೇ ತಾರೀಖು ದೀಪಾವಳಿ ಹಬ್ಬವು ಬರುವುದರಿಂದ ಮದ್ರಾಸಿನಲ್ಲಿ ಸರ್ಕಾರಿ ನೌಕರರಿಗೆ ಈ ತಿಂಗಳ ಸಂಬಳವನ್ನು ನವೆಂಬರ್ ೧ಕ್ಕೆ ಮುಂಚೆಯೇ ಬಟವಾಡೆ ಮಾಡಲು ಅಲ್ಲಿನ ಸರ್ಕಾರದವರು ನಿರ್ಧರಿಸಿದ್ದಾರೆ

ಪೆನ್‌ಷನ್‌ದಾರರಿಗೆ ವಿರಾಮ ವೇತನ ಹೆಚ್ಚಿಸಬೇಕು

ಪೆನ್‌ಷನ್‌ದಾರರಿಗೆ ಕೊಡುವ ಗ್ರಾಚುಯಿಟಿ ಹಣವು ಸಾಲದೆಂದೂ, ಈ ಹಣವೆಲ್ಲಾ ಅವರ ಮನೆಯ ಸಮಾರಂಭಗಳಿಗೇ ವೆಚ್ಚವಾಗುವುದೆಂದೂ, ಅನೇಕ ಪೆನ್‌ಷನ್‌ದಾರರು ಸ್ವಂತ ಮನೆ ಮುಂತಾದುವು ಇಲ್ಲದಿದ್ದು, ಬೆಲೆ ಹೆಚ್ಚಿರುವ ದವಸ ಧಾನ್ಯಗಳನ್ನೂ ಕೊಂಡು ತಿನ್ನಬೇಕಾಗಿರುವುದೆಂದೂ, ಅವರುಗಳಿಗೆ ಬೇರೆ ಮಾರ್ಗವೇ ಇಲ್ಲವೆಂದೂ ತಿಳಿಸಿ, ಆದ್ದರಿಂದ ಅವರುಗಳ ವಿರಾಮ ವೇತನವನ್ನು ಸಂಬಳದ ಅರ್ಧದ ಬದಲು ಮುಕ್ಕಾಲಿನಷ್ಟು ಮಾಡುವುದಲ್ಲದೆ, ಇತರ ನೌಕರರಿಗೆ ಕೊಡುತ್ತಿರುವಂತೆಯೇ ತುಟ್ಟಿ ಭತ್ಯವನ್ನೂ ಕೊಡಬೇಕೆಂದೂ ಒಬ್ಬ ಪೆನ್‌ಷನ್‌ದಾರರು ಪ್ರಾರ್ಥಿಸಿದ್ದಾರೆ

ಕ್ರಿಕೆಟ್ ಪಂದ್ಯ

ರಾಜಧಾನಿಯ ಕೃಷ್ಣಮೂರ್ತಿಪುರದ ಕ್ಲಬ್ಬಿನವರಿಗೂ, ಜಯನಗರ ಕ್ಲಬ್ಬಿನವರಿಗೂ ನೆನ್ನೆ ಜಯನಗರದಲ್ಲಿ ಕ್ರಿಕೆಟ್ ಪಂದ್ಯವು ನಡೆದು, ಕೃಷ್ಣಮೂರ್ತಿಪುರದವರು ೧೩ ರನ್ನುಗಳಿಂದ ಜಯಗಳಿಸಿದರು. ಜಯನಗರದವರಿಗೆ ಮೊದಲನೇ ಇನ್ನಿಂಗ್ಸಿನಲ್ಲಿ ೧೧೧ ಮತ್ತು ಎರಡನೆಯದರಲ್ಲಿ ೩೧ ರನ್ನುಗಳೂ, ಕೃಷ್ಣಮೂರ್ತಿಪುರದವರಿಗೆ ೫೦ ಮತ್ತು ೧೦೫ ರನ್ನುಗಳೂ ಬಂದುವು.

ಇಂದೂರಿನಲ್ಲಿ ಕಾಂಗ್ರೆಸ್ ಅಧಿವೇಶನ

ಬರುವ ಜನವರಿಯ ಮೊದಲನೇ ವಾರದಲ್ಲಿ ಕಾಂಗ್ರೆಸ್ಸಿನ ೬೨ನೇ ಅಧಿವೇಶನವು ಸೇರುವುದು. ಬರುವ ವರ್ಷವು ಭಾರತದ ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವದ ವರ್ಷ. ಇಂದೂರು ಕೋಟೆ ಬಳಿ ೩೦೦ ಎಕರೆ ಪ್ರದೇಶದಲ್ಲಿ ಕಾಂಗ್ರೆಸ್ ಅಧಿವೇಶನದ ನಗರವನ್ನು ನಿರ್ಮಿಸಲಾಗುವುದು. ೧॥ ಲಕ್ಷ ಜನರು ಕೂಡಬಹುದಾದ ಬಹಿರಂಗ ಅಧಿವೇಶನದ ಸ್ಥಳವನ್ನೂ, ೧೫ ಸಾವಿರ ಮಂದಿ ಇರಬಹುದಾದ ವಿಷಯ ನಿಯಾಮಕ ಸಮಿತಿ ಮಂಟಪವನ್ನೂ ನಿರ್ಮಿಸಲಾಗುವುದು.

ಮನುಷ್ಯ ದಾನ

ಭೂದಾನ, ಸಂಪತ್ತಿದಾನ, ಶ್ರಮದಾನ ಜೀವನದಾನ ಮತ್ತು ಗ್ರಾಮದಾನಗಳ ಜೊತೆಗೆ ಮನುಷ್ಯದಾನವೆಂಬುದನ್ನೂ ವಿನೋಬಾ ಭಾವೆಯವರು ಸೇರಿಸಿದ್ದಾರೆ. ಅವಿಭಕ್ತ ಕುಟುಂಬದಲ್ಲಿ ಸಮಾಜಸೇವೆಗೆ ಒಬ್ಬನನ್ನು ಒಪ್ಪಿಸುವಂತೆ ಅವರು ಪ್ರಾರ್ಥಿಸಿದ್ದಾರೆ. ಯುವಕರು ಬ್ರಹ್ಮಚರ್ಯವನ್ನು ಪಾಲಿಸಬೇಕೆಂದೂ, ಪ್ರೌಢರು ವಾನಪ್ರಸ್ಥಾಶ್ರಮ ಸ್ವೀಕರಿಸಿ, ಸಮಾಜಸೇವೆ ಮಾಡಬೇಕೆಂದೂ ಅವರು ತಿಳಿಸಿದ್ದಾರೆ. ಇದರಿಂದ ಭಾರತದಲ್ಲಿ ಜನಬಾಹುಳ್ಯದ ಭಾವನೆಯು ಹೋಗುವುದೆಂದು ಅವರು ಹೇಳಿದ್ದಾರೆ.

ಬಾಲಕಿಯರ ಸ್ಪರ್ಧೆಯಲ್ಲಿ ಬಹುಮಾನ ವಿನಿಯೋಗ

ಮಹಾರಾಣಿಯವರ ನ್ಯೂ ಟೈಪ್ ಮಿಡಲ್ ಸ್ಕೂಲಿನ ಆಶ್ರಯದಲ್ಲಿ ಕ್ರೀಡಾ ಮತ್ತು ವಾಚನಾಲಯ ಸಂಬಂಧವಾದ ಸ್ಪರ್ಧೆಗಳು ನಡೆದು ಗೆದ್ದವರಿಗೆ ಸಹಕಾರ ಭವನದ ಸಮಾರಂಭದಲ್ಲಿ ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಜಿ. ಆರ್, ಗುರುರಾಜಾಚಾರ್ಯರು ಕಳೆದ ೨೬ನೇ ತಾರೀಖು ಬಹುಮಾನ ವಿನಿಯೋಗ ಮಾಡಿದರು. ಮಕ್ಕಳ ನೃತ್ಯ, ನಾಟಕ, ಕೋಲಾಟ ಮುಂತಾದ ಕಾರ್ಯಕ್ರಮಗಳು ಏರ್ಪಟ್ಟಿದ್ದುವು

ಆನಂದವಿಹಾರ್ ಟ್ರಾವಲ್ಸ್,
ಬೆಂಗಳೂರು 2.
ಮೈಸೂರಿಂದ ವ್ಯವಸ್ಥೆಗೊಳಿಸಿದ
ದಸರಾ ವಿಶೇಷ ಪ್ರವಾಸಗಳು
9-10-56ರಂದು ಸೋಮನಾಥ ಶಿವನಸಮುದ್ರ
10-10-56ರಂದು ಬಿಳಿಗಿರಿರಂಗನಬೆಟ್ಟ
11-10 56ರಿಂದ ಮೂರು ದಿನ-ಶೃಂಗೇರಿ ಬೇಲೂರು-ಚಿಕ್ಕಮಗಳೂರು ಗುಂಡಿ. ಬಾಳೆಹೊನ್ನೂರು ಇತ್ಯಾದಿ.
ಮೈಸೂರಿನ ಪ್ರವಾಸಿಗರು ಇಂದೇ ಟಿಕೆಟ್ ಪಡೆಯಲು ವಿಚಾರಿಸಿ
ಬದರಿ ಸೋಡಾ ಫ್ಯಾಕ್ಟರಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ರಕ್ಷಣಾ ಸಿಬ್ಬಂದಿ ಮುಷ್ಕರ ಮುಕ್ತಾಯ

ರಕ್ಷಣಾ ಸಂಸ್ಥೆಗಳಲ್ಲಿರುವ ಸಿವಿಲಿಯನ್ ಕೆಲಸಗಾರರು ಮುಷ್ಕರ ನಿಲ್ಲಿಸುವಂತೆ ಅವರ ಸಂಘಗಳ ಜಂಟಿ ಸಭೆಯು ನಿರ್ಧರಿಸಿತು. ಅದರ ಪ್ರಕಾರ ೩೦ ಸಾವಿರ ಕೆಲಸಗಾರರು ಕೆಲಸಕ್ಕೆ ಹಿಂದಿರುಗಿದರು. ಸಿಬ್ಬಂದಿ [illegible] ಈ ಮುಷ್ಕರ ನಡೆಯುತ್ತಿತ್ತು. [illegible] ಸಿಬ್ಬಂದಿಯವರು ಸತ್ಯಾಗ್ರಹವನ್ನು ನಡೆಸುವರು. ಬೆಂಗಳೂರಿನ ಸಿಬ್ಬಂದಿಯವರು ಮುಷ್ಕರ ನಿಲ್ಲಿಸಿದ್ದಾರೆ.

ಪೊಲೀಸು ಠಾಣೆ ಮೇಲೆ ಜನರ ಧಾಳಿ

ಕಡಪಾ ಜಿಲ್ಲೆಯ ಜಮ್ಮಲಮಡುಗುವಿಗೆ ಮೈಲಿ ದೂರದ ಖದರಾಬಾದ್ ಪೊಲೀಸು ಠಾಣೆ ಮೇಲೆ ಕಳೆದ ಭಾನುವಾರ ಜನರ ಗುಂಪೊಂದು ಧಾಳಿ ಮಾಡಿತೆಂದೂ, ಪೊಲೀಸನೊಬ್ಬನು ರ್ಜಿಯಿಂದ ಇರಿದು ತಿವಿಯಲ್ಪಟ್ಟು ಮೃತಪಟ್ಟದಾಗಿಯೂ, ಮತ್ತೊಬ್ಬನಿಗೆ ತೀವ್ರ ಗಾಯಗದುವೆಂದೂ ವರದಿಯಾಗಿದೆ. ಪೊಲೀಸರು ಆ ರಕ್ಷಣೆಗೆ ಗುಂಡು ಹಾರಿಸಲಾಗಿ ಇಬ್ಬರು ಮೃ ಪಟ್ಟರು.

ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷ

ನವದೆಹಲಿಯ ಸುಂದರ್ ನಗರದಲ್ಲಿರು ನ್ಯಾಷನಲ್ ಸ್ಮಾಲ್ ಇಂಡಸ್ಟ್ರೀಸ್ ಕಾರ್ಪೊರೇಷನ್ನಿನವರು ಪ್ರಕಟಿಸಿರುವ [illegible] ನಾಮೆಯ ಪುಸ್ತಕವನ್ನು ಆದರದಿಂದ ಸ್ವೀಕರಿದ್ದೇವೆ. ಅದು ೧೮ ತಿಂಗಳ ವರದಿಯನ್ನು ಒಗೊಂಡಿದೆ. ಭಾರತ ಸರ್ಕಾರದ ಜಂಟಿ ಕಾರ್ಯದರ್ಶಿ ಪಿ. ಗೋವಿಂದನ್ ನಾಯರ್‌ರವರು ಸಂಸ್ಥೆಯ ಅಧ್ಯಕ್ಷರು

ಮೈಸೂರು ಜಮಖಾನಾ ಕುದುರೆ ಜೂಜು

ಇದೇ ತಿಂಗಳು ೧೦, ೧೩, ೧೮ ಮತ್ತು ನೇ ತಾರೀಖು ದಸರಾ ಉತ್ಸವದ ಸಂಬಂಧವಾಗಿ ಜಮಖಾನಾ ಕುದುರೆ ಜೂಜುಗಳು ನಗರದಲ್ಲಿ ನಡೆಯುವುವು. ಜಟಕಾ ಕುದುರೆಗಳಿಗೆ ಬಹುಮಾನವನ್ನು ಹೆಚ್ಚಿಸಲಾಗಿದೆ. ಈ ವರ್ಷ ಹೊಸದಾಗಿ ಬಟ್ಟಲು ಬಹುಮಾನ ಕೊಡುವ ವ್ಯವಸ್ಥೆಯನ್ನೂ ಮಾಡಲಾಗಿದೆ.

ಜಾತಕ-ಪ್ರಶ್ನೆ-ಹಸ್ತ ಸಾಮುದ್ರಿ
(ASTRO-PALMISTRY)
H. S. ವೆಂಕಟರಾವ್,
B. A., B. L., B. E.
1329 ಕೃಷ್ಣಮೂರ್ತಿಪುರಂ, ಮೈಸೂರು
ಕಾಲ : 3 P. M.—5 P. M. (ತಾ|| 18ರ ವ

Edited, Printed and Published b
A. R. Nagarajan at Sadhvi Pre
D. Subbiah Road, Mysore

ಶೋಭಾ ಸ್ಟೋರ್ಸ್ ★ 'D' ಬ್ಲಾಕ್, 22. ವಸ್ತು ಪ್ರದರ್ಶನ
ಮೈಸೂರು
ತಿಳುಬದಂತೆ ಹೆಚ್ಚು ಕಾಲ ಬಾಳಿಕೆ, ಸ್ವಚ್ಛತೆಗೆ ಮತ್ತು ಶ್ರೇಷ್ಠತೆಗೆ ಸರ್ ಬ್ರಾಂಡ್ ಮತ್ತಿತರ ಬ್ರಾಂಡ್ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಕೊಳ್ಳುವ ಮೊದಲು ಇಂದೇ ನಮ್ಮಲ್ಲಿ ವಿಚಾರಿಸಿ [ಬೆಲೆ ಸುಲಭ]

ಚಾಮುಂಡೇಶ್ವರಿ ಟಾಕೀಸ್
5-10-56ರಿಂದ ಕಿಕ್ಕಿರಿದ ಜನಸ್ತೋಮಕ್ಕೆ 2ನೇ ವಾರದಲ್ಲಿ ಪ್ರದರ್ಶಿಸಲ್ಪಡುತ್ತಿದೆ
ಮರ್ಕ್ಯುರಿ ಫಿಲಂಸ್‌ರವರ ತಮಿಳು ಚಿತ್ರ
★ ವಾಳ್ಕೈಲೆ ಒರು ನಾಳ್ ★
(ಬಾಳಿನಲ್ಲಿ ಒಂದು ದಿನ)
ನಟವರ್ಗ: ಶಿವಾಜಿ ಗಣೇಶನ್, ಜಿ. ವರಲಕ್ಷ್ಮಿ, ರಾಜಾಸುಲೋಚನ, ಎ. ಕೆ ರಾಮಸ್ವಾಮಿ
ಮತ್ತು ಫ್ರೆಂಡ್ ರಾಮಸ್ವಾಮಿ — — ಸರೋಜ ಪಿಕ್ಚರ್ಸ್ ರಿಲೀಸ್

THE NATIONAL INSTITUTE OF COMMERCE,
1677, Old Mysore Bank Road, Mysore
FRESH ADMISSIONS for TYPEWRITING and SHORTHAND are now being received during the mornings & evenings. For particulars, apply sharp

ರಾಜಭವನ
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು
ಸೆಟ್ ದೋಸೆ (ಬೆಣ್ಣೆ, ಪಲ್ಯ), ಅಪ್ಪಟ ತುಪ್ಪದಿಂದ ತಯಾರಿಸಿದ "ಕೇಸರಿ ಭಾತ್"
ಘಮಘಮಿಸುವ ಕಾಫಿ, ಟೀ, ವಗೈರೆಯನ್ನು ಒಮ್ಮೆ ಬಂದು ಸವಿಯಿರಿ.

Prof: DEVAL'S CIRCUS
ಪ್ರೊ|| ದೇವಾಲ್ಸ್ ಸರ್ಕಸ್
ಜೀವಣ್ಣರಾಯನ ಕಟ್ಟೆಯಲ್ಲಿ ಹಾಕಿರುವ ಡೇರಾದಲ್ಲಿ
6-10-56ನೇ ಶನಿವಾರ ರಾತ್ರಿ 9-30ಕ್ಕೆ ಅಮೋಘ ಪ್ರಾರಂಭ
7—10—56 ರಿಂದ ಪ್ರತಿ ದಿನ ಮೂರು ಪ್ರದರ್ಶನಗಳು
ಮಧ್ಯಾಹ್ನ 3 ಘಂಟೆಗೆ, ಸಂಜೆ 6-30 ಮತ್ತು ರಾತ್ರಿ 9-30ಕ್ಕೆ

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಅಂದಿನ ಪತ್ರಿಕೆ 3 ಕಾಸು

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಂಪುಟ : ೧೫] SADHVI : FRIDAY 5—10—1956 ಮೈಸೂರು : ಶುಕ್ರವಾರ ೫—೧೦—೧೯೫೬ [ಸಂಚಿಕೆ : ೬೦

೨೧ನೇ ತಾ॥ ನೂತನ ಮೈಸೂರಿನ ನಾಯಕರ ಚುನಾವಣೆ

ಪೌರಸಭೆಯಲ್ಲಿ ಮತ್ತೆ ಸಭಾ ಪರಿತ್ಯಾಗ

ಧ್ಯಕ್ಷರ ರೂಲಿಂಗಿನ ಪುನರ್ವಿಮರ್ಶೆಯ ಪ್ರತಿಧ್ವನಿ

ಮೈಸೂರು ೫

ಮುಂದುವರಿದ ಪೌರಸಭಾ ಅಧಿವೇಶನದಲ್ಲಿ ನ್ನೆ ವಿರೋಧ ಪಕ್ಷದವರು ಮತ್ತೆ ಸಭಾ ಪರಿತ್ಯಾಗ ಮಾಡಿದರು. ಸದಸ್ಯರ ಭಾಷಣ ಕಾಲವನ್ನು ಮಿತಿ ಮಾಡಲು ಅಧ್ಯಕ್ಷರು ತ ಸೂಚನೆ ಸಂಬಂಧವಾಗಿ ಈ ಪ್ರಕರಣವು ನ ಯಿತು.

ಶ್ರೀ ಶ್ರೀಕಂಠಶರ್ಮರವರು ನಿರ್ಣಯವೊಂದನ್ನು ಮಂಡಿಸಿ, ಕಳೆದ ಆಗಸ್ಟ್ ೨೧ ನೇ ತಾ ಕು ಸಭಾಧಿವೇಶನದಲ್ಲಿ ಚರ್ಚೆಗಾಗಿ ಬಂದಿದ್ದ ಹಾರ ಪರಿಸ್ಥಿತಿ ವಿಷಯದ ಬಗ್ಗೆ ಕಾಂಗ್ರೆಸ್ ಕ್ಷದ ನಾಯಕರಾದ ಶ್ರೀ ಎಸ್. ಲಿಂಗಣ್ಣನವರು ಸೂಚಿಸಿದ್ದ ಕ್ರಿಯಾಲೋಪವನ್ನು ಎತ್ತಿ ಹಿಡಿದು ಅಧ್ಯಕ್ಷರು ರೂಲಿಂಗ್ ಕೊಟ್ಟುದು ಅಕ್ರಮವೆಂದು ಸೂಚಿಸಿದರು. ಶ್ರೀ ಎಂ. ಎನ್ ತಿಮ್ಮಯ್ಯನವರು ಅನುಮೋದಿಸಿದರು. ಈ ಬಗ್ಗೆ ಬ ಚರ್ಚೆಯಾಯಿತು.

ಶ್ರೀ ಟಿ ನರಸಿಂಹಯ್ಯಂಗಾರ್ಯರು ಕ್ರಿಯಾಲೋಪವನ್ನೆತ್ತಿ ಅಧ್ಯಕ್ಷರು ಕೊಟ್ಟ ರೂಲಿಂಗು ವೆಂದು ತಿಳಿಸಿದರು. ಶ್ರೀ ವಿ. ನೂರ್‌ಹು ನರು ಶ್ರೀ ನರಸಿಂಹಯ್ಯಂಗಾರ್ಯರ ವಾದ ಸರಿಯಲ್ಲವೆಂದು ಹೇಳಿದರು. ಅಧ್ಯಕ್ಷರು ತ್ರಿ ಸಿಂಹಯ್ಯಂಗಾರ್ಯರ ಕ್ರಿಯಾಲೋಪವನ್ನು ಹಾಕಿದರು.

ಚರ್ಚೆಗೆ ನಿರ್ಣಯದ ಸೂಚಕರು ಉತ್ತರ ಯುತ್ತಿದ್ದಾಗ, ಅವರು ಹೆಚ್ಚು ಕಾಲ ತೆಗೆದುಕೊಂಡರೆಂದು ಕಾಂಗ್ರೆಸ್ ಪಕ್ಷದವರು ಆಕ್ಷೇಪಿಸಿದಾಗ, ತಾವು ಪ್ರತಿ ವಿಷಯಕ್ಕೂ ಉತ್ತರ ಕೊಡುತ್ತಿರುವುದಾಗಿಯೂ, ಹೇಳಿದ ಮಾತನ್ನೇ ಹೇಳುತ್ತಿಲ್ಲವೆಂದೂ ಸೂಚಕರು ತಿಳಿಸಿದರು.

ಆದರೆ ಅಧ್ಯಕ್ಷರು ಹೆಚ್ಚು ಕಾಲ ಮಾತನಾಡ ಅವಕಾಶವೀಯಲಾಗುವುದಿಲ್ಲವೆಂದು ತಿಳಿಸಿದರು. ಹಾಗಾದರೆ ಉತ್ತರವೀಯಲು ಸಾಧ್ಯವಾಗದೆ ತಾವು ಕುಳಿತುಕೊಳ್ಳಬೇಕಾಗುವುದೆಂದು ಶ್ರೀ ಶರ್ಮರವರು ಹೇಳಲು ಅಧ್ಯಕ್ಷರು ಹಾಗೆಯೇ ಮಾಡಬಹುದೆಂದು ತಿಳಿಸಲಾಗಿ, ಅದನ್ನು ಭಟಿಸಿ ವಿರೋಧ ಪಕ್ಷದವರು ಸಭಾತ್ಯಾಗ ಡಿದರು.

ಮಾನಂದವಾಡಿ ರಸ್ತೆಯಲ್ಲಿರುವ ಹಿಪ್ಪಲಿ ನೇ ಕೋಟನ್ನು ನೆರೆಯ ಪ್ರದೇಶದ ಆರೋಗ್ಯ ನ್ನು ನೈರ್ಮಲ್ಯದ ದೃಷ್ಟಿಯಿಂದ ಬೇರೆ ಕಡೆಗೆ ರಾಯಿಸುವಂತೆ ಸರ್ಕಾರವನ್ನು ಕೋರುವ ರ್ಯವನ್ನು ಶ್ರೀ ಶ್ರೀಕಂಠಶರ್ಮರವರು ಮಂ , ಅದು ಅಂಗೀಕೃತವಾಯಿತು.

ಪೂರ್ವ ಬಂಗಾಳದ ಖುಲ್ನಾ ನಗರದ ಬಳಿ ದು ನದಿಯಲ್ಲಿ ದೋಣಿಯೊಂದು ಮಗುಚ ಕ್ಕೊಳಗಾಗಿ ೬೦ ಜನರು ನೀರಿನಲ್ಲಿ ಮುಳುಗಿ ದರೆಂದೂ, ಬಲವಾದ ಸೆಳೆತದ ಅಲೆಗಳಿಂದ ಣಿಯು ಮಗುಚಿತೆಂದೂ ಗೊತ್ತಾಗಿದೆ.

೨೧ ನೇ ತಾ॥ ನೂತನ ಸಂಸ್ಥಾನದ ನಾಯಕರ ಆಯ್ಕೆ

ಬೆಂಗಳೂರು ೫

ನೂತನ ಮೈಸೂರಿನ ವಿಧಾನಸಭಾ ಕಾಂಗ್ರೆಸ್ ಪಕ್ಷದ ನಾಯಕರನ್ನು ಇದೇ ತಿಂಗಳು ೨೧ ನೇ ತಾರೀಕು ಆರಿಸಲಾಗುವುದು. ಮೈಸೂರು ವಿಧಾನಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಕಡಿದಾಳ್ ಮಂಜಪ್ಪನವರು ಅಂದು ಬೆಳಿಗ್ಗೆ ೧೧ ಗಂಟೆಗೆ ರೆಸಿಡೆನ್ಸಿ ಭವನದಲ್ಲಿ ಸಭೆಯನ್ನು ಕರೆದಿದ್ದಾರೆ. ಮೈಸೂರು ಮತ್ತು ಬೊಂಬಾಯಿ, ಮದ್ರಾಸು, ಹೈದರಾಬಾದು ಪ್ರಾಂತ್ಯ ಪ್ರದೇಶಗಳ ವಿಧಾನಸಭಾ ಸದಸ್ಯರು ಇದರಲ್ಲಿ ಭಾಗವಹಿಸುತ್ತಾರೆ.

ಸದಸ್ಯರು ತಮಗೆ ಇಷ್ಟ ಬಂದವರನ್ನು ಆರಿಸಿಕೊಳ್ಳಲು ಸ್ವಾತಂತ್ರ್ಯವಿರುವುದೆಂದು ಹೇಳಲಾಗಿದೆ. ಆದರೆ ಆಯ್ಕೆಯು ಸರ್ವಾನುಮತದಿಂದ ಆಗಬೇಕೆಂದೂ, ಈ ಬಗ್ಗೆ ಪಕ್ಷದಲ್ಲಿ ಒಡಕುಂಟಾಗಬಾರದೆಂದೂ ಹೈಕಮಾಂಡು ಭಾವಿಸಿರುವಂತೆ ತಿಳಿಯಬರುತ್ತದೆ.

ನವೆಂಬರ್ ೧ರ ನಂತರ ಸಂಬಳದ ವಿಮರ್ಶೆ

ಮುಖ್ಯ ಮಂತ್ರಿಯವರ ಹೇಳಿಕೆ

ನೆಲಮಂಗಲದಲ್ಲಿ ಸೇರಿದ್ದ ನಾನ್ ಗೆಜೆಟೆಡ್ ನೌಕರರ ಸಮ್ಮೇಳನದಲ್ಲಿ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡಿ, ನವೆಂಬರ್ ೧ರ ನಂತರ ನಾನ್ ಗೆಜೆಟೆಡ್ ನೌಕರರ ಸಂಬಳದ ದರ್ಜೆಯನ್ನು ವಿಮರ್ಶಿಸಲಾಗುವುದೆಂದೂ, ಮಧ್ಯದಲ್ಲಿ ತಾತ್ಕಾಲಿಕ ಪರಿಹಾರವನ್ನು ಒದಗಿಸಲಾಗುವುದೆಂದೂ ತಿಳಿಸಿರುತ್ತಾರೆ. ಸಮ್ಮೇಳನದಲ್ಲಿ ಸೇವಾ ಷರತ್ತು, ಸಂಬಳದ ವ್ಯತ್ಯಾಸ, ಮನೆ ಬಾಡಿಗೆ, ನೌಕರರ ಮಕ್ಕಳಿಗೆ ಉಚಿತ ವಿದ್ಯಾಭ್ಯಾಸ ಮುಂತಾದ ವಿಷಯಗಳ ಬಗ್ಗೆ ನಿರ್ಣಯಗಳಾದುವು.

ದೇವೀಭಾಗವತ ಸಪ್ತಾಹ

ನಗರದ ಗೀತಾ ಪ್ರಚಾರಿಣೀ ಸಭಾ ಭವನದಲ್ಲಿ ಇಂದಿನಿಂದ ದೇವೀಭಾಗವತ ಸಪ್ತಾಹವನ್ನು ಏರ್ಪಡಿಸಲಾಗಿದೆ. ನಾಳೆ ಸಂಜೆ ೬-೧೫ಕ್ಕೆ ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಇದರ ಆರಂಭೋತ್ಸವವನ್ನು ನೆರವೇರಿಸುವರು. ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಗ್ರಾಸನವನ್ನು ವಹಿಸುವರು.

ನೀರಿನಲ್ಲಿ ಮುಳುಗಿ ಯುವಕನ ಮರಣ

ನಗರದ ಶಾರದಾವಿಲಾಸ ಮಾಧ್ಯಮಿಕ ಪಾಠಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ವೆಂಕಟೇಶಯ್ಯನವರ ಮಗ ವೆಂಕಟಾಚಲ ಎಂಬುವವ ಕೃಷ್ಣರಾಜನಗರಕ್ಕೆ ಹೋಗಿ ಅಲ್ಲಿರುವ ದೇವರಾಜಾ ನಾಲೆಯಲ್ಲಿ ಸ್ನಾನ ಮಾಡುತ್ತಿದ್ದಾಗ ಕಾಲು ಜಾರಿ ಮುಳುಗಿ ಮೃತಪಟ್ಟನೆಂದು ವರದಿಯಾಗಿದೆ. ಅವನಿಗೆ ಸುಮಾರು ೨೪ ವರ್ಷ ವಯಸ್ಸಾಗಿತ್ತು. ಯುವಕನು ಎಲ್. ಸಿ. ಇ. ಪರೀಕ್ಷೆ ಮಾಡಿ, ಅವನಿಗೆ ಉತ್ತರ ದೇಶದಲ್ಲಿ ಈಗತಾನೆ ಉದ್ಯೋಗವು ಲಭ್ಯವಾಗಿತ್ತೆಂದು ಹೇಳಲಾಗಿದೆ.

ನವರಾತ್ರಿ ಉತ್ಸವದ ಪ್ರಾರಂಭ

ಅರಮನೆಯಲ್ಲಿ ಮಹಾರಾಜರ ಸಿಂಹಾಸನಾರೋಹಣ

ಮೈಸೂರು ೫

ಈ ವರ್ಷದ ನವರಾತ್ರಿ ಉತ್ಸವವು ಇಂದು ಬೆಳಿಗ್ಗೆ ಆರಂಭವಾಯಿತು. ಶ್ರೀಮನ್ಮಹಾರಾಜರು ೧೦-೧೫ ಗಂಟೆಗೆ ಸರಿಯಾಗಿ ಸಿಂಹಾಸನಾರೋಹಣ ಮಾಡಿದರು.

ಬೆಳಿಗ್ಗೆ ಅಭ್ಯಂಜನಾದಿಗಳನ್ನು ಮುಗಿಸಿ, ಅವರು ದೇವತಾರ್ಚನೆ ಮಾಡಿದನಂತರ ರಾಜಮನೆತನದ ಗುರುಗಳಾದ ಶ್ರೀ ಬ್ರಹ್ಮತಂತ್ರ ಪರಕಾಲಸ್ವಾಮಿಗಳವರ ಪಾದಪೂಜೆಯನ್ನು ನೆರವೇರಿಸಿದರು. ನಂತರ ಸೆಟ್ಟೆಯನ್ನು ಪ್ರವೇಶಿಸಿ ಸಿಂಹಾಸನಾರೋಹಣ ಮಾಡಿದರು. ಸಂಸ್ಥಾನದ ನಾನಾ ಮಠ ಮತ್ತು ದೇವಸ್ಥಾನಗಳ ಪ್ರಸಾದಗಳನ್ನು ಮಹಾರಾಜರಿಗೆ ಅರ್ಪಿಸಲಾಯಿತು. ಪಟ್ಟದ ಆನೆ ಮತ್ತು ಕುದುರೆಗಳು ವಂದನೆ ಮಾಡಿದುವು. ಎಡಗಡೆ ವೈದಿಕರು, ಪ್ರಾರ್ಥಿಸಿದರು, ಬಲಗಡೆ ಜಿಲ್ಲಾ ದರ್ಬಾರಿ ಮುಂತಾದವರು ಸಾಲಾಗಿ ನಿಂತಿದ್ದರು.

ಸಮಾರಂಭದಲ್ಲಿ ಭಾಗವಹಿಸಿದ್ದ ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್ ವೆಂಕಟರಾಮಯ್ಯನವರು ಮತ್ತು ವಿಧಾನ ಸಭಾಧ್ಯಕ್ಷ ಶ್ರೀ ಹೆಚ್.ಎಸ್. ರುದ್ರಪ್ಪನವರು ಶ್ರೀಮನ್ಮಹಾರಾಜರಿಗೆ ನಜರ್ ಒಪ್ಪಿಸಿದರು. ಸಮಾರಂಭಕ್ಕೆ ಶ್ರೀ ಎ. ಜಿ. ರಾಮಚಂದ್ರರಾವ್ ಮತ್ತು ಶ್ರೀ ಎಚ್. ಎಂ. ಚನ್ನಬಸಪ್ಪನವರು ವಿನಹ ಮಿಕ್ಕ ಎಲ್ಲಾ ಸಚಿವರುಗಳೂ ದಯಮಾಡಿಸಿದ್ದರು. ನಗರ ಸಭಾಧ್ಯಕ್ಷರು, ಕಮಿಷನರರು, ಜಿಲ್ಲಾಧಿಕಾರಿಗಳೇ ಮುಂತಾದ ಅಧಿಕಾರಿಗಳೂ, ಖಾಸಗೀ ಮಹನೀಯರೂ, ಅರಸುಗಳೂ ಬಂದಿದ್ದರು.

ಸಿಂಹಾಸನಾರೋಹಣವನ್ನು ಸೂಚಿಸಲು ೨೧ ಕುಶಾಲ ತೋಪುಗಳನ್ನು ಅರಮನೆ ಬತೇರಿಯಿಂದ ಹಾರಿಸಲಾಯಿತು.

ಕಾಂಗ್ರೆಸ್ಸಿಗೆ ಅಕಾಲಿ ಸಿಕ್ಕರು ಸೇರಲು ಅನುಮತಿ

ರಾಜಕೀಯ ಚಟುವಟಿಕೆಗಳನ್ನು ನಡೆಸಲು ಅಕಾಲಿ ಸಿಕ್ಕರು ಕಾಂಗ್ರೆಸ್ಸನ್ನು ಸೇರುವಂತೆ ಶಿರೋಮಣಿ ಅಕಾಲಿ ದಳವು ತನ್ನ ಸದಸ್ಯರಿಗೆ ಸೂಚಿಸಿದೆ. ಧಾರ್ಮಿಕ ಮತ್ತು ಇತರ ವಿಷಯಗಳ ಅಭಿವೃದ್ಧಿಗಾಗಿ ದಳವು ಇನ್ನುಮುಂದೆ ಕೆಲಸ ಮಾಡುವುದು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ಕ್ಲಾರಿಯೊನೆಟ್. ೭-೧೫ ದೀಕ್ಷಿತರ ಸಮಾವರಣ ಕೀರ್ತನೆ. ೭-೩೦ ನಾಗಸ್ವರ ೮-೧೫ ದೇವರನಾಮ ಮಧ್ಯಾಹ್ನ ೧೨ ಆರ್ ವೇದವಲ್ಲಿ—ಸಂಗೀತ ೧೨-೪೫ ಬಾಲಜಗತ್. ೧-೩೦ ಕೊಳಲು ಮತ್ತು ಕ್ಲಾರಿಯೊನೆಟ್. ಸಂಜೆ ೫-೩೦ ಮತ್ತು ೮ ಜಯಂ ಮತ್ತು ಭಾಗ್ಯಂ—ಸಂಗೀತ. ೬-೩೦ ದೇವರನಾಮ. ೭-೩೦ ಲೋಕ ಜೀವನ ಕನ್ನಡ ಭಾಷಣ. ೮-೩೦ ರೇಡಿಯೊ ನ್ಯೂಸ್ ರೀಲ್, ೮-೪೦ ಪ್ರಸಾರಗೀತೆ ೯-೧೫ ಕಾವ್ಯಧಾರೆ. ೯-೩೦ ರಾಷ್ಟ್ರೀಯ ಸಂಗೀತ.

ಎನ್. ಜಿ. ಓ. ಗಳಿಗೆ ತಾತ್ಕಾಲಿಕ ಭತ್ಯ

ವಿಜಯದಶಮಿ ದಿನ ಘೋಷಣೆ

ಬೆಂಗಳೂರು ೫

ಮೈಸೂರು ಸರ್ಕಾರದ ೪೦ ಸಾವಿರ ಮಂದಿ ನಾನ್ ಗೆಜೆಟೆಡ್ ನೌಕರರಿಗೆ ತಾತ್ಕಾಲಿಕ ಪರಿಹಾರವಾಗಿ ಭತ್ಯವೀಯುವ ಬಗ್ಗೆ ೧-೨ ದಿನಗಳಲ್ಲಿ ನಿರ್ಧಾರವಾಗಲಿರುವುದಾಗಿಯೂ, ಪ್ರಾಯಶಃ ವಿಜಯದಶಮಿಯ ದಿನ ಮುಖ್ಯ ಮಂತ್ರಿಯವರು ತಾತ್ಕಾಲಿಕ ಪರಿಹಾರದ ಪ್ರಮಾಣ ಮುಂತಾದುವನ್ನು ಘೋಷಿಸುವರೆಂದೂ ಗೊತ್ತಾಗಿದೆ. ಇದರಿಂದ ಸಂಸ್ಥಾನದ ಬೊಕ್ಕಸಕ್ಕೆ ತಿಂಗಳಿಗೆ ೭-೮ ಲಕ್ಷ ರೂ ಹೆಚ್ಚು ವೆಚ್ಚ ತಗಲುವುದೆಂದು ಅಂದಾಜಾಗಿದೆ.

ವಸ್ತು ಪ್ರದರ್ಶನದಲ್ಲಿ ಧ್ವಜಾರೋಹಣ

ದಸರಾ ವಸ್ತು ಪ್ರದರ್ಶನದ ಆರಂಭೋತ್ಸವದ ಸಂಬಂಧವಾಗಿ ಈ ಬೆಳಿಗ್ಗೆ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಎಂ. ಎಚ್ ಪಾರ್ಥಸಾರಥಿಯವರು ರಾಷ್ಟ್ರ ಧ್ವಜಾರೋಹಣ ಮಾಡಿದರು.

ನಾಳೆ ಬೆಳಿಗ್ಗೆ ಶ್ರೀಮತಿಗಳಾದ ಕೆ. ಎಲ್. ಲೀಲಾವತಿ, ಶಶಿಕಲಾ, ಕೃಷ್ಣವೇಣಿ ಮತ್ತು ಎಂ. ಎ. ಗಿರಿಜಮ್ಮಣ್ಣಿಯವರ ಸಂಗೀತವು ಏರ್ಪಾಡಾಗಿದೆ. ಸಂಜೆ ೮ ನಾಟಕಗಳೂ ಅಭಿನಯಿಸಲ್ಪಡುವುವು.

ವಿದ್ಯಾ ಗಣಪತಿ ಮಂಗಳಾರತಿ

ರಾಜಧಾನಿಯ ಕ್ಯಾತನಹಳ್ಳಿ ಸಿದ್ದಲಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ ಭಾನುವಾರ ವಿದ್ಯಾ ಗಣಪತಿ ಮಂಗಳಾರತಿಯು ಶ್ರೀ ಎಂ. ಸಿ. ಮಹದೇವಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಹೆಚ್. ದೇವೀರಪ್ಪನವರು ಭಾಷಣ ಮಾಡಿದರು. ಮಾರನೇ ದಿನ ಶ್ರೀ ಎಂ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ನಡೆದು, ಶ್ರೀ ಹೆಚ್. ಗಂಗಾಧರ್‌ರವರು ಭಾಷಣ ಮಾಡಿ, ವಿದ್ಯಾಭ್ಯಾಸದ ಬಗ್ಗೆ ಸರ್ಕಾರದವರು ಹೆಚ್ಚಿನ ಮುತುವರ್ಜಿ ವಹಿಸಬೇಕೆಂದು ತಿಳಿಸಿದರು. ಪಾಠಶಾಲಾ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಶ್ರೀ ಜಿ. ಆರ್. ಶಿವಾನಂದಯ್ಯನವರು ಭಾಷಣ ಮಾಡಿದರು. ಶ್ರೀ ಡಿ. ಕಾಳಪ್ಪನವರಿಂದ ವಂದನಾರ್ಪಣೆಯಾಯಿತು.

ಕನ್ನಡ ಮತ್ತು ಉರ್ದು ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವ

ನಂಜನಗೂಡು ಕಸಬಾ ರೇಂಜಿನ ಕನ್ನಡ ಮತ್ತು ಉರ್ದು ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೪ ಗಂಟೆಗೆ ಅಲ್ಲಿನ ರೆಸಿಡೆನ್ಸಿ ಭವನದಲ್ಲಿ ನೆರವೇರುವುದು. ಸಂಸ್ಥಾನದ ವಿದ್ಯಾಧಿಕಾರಿಗಳಾದ ಶ್ರೀ ಎನ್. ಎಸ್. ಹಿರಣ್ಣಯ್ಯನವರು ಅಧ್ಯಕ್ಷತೆ ವಹಿಸಿ, ಮಹಾರಾಜರ ಮತ್ತು ಭಾರತರತ್ನ [illegible] ಭಾವಚಿತ್ರಗಳನ್ನು ಅನಾವರಣ ಮಾಡುವರು. ಮೈಸೂರು ಯುವರಾಜಾ ಕಾಲೇಜಿನ ಪ್ರಿನ್ಸಿಪಾಲ್ ಡಾ॥ ಎಲ್. ಶಿವಯ್ಯನವರು 'ಈಗಿನ ಪರಮಾಣು ಯುಗದ ಸಮಸ್ಯೆಗಳು' ಎಂಬ ವಿಷಯವಾಗಿ ಭಾಷಣ ಮಾಡುವರು.

ಗಾಂಧಿ ಜಯಂತ್ಯುತ್ಸವ

ಮೈಸೂರು ೫

ರಾಜಧಾನಿಯ ಮೈಸೂರಿನ [illegible] ಯಲ್ಲಿರುವ ಶ್ರೀ ಶಾರದಾ ನಿಕೇತನ ವಿದ್ಯಾರ್ಥಿ ನಿಲಯದ, ಶ್ರೀ ಶಾರದಾ ಯೂನಿಯನ್ನಿನ ಆಶ್ರಯದಲ್ಲಿ ಕಳೆದ ಮಂಗಳವಾರ ಗಾಂಧೀಜಿಯವರ ಜಯಂತ್ಯುತ್ಸವವನ್ನು ಆಚರಿಸಲಾಯಿತು. ಶ್ರೀ ಶೇಷಾದ್ರಿಯವರಿಂದ ಪ್ರಾರ್ಥನೆ ಮತ್ತು ಕಾರ್ಯದರ್ಶಿ ಶ್ರೀ ಎಸ್. ಸುಬ್ಬಾಭಿರಾಮಯ್ಯನವರಿಂದ ಸ್ವಾಗತ ಭಾಷಣಗಳಾದನಂತರ ಶ್ರೀ ಅನಂತಮೂರ್ತಿಯವರು ಗೀತಾ ಪಠಣ ಮಾಡಿದರು. ಭೂದಾನ ಕಾರ್ಯಕರ್ತರಾದ ಶ್ರೀ ಎಸ್. ಎ. ಮಂಜುನಾಥರವರು, ಸರ್ವೋದಯ ತತ್ವಗಳ ಬಗ್ಗೆ ವಿಚಾರಪೂರಿತ ಭಾಷಣ ಮಾಡಿದರು.

ಶ್ರೀ ತಗಡೂರು ರಾಮಚಂದ್ರರಾಯರು ಗಾಂಧೀ ವಿಚಾರ ಗೋಷ್ಠಿಯನ್ನು ಪ್ರಾರಂಭಗೊಳಿಸಿದರು.

ವಿದ್ಯಾರಣ್ಯಪುರದಲ್ಲಿರುವ ಶ್ರೀ ಶಾರದಾ ಶಿಶುವಿಹಾರದಲ್ಲಿ ಮಹಿಳಾ ಸಮಾಜದವರು ಮಹಾತ್ಮಾ ಗಾಂಧಿ ಜಯಂತಿಯನ್ನು ನೆರವೇರಿಸಿದರು. ಕಾರ್ಯದರ್ಶಿನಿ ಶ್ರೀಮತಿ ವೆಂಕಟಲಕ್ಷ್ಮಮ್ಮನವರು ಸಣ್ಣ ಮಕ್ಕಳಿಗೆ [illegible] ತಿಂಡಿ ಮತ್ತು ಬಿಸ್ಕತ್ತುಗಳನ್ನು ಹಂಚಿದರು. ಮಹಿಳಾ [illegible] ಶ್ರೀಮತಿ [illegible] ದಿರಮ್ಮನವರು ಉಚಿತ ಹೊಲಿಗೆ [illegible] ವನ್ನು [illegible] ಕೊಡಲು ತರಗತಿಯನ್ನು [illegible] ಸುತ್ತಾರೆ

ಕೆರೆ ಪೂರ್ತಿ ಪಕ್ಕದ ಜಗಳದಲ್ಲಿ ೧೦ ಜನರಿಗೆ ಗಾಯ

ಕೋಲಾರ [illegible] ದಿ ಹೊಸ ಪ [illegible] ಯಲ್ಲಿ ಕೆರೆ [illegible] ಪ್ಪನ [illegible] ಎರಡು [illegible] ಗಳಿಗ ಕಳೆದ [illegible] ನ ನಡೆದ ಜಗಳವಾಗಿ ದೊಣ್ಣೆ, ಕತ್ತಿ ಮುಂತಾದ ಆಯುಧಗಳನ್ನು ಪ್ರಯೋಗಿಸಲಾಯಿತೆಂದು ವರದಿಯಾಗಿದೆ. [illegible] ಜನರಿಗೆ [illegible] ಪೆಟ್ಟು [illegible] ಆಸ್ಪತ್ರೆಗೆ [illegible] ದ್ದಾರೆ. [illegible] ಗ್ರಾಮವನ್ನು ಕತ್ತರಿಸಬೇಕಾಗುವ ಸ್ಥಿತಿ ಇದೆ

SREE GANESH
TALKIES
Daily 3 Shows
Entering its 2nd week From 6-10-56
THE COURT JESTER
The super comedy hit of the year
now being shown to crowded
houses
If you have not already seen see
it today with kith and kin

ಶೋಭಾ ಸ್ಟೋರ್ಸ್ ★ 'D' ಬ್ಲಾಕ್, 22 ವಸ್ತು ಪ್ರದರ್ಶನ
ಮೈಸೂರು
[illegible] ಸ್ವಚ್ಛತೆಗೆ ಮತ್ತು ಶ್ರೇಷ್ಠತೆಗೆ ಸ[illegible] ಬ್ರಾಂಡ್ ಮತ್ತು [illegible]
ಬ್ರಾಂಡ್ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಕೊಳ್ಳುವ ಮೊದಲು ಇಂದೇ
ನಮ್ಮಲ್ಲಿ ವಿಚಾರಿಸಿ [ಬೆಲೆ ಸುಲಭ]

ಲಕ್ಷ್ಮಿ ★
ಇಂದಿನಿಂದ ಅನೋಘವಾದ 3 ನೇ ವಾರ
ಎಂ. ಜಿ. ರಾಮಚಂದ್ರ, ಪಿ. ಭಾನುಮತಿ, ಕಣ್ಣಾಂಬ,
ಟಿ. ಎಸ್. ಬಾಲಯ್ಯ, ಬಾಲಸರಸ್ವತಿ ಪಾತ್ರವಹಿಸಿರುವ,
ದೇವರ್ ಫಿಲಂಸ್‌ರವರ ತಮಿಳು ಚಿತ್ರ — ತಾಯಿಕ್ಕುಪಿನ್ ತಾರ

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)
6 10—56 ನೇ ಶನಿವಾರದಿಂದ ಅಮೋಘ ಪ್ರಾರಂ
ಎಂ. ಕೆ. ರಾಧಾ, ಕಣ್ಣಾಂಬಾ ನಗೇಶ್ವರರಾವ್
ಮುಂತಾದವರು ಪಾತ್ರ ವಹಿಸಿರುವ ತಮಿಳು ಚಿತ್ರ ★ ಸೌದಾಮಿನಿ
11 10—56 ನೇ ಗುರುವಾರದಿಂದ – ಓ ಹಿ ಲೇ ಶ್ವ ರ – (ಕನ್ನಡ)
ಪಾತ್ರ [illegible] ಜಯಕುಮಾರ್, ಕಲ್ಯಾಣಕುಮಾರ್, ನರಸಿಂಹರಾಜು, ಜಿ. ವಿ. ಅಯ್ಯರ್, ಮಾ



ನಿಮ್ಮ ರೆಕ್ಸೋನಾದ ರ್‍ಯಾಪರ್‌ಗಳನ್ನು ಇಟ್ಟುಕೊಳ್ಳಿರಿ.
ಅವುಗಳಿಂದ ಈಗ ನಿಮಗೆ ಹಣದ
ಉಳಿತಾಯವಾಗುತ್ತದೆ!

3 ಸಾಧಾರಣ ಸೈಜಿನ ರೆಕ್ಸೋನಾದ ರ್‍ಯಾಪರ್‌ಗಳನ್ನು ಅಥವಾ 2 ದೊಡ್ಡ ಸೈಜಿನ ರೆಕ್ಸೋನಾದ ರ್‍ಯಾಪರ್‌ಗಳನ್ನು ಕೊಟ್ಟು ನೀವು ಕೆಳಗೆ ಕಾಣಿಸಿದ

ಜನಪ್ರಿಯ ಸೌಂದರ್ಯ ಸಾಧನಗಳಲ್ಲಿ ಯಾವುದನ್ನೂ ಅದರ ನಿಜವಾದ ಬೆಲೆಗಿಂತ 3 ಆಣೆ ಕಡಿಮೆ ಕ್ರಯದಲ್ಲಿ ಕೊಂಡುಕೊಳ್ಳಬಹುದು.

ಹಿಮಾಲಯ ಬುಕೆ ಟಾಯಿಲೆಟ್ ಪೌಡರ್
(ಪಫ್ ಸಹಿತ ಅಥವಾ ಪಫ್ ಇಲ್ಲದೆ)

ಹಿಮಾಲಯ ಬುಕೆ ಟಾಲ್ಕಮ್ ಪೌಡರ್
(ದೊಡ್ಡ ಸೈಜ್ ಅಥವಾ ಚಿಕ್ಕ ಸೈಜ್)

ಹಿಮಾಲಯ ಬುಕೆ ಸ್ನೋ

ಜಾಸ್ಮಿನ್-ಹೂವಿನ ಸುಗಂಧಯುಕ್ತ ಕೊಬ್ಬರಿ ಎಣ್ಣೆ
(ದೊಡ್ಡ ಅಥವಾ ಮಧ್ಯಮ ಸೈಜ್)

ಗಿಬ್ಸ್ ಟೂತ್ ಪೌಡರ್

ಈ ದಿನವೇ ರೆಕ್ಸೋನಾ ಸೋಪನ್ನು ಕೊಂಡುಕೊಳ್ಳಿರಿ, ರ್‍ಯಾಪರ್‌ಗಳನ್ನು ಮೈಸೂರಿನಲ್ಲಿ ನಿಮಗೆ ವ್ಯಾಪಾರಿ ಯಾರಿಗಾದರೂ ಕೊಟ್ಟು ಈ ರಿಯಾಯಿತಿ ಸೌಲಭ್ಯವನ್ನು ಪಡೆಯಿರಿ.

ಕೊನೆಯ ತಾರೀಖು: ನವೆಂಬರ್ 15, 1956.

ಗಡಿಯಾರಗಳು ಮತ್ತು ಕನ್ನಡಕಗಳು

[illegible]
ಗಡಿಯಾರಗಳು ಮತ್ತು ಕನ್ನಡಕಗಳು
[illegible]
ಕೆ. ಎಸ್. ಲಕ್ಷ್ಮೀನಾರಾಯಣಯ್ಯರ್
[illegible]
[illegible] ([illegible])

ಹಾಸಿಗೆ - ದಿಂಬು

[illegible]
ಬಾಬುಸಾಬ್ ಕಂಪನಿ,
[illegible] ಮೈಸೂರು

SRI GAYATHRI
TALKIES
From today for 2 days only
Rebellion of the Hanged
(For Adults only)
Starring: Pedro Armendariz
— Morning Shows
On Saturday & Sunday
R K O's
ANNAPOORNA

ಒಲಂಪಿಯಾ

[illegible] ನೇ ವಾರ
ಸಿ. ಐ. ಡಿ.
[illegible]
[illegible]

Edited, [illegible] Published by
[illegible] Press
D. Subbiah R[illegible]

ನ್ಯೂ ಚಾಮುಂಡೇಶ್ವರಿ ಕೆಫೆ

✱ ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
[illegible] ರಸ್ತೆ, ಮೈಸೂರು
ನೂತನವಾಗಿ [illegible] ಫಲಾಹಾರ ಮಂದಿರಕ್ಕೆ ಮೈಸೂರು ಮತ್ತು ಬೊಂಬಾಯಿ ರೀತಿಯ ರುಚಿರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ [illegible] ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ · ಸಿ. ಬಿ. ಎಂ. ಚಂದ್ರಯ್ಯ, ಪ್ರೊಪ್ರೈಟರ್ [ಫೋನ್ ನಂ 5'1

ರಾಜಕಮಲ್ ಟಾಕೀಸ್ ☆

5-10-56ರಿಂದ ಚಿಕ್ಕರಿದ ಜನಸ್ತೋಮಕ್ಕೆ ಪ್ರದರ್ಶಿತವಾಗುತ್ತಿರುವ 2ನೇವಾರ
ಪ್ರತಿದಿನ ಮೂರು ಪ್ರದರ್ಶನಗಳು
ಚಲನಚಿತ್ರ ಸ್ವರ್ಗದ ಪ್ರಖ್ಯಾತ ನಟನಟಿಯರು
[illegible] ರುವ, [illegible] ಪ್ರೇಮ
[illegible] ತಮಿಳು ಚಿತ್ರ
★ ರಂಭಾ ಪ್ರೇಮ ☆
ಪಾತ್ರ ಪಿ. ಭಾನುಮತಿ, ಎಂ. ಎಸ್. ರಾಜಂ, ಇ. ವಿ. ಸರೋಜ,
ತಂಗವೇಲು, ನಂಬಿಯಾರ್, ಟಿ. ಎಸ್. ಬಾಲಯ್ಯ
ಮುಂತಾದವರು

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಒಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜಂಟರುಗಳು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1, [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು –2

ಸಂಪುಟ : ೧೫] SADHVI : SATURDAY 6—10—1956 ಮೈಸೂರು : ಶನಿವಾರ ೬—೧೦—೧೯೫೬ [ಸಂಚಿಕೆ : ೬೩

ಸಂಸ್ಥಾನದಲ್ಲಿ ರೇಷ್ಮೆ ಗೂಡಿನ ಕನಿಷ್ಠ ಬೆಲೆಯ ನಿಗದಿ

ರೇಷ್ಮೆ ಗೂಡುಗಳ ಕನಿಷ್ಠ ಬೆಲೆ ನಿಗದಿ ಬಗ್ಗೆ ಪರಿಶೀಲನೆ

ಸರ್ಕಾರಿ ರೇಷ್ಮೆ ಫಿಲೇಚರಿನ ಪ್ರಾರಂಭದಲ್ಲಿ ಗೃಹ ಸಚಿವರ ಭಾಷಣ

ಟಿ ನರಸೀಪುರ ೬.

ಇಲ್ಲಿನ ರೇಷ್ಮೆ ಫಿಲೇಚರನ್ನು ಸರ್ಕಾರದವರು ಹಿಸಿಕೊಂಡಸಂಬಂಧದಲ್ಲಿ ಅದನ್ನು ಸರ್ಕಾರಿ ದ್ಯಮವಾಗಿ ನಡೆಸುವ ಕಾರ್ಯಕ್ರಮದ ಆರಂ ೋತ್ಸವವನ್ನು ನೆನ್ನೆ ಗೃಹ ಮಂತ್ರಿ ಶ್ರೀ ದ್ದವೀರಪ್ಪನವರುನೆರವೇರಿಸಿದರು ಅವರು ಭಾ ಣ ಮಾಡಿ, ವ್ಯಾಪಾರ ದೃಷ್ಟಿಯಿಂದ ರೇಷ್ಮೆ ಲೇಚರನ್ನು ಸರ್ಕಾರದವರು ತೆಗೆದುಕೊಳ್ಳಲಿ ವೆಂದೂ, ಸಾರ್ವಜನಿಕರಿಂದ ನಡೆಸಲ್ಪಟ್ಟ ಷ್ಯದಲ್ಲಿ ಮುಚ್ಚಿಹೋಗಿ ಕೆಲಸಗಾರರು ಮತ್ತು ತರಿಗೆ ಆಗುವ ತೊಂದರೆ ದೃಷ್ಟಿಯಿಂದಲೂ ಸ್ಥಾನದ ಪ್ರಮುಖ ಉದ್ಯಮವಾದ ಈ ಕೈ ರಿಕೆಯು ಹಾಳಾಗಬಾರದೆಂಬುದಕ್ಕಾಗಿಯೂ ರ್ಕಾರದವರು ಆ ಜವಾಬ್ದಾರಿಯನ್ನು ತಮ್ಮ ಮೇಲೆ ತೆಗೆದುಕೊಂಡರೆಂದೂ ಹೇಳಿದರು ಅಲ್ಲದೆ ಭ ಸಂಪಾದನೆಯ ಉದ್ದೇಶವು ಸರ್ಕಾರಕ್ಕಿಲ್ಲ ದೂ ಸೂಚಿಸಿದರು

ಕೇಂದ್ರ ರೇಷ್ಮೆ ಸಮಿತಿಯವರು ಈ ಉದ್ಯಕ್ಕೆ ಹೆಚ್ಚಿನ ಸಹಾಯ ನೀಡುವರೆಂದೂ, ರೇ ಗೂಡುಗಳ ಬೆಳೆಗಾರರಿಗೆ ತಮ್ಮ ಉದ್ಯಮ ತೊಂದರೆಯಿಂದ ಗೂಡುಗಳ ಬೆಲೆ ಇಳಿಯು ಲು ಅವುಗಳಿಗೆ ಕನಿಷ್ಠ ಬೆಲೆಯನ್ನು ಗೊತ್ತು ಸಿ, ಅದಕ್ಕಿಂತ ಕಡಿಮೆಯಾದರೆ ಸರ್ಕಾರದ ೇ ಗೂಡುಗಳನ್ನು ಕೊಳ್ಳುವ ವಿಷಯವು ಪರಿ ಲನೆಯಲ್ಲಿರುವುದೆಂದೂ ಅವರು ಹೇಳಿದರು ಮಾರಕರು ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಿ ಮ್ಮ ಹಿತವನ್ನು ಸಾಧಿಸಬೇಕೆಂದು ನುಡಿದರು.

ಪ್ರಾರಂಭದಲ್ಲಿ ಶ್ರೀಮತಿ ಲೀಲಾವತಿಯವ ದ ಪ್ರಾರ್ಥನೆಯಾದನಂತರ ಸರ್ಕಾರಿ ರೇಷ್ಮೆ ೇಚರಿನ ಅಧಿಕಾರ ವರ್ಗದವರ ಪರವಾಗಿ ಟಿ ಕೆ ಕೃಷ್ಣಮೂರ್ತಿಯವರು ಬಿನ್ನವತ್ತಳೆ ನ್ನು ಅರ್ಪಿಸಿದರು ಶಾಸನಸಭಾ ಸದಸ್ಯರಾ ಎಸ್ ಶ್ರೀನಿವಾಸಯ್ಯಂಗಾರ್ ಮತ್ತು ವ್ಯವಸಾಯಗಾರರ ಪರವಾಗಿ ಶ್ರೀ ನಂ ಡಯ್ಯನವರು ಭಾಷಣ ಮಾಡಿ ಸಚಿವರಿಗೆ ಜ್ಞತೆಯನ್ನು ಸೂಚಿಸಿದರು

ೊಂಬಾಯಿಯಲ್ಲಿ ಪ್ರದರ್ಶ ಕ್ಕಾಗಿ ೪೨೦ ಬಂಧನಗಳು

ೊಂಬಾಯಿಯ ಶಾಸನ ಸಭಾ ಭವನಕ್ಕೆ ನ್ನು ಮೆರವಣಿಗೆ ತೆಗೆದುಕೊಂಡುಹೋದ ಸಂ ಕ್ತ ಮಹಾರಾಷ್ಟ್ರ ಸಮಿತಿಯ ೪೨೦ ಮಂದಿ ಂಸೇವಕರನ್ನು ಬಂಧಿಸಲಾಯಿತು ಅ ೧೧೧ ಮಂದಿ ಸ್ತ್ರೀಯರೂ ಇರುವರು ದ್ವಿ ಾ ಬೊಂಬಾಯಿ ಬಗ್ಗೆ ಪ್ರತಿಭಟಿಸಲು ಪ್ರ ನ ನಡೆಸಲು ಅವರುಗಳು ಹೊರಟಿದ್ದರು

ವೆಂಬರ್ ೧ರಿಂದ ಆರಂಭವಾಗುವ ನೂತನ ಜ್ಯಗಳ ಪೈಕಿ ಏಳರಲ್ಲಿ ಈ ತಿಂಗಳು [illegible] ಹೊಸ ಮಂತ್ರಿಮಂಡಲಗಳು ಏರ್ಪಡುವು ಗೊತ್ತಾಗಿದೆ. ಕೇರಳದಲ್ಲಿ ರಾಷ್ಟ್ರಾಧ್ಯಕ್ಷ ಳ್ವಿಕೆಯು ಮುಂದುವರಿಯುವುದು

ದಸರಾ ವಸ್ತು ಪ್ರದರ್ಶನದ ಆರಂಭೋತ್ಸವ

ಕೇಂದ್ರ ಗೃಹ ಮಂತ್ರಿ ಬಿ ಎನ್. ದಾತಾರರ ಭಾಷಣ

ಮೈಸೂರು ೬

ಕೇಂದ್ರ ಗೃಹ ಶಾಖಾ ಮಂತ್ರಿ ಬಿ ಎನ್ ದಾತಾರ್‌ರವರು ನೆನ್ನೆ ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮತಿ ಗಿರಿಯಮ್ಮನವರಿಂದ ಪ್ರಾರ್ಥನೆ ನಡೆದನಂತರ ವಿ॥ ಎಸ್ [illegible] ಮತ್ತು ಪಾರ್ಟಿಯವರಿಂದ ಸಂಗೀತವು [illegible]ತು ನಂತರ ವಸ್ತು ಪ್ರದರ್ಶನ ಸಮಿತಿ ಅಧ್ಯಕ್ಷರಾದ, [illegible] ಮಂತ್ರಿ ಶ್ರೀ [illegible]ನವರು ಸ್ವಾಗತ ಭಾಷಣ ಮಾಡಿ ಪ್ರದರ್ಶನದ [illegible]ಯನ್ನು ವಿವರಿಸಿದರು

ಶ್ರೀ ಬಿ. ಎನ್ ದಾತಾರ್‌ರವರು ತಮ್ಮ ಭಾಷಣದಲ್ಲಿ ದ್ವಿತೀಯ ಪಂಚ ವಾರ್ಷಿಕ ಯೋಜನೆಗೆ ಮಹಾಜನರು ವಿಶೇಷ ಬೆಂಬಲವನ್ನೀಯಬೇಕೆಂದು ಕೋರಿದರು ಮೈಸೂರು ಸಂಸ್ಥಾನವು ಸಕಲ ವಿಧದಲ್ಲೂ ಪ್ರಗತಿ ಹೊಂದುತ್ತಿರುವುದನ್ನು ಅವರು ಪ್ರಶಂಸಿಸಿ ಅದರ ಅಭಿವೃದ್ಧಿಗೆ ಇಲ್ಲಿರುವ ಜನತಂತ್ರ ಆಡಳಿತವೇ ಕಾರಣವೆಂದೂ, ಮೈಸೂರು ಇತರ ಸಂಸ್ಥಾನಗಳಿಗೆ ಮಾದರಿಯಾಗಿರುವುದೆಂದೂ ತಿಳಿಸಿದರು.

ಎಲ್ಲ ಕನ್ನಡ ಪ್ರದೇಶಗಳು ಐಕ್ಯವಾಗಲಿರುವ ಈ ಸಂದರ್ಭದಲ್ಲಿ ಮೈಸೂರಿನವರ ಜವಾಬ್ದಾರಿಯು ಹೆಚ್ಚಾಗಿದೆಯೆಂದೂ, ನೂತನ ಸಂಸ್ಥಾನಕ್ಕೆ ಉತ್ತಮ ರೀತಿಯ ಆಡಳಿತವನ್ನು ತಂದು ಕೊಡಲು ಪ್ರತಿಯೊಬ್ಬರೂ ಶ್ರಮಿಸಬೇಕೆಂದೂ ಅವರು ಹೇಳಿದರು. ಮೈಸೂರು ರಾಜಮನೆತನದವರ ಉತ್ತಮ ಆಳ್ವಿಕೆಯನ್ನು ಅವರು ಪ್ರಶಂಸಿಸಿದರು

ಪ್ರಜಾ ರಾಜ್ಯದ ಸ್ಥಾಪನೆಯಾದನಂತರ ಪ್ರಜೆಗಳ ಸಹಕಾರದಿಂದ ಸಮಾಜವಾದಿ ಸಮಾಜವನ್ನು ಸೃಷ್ಟಿಸಬೇಕಾಗಿರುವುದೆಂದೂ, ಪೊಲೀಸು ವರ್ಗದ ಆಡಳಿತದ ಬದಲು ಈಗ ಸಮಾಜ ಕಲ್ಯಾಣದ ಸಮಾಜವನ್ನು ಏರ್ಪಡಿಸಬೇಕಾಗಿರುವುದೆಂದೂ ಅವರು ಹೇಳಿ, ಈ ವಿಧಾನದಲ್ಲಿ ಇಡೀ ನಾಡಿನ ಹಿತಕ್ಕೆ ಇತರ ಸಣ್ಣ ಸಣ್ಣ ಹಿತಗಳನ್ನು ಬಿಟ್ಟುಕೊಡುವುದು ಅಗತ್ಯವೆಂದು ಸೂಚಿಸಿದರು. ಆ ಮಾರ್ಗದಲ್ಲಿ ಮುಂದುವರಿಯಲು ಕೈಗೊಂಡಿರುವ ಅಭಿವೃದ್ಧಿ ಕ್ರಮದಲ್ಲಿ ಸಾರ್ವಜನಿಕ ಮತ್ತು ಖಾಸಗೀ ಕ್ಷೇತ್ರಗಳ ಜವಾಬ್ದಾರಿಯು ಹೆಚ್ಚಾಗಿದೆಯೆಂದೂ ಅವರು ನುಡಿದು, ವ್ಯವಸಾಯದ ಅಭಿವೃದ್ಧಿಗೆ ಮತ್ತು ರೈತರ ಅನುಕೂಲಕ್ಕೆ ಹೆಚ್ಚು ಗಮನವೀಯಬೇಕಾದುದು ಅಗತ್ಯವೆಂದು ಸೂಚಿಸಿದರು ವಸ್ತು ಪ್ರದರ್ಶನಗಳು ದೇಶದ ಪ್ರಗತಿಯನ್ನು ಸೂಚಿಸುವುವೆಂದೂ, ಅವುಗಳಿಗೆ ವಿಶೇಷವಾಗಿ ರೈತರು ಬರುವಂತಾಗಬೇಕೆಂದೂ ನುಡಿದರು.

ಮುಖ್ಯ ಮಂತ್ರಿಯವರು ಭಾಷಣ ಮಾಡಿ, ಜನರು ಪ್ರದರ್ಶನಗಳನ್ನು ನೋಡುವ ಮನೋಭಾವವನ್ನು ಹೆಚ್ಚು ಹೆಚ್ಚಾಗಿ ಬೆಳೆಸಿಕೊಳ್ಳಬೇಕೆಂದು ಸೂಚಿಸಿದರು ನೂತನ ಮೈಸೂರನ್ನು ಅಭಿವೃದ್ಧಿಗೊಳಿಸುವುದರಲ್ಲಿ ಮಹಾಜನರು ಮತ್ತು ಅಧಿಕಾರಿಗಳ ಬೆಂಬಲವು ದೊರೆಯುವುದೆಂದು ಅವರು ಭರವಸೆಯಿತ್ತರು

ವಸ್ತು ಪ್ರದರ್ಶನದ ಸಮಿತಿಯ ಪರವಾಗಿ ಶ್ರೀ ಎಂ ಸಿ ಮಹದೇವಸ್ವಾಮಿಯವರು ಸಚಿವರುಗಳಿಗೆ ಹೂಮಾಲಿಕೆಗಳನ್ನು ಅರ್ಪಿಸಿದರು ಪ್ರದರ್ಶನ ಸಮಿತಿ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ವಂದನಾರ್ಪಣೆ ಮಾಡಿದರು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ವಸ್ತು ಪ್ರದರ್ಶನದ ನಾಳೆ ಕಾರ್ಯಕ್ರಮ

ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಿಗ್ಗೆ ಶ್ರೀಮತಿ ಕೆ ಛತ್ರ ಮತ್ತು ಟಿ ಇಂದಿರವರಿಂದ ದೇವರನಾಮಗಳೂ, ಸಂಜೆ ಶ್ರೀ ಆರ್ ಆರ್. ಎಸ್ ಶರ್ಮರವರಿಂದ ಕನ್ನಡ ಗೀತೆಗಳು, ಶ್ರೀ ಬಿ ಎಂ ರಾಮಸ್ವಾಮಿ ಮತ್ತು ವೃಂದದವರಿಂದ ಕತ್ತಿವರಸೆ, ಶ್ರೀ ಸಿ ಕೆ. ಸುಂದರರಾಜ್ ಮತ್ತು ವೃಂದದವರಿಂದ ಸಂಗೀತ ಮತ್ತು ಕಲಹ ಕುತೂಹಲ, ಆಸಲು-ಬತ್ತಿ, ಮುದುಕನ ಮದುವೆ, ಮತ್ತು ಮೋಸದ ಮದುವೆ ಎಂಬ ನಾಟಕಗಳೂ ಏರ್ಪಾಡಾಗಿವೆ

ಮೈಸೂರು ವಿಧಾನ ಪರಿಷತ್ತಿಗೆ ಹೈದರಾಬಾದ್ ಕನ್ನಡಿಗರ ಅರ್ಜಿ

ನೂತನ ಮೈಸೂರು ಸಂಸ್ಥಾನದ ವಿಧಾನ ಪರಿಷತ್ತಿಗೆ ಹೈದರಾಬಾದು ಕನ್ನಡ ಪ್ರದೇಶಗಳಿಂದ ಆರಿಸಬೇಕಾದ ೩ ಸ್ಥಾನಗಳಿಗೆ ಐವರು ನಾಮಪತ್ರಗಳನ್ನು ಸಲ್ಲಿಸಿದ್ದರು ಆ ಪೈಕಿ ಅಣ್ಣಾರಾವ್ ವೀರಭದ್ರಪ್ಪ ಎಂಬ ಸ್ವತಂತ್ರರ ನಾಮಪತ್ರವನ್ನು ಅವರ [illegible] ಸರಿಯಾಗಿ ಇದ್ದಿಲ್ಲವೆಂಬ ಕಾರಣವನ್ನೊಡ್ಡಿ ತಿರಸ್ಕರಿಸಿ, ಉಳಿದ ನಾಲ್ಕನ್ನು ಅಂಗೀಕರಿಸಲಾಗಿದೆ ಈ ದಿನ ವಾಪಸಾತಿಗೆ ಕಡೆಯ ದಿನ

ವಿಮಾನದ ಪೆಟ್ಟಿಗೆಯಲ್ಲಿ ೨೫,೦೦೦ ರೂ. ವಜ್ರದ ಸರ

[illegible] ಎಂಬ[illegible] ಕೊಂಡವ[illegible] ಪೆಟ್ಟಿಗೆಯಲ್ಲಿ ೨೫ ಸಾವಿರ ರೂ [illegible] ವಜ್ರ ಖಚಿತವಾದ ಸರವು ಸಿಕ್ಕಿತು

ಹಣ್ಣುಗಳ ರಸದ ಪುಡಿ ತಯಾರಿಕೆ

ನಗರದಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದವರು ಇದೇ ಮೊದಲಿಗೆ ಮಾವು, ಕಿತ್ತಳೆ, ಪರಂಗಿ ಹಣ್ಣುಗಳ ರಸದ ಪುಡಿಯನ್ನು ತಯಾರಿಸುವ ವಿಧಾನವನ್ನು ಕಂಡು ಹಿಡಿದಿರುತ್ತಾರೆ ಅವುಗಳಲ್ಲಿ ಪೌಷ್ಟಿಕಾಂಶಗಳು ವಿಶೇಷವಾಗಿವೆ ವಾಣಿಜ್ಯ ರೀತಿಯಲ್ಲಿ ಈ ಹೊಸ ವಿಧಾನವನ್ನು ನಡೆಸಲಿಚ್ಛಿಸುವವರು ದೆಹಲಿಯ ಲಿಟ್ಟನ್ ರಸ್ತೆ ಮಂಡಿ ಭವನದಲ್ಲಿರುವ ಭಾರತದ ರಾಷ್ಟ್ರೀಯ ಸಂಶೋಧನಾಭಿವೃದ್ಧಿ ಕಾರ್ಪೊರೇಷನ್ನಿನ ಕಾರ್ಯದರ್ಶಿಯವರೊಡನೆ ಪತ್ರ ವ್ಯವಹಾರ ನಡೆಸಬಹುದು.

ಕರಾಚಿ ಪೌರಸಭೆಗೆ ಇಬ್ಬರು ಮೇಯರುಗಳು!

ಪಾಕಿಸ್ತಾನದ ರಾಜಧಾನಿಯಾದ ಕರಾಚಿಯ ಪೌರಸಭೆಯ ಮೇಯರ್ ಸ್ಥಾನದ ಬಗ್ಗೆ ಮೇಯರ್ ಸಿದ್ದಿಕ್ ವಹಾಬ್‌ರವರಿಗೂ, ಉಪ ಮೇಯರ್ ಜಮೀಲ್ ಮಹಮುದ್‌ರವರಿಗೂ ವ್ಯಾಜ್ಯ ನಡೆಯುತ್ತಿದೆ ಕಳೆದ ಗುರುವಾರ ಟೋಕಿಯೊವಿನಲ್ಲಿ ಮೇಯರುಗಳ ಸಮ್ಮೇಳನದಲ್ಲಿ ವಹಾಬ್‌ರವರು ಭಾಗವಹಿಸುತ್ತಿದ್ದಾಗ ವೈಯಕ್ತಿಕ ಕಾರಣಗಳಿಗಾಗಿ ಅವರ ಮೇಲೆ ಕರಾಚಿ ಪೌರಸಭೆಯು ಅವಿಶ್ವಾಸ ನಿರ್ಣಯವನ್ನು ಅಂಗೀಕರಿಸಿ, ಉಪ ಮೇಯರರನ್ನು ಆ ಸ್ಥಾನಕ್ಕೆ ಚುನಾಯಿಸಲಾಯಿತು. ಅಂದು ರಾತ್ರಿ ವಹಾಬ್‌ರವರಿಗೆ "ತಮ್ಮ ತಂದೆ ಸತ್ತರೆಂದು" ಕೇಬಲ್ಲು ಮೂಲಕ ಸುದ್ದಿಯನ್ನು ತಿಳಿಸಲಾಗಿ ಅವರು ವಿಮಾನದಲ್ಲಿ ಹಿಂದಿರುಗಿದರು. ಪೌರಸಭಾ ಅಧಿವೇಶನಕ್ಕೆ ಅವರು ಹೋದಾಗ ನಾಲ್ವರು ಸದಸ್ಯರು ಅವರು ಅಧ್ಯಕ್ಷರಲ್ಲವೆಂದು ಹೇಳಿ ಸಭಾತ್ಯಾಗ ಮಾಡಿದರು ಸಭೆಯು ಗೊಂದಲದಲ್ಲಿ ಪರ್ಯವಸಾನವಾಯಿತು. ಅವರ ಮೋಟಾರಿನ ಮೇಲಿದ್ದ ಧ್ವಜವನ್ನು ಕಿತ್ತುಕೊಂಡು ಉಪ ಮೇಯರರ ಮೋಟಾರಿನ ಮೇಲೆ ಹಾಕಲಾಯಿತು. ಪೌರಸಭಾ ಸದಸ್ಯರು ಮಧ್ಯೆ ಪ್ರವೇಶಿಸಲಾಗಿ ಹೆಚ್ಚು ಗಲಾಟೆಯಾಗಲಿಲ್ಲ ಈ ವಿಚಾರವು ಪ್ರಾಂತ ಸರ್ಕಾರದ ಪರಿಶೀಲನೆಯಲ್ಲಿದೆ

ಅಣು ಬಾಂಬು ಪಟಾಕಿಗೆ ನಿಷೇಧ

೧॥ ಇಂಚಿಗಿಂತಲೂ ಹೆಚ್ಚು ಉದ್ದದ ಅಣು ಬಾಂಬು ಮತ್ತು ಪುಟ್‌ಪುಟಿಯಾಗಳ ತಯಾರಿಕೆಯನ್ನು ಭಾರತ ಸರ್ಕಾರದವರು ನಿಷೇಧಿಸಿರುತ್ತಾರೆ ಈ 'ಅಣು ಬಾಂಬು'ಗಳು ಸಿಡಿದಾಗ ವಿಪರೀತ ಶಬ್ದವಾಗುವುದಲ್ಲದೆ, ನೆರೆಯವರಿಗೆ ತೊಂದರೆಯಾಗುತ್ತದೆಂದು ಭಾವಿಸಲಾಗಿದೆ. ಪುಟ್‌ಪುಟಿಯಾಗಳಲ್ಲಿ ವಿಷವುಳ್ಳ ಹಳದಿ ರಂಜಕವು ಇರುವುದೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಸಂಗೀತ. ೭-೧೫ ದೀಕ್ಷಿತರ ನವಾವರಣ ಕೀರ್ತನೆ ೭ ೩೦ ಮತ್ತು ೮-೧೫ ಬಿ ಜಯಮ್ಮ-ದೇವರನಾಮ ಮತ್ತು ಕನ್ನಡ ಗೀತೆ ೮ ೩೦ ಗೀತಾಲಂಕಾರ. ೯ ಟಿ ಗುರುರಾಜಪ್ಪ-ಪಿಟೀಲು ೯ ೩೦ ಬಾಲಜಗತ್. ಮಧ್ಯಾಹ್ನ ೧೨ ಆರ್. ಕೆ. ರಾಮನಾಥ-ಸಂಗೀತ. ೧೨-೪೫ ವಾದ್ಯವೃಂದ ೧ ನಿಮ್ಮ ಮೆಚ್ಚಿನ ಗೀತೆ. ೨-೩೦ ಎಂ ಡಿ ಶ್ರೀನಿವಾಸಯ್ಯಂಗಾರ್-ವೀಣೆ. ೩-೧೫ ಬಿ. ಜಯಮ್ಮ-ದೇವರ ನಾಮ ಸಂಜೆ ೫ ಪಾಶ್ಚಾತ್ಯ ಸಂಗೀತ. ೫ ೩೦ ಕೆ ಎಸ್. ವಿಶ್ವನಾಥಶಾಸ್ತ್ರಿ-ವೀಣೆ. ೬-೨೦ ಭಕ್ತಿ ಗೀತೆ. ೭ ೩೦ ಕನ್ನಡ ಗೀತೆಗಳು ೮ ಕಥಾ ಸಪ್ತಾಹ ೮-೧೫ ಎಂ ಡಿ ಶ್ರೀನಿವಾಸಯ್ಯಂಗಾರ್-ವೀಣೆ ೮ ೩೦ ದ್ವಿತೀಯ ಯೋಜನೆ ಪ್ರಗತಿ ಬಗ್ಗೆ ವರದಿ ೮-೪೫ ರಿಕಾರ್ಡ್. ೯-೧೫ ನಿಜಗಲ್ಲಿನ ರಾಣಿ-ಕನ್ನಡ ನಾಟಕ ೧೦ ಸಂಗೀತ ಗಂಗಾಧರರ ಗೀತೆಗಳು.

ಬೇಲೂರು ಕೊಲೆ ಮೊಕದ್ದಮೆ

ಅಳಿಯ ಪಾರ್ಥಸಾರಥಿಯವರ ಸಾಕ್ಷ್ಯ

ಬೆಂಗಳೂರು ೫

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮಹ ಕೊಲೆ ಮೊಕದ್ದಮೆಯಲ್ಲಿ ನೆನ್ನೆ ಅವರ ಅಳಿಯ ಶ್ರೀ ಕೆ. ಆರ್. ಪಾರ್ಥಸಾರಥಿ ಅಯ್ಯಂಗಾರ್ಯರ ಸಾಕ್ಷ್ಯವಾಯಿತು.

ತಮ್ಮ ಪತ್ನಿ ಶಾರದಮ್ಮನು ಬೇಲೂರರ ಮೊದಲನೇ ಸಂಬಂಧದ ಇಬ್ಬರು ಪುತ್ರಿಯರಲ್ಲಿ ಒಬ್ಬರೆಂದೂ, ಹುಚ್ಚ ಮುಕ್ತಣ್ಣನೂ ಅವರ ಮಗನೆಂದೂ ತಿಳಿಸಿದರು. ೧೯೩೪ರಿಂದ ೩೭ರ ವರೆಗೆ ತಮ್ಮ ಮಾವನವರ ಜೊತೆಯಲ್ಲಿ ತಾವು ಇದ್ದುದಾಗಿಯೂ, ಅಲ್ಲಿಯವರೆಗೂ ಮುಕ್ತಣ್ಣನು ಮನೆಯಲ್ಲಿಯೇ ಇದ್ದು ನಂತರ ಅವನಿಗೆ ಮನೆಯ ಕಾಂಪೌಂಡಿನಲ್ಲಿ ಹೊರಗಡೆ ಪ್ರತ್ಯೇಕ ಕೊಠಡಿಯಲ್ಲಿ ವಾಸಕ್ಕೆ ಸ್ಥಳ ಕೊಡಲಾಯಿತೆಂದೂ ಅವರು ಹೇಳಿದರು.

೧೯೩೭ರಲ್ಲಿ ತಮ್ಮ ಮಾವನವರು ಎರಡನೇ ಬಾರಿ ವಿವಾಹವಾಗಿ, ಆ [illegible] ದ್ವಿತೀಯ ಸಂಬಂಧದಲ್ಲಿ ೩ ಹುಡುಗರೂ, ೩ ಹುಡುಗಿಯರೂ ಹುಟ್ಟಿದರೆಂದೂ, ಆ [illegible] ಕಿರಿಯ ಮಗ ಸಂಪತ್ತನು ೩ ವರ್ಷಗಳ ಕೆಳಗೆ ಮೃತಪಟ್ಟನೆಂದೂ ಹೇಳಿದರು. ೧೯೪೭ರಿಂದಲೂ ತಾವು ಮಲ್ಲೇಶ್ವರದಲ್ಲಿರುವುದಾಗಿಯೂ ಅವರು ಹೇಳಿ ಈ ರೀತಿ ತಿಳಿಸಿದರು: —

ಜೂನ್ ೬ನೇ ತಾರೀಖು ಬೆಳಿಗ್ಗೆ ೭॥ ಗಂಟೆಗೆ ರಂಗವಿಲಾಸದಲ್ಲಿ ಕಳವು ಮತ್ತು ಕೊಲೆ ವಿಚಾರವು ಮೊದಲು ನನಗೆ ತಿಳಿಯಿತು. ೧೦ ನಿಮಿಷಗಳಲ್ಲಿ ಪತ್ನಿಯೊಡನೆ ಬಂಗಲೆಗೆ ಹೋದೆ. ತಪ್ಪ [illegible] ರಕ್ತ ಮಾವನವರನ್ನೂ, ರಂಗಲಕ್ಷ್ಮಿಯನ್ನೂ ಆಸ್ಪತ್ರೆಗೆ ಸಾಗಿಸಲಾಗಿತ್ತು. ಸಿಂಗಮ್ಮ, ವೆಂಗಡಮ್ಮ ಅವ ಮತ್ತು ಕುಕರ ರವರಗಳನ್ನು ಕಂಡೆನು. ಕಪ್ಪು ಪೆಟ್ಟಿಗೆ ಮತ್ತು ಮರದ ಅಲ್ಮೇರಾ ತೆರೆದಿದ್ದುವು. ಬೆಳ್ಳಿ ಸಾಮಾನು ಮತ್ತು ಕಾಗದಗಳು ಚೆಲ್ಲಾಪಿಲ್ಲಿಯಾಗಿ ಬಿದ್ದಿದ್ದುವು. ಆಸ್ಪತ್ರೆಯಲ್ಲಿ ಇಬ್ಬರೂ ಪ್ರಜ್ಞೆ ತಪ್ಪಿದ್ದುದನ್ನು ನೋಡಿದೆ. ೧೧ ಗಂಟೆಗೆ ವಾಪಸು ರಂಗವಿಲಾಸಕ್ಕೆ ಬಂದೆ.

೧೯೧೬ರಲ್ಲಿ ಬೇಲೂರರು ವಕೀಲವೃತ್ತಿ ಆರಂಭಿಸಿದರು. ೧೯೩೪ರಿಂದ ಅವರಲ್ಲಿ ನಾನು ಜೂನಿಯರ್ ಆಗಿದ್ದೆ. ಬೇಲೂರರಿಗೆ ಒಳ್ಳೆ ವರಮಾನವಿತ್ತು. ಅವರಿಗೆ ಗುಂಜೂರಿನಲ್ಲಿ ೧೪ ಎಕರೆ ಗೊಲ್ಲಹಳ್ಳಿಯಲ್ಲಿ ೯೦ ಎಕರೆ ಜಮೀನು ಇವೆ. ಅಲ್ಲದೆ ಗಾಂಧಿ ನಗರದಲ್ಲಿ ಹಲವಾರು ಮನೆಗಳಿವೆ. ತಿಂಗಳಿಗೆ ೧,೫೦೦ ರೂ ಬಾಡಿಗೆ ಬರುತ್ತಿತ್ತು.

ಬೇಲೂರರು ಲೇವಾದೇವಿ ಮಾಡುತ್ತಿದ್ದುದು ತಿಳಿಯದು. ಮೈಸೂರು ಬ್ಯಾಂಕಿನಲ್ಲಿ ಅವರ ಲೆಕ್ಕ ಇತ್ತು. ಜಾಲಾಡಿದ್ದ ಕಾಗದಪತ್ರಗಳನ್ನು ನಾನು ಪರಿಶೀಲಿಸಲಿಲ್ಲ. ಬೇಲೂರರ ಬಳಿ ಯಾವ ಒಡವೆ ಮತ್ತು ಬಟ್ಟೆಗಳಿದ್ದುವೆಂಬುದು ತಿಳಿಯದು. ನಮ್ಮ ಮಾವನವರು ವಿಲ್ ಮಾಡಿದ ವಿಷಯ ಜೂನ್ ೮ರಂದು ತಿಳಿಯಿತು. ಅವರಲ್ಲಿ ಎಷ್ಟೆಂಬುದು ಗೊತ್ತಿಲ್ಲ. ನನ್ನ ಎದುರಿನಲ್ಲಿ ನಗನಾಣ್ಯಗಳ ಪಟ್ಟಿ ಮಾಡಲಿಲ್ಲ. ಅವರ ಆಸ್ತಿ ಬಗ್ಗೆ ಜಿಲ್ಲಾಧಿಕಾರಿಗಳು ತಾತ್ಕಾಲಿಕ ರಿಸೀವರ್ ಆಗಿದ್ದಾರೆ. ಜೂನ್ ೬ನೇ ತಾರೀಖು ರಂಗವಿಲಾಸದಲ್ಲಿ ಪೋಲೀಸರನ್ನು ನಾನು ಮಾತನಾಡಿಸಲಿಲ್ಲ.

ಎಂ. ಕೆ. ವರದರಾಜಯ್ಯಂಗಾರ್ಯರಿಗೆ ನಮಸ್ಕಾರ ಸೂಚಿಸಿದೆ. ಮಾವ ಮತ್ತು ರಂಗಲಕ್ಷ್ಮಿ ಇವರಿಬ್ಬರ ಸ್ಥಿತಿ ಬಗ್ಗೆ ಕಾತರಗೊಂಡಿದ್ದೆ.

ನಂತರ ಇನ್ಸ್‌ಪೆಕ್ಟರ್ ಅಣ್ಣೇಗೌಡ, ಮತ್ತು ಸಬ್‌ಇನ್ಸ್‌ಪೆಕ್ಟರ್ ಒಟ್ಟೇಗೌಡರ ಸಾಕ್ಷ್ಯವಾಯಿತು. ಬಚ್ಚೇಗೌಡರು ಬೇಲೂರು ಶ್ರೀನಿವಾಸಯ್ಯಂಗಾರ್ಯರು ತಮ್ಮ ಮನೆಯಲ್ಲಿ ನಗಗಳ ಅಪಹಾರದ ಬಗ್ಗೆ ೧೯೫೩ರಲ್ಲಿ ದೂರು ಕೊಟ್ಟಿದ್ದಾಗಿಯೂ, ಶ್ರೀನಿವಾಸ ಎಂಬುವನ ಮೇಲೆ ಗುಮಾನಿಯಿತ್ತೆಂದೂ, ಎಲ್ಲಾ ನಗಗಳೂ ಸಿಕ್ಕಿ, ಶ್ರೀನಿವಾಸನಿಗೆ ೪ ತಿಂಗಳ ಸಜಾ ಮತ್ತು ೫೦ ರೂ ದಂಡ ಆಯಿತೆಂದೂ ಹೇಳಿದರು. ಖುಲಾಸೆಯಾದ ಮೇಲೆ ಶ್ರೀನಿವಾಸನು ಏನಾದನೆಂಬುದು ಗೊತ್ತಿಲ್ಲವೆಂದು ಅವರು ತಿಳಿಸಿದರು.

ರುಚಿ ಮತ್ತು ರುಚಿ !

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
೩ ಸುಬ್ಬರಾಯ್ಯಾ ರೋಡ್, ಮೈಸೂರು
(ನಮ್ಮ ಅಂಗಡಿಯ ಶಾಖೆಯನ್ನು ಬೇರೆ ಎಲ್ಲೂ ತೆಗೆದಿಲ್ಲ)

Edited, Printed and Published by
A. R. Nagarajan at Sadhvi Press
D. Subbiah Road, Mysore

ಕೇಂದ್ರ ಮಂತ್ರಿಗಳಿಗೆ ಪೌರಸಭಾ ಮಾನಪತ್ರ

ಮೈಸೂರು ೫

ದಸರಾ ಉತ್ಸವದ ಸಂಬಂಧವಾಗಿ ನಗರಕ್ಕೆ ಆಗಮಿಸಲಿರುವ ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದ ವಲ್ಲಭಪಂತ್ ಮತ್ತು ರೈಲ್ವೆ ಮಂತ್ರಿ ಲಾಲ್‌ಬಹದ್ದೂರ್ ಶಾಸ್ತ್ರಿಯವರಿಗೆ ಇಲ್ಲಿನ ಪೌರಸಭೆಯವರು ಮಾನಪತ್ರವನ್ನು ಸಮರ್ಪಿಸಲಿರುವರೆಂದು ತಿಳಿದುಬಂದಿದೆ.

ಹರಿಜನ ಸೇವಕ ಸಂಘದವರಿಂದ ಗಾಂಧಿ ಜಯಂತಿ ಸಪ್ತಾಹ

ರಾಜಧಾನಿಯ ಹರಿಜನ ಸೇವಕ ಸಂಘದವರು ಕಳೆದ ಮಂಗಳವಾರ ಗಾಂಧಿ ಜಯಂತಿಯನ್ನು ನೆರವೇರಿಸಿದರು. ಅದರ ಅಂಗವಾದ ಸಪ್ತಾಹದಲ್ಲಿ ಜಾಡಮಾಲಿಗಳ ಕೇಂದ್ರಕ್ಕೆ ಸಂಘದವರು ಭೇಟಿಯಿತ್ತು, ಪಾನ ನಿರೋಧ ಮತ್ತು ಸತ್ತ ದನಗಳ ಆಹಾರದ ವರ್ಜನೆ ಬಗ್ಗೆ ಭಾಷಣ ಮಾಡಿ, ಹಸ್ತ ಪತ್ರಿಕೆಗಳನ್ನು ಹಂಚಿದರು. ೨ನೇ ತಾರೀಖು ಮಳಲವಾಡಿ ಹರಿಜನರ ಸಭೆಯನ್ನು ನಡೆಸಲಾಯಿತು. ಅದರಲ್ಲಿ ಸವರ್ಣೀಯರೂ ಹರಿಜನರೂ ಭಾಗವಹಿಸಿದ್ದರು. ಸಿಡುವಾರಹಳ್ಳಿಯಲ್ಲಿ ೧ನೇ ತಾರೀಖು ಸಭೆ ನಡೆಯಿತು. ನೊನ್ನೆ ಶುಕ್ಕರಹಳ್ಳಿಯಲ್ಲಿ ಸಭೆಯನ್ನು ಏರ್ಪಡಿಸಲಾಗಿತ್ತು. ಪೌರಸಭೆಯ ಮೂಲಕ ಹಂಚಲಾಗುವ ನಿಮ್ನ ವರ್ಗದವರ ಉತ್ತೇಜನ ನಿಧಿಯು ವಿನಿಯೋಗವಾಗುತ್ತಿಲ್ಲವೆಂದು ಈ ಎಲ್ಲ ಸಭೆಗಳಲ್ಲೂ ಜನರು ಆರಿಕೆ ಮಾಡಿದರು. ಈ ವಿಚಾರವಾಗಿ ಪೌರಸಭಾ ಕಮಿಷನರಿಗೆ ಜನರ ಮನವಿಗಳನ್ನು ಸಲ್ಲಿಸಿ ಸೂಕ್ತ ಪರಿಹಾರ ಕಲ್ಪಿಸುವ ಏರ್ಪಾಡು ಮಾಡುವುದಾಗಿ ಭರವಸೆ ನೀಡಲಾಯಿತು.

ಅಮೋಘ ಪ್ರಾರಂಭ

ಗೋಕಾಕ್ ನಾಟಕ
ಮಂಡಲಿಯವರು
ಮೈಸೂರು ಟೌನ್‌ಹಾಲಿನಲ್ಲಿ
7-10-56ನೇ ಭಾನುವಾರ ರಾತ್ರಿ 10ಕ್ಕೆ
ಬೆಳ್ಳಿ ಚಿಕ್ಕಿ
ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು
(ಪ್ರತಿ ದಿನ ನಾಟಕವುಂಟು)
ವ್ಯಾ॥ ಬಿ. ಜಿ. ಹುಂಚೀಕರ್,
ಪ್ರೊ॥ ಬಿ. ಬಿ. ದೊಡಮನಿ

ಆನಂದವಿಹಾರ್ ಟ್ರಾವೆಲ್ಸ್,
ಬೆಂಗಳೂರು 2
ಮೈಸೂರಿನಿಂದ ವ್ಯವಸ್ಥೆಗೊಳಿಸಿದ
ದಸರಾ ವಿಶೇಷ ಪ್ರವಾಸಗಳು
9-10-56ರಂದು ಸೋಮನಾಥ ಶಿವನಸಮುದ್ರ
10-10-56ರಂದು ಬಿಳಿಗಿರಿರಂಗನಬೆಟ್ಟ
10 10 56 ಬೇಲೂರು-ಹಳೇಬೀಡು
11-10-56ರಂದು ಮೂರು ದಿನ ಶೃಂಗೇರಿ ಬೇಲೂರು ಕೆಮ್ಮಣ್ಣುಗುಂಡಿ [illegible]
ಮೈಸೂರಿನ ಪ್ರವಾಸಿಗರು ಇಂದೇ ಟಿಕೆಟ್ ಪಡೆಯಲು ವಿಚಾರಿಸಿ
ಸದರ್ನ್ ಸೋಡಾ ಫ್ಯಾಕ್ಟರಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟ

ಬೆಂಗಳೂರು ೪

ಶಾಲೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಹೊತ್ತು ಊಟವೀಯುವ ಬಗ್ಗೆ ವಿದ್ಯಾ ಇಲಾಖಾಧಿಕಾರಿಗಳು ತಯಾರಿಸಿರುವ ಯೋಜನೆಯನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ. ಇದಕ್ಕಾಗಿ [illegible] ರೂ ಅನ್ನು ವೆಚ್ಚ ಮಾಡಲಾಗುವುದು. ಇದರ ಪ್ರಕಾರ ಮೈಸೂರು, ಹಾಸನ, ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ತಲಾ ೨,೫೦೦ ರೂ, ಮಂಡ್ಯ, ಚಿಕ್ಕಮಗಳೂರು, ಕೋಲಾರ ಮತ್ತು ಬಳ್ಳಾರಿಗಳಲ್ಲಿ ತಲಾ ೧,೫೦೦ ರೂ., ಬೆಂಗಳೂರು ಜಿಲ್ಲೆ ಮತ್ತು ನಗರಗಳಲ್ಲಿ ತಲಾ ೨,೦೦೦ ರೂ. ಗಳನ್ನು ವಿನಿಯೋಗಿಸಲಾಗುವುದು. ಇದಲ್ಲದೆ ವಿಹಾರ ಕೇಂದ್ರಗಳಿಗಾಗಿ ೧,೨೦೦ ರೂ ಅನ್ನು ಒದಗಿಸಲಾಗುವುದು.

CHAMARAJAPURAM CO-OPERATIVE STORES, Ltd, MYSORE

NOTICE

During the Audit of the accounts, it has been observed that *several minor accounts* under the Heads-Dividends Bonus, suspense, etc, prior to 1951 are outstanding in the Books of the Stores. Persons having any claim may establish it in office and obtain payments on or before 6-11-1956, failing which they will lapse

Mysore } K KRISHNA RAO
5-10-1956 } *Honorary Joint Secretary*

ಹರಿಕಥೆ

ದೇವಪಾರ್ಥಿವ ಅಗ್ರಹಾರದ ಶ್ರೀ ಗಣೇ ಮಂದಿರದಲ್ಲಿ ಈ ಸಂಜೆ ೭॥ ಗಂಟೆಗೆ ಶ್ರೀ ಕ ನಾರಾಯಣದಾಸರು ಶ್ರೀ ಗಣಪತಿ ವಿಜಯ ಎಂಬ ಕಥೆಯನ್ನು ಮಾಡುವರು

VIJAYA TELEGRAPH
INSTITUTE, MYSORE
Invites applications now for on tion seats for admission. Fo details apply to the Principal, wi 4 annas stamps.

ವುಡ್‌ಲ್ಯಾಂಡ್ಸ್
5-10-56ರಿಂದ ಜನಭರಿತ 2ನೇ
ದಿನವೂ 3 ಆಟಗಳು
ನಾರಾಯಣ್ ಅಂಡ್ ಕಂಪೆನಿಯವರ
ಹಿಂದಿ ಚಿತ್ರ
ದೇವ್‌ತಾ
ಪಾತ್ರ:- ಅಂಜಲಿದೇವಿ, ಜೆಮಿನಿ ಗಣೇಶ, [illegible] ಗುಪ್ತ, ಆಗಾ, [illegible]
ವೈಜಯಂತಿಮಾಲಾ ಮತ್ತು ಕುಮಾರಿ ಕಮಲರವರ ಮನಮೋಹಕವಾದ ವರ್ಣರಂಜಿತ
ನೃತ್ಯಗಳು

ಉತ್ತಮವಾದ ಕಟ್ಟಡದ
ಪ್ಲಾನುಗಳು ಮತ್ತು ಬ್ಲೂ ಪ್ರಿಂ
ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ
ಸಲುಕೆ ಎಸ್ಟಿಮೇಟ್ ಮಾಡಿಕೊಡುವುದ
ಗಾಯತ್ರಿ ಟಾಕೀಸ್ ಎದುರು
ಹ್ಯಾಟ್ ಅಂಗಡಿಯಲ್ಲಿ
ಬಿ. ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿ.

ಶೋಭಾ ಸ್ಟೋರ್ಸ್ ★ 'D' ಬ್ಲಾಕ್, 22. ವಸ್ತ್ರ ಪ್ರದರ್ಶ
ಮೈಸೂರು
ಕಿಲುಬದಂತೆ ಹೆಚ್ಚು ಕಾಲ ಬಾಳಿಕೆ, ಸ್ವಚ್ಛತೆಗೆ ಮತ್ತು ಶ್ರೇಷ್ಠತೆಗೆ ಸರಿ ಬ್ರ್ಯಾಂಡ್ ಮತ್ತು
ಬ್ರ್ಯಾಂಡ್ ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಕೊಳ್ಳುವ ಮೊದಲು ಇಂದೇ
ನಮ್ಮಲ್ಲಿ ವಿಚಾರಿಸಿ [ಬೆಲೆ ಸುಲಭ]

THE NATIONAL INSTITUTE OF COMMERCE,
1677 Old Mysore Bank Road, Mysore
FRESH ADMISSIONS for TYPEWRITING and SHORTHAND *are now being received during the mornings & evenings*
For particulars apply sharp

ಮೈಸೂರಿಗೆ ಬಂದಾಗ ಉತ್ತಮವಾದ ವಸತಿ ಸೌಕರ್ಯಕ್ಕೆ
ವುಡ್‌ಲ್ಯಾಂಡ್ಸ್ ಹೋಟೇಲ್
ಭೋಜನ ಮತ್ತು ವಸತಿ ಗೃಹ
ವುಡ್‌ಲ್ಯಾಂಡ್ಸ್ ಚಿತ್ರ ಮಂದಿರ, ಕರ್ಜನ್‌ಪಾರ್ಕ್ ರಸ್ತೆ, ಮೈಸೂರು
ದಸರಾ ಕಾಲದಲ್ಲಿ ಕೊಠಡಿಗಳು ದೊರೆಯುತ್ತವೆ ಮುಂಚಿತವಾಗಿಯೇ ರಿಸರ್ವ್ ಮಾಡುವ ವ್ಯವಸ್ಥೆ ಮಾಡಲಾಗಿದೆ
ವಿವರಗಳಿಗೆ ವ್ಯವಸ್ಥಾಪಕರೊಡನೆ ವ್ಯವಹರಿಸಿ [ಫೋನ್ 871

ಮೈಸೂರು ಜಂಖಾನಾ ರೇಸುಗಳು, 1956

ಮೈಸೂರು ಜಂಖಾನಾ ರೇಸ್ ದಿನಗಳಲ್ಲಿ (ತಾ॥ 10, 13, 15, 21 ನೇ ಅಕ್ಟೋ 1956) ಮೈಸೂರು ಜಂಖಾನಾ ೪ ನೇ ಆವರಣದಲ್ಲಿ ಹಿಂದೂ ಫಲಾಹಾರ ಮಂದಿರವನ್ನು ಯಲು ಟೆಂಡರುಗಳನ್ನು ರೇಸ್ ಆಫೀಸಿನಲ್ಲಿ ತಾ॥ 8 ನೇ ಸೋಮವಾರ ಮಧ್ಯಾಹ್ನ 12 ವರೆವಿಗೆ ಸ್ವೀಕರಿಸಲಾಗುತ್ತೆ. ಅಪೇಕ್ಷೆಯುಳ್ಳವರು ತಮ್ಮ ಟೆಂಡರುಗಳನ್ನು ಕೊಟ್ಟು ಕ್ಲಬ್ಬಿ ನ ಮಂಜೂರಾತಿಯನ್ನು ಪಡೆದು ಫಲಾಹಾರ ಮಂದಿರವನ್ನು ನಡೆಸಬಹುದು

ಹೆಚ್. ಡಿ. ಗೋಪಾಲರಾಜ ಅ
ಗೌರವ ಕಾರ್ಯದರ್ಶಿ

ದಸರಾ ಆಕರ್ಷಣೆ !
ಮೈಸೂರು ರಣಜಿತ್ ಟಾಕೀಸಿನಲ್ಲಿ
5—10—56 ರಿಂದ ಜನಸ್ತೋಮಕ್ಕೆ ಪ್ರದರ್ಶಿಸಲ್ಪಡುತ್ತಿದೆ
ಇಂದೇ ನೋಡಿ ದಿನವೂ 3 ಆಟಗಳು
ಆಲ್ ಇಂಡಿಯಾ ಪಿಕ್ಚರ್ಸ್‌ರವರ; ವೈಜಯಂತಿಮಾಲಾ, ಪ್ರದೀಪ್‌ಕುಮಾರ್, [illegible], ಜೀವನ್, ಶಮ್ಮಿ ಮುಂತಾದವರು ನಟಿಸಿರುವ ಹಿಂದಿ ಚಿತ್ರ
ಅಂಜಾನ
ನಿರ್ದೇಶಕ : ಪಿ. ಎಲ್. ಅರೋರಾ — ತಯಾರಕರು : ಎಂ.
ಸಂಗೀತ : ಹೇಮಂತಕುಮಾರ್ — G. F. D. ಯವರ ವಿಮೋಚನೆ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 6 ಕಾಸು

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಂಪುಟ : ೧೫] SADHVI : SUNDAY 7—10—1956 ಮೈಸೂರು : ಭಾನುವಾರ ೭—೧೦—೧೯೫೬ [ಸಂಚಿಕೆ : ೩೩

ಹೈದರಾಬಾದಿನಲ್ಲಿ ಸಾವಿರಾರು ಜನ ನೌಕರರ ಮುಷ್ಕರ

ಗರದ ಸುಪ್ರಸಿದ್ಧ ದಾನಿಗಳಿಗೆ ಬಿನ್ನವತ್ತಳೆ

ಮೈಸೂರು ೭

ರಾಜಧಾನಿಯಲ್ಲಿಯೂ, ಇತರ ಕಡೆಗಳಲ್ಲಿ ೂ ಅನೇಕ ದಾನಧರ್ಮ ಮತ್ತು ಪರೋಪ ರದ ಕಾರ್ಯಗಳನ್ನು ಮಾಡಿ ಸರ್ಕಾರದಿಂದ , ಶ್ರೀ ಮನ್ಮಹಾರಾಜರಿಂದಲೂ ಸಾರ್ವಜನಿಕ ರಾ ಬಿರುದುಗಳನ್ನು ಪಡೆದಿರುವ ಶ್ರೀಗಳಾದ . ಬಿ. ಬಸವಯ್ಯ, ಟಿ. ತಮ್ಮಣ್ಣ ಮತ್ತು ಜಿ. ತಿರುವೆಂಗಡ ಮುದಲಿಯಾರ್‌ರವರನ್ನು ನ್ಮಾನಿಸಲು ನೆನ್ನೆ ಪುರಭವನದಲ್ಲಿ ದೊಡ್ಡ ಸ ಮಾರಂಭವೊಂದು ನಡೆಯಿತು. ಮುಖ್ಯ ಮಂತ್ರಿ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿ ದ್ದರು.

ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥನೆಯಾ ನಂತರ, ಶ್ರೀಮತಿ ಸರೋಜಮ್ಮನವರು ಸ್ವಾಗ ಪದ್ಯಗಳನ್ನು ಹಾಡಿದರು. ಶ್ರೀಮತಿ ಎಂ. ಜದಮ್ಮನವರಿಂದ ಸುಶ್ರಾವ್ಯವಾದ ಗಾಯನವಾ ಯಿತು ಕುಮಾರಿಯರಾದ ನಂದಿನಿ ಮ ಸಾಗರರತ್ನರವರು ಮನೋಹರವಾಗಿ ನೃತ್ಯಗ ವ ಮಾಡಿದರು.

ನಟ್ಟಿಕಲ್ಲಾ ಏರ್ಪಡಿಸಿದ ಶ್ರೀ ಎಂ. ಸಿ. ಮಹ ದೇವಸ್ವಾಮಿಯವರು ಸ್ವಾಗತ ಭಾಷಣ ಮಾಡಿ, ಮ್ಮ ಅತಿಥಿಗಳ ಗುಣಗಾನ ಮಾಡಿದರು. ಮ್ಮ ಅತಿಥಿಗಳಿಗೆ ಬಿನ್ನವತ್ತಳೆಗಳನ್ನು ಓದಿ ರು ಅಶೋಕ ಸ್ತಂಭದೊಡನೆ ಅರ್ಪಿಸಲಾ ತು. ಸತ್ಕಾರಕ್ಕಾಗಿ ಅತಿಥಿಗಳು ಧನ್ಯವಾದ ಸಮರ್ಪಿಸಿ ಭಾಷಣ ಮಾಡಿದರು.

ಮುಖ್ಯ ಮಂತ್ರಿಗಳು ತಮ್ಮ ಭಾಷಣದಲ್ಲಿ ಸ ದಾನಿಗಳನ್ನು ಅಭಿನಂದಿಸಿ, ಹಣವನ್ನು ಸಂಪಾ ದಿಸುವವರು ಬಡವರಿಗೆ ಅದನ್ನು ಹಂಚಿ ತಮ್ಮ ಯವನ್ನು ಸಾರ್ಥಕಪಡಿಸಬೇಕೆಂದು ಹೇ ದರು.

ರೀ ಬಿ. ಎಸ್. ಸುಬ್ಬರಾಯರಿಂದ ವಂದ ರ್ಪಣೆಯಾದನಂತರ ರಾಷ್ಟ್ರ ಗೀತೆಯೊಡನೆ ಮಾರಂಭವು ಮುಗಿಯಿತು.

ಲೇಜು ಅಧ್ಯಾಪಕರಿಗೆ ಅಸಿಸ್ಟೆಂಟ್ ಪ್ರೊಫೆಸರ್‌ಗಿರಿ

ಸೂರು ಮಹಾರಾಜಾ ಕಾಲೇಜಿನ ತತ್ವ ಅಧ್ಯಾಪಕರಾದ ಶ್ರೀ ಹೆಚ್. ಕೆ. ರಾಜಾ ರಿಗೂ ಮತ್ತು ಮಹಾರಾಣಿ ಕಾಲೇಜಿನ ಶಾಸ್ತ್ರ ಅಧ್ಯಾಪಕಿ ಶ್ರೀಮತಿ ಸಿ. ಶಾರದಾ ವರಿಗೂ ಅಸಿಸ್ಟೆಂಟ್ ಪ್ರೊಫೆಸರಾಗಿ ಬಡ್ತಿ ಲಾಗಿದೆ. ಬೆಂಗಳೂರು ಇಂಟರ್ ಕಾಲೇಜ ಧ್ಯಾಪಕರಾದ ಶ್ರೀ ಟಿ. ಶಿವಸ್ವಾಮಿಯವ ಮೈಸೂರು ಮಹಾರಾಜಾ ಕಾಲೇಜಿನ ತ ಸ್ತ್ರ ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಿಸ ಆದರೆ ಅವರು ಭಾಷಾ ಕ ಶಾ ಕ ದ ಮಂಡಲಿ ಸಂಶೋಧನಾ ಕೆಲಸದಲ್ಲಿ ಮುಂದುವರಿಯುವರು. ಉಳಿದವರಿಬ್ಬರೂ ಮ ಜಾ ಕಾಲೇಜಿನಲ್ಲಿ ಅಸಿಸ್ಟೆಂಟ್ ಪ್ರೊಫೆಸ ಗುವರು.

ದೆಹಲಿಯಲ್ಲಿ ಭೂಕಂಪ

ಲಿಯಲ್ಲಿ ಮೊನ್ನೆ ಬೆಳಗ್ಗೆ ೨ ಸಾರಿ ಭೂ ಯಿತು ಅದರಿಂದ ಯಾವ ಪ್ರಮಾದ ಭವಿಸಲಿಲ್ಲ.

ಬೇಲೂರು ಕೊಲೆ ಮೊಕದ್ದಮೆ

ಚನ್ನ, ಜಯಮ್ಮ ಇವರನ್ನು ಮತ್ತೆ ವಿಚಾರಣೆಗೆ ಕರೆಸಲು ನಿರಾಕರಣೆ

ಬೆಂಗಳೂರು ೭

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ ಮೊಕದ್ದಮೆಯಲ್ಲಿ ನೆನ್ನೆ ಸೆಷನ್ಸ್ ನ್ಯಾಯಾಧೀಶರು ಜಯಮ್ಮ, ಚನ್ನ, ಪ್ರಭಾಕರ್ ಮತ್ತು ವೆಂಕಟರಮಣಶೆಟ್ಟರನ್ನು ಪುನಃ ಪಾಟೀಸವಾಲು ವಿಚಾರಣೆಗೆ ಕರೆಸುವ ಬಗ್ಗೆ ಬಂದಿದ್ದ ಕೋರಿಕೆಯನ್ನು ತಿರಸ್ಕರಿಸಿದರು.

ನ್ಯಾಯಾಧೀಶರು ತಮ್ಮ ಆಜ್ಞೆಯಲ್ಲಿ ಮೊಕದ್ದಮೆಯು ಮೊದಲನೇ ಎನ ನೇ ಆಪಾದಿತನ ಪರವಾಗಿ ಸ್ಟ್ಯಾಂಡಿಂಗ್ ಕೌನ್ಸಿಲರು ಹಾಜರಾಗಿದ್ದರೆಂದೂ ನಂತರ ಶ್ರೀ ಎಂ. ಸಿ. ಗುರುರಾವರು ಮೂವರು ಆಪಾದಿತರ ಪರ ವಕಾಲತ್ತು ವಹಿಸಿದರೆಂದೂ, ಅವರು ಈಗಲೂ ಶ್ರೀ ಸುಂದರರಾಜ ಮತ್ತು ಶ್ರೀ ಕೃಷ್ಣಮೂರ್ತಿಯವರೊಡನೆ ೩ನೇ ಆಪಾದಿತನ ಪರ ವಕೀಲಿ ನಡೆಸುತ್ತಿರುವರೆಂದೂ ತಿಳಿಸಿ, ಉಳಿದ ಇಬ್ಬರು ವಕೀಲರುಗಳು ನಾಲ್ಕು ಸಾಕ್ಷಿಗಳನ್ನು ಪುನಃ ಕರೆಸುವಂತೆ ಕೇಳುವರೆಂದೂ, ಆದರೆ ಎಲ್ಲರನ್ನೂ ಬಹಳ ಕಾಲ ಶ್ರೀ ಗುರುರಾವರು ೩ನೇ ಆಪಾದಿತನ ಪರವಾಗಿ ಪಾಟೀಸವಾಲು ಮಾಡಿರುವರೆಂದೂ ತಿಳಿಸಿದ್ದಾರೆ

ಮೈಸೂರು ವಿಧಾನ ಪರಿಷತ್ತಿಗೆ ಇತರ ಪ್ರದೇಶಗಳಿಂದ ಆಯ್ಕೆ

ನೂತನ ಮೈಸೂರು ವಿಧಾನ ಪರಿಷತ್ತಿಗೆ ಹೈದರಾಬಾದು ಕರ್ನಾಟಕ ಪ್ರದೇಶದಿಂದ ಆರಿಸಿ ಬರಬೇಕಾದ ೩ ಸ್ಥಾನಗಳಿಗೆ ಆರ್. ಜಿ. ಜಾಗೀರ್‌ದಾರ್, ರಾಮಚಂದ್ರಪ್ಪ ವೀರಪ್ಪ ಮತ್ತು ಮಹದೇವ ರಾಮಪುರಿಯವರು ಚುನಾಯಿಸಲ್ಪಟ್ಟಿದ್ದಾರೆ. ಇವರುಗಳು ಕಾಂಗ್ರೆಸ್ ಉಮೇದುವಾರರು. ಮತ್ತೊಬ್ಬ ಸ್ವತಂತ್ರ ಉಮೇದುವಾರರು ತಮ್ಮ ನಾಮಪತ್ರವನ್ನು ವಾಪಸು ಪಡೆದರು.

ದಕ್ಷಿಣ ಕನ್ನಡದ ಕಾಂಗ್ರೆಸ್ಸಿನ ಶ್ರೀ ಕಾಂತಪ್ಪ ಶೆಟ್ಟಿಯವರು ಪರಿಷತ್ತಿಗೆ ಆರಿಸಿಬಂದಿರುವರು. ಕೊಡಗಿನಿಂದ ಶ್ರೀ ಎನ್. ಎಸ್. ನಾರಾಯಣಮೂರ್ತಿಯವರು ಚುನಾಯಿತರಾಗಿರುತ್ತಾರೆ. ಇವರೂ ಕಾಂಗ್ರೆಸ್ ಸ್ಪರ್ಧಿಗಳು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಗೋಟುವಾದ್ಯ ಮತ್ತು ಸೆಲ್ಲೊ ೭-೧೫ ದೀಕ್ಷಿತರ ನವಾವರಣ ಕೀರ್ತನೆ ೭-೩೦ ಗಾನ ವಿಹಾರ. ೮-೧೫ ರೆಕಾರ್ಡು. ಮಧ್ಯಾಹ್ನ ೧೨ ಪಿ. ಭುವನೇಶ್ವರಯ್ಯ-ಪಿಟೀಲು. ೧ ರೆಕಾರ್ಡು. ೧-೩೦ ಎಂ. ಎಸ್. ಚಂದ್ರಶೇಖರಯ್ಯ-ಸಂಗೀತ. ೨-೧೫ ಮತ್ತು ಸಂಜೆ ೫-೩೦ ಎಸ್. ಕೆ. ವಸುಮತಿ ಗಾಯನ. ೬-೨೦ ಜಾನಪದ ಗೀತೆ. ೭-೩೦ ನಾಡಿನ ಕೊಡುಗೆ—ಕನ್ನಡ ಭಾಷಣ. ೮ ಕಥಾ ಸಪ್ತಾಹ—ಕಿರುಗಥೆ. ೮-೧೫ ಮತ್ತು ೮-೪೫ ಸಂಗಮೇಶ್ವರ ಹಿರೇಮಠ—ಹಿಂದಿ ಗೀತೆ ಮತ್ತು ಬಸವೇಶ್ವರ ವಚನ. ೮-೩೦ ರೆಕಾರ್ಡು ೯—೧೫ ಇಂಗ್ಲಿಷ್ ಭಾಷಣ. ೯-೩೦ ಬಸವರಾಜ ರಾಜಗುರು—ಸಂಗೀತ : ವಾರ್ತಾವಾಚನ ೨ಕೆ

ಬಟ್ಟೆ ಮೇಲೆ ಪುನಃ ಹತೋಟಿ ಬಗ್ಗೆ ಕೇಂದ್ರಮಂತ್ರಿಯ ಎಚ್ಚರಿಕೆ

ಬಟ್ಟೆಗಳ ಧಾರಣೆಯು ಕಳೆದ ಡಿಸೆಂಬರಿನಲ್ಲಿದ್ದ ಮಟ್ಟಕ್ಕೆ ಕೂಡಲೇ ಇಳಿಯದಿದ್ದರೆ ಮತ್ತು ಬೆಲೆಯನ್ನು ಹೆಚ್ಚಿಸುತ್ತಲೇ ಹೋದರೆ ಸರ್ಕಾರದವರು ಮತ್ತೆ ಹತೋಟಿ ತಂದು, ಕಡೆಗೆ ಬಟ್ಟೆಗಳನ್ನು ತಾವೇ ಮಾರಾಟ ಮಾಡಲು ಸಿದ್ಧರಾಗಿರುವರೆಂದು ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ. ಬೆಲೆಯು ಡಿಸೆಂಬರಿನಲ್ಲಿದ್ದ ಮಟ್ಟಕ್ಕೆ ಇಳಿದರೆ ಈಚೆಗೆ ಹೆಚ್ಚಿಸಲಾದ ಅಬ್ಕಾರಿ ಸುಂಕವನ್ನು ರದ್ದುಪಡಿಸಲಾಗುವುದೆಂದೂ ಅವರು ಹೇಳಿರುತ್ತಾರೆ.

ಪ್ರಾಂತಗಳಲ್ಲಿ ಕಾಂಗ್ರೆಸ್ ನಾಯಕತ್ವದ ಬದಲಾವಣೆ ಬೇಡ

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯವರ ಸೂಚನೆ

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣ ಅಗರವಾಲ್‌ರವರು ನೆನ್ನೆ ಮದ್ರಾಸಿನಲ್ಲಿ ಮಾತನಾಡುತ್ತಾ, ಸಂಸ್ಥಾನ ಪುನರ್ವಿಂಗಡಣೆಯ ಪರಿಣಾಮವಾಗಿ ಪ್ರಾಂತಗಳಲ್ಲಿ ಅತ್ಯವಶ್ಯಕ ಸಂದರ್ಭಗಳಲ್ಲಿ ವಿನಹ, ಕಾಂಗ್ರೆಸ್ ಪಕ್ಷದ ನಾಯಕತ್ವವನ್ನು ಬದಲಾವಣೆ ಮಾಡಬಾರದೆಂದು ತಿಳಿಸಿದರು. ಕಾಂಗ್ರೆಸ್ಸು ಪ್ರಜಾಸತ್ತಾತ್ಮಕ ರೀತಿಯಲ್ಲಿ ಕೆಲಸ ಮಾಡುತ್ತಿರುವುದರಿಂದ ನಾಯಕತ್ವದ ವಿಚಾರವನ್ನು ಪಕ್ಷದ ಶಾಸನಸಭಾ ಸದಸ್ಯರ ಇಚ್ಛೆಗೆ ಬಿಡಲಾಗುವುದೆಂದೂ, ಅವರುಗಳು ಸಂಸ್ಥೆಯಲ್ಲಿ ಐಕ್ಯತೆ ಮತ್ತು ಆಡಳಿತದಲ್ಲಿ ಭದ್ರತೆಯನ್ನು ತರಬೇಕೆಂದೂ ಅವರು ನುಡಿದರು. ಕಾಂಗ್ರೆಸ್ಸು ಎಲ್ಲಾ ಸಂಸ್ಥಾನಗಳಲ್ಲೂ ಪುನಃ ಅಧಿಕಾರಕ್ಕೆ ಬರುವುದೆಂದು ತಾವು ಭರವಸೆ ಹೊಂದಿರುವುದಾಗಿ ಅವರು ಹೇಳಿದರು.

ಭಾರತಕ್ಕೆ ೫ ವರ್ಷಗಳಲ್ಲಿ ೯೦ ಲಕ್ಷ ಟನ್ ಧಾನ್ಯದ ಆಮದು

ದ್ವಿತೀಯ ಯೋಜನೆ ಅವಧಿಯಲ್ಲಿ ೫೫ ಲಕ್ಷ ಟನ್ ಗೋಧಿ ಮತ್ತು ೩೫ ಲಕ್ಷ ಟನ್ ಅಕ್ಕಿಯನ್ನು ಭಾರತ ಸರ್ಕಾರದವರು ಆಮದು ಮಾಡಿಕೊಳ್ಳುವರೆಂದೂ, ಈ ಅವಧಿಯಲ್ಲಿ ಆಹಾರದ ಬೆಲೆಯನ್ನು ಇದೇ ಮಟ್ಟದಲ್ಲಿಡಲು ಸರ್ಕಾರದವರೇ ಪ್ರಮುಖ ವ್ಯಾಪಾರಗಾರರಾಗುವರೆಂದೂ ಕೇಂದ್ರ ಆಹಾರ ಮಂತ್ರಿ ಅಜಿತಪ್ರಸಾದ್ ಜೈನರವರು ತಿಳಿಸಿರುತ್ತಾರೆ. ಬರ್ಮಾ, ಅಮೆರಿಕ ಮತ್ತು ಚೀನಾಗಳಿಂದ ಧಾನ್ಯಗಳನ್ನು ತರಿಸಲಾಗುವುದೆಂದು ಅವರು ಹೇಳುತ್ತಾರೆ.

ಉಪನ್ಯಾಸ

ಫೆಲೋಷಿಪ್ ಆಫ್ ದಿ ಫ್ರೆಂಡ್ಸ್ ಆಫ್ ಟ್ರುತ್ ಮತ್ತು ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ [illegible] ರಸ್ತೆಯಲ್ಲಿರುವ ಶ್ರೀ ಎಂ. ಯಾಮುನಾಚಾರ್ಯರ ಮನೆಯಲ್ಲಿ ದೆಹಲಿಯ ಶ್ರೀ ರವೀಂದ್ರವರ್ಮರವರು ಸರ್ವೋದಯ ದೃಷ್ಟಿ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಸರ್ವರಿಗೂ ಆಹ್ವಾನವಿದೆ

ಕೊಲೆ ಆಪಾದನೆಯಿಂದ ಖುಲಾಸೆ

ಮೈಸೂರು ೭

ಅಡಿಷನಲ್ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎ. ಎ. ಮಹೀದ್‌ರವರು ಕೊಲೆ ಮೊಕದ್ದಮೆಯೊಂದರಲ್ಲಿ ತೀರ್ಪಿತ್ತು, ಟಿ. ನರಸೀಪುರ ತಾಲ್ಲೂಕು ಕುರುಗನೂರಿನ ಮಲ್ಲೇಗೌಡ ಮತ್ತು ಇತರ ೪ ಜನರನ್ನು ಖುಲಾಸೆ ಮಾಡಿರುತ್ತಾರೆ. ಕಳೆದ ಮಾರ್ಚಿ ೨೬ ರಲ್ಲಿ ಆಪಾದಿತರುಗಳು ಕಬ್ಬನ್ನು ಗಾಣದಲ್ಲಿ ಅರೆಯುತ್ತಿದ್ದ ಅದೇ ಊರಿನ ವೆಂಕಟಯ್ಯ ಎಂಬುವವನನ್ನು ಕೊಲೆ ಮಾಡಿದ್ದರೆಂದು ಆಪಾದಿಸಲಾಗಿತ್ತು.

ಹೈದರಾಬಾದಿನಲ್ಲಿ ಸಾವಿರಾರು ನೌಕರರ ಮುಷ್ಕರ

ಕನಿಷ್ಠ ವೇತನ ಮತ್ತು ತಾತ್ಕಾಲಿಕ ಪರಿಹಾರಕ್ಕಾಗಿ ಒತ್ತಾಯಪಡಿಸಿ ಹೈದರಾಬಾದಿನ ಆರು ಸರ್ಕಾರಿ ಮತ್ತು ಇತರ ಸಂಸ್ಥೆಗಳಲ್ಲಿರುವ ನೌಕರರು ನೆನ್ನೆ ಮುಷ್ಕರ ನಡೆಸಿದರು. ಅದರಲ್ಲಿ ಆರು ಸಾವಿರ ಮಂದಿ ಸೇರಿರುವರೆಂದು ಅಲ್ಲಿನ ಮಜದೂರ್ ಸಂಘದವರೂ, ೪,೦೦೦ ಮಂದಿ ಭಾಗವಹಿಸಿರುವರೆಂದು ಸರ್ಕಾರಿ ಅಧಿಕಾರಿಗಳೂ ತಿಳಿಸಿರುತ್ತಾರೆ.

ಇಸ್ರೇಲ್ ರಾಜ್ಯವು ಆಕ್ರಮಣ ನಡೆಸಿರುವುದಾಗಿ ತೀರ್ಪು

ಕಳೆದ ೨೫-೨೬ನೇ ತಾರೀಖು ರಾತ್ರಿ ಜೋರ್ಡಾನಿನ ಎರಡು ಗ್ರಾಮಗಳಲ್ಲಿ ನಡೆದ ಘರ್ಷಣೆ ಬಗ್ಗೆ ಮಿಶ್ರ ಶಾಂತಿ ಸಮಿತಿಯು ತನಿಖೆ ನಡೆಸಿ, ಇಸ್ರೇಲು ಆಕ್ರಮಣ ನಡೆಸಿ ಆರಂಭ ಮಾಡಿದೆಯೆಂದು ತೀರ್ಪು ಕೊಟ್ಟಿದೆ.

ಬಿ. ಟಿ. ಎಸ್. ನೌಕರರಿಂದ ಮುಷ್ಕರದ ಮತ ಕೇಳಿಕೆ ?

ರಾಷ್ಟ್ರೀಕೃತವಾದ ಬಿ. ಟಿ. ಎಸ್. ಬಸ್ಸು ನೌಕರರ ಸಂಘದ ಸದಸ್ಯರ ಸಭೆಯು ಕಳೆದ ಬುಧವಾರ ನಡೆದು, ಬಿ. ಟಿ. ಎಸ್. ಸರ್ವೀಸಿನಲ್ಲಿ ಕೆಲಸ ಮಾಡುತ್ತಿರುವ ಎಲ್ಲಾ ನೌಕರರನ್ನೂ ಮುಂದುವರಿಸಲು ಸರ್ಕಾರದವರು ಒಪ್ಪದಿದ್ದರೆ ಮುಷ್ಕರ ನಡೆಸುವ ಬಗ್ಗೆ ಕೆಲಸಗಾರರ ಮತವನ್ನು ಕೇಳಿರಿಸಲು ಸಂಘದ ಸಮಿತಿಗೆ ಅಧಿಕಾರವೀಯಲಾಯಿತು.

ದಸರಾಕ್ಕೆ ಬರಲು ಕನ್ನಡ ಪ್ರದೇಶಗಳ ಶಾಸನಸಭಾ ಸದಸ್ಯರಿಗೆ ಆಹ್ವಾನ

ದಸರಾ ಉತ್ಸವಗಳಲ್ಲಿ ಭಾಗವಹಿಸಲು ಬೊಂಬಾಯಿ, ಹೈದರಾಬಾದು, ಮದ್ರಾಸು ಕನ್ನಡ ಭಾಗಗಳ ಮತ್ತು ಕೊಡಗಿನ ಶಾಸನಸಭಾ ಸದಸ್ಯರಿಗೆ ಮೈಸೂರು ಸರ್ಕಾರದವರು ಆಹ್ವಾನವಿತ್ತಿರುವರು

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಗ್ಗೆ ಶ್ರೀಮತಿ ಕೆ. ಪ್ರವಿಶಾಲರವರಿಂದ ದೇವರನಾಮ ಮತ್ತು ಶ್ರೀಮತಿ ಜಯಲಕ್ಷ್ಮಿಯವರಿಂದ ಪುರಂದರದಾಸರ ಕೀರ್ತನೆಗಳೂ, ಸಂಜೆ ಶ್ರೀ ಸಿದ್ದಯ್ಯನವರಿಂದ ಬಸವಣ್ಣನವರ ವಚನ ಮತ್ತು ಕೊಹಿನೂರು ಗಣ್ಣ, ನಿಷಯಾರನ ಕಾಯಕಲ್ಪ ಮತ್ತು ಗಗ್ಗಯ್ಯನ ಗಡಿಬಿಡಿ ಎಂಬ ನಾಟಕಗಳೂ ಏರ್ಪಾಡಾಗಿವೆ

ವಾರ ಭವಿಷ್ಯ

ತಾ|| ೭-೧೦-೫೬ ರಿಂದ ೧೪-೧೦-೫೬ರ ವರೆಗೆ

ಮೇಷ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಶುಭ ಕಾರ್ಯಗಳು ನಡೆಯುವುವು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ವೃಷಭ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಅತೃಪ್ತಿ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ ಪ್ರವಾಸ ಯೋಗ

ಮಿಥುನ —ಆರೋಗ್ಯ ಸಮರ್ಪಕ ಆರ್ಥಿಕ ಸ್ಥಿತಿ ಸಾಧಾರಣ ವೃಥಾ ವ್ಯಯ ಮನಸ್ಸು ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ನಿರುತ್ಸಾಹ ಶುಭ ಕಾರ್ಯಗಳಿಗೆ ಅಡ್ಡಿ

ಕರ್ಕ — ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಪರಿಸ್ಥಿತಿ ಸುಧಾರಿಸುವುದು ಸುವಾರ್ತೆ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ ಶುಭ ಕಾರ್ಯಗಳು ನಡೆಯುವುವು

ಸಿಂಹ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಸಮಸ್ಯೆ ಕೈಗೊಂಡ ಕಾರ್ಯಕ್ಕೆ ವಿಘ್ನ ಹೊಸ ಉದ್ಯಮಕ್ಕೆ ಕೈಹಾಕಬೇಡಿ

ಕನ್ಯಾ — ಆರೋಗ್ಯದ ಬಗ್ಗೆ ಎಚ್ಚರಿಕೆ ಅವಶ್ಯಕ ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ ನೌಕರಿಯಲ್ಲಿ ಕಿರುಕುಳ ಪ್ರವಾಸದಲ್ಲಿ ತೊಂದರೆ

ತುಲಾ — ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ನಿರುತ್ಸಾಹ ಮಿತ್ರರಿಂದ ವಿಚಿತ್ರ ವರ್ತನೆ

ವೃಶ್ಚಿಕ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವೃಥಾ ವಿವಾದ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ಪ್ರಗತಿ ಕಡಿಮೆ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ

ಧನು —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಸುಖಕರ ಪ್ರವಾಸ

ಮಕರ —ಆರೋಗ್ಯ ಸುಧಾರಿಸುವುದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ ಶುಭ ಕಾರ್ಯಗಳು ಜರುಗುವುವು

ಕುಂಭ —ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವೃಥಾ ಕಲಹ ಸಂಭವ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ನಿರುತ್ಸಾಹ ಕೈಗೊಂಡ ಕಾರ್ಯ ವಿಘ್ನ

ಮೀನ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಬಿಕ್ಕಟ್ಟು ಚಿಂತೆ ಶತ್ರುಗಳಿಂದ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ ಉದ್ಯೋಗದಲ್ಲಿ ಸಮಸ್ಯೆ ಮಿತ್ರರಿಂದ ದ್ರೋಹ

ರುಚಿ ಮತ್ತು ಶುಚಿ
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಮನೆಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ
ಪ್ರತಿ ಭಾನುವಾರ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು
(ನಮ್ಮ ಅಂಗಡಿಯ ಶಾಖೆಯನ್ನು ಬೇರೆ ಎಲ್ಲೂ ತೆರೆದಿಲ್ಲ)

ಅಖಿಲ ಮೈಸೂರು ಹಿಂದೀ ಚರ್ಚಾ ಸ್ಪರ್ಧೆಯಲ್ಲಿ ಬಹುಮಾನಿತರು

ಮೈಸೂರು ೬

ನಗರದ ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ಕಳೆದ ಭಾನುವಾರ ಸಹಕಾರ ಭವನದಲ್ಲಿ ಅಖಿಲ ಮೈಸೂರು ಹಿಂದೀ ಜೂನಿಯರ್ ಚರ್ಚಾ ಸ್ಪರ್ಧೆಯು ಶ್ರೀ ಟಿ ಎಸ್ ಸುದರ್ಶನರ ಅಧ್ಯಕ್ಷತೆಯಲ್ಲಿಯೂ, ಸೀನಿಯರ್ ಚರ್ಚಾ ಸ್ಪರ್ಧೆಯು ನಾಗಪುರ ವಿಶ್ವವಿದ್ಯಾನಿಲಯದ ಹಿಂದೀ ಪ್ರೊಫೆಸರ್ ಶ್ರೀ ವಿನಯಮೋಹನ ಶರ್ಮರವರ ಅಧ್ಯಕ್ಷತೆಯಲ್ಲಿಯೂ ನಡೆದುವು ಜೂನಿಯರ್ ಸ್ಪರ್ಧೆಗೆ "ಭಾರತದಲ್ಲಿ ಅನೇಕ ಭಾಷೆಗಳಿರುವುದರಿಂದ ರಾಷ್ಟ್ರದ ಪ್ರಗತಿಗೆ ಧಕ್ಕೆ ತಗಲಿದೆ" ಮತ್ತು ಸೀನಿಯರ್ ಸ್ಪರ್ಧೆಗೆ "ಪ್ರಾಂತಗಳ ಪುನರ್ವಿಂಗಡಣೆಯಿಂದ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾರ್ಯಾನ್ವಿತವಾಗಲು ಧಕ್ಕೆ ತಗಲಿದೆ" ಎಂಬುವು ಚರ್ಚಾ ವಿಷಯವಾಗಿದ್ದುವು ಜೂನಿಯರ್ ಚರ್ಚಾ ಸ್ಪರ್ಧೆಗೆ ಮೈಸೂರು ಮಹಾರಾಜಾ ಕಾಲೇಜಿನ ತೆಲುಗು ವಿಭಾಗದ ಅಧ್ಯಕ್ಷರಾಗಿರುವ ವಿದ್ವಾನ್ ಕೆ ಸುಬ್ಬರಾಮಪ್ಪನವರು ಒಂದು ನಿರಂತರ ಪರ್ಯಾಯ ಫಲಕವನ್ನೂ ಸೀನಿಯರ್ ಚರ್ಚಾ ಸ್ಪರ್ಧೆಗೆ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಎಂ ಆರ್ ಸಿ ಬಸಪ್ಪನವರು ಒಂದು ನಿರಂತರ ಪರ್ಯಾಯ ಫಲಕವನ್ನೂ ದಯಪಾಲಿಸಿದ್ದರು ಜೂನಿಯರ್ ಸ್ಪರ್ಧೆಯ ಫಲಕವು ಇಲ್ಲಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಸ್ಥೆಗೂ, ಸೀನಿಯರ್ ಫಲಕವು ಹಿಂದೀ ಪ್ರಚಾರಕ ವಿದ್ಯಾಲಯ ಸಂಸ್ಥೆಗೂ ದೊರೆತುವು

ಜೂನಿಯರ್ ಸ್ಪರ್ಧೆ ಪ್ರಥಮ ಬಹುಮಾನವು ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ಶ್ರೀ ಕೆ ಡಿ ಮಜುಂದರ್, ೨ನೇ ಬಹುಮಾನವು ತುಮಕೂರಿನ ಹಿಂದೂಸ್ತಾನೀ ಪ್ರಚಾರ ಸಮಿತಿಯ ಶ್ರೀ ಕೆ ಎ ಶ್ರೀನಿವಾಸ್ ೩ನೇ ಬಹುಮಾನವು ನಗರ ಹಿಂದೀ ಪ್ರಚಾರ ಸಭೆಯ ಒಂಟಿಕೊಪ್ಪಲ್ ಕೇಂದ್ರದ ಶ್ರೀಹರಿ ೪ನೇ ಬಹುಮಾನವು ಸೇಂಟ್ ಫಿಲೋಮಿನಾ ಕಾಲೇಜಿನ ಶ್ರೀ ಹರಿರಾವ್ ಎಂಬ ವಿದ್ಯಾರ್ಥಿಗಳಿಗೆ ದೊರಕಿದುವು

ಸೀನಿಯರ್ ಸ್ಪರ್ಧೆಯ ೧ನೇ ಬಹುಮಾನವು ಹಿಂದೀ ಪ್ರಚಾರಕ ವಿದ್ಯಾಲಯದ ಶ್ರೀ ಗಣಪತಿಭಟ್ಟರಿಗೂ ೨ನೆಯದು ನಗರ ಹಿಂದಿ ಪ್ರಚಾರ ಸಭೆಯ ಕೇಂದ್ರ ವಿದ್ಯಾಲಯದ ಶ್ರೀ ರಮಾನಂದ, ೩ನೆಯದು ಪ್ರಚಾರಕ ವಿದ್ಯಾಲಯದ ಶ್ರೀ ಚಿಕ್ಕಲಿಂಗಯ್ಯ ಎಂಬ ವಿದ್ಯಾರ್ಥಿಗಳಿಗೂ ೪ನೇ ಬಹುಮಾನವು ಮಹಾರಾಜಾ ಕಾಲೇಜಿನ ಶ್ರೀಮತಿ ಅಲಮೇಲು ಎಂಬ ವಿದ್ಯಾರ್ಥಿನಿಗೂ ಬಂದುವು

ಕೇಡಿಗೆ ೨ ವರ್ಷ ಸಜಾ

೧೬ ರೂ. ಬೆಲೆಯ ವಸ್ತ್ರಗಳನ್ನು ಕಳವು ಮಾಡಿದ [illegible] ಎಂಬ ಕೇಡಿಗೆ ನಗರ ನ್ಯಾಯಾಧೀಶರು ೨ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ.

ಅಮೋಘ ಪ್ರಾರಂಭ
ಗೋಕಾಕ್ ನಾಟಕ
ಮಂಡಲಿಯವರು
ಮೈಸೂರು ಟೌನ್‌ಹಾಲಿನಲ್ಲಿ
7-10 56ನೇ ಭಾನುವಾರ ರಾತ್ರಿ 10ಕ್ಕೆ
ಬೆಳ್ಳಿ ಚಿಕ್ಕಿ
ಎಂಬ ಸಾಮಾಜಿಕ ನಾಟಕವನ್ನು
ಅಭಿನಯಿಸುವರು
(ಪ್ರತಿ ದಿನ ನಾಟಕವುಂಟು)
ಮ್ಯಾ|| ಬಿ ಜಿ ಮುಂಡೇವರ್,
ಪ್ರಾ|| ಬಿ ಬಿ [illegible]

ಗಾಂಧಿ ಜಯಂತ್ಯುತ್ಸವ

ಮೈಸೂರು ೬

ನಗರದ ಮಹಿಳಾ ಸದನದಲ್ಲಿ ಕಳೆದ ಮಂಗಳವಾರ ಗಾಂಧೀ ಜಯಂತ್ಯುತ್ಸವವು ಶ್ರೀ ಎಸ್ ಶ್ರೀರಂಗಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಸಾಮೂಹಿಕ ಸೂತ್ರ ಯಜ್ಞ, ಪ್ರಾರ್ಥನೆ ಭಜನೆ ಮತ್ತು ಸ್ವಾಗತ ಭಾಷಣವಾದನಂತರ ಒಂದು ವರ್ಷದಲ್ಲಿ ೯೦ ಲಡಿಗಳು ಮತ್ತು ಅದಕ್ಕಿಂತಲೂ ಹೆಚ್ಚಾಗಿ ದಾರ ತೆಗೆದ ಆರು ಮಹಿಳೆಯರಿಗೆ ಬಹುಮಾನಗಳನ್ನು ಹಂಚಲಾಯಿತು ಅಧ್ಯಕ್ಷರು ಮಹಾತ್ಮ ಗಾಂಧೀಜೀಯವರ ಜೀವನವನ್ನೂ, ಅವರು ಸ್ವಾತಂತ್ರ್ಯಗಳಿಸಿ ಕೊಟ್ಟ ರೀತಿಯನ್ನೂ ವಿವರಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು

ರಾಜಧಾನಿಯ ಹಿಂದಿ ಪ್ರಚಾರಕ ವಿದ್ಯಾಲಯದಲ್ಲಿ ಉತ್ಸವದ ಅಂಗವಾಗಿ ಶಾರದಾ ವಿಲಾಸ ಹೈಸ್ಕೂಲಿನ ಅಧ್ಯಾಪಕ ಶ್ರೀ ಕೆ ಗಣಪತಿಭಟ್ಟರು ಗಾಂಧಿ ಲೀಲಾ ವಿಲಾಸ ಎಂಬ ಕೀರ್ತನೆಯನ್ನು ನಡೆಸಿದರು

ಚಾಮುಂಡಿಪುರದ ಗಣೇಶ ಮಿತ್ರ ಮಂಡಲಿಯವರು ಜಯಂತಿ ಅಂಗವಾಗಿ ಅನ್ನದಾನವನ್ನು ಏರ್ಪಡಿಸಿದ್ದರು ಶ್ರೀ ಆರ್ ರಂಗಪ್ಪನವರು ೨೦ ರೂ ಗಳನ್ನು ಸಂಘಕ್ಕೆ ಕೊಟ್ಟಿದ್ದರು

ಚಮಾಲ್ ಮರದ ಬೀದಿಯಲ್ಲಿರುವ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಜಯಂತಿ ಉತ್ಸವವು ಶ್ರೀ ಡಿ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ತರಹೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ ಎಸ್ ಲಕ್ಷ್ಮಣಅಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ ಮೈಸೂರು (Est 1911

ಆನೆಯ ವ್ಯಾಧಿ ನಿವಾರಣೆಗಾಗಿ ನರ ಬಲಿ

ಕೇರಳದ ಗುರುವಾಯೂರು ಕ್ಷೇತ್ರದ ದೇವಾಲಯದ ಆನೆಗೆ ಬಂದ ವ್ಯಾಧಿಯ ನಿವಾರಣೆಗಾಗಿ ಒಬ್ಬ ಸಾಧುವನ್ನು ಬಲಿ ಕೊಟ್ಟ ಪ್ರಸಂಗವು ವರದಿಯಾಗಿದೆ ಆನೆಯ ಬಗ್ಗೆ ಮಮತೆ ಹೊಂದಿದ್ದ ಅಪ್ಪಾಸ್ವಾಮಿ ಎಂಬ ತನು ಆನೆಗೆ ಕೀಲಿನ ವಾಯು ರೋಗವು ಬಂದುದನ್ನು ಕಂಡು ನರಬಲಿ ಕೊಟ್ಟರೆ ವ್ಯಾಧಿಯು ನಿವಾರಣೆಯಾಗುವುದೆಂದು ನಂಬಿ ದೇವಸ್ಥಾನದ ಬಳಿ ಭಿಕ್ಷುಕ [illegible] ಎಂಬ ಒಬ್ಬ ಸಾಧುವನ್ನು ಕಳೆದ [illegible] ರಾತ್ರಿ ಕೊಲೆ ಮಾಡಿ, ರುಂಡಮುಂಡಗಳೆರಡನ್ನೂ ಬೇರೆಬೇರೆ ಸ್ಥಳಗಳಲ್ಲಿ ಹೂತಿಟ್ಟು ಅವುಗಳನ್ನು ಅನಂತರ ಬಲಿಹರಣ ಕಾರ್ಯಕ್ಕೆ ಉಪಯೋಗಿಸಲು ಹವಣಿಸಿದ್ದನು

ತರುವಾಯ ಸಾಧುವು ಮಲಗುವ ಮಾಮೂಲು ಸ್ಥಳದಲ್ಲಿ ಅವನು ಇಲ್ಲದಿದ್ದ ಬಗ್ಗೆ ಅನುಮಾನ ಬಂದು ಅದೇ ಸ್ಥಳದಲ್ಲಿ ಕಂಡ ರಕ್ತದ ಕಲೆಗಳ ಬಗ್ಗೆ ಸಂಶಯಗೊಂಡು ಪೋಲೀಸರು ಅಪ್ಪಾಸ್ವಾಮಿಯನ್ನು ಬಂಧಿಸಿ ಹೂತಿಡಲಾಗಿದ್ದ ಸಾಧುವಿನ ರುಂಡಮುಂಡಗಳನ್ನು ಪತ್ತೆ ಹಚ್ಚಿ ವಶಕ್ಕೆ ತೆಗೆದುಕೊಂಡರು ಎರಡು ದಿನಗಳನಂತರ ಆನೆಯೂ ಮೃತಪಟ್ಟಿತು

○ಭಾರತದ ಉಪಾಧ್ಯಕ್ಷ ರಾಧಾಕೃಷ್ಣರವರಿಗೆ ಟೋಕಿಯೊ ನಗರದ ವಿಶೇಷ ಗೌರವ ನಾಗರಿಕತನವನ್ನು ಕೊಡಲಾಗಿದೆ ಈ ಗೌರವವನ್ನು ಭಾರತೀಯರಿಗೆ ತೋರುತ್ತಿರುವುದು ಇದೇ ಮೊದಲು

LAW COLLEGE,
MYSORE

Wanted a Librarian on Rs 30 with Rs 15 D A Only smart people (with Intermediate) may apply in person on or before 15 10 56

T S [illegible],
Principal

Edited Printed and Published by A R Nagarajan at Sadhvi Press D Subbiah Road, Mysore

ಮೈಸೂರಿಗೆ ಬಂದಾಗ ಉತ್ತಮವಾದ ವಸತಿ ಸೌಕರ್ಯಕ್ಕೆ
ವುಡ್‌ಲ್ಯಾಂಡ್ಸ್ ಹೋಟೇಲ್
ಶ್ರೀ
ಭೋಜನ ಮತ್ತು ವಸತಿ ಗೃಹ
ವುಡ್‌ಲ್ಯಾಂಡ್ಸ್ ಚಿತ್ರ ಮಂದಿರ ಕರ್ಜನ್ ಪಾರ್ಕ್ ರಸ್ತೆ ಮೈಸೂರು
ಎಲ್ಲಾ ಕಾಲದಲ್ಲಿ ಕೊಠಡಿಗಳು ದೊರೆಯುತ್ತವೆ ಮುಂಚಿತವಾಗಿಯೇ ರಿಜರ್ವ್
ಮಾಡುವ ವ್ಯವಸ್ಥೆ ಮಾಡಲಾಗಿದೆ
ವಿವರಗಳಿಗೆ ಮ್ಯಾನೇಜರ್. [illegible] [[illegible] 871

ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್,

917 ಲಕ್ಷ್ಮೀಪುರಂ ಮೈಸೂರು

ಪ್ರಕಟಣೆ

ಈ ಕಂಪೆನಿಯ XIII ಜನರಲ್ ಬಾಡಿ ಮೀಟಿಂಗು ಹಿಂದಿನ ನೋಟೀಸಿನಂತೆ 8 10-1956ನೇ ಸೋಮವಾರ ನಡೆಯಬೇಕಾಗಿದ್ದುದು ಕಾರಣಾಂತರದಿಂದ 30-10-56ನೇ ಮಂಗಳವಾರಕ್ಕೆ ಮುಂದುವರಿಸಲ್ಪಟ್ಟಿದೆ ಅಲಾಯಿದ ನೋಟೀಸು ಕಳುಹಿಸಲಾಗುತ್ತೆ

6-10 1956

ಮೈ. [illegible]
ಮ್ಯಾನೇಜಿಂಗ್ ಡೈರೆಕ್ಟರ್

ನ್ಯೂ ಚಾಮುಂಡೇಶ್ವರಿ ಕೆಫೆ
ಶ್ರೀ
● ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
ಇರ್ವಿನ್ ರಸ್ತೆ, ಮೈಸೂರು
ನೂತನವಾಗಿ ಪ್ರಾರಂಭಿಸುವ ಫಲಾಹಾರ ಮಂದಿರಕ್ಕೂ, ಮೈಸೂರು ಮತ್ತು ಬೊಂಬಾಯಿ ರೀತಿಯ ಸುಸಜ್ಜಿತವಾದ ಕೊಠಡಿಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ಒಳ್ಳೆ ಬೆಳಕುಗಳುಳ್ಳ ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ ಸಿ ಬಿ ಎಂ ಚಂದ್ರಯ್ಯ, ಪ್ರೊಪ್ರೈಟರ್ [[illegible] ನಂ 341

ರಿಜಿಸ್ಟ್ರೀ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಒಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಕೆಮ್ಮು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಶೆಟ್ಟಿ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1 [illegible]
[illegible] ರಸ್ತೆ,
ಬೆಂಗಳೂರು -2

ಂಪುಟ . ೧೫] SADHVI : MONDAY 8—10—1956 ಮೈಸೂರು : ಸೋಮವಾರ ೮—೧೦—೧೯೫೬ [ಸಂಚಿಕೆ : ೩೪

ಸ್ಕೂಲ್ ಫೈನಲ್ ಪರೀಕ್ಷೆ ೫ ವಾರ ಮುಂದೆ ಹೋಗುವುದು

ಎಸ್. ಎಸ್. ಎಲ್. ಸಿ. ಪರೀಕ್ಷೆ ಐದು ವಾರ ಮುಂದಕ್ಕೆ

ಮೈಸೂರು ೬

ಇದೇ ಡಿಸೆಂಬರ್ ೭ನೇ ತಾರೀಖಿನಿಂದ ಆರಂಭವಾಗುವಂತೆ ನಿಶ್ಚಯಿಸಲಾಗಿದ್ದ ಎಸ್ ಎಸ್ ಎಲ್ ಸಿ ಪಬ್ಲಿಕ್ ಪರೀಕ್ಷೆಗಳನ್ನು ಜನವರಿ ೧೪ರಿಂದ ನಡೆಸಲು ನಿರ್ಧರಿಸಲಾಗಿದೆಯೆಂದು ಗೊತ್ತಾಗಿದೆ ಶಾಲಾ ವರ್ಷವನ್ನು ಪುನಃ ಜೂನಿನಿಂದಲೇ ಆರಂಭಿಸಬೇಕೆಂದು ನಿರ್ಧರಿಸಿರುವುದರಿಂದ ಈ ಕಾರ್ಯಕ್ರಮವನ್ನು ಕೈಗೊಳ್ಳಲಾಗುವುದು ಇದೇ ರೀತಿ ಫೆಬ್ರವರಿ ೧೫ರಿಂದ ಆರಂಭವಾಗಬೇಕಾಗಿದ್ದ ವಿಶ್ವವಿದ್ಯಾನಿಲಯದ ಪರೀಕ್ಷೆಗಳೂ ಒಂದು ತಿಂಗಳು ಮುಂದಕ್ಕೆ ಹೋಗಬಹುದೆಂದು ಹೇಳಲಾಗಿದೆ ಈ ಬಗ್ಗೆ ಶೀಘ್ರದಲ್ಲಿಯೇ ಸರ್ಕಾರದ ಆಜ್ಞೆ ಹೊರಬೀಳಲಿದೆ

ಆಯುರ್ವೇದ ಕಾಲೇಜಿಗೆ ಹೆಚ್ಚಿನ ಅಧ್ಯಾಪಕರು

ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿಗೆ ಐವರು ಅಧ್ಯಾಪಕರನ್ನು ನೇಮಿಸಿಕೊಳ್ಳಲು ಸರ್ಕಾರದವರು ಆಜ್ಞೆ ಮಾಡಿದ್ದಾರೆ ಅವರುಗಳಿಗೆ ತಲಾ ೫೦ ರೂ ಭತ್ಯವನ್ನು ನೀಡಲಾಗುವುದು ಶ್ರೀ ಎಸ್ ಎಲ್ ಭಟ್ಟಾಚಾರ್ಯರನ್ನು ದ್ರವ್ಯಗುಣ ವಿಭಾಗದ ಪಾರ್ಟ್ ಟೈಂ ಅಧ್ಯಾಪಕರಾಗಿ ತೆಗೆದುಕೊಳ್ಳಲಾಗಿದೆ ಮೆಡಿಕಲ್ ಕಾಲೇಜಿನ ಇಬ್ಬರು ಪಾರ್ಟ್ ಟೈಂ ಅಧ್ಯಾಪಕರನ್ನು ಫಾರ್ಮಕಾಲಜಿ ಮತ್ತು ಆರೋಗ್ಯ ವಿಭಾಗಗಳಿಗಾಗಿಯೂ, ಮತ್ತೊಬ್ಬರನ್ನು ಫೋರೆನ್ಸಿಕ್ ಮೆಡಿಸಿನ್ ವಿಭಾಗಕ್ಕೂ ತೆಗೆದುಕೊಳ್ಳಲಾಗುವುದು ಅಲ್ಲದೆ ಪ್ರಯೋಗ ಶಾಲೆಗೆ ಒಬ್ಬ ಪರಿಚಾರಕರನ್ನು ೩೦-೩-೫೦ ರೂ ಮೇಲೆ ನೇಮಿಸಲಾಗುವುದು

ವಸ್ತು ಪ್ರದರ್ಶನದಲ್ಲಿ ಜೇಬುಗಳ್ಳತನ

ನೆನ್ನೆ ವಸ್ತು ಪ್ರದರ್ಶನದಲ್ಲಿ ಮಂಡಿ ಮೊಹಲ್ಲಾ ಹಳೇ ಕೇರಿ ರಸಿಕ್ ಅಹಮದ್ ಎಂಬುವನು ಶ್ರೀ ಮೋತೀಲಾಲ್ ಎಂಬುವರ ಜೇಬಿನಲ್ಲಿ[illegible] ಮುದ್ರಿಕ ಚೀಲವನ್ನು ಕಳುವು ಮಾಡುತ್ತಿದ್ದಾಗ ಮಂಡಿ ಪೊಲೀಸರು ಬಂಧಿಸಿದರು ಪರ್ಸಿನಲ್ಲಿ ೧೫ ರೂ ಗಳಿದ್ದುವು

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಗ್ಗೆ ಶ್ರೀಮತಿಯರಾದ ಕೆ ಆರ್ ಸೀತಾಲಕ್ಷ್ಮಿ ಮತ್ತು ಸಿ ಆರ್ ಲಕ್ಷ್ಮಿಯವರ ಗಾಯನವೂ, ಸಂಜೆ ವಿ ಎಂ ಇಂದಿರಾಬಾಯಿಯವರಿಂದ ಭಾರತ ವಾಚನ, ಹೊಸಕೋಟೆ ಪಾರ್ಟಿಯಿಂದ ಕಂಸಾಳೆ ಕುಣಿತ, ಶ್ರೀಮತಿ ಶಾರದಮ್ಮನವರ ಸಂಗೀತ, ಆಟಂ ಬಾಂಬ್, ಋಣಾನುಬಂಧ ಎಂಬ ನಾಟಕಗಳೂ ಮತ್ತು ಕೊಡಗು ಹಿಂದಿ ಪ್ರಚಾರ ಸಮಿತಿಯವರಿಂದ ನರ್ತನವೂ ಇವೆ

ನೇಪಾಳಕ್ಕೆ ಚೀನಾದಿಂದ ೬ ಕೋಟಿ ರೂ. ಸಹಾಯ

ಬರುವ ೩ ವರ್ಷಗಳಲ್ಲಿ ಚೀನಾವು ನೇಪಾಳಕ್ಕೆ ೬ ಕೋಟಿ ರೂ ಗಳ ಸಹಾಯವನ್ನು ಕೊಡಲಿದೆ ಈ ಬಗ್ಗೆ ಎರಡು ರಾಷ್ಟ್ರಗಳೂ ನೆನ್ನೆ ಪೀಕಿಂಗ್‌ನಲ್ಲಿ ಆರ್ಥಿಕ ಒಪ್ಪಂದವಾಯಿತು

ಡಿವಿಜನಲ್ ಕಮಿಷನರುಗಳ ನೇಮಕ ತಾತ್ಕಾಲಿಕ

ಕೇಂದ್ರ ಮಂತ್ರಿ ದಾತಾರ್‌ರವರ ಹೇಳಿಕೆ

ಶಿವಮೊಗ್ಗದ ಪೌರಸಭೆಯವರು ನೆನ್ನೆ ಇತ್ತ ಸತ್ಕಾರ ಕೂಟದಲ್ಲಿ ಕೇಂದ್ರ ಗೃಹ ಶಾಖಾ ಮಂತ್ರಿ ಬಿ ಎನ್ ದಾತಾರ್‌ರವರು ಭಾಷಣ ಮಾಡಿ ನೂತನ ಮೈಸೂರು ಸಂಸ್ಥಾನದ ನಾಲ್ಕು ವಿಭಾಗಗಳ ಕಮಿಷನರ್ ಗಳ ನೇಮಕವು ತಾತ್ಕಾಲಿಕವೆಂದೂ [illegible] ಬಗ್ಗೆ [illegible] ದೂ, ಈ ನೇಮಕ [illegible] ಕ್ಕಾಗಿಯೇ [illegible] ಜಿಲ್ಲೆಗಳ ಗಡಿ ಪ್ರಶ್ನೆ [illegible] ಮತ್ತು ಮಲೆನಾಡಿನ ಅಭಿವೃದ್ಧಿ ಪ್ರಶ್ನೆ [illegible] ಸ ಮಂತ್ರಿಗಳು [illegible] ವರು ಹೇಳುತ್ತ ಮಲೆನಾಡಿನ ಅಭಿವೃದ್ಧಿಗೆ ಹೆಚ್ಚು ಗಮನವೀಯಲಾಗುವುದೆಂದೂ [illegible] ಭರವಸೆಯಿತ್ತರು ಮಲೆನಾಡಿನ ಅಭಿವೃದ್ಧಿಗಾಗಿ ಒಂದು ಸಮಿತಿಯನ್ನು [illegible] ಅವರು ಸೂಚಿಸಿದರು

ಸಂಸ್ಕೃತ ವಿದ್ಯಾಭ್ಯಾಸದ ಪರಿಶೀಲನೆಗಾಗಿ ಸಮಿತಿ

ಸಂಸ್ಕೃತ ವಿದ್ಯಾಭ್ಯಾಸವನ್ನು ಎಲ್ಲ ದೃಷ್ಟಿಯಿಂದಲೂ ಪರಿಶೀಲಿಸುವ ಬಗ್ಗೆ ಭಾರತ ಸರ್ಕಾರದವರು ಪಶ್ಚಿಮ ಬಂಗಾಳ ವಿಧಾನ ಪರಿಷತ್ತಿನ ಅಧ್ಯಕ್ಷ ಡಾ|| ಸುನಿಲ್‌ಕುಮಾರ್ ಚಟರ್ಜಿಯವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುತ್ತಾರೆ ಅದರಲ್ಲಿ ಬೆಂಗಳೂರಿನ ಶಂಕರ ಮಠದ ಪಂಡಿತರಾದ ಡಾ|| ವಿ|| ಎಸ್ ರಾಮಚಂದ್ರ ಶಾಸ್ತ್ರಿಯವರೂ ಇರುವರು

ಪ್ರತಿ ಜಿಲ್ಲಾ ಕೇಂದ್ರಕ್ಕೂ ವಿಮಾನ ಸಂಪರ್ಕ

ದ್ವಿತೀಯ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ಪ್ರತಿ ಜಿಲ್ಲಾ ಕೇಂದ್ರಕ್ಕೂ ವಿಮಾನ ಸಂಪರ್ಕವನ್ನು ಏರ್ಪಡಿಸಲಾಗುವುದೆಂದು ಕೇಂದ್ರ ಗೃಹ ಶಾಖಾ ಮಂತ್ರಿ ಬಿ ಎನ್ ದಾತಾರ್‌ರವರು ತಿಳಿಸಿರುತ್ತಾರೆ

ಮುರಾರ್ಜಿ ದೇಸಾಯರ ಮೇಲಿನ ಮೊಕದ್ದಮೆ ವಜಾ

ಕಳೆದ ಆಗಸ್ಟ್ ೧೧ರಂದು ಕಲೋಲ್ ಎಂಬಲ್ಲಿ ಪೊಲೀಸರು ಗುಂಡು ಹಾರಿಸಿದುದಕ್ಕಾಗಿ ಯೋಗಾನಂದ ಎಂಬುವರೊಬ್ಬರು ಅಹಮದಾಬಾದು ನ್ಯಾಯಾಧೀಶರ ಕೋರ್ಟಿನಲ್ಲಿ ಬೊಂಬಾಯಿಯ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯ್ ಮತ್ತು ೧೩ ಮಂದಿ ಪೊಲೀಸರ ಮೇಲೆ ಹೂಡಿದ್ದ ಮೊಕದ್ದಮೆಯು ವಜಾ ಆಗಿದೆ ಮುರಾರ್ಜಿ ದೇಸಾಯರು ಗುಂಡು ಹಾರಿಸಲು ಹೇಗೆ ಸಹಾಯವಾದರೆಂಬುದಕ್ಕೆ ರುಜುವಾತಿಲ್ಲವೆಂದು ನ್ಯಾಯಾಧೀಶರು ತಿಳಿಸಿದ್ದಾರೆ

ತಂತಿ ಕಛೇರಿಯಲ್ಲಿ ಟೆಲಿಪ್ರಿಂಟರ್ ಸ್ಥಾಪನೆ

ನಗರದ ತಂತಿ ಕಛೇರಿಯಲ್ಲಿ ಇದೇ ಮೊದಲಿಗೆ ಟೆಲಿಪ್ರಿಂಟರನ್ನು ಏರ್ಪಡಿಸಲಾಗಿದೆ

ನೆಹರೂರವರಿಂದ ನೂತನ ಆಂಧ್ರ ಸಂಸ್ಥಾನದ ಪ್ರಾರಂಭೋತ್ಸವ

ನೂತನ ಆಂಧ್ರ ಸಂಸ್ಥಾನದ ಪ್ರಾರಂಭೋತ್ಸವವನ್ನು ನವೆಂಬರ್ ೧ರಂದು ನೆಹರೂರವರು ಹೈದರಾಬಾದಿನಲ್ಲಿ ನೆರವೇರಿಸುವರೆಂದು ವಿಸ್ತೃತ ತೆಲುಗು ಸಂಸ್ಥಾನದ ಮಂತ್ರಿ[illegible] ಪ್ರಮಾಣ ವಚನದ ಸ್ವೀಕರಣ [illegible] ಹೈದರಾಬಾದು ನಗರವು ನೂತನ ಸಂಸ್ಥಾನದ ರಾಜಧಾನಿಯಾಗುವುದು ಅಲ್ಲಿಗೆ ಆಂಧ್ರ ಸರ್ಕಾರದ ಕಛೇರಿಯನ್ನು ವರ್ಗಾಯಿಸಲಾಗುವುದು ಕರ್ನೂಲಿನಲ್ಲಿರುವ ಸರ್ಕಾರಿ ಕಛೇರಿಗಳನ್ನು ಈ ತಿಂಗಳು ೩೧ ರಂದು ಮುಚ್ಚಲಾಗುವುದು

ಮದ್ರಾಸು ಪೊಲೀಸರಿಂದ ರಾಷ್ಟ್ರಾಭಿವೃದ್ಧಿ ಕಾರ್ಯ

ಮದ್ರಾಸು ಪ್ರಾಂತ್ಯದ ಪ್ರತಿ ಡಿಸ್ಟ್ರಿಕ್ಟಿನಲ್ಲೂ ಒಂದೊಂದು ಹಳ್ಳಿಯಲ್ಲಿ ಪೊಲೀಸರ ಸಹಾಯದಿಂದ ಅಭಿವೃದ್ಧಿ ಕಾರ್ಯವನ್ನು [illegible] ಸ[illegible] ನಿರ್ಧರಿಸಿರುತ್ತಾರೆ [illegible] ತಾರೀಖಿನಿಂದ ಈ ಕೆಲಸವು ಆರಂಭವಾಗುವುದು ಸಾರ್ವಜನಿಕ ಅಭಿವೃದ್ಧಿಯಲ್ಲಿ ಪೊಲೀಸರು ಆಸಕ್ತಿ ತೋರಿಸುವರೆಂಬುದನ್ನು ಪ್ರದರ್ಶಿಸಲು ಈ ಕ್ರಮ ಕೈಗೊಳ್ಳಲಾಗುವುದು ಹೈದರಾಬಾದಿನಲ್ಲಿ ಈಗ ಈ ಏರ್ಪಾಡು ಇದೆ

ಮನೆ ಮೇಲ್ಛಾವಣಿ ಕುಸಿದು ೯ ಮಂದಿಯ ಮರಣ

ಕಳೆದ ಶುಕ್ರವಾರ ಮಥುರಾದಲ್ಲಿ ನಡೆದ ರಾಮಲೀಲಾ ಮೆರವಣಿಗೆಯನ್ನು ಮನೆಯ ಮೇಲ್ಛಾವಣಿ ಮೇಲೆ ಹತ್ತಿ ನೋಡುತ್ತಿದ್ದಾಗ, ಛಾವಣಿಯು ಕುಸಿಯಲಾಗಿ ಅದರ ಮೇಲಿದ್ದ ೯ ಜನರು ಮೃತಪಟ್ಟು ೫೦ ಮಂದಿಗೆ ಗಾಯವಾಯಿತು.

ಕೆ. ಹನುಮಂತಯ್ಯನವರಿಗೆ ಅಭಿನಂದನಾ ಪತ್ರ

ಹೊಳೇನರಸೀಪುರದ ದೇವಾಂಗ ಯುವಜನ ಬಳಗದವರು ಇದೇ ಗುರುವಾರ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರಿಗೆ ಅಭಿನಂದನಾ ಪತ್ರವನ್ನು ಸಮರ್ಪಿಸುವರು ಶ್ರೀ ಹನುಮಂತಯ್ಯನವರು ಯುವಜನ ಬಳಗದ ಆರಂಭ ಭಾಷಣ ಮಾಡುವರು ಚಿಕ್ಕನಾಯಕನಹಳ್ಳಿ ವಿದ್ಯಾಪೀಠದ ಮುಖ್ಯೋಪಾಧ್ಯಾಯರಾದ ಶ್ರೀ ಸಿ ಟಿ ಈಶ್ವರರವರು ಅಧ್ಯಕ್ಷತೆ ವಹಿಸುವರು

ಇಂದಿನಿಂದ ನಗರದಲ್ಲಿ ೧೦ ಅಕ್ಕಿ ಡಿಪೋಗಳ ಆರಂಭ

ರೂಪಾಯಿಗೆ ೩ ಸೇರಿನಂತೆ ಅಕ್ಕಿಯನ್ನು ಮಾರಲು ಸರ್ಕಾರದವರು ಏರ್ಪಡಿಸಿರುವ ವ್ಯವಸ್ಥೆಯ ಪ್ರಕಾರ ಸಹಕಾರ ಸಂಘಗಳೂ ಸೇರಿ, ಇದುವರೆಗೆ ನಗರದಲ್ಲಿರುವ ೨೭ ಡಿಪೋಗಳ ಜೊತೆಗೆ ಇಂದಿನಿಂದ ಇನ್ನೂ ೧೦ ಡಿಪೋಗಳನ್ನು ತೆರೆಯಲಾಗುವುದೆಂದು ಜಿಲ್ಲಾಧಿಕಾರಿಗಳು ಇಂದು ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು ಪ್ರತಿ ಕುಟುಂಬಕ್ಕೆ ವಾರಕ್ಕೆ ೧೨ ಸೇರಿನಂತೆ ಅಕ್ಕಿಯನ್ನು ಒದಗಿಸಲಾಗುವುದು

ವಿಶ್ವಸಂಸ್ಥೆ ಮತ್ತು ಅರಬ್ಬರ ಐಕ್ಯತೆಯ ಸತ್ವ ಪರೀಕ್ಷೆ

ಸೂಯೆಜ್ ಬಗ್ಗೆ ಈಜಿಪ್ಟಿನ ಅಧ್ಯಕ್ಷ ನಾಸೆರರ ಹೇಳಿಕೆ

ಈಜಿಪ್ಟಿನ ಅಧ್ಯಕ್ಷ ನಾಸೆರರು ಸೂಯೆಜ್ ವಿಷಯವನ್ನು ಪ್ರಸ್ತಾಪಿಸಿ, ವಿಶ್ವ ಸಂಸ್ಥೆಯ ಮುಂದೆ ಬಂದಿರುವ ಈ ಪ್ರಶ್ನೆಯು ಸಂಸ್ಥೆಯ ಸತ್ವ ಪರೀಕ್ಷೆಯು ಒದಗಲಾಗಿ ಪರಿಣಮಿಸಿದೆಯೆಂದು ತಿಳಿಸಿರುತ್ತಾರೆ ಸಂಸ್ಥೆಯು ತನ್ನ ತತ್ವಗಳು ಮತ್ತು ವಿಶ್ವದ [illegible]ಗಳನ್ನು ಕಾಪಾಡಬೇಕು ಅಥವಾ ಹಿಂದೆ ಇದ್ದ ಲೀಗ್ ಆಫ್ ನೇಷನ್ಸಿನಂತೆ ಅವಸಾನ ಹೊಂದಬೇಕು-ಎಂದು ಅವರು ಅಭಿಪ್ರಾಯಪಟ್ಟಿದ್ದಾರೆ ಅರಬ್ಬರ ರಾಷ್ಟ್ರೀಯತೆ ಮತ್ತು ಐಕ್ಯತೆಗೂ ಇದೊಂದು ಸತ್ವ ಪರೀಕ್ಷೆಯಾಗಿದೆಯೆಂದು ಅವರು ತಿಳಿಸಿರುವರು

ಅಣು ಶಸ್ತ್ರ ಪ್ರಯೋಗವನ್ನು ಅಮೆರಿಕಾ ನಿಲ್ಲಿಸುವುದಿಲ್ಲ

ಅಧ್ಯಕ್ಷ ಐಸೆನ್‌ಹೋವರರ ಹೇಳಿಕೆ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಒಂದು ಹೇಳಿಕೆಯಿತ್ತು, ಅಣು ಶಸ್ತ್ರಗಳ ಪರೀಕ್ಷಾ ಪ್ರಯೋಗವು ತಮ್ಮ ದೇಶದ ರಕ್ಷಣಾ ಕಾರ್ಯಕ್ರಮದಲ್ಲಿ ಅತ್ಯಂತ ಜರೂರಾದ ಭಾಗವೆಂದು ತಿಳಿಸಿರುತ್ತಾರೆ ಈ ವಿಚಾರವನ್ನು ಚುನಾವಣೆಯ ಮತ್ತು ರಾಜಕೀಯ ಪ್ರಶ್ನೆಯಾಗಿ ಮಾಡುವುದು ಸರಿಯಲ್ಲವೆಂದು ಅವರು ಹೇಳಿರುತ್ತಾರೆ ಅಲ್ಲಿನ ಡೆಮೊಕ್ರಾಟ್ ಪಕ್ಷದ ನಾಯಕ ಅಡ್ಲೈ ಸ್ಟೀವನ್‌ಸನ್ನರು ಈ ಪ್ರಯೋಗಗಳು ನಿಲ್ಲಬೇಕೆಂದು ಸೂಚಿಸಿದ್ದರು

ರಾಗಿಕಾಳು ಜೂಜಾಡುತ್ತಿದ್ದವರಿಗೆ ಶಿಕ್ಷೆ

ಮಂಡಿ ಮೊಹಲ್ಲಾ ಮುನ್ಸಿಪಲ್ ಪಾರ್ಕ್ ಎಳೆ ಬಾಳು ಮತ್ತು ೮ ಜನರು ರಾಗಿಕಾಳು ಜೂಜಾಡುತ್ತಿದ್ದುದನ್ನು ಮಂಡಿ ಪೊಲೀಸರು ಪತ್ತೆ ಹಚ್ಚಿ ಅವರ ಬಳಿ ಇದ್ದ ರೂ ೧೧-೧೪-೦ ಅನ್ನು ವಶಪಡಿಸಿಕೊಂಡು ಹೂಡಿದ್ದ ಮೊಕದ್ದಮೆಯಲ್ಲಿ ಪ್ರಥಮ ನ್ಯಾಯಾಧೀಶರು ಈ ದಿನ ಆಪಾದಿತರುಗಳಿಗೆ ತಲಾ ೨೫ ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿರುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವೀಣೆ ೭.೧೫ ದೀಕ್ಷಿತರ ಕ[illegible] ಕೀರ್ತನೆ ೭ ೩೦ [illegible] ೮ ೧೫ ಪದ್ಮಾವತಿ ಸಾಲಿಗ್ರಾಂ-ಸಂಗೀತ ಮಧ್ಯಾಹ್ನ ೧೨ ಎನ್ ಚೊಕ್ಕಮ್ಮ-ವೀಣೆ ಮತ್ತು ಸಂಗೀತ ೧-೪೫ ವನಿತಾವಿಹಾರ. ೧ ೫೦ [illegible] ಚಿನ್ನಮ್ಮ-ಸಂಗೀತ. [illegible] ರಿಕಾರ್ಡು ಸಂಜೆ ೫ ೩೦-ಗಾಯನ ೬-೧೫ ಅನ್ನಪೂರ್ಣ ರಘುಪತಿಶಾಸ್ತ್ರಿ-ಕಾವ್ಯವಾಚನ ೬ ೩೦ ರೇಡಿಯೋ ಭಾಷಣ ಮತ್ತು ಶಬ್ದ ಚಿತ್ರ ೭ ಕಥಾ ಸಪ್ತಾಹ ೮ ೧೫ ಟಿ. ನಾಗಮ್ಮ ಸಂಗೀತ ೮ ೩೦ ಟಿ ಚೌಡಯ್ಯ ಮತ್ತು ವಾದ್ಯವೃಂದ ಪಿಟೀಲು ೯ ೧೫ ಮಂದಿರ ಪ್ರವೇಶ ನಾಟಕ ೧೦ ಚಿತ್ರ ಸಂಗೀತ ೧೦-೧೫ ಉರ್ದು ಗೀತೆ

ವಸ್ತು ಪ್ರದರ್ಶನದಲ್ಲಿ ಮೆಡಿಕಲ್ ಕಾಲೇಜಿನವರ ವಿಭಾಗ

ಮೈಸೂರು ೮

ಈ ಸಾರಿಯ ನವರಾತ್ರಿ ವಸ್ತು ಪ್ರದರ್ಶನದಲ್ಲಿ ಮೆಡಿಕಲ್ ಕಾಲೇಜಿನವರು ತಮ್ಮದೇ ಆದ ಒಂದು ಶಾಖೆಯನ್ನು ಏರ್ಪಡಿಸಿರುತ್ತಾರೆ ಇದರಲ್ಲಿ ಮನುಷ್ಯನ ಉತ್ಪತ್ತಿ, ಬೆಳವಣಿಗೆ, ರೋಗಾದಿಗಳು ಮತ್ತು ಅವುಗಳ ಚಿಕಿತ್ಸಾ ಕ್ರಮಗಳನ್ನು ಹೃದಯಂಗಮವಾಗಿ ನಕ್ಷೆ ಮತ್ತು ಮಾದರಿಗಳ ಮೂಲಕ ತೋರಿಸಲಾಗುತ್ತದೆ. ಕಾಲೇಜಿನ ವಿದ್ಯಾರ್ಥಿ ವಿದ್ಯಾರ್ಥಿನಿಯರು ಕೇವಲ ಹತ್ತು ದಿನಗಳಲ್ಲಿ ಇದರ ವ್ಯವಸ್ಥೆಯನ್ನು ಮಾಡಿರುವರು ಈ ಪ್ರದರ್ಶನವನ್ನು ನೋಡುವುದರಿಂದ ಶರೀರ ರಚನೆಯ ಪರಿಜ್ಞಾನವುಂಟಾಗುವುದಲ್ಲದೆ, ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಲು ವಿಶೇಷ ಸಹಾಯವಾಗುವುದು ಇಲ್ಲಿ ಪ್ರವೇಶ ಧನ ಕೇವಲ ೩ ಆಣೆ ಇದಲ್ಲದೆ [illegible] ಆರೋಗ್ಯ ಪರೀಕ್ಷೆಗಳನ್ನೂ ಸಹ ನಡೆಸಲಾಗುವುದು ಇವುಗಳಿಂದ ಬರತಕ್ಕ ಹಣವನ್ನು ಉಪಯೋಗಿಸಿ ಒಂದು ಮೋಟಾರು ವ್ಯಾನನ್ನು ತೆಗೆದು ಗ್ರಾಮಾಂತರ ಪ್ರದೇಶಗಳಲ್ಲಿ ಉಚಿತ ವೈದ್ಯ ಸಹಾಯವನ್ನು ಮಾಡಲು ವಿದ್ಯಾರ್ಥಿಗಳು ಆಲೋಚಿಸುತ್ತಾರೆ ಸಾರ್ವಜನಿಕರು ಇದಕ್ಕೆ ಪ್ರೋತ್ಸಾಹ ನೀಡಬೇಕೆಂದು ಕೋರಲಾಗಿದೆ

ಗಾಂಧಿ ಜಯಂತಿ

ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಮಂಗಳವಾರ ಸಾಮೂಹಿಕ ಪ್ರಾರ್ಥನೆಯಾದ ನಂತರ ನಂಜನಗೂಡಿನ ಶ್ರೀ ಎ ಎಸ್ ಕೃಷ್ಣಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ಜಯಂತಿಯನ್ನು ಆಚರಿಸಲಾಯಿತು. ದೇವನೂರಿನ ಶ್ರೀ ಡಿ.ಎಂ. ಸಿದ್ದ[illegible]ನವರು ಗಾಂಧೀಜಿಯವರ ಜೀವನದ ಬಗ್ಗೆ ಭಾಷಣ ಮಾಡಿದರು. ಹರಿಜನ ಮಕ್ಕಳಿಗೆ ವಸ್ತ್ರಗಳನ್ನು ಹಂಚಲಾಯಿತು ನಿರ್ಮಲ ಬಿಸ್ಕತ್ ಫ್ಯಾಕ್ಟರಿಯ ಮಾಲೀಕರಾದ ಶ್ರೀ ಗಣೇಶರಾಯರು ಉಚಿತವಾಗಿ ಬಿಸ್ಕತ್ತನ್ನು ದಯಪಾಲಿಸಿದ್ದರು

ಸೇಂಟ್ ಫಿಲೋಮಿನಾ ಕಾಲೇಜಿನ ಸೇವಾ ಸಂಘದವರು ಶ್ರೀ ರಾಮಲಿಂಗರ ಅಧ್ಯಕ್ಷತೆಯಲ್ಲಿ ದಿನಾಚರಣೆಯನ್ನು ನೆರವೇರಿಸಿದರು ಶ್ರೀ ಕೃಷ್ಣ ವಿನೋದರಾಯರು ಮತ್ತು ಶ್ರೀ ಶಂಕರ್ ರವರು ಭಾಷಣ ಮಾಡಿದರು ಸಂಘದ ಸದಸ್ಯರು ಕಾಲೇಜಿನ [illegible] ತೋಟದ ಕೆಲಸವನ್ನು ನಡೆಸಿದರು

ಕನ್ನಾನೂರು ಬ[illegible]ಗಳು

ಮದರಾಸು, ಮದುರಾ, [illegible], ಕಾಂಜೀವರಂ, ತಲಚೇರಿ ಮೊದಲಾದ ವಸ್ತು ಪ್ರದರ್ಶನಗಳಲ್ಲಿ ಉತ್ತಮ ಬಹುಮಾನಗಳನ್ನು ಪಡೆದು ಜನ ಮೆಚ್ಚಿಗೆ ಹೊಂದಿರುವ "ಕನ್ನಾನೂರು ಚಿನ್ನೋಲಿ ಹೊಸೈರಿ ಫ್ಯಾಕ್ಟರಿ ಬನೀನುಗಳು ದಸರಾ ವಸ್ತು ಪ್ರದರ್ಶನದ 'ಡಿ' ಬ್ಲಾಕ್ 34ರಲ್ಲಿ ದೊರೆಯುತ್ತವೆ

ವಿ.ಸೂ.-

ದಿ ಚಿನ್ನೋಲಿ ಹೊಸೈರಿ ಫ್ಯಾಕ್ಟರಿ,
ಕನ್ನಾನೂರು

Edited, Printed and Published by
A R garajan at Sadhvi Press
D h Road, Mysore

ಹೆಂಡದಂಗಡಿ ಹಾವಳಿಯಿಂದ ನಾಗರೀಕರ ನೆಮ್ಮದಿಗೆ ಭಂಗ

ಮತ್ತೊಮ್ಮೆ ಸರ್ಕಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳಲ್ಲಿ ಮನವಿ

ಯಳಂದೂರು ತಾಲ್ಲೂಕು ಅಗರಾ ಗ್ರಾಮದ ದಕ್ಷಿಣ ಪಾರ್ಶ್ವದಲ್ಲಿ, ಮೇನ್ ರಸ್ತೆಯ ಪಕ್ಕದಲ್ಲಿ ಸೇಂದಿ ಅಂಗಡಿ ಸ್ಥಾಪಿಸಿರುವುದರಿಂದ ಈ ಅಂಗಡಿಗೆ ಪ್ರತಿ ಮಧ್ಯಾಹ್ನ ೨ ಗಂಟೆ ಲಾಗಾಯಿತು ರಾತ್ರಿ ೧೦ ಗಂಟೆ ವರಿವಿಗೂ ಕುಡುಕರು ಸಾವಿರಾರು ಸಂಖ್ಯೆಯಲ್ಲಿ ಬರುತ್ತಾ ಇರುತ್ತಾರೆ. ಅವರುಗಳು ಇಚ್ಛಾನುಸಾರ ಪಾನ ಮಾಡಿ ಹೆಂಡದ ಗಡಿಗೆ ಮತ್ತು ಸೀಸೆಗಳನ್ನು ಕೈಯಲ್ಲಿ ಹಿಡಿದು ತೂರಾಡಿಕೊಂಡು ಅವಾಚ್ಯ ಭಾಷೆಗಳನ್ನಾಡುತ್ತಾ ಸಿಕ್ಕಾಪಟ್ಟೆ ಓಲಾಡಿಕೊಂಡು ಬರುವುದರ ಜೊತೆಗೆ ನಾಗರೀಕರನ್ನು ಅವಹೇಳನ ಮಾಡುವುದು, ಅಕ್ಕಪಕ್ಕದ ನಾಗರೀಕರ ಮನೆ ಪಡಸಾಲೆ ಮೇಲೆ ಕುಳಿತು ವಾಂತಿ ವಗೈರೆ ಗಲೀಜು ಮಾಡುವುದು ಇಂಥಾ ದೃಶ್ಯ ಸದಾ ಕಂಡುಬರುತ್ತಿದೆ.

ಇದೂ ಅಲ್ಲದೆ ಅಗರಾ ಗ್ರಾಮದ ಬೀದಿ ಮೇನ್ ರಸ್ತೆ ಆಗಿರುವುದರಿಂದ ನಾಗರೀಕ ಜನಗಳು ತಿರುಗಾಡಲು ಸಹ ತುಂಬಾ ತೊಂದರೆಯಾಗಿರುತ್ತೆ ಈ ಕಾರಣದಿಂದಾಗಿ ಈ ಸೇಂದಿ ಅಂಗಡಿಯನ್ನು ಮೇನ್ ರೋಡು ಬಿಟ್ಟು ಬೇರೆ ಕಡೆಗೆ ವರ್ಗಾಯಿಸಿಕೊಡಬೇಕೆಂದು ಅಗರಾ ನಾಗರೀಕರು ತಾ|| [illegible], ತಾ|| [illegible], ತಾ|| [illegible], ತಾ|| [illegible]ರಲ್ಲಿ ಡೆಪ್ಯುಟಿ ಕಮೀಷನರ್ ರವರಿಗೂ ಮತ್ತು ತಾ|| [illegible], ತಾ|| [illegible] ಮತ್ತು ತಾ|| [illegible]ರಲ್ಲಿ ಎಕ್ಸೈಜ್ ಕಮೀಷನರ್ ರವರಿಗೂ, ತಾ|| [illegible]ರಲ್ಲಿ ರೆವಿನ್ಯೂ ಕಮೀಷನರ್ ರವರಿಗೂ, ತಾ|| [illegible], ತಾ|| [illegible] ಮತ್ತು ತಾ|| [illegible]ರಲ್ಲಿ ಎಕ್ಸೈಜ್ ಮಂತ್ರಿಗಳಿಗೂ, ತಾ|| [illegible], ತಾ|| [illegible], ತಾ|| [illegible] ಮತ್ತು ತಾ|| [illegible]ರಲ್ಲಿ ಮುಖ್ಯ ಮಂತ್ರಿಗಳಿಗೂ ಮತ್ತು ತಾ|| [illegible]ರಲ್ಲಿ ಕೇಂದ್ರ ಸರ್ಕಾರದ ಪ್ರಧಾನ ಮಂತ್ರಿಯವರಿಗೂ ಸಹ ಅರ್ಜಿ ಗುಜರಾಯಿಸಿಕೊಂಡಾಗ್ಯೂ ಈ ಒಂದು ಅಸಹನೀಯ ಪರಿಸ್ಥಿತಿಯಿಂದ ಅಗರಾ ನಾಗರೀಕರನ್ನು ತಪ್ಪಿಸಿಕೊಟ್ಟಿಲ್ಲ. ಈಗಲಾದರೂ ಅಗರಾ ನಾಗರೀಕರ ನೆಮ್ಮದಿಯನ್ನು ಕಲ್ಪಿಸುವ ಉದ್ದೇಶದಿಂದ ಸಂಬಂಧಪಟ್ಟ ಅಧಿಕಾರಿಗಳು ಸರ್ಕಾರ ಹಾಗೂ ಸಂಬಂಧಪಟ್ಟ ಇಲಾಖೆಗೆ ಕೊಟ್ಟಿರತಕ್ಕ ಅರ್ಜಿಗಳನ್ನು ಪೂರ್ಣ ತನಿಖೆ ನಡೆಸಿ ವಾಸ್ತವಾಂಶಕ್ಕೆ ಹಾಗೂ ಪ್ರಜಾಭಿಪ್ರಾಯಕ್ಕೆ ಮನ್ನಣೆ ಕೊಡುತ್ತಾರೆಂದು ನಂಬಿರುತ್ತೇವೆ

ಸೇಂದಿ ಅಂಗಡಿಯನ್ನು ಹಾಲಿ ಇರುವ ಸ್ಥಳದಿಂದ ಬೇರೆ ಕಡೆ ವರ್ಗಾಯಿಸಿ ಅಗರಾ ಗ್ರಾಮದ ನಾಗರೀಕ ಜನಗಳು ಸಾಯಂಕಾಲದ ವೇಳೆ ಮರ್ಯಾದೆಯಿಂದ ರಸ್ತೆಯಲ್ಲಿ ತಿರುಗಾಡಲು ಅವಕಾಶ ಮಾಡಿಕೊಡಬೇಕಾಗಿ ನೊಂದ ಹೃದಯದಿಂದ ಪ್ರಾರ್ಥಿಸುತ್ತೇವೆ

ಪಾನ ನಿರೋಧ ಇರುವ ನೆರೆ ಪ್ರಾಂತದಿಂದ ಆರು ಮೈಲಿ ನಮ್ಮ ಸಂಸ್ಥಾನದೊಳಗೂ ಬೆಲ್ಟ್ ಏರಿಯಾದಲ್ಲಿ ಯಾವ ಸೇಂದಿ ಅಂಗಡಿ ಇರಬಾರದೆಂಬ ನಿಯಮವೂ ಸಹಾ ಉಲ್ಲಂಘನೆಯಾಗಿರುತ್ತೆ ಆದ್ದರಿಂದ ಕೂಡಲೆ ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ನಂಬಿರುತ್ತೇವೆ

ನೊಂದ ನಾಗರೀಕರುಗಳು

ಹಾಸಿಗೆ - ದಿಂಬು
ಮಿಷನ್ನಿನಲ್ಲಿ ಶುದ್ಧಿ ಮಾಡಿ ತಯಾರು ಮಾಡುತ್ತೇವೆ.
ಬಾಬುಸಾಬ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

ತಾಲ್ಲೂಕುಗಳಲ್ಲಿ ಉತ್ತಮ ಪರಿಹಾರ ಕಾರ್ಯ

ನಂಜನಗೂಡು ೫

ಲೋಕಸಭಾ ಸದಸ್ಯರಾದ ಶ್ರೀ ಎಂ. ಎಸ್ ಗುರುಪಾದಸ್ವಾಮಿಯವರು ಶ್ರೀ ಬಿ. ಎಲ್ ಎಸ್. [illegible]ರೊಡನೆ ಅಭಾವ ಪ್ರದೇಶಗಳಲ್ಲಿ ಪ್ರವಾಸ ಮಾಡಿದರು [illegible] ಪೇಟೆಯಲ್ಲಿ ಜನರೂ ಮತ್ತು [illegible] ಇನ್ನೂ ಕಷ್ಟದಲ್ಲಿರುವುದಾಗಿಯೂ, ಅಲ್ಲಿ ಹೆಚ್ಚು ಪರಿಹಾರ ಕ್ರಮ ಜರುಗಬೇಕೆಂಬುದೂ ಅವರು ತಿಳಿಸಿದ್ದಾರೆ. ಟಿ ನರಸೀಪುರ, ನಂಜನಗೂಡು, ಚಾಮರಾಜನಗರಗಳಲ್ಲಿ ಸಾಕಾದಷ್ಟು ಮಳೆಯಾಗಿ ಪರಿಹಾರ ಕಾರ್ಯಗಳು ಚೆನ್ನಾಗಿ ನಡೆದಿರುವುದಾಗಿ ಅವರು ಹೇಳಿರುತ್ತಾರೆ. ಇಲ್ಲಿರುವ ಕಾಲೇಜು ವಿದ್ಯಾರ್ಥಿಗಳಿಗೆ ರೈಲು ಪ್ರಯಾಣದ ಬಗ್ಗೆ ಹೆಚ್ಚು ಸೌಕರ್ಯವನ್ನು ಕಲ್ಪಿಸುವಂತೆಯೂ, ಈಗ ಹಾಕುವ ೪ ಗಾಡಿಗಳ ಬದಲು ೬ ಗಾಡಿಗಳನ್ನು ಹಾಕುವಂತಾಗಬೇಕೆಂದೂ ಶ್ರೀ ಗುರುಪಾದಸ್ವಾಮಿಯವರಿಗೆ ವಿದ್ಯಾರ್ಥಿಗಳು ತಿಳಿಸಲಾಗಿ ಈ ವಿಚಾರವನ್ನು ಸಂಬಂಧಪಟ್ಟವರಿಗೆ ತಿಳಿಸಿ ಸಹಾಯ ಮಾಡುವುದಾಗಿ ಅವರು ಭರವಸೆಯಿತ್ತರು.

Prof DEVAL's CIRCUS
ಪ್ರೊ|| ದೇವಲ್ಸ್ ಸರ್ಕಸ್
ಜೀವಣ್ಣರಾಯನ ಕಟ್ಟೆಯಲ್ಲಿ
ಹಾಕಿರುವ ಡೇರಾದಲ್ಲಿ
7 10 56ರಿಂದ ಪ್ರತಿ ದಿನ 3 ಪ್ರದರ್ಶನಗಳು
ಮಧ್ಯಾಹ್ನ 3 ಗಂಟೆಗೆ, ಸಂಜೆ 6-30 ಮತ್ತು
ರಾತ್ರಿ 9—30

ದರದ ಏರಿಕೆ ವಿರುದ್ಧವಾಗಿ ವಿದ್ಯುದ್ದೀಪಕ್ಕೆ ಬಹಿಷ್ಕಾರ

ಚಂದ್ರನಗರದ ನಾಗರಿಕರು ವಿದ್ಯುಚ್ಛಕ್ತಿ ದರದ ಏರಿಕೆ ವಿರುದ್ಧವಾಗಿ ಮೊನ್ನೆ ರಾತ್ರಿ ದೀಪಗಳನ್ನು ಉರಿಸದೆ ತಮ್ಮ ಪ್ರತಿಭಟನೆಯನ್ನು ಚಿಸಿದರು ನಗರದ ದೀಪಗಳೆಲ್ಲವನ್ನೂ ಆರಿಸ ಗಿತ್ತು ವರ್ತಕರು ಗ್ಯಾಸ್ ಲೈಟ್ ಹಚ್ಚಿಕೆ ಡೂ, ಮನೆಗಳಲ್ಲಿ ಜನರು ಸೀಮೆಯೆಣ್ಣೆ ದಿ ಮತ್ತು ಮೋಂಬತ್ತಿ ದೀಪಗಳನ್ನು ಇಟ್ಟುಕ ಡೂ ಇದ್ದರು ಸಿನಿಮಾ ಮಂದಿರಗಳು ಪ್ರದರ್ಶನಗಳನ್ನು ನಿಲ್ಲಿಸಿದ್ದುವು

ಅರಗು ಮತ್ತು ಬಣ್ಣದ ಕಾರ್ಖಾನೆ ಕಾರ್ಮಿಕರ ಸಂಘ

ರಾಜಧಾನಿಯ ಅರಗು ಮತ್ತು ಬಣ್ಣದ ಕಾರ್ಖಾನೆ ಕೆಲಸಗಾರರ ಸಂಘದ ಸರ್ವ ಸದ ಸಭೆಯು ಕಳೆದ ೨೬ನೇ ತಾರೀಕು ಶ್ರೀ ಎಂ ಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಪ್ರಸ್ತುತ ಸಾಲಿನ ಅಧಿಕಾರವರ್ಗಕ್ಕೆ ಶ್ರೀ ಲ ಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ನಾ ಜಾಕರವರು ಉಪಾಧ್ಯಕ್ಷರಾಗಿಯೂ, ಶ್ರೀ ಸಿ ಚಾಮಯ್ಯನವರು ಕಾರ್ಯದರ್ಶಿ, ಶ್ರೀ ಪವರಯ್ಯನವರು ಉಪ ಕಾರ್ಯದರ್ಶಿ ಮ ಶ್ರೀ ಚನ್ನಯ್ಯನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು

ಗ್ರಾಮಸೇವಾ ಕೇಂದ್ರದ ಆರಂಭೋತ್ಸ

ನಂಜನಗೂಡು ತಾಲ್ಲೂಕು ಕೆಂಪಿಸಿದ್ದನ ಹುಂಡಿ ಗ್ರಾಮದಲ್ಲಿ ಕಳೆದ ಮಂಗಳವಾರ ಗಾಂಧಿ ಜಯಂತಿ ಅಂಗವಾಗಿ ಗ್ರಾಮಸೇವೆ ಕೇಂದ್ರದ ಆರಂಭೋತ್ಸವವನ್ನು ಸಂಸ್ಥಾನದ ಗಾಂಧಿ ಸ್ಮಾರಕ ಮತ್ತು ಕಸ್ತೂರಿಬಾಯಿ ನಿಧಿ ಧರ್ಮದರ್ಶಿಗಳಾದ ಶ್ರೀಮತಿ ಯಶೋಧರಾ ದಾಸಪ್ಪನವರು ನೆರವೇರಿಸಿದರು ರಾಷ್ಟ್ರ ಧ್ವಜಾರೋಹಣ ಮತ್ತು ದೇವತಾ ಪ್ರಾರ್ಥನೆಗಳಾದನಂತರ ಗಾಂಧಿ ಸ್ಮಾರಕ ನಿಧಿಯ ಸಂಸ್ಥಾನ ಪ್ರತಿನಿಧಿಯಾದ ಬಿ. ಆರ್ ಪ್ರಾಣೇಶರಾಯರು ಸ್ವಾಗತ ಬಯಸಿದರು ನಗರ್ಲೆ ರೇಂಜ್ ವಿದ್ಯಾಧಿಕಾರಿಗಳು ಶ್ರೀ ನಾಗರಾಜರಾಯರು ಗಾಂಧೀಜಿಯವರ ಗುಣಗಾನ ಮಾಡಿದರು. ಊರಿನ ಮಕ್ಕಳಿಗೆ ಹಾಲನ್ನು ಹಂಚಲಾಯಿತು. ಗಾಂಧೀಜಿಯವರ ಭಾವಚಿತ್ರದ ಮೆರವಣಿಗೆಯನ್ನು ನಡೆಸಲಾಯಿತು

○ ೩ ವರ್ಷಗಳಿಂದ ನಡೆಸಲಾಗುತ್ತಿರುವ ಮಳೆಯರ ಉಳಿತಾಯ ಯೋಜನೆಯಿಂದ ಇದುವರೆಗೆ [illegible] ಕೋಟಿ ರೂ ಶೇಖರವಾಗಿದೆ.

ಶ್ರೀ
ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಂಪಿಯಾ
ಚಿತ್ರಮಂದಿರಗಳ ನಡುವೆ
ಮಿಟ್ಟೂರ್ ಮಲ್, ಲಾಂಗ್ ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ, ಬೇಬಿ, ಅರವಿಂದ್, ಕಟಾವು ಇನ್ನೂ ಅನೇಕ ಮಿಲ್ ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ. ಉತ್ತಮ ತರಹೆಯ ಪ್ರಿಂಟೆಡ್ ವಾಯಿಲ್ ಮತ್ತು ಚೀಟಿಗಳು.
ಒಮ್ಮೆ ದಯಮಾಡಿ ಭೇಟಿ ಕೊಡಿ
ಜಿ. ಸಿ. ನಂಜಪ್ಪ

ಮೈಸೂರು ದಸರಾ ವಸ್ತು ಪ್ರದರ್ಶನ, 1956
ವಿಶೇಷ ಕಾರ್ಯಕ್ರಮ
ಅಮೋಘ ನೃತ್ಯ ಪ್ರದರ್ಶನ ಮದ್ರಾಸಿನ ಸುಪ್ರಸಿದ್ಧ ನೃತ್ಯ ತಾರೆಯರಾದ ಕೇರಳ ಸಹೋದರಿಯರಿಂದ
ತಾ|| 11-10-56 ಗುರುವಾರ ಸಂಜೆ 6-30 ಗಂಟೆಗೆ ವಸ್ತು ಪ್ರದರ್ಶನದ
ರಂಗಮಂಟಪದಲ್ಲಿ
ಸರ್ವರೂ ಬಂದು ನೋಡಿ ಆನಂದಿಸಿ · ಪ್ರವೇಶ ಧನ 0 5 0
ತಾ|| 12-10-56 ಸಂಜೆ 6 ಗಂಟೆಗೆ : : ಅಮೋಘ ಸಂಗೀತ ಕಛೇರಿ
ಶ್ರೀಮತಿ ಡಿ. ಕೆ. ಪಟ್ಟಮ್ಮಾಳ್ ಮತ್ತು ಪಾರ್ಟಿಯವರಿಂದ

ಪ್ರಭುದೇವಾ ಥಿಯೇಟರ್ ★ (ಪದ್ಮಾಟಾಕೀಸ್)
11—10—56ನೇ : ಗುರುವಾರದಿಂದ : ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು
ವಿಶ್ವಕಲಾರವರ ಕನ್ನಡ ಚಿತ್ರ
ಓಹಿಲೇಶ್ವರ ★ ಓಹಿಲೇಶ್ವರ
[illegible] (ಶ್ರೀರಂಜನಿ ಜೂನಿಯರ್), ರಾಜಕುಮಾರ್, ಕಲ್ಯಾಣಕುಮಾರ್, [illegible], ನರಸಿಂಹರಾಜು, ಜಿ. ವಿ. ಅಯ್ಯರ್ ಮುಂತಾದವರು
ನಾಲ್ಕು ವಾರಗಳ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೫] SADHVI : TUESDAY 9—10—1956 ಮೈಸೂರು : ಮಂಗಳವಾರ ೯—೧೦—೧೯೫೬ [ಸಂಚಿಕೆ : ೬೫

ರಿಟನ್-ಫ್ರಾನ್ಸುಗಳ ಸೂಯೆಜ್ ನಿರ್ಣಯಕ್ಕೆ ರಷ್ಯಾ ವೀಟೋ

ಯೆಜ್ ಬಗ್ಗೆ ಪಶ್ಚಿಮ ರಾಷ್ಟ್ರ ನಿರ್ಣಯಕ್ಕೆ ರಷ್ಯಾ ವೀಟೋ

ಭದ್ರತಾ ಸಮಿತಿಯಲ್ಲಿ

ಷ್ಯದ ವಿದೇಶಾಂಗ ಮಂತ್ರಿ ಹೇಳಿಕೆ

್ರಿಟನ್ ಮತ್ತು ಫ್ರಾನ್ಸುಗಳು ಸೂಯೆಜ್ ಬಿ ್ಟಿನ ಬಗ್ಗೆ ಭದ್ರತಾ ಸಮಿತಿಯಲ್ಲಿ ಮಂಡಿಸಿ ನಿರ್ಣಯವನ್ನು ರಷ್ಯವು ವೀಟೋ ಮಾ ದಾಗ ಸಮಿತಿ ಸಭೆಯಲ್ಲಿ ನೆನ್ನೆ ರಷ್ಯದ ವಿ ಾಂಗ ಮಂತ್ರಿ ಷೆಪಿಲಾವ್‌ರವರು ತಿಳಿಸಿದ ನಿರ್ಣಯವು ಈಜಿಪ್ಟನ್ನು ಖಂಡಿಸುವುದೆಂ , ಅದರಲ್ಲಿ ರಚನಾತ್ಮಕ ಅಂಶಗಳೇನೂ ಇ ಂದೂ ಅವರು ಹೇಳಿ, ಭದ್ರತಾ ಸಮಿತಿಯು ನ್ನು ಒಪ್ಪಲು ಸಾಧ್ಯವಿಲ್ಲವೆಂದು ನುಡಿದರು ಪ್ಟ್, ಬ್ರಿಟನ್, ಭಾರತ, ಫ್ರಾನ್ಸ್, ರಷ್ಯಾ ಮ ಅಮೆರಿಕಗಳುಳ್ಳ ಆರು ರಾಷ್ಟ್ರಗಳ ಅಧಿಕೃತ ತಿಯನ್ನು ಸೂಯೆಜ್ ವಿಷಯದ ಪರಿಶೀಲ ನೇಮಿಸಬೇಕೆಂದು ಅವರು ಸಲಹೆ ಮಾಡಿ

ಕಮ್ಯೂನಿಸ್ಟರ ಪ್ರಾಬಲ್ಯದಿಂದ ರಾಷ್ಟ್ರದಲ್ಲಿ ಅವ್ಯವಸ್ಥೆ

ಪ್ರಧಾನಿ ನೆಹರೂರವರ ಎಚ್ಚರಿಕೆ

ಡೆಹರಿ ಬಳಿ ಆಲಿಪುರದಲ್ಲಿ ಕಾಂಗ್ರೆಸ್ ಕಾರ್ಯಕರ್ತರನ್ನು ಉದ್ದೇಶಿಸಿ ಮೊನ್ನೆ ಪ್ರಧಾನಿ ರೂರವರು ಭಾಷಣ ಮಾಡಿ, ಭಾರತದ ಸ ಸ್ಯೆಗಳ ಪರಿಹಾರಕ್ಕೆ ಕಮ್ಯೂನಿಸಂ ತತ್ವವು ರಿಹಾರೋಪಾಯವಲ್ಲವೆಂದು ತಿಳಿಸಿದರು. ಕ ್ಯೂನಿಸ್ಟರ ಹಿಂಸೆ ಮತ್ತು ದ್ವೇಷದ ಮಾರ್ಗ ದ ರಾಷ್ಟ್ರದಲ್ಲಿ ಒಳ ಕಲಹ ಮತ್ತು ವರ್ಗಗಳ ುದ್ಧವಾಗುವುದೆಂದು ಅವರು ಹೇಳಿದರು. ವ್ಯ ಹೋರಾಟ ಮಾಡುತ್ತಿರುವುದರಲ್ಲಿ ಅರ್ಥವಿ ವೆಂದು ಅವರು ಹೇಳಿ ನೂರು ವರ್ಷಗಳ ಹಿಂ ನ ಮಾರ್ಕ್ಸಿಸಂ ತತ್ವದ ಪ್ರಚಾರದಿಂದ ಈಗ ಾವ ಉಪಯೋಗವೂ ಇಲ್ಲವೆಂದು ಅಭಿಪ್ರಾ ಪಟ್ಟರು.

ಮೇಳ ಮತ್ತು ಛಾತ್ರಗಳಿಗೆ ಲು ದರದ ರಿಯಾಯಿತಿ ಇಲ್ಲ

ಸ್ಥಳೀಯ ಮೇಳ ಮತ್ತು ಛಾತ್ರಗಳಿಗೆ ಇ ಮುಂದೆ ರೈಲುಗಳಲ್ಲಿ ರಿಯಾಯಿತಿ ದರದ ಯಾಣದ ಸೌಲಭ್ಯವನ್ನು ತಪ್ಪಿಸಲಾಗುವುದು.

ತನ ಸಂಸ್ಥಾನದ ಆರಂಭಕ್ಕೆ ಮುಂಚೆ ನೌಕರರಿಗೆ ಸಂಬಳ

ನವೆಂಬರ್ ೧ ರಂದು ನೂತನ ಮೈಸೂರು ಸ್ಥಾನ ಆರಂಭವಾಗುವುದಕ್ಕೆ ಮುಂಚಿತವಾಗಿ ಸೂರಿನ ಸರ್ಕಾರಿ ನೌಕರರು ಮತ್ತು ಎಲ್ಲಾ ಾರಿ ಕೈಗಾರಿಕಾ ನೌಕರರುಗಳಿಗೆ ಈ ತಿಂಗ ಸಂಬಳ ಮತ್ತು ಭತ್ಯವನ್ನು ಇದೇ ೩೦ ಅಥ ೩೧ನೇ ತಾರೀಖು ಬಟವಾಡೆ ಮಾಡುವಂತೆ ಾರದವರು ಆಜ್ಞೆ ಮಾಡಿದ್ದಾರೆ.

ಕೃಷ್ಣಮೂರ್ತಿಪುರದ ಶ್ರೀರಾಮಮಂದಿರದಲ್ಲಿ ಳೆ, ನಾಳಿದ್ದು ಮತ್ತು ಶುಕ್ರವಾರ ವಿ|| ಎಲ್ ಶಾಸ್ತ್ರಿಗಳವರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯು ನಡೆಯುವುದು. ಅವರು ಗಳಿಂದಲೂ ಅಲ್ಲಿ ಮಹಾಭಾರತವನ್ನು ಕ ವಾಗಿ ಹೇಳುತ್ತಿದ್ದಾರೆ

ಕರ್ನಾಟಕ ಪ್ರಜಾ ಸಮಾಜವಾದಿಗಳ ಸಮ್ಮೇಳನ

ಅಶೋಕ ಮೆಹತಾರವರ ಆರಂಭ ಭಾಷಣ

ಕರ್ನಾಟಕದ ಪ್ರಜಾ ಸಮಾಜವಾದಿಗಳ ಪ್ರಥಮ ಸಮ್ಮೇಳನದ ಆರಂಭೋತ್ಸವವನ್ನು ಮೊನ್ನೆ ಪಕ್ಷದ ರಾಷ್ಟ್ರೀಯ ಕಾರ್ಯಕಾರಿ ಸಮಿತಿ ಸದಸ್ಯರಾದ ಅಶೋಕ ಮೆಹತ ರವರು ಭದ್ರಾವತಿಯಲ್ಲಿ ನೆರವೇರಿಸಿದರು. ಅವರು ಭಾಷಣ ಮಾಡಿ, ಕನ್ನಡಿಗರಿಗೆಲ್ಲಾ ಒಂದೇ ಪ್ರಾಂತವಿರಬೇಕೆಂಬ ಬಯಕೆಯು ಈಗ ಸಾಧಿತವಾಗಲಿರುವ ಬಗ್ಗೆ ತೃಪ್ತಿಯನ್ನು ಸೂಚಿಸಿದರು. ವಿವಿಧ ಭಾಷೆಯಾಡುವ ಜನರಲ್ಲಿ ಪರಸ್ಪರ ಸೌಹಾರ್ದವಿರಬೇಕೆಂದೂ, ಅದೇ ದೃಷ್ಟಿಯಿಂದ ದ್ವಿಭಾಷಾ ಮುಂಬಾಯಿ ಸಂಸ್ಥಾನವನ್ನು ರಚಿಸಿ, ಪಾರ್ಲಿಮೆಂಟು ಭಂಗವಾದಾಗ ಅಲ್ಪಸಂಖ್ಯಾತರಿಗೆ ರಕ್ಷಣೆ ನೀಡಬೇಕೆಂದೂ ಅವರು ಹೇಳಿದರು. ದೇಶಾದ್ಯಂತ [illegible] ಕಾರಖಾನೆಯನ್ನು ಏರ್ಪಡಿಸಲಿರುವ ಬಗ್ಗೆ ಅವರು ಹರ್ಷಪಟ್ಟರು

ಖಾಸಗಿ ಕೈಗಾರಿಕೆಯವರಿಗೆ ಬಡ್ಡಿಯಿಲ್ಲದೆ ಭಾರಿ ಮೊತ್ತದ ಸಾಲವನ್ನು ಕೊಡುತ್ತಿರುವುದನ್ನು ಅವರು ಟೀಕಿಸಿ, ಪ್ರಜೆಗಳಿಂದ ವಸೂಲಾದ ತೆರಿಗೆಯ ಹಣವನ್ನು ಈ ರೀತಿ ವೆಚ್ಚ ಮಾಡುವುದು ಸರಿಯಲ್ಲವೆಂದು ನುಡಿದರು

ಶ್ರೀ ಬಿ. ಪುಟ್ಟೇಗೌಡರು ಅಧ್ಯಕ್ಷತೆ ವಹಿಸಿದ್ದರು ಅವರು ಭಾಷಣ ಮಾಡಿ ಕಾಂಗ್ರೆಸ್ಸಿನವರದು ಬಂಡವಾಳಶಾಹಿ ಆಡಳಿತವೆಂದು ಟೀಕಿಸಿದರು ೨೫೦ ಮಂದಿ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿರುತ್ತಾರೆ

ಗಾದ್ರೆ ಗುರೂಜಿಯವರಿಗೆ ಗೋವಾ ಪ್ರವೇಶಕ್ಕವಕಾಶವಿಲ್ಲ

ವಿನೋಬಾ ಭಾವೆಯವರ ಶಿಷ್ಯ ಗಾದ್ರೆ ಗುರೂಜಿಯವರು ಗೋವಾವನ್ನು ಪ್ರವೇಶಿಸಲು ಮೊನ್ನೆ ಹೊರಟಾಗ ಅವರನ್ನು ಗೋವಾ ಅಧಿಕಾರಿಗಳು ಪೋಲೆಂ ಗಡಿ ಬಳಿ ತಡೆದು, ಪ್ರವೇಶಕ್ಕೆ ಅವಕಾಶ ಕೊಡಲಿಲ್ಲ ಗುರೂಜಿಯವರು ಗೋವಾ ಗವರ್ನರ್ ಜನರಲ್ಲರಿಗೆ ಪತ್ರ ಬರೆದು, ತಾವು ಮತ್ತೆ ಗೋವಾವನ್ನು ಪ್ರವೇಶಿಸುವುದಾಗಿ ತಿಳಿಸಿದ್ದರು

ಬೊಂಬಾಯಿಗೆ ವಿದ್ಯಾ ಮಂತ್ರಿಗಳು

ವಿದ್ಯಾ ಮಂತ್ರಿ ಶ್ರೀ ಎ. ಜಿ ರಾಮಚಂದ್ರರಾಯರು ಈ ದಿನ ಬೆಂಗಳೂರಿಗೆ ಪ್ರಯಾಣ ಮಾಡಿ, ನಾಳೆ ಬೆಳಿಗ್ಗೆ ವಿಮಾನದಲ್ಲಿ ಬೊಂಬಾಯಿಗೆ ತೆರಳುವರು. ಅವರು ಅಲ್ಲಿ ಮುರಾರ್ಜಿ ದೇಸಾಯ್ ಮತ್ತು ಬೊಂಬಾಯಿ ಹಣಕಾಸಿನ ಮಂತ್ರಿಯವರೊಡನೆ ನೂತನ ಮೈಸೂರಿನ ಸಮಸ್ಯೆಗಳನ್ನು ಕುರಿತು ಸಂಭಾಷಣೆ ನಡೆಸುವರು.

ಫುಟ್‌ಬಾಲ್ ಕ್ಲಬ್ಬಿನ ವಾರ್ಷಿಕೋತ್ಸವ

ನಗರದಲ್ಲಿರುವ ಫ್ರೆಂಡ್ಸ್ ಯೂನಿಯನ್ ಫುಟ್‌ಬಾಲ್ ಕ್ಲಬ್ಬಿನ ಎರಡನೇ ವಾರ್ಷಿಕೋತ್ಸವವು ಕಳೆದ ಮಂಗಳವಾರ ಮಾಧವಮಂದಿರದಲ್ಲಿ ನೆರವೇರಿತು ಪೌರಸಭಾ ಸದಸ್ಯರಾದ ಶ್ರೀ ಬಿ. ಎಲ್. ಕೆಂಗೇಗೌಡರು ಅಧ್ಯಕ್ಷತೆ ವಹಿಸಿದ್ದರು.

ಮೈಸೂರಿಗೆ ಹೊರಗಿನಿಂದ ೫೦ ಸಾವಿರ ನೌಕರರುಗಳು

ಸ್ವಂ. ಸು. ಸಂತೆ] ಬೆಂಗಳೂರು ೯

ನೂತನ ಸಂಸ್ಥಾನಕ್ಕೆ ಹೊರಗಿನ ಕನ್ನಡ ಪ್ರದೇಶಗಳಿಂದ ಜವಾನರೂ ಸೇರಿ, ಒಟ್ಟು ೫೦ ಸಾವಿರ ನೌಕರರು ಬರುವರು.

ಸಂಸ್ಥಾನದ ಕ್ರೀಡಾ ಸಂಸ್ಥೆ

ವಿದ್ಯಾ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸಂಸ್ಥಾನದ ಕ್ರೀಡಾ ಮಂಡಲವನ್ನು ರಚಿಸಲಾಗಿದೆ.

○ ಬಿಹಾರ್ ಗವರ್ನರ್ ಶ್ರೀ ಆರ್ ಆರ್. ದಿವಾಕರ್‌ರವರು ಈ ದಿನ ಇಲ್ಲಿಗೆ ಆಗಮಿಸಿದರು

ವಲಯಗಳ ನಡುವೆ ಧಾನ್ಯ ಸಾಗಾಣಿಕೆ ಹತೋಟಿ

ಕೇಂದ್ರ ಮಂತ್ರಿ ಕೃಷ್ಣಮಾಚಾರಿಯವರ ಸೂಚನೆ

ದೇಶದಲ್ಲಿ ಆಹಾರ ಧಾನ್ಯಗಳ ಸಾಗಾಣಿಕೆಯ ಬಗ್ಗೆ ವಲಯಗಳ ಹತೋಟಿಯನ್ನು ಭಾರತ ಸರ್ಕಾರದವರು ಪುನಃ ಜಾರಿಗೆ ತರಲಿರುವುದಾಗಿ ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ. ವಲಯಗಳ ಹತೋಟಿಯ ಮೂಲಕ ಆಹಾರ ಧಾನ್ಯದ ಸಮಸ್ಯೆ ಮತ್ತು ಬೆಲೆ ಏರಿಕೆಗಳನ್ನು ಪರಿಹರಿಸಬಹುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ ಆಹಾರ ಧಾನ್ಯದ ಉತ್ಪತ್ತಿಯು ಜಯಪ್ರದವಾಗಿ ಆಗುವ ಮುಂಚೆ ಧಾನ್ಯದ ಮೇಲಿನ ವಲಯ ಹತೋಟಿಯನ್ನು ತಪ್ಪಿಸಿದುದು ಸರಿಯಲ್ಲವೆಂದೂ ಅವರು ನುಡಿದಿರುವರು.

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಿಗ್ಗೆ ನಾಗಸ್ವರ, ಶ್ರೀಮತಿ ನರಸಮ್ಮ ಮತ್ತು ಶ್ರೀ ಎಂ. ಎಸ್. ಕೃಷ್ಣಪ್ರಕಾಶರವರಿಂದ ದೇವರ ನಾಮಗಳು ಮತ್ತು ಸೀನಿಯರ್ ಸಂಗೀತ ಸ್ಪರ್ಧೆಯೂ; ಮಧ್ಯಾಹ್ನ ಶ್ರೀ ಜೆಚ್. ವಿ. ವೀರಯ್ಯನವರಿಂದ ಚನ್ನಬಸವ ಪುರಾಣ, ಶ್ರೀ ಎ. ಎಸ್. ಆನಂದ ಮತ್ತು ಪಾರ್ಟಿಯವರಿಂದ ಜಾದು ವಿದ್ಯೆ, ವಿವಿಧ ವೇಷ ಸ್ಪರ್ಧೆ, ಕು|| ಚೊಕ್ಕಮ್ಮ ಮತ್ತು ಪಾರ್ಟಿಯವರಿಂದ ಸಂಗೀತ ಮತ್ತು ಶ್ರೀ ವೈ. ಎಲ್. ಸಿಂಹರವರ ನಾಟ್ಯಕಲಾ ಶಾಲೆಯವರಿಂದ ನರ್ತನಗಳೂ ನಡೆಯುವುವು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಿತಾರ್. ೭-೧೫ ದೀಕ್ಷಿತರ ನವಾವರಣ ಕೀರ್ತನೆ. ೭-೩೦ ಹಿಂದಿ ಪಾಠ. ೮-೧೫ ದೇವರ ನಾಮ. ಮಧ್ಯಾಹ್ನ ೧೨ ಎ. ರಾಮಲಕ್ಷ್ಮಿ-ಸಂಗೀತ. ೧ ಮತ್ತು ೧-೫೦ ಎ. ಎಸ್ ಚಂದ್ರಶೇಖರಯ್ಯ-ವೀಣೆ. ೨-೧೫ ತ್ಯಾಗರಾಜರ ಭೈರವಿ ಮುಕ್ಕಣಿ ಕಲ್ಯಾಣದ ಗೀತೆಗಳು. ಸಂಜೆ ೫-೩೦ ಮತ್ತು ೮-೧೫ ಎಲ್. ಶ್ರೀನಿವಾಸ-ನಾಗಸ್ವರ. ೬-೩೦ ಜಾನಪದ ಗೀತೆ. ೭-೩೦ ನಾಡಿನ ಕೊಡುಗೆ-ಕನ್ನಡ ಭಾಷಣ. ೮ ಕನ್ನಡ ಸಪ್ತಾಹ-ಕಿರುಗತೆ. ೮-೩೦ ರಾಷ್ಟ್ರೀಯ ಕಾರ್ಯಕ್ರಮ-ಭಾಷಣ. ೮-೫೦ ರಿಕಾರ್ಡು. ೯-೧೫ ಟಿ. ಚೌಡಯ್ಯ-ಪಿಟೀಲು.

ಈ ತಿಂಗಳು ೩೧ ರಂದು ನೂತನ ಕನ್ನಡ ಸಂಸ್ಥಾನದ ಆರಂಭ

ಬೆಂಗಳೂರು ೯

ನೂತನ ಮೈಸೂರು ಸಂಸ್ಥಾನದ ಪ್ರಾರಂಭೋತ್ಸವವು ಈ ತಿಂಗಳು ೩೧ನೇ ರಾತ್ರಿ ನೆರವೇರುವುದು ನವೆಂಬರ್ ೧ನೇ ತಾರೀಖು ಪ್ರಶಸ್ತವಲ್ಲವೆಂಬುದೇ ಇದಕ್ಕೆ ಕಾರಣ.

ರಾಜಪ್ರಮುಖರಿಂದ ಸಂಸ್ಥಾನದ ವೈದ್ಯರ ಸಮ್ಮೇಳನದ ಆರಂಭ

ಮಂಡ್ಯದಲ್ಲಿ ಈ ತಿಂಗಳು ೧೭ರಂದು ಸೇರಬೇಕಾಗಿದ್ದ ಸಂಸ್ಥಾನದ ವೈದ್ಯರುಗಳ ಸಮ್ಮೇಳನವು ೨೩ ರಂದು ನಡೆಯುವುದು. ಮೈಸೂರಿನ ರಾಜಪ್ರಮುಖರು ಅದರ ಆರಂಭೋತ್ಸವವನ್ನು ನೆರವೇರಿಸುವರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ವೈದ್ಯ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು. ೩ ದಿನಗಳ ಅಧಿವೇಶನದಲ್ಲಿ ವೈದ್ಯ ವಿಜ್ಞಾನದ ಬೆಳವಣಿಗೆಯನ್ನು ಪರಿಶೀಲಿಸಲಾಗುವುದು. ಭಾರತದ ನಾನಾ ಕಡೆಗಳ ಪ್ರಮುಖ ವೈದ್ಯರುಗಳು ಅದರಲ್ಲಿ ಭಾಗವಹಿಸುವರು.

ಸಂಸ್ಕೃತ ಪರೀಕ್ಷೆ ಪದವೀದಾನ ಸಮಾರಂಭ

ಮೈಸೂರು ೯

ಮೈಸೂರು ಸಂಸ್ಕೃತ ಪರೀಕ್ಷಾ ಪದವೀದಾನ ಸಮಾರಂಭವು ನಗರದ ಮಹಾರಾಜಾ ಪಾಠಶಾಲೆಯಲ್ಲಿ ನಾಳೆ ಬೆಳಿಗ್ಗೆ ೧೦ ಗಂಟೆಗೆ ನೆರವೇರುವುದು. ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಎಲ್. ಎಸ್. ಹಿರಣ್ಣಯ್ಯನವರು ಅಧ್ಯಕ್ಷತೆ ವಹಿಸುವರು. ಬೆಂಗಳೂರಿನ ಮಾನಸಿಕ ಆರೋಗ್ಯ ಸಂಸ್ಥೆ ಡೈರೆಕ್ಟರ್ ಶ್ರೀ ಎಂ ವಿ. ಗೋವಿಂದಸ್ವಾಮಿಯವರು ಭಾಷಣ ಮಾಡುವರು.

ವಸ್ತು ಪ್ರದರ್ಶನದಲ್ಲಿ ವಿವಿಧ ವೇಷ ಸ್ಪರ್ಧೆಗಳಿಗೆ ಬಹುಮಾನ

ನೆನ್ನೆ ವಸ್ತು ಪ್ರದರ್ಶನದಲ್ಲಿ ಏರ್ಪಾಡಾಗಿದ್ದ ವಿವಿಧ ವೇಷ ಸ್ಪರ್ಧೆಯಲ್ಲಿ ಜವಾನ್ ವೇಷದ ರಾಜೇಂದ್ರ ಪ್ರಸಾದ್ ವೃಂದದವರಿಗೆ ಪ್ರಥಮ ಬಹುಮಾನ, ಆಫ್ರಿಕದ ಬೇಟೆಗಾರರ ಪಾತ್ರಧಾರಿಗಳು ಮತ್ತು ವೃಂದದವರಿಗೆ ದ್ವಿತೀಯ ಬಹುಮಾನ ಮತ್ತು ಭಿಕ್ಷುಕನ ವೇಷದ ಮಹಾಲಿಂಗಪ್ಪ, ಈಶ್ವರನ ಪಾತ್ರಧಾರಿ ವಿ. ಕೆ ಕುಮಾರ್ ಮತ್ತು ರೆಡ್ ಹಂಟರ್ ಪಾತ್ರದ ಸೋಮಶೇಖರ್‌ರವರಿಗೆ ಪ್ರಶಸ್ತಿ ಪತ್ರಗಳು ದೊರೆತಿವೆ.

ಕಡೂರು ವೆಂಕಟರಮಣ ಶಾಸ್ತ್ರಿಗಳವರ ನಿಧನ

ಕಲ್ಲೆ ಮೊಹಲ್ಲಾ ಬಿ. ಬಿ. ಗಾರ್ಡನ್ನಿನಲ್ಲಿ ವಾಸವಾಗಿದ್ದ ವೇ|| ಬ್ರ|| ಶ್ರೀ ಕಡೂರು ವೆಂಕಟರಮಣಶಾಸ್ತ್ರಿಗಳವರು ಕಳೆದ ಗುರುವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಯಂತ್ರ, ಮಂತ್ರ ಮತ್ತು ಜ್ಯೋತಿಷ್ಯ ಶಾಸ್ತ್ರಗಳಲ್ಲಿ ಪ್ರಸಿದ್ಧರಾಗಿದ್ದರು ನವರಾತ್ರಿ ಕಾಲದಲ್ಲಿ ದೇವಿಯಲ್ಲಿ ರುದ್ರ ಸ್ವಾಹಾಕಾರ ಮುಂತಾದ ಪೂಜೆಗಳನ್ನು ನೆರವೇರಿಸುತ್ತಿದ್ದರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧು ಮಿತ್ರರಿಗೆ ಅನುತಾಪವನ್ನು ಸೂಚಿಸುತ್ತೇವೆ.

ಜಿಲ್ಲೆಯಲ್ಲಿ
೨೯ ಅಕ್ಕಿ ಡಿಪೋಗಳು
ಜಿಲ್ಲಾಧಿಕಾರಿಗಳ ವಿವರಣೆ

ಮೈಸೂರು ೯

ಸಾರ್ವಜನಿಕರಿಗೆ ರೂಪಾಯಿಗೆ ಎರಡು ಸೇರಿನಂತೆ ಅಕ್ಕಿಯನ್ನು ಒದಗಿಸಲು ಜಿಲ್ಲೆಯ ೨೯ ಕಡೆಗಳಲ್ಲಿ ಡಿಪೋಗಳನ್ನು ಏರ್ಪಡಿಸಲಾಗುವುದೆಂದು ಜಿಲ್ಲಾಧಿಕಾರಿಗಳು ನೆನ್ನೆ ದಿನ ಪತ್ರಿಕಾ ಸಮ್ಮೇಳನದಲ್ಲಿ ತಿಳಿಸಿದರು. ಉತ್ತಮವಾದ ಬರ್ಮಾ ಅಕ್ಕಿಯನ್ನು ಒದಗಿಸಲಾಗುವುದೆಂದು ಅವರು ಹೇಳಿದರು. ಹೇರಳವಾದ ಅಕ್ಕಿಯ ದಾಸ್ತಾನು ಸರ್ಕಾರದಲ್ಲಿರುತ್ತದೆ. ಈಗಾಗಲೇ ಸೊಸೈಟಿಗಳಿಗೆ ೧೩,೪೩೦ ಮಣ ಅಕ್ಕಿಯನ್ನು ಸರಬರಾಜು ಮಾಡಲಾಗಿದೆ ಅವಶ್ಯಕವಾದರೆ ಇನ್ನೂ ೩೫ ಸಾವಿರ ಮಣವನ್ನು ಕೊಡಲಾಗುತ್ತದೆ.

ಹೋಟೇಲುಗಳವರಿಗೆ ಅಗತ್ಯವಾದಷ್ಟು ಅಕ್ಕಿಯನ್ನು ಕೇಂದ್ರ ಡಿಪೋಗಳಿಂದ ಕೊಡಲಾಗುವುದು

ಸಂತೆಗಳಲ್ಲಿಯೂ ಸಹ ಲಾರಿಗಳ ಮೂಲಕ ಅಕ್ಕಿಯನ್ನು ಬಿಕರಿ ಮಾಡಲು ಏರ್ಪಡಿಸಲಾಗಿದೆ—ಎಂಬುದಾಗಿ ಅವರು ಹೇಳಿದರು

ಜಿಲ್ಲೆಯಲ್ಲಿ ಈಚೆಗೆ ಮಳೆಯು ಚೆನ್ನಾಗಿ ಆಗಿರುತ್ತದೆ ಸುವರ್ಣಾವತಿ ನದಿಯಲ್ಲಿ ಪ್ರವಾಹ ಬಂದಿರುವುದರಿಂದ ಚಾಮರಾಜನಗರ ಮತ್ತು ಯಳಂದೂರು ತಾಲ್ಲೂಕುಗಳ ಕೆರೆಗಳಿಗೆ ನೀರು ಸರಬರಾಜಾಗಿದೆ

ಪರಿಹಾರ ಕಾರ್ಯಗಳಿಗಾಗಿ ಒದಗಿಸಲಾಗಿದ್ದ ೯,೭೫,೦೦೦ ರೂ ಪೈಕಿ ೭,೪೫,೧೭೭ ರೂ. ವೆಚ್ಚವಾಗಿದೆ ೨೮೯ ಕೇಂದ್ರಗಳಲ್ಲಿ ಮಕ್ಕಳಿಗೆ ಹಾಲನ್ನೂ, ೯ ಕಡೆಗಳಲ್ಲಿ ಗಂಜಿಯನ್ನೂ, ೬೧೩ ಕಡೆಗಳಲ್ಲಿ ಮಕ್ಕಳಿಗೆ ಮಧ್ಯಾಹ್ನದ ಊಟವನ್ನೂ (ಈಚೆಗೆ ಹಾಲನ್ನೂ) ಕೊಡಲಾಗುತ್ತಿದೆ ಪರಿಹಾರ ಕಾರ್ಯಗಳಲ್ಲಿ ತೊಡಗಿರುವ ಕಾರ್ಮಿಕರಿಗಾಗಿ ರೂಪಾಯಿಗೆ ೨ ಸೇರಿನಂತೆ ಒದಗಿಸಲು ೧೩ ಸಾವಿರ ಮೂಟೆ ಅಕ್ಕಿಯನ್ನು ಕೊಡಲಾಗಿದೆ ೪೬೮ ರಸ್ತೆ ಕಾಮಗಾರಿಗಳು, ೭೫೮ ಗೋಕಟ್ಟೆಗಳು, ೩೭ ಸೇದುವ ಭಾವಿಗಳು ಪೂರ್ಣಗೊಂಡಿವೆ ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಎರಡು ಕೆರೆಗಳನ್ನು ದುರಸ್ತು ಮಾಡಲಾಗಿದೆ. ೬೧,೭೫೩ ಜನರಿಗೆ ಕೆಲಸವನ್ನು ಒದಗಿಸಲಾಗಿದೆ ಅಲ್ಲಿ ನಡೆಯುತ್ತಿರುವ ವಿಶೇಷ ರೀತಿಯ ವಿಸ್ತರಣಾ ಕಾರ್ಯಕ್ಕಾಗಿ ಮೂರು ವರ್ಷಕ್ಕೆ ಒಟ್ಟು ೧೭ ಲಕ್ಷ ರೂ ಮಂಜೂರಾಗಿದೆ. ಇದರ ಪೈಕಿ ಸಿಬ್ಬಂದಿಗಾಗಿ ಇದುವರೆಗೆ ೯೪,೬೮೪ ರೂ, ವ್ಯವಸಾಯ ವಿಸ್ತರಣೆಗೆ ೧೨,೪೧೩ ರೂ, ದನಗಳಿಗೆ ಕೃತಕ ವೀರ್ಯ ದಾನಕ್ಕಾಗಿ ೪೯,೬೩೦ ರೂ, ಸಾಮಾಜಿಕ ಶಿಕ್ಷಣಕ್ಕೆ ೨೭,೩೧೭ ರೂ, ಸಾಮಾನ್ಯ ವಿದ್ಯಾಭ್ಯಾಸಕ್ಕಾಗಿ ೨೭,೦೦೦ ರೂ, ಮಾರ್ಗಾನುಕೂಲಕ್ಕಾಗಿ ೧,೧೭,೫೩೦ ರೂ ಗೃಹ ಸೌಕರ್ಯಕ್ಕಾಗಿ ೩೧ ಸಾವಿರ ರೂ, ರೈತರಿಗೆ ಅಲ್ಪಾವಧಿ ಸಾಲಕ್ಕಾಗಿ ೩,೭೭,೦೦೦ ರೂ ವಿನಿಯೋಗಿಸಲಾಗಿದೆ-ಎಂಬುದಾಗಿ ಅವರು ತಿಳಿಸಿದರು

ಅಲ್ಜೀರಿಯದ ಐರೋಪ್ಯ ಭಾಗದ ಮೇಲೆ ದಾಳಿ

ಅಲ್ಜೀರಿಯ ದೇಶದ ಬೋನ್ ಎಂಬ ಊರಿನ ಐರೋಪ್ಯರ ಭಾಗದ ಮೇಲೆ ಮೊನ್ನೆ ರಾತ್ರಿ ರಾಷ್ಟ್ರೀಯರು ದಾಳಿ ಮಾಡಿದರೆಂದೂ, ೭ ಜನರು ಮಡಿದು ೨೪ ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ ಅವರು ಬಂದೂಕ ತೋರಿಸಿ ಒಂದು ಟ್ಯಾಕ್ಸಿಯನ್ನು ಹತ್ತಿ, ಊರಿನ ಜನನಿಬಿಡ ಪ್ರದೇಶದಲ್ಲಿ ಹೋಗುತ್ತಾ ಸಬ್ ಮೆಷಿನ್‌ಗನ್ನುಗಳನ್ನು ಹಾರಿಸಿದರೆಂದು ಹೇಳಲಾಗಿದೆ

೧೪೦ ವರ್ಷದವನ ನಿಧನ

ಪಾಕಿಸ್ತಾನದ ದಕ್ಷಿಣ ವಜೀರಿಸ್ತಾನದಲ್ಲಿ ಮಹಮದ್ ಫಜಲ್ ಎಂಬ ಹಳ್ಳಿ ಮುಖಂಡನೊಬ್ಬನು ಕಳೆದ ಶನಿವಾರ ಮೃತಪಟ್ಟನು. ಅವನಿಗೆ ೧೪೦ ವರ್ಷ ವಯಸ್ಸಾಗಿತ್ತು. ಜಗತ್ತಿನಲ್ಲೇ ಅವನು ಅತ್ಯಂತ ವಯೋವೃದ್ಧನೆಂದೂ, ಅವನ ತಂದೆಯು ತನ್ನ ೭೦ನೇ ವರ್ಷದಲ್ಲಿ ಮೃತಪಟ್ಟಿದ್ದನೆಂದೂ ಹೇಳಲಾಗಿದೆ

ಗೋಕಾಕ್ ನಾಟಕ
ಮಂಡಲಿಯವರು, ಮೈಸೂರು
ಟೌನ್‌ಹಾಲಿನಲ್ಲಿ
9-10 56ರಿಂದ ಪ್ರತಿ ದಿನ ರಾತ್ರಿ 10ಕ್ಕೆ
ಜಗಜ್ಯೋತಿ
ಬಸವೇಶ್ವರ
ಎಂಬ ಪೌರಾಣಿಕ ನಾಟಕವನ್ನು
ಅಭಿನಯಿಸುವರು
ಮ್ಯಾ|| ಪಿ. ಬಿ. ಹುಂಡೇಕರ್.
ಪ್ರೊ|| ಬಿ. ಟಿ. ಹೊಸಮನಿ

ಸುಸಮಯ! ಕಳೆದುಕೊಳ್ಳಬೇಡಿ!!
ದಸರಾ ಪ್ರಯುಕ್ತ ಎಲ್ಲಾ ಬ್ರ್ಯಾಂಡಿನ ಹೊಸ
ಹೊಸ ನಮೂನೆಯ ಉತ್ತಮ ದರ್ಜೆಯ
ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳಿಗಾಗಿ
ರಾಜಕಮಲ್
ಮೆಟಲ್ ಸ್ಟೋರ್ಸ್
ಅಶೋಕ ರೋಡ್, ಮೈಸೂರು
ಕೊಳ್ಳುವ ಮುನ್ನ ಇವರಲ್ಲಿಗೆ ಒಮ್ಮೆ ಭೇಟಿಕೊಡಿ
★
ಸೂಚನೆ-ಎಗ್ಜಿಬಿಷನ್ನಲ್ಲಿ ದೊರೆಯುವ ಬೆಲೆಗಿಂತ
ಕಮ್ಮಿ ಬೆಲೆಗೆ ದೊರೆಯುತ್ತವೆ
ಪ್ರೆಜೆಂಟೇಷನ್ ಸಾಮಾನುಗಳು ಅನೇಕ ತರಹದಲ್ಲಿ
ಸಹ ಸಿಗುತ್ತವೆ.
ಮೊದಲು ಸೆಲೆಕ್ಷನ್ ನಂತರ ವ್ಯಾಪಾರ

ವಿಶ್ವವಿದ್ಯಾಲಯದ ಮಸೂದೆಯಲ್ಲಿ ನ್ಯೂನತೆಗಳು

ಮೈಸೂರು ವಿಶ್ವವಿದ್ಯಾಲಯದ ಮಸೂದೆಯ ಜಂಟಿ ಸೆಲೆಕ್ಟ್ ಕಮಿಟಿಯ ವರದಿಯು ಈಗ ಪ್ರಕಟವಾಗಿದೆ. ಅಕೆಡೆಮಿಕ್ ಕೌನ್ಸಿಲ್ ಮತ್ತು ಫ್ಯಾಕಲ್ಟಿಗಳ ರಚನೆಯಲ್ಲಿ ಬೋರ್ಡ್ ಆಫ್ ಸ್ಟಡೀಸ್‌ಗಳ ಚೇರ್ಮನ್‌ಗಳಿಗೆ ಪ್ರಾತಿನಿಧ್ಯ ಕೊಟ್ಟಿಲ್ಲ ಈಗಿರುವಂತೆ ಇವರಿಗೆ ಪ್ರಾತಿನಿಧ್ಯವುಂಟು.

ಸೆನೆಟ್ ರಚನೆಯಲ್ಲಿ ಕೂಡಾ ಅಷ್ಟೆ. ದಕ್ಷಿಣ ಭಾರತದ ಇತರ ವಿಶ್ವವಿದ್ಯಾಲಯಗಳು ದಕ್ಷಿಣ ದೇಶ ಭಾಷೆಗಳಿಗೆ ಕೊಟ್ಟಿರುವಷ್ಟು ಪ್ರಾತಿನಿಧ್ಯವನ್ನು ಮೈಸೂರು ವಿಶ್ವವಿದ್ಯಾಲಯದವರು ಕೊಟ್ಟಿಲ್ಲ ಹೊಸದಾಗಿ ಸ್ಥಾಪಿತವಾಗಿರುವ ತಿರುಪತಿ ವಿಶ್ವವಿದ್ಯಾಲಯದಲ್ಲಿ ಕೂಡಾ ಈ ಭಾಷೆಗಳಿಗೆ ತಕ್ಕ ಪ್ರಾತಿನಿಧ್ಯ ಸಿಕ್ಕಿದೆ ಕನ್ನಡಕ್ಕೂ ಕೂಡಾ ಅಲ್ಲಿ ಒಂದು ಸ್ಥಾನವಿದೆ.

ಅಕ್ಟೋಬರ್ ೧೭ರಿಂದ ಮತ್ತೆ ಸೇರುವ ಶಾಸನಸಭೆ ಮತ್ತು ವಿಧಾನ ಪರಿಷತ್ತುಗಳಲ್ಲಿ ಚರ್ಚೆಗೆ ಬರುವ ವಿಶ್ವವಿದ್ಯಾಲಯದ ಮಸೂದೆಯಲ್ಲಿ ಈ ನ್ಯೂನತೆಗಳನ್ನು ಸರಿಪಡಿಸಬೇಕೆಂದು ಶಾಸನ ಸಭಿಕರನ್ನು ಪ್ರಾರ್ಥಿಸುತ್ತೇನೆ

ಒಬ್ಬ ವಿ|| ವಿ|| ನಿಲಯದ ಅಭಿಮಾನಿ

ನಾಳೆ ತರಕಾರಿ ಮತ್ತು ಫಲಪುಷ್ಪ ಪ್ರದರ್ಶನದ ಆರಂಭ

ನಗರದ ಪೌರಸಭೆಯ ಆಶ್ರಯದಲ್ಲಿ ನಾಳೆ ಬೆಳಗ್ಗೆ ೮ ಗಂಟೆಗೆ ದೇವರಾಜಾ ಮಾರ್ಕೆಟ್ಟಿನಲ್ಲಿ ತರಕಾರಿ ಮತ್ತು ಫಲಪುಷ್ಪಗಳ ಪ್ರದರ್ಶನದ ಆರಂಭೋತ್ಸವವನ್ನು ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ನೆರವೇರಿಸುವರು ಮಧ್ಯಾಹ್ನ ೪|| ಗಂಟೆಗೆ ಅವರು ಬಹುಮಾನಗಳನ್ನು ವಿನಿಯೋಗ ಮಾಡುವರು.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911.

Edited, Printed and Published by
A R Nagarajan at Sadhvi Press
D Subbiah Road, Mysore

॥ ಶ್ರೀ ॥
ರಾಜಭವನ್
ಬ್ರಾಹ್ಮಣರ ಕಾಫಿ ಕ್ಲಬ್ ಮತ್ತು ಭೋಜನ ಶಾಲಾ
ಜಗನ್ಮೋಹನ ಪ್ಯಾಲೇಸ್ ರಸ್ತೆ, ಸಂತೆಪೇಟೆ, ಮೈಸೂರು
ರುಚಿಯಾದ ತಿಂಡಿ ಪದಾರ್ಥಗಳು, ಸೇವಿಸಲು ರುಚಿಯಾದ ತಂಪು ಪಾನೀಯಗಳು
ಅತ್ಯುತ್ತಮವಾದ ಕಾಫಿ ಮತ್ತು ಸ್ವಚ್ಛ ಭೋಜನ ದೊರೆಯುತ್ತದೆ
ಸರ್ವರೂ ಪ್ರೋತ್ಸಾಹಿಸಬೇಕಾಗಿ ಕೋರಿಕೆ

ಪ್ರತಿ ೧೫ ಹಳ್ಳಿಗಳಿಗೊಂದು ಸಹಕಾರ ಸಂಘ

ಕೇಂದ್ರ ಆಹಾರ ಮತ್ತು ವ್ಯವಸಾಯ ಇಲಾಖೆಯವರು ಮಾಡಿರುವ ಅಂದಾಜಿನ ಪ್ರಕಾರ ದ್ವಿತೀಯ ಯೋಜನೆ ಅವಧಿಯಲ್ಲಿ ಪ್ರತಿ ೧೫ ಅಥವಾ ೨೦ ಹಳ್ಳಿಗಳಿಗೆ ಒಂದರಂತೆ ೬ ೧೦,೪೦೦ ಸುಲಭ ಸಾಲವೀಯುವ ಭಾರಿ ಸಹಕಾರ ಸಂಘಗಳು ಏರ್ಪಡಲಿವೆ ೧,೮೦೦ ಮಾರ್ಕೆಟಿಂಗ್ ಸಂಘಗಳೂ, ೧೧೮ ಉತ್ಪತ್ತಿ ವಿಧಾನದ ಸೊಸೈಟಿಗಳೂ, ೪೮ ಹತ್ತಿ ಜಿನ್ನಿಂಗ್ ಸ್ಥಳಗಳೂ ಮತ್ತು ೩೫ ಸಕ್ಕರೆ ಕಾರ್ಖಾನೆಗಳೂ ಸ್ಥಾಪಿತವಾಗಲಿವೆ. ೧೫೦ ಕೋಟಿ ರೂ ಗಳ ಅಲ್ಪಾವಧಿ ಸಾಲ, ೩೦ ಕೋಟಿಯ ಮಧ್ಯಮ ಮತ್ತು ೨೫ ಕೋಟಿಯ ದೀರ್ಘಾವಧಿ ಸಾಲವು ಕೊಡಲ್ಪಡಲಾಗುವುದು ಹಳ್ಳಿಯ ಪ್ರತಿ ಸಂಸಾರದವರೂ ಸಂಘಗಳ ಸದಸ್ಯರಾಗುವಂತೆ ಪ್ರೋತ್ಸಾಹಿಸಲಾಗುವುದು

ಪಂಜಾಬಿನಲ್ಲಿ ಛಡಿ ಶಿಕ್ಷೆ ರದ್ದು

ಪಂಜಾಬಿನಲ್ಲಿ ಛಡಿ ಶಿಕ್ಷೆಯನ್ನು ರದ್ದು ಸುವ ಶಾಸನವನ್ನು ಅಲ್ಲಿನ ವಿಧಾನ ಪರಿಷ ಅಂಗೀಕರಿಸಿರುತ್ತದೆ.

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ಮತ್ತು

ಕೊಯಮತ್ತೂರು ಸಣ್ಣ	೪೮	೦	೦	೪೬
ರತ್ನಚೂಡಿ	೪೦	೬	೦	೪೩ ೧೭
ಸೇಲಂ ಸಣ್ಣ	೪೩	೦	೦	
ಕಿಂಬೂತಿ	೪೧	೧೩	೦	
[illegible]	೨೮	೧೦	೦	೩೬
ರಾಗಿ	೨೮	೪	೦	೪೮ ೧೪
ಜೋಳ	೪೩	೪	೦	೪೬
ಕಂಬು	೪೩	೧೦	೦	೪೪
ನವಣೆ	೨೪	೮	೦	
ಕಡಲೆಕಾಯಿ	೬	೨	೦	೨೦
ಎಳ್ಳು	೮೨	೮	೦	೮೩
ಹುರುಳಿ	೨೮	೦	೦	೨೮ ೧೧
ಹೆಸರು	೫೬	೪	೦	೫೭
ಹಲಸಂದೆ	೫೦	೪	೦	೫೯
ಉದ್ದು	೫೫	೦	೦	
ಧನಿಯ	೨೬	೦	೦	೨೭
ತೆಂಗಿನಕಾಯಿ ೧೦೦೦	೧೬೦	೦	೦	೨೧೫

ಆನಂದವಿಹಾರ್ ಟ್ರಾವೆಲ್ಸ್
ಬೆಂಗಳೂರು-2.
ಅಕ್ಟೋಬರ್ 26, 27 ಮತ್ತು 28 ರಂದು
ಜೋಗ್ ಜಲಪಾತ
ಭದ್ರಾವತಿ ಪ್ರವಾಸ:-
ಮೈಸೂರಿನಿಂದಲೇ ಪ್ರವಾಸ ವ್ಯವಸ್ಥೆ,
ಊಟ, ವಸತಿ ಸೇರಿ ಒಬ್ಬರಿಗೆ
ರೂ 27-8-0 ಮಾತ್ರ
ಇಂದೇ ನಿಮ್ಮ ಸ್ಥಳ ಕಾಯ್ದಿರಿಸಿ :
1. ಹೊಯಿಸಳ ಕರ್ನಾಟಕ ಸಂಘ
(ಫೋನ್ : 254) ಲಕ್ಷ್ಮೀಪುರಂ.
2. ಪದಕಿ ಸೋಡಾ ಫ್ಯಾಕ್ಟರಿ,
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ನ್ಯೂ ಚಾಮುಂಡೇಶ್ವರಿ ಕೆಫೆ ✱ ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
ಇಲವಾಲದ ರಸ್ತೆ, ಮೈಸೂರು
ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರಕ್ಕೂ, ಮೈಸೂರು ಮತ್ತು ಬೊಂಬಾಯಿ ರೀತಿಯ ರುಚಿರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಏರ್ಪಡಿಸಿರುವ ಒಳ್ಳೆ ಗಾಳಿ ಬೆಳಕುಗಳುಳ್ಳ ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ. : ಸಿ. ಬಿ. ಎಂ. ಚಂದ್ರಯ್ಯ, ಪ್ರೊಪ್ರೈಟರ್ [ಫೋನ್ ನಂ. 54

ಪ್ರಭುದೇವಾ ಥಿಯೇಟರ್ ★ (ಪದ್ಮಾಟಾಕೀಸ್)
11—10—56ನೇ : ಗುರುವಾರದಿಂದ : ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು
ವಿಶ್ವಕಲಾರವರ ಕನ್ನಡ ಚಿತ್ರ
ಓಹಿಲೇಶ್ವರ ★ ಓಹಿಲೇಶ್ವರ
ಪಾತ್ರ: ಶ್ರೀರಂಜನಿ (ಜೂನಿಯರ್), ರಾಜಕುಮಾರ್, ಕಲ್ಯಾಣಕುಮಾರ್, ವಿಶಾಲಾಕ್ಷಿ, ನರಸಿಂಹರಾಜು, ಜಿ. ವಿ. ಅಯ್ಯರ್ ಮುಂತಾದವರು
ನಾಲ್ಕು ವಾರಗಳ ಕಾಲ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು - ಪ್ರಯೋಜನ ಪಡೆಯಿರಿ
[illegible]



[illegible] ಪ್ರತಿ 3 [illegible]

ಬ್ರಾಂಕಾಲ್
[illegible]
[illegible]
[illegible]
[illegible]
[illegible] ಆಂಡ್ ಕೋ.,
[illegible]
713 [illegible]
[illegible]
ಬೆಂಗಳೂರು-2

ಪುಟ : ೦೫] SADHVI : WEDNESDAY 10—10—1956 ಮೈಸೂರು : ಬುಧವಾರ ೧೦—೧೦—೧೯೫೬ [ಸಂಚಿಕೆ : ೨೩

ಪಾಕಿಸ್ತಾನದ ಪ್ರತಿಭಟನಾ ಪತ್ರಕ್ಕೆ ಭಾರತದ ತಿರಸ್ಕಾರ

ಪಾಕಿಸ್ತಾನದ ಪ್ರತಿಭಟನಾ ಪತ್ರಕ್ಕೆ ಭಾರತದ ತಿರಸ್ಕಾರ

ಭಾರತದಲ್ಲಿರುವ ಅಲ್ಪ ಸಂಖ್ಯಾತರ ಬಗ್ಗೆ ವರ್ತನೆ ಸಂಬಂಧದಲ್ಲಿ

ಅಲ್ಪ ಸಂಖ್ಯಾತರ ಬಗ್ಗೆ ಭಾರತದ ವರ್ತನೆ ...ಗಿ ಪಾಕಿಸ್ತಾನವು ಕಳುಹಿಸಿದ್ದ ಪ್ರತಿಭಟನಾ ...ತ್ರವನ್ನು ಭಾರತ ಸರ್ಕಾರದವರು ತಿರಸ್ಕರಿಸಿ...ದಾಗಿ ವರದಿಯಾಗಿದೆ ಪತ್ರದಲ್ಲಿ ಮುಸ್ಲಿ... ...ವಿಷಯವಾಗಿಯಾಗಲಿ, ಅಥವಾ 'ಮತೀಯ ಮುಖಂಡರು' ಎಂಬ ಪುಸ್ತಕದ ವಿಚಾರ...ಗಿಯಾಗಲಿ ನಿರ್ದಿಷ್ಟವಾಗಿ ಬರೆದಿರಲಿಲ್ಲವೆಂ... ಹೇಳಲಾಗಿದೆ

...ರಿಸ್ಸಾ ಮುಖ್ಯಮಂತ್ರಿ ನವಕೃಷ್ಣ ...ೌಧುರಿಯವರ ರಾಜೀನಾಮೆ

ಒರಿಸ್ಸಾ ಮುಖ್ಯ ಮಂತ್ರಿ ನವಕೃಷ್ಣ ಚೌಧು...ಯವರು ಅಲ್ಲಿನ ಶಾಸನಸಭಾ ಕಾಂಗ್ರೆಸ್ ಪಕ್ಷ ...ಾಯಕತ್ವಕ್ಕೂ ಮತ್ತು ಕಾಂಗ್ರೆಸ್ ಸಂಸ್ಥೆ... ಪ್ರಾಥಮಿಕ ಸದಸ್ಯತ್ವಕ್ಕೂ ರಾಜೀನಾಮೆ ...ಟ್ಟಿದ್ದಾರೆ. ಅವರು ಇನ್ನು ಮುಂದೆ ಕೇವಲ ರ...ತ್ಮಕ ಕಾರ್ಯಗಳಲ್ಲಿ ತೊಡಗುವರು

...ವ್ಯಾಪಾರದಲ್ಲಿ ತೊಡಗಿದ್ದ ವನ ಕತ್ತೆ ಸವಾರಿ

...ಲೋಕಾರದಲ್ಲಿ ಅಸೀಟಿ ವ್ಯಾಪಾರದಲ್ಲಿ ನಿರತ...ಗಿದ್ದ ಒಬ್ಬನಿಗೆ ಕಳೆದ ಶನಿವಾರ ತಕ್ಕ ಪ್ರತೀ... ನಡೆಸುವ ಸಲುವಾಗಿ ಅವನ ಮುಖಕ್ಕೆ ಮ...ಳಿದು, ಕತ್ತಿಗೆ ಪಾದರಕ್ಷೆಗಳ ಸರ ಹಾಕಿ, ...ಯ ಮೇಲೆ ಕುಳ್ಳಿರಿಸಿ ಮೆರವಣಿಗೆ ನಡೆಸಿದ ...ಂಗವು ವರದಿಯಾಗಿದೆ. ಅವನು ಅವಮಾನ...ಡುವುದನ್ನೂ ಲಕ್ಷಿಸದೆ, ಆನಂದವಾಗಿ ಸಿಗ... ಸೇದುತ್ತಾ ಕತ್ತೆ ಸವಾರಿಮಾಡಿದನೆಂದೂ ...ಹೋಗುತ್ತಿದ್ದ ಜನರು ಅವನ ತಲೆ ಮೇ... ಪಾದರಕ್ಷೆಗಳಿಂದ ಹೊಡೆಯುತ್ತಾ, ಮೆರವಣಿ...ನ್ನು ಮೂರು ಗಂಟೆಗಳ ಕಾಲ ನಡೆಸಿದರೆಂ... ಗೊತ್ತಾಗಿದೆ. ಸ್ಥಳೀಯ ಜಿಲ್ಲಾಧಿಕಾರಿಗಳ ಮತ್ತು ಪೋಲೀಸು ಅಧೀಕರಿಗಳಮುಂದೆ ಮೆ...ಗೆಯು ಹಾಯ್ದು ಹೋದುದನ್ನು ಅಧಿಕಾ... ನೋಡಿದುದಾಗಿ ವರದಿಯಾಗಿದೆ

...ರು ರೇಡಿಯೋ ನಾಳೆ ಕಾರ್ಯಕ್ರಮ

...ಗ್ಗೆ ೭-೫ ನಾಗಸ್ವರ ಮತ್ತು ಕ್ಲಾರಿಯೊ... ೭-೧೫ ದೀಕ್ಷಿತರ ನವಾವರಣ ಕೀರ್ತನೆ... ಮತ್ತು ೮-೧೫ ಆರ್. ಚಂದ್ರ-ರಾವ್ಯ...ನ. ಮಧ್ಯಾಹ್ನ ೧೨ ಶೈಲಮ್ಮ ಕಡಾಂಬಿ-...ತ. ೧ ಎ. ವೀರಭದ್ರಯ್ಯ-ಪಿಟೀಲು. ... ಹಿಂದಿ ಸಂಗೀತ. ೨-೧೫ ರಿಕಾರ್ಡು. ...೫ ೩೦ ಲಲಿತ ರಾಮಾನುಜಂ—ಸಂಗೀತ. ... ಜಾನಪದ ಗೀತೆ. ೭-೩೦ ನಾಡಿನ ಕೊ...ಕನ್ನಡ ಭಾಷಣ. ೮ ಕಥಾ ಸಪ್ತಾಹ-... ೮-೧೫ ಎ. ವೀರಭದ್ರಯ್ಯ ಪಿಟೀಲು ... ನಿಮ್ಮ ಮೆಚ್ಚಿನ ಗೀತೆಗಳು. ೯-೧೫ ...ಷ್ ಭಾಷಣ. ೯-೩೦ ಯಾತ್ರಿಕರ ಮು...ವಿಶೇಷ ಕಾರ್ಯಕ್ರಮ. ೯ ೫೦ ರಸಮಂಜರಿ

ಸರ್ಕಾರದ ಮೇಲೆ ಹೈಕೋರ್ಟಿನ ಟೀಕೆ ರದ್ದಿನ ಅರ್ಜಿ ವಜಾ

ದಸರಾ ಗಲಭೆ ಮೊಕದ್ದಮೆ ಪ್ರತಿಧ್ವನಿ

ಬೆಂಗಳೂರು ೯

೧೯೫೩ ರಲ್ಲಿ ಮೈಸೂರಿನಲ್ಲಿ ಆದ ದಸರಾ ಕುಸ್ತಿ ಗಲಭೆಗಳ ಮೊಕದ್ದಮೆ ಆಪಾದಿತರ ಪರ ಸಲ್ಲಿಸಲಾದ ರಿವಿಜನ್ ಅರ್ಜಿ ಬಗ್ಗೆ ಆಗಿನ ಶ್ರೇಷ್ಠ ನ್ಯಾಯಾಧೀಶರಿಂದ ಶ್ರೀ ಪಿ. ಮೇದಪ್ಪನವರು ಸರ್ಕಾರದ ಮೇಲೆ ಮಾಡಿದ್ದ ಹಲವು ಟೀಕೆಗಳನ್ನು ದಾಖಲೆಗಳಿಂದ ತೆಗೆಯುವಂತೆ ಪ್ರಾರ್ಥಿಸಿ ಸರ್ಕಾರದವರು ಸಲ್ಲಿಸಿದ್ದ ಅರ್ಜಿಯನ್ನು ಜಸ್ಟಿಸ್ ಶ್ರೀ ಹೊಂಬೇಗೌಡರು ನೆನ್ನೆ ವಜಾ ಮಾಡಿದರು

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ, ಆ ಮೊಕದ್ದಮೆಗೆ ಸಂಬಂಧಿಸಿದವರ ಬಗ್ಗೆ ಕಟುವಾದ ಟೀಕೆಗಳು ಆಗಿರುವುದು ನಿಜವೆಂದೂ, ಟೀಕೆಗಳು ತೀರ್ಪಿನಿಂದ ಬೇರೆಯಾಗಿರುವುವೆಂದೂ, ಅವುಗಳನ್ನು ತೆಗೆದ ಸಂದರ್ಭದಲ್ಲಿ ತೀರ್ಪಿನ ವಿಧಾನಕ್ಕೆ ಲೋಪ ಮಾಡಿದಂತಾಗುವುದೆಂದೂ ತಿಳಿಸಿದ್ದಾರೆ ಈ ಬಗ್ಗೆ ನ್ಯಾಯಾಧೀಶರ ಅಭಿಪ್ರಾಯವು ಎಷ್ಟು ಮಟ್ಟಿಗೆ ನ್ಯಾಯಬದ್ಧವಾಗಿರುವುದೆಂಬುದು ತಮ್ಮ ವ್ಯಾಪ್ತಿಗೆ ಸೇರಿಲ್ಲವೆಂದೂ, ಈ ವಿಷಯವಾಗಿ ಸುಪ್ರೀಂ ಕೋರ್ಟಿಗೆ ಹೋಗಬೇಕೆಂದೂ ನ್ಯಾಯಾಧೀಶರು ಅಭಿಪ್ರಾಯಪಟ್ಟಿರುವರು.

ನೂತನ ಮೈಸೂರಿನ ಮುಖ್ಯಮಂತ್ರಿತ್ವ

ಚುನಾವಣೆಯಲ್ಲಿ ದಾತಾರರ ಸ್ಪರ್ಧೆಯಿಲ್ಲ

ದಾವಣಗೆರೆ ವಕೀಲರ ಸಂಘದವರು ಕೇಂದ್ರ ಗೃಹ ಮಂತ್ರಿ-ದಾತಾರ್‌ರವರ ಗೌರವಾರ್ಥವಾಗಿ ಇತ್ತ ಸತ್ಕಾರ ಕೂಟದಲ್ಲಿ ಶ್ರೀ ಗಾಂಜಿ ವೀರಪ್ಪನವರು ಕೇಳಿದ ಪ್ರಶ್ನೆಗೆ ಉತ್ತರವಾಗಿ, ತಾವು ನೂತನ ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವಕ್ಕೆ ಸ್ಪರ್ಧಿಸುವುದಿಲ್ಲವೆಂದು ಹೇಳಿರುತ್ತಾರೆ ಈ ಬಗ್ಗೆ ಪಿಸುಮಾತಿನ ವದಂತಿಗಳನ್ನು ಅವರು ಅಲ್ಲಗಳೆದಿರುತ್ತಾರೆ ಹೊರಗಿನಿಂದ ನಾಯಕರನ್ನು ಹೇರುವುದು ಪ್ರಜಾಸತ್ತಾತ್ಮಕವಲ್ಲವೆಂದೂ, ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷವು ತನ್ನ ಮುಖಂಡರನ್ನು ಪ್ರಜಾಪ್ರಭುತ್ವ ರೀತಿಯಲ್ಲಿ ಆರಿಸಿಕೊಳ್ಳುವುದೆಂದೂ, ತಮ್ಮನ್ನು ಈ ವಿಚಾರದಲ್ಲಿ ಯಾವ ದಾಕ್ಷಿಣ್ಯಕ್ಕೂ ಸಿಕ್ಕಿಸಬಾರದೆಂದೂ ಅವರು ತಿಳಿಸಿದ್ದಾರೆ.

ಮಂತ್ರಿಗಳಿಂದ ಖಾಸಗಿ ನಿಧಿ ಬಳಕೆ ಬಗ್ಗೆ ತನಿಖೆ

ಕಾಂಗ್ರೆಸ್ ಹೈಕಮಾಂಡಿನವರು ಸಂಸ್ಥಾನಗಳ ಮುಖ್ಯ ಮಂತ್ರಿಗಳಿಗೆ ಸೂಚನೆಯೊಂದನ್ನು ಕಳುಹಿಸಿ, ನಾನಾ ಮಂತ್ರಿಗಳು ಖಾಸಗಿಯಾಗಿ ಧನವನ್ನು ವಸೂಲು ಮಾಡಿ ಅವುಗಳ ಲೆಕ್ಕವನ್ನು ನಿರ್ವಹಿಸುತ್ತಿರುವ ಬಗ್ಗೆ ವಿವರಗಳನ್ನು ಒಪ್ಪಿಸಬೇಕೆಂದು ತಿಳಿಸಿರುತ್ತಾರೆ ಪ್ರಧಾನಿ ನೆಹರೂರವರ ನಿಧಿಯನ್ನು ಈ ಸಂದರ್ಭದಲ್ಲಿ ಉದಹರಿಸಿ, ಅದು ಸರಿಯಾಗಿ ಆಡಿಟ್ ಆಗಿ, ಪ್ರಕಟಿಸಲ್ಪಡುತ್ತಿರುವುದನ್ನು ಸಚಿವರುಗಳ ಗಮನಕ್ಕೆ ತರಲಾಗಿದೆ.

ದಾರಾಷಾರವರಿಗೆ ಮತೀಯ ಸಂಸ್ಥೆಗಳ ಕಮಿಷನರ್ ಹುದ್ದೆ

ಅಂತರ ಸಂಸ್ಥಾನ ಸಚಿವರ ಸಮಿತಿಯ ತೀರ್ಮಾನಗಳು

ಮೈಸೂರು ೯

ಅಂತರ ಸಂಸ್ಥಾನ ಸಚಿವರುಗಳ ಸಮಿತಿ ಸಭೆಯು ನೆನ್ನೆ ಇಲ್ಲಿ ಸೇರಿ ಇತರ ವಿಚಾರಗಳ ಜೊತೆಗೆ ಅಧಿಕಾರಿಗಳನ್ನು ನೇಮಕ ಮಾಡಿತು. ಅದರ ಪ್ರಕಾರ, ಸಂಸ್ಥಾನದ ಮುಖ್ಯ ನ್ಯಾಯಾಧಿಕಾರಿಗಳಾಗಿರುವ ಶ್ರೀ ಎ. ಕೆ. ವರದರಾಜನ್‌ರವರು ನೂತನ ಮೈಸೂರಿನ ಮುಖ್ಯ ನ್ಯಾಯಾಧಿಕಾರಿಗಳಾಗುವರು ಗುಲ್ಬರ್ಗಾ ಕಲೆಕ್ಟರ್ ಶ್ರೀ ಎಂ. ವಾಸುದೇವರಾಯರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖಾ ಕಾರ್ಯದರ್ಶಿಯಾಗುವರು. ಮುಜರಾಯಿ ಕಾರ್ಯದರ್ಶಿ ಶ್ರೀ ಸಿ. ದಾರಾಷಾರವರು ಹೋಲ್‌ಟೈಮ್ ಮುಜರಾಯಿ ಮತ್ತು ಮತೀಯ ಸಂಸ್ಥೆಗಳ ಕಮಿಷನರರಾಗುವರು

ಬೊಂಬಾಯಿಯ ಶ್ರೀ ಪಿ. ವೀರಭದ್ರಪ್ಪ ಸಹಕಾರ ಸಂಘಗಳ ರಿಜಿಸ್ಟ್ರಾರ್ ಆಗುವರು. ಈಗ ರಿಜಿಸ್ಟ್ರಾರಾಗಿರುವ ಶ್ರೀ ಮರುಳೇಗೌಡರು ಚೀಫ್ ಮಾರ್ಕೆಟಿಂಗ್ ಅಧಿಕಾರಿಗಳಾಗುವರು

ನೂತನ ಸಂಸ್ಥಾನದ ಎಲ್ಲಾ ಇಲಾಖೆಗಳ ಮತ್ತು ಆಡಳಿತದ ಸ್ವರೂಪ ಬಗ್ಗೆ ನೆನ್ನೆ ಸಮಿತಿಯು ಅನೇಕ ನಿರ್ಧಾರಗಳನ್ನು ಕೈಗೊಂಡಿತು.

ಬೆಂಗಳೂರಿಗೆ ಬರಲಿರುವ ಸುಮಾರು [illegible] ಜನ ನೌಕರರುಗಳಿಗೆ ವಸತಿ ಸೌಕರ್ಯ ಕಲ್ಪಿಸಲು ನವೆಂಬರ್ ೧ ರೊಳಗೆ ಬೆಂಗಳೂರು ರಾಜಧಾನಿ ನಗರದಲ್ಲಿ ೫೦೦ ಮನೆಗಳನ್ನು ತೆಗೆದುಕೊಳ್ಳಲು ನಿರ್ಧರಿಸಲಾಯಿತು.

ನೃತ್ಯ ಮತ್ತು ಸಂಗೀತದಲ್ಲಿ ಹೆಚ್ಚಿನ ಶಿಕ್ಷಣಕ್ಕಾಗಿ ಮೈಸೂರು ಅಭ್ಯರ್ಥಿಗಳು

ನೃತ್ಯ ಮತ್ತು ಸಂಗೀತದಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲು ಕೇಂದ್ರ ಸಂಗೀತ ನಾಟಕ ಅಕಾಡೆಮಿಯವರು ಆರಿಸಿರುವ ಅಭ್ಯರ್ಥಿಗಳಲ್ಲಿ ಮೈಸೂರಿನ ಶ್ರೀಮತಿ ಡಿ. ಶ್ರೀಮತಿಯವರು, ಶ್ರೀ ಹೆಚ್. ವಿ. ರಾಜಗೋಪಾಲರವರೂ ಇದ್ದಾರೆ. ಅವರುಗಳು ಕ್ರಮವಾಗಿ ಸಂಗೀತ ಮತ್ತು ನೃತ್ಯ ವಿಭಾಗಗಳಲ್ಲಿ ಹೆಚ್ಚಿನ ಶಿಕ್ಷಣ ಪಡೆಯಲಿರುವರು.

ಮನೆ ಕುಸಿದು ಮೂವರ ಮರಣ

ಬೆಂಗಳೂರಿನ ಅರಮನೆ ನುಗ್ಗೆಹಳ್ಳಿ ಪ್ರದೇಶದಲ್ಲಿ ಕಳೆದ ಭಾನುವಾರ ಮುಂಜಾನೆ ಮಣ್ಣಿನ ಮನೆಯು ಕುಸಿದು, ಒಳಗೆ ಮಲಗಿದ್ದ ಮೂವರು ಮೃತಪಟ್ಟರು.

ಕೇಡಿಗಳ ಬಂಧನ

ನೆನ್ನೆ ಮಧ್ಯಾಹ್ನ ವೆಂಕಟೇಶ್ವರರಾವ್ ಎಂಬುವನು ನಗರದ ಅಂಚೆ ಕಛೇರಿಯಲ್ಲಿ ೧೦೦ ರೂಗಳ ಇನ್ಷೂರ್ ಕವರ್ ಇಟ್ಟುಕೊಂಡು ನಿಂತಿದ್ದಾಗ ಚಿಲ್ಲರೆಯನ್ನು ಕೆಳಗೆ ಕೆಡವಿ ಅವನ ಗಮನವನ್ನು ಬೇರೆಡೆ ಸೆಳೆದು, ಕವರನ್ನು ಅಪಹರಿಸಿದೆಂದು [illegible] ಹೋಟೆಲಿನಲ್ಲಿ [illegible] ಎಂಬುವನನ್ನು ಮತ್ತು ರಾತ್ರಿ ಹೆಗ್ಗದೇವಿಯಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದ ಧರ್ಮಲಿಂಗಂ ಎಂಬುವನನ್ನು ಲಷ್ಕರ್ ಪೋಲೀಸರು ಬಂಧಿಸಿದ್ದಾರೆ.

ಸಂಸ್ಕೃತ ವಿದ್ವಾಂಸರಿಗೆ ರಾಜಪ್ರಮುಖರಿಂದ ಸನ್ಮಾನ

ಮೈಸೂರು [illegible]

ರಾಜಪ್ರಮುಖರು [illegible]

ಮತ್ತು ಪ್ರದರ್ಶನದಲ್ಲಿ [illegible]

[illegible]

ಮತ್ತು ಪ್ರದರ್ಶನದಲ್ಲಿ [illegible] ಸ್ಪರ್ಧೆ

[illegible]

ಪಂಡಿತ [illegible] ಪೌರಸಭಾ ಮಾನ ಪತ್ರ

ನಗರದಲ್ಲಿ ಗೋಷ್ಠಿ ಮತ್ತು [illegible]

ಮೈಸೂರು [illegible]

[illegible]

[illegible]

ಕರ್ನಾಟಕ ಸಂಸ್ಥಾನದ ಉದಯೋತ್ಸವ

ಮೈಸೂರು ೧೦

ಮೈಸೂರು ಕರ್ನಾಟಕ ಸಂಘದ ಸಕಲ ಸದಸ್ಯರ ಸಭೆಯು ಕಳೆದ ಭಾನುವಾರ ಮಾದರಿ ಶಾಲೆಯಲ್ಲಿ ಶ್ರೀ ಎಸ್. ವಿ. ರಂಗಣ್ಣನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಪ್ರಸಕ್ತ ಸಾಲಿಗೆ ಶ್ರೀ ಎಸ್. ವಿ. ರಂಗಣ್ಣನವರು ಅಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ರಾಮಸ್ವಾಮಿ ಮತ್ತು ಶಿಂಘುವಳ್ಳಿ ಅನಂತಮೂರ್ತಿಯವರುಗಳು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀಗಳಾದ ಕೆ. ವಿ. ರಾಘವಾಚಾರ್, ಎಂ. ಗೋಪಾಲಕೃಷ್ಣ ಅಡಿಗ, ನ. ಭದ್ರಯ್ಯ, ಟಿ ವೆಂಕಟರಮಣಯ್ಯ, ಕೆ.ಎಸ್. ನಾರಾಯಣಸ್ವಾಮಿ ಮತ್ತು ಎಸ್. ಶ್ರೀನಿವಾಸಮೂರ್ತಿಯವರು ಕಾರ್ಯಕಾರೀ ಸಮಿತಿಯ ಸದಸ್ಯರುಗಳಾಗಿಯೂ ಆರಿಸಲ್ಪಟ್ಟರು.

ನವೆಂಬರ್ ೨, ೩ ಮತ್ತು ೪ನೇ ತಾರೀಕುಗಳಲ್ಲಿ ಸಂಘದ ಆಶ್ರಯದಲ್ಲಿ ಕನ್ನಡ ಪ್ರಾಂತ್ಯೋದಯ ಮಹೋತ್ಸವವನ್ನು ಆಚರಿಸಬೇಕೆಂದು ತೀರ್ಮಾನವಾಯಿತು. ಈ ಉತ್ಸವವನ್ನು ಯಶಸ್ವಿಯಾಗಿ ನಡೆಸಲು ಪುರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಯಿತು. ಸಮಾರಂಭಕ್ಕೆ ಶ್ರೀಗಳಾದ ಡಿ. ವಿ. ಜಿ, ವಿ. ಸೀ, ಮಾಸ್ತಿ, ಬೇಂದ್ರೆ, ಮುಗಳಿ, ಗೋವಿಂದಪೈ, ಹುಕ್ಕೇರಿಕರ್, ಸಿದ್ದಲಿಂಗಪ್ಪ, ಪೂಣಚ್ಚ ಮೊದಲಾದವರನ್ನು ಆಹ್ವಾನಿಸಬೇಕೆಂದು ನಿಶ್ಚಯಿಸಲಾಯಿತು

ಮೈಸೂರಿಗೆ ವಿಶೇಷ ರೈಲು ಮತ್ತು ಬಸ್ಸುಗಳು

ದಸರಾ ಸಂದರ್ಭದಲ್ಲಿ ಮೈಸೂರು-ಬೆಂಗಳೂರುಗಳ ನಡುವೆ ೫೦ ಸೀಟುಗಳ ೮೦ ಸರ್ಕಾರಿ ಬಸ್ಸುಗಳು, ೫ ವಿಶೇಷ ರೈಲುಗಳು ನಿನ್ನೆಯಿಂದ ಓಡಾಡುತ್ತಿವೆ. ಇವಲ್ಲದೆ ಮಾಮೂಲಿನ ೧೫ ಬಸ್ಸುಗಳು ಮತ್ತು ೫ ರೈಲುಗಳ ೪ ಲಕ್ಷ ಜನರು ಬರುತ್ತಿರುವರು. ವಿಜಯದಶಮಿ ದಿನ ಎಲ್ಲಾ ವಾಹನಗಳನ್ನೂ ಜನರ ಸೌಕರ್ಯಕ್ಕಾಗಿ ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳುವರು. ಪ್ರತಿ ಮುಕ್ಕಾಲುಗಂಟೆಗೊಂದು ಬಾರಿ ಒಂದು ಬಸ್ಸು ಮತ್ತು ಒಂದು ರೈಲು ಈಗ ಓಡಾಡುತ್ತಿವೆ.

1956ನೇ ದಸರಾ ಪ್ರಯುಕ್ತ
ವಿಮಾನ ವಿಹಾರ
5 ದಿನಗಳು ಮಾತ್ರ
ತಾ|11-10-1956ರಿಂದ15-10-1956ರವರೆಗೆ
ಮೈಸೂರಿನಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣದಿಂದ 4 ಸೀಟಿನ ವಿಮಾನದಲ್ಲಿ ಎಲ್ಲರೂ ಕುಳಿತುಕೊಳ್ಳಲು ಅವಕಾಶ
ಬೆಳಿಗ್ಗೆ 8 ರಿಂದ 12 ಘಂಟೆ ವರೆಗೆ
ಮಧ್ಯಾಹ್ನ 2 ರಿಂದ ಸೂರ್ಯಾಸ್ತ
ಟಿಕೆಟ್ಟುಗಳು ಮಂಡಕಳ್ಳಿ, ವಿಮಾನ ನಿಲ್ದಾಣದಲ್ಲಿ ಮಾರಲ್ಪಡುತ್ತವೆ
ವಿವರಗಳಿಗೆ ಹಸ್ತ ಪತ್ರಿಕೆಗಳನ್ನು ನೋಡಿ
ಮೈಸೂರಿನಲ್ಲಿ ಫೋನ್ ನಂ. 610
ಗಾರ್ನಮೆಂಟ್ ಫ್ಲೈಯಿಂಗ್ ಟ್ರೈನಿಂಗ್ ಸ್ಕೂಲ್,
ಬೆಂಗಳೂರು (ಫೋನ್ ನಂ. 2251)

ದೆಹಲಿಯಲ್ಲಿ ಕನ್ನಡ ಪ್ರೌಢ ಶಾಲೆಗಾಗಿ ನಿಧಿ ಶೇಖರಣೆ

ದೆಹಲಿಯ ಕರ್ನಾಟಕ ಸಂಘದವರು ಕಳೆದ ೬ ನೇ ತಾರೀಕು ಹೊಸದಾಗಿ ಕನ್ನಡ ಪ್ರೌಢಶಾಲೆಯ ಕಟ್ಟಡದ ನಿಧಿಯನ್ನು ಪ್ರಾರಂಭಿಸಿದರು. ಕಳೆದ ವರ್ಷ ಸರ್ಕಾರದ ಪ್ರಶಸ್ತಿ ಪಡೆದ ಶಿರಡಿ ಚ ಶ್ರೀ ಸಾಯಿಬಾಬಾ ಎಂಬ ಮರಾಠಿ ಚಲನಚಿತ್ರದ ಸಹಾಯಾರ್ಥ ಪ್ರದರ್ಶನವನ್ನು ನಡೆಸಲಾಯಿತು. ರಾಷ್ಟ್ರೀಯ ಕನ್ನಡ ವಿದ್ಯಾಭ್ಯಾಸ ಸಂಘದ ಪ್ರಿನ್ಸಿಪಾಲ್ ಶ್ರೀ ಎ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಅವರು ಭಾಷಣ ಮಾಡಿ ಚಿತ್ರದ ತಯಾರಕರಾದ ಶ್ರೀ ಕೇಶವರಾವ್‌ಸಾಠೆಯವರ ಔದಾರ್ಯವನ್ನು ಪ್ರಶಂಸಿಸಿ, ಕರ್ನಾಟಕ ಸಂಘದವರ ಪ್ರಯತ್ನಕ್ಕೆ ಯಶಸ್ಸನ್ನು ಕೋರಿದರು. ಶ್ರೀ ಸಾಠೆಯವರ ಗೌರವಾರ್ಥವಾಗಿ ಸಂಘದವರು ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು.

ಡಕಾಯಿತಳ ಹಿಂಬಾಲಕರಿಂದ ೧೪ ಮಂದಿಯ ಕೊಲೆ

ಮಧ್ಯ ಭಾರತದ ದಾತಿಯಾ ಜಿಲ್ಲೆಯ ಮದನಪುರ ಎಂಬ ಹಳ್ಳಿ ಜನರು ಡಕಾಯಿತರ ಬಗ್ಗೆ ಪೋಲೀಸರಿಗೆ ವರ್ತಮಾನ ಕೊಟ್ಟರೆಂಬ ಕಾರಣಕ್ಕಾಗಿ ಪುತ್ಲಿ ಎಂಬ ಡಕಾಯಿತಳೂ, ಆಕೆಯ ಹಿಂಬಾಲಕರೂ ಹಳ್ಳಿ ಮೇಲೆ ಧಾಳಿ ಮಾಡಿ ೧೪ ಜನರನ್ನು ಗುಂಡಿನಿಂದ ಹೊಡೆದು ಕೊಲೆ ಮಾಡಿರುತ್ತಾರೆ. ಹಲವರನ್ನು ಅಪಹರಿಸಿಕೊಂಡು ಹೋಗಲಾಗಿದೆ.

ಚಂದ್ರಗ್ರಹ ಸುತ್ತಿ ಹಿಂದಿರುಗಬಲ್ಲ ರಾಕೆಟ್

ಚಂದ್ರಗ್ರಹದ ಸಮೀಪದ ವರೆಗೆ ಹೋಗಿ ಗ್ರಹದ ಫೋಟೋಗಳನ್ನು ತೆಗೆದುಕೊಂಡು ಹಿಂದಿರುಗಬಲ್ಲ ಒಂದು ರಾಕೆಟ್ಟನ್ನು ರಷ್ಯದ ೨೫ ವರ್ಷದ ತರುಣ ವಿಜ್ಞಾನಿ ಎಂ. ಯಗೊರೋವ್ ರವರು ಕಂಡುಹಿಡಿದಿರುವರೆಂದು ಗೊತ್ತಾಗಿದೆ. ಅದರ ನಕಾಸೆಯು ಮಾತ್ರ ಈಗ ಸಿದ್ಧವಾಗಿದೆ.

ಶಾಂತಿಗಾಗಿ ಅಣುವಿನ ಪ್ರದರ್ಶನ

ವಸ್ತು ಪ್ರದರ್ಶನದಲ್ಲಿ ಅಮೆರಿಕದ ವಾರ್ತಾ ಸಂಸ್ಥೆಯವರು ಏರ್ಪಡಿಸಿರುವ "ಶಾಂತಿಗಾಗಿ ಅಣು" ವಿಭಾಗವು ಅಣು ಶಕ್ತಿಯ ಮಹತ್ವವನ್ನು ಅರಿಯಲು ವಿಶೇಷ ಸಹಕಾರಿಯಾಗಿದೆ.

ದಸರಾಕ್ಕೆ ರೂಮುಗಳು ಬಾಡಿಗೆಗೆ ದೊರೆಯುತ್ತವೆ

ದಸರಾಕ್ಕಾಗಿ ಮೈಸೂರಿಗೆ ಬರುವವರಿಗೆ ರೂಮುಗಳು ಬಾಡಿಗೆಗೆ ದೊರೆಯುತ್ತವೆ. ವಿಚಾರಿಸಿರಿ.—

ಅಶೋಕಾಲಯ,
ಸುಬ್ಬರಾಯನಕೆರೆ ಬಳಿ, ಮೈಸೂರು

Prof : DEVAL's CIRCUS
ಪ್ರೊ|| ದೇವಲ್ಸ್ ಸರ್ಕಸ್
ಚೇವಣ್ಣರಾಯನ ಕಟ್ಟೆಯಲ್ಲಿ
ಹಾಕಿರುವ ಡೇರಾದಲ್ಲಿ
7-10-56ರಿಂದ : ಪ್ರತಿ ದಿನ 3 ಪ್ರದರ್ಶನಗಳು
ಮಧ್ಯಾಹ್ನ 3 ಘಂಟೆಗೆ, ಸಂಜೆ 6-30 ಮತ್ತು ರಾತ್ರಿ 9—30

Edited, Printed and Published by
A. R. *Nagarajan* at *Sadhvi Press*
D. Subbiah Road, Mysore

ಸಂಸ್ಥಾನ ಜನ ಸಂಘದವರ ಸಮ್ಮೇಳನ

ಬೆಂಗಳೂರು ೮

ಇತ್ತೀಚೆಗೆ ಇಲ್ಲಿ ನಡೆದ ಸಂಸ್ಥಾನದ ಜನಸಂಘದವರ ಸಮ್ಮೇಳನದಲ್ಲಿ, ಧಾರ್ಮಿಕ ನಾಯಕರು ಎಂಬ ಗ್ರಂಥದ ಪ್ರಕಟನೆಯನ್ನು ನಿಷೇಧ ಮಾಡಿ ಜಾತಿವಾದಿಗಳು ನಡೆಸಿದ 'ರಾಷ್ಟ್ರದ್ರೋಹ' ಕಾರ್ಯಗಳನ್ನು ಖಂಡಿಸಲಾಯಿತು.

ವಿದೇಶೀ ಮಿಷನರಿಗಳ ಚಟುವಟಿಕೆ ಬಗ್ಗೆ ಸರ್ಕಾರದ ಸಮಿತಿಯು ಮಾಡಿರುವ ಶಿಫಾರಸನ್ನು ಕೂಡಲೇ ಜಾರಿಗೆ ತರಬೇಕೆಂದು ಸೂಚಿಸಲಾಯಿತು.

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಪದ್ಧತಿಯನ್ನು ಕ್ಷಣಕ್ಷಣಕ್ಕೂ ಬದಲಾಯಿಸುತ್ತಿರುವುದಕ್ಕಾಗಿ ಖಂಡಿಸಿ, ಸರ್ಕಾರದವರು ಕೈಗೊಳ್ಳುವ ಸುಧಾರಣೆಗಳ ಬಗ್ಗೆ ಪೂರ್ವಾಪರವನ್ನೂ, ಅವುಗಳ ಪರಿಣಾಮವನ್ನೂ ಚೆನ್ನಾಗಿ ಆಲೋಚಿಸಿದನಂತರ ನಿರ್ಧಾರ ಕೈಗೊಳ್ಳಬೇಕೆಂದೂ ಒತ್ತಾಯಪಡಿಸಲಾಯಿತು.

ವಸ್ತು ಪ್ರದರ್ಶನದಲ್ಲಿ ಗಾಂಧಿ ಜೀವನದ ಚಿತ್ರಗಳು

ನಗರದ ವಸ್ತು ಪ್ರದರ್ಶನ ಕಟ್ಟಡದ ಪ್ರದರ್ಶನಾಲಯದ ಎರಡನೇ ಅಂತಸ್ತಿನಲ್ಲಿ ನ್ಯಾಷನಲ್ ಪಿಕ್ಚೋರಿಯಲ್ಸಿನ ಶ್ರೀ ಕೆ. ಪದ್ಮನಾಭ ಮೆನನ್ನರು ಮಹಾತ್ಮಾ ಗಾಂಧಿಯವರ ಇಡೀ ಜೀವನವನ್ನು ನಿರೂಪಿಸುವ ಚಿತ್ರ ಪಟಗಳನ್ನು ಪ್ರದರ್ಶಿಸಿರುತ್ತಾರೆ. ನಾಡಿನ ಅಭ್ಯುದಯಕ್ಕೆ ಕಾರಣರಾದ ರಾಷ್ಟ್ರಪಿತನ ಜೀವನಕ್ಕೆ ಸಂಬಂಧಿಸಿದಂತೆ ಇರುವ ಈ ಚಿತ್ರಪಟಗಳನ್ನು ಸಕಲರೂ ತಪ್ಪದೆ ನೋಡುವುದು ಅಗತ್ಯ.

ಶ್ರೀ
ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಂಪಿಯಾ
ಚಿತ್ರಮಂದಿರಗಳ ನಡುವೆ
ಮೆಟ್ಟೂರ್ ಮಿಲ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ, ಬೇಬಿ, ಅರವಿಂದ್, ಕಟಾವು ಇನ್ನೂ ಅನೇಕ ಮಿಲ್‌ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ. ಉತ್ತಮ ತರಹೆಯ ಪ್ರಿಂಟೆಡ್ ವಾಯಿಲ್ ಮತ್ತು ಚೀಟಿಗಳು.
ಒಮ್ಮೆ ದಯಮಾಡಿ ಭೇಟಿ ಕೊಡಿ
ಇ. ಪಿ. ನಂಜಪ್ಪ

VISIT ONCE
Grand Opportunity, Don't miss
JUST ARRIVED,
All Varieties of Stainless Steel Vessels,
Specially Stocked for the DASARA
FESTIVAL Comparitively low
Price to EXHIBITION
A trial will convince you
RAJKAMAL
METAL STORES
Stainless Steel Ware House
Asoka Road, Mysore

ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಚಾಮರಾಜನಗರ ೯

ಇಲ್ಲಿನ ಪ್ರೌಢಶಾಲೆಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ಕಳೆದ ೩೦ನೇ ತಾರೀಕು ಮೈಸೂರು ಟೀಚರ್ಸ್ ಕಾಲೇಜಿನ ಅ|| ಪ್ರೊ|| ಶ್ರೀ ಕೆ. ವಿ. ದೊರೆಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮೈಸೂರು ಮಹಾರಾಜಾ ಕಾಲೇಜಿನ ಡಾ|| ಎಂ. ವಿ. ಕೃಷ್ಣರಾಯರು ಸಂಘದ ಮುಕ್ತಾಯ ಭಾಷಣವನ್ನು ಮಾಡಿದರು.

ದೇವತಾ ಪ್ರಾರ್ಥನೆ, ಶಾಲಾ ಮುಖ್ಯೋಪಾಧ್ಯಾಯ ಶ್ರೀ ಎಂ. ಅಳಸಿಂಗ್ರಾಚಾರ್ಯರಿಂದ ಸ್ವಾಗತ ಮತ್ತು ಬೆಂಗಳೂರಿನ ಶ್ರೀ ಚಂದ್ರಶೇಖರಯ್ಯನವರಿಂದ ರಾಜಶೇಖರ ವಿಲಾಸದ ವಾಚನಗಳಾದನಂತರ ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ವಿನಿಯೋಗಿಸಲಾಯಿತು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳಲ್ಲಿ ಶಿಸ್ತು ಸಂಯಮ ಮತ್ತು ಗುರುಭಕ್ತಿಗಳಿರಬೇಕೆಂದು ಸೂಚಿಸಿದರು. ವಿದ್ಯಾರ್ಥಿಗಳು ಸ್ವತಃ ಶೇಖರಿಸಿದ್ದ ವಸ್ತುಗಳ ಪ್ರದರ್ಶನವೂ ಏರ್ಪಾಡಾಗಿತ್ತು.

ಬಿ. ಎಸ್ಸಿ. ಪದವೀಧರನಿಂದ ಪಟೇಲಿ ವೃತ್ತಿ

ಕರ್ನಾಟಕ ವಿಶ್ವವಿದ್ಯಾಲಯದ ರಘುನಾಥ ಯಶವಂತ ಪಾಟೀಲ್ ಎಂಬ ಬಿ ಎಸ್ಸಿ. ವಿದ್ಯಾರ್ಥಿಯು ಸಾಂಗ್ಲಿ ಬಳಿ ಸಿಗ್ಲಿ ಎಂಬ ಗ್ರಾಮದ ಪಟೇಲಿ ಕೆಲಸವನ್ನು ನಡೆಸುತ್ತಿರುವನು. ಅವನಿಗೆ ವರ್ಷಕ್ಕೆ ೮೦ ರೂ. ಸಂಬಳ ಬರುತ್ತದೆ. ಮನೆಯವರು ತನ್ನ ವಿದ್ಯಾಭ್ಯಾಸಕ್ಕಾಗಿ ವಿಪರೀತ ಹಣ ವ್ಯಯ ಮಾಡಿದರೆಂದೂ, ಆದರೆ ತನ್ನಗುರಿಯು ಹಣ ಸಂಪಾದನೆಯಾಗಿರದೆ ಗ್ರಾಮ ಪುನರುಜ್ಜೀವನವಾಗಿರುವುದೆಂದೂ ಅವನು ಹೇಳುತ್ತಾನೆ.

ಬರುವ ವರ್ಷ ಹೊಸ ಬದರೀನಾಥ ನಗರ ನಿರ್ಮಾಣ

ಬರುವ ವರ್ಷ ಹೊಸ ಬದರೀನಾಥ ನಗರದ ನಿರ್ಮಾಣ ಕಾರ್ಯವು ಆರಂಭವಾಗಲಿದೆ. ಬದರೀನಾಥ ಮತ್ತು ಕೇದಾರನಾಥ ಕ್ಷೇತ್ರಗಳು ಇನ್ನು ಒಂದು ತಿಂಗಳಲ್ಲಿ ಮುಚ್ಚಲ್ಪಡುವುವು. ಈ ವರ್ಷ ಬದರಿಗೆ ೧ ಲಕ್ಷ ಯಾತ್ರಿಕರು ಬಂದಿದ್ದರು. ದೇವಸ್ಥಾನಕ್ಕೆ ೪ ಲಕ್ಷ ರೂ. ನಗದು, ೨೦೦ ತೊಲ ಚಿನ್ನ ಮತ್ತು ೧೫ ಸಾವಿರ ತೊಲ ಬೆಳ್ಳಿಯು ಈ ವರ್ಷ ಕಾಣಿಕೆಯಾಗಿ ಬಂದಿರುತ್ತವೆ. ಕೇದಾರನಾಥ ದೇವಾಲಯಕ್ಕೆ ೬೬ ಸಾವಿರ ರೂ. ಕಾಣಿಕೆ ಬಂದಿದೆ.

ಗೋಕಾಕ್ ನಾಟಕ
ಮಂಡಲಿಯವರು, ಮೈಸೂರು
ಟೌನ್ ಹಾಲಿನಲ್ಲಿ
9-10-56ರಿಂದ ಪ್ರತಿ ದಿನ ರಾತ್ರಿ 10ಕ್ಕೆ
ಜಗಜ್ಯೋತಿ
ಬಸವೇಶ್ವರ
ಎಂಬ ಪೌರಾಣಿಕ ನಾಟಕವನ್ನು
ಅಭಿನಯಿಸುವರು
ಮ್ಯಾ|| ಬಿ. ಜಿ. ಹುರಿಕೇರ್,
ಪ್ರೊ|| ಬಿ. ಬಿ. ಹೊಸಮನಿ

ಪ್ರಭುದೇವಾ ಥಿಯೇಟರ್ ★ (ಪದ್ಮಾಟಾಕೀಸ್)
11—10—56ನೇ : ಗುರುವಾರದಿಂದ : ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು
ವಿಶ್ವಕಲಾರವರ ಕನ್ನಡ ಚಿತ್ರ
ಓಹಿಲೇಶ್ವರ ★ ಓಹಿಲೇಶ್ವರ
ಪಾತ್ರ:-- ಪ್ರಿಯಂಜನಿ (ಜೂನಿಯರ್), ರಾಜಕುಮಾರ್, ಕಲ್ಯಾಣಕುಮಾರ್, ಮೀನಾಕ್ಷಿ, ನರಸಿಂಹರಾಜು, ಜಿ. ವಿ. ಅಯ್ಯರ್ ಮುಂತಾದವರು
ನಾಲ್ಕು ವಾರಗಳ ಕಾಲ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೫] SADHVI : THURSDAY 11—10—1956 ಮೈಸೂರು : ಗುರುವಾರ ೧೧—೧೦—೧೯೫೬ [ಸಂಚಿಕೆ : ೬೬

ಉತ್ತರ ಭಾರತದ ಅನೇಕ ಕಡೆಗಳಲ್ಲಿ ನೆನ್ನೆ ಭೂಕಂಪ

ಉತ್ತರ ಭಾರತದಲ್ಲಿ ಭೂಕಂಪ

ಉತ್ತರ ಭಾರತದ ಅನೇಕ ಕಡೆಗಳಲ್ಲಿ ನೆನ್ನೆ ತ್ರಿ ೯ ಗಂಟೆಗೆ ಭೂಕಂಪವಾಯಿತು. ಭೂಕಂಪ ಕೇಂದ್ರ ಸ್ಥಳವು ದೆಹಲಿಗೆ ೫೦ ಮೈಲಿ ದೂರದ ತ್ತೆಂದು ಹೇಳಲಾಗಿದೆ. ದೆಹಲಿ, ಪಂಜಾಬು, ತ್ತರ ಪ್ರದೇಶ ಮತ್ತು ರಾಜಾಸ್ಥಾನಗಳಲ್ಲಿ ಮಾನ್ಯ ರೀತಿಯ ಭೂಕಂಪವಾಗಿ ೨-೩ ನಿಮಿ ಕಾಲ ಭೂಮಿಯು ನಡುಗಿತು. ದೆಹಲಿಯಲ್ಲಿ ನೇಕ ಭವನಗಳು ಅದುರಿದುವು. ಎರಡು ನೆಗಳು ಉರುಳಿದುವು. ಜನರು ಬೀದಿಗಳಿಗೆ ಓಡಿದರು. ಕಾನ್ಪುರ, ಚಂಡೀಗಡ, ಅಂಬಾಲಾ, ಯಪುರಗಳಲ್ಲಿ ಸುಮಾರು ೫-೧೦ ಸೆಕೆಂಡು ಮಾತ್ರ ಭೂಮಿಯು ಅದುರಿತೆಂದು ಹೇಳಲಾ ದೆ.

ದೆಹಲಿಯಲ್ಲಿ ಭೂಕಂಪದ ವೇಳೆ ಚಲಿ ದೇಶ ಪ್ರಮುಖರೂ, ವಿಶ್ವಸಂಸ್ಥೆಯ ಅಧ್ಯಕ್ಷರೂ ಆ ವಾ|| ಜೋಸಿ ಮೊದಲಾದವರು ರಾಷ್ಟ್ರಪತಿ ನಿವಾಸದಲ್ಲಿ ಭೋಜನ ಮಾಡುತ್ತಿದ್ದರು. ಅವರು ಕುರ್ಚಿಯಿಂದ ಅಲುಗಡೆ ಭದ್ರವಾಗಿ ಕುಳಿತಿದ್ದರು. ಭವನವು ತಲ್ಲಣಿಸುತ್ತಿದ್ದಾಗ ಮೇಲ್ದೀಪಗಳೂ ಅಲುಗಾಡಿದುವು.

ಛಾಗ್ಲಾರವರು ಬೊಂಬಾಯಿಯ ಹಂಗಾಮಿ ಗವರ್ನರ್

ಬೊಂಬಾಯಿ ಗವರ್ನರ್ ಹರೇಕೃಷ್ಣ ಮಹತಾಬ್‌ರವರನ್ನು ಒರಿಸ್ಸಾ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿಸಲಾಗಿದೆ. ಅವರ ಸ್ಥಾನಕ್ಕೆ ಬೊಂಬಾಯಿ ಶ್ರೇಷ್ಠ ನ್ಯಾಯಾಧೀಶರಾದ ಎಂ. ಸಿ. ಛಾಗ್ಲಾರವರನ್ನು ಹಂಗಾಮಿಯಾಗಿ ನೇಮಿಸಲಾಗಿದೆ.

ಬಂಗಾಳದಲ್ಲಿ ಪ್ರವಾಹದಿಂದ ೯,೦೦೦ ಹಳ್ಳಿಗಳಿಗೆ ಹಾನಿ

ಪಶ್ಚಿಮ ಬಂಗಾಳದಲ್ಲಿ ಇತ್ತೀಚೆಗೆ ಬಂದ ಪ್ರವಾಹದಲ್ಲಿ ೯,೦೦೦ ಗ್ರಾಮಗಳಿಗೆ ಹಾನಿ ತಟ್ಟಿದೆ. ೨,೫೦೦ ಮನೆಗಳು ಉರುಳಿವೆ ೫ ಲಕ್ಷ ಜನರಿಗೆ ಉದ್ಯೋಗ ತಪ್ಪಿದೆ. ೧೧ ಲಕ್ಷ ಮಂದಿ ನಿರಾಶ್ರಿತರಾಗಿದ್ದಾರೆ. ೩೫ ಲಕ್ಷ ಜನರಿಗೆ ಪ್ರವಾಹದಿಂದ ತೊಂದರೆಯುಂಟಾಗಿದೆ.

ಡಾ|| ಆನಂದತೀರ್ಥರವರು ಕ್ಷಯರೋಗ ಆಸ್ಪತ್ರೆ ಆರ್. ಎಂ. ಓ.

ಡಾ|| ಪಿ. ಎ. ಆನಂದತೀರ್ಥರವರನ್ನು ಕೃಷ್ಣರಾಜಮ್ಮಣ್ಣಿ ಕ್ಷಯರೋಗ ಆಸ್ಪತ್ರೆಯ ರೆಸಿಡೆಂಟ್ ಮೆಡಿಕಲ್ ಆಫೀಸರಾಗಿ ನೇಮಿಸಲಾಗಿದೆ. ಮೈಸೂರು ಮೆಡಿಕಲ್ ಕಾಲೇಜಿಗೆ ವರ್ಗವಾದ ಅಸಿಸ್ಟೆಂಟ್ ಸರ್ಜನ್ ಶ್ರೀ ಜಿ. ನಾರಾಯಣರಾಯರ ಸ್ಥಾನದಲ್ಲಿ ಚಿಕ್ಕಬಳ್ಳಾಪುರದ ಆಸ್ಪತ್ರೆಗೆ ಕಾಲೇಜಿನ ಅಸಿಸ್ಟೆಂಟ್ ಸರ್ಜನ್ ಶ್ರೀ ಪ್ರೇಮಚಂದ್ರಕುಮಾರ್‌ರವರನ್ನು ವರ್ಗಾಯಿಸಲಾಗಿದೆ.

[illegible] ಅಕ್ಕಿ ವರ್ತಕರು ರೂಪಾಯಿಗೆ [illegible] ಸೇರಿನಂತೆ ಅಕ್ಕಿಯನ್ನು ಮಾರಾಟ ಮಾಡ ನಿರ್ಧರಿಸಿರುತ್ತಾರೆ. ಮುಂದಿನ ಬೆಳೆ ಬರುವ ವರೆಗೂ ಈ ರೀತಿ ಬೆಲೆ ಮಾಡಲಾಗುವುದು. ಕಳೆದ ಜೂನ್ ತಿಂಗಳಲ್ಲಿ ವರ್ತಕರು ಇದೇ ರೀತಿ ೨,೦೦೦ ಪಲ್ಲ ಅಕ್ಕಿಯನ್ನು ಒದಗಿಸಿದ್ದರು.

ಪ್ರೈವೇಟ್ ವಿದ್ಯಾರ್ಥಿನಿಯರಿಗೆ ಮಾಧ್ಯಮಿಕ ಶಾಲಾ ಪರೀಕ್ಷೆ

೧೦ ವರ್ಷಕ್ಕೆ ಮೀರಿದವರಿಗೆ ಅವಕಾಶ

ಬೆಂಗಳೂರು ೧೧

ಖಾಸಗಿಯಾಗಿ ವ್ಯಾಸಂಗ ಮಾಡುವ ವಿದ್ಯಾರ್ಥಿನಿಯರು ಮಾಧ್ಯಮಿಕ ಶಾಲಾ ಪರೀಕ್ಷೆಗೆ ಕುಳಿತುಕೊಳ್ಳಲು ಅವಕಾಶ ಕಲ್ಪಿಸುವಂತೆ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಈ ಅಧಿಕಾರವನ್ನು ವಿದ್ಯಾ ಇಲಾಖಾಧಿಕಾರಿಗಳು ಬಹು ಮಿತವಾಗಿ ಉಪಯೋಗಿಸಬೇಕೆಂದು ಸೂಚಿಸಲಾಗಿದೆ. ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ೧೭ ವರ್ಷಕ್ಕಿಂತ ಹೆಚ್ಚು ವಯಸ್ಸಾಗಿರಬೇಕೆಂದು ತಿಳಿಸಲಾಗಿದೆ.

ಮಾಧ್ಯಮಿಕ ಶಾಲಾ ಪಬ್ಲಿಕ್ ಪರೀಕ್ಷೆಯ ಪದ್ಧತಿಯಿಂದ ಖಾಸಗಿ ವ್ಯಾಸಂಗದ ವಿದ್ಯಾರ್ಥಿಗಳಿಗೆ ಉಂಟಾಗಿದ್ದ ತೊಂದರೆಯ ನಿವಾರಣೆಗಾಗಿ ಅನೇಕ ಪೋಷಕರು ಅರಿಕೆ ಮಾಡಿದ್ದರ ಮೇಲೆ ವಿದ್ಯಾರ್ಥಿನಿಯರಿಗೆ ಈ ಸೌಲಭ್ಯವನ್ನು ಕಲ್ಪಿಸುವುದು ಅಗತ್ಯವೆಂದು ವಿದ್ಯಾ ಇಲಾಖಾಧಿಕಾರಿಗಳು ಸರ್ಕಾರಕ್ಕೆ ಶಿಫಾರಸು ಮಾಡಿದ್ದರು.

ನವೆಂಬರ್ ೩ ರಿಂದ ಸಹಕಾರ ಸಪ್ತಾಹದ ಆಚರಣೆ

ಅಖಿಲ ಭಾರತ ಸಹಕಾರ ಸಂಸ್ಥೆಯವರು ವ್ಯವಸ್ಥೆಗೊಳಿಸಿರುವ ಸಹಕಾರ ಸಪ್ತಾಹವನ್ನು ಭಾರತದಾದ್ಯಂತ ನವೆಂಬರ್ ೩ ರಿಂದ ಆಚರಿಸಲಾಗುವುದು. ಅಂದು ಅಖಿಲ ಭಾರತ ಸಹಕಾರ ದಿನಾಚರಣೆಯನ್ನು ನೆರವೇರಿಸಲಾಗುವುದು. ಸಹಕಾರ ಚಳುವಳಿಯ ಉತ್ತೇಜನಕ್ಕಾಗಿ ಗ್ರಾಮಾಂತರ, ಹಾಗೂ ನಗರ ಪ್ರದೇಶಗಳಲ್ಲಿ ಸೂಕ್ತ ವಾತಾವರಣವನ್ನು ಕಲ್ಪಿಸುವುದೇ ಈ ಸಪ್ತಾಹದ ಆಚರಣೆಯ ಉದ್ದೇಶವಾಗಿದೆ.

ಸೊಳ್ಳೆ ಮೇಲೆ ಹಸೋಟ ಕ್ರಮ

ಡಿ. ಡಿ. ಟಿ. ಯನ್ನು ಹೆಚ್ಚಾಗಿ ಪ್ರಯೋಗಿಸಿದರೂ ನಾಶವಾಗದಿದ್ದ ಸೊಳ್ಳೆಗಳನ್ನು ಮಲೇರಿಯಾಲ್ ಮತ್ತು ಪ್ರೀಡಾಲ್‌ಗಳ ಮಿಶ್ರಣದ ಉಪಯೋಗದಿಂದ ನಾಶಪಡಿಸಲು ಸಾಧ್ಯವೆಂದು ಬೆಂಗಳೂರಿನ ಪೌರಸಭಾ ಆರೋಗ್ಯಾಧಿಕಾರಿ ಡಾ|| ಎಸ್. ಆರ್. ಕಾಂಬೋರೆಯವರು ತಿಳಿಸುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗಾಂಧಿ ಕಥಾವಳಿ. ೭-೧೫ ದೀಕ್ಷಿತರ ನವಾವರಣ ಕೀರ್ತನೆ-ಟಿ. ನಾಗಮ್ಮ. ೭-೩೦ ಹಿಂದಿ ಪಾಠ. ೮-೧೫ ರಿಕಾರ್ಡು. ಮಧ್ಯಾಹ್ನ ೧೨ ಕೆ. ಎಸ್. ನಾರಾಯಣ ಅಯ್ಯಂಗಾರ್-ಗೋಟು ವಾದ್ಯ. ೧೨-೩೦ ವಾದ್ಯವೃಂದ. ೧೨-೪೫ ವನಿತಾ ವಿಹಾರ. ೧-೫೦ ಸಂಗೀತ. ೨-೧೫ ರಿಕಾರ್ಡು. ಸಂಜೆ ೫-೩೦ ಬಿ. ವಿ. ಸೀತಾ-ಸಂಗೀತ. ೭-೨೦ ನೃತ್ಯ ಗೀತೆ. ೭-೩೦ ನಾಡಿನ ಕೊಡುಗೆ : ಶಿಲ್ಪ-ಪ್ರಸಂಗ. ೮ ಕಥಾ ಸಪ್ತಾಹ. ೮-೧೫ ಮದ್ರಾಸಿನಿಂದ- ನಾಲಘಾಟ್ ರಾಮಭಾಗವತರ್ ಮತ್ತು ಆರ್. ಲಕ್ಷ್ಮೀನಾರಾಯಣ-ಸಂಗೀತ, ೯-೧೫ ಆರ್. ಕೆ. ಶ್ರೀಕಂಠ-ಪಿ.ಟಿ. ನರಸಿಂಹಾಚಾರ್ಯರ ಕೃತಿಗಳು. ೯-೩೦ ಗೀತಾವಳಿ.

ನಗರಕ್ಕೆ ಕೇಂದ್ರ ಮಂತ್ರಿ ಪಂಡಿತ ಪಂತರ ಭೇಟಿ ರದ್ದು

ದೇಹಾಲಸ್ಯವೇ ಕಾರಣ

ಮೈಸೂರು ೧೧

ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದವಲ್ಲಭ ಪಂತರು ಮೈಸೂರು, ಬೆಂಗಳೂರು ಮತ್ತು ಮಡಕೇರಿಗಳಿಗೆ ಭೇಟಿ ಕೊಡುವ ಕಾರ್ಯಕ್ರಮವು ಅವರ ಅನಾರೋಗ್ಯದ ನಿಮಿತ್ತ ರದ್ದಾಗಿದೆ. ಅವರ ಪ್ರವಾಸದ ರದ್ದಿಯಾತಿ ಸುದ್ದಿಯು ಈ ಬೆಳಿಗ್ಗೆ ಮುಖ್ಯ ಮಂತ್ರಿಗಳ ನಿವಾಸಕ್ಕೆ ದೆಹಲಿಯಿಂದ ಟ್ರಂಕ್ ಟೆಲಿಫೋನ್ ಮೂಲಕ ಬಂದಿತು. ಅವರು ನಗರಕ್ಕೆ ಭೇಟಿ ಕೊಡುವ ಕಾರ್ಯಕ್ರಮವು ರದ್ದಾಗಿರುವುದು ಇದು ಎರಡನೇ ಬಾರಿ.

ವಸ್ತು ಪ್ರದರ್ಶನದಲ್ಲಿ ವಿವಿಧ ವೇಷ ಸ್ಪರ್ಧೆಗಳಿಗೆ ಬಹುಮಾನ

ನೆನ್ನೆ ವಸ್ತು ಪ್ರದರ್ಶನದಲ್ಲಿ ನಡೆದ ವಿವಿಧ ವೇಷ ಸ್ಪರ್ಧೆಯಲ್ಲಿ ನಾಗಿನ್ ಪಾತ್ರಕ್ಕಾಗಿ ಶ್ರೀ ಎಲ್. ನರಸಿಂಹಮೂರ್ತಿಯವರಿಗೆ ಪ್ರಥಮ ಬಹುಮಾನ, ಅಸ್ಸಾಮಿನ ನಾಗಾ ಮುಖಂಡನ ವೇಷಕ್ಕಾಗಿ ಶ್ರೀ ಎಂ ಸೋಮಶೇಖರ್‌ರವರಿಗೆ ದ್ವಿತೀಯ ಬಹುಮಾನ ಮತ್ತು ಶ್ರೀಗಳಾದ ಎ. ವಿ. ಕೃಷ್ಣಮೂರ್ತಿ ಮತ್ತು ಪಾರ್ಟಿ, ಎಂ. ಆರ್. ಎಸ್. ವಾಸನ್ ಮತ್ತು ವಿ. ಕೆ. ಕುಮಾರನ್ ಮತ್ತು ಪಾರ್ಟಿಯವರಿಗೆ ಪ್ರಶಸ್ತಿ ಪತ್ರಗಳು ದೊರೆತಿವೆ.

ವಸ್ತು ಪ್ರದರ್ಶನಕ್ಕೆ ಇದುವರೆಗೆ ೩೦,೦೦೦ ಮಂದಿಯ ಭೇಟಿ

ಕಳೆದ ೫ನೇ ತಾರೀಖಿನಿಂದ ನಡೆಯುತ್ತಿರುವ ವಸ್ತು ಪ್ರದರ್ಶನಕ್ಕೆ ನೆನ್ನೆಯವರೆಗೆ ಸುಮಾರು ೩೦ ಸಾವಿರ ಜನರು ಭೇಟಿ ಕೊಟ್ಟಿರುವರು ನೆನ್ನೆಯವರೆಗೆ ಟಿಕೆಟ್‌ಗಳ ಮಾರಾಟದಿಂದ ೧೦,೭೩೭ ರೂ. ಗಳು ವಸೂಲಾಗಿದೆ. ಹೋದ ವರ್ಷ ಇದೇ ದಿವಸ ೬,೫೯೦ ರೂ. ಗಳು ವಸೂಲಾಗಿದ್ದಿತು.

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ನಾಳೆ ಬೆಳಿಗ್ಗೆ ವಸ್ತು ಪ್ರದರ್ಶನದಲ್ಲಿ ಶ್ರೀಮತಿ ಮಂಜುಳಾದೇವಿ ಮತ್ತು ವಿ. ಎಸ್. ಇಂದಿರಾರವರಿಂದ ದೇವರ ನಾಮವೂ, ಸಂಜೆ ಶ್ರೀ ಕೋದಂಡರಾಮುರವರಿಂದ ಲಾವಣಿ, ವಸ್ತಾದ್ ಮೊದಲಿಯಾರವರಿಂದ ದೊಣ್ಣೆ ವರಸೆ ಮತ್ತು ಶ್ರೀಮತಿ ಪಟ್ಟಮ್ಮಾಳ್‌ರವರಿಂದ ಸಂಗೀತವೂ ಏರ್ಪಾಡಾಗಿದೆ.

ಇನಾಂದಾರರುಗಳ ಸಭೆ

ಇನಾಮುದಾರರುಗಳ ಸಭೆಯು ನಾಳೆ ಮಧ್ಯಾಹ್ನ ೩ ಗಂಟೆಗೆ ವೈಸ್‌ರಾಯ್ ರಸ್ತೆಯಲ್ಲಿರುವ ಗಂಧನಹಳ್ಳಿ ಜಹಗೀರುದಾರರಾದ ಶ್ರೀ ಕೃಷ್ಣರಾಯರ ಮನೆಯಲ್ಲಿ ಸೇರುವುದು. ಸಂಸ್ಥಾನ ಇನಾಮುದಾರರ ಸಂಘದ ಕಾರ್ಯದರ್ಶಿ ಶ್ರೀ ಲಕ್ಷ್ಮಣಸ್ವಾಮಿಯವರು ಸೂಕ್ತ ಸಲಹೆಗಳನ್ನೀಯುವರು. ಇನಾಮುದಾರರುಗಳೆಲ್ಲರೂ ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಬರುವಂತೆ ಶ್ರೀ ಪಿ. ವೆಂಕಟಸುಬ್ಬಯ್ಯನವರು ಕೋರಿರುತ್ತಾರೆ.

ಭಾರತದ ಶ್ರೇಷ್ಠ ನ್ಯಾಯಾಧೀಶರ ಆಗಮನ

ನೂತನ ಸಂಸ್ಥಾನದ ಹೈಕೋರ್ಟಿನ ಬಗ್ಗೆ ಚರ್ಚೆ

ಸ್ವ. ಎಸ್. ಕಂತಿ] ಬೆಂಗಳೂರು ೧೧

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಎಸ್. ಆರ್. ದಾಸ್‌ರವರು ಈ ದಿನ ಮದ್ರಾಸಿನಿಂದ ರೈಲಿನಲ್ಲಿ ಇಲ್ಲಿಗೆ ಆಗಮಿಸಿದರು. ಇಲ್ಲಿನ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯನವರೂ ಮತ್ತು ಇತರ ನ್ಯಾಯಾಧೀಶರುಗಳೂ, ನಗರ ಮತ್ತು ಸಿವಿಲ್ ಪ್ರದೇಶ ವಕೀಲರ ಸಂಘಗಳ ಅಧ್ಯಕ್ಷರುಗಳೂ ಮತ್ತು ಪ್ರಮುಖ ವಕೀಲರುಗಳೂ ಅವರಿಗೆ ಸ್ವಾಗತ ನೀಡಿದರು.

ಶ್ರೀ ದಾಸ್‌ರವರು ರೆಸಿಡೆನ್ಸಿ ಭವನದಲ್ಲಿ ಇಲ್ಲಿನ ಜಡ್ಜರುಗಳು ಮತ್ತು ಅನೇಕ ವಕೀಲರುಗಳೊಡನೆ ಸಂಭಾಷಣೆ ನಡೆಸಿದರು. ಹೊಸ ಸಂಸ್ಥಾನದ ರಚನೆಯನಂತರ ಹೈಕೋರ್ಟಿನ ಪುನರ್ರಚನೆಯ ಬಗ್ಗೆ ಈ ದಿನ ಮಾತುಕತೆ ನಡೆದುವೆಂದು ಗೊತ್ತಾಗಿದೆ.

ಇದೇ ೧೨ ಮತ್ತು ೧೩ನೇ ತಾರೀಖುಗಳಲ್ಲಿ ಶ್ರೀ ದಾಸ್‌ರವರು ಮೈಸೂರಿನಲ್ಲಿದ್ದು, ೧೪ರಂದು ಇಲ್ಲಿಗೆ ಹಿಂದಿರುಗಿ ಹೈಕೋರ್ಟಿಗೆ ಭೇಟಿ ಕೊಡುವರು. ೧೫ನೇ ತಾರೀಖು ಅವರು ತಿರುವನಂತಪುರಕ್ಕೆ ತೆರಳುವರು.

ಈಜಿಪ್ಟ್ ಮತ್ತು ಪಶ್ಚಿಮ ರಾಷ್ಟ್ರಗಳ ರಹಸ್ಯ ಮಾತುಕತೆ

ಸೂಯೆಜ್ ಬಿಕ್ಕಟ್ಟಿನ ಬಗ್ಗೆ ನೇರ ಸಂಧಾನ

ನೆನ್ನೆ ನ್ಯೂಯಾರ್ಕಿನಲ್ಲಿ ಬ್ರಿಟನ್ ಮತ್ತು ಫ್ರಾನ್ಸಿನ ಪ್ರಮುಖ ಪ್ರತಿನಿಧಿಗಳಿಗೂ, ಈಜಿಪ್ಟಿನ ಅಧಿಕಾರಿಗಳಿಗೂ ಸೂಯೆಜ್ ಬಿಕ್ಕಟ್ಟಿನ ಬಗ್ಗೆ ನೇರ ಮಾತುಕತೆಗಳು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಶೀಲ್ಡರ ಸಮ್ಮುಖದಲ್ಲಿ ನಡೆದುವು. ಅದಕ್ಕೆ ಮುಂಚೆ ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ಭಾರತದ ಮಂತ್ರಿ ವಿ. ಕೆ. ಕೃಷ್ಣಮೆನನ್ನರೊಡನೆ ಸಂಭಾಷಣೆ ನಡೆಸಿದರು. ಲಾಯ್ಡ್‌ರವರು ಫ್ರೆಂಚ್ ವಿದೇಶಾಂಗ ಮಂತ್ರಿ ಪಿನೂ ಮತ್ತು ಅಮೆರಿಕದ ಡಲೆಸ್‌ರವರನ್ನೂ ಭೇಟಿ ಮಾಡಲಿರುವರು.

ಕಾಶ್ಮೀರ ಸಭಾಧಿವೇಶನದಲ್ಲಿ ರಾಜ್ಯಾಂಗದ ಮಂಡನೆ

ಕಾಶ್ಮೀರದ ರಾಜ್ಯಾಂಗ ಸಭೆಯು ನೆನ್ನೆ ಸೇರಿದಾಗ ಅಲ್ಲಿನ ಹಣಕಾಸಿನ ಮಂತ್ರಿಯೂ ಮತ್ತು ಕರಡು ರಾಜ್ಯಾಂಗ ರಚನಾ ಸಮಿತಿ ಅಧ್ಯಕ್ಷರೂ ಆದ ಡಿ. ಎಲ್. ಡೋಗ್ರಾರವರು ಕರಡು ಪ್ರತಿಯನ್ನು ಮಂಡಿಸಿದರು. ಭಾರತಕ್ಕೆ ಕಾಶ್ಮೀರದ ಸೇರ್ಪಡೆಯನ್ನು ಅದರಲ್ಲಿ ಪುನಃ ನಮೂದಿಸಲಾಗಿದೆ. ಸಂಸ್ಥಾನದ ಶಾಸನಸಭೆಯಲ್ಲಿ ೧೦೦ ಜನ ಸದಸ್ಯರಿರುವರೆಂದೂ, ಆ ಪೈಕಿ ಕಾಲು ಭಾಗದವರನ್ನು ಪಾಕಿಸ್ತಾನವು ಆಕ್ರಮಿಸಿರುವ ಪ್ರದೇಶಗಳಿಂದ ಚುನಾಯಿಸಬೇಕೆಂದೂ ಕರಡಿನಲ್ಲಿ ಸೂಚಿಸಲಾಗಿದೆ.

ಸಂಸ್ಕೃತ ಪರೀಕ್ಷಾ ಪದವೀದಾನ ಸಮಾರಂಭ

ಮೈಸೂರು ೧೧

ಮೈಸೂರು ಸಂಸ್ಕೃತ ಪರೀಕ್ಷಾ ಪದವೀದಾನ ಸಮಾರಂಭವು ಸಂಸ್ಕೃತ ಪಾಠಶಾಲೆಯಲ್ಲಿ ನೆನ್ನೆ ಬೆಳಿಗ್ಗೆ ನಡೆಯಿತು. ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಎಂ. ಎಸ್. ಹಿರಣ್ಣಯ್ಯನವರು ಪ್ರಶಸ್ತಿ ಪತ್ರ ಮತ್ತು ಬಹುಮಾನಗಳನ್ನು ವಿನಿಯೋಗಿಸಿದರು. ಮಾನಸಿಕ ಆರೋಗ್ಯ ಸಂಸ್ಥೆಯ ಅಧಿಕಾರಿಗಳಾದ ಡಾ|| ಎಂ. ವಿ. ಗೋವಿಂದಸ್ವಾಮಿಯವರು ಭಾಷಣ ಮಾಡಿ ಸಂಸ್ಕೃತ ಭಾಷೆಯ ಮಹತ್ವವನ್ನು ನಿರೂಪಿಸಿ, ಅದರ ಜೊತೆಗೆ ಆಧುನಿಕ ವಿಜ್ಞಾನದ ಪರಿಚಯವನ್ನೂ ಮಾಡಿಕೊಳ್ಳುವುದು ಉಚಿತವೆಂದು ಸೂಚಿಸಿದರು. ಮತ್ತು ಪರೀಕ್ಷೆಯಲ್ಲಿ ತೇರ್ಗಡೆಯಾಗುವ ಬಡ ವಿದ್ಯಾರ್ಥಿಗಳಿಗಾಗಿ ವಿನಿಯೋಗಿಸಲು ನೂರು ರೂಪಾಯಿ ಧನ ಸಹಾಯ ಮಾಡುವುದಾಗಿ ತಿಳಿಸಿದರು

ಮೊದಲು ಸ್ವಸ್ತಿ ವಾಚನವಾದನಂತರ, ಮಹಾ ಪಾಠಶಾಲಾಧ್ಯಕ್ಷರಾದ ಶ್ರೀ ಮಲ್ಲಿಕಾರ್ಜುನ ಶಾಸ್ತ್ರಿಗಳು ಸ್ವಾಗತ ಭಾಷಣ ಮಾಡಿದರು. ಆ|| ವಿ|| ಶ್ರೀ ವಿ. ವೆಂಕಟನಾರಾಯಣರಾಯರಿಂದ ಸುಶ್ರಾವ್ಯವಾದ ಗಾಯನವಾಯಿತು. ಪರೀಕ್ಷಾ ಸಮಿತಿಯ ಕಾರ್ಯದರ್ಶಿಯವರಾದ ಶ್ರೀ ಟಿ. ವಿ. ಶಿವೇಗೌಡರು ವಂದನೆಯನ್ನು ಒಪ್ಪಿಸಿದರು.

ಶ್ರೀ ಎಂ. ಶಿವರಾಮಶಾಸ್ತ್ರಿಗಳಿಂದ ವೇದಪಾರಾಯಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು

ಕರ್ನಾಟಕದ ಹೋಟೆಲು ಕೆಲಸಗಾರರ ಸಮ್ಮೇಳನ

ಕರ್ನಾಟಕದ ಹೋಟೆಲು ಕೆಲಸಗಾರರ ಪ್ರಥಮ ಸಮ್ಮೇಳನವು ಇದೇ ತಿಂಗಳು ೨೮ ರಂದು ಬೆಂಗಳೂರಿನಲ್ಲಿ ಸೇರುವುದು. ಕರ್ನಾಟಕದಲ್ಲಿ ಒಟ್ಟು ೧೨ ಸಾವಿರ ಹೋಟೆಲು ಕೆಲಸಗಾರರಿರುವರೆಂದೂ, ಅವರ ಪೈಕಿ ೨-೪ ಸಾವಿರ ಮಂದಿಗೆ ಮಾತ್ರ ಕಾನೂನು ರಕ್ಷಣೆ ದೊರೆತಿರುವುದೆಂದೂ, ಇತರರ ಹಿತ ರಕ್ಷಣೆಯನ್ನು ಮಾಡಬೇಕಾಗಿರುವುದರಿಂದ ಸಮ್ಮೇಳನವನ್ನು ಕರೆಯಲಾಗಿರುವುದೆಂದೂ ಹೇಳಲಾಗಿದೆ. ರಾಜ್ಯದ ಸಭಾಸದಸ್ಯರಾದ ಶ್ರೀ ಎಸ್. ಗೋಪಾಲಗೌಡರು ಅಧ್ಯಕ್ಷತೆ ವಹಿಸುವರು. ಚಿತ್ರದುರ್ಗದ ಗಫೂರ್ ಸಾಹೇಬರು ಆರಂಭೋತ್ಸವವನ್ನು ನೆರವೇರಿಸುವರು. ಸಮ್ಮೇಳನಕ್ಕೆ ಬರುವವರು ತಮ್ಮ ಹೆಸರು ಮತ್ತು ವಿಳಾಸಗಳನ್ನು ಇದೇ ೧೫ನೇ ತಾರೀಕಿನೊಳಗೆ ಸ್ವಾಗತ ಸಮಿತಿಯ ಕಛೇರಿಗೆ ತಿಳಿಸುವಂತೆ ಕೋರಲಾಗಿದೆ.

ತರಕಾರಿ ಮತ್ತು ಫಲಪುಷ್ಪಗಳ ಪ್ರದರ್ಶನ

ಆರೋಗ್ಯ ಮಂತ್ರಿಗಳಿಂದ ಬಹುಮಾನ ವಿನಿಯೋಗ

ಮೈಸೂರು ೧೧

ನಗರ ಪೌರಸಭೆಯ ಆಶ್ರಯದಲ್ಲಿ ನೆನ್ನೆ ಬೆಳಿಗ್ಗೆ ದೇವರಾಜಾ ಮಾರ್ಕೆಟ್ಟಿನಲ್ಲಿ ತರಕಾರಿ ಮತ್ತು ಫಲಪುಷ್ಪಗಳ ಪ್ರದರ್ಶನವು ನಡೆಯಿತು. ಆರೋಗ್ಯ ಮಂತ್ರಿ ಶ್ರೀ ಟಿ. ಚನ್ನಯ್ಯನವರು ಆರಂಭೋತ್ಸವವನ್ನು ನೆರವೇರಿಸಿದರು.

ಸಂಜೆ ಸಚಿವರು ಬಹುಮಾನ ವಿನಿಯೋಗ ಮಾಡಿದರು. ಶ್ರೀಮತಿ ನಳಿನಿಯವರಿಂದ ಪ್ರಾರ್ಥನೆ, ವಿ|| ಲಕ್ಷ್ಮಮ್ಮ ಮತ್ತು ಪಾರ್ಟಿಯವರಿಂದ ಸಂಗೀತವಾದನಂತರ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಸ್ವಾಗತ ಭಾಷಣ ಮಾಡಿ ಮಾರ್ಕೆಟ್ಟಿನ ಅಭಿವೃದ್ಧಿಗಾಗಿ ಸರ್ಕಾರದ ಸಹಾಯವನ್ನು ಕೋರಿದರು.

ಸಚಿವರು ಭಾಷಣ ಮಾಡಿ ಪ್ರದರ್ಶನವನ್ನು ಏರ್ಪಡಿಸಿದ ಬಗ್ಗೆ ಸಂತೋಷವನ್ನು ಸೂಚಿಸಿದರು. ಪೌರಸಭಾಧ್ಯಕ್ಷರ ಕೋರಿಕೆಯ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ನೌಕಾ ಮತ್ತು ಭೂಸೈನ್ಯಗಳಿಗೆ ಸೇರುವವರಿಗೆ ಸೂಚನೆ

ಭೂಸೈನ್ಯ, ನೌಕಾಬಲ, ಸೈನ್ಯದ ಸಿಗ್ನಲ್ ಮುಂತಾದ ಕೆಲಸಗಳಿಗೆ ಸೇರಬಯಸುವವರು ನಾಳೆ ಮತ್ತು ನಾಳಿದ್ದು ನಗರದ ಉದ್ಯೋಗ ವಿನಿಮಯ ಸಂಸ್ಥೆಯ ಕಛೇರಿಯಲ್ಲಿ ಬೆಂಗಳೂರಿನ ಅಸಿಸ್ಟೆಂಟ್ ರಿಕ್ರೂಟಿಂಗ್ ಅಧಿಕಾರಿಗಳನ್ನು ಭೇಟಿ ಮಾಡಬಹುದು. ಹೆಚ್ಚಿನ ವಿವರಗಳನ್ನು ಉದ್ಯೋಗ ವಿನಿಮಯ ಕಛೇರಿಯಲ್ಲಿ ಪಡೆಯಬಹುದು.

ಕೃಷ್ಣರಾಜಸಾಗರದಲ್ಲಿ ತೆಪ್ಪೋತ್ಸವ

ಕೃಷ್ಣರಾಜ ಸಾಗರದಲ್ಲಿ ಇದೇ ೧೭ನೇ ತಾರೀಕು ರಾತ್ರಿ ಕಾವೇರಮ್ಮನವರ ತೆಪ್ಪೋತ್ಸವವು ನೆರವೇರುವುದು

ಪೂರ್ವ-ಪಶ್ಚಿಮ ಪಾಕಿಸ್ತಾನಗಳಲ್ಲಿ ಭಿನ್ನ ಚುನಾವಣೆ ಪದ್ಧತಿ

ಪೂರ್ವ ಪಾಕಿಸ್ತಾನದಲ್ಲಿ ಜಂಟಿ ಚುನಾವಣೆ ಮತ್ತು ಪಶ್ಚಿಮ ಪಾಕಿಸ್ತಾನದಲ್ಲಿ ಪ್ರತ್ಯೇಕ ಚುನಾವಣಾ ಪದ್ಧತಿಗಳನ್ನು ಜಾರಿಗೆ ತರಬೇಕೆಂದು ಪಾಕಿಸ್ತಾನದಲ್ಲಿ ಅಧಿಕಾರ ನಡೆಸುತ್ತಿರುವ ಅವಾಮಿ ಲೀಗ್ ಮತ್ತು ರಿಪಬ್ಲಿಕನ್ ಪಕ್ಷದ ಸಮ್ಮಿಶ್ರ ಸಂಗಡವು ನಿರ್ಧರಿಸಿರುವುದಾಗಿ ಪ್ರಧಾನಿ ಸುಹ್ರವರ್ದಿಯವರು ತಿಳಿಸಿದ್ದಾರೆ. ಅಲ್ಪ ಸಂಖ್ಯಾತರಿಗೆ ಸ್ಥಾನಗಳನ್ನು ಮೀಸಲು ಮಾಡುವುದಿಲ್ಲವೆಂದೂ ಅವರು ಹೇಳಿರುವರು. ದ್ವಿಮುಖ ಚುನಾವಣಾ ಪದ್ಧತಿಯಿಂದ ಪಾಕಿಸ್ತಾನಕ್ಕೆ ಒಡಕು ಉಂಟಾಗುವುದಿಲ್ಲವೆಂದೂ ಅವರು ಅಭಿಪ್ರಾಯಪಟ್ಟಿರುವರು.

ಕರ್ನಾಟಕಕ್ಕೆಲ್ಲಾ ಒಂದು ವಾಸ್ತು ಶಿಲ್ಪ ಶಾಖೆ

ಭಾರತ ಸರ್ಕಾರದವರು ರಚಿಸಿರುವ ವಾಸ್ತು ಶಿಲ್ಪ ಸಲಹಾ ಸಮಿತಿ ಸಭೆಯು ಇಡೀ ಕರ್ನಾಟಕಕ್ಕೆ ಒಂದು ಶಾಖೆಯನ್ನು ಏರ್ಪಡಿಸಬೇಕೆಂದು ಶಿಫಾರಸು ಮಾಡಿದೆ. ಇದು ಹೊಯ್ಸಳರು, ಚಾಲುಕ್ಯರು, ಆದಿಲ್‌ಷಾಹಿಗಳು ಮತ್ತು ಗೋಳ್ಕೊಂಡ ಸಂಸ್ಥಾನಗಳನ್ನು ಪರಿಶೀಲಿಸುವುದು. ಅದರ ಕೇಂದ್ರ ಕಛೇರಿಯನ್ನು ಬೆಂಗಳೂರಿನಲ್ಲಿರುವ ಟಿಪ್ಪೂಸುಲ್ತಾನರ ಅರಮನೆಯಲ್ಲಿ ಇಡಬಹುದೆಂದು ಹೇಳಲಾಗಿದೆ.

ಮೆಡಿಕಲ್ ಕಾಲೇಜು ಅಸಿಸ್ಟೆಂಟ್ ಪ್ರೊಫೆಸರ್

ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಐದು ವರ್ಷಗಳ ಕಾಲದ ಪ್ರೊಫೆಸರ್ [illegible] ಕೆಮಿಸ್ಟ್ರಿ ವಿಭಾಗಕ್ಕೆ ಶ್ರೀ ಎಂ. [illegible] ಅವರನ್ನು ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನೇಮಿಸಲಾಗಿದೆ

ನಿಧನ

ಕೃಷ್ಣರಾಜನಗರ ತಾಲ್ಲೂಕು ಚಂದಗಾ ಗ್ರಾಮದ ಮಣೆಗಾರ್ ನರಸಿಂಹಾಚಾರ್ಯ ನೆನ್ನೆ ಬೆಳಿಗ್ಗೆ ತಮ್ಮ ೬೮ ನೇ ವಯಸ್ಸಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೆ

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ವರ್ಗದ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd. 1911.

ಆನಂದವಿಹಾರ್ ಟ್ರಾವೆಲ್ಸ್,
ಬೆಂಗಳೂರು 2.
ಅಕ್ಟೋಬರ್ 26, 27 ಮತ್ತು 28 ರಂದು
ಜೋಗ್ ಜಲಪಾತ
ಪ್ರವಾಸ [illegible]
ಮೈಸೂರಿನಿಂದಲೇ ಪ್ರಯಾಣ [illegible]
[illegible] 27 [illegible]
ಇಂದೇ ನಿಮ್ಮ ಸ್ಥಳ ಕಾದಿರಿಸಿ
1. ಹೊಯ್ಸಳ ಕರ್ನಾಟಕ ಸಂಘ
(ಫೋನ್ 2[illegible]), ಲಕ್ಷ್ಮೀಪುರಂ,
2. ಪಡತಿ ಸೋಡಾ ಫ್ಯಾಕ್ಟರಿ,
[illegible], ಮೈಸೂರು

ಹಾಸಿಗೆ-ದಿಂಬು
ಮಿತವ್ಯಯದಲ್ಲಿ ಹತ್ತಿಯಿಂದ ತಯಾರು ಮಾಡುತ್ತೆ
ಬಾಷುಸಾರ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

ದಸರಾಕ್ಕೆ ರೂಮುಗಳು
ಬಾಡಿಗೆಗೆ ದೊರೆಯುತ್ತವೆ
ದಸರಾಕ್ಕಾಗಿ ಮೈಸೂರಿಗೆ ಬರುವವರಿಗೆ ರೂಮುಗಳು ಬಾಡಿಗೆಗೆ ದೊರೆಯುತ್ತವೆ. ವಿಚ
ಸಿರಿ: –
ಆನಾಥಾಲಯ,
ಸುಬ್ಬರಾಯನಕೆರೆ ಬಳಿ, ಮೈಸೂರು

SREE GANESI
TALKIES
COURT JESTER
(Tomorrow Last Day)
Gala Release on 13-10-56
Daily 3 Shows
ULYSSES
(Technicolor)
S[illegible] Kirk Douglas and
Silvana Mangano

ಸ್ಥಾಪನೆ 1906
ಮೈಸೂರು ಕೋ-ಆಪರೇಟಿವ್ ಸೊಸೈ
ಲಿಮಿಟೆಡ್, ಗಾಂಧಿ ಚೌಕ, ಮೈಸೂರು
ಬಹಿರಂಗ ಹರಾಜು
[illegible] ಮೈಸೂರು [illegible] ಕುರುಬಗೇರಿಯಲ್ಲಿ 11-7-[illegible] ನಂಬರುಗಳುಳ್ಳ ಮನೆ [illegible] 13ನೇ (13-10-56 [illegible] ಬೆಳಿಗ್ಗೆ 9 ಗಂಟೆಗೆ ಸೊತ್ತಿನ [illegible] (Right, title a Interest) ಹರಾಜು ಹಾಕಲ್ಪಡುತ್ತೆ. [illegible] ವಿವರಗಳಿಗೆ ಸೊಸೈಟಿಯ ಆಫೀಸು [illegible] ದಲ್ಲಿ ಬಂದು ತಿಳಿಯಬಹುದು.
N. Subrahma
Secretary

Edited, Printed and Published
N. R. Nagarajan at Sadhvi Pr
D. Subbiah Road, Mysore

ಶುಭವಾಯ ! : : ಸುಸ್ವಾಗತ !!
ಸ್ವಚ್ಛತೆ, ಶಾಶ್ವತ ಬಳಕೆ ಮತ್ತು ಸುಲಭ ದರದ
ಅತ್ಯಾಧುನಿಕ ಸ್ಟೇನ್‌ಲೆಸ್ ಸ್ಟೀಲ್
ಗೃಹಕೃತ್ಯದ ಪಾತ್ರೆಗಳಿಗೆ
ದಸರಾ ವಸ್ತು ಪ್ರದರ್ಶನದ "ಡಿ" ಬ್ಲಾಕ್ 22
ಶೋಭಾ ಸ್ಟೇನ್‌ಲೆಸ್ ಸ್ಟೀಲ್ ಸ್ಟೋರ್ಸಿಗೆ
ಇಂದೇ ಒಮ್ಮೆ ಭೇಟಿ ಕೊಡಿರಿ

ಚಾಮುಂಡೇಶ್ವರಿ ಟಾಕೀಸ್
12 10 56ರಿಂದ : ಜಯಪ್ರದವಾದ : 3ನೇ ವಾ
ನಾರಾಯಣ್ ಪಿಲಂಸ್‌ರವರ ತಮಿಳು ಚಿತ್ರ
★ ವಾಳ್ವಿಲೆ ಒರು ನಾಳ್ ★
(ಬಾಳಿನಲ್ಲಿ ಒಂದು ದಿನ)
ನಟವರ್ಗ: ಶಿವಾಜಿ ಗಣೇಶನ್, ಜಿ. ವರಲಕ್ಷ್ಮಿ, ರಾಜಸುಲೋಚನ, ಟಿ. ಕೆ. ರಾಮಸ್ವಾ
ಮತ್ತು ಫ್ರೆಂಡ್ ರಾಮಸ್ವಾಮಿ — ನಿರ್ದೇಶಕ ಪಿಕ್ಚರ್ಸ್ ರಿಲೀಸ್

ಮೈಸೂರು ದಸರಾ ವಸ್ತು ಪ್ರದರ್ಶನ 1956
ವಿಶೇಷ ಕಾರ್ಯಕ್ರಮ
ಅಮೋಘ ಸಂಗೀತ ಕಛೇರಿ
ಶ್ರೀಮತಿ ಡಿ. ಕೆ. ಪಟ್ಟಮ್ಮಾಳ್
ಮತ್ತು ಪಾರ್ಟಿಯವರಿಂದ
ತಾ|| 12-10-1956 : ಶುಕ್ರವಾರ : ಸಂಜೆ 6 ಘಂಟೆಗೆ
ವಸ್ತು ಪ್ರದರ್ಶನದ ರಂಗ ಮಂಟಪದಲ್ಲಿ : ಪ್ರವೇಶ ಧನ 0—8—0

NEW BOMBAY SWEET MART
SHIRAMPET, MYSORE
ಇಂಡಿಯಾದಲ್ಲಿ ಪ್ರಖ್ಯಾತಿ ಹೊಂದಿರುವ ದೇಸಾಯಿಯವರ ನೇತೃತ್ವದಲ್ಲಿ ಶುದ್ಧವಾದ ತುಪ್ಪದಿಂದ ತಯಾರಿಸಲ್ಪಡುವ ಸಿಹಿ ಮತ್ತು ಖಾರ ತಿಂಡಿಗಳನ್ನು ಸೇವಿಸಬೇಕಾದರೆ, ಶ್ರೀರಾಂಪೇಟೆಯಲ್ಲಿ ಪ್ರಾರಂಭವಾಗಿರುವ ನ್ಯೂ ಬಾಂಬೆ ಸ್ವೀಟ್ ಮಾರ್ಟಿಗೆ ದಯವಿಟ್ಟು ಬನ್ನಿ, ಸೇವಿಸಿ, ಆನಂದಪಡಿ.
ನ್ಯೂ ಬಾಂಬೆ ಸ್ವೀಟ್ ಮಾರ್ಟ್,
ಶ್ರೀರಾಂಪೇಟೆ, ಮೈಸೂರು

ನ್ಯೂ ಚಾಮುಂಡೇಶ್ವರಿ ಕೆಫೆ ❀ ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
ಇರ್ವಿನ್ ರಸ್ತೆ, ಮೈಸೂರು
ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರಕ್ಕೂ, ಮೈಸೂರು ಮತ್ತು ಬೊಂಬಾಯಿ ರೀತಿಯ ರುಚಿರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ಒಳ್ಳೆ ಗಾಳಿ ಬೆಳಕುಗಳುಳ್ಳ ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ. : ಸಿ. ಬಿ. ಎಂ. ಚಂದ್ರಯ್ಯ, ಪ್ರೊಪ್ರೈಟರ್ : [ಫೋನ್ ನಂ. 54

ರಿಜಿಸ್ಟರ್ ನಂ. 792

ಮತ್ತು ಎಲ್ಲಾ ಲೈಂಗಿಕ
ವ್ಯಾಧಿಗಳಿಗೂ
ಖಾತರಿಯಾದ ಚಿಕಿತ್ಸೆ
ಚಿಕಿತ್ಸೆ ವಿಚಾರಿಸಿ
ಡಾ|| ರಾಜಾರವರನ್ನು
ಇಂಜೆಕ್ಷನ್ ಸೂಜಿ
ಕಾಲ : ಬೆಳಿಗ್ಗೆ 8ರಿಂದ 12
ಮಧ್ಯಾಹ್ನ 4ರಿಂದ 8
ರಾಜಾ ಮೆಡಿಕಲ್ ಹಾಲ್
ಎಲ್ ನಂ.1-745, ಚಿಕ್ಕ ರಸ್ತೆ,
ಮೈಸೂರು

ಬಿಡಿಪ್ರತಿಗೆ 3 ಕಾಸು

ಸ್ತ್ರೀಯರ ಬಹುಪ್ಪ ಸಂಬಂಧದ
ವ್ಯಾಧಿಗಳಿಗೆ
ಸಂತಾನ ಸಿಂಧೂರ
ಪುರುಷರಿಗೆ ಮೇಹರೋಗಗಳಿಗೆ
ಮತ್ತು ನಪುಂಸಕತ್ವಕ್ಕೆ
ಮದನ ವಿಲಾಸ
ಸಂತಾನ ಸಿಂಧೂರ ಸದನ,
ಚಾಮರಾಜ ರಸ್ತೆ,
ಕೃಷ್ಣ ವಿಲಾಸ ಬಳಿ,
ಮೈಸೂರು

ಂಪುಟ : ೦೮] SADHVI : FRIDAY 12—10—1956 ಮೈಸೂರು : ಶುಕ್ರವಾರ ೧೨—೧೦—೧೯೫೬ [ಸಂಚಿಕೆ : ೩೯

ಇಸ್ರೇಲ್ ಮತ್ತು ಜಾರ್ಡಾನ್‌ಗಳ ಗಡಿ ಬಳಿ ಭಾರಿ ಘರ್ಷಣೆ

ಸ್ರೇಲ್-ಜಾರ್ಡಾನ್ ಗಡಿ ಬಳಿ ಬಲವಾದ ಘರ್ಷಣೆ

ಸಾವಿರ ಇಸ್ರೇಲಿ ಸೈನಿಕರಿಗೆ ಧಕ್ಕೆ

ಇಸ್ರೇಲ್-ಜಾರ್ಡಾನ್ ಗಡಿ ಬಳಿ ನೆನ್ನೆ ಯಹೂದ್ಯರಿಗೂ, ಅರಬ್ಬರಿಗೂ ಬಲವಾದ ಘರ್ಷಣೆಯು ನಡೆಯಿತೆಂದೂ, ಎರಡು ಕಡೆಯೂ ವಿಶೇಷ ನಷ್ಟ ಸಂಭವಿಸಿತೆಂದೂ ವರದಿಯಾಗಿದೆ. ಒಂದು ಕಡೆ ಅರಬ್ಬರು ೧,೦೦೦ ಇಸ್ರೇಲಿ ಸೈನಿಕರನ್ನು ಸುತ್ತುಗಟ್ಟಿದ್ದಾರೆ. ಇಸ್ರೇಲಿಗಳು ಪಾರಾಗಲು ಮಾರ್ಗವಿಲ್ಲವಾಗಿದೆ. ಇಸ್ರೇಲಿ ಪ್ರದೇಶಗಳ ಮೇಲೆ ಜಾರ್ಡಾನ್ ಫಿರಂಗಿಗಳು ಗುಂಡು ಹಾರಿಸಿದುವು. ಸಿರಿಯಾ ಮತ್ತು ಲೆಬನಾನ್‌ಗಳು ಜಾರ್ಡಾನಿಗೆ ಸಹಾಯ ಮಾಡಲು ಸಿದ್ಧವಾಗಿವೆ. ಸಿರಿಯಾ ಸೈನ್ಯವು ಜಾರ್ಡಾನ್ ಗಡಿಯ ಬಳಿ ಆಜ್ಞೆಗಾಗಿ ಕಾದು ನಿಂತಿದೆ. ೬೦ ಇಸ್ರೇಲಿಗಳೂ, ೪೮ ಜಾರ್ಡಾನಿನ ಸೈನಿಕರೂ ಮಡಿದರು ಎಂದಾಗಿ ಹೇಳಲಾಗಿದೆ.

ಾಷ್ಟ್ರೀಯ ಮತ್ತು ಕಮ್ಯೂನಿಸ್ಟ್ ಚೀಣರ ಕದನ

ಹಾಂಕಾಂಗ್ ನಗರದ ಹೊರ ಭಾಗದ ಟ್ಸುಎನ್ ರ್ ಎಂಬಲ್ಲಿ ರಾಷ್ಟ್ರೀಯ ಚೀಣರ ದಿನಾಚರಣೆ ಸಂಬಂಧವಾಗಿ ಎರಡು ಪಕ್ಷಗಳಿಂದ ರಾಷ್ಟ್ರೀಯರಿಗೂ, ಕಮ್ಯೂನಿಸ್ಟ್ ಚೀಣರಿಗೂ ಘರ್ಷಣೆಯಾಗಿ ಒಟ್ಟು ೪೨ ಮಂದಿ ಮೃತಪಟ್ಟಿರುತ್ತಾರೆ. ಎರಡು ಪಕ್ಷಗಳವರೂ ಕಾದಾಟ ನಡೆಸಿದರು. ರಾಷ್ಟ್ರೀಯರೇ ಮೊದಲು ಕಮ್ಯೂನಿಸ್ಟ್ ಕಾರ್ಮಿಕರ ಕಛೇರಿ ಮೇಲೆ ಧಾಳಿ ಮಾಡಿದರು. ದೊಣ್ಣೆ ಮತ್ತು ಚಾಕಿಗಳನ್ನು ಉಪಯೋಗಿಸಲಾಯಿತು.

ಪೊಲೀಸರು ಹಾಹಾ ಮನೆ ಲೂಟಿ ಮಾಡಲೆಳಸಿದವರ ಮೇಲೆ ಗುಂಡು ಹಾರಿಸಿದರು. ಬ್ರಿಟಿಷ್ ಸೈನಿಕರು ಕಾರ್ಯಾಚರಣೆಗೆ ಸಿದ್ಧವಾಗಿ ನಿಂತಿದ್ದಾರೆ. ಗಲಭೆಗಳಲ್ಲಿ ೧೨ ಮಂದಿ ಐರೋಪ್ಯರಿಗೆ ಗಾಯವಾಗಿದೆ. ೧೫ ಪೋಲೀಸರಿಗೂ ಪೆಟ್ಟು ಬಿದ್ದಿದೆ. ರಾಷ್ಟ್ರೀಯ ಚೀಣರ ಧ್ವಜವನ್ನು ಹಾರಿಸಲೆತ್ನಿಸಿದಾಗ ಹೋರಾಟವು ಶುರುವಾಯಿತು.

ನವರಾತ್ರಿ ಶಾಂತಿ ಪೂಜೆ

ವಿದ್ಯಾರಣ್ಯಪುರದಲ್ಲಿರುವ ದ್ವೈತಾಶ್ರಮದಲ್ಲಿ ಳೆ ಮತ್ತು ನಾಳಿದ್ದು ಲೋಕಕಲ್ಯಾಣಾರ್ಥವಾಗಿ ನವರಾತ್ರಿ, ಶಾಂತಿ ವಿಶೇಷ ಪೂಜೆಗಳೂ, ನೇ ತಾರೀಖು ಹೋಮಗಳೂ ನಡೆಯುವುವು. ಸ್ತಾದಿಗಳು ಸೇವೆ ಸಲ್ಲಿಸಲು ಅವಕಾಶವಿದೆ.

ಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ. ೭-೧೫ ಓಲ್ಡ್‌ಸ್ತರ ನಾರಾ ಕೀರ್ತನೆ. ೬-೩೦ ಮತ್ತು ೮-೧೫ ಶಂಕರನಾರಾಯಣಶಾಸ್ತ್ರಿ-ವೀಣೆ. ಮಧ್ಯಾಹ್ನ ೧೨ ಬಿ. ಎಸ್. ರಾಜಯ್ಯಂಗಾರ್-ಸಂಗೀತ. ೧೨-೪೫ ಕಾಲೇಜಸ್. ೧-೫೦ ದಿಲ್ಲಿ. ಸಂಜೆ ೫-೩೦ ಎಂ. ಶಂಕರನಾರಾಯಣ ಶಾಸ್ತ್ರಿ- ವೀಣೆ. ೬-೩೦ ಚನ್ನಮ್ಮ ಕೃಷ್ಣಮೂರ್ತಿ-ಸಂಗೀತ. ೮ ಕಥಾ ಸಬ್ಬಾ ಹೆ. ೮-೧೫ ಮೊಂಟಿಕೆ. ೮-೪೦ ಪ್ರಸಾರಗೀತೆ. ರುವಿನ ಹಳ್ಳಿಯಲ್ಲಿ, ೯-೩೦ ರಾಷ್ಟ್ರೀಯ ಸಂಗೀತ.

೨೨ರಂದು ನೂತನ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆ

ಬೆಂಗಳೂರು ೧೨

ನೂತನ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಇಲ್ಲಿನ ಕಾಂಗ್ರೆಸ್ ಭವನದಲ್ಲಿ ಬರುವ ೨೨ ನೇ ತಾರೀಖು ಬೆಳಿಗ್ಗೆ ೧೧ ಗಂಟೆಗೆ ನಡೆಯುವುದು. ಅಲ್ಲಿ ಪ್ರದೇಶ ಕಾಂಗ್ರೆಸ್ಸಿನ ಕಛೇರಿ ಕೇಂದ್ರವ ಬಗ್ಗೆಯೂ ನಿರ್ಧಾರವಾಗಲಿದೆ.

ಭಾರತಕ್ಕೆ ಅಟ್ಲೀ ದಂಪತಿಗಳ ಆಗಮನ

ಬ್ರಿಟನ್ನಿನ ಮಾಜಿ ಪ್ರಧಾನಿ ಲಾರ್ಡ್ ಅಟ್ಲೀಯವರು ತಮ್ಮ ಪತ್ನಿಯವರೊಡನೆ ನೆನ್ನೆ ಬೊಂಬಾಯಿಗೆ ಆಗಮಿಸಿದರು. ಅವರಿಗೆ ಅಲ್ಲಿನ ಪೌರಸಭೆಯವರು ಸ್ವಾಗತವನ್ನು ನೀಡಿದರು. ಭಾರತವು ಸ್ವಾತಂತ್ರ್ಯ ಪಡೆದ ಮೇಲೆ ಅದು ಸಾಧಿಸಿರುವ ಅಗಾಧ ಪ್ರಗತಿಗಾಗಿ ಅವರು ಹರ್ಷ ಸೂಚಿಸಿ, ಈ ನಾಡು ಏಷ್ಯಾದಲ್ಲಿ ಪ್ರಜಾ ಸತ್ತಾತ್ಮಕ ರಾಷ್ಟ್ರ ಮತ್ತು ಉತ್ತಮ ಆಳ್ವಿಕೆಯ ಪ್ರತಿಷ್ಠಾನದ ರಾಷ್ಟ್ರವಾಗಿರುವುದೆಂದು ನುಡಿದರು. ಅವರು ೩ ವಾರ ಕಾಲ ಭಾರತದಲ್ಲಿ ಸಂಚರಿಸುವರು.

ಗೋಡೆಗಳಿಲ್ಲದ ಜೈಲು

ತಿರುಚೂರು ಬಳಿ ಒಂದು ಕಡೆ ಈ ವರ್ಷ ೧ ಲಕ್ಷ ರೂ. ವೆಚ್ಚದಲ್ಲಿ ಬಹಿರಂಗ ಜೈಲು ಖಾನೆಯನ್ನು ನಿರ್ಮಿಸಲಾಗುವುದು. ಅದಕ್ಕೆ ಸುತ್ತಲೂ ಪ್ರಾಕಾರದ ಗೋಡೆಗಳಿರುವುದಿಲ್ಲ. ಇಂತಹ ಜೈಲು ಖಾನೆಯು ಭಾರತದಲ್ಲಿ ಇದೇ ಮೊದಲನೆಯದು. ಅದರಲ್ಲಿ ಈಗ ೫೦ ಖೈದಿಗಳನ್ನು ಇಟ್ಟು ಅವರು ಡೈರಿ ಫಾರಂ, ಕುರಿ ಸಾಕುವ ಕೇಂದ್ರ ಮತ್ತು ಬೇಸಾಯದ ಫಾರಂ ಅನ್ನು ನಡೆಸುವಂತೆ ಏರ್ಪಡಿಸಲಾಗುವುದು.

ಮೈಸೂರು ನಗರದಲ್ಲಿ ಭೂದಾನ ಕಾರ್ಯಕ್ರಮ

ಮೈಸೂರು ಭೂದಾನ ಪಾದಯಾತ್ರಾ ತಂಡದವರು ಇದೇ ೧೪, ೧೫ ಮತ್ತು ೧೬ನೇ ತಾರೀಖುಗಳಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ನೇತೃತ್ವದಲ್ಲಿ ಮೈಸೂರು ನಗರದಲ್ಲಿ ಭೂದಾನ-ಸಂಪತ್ತಿದಾನ ಕಾರ್ಯಕ್ರಮಗಳನ್ನು ವ್ಯಾಪಕ ರೀತಿಯಲ್ಲಿ ಕೈಗೊಳ್ಳಲಿದ್ದಾರೆ. ಶ್ರೀಗಳಾದ ಕೆ. ಪಟ್ಟಾಭಿರಾಮನ್, ಎಚ್. ಸಿ. ದಾಸಪ್ಪ, ಎಚ್. ಎಸ್. ರುದ್ರಪ್ಪ, ಟಿ. ಸುಬ್ರಹ್ಮಣ್ಯಂ, ಟಿ. ಮರಿಯಪ್ಪ, ಎ. ಜಿ. ಬಂದಿಗೌಡ, ಕೆ. ಆರ್. ಮಾಧವರಾವ್ ಮುಂತಾದವರು ಅವರಲ್ಲಿ ಭಾಗವಹಿಸಲಿದ್ದಾರೆ. ರಾಜಧಾನಿಯ ನಾಗರಿಕರೆಲ್ಲರೂ ಈ ಕಾರ್ಯವು ಯಶಸ್ವಿಯಾಗಿ ನಡೆಯಲು ಸಹಕರಿಸಬೇಕೆಂದು ವ್ಯವಸ್ಥಾಪಕರಾದ ಶ್ರೀ ಎಚ್. ಎಸ್. ದೊರೆಸ್ವಾಮಿಯವರು ಕೋರಿದ್ದಾರೆ.

ನೂತನ ಮೈಸೂರು ಶಾಸನ ಸಭಾಧಿವೇಶನ

ನೂತನ ಮೈಸೂರು ಶಾಸನ ಸಭೆಯ ಪ್ರಥಮ ಅಧಿವೇಶನವು ಬರುವ ತಿಂಗಳು ವಿಧಾನ ಸೌಧದಲ್ಲಿ ಸೇರುವುದೆಂದು ಹೇಳಲಾಗಿದೆ.

ಸಂಚಾರ ಸೌಲಭ್ಯಗಳು ಸ್ವಲ್ಪವೂ ಸಾಲದು

ನವರಾತ್ರಿ ಉತ್ಸವಕ್ಕಾಗಿ ಈ ಸಾರಿ ನಗರಕ್ಕೆ ಬರುತ್ತಿರುವ ಅಗಾಧ ಜನಸಂದಣಿಯ ಪ್ರಮಾಣಕ್ಕೆ ತಕ್ಕಂತೆ ಸಂಚಾರ ವ್ಯವಸ್ಥೆಯು ಏರ್ಪಾಡಾಗದಿರುವುದು ಅತ್ಯಂತ ವಿಷಾದಕರ. ಬೆಂಗಳೂರು ಕಡೆಯಿಂದ ಬರುವವರಿಗೆ ಬಸ್ಸುಗಳನ್ನೂ ರೈಲುಗಳನ್ನೂ ಏರ್ಪಡಿಸಲಾಗಿದೆ. ಆದರೆ ಇತರ ಕಡೆಗಳಿಂದ ಬರುವವರಿಗೆ ಸಾಕಾದಷ್ಟು ಅನುಕೂಲವನ್ನು ಕಲ್ಪಿಸಿಲ್ಲ. ಉತ್ತರ ಕರ್ನಾಟಕದಿಂದಲೂ ಈ ಸಾರಿ ವಿಶೇಷವಾಗಿ ಜನರು ಬರುತ್ತಿದ್ದಾರೆ. ಅವರುಗಳಿಗೆ ರೈಲಿನಲ್ಲಾಗಲೀ ಬಸ್ಸುಗಳ ಮೂಲಕವಾಗಲೀ ಸರಿಯಾದ ಸೌಲಭ್ಯವನ್ನು ಕಲ್ಪಿಸಿರುವುದಿಲ್ಲ.

ನೆನ್ನೆ ಕೃಷ್ಣರಾಜಸಾಗರವನ್ನು ನೋಡಿ ಬರಲು ಸಹಸ್ರಾರು ಜನರು ಹೋಗಿದ್ದರು. ಆದರೆ ಅವರುಗಳಿಗೆ ಅಲ್ಲಿಂದ ಹಿಂದಿರುಗಲು ಸಾಕಾದಷ್ಟು ಬಸ್ಸುಗಳಿಲ್ಲದೆ ಮರಗಳಡಿಗಳಲ್ಲಿ ಹೆಂಗಸರು ಮಕ್ಕಳು ಬಹಳವಾಗಿ ತೊಂದರೆಪಟ್ಟರು. ಇಂದಿನಿಂದ ಜನಸಂದಣಿಯು ಇನ್ನೂ ಹೆಚ್ಚುವ ಸಂಭವವಿದೆ. ಅಧಿಕಾರಿಗಳು ಈ ವಿಷಯಕ್ಕೆ ಕೂಡಲೇ ಗಮನ ಕೊಟ್ಟು ಸಾರ್ವಜನಿಕರಿಗೆ ಹೆಚ್ಚು ಸೌಲಭ್ಯವನ್ನು ಒದಗಿಸಬೇಕೆಂದು ಕೋರಲಾಗಿದೆ.

—ಹಿತೈಷಿ

ವಾದ್ಯ ಸಂಗೀತ ಸ್ಪರ್ಧೆಯಲ್ಲಿ ಬಹುಮಾನಗಳು

ದಸರಾ ವಸ್ತು ಪ್ರದರ್ಶನದಲ್ಲಿ ನೆನ್ನೆ ವಾದ್ಯ ಸಂಗೀತ ಮತ್ತು ಲಾವಣಿ ಸ್ಪರ್ಧೆಗಳು ನಡೆದು ಜೂನಿಯರ್ ವಿಭಾಗದಲ್ಲಿ ಕುಮಾರಿಗಳಾದ ಎಂ. ಕೆ. ಸರಸ್ವತಿ ಮತ್ತು ವೈ. ಆರ್. ಸುಧಾರವರಿಗೆ ಪ್ರಥಮ ಮತ್ತು ದ್ವಿತೀಯ ಬಹುಮಾನಗಳೂ, ಸೀನಿಯರ್ ವಿಭಾಗದಲ್ಲಿ ಶ್ರೀ ಟಿ. ಆರ್ ಶ್ರೀನಾಥ್, ಶ್ರೀಮತಿಗಳಾದ ವೈ. ಆರ್. ಸುಭದ್ರ ಮತ್ತು ಲಲಿತಮ್ಮನವರಿಗೆ ಕ್ರಮವಾಗಿ ಪ್ರಥಮ ಮೂರು ಬಹುಮಾನಗಳೂ ಮತ್ತು ಲಾವಣಿ ಸ್ಪರ್ಧೆಯಲ್ಲಿ ಶ್ರೀ ಟಿ ಎನ್. ರಾಮನಾಥ್, ಶ್ರೀಮತಿ ಟಿ. ಕೆ. ಸರೋಜ ಮತ್ತು ಶ್ರೀ ಎಸ್.ಎಂ. ಸಾಂಬಶಿವನ್‌ರವರಿಗೆ ಪ್ರಥಮ ಮೂರು ಬಹುಮಾನಗಳೂ ದೊರೆತಿವೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮತ್ತು ಮುಖ್ಯ ಮಂತ್ರಿಯವರಿಗೆ ಸತ್ಕಾರ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ ಮತ್ತು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ಗೌರವಾರ್ಥವಾಗಿ ಬರುವ ಸೋಮವಾರ ಮಧ್ಯಾಹ್ನ ೩ ಗಂಟೆಗೆ ನಾಗರಿಕರ ಪರವಾಗಿ ಸತ್ಕಾರವೊಂದನ್ನು ಕ್ರಾಫರ್ಡ್ ಭವನದಲ್ಲಿ ಏರ್ಪಡಿಸಲಾಗಿದೆ.

ಕೇಂದ್ರ ಮಂತ್ರಿಗಳಿಗೆ ಪೌರಸನ್ಮಾನ ಪತ್ರ ಕಾರ್ಯಕ್ರಮ ರದ್ದು

ಕೇಂದ್ರ ಗೃಹ ಮಂತ್ರಿ ಪಂಡಿತ ಪಂತ್ ಮತ್ತು ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರುಗಳಿಗೆ ನಗರದ ಪೌರಸಭೆಯವರು ಕೊಡಬೇಕೆಂದಿದ್ದ ಮಾನಪತ್ರ ಕಾರ್ಯಕ್ರಮವು ಅನಿವಾರ್ಯ ಕಾರಣಗಳಿಗಾಗಿ ರದ್ದಾಗಿದೆ.

ದಸರಾ ವಸ್ತು ಪ್ರದರ್ಶನದ ಕೈಪಿಡಿ

ದಸರಾ ವಸ್ತು ಪ್ರದರ್ಶನ ಸಮಿತಿಯವರು ಈ ವರ್ಷದ ತಮ್ಮ ಕೈಪಿಡಿಯನ್ನು ಎಂದಿನಂತೆ ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಮುದ್ರಿಸಿ ಪ್ರಕಟಿಸುತ್ತಾರೆ. ಸಚಿವರುಗಳಾದ ಎ. ಜಿ. ರಾಮಚಂದ್ರರಾವ್, ಹೆಚ್. ಸಿದ್ಧವೀರಪ್ಪ; ಅಧಿಕಾರಿಗಳಾದ ಎಸ್. ಮುನಿನಂಜಪ್ಪ, ತಿಪ್ಪೇರುದ್ರಯ್ಯ ಮುಂತಾದವರಿಂದ ನಾನಾ ಪ್ರಚಲಿತ ವಿಷಯಗಳ ಉಪಯುಕ್ತ ಲೇಖನಗಳನ್ನು ಮುದ್ರಿಸಲಾಗಿದೆ. ಮುಖ್ಯ ಸ್ಥಳಗಳು ಮತ್ತು ಅಲ್ಲಿನ ವೈಶಿಷ್ಟ್ಯಗಳ ಚಿತ್ರಗಳನ್ನೂ ಪ್ರಕಟಿಸಲಾಗಿದೆ. ಶ್ರೀಮತಿ ಫಣೀಂದ್ರ ಕುಮಾರಿಯವರು ಭಾರತೀಯರ ಶ್ರೇಯಸ್ಸು ಎಂಬ ವಿಚಾರವಾಗಿ ಕನ್ನಡದಲ್ಲಿ ಉತ್ತಮ ಲೇಖನವನ್ನು ಬರೆದಿದ್ದಾರೆ. ಮಹಾರಾಜರು, ನೂತನ ಮಂತ್ರಿಮಂಡಲದ ಸಚಿವರೇ ಮುಂತಾದವರ ಚಿತ್ರಗಳನ್ನು ಕೊಡಲಾಗಿದೆ. ಇಂಗ್ಲಿಷ್ ಪ್ರತಿಯ ಬೆಲೆ ೮ ಆಣೆ. ಕನ್ನಡದ್ದು ೪ ಆಣೆ.

ಬ್ರಿಟನ್ನಿನೊಡನೆ ಜಾರ್ಡಾನ್ ಒಪ್ಪಂದದ ರದ್ದು ?

ಜಾರ್ಡಾನು ಬ್ರಿಟನ್ನಿನೊಡನೆ ಮಾಡಿಕೊಂಡಿರುವ ಒಪ್ಪಂದವನ್ನು ರದ್ದು ಮಾಡಲು ಸಿದ್ಧವಾಗಿರುವುದೆಂದು ಜಾರ್ಡಾನ್ ದೊರೆ ಹುಸೇನರು ಅರಬ್ ರಾಷ್ಟ್ರಗಳ ನಾಯಕರುಗಳಿಗೆ ರಹಸ್ಯವಾಗಿ ತಿಳಿಸಿರುವರೆಂದು ಹೇಳಲಾಗಿದೆ. ತಮ್ಮ ದೇಶಕ್ಕೆ ಅರಬ್ಬರು ಮಿಲಿಟರಿ ಮತ್ತು ಆರ್ಥಿಕ ಸಹಾಯವೀಯಬೇಕೆಂದು ಅವರು ಕೋರಿದ್ದಾರೆ. ಈ ಒಪ್ಪಂದವು ರದ್ದಾದರೆ ಮಧ್ಯ ಪೂರ್ವದಲ್ಲಿ ಬ್ರಿಟನ್ನಿಗೆ ಬಲವಾದ ಪೆಟ್ಟು ಬಿದ್ದು, ವಿಮಾನ ಮತ್ತು ಸೈನ್ಯ ಠಾಣೆಗಳಿಗೆ ಅಡಚಣೆಯೂ ಗುವುದು.

ವಸ್ತುಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಿಗ್ಗೆ ಶ್ರೀ ವಿ. ಎಚ್. ಕೇಶವರಾಯರಿಂದ ಕನ್ನಡ ಗೀತೆಗಳು ಮತ್ತು ಶ್ರೀಮತಿ ಟಿ. ಕೆ. ಸುಬ್ಬಲಕ್ಷ್ಮಮ್ಮನವರಿಂದ ದೇವರನಾಮಗಳೂ, ಸಂಜೆ ಶ್ರೀಮತಿ ಕಾಂತಲಕ್ಷ್ಮಮ್ಮನವರಿಂದ ಬಸವಣ್ಣನವರ ವಚನ, ಶಂಕರಗೂಡು ವಿದ್ಯಾ ಪೀಠದ ವಿದ್ಯಾರ್ಥಿಗಳಿಂದ ಕೋಲಾಟ ಮತ್ತು ಬ್ರೋಕರ್ ಫೇಷ್ಯಾಚಾರ್ ಎಂಬ ನಾಟಕಗಳೂ ಏರ್ಪಾಡಾಗಿವೆ.

ನಿಗಮಾಂತ ಮಹಾ ದೇಶಿಕರ ತಿರುನಕ್ಷತ್ರ

ರಾಜಧಾನಿಯ ಶ್ರೀವೈಷ್ಣವ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಿಗಮಾಂತ ಮಹಾದೇಶಿಕರ ತಿರುನಕ್ಷತ್ರದ ಪ್ರಯುಕ್ತ ನಾಳೆಯಿಂದ ೩ ದಿನ ಸಂಜೆ ೬ ಘಂಟೆಗೆ ಶ್ರೀ ಅಹೋಬಿಲ ಮಠದಲ್ಲಿ ಉಪನ್ಯಾಸ ಮತ್ತು ಸಂಗೀತಗಳನ್ನು ಏರ್ಪಡಿಸಲಾಗಿದೆ. ನಾಳೆ ಮ|| ವಿ|| ಅತ್ತಿಕೊಳ ದೀಕ್ಷಾಚಾರ್ ಸ್ವಾಮಿಗಳಿಂದ ಶ್ರೀ ಭಾಷ್ಯಕಾರರು ಮತ್ತು ವೇದಾಂತಾಚಾರ್ಯರು ಎಂಬ ವಿಷಯವಾಗಿ ಉಪನ್ಯಾಸವೂ, ವಿ|| ಹೆಚ್. ಟಿ ರಾಮಸ್ವಾಮಿಯವರ ಸಂಗೀತವೂ ನಡೆಯುತ್ತವೆ.

ಮೈಸೂರು ದಸರಾ ವಸ್ತು ಪ್ರದರ್ಶನ 1956

ಅಮೋಘ ನಾಟಕಗಳು . ವಸ್ತು ಪ್ರದರ್ಶನದ ರಂಗಮಂಟಪದಲ್ಲಿ
ಪ್ರಖ್ಯಾತ ಕನ್ನಡ ಚಲನ ಚಿತ್ರ ನಟನಟಿಯರುಗಳಿಂದ
13-10-56 ನೇ ಶನಿವಾರ ಸಂಜೆ 6½ ಗಂಟೆಗೆ **ಬ್ರೋಕರ್ ಭೀಷ್ಮಾಚಾರ್**
ಎಂಬ ನಾಟಕವೂ
15-10-56 ನೇ ಸೋಮವಾರ ಸಂಜೆ 6½ ಗಂಟೆಗೆ **ಭಾಗ್ಯಚಕ್ರ** * ಎಂಬ ನಾಟಕವೂ ಅಭಿನಯಿಸಲ್ಪಡುತ್ತವೆ
ನಟ ವರ್ಗ — ರಾಜಕುಮಾರ್, ನರಸಿಂಹರಾಜು, ಎಸ್ ರೇವತಿ, ಎಸ್ ಸರೋಜ,
ಲೀಲಾರಾವ್ ಜಿ ವಿ ಮುಂತಾದವರು
ವಸ್ತು ಪ್ರದರ್ಶನದ ಪ್ರವೇಶ ದರ 5 ಆಣೆ

VIDYA TUTORIAL COLLEGE,

Dalvoy High School Buildings, Mysore
Admissions open from 14-10-56—VIJAYADASAMI DAY
Offers Coaching for 1957 Mysore University Examinations

Inter Arts Commerce, Science } All Parts,
B A B Sc B Com } All Subjects
B E — Mathematics

Separate section being formed for the benefit of College going Students
Ladies also admitted Enrol Immediately
Enquiries — 9 to 10.30 A M and 5.30 to 8.30 P M

ಮೈಸೂರಿಗೆ ಬಂದಾಗ ಉತ್ತಮವಾದ ವಸತಿ ಸೌಕರ್ಯಕ್ಕೆ

ವುಡ್‌ಲ್ಯಾಂಡ್ಸ್ ಹೋಟೇಲ್

ಭೋಜನ ಮತ್ತು ವಸತಿ ಗೃಹ
ವುಡ್‌ಲ್ಯಾಂಡ್ಸ್ ಚಿತ್ರ ಮಂದಿರ, [illegible] ರಸ್ತೆ, ಮೈಸೂರು
[illegible]
[illegible] (ಫೋನ್ 871)

TAXIES AVAILABLE

From
ANAND VIHAR TRAVELS
Phone 254
Lakshmipuram, Mysore

1956ನೇ ದಸರಾ ಪ್ರಯುಕ್ತ

ವಿಮಾನ ವಿಹಾರ

5 ದಿನಗಳು ಮಾತ್ರ
ತಾ|| 11-10-1956 ರಿಂದ 15-10-1956 ರವರೆಗೆ
ಮೈಸೂರಿನಲ್ಲಿ ಮಂಡಕಳ್ಳಿ ವಿಮಾನ ನಿಲ್ದಾಣ
ದಿಂದ 4 ಸೀಟಿನ ವಿಮಾನದಲ್ಲಿ ಎಲ್ಲರೂ
ಕುಳಿತುಕೊಳ್ಳಲು ಅವಕಾಶ
ಬೆಳಿಗ್ಗೆ 8 ರಿಂದ 12 ಘಂಟೆ ವರೆಗೆ
ಮಧ್ಯಾಹ್ನ 2 ರಿಂದ ಸೂರ್ಯಾಸ್ತ
ಟಿಕೆಟ್ಟುಗಳು ಮಂಡಕಳ್ಳಿ ವಿಮಾನ
ನಿಲ್ದಾಣದಲ್ಲಿ ಮಾರಲ್ಪಡುತ್ತವೆ
ವಿವರಗಳಿಗೆ ಹಸ್ತ ಪತ್ರಿಕೆಗಳನ್ನು ನೋಡಿ
ಮೈಸೂರಿನಲ್ಲಿ ಫೋನ್ ನಂ 640
ಗೌರ್ನಮೆಂಟ್ ಫ್ಲೈಯಿಂಗ್ ಟ್ರೈನಿಂಗ್
ಸ್ಕೂಲ್,
ಬೆಂಗಳೂರು (ಫೋನ್ ನಂ. 2251)

SREE GANESH

TALKIES
Sole Release on 13-10-56
Daily 3 Shows

ULYSSES

(Technicolor)
Starring:- Kirk Douglas,
Sylvana Mangano and
Anthony Quinn
All Complimentaries suspended

ವುಡ್‌ಲ್ಯಾಂಡ್ಸ್

12-10-56 ರಿಂದ ಅಮೋಘವಾದ 3ನೇ ವಾರ
[illegible]

— ದೇವ್ ತಾ —

ಪಾತ್ರ:- [illegible]
[illegible]
[illegible]
[illegible]

ಲಕ್ಷ್ಮಿ ★

ಇಂದಿನಿಂದ ಅಮೋಘವಾದ 4 ನೇ ವಾರ
ಎಂ ಜಿ ರಾಮಚಂದ್ರನ್, ಪಿ ಭಾನುಮತಿ, ಪದ್ಮಿನಿ,
ಟಿ ಎಸ್. ಬಾಲಯ್ಯ, ಬಾಲಸರಸ್ವತಿ - [illegible]
ದೇವರ್ ಫಿಲಂಸ್‌ರವರ ತಮಿಳು ಚಿತ್ರ — **ತಾಯಿಕ್ಕುಪಿನ್ ತಾರ**
ವಿ ಸೂ — ವಿಜಯದಶಮಿ ಪ್ರಯುಕ್ತ 14-10-56ನೇ ಭಾನುವಾರ ಮಧ್ಯಾಹ್ನ 1-15, ಸಂಜೆ 6-45, ರಾತ್ರಿ 10 ಮತ್ತು ಮಧ್ಯ ರಾತ್ರಿ 1 ಘಂಟೆಗೆ ವಿಶೇಷ ಪ್ರದರ್ಶನವಿದೆ.

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾದ

ನವರತ್ನ — ಕಲ್ಪ

[illegible] ಕಂಡುಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ - 590
- ಭೇಟಿಯ ಕಾಲ
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7 30
[illegible]
[illegible]
ನವರತ್ನ ಕಲ್ಪ
ಉಪಯೋಗಗಳು

ಇದು [illegible] 9 ಅಮೂಲ್ಯ ವಸ್ತುಗಳ ಸಂಯೋಗ. ಇದರಿಂದ ನರಗಳ ದೌರ್ಬಲ್ಯ, [illegible]

[illegible]

NAVRATNA KALPA PHARMACY,
JULLUNDUR CITY (India)

Edited, Printed and Published by
A. R. Nagarajan at Sadhvi Press
D. Subbiah Road, Mysore



ಇದನ್ನು ಕಾಯ್ದಿಟ್ಟುಕೊಳ್ಳಿ
ರೆಕ್ಸೋನದ ದಸರೆಯ ವಿಶೇಷ ರಿಯಾಯಿತಿ!
ನಿಮ್ಮ ರೆಕ್ಸೋನದ ರ್ಯಾಪರ್‌ಗಳನ್ನು ಇಟ್ಟುಕೊಳ್ಳಿರಿ.
ಅವುಗಳಿಂದ ಈಗ ನಿಮಗೆ ಹಣದ
ಉಳಿತಾಯವಾಗುತ್ತದೆ!
3 ಸಾಧಾರಣ ಸೈಜಿನ ರೆಕ್ಸೋನದ ರ್ಯಾಪರ್‌ಗಳನ್ನು ಅಥವಾ 2 ದೊಡ್ಡ ಸೈಜಿನ ರೆಕ್ಸೋನದ ರ್ಯಾಪರ್‌ಗಳನ್ನು ಕೊಟ್ಟು [illegible]
[illegible]
[illegible]
ಕೊನೆಯ ತಾರೀಖು: ಡಿಸೆಂಬರ್ 15, 1956.

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಖಚಿತ ಔಷಧ
ಮೈಸೂರು ಸಂಸ್ಥಾನ ಮತ್ತು
ಹೊರಗು ಪ್ರದೇಶಗಳಿಗೆ
ಏಜಂಟರು ಬೇಕಾಗಿದ್ದಾರೆ
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀನಿವಾಸ ಮಂದಿರ ರಸ್ತೆ,
ಬೆಂಗಳೂರು -3

ಪುಟ : ೦೩] SADHVI : SATURDAY 13—10—1956 ಮೈಸೂರು : ಶನಿವಾರ ೧೩—೧೦—೧೯೫೬ [ಸಂಚಿಕೆ : ೬೯

ರುವ ವರ್ಷ ಕಾಲೇಜುಗಳಲ್ಲಿ ಕನ್ನಡ ಮಾಧ್ಯಮ ಆರಂಭ

ಲೇಜುಗಳಲ್ಲಿ ಬರುವ ವರ್ಷ ದಿಂದ ಕನ್ನಡದಲ್ಲಿ ಶಿಕ್ಷಣ

ವೈಸ್ ಚಾನ್ಸಲರ್

ಡಾ|| ಕೆ. ವಿ. ಪುಟ್ಟಪ್ಪನವರ ಹೇಳಿಕೆ

ಲೇಜು ತರಗತಿಗಳಲ್ಲಿ ಕನ್ನಡದಲ್ಲಿ ಪಾಠ ನಡೆಸುವಂತೆ ಮೈಸೂರು ವಿಶ್ವವಿದ್ಯಾಲ ನವರು ನಿರ್ಧರಿಸಿರುವುದಾಗಿ ವೈಸ್ ಚಾನ್ಸ ಡಾ|| ಕೆ. ವಿ. ಪುಟ್ಟಪ್ಪನವರು ಕನಕಪುರ ದ ಪ್ರೌಢಶಾಲಾ ಮತ್ತು ದಯಾನಂದ ವಾ ವಿದ್ಯಾಲಯಗಳ ಶಾಲಾ ದಿನಾಚರಣೆಯಲ್ಲಿ ಣ ಮಾಡುತ್ತಾ ತಿಳಿಸಿರುತ್ತಾರೆ. ಬರುವ ಂದ ಈ ಬಗ್ಗೆ ಕ್ರಮವನ್ನು ಎರಡು ವಿಧಾ ರುವ ತರಗತಿಗಳಲ್ಲಿ ಕೈಗೊಳ್ಳಲಾಗುವುದೆಂ ನವರು ಹೇಳಿರುವರು.

ಂದಿಯನ್ನು ಅಭ್ಯಾಸ ಮಾಡುವುದರಲ್ಲಿ ವಿ ಉತ್ಸುಕರಾಗಬೇಕಾಗಿಲ್ಲವೆಂದೂ, ವ್ಯವ ನಡೆಸುವ ದೃಷ್ಟಿಯಿಂದ ಅದನ್ನು ಕಲಿಯ ಂದೂ, ಸಾಹಿತ್ಯದಲ್ಲಿ ವಿಶೇಷ ಜ್ಞಾನ ಪಡೆ ವ ಸಲುವಾಗಿ ಅದನ್ನು ಕಲಿಯಬೇಕಾಗಿಲ್ಲ ೂ ಅವರು ತಿಳಿಸಿರುವರು

ಮಾಂತ ಮಹಾದೇಶಿಕರ ತಿರುನಕ್ಷತ್ರದ ಕಾರ್ಯಕ್ರಮ

ರಾಜಧಾನಿಯ ರಮಾವಿಲಾಸ ಅಗ್ರಹಾರದ ರ ಶ್ರೀ ಅಹೋಬಿಲ ಮಠದಲ್ಲಿ ನಿಗಮಾಂತ ದೇಶಿಕರ ತಿರುನಕ್ಷತ್ರದ ಪ್ರಯುಕ್ತ, ಸಂಜೆ ೬ ಗಂಟೆಗೆ ವಿ|| ಶ್ರೀ ಎಸ್ ವರದಾ ರಿಂದ 'ದೇಶಿಕರ್ ಮತ್ತು ವಾಲ್ಮೀಕಿ' ವಿಷಯವಾಗಿ ಉಪನ್ಯಾಸವೂ, ವಿ||ಎಸ್ ಸೀತಾಕೆಯ್ಯಂಗಾರ್ಯರಿಂದ ಸಂಗೀತ ಏರ್ಪಾಟಾಗಿವೆ. ನಾಳಿದ್ದು ವಿ|| ಎಸ್ ಶ್ರೀ ಅಯ್ಯಂಗಾರ್ಯರು ಶಿವಶಂಕರ ಸಿಂಹ ವಿಚಾರವಾಗಿ ಉಪನ್ಯಾಸ ಮಾಡಲಿರುವ ವಿ ದೇಶಿಕಾಚಾರ್ಯರ ಕೊಳಲು ವಾ ಇದೆ

ಲ್ವೈ ಮಂತ್ರಿ ಲಾಲ್‌ಬಹದ್ದೂರ್ ಶಾಸ್ತ್ರಿಯವರಿಗೆ ಪೌರ ಮಾನಪತ್ರ

ಲ್ವೈ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯ ಇಲ್ಲಿನ ಪೌರಸಭೆಯವರು ನಾಳಿದ್ದು ಬೆಳಿ ಗಂಟೆಗೆ ಟೌನ್‌ಹಾಲಿನಲ್ಲಿ ಮಾನಪತ್ರ ಸ ಣೆ ಮಾಡುವರು

ಸೂರು ರೇಡಿಯೋ ನಾಳೆ ಕಾರ್ಯಕ್ರಮ

ಗ್ಗೆ ೬-೫ ಸಂಗೀತ ೭-೧೫ ದೀಕ್ಷಿತರ ರಣ ಕೀರ್ತನೆ ೭ ೩೦ ಮತ್ತು ೮-೧೫ ವಾದ್ಯಲಹರಿ-ಸಂಗೀತ. ೯ ಕಾವ್ಯ ಕುಟೀರ ಬಾಲಜಗತ್. ಮಧ್ಯಾಹ್ನ ೧೨ ತಿಟ್ಟ ಯ್ಯಂಗಾರ್-ಸಂಗೀತ. ೧೨-೪೫ ವಾದ್ಯ ರಿಕಾರ್ಡು. ೧-೫೦ ಎ ವಿ. ನಾರಾಯಣ ನಾಗಸ್ವರ. ಸಂಜೆ ೫-೩೦ ಪಾಶ್ಚಾತ್ಯ ೬. ೫ ೩೦ ಆರ್ ಕೆ. ಶ್ರೀಕಂಠನ್-ಸಂ ೭ ೩೦ ರಿಕಾರ್ಡು ೭ ೩೦ ವಾರ್ತಾ ಕೊ ಜನಪದ ಕಾಳಿ. ೮ ಕೆ. ಎಸ್. ಸೀತಾ ಮ್ಮ-ಸಂಗೀತ. ೮ ೩೦ ರಾಷ್ಟ್ರೀಯ ಕಾ ಮ. ೮-೪೫ ಮತ್ತು ೯ ೧೫ ರಿಕಾರ್ಡು ಮಹಾ ಸಾಮ್ರಾಜ್ಯ-ನಾಟಕ ೧೦ ೩೦ ರಿನಲ್ಲಿ ದಸರಾ ಉತ್ಸವದ ವರದಿ.

ಅರಮನೆಯಲ್ಲಿ ಆಯುಧ ಮತ್ತು ವಾಹನಗಳ ಪೂಜೆ

ನಾಳೆ ಮಧ್ಯಾಹ್ನ ೩-೫೦ ಗಂಟೆಗೆ ಜಂಬೂಸವಾರಿ

ಮೈಸೂರು ೧೨

ನವರಾತ್ರಿ ಉತ್ಸವದ ಅಂಗವಾಗಿ ಅರಮನೆಯಲ್ಲಿ ಈ ದಿನ ಬೆಳಗ್ಗೆ ಆಯುಧ, ಆನೆ, ಕುದುರೆ, ಮುಂತಾದವುಗಳ ಪೂಜೆಯು ನಡೆಯಿತು ಬೆಳಗ್ಗೆ ೬-೪೦ಕ್ಕೆ ಪಟ್ಟದ ಆನೆ ಕುದುರೆ ಮತ್ತು ಆಯುಧಗಳನ್ನು ಸೋಮೇಶ್ವರ ದೇವಸ್ಥಾನಕ್ಕೆ ಕರೆದುಕೊಂಡು ಹೋಗಲಾಗಿತ್ತು ನಂತರ ಅವುಗಳು ಅರಮನೆಗೆ ಹಿಂದಿರುಗಿದ ಮೇಲೆ ಮಹಾರಾಜರು ಪೂಜೆಗೈದರು.

ನಾಳೆ ಬೆಳಗ್ಗೆ ೯-೩೬ ಗಂಟೆಗೆ ಆಯುಧಗಳು ಆನೆ, ಕುದುರೆ, ಮುಂತಾದುವನ್ನು ಬನ್ನೀಮಂಟಪಕ್ಕೆ ಕರೆದೊಯ್ಯಲಾಗುವುದು ಮಧ್ಯಾಹ್ನ ೩-೫೦ ಗಂಟೆಗೆ ಸರಿಯಾಗಿ ಜಂಬೂಸವಾರಿಯು ಹೊರಡುವುದು.

ಬಂಗಾಳಾ ಸರ್ಕಾರದಿಂದ ಬಟ್ಟೆ ದಾಸ್ತಾನುಗಳ ವಶ

ಹಾಲಿವಾರ್ ಮತ್ತು ಹೌರಾ ಕೈಲ್ಲೆ ಗೋದಾಮುಗಳಲ್ಲಿ ಕಳೆದ ಸೆಪ್ಟೆಂಬರ್ ೭ರವರೆಗೆ ಸೇರುವ ಬಟ್ಟೆ ದಾಸ್ತಾನುಗಳೆಲ್ಲವನ್ನೂ ವಶಪಡಿಸಿಕೊಳ್ಳಲು ಪಶ್ಚಿಮ ಬಂಗಾಳ ಸರ್ಕಾರದವರು ಭದ್ರತಾ ಶಾಸನದ ಪ್ರಕಾರ ಆಜ್ಞೆ ಮಾಡಿದ್ದಾರೆ ದಾಸ್ತಾನನ್ನು ತರಿಸಿಕೊಂಡು ಅದನ್ನು ಸಾಗಿಸದೆ ಇರುವುದೇ ಇದಕ್ಕೆ ಕಾರಣ ವರ್ಷದ ಈ ಕಾಲದಲ್ಲಿ ಬಟ್ಟೆಗಳಿಗೆ ವಿಶೇಷ ಬೇಡಿಕೆಯಿದ್ದರೂ ಅದನ್ನು ಹಂಚದೆ ಗೋದಾಮುಗಳಲ್ಲೇ ಬಿಟ್ಟಿರುವುದರಿಂದಲೂ, ಇತ್ತೀಚೆಗೆ ಬಂಗಾಳದಲ್ಲಿ ಆದ ಪ್ರವಾಹದಿಂದ ಅನೇಕರು ಪರಿತಪಿಸುತ್ತಿರುವುದರಿಂದಲೂ ಬಟ್ಟೆಗಳನ್ನು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಂಡು ಜನರಿಗೆ ಹಂಚಲಿರುವರು. ಮುಖ್ಯವಾಗಿ ಪಂಚೆ, ಸೀರೆ ಮತ್ತು ಕಂಬಳಿಗಳನ್ನು ಪ್ರವಾಹ ಪೀಡಿತರಿಗೆ ಒದಗಿಸಲಾಗುವುದು

ಅಮೆರಿಕದ ದರೋಡೆಕಾರರಿಗೆ ಜೀವಾವಧಿ ಸಜಾ

ಅಮೆರಿಕದ ಬಾಸ್ಟನ್ ನಗರದಲ್ಲಿರುವ ಬ್ರಿಂಕ್ಸ್ ಆರ್ಮರ್ಡ್ ಕಾರ್ ಕಂಪೆನಿಯಿಂದ ಆರು ವರ್ಷ ಹಿಂದೆ ೫೮,೦೨,೪೪೦ ರೂಗಳನ್ನು ದರೋಡೆ ಮಾಡಿದ ೮ ಜನರಿಗೆ ಜೀವಾವಧಿ ಸಜಾ ವಿಧಿಸಲಾಗಿದೆ. ಇದು ಜಗತ್ತಿನಲ್ಲೇ ಅತ್ಯಂತ ಭಾರಿ ದರೋಡೆಯೆಂದು ಹೇಳಲಾಗಿದೆ ದರೋಡೆಗಾಗಿ ಅವರು ೨ ವರ್ಷಗಳಿಂದಲೂ ಪಿತೂರಿ ನಡೆಸಿದ್ದರೆಂದು ಹೇಳಲಾಗಿದೆ

ಮುಖ್ಯ ಮಂತ್ರಿಯವರಿಂದ ನಂಜನಗೂಡು ನೀರು ಸರಬರಾಜಿನ ಆರಂಭ

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನಾಳಿದ್ದು ಬೆಳಗ್ಗೆ ನಂಜನಗೂಡಿಗೆ ತೆರಳಿ ಅಲ್ಲಿ ಶ್ರೀಕಂಠೇಶ್ವರ ವಾಟರ್ ವರ್ಕ್ಸ್‌ನ ಪ್ರಾರಂಭೋತ್ಸವವನ್ನು ನೆರವೇರಿಸುವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು

ನಾನ್‌ಗೆಜೆಟೆಡ್ ನೌಕರರಿಗೆ ತಾತ್ಕಾಲಿಕ ಪರಿಹಾರ

೫ ರಿಂದ ೨೦ ರೂ. ವರೆಗೆ ಕೊಡಲು ಮಂತ್ರಿಮಂಡಲದ ನಿರ್ಧಾರ

ಮೈಸೂರು ೧೨

ನವೆಂಬರ್ ೧ರ ಮುಂಚೆ ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರುಗಳಿಗೆ ತಾತ್ಕಾಲಿಕ ಪರಿಹಾರ ನೀಡುವ ವಿಚಾರವಾಗಿ ನೆನ್ನೆ ಮಂತ್ರಿಮಂಡಲವು ಪರಿಶೀಲನೆ ನಡೆಸಿತೆಂದೂ, ಈ ಬಗ್ಗೆ ಅವರು ನಿರ್ಧಾರವನ್ನು ತೆಗೆದುಕೊಳ್ಳಲಾಯಿತೆಂದೂ ತಿಳಿದುಬಂದಿದೆ ನಾಳೆ ದಿನ ಶುಭ ದಿವಸವಾದ ಪ್ರಯುಕ್ತ, ಈ ವಿಚಾರವಾಗಿ ಸರ್ಕಾರದವರು ಘೋಷಣೆ ಮಾಡಲಿರುವರು ನೌಕರರುಗಳಿಗೆ ೫ ರೂ ನಿಂದ ೨೦ ರೂ ವರೆಗೆ ತಾತ್ಕಾಲಿಕ ಪರಿಹಾರ ದೊರೆಯಲಿರುವುದಾಗಿ ಹೇಳಲಾಗಿದೆ.

ನಗರದಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವರ್ಗದ ವಿಚಾರವನ್ನೂ ಮಂತ್ರಿಮಂಡಲವು ಪರಿಶೀಲಿಸಿತೆಂದೂ, ಇದಕ್ಕೆ ಮುಂಚಿತವಾಗಿ ಮೈಸೂರು ಜಿಲ್ಲಾ ಶಾಸನಸಭಾ ಸದಸ್ಯರುಗಳ ಅಭಿಮತವನ್ನು ಪಡೆಯಲಾಯಿತೆಂದೂ ಗೊತ್ತಾಗಿದೆ

ಭೂಪಾಲ್ ವಿದ್ಯಾರ್ಥಿಗಳ ಮುಷ್ಕರ

ಭೂಪಾಲಿನ ಇಂಟರ್ ಕಾಲೇಜು ವಿದ್ಯಾರ್ಥಿಗಳು ಕಳೆದ ಸೋಮವಾರ ತಮ್ಮ ತರಗತಿಗಳಿಗೆ ಹೋಗದೆ ಮುಷ್ಕರ ನಡೆಸಿದರು ಮಹಿಳಾ ಕಾಲೇಜು ಸಂಘದ ಆರಂಭೋತ್ಸವದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಅವಕಾಶ ಕೊಡದಿದ್ದುದೇ ಇದಕ್ಕೆ ಕಾರಣ ಅಲ್ಲಿನ ಮುಖ್ಯ ಮಂತ್ರಿ ಎಸ್. ಡಿ. ಶರ್ಮಾರವರು ಸಂಘದ ಆರಂಭೋತ್ಸವವನ್ನು ನೆರವೇರಿಸಿದರು. ಅದರ ಅಂಗವಾಗಿ ಮಹಿಳೆಯರಿಂದ ವಿವಿಧ ವಿನೋದಾವಳಿಯೂ ಏರ್ಪಾಡಾಗಿತ್ತು. ಪ್ರವೇಶಾವಕಾಶವು ಸಿಗದೆ ವಿದ್ಯಾರ್ಥಿಗಳು ವಿದ್ಯುಚ್ಛಕ್ತಿ ತಂತಿಗಳನ್ನು ಕತ್ತರಿಸಿ, ಪಟಾಕಿಗಳನ್ನು ಹಚ್ಚಿ, ಕಲ್ಲುಗಳನ್ನು ಬೀರಿದರು ಜಿಲ್ಲಾ ಪೋಲೀಸು ಅಧಿಕಾರಿಗಳೂ, ಜಿಲ್ಲಾಧಿಕಾರಿಗಳೂ ವಿದ್ಯಾರ್ಥಿಗಳನ್ನು ಸಂತೈಸುವುದರಲ್ಲಿ ಯಶಸ್ವಿಯಾಗಲಿಲ್ಲ ರಾತ್ರಿ ವಿದ್ಯಾರ್ಥಿನಿಯರನ್ನು ಪೋಲೀಸು ರಕ್ಷಣೆಯೊಡನೆ ಮನೆಗಳಿಗೆ ಕಳುಹಲಾಯಿತು ಮಾರನೇ ದಿನ ಅವರನ್ನು ಬಸ್ಸುಗಳಲ್ಲಿ ಕರೆತರುತ್ತಿದ್ದಾಗ ವಿದ್ಯಾರ್ಥಿಗಳು ಅವನ್ನು ತಡೆದು ವಿದ್ಯಾರ್ಥಿನಿಯರು ಹಿಂದಿರುಗುವಂತೆ ಮಾಡಿದರು.

ಮಕ್ಕಳಿಗೆ ಉಚಿತ ಹಾಲು ಮತ್ತು ತುಪ್ಪದ ಹಂಚಿಕೆ

ನಗರದ ನಾನಾ ಶಾಲಾ ಮಕ್ಕಳಿಗೆ ಹಾಲಿನ ಪುಡಿ ಮತ್ತು ಅಮೆರಿಕಾ ತುಪ್ಪವನ್ನು ಸರಬರಾಜು ಮಾಡುವ ಬಗ್ಗೆ ನೆನ್ನೆ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ನಗರದ ನಾನಾ ಉಪಾಧ್ಯಾಯರು ಮತ್ತು ಹಾಸ್ಟೆಲ್ ವ್ಯವಸ್ಥಾಪಕರನ್ನು ಟೌನ್‌ಹಾಲಿನಲ್ಲಿ ಭೇಟಿ ಮಾಡಿ, ಪದಾರ್ಥಗಳ ಸದುಪಯೋಗದ ಬಗ್ಗೆ ಸೂಕ್ತ ಭರವಸೆಯಿತ್ತರು

ಸುಪ್ರೀಂ ಕೋರ್ಟ್ ಶ್ರೇಷ್ಠ ನ್ಯಾಯಾಧೀಶರ ಆಗಮನ

ಮೈಸೂರು ೧೨

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಎಸ್. ಆರ್ ದಾಸ್‌ರವರು ನೆನ್ನೆ ಸಂಜೆ ೬-೩೦ಕ್ಕೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು ಲಲಿತಮಹಲ್ ಬಳಿ ಅವರನ್ನು ಪುರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಜುರು, ಪುರಸಭಾ ಕಮಿಷನರ್ ಶ್ರೀ ವಿಶ್ವನಾಥ್, ಮುಂತಾದವರು ಸ್ವಾಗತಿಸಿ ಪುಷ್ಪಹಾರವನ್ನರ್ಪಿಸಿದರು

ಕರ್ನಾಟಕದ ಬಗ್ಗೆ ನಿಲುವೇ ತಮ್ಮಲ್ಲಿ ಅವಿಶ್ವಾಸಕ್ಕೆ ಕಾರಣ

ಮಾಜಿ ಮುಖ್ಯ ಮಂತ್ರಿ

ಕೆ. ಹನುಮಂತಯ್ಯನವರ ಹೇಳಿಕೆ

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಹೊಳೆನರಸೀಪುರದಲ್ಲಿ ದೇವಾಂಗ ಯುವಜನ ಬಳಗದ ಆರಂಭೋತ್ಸವವನ್ನು ನೆರವೇರಿಸಿ ಭಾಷಣ ಮಾಡುತ್ತಾ, ತಾವು ನಾಯಕತ್ವದ ಸ್ಪರ್ಧೆಯಲ್ಲಿ ಕೇವಲ ೫ ವಿರೋಧ ಮತಗಳಿಂದ ಪರಾಜಿತರಾದುದಾಗಿ ತಿಳಿಸಿದರು ವಿಶಾಲ ಮೈಸೂರಿನ ಸ್ಥಾಪನೆಗೆ ತಾವು ಬೆಂಬಲವಿತ್ತುದೇ ತಮ್ಮ ಮೇಲೆ ಅವಿಶ್ವಾಸ ಸೂಚನೆ ತರಲು ಕಾರಣವಾಯಿತೆಂದು ಅವರು ಹೇಳಿದರು

ಉತ್ತರ ಕನ್ನಡ ಪ್ರದೇಶಗಳಿಗಾಗಿ ಪ್ರತ್ಯೇಕ ಹೈಕೋರ್ಟು ಬೆಂಚು

ಬೊಂಬಾಯಿ ಮತ್ತು ಹೈದರಾಬಾದು ಕನ್ನಡ ಪ್ರದೇಶಗಳಿಗಾಗಿ ಪ್ರತ್ಯೇಕ ಹೈಕೋರ್ಟಿನ ಬೆಂಚನ್ನು ಏರ್ಪಡಿಸುವ ವಿಷಯವನ್ನು ಭಾರತ ಸರ್ಕಾರದವರು ಪರಿಶೀಲಿಸುತ್ತಿರುವುದಾಗಿ ಕೇಂದ್ರ ಗೃಹ ಶಾಖಾ ಮಂತ್ರಿ ಬಿ ಎನ್. ದಾತಾರ್‌ರವರು ತಿಳಿಸಿರುತ್ತಾರೆ. ಅದರ ವ್ಯಾಪ್ತಿಯಲ್ಲಿ ಬಳ್ಳಾರಿಯೂ ಸೇರುವುದೆಂದು ಅವರು ಹೇಳಿದರು ಬಳ್ಳಾರಿಯಲ್ಲಿ ಬೆಂಚನ್ನು ತೆರೆಯಬೇಕೆಂಬ ಸಲಹೆಯನ್ನು ಪರಿಶೀಲಿಸಲಾಗುವುದೆಂದೂ ಅವರು ನುಡಿದಿರುವರು

ಸೂಯೆಜ್ ಬಗ್ಗೆ ಖಾಸಗಿ ಮಾತುಕತೆಯಲ್ಲಿ ಪ್ರಗತಿ ಇಲ್ಲ

ಫ್ರೆಂಚ್ ವಿದೇಶಾಂಗ ಮಂತ್ರಿಯ ಹೇಳಿಕೆ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಷೀಲ್ಡರ ಸಮ್ಮುಖದಲ್ಲಿ ಬ್ರಿಟಿಷ್ ಮತ್ತು ಫ್ರೆಂಚ್ ವಿದೇಶಾಂಗ ಮಂತ್ರಿಗಳು ಈಜಿಪ್ಟಿನ ವಿದೇಶಾಂಗ ಸಚಿವ ಫೌಜಿಯವರೊಡನೆ ೫ ಸಲ ಮಾತುಕತೆ ನಡೆಸಿದ್ದಾರೆ ಅದರಲ್ಲಿ ಪ್ರಗತಿಯೇನೂ ಕಂಡುಬಂದಿಲ್ಲವೆಂದು ಫ್ರೆಂಚ್ ಮಂತ್ರಿ ಪೀನೋರವರು ತಿಳಿಸಿರುತ್ತಾರೆ.

ಸೂಚನೆ

ವಿಜಯದಶಮಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

ಕರ್ನಾಟಕ ಪ್ರಜಾ ಸಮಾಜವಾದಿ ಪಕ್ಷದ ಅಧಿಕಾರ ವರ್ಗ

ಮಂಗಳೂರಿನ ಕೆ. ಆರ್. ಕಾರಂತ್‌ರವರನ್ನು ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ, ಶ್ರೀ ಕೆ. ಕೆಂಚಪ್ಪನವರನ್ನು ಪ್ರಾಂತೀಯ ಕಾರ್ಯ... [illegible] ಶ್ರೀ ಎ. ಹೆಚ್. ಶಿವಾನಂದಸ್ವಾಮಿಯವರನ್ನು ಪ್ರಧಾನ ಕಾರ್ಯದರ್ಶಿಯಾಗಿಯೂ, ಶ್ರೀ ವೇದಾಂತ ಹೆಮ್ಮಿಗೆ ಮತ್ತು ಖುದ್ದೂಸ್ ಅನ್ವರ್‌ರವರನ್ನು ಜಂಟಿ ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಗಿದೆ.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd. 1911.

ಮಹಿಳೆಯರಿಗೆ ಮಿಲಿಟರಿ ಶಿಕ್ಷಣ

ನಾಸಿಕದ ಭೋನ್ಸ್ಲೆ ಮಿಲಿಟರಿ ಶಾಲೆಯಲ್ಲಿ ಮಹಿಳೆಯರು ಮತ್ತು ತರುಣಿಯರಿಗೆ ಇದೇ [illegible] ತಾರೀಕಿನಿಂದ ಎರಡು ವಾರ ಕಾಲ ಮಿಲಿಟರಿ ಶಿಕ್ಷಣವನ್ನು ಕೊಡಲಾಗುವುದು ವ್ಯಾಯಾಮ, ಬಂದೂಕ ಹಾರಿಸುವುದು, ಕುದುರೆ ಸವಾರಿ, ಈಜುವುದು ಮತ್ತು ಯೋಗಾಸನಗಳನ್ನು ಕಲಿಸಗುವುದು.

ರಣಜಿತ್ ★ ಜಯೋಘ 2ನೇ ವಾರ
12.10.56 ರಿಂದ
ಪ್ರತಿ ದಿನ ಮೂರು ಆಟಗಳು
ನರ್ಗಿಸ್ ಒಂದು ಶ್ರೇಷ್ಠ ಚಿತ್ರವಾಗುವುದಕ್ಕೆ ಕಾರಣರಾದ ನಟನಟಿಯರೂ, ಸಂಗೀತ ನಿರ್ದೇಶಕರೂ ಮತ್ತೊಮ್ಮೆ ಕೂಡಿ ನಿಮಗಾಗಿ ಇನ್ನೊಂದು ಅತ್ಯುತ್ತಮ ಸಂಗೀತ ಚಿತ್ರವನ್ನು ನಿರ್ಮಿಸಿದ್ದಾರೆ.
ಆಲ್ ಇಂಡಿಯಾ ಪಿಕ್ಚರ್ಸ್‌ರವರ ಹಿಂದಿ ಚಿತ್ರ
— ಅಂಜಾನ್ —
ಪಾತ್ರ.— ವೈಜಯಂತಿಮಾಲಾ, ಪ್ರದೀಪ್ ಕುಮಾರ್, ಜಾನಿ ವಾಕರ್ ಮತ್ತು ಇತರರು

ವಿವಾಹ ಮಹೋತ್ಸವ

ಚಾಮುಂಡಿಪುರದಲ್ಲಿರುವ ನಿವೃತ್ತ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಹೆಚ್. ನಾಗಪ್ಪನವರು ತಮ್ಮ ಕುಮಾರ ಶ್ರೀ ಹೆಚ್. ಸೀತಾರಾಮರವರಿಗೆ ಬೆಂಗಳೂರು ಅಕೌಂಟೆಂಟ್ ಜನರಲ್ಲರ ಕಛೇರಿಯಲ್ಲಿರುವ ಶ್ರೀ ಸಿ ಎಲ್. ಶ್ರೀಕಂಠಯ್ಯನವರ ಪುತ್ರಿ ಸೌ|| ಸೀತಾಲಕ್ಷ್ಮಿಯನ್ನು ತಂದುಕೊಂಡು ಕಳೆದ ಸೋಮವಾರ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

Prof. DEVAL's CIRCUS
ಪ್ರೊ|| ದೇವಲ್ಸ್ ಸರ್ಕಸ್
ಜೀವಣ್ಣರಾಯನ ಕಟ್ಟೆಯಲ್ಲಿ
ಹಾಕಿರುವ ಡೇರಾದಲ್ಲಿ
7.10.56 ರಿಂದ : ಪ್ರತಿ ದಿನ 3 ಪ್ರದರ್ಶನಗಳು
ಮಧ್ಯಾಹ್ನ 3 ಘಂಟೆಗೆ, ಸಂಜೆ 6-30 ಮತ್ತು
ರಾತ್ರಿ 9—30

ಮೋತಿಲಾಲ್ ಟಾಕೀಸ್
ಅಮೋಘ ಪ್ರಾರಂಭ : 12-10-56 ರಿಂದ
ಪ್ರತಿ ದಿನ 3 ಆಟಗಳು
ವಕೀಲ್ ಪ್ರೊಡಕ್ಷನ್ಸ್‌ರವರ
ಲಾಲ್ ಎ ಯೆಮೆನ್
ಪಾತ್ರ:- ಅನಿತಾ ಗುಹ, ದಿಲ್ಜಿತ್,
ನಿರಂಜನ ಶರ್ಮಾ, ಮತ್ತು ಹೆಲೆನ್
ಸಂಗೀತ: ಎ. ಆರ್ ಖುರೇಷಿ
ನಿರ್ದೇಶನ: ನಾನುಭಾಯಿ ವಕೀಲ್

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ — ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 390
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲಿನ ಕಾರ್ಯಕ್ರಮವನ್ನು ಗಮನಿಸಿ
ಮತ್ತು ಅವರ ಪರೀಕ್ಷೆ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಅವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ವೈಡೂರ್ಯಗಳ ಮತ್ತು ಪ್ರಶಸ್ತ ಶಿಲೆ, ಈ 9 ಅಮೂಲ್ಯ ಹರಳುಗಳ ಸಂಯೋಗ. ನಿಮ್ಮ ಎಲ್ಲಾ ಸಾಮಾನ್ಯ ಹಾಗೂ ತೀವ್ರವಾದ ವ್ಯಾಧಿಗಳಿಗೂ ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ.
NAVRATNA KALPA PHARMACY,
JULLUNDUR CITY (India)

ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಿಂಪಿಯಾ
ಚಿತ್ರಮಂದಿರಗಳ [illegible]
ಮೆಟ್ಟೂರ್ ಮಲ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, [illegible], ಬೀಬಿ, ಅರವಿಂದ್, ಕಟಾವು ಇನ್ನೂ ಅನೇಕ ಮಿಲ್‌ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ. ಉತ್ತಮ ತರಹೆಯ ಪ್ರಿಂಟೆಡ್ ವಾಯಿಲ್ ಮತ್ತು ಶೀಟಿಗಳು.
ಒಮ್ಮೆ ದಯಮಾಡಿ ಭೇಟಿ ಕೊಡಿ
ಇ. ಪಿ. ನಂಜಪ್ಪ

ಉತ್ತಮವಾದ ಕಟ್ಟಡದ
ಪ್ಲಾನುಗಳು ಮತ್ತು ಬ್ಲೂ ಪ್ರಿಂ
ಮಾಡಿಕೊಡುವುದಲ್ಲದೆ ಮತ್ತು ಸಿಮೆಂಟ್
ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದು
ಗಾಯತ್ರಿ ಟಾಕೀಸ್ ಎದುರು
[illegible] ಅಂಗಡಿಯಲ್ಲಿ
ಬಿ. ಮುನಿಸಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿರಿ.

ಜೀವನದ ಹರ್ಷವನ್ನು ಸವಿಯ
ಷಂಡರಿಗೆ ಪೌರುಷ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ
ಆರೋಗ್ಯ, ಐಶ್ವರ್ಯ ದೀರ್ಘಾಯುಷ್ಯ [illegible] ಹೊಂದಿ ದೀರ್ಘ ಜೀವನ [illegible] ಲ್ಲಾ ಆನಂದಗಳನ್ನೂ ಅನುಭವಿಸಬೇಕೆಂ [illegible] ಮಾನವರ ಮುಖ್ಯವಾದ [illegible] ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿ [illegible] ಶಂಡತ್ವ, ಮಾನಸಿಕ ಶಕ್ತಿಯ ಅಭಾವ, [illegible] ರು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ಬಲ್ಯ, ಸಿಫಿಲಿಸ್, ಗೊನೋರಿಯಾ, [illegible] ಯು, [illegible] ಎಲ್ಲ ವಿಷವಾದ [illegible] ಮೂತ್ರ ರೋಗಗಳು [illegible] ಇವುಗಳನ್ನು ಕೂಡಲೇ ಗುಣಪಡಿಸಲು [illegible] ತರಾಗಿರುವ ಡಾ|| ರಾಣಾರವರನ್ನು ([illegible]) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ. [illegible] ರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ [illegible] ವ್ಯಾಧಿಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು [illegible] ನೂರಕ್ಕೆ ನೂರು ಪಾಲು [illegible] ವುದು
ಅವರ ಸಲಹೆ ಪಡೆಯುವುದರಿಂದ [illegible] ನವನ್ನು ಪಡೆದಂತೆಯೇ. ಚಿಕಿತ್ಸೆಗಳನ್ನು ಗೌಪ್ಯ [illegible] ಡಲಾಗುವುದು. ಕೆಳಗಿನ ವಿಳಾಸದಲ್ಲಿ ಭೇಟಿ [illegible] ರಿ:—
ರಾಣಾ ಮೆಡಿಕಲ್ ಹಾಲ್
ಲೇನ್ ನಂ. 1-745, ಅಶೋಕಾ ರ
(ಮೈಸೂರು ಬ್ಯಾಂಕ್ ಬಳಿ [illegible]
ಮೂರನೇ ಅಡ್ಡ,)
ಮೈಸೂರು .

Edited, Printed and Publishe
A. R Nagarajan at Sadhvi
D. Subbaiah Road, Mysore

ಮೈಸೂರು ಶ್ರೀ [illegible] ಮಹಾರಾಜರವರ [illegible] ಅಂಬಳೆ ನರಸಿಂಹ
[illegible] 93 ವರ್ಷ ಖ್ಯಾತಿ ಗಳಿಸಿದ
ಪಂ|| ಎ ಆರ್ ಅಯ್ಯರ್‌ರವರ ರತ್ನತ್ರಯಗಳು
ಸಂತಾನ ಸಿಂಧೂರ
[illegible] ಹೊಟ್ಟೆನೋವು, [illegible] ಮಾಸಿಕ, ಗರ್ಭಸ್ರಾವ,
ಬಂಜೆತನ ಇತ್ಯಾದಿಗಳಿಗೆ
ಮದನವಿಲಾಸ: ಈ ಗುಳಿಗೆಗಳು ಉಷ್ಣ ಶಾಮಕ, ಅಸ್ವಾಭಾವಿಕ ವೀರ್ಯ ಸ್ಖಲನ ನಿವಾರಕ, ವೀರ್ಯವರ್ಧಕ ಮತ್ತು ನವಚೈತನ್ಯದಾಯಕ
ದಾಂಪತ್ಯ ಜೀವನವು ಪ್ರಾರಂಭವಾಗಿ 16-18 ವರ್ಷ ಸಂತಾನವಿಲ್ಲದ ಬಂಜೆ ದಂಪತಿಗಳು ಈ ಸಿದ್ಧೌಷಧಗಳ ಸೇವನೆಯಿಂದ ತಾಯ್ತಂದೆಗಳಾಗಿದ್ದಾರೆ
2 ಔಷಧಿಗಳ 1 ಸೆಟ್ ರೂ. 6-0-0 ; ಅಂಚೆ ವೆಚ್ಚ ಪ್ರತ್ಯೇಕ
ತಯಾರಕರು: ಎ. ರಾಮಸ್ವಾಮಿ ಅಯ್ಯರ್ ಸನ್ ಅಂಡ್ ಕಂ,
628 'ಸಂತಾನ ಸಿಂಧೂರ' ಸದನ
ಚಾಮುಂಡೇಶ್ವರಿ ರೋಡ್-ಕೃಷ್ಣ ಫ್ಲೋರ್ ಮಿಲ್ ಕ್ರಾಸ್, ಮೈಸೂರು

ಶ್ರೀ ||
ರಾಜಭವನ್
ಬ್ರಾಹ್ಮಣರ ಕಾಫಿ ಕ್ಲಬ್ ಮತ್ತು ಭೋಜನ ಶಾಲಾ
ಜಗನ್ಮೋಹನ ಪ್ಯಾಲೇಸ್ ರಸ್ತೆ, ಸಂತೆಪೇಟೆ, ಮೈಸೂರು
ರುಚಿಯಾದ ತಿಂಡಿ ಪದಾರ್ಥಗಳು, [illegible] ರುಚಿಯಾದ ತಂಪು ಪಾನೀಯಗಳು
ಅತ್ಯುತ್ತಮವಾದ ಕಾಫಿ ಮತ್ತು ಸ್ವಚ್ಛ ಭೋಜನ ದೊರೆಯುತ್ತದೆ
ಸರ್ವರೂ ಪ್ರೋತ್ಸಾಹಿಸಬೇಕಾಗಿ ಕೋರಿದೆ

NEW BOMBAY SWEET MART
SRIRAMPET, MYSORE
ಇಂಡಿಯಾದಲ್ಲಿ ಪ್ರಖ್ಯಾತಿ ಹೊಂದಿರುವ ದೆಹಲಿಯವರ ನೇತೃತ್ವದಲ್ಲಿ ರುಚಿರುಚಿಯಾದ ತುಪ್ಪದಿಂದ ತಯಾರಿಸಲ್ಪಡುವ ಸಿಹಿ ಮತ್ತು ಖಾರ ತಿಂಡಿಗಳನ್ನು ಸೇವಿಸಬೇಕಾದರೆ, ಶ್ರೀರಾಂಪೇಟೆಯಲ್ಲಿ ಪ್ರಾರಂಭವಾಗಿರುವ ನ್ಯೂ ಬಾಂಬೆ ಸ್ವೀಟ್ ಮಾರ್ಟ್‌ಗೆ ದಯವಿಟ್ಟು ಬನ್ನಿ, ಸೇವಿಸಿ, ಆನಂದಿಸಿ.
ನ್ಯೂ ಬಾಂಬೆ ಸ್ವೀಟ್ ಮಾರ್ಟ್
ಶ್ರೀರಾಂಪೇಟೆ, ಮೈಸೂರು

VIDYA TUTORIAL COLLEGE,
Dalvoy High School Buildings, Mysore
Admissions open from 14-10-56 - VIJAYADASAMI DAY
Offers Coaching for 1957 Mysore University Examinations
Inter Arts, Commerce, Science } All Parts,
B.A. B.Sc., B.Com. } All Subjects
B.E. — Mathematics
Separate section being formed for the benefit of College-going Students
Ladies also admitted . Enrol Immediately
Enquiries :— 9 to 10-30 A.M. and 5-30 to 8-30 P.M.

ಸುಸಮಯ ! : : ಸುಸ್ವಾಗತ
ಸ್ವಚ್ಛತೆ, ಶಾಶ್ವತ ಬಳಕೆ ಮತ್ತು ಸುಲಭ ದರದ
ಅತ್ಯಾಧುನಿಕ ಸ್ಟೇನ್‌ಲೆಸ್ ಸ್ಟೀಲ್
ಗೃಹಕೃತ್ಯದ ಪಾತ್ರೆಗಳಿಗೆ
ದಸರಾ ವಸ್ತು ಪ್ರದರ್ಶನದ "ಡಿ" ಬ್ಲಾಕ್ 22
ಶೋಭಾ ಸ್ಟೇನ್‌ಲೆಸ್ ಸ್ಟೀಲ್ ಸ್ಟೋರ್ಸಿಗೆ
ಇಂದೇ ಒಮ್ಮೆ ಭೇಟಿ ಕೊಡಿರಿ

ನ್ಯೂ ಶ್ರೀ ಚಾಮುಂಡೇಶ್ವರಿ ಕೆಫೆ ✱ ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
ಇಲವಾಲದ ರಸ್ತೆ, ಮೈಸೂರು
ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರಕ್ಕೆ ಮೈಸೂರು ಮತ್ತು ಬೊಂಬಾಯಿ ರೀತಿಯ ರುಚಿರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ಒಳ್ಳೆ ಗಾಳಿ ಬೆಳಕುಗಳುಳ್ಳ ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ. : ಸಿ. ಬಿ. ಎಂ. ಚಂದ್ರಯ್ಯ, ಪ್ರೊಪ್ರೈಟರ್ : [ಫೋನ್ ನಂ.

ಟೆಲಿಫೋನ್. ನಂ. 792

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಹೊರಗಿನ ಪ್ರದೇಶಗಳಿಗೆ
ಏಜಂಟರು ಬೇಕಾದರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. [illegible]
ಶ್ರೀ [illegible] ರಸ್ತೆ,
ಬೆಂಗಳೂರು -2

ಪುಟ : ೧೮] SADHVI : MONDAY 15-10-1956 ಮೈಸೂರು : ಸೋಮವಾರ ೧೫—೧೦—೧೯೫೬ [ಸಂಚಿಕೆ : ೭೦

ಬರುವ ವರ್ಷ ಸತ್ಯಮಂಗಲ ರೈಲು ರಸ್ತೆ ಕೆಲಸ ಆರಂಭ

ಚಾಮರಾಜನಗರ-ಸತ್ಯಮಂಗಲ ರೈಲು ರಸ್ತೆ ಕೆಲಸ

ಬರುವ ವರ್ಷದಿಂದ ಕೈಗೊಳ್ಳಲಾಗುವುದೆಂದು ರೈಲ್ವೆ ಮಂತ್ರಿಗಳ ಭರವಸೆ

ಮೈಸೂರು ೧೪

ಬಹುದಿನಗಳಿಂದಲೂ ಮೈಸೂರಿನ ಜನರು ತ್ತು ಸರ್ಕಾರದವರು ಒತ್ತಾಯ ಮಾಡುತ್ತಿ ಚಾಮರಾಜನಗರ-ಸತ್ಯಮಂಗಲ ರೈಲು ರ ನಿರ್ಮಾಣ ಕಾರ್ಯವನ್ನು ಬರುವ ದಿಂದ ಕೈಗೊಳ್ಳಲಾಗುವುದೆಂದು ಈ ದಿನ ರತದ ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದ್ದೂ ಶಾಸ್ತ್ರಿಯವರು ಭರವಸೆಯಿತ್ತರು. ನಗರದ ರಸಭೆಯವರು ಇಂದು ಟೌನ್ ಹಾಲಿನಲ್ಲಿ ಅವ ಮಾನಪತ್ರವನ್ನು (ಕೃಷ್ಣನು ಅರ್ಜುನನಿಗೆ ದೇಶ ಮಾಡುತ್ತಿರುವ ಪಾರ್ಥಸಾರಥಿ ದಂ ವಿಗ್ರಹದ ಕರಂಡದಲ್ಲಿಟ್ಟು) ಒಪ್ಪಿಸಿದರು.

ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥನೆ ನಡೆದನಂತರ ಡಾ|| ಬಿ. ಆರ್. ಶಾಮಾಚಾ ಮತ್ತು ಪಾರ್ಟಿಯವರಿಂದ ಕೊಳಲು ವಾದ ನಡೆಯಿತು. ಪೌರಸಭಾಧ್ಯಕ್ಷ ಶ್ರೀ ಎ. ಕೃ ಮೂರ್ತಿರಾಯರು ಬಿನ್ನವತ್ತಳೆಯನ್ನು ಓದಿ ು. ಅದರಲ್ಲಿ ಹಾಸನ-ಮಂಗಳೂ ರೈಲು ರಸ್ತೆ, ಚಾಮರಾಜನಗರ-ಸತ್ಯಮಂಗ ರಸ್ತೆ, ಇಲ್ಲಿನ ವರ್ಕ್‌ಷಾಪಿನ ಅಂತಸ್ತನ್ನು ಹೆ ಸುವುದು ಮತ್ತು ನಗರದಲ್ಲಿರುವ ರೈಲ್ವೆ ಡಿವಿ ಲ್ ಕೇಂದ್ರ ಕಛೇರಿಯನ್ನು ಬೇರೆ ಕಡೆಗೆ ರ್ಗಾಯಿಸದಿರುವುದು, ಇವೇ ಮುಂತಾದ ವಿ ರಗಳ ಬಗ್ಗೆ ಅರಿಕೆ ಮಾಡಲಾಗಿತ್ತು.

ಸಂಸ್ಥಾನದ ಸಚಿವರುಗಳು, ಪಶ್ಚಿಮ ಬಂಗಾ ಮಂತ್ರಿ ಶ್ರೀ ಜಲಿ, ಮೈಸೂರು ಪ್ರದೇಶ ಕಾಂ ಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ ಮುಂತಾ ರು ಭಾಗವಹಿಸಿದ್ದರು.

ಶ್ರೀ ಶಾಸ್ತ್ರಿಯವರು ಉತ್ತರವಿತ್ತು, ಸತ್ಯಮಂ ಚಾಮರಾಜನಗರ ರೈಲು ರಸ್ತೆ ಬಗ್ಗೆ ಮೈ ರಿನವರ ತೀವ್ರಕಾಂಕ್ಷೆಯನ್ನು ತಾವು ಮನ ಡಿರುವುದಾಗಿ ಸೂಚಿಸಿದರು. ಈ ವಿಚಾರವ ತಾವು ಆಸಕ್ತಿಯಿಂದ ಪರಿಶೀಲಿಸುತ್ತಿರುವು ಗಿಯೂ, ಹಣಕಾಸಿನ ಕೊರತೆಯಿಂದ ಇದು ಗೂ ಅದನ್ನು ಕೈಗೊಳ್ಳಲಾಗಲಿಲ್ಲವೆಂದೂ ಅ ು ಹೇಳಿದರು. ಹಾಸನ ಮತ್ತು ಮಂಗಳೂರು ಯ ಬಗ್ಗೆ ಈಗಾಗಲೇ ಸರ್ವೇಯು ಮುಗಿದಿ ವುದೆಂದೂ, ರೈಲ್ವೆ ಬೋರ್ಡಿನವರು ಅಂಗೀ ಸಿದರೆ ಅದನ್ನು ಕೈಗೆತ್ತಿಕೊಳ್ಳಲಾಗುವುದೆಂ ತಿಳಿಸಿದರು. ನೂತನ ಮೈಸೂರಿನಲ್ಲಿ ಮಂಗ ರು ಸೇರಿ ಹೊಸ ಸಂಸ್ಥಾನಕ್ಕೆ ಒಂದು ಒಳ್ಳೆ ರೇವು ಬಂದಂತಾಗುವುದರಿಂದ ಅಲ್ಲಿಗೆ ರೈಲು ಯನ್ನು ಏರ್ಪಡಿಸುವುದರ ಅವಶ್ಯಕತೆಯಿದೆ ಎಂದು ಅವರು ಒಪ್ಪಿದರು.

ದಸರಾ ಉತ್ಸವದ ವಿಚಾರವನ್ನು ಅವರು ಪ್ರ ಸ್ತಾಪಿಸಿ, ಅದರಲ್ಲಿ ಅತ್ಯಂತ ಭಾರಿ ಜನ ಸಮೂ ಭಾಗವಹಿಸಿದುದನ್ನು ತಾವು ಕಂಡುದಾಗಿ , ಹೊಸ ರೈಲು ರಸ್ತೆಗಳ ಏರ್ಪಾಡಿನಿಂದ ಉತ್ಸವವನ್ನು ನೋಡುವುದಕ್ಕೆ ಇನ್ನೂ ಹೆ ಜನರು ಬರಲು ಸೌಕರ್ಯವಾಗುವುದೆಂದೂ ಅವರು ಸೂಚಿಸಿದರು. ಇಲ್ಲಿನ ರೈಲ್ವೆ ಕಛೇರಿಯ ಪ್ರಾದೇಶಿಕ ಶಾಖೆಯನ್ನು ಬೇರೆ ಕಡೆಗೆ ವರ್ಗಾಯಿಸುವುದಿಲ್ಲವೆಂದು ಅವರು ತಿಳಿಸಿದರು.

ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ನಗರದಲ್ಲಿ ವೈಭವದ ಜಂಬೂಸವಾರಿ

೮ ಲಕ್ಷ ಜನರಿಂದ ವೀಕ್ಷಣೆ

ವಿಪರೀತ ಮಳೆಯಿಂದ ವಾಪಸು ಬರುವ ಮೆರವಣಿಗೆ ರದ್ದು

ಮೈಸೂರು ೧೪

ಈ ವರ್ಷದ ನವರಾತ್ರಿ ಉತ್ಸವದ ಜಂಬೂಸವಾರಿಯು ನೆನ್ನೆ ಬಹು ವೈಭವದಿಂದ ನಡೆಯಿತು. ಶ್ರೀಮನ್ಮಹಾರಾಜರು ದಿವ್ಯಾಲಂಕೃತವಾಗಿದ್ದ ಬಿಳಿಗಿರಿರಂಗ ಎಂಬ ಅಂಬಾರಿ ಆನೆಯನ್ನು ಏರಿ ಬನ್ನಿಮಂಟಪಕ್ಕೆ ಚಿತ್ತೈಸಿದರು.

ಹೆಂಗಸರು ಮಕ್ಕಳು ಆದಿಯಾಗಿ ಲಕ್ಷೋಪಲಕ್ಷ ಜನರು ಭಾರತದ ನಾನಾ ಕಡೆಗಳಿಂದ ಬಂದಿದ್ದು ಈ ಉತ್ಸವನ್ನು ವೀಕ್ಷಿಸಿ ಹರ್ಷಧ್ವನಿ ಮಾಡಿದರು. ಸುಮಾರು ೮ ಲಕ್ಷ ಜನರು ಸೇರಿದ್ದರು.

ಮಧ್ಯಾಹ್ನ ೩-೫೦ಕ್ಕೆ ಸರಿಯಾಗಿ ಉತ್ಸವವು ಅರಮನೆಯನ್ನು ಬಿಟ್ಟಿತು. ಅದರಲ್ಲಿ ಮಾಮೂಲಿನಂತೆ ಒಂಟೆ, ಆನೆ, ಫಿರಂಗಿ ಗಾಡಿಗಳು, ಭಾರತದ ಸೇವಾದಳ, ಸ್ಕೌಟು, ಎನ್. ಸಿ. ಸಿ. (ಮಹಿಳೆಯರು ಮತ್ತು ಪುರುಷರು) ವಿವಿಧ ಬ್ಯಾಂಡುಗಳು, ಮೈಸೂರು ಪಿ. ಆರ್. ಪಿ., ಅರಮನೆಯ ಎಂ ಆರ್ ಎ. ಪಿ. ದಳಗಳು, ಬಿರುದಾವಳಿಗಳು ಭಾಗವಹಿಸಿದ್ದುವು. ಅವುಗಳ ಹಿಂದೆ ಸರ್ದಾರರುಗಳು, ಅಧಿಕಾರಿಗಳೂ ಬರುತ್ತಿದ್ದರು. ಅಲ್ಲಲ್ಲೇ ಪುಷ್ಪ ಮಾಲಿಕೆಗಳನ್ನು ಮಹಾರಾಜರಿಗೆ ಅರ್ಪಿಸಲಾಯಿತು. ಪೌರಸಭೆಯವರು [illegible] ಮಂಟಪದಲ್ಲಿ ಪುಷ್ಪಹಾರವನ್ನಿತ್ತರು.

ಬನ್ನಿಮಂಟಪಕ್ಕೆ ಉತ್ಸವವು ೬ ಘಂಟೆಗೆ ಸೇರಿತು. ಅಲ್ಲಿ ಟಾರ್ಚ್‌ಲೈಟ್ ಪೆರೇಡು, ಶಮೀಪೂಜೆ ಮುಂತಾದುವು ನಡೆದುವು. ರಾತ್ರಿ ಮಳೆಯು ವಿಪರೀತವಾಗಿ ಬಂದುದರಿಂದ ರಾಜಪ್ರಮುಖರು ಮೋಟಾರಿನಲ್ಲಿ ಅರಮನೆಗೆ ಹಿಂದಿರುಗಿದರು: ಮೆರವಣಿಗೆಯು ರದ್ದಾಯಿತು. ಮೆರವಣಿಗೆಯು ಅರಮನೆಯಿಂದ ಹೊರಟಾಗಲೂ ಮತ್ತು ಬನ್ನಿಮಂಟಪವನ್ನು ತಲಪಿದಾಗಲೂ ೨೧ ಕುಶಾಲತೋಪುಗಳನ್ನು ಹಾರಿಸಲಾಯಿತು.

ಈ ವರ್ಷ ಸೇರಿದಷ್ಟು ಜನರು ಹಿಂದೆಂದೂ ಇರಲಿಲ್ಲ. ಆದರೆ ಮೆರವಣಿಗೆ ಬರದಿದ್ದುದರಿಂದ ಅಸಂಖ್ಯಾತ ಜನರಿಗೆ ನಿರಾಶೆಯುಂಟಾಯಿತು. ಮೆರವಣಿಗೆಯ ಉದ್ದಕ್ಕೂ ರಸ್ತೆಯ ಮನೋಹರವಾಗಿ ವಿದ್ಯುದ್ದೀಪಗಳು ಕಂಗೊಳಿಸುತ್ತಿದ್ದುವು.

ಪೊಲೀಸು ಉಸ್ತುವಾರಿಯು ಬಹಳ ಸಮರ್ಪಕವಾಗಿದ್ದಿತು.

ಬೆಂಗಳೂರಿನಲ್ಲಿ ಕೆ. ಪಿ. ಸಿ. ಸಿ. ಸಭೆ

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ಈ ತಿಂಗಳು ೨೧ನೇ ತಾರೀಕು ಬೆಂಗಳೂರಿನಲ್ಲಿ ಸೇರುವುದು.

ಮುಂದೆಯೂ ದಸರಾ ಉಂಟು

ಕಡಿದಾಳ್ ಮಂಜಪ್ಪನವರ ಹೇಳಿಕೆ

ಬೆಂಗಳೂರು ೧೪

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ನವರಾತ್ರಿ ಉತ್ಸವಗಳು ಮುಂದೆಯೂ ಸ್ವಲ್ಪ ಬದಲಾವಣೆ ಹೊಂದಿ ನಡೆಯುವುವೆಂದು ತಿಳಿಸಿದರು. ಹೊಸ ಸರ್ಕಾರದವರು ಅರಮನೆಯಲ್ಲಿ ಉತ್ಸವವನ್ನೂ, ಜಂಬೂಸವಾರಿಯನ್ನೂ ನಡೆಸುವ ವಿಚಾರವಾಗಿ ಇತ್ಯರ್ಥ ಮಾಡಲಿರುವುದಾಗಿ ಅವರು ಹೇಳಿದರು.

ಅಂಬೇಡ್ಕರ್ ಮತ್ತು ೨ ಲಕ್ಷ ಹಿಂಬಾಲಕರಿಗೆ ಬೌದ್ಧ ದೀಕ್ಷೆ

ಕೇಂದ್ರ ಸರ್ಕಾರದ ಮಾಜಿ ನ್ಯಾಯಾಂಗ ಮಂತ್ರಿಯೂ, ಅಖಿಲ ಭಾರತ ನಿಮ್ನವರ್ಗದವರ ಮುಖಂಡರೂ ಆದ ಡಾ|| ಬಿ. ಆರ್. ಅಂಬೇಡ್ಕರ್‌ರವರು ನೆನ್ನೆ ತಮ್ಮ ೨ ಲಕ್ಷಕ್ಕೂ ಹೆಚ್ಚು ಮಂದಿ ಅನುಯಾಯಿಗಳೊಡನೆ ನಾಗಪುರದಲ್ಲಿ ಬೌದ್ಧಮತವನ್ನು ಅವಲಂಬಿಸಿ, ಹಿಂದೂ ಮತದೊಡನೆ ತಮ್ಮ ಸಂಬಂಧವನ್ನು ತ್ಯಜಿಸಿದರು.

ಇಂತಹ ಘಟನೆಯು ಇಡೀ ಪ್ರಪಂಚದಲ್ಲೇ ಎಲ್ಲೂ ಆಗಿಲ್ಲವೆಂದು ಹೇಳಲಾಗಿದೆ. ೧೦ ಲಕ್ಷ ಚದರ ಅಡಿಗಳ ಬಹಿರಂಗ ಪ್ರದೇಶದಲ್ಲಿ ಸಾಗರೋಪಾದಿಯಲ್ಲಿ ಜನರು ಸೇರಿದ್ದರು. ಡಾ|| ಅಂಬೇಡ್ಕರರು ಮತ್ತು ಅವರ ಪತ್ನಿ ಸವಿತಾಬಾಯಿಯವರಿಗೆ ಮೊದಲು ಬೌದ್ಧದೀಕ್ಷೆಯನ್ನು ಬರ್ಮಾದ ಚಂದ್ರಮಣಿ ಎಂಬ ೮೩ ವರ್ಷದ ಬೌದ್ಧ ಭಿಕ್ಷುವು ಇತ್ತರು. ಹೊಸ ಮತಾವಲಂಬನೆಯ ಕುರುಹಾಗಿ ಅವರುಗಳು ಮೂರಾವರ್ತಿ ಬೌದ್ಧ ದೀಕ್ಷೆಯ ಶರಣ ಮಂತ್ರವನ್ನು ಹೇಳಿದರು. ನಂತರ ಅಂಬೇಡ್ಕರರೂ, ಅವರ ಪತ್ನಿಯವರೂ ಇತರರಿಗೆ ಸಾಮೂಹಿಕವಾಗಿ ದೀಕ್ಷೆಯನ್ನು ಇತ್ತರು.

ಸೂಯೆಜ್ ಬಗ್ಗೆ ರಷ್ಯದಿಂದ ವೀಟೋ

ಸೂಯೆಜ್ ಕಾಲುವೆ ಮೇಲೆ ಅಂತರ ರಾಷ್ಟ್ರೀಯ ಹತೋಟಿ ಬಗ್ಗೆ ೧೮ ರಾಷ್ಟ್ರಗಳ ಯೋಜನೆಯನ್ನು ಕಾರ್ಯಗತ ಮಾಡುವುದಕ್ಕಾಗಿ ಬ್ರಿಟನ್ ಮತ್ತು ಅಮೆರಿಕಗಳು ಭದ್ರತಾ ಸಮಿತಿಯಲ್ಲಿ ಸೂಚಿಸಿದ್ದ ನಿರ್ಣಯದ ಮೇಲೆ ರಷ್ಯವು ವೀಟೋವನ್ನು ಚಲಾಯಿಸಿದೆ. ರಷ್ಯವು ಈ ಅಧಿಕಾರವನ್ನು ಉಪಯೋಗಿಸಿರುವುದು ಇದು ೭೮ನೇ ಬಾರಿ. ಆದರೂ ಸಂಧಾನಕ್ಕೆ ಅವಕಾಶವು ಇರುತ್ತದೆ.

ಬೆಂಗಳೂರಿನಲ್ಲಿ ಭಾರತದ ಪಿ. ಎಸ್. ಪಿ. ಸಮ್ಮೇಳನ

ಭಾರತದ ಪ್ರಜಾ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮ್ಮೇಳನವು ಬೆಂಗಳೂರಿನಲ್ಲಿ ಬರುವ ತಿಂಗಳು ೨೫ ರಿಂದ ೨೮ ರವರೆಗೆ ಸೇರುವುದು. ಗಂಗಾಶರಣ ಸಿನ್ಹಾರವರು ಅಧ್ಯಕ್ಷತೆ ವಹಿಸುವರು. ಯೂರೋಪು ಮತ್ತು ಏಷ್ಯಾ ಸಮಾಜವಾದಿ ಮುಖಂಡರು ಈ ಸಮ್ಮೇಳನದಲ್ಲಿ ಭಾಗವಹಿಸುವರು. ಮುಂದಿನ ಮಹಾ ಚುನಾವಣೆಗಳ ಬಗ್ಗೆ ಸಮ್ಮೇಳನವು ಅಂತಿಮ ನಿರ್ಧಾರವನ್ನು ತೆಗೆದುಕೊಳ್ಳಲಿದೆ.

ನಾನ್‌ಗೆಜೆಟೆಡ್ ನೌಕರರಿಗೆ ಶೇಕಡ ೧೦ರಂತೆ ಹೆಚ್ಚು ಭತ್ಯ

ಕಳೆದ ಆಗಸ್ಟಿನಿಂದ ಕೊಡುವ ಬಗ್ಗೆ ಮುಖ್ಯ ಮಂತ್ರಿಯವರ ಘೋಷಣೆ

ಬೆಂಗಳೂರು ೧೪

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ವಿಜಯದಶಮಿ ದಿನ ನಾನ್‌ಗೆಜೆಟೆಡ್ ನೌಕರರುಗಳಿಗೆ ತಾತ್ಕಾಲಿಕ ಪರಿಹಾರ ಕೊಡುವುದಾಗಿ ಘೋಷಿಸಿದರು. ೩೦೦ ರೂ. ಗಿಂತ ಕಡಿಮೆ ಸಂಬಳ ಪಡೆಯುವವರಿಗೆ ಈ ಪರಿಹಾರ ದೊರೆಯುವುದು.

ಈ ವಿಚಾರವನ್ನು ಪತ್ರಿಕಾ ಸಮ್ಮೇಳನದಲ್ಲಿ ಅವರು ತಿಳಿಸಿ, ಶೇಕಡ ೧೦ ರಂತೆ ಕನಿಷ್ಠ ಪಕ್ಷ ೫ ರೂ. ನಿಂದ ೨೦ ರೂ. ವರೆಗೆ ಭತ್ಯವನ್ನೀಯಲಾಗುವುದೆಂದು ಹೇಳಿದರು. ಇದಕ್ಕಾಗಿ ತಿಂಗಳಿಗೆ ೩|| ಲಕ್ಷ ರೂ. ವೆಚ್ಚವಾಗುವುದು. ಭತ್ಯವು ಸಂಬಳದಲ್ಲಿ ಸೇರಲು ಅವಕಾಶವಿದೆ. ಕಳೆದ ಆಗಸ್ಟಿನಿಂದ ತಾತ್ಕಾಲಿಕ ಪರಿಹಾರವು ದೊರೆಯಲಿದೆ. ಈ ಸೌಕರ್ಯವು ಶೇಕಡ ೯೯ ರಷ್ಟಾಗುವ ೧ ಲಕ್ಷ ಮಂದಿ ನೌಕರರಿಗೆ ದೊರೆಯುವುದು.

ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರಿಗೆ ಇತರ ಎಲ್ಲಾ ಕಡೆಗಳಿಗಿಂತಲೂ ಅತ್ಯಂತ ಕಡಿಮೆ ಸಂಬಳ ಬರುತ್ತಿರುವುದೆಂದೂ, ಹೊಸ ಸಂಸ್ಥಾನ ರಚನೆಯಾದ ಮೇಲೆ ಒಂದೇ ಮಟ್ಟದ ಸಂಬಳದ ವಿಚಾರವನ್ನು ಪರಿಶೀಲಿಸಲು ಸ್ವಲ್ಪ ಕಾಲ ಹಿಡಿಯುವುದೆಂದೂ ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದರು. ಜವಾನರುಗಳಿಗೆ ಶೇಕಡ ೨೫ ರಿಂದ ೩೫ರ ವರೆಗೆ ಸಂಬಳವನ್ನು ಹೆಚ್ಚಿಸಲಾಗುವುದು.

○ ಇಲ್ಲಿನ ಸರ್ಕಾರಿ ಕಛೇರಿಯನ್ನು ಹಳೆಯ ಸ್ಥಳದಿಂದ ವಿಧಾನ ಸೌಧಕ್ಕೆ ವರ್ಗಾಯಿಸುವ ಸಂಬಂಧವಾಗಿ ನೆನ್ನೆ ಸೌಧದಲ್ಲಿ ಹೋಮಾದಿಗಳನ್ನು ನೆರವೇರಿಸಲಾಯಿತು. ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅದನ್ನು ನಡೆಸಿದರು. ಭವನವು ಕಟ್ಟಿ ಮುಗಿದಂತೆಲ್ಲ ಅದಕ್ಕೆ ಸರ್ಕಾರಿ ಇಲಾಖೆಗಳನ್ನು ವರ್ಗಾಯಿಸಲಾಗುವುದು. ನೆನ್ನೆ ಮುಖ್ಯ ಮಂತ್ರಿಯವರು ತಮ್ಮ ಕಛೇರಿಯನ್ನು ಅಲ್ಲಿ ಆರಂಭಿಸಿದರು.

ವಸ್ತು ಪ್ರದರ್ಶನದಲ್ಲಿ: ನಾಳೆ ಕಾರ್ಯಕ್ರಮ

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಿಗ್ಗೆ ಶ್ರೀಮತಿ ಲೀಲಾವತಿ ಮತ್ತು ಶ್ರೀ ಸಿಂಗರಾಚಾರ್ಯರಿಂದ ದೇವರ ನಾಮಗಳೂ, ಸಂಜೆ ಶ್ರೀ ಮಾಯಣ್ಣನವರಿಂದ ಭಾರತ ವಾಚನ, ಹಂಜನಗೂಡು ವಿದ್ಯಾಪೀಠದವರಿಂದ ಯಕ್ಷಗಾನ ಮತ್ತು ಕುಮಾರಿ ಪೊಳ್ಳಾಚಿ ಕಮಲರವರಿಂದ ನರ್ತನವೂ ಏರ್ಪಾಡಾಗಿವೆ.

ದೇವಮಲ್ಲ ಜಟ್ಟಿಮುಕ ಸಂಘದವರ ಸಭೆ

ಸಂಸ್ಥಾನದ ದೇವಮಲ್ಲ ಜಟ್ಟಿಮುಕ ಸಂಘದ ಸಕಲ ಸದಸ್ಯರ ಸಭೆಯು ನೆನ್ನೆ ಶ್ರೀ ಎಂ. ಆರ್. ಜೆಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು. ಶಾಸನಸಭಾ ಸದಸ್ಯರಾದ ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಆರಂಭೋತ್ಸವವನ್ನು ನೆರವೇರಿಸಿ, ಜೆಟ್ಟಿಗಳ ಬಗ್ಗೆ ಸರ್ಕಾರದವರು ಹೆಚ್ಚಿನ ಸಹಾನುಭೂತಿ ತೋರಿಸಬೇಕೆಂದು ತಿಳಿಸಿದರು.

ವಕೀಲರ ಸಂಘಕ್ಕೆ ಶ್ರೇಷ್ಠ ನ್ಯಾಯಾಧೀಶರ ಭೇಟಿ

ಮೈಸೂರು

ಭಾರತದ ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಎಸ್ ಆರ್ ದಾಸರವರು ಮೊನ್ನೆ ಮೈಸೂರು ವಕೀಲರ ಸಂಘಕ್ಕೆ [illegible] ಯಿತ್ತಿದ್ದರು ಉಪಾಹಾರಾನಂತರ [illegible] ಧ್ಯಕ್ಷರಾದ ಶ್ರೀ ಹೆಚ್. ಸುಬ್ಬರಾಯರು ಅವರಿಗೆ ಸ್ವಾಗತವನ್ನು ಬಯಸಿದರು ಶ್ರೀ ದಾಸ್‌ರವರು ಭಾಷಣ ಮಾಡಿ ತರುಣ ವಕೀಲರಿಗೆ ಹಲವು ಹಿತೋಕ್ತಿಗಳನ್ನು ನೀಡಿದರು "ಕೋರ್ಟಿಗೆ ಒದಗುವುದಕ್ಕೆ ಮುಂಚೆ ಮೊಕದ್ದಮೆಯ ವಿವರಗಳನ್ನು ಚೆನ್ನಾಗಿ ಪರಿಶೀಲಿಸಬೇಕು ಕಕ್ಷಿಗಾರರ ಹಿತವನ್ನು ಪ್ರಾಮಾಣಿಕತೆಯಿಂದ ರಕ್ಷಿಸಬೇಕು ನ್ಯಾಯಾಲಯ ಮತ್ತು ವೃತ್ತಿಯ ಗೌರವ ಮತ್ತು ಘನತೆಗಳನ್ನು ಸದಾ ಎತ್ತಿಹಿಡಿಯಬೇಕು ಎಂಬುದಾಗಿ ಅವರು ತಿಳಿಸಿದರು ವಕೀಲರುಗಳು ತಮ್ಮ ಕೆಲಸದಲ್ಲಿ ಯಶಸ್ವಿಯಾಗಲು ಅವರಿಗೆ ಇಂಗಿತಜ್ಞತೆಯು ಅತ್ಯಗತ್ಯವೆಂದು ಅವರು ಸೂಚಿಸಿದರು ಕಾರ್ಯದರ್ಶಿಗಳಿಂದ ವಂದನಾರ್ಪಣೆಯಾದ ನಂತರ ಸಮಾರಂಭವು ಮುಕ್ತಾಯವಾಯಿತು.

ವಸ್ತು ಪ್ರದರ್ಶನದಲ್ಲಿ ಭಾರತ ಟೀ ಬೋರ್ಡಿನ ಶಾಪ್

ನಗರದ ವಸ್ತು ಪ್ರದರ್ಶನದಲ್ಲಿ ಭಾರತ ಟೀ ಬೋರ್ಡಿನವರು ಒಂದು ಶಾಪನ್ನು ತೆರೆದಿದ್ದಾರೆ ಅದರಲ್ಲಿ ಭಾರತದ ಚಹಾ ಉತ್ಪತ್ತಿ ಮಾರಾಟ ದೇಶಕ್ಕೆ ಅದರಿಂದ ಬರುತ್ತಿರುವ ವರಮಾನ ಮುಂತಾದುವನ್ನು [illegible] ಮಾಡಿವೆ ಅಲ್ಲದೆ ನಗರದ ನಾನಾ ಭಾಗಗಳಲ್ಲಿ ಟೀ ಬೋರ್ಡಿನವರು ತಮ್ಮ [illegible] ವ್ಯಾನಿನಲ್ಲಿ ಜನರಿಗೆ [illegible] ಚಹವನ್ನು ಹಂಚುತ್ತಿರುವರು

ಸಂಗೀತ ಕಚೇರಿ

ದ್ವಾದಶಿ ಪ್ರಯುಕ್ತ ನಿನ್ನೆ ಸಂಜೆ ೬ ಗಂಟೆಗೆ ಜಯನಗರದ ಶ್ರೀ [illegible] ದೇವಾಲಯದಲ್ಲಿ ವಿ॥ ಪಿ ಎಸ್ ಶ್ರೀನಿವಾಸ ಅಯ್ಯಂಗಾರ್‌ರವರ ಸಂಗೀತವು ಪಿ ಎ ಕೃಷ್ಣಮೂರ್ತಿಯವರ ಪಿಟೀಲು ಮತ್ತು ವಿ॥ ಹೆಚ್ ಪಿ ಸಣ್ಣಣ್ಣನವರ ಮೃದಂಗದೊಡನೆ ನಡೆಸಲಾಗಿದೆ

ಕರಾಚಿ ಪಾರ್ಕಿಗೆ ಶಿವಾಜಿ ಬದಲು ಔರಂಗಜೇಬ್ ಹೆಸರು

ಕರಾಚಿಯಲ್ಲಿರುವ ಶಿವಾಜಿ ಪಾರ್ಕಿನ ಹೆಸರನ್ನು ಅಲ್ಲಿನ ಚೀಫ್ ಕಮಿಷನರರು ಬದಲಾಯಿಸಿ ಔರಂಗಜೇಬ್ ಪಾರ್ಕ್ ಎಂದು ಹೆಸರಿಟ್ಟಿದ್ದಾರೆ ಇದಕ್ಕೆ ಹಿಂದೆ ರಾಮಬಾಗ್ ಎಂಬುದನ್ನು ತೆಗೆದು ಆರಾಂ ಬಾಗ್ ಎಂದು ಬದಲಾಯಿಸಲಾಗಿತ್ತು ಗಾಂಧಿ, ಮೋತಿಲಾಲ್ ನೆಹರು, ಸಿ ಆರ್. ದಾಸ್ ಮುಂತಾದವರ ಹೆಸರುಗಳನ್ನೂ ತೆಗೆಯಲಾಗುವುದು

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳು
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣಯ್ಯಂಗಾರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (ಸ್ಥಾ॥ 1911).

ಕಲ್ಕತ್ತದಲ್ಲಿ ಕನ್ನಡಕದ ಗಾಜುಗಳ ಕಾರ್ಖಾನೆ

[illegible] ಕೆಲಸಕ್ಕೆ ಬೇಕಾಗುವ ಅತಿ ಮುಖ್ಯ ಕನ್ನಡಕದ ಗಾಜುಗಳನ್ನೂ, ಸಾಮಾನ್ಯ ಜನರು ಬಳಸುವ ಕನ್ನಡಕಗಳ ಗಾಜುಗಳನ್ನೂ ತಯಾರಿಸುವ ಕಾರ್ಖಾನೆಯೊಂದನ್ನು ಶೀಘ್ರದಲ್ಲೇ ಕಲ್ಕತ್ತದಲ್ಲಿ ಸ್ಥಾಪಿಸಲಾಗುವುದು ಅಲ್ಲಿ ವರ್ಷಕ್ಕೆ ೩೦ ಟನ್ ವಿಶಿಷ್ಟ ಕೆಲಸದ ಗಾಜುಗಳನ್ನೂ ೨೦೦ ಟನ್ ಇತರ ಗಾಜುಗಳನ್ನೂ ತಯಾರಿಸಲಾಗುವುದು

ವ್ಯಾಕರಣದ ಪುಸ್ತಕದ ಬಗ್ಗೆ ವಿದ್ಯಾ ಸಚಿವರಿಗೆ ಮನವಿ

ರಾಜಧಾನಿಯ ಹಲವು ವಿದ್ಯಾಭಿಮಾನಿಗಳು ವಿದ್ಯಾ ಸಚಿವರಿಗೆ ಮನವಿಯೊಂದನ್ನು ಸಲ್ಲಿಸಿ ಈ ರೀತಿ ತಿಳಿಸಿರುತ್ತಾರೆ —

ಮಾಧ್ಯಮಿಕ ಶಾಲೆಗಳಿಗೆ ಮಾಧ್ಯಮ ವ್ಯಾಕರಣವು ಪಠ್ಯ ಪುಸ್ತಕವಾಗಿರುವುದು ಸರಿಯಷ್ಟೆ ವ್ಯಾಕರಣ ಪಾಠ ಮಕ್ಕಳ ಮನಸ್ಸನ್ನಾಕರ್ಷಿಸುವಂತೆ ಸುಲಭವಾಗಿರಬೇಕು ಅನೇಕ ವರ್ಷಗಳಿಂದಲೂ ಪಠ್ಯ ಪುಸ್ತಕವಾಗಿರುವ ಈ ಪುಸ್ತಕವು ಮಾಧ್ಯಮ ಶಾಲಾ ಮಕ್ಕಳ ದರ್ಜೆಗೆ ಮೀರಿದ್ದಾಗಿದೆ. ಒಂದು ವರ್ಷದಿಂದಲೂ ಸದರಿ ಪುಸ್ತಕವು ವಿದ್ಯಾರ್ಥಿಗಳಿಗೆ ದೊರೆಯುತ್ತಿಲ್ಲ ಸರ್ಕಾರಿ [illegible] ಡಿಪೋವಿನಲ್ಲಿ ಸ್ಟಾಕಿಲ್ಲ ಈ ವ್ಯಾಕರಣವನ್ನು ಪುನರ್ಮುದ್ರಣ ಮಾಡಿಸದೆ ಸುಲಭವಾದ ಬೇರೊಂದು ಪುಸ್ತಕವನ್ನು ಮುಂದಿನ ವರ್ಷವಾದರೂ ಒದಗಿಸಬೇಕೆಂದು ಪ್ರಾರ್ಥಿಸುತ್ತೇವೆ

ಪ್ರಜಾ ಸಮಾಜವಾದಿ ಕಾರ್ಯಕರ್ತರ ಸಭೆ

ನಾಳೆ ಸಂಜೆ ೬ ಘಂಟೆಗೆ ಶಿವರಾಂಪೇಟೆ ಅಗ್ರಿಕಲ್ಚರಲ್ ಬಜಾರ್ ಮಹಡಿಯ ಮೇಲೆ ನಗರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಭೆಯು ನಡೆಯುವುದು ಕರ್ನಾಟಕ ಪಿ ಎಸ್ ಪಿ ನಾಯಕ ಶ್ರೀ ಕಣಗುಪ್ಪೆಯವರು ಭಾಷಣ ಮಾಡುವರು

ಬೆಟ್ಟದ ಜಾತ್ರೆಯಲ್ಲಿ ಮಕ್ಕಳಿಗೆ ಹಾಲು ಹಂಚಿಕೆಗೆ ಸಹಾಯಕ್ಕಾಗಿ ಮನವಿ

ಚಾಮುಂಡೇಶ್ವರಿ ಅಮ್ಮನವರ ಜಾತ್ರೆ ದಿನ ೨೦ನೇ ತಾರೀಕು ಬೆಟ್ಟದ ಮೇಲೆ ಮಕ್ಕಳಿಗೆ ಹಾಲು ಮತ್ತು ಕಲ್ಲುಸಕ್ಕರೆಯನ್ನು ಹಂಚಲೂ, ತೆಪ್ಪೋತ್ಸವದ ದಿನ ೨೧ನೇ ತಾರೀಕು ರಾತ್ರಿ ಭಕ್ತಾದಿಗಳಿಗೆ ಭೋಜನಾದಿಗಳನ್ನು ಮಾಡಿಸಲೂ, ಮಹಾಜನರು ಉದಾರವಾಗಿ ಸಹಾಯ ಮಾಡುವಂತೆ ಬಾವಾಜಿಯವರ ಆಂಜನೇಯ ದೇವಸ್ಥಾನದ ತಿರುಮಕೂಡಲು ಶ್ರೀ ಶ್ರೀನಿವಾಸಶಾಸ್ತ್ರಿಯವರು ಪ್ರಾರ್ಥಿಸಿದ್ದಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭–೫ ಗೋಟುವಾದ್ಯ. ೭ ಗಂ ರತ್ನಮ್ಮ ಕೃಷ್ಣಮೂರ್ತಿ.ದೇವರ ನಾಮ ೭–೩೦ ಗಾನ ವಿಹಾರ ೮ ಗಂ ರೆಕಾರ್ಡು ಮಧ್ಯಾಹ್ನ ೧೨ ಎಂ ಪಿ ವೆಂಕಟಪ್ಪ ಪಿಟೀಲು ೧೨.೩೦ ರೆಕಾರ್ಡು ೧.೩೦ ಗೋಟುವಾದ್ಯ ೨ ಗಂ ರೆಕಾರ್ಡು ಸಂಜೆ ೫.೩೦ ಮತ್ತು ೬–೧೫ ಪಿ ವೆಂಕಟಸುಬ್ಬರಾವ್ ವೀಣೆ ೭.೩೦ ಜಿ ಭಾರತೀ–ಶಾಸ್ತ್ರ ವಾಚನ ೭–೩೦ ಕನ್ನಡದಲ್ಲಿ ಭಾಷಣ. ೮ ಹೊಸಗನ್ನಡ ಪಿತಾಮಹರು ಪ್ರಸಂಗ ೮–೩೦ ರಿಂದ ೧೧ ಚಿಕ್ಕಪ್ಪನ ಉಯಿಲು-ನಾಟಕ.

ಹಾಸಿಗೆ-ದಿಂಬು
ಮಿತಬೆಲೆಯಲ್ಲಿ ಹತ್ತಿ ದಿಂಬು ತಯಾರು ಮಾಡುತ್ತೇವೆ
ಬಾಹುಸಾರ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

ಸಿನಿಮಾ ನಟಿ ಮೇಲೆ ಮೊಕದ್ದಮೆ ಮುಂದುವರಿಸುವಂತೆ ಆಜ್ಞೆ

ಹಿಂದಿ ಸಿನಿಮಾ ನಟಿ ನರ್ಗೀಸಳ ಮೇಲೆ ಬೊಂಬಾಯಿ ಕೋರ್ಟಿನಲ್ಲಿ ಹೂಡಲಾಗಿದ್ದು ಪ್ರಾಸಿಕ್ಯೂಷನ್ನಿನವರು ವಾಪಸು ಪಡೆದ ಮೊಕದ್ದಮೆಯನ್ನು ಪುನಃ ನಡೆಸುವಂತೆ ಅಲ್ಲಿನ ಹೈಕೋರ್ಟಿನವರು ನಿರ್ದೇಶಿಸಿರುತ್ತಾರೆ. ತಮ್ಮ ನ್ಯಾಯನಿರ್ವಹಣೆಯ ಅಧಿಕಾರ ವ್ಯಾಪ್ತಿಯನ್ನು ಹೈಕೋರ್ಟಿನವರು ಚಲಾಯಿಸಿ, ಈ ಬಗ್ಗೆ ಆಜ್ಞೆ ಮಾಡಿದ್ದಾರೆ ಪೋಲೀಸು ಅಧಿಕಾರಿಯೊಬ್ಬನನ್ನು ಆಕೆಯು ಬೈದುದಕ್ಕಾಗಿ ಮೊಕದ್ದಮೆ ಹೂಡಲಾಗಿತ್ತು

ದೆಹಲಿಗೆ ಯಮುನಾ ಪ್ರವಾಹ

ಯಮುನಾ ನದಿಯ ಪ್ರವಾಹದ ನೀರು ನೆನ್ನೆ ದೆಹಲಿ ಕೆಂಪು ಕೋಟೆಯ ಹೊರ ಪ್ರಾಕಾರಕ್ಕೆ ಬಂದು ಬಡಿಯಿತು. ನೀರು ಬೆಲ್ಲಾ ರಸ್ತೆಯೊಳಗೆ ನುಗ್ಗದಂತೆ ಮಾಡಲು ಮರಳು ಮೂಟೆಗಳನ್ನು ಅಡ್ಡಲಾಗಿ ಹಾಕಲಾಗುತ್ತಿದೆ ನದಿಯ ಮಟ್ಟವು ೬೭೩–೬ ಅಡಿಯಿದ್ದು ಅಪಾಯಕರ ಮಟ್ಟಕ್ಕೆ ೧॥ ಅಡಿ ಹೆಚ್ಚಾಗಿದೆ ಯಮುನಾ ಬಜಾರ್ ಎಂಬ ಕೆಳಗಿನ ಪ್ರದೇಶದ ೬,೦೦೦ ನಿವಾಸಿಗಳನ್ನು ಬೇರೆ ಕಡೆಗೆ ಸಾಗಿಸಲಾಗಿದೆ

ಹೆಣ್ಣು ಮಗು ತಪ್ಪಿಸಿಕೊಂಡಿದೆ

ವಸಂತ ಎಂಬ 7 ವರ್ಷದ ಹೆಣ್ಣು ಮಗು ನೆನ್ನೆ ದಸರಾ ವಸ್ತು ಪ್ರದರ್ಶನದಿಂದ ನೋಡಿ ರಸ್ತೆ ಕಡೆ ಬರುವಾಗ ತಪ್ಪಿಸಿಕೊಂಡಿದೆ [illegible] ಬಣ್ಣದ ರೇಷ್ಮೆ ಲಂಗ ಮತ್ತು ಜಂಪರ್ ಹಾಕಿಕೊಂಡಿದೆ ಕಂಡವರು ಕೆಳಗಿನ ವಿಳಾಸಕ್ಕೆ ತಲುಪಿಸಿದರೆ ಸೂಕ್ತ ಬಹುಮಾನ ಕೊಡಲಾಗುವುದು

ಗೋವಿಂದರಾಜ ಶೆಟ್ಟಿ
C/o ಶಾರದಾ ಸೈಕಲ್ ಮತ್ತು ವಾಚ್ ಕಂಪೆನಿ,
ಕ್ಲಾಕ್ ಟವರ್ ಸ್ಕ್ವೇರ್,

ಕನ್ನಾನೂರು ಬನೀನುಗಳು
ಮದರಾಸು, ಮಧುರಾ, ಮೈಸೂರು, ಕುಂಭಕೋಣಂ, ತಲಚೇರಿ ಮೊದಲಾದ ವಸ್ತು ಪ್ರದರ್ಶನಗಳಲ್ಲಿ ಉತ್ತಮ ಬಹುಮಾನಗಳನ್ನು ಪಡೆದು ಜನ ಮೆಚ್ಚಿಗೆ ಹೊಂದಿರುವ 'ಕನ್ನಾನೂರು ಬೆಸೋಲಿ ಹೊಸೈರಿ ಫ್ಯಾಕ್ಟರಿ ಬನೀನುಗಳು' ದಸರಾ ವಸ್ತು ಪ್ರದರ್ಶನದ 'ಸಿ' ಬ್ಲಾಕ್ 34ರಲ್ಲಿ ದೊರೆಯುತ್ತವೆ
ವಿಳಾಸ–
ದಿ ಬೆಸೋಲಿ ಹೊಸೈರಿ ಫ್ಯಾಕ್ಟರಿ,
ಕನ್ನಾನೂರು

ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಂಪಿಯಾ
ಚಿತ್ರಮಂದಿರಗಳ ನಡುವೆ
ಮೆಟ್ಟೂರ್ ಮಿಲ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ, ದೇಚಿ, ಅರವಿಂದ್, ಕಟಾವ್ ಇನ್ನೂ ಅನೇಕ ಮಿಲ್‌ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ ಉತ್ತಮ ತರಹೆಯ ಪ್ರಿಂಟೆಡ್ ವಾಯಿಲ್ ಮತ್ತು ಚೀಟಿಗಳು.
ಒಮ್ಮೆ ದಯಮಾಡಿ ಭೇಟಿ ಕೊಡಿ
ಇ. ಪಿ. ನಂಜಪ್ಪ

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ—ಕಲ್ಪ
ಔಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 590
– ಭೇಟಿಯ ಕಾಲ –
ಬೆಳಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7 30
ಮೇಲಿನ ಕಾರ್ಯಕ್ರಮವನ್ನು ಗಮನಿಸಿ
ಮತ್ತು ಅವರ ಪರೀಕ್ಷೆ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪುಷ್ಯರಾಗ ಮತ್ತು ವೈಡೂರ್ಯ ಈ 9 ಅಮೂಲ್ಯ ಹರಳುಗಳ ಸಂಯೋಗ ನಿಮ್ಮ ಎಲ್ಲಾ ಸಾಮಾನ್ಯ ಹಾಗೂ ದೀರ್ಘಕಾಲದ ಖಾಯಿಲೆಗಳಿಗೂ ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ.
NAVRATNA KALPA PHARMACY,
JULLUNDUR CITY (India)

Edited, Printed and Published by
A. R. Nagarajan at Sadhvi Pres
D Subbia Road, Mysore

City Improvement Trust Board,

MYSORE, 19—10—56

NOTIFICATION

Quotations are called for from the public for the purchase of an Electric Motor of the *marginally noted* description available in this office so as to reach the undersigned on or before 20-10-1956 (11 A M

Electric Motor of
Crompton Parkinson
make, 1 H.P 25 cycles

The motor may be examined in the office of the undersigned during working hours on any day For further details, please refer to the Notice Board of the Office

(Sd) S LINGA
Chairman

ಸುಸ್ವಾಗತ ! ಸುಸ್ವಾಗತ !!
ಸ್ವಚ್ಛತೆ, ಶಾಶ್ವತ ಬಳಕೆ ಮತ್ತು ಸುಲಭ ದರದ
ಅತ್ಯಾಧುನಿಕ ಸ್ಟೇನ್‌ಲೆಸ್ ಸ್ಟೀಲ್
ಗೃಹಕೃತ್ಯದ ಪಾತ್ರೆಗಳಿಗೆ
ದಸರಾ ವಸ್ತು ಪ್ರದರ್ಶನದ "ಡಿ" ಬ್ಲಾಕ್ 22
ಶೋಭಾ ಸ್ಟೇನ್‌ಲೆಸ್ ಸ್ಟೀಲ್ ಸ್ಟೋರ್ಸಿಗೆ
ಇಂದೇ ಒಮ್ಮೆ ಭೇಟಿ ಕೊಡಿರಿ

NEW BOMBAY SWEET MART
SRIRAMPET, MYSORE
ಇಂಡಿಯಾದಲ್ಲಿ ಪ್ರಖ್ಯಾತಿ ಹೊಂದಿರುವ ದೆಹಲಿಯವರ ನೇತೃತ್ವದಲ್ಲಿ ಶುಚಿರುಚಿಯಾದ ತುಪ್ಪದಿಂದ ತಯಾರಿಸಲ್ಪಡುವ ಸಿಹಿ ಮತ್ತು ಖಾರ ತಿಂಡಿಗಳನ್ನು ಸೇವಿಸಬೇಕಾದರೆ, ಶ್ರೀರಾಂಪೇಟೆಯಲ್ಲಿ ಪ್ರಾರಂಭವಾಗಿರುವ ನ್ಯೂ ಬಾಂಬೆ ಸ್ವೀಟ್ ಮಾರ್ಟ್‌ಗೆ ದಯವಿಟ್ಟು ಬನ್ನಿ, ಸೇವಿಸಿ, ಆನಂದಪಡಿ.
ನ್ಯೂ ಬಾಂಬೆ ಸ್ವೀಟ್ ಮಾರ್ಟ್
ಶ್ರೀರಾಂಪೇಟೆ, ಮೈಸೂರು

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಅತ್ಯುತ್ತಮ ರೀತಿ ನೂತನ
ಸುಪ್ರಸಿದ್ಧ
ಚಂದೇರಿ
ಸೀರೆಗಳೂ
ಪೇಟರ್ನುಗಳಿಂದ ತಯಾರಾದ
ಬಹು ಸುಂದರವಾದ
ಗೊಂಬೆಗಳೂ
'ಬಿ' ಬ್ಲಾಕ್
23, 24, 25ನೆಯ ಮಳಿಗೆ
ಅಖಿಲ ಭಾರತ ಸರ್ಕಾರದ
ಅಂಗಡಿಗೆ ತಪ್ಪದೆ ಭೇಟಿ ಕೊಡಿ

೩ : ೮೫] SADHVI : TUESDAY 16—10—1956 ಮೈಸೂರು : ಮಂಗಳವಾರ ೧೬—೧೦—೧೯೫೬ [ಸಂಚಿಕೆ : ೭೧

ಹೊಸ ಮೈಸೂರು ಗವರ್ನರಾಗಿ ರಾಜಪ್ರಮುಖರ ನೇಮಕ

ದಾಳ್ ಮಂಜಪ್ಪ ಮತ್ತು . ಚನ್ನಯ್ಯನವರಿಗೆ ಸನ್ಮಾನ

ನಗರ ನಿವಾಸಿಗಳ ಪರವಾಗಿ ಮಾನಪತ್ರಗಳ ಸಮರ್ಪಣೆ

ಮೈಸೂರು ೧೬

ಸೂರಿನ ನಾಗರಿಕರ ಪರವಾಗಿ ನೆನ್ನೆ ಕ್ರಾಫರ್ಡ್ ಭವನದಲ್ಲಿ ಮುಖ್ಯ ಮಂತ್ರಿ ಡಿ ದಾಳ್ ಮಂಜಪ್ಪ ಮತ್ತು ಪ್ರದೇಶ ಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರಿ ನಪತ್ರ ಸಮರ್ಪಣೆ ಸಮಾರಂಭವೊಂದ ರ್ಪಡಿಸಲಾಗಿತ್ತು

ಪಾಠಕರ ಮತ್ತು ಶ್ರೀಮತಿ ಗೌರಿ ಕುಪ್ಪು ಯವರ ಸಂಗೀತವಾದನಂತರ ಶ್ರೀ ವೈ ಂತಯರವರ ಶಿಷ್ಯೆಯರಿಂದ ನರ್ತನವು ನಡೆ . ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥ ವನ್ನೇಲೆ, ಅರುಣವರ್ಣಂ ಭಾರತಿಯತ ಗಿಕ ಪದ್ಯಮಾಲಿಕೆಯನ್ನು ಸುಶ್ರಾವ್ಯವಾ ದರು

ನಗರ ಸಮಿತಿ ಸದಸ್ಯರ ಪರವಾಗಿ ಅಧ್ಯಕ್ಷ ಂ ಬಿ ಬಸವಯ್ಯನವರು ಮುಖ್ಯ ಅತಿಥಿ ಸ್ವಾಗತಿಸಿ ಭಾಷಣ ಮಾಡಿ, ಮೈಸೂರು ಮುಂದಿನ ವ್ಯವಸ್ಥೆಯಲ್ಲೂ ತನ್ನ ಪ್ರಾ ತೆಯನ್ನು ಉಳಿಸಿಕೊಂಡುಬರಲು ಸಹಾ ಮಾಡುವಂತೆ ಕೋರಿದರು

ತರ ಶಾಸನಸಭಾ ಸದಸ್ಯ ಶ್ರೀ ಕೆ ಪುಟ್ಟ ಯವರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಪ್ಪನವರಿಗೂ, ಶ್ರೀ ಎಸ್. ನಾರಾಯಣ್ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಯ್ಯನವರಿಗೂ ಬಿನ್ನವತ್ತಳೆಗಳನ್ನು ಓದಿ, ಒ ರು ಅದನ್ನು ಗಂಧದ ಕರಂಡಗಳಲ್ಲಿಟ್ಟು ಸಲಾಯಿತು

ಮ್ಮ ಮಂತ್ರಿಯವರು ಉತ್ತರವಿತ್ತು, ಈಗಿ ರಾಷ್ಟ್ರಭಾಷ್ಯ ಯುಗದಲ್ಲಿ ಆಡಳಿತಗಾರರ ಯಗಳನ್ನು ವಿವರಿಸಿದರು

ದಲ್ಲೇ ಮೈಸೂರು ಸಂಸ್ಥಾನದ ಎಲ್ಲೆಯು ಸುವುದರಿಂದ ಹೊರಗಿನವರನ್ನು ಮೈಸೂ ಆದರದಿಂದ ಕಾಣಬೇಕೆಂದು ತಿಳಿಸಿದ ನವೇ ಈಗಿನ ಸಂಸ್ಥಾನದ ಕಡೆಯ ಮು ಂತ್ರಿಯೆಂದು ಹೇಳಿದರು.

ಕರಲ್ಲೊಬ್ಬರು ಮು ೧ ಬಿ ಯೂ ತಾವೇ ಮಂತ್ರಿಗಳಾಗಬೇಕೆಂದು ಹೇಳಲಾಗಿ, ಇಚ್ಛೆ ಇದ್ದು ತಾವು ಆ ಸ್ಥಾನಕ್ಕೆ ಬಂದ ರ ಸೇವೆಯನ್ನು ಮುಂದುವರಿಸುವುದಾಗಿ ತಿಳಿಸಿದರು

ಎಸ್ ಚನ್ನಯ್ಯನವರು ಭಾಷಣ ಮಾ ರ್ನಾಟಕದ ಏಕೀಕರಣಕ್ಕೆ ಮುಂಚೆ ನಡೆ ಳವಳಿಯನ್ನು ಪ್ರಸ್ತಾಪಿಸಿ, ಹೊಸ ಸಂ ಸ್ಥಾನ ಆಡಳಿತವು ಯಶಸ್ವಿಯಾಗಿ ಮುಂ ಯಲು ಮಹಾಜನರು ಬೆಂಬಲ ನೀಡಬೇ ಕೋರಿದರು

ಂಗ್ರೆಸ್ಸಿನ ಚಳುವಳಿಗೆ ವರ್ತಕರು ಮಾಡಿ ಸಹಾಯಕ್ಕಾಗಿ ಅವರಿಗೆ ಕೃತಜ್ಞತೆಯನ್ನು , ಮಹಾಜನರು ಮುಂದೆಯೂ ಅದಂ ಬೆಂಬಲ ನೀಡಬೇಕೆಂದು ಕೋರಿದರು

ನೂತನ ಮೈಸೂರಿನ ಗವರ್ನರರಾಗಿ ಮಹಾರಾಜರ ನೇಮಕ

ರಾಷ್ಟ್ರಾಧ್ಯಕ್ಷರ ಆಹ್ವಾನಕ್ಕೆ ರಾಜಪ್ರಮುಖರ ಒಪ್ಪಿಗೆ

ಮೈಸೂರು ೧೬

ನೂತನ ಮೈಸೂರು ಸಂಸ್ಥಾನದ ಪ್ರಥಮ ಗವರ್ನರರಾಗಬೇಕೆಂದು ರಾಷ್ಟ್ರಾಧ್ಯಕ್ಷರು ಇತ್ತಿರುವ ಆಹ್ವಾನವನ್ನು ರಾಜಪ್ರಮುಖರಾದ ಶ್ರೀ ಜಯಚಾಮರಾಜ ಒಡೆಯರವರು ಅಂಗೀಕರಿಸಿರುವುದಾಗಿ ತಿಳಿದುಬಂದಿದೆ

ಈ ವಿಷಯವನ್ನು ನೆನ್ನೆ ಕ್ರಾಫರ್ಡ್ ಭವನದ ಸಮಾರಂಭದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ತಿಳಿಸಿದರು ಮೈಸೂರಿನ ಮಹಾಜನರಿಗೆ ಈ ವಿಷಯವು ಸಂತೋಷದಾಯಕವಾಗಿರುತ್ತದೆಂದು ಅವರು ಹೇಳಿದರು

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಗ್ಗೆ ಶ್ರೀಮತಿ ಪಿ ಕೆ ಸರೋಜವರಿಂದ ಸಂಗೀತ, ಶ್ರೀ ಎಂ ಎಸ್ ಸೀತಾರಾಮರವರಿಂದ ವೇದಪಠಣ ಸಂಜೆ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರಿಂದ ಭಾರತ ವಾಚನ, ದೇವಲಾಪುರದ ಅನಂತರಾಮಯ್ಯನವರಿಂದ ವೀಣಾವಾದನ ಕಾಣಿಕೆ ಈ ಕಾರ್ಯಕ್ರಮಗಳಿವೆ

ಯಮುನಾ ನದಿಯಲ್ಲಿ ಅತ್ಯಗಾಧ ಪ್ರವಾಹ

ಯಮುನಾ ನದಿಯಲ್ಲಿ ನೆನ್ನೆ ಬೆಳಗ್ಗೆಯಿಂದ ಪ್ರವಾಹವು ವಿಪರೀತವಾಗಿ ಅಪಾಯದ ಮಟ್ಟಕ್ಕಿಂತ ೫-೩ ಅಡಿಯಷ್ಟು ನೀರು ಜಾಸ್ತಿಯಾಗಿದೆ ೩೦ ವರ್ಷಗಳ ಹಿಂದೆ ಬಂದಿದ್ದ ಆಗಾಧವಾದ ಪ್ರವಾಹಕ್ಕಿಂತಲೂ ೩ ಅಂಗುಲ ನೀರು ಜಾಸ್ತಿಯಾಗಿದೆ ದೆಹಲಿ ನಗರದಲ್ಲಿ ರೇಡಿಯೋ ಕಾಲೊನಿ ಪ್ರದೇಶಕ್ಕೆ ನೀರು ನುಗ್ಗಿದೆ ಬ್ರಿಟಿಷ್ ರಾಜರ ಕಿರೀಟಧಾರಣೋತ್ಸವದ ನೆನಪಿನ ಸ್ತಂಭಕ್ಕೆ ನೀರು ಬಂದಿದೆ ರೈಲು ಸೇತುವೆಯೊಂದು ಮುಳುಗಿ, ಸಂಚಾರವು ನಿಂತಿದೆ

ಚೀಣಕ್ಕೆ ಪಾಕಿಸ್ತಾನದ ಪ್ರಧಾನಿಯ ಪ್ರಯಾಣ

ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ನೆನ್ನೆ ಚೀಣಕ್ಕೆ ಪ್ರಯಾಣ ಮಾಡಿದರು ಅವರೊಡನೆ ತೆರಳಬೇಕಾಗಿದ್ದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರು ಹೋಗಲಿಲ್ಲ ನೂನರ ಇಲಾಖೆಯನ್ನು ಪ್ರಧಾನಿಯವರೇ ವಹಿಸಿಕೊಂಡಿದ್ದಾರೆ

ಮಹಾರಾಜರನ್ನು ನೂತನ ಕರ್ನಾಟಕ ಪ್ರಾಂತದ ಗವರ್ನರರನ್ನಾಗಿ ನೇಮಿಸಲಿರುವ ವಿಷಯವನ್ನು ಅವರು ಸಭೆಗೆ ತಿಳಿಸಿ, ತಾವು ಬಹು ದಿನಗಳಿಂದಲೂ ನಡೆಸಿದ ಪ್ರಯತ್ನವು ಸಫಲವಾದ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿದರು

ಶ್ರೀ ಬಿ ನಾರಾಯಣಸ್ವಾಮಿಯವರಿಂದ ವಂದನಾರ್ಪಣೆಯಾಗಿ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ನೂತನ ಸಂಸ್ಥಾನದ ಕಾಂಗ್ರೆಸ್ ನಾಯಕರ ಚುನಾವಣೆ

೨೧ ನೇ ತಾರೀಕು ಭಾನುವಾರ ಬೆಳಗ್ಗೆ ೯ ಗಂಟೆಗೆ

ಸ್ವಂ ಸಂ. ತಂತಿ] ಬೆಂಗಳೂರು ೧೬

ನೂತನ ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆಯನ್ನು ಇದೇ ೨೧ ನೇ ತಾರೀಕು ಭಾನುವಾರ ಬೆಳಗ್ಗೆ ೯ ಗಂಟೆಗೆ ನಡೆಸಲು ನಿರ್ಧರಿಸಲಾಗಿದೆ ಮೊದಲು ಅಂದು ಹನ್ನೊಂದು ಗಂಟೆಗೆ ಎಂದು ನಡೆಯುವಂತೆ ಗೊತ್ತುಪಡಿಸಲಾಗಿತ್ತು

ನೂತನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಚುನಾವಣೆಯು ಮಾರನೇ ದಿನ ಸಂಜೆ ೭ ಗಂಟೆಗೆ ನಡೆಯುವುದು

○ ನೆನ್ನೆ ಇಪ್ಪತ್ತು ಅಂಗುಲ ಮಳೆಯಾಗಿ ೩೫ ಮನೆ ಗುಡಿಸಲುಗಳು ಕುಸಿದು ಬಿದ್ದವು

ರಾಷ್ಟ್ರಾಧ್ಯಕ್ಷರಿಂದ ಕೇರಳ ಪ್ರಾಂತದ ಆರಂಭೋತ್ಸವ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನವೆಂಬರ್ ೧ ರಂದು ತಿರುವನಂತಪುರದಲ್ಲಿ ನೂತನ ಕೇರಳ ಪ್ರಾಂತದ ಆರಂಭೋತ್ಸವವನ್ನು ನೆರವೇರಿಸುವರು ಅವರು ೩೦ನೇ ತಾರೀಕು ಕನ್ಯಾಕುಮಾರಿಯಲ್ಲಿ ಗಾಂಧಿಜಿಯವರ ಸ್ಮಾರಕ ಮಂದಿರ ಆರಂಭೋತ್ಸವವನ್ನೂ ನಡೆಸುವರು

ತಮಿಳು ಅರಸು ಸಂಘದವರ ಚಳುವಳಿ

ಮದ್ರಾಸು-ಆಂಧ್ರಗಳ ನಡುವೆ ಗಡಿ ಗೊತ್ತುಪಡಿಸುವ ಸಂಬಂಧದಲ್ಲಿ ಸಮಿತಿಯೊಂದನ್ನು ರಚಿಸಬೇಕೆಂದು ಒತ್ತಾಯಪಡಿಸಲು ತಮಿಳು ನಾಡಿನ ತಮಿಳು ಅರಸು ಸಂಘದವರು ನೆನ್ನೆಯಿಂದ ಚಳುವಳಿಯನ್ನು ಆರಂಭಿಸಿದರು ಆದಕ್ಕಾಗಿ ಈಗಾಗಲೇ ೭೦ಕ್ಕಿಂತ ಹೆಚ್ಚು ಜನರನ್ನು ಬಂಧಿಸಲಾಗಿದೆ ಅವರುಗಳು ಮದ್ರಾಸು ನಗರದಲ್ಲಿ ಅಂಚೆ ಕಛೇರಿ, ಕಲೆಕ್ಟರುಗಳ ಕಛೇರಿ ಮುಂತಾದ ಸಾರ್ವಜನಿಕ ಕಟ್ಟಡಗಳ ಮುಂದೆ ಪಿಕೆಟಿಂಗ್ ನಡೆಸಿದರು

ಕಾಮತ್‌ರವರ ಖುಲಾಸೆ

ಅಹಮದಾಬಾದಿನಲ್ಲಿ ಕಳೆದ ಆಗಸ್ಟ್ ತಿಂಗಳು ಕರ್ಫ್ಯೂ ಆಜ್ಞೆಯನ್ನು ಉಲ್ಲಂಘಿಸಿದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತರಾದ ಲೋಕಸಭಾ ಸದಸ್ಯ ಹೆಚ್ ವಿ ಕಾಮತ್‌ರವರನ್ನು ಅಲ್ಲಿನ ನ್ಯಾಯಾಧೀಶರು ಖುಲಾಸೆ ಮಾಡಿರುತ್ತಾರೆ ಮಹಾ ಗುಜರಾತಿನ ಚಳುವಳಿ ಸಂಬಂಧವಾಗಿ ಅಲ್ಲಿ ಕರ್ಫ್ಯೂವನ್ನು ವಿಧಿಸಲಾಗಿತ್ತು

ವಸ್ತು ಪ್ರದರ್ಶನಕ್ಕೆ ಇದುವರೆಗೆ ೩|| ಲಕ್ಷ ಜನರ ಭೇಟಿ

ದಸರಾ ವಸ್ತು ಪ್ರದರ್ಶನದಲ್ಲಿ ಕಳೆದ ೫, ೬ ತಾರೀಕಿನಿಂದ ಇಲ್ಲಿಯವರೆಗೆ ಮಾರಾಟವಾಗಿರುವ ಟಿಕೆಟ್ಟುಗಳ ಪ್ರಕಾರ ಸುಮಾರು ೩|| ಲಕ್ಷ ಜನರು ಭೇಟಿ ಕೊಟ್ಟಿದ್ದಾರೆಂದು ಅಂದಾಜಾಗಿದೆ ನೆನ್ನೆ ದಿನ ಟಿಕೆಟ್ ಮಾರಾಟದಿಂದ ೧೧,೯೦೦ ರೂ. ಗಳು ವಸೂಲಾಗಿವೆ ಇದರ ಪ್ರಕಾರ ನೆನ್ನೆ ಸುಮಾರು ೫೦ ಸಾವಿರ ಜನರು ಭೇಟಿ ಕೊಟ್ಟಿರುವರು

ದೂರ ದೇಶದಲ್ಲಿರುವ ನೌಕರರಿಗೆ ರೈಲ್ವೆ ರಿಯಾಯಿತಿ

ತಮ್ಮ ಸ್ವಂತ ಊರು, ಮನೆಗಳಿಂದ ೨೫೦ ಮೈಲಿ ಆಚೆಯಿರುವ ಸರ್ಕಾರಿ ನೌಕರರುಗಳಿಗೆ ರಿಯಾಯಿತಿ ಪ್ರಯಾಣದ ಸೌಕರ್ಯಗಳನ್ನು ಸರ್ಕಾರದವರು ಕಲ್ಪಿಸಿರುತ್ತಾರೆ ಒಂದು ವರ್ಷ ಸೇವೆ ಸಲ್ಲಿಸಿದವರೆಲ್ಲಾ ಈ ಸೌಲಭ್ಯವು ದೊರೆಯುವುದು ಎರಡು ವರ್ಷಗಳಿಗೊಮ್ಮೆ ೧೫ ದಿವಸಗಳಿಗಿಂತಲೂ ಹೆಚ್ಚು ರಜಾ ಪಡೆಯುವವರು ಇದನ್ನು ಉಪಯೋಗಿಸಿಕೊಳ್ಳಬಹುದು ಮೊದಲಿನ ೨೫೦ ಮೈಲಿ ಪ್ರಯಾಣದ ವೆಚ್ಚವನ್ನು ನೌಕರನು ಅಥವಾ ಅವನ ಸಂಸಾರದವರು ವಹಿಸಬೇಕು ಮುಂದಿನ ಪ್ರಯಾಣದ ವೆಚ್ಚದಲ್ಲಿ ಸರ್ಕಾರದವರು ಶೇಕಡ ೯೦ ರಷ್ಟನ್ನು ವಹಿಸಿಕೊಳ್ಳುವರು. ರೈಲು ನೌಕರರಿಗೂ, ಮಿಲಿಟರಿಯವರಿಗೂ ಈ ಸೌಲಭ್ಯವು ಸಿಗುವುದಿಲ್ಲ ಅವರುಗಳಿಗೆ ಪ್ರತ್ಯೇಕ ರಿಯಾಯಿತಿಯು ಇದ್ದೇ ಇದೆ

ಮದ್ರಾಸ್ ಸರ್ಕಾರದ ವಿರುದ್ಧ ರಾಜಕೀಯ ಸಂತ್ರಸ್ತರ ಚಳುವಳಿ

ತಮಿಳುನಾಡು ರಾಜಕೀಯ ಸಂತ್ರಸ್ತರ ಸಮ್ಮೇಳನವು ಮೊನ್ನೆ ತಿರುಪ್ಪರಕುಂದಮ್ಮನಲ್ಲಿ ನಡೆದು ಬರುವ ತಿಂಗಳು ೧೫ರೊಳಗೆ ಸರ್ಕಾರದವರು ರಾಜಕೀಯ ಸಂತ್ರಸ್ತರ ನ್ಯಾಯವಾದ ಬೇಡಿಕೆಗಳನ್ನು ಈಡೇರಿಸದಿದ್ದರೆ ನೇರ ಕಾರ್ಯಾಚರಣೆ ನಡೆಸಬೇಕೆಂದು ತೀರ್ಮಾನಿಸಿತು. ಮುಂದೆ ಬರುವ ಮಹಾ ಚುನಾವಣೆ ಸಮಯದಲ್ಲಿ ಎಲ್ಲಾ ಅಧಿಕೃತ ಕಾಂಗ್ರೆಸ್ ಉಮೇದುವಾರರಿಗೂ ಬೆಂಬಲ ಕೊಡುವುದನ್ನೂ ನಿಶ್ಚಯಿಸಬೇಕೆಂದು ತೀರ್ಮಾನಿಸಲಾಯಿತು

ಸ್ಮಾರಕ ದಿನಾಚರಣೆ

ಧರ್ಮ ಪ್ರಕಾಶ ಡಿ. ಬನುಮಯ್ಯನವರು, ಧರ್ಮ ಪರಾಯಣೆ ಅಲಮ್ಮನವರು ಮತ್ತು ಸಂಜಗೂಡು ದೇವಿ ತಿಮ್ಮಮ್ಮನವರ ಸ್ಮಾರಕ ದಿನವನ್ನು ನಾಳೆ ಬೆಳಗ್ಗೆ ೧೧-೩೦ ಗಂಟೆಗೆ ಇಲವಾಲ ರಸ್ತೆಯಲ್ಲಿರುವ ಕುಂಚಿಟಿಗರ ಸಂಘದಲ್ಲಿ ನೆರವೇರಿಸಲಾಗುವುದು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರು ಅಧ್ಯಕ್ಷತೆ ವಹಿಸುವರು.

ನವೆಂಬರ್ ೧ ರಂದು ರಾಷ್ಟ್ರಾಧ್ಯಕ್ಷರಿಂದ ನೂತನ ಸಂಸ್ಥಾನದ ಆರಂಭ

ರಾಷ್ಟ್ರಾಧ್ಯಕ್ಷರು ಬರುವ ತಿಂಗಳು ೧ ರಂದು ಬೆಂಗಳೂರಿನಲ್ಲಿ ನೂತನ ಮೈಸೂರು ಸಂಸ್ಥಾನದ ಆರಂಭೋತ್ಸವವನ್ನು ನೆರವೇರಿಸಲು ಒಪ್ಪಿರುವರು

ದೇವೋಜಿರಾಯರ ನಿಧನ

ನಂಜನಗೂಡು ೧೬

ಮಂಡ್ಯದಲ್ಲಿ ಅನೇಕ ವರ್ಷ ವಕೀಲರಾಗಿದ್ದ ಶ್ರೀ ದೇವೋಜಿರಾಯರು ಕಳೆದ ಗುರುವಾರ ಇಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೮೦ ವರ್ಷ ವಯಸ್ಸಾಗಿತ್ತು. ಮಂಡ್ಯದ ವಕೀಲರ ಸಂಘದ ಅಧ್ಯಕ್ಷರಾಗಿದ್ದರು. ೧೯೩೩ ರಲ್ಲಿ ಸೇರಿದ್ದ ಸಂಸ್ಥಾನದ ವಕೀಲರುಗಳ ಸಮ್ಮೇಳನಾಧ್ಯಕ್ಷತೆ ವಹಿಸಿದ್ದರು ಮೃತರ ಆತ್ಮಕ್ಕೆ ಶಾಂತಿ ದೊರೆಯಲೆಂದು ಹಾರೈಸುತ್ತೇವೆ

ಇರಾಕ್ ಸೈನ್ಯಗಳ ಪ್ರವೇಶದಿಂದ ಇಸ್ರೇಲಿಗೆ ವಿಪತ್ತು

ಇಸ್ರೇಲಿನ ವಿದೇಶಾಂಗ ಮಂತ್ರಿಯ ಹೇಳಿಕೆ

ಇರಾಕಿನ ಸೈನ್ಯಗಳು ಜೋರ್ಡಾನಿಗೆ ಪ್ರವೇಶ ಮಾಡಿದರೆ ಅದರಿಂದ ಇಸ್ರೇಲಿಗೆ ವಿಪತ್ತು ಒದಗುವುದೆಂದೂ, ಅದನ್ನು ಎದುರಿಸಲು ಇಸ್ರೇಲ್ ಸಿದ್ಧವಿರುವುದಾಗಿಯೂ ಇಸ್ರೇಲಿನ ವಿದೇಶಾಂಗ ಮಂತ್ರಿ ಶ್ರೀಮತಿ ಗೋಲ್ಡಾ ಮೆಯರ್‌ರವರು ತಿಳಿಸಿರುತ್ತಾರೆ

ಸಂಗೀತ ವಿಶ್ವವಿದ್ಯಾಲಯದ ಆರಂಭ

ಮಧ್ಯ ಪ್ರದೇಶದ ಖೈರ್‌ಗಡದಲ್ಲಿ ನೊನ್ನೆ ಇಂದಿರಾ ಕಲಾ ಸಂಗೀತ ವಿಶ್ವವಿದ್ಯಾಲಯವನ್ನು ನೆಹರೂರವರ ಪುತ್ರಿ ಇಂದಿರಾ ಗಾಂಧಿಯವರು ಆರಂಭ ಮಾಡಿದರು. ವಿಶ್ವವಿದ್ಯಾಲಯದ ಚಾನ್ಸೆಲರಾದ ಮಧ್ಯ ಪ್ರದೇಶದ ಗವರ್ನರ್ ಡಾ|| ಪಟ್ಟಾಭಿಯವರು ಲಲಿತ ಕಲೆಗಳು ಜನರನ್ನು ಒಂದುಗೂಡಿಸುವುವೆಂದು ತಿಳಿಸಿ ವಿಶ್ವವಿದ್ಯಾಲಯವು ಸಂಗೀತ ಮತ್ತು ನೃತ್ಯದ ಶಿಕ್ಷಣದ ಬಗ್ಗೆ ಮಾದರಿಯಾಗಲೆಂದು ಹಾರೈಸಿದರು. ಖೈರಗಡದ ರಾಜ ಅರಸರೂ, ಉಪ ಮಂತ್ರಿಯೂ ಆದ ರಾಜಬಹದ್ದೂರರು ತಮ್ಮ ೧೨೦ ಕೊಠಡಿಗಳ ಅರಮನೆಯನ್ನು ವಿಶ್ವವಿದ್ಯಾಲಯಕ್ಕೆ ಒಪ್ಪಿಸಿದ್ದಾರೆ

ಪಾಕಿಸ್ತಾನ ಮಂತ್ರಿಮಂಡಲದ ವಿರುದ್ಧ ರಿಟ್ ಅರ್ಜಿ

ಪಾಕಿಸ್ತಾನದ ಪ್ರಧಾನಿಯಾಗಿ ಹೆಚ್. ಎಸ್. ಸುಹ್ರಾವರ್ದಿಯವರ ನೇಮಕ ಮತ್ತು ಅವರಿಂದ ಸಚಿವರುಗಳ ಆಯ್ಕೆಯ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ಅಕ್ಮಲ್ ಹುಕ್ಕಿ ಮಹಮದ್ ಮುಖ್ತಾರ್ ಚಿಸ್ತಿಯವರ ಪರವಾಗಿ ವಕೀಲರಾದ ಮೇಜರ್ ಎ ಅಲಂರವರು ಪಶ್ಚಿಮ ಪಾಕಿಸ್ತಾನದ ಹೈಕೋರ್ಟಿನಲ್ಲಿ ರಿಟ್ ಅರ್ಜಿ ಸಲ್ಲಿಸಿದ್ದಾರೆ

ಪಾಂಚಜನ್ಯ

ಬೆಂಗಳೂರಿನ ಶ್ರೀಮತಿ ರುಕ್ಮಿಣಿಯಮ್ಮನವರ ಸಂಪಾದಕತ್ವದಲ್ಲಿ ಪ್ರಕಟವಾಗುತ್ತಿರುವ ಪಾಂಚಜನ್ಯ ಎಂಬ ಪತ್ರಿಕೆಯ ಹರಿಜನರ ಸೆಮಿನಾರಿನ ವಿಶೇಷ ಸಂಚಿಕೆಯ ಪ್ರತಿಯೊಂದು ನಮ್ಮ ಹಸ್ತಗತವಾಗಿದೆ ಹರಿಜನೋದ್ಧಾರಕ್ಕೆ ಸಂಬಂಧಪಟ್ಟ ವಿಷಯವಾಗಿ ಅದರಲ್ಲಿ ಲೇಖನಗಳೂ, ಚಿತ್ರಗಳೂ ಇವೆ ಹರಿಜನರ ಪೈಕಿ ವಿದ್ಯಾವಂತರು ಮತ್ತು ಮುಖಂಡರ ಸಂಕ್ಷಿಪ್ತ ಜೀವನ ಪರಿಚಯ ಮುಂತಾದುವನ್ನು ಕೊಡಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಸಂಗೀತ ೭-೧೫ ಮತ್ತು ೮ ೧೫ ಆರ್ ಸುಶೀಲಾ-ಗಾಯನ ೭-೩೦ ಗಾನವಿಹಾರ ಮಧ್ಯಾಹ್ನ ೧೨ ಎಂ ಆರ್ ಶ್ರೀನಿವಾಸಮೂರ್ತಿ ಸಂಗೀತ ೧೨ ೩೦ ರೆಕಾರ್ಡು ೧-೫೦ ಕ್ಲಾರಿಯೊನೆಟ್ ೩-೧೫ ರೆಕಾರ್ಡು ಸಂಜೆ ೫-೩೦ ಮತ್ತು ೬ ಹೆಚ್. ಎಸ್ ತಮ್ಮಯ್ಯ-ನಾಗಸ್ವರ ೬-೨೦ ರೆಕಾರ್ಡು ೬-೩೦ ನಾವು ಮತ್ತು ನಮ್ಮವರು ೭-೩೦ ರಾಷ್ಟ್ರೀಯ ಕಾರ್ಯಕ್ರಮ ೮ ೩೦ ರೆಕಾರ್ಡು. ೯-೧೫ ಟಿ ನಾಗಮ್ಮ-ಸಂಗೀತ

ಉತ್ತರ ಪ್ರದೇಶದ ಹಳ್ಳಿಗಳಲ್ಲಿ ಪ್ರವಾಹದ ಹಾವಳಿ

ಉತ್ತರ ಪ್ರದೇಶದ ಪಶ್ಚಿಮ ಜಿಲ್ಲೆಗಳಲ್ಲಿ ೪ ದಿನಗಳಿಂದ ವಿಪರೀತ ಮಳೆ ಮತ್ತು ಪ್ರವಾಹದ ಪರಿಣಾಮವಾಗಿ ಬಹಳ ನಷ್ಟ ಸಂಭವಿಸಿದೆ ಸಹರಾನ್‌ಪುರದಲ್ಲಿ ೫೦೦ ಹಳ್ಳಿಗಳಿಗೆ ತೊಂದರೆಯಾಗಿದೆ ಸಾವಿರಾರು ಮನೆಗಳು ಉರುಳಿವೆ ಹತ್ತಿ, ಕಡಲೆ, ಜೋಳ, ಭತ್ತ ಮತ್ತು ಕಬ್ಬಿನ ಬೆಳೆಗಳಿಗೆ ನಷ್ಟವಾಗಿದೆ. ಮೊರಾದಾಬಾದಿನಲ್ಲಿ ೩೦೦ ಹಳ್ಳಿಗಳ ೭೭ ಸಾವಿರ ಎಕರೆ ಜಮೀನಿಗೆ ನೀರು ನುಗ್ಗಿದೆ ೧೨೦,೦೦೦ ಜನರಿಗೆ ತೊಂದರೆಯಾಗಿದೆ ಫರೂಖಾಬಾದಿನ ಬಳಿ ಬಿಕನಪುರ ಎಂಬಲ್ಲಿ ಪ್ರವಾಹದ ನೀರಿನಲ್ಲಿ ೨೪ ಜನರು ಮಡಿದಿರುತ್ತಾರೆ

ಶುದ್ಧ ಆಡಳಿತಕ್ಕಾಗಿ ೭೭ ದಿನಗಳ ಉಪವಾಸ ಮಾಡಿ ಮರಣ

ಗಾಂಧಿಜಿಯವರ ಮಾರ್ಗದರ್ಶನದಂತೆ ಆಡಳಿತದಲ್ಲಿ ಪಾರಿಶುದ್ಧತೆ ಮತ್ತು ಸರಳತೆಯೂ ಇರಬೇಕೆಂದು ಒತ್ತಾಯಪಡಿಸಿ ಕಳೆದ ೭೭ ದಿನಗಳಿಂದಲೂ ಉಪವಾಸ ಮಾಡಿದ ವಿರುಧು ನಗರದ ೭೫ ವರ್ಷ ವಯಸ್ಸಿನ ಕೆ ಸಿ. ಶಂಕರಲಿಂಗನಾಡಾರ್‌ರವರು ನೊನ್ನೆ ಮಧುರೆ ಆಸ್ಪತ್ರೆಯಲ್ಲಿ ಮೃತಪಟ್ಟರು ಅವರು ಕಳೆದ ಜುಲೈ ೨೭ರಿಂದ ಉಪವಾಸವನ್ನು ನಡೆಸುತ್ತಿದ್ದರು ಅದಕ್ಕೆ ಮುಂಚೆ ನೆಹರೂ ಮತ್ತು ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜನಾಡಾರರಿಗೆ ಈ ಬಗ್ಗೆ ಪತ್ರವೊಂದನ್ನು ಬರೆದಿದ್ದನು

ವಿಧಾನಸೌಧದ ಕೆಲಸಗಾರನ ವಿಷಾದಾಂತ್ಯ

ವಿಧಾನ ಸೌಧದಲ್ಲಿ ಕೆಲಸ ಮಾಡುತ್ತಿದ್ದ ಕೃಷ್ಣಪ್ಪ ಎಂಬುವನಿಗೆ ನೊನ್ನೆ ಲಿಫ್ಟು ತಲೆಗೆ ಬಡಿದು ಗಾಯವಾಗಿ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾನೆ

ಕೃತಿಕಾರರಿಗೆ ಸನ್ಮಾನ

ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು ಎಂಬ ಗೀತೆಯನ್ನು ರಚಿಸಿದ ಹುಯಿಲಗೋಳ ನಾರಾಯಣರಾವ್ ಮತ್ತು ಅದನ್ನು ಪ್ರಚಾರಗೊಳಿಸಿದ ಪಿ ಕಾಳಿಂಗರಾಯರನ್ನು ಸನ್ಮಾನಿಸಲು ಮೈಸೂರು ಸರ್ಕಾರದವರು ನಿರ್ಧರಿಸಿರುತ್ತಾರೆ

ಹುಡುಗ ತಪ್ಪಿಸಿಕೊಂಡಿದ್ದಾನೆ

ನಂಜನಗೂಡು ತಾಲ್ಲೂಕು ಹುಲ್ಲಹಳ್ಳಿ ಹೋಬಳಿ ಕಣೇನೂರು ಗ್ರಾಮದ ಶ್ರೀ ಮರಿಗೌಡರ ಮಗ, 14 ವರ್ಷದ ಮರಿಸ್ವಾಮಿ ಎಂಬುವನು 8-10 ದಿನಗಳಿಂದಲೂ ಪತ್ತೆಯಿಲ್ಲ ಹುಡುಗನು 4 1 2 ಅಡಿ ಎತ್ತರವಿರುತ್ತಾನೆ, ಕೆಂಪು ಮುಖ, ಬಿಳಿ ಟೋಪಿ ಧರಿಸಿರುತ್ತಾನೆ. ತಲೆ ಕೂದಲು ಐದು ಜಡೆ ಒತ್ತಿ ಕಟ್ಟಿರುತ್ತೆ ಅವನು ನಂಜನಗೂಡು ಟೌನಿನ ಜವಳಿ ವರ್ತಕರಾದ ಶ್ರೀ ಎಸ್ ಆರ್ ನಂಜುಂಡಯ್ಯನವರ ಮನೆಯಲ್ಲಿದ್ದು ತಪ್ಪಿಸಿಕೊಂಡುಹೋಗಿರುತ್ತಾನೆ ಅವನನ್ನು ಯಾರಾದರೂ ಪತ್ತೆ ಹಚ್ಚಿ ನಮ್ಮವರೆಗೆ ತಲುಪಿಸಿದರೆ ಸೂಕ್ತ ಬಹುಮಾನ ಕೊಡಲಾಗುತ್ತೆ

ಎಸ್ ಆರ್ ನಂಜುಂಡಯ್ಯ,
ನಂಜನಗೂಡು

ರಾಮಕೃಷ್ಣರಾಯರು ರಾಜಸ್ಥಾನಕ್ಕೆ ಗವರ್ನರ್

ಹೈದರಾಬಾದಿನ ಮುಖ್ಯ ಮಂತ್ರಿ ಬಿ ರಾಮಕೃಷ್ಣರಾಯರನ್ನು ರಾಜಸ್ಥಾನದ ಗವರ್ನರಾಗಿ ನೇಮಿಸಲಾಗುವುದೆಂದು ತಿಳಿದುಬಂದಿದೆ

ಕರ್ನಾಟಕ ಶಾಸನಸಭಾ ಸದಸ್ಯರ ಬೀಳ್ಕೊಡುಗೆ

ಬೊಂಬಾಯಿ ಶಾಸನಸಭಾ ಸದಸ್ಯರನ್ನು ಬೀಳ್ಕೊಡುವ ಸಂಬಂಧವಾಗಿ ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಸಿ ಜೆ ಅಂಬಲಿಯವರು ನೆನ್ನೆ ಬೊಂಬಾಯಿಯಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಬೊಂಬಾಯಿ ಮುಖ್ಯಮಂತ್ರಿಯವರು ಭಾಷಣ ಮಾಡಿ, ಬೊಂಬಾಯಿಯಿಂದ ಕರ್ನಾಟಕದವರು ಪ್ರತ್ಯೇಕವಾಗಿ ಬೇರೆ ಪ್ರಾಂತಕ್ಕೆ ಹೋದರೂ ಎಲ್ಲರೂ ಒಂದೇ ದೇಶದವರೆಂದೂ, ಮೈಸೂರಿನವರಿಗೆ ನೆರೆಯವರಾದ ತಾವು ಅಮಿತ ಸಹಕಾರವನ್ನು ನೀಡುವುದಾಗಿಯೂ ತಿಳಿಸಿದರು. ಶ್ರೀ ಅಂಬಲಿಯವರು ಮಾತನಾಡಿ, ಮೈಸೂರಿಗೆ ಕನ್ನಡಿಗರು ಸೇರಿದ ಮೇಲೂ ಸಹ ಬೊಂಬಾಯಿ ಪ್ರದೇಶದವರ ಸಹಾಯ ಮತ್ತು ಮಾರ್ಗದರ್ಶನವನ್ನು ಕರ್ನಾಟಕದವರು ಕೋರುವರೆಂದು ತಿಳಿಸಿದರು

○ ಇಂಡೋಚೀನಾದ ಕಾಂಬೋಡಿಯಾ ರಾಜ್ಯದ ಪ್ರಧಾನಿ ಸಿಹನೌಕರು ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ರಾಜರಾದ ಸುರಮರಿತ್‌ರವರಿಗೆ ಒಪ್ಪಿಸಿದ್ದಾರೆ ಅವನ್ನು ದೊರೆಯು ಅಂಗೀಕರಿಸಿರುವರು.

ದೇವತಾರ್ಚನೆಗೆ
ಮೈಸೂರು ಎಂ. ಆರ್. ಚಟ್ಟೆಪ್ಪನವರ
ಸ್ಪೆಷಲ್ ಪ್ರೇಮಲೀಲಾ
ಅಗರಬತ್ತಿಗಳನ್ನೇ
ಉಪಯೋಗಿಸಿರಿ
ಇಂದೇ ಭೇಟಿ ನೀಡಿ -
ವಸ್ತು ಪ್ರದರ್ಶನದ A ಬ್ಲಾಕು,
ಸ್ಟಾಲ್ ನಂಬರ್ 14

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವವಿಖ್ಯಾತವಾಗಿರುವ
ನವರತ್ನ—ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು · ಫೋನ್ ನಂ 55
— ಭೇಟಿಯ ಕಾಲ —
ಬೆಳಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7 30
ಮೇಲಿನ ಕಾರ್ಯಕ್ರಮವನ್ನು ಗಮನಿಸಿ
ಮತ್ತು ಅವರ ಉಚಿತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್
ಗೋಮೇಧಿಕ, ನೀಲ, ಪದ್ಮರಾಗಗಳು ಮತ್ತು ಪ್ರ
ಶಿಲೆ ಮುಂತಾದ 9 ಅಮೂಲ್ಯ ಹರಳುಗಳ
ಯೋಗ ಇದರಿಂದ ನರಗಳ ದೌರ್ಬಲ್ಯ,
ರ್ಗ ಸಂಬಂಧದ ವ್ಯಾಧಿಗಳು, ಧಾತು
ಮೂಲವ್ಯಾಧಿ. ಸಾರ್ವತ್ರಿಕ, ಬಹುಮೂತ್ರ,
ವನ ಮತ್ತು ನಿಮ್ಮ ಇತರ ಎಲ್ಲಾ ಸಾಧಾರಣ
ಗೂ ಶೀಘ್ರವಾದ ಬಾಯುಲಿಗಳೂ ಸಂಪೂರ್ಣ
ಗುಣ ಹೊಂದ ಪತ್ರ
NAVRATNA KALPA PHARMACY,
JULLUNDUR CITY (India)

Edited, Printed and Published b
N R Nagarajan at Sadhvi Pre
D. Subbiah Road, Mysore

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು .
ಮೆಂಬರು . ಐ ಎಸ್. ಬಿ ಎಂ ಎ

ಮೈಸೂರು ದಸರಾ ವಸ್ತು ಪ್ರದರ್ಶನ 1956
ಅಮೋಘ ನಾಟಕ ಪ್ರದರ್ಶನ 17-10-56ನೇ . ಬುಧವಾರ : ಸಂಜೆ 6 30ಕ್ಕೆ
ಮೈಸೂರಿನ ಸುಪ್ರಸಿದ್ಧ ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕಸಭಾ ಇವರಿಂದ
★ ದಾನಶೂರಕರ್ಣ ★
ಎಂಬ ನಾಟಕವು ಅಭಿನಯಿಸಲ್ಪಡುವುದು
ಪಾತ್ರ — ಕೊಟ್ಟೂರು ಬಸವಯ್ಯ-ಕರ್ಣ, ಸಿ ಬಸವರಾಜು-ಕೃಷ್ಣ,
ರಾಮರಾಜೇಅರಸು-ಕೌರವ, ಶ್ಯಾಮರಾವ್-ಭೀಮ
ಪ್ರವೇಶ ಧನ ರೂ. 0—5—0

ನ್ಯೂ ಚಾಮುಂಡೇಶ್ವರಿ ಕೆಫೆ ✱ ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
ಇಲವಾಲದ ರಸ್ತೆ, ಮೈಸೂರು
ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರಕ್ಕೂ, ಮೈಸೂರು ಮತ್ತು ಬೊಂಬಾಯಿ ರೀತಿಯ ರುಚಿರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ಒಳ್ಳೆ ಗಾಳಿ ಬೆಳಕುಗಳುಳ್ಳ ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ. · ಸಿ. ಬಿ. ಎಂ. ಚಂದ್ರಯ್ಯ, ಪ್ರೊಪ್ರೈಟರ್ [ಫೋನ್ ನಂ. 541

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿ ಪ್ರತಿಗೆ 3 ಕಾಸು

ಬ್ರಾಂಕಾಲ್
ಉತ್ತಮ ಮುತ್ತು ಗೂಡಿನ
ವ್ಯಾಪಾರಿಗಳಿಗೆ ಸಿಕ್ಕುವ
ಮೈಸೂರು ಸಂಸ್ಥಾನ ಮತ್ತು
ಹೊರಗಿನ ಪ್ರದೇಶಗಳಿಗೆ
ಸಪ್ಲೈದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
[71]1. [illegible]
ಶ್ರೀರಾಮಪೇಟೆ ರಸ್ತೆ,
ಬೆಂಗಳೂರು -2

ಪುಟ : ೧೫] SADHVI : WEDNESDAY 17—10—1956 ಮೈಸೂರು : ಬುಧವಾರ ೧೭—೧೦—೧೯೫೬ [ಸಂಚಿಕೆ : ೪೦

ರುವ ಡಿಸೆಂಬರ್ ಪ್ರಥಮ ವಾರದಲ್ಲಿ ಘಟಿಕೋತ್ಸವ

ಂಬರ್ ಮೊದಲನೇ ವಾರದಲ್ಲಿ ಘಟಿಕೋತ್ಸವ

ಮ ತಂತಿ] ಬೆಂಗಳೂರು ೧೭

ರುವ ಡಿಸೆಂಬರ್ ತಿಂಗಳ ಮೊದಲನೇ ವಾ ಮೈಸೂರು ವಿಶ್ವವಿದ್ಯಾನಿಲಯದ ಘಟಿ ತ್ಸವವು ನಡೆಯುವುದು. ಬಿಹಾರಿನ ಗವ ಆರ್ ಆರ್. ದಿವಾಕರ್‌ರವರು ಪದವಿ ನ್ನು ಉದ್ದೇಶಿಸಿ ಭಾಷಣ ಮಾಡುವರು.

ದ್ರ ಮಂತ್ರಿಮಂಡಲದ ಕಾರ್ಯದರ್ಶಿ ಯವರ ಆಗಮನ

ಂದ್ರ ಸರ್ಕಾರದ ಮಂತ್ರಿಮಂಡಲದ ಕಾ ರ್ಯದರ್ಶಿ ಸೂಕ್ತಂಕರ್‌ರವರು ಈ ಮಧ್ಯಾಹ್ನ ಗೆ ಆಗಮಿಸಿದರು. ನೂತನ ಮೈಸೂರು ಸ್ಥಾನದ ರಚನೆ ಬಗ್ಗೆ ಅವರು ಇಲ್ಲಿನ ಅಧಿ ಗಳೊಡನೆ ಚರ್ಚೆ ನಡೆಸುವರು.

ಸೂವರು ಮಂತ್ರಿಗಳ ವರ್ತನೆ ಬಗ್ಗೆ ಹನುಮಂತಯ್ಯನವರ ಟೀಕೆ

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತ ನವರು ಪತ್ರಿಕಾ ಭೇಟಿಯೊಂದರಲ್ಲಿ ಮಾತ , ಸಂಸ್ಥಾನ ಪುನರ್ವಿಂಗಡಣೆ ಸಮಿತಿ ವರ ಪ್ರಕಟವಾದ ಮೇಲೆ ಏಕೀಕರಣದ ವಿ ವಾಗಿ ಹಿಂದಿನಿಂದಲೂ ಇದ್ದ ಭಿನ್ನಾಭಿಪ್ರಾ ವಿಷಮ ರೂಪವನ್ನು ತಾಳಿತೆಂದೂ, ಸಚಿ ಗಳಾದ ಶ್ರೀಗಳು ಎ ಜಿ ರಾಮಚಂದ್ರರಾ ಕಡಿದಾಳ್ ಮಂಜಪ್ಪ ಮತ್ತು ಟಿ ಚನ್ನ ನವರು ಎರಡು ಕರ್ನಾಟಕಗಳ ರಚನೆ ಬ ನ್ನು ಪೂರ್ವ ಭಾವಿ ತಿಳುವಳಿಕೆಯಿಲ್ಲದೆ ಹೇಳಿಕೆಯಿತ್ತರೆಂದೂ, ಶಾಸನ ಸಭೆಯಲ್ಲಿ ತ್ರಿಮಂಡಲದ ಒಗ್ಗಟ್ಟಿನ ವಿಚಾರವಾಗಿ ಅ ದ ಚರ್ಚೆ ನಡೆದುದಾಗಿಯೂ ತಿಳಿಸಿದ ರೆ

ಅರ್ಜಂಟೈನಾದಲ್ಲಿ ಮಿಲಿಟರಿಯವರಿಂದ ದಂಗೆಯೇ ?

ಜಂಟೈನಾ ರಾಜ್ಯದಲ್ಲಿ ಮಿಲಿಟರಿಯವರು ಯೆದ್ದಿರುವರೆಂದೂ, ಅಲ್ಲಿನ ಅಧ್ಯಕ್ಷರಾದ ಅರಂಬುರೂರವರು ರಾಜೀನಾಮೆಯಿ ವರೆಂದೂ ವರದಿಯಾಗಿದೆ. ಅವರನ್ನು ಕಡಿಯಲ್ಲಿ ಬಂಧಿಸಿರುವುದಾಗಿಯೂ ಹೇ ಗಿದೆ. ಆ ರಾಜ್ಯದ ಉಪಾಧ್ಯಕ್ಷ ಇಸಾಕ್ ರಾಸ್ ಮತ್ತು ಜನರಲ್ ಜುಯರ್ ಗ್ಯಾ ರವರು ದಂಗೆಯ ನಾಯಕತ್ವ ವಹಿಸಿರು ಗಿ ತಿಳಿದುಬಂದಿದೆ

ನೇ ಕಾಲೇಜಿನವರಿಗೆ ವೈದ್ಯಕೀಯ ವಸ್ತು ಪ್ರದರ್ಶನ

ರಾ ವಸ್ತು ಪ್ರದರ್ಶನದ ಅಂಗವಾಗಿ ಮೆ ಕಾಲೇಜಿನಲ್ಲಿ ಏರ್ಪಡಿಸಿರುವ ವೈದ್ಯಕೀ ಪ್ರದರ್ಶನದ ಅವಧಿಯನ್ನು ಇದೇ ೧೧ ನೇ ದಿನವರೆಗೆ ಹೆಚ್ಚಿಸಲಾಗಿದೆ

ಸೂಚನೆ

ಮುಂಡಿಬೆಟ್ಟದಲ್ಲಿ ರಥೋತ್ಸವದ ಸಂ ಳ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾ

—ವ್ಯವಸ್ಥಾಪಕ

ಎನ್. ಜಿ. ಓ. ಗಳಿಗೆ ಕೊಟ್ಟಿರುವ ತಾತ್ಕಾಲಿಕ ಪರಿಹಾರ

ವಿಧಾನಪರಿಷತ್ತಿನಲ್ಲಿ ನಿಲುವಳಿ ನಿರ್ಣಯದ ನಿರಾಕರಣೆ

ಬೆಂಗಳೂರು ೧೭

ಸಂಸ್ಥಾನದ ನಾನ್ ಗಜೆಟೆಡ್ ನೌಕರರಿಗೆ ಕೊಡಲಾಗಿರುವ ಪರಿಹಾರವು ಅಸಮರ್ಪಕವೂ ಮತ್ತು ತಾರತಮ್ಯಪೂರ್ಣವೂ ಆಗಿರುವುದೆಂದು ಶ್ರೀ ಎಂ ಪಿ ಎಲ್ ಶಾಸ್ತ್ರಿಯವರು ನೆನ್ನೆ ವಿಧಾನ ಪರಿಷತ್ತಿನಲ್ಲಿ ಸೂಚಿಸಿದ ನಿಲುವಳಿ ಸೂಚನೆಯನ್ನು ಸಭಾಪತಿ ಶ್ರೀ ಬಿ ಸುಬ್ರಹ್ಮಣ್ಯರವರು ತಳ್ಳಿಹಾಕಿದರು. ಕಳೆದ ೧೧ನೇ ತಾರೀಖು ಮುಖ್ಯ ಮಂತ್ರಿಗಳು ಹೊರಡಿಸಿದ ಹೇಳಿಕೆಯಲ್ಲಿ ನೀಡಲಾಗಿರುವ ಪರಿಹಾರವು ಅಸಮರ್ಪಕವಾಗಿದೆಯಲ್ಲದೆ ತಾರತಮ್ಯ ಮಾಡಿದೆಯೆಂದೂ, ಎಲ್ಲರಿಗೂ ಒಂದೇ ತೆರನಾದ ಸಂಬಳ ಮಟ್ಟವನ್ನು ಗೊತ್ತುಪಡಿಸಲು ಸರ್ಕಾರವು ನೇಮಕದ ಬಗ್ಗೆ ಯಾವ ಸೂಚನೆಯೂ ಇಲ್ಲವೆಂದೂ ಶ್ರೀ ಶಾಸ್ತ್ರಿಯವರ [illegible] ತಿಳಿಸಲಾಗಿತ್ತು

ಮುಖ್ಯ ಮಂತ್ರಿಗಳು ಮಾತನಾಡಿ, ಈಗ ನೀಡಿರುವ ಪರಿಹಾರವು ತಾತ್ಕಾಲಿಕವಾದುದೆಂದೂ ಒಂದೇ ಸಮನಾದ ಸಂಬಳದ ದರ್ಜೆಯನ್ನು ಗೊತ್ತುಮಾಡಲು ಸೂಕ್ತ ಕ್ರಮ ಕೈಗೊಳ್ಳಲಾಗುವುದೆಂದೂ ತಿಳಿಸಿದರು. ಈ ವಿಷಯವು ಅಂತರ ಪ್ರಾಂತ ಸಚಿವ ಸಮಿತಿಯ ಮುಂದೆ ಬಂದಿತ್ತೆಂದೂ, ಅದರ ಈಗ ತಮ್ಮ ವ್ಯಾಪ್ತಿಗೆ ಒಳಪಟ್ಟಿಲ್ಲವಾದ್ದರಿಂದ ನೂತನ ಸರ್ಕಾರದ ನಿರ್ಧಾರಕ್ಕೆ ಬಿಡಲಾಯಿತೆಂದೂ ಅವರು ಹೇಳಿದರು.

ಮುಟ್ಟೆದೊಡ್ಡಿ ಜಮೀನುಗಳು ಪುನಃ ರೈತರ ವಶಕ್ಕೆ

ಚನ್ನಪಟ್ಟಣದ ಬಳಿ ಮುಟ್ಟೆದೊಡ್ಡಿ ಗ್ರಾಮದಲ್ಲಿ, ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಸಹೋದರ ಶ್ರೀ ನಂಜಪ್ಪನವರಿಗೆ ಕೊಡಲಾಗಿದ್ದ ೫೦ ಎಕರೆ ಜಮೀನುಗಳನ್ನು ಜಮೀನಿಲ್ಲದ ರೈತರಿಗೆ ಹಂಚಲಾಗುವುದೆಂದು ವರದಿಯಾಗಿದೆ. ಕಳೆದ ವಾರ ಚನ್ನಪಟ್ಟಣದ ಪೌರಸಭೆಯವರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರಿಗೆ ಇತ್ತ ಬಿನ್ನವತ್ತಳೆಯಲ್ಲಿ ಈ ಬಗ್ಗೆ ಮನವಿ ಸಲ್ಲಿಸಲಾಗಿತ್ತು. ಈ ಪ್ರಶ್ನೆಯನ್ನು ಕುರಿತು ಈ ಜಮೀನು ಪಟ್ಟೆಗಳ ಬಗ್ಗೆ ಅಡ್ವೊಕೇಟ್ ಜನರಲ್ಲರೊಡನೆ ಸಮಾಲೋಚಿಸಿ ಸೂಕ್ತ ನಿರ್ಧಾರ ಕೈಗೊಳ್ಳುವುದಾಗಿ ಭರವಸೆಯನ್ನು ಮುಖ್ಯ ಮಂತ್ರಿಗಳು ನೀಡಿದರು.

ಮೈಸೂರು ವಿಧಾನಪರಿಷತ್ತಿಗೆ ಬೊಂಬಾಯಿಯ ೩ ಕನ್ನಡ ಸದಸ್ಯರು

ನೂತನ ಮೈಸೂರಿನ ವಿಧಾನ ಪರಿಷತ್ತಿಗೆ ಬೊಂಬಾಯಿ ವಿಧಾನಸಭೆಯಿಂದ ಬಿಜಾಪುರದ [illegible] ಮಂಗಳಿ, [illegible] ವೆಂಕಟರೆಡ್ಡಿ ಸಿದ್ದರೆಡ್ಡಿ ತಿಮ್ಮಾರೆಡ್ಡಿ ಮತ್ತು ಹುಬ್ಬಳ್ಳಿಯ ಫಕೃದ್ದೀನ್ ಹುಸೇನಸಾಬ್‌ರವರು ಅವಿರೋಧವಾಗಿ ಆರಿಸಿ ಬಂದಿರುತ್ತಾರೆ

ಕೇಂದ್ರ ವಿಮಾ ಸಂಸ್ಥೆಗೆ ಸಂಸ್ಥಾನ ಸರ್ಕಾರದಿಂದ ಹಣ

ವಿಧಾನ ಪರಿಷತ್ತಿನಲ್ಲಿ ಸರ್ಕಾರದವರ ಹೇಳಿಕೆ

ಸ್ವಂ ಮ ತಂತಿ] ಬೆಂಗಳೂರು ೧೭

ಕೇಂದ್ರ ಸರ್ಕಾರದವರು ಸ್ಥಾಪಿಸಿರುವ ವಿಮಾ ಸಂಸ್ಥೆಗೆ ಮೈಸೂರು ಸರ್ಕಾರದ ಜೀವ ವಿಮಾ ಸಾರ್ವಜನಿಕ ಶಾಖೆಯ ವರ್ಗಾವಣೆಯಾದ ಮೇಲೆ ಒಪ್ಪಿಸಬೇಕಾದ ೫.೩ ಕೋಟಿ ರೂಪಾಯಿ ಹಲವು ಲಕ್ಷ ರೂಗಳನ್ನು ಕಳುಹಿಸಲಾಗಿದೆಯೆಂದೂ, ಉಳಿದ ಹಣವನ್ನು ಕಂತುವಾರಾಗಿ ಒಪ್ಪಿಸಲಾಗುವುದೆಂದೂ ಈ ದಿನ ವಿಧಾನ ಪರಿಷತ್ತಿನಲ್ಲಿ ಸರ್ಕಾರದ ಪರವಾಗಿ ತಿಳಿಸಲಾಯಿತು

ವಿಧಾನಸಭೆಯಲ್ಲಿ ಈ ದಿನ ಪ್ರಶ್ನೋತ್ತರ ಕಾಲದನಂತರ ಚಿನ್ನದ ಗಣಿ ರಾಷ್ಟ್ರೀಕರಣದ ಮಸೂದೆ ಬಗ್ಗೆ ತಿದ್ದುಪಡಿಯನ್ನು ಚರ್ಚಿಸಲಾಯಿತು. ನೆನ್ನೆ ಸಚಿವ ಶ್ರೀ ಸಿದ್ದವೀರಪ್ಪನವರು ಮಾತನಾಡಿ ಗಣಿಗಳಲ್ಲಿರುವ ಐರೋಪ್ಯ ಸಿಬ್ಬಂದಿಯವರ ಸೇವೆಯನ್ನು ಇದು ಸಹ ವರ್ಷಗಳವರೆಗೂ ಮುಂದುವರಿಸುವ ಬಗ್ಗೆ ಗ್ಯಾರಂಟಿ ಕೊಡಬೇಕೆಂದು ಕೇಂದ್ರ ಸರ್ಕಾರದಿಂದ [illegible] ಆದೇಶವು ಸರ್ಕಾರಕ್ಕೆ ಬಂದಿತ್ತೆಂದು ತಿಳಿಸಿದರು

ವೈ. ಬಿ. ಚವನ್‌ರವರು ಬೊಂಬಾಯಿ ಮುಖ್ಯ ಮಂತ್ರಿ

ಬೊಂಬಾಯಿ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ನೆನ್ನೆ ಸೇರಿ ಶ್ರೀ ವೈ ಬಿ ಚವನ್‌ರವರನ್ನು ನಾಯಕರನ್ನಾಗಿ ಚುನಾಯಿಸಿತು. ಅವರಿಗೆ ೩೩೩ ಓಟುಗಳು ಬಂದುವು. ಹಾಲಿ ಬೊಂಬಾಯಿನ ರೆವಿನ್ಯೂ ಸಚಿವರಾಗಿರುವ ಬಿ ಎಸ್. ಹಿರೇಯವರು ಅವರೊಡನೆ ಸ್ಪರ್ಧಿಸಿ ೧೧೧ ಮತಗಳನ್ನು ಪಡೆದು ಸೋತರು. ಸರ್ವಾನುಮತದಿಂದ ನಾಯಕರ ಆಯ್ಕೆಯಾಗಬೇಕೆಂಬ ತತ್ವಕ್ಕೆ ಮನ್ನಣೆ ದೊರೆಯದಿದ್ದುದರಿಂದ ಈಗಿನ ಮುಖ್ಯ ಮಂತ್ರಿ ಮೊರಾರ್ಜಿಯವರು ನಾಯಕತ್ವಕ್ಕೆ ಸ್ಪರ್ಧಿಸಲಿಲ್ಲ

ಮೈಸೂರು-ತಲಚೇರಿ ರೈಲ್ವೆ ಸರ್ವೆ

ಮೈಸೂರಿನಿಂದ ತಲಚೇರಿಗೆ ರೈಲು ಹಾಕುವ ಸಂಬಂಧವಾಗಿ ಈ ವರ್ಷ ಸರ್ವೆಯನ್ನು ನಡೆಸಲಾಗುವುದೆಂದು ರೈಲ್ವೆ ಮಂತ್ರಿ ಶ್ರೀ ಲಾಲ್‌ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ. ತಲಚೇರಿಯ ಪೌರಸಭೆಯವರು ಮಾನಪತ್ರವನ್ನು ಅರ್ಪಿಸಿದಾಗ ಅವರು ಆ ರೀತಿ ನುಡಿದರು

ನವೆಂಬರ್ ೧ರಂದು ೩ ಘಂಟೆಗೆ ನೂತನ ಮೈಸೂರಿನ ಉದ್ಘಾಟನೆ

ಬೆಂಗಳೂರು ೧೭

ಬರುವ ತಿಂಗಳು ೧ನೇ ತಾರೀಖು ರಾಷ್ಟ್ರಪತಿ ರಾಜೇಂದ್ರ ಪ್ರಸಾದರು ಇಲ್ಲಿಗೆ ಆಗಮಿಸಿ ಮಧ್ಯಾಹ್ನ ಮೂರು ಘಂಟೆಗೆ ನೂತನ ಮೈಸೂರು ಸಂಸ್ಥಾನದ ಆರಂಭೋತ್ಸವವನ್ನು ನೆರವೇರಿಸುವರು. ಅವರು ಅಂದು ಬೆಳಿಗ್ಗೆ ತಿರುವನಂತಪುರದಲ್ಲಿ ಹೊಸ ಕೇರಳ ಸಂಸ್ಥಾನದ ಉದ್ಘಾಟನೆಯನ್ನು ನಡೆಸಿ, ೧೨ ಘಂಟೆವೇಳೆಗೆ ವಿಶೇಷ ವಿಮಾನದಲ್ಲಿ ಇಲ್ಲಿಗೆ ಆಗಮಿಸುವರು

ನೂತನ ಮೈಸೂರು ಸಂಸ್ಥಾನದ ಗವರ್ನರ್ ಗಿರಿ

ಸರ್ ಸಿ ಪಿ ಮತ್ತು ವಿ. ಪಿ. ಮೆನನ್ರೊಡನೆ ಮಹಾರಾಜರ ಸಮಾಲೋಚನೆ

ಮೈಸೂರು ೧೭

ನೂತನ ಮೈಸೂರು ಸಂಸ್ಥಾನದ ಗವರ್ನರ್ ಸ್ಥಾನವನ್ನು ಅಂಗೀಕರಿಸುವ ವಿಷಯವಾಗಿ ರಾಜಪ್ರಮುಖರು ಸುಪ್ರಸಿದ್ಧ ರಾಜಕಾರಣಿಗಳಾದ ಡಾ|| ಸಿ ಪಿ ರಾಮಸ್ವಾಮಿ ಅಯ್ಯರ್, ಮಾಜಿ ದಿವಾನ್ ಎ ಮಾಧವರಾವ್ ಮತ್ತು ವಿ. ಪಿ ಮೆನನ್ನವರೊಡನೆ ನೆನ್ನೆ ೩ ಗಂಟೆಗಳ ಕಾಲ ಸಮಾಲೋಚನೆ ನಡೆಸಿದರೆಂದು ವರದಿಯಾಗಿದೆ

ದೇವರನಾಮ ಸ್ಪರ್ಧೆಯಲ್ಲಿ ಗೆದ್ದವರು

ವಸ್ತು ಪ್ರದರ್ಶನದವರು ಏರ್ಪಡಿಸಿದ್ದ ದೇವರನಾಮ ಸ್ಪರ್ಧೆಯಲ್ಲಿ [illegible] ಎಲ್. ವಸಂತ ಕುಮಾರಿ, ಎಂ ಕೆ ಸರಸ್ವತಿ ಮತ್ತು ಕೆ ಆರ್ ಲಕ್ಷ್ಮಿಯವರಿಗೆ ಕ್ರಮವಾಗಿ ಮೂರು ಬಹುಮಾನಗಳು ಬಂದಿವೆ. ಅ ಮುಂದಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲಾಗಿದೆ.

ಪದ್ಮಜಾ ನಾಯ್ಡುರವರು ಬಂಗಾಳದ ಗವರ್ನರರಾಗುವರೇ ?

ಉತ್ತರ ಪ್ರದೇಶದ ಗವರ್ನರರಾಗಿದ್ದ ದಿವಂಗತ ಸರೋಜಿನಿ ನಾಯ್ಡುರವರ ಪುತ್ರಿ ಪದ್ಮಜಾ ನಾಯ್ಡುರವರನ್ನು ಪಶ್ಚಿಮ ಬಂಗಾಳದ ಗವರ್ನರರಾಗಿ ನೇಮಿಸುವ ಸಂಭವವಿರುವುದಾಗಿ ಹೇಳಲಾಗುತ್ತಿದೆ. ನೆನ್ನೆ ಹೈದರಾಬಾದಿನಲ್ಲಿ ನಡೆದ ಮಹಿಳಾ ಗೋಷ್ಠಿಯೊಂದರಲ್ಲಿ ಶ್ರೀಮತಿ ಪದ್ಮಜಾ ನಾಯ್ಡುರವರು ಮಾತನಾಡುತ್ತಾ, ತಾವು ಹೈದರಾಬಾದಿನಿಂದ ಹೊರಗೆ ಹೊರಳಲಿರುವುದಾಗಿಯೂ, ಬಹುಶಃ ಅನೇಕ ವರ್ಷ ಕಾಲ ಹಿಂತಿರುಗುವ ಸಂಭವವಿಲ್ಲವೆಂದೂ ತಿಳಿಸಿದುದಾಗಿ ವರದಿಯಾಗಿದೆ

ಮುಂಬೈ ಮಂತ್ರಿಮಂಡಲದಲ್ಲಿ ಅವಿಶ್ವಾಸ ನಿರ್ಣಯದ ತಿರಸ್ಕಾರ

ಬೊಂಬಾಯಿಯ ಶಾಸನ ಸಭೆಯು ನೆನ್ನೆ ೩೧೪-೩೩ ಓಟುಗಳಿಂದ ಅಲ್ಲಿನ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ತಿರಸ್ಕರಿಸಿತು. ಬೊಂಬಾಯಿ ಮಂತ್ರಿಮಂಡಲದಲ್ಲಿ ಅವಿಶ್ವಾಸ ನಿರ್ಣಯವನ್ನು ತಂದುದು ಇದೇ ಮೊದಲು. ಇತ್ತೀಚೆಗೆ ಆ ಸಂಸ್ಥಾನದಲ್ಲಿ ಪೋಲೀಸರ ಗುಂಡಿನೇಟುಗಳ ಬಗ್ಗೆ ನ್ಯಾಯಾಧೀಶರ ವಿಚಾರಣೆಯನ್ನು ನಡೆಸದಿದ್ದುದು ಮತ್ತು ನಾಗರಿಕರನ್ನು ಸ್ಥಾನಬದ್ಧತಾ ಶಾಸನದ ಪ್ರಕಾರ ಬಂಧಿಸಿದ ಬಗ್ಗೆ ಅವಿಶ್ವಾಸ ನಿರ್ಣಯವನ್ನು ತರಲಾಗಿತ್ತು

○ ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ ಅಸಿಸ್ಟೆಂಟ್ ಪ್ರೊಫೆಸರ್ ಆಗಿರುವ ಡಾ|| [illegible] ಅಹಮದ್ ಷರೀಫ್‌ರವರಿಗೆ ಸರ್ಜನ್ನರಾಗಿ ಬಡ್ತಿ ಕೊಟ್ಟು ಚಿತ್ರದುರ್ಗ ಜಿಲ್ಲಾ ವೈದ್ಯಾಧಿಕಾರಿಗಳಾಗಿ ನೇಮಿಸಲಾಗಿದೆ.

ಹಿಂದೀ ಸಾಹಿತ್ಯ ಸಮಿತಿ ಆರಂಭೋತ್ಸವ

ಮೈಸೂರು ೧೬

[illegible] ಹಿಂದೀ ಪ್ರಚಾರ [illegible] ಹಿಂದೀ ಸಾಹಿತ್ಯ [illegible] ಆರಂಭೋತ್ಸವವನ್ನು ನೆರವೇರಿಸುತ್ತಾ [illegible] ಶ್ರೀ ವಿ. ಎಸ್. [illegible] ಹೇಳಿದರು. ಸಾಹಿತ್ಯ [illegible] ಪ್ರಾರ್ಥನೆಯೂ [illegible] ಕಾರ್ಯದರ್ಶಿ ಶ್ರೀ [illegible] ಸ್ವಾಗತ [illegible] ವಂದನಾರ್ಪಣೆಯೂ [illegible]

ಸ್ವಾಮಿ [illegible] ಅಪಹರಿಸಲು ಪ್ರಯತ್ನಿಸಿದವನ ಬಂಧನ

[illegible]

ಹಿಂದಿ ತರಗತಿಗಳು

[illegible] ಸಂಘದವರು [illegible] ತರಗತಿಗಳನ್ನು ನಡೆಸಬೇಕೆ [illegible]

ಬಂಗಾರದ ಸ್ಪರ್ಧೆಗಾಗಿ ಶೇಷಾದ್ರಿ ಅಯ್ಯರ ಸ್ಮಾರಕ

[illegible]

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

[illegible] ಪ್ರದರ್ಶನದಲ್ಲಿ ನಾಳೆ [illegible]

ಜಪಾನಿನಲ್ಲಿ ರೈಲುಗಳ ಡಿಕ್ಕಿಯಿಂದ ೩೦ ಜನರ ಮರಣ

[illegible] ಜನರು ಗಾಯಗೊಂಡಿದ್ದಾರೆಂದು ವರದಿಯಾಗಿದೆ

ನಿಧನ

[illegible] ಮಕ್ಕಳೂ, ಪತ್ನಿಯೂ ಇರುತ್ತಾರೆ.

ರೈಲ್ವೆ ನೌಕರರಿಗೆ ಕೇಂದ್ರ ಸಚಿವರ ಹಿತೋಕ್ತಿ

ಮೈಸೂರು ೧೬

ಕೇಂದ್ರ ಸರ್ಕಾರದ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ನೆನ್ನೆ ಇಲ್ಲಿನ ವರ್ಕ್‌ಷಾಪಿಗೆ ಭೇಟಿಯಿತ್ತರು. ಅವರಿಗೆ ಕೆಲಸಗಾರರ ಪರವಾಗಿ ಶ್ರೀ ಬಿ. ಎಸ್. ಶ್ರೀಕಂಠಯ್ಯನವರು ಮನವಿಯೊಂದನ್ನು ಒಪ್ಪಿಸಿದರು. ರೈಲ್ವೆಯಲ್ಲಿ ಅತ್ಯಂತ ಕಡಿಮೆ ಸಂಬಳದವರ ವೇತನದ ದರ್ಜೆಯನ್ನು ಹೆಚ್ಚಿಸುವ ವಿಷಯವಾಗಿ ರೈಲ್ವೆ ಬೋರ್ಡಿನವರು ಪಟ್ಟಿಯನ್ನು ಸಿದ್ಧಗೊಳಿಸಿರುವರೆಂದೂ, ಈ ತಿಂಗಳು ಅಂತ್ಯದೊಳಗಾಗಿ ರೈಲ್ವೆ ನೌಕರರ ಸಂಘದವರೊಡನೆ ಪರಿಶೀಲನೆ ನಡೆಸಲಾಗುವುದೆಂದೂ ಸಚಿವರು ತಿಳಿಸಿದರು. ಈ ಬಗ್ಗೆ ನಿರ್ಧಾರವನ್ನು ನವೆಂಬರ್ ತಿಂಗಳಲ್ಲಿ ಪ್ರಕಟಿಸಲು ಸಾಧ್ಯವಾಗುವುದೆಂದೂ ಅವರು ಹೇಳಿದರು. ಅತ್ಯಂತ ಕಡಿಮೆ ಸಂಬಳ ಪಡೆಯುತ್ತಿರುವ ನೌಕರರು ಬಹಳವಾಗಿರುವರೆಂದೂ, ಅವರ ಸಂಖ್ಯೆಯನ್ನು ಕಡಿಮೆ ಮಾಡುವ ವಿಷಯವು ಪರಿಶೀಲನೆಯಲ್ಲಿರುವುದೆಂದೂ, ಮುಂದಿನ ಹೆಚ್ಚಿನ ಸಂಬಳ ಪಡೆಯುತ್ತಿರುವವರ ಮಟ್ಟದಲ್ಲಿ ಹೆಚ್ಚು ಜನರಿರಬೇಕೆಂಬುದೇ ಸರ್ಕಾರದ ಅಭಿಪ್ರಾಯವೆಂದೂ ಅವರು ಹೇಳಿದರು.

ವರ್ಕ್‌ಷಾಪಿನವರ ಕುಂದುಕೊರತೆಗಳನ್ನು ಪರಿಶೀಲಿಸಿ ಅವನ್ನು ಜಾಗ್ರತೆ ಪರಿಹಾರವೀಯಲಾಗುವುದೆಂದು ಅವರು ನುಡಿದರು.

ದ್ವಿತೀಯ ಯೋಜನೆಯು ಯಶಸ್ವಿಯಾಗಲು ಕೆಲಸಗಾರರು ಕಷ್ಟಪಟ್ಟು ದುಡಿಯಬೇಕೆಂದು ಅವರು ಸೂಚಿಸಿದರು. ಹೆಚ್ಚು ಕೆಲಸ ಮಾಡಿದವರಿಗಾಗಿ ಬಹುಮಾನಗಳನ್ನು ಕೊಡಲಾಗುವುದೆಂದು ಸಚಿವರು ತಿಳಿಸಿದರು

ಕಾಂಗ್ರೆಸ್ ಕಾರ್ಯದರ್ಶಿಗಳ ನೇತೃತ್ವದಲ್ಲಿ ನಾಯಕರ ಆಯ್ಕೆ

ಇದೇ ತಿಂಗಳು ೨೧ನೇ ತಾರೀಕು ನಡೆಯುವ ಸಂಸ್ಥಾನದ ಕಾಂಗ್ರೆಸ್ ಪಕ್ಷದ ನಾಯಕರ ಚುನಾವಣೆ ಸಮಯದಲ್ಲಿ ಅಖಿಲ ಭಾರತ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಮಾಧವ ನಾಯರ್‌ರವರು ಮೇಲ್ವಿಚಾರಣೆ ವಹಿಸುವರೆಂದು ತಿಳಿಯಬಂದಿದೆ. ರಾಜಸ್ಥಾನದಲ್ಲಿ ನಾಯಕರ ಚುನಾವಣೆಯು ಇಂದು ಶ್ರೀ ಮಹೇಂದ್ರ ಮೋಹನ ಚೌಧುರಿಯವರ ನೇತೃತ್ವದಲ್ಲಿ. ನಾಳಿದ್ದು ಮತ್ತು ೨೧ನೇ ತಾರೀಕು ಪಂಜಾಬ್ ಮತ್ತು ಆಂಧ್ರ ಸಂಸ್ಥಾನಗಳಲ್ಲಿ ಚುನಾವಣೆಯು ಕ್ರಮವಾಗಿ ರಾಜಣ್ಣರವರ ನೇತೃತ್ವದಲ್ಲಿ ನಡೆಯುವುವು

ನೀರು ಸರಬರಾಜು ಕೇಂದ್ರದ ಆರಂಭೋತ್ಸವ

ನಂಜನಗೂಡು ೧೬

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಶ್ರೀಕಂಠೇಶ್ವರ ವಾಟರ್ ವರ್ಕ್ಸ್‌ನ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅವರಿಗೆ ಪೌರಸಭೆಯವರು ಮಾನಪತ್ರವನ್ನು ಅರ್ಪಿಸಿದರು. ನಲ್ಲಿನೀರಿನ ಸರಬರಾಜಿಗಾಗಿ ೭.೬ ಲಕ್ಷ ರೂ.ಗಳನ್ನು ಸರ್ಕಾರದವರು ಒದಗಿಸಿದುದಕ್ಕಾಗಿ ಕೃತಜ್ಞತೆಯನ್ನು ಸೂಚಿಸಲಾಗಿತ್ತು. ಇತರ ಸೌಲಭ್ಯಗಳಿಗಾಗಿ ಹೆಚ್ಚು ದ್ರವ್ಯ ಸಹಾಯವನ್ನು ಬೇಡಲಾಯಿತು. ಪೌರಸಭೆಯವರ ಬೇಡಿಕೆಗಳನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ಮುಖ್ಯ ಮಂತ್ರಿಯವರು ಭರವಸೆಯಿತ್ತರು.

ಹೆಚ್ಚು ರಾಜಧನ ಸ್ವೀಕರಿಸಲು ನಿರಾಕರಣೆ

ಗ್ರೀಸಿನ ದೊರೆ ಪಾಲರ ರಾಜಧನವನ್ನು ವರ್ಷಕ್ಕೆ ೭,೯೦,೦೦೦ ರೂ.ನಿಂದ ೧೫,೩೩,೦೦೦ ರೂ.ಗೆ ಹೆಚ್ಚಿಸಲು ಅಲ್ಲಿನ ಸರ್ಕಾರದವರು ಮಾಡಿರುವ ನಿರ್ಧಾರದಂತೆ ಹಣವನ್ನು ತೆಗೆದುಕೊಳ್ಳಲು ದೊರೆಯು ನಿರಾಕರಿಸಿರುತ್ತಾರೆ. ಪಾರ್ಲಿಮೆಂಟಿನಲ್ಲಿ ಈ ಬಗ್ಗೆ ಆಕ್ಷೇಪಣೆಗಳು ಬಂದುದೇ ಇದಕ್ಕೆ ಕಾರಣ. ಈಗಿನ ಪ್ರಮಾಣದ ರಾಜಧನದಲ್ಲಿ ಅರಮನೆ ವೆಚ್ಚವನ್ನು ವಹಿಸಲು ದೊರೆಗಳಿಗೆ ಸಾಧ್ಯವಿಲ್ಲವೆಂದು ಭಾವಿಸಿ ಅದನ್ನು ಹೆಚ್ಚಿಸಲಾಗಿತ್ತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೧೫ ಎಂ. ಶಾಂತಲಕ್ಷ್ಮಿ—ದೇವರ ನಾಮ. ೭-೩೦ ಮತ್ತು ೮-೧೫ ಎಂ. ಎಸ್. ಅನಂತನಾರಾಯಣಯ್ಯಂಗಾರ್—ಕಾವ್ಯವಾಚನ. ಮಧ್ಯಾಹ್ನ ೧೨ ಎಚ್. ವಿ. ರಾಮರಾವ್—ಪಿಟೀಲು ೧೨-೩೦ ಎಂ. ಶಾಂತಲಕ್ಷ್ಮಿ—ಗಾಯನ ೧ ಮತ್ತು ಸಂಜೆ ೫-೩೦ ಸಯ್ಯದ್ ಅಹಮದ್—ಸಿತಾರ್ ಮತ್ತು ಎಚ್. ಎಸ್. ಗಣಪತಿರಾವ್—ತಬಲ. ೬-೧೫ ಕೊಳಲು. ೬-೪೫ ವ್ಯವಸಾಯಗಾರರಿಗೆ [illegible] ೭-೧೫ ಜಾನಪದ ಗೀತೆಗಳು ೭-೩೦ ಗ್ರಾಮಸ್ಥರಿಗಾಗಿ ಕಾರ್ಯಕ್ರಮ. ೮-೩೦ ಪ್ರಸಂಗ ಬಿ. ಎಚ್. ವಿ. ರಾಮರಾವ್—ಪಿಟೀಲು ೮-೩೦ ಸಿನಿಮಾ ಮೆಚ್ಚಿನ ಗೀತೆಗಳು ೯-೧೫ ಭಜನ ೯-೩೦ ಚಂದ್ರಗುಪ್ತ—ಕನ್ನಡ ನಾಟಕ · ಅಖಿಲ ಭಾರತ ನಾಟಕ ಕಾರ್ಯಕ್ರಮ.

ಮಧ್ಯ ಪ್ರದೇಶಕ್ಕೆ ಶುಕ್ಲರವರೇ ಮುಖ್ಯ ಮಂತ್ರಿ

ಮಧ್ಯ ಪ್ರದೇಶದ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ನೆನ್ನೆ ಸಮಾವೇಶಗೊಂಡು ಹಾಲಿ ಮುಖ್ಯ ಮಂತ್ರಿಗಳಾಗಿರುವ ರವಿಶಂಕರಶುಕ್ಲರವರನ್ನೇ ಸರ್ವಾನುಮತದಿಂದ ಪಕ್ಷದ ನಾಯಕರನ್ನಾಗಿ ಚುನಾಯಿಸಿತು. ಶ್ರೀ ಶುಕ್ಲರವರೇ ನೂತನ ಸಂಸ್ಥಾನದ ಮುಖ್ಯ ಮಂತ್ರಿಯಾಗುವರು.

ಪ್ರಯಾಣಿಕನ ಬ್ಯಾಂಡೇಜಿನಲ್ಲಿ ಚಿನ್ನ

ಮೊನ್ನೆ ಕರಾಚಿಯಿಂದ ಬೊಂಬಾಯಿಗೆ ವಿಮಾನದಲ್ಲಿ ಬಂದ ಪ್ರಯಾಣಿಕನೊಬ್ಬನು ವಿಶೇಷ ಗಾಯಗೊಂಡವನಂತೆ ನಟಿಸಿ, ಮೊಣಕಾಲಿಗೆ ಅಗಲವಾದ ಬ್ಯಾಂಡೇಜನ್ನು ಕಟ್ಟಿಕೊಂಡು ಬಹು ಯಾತನೆ ಪಡುವವರ ಹಾಗೆ ನಟಿಸುತ್ತಿದ್ದ. ಒಬ್ಬ ಅಧಿಕಾರಿಯು ಅವನಿಗೆ ಸಹಾಯ ಮಾಡಲು ಅವನ ಮೊಣಕಾಲ ಬಳಿ ಕೈ ಹಾಕಿದಾಗ ಬ್ಯಾಂಡೇಜಿನಲ್ಲಿ ೪೩ ತೊಲ ಚಿನ್ನವನ್ನು ಸೇರಿಸಿದ್ದುದು ಪತ್ತೆಯಾಯಿತು.

೧" ಪ್ರಪಂಚದ ೩ ನೇ ಯುದ್ಧವು ನಡೆಯುತ್ತಿದ್ದರೆ ಮಾಡುವ " ಅಸ್ತ್ರವೊಂದನ್ನು ಬ್ರಿಟನ್ನಿನಲ್ಲಿ ತಯಾರಿಸಲಾಗಿದೆಯೆಂದೂ ೩,೦೦೦ ಮೈಲಿ [illegible]ರದ ಪ್ರದೇಶಕ್ಕಾದರೂ ಅದು ಹೋಗಿ ಗುರಿಯನ್ನು ನಾಶಮಾಡಬಲ್ಲದೆಂದೂ ಹೇಳಲಾಗಿದೆ.

ಚಾಮುಂಡಿ ಹಾಲ್

ಹನುಮಂತರಾವ್ ರಸ್ತೆ, ಮೈಸೂರು

ಪ್ರಭಾ ಮತ್ತು ಒಲಿಂಪಿಯಾ ಚಿತ್ರಮಂದಿರಗಳ ನಡುವೆ

ಮೆಟ್ರೊಸ್ ಮಲ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ, ಜೇಬಿ, ಅರವಿಂದ್, ಕಟಾವ್ ಇನ್ನೂ ಅನೇಕ ಮಿಲ್‌ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ, ಉತ್ತಮ ತರಹೆಯ ಪ್ರಿಂಟೆಡ್ ವಾಯಿಲ್ ಮತ್ತು ಚೀಟಿಗಳು.

ಒಮ್ಮೆ ದಯಮಾಡಿ ಭೇಟಿ ಕೊಡಿ

ಇ. ಪಿ. ನಂಜಪ್ಪ

ದೇವತಾರ್ಚನೆಗೆ

ಮೈಸೂರು ಎಂ. ಆರ್. ಚಿಟ್ಟಪ್ಪನವರ

ಸ್ಪೆಷಲ್ ಪ್ರೇಮಲೀಲಾ ಅಗರಬತ್ತಿಗಳನ್ನೇ

ಉಪಯೋಗಿಸಿರಿ

ಇಂದೇ ಭೇಟಿ ಕೊಡಿ :—

ವಸ್ತು ಪ್ರದರ್ಶನದ A ಬ್ಲಾಕು,

ಸ್ಟಾಲ್ ನಂಬರ್ 14

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ

ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣಐಯ್ಯರ್ ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು

ಅಶೋಕ ರಸ್ತೆ, ಮೈಸೂರು (Estd. 1911.

॥ ಶ್ರೀ ॥

ರಾಜಭವನ್

ಬ್ರಾಹ್ಮಣರ ಕಾಫಿ ಕ್ಲಬ್ ಮತ್ತು ಭೋಜನ ಶಾಲಾ

ಜಗನ್ಮೋಹನ ಪ್ಯಾಲೇಸ್ ರಸ್ತೆ, ಸಂತೆಪೇಟೆ, ಮೈಸೂರು

ರುಚಿಯಾದ ತಿಂಡಿ ಪದಾರ್ಥಗಳು, ಸೇವಿಸಲು ರುಚಿಯಾದ ಕಂಪು ಪಾನೀಯಗಳು

ಅತ್ಯುತ್ತಮವಾದ ಕಾಫಿ ಮತ್ತು ಸ್ವಚ್ಛ ಭೋಜನ ದೊರೆಯುತ್ತದೆ

ಸರ್ವರೂ ಪ್ರೋತ್ಸಾಹಿಸಬೇಕಾಗಿ ಕೋರಿದೆ

ಅತ್ಯುತ್ತಮ ಧಾತುವರ್ಧಕ ಸಿದ್ಧೌಷಧ

ಯಾವಾಗಲೂ ನಂಜನಗೂಡು [illegible] ಉಪಯೋಗಿಸಿ.

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ—ಕಲ್ಪ

ದಿವ್ಯೌಷಧವನ್ನು ಕಂಡುಹಿಡಿದಿರುವ,

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು : ಫೋನ್ ನಂ.

—: ಭೇಟಿಯ ಕಾಲ :—

ಬೆಳಗ್ಗೆ 7-30 ರಿಂದ 12-30 ಮತ್ತು ಮಧ್ಯಾಹ್ನ 4 ರಿಂದ 7-30

ಮೇಲಿನ ಕಾರ್ಯಕ್ರಮವನ್ನು ಗಮನಿಸಿ ಮತ್ತು ಅವರ ಪರಿಣತ ವೈದ್ಯಕೀಯ ಸಲಹೆಯನ್ನು ಪಡೆಯಿರಿ

ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿ [illegible] ವಿಮಾನದಲ್ಲಿ ಸಂಚರಿಸುವರು

ನವರತ್ನ—ಕಲ್ಪ

ಉಪಯೋಗಿಸಿರಿ

ಇದು ವಜ್ರ, ಕೆಂಪು, ಮುತ್ತು, ಹವಳ, [illegible] ಗೋಮೇಧಿಕ, ನೀಲ, ಪಚ್ಚೆ ರಾಗಿಣಿ ಮತ್ತು [illegible] ಇತರೆ, ಈ 9 ಅಮೂಲ್ಯ ರತ್ನಗಳ ಸಂಯೋಗ [illegible] ನಿಮ್ಮ ಎಲ್ಲಾ ಸಾಹಸ ಹಾಗೂ [illegible] ಉಪಯೋಗಿಗಳಿಗೂ ಅತ್ಯುತ್ತಮ ಆರೋಗ್ಯ [illegible] ಮಾಡಿ ನಿಶ್ಚಯ ಇರಲಿ

NAVRATNA KALPA PHARMAC

JULLUNDUR CITY (Indi

Edited, Printed and Publishe
A. R. Nagarajan at Sadhvi P
D. Subbiah Road, Mysore

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಚಿಕಿತ್ಸಕ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
7/11. [illegible]
ಶ್ರೀನಿವಾಸಮಂದಿರ ಬೀದಿ,
ಬೆಂಗಳೂರು –2

ಪುಟ : ೦೮] SADHVI : FRIDAY 19—10—1956 ಮೈಸೂರು : ಶುಕ್ರವಾರ ೧೯—೧೦—೧೯೫೬ [ಸಂಚಿಕೆ : ೭೭

ರಾಷ್ಟ್ರಾಧ್ಯಕ್ಷರಿಂದ ಹೊಸ ಸಂಸ್ಥಾನ ಗವರ್ನರರ ನೇಮಕ

ನೂತನ ಸಂಸ್ಥಾನಗಳ ಗವರ್ನರುಗಳ ನೇಮಕ

ಮೈಸೂರಿಗೆ ಮಹಾರಾಜರೇ ಗವರ್ನರರು

ರಾಷ್ಟ್ರಾಧ್ಯಕ್ಷರ ಘೋಷಣೆ

ಪುನರ್ರಚಿತವಾದ ಹೊಸ ಸಂಸ್ಥಾನಗಳಿಗೆ ಗವರ್ನರುಗಳನ್ನು ನೇಮಿಸಿ ರಾಷ್ಟ್ರಾಧ್ಯಕ್ಷರು ನೆನ್ನೆ ಘೋಷಣೆ ಹೊರಡಿಸಿರುವರು. ಅದರ ಪ್ರಕಾರ ಮುಂಬಾಯಿಗೆ ಮದ್ರಾಸಿನ ಗವರ್ನರ್ ಶ್ರೀ ಶ್ರೀಪ್ರಕಾಶರವರೂ, ಕೇರಳ ಸಂಸ್ಥಾನಕ್ಕೆ ಹೈದರಾಬಾದಿನ ಮುಖ್ಯ ಮಂತ್ರಿ ಬಿ. ರಾಮಕೃಷ್ಣರಾಯರೂ ಗವರ್ನರರಾಗುವರು.

ಮೈಸೂರು ಮಹಾರಾಜರೇ ಸಂಸ್ಥಾನದ ಗವರ್ನರರಾಗಿ ನೇಮಿಸಲ್ಪಟ್ಟಿರುವರು. ಮಧ್ಯಪ್ರದೇಶ, ಆಂಧ್ರ ಮತ್ತು ಪಂಜಾಬು ಪ್ರಾಂತಗಳಿಗೆ ಈಗಿರುವ ಗವರ್ನರುಗಳಾದ ಪಟ್ಟಾಭಿ ಸೀತಾರಾಮಯ್ಯ, ಚಂದೂಲಾಲ್ ತ್ರಿವೇದಿ ಮತ್ತು ಸಿ. ಪಿ. ಎನ್. ಸಿಂಗ್‌ರವರೇ ಮುಂದುವರಿಯುವರು.

ಹೊಸ ರಾಜಸ್ಥಾನಕ್ಕೆ ದೆಹಲಿ ಪ್ರಾಂತದ ಮುಖ್ಯಮಂತ್ರಿ ಗುರುಮುಖ್ ನಿಹಾಲ್ ಸಿಂಗರೂ, ಪಶ್ಚಿಮ ಬಂಗಾಳಕ್ಕೆ ಸರೋಜಿನಿನಾಯ್ಡುರವರ ಪುತ್ರಿ ಪದ್ಮಜಾ ನಾಯ್ಡುರವರೂ ಗವರ್ನರರಾಗುವರು.

ಶ್ರೀಪ್ರಕಾಶರವರು ಅಧಿಕಾರ ಸ್ವೀಕರಿಸುವವರೆಗೆ ಹಂಗಾಮಿ ಗವರ್ನರ್ ಎಂ. ಸಿ. ಚಾಗ್ಲಾರವರೇ ಮುಂದುವರಿಯುವರು. ಹಾಗೆಯೇ ಕೇರಳಕ್ಕೆ ಈಗಿನ ತಿರುವಾಂಕೂರು-ಕೊಚ್ಚಿ ಸಲಹೆಗಾರರಾದ ಪಿ. ಎಸ್. ರಾಯರು ಹಂಗಾಮಿ ಗವರ್ನರ್ ಆಗುವರು.

ನಾಡಹಬ್ಬ ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಗ್ಗೆ ಶ್ರೀ... ಮಂಜಮ್ಮನವರಿಂದ ಭಾವ ಗೀತೆಗಳು, ಕುಮಾರಿ ಪಿ. ಜಿ. ನಾಗಲಕ್ಷ್ಮಿಯವರಿಂದ ಸಂಗೀತ ಮತ್ತು ಅಖಿಲಯರ ನೃತ್ಯ ಸ್ಪರ್ಧೆಗಳೂ; ಶ್ರೀಗಳಾದ ರಾಮಸ್ವಾಮಯ್ಯ ಮತ್ತು ನೀಲಕಂಠಪ್ಪನವರಿಂದ ಆವರಣೆ, ಗೋಪಾಲ ಕೃಷ್ಣ ಮತ್ತು ಪಾರ್ಟಿಯವರಿಂದ ಯಕ್ಷಗಾನ ಮತ್ತು "ಉಪ್ಪಲು" ಮತ್ತು "ಹೊಸ ವೇಷ" ಎಂಬ ಎರಡು ನಾಟಕಗಳೂ ಏರ್ಪಾಡಾಗಿವೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಗಾಂಧಿ ಕಥಾವಳಿ. ೭-೧೫ ಲೀಲಾ-ಕನ್ನಡ ಗೀತೆಗಳು. ೭-೩೦ ಹಿಂ... ೮-೧೫ ರಿಕಾರ್ಡುಗಳು. ಮಧ್ಯಾಹ್ನ ಜೆ. ಪಿ. ಸೀತಾರಾಂ-ಸಂಗೀತ. ೧೨-೩೦ ...ನ್ನಂದ ೧೨-೪೫ ವಾರ್ತಾ ವಿಚಾರ. ೧-೫೦ ...ಮ್ ೨-೧೫ ಪ್ರೌಢ ಶಾಲೆಗಳಿಗಾಗಿ. ಸಂ... -೩೦ ಜೆ. ಪಿ. ಸೀತಾರಾಂ- ಸಂಗೀತ. ...೦ ನೃತ್ಯ ಗೀತೆ. ೭-೩೦ ಕನ್ನಡ ಭಾಷಣ ಮದ್ರಾಸಿನಿಂದ. : ತಂಜಾವೂರು ತ್ಯಾಗರಾಜ-ಸಂಗೀತ. ೯-೧೫ ರಿಕಾರ್ಡು. ೯-೩೦ ಪಿ... ತ್ತಾನ ವಿಮಾನ ಕಾರ್ಖಾನೆ ಬಗ್ಗೆ ಶಬ್ದ ಚಿತ್ರ. ೧೦ ಚಿತ್ರ ಸಂಗೀತ. ೧೦-೧೫ ಉಮರ್ ... ಗಳು.

ಕಾಲೇಜು ಮಿತ್ರಮೇಳದ ಬಗ್ಗೆ ಶಾಸನ ಸಭೆಯಲ್ಲಿ ಪ್ರಶ್ನೆ

ವಿದ್ಯಾ ಮಂತ್ರಿ ರಾಮಚಂದ್ರರಾಯರ ಉತ್ತರ

ಬೆಂಗಳೂರು ೧೯

ಮೈಸೂರು ಮಹಾರಾಜಾ ಕಾಲೇಜಿನಲ್ಲಿ ಕಳೆದ ವರ್ಷ ಆದ ಮಿತ್ರಮೇಳದ ಪ್ರಕರಣದ ವಿಚಾರವಾಗಿ ವಿಧಾನ ಸಭೆಯಲ್ಲಿ ನೆನ್ನೆ ಶ್ರೀ ಎಂ. ರಾಜಶೇಖರಮೂರ್ತಿಯವರು ಹಾಕಿದ ಪ್ರಶ್ನೆಗಳಿಗೆ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಉತ್ತರವಿತ್ತು, ಈ ಬಗ್ಗೆ ನೇಮಕವಾಗಿದ್ದ ಸಮಿತಿಯು ೩೭ ಜನ ಸಾಕ್ಷಿಗಳನ್ನು ವಿಚಾರಿಸಿ ಕಳೆದ ಜನವರಿಯಲ್ಲಿ ಸರ್ಕಾರಕ್ಕೆ ವರದಿಯನ್ನು ಒಪ್ಪಿಸಿದುದಾಗಿ ತಿಳಿಸಿದರು. ಆಪಾದನೆ ಮಾಡಲ್ಪಟ್ಟವರ ಹೆಸರುಗಳನ್ನು ಹೇಳಲು, ಸಾರ್ವಜನಿಕ ಹಿತದೃಷ್ಟಿಯಿಂದ, ನಿರಾಕರಿಸಲಾಯಿತು.

ಗಣ್ಯ ಮಾತಾಪಿತೃಗಳು ತಮ್ಮ ಹೆಣ್ಣು ಮಕ್ಕಳನ್ನು ಸದರಿ ಕಾಲೇಜಿಗೆ ಕಳುಹಲು ಹೆದರುತ್ತಿರುವ ವಿಷಯವು ಸರ್ಕಾರಕ್ಕೆ ಗೊತ್ತಿಲ್ಲವೆಂದೂ, ವಿಶ್ವವಿದ್ಯಾಲಯದ ಛಾನ್ಸೆಲ್ಲರವರೊಡನೆ ಸಮಿತಿ ವರದಿ ಬಗ್ಗೆ ಪರ್ಯಾಲೋಚಿಸಲಾಗುವುದೆಂದೂ, ವರದಿಯನ್ನು ಸಭೆಯ ಮುಂದೆ ಮಂಡಿಸುವ ವಿಷಯವನ್ನು ಪರಿಶೀಲಿಸಲಾಗುವುದೆಂದೂ ಸಚಿವರು ನುಡಿದರು.

ಕರ್ನಾಟಕದಲ್ಲಿ ರಾಜಪ್ರಮುಖರ ಪ್ರವಾಸ

ಮೈಸೂರು ರಾಜಪ್ರಮುಖರು ಇದೇ ತಿಂಗಳು ೨೪ ರಿಂದ ೨೯ ರವರೆಗೆ ಹುಬ್ಬಳ್ಳಿ, ಬೆಳಗಾಂ, ಗೋಕಾಕ್ ಮುಂತಾದ ಕರ್ನಾಟಕ ಪ್ರದೇಶಗಳಲ್ಲಿ ಪ್ರವಾಸ ಕೈಗೊಂಡು ಹಲವಾರು ಸಮಾರಂಭಗಳನ್ನು ನೆರವೇರಿಸುವರು. ೩೦ಕ್ಕೆ ಅವರು ಬೆಂಗಳೂರಿಗೆ ಹಿಂದಿರುಗಿ, ಮಾರನೇ ದಿನ ಅಲ್ಲಿ ನಡೆಯುವ ನೂತನ ಮೈಸೂರು ಸಂಸ್ಥಾನದ ಆರಂಭೋತ್ಸವದಲ್ಲಿ ಭಾಗವಹಿಸುವರು.

ಜಾರ್ಡಾನಿಗೆ ಸಿರಿಯಾದಿಂದ ಯಥೇಚ್ಛ ಶಸ್ತ್ರಾಸ್ತ್ರ ಸರಬರಾಜು

ಜಾರ್ಡಾನಿನ ರಕ್ಷಣೆಗಾಗಿ ಸಿರಿಯದಿಂದ ಯಥೇಚ್ಛವಾಗಿ ಶಸ್ತ್ರಾಸ್ತ್ರ ಮತ್ತು ಇತರ ಸಲಕರಣೆಗಳು ಉಚಿತವಾಗಿ ಸರಬರಾಜಾಗುತ್ತಿರುವುದೆಂದು ವರದಿಯಾಗಿದೆ. ಅವುಗಳಲ್ಲಿ ಚೆಕೊಸ್ಲೊವೇಕಿಯದ ಟ್ಯಾಂಕುಗಳು, ಫಿರಂಗಿಗಳು, ಟ್ಯಾಂಕ್ ಧ್ವಂಸಕ ಅಸ್ತ್ರಗಳು ಮತ್ತು ಮಾರ್ಟರುಗಳು ಇವೆ. ಇಸ್ರೇಲಿನ ಕಡೆಯಿಂದ ಆಗುವ ಗಡಿ ಧಾಳಿಗಳನ್ನು ಎದುರಿಸಲು ಜಾರ್ಡಾನು ಶಸ್ತ್ರಾಸ್ತ್ರ ಸಹಾಯಕ್ಕಾಗಿ ಸಿರಿಯವನ್ನು ಪ್ರಾರ್ಥಿಸಿದ್ದಿತು.

ಚಾಮುಂಡೇಶ್ವರಿ ಅಮ್ಮನವರ ರಥೋತ್ಸವ

ಶ್ರೀ ಚಾಮುಂಡೇಶ್ವರಿ ಅಮ್ಮನವರ ರಥೋತ್ಸವವು ನೆನ್ನೆ ಬೆಳಗ್ಗೆ ೯-೨೫ ಗಂಟೆಗೆ ಬೆಟ್ಟದಲ್ಲಿ ವೈಭವದಿಂದ ನೆರವೇರಿತು. ಶ್ರೀಮನ್ಮಹಾರಾಜರು ರಥವನ್ನು ಎಳೆದರು. ಅರಮನೆ ಬತೇರಿಯಿಂದ ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು. ಸಹಸ್ರಾರು ಭಕ್ತರು ಭಾಗವಹಿಸಿದ್ದರು.

ಬೆಂಗಳೂರಿನಲ್ಲಿ ಮಳೆಯಿಂದ ೫೦೦ ಮನೆಗಳ ನಾಶ

ಬೆಂಗಳೂರು ೧೯

ಇಲ್ಲಿ ಹಲವಾರು ದಿನಗಳಿಂದಲೂ ವಿಪರೀತ ಮಳೆ ಬಂದು, ಸುಮಾರು ೧ ಲಕ್ಷ ಪ್ರಜೆಗಳಿಗೆ ತೊಂದರೆಯಾಗಿದೆ. ೫೦೦ ಮನೆಗಳು ಉರುಳಿವೆ. ಆದರೆ ಯಾವ ಸಾವುನೋವುಗಳೂ ಸಂಭವಿಸಿಲ್ಲ. ಎಳೆಂಟು ಲಕ್ಷ ರೂ. ನಷ್ಟ ನಷ್ಟದ ಅಂದಾಜಾಗಿದೆ. ಸುಭಾಷ್ ನಗರದ ಪ್ರದೇಶವು ನೀರಿನಿಂದ ತುಂಬಿ ಸರೋವರವಾಗಿ ಪರಿಣಮಿಸಿದೆ. ಅನೇಕ ಕಡೆ ಬೀದಿಗಳಲ್ಲಿ ನಾಲ್ಕೈದು ಅಡಿಯಷ್ಟು ನೀರು ಇದ್ದಿತೆಂದೂ ವರದಿಯಾಗಿದೆ

ಅಧಿಕಾರದಿಂದ ನಿಜಾಮರ ನಿವೃತ್ತಿ

ಬರುವ ನವೆಂಬರ್ ೧ ರನಂತರ ತಾವು ಯಾವ ಅಧಿಕಾರವನ್ನೂ ವಹಿಸಿಕೊಳ್ಳಲು ಸಾಧ್ಯವಿಲ್ಲವೆಂದು ಹೈದರಾಬಾದಿನ ನಿಜಾಮರು ತಿಳಿಸಿರುತ್ತಾರೆ. ತಮ್ಮ ವಯಸ್ಸು ಮತ್ತು ಆರೋಗ್ಯದ ದೃಷ್ಟಿಯಿಂದ ನಿವೃತ್ತರಾಗಲು ಆಶಿಸುವುದಾಗಿ ರಾಷ್ಟ್ರಾಧ್ಯಕ್ಷರು ಪ್ರಧಾನಿ ಮತ್ತು ಕೇಂದ್ರ ಗೃಹ ಮಂತ್ರಿಗಳಿಗೆ ಅವರು ಪತ್ರ ಬರೆದಿರುವರೆಂದು ಹೇಳಲಾಗಿದೆ. ೪೦ ವರ್ಷಗಳಿಂದಲೂ ನಿಜಾಮರು ಸಂಸ್ಥಾನಕ್ಕೂ, ಅದರ ಪ್ರಜೆಗಳಿಗೂ ಸಲ್ಲಿಸಿರುವ ಸೇವೆಯನ್ನು ನಾಯಕರುಗಳು ಪ್ರಶಂಸಿಸಿ, ಅವರಿಗೆ ಧನ್ಯವಾದಗಳನ್ನು ಸಲ್ಲಿಸುತ್ತಾರೆ.

ರಂಗೋಲಿ ಸ್ಪರ್ಧೆಯಲ್ಲಿ ಬಹುಮಾನ

ವಸ್ತು ಪ್ರದರ್ಶನದಲ್ಲಿ ಏರ್ಪಾಡಾಗಿದ್ದ ರಂಗೋಲಿ ಸ್ಪರ್ಧೆಯಲ್ಲಿ ಕೆಳಗೆ ಕಂಡವರು ಬಹುಮಾನಗಳನ್ನು ಪಡೆದಿರುವರು:- ಎಳೆ ರಂಗೋಲಿ. ಶ್ರೀಮತಿಯರಾದ ಎ. ಎಸ್. ಗೌರಮ್ಮ, ಕೆ. ಎಲ್. ಪುಟ್ಟಮ್ಮ ಮತ್ತು ಎಂ. ಬಿ. ಯಮುನಾ; ಬಣ್ಣದ ರಂಗೋಲಿ-ಶ್ರೀಮತಿಯರಾದ ಎಸ್. ಕೆ. ಸರಸ್ವತಿ, ಎಸ್. ವಿಮಲ ಮತ್ತು ಎಂ. ಕೆ ಲೀಲಾ; ಮಿಶ್ರ ರಂಗೋಲಿ-ಶ್ರೀಮತಿಯರಾದ ಹೆಚ್. ವಿ. ಸರೋಜ, ಶಾರದಾಂಬಾ ಮತ್ತು ಹೆಚ್. ವಿ. ತಾರಾ; ಹೂವಿನ ರಂಗೋಲಿ-ಶ್ರೀಮತಿ ಪಿ. ಎ. ಚೂಡಾಮಣಿ.

ಮೈಸೂರಿನಲ್ಲಿ ಕಳುವು ಮಾಡಿದ ಯುವಕರ ಬಂಧನ

ಬೆಂಗಳೂರಿನ ರೈಲ್ವೆ ಪೋಲೀಸರು ಕಳೆದ ಸೋಮವಾರ ಮೈಸೂರಿನಿಂದ 'ಒಳ್ಳೆಯ ವ್ಯಾಪಾರ' ನಡೆಸಿ ಹಿಂದಿರುಗುತ್ತಿದ್ದ ಮದ್ರಾಸಿನ ಮೂವರು ಬಾಲಕರನ್ನು ಬಂಧಿಸಿರುತ್ತಾರೆ. ಅವರ ಹೆಸರು ನಂದಗೋಪಾಲ್, ಬಾಬು ಮತ್ತು ಷಣ್ಮುಗಂ ಅವರು ಕ್ರಮವಾಗಿ ೧೪, ೧೨ ಮತ್ತು ೧೨ ವಯಸ್ಸಿನವರು. ಮದ್ರಾಸು ಮೈಲನ್ನು ಪತ್ತೆಯಾಗ ಗಲಾಟೆಯಲ್ಲಿ ಕಂಗೆಟ್ಟಿದ್ದ ಮಗುವಿನ ಕೈ ಚಿನ್ನದ ಬಳೆಗಳನ್ನು ಅವರು ಕದ್ದಾಗ ಸಿಕ್ಕಿಬಿದ್ದರು. ಅವರನ್ನು ಶೋಧಿಸಲಾಗಿ ಅವರ ಬಳಿ ೫೫೦ ರೂ. ಬೆಲೆ ಬಾಳುವ ಒಡವೆಗಳು ಸಿಕ್ಕಿದುವು. ೪೪ ರೂ ಮತ್ತು ೧೦೦ ರೂ. ನಷ್ಟು ಹೊಸ ಬಟ್ಟೆಗಳನ್ನು ವಶಪಡಿಸಿಕೊಳ್ಳಲಾಯಿತು. ಮೈಮೇಲಿದ್ದ ಆಭರಣಗಳನ್ನು ಅವರು ಮೈಸೂರಿನಲ್ಲಿ ಅಪಹರಿಸಿದ್ದರೆಂದು ಹೇಳಲಾಗಿದೆ.

ಚಿನ್ನದ ಗಣಿಗಳ ರಾಷ್ಟ್ರೀಕರಣ ಮಸೂದೆಗೆ ಅಂಗೀಕಾರ

ಬೆಂಗಳೂರು ೧೯

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಮಸೂದೆಯನ್ನು ಉಭಯ ಶಾಸನಸಭೆಗಳೂ ಅಂಗೀಕರಿಸಿವೆ. ಬರುವ ಡಿಸೆಂಬರ್ ತಿಂಗಳು ೩೧ರಿಂದ ಸರ್ಕಾರದವರು ಕಂಪೆನಿಗಳ ಆಡಳಿತವನ್ನು ವಹಿಸಿಕೊಳ್ಳಲಿರುವರು.

ಸಂಸ್ಥಾನದಲ್ಲಿ ಮಳೆಯಿಂದ ವಿಪರೀತ ಹಾನಿ

ಕಳೆದ ೧೫ ದಿನಗಳಿಂದ ಮೈಸೂರು ಸಂಸ್ಥಾನದಲ್ಲಿ ವಿಪರೀತ ಮಳೆಯಾಗಿ ಬೆಳೆ, ರಸ್ತೆ, ಸೇತುವೆ ಮತ್ತು ಮನೆಗಳಿಗೆ ನಷ್ಟವಾಗಿರುವುದೆಂದು ವರದಿಯಾಗಿದೆ. ಕುಣಿಗಲಿನ ಬಳಿ ಭಾರಿ ಕೆರೆಯು ಒಡೆದು ಊರಿಗೆ ನೀರು ನುಗ್ಗಿದೆ. ಕೋಲಾರ ಜಿಲ್ಲೆಯಲ್ಲಿ ೪೧ ಕೆರೆಗಳು ಒಡೆದಿವೆ. ತುಮಕೂರಿನಲ್ಲಿ ಕೆರೆ ಏರಿಯು ೧೦ ಅಡಿಯಷ್ಟು ಕಿತ್ತುಹೋಗಿ, ಅಧಿಕಾರಿಗಳು ಸಕಾಲದಲ್ಲಿ ದುರಸ್ತು ಮಾಡಲಾಗಿ ಟೌನ್ ಜನರಿಗೆ ರಕ್ಷಣೆ ದೊರೆಯಿತೆಂದು ಗೊತ್ತಾಗಿದೆ. ಬೆಂಗಳೂರು-ಮದ್ರಾಸು ರಸ್ತೆಯಲ್ಲಿ ಒಂದು ಸೇತುವೆಗೆ ಜಖಂ ಆಗಿದೆ. ಬೆಂಗಳೂರಿನಲ್ಲಿ ಟಿಪ್ಪು ಕೋಟೆಯ ಒಂದು ಭಾಗವು ಕುಸಿಯಿತು. ಹೊಸಕೋಟೆಯಲ್ಲಿ ಅಖಿಲ ಭಾರತ ರೇಡಿಯೊ ಟ್ರಾನ್ಸ್‌ಮಿಟರ್ ಕೇಬಲುಗಳಿಗೆ ಜಖಂ ಆಗಿದೆ. ಆದರೆ ರೇಡಿಯೊ ಕಛೇರಿಯಲ್ಲೇ ಒಂದು ಟ್ರಾನ್ಸ್‌ಮಿಟರ್ ಮೂಲಕ ಪ್ರಸಾರದ ವ್ಯವಸ್ಥೆ ಮಾಡಲಾಗಿದೆ.

ಬಿಹಾರಿನಲ್ಲಿ ಕೋಮುವಾರು ಘರ್ಷಣೆಯಿಂದ ಐವರ ಮರಣ

ಬಿಹಾರ್ ಪ್ರಾಂತದ ಸಾಹಿಬ್‌ಗಂಜ್ ಎಂಬಲ್ಲಿ ಮೊನ್ನೆ ದುರ್ಗಾದೇವಿಯ ಆರು ವಿಗ್ರಹಗಳನ್ನು ಮೆರವಣಿಗೆಯಲ್ಲಿ ಒಯ್ಯುತ್ತಿದ್ದಾಗ ಮಸೀದಿ ಮುಂದೆ ವಾದ್ಯ ಬಾರಿಸುವ ಸಂಬಂಧವಾಗಿ ಘರ್ಷಣೆ ನಡೆದು ಪೋಲೀಸರು ಗುಂಡು ಹಾರಿಸಿದರೆಂದೂ, ಘರ್ಷಣೆ ಮತ್ತು ಗುಂಡಿನೇಟುಗಳಿಂದ ಐದು ಜನರು ಮಡಿದು, ಹತ್ತು ಮಂದಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಸಂಸ್ಥಾನದಲ್ಲಿ ಅಗಾಧ ಮಳೆ

ಸ್ವಂ. ವ. ತಂತಿ] ಬೆಂಗಳೂರು ೧೯

ವಿದ್ಯಾ ಸಚಿವರು ಈ ದಿನ ವಿಧಾನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಈ ವರ್ಷ ಎಂದೂ ಆಗದಿದ್ದ ಮಳೆಯು ಶಿವಮೊಗ್ಗಾ ಜಿಲ್ಲೆ ಬಿಟ್ಟು ಮಿಕ್ಕೆಲ್ಲ ಕಡೆಯೂ ಆಗಿರುವುದೆಂದೂ, ಬೆಳೆ, ಮನೆಗಳು ಮತ್ತು ವಸ್ತುಗಳಿಗೆ ಆಗಿರುವ ನಷ್ಟದ ಬಗ್ಗೆ ವಿವರಗಳಿಗಾಗಿ ಕಾಯಲಾಗಿದೆಯೆಂದೂ, ಯಾರಿಗೂ ಪ್ರಾಣಾಪಾಯವಾಗಿಲ್ಲವೆಂದೂ ತಿಳಿಸಿದರು.

ಬರುವ ೧ ರಂದು ಮಧ್ಯಾಹ್ನ ೩-೫೫ಕ್ಕೆ ಹೊಸ ಸಂಸ್ಥಾನದ ಆರಂಭೋತ್ಸವ

ನೂತನ ಸಂಸ್ಥಾನದ ಆರಂಭೋತ್ಸವವು ಬರುವ ೧ ನೇ ತಾರೀಖು ಮಧ್ಯಾಹ್ನ ೩-೫೫ ಗಂಟೆಗೆ ನೆರವೇರುವುದು.

ಮುರಾರ್ಜಿ ದೇಸಾಯಿಯವರಿಗೆ ಕೇಂದ್ರ ಮಂತ್ರಿ ಪದವಿ

ಬೊಂಬಾಯಿ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯಿ ಅವರು ಕೇಂದ್ರ ಸರ್ಕಾರದ ಮಂತ್ರಿಗಳಾಗುವರೆಂದು ತಿಳಿದುಬಂದಿದೆ

ಚಾಮುಂಡಿ ಹಾಲ್

ಹನುಮಂತರಾವ್ ರಸ್ತೆ, ಮೈಸೂರು

ಪ್ರಭಾ ಮತ್ತು ಒಲಂಪಿಯಾ
ಚಿತ್ರಮಂದಿರಗಳ ನಡುವೆ

ಮೆಟ್ರೊಪಾಲ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು ಕ್ಯಾಲಿಕೋ, ಜೇಬಿ, ಅರವಿಂದ್, ಕಟಾವು ಇನ್ನೂ ಅನೇಕ ಮಿಲ್ಲುಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ ಉತ್ತಮ ತರಹೆಯ ಪ್ರಿಂಟೆಡ್ ವಾಯಿಲ್ ಮತ್ತು ಚೀಟಿಗಳು

ಒಮ್ಮೆ ದಯಮಾಡಿ ಭೇಟಿ ಕೊಡಿ

ಇ. ಸಿ. ನಂಜಪ್ಪ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪನಿಗಳ ಶ್ರೇಷ್ಠ ಜಾತಿಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣಅಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (ಸ್ಥಾಪಿತ 1911)

ಚಾಮುಂಡೇಶ್ವರಿ

ಟಾಕೀಸ್
19-10-56ರಿಂದ ಅಮೋಘ 4ನೇ ವಾರ

ವಾಳ್ವಿಲೆ — ಒರುನಾಳ್

ಶಿವಾಜಿ ಗಣೇಶನ್ ಜಿ. ವರಲಕ್ಷ್ಮಿ
ರಾಜಸುಲೋಚನ ವಿ. ಕೆ. ರಾಮಸ್ವಾಮಿ

ಜೀವನದ ಹರ್ಷವನ್ನು ಸವಿಯಿರಿ

ಮುದುಕರಿಗೆ ತಾರುಣ್ಯ!
ವೃದ್ಧರಿಗೆ ಯೌವನ!
ದುರ್ಬಲರಿಗೆ ಸಮಗ್ರ ಶಕ್ತಿ

[illegible] ದೀರ್ಘ ಜೀವನದ [illegible] ಆವಿಷ್ಕಾರಗಳನ್ನು [illegible] ಮನುಷ್ಯ [illegible] ಗ್ರಂಥಿಗಳು [illegible] ಮುಂತಾದ [illegible] ರೋಗಗಳು [illegible] ಪ್ರತಿದಿನ [illegible] 1? [illegible] ಸ್ತ್ರೀ ಪುರುಷರಿಬ್ಬರ [illegible]

[illegible] ಜೀವನವನ್ನು [illegible] ಭೇಟಿ [illegible]

ರಾಜಾ ಮೆಡಿಕಲ್ ಹಾಲ್,
ಡೋರ್ ನಂ 1 71 [illegible] ರೋಡ್,
([illegible] ಬ್ಯಾಂಕ್ ಬಳಿ [illegible] ಕಟ್ಟಡ)
ಮೈಸೂರು

ಮಹಿಳೆಯರಿಗಾಗಿ ಹೊಲಿಗೆ ತರಗತಿ

ವಿದ್ಯಾರಣ್ಯಪುರಂ [illegible] ವಿಚಾರದ [illegible] ಸಮಾಜದ [illegible] ಶ್ರೀಮತಿ [illegible] ಪ್ರಾರಂಭಿಸಿರುತ್ತಾರೆ

[illegible]

ಮೈಸೂರು ಎಂ. ಆರ್. ಜೆಟ್ಟಿಪ್ಪನವರ
ಸ್ಪೆಷಲ್ ಪ್ರೇಮಲೀಲಾ
ಅಗರಬತ್ತಿಗಳನ್ನೇ
[illegible]
ಇಂದೇ ಭೇಟಿ ಕೊಡಿ
ವಸ್ತು ಪ್ರದರ್ಶನದ A ಬ್ಲಾಕು,
ಸ್ಟಾಲ್ ನಂಬರ್ 14

ವುಡ್‌ಲ್ಯಾಂಡ್ಸ್

19-10-56 ರಿಂದ ಯಶಸ್ವಿ 4ನೇ ವಾರ
ನಾರಾಯಣನ್ ಕಂಪೆನಿಯವರ ಹಿಂದಿ ಚಿತ್ರ

— ದೇವ್‌ತಾ —

ಪಾತ್ರ: [illegible] ಜೆಮಿನಿ ಗಣೇಶನ್
[illegible]
ವೈಜಯಂತಿ [illegible] ಮತ್ತು [illegible]
[illegible]

ಫುಟ್‌ಬಾಲ್ ಪಂದ್ಯ

[illegible] ಫುಟ್‌ಬಾಲ್ [illegible] ಡಿವಿಷನ್ [illegible] ಕಡೆ ಚಂದ್ರಶೇಖರ್ ಮತ್ತು [illegible] ಕ್ರಮವಾಗಿ [illegible] ಮತ್ತು [illegible]

ಹಾಸಿಗೆ - ದಿಂಬ

ಮಿತವ್ಯಯದಲ್ಲಿ [illegible] ತಯಾರು [illegible]
ಬಾಪುಸಾಬ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂ

Edited Printed and Published
A. R. Nagarajan at Sadhvi Pre
O. [illegible] Road Mysore

ಲಕ್ಷ್ಮಿ ★

19-10-56ರಿಂದ ಅಮೋಘವಾದ 5 ನೇ ವಾ
ಪ್ರತಿ ದಿನ ಮೂರು ಪ್ರದರ್ಶನಗಳು

ದೇವರ್ ಫಿಲಂಸ್‌ರವರ
ತಮಿಳು ಚಿತ್ರ — **ತಾಯಿಕ್ಕುಪಿನ್ ತಾರ**

ಪಾತ್ರ: ಎಂ. ಜಿ. ರಾಮಚಂದ್ರನ್, ಪಿ. ಭಾನುಮತಿ, ಕಣ್ಣಾಂಬ, ಟಿ. ಎಸ್. ಬಾಲಯ
ಬಾಲಸರಸ್ವತಿ ಮುಂತಾದವರು

ಪ್ರಭುದೇವಾ ಥಿಯೇಟರ್

(ನ್ಯೂ ಟಾಕೀಸ್)
18-10-56ರಿಂದ ಅಮೋಘವಾದ 2ನೇ ವಾ
[illegible] ರವರ
ಕನ್ನಡ ಚಿತ್ರ ★ **ಓಹಿಲೇಶ್ವರ** ★
ಪಾತ್ರ: ಶ್ರೀರಂಜನಿ (ಜ್ಯೂನಿಯರ್), ರಾಜಕುಮಾರ್, ಕಲ್ಯಾಣಕುಮಾರ್, ಜಿ. ವಿ. ಅಯ್ಯ
ನರಸಿಂಹರಾಜು [illegible] ಮುಂತಾದವರು



ಇದನ್ನು ಕಾಯ್ದಿಟ್ಟುಕೊಳ್ಳಿ

ರೆಕ್ಸೋನದ ವಿಶೇಷ ರಿಯಾಯಿತಿ!

ನಿಮ್ಮ ರೆಕ್ಸೋನದ ರ್ಯಾಪರ್‌ಗಳನ್ನು ಇಟ್ಟುಕೊಳ್ಳಿರಿ.
ಅವುಗಳಿಂದ ಈಗ ನಿಮಗೆ ಹಣದ
ಉಳಿತಾಯವಾಗುತ್ತದೆ!

3 ಸಾಧಾರಣ ಸೈಜಿನ ರೆಕ್ಸೋನದ ರ್ಯಾಪರ್‌ಗಳನ್ನು ಅಥವಾ 2 ದೊಡ್ಡ ಸೈಜಿನ ರೆಕ್ಸೋನದ ರ್ಯಾಪರ್‌ಗಳನ್ನು ಕೊಟ್ಟು, ನೀವು ಕೆಳಗೆ ಕಾಣಿಸಿದ

ಜನಪ್ರಿಯ ಸೌಂದರ್ಯ ಸಾಧನಗಳಲ್ಲಿ ಯಾವುದನ್ನಾದರೂ
ಅದರ ನಿಜವಾದ ಬೆಲೆಗಿಂತ 3 ಆಣೆ ಕಡಿಮೆ ಕ್ರಯದಲ್ಲಿ
ಕೊಂಡುಕೊಳ್ಳಬಹುದು

ಹಿಮಾಲಯ ಬುಕೆ ಟಾಯಿಲೆಟ್ ಪೌಡರ್
([illegible] ಅಥವಾ [illegible])

ಹಿಮಾಲಯ ಬುಕೆ ಟಾಲ್ಕಮ್ ಪೌಡರ್
(ದೊಡ್ಡ ಸೈಜ್ ಅಥವಾ ಸಣ್ಣ ಸೈಜ್)

ಹಿಮಾಲಯ ಬುಕೆ ಸ್ನೋ

ಇರಾಸ್ಮಿಕ್‌ನೊಂದಿಗಿನ ಸುಗಂಧಯುಕ್ತ ಕೊಬ್ಬರಿ ಎಣ್ಣೆ
(ದೊಡ್ಡ ಅಥವಾ ಮಧ್ಯಮ ಸೈಜ್)

[illegible] ಟೂತ್ ಪೌಡರ್

[illegible] ಕೊಂಡುಕೊಳ್ಳಿರಿ, ರ್ಯಾಪರ್‌ಗಳನ್ನು [illegible]
[illegible] ಸಂಪೂರ್ಣ [illegible]

ಕೊನೆಯ ತಾರೀಖು: ನವೆಂಬರ್ 15, 1956.

ನ್ಯೂ ಚಾಮುಂಡೇಶ್ವರಿ ಕೆಫೆ

✱ ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
[illegible] ರಸ್ತೆ, ಮೈಸೂರು

ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರಕ್ಕೆ ಮೈಸೂರು ಮತ್ತು ಬೊಂಬಾಯಿ ರೀತಿಯ ರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ [illegible] ಒಳ್ಳೆ [illegible] ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ

ಸಿ. ಬಿ. ಎಂ. ಚಂದ್ರಯ್ಯ, ಪ್ರೊಪ್ರೈಟರ್ [ಕೋಡ್ ನಂ. 5

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು
ಅತ್ಯುತ್ತಮ ರೀತಿ ತಯಾರಾದ
ಸುಪ್ರಸಿದ್ಧ
ಚಂದೇರಿ
ಸೀರೆಗಳಿಗೂ
ಬೆಂಗಳೂರಿನಲ್ಲಿಯೇ ತಯಾರಾದ
ಬಹು ಸುಂದರವಾದ
ಗೊಂಬೆಗಳಿಗೂ
'ಬಿ' ಬ್ಲಾಕ್
23, 24, 25ನೇ ಅಂಗಡಿ
ಜನತಾ ಬಜಾರ್
ಅಂಗಡಿಗೆ ದಯಮಾಡಿ ಭೇಟಿ ಕೊಡಿ

ಟ: ೧೩] SADHVI : SATURDAY 20—10—1956 ಮೈಸೂರು : ಶನಿವಾರ ೨೦—೧೦—೧೯೫೬ [ಸಂಚಿಕೆ : ೭೬

ಪಾನ್ ಮತ್ತು ರಷ್ಯಾಗಳಿಗೆ ಪುನಃ ರಾಜತಂತ್ರ ಸಂಬಂಧ

ಷ್ಯಾ ಮತ್ತು ಜಪಾನುಗಳಿಗೆ ಒಪ್ಪಂದ

ರಸ್ಪರ ರಾಜತಾಂತ್ರಿಕ ಸಂಬಂಧ

ಮತ್ತು ಜಪಾನುಗಳಿಗೆ ಯುದ್ಧ ಪರಿ ... ಮತ್ತು ಪರಸ್ಪರ ರಾಜತಾಂತ್ರಿಕ ಸಂ ... ಒಪ್ಪಂದವಾಗಿರುತ್ತದೆ ಈ ಬಗ್ಗೆ ರಷ್ಯ ... ಬುಲ್ಗಾನಿನ್ ಮತ್ತು ಜಪಾನಿನ ಪ್ರ ... ಹಟೋಯಾಮಾರವರು ಜಂಟಿ ... ಹೇಳಿಕೆ ನೆನ್ನೆ ಪ್ರಕಟ ಮಾಡಿರುತ್ತಾರೆ ಇದ ... ರ, ಕುರೈಲ್ ಸಮುದ್ರದಲ್ಲಿರುವ ಹಬೊ ... ಮತ್ತು ಶಿಕೋಟಾನ್ ಎಂಬ ದ್ವೀಪಗಳ ... ನಿಗೆ ವಾಪಸು ಕೊಡಲು ರಷ್ಯವು ಒ ... ಉಭಯ ರಾಷ್ಟ್ರಗಳ ನಡುವೆ ರಾಜತಾಂ ... ಸಂಬಂಧವನ್ನು ಕಲ್ಪಿಸಿ ವಾಯುಮಾರ್ಗ ... ಯಕ್ಕೆ ಅವಕಾಶ ಕಲ್ಪಿಸಲಾಗಿದೆ ಉಭ ... ವ್ಯಾಪಾರ ಮತ್ತು ನೌಕಾಯಾನ ಸಂಬಂಧವನ್ನು ಇಟ್ಟುಕೊಳ್ಳಲು ಉದ್ದೇ ... ರಷ್ಯದಲ್ಲಿರುವ ಎಲ್ಲಾ ಜಪಾನು ನಾಗರಿ ... ವಾಪಸು ಕಳುಹಲಾಗುವುದು

ವಿದ್ಯಾಲಯಕ್ಕೆ ಸ್ವತಂತ್ರ ಆಡಳಿತಾಧಿಕಾರ

ಸನ ಸಭೆಯಲ್ಲಿ ಮಸೂದೆಯು ಅಂಗೀಕಾರ

ಬೆಂಗಳೂರು ೨೦

ರು ವಿಶ್ವವಿದ್ಯಾಲಯದ ಮಸೂದೆಯನ್ನು ... ವಿಧಾನ ಸಭೆಯು ಅಂಗೀಕರಿಸಿತು ... ಚರ್ಚೆ ಮತ್ತು ಪರಿಶೀಲನೆಗೆ ಹೋ ...

ಮುಂದೆ ಪ್ರೊಫೆಸರುಗಳು ಮತ್ತು ... ನೇಮಕವು ಸರ್ಕಾರಕ್ಕೆ ಸೇರುವುದಿಲ್ಲ ವಿಶ್ವವಿದ್ಯಾಲಯದ ಅಧಿಕಾರಿಗಳೇ ಸ್ವ ... ನೇಮಿಸಿಕೊಳ್ಳಬಹುದೆಂದೂ ವಿದ್ಯಾ ... ಗಳು ತಿಳಿಸಿದರು. ಮುಂದೆ ಸರ್ಕಾರದ ... ಬಯಸ್ಸಿದೆ ವಿಶ್ವವಿದ್ಯಾಲಯದ ಕೆಲಸಗಳ ... ಸಲು ಉದ್ದೇಶಿಸಲಾಗಿದೆ ... ಸೂರು ವಿಶ್ವವಿದ್ಯಾಲಯದ ವೈಸ್ ಚಾ ... ನ್ನು ಸ್ಥಾನಪತಿಗಳು ನೇಮಿಸಬೇಕೆಂದೂ, ... ಡದ ಕರ್ನಾಟಕದ ವಿಶ್ವವಿದ್ಯಾಲಯದ ... ನ್ಸಲರನ್ನು ಚುನಾಯಿಸಬೇಕೆಂದೂ ... ಯಲ್ಲಿ ಸೂಚಿಸಲಾಗಿದೆ

ಬೆಂಗಳೂರು ಕೆಂಗೇರಿ ಬಳಿ ರೈಲು ಇಂಜನ್ ಕಂಬಿ ತಪ್ಪಿತು

ಳೂರು-ಕೆಂಗೇರಿ ನಡುವೆ ನೆನ್ನೆ ರಾತ್ರಿ ... ಗಿ ಹೋಗುತ್ತಿದ್ದ ಇಂಜನ್ನೊಂದು ಕಂ ... ಸಂಚಾರಕ್ಕೆ ಅಡಚಣೆಯುಂಟಾಯಿತು ... ಬೆಳಿಗ್ಗೆ ರಸ್ತೆಯನ್ನು ಸರಿಪಡಿಸಲಾಯಿ ... ನ್ನೆ ರಾತ್ರಿ ಮೈಸೂರಿನಿಂದ ಹೊರಟ ಪ್ಯಾ ... ಗಾಡಿಯ ಪ್ರಯಾಣಿಕರನ್ನು ಕೆಂಗೇರಿ ... ಬಸ್ಸುಗಳಲ್ಲಿ ಬೆಂಗಳೂರಿಗೆ ಸಾಗಿಸಲಾ ... ರಾತ್ರಿ ಬೆಂಗಳೂರಿನಿಂದ ಮೈಸೂರಿಗೆ ... ಬೇಕಾಗಿದ್ದ ಪ್ಯಾಸೆಂಜರ್ ರೈಲು ಇಂದು ... ಹೊರಟು ೧೧ ಗಂಟೆಗೆ ಮೈಸೂ ... ಲುಪಿತು ಮೇಲ್ ಗಾಡಿಯು ೧ ಗಂಟೆ ... ಯಾವ ವಿಪರೀತ ನಷ್ಟವೂ ಆಗ

ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭ

ಮೈಸೂರು ೨೦

ದಸರಾ ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭವು ಇದೇ ೨೮ನೇ ತಾರೀಖು ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರುವುದು

ಸಂಗೀತ ಕಛೇರಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಘಂಟೆಗೆ ಸದ್ವಿದ್ಯಾ ಶಾಲೆಯಲ್ಲಿ ಸಂ॥ ವಿ॥ ಗೌರಿ ಕುಪ್ಪುಸ್ವಾಮಿಯವರ ಸಂಗೀತವು ವಿ॥ ಎಸ್ ಮಹದೇವಪ್ಪನವರ ಪಿಟೀಲು ಮತ್ತು ಸಂ॥ ವಿ॥ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗದೊಡನೆ ಏರ್ಪಾಡಾಗಿದೆ

ಉಪನ್ಯಾಸ

ಸರಸ್ವತಿ ಪುರದಲ್ಲಿರುವ ಅಖಿಲ ಭಾರತ ಮಾಧ್ವ ಮಹಾಮಂಡಲ ವಿದ್ಯಾರ್ಥಿ ನಿಲಯದಲ್ಲಿ ನಾಳೆ ಸಂಜೆ ೬ ಘಂಟೆಗೆ ಮಹಾರಾಜಾಸ್ ಪ್ರೆಸಿಡೆನ್ಸಿ ಕಾಲೇಜಿನ ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಶ್ರೀ ವೆಂಕಟವರದಾಚಾರ್ಯರು "ಅವತಾರ ವ್ಯಾಸನ ಶ್ರೀ ಕೃಷ್ಣ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಸರ್ವರಿಗೂ ಸ್ವಾಗತವಿದೆ

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಿಗ್ಗೆ ಶ್ರೀಮತಿ ಎ ಕೆ ಸುಂದರಾಬಾಯಿಯವರಿಂದ ಸಂಗೀತ ಮತ್ತು ಶ್ರೀಮತಿಯರಾದ ಕೆ ಆರ್ ನಾಗರತ್ನಮ್ಮ ಮತ್ತು ಕೆ ಆರ್ ಶಾಂತಾರವರಿಂದ ದೇವರನಾಮಗಳೂ ಸಂಜೆ ಶ್ರೀ ಪಿ ಮಹದೇವಯ್ಯನವರಿಂದ ಜನಪದ ಗೀತೆ, ಹಕಟೆ, ಗ್ರಾಮಸ್ಥರಿಂದ ಕೈಗೊಂಬೆ ಆಟ, ವಿ॥ ಚೂಡಾಮಣಿಯವರಿಂದ ಸಂಗೀತ ಮತ್ತು "ಸತ್ಯಾಗ" ಮತ್ತು "ಶ್ರೀ ಸೋಮನಾಥ" ಎಂಬ ನಾಟಕಗಳೂ ಏರ್ಪಾಡಾಗಿವೆ

ಭಾರತ ವಾಚನ ಮತ್ತು ವಿವಿಧ ವೇಷ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹುಮಾನ

ದಸರಾ ವಸ್ತು ಪ್ರದರ್ಶನದಲ್ಲಿ ಏರ್ಪಾಡಾಗಿದ್ದ ಭಾರತ ವಾಚನ ಸ್ಪರ್ಧೆಯಲ್ಲಿ ಶ್ರೀ ಆರ್ ಎನ್ ಶಾಂತಾನಾರ್ಥ, ಶ್ರೀಮತಿಯರಾದ ಹೆಚ್ ಜಾನಕಿ ಮತ್ತು ಜಯಲಕ್ಷ್ಮಿಯವರಿಗೆ ಮೊದಲಿನ ೩ ಬಹುಮಾನಗಳೂ ಮತ್ತು ೧೦ ಜನರಿಗೆ ಪ್ರಶಸ್ತಿ ಪತ್ರಗಳೂ ದೊರೆತಿವೆ ನೆನ್ನೆ ನಡೆದ ವಿವಿಧ ವೇಷ ಸ್ಪರ್ಧೆಯಲ್ಲಿ ಶ್ರೀ ವಿ ಎ ಕೃಷ್ಣಮೂರ್ತಿ ಮತ್ತು ಪಾರ್ಟಿಯವರಿಗೆ ಶಕ್ತಿಪೂಜೆ ವೇಷಕ್ಕಾಗಿ ಪ್ರಥಮ ಬಹುಮಾನ, ಶ್ರೀ ಎಸ್ ಸುಬ್ರಹ್ಮಣ್ಯರಾಜೆ ಅರಸು ಮತ್ತು ಪಾರ್ಟಿಯವರಿಗೆ 'ವೀರಭದ್ರ' ವೇಷಕ್ಕಾಗಿ ದ್ವಿತೀಯ ಬಹುಮಾನ ಮತ್ತು ಮೂವರಿಗೆ ಪ್ರಶಸ್ತಿ ಪತ್ರಗಳು ಬಂದಿವೆ

ಭೂದಾನಕ್ಕೆ ೩೦ ಲಕ್ಷ ಎಕರೆ ಜಮೀನು

ವಿನೋಬಾರವರ ಭೂದಾನಯಜ್ಞಕ್ಕೆ ಇದುವರೆಗೆ ೩೦ ಲಕ್ಷ ಎಕರೆ ಜಮೀನು, ೧,೨೦೦ ಗ್ರಾಮಗಳು ದಾನವಾಗಿ ಬಂದಿವೆ ೪ ಲಕ್ಷ ಎಕರೆ ಜಮೀನನ್ನು ಹಂಚಲಾಗಿದೆ

ಜಿಲ್ಲಾಧಿಕಾರಿಗಳ ವರ್ಗಾವರ್ಗಿ

ಎಂ. ಎಸ್. ಶಂಕರರಾಯರು ಇನಾಂ ರದ್ದಿಯಾತಿ ಅಧಿಕಾರಿಗಳು

ಸ್ವಂ. ಸು ಪ್ರೋ॥] ಬೆಂಗಳೂರು ೨೦

ಜಿಲ್ಲಾಧಿಕಾರಿಗಳ ವರ್ಗಾವರ್ಗಿಯನ್ನು ಸರ್ಕಾರದವರು ಈ ರೀತಿ ಮಾಡಿರುತ್ತಾರೆ —

ತುಮಕೂರು ಜಿಲ್ಲಾಧಿಕಾರಿಗಳಾದ ಶ್ರೀ ಮಹಮದ್ ಅಹಮದ್‌ರವರು ಬೆಂಗಳೂರು ಪೌರಸಭಾ ಕಮಿಷನರು, ಮೈಸೂರು ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಶಂಕರರಾಯರು ಇನಾಂ ರದ್ದಿಯಾತಿ ಅಧಿಕಾರಿಗಳು, ಬೆಂಗಳೂರು ಪೌರಸಭಾ ಕಮಿಷನರ್ ಶ್ರೀ ಡಿ ಆರ್ ಚನ್ನರುದ್ರಯ್ಯನವರು ಮೈಸೂರು ಜಿಲ್ಲಾಧಿಕಾರಿಗಳು, ರಜದ ಮೇಲಿರುವ ಶ್ರೀ ಗೋಪಾಲರಾಜೆ ಅರಸ್‌ರವರು ಲ್ಯಾಂಡ್ ರಿಕಾರ್ಡ್ಸ್ ಸೂಪರಿಂಟೆಂಡೆಂಟರು ಮತ್ತು ಆ ಹುದ್ದೆಯಲ್ಲಿರುವ ಶ್ರೀ ಕೆ ನರಸಿಂಹಯ್ಯಂಗಾರ್ಯರು ತುಮಕೂರು ಜಿಲ್ಲಾಧಿಕಾರಿಗಳು

ಈಜಿಪ್ಟಿನ ಅಣೆಕಟ್ಟು ಯೋಜನೆಗೆ ರಷ್ಯದ ಸಾಲ

ಈಜಿಪ್ಟಿನಲ್ಲಿ ಅಸ್ವಾನ್ ಬಳಿ ಕಟ್ಟಬೇಕೆಂದಿರುವ ಭಾರಿ ಅಣೆಕಟ್ಟಿನ ಯೋಜನೆಗೆ ಬೇಕಾಗುವಷ್ಟು ಹಣವನ್ನು ರಷ್ಯವು ದೀರ್ಘಾವಧಿ ಸಾಲವಾಗಿ ಕೊಡಲಿರುವುದೆಂದು ಈಜಿಪ್ಟಿನ ಅಧ್ಯಕ್ಷ ನಾಸಿರ್‌ರವರು ತಿಳಿಸಿದ್ದಾರೆ ತಾವು ರಷ್ಯಕ್ಕೆ ಭೇಟಿ ಕೊಟ್ಟನಂತರ ಈ ಬಗ್ಗೆ ಅಂತಿಮ ನಿರ್ಧಾರವನ್ನು ಮಾಡಲಾಗುವುದೆಂದೂ ಅವರು ನುಡಿದಿರುವರು

ಮೋಹನಪ್ಪನವರು ನೂತನ ಮೈಸೂರಿನ ಐ.ಜಿ.ಪಿ.

ಆಂಧ್ರದ ಪೋಲೀಸು ಇನ್ಸ್‌ಪೆಕ್ಟರ್ ಜನರಲ್ಲರಾದ ಶ್ರೀ ಸಿ ಕೆ ಮೋಹನಪ್ಪನವರನ್ನು ನೂತನ ಮೈಸೂರಿನ ಪೋಲೀಸು ಇಲಾಖಾ ಮುಖ್ಯಾಧಿಕಾರಿಯಾಗಿ ನೇಮಿಸಲಾಗಿದೆಯೆಂದು ತಿಳಿದು ಬಂದಿದೆ ಅಲ್ಲಿನ ಡೆಪ್ಯುಟಿ ಐ ಜಿ ಪಿ ಯವರಾದ ಶ್ರೀ ಎ ಕೆ ಕೆ ನಂಬಿಯಾರರನ್ನು ಶ್ರೀ ಮೋಹನಪ್ಪನವರ ಸ್ಥಾನಕ್ಕೆ ನೇಮಕ ಮಾಡಲಾಗಿದೆ.

ನೂತನ ಸಂಸ್ಥಾನದ ಮುಖ್ಯ ಮಂತ್ರಿತ್ವ

ಕನ್ನಡ ಪ್ರದೇಶದ ಪ್ರತಿನಿಧಿಗಳ ಮಾತುಕತೆ

ಸ್ವಂ ಸು ಪ್ರೋ॥] ಬೆಂಗಳೂರು ೨೦

ನಾಳೆ ದಿನ ಆರಿಸಲ್ಪಡುವ ನೂತನ ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವದ ವಿಚಾರವಾಗಿ ಈ ದಿನ ಕನ್ನಡ ಪ್ರದೇಶಗಳ ನಾನಾ ಪ್ರತಿನಿಧಿಗಳು ಮಾತುಕತೆಗಳನ್ನು ನಡೆಸಿದರು ಬೊಂಬಾಯಿ ಮತ್ತು ಇತರ ಪ್ರದೇಶಗಳ ಮಂತ್ರಿಗಳು, ಕೆ ಪಿ ಸಿ ಸಿ ಅಧ್ಯಕ್ಷರು ಬೆಂಬಲಿಗರು ಮತ್ತು ಇತರರು ಆಗಮಿಸಿದ್ದಾರೆ ನಾಳೆ ನೂತನ ಸಂಸ್ಥಾನದ ಕಾಂಗ್ರೆಸ್ ಪಕ್ಷದ ಚುನಾವಣೆ ಬಗ್ಗೆಯೂ ಮಾತುಕತೆಗಳು ನಡೆಯುತ್ತಿರುವುದಾಗಿ ಗೊತ್ತಾಗಿದೆ

ಬೆಂಗಳೂರಿನಲ್ಲಿ ಮಳೆಯಿಂದ ೬ ಲಕ್ಷ ರೂ. ಆಸ್ತಿ ನಷ್ಟ

ವಿಧಾನ ಸಭೆಯಲ್ಲಿ ಆರೋಗ್ಯ ಸಚಿವರ ವಿವರಣೆ

ಸ್ವಂ ಸು ಪ್ರೋ॥] ಬೆಂಗಳೂರು ೨೦

ಈ ದಿನ ವಿಧಾನಸಭೆಯ ಪ್ರಶ್ನೋತ್ತರ ಕಾಲದಲ್ಲಿ ಸಚಿವ ಶ್ರೀ ಟಿ ಚನ್ನಯ್ಯನವರು ಮಾತನಾಡಿ, ಈ ನಗರದಲ್ಲಿ ಇತ್ತೀಚೆಗೆ ಆದ ಮಳೆಯಿಂದ ೪೫೦ ಮನೆಗಳೂ, ೨೦೦ ಗುಡಿಸಲುಗಳೂ ನಾಶವಾಗಿ, ಸುಮಾರು ೬ ಲಕ್ಷ ರೂ ಆಸ್ತಿ ನಷ್ಟವುಂಟಾಗಿದೆಯೆಂದೂ, ಪರಿಹಾರದ ವಿಚಾರವನ್ನು ಪರಿಶೀಲಿಸಲಾಗುತ್ತಿರುವುದಾಗಿಯೂ ಹೇಳಿದರು

ಅಧಿವೇಶನವು ಈ ದಿನ ಮುಕ್ತಾಯವಾಯಿತು

ವಿಧಾನ ಸಭಾಸದಸ್ಯರ ಬೀಳ್ಕೊಡುಗೆ

ಈ ದಿನ ಸಂಸ್ಥಾನ ವಿಧಾನ ಸಭೆಯ ಅಂತ್ಯದ ಅಧಿವೇಶನವು ನಡೆಯಿತು. ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ, ವಿರೋಧ ಪಕ್ಷದ ನಾಯಕ ಶ್ರೀ ಕೆ ಮಹಮುದ್ ಇಮಾಂ, ಶ್ರೀ ಹೆಚ್ ಕೆ ವೀರಣ್ಣಗೌಡ ಮತ್ತು ಸಭಾಧ್ಯಕ್ಷ ಶ್ರೀ ಹೆಚ್ ಎಸ್ ರುದ್ರಪ್ಪನವರು ಕೊನೆಗೊಳ್ಳಲಿರುವ ಈಗಿನ ಶಾಸನಸಭಾ ಸದಸ್ಯರಿಗೆ ಬೀಳ್ಕೊಡುಗೆಯ ಭಾಷಣ ಮಾಡಿದರು

ಹೊಸದಾಗಿ ರಚಿತವಾಗಲಿರುವ ಶಾಸನ ಸಭಾ ಸದಸ್ಯರನ್ನು ಮುಖ್ಯ ಮಂತ್ರಿಯವರು ಸ್ವಾಗತಿಸಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ನಾಗಸ್ವರ ೭-೧೫ ಬೌದ್ಧ ಸಾಹಿತ್ಯ ದರ್ಶನ ೭ ೩೦ ಮತ್ತು ೮ ೧೫ ಕೆ. ಎಸ್ ಇಂದಿರ-ದೇವರನಾಮ ೮ ೩೦ ಎ ಕೆ ಸುಬ್ಬರಾವ್-ಕೊಳಲು ೯ ೩೦ ಬಾಲಜಗತ್ ಮಧ್ಯಾಹ್ನ ೧೨ ಮತ್ತು ೬ ೧೫ ಸ್ವರ್ಣ ವಿಲೇ-ಸಂಗೀತ, ೨-೩೦ ವಾದ್ಯವೃಂದ ೧ ಸಿನಿಮಾ ಮೆಚ್ಚಿನ ಗೀತೆಗಳು ೧-೫೦ ವಿಶಾಲಂ ಕೃಷ್ಣ ಸಂಗೀತ ಸಂಜೆ ೫ ಪಾಶ್ಚಾತ್ಯ ಸಂಗೀತ ೫-೩೦ ಮತ್ತು ೯ ೩೦ ರಾಜಾರಾಂ ನಾಗಸ್ವರ ೬-೨೦ ಡಿ ಟಿ ಚಂದ್ರಶೇಖರ್ ಪಕ್ಷಿನೋಟ ೭ ಹೂಟೆಟ್ಟ ಹಣ ಆರ್ ಪಿ ಆರ್ ವಿಠಲ್ ೭ ೩೦ ಗಾಯನ ೯ ೧೫ ಚಿತ್ರ ಸಂಗೀತ ೧೦ ವಿಶಾಲಂ ಕೃಷ್ಣ ಸಂಗೀತ

೪೦ ಸಾವಿರ ರೂ. ನೋಟು ಗೆದ್ದಲ ಪಾಲು

ಚಿತ್ರದುರ್ಗದ ವ್ಯಾಪಾರಿಗಳಾದ ಶ್ರೀ ಸುಬ್ಬರಾಮಶೆಟ್ಟಿಯವರು ಎಷ್ಟು ಹಳೆಯ ಕಬ್ಬಿಣದ ಪೆಟ್ಟಿಗೆಯೊಂದರಲ್ಲಿ ೪೦ ಸಾವಿರ ರೂ ಗಳ ನೋಟುಗಳನ್ನು ಇಟ್ಟಿದ್ದರೆಂದೂ, ಆ ಪೆಟ್ಟಿಗೆಯಲ್ಲಿದ್ದ ರಂಧ್ರವೊಂದರ ಮೂಲಕ ಗೆದ್ದಲು ಹುಳು ಒಳಕ್ಕೆ ಹರಿದು ಗೆದ್ದಲಿಗೆ ದಾರಿ ಮಾಡಿಕೊಟ್ಟಿತೆಂದೂ, ಇದರಿಂದ ನೋಟುಗಳೆಲ್ಲವೂ ಗೆದ್ದಲು ಪಾಲಾದವೆಂದೂ ವರದಿಯಾಗಿದೆ

○ ನಿವೃತ್ತ ವಿದ್ಯುಚ್ಛಕ್ತಿ ಸೂಪರಿಂಟೆಂಡೆಂಟರಾದ ಶ್ರೀ ಸಿ ಆರ್ ಗೌಡರು ಕಳೆದ ಬುಧವಾರ ತಮ್ಮ ೭೭ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ

ಹಿಂದೂ ಧರ್ಮದ ರಕ್ಷಣೆಗಾಗಿ ಶಂಕರಾಚಾರ್ಯರ ಕರೆ

ವಿದೇಶೀಯರ ಮತಾಂತರ ಚಳುವಳಿಯನ್ನು ತಡೆಗಟ್ಟಲು ಸೂಚನೆ

ಕಾಮಕೋಟಿ ಪೀಠದ ಅಧ್ಯಕ್ಷರಾದ ಜಗದ್ಗುರು ಶಂಕರಾಚಾರ್ಯರು ಕಳೆದ ೧೩ನೇ ತಾರೀಕು ವಿಜಯದಶಮಿ ದಿನ ಕಂಚಿ ಬಳಿ ಅಂಬಿ ಎಂಬಲ್ಲಿ ಉಪದೇಶ ಭಾಷಣ ಮಾಡಿ, ಹಿಂದೂಗಳು ಅನ್ಯ ಮತದ ಪ್ರಚಾರಕ ಚಳುವಳಿಯ ವಿರುದ್ಧ ಸಂಘಟಿತರಾಗಿ ಶಾಂತ್ಯಾಚರಣೆ ನಡೆಸಬೇಕೆಂದು ತಿಳಿಸಿದರು ವಿದೇಶೀ ನೆರವಿನಿಂದ ನಡೆಯುತ್ತಿರುವ ಚಳುವಳಿಯಿಂದ ಹಿಂದೂ ಧರ್ಮಕ್ಕೆ ಹೆಚ್ಚಿನ ಹಾನಿಯೆಂದೂ, ಹಣವು ಏನು ಬೇಕಾದರೂ ಮಾಡುವುದೆಂದೂ ಅವರು ತಿಳಿಸಿ ಹಿಂದೂ ಧರ್ಮವನ್ನು ಒಡೆಯಲು ವಿದೇಶೀ ಮೂಲಗಳಿಂದ ೯ ಕೋಟಿ ರೂ ಗಳನ್ನು ಒದಗಿಸಿರುವುದಾಗಿ ತಿಳಿದುಬಂದಿದೆಯೆಂದು ಹೇಳಿದ್ದಾರೆ

ಭಾರತದಲ್ಲಿ ಸಮಾಜವಾದಿ ಸಮಾಜವೆಂಬ ತತ್ವದ ಕಾರಣದಿಂದ ವೈಯಕ್ತಿಕ ಆಸ್ತಿಪಾಸ್ತಿಗಳ ಮೂಲವನ್ನು ಕುಂಠಿತಗೊಳಿಸಲಾಗಿದೆಯೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ ಜಾತ್ಯತೀತ ರಾಜ್ಯದಲ್ಲಿ ಯೋಗಕ್ಷೇಮ ರಾಷ್ಟ್ರದ ಹೆಸರಿನಲ್ಲಿ ೭,೦೦೦ ದೇವಾಲಯಗಳಿಗೆ ದಿನಕ್ಕೆ ೧ ಹೊತ್ತು ಪೂಜೆಗಾದರೂ ಇರುವ ಆಸ್ತಿಯನ್ನು ಕಿತ್ತುಕೊಳ್ಳಲಾಗಿದೆಯೆಂದು ಅವರು ಸೂಚಿಸಿದರು ಹಿಂದೂ ಧರ್ಮವು ರಕ್ಷಕ ರಹಿತ ಮತ್ತು ರಕ್ಷಣಾ ರಹಿತವಾಗಿರುವುದೆಂದೂ, ಅದನ್ನು ಕಾಪಾಡಲು ಪ್ರಜೆಗಳಿಗೆ ಯಾವ ಸಹಾಯ ಸಂಪತ್ತು ಇಲ್ಲದೆ ಹೋರಾಡಬೇಕಾಗಿದೆಯೆಂದೂ ತಿಳಿಸಿ ದುರ್ಗಾ ಮಾತೆಯು ಈ ಕಾರ್ಯದಲ್ಲಿ ಮಾರ್ಗ ದರ್ಶನ ಮಾಡುವಳೆಂದು ಹೇಳಿದರು

ಜನಸಂಘದ ಸರ್ವಸದಸ್ಯರ ಸಭೆ

ಜನಸಂಘದ ಮೈಸೂರು ಶಾಖೆಯ ಸರ್ವ ಸದಸ್ಯರ ಸಭೆಯು ನಾಳೆ ಬೆಳಿಗ್ಗೆ ೧೧ ಗಂಟೆಗೆ ಸಂಘದ ಕಛೇರಿಯಲ್ಲಿ ನಡೆಯುತ್ತದೆ ಎಲ್ಲಾ ಸದಸ್ಯರೂ ಬರಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ವಸ್ತು ಪ್ರದರ್ಶನದಲ್ಲಿ ಸಿರಿಭೂವಲಯದ ಪ್ರದರ್ಶನ

ದಸರಾ ವಸ್ತು ಪ್ರದರ್ಶನದ ಮಹಡಿ ಮೇಲೆ ಸಿರಿಭೂವಲಯದ ಗ್ರಂಥವನ್ನು ಪ್ರದರ್ಶನಕ್ಕಾಗಿ ಇಡಲಾಗಿದೆ ಈ ಗ್ರಂಥದಲ್ಲಿ ಜಗತ್ತಿನ ವಿಚಾರಗಳೆಲ್ಲವೂ ಅಡಕವಾಗಿರುವವೆಂದು ಹೇಳಲಾಗಿದೆ ಪ್ರೇಕ್ಷಕರು ಇವನ್ನು ತಪ್ಪದೆ ನೋಡಬೇಕೆಂದು ಕೋರಲಾಗಿದೆ

ಬಡಬಗ್ಗರಿಗೆ ಅನ್ನದಾನ

ಮೈಸೂರು ನೂರಡಿ ರಸ್ತೆ ಧರ್ಮ ಪ್ರವರ್ತಕ ಹೊಂಬಾಳೆ ರಂಗಯ್ಯನವರ ಬಾಲಕರ ಉಚಿತ ವಿದ್ಯಾರ್ಥಿನಿಲಯದ ಮುಂದೆ ಕಳೆದ ಶನಿವಾರ ದಸರ ಸಮಯದಲ್ಲಿ ೭೦೦ಕ್ಕೂ ಮೀರಿ ೧೧ ಮಂದಿಗೆ ಅನ್ನ, ಪಾಯಸ ವಡೆ, ಮುಂತಾದ ಭಕ್ಷ್ಯಗಳನ್ನು ಮಾಡಿಸಿ ದಂಪತಿಗಳಿಬ್ಬರೂ ಸೇರಿ ಅನ್ನದಾನ ಮಾಡಿದರು

ELECTRIC MOTOR FOR SALE

½ H P Moto 50 Cycles 1440 R P M 220 Volts Cost about Rs 100 Enquire —

Young India Electrical Winding Works,
Gandhi Square Mysore

ಶುಚಿ ಮತ್ತು ರುಚಿ !

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್

ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ

ಪ್ರತಿ ಭಾನುವಾರದ

ಸ್ಪೆಷಲ್ ಪೊಟೆಟೊ ಬ್ರೆಡ್

ಶ್ರೀ ಕೃಷ್ಣಾ ಬೇಕರಿ,

ಡಿ ಸುಬ್ಬಯ್ಯಾ ರೋಡ್ ಮೈಸೂರು
(ನಮ್ಮ ಅಂಗಡಿಯ ಹೊರತು ಬೇರೆ ಎಲ್ಲೂ ಶಾಖೆಯಿಲ್ಲ)

ನವೆಂಬರಿನಿಂದ ಮೈಸೂರು ತಲಚೇರಿ ರೈಲು ಸರ್ವೆ

ನವೆಂಬರ್ ತಿಂಗಳಲ್ಲಿ ಮೈಸೂರು ತಲಚೇರಿ ರೈಲು ರಸ್ತೆ ಸರ್ವೆಯನ್ನು ಕೈಗೊಳ್ಳಲಾಗುವುದೆಂದೂ, ದ್ವಿತೀಯ ಯೋಜನೆಯ ಎರಡು ವರ್ಷಗಳಲ್ಲಿ ಬೇರಾವ ಹೊಸ ಮಾರ್ಗ ನಿರ್ಮಾಣದ ಯೋಜನೆಯೂ ಇಲ್ಲವೆಂದೂ ರೈಲ್ವೆ ಮಂತ್ರಿ ಲಾಲ್ ಬಹದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ

ದೆಹಲಿಯಲ್ಲಿ ಅಂತರ ವಿಶ್ವವಿದ್ಯಾನಿಲಯದ ಯುವಜನೋತ್ಸವ

ದೆಹಲಿಯಲ್ಲಿ ಬರುವ ೨೨ ನೇ ತಾರೀಕಿನಿಂದ ೨೮ ರವರೆಗೆ ಅಂತರ ವಿಶ್ವವಿದ್ಯಾನಿಲಯದ ಯುವಜನೋತ್ಸವವು ನೆರವೇರುವುದು. ನೆಹರೂರವರು ಅದರ ಉದ್ಘಾಟನೆ ಮಾಡಲಿರುವರು ೩೧ ವಿಶ್ವವಿದ್ಯಾಲಯಗಳ ಒಟ್ಟು ೧೬೦೦ ಮಂದಿ ವಿದ್ಯಾರ್ಥಿಗಳು ಅದರಲ್ಲಿ ಭಾಗವಹಿಸುವರು

೩ ಕರುಗಳ ಜನನ

ಉಸ್ಮಾನಿಯ ಗೌಹಾತಿ ನಗರಕ್ಕೆ ಸ್ವಲ್ಪ ದೂರವಿರುವ ಮಂಗಲದಾಯಿ ಎಂಬಲ್ಲಿ ಹಸುವೊಂದು ಮೂರು ಕರುಗಳನ್ನು ಹಾಕಿರುವುದು ಎಲ್ಲ ಕರುಗಳೂ ಆರೋಗ್ಯವಾಗಿವೆ

೩೨೦ ರೂ ಸಂಬಳದ ನೌಕರರಿಗೂ ತಾತ್ಕಾಲಿಕ ಪರಿಹಾರ

ಸರ್ಕಾರದವರು ಕಳೆದ ಆಗಸ್ಟಿನಿಂದ ಸಂಸ್ಥಾನದ ಎನ್ ಜಿ ಓ ಗಳಿಗೆ ಕೊಡಲಿರುವ ತಾತ್ಕಾಲಿಕ ಪರಿಹಾರವು ೩೨೦ ರೂ ತಲಬು ಪಡೆಯುವವರಿಗೂ ದೊರೆಯುವುದೆಂದು ಗೊತ್ತಾಗಿದೆ

ಧರ್ಮೋಪದೇಶ

ಕೃಷ್ಣರಾಜ ಮೊಹಲ್ಲಾ ಸೊಪ್ಪಿನಕೋಳದ ಬೀದಿಯಲ್ಲಿರುವ ಶ್ರೀ ಪ್ರಸನ್ನ ಪ್ರಾಣ ದೇವರ ಗುಡಿಯಲ್ಲಿ ಕಳೆದ ಭಾನುವಾರ ವಿಜಯದಶಮಿ ದಿನ ದೇವಸ್ಥಾನದ ಕಾರ್ಯದರ್ಶಿ ಶ್ರೀ ತೆಕ್ಕಲೂರು ಸುಬ್ಬಣ್ಣಾಚಾರ್ಯರು ಮತ್ತು ಭಕ್ತಾದಿಗಳು ಲಕ್ಷ್ಮಣ ಎಂಬ ವಟುವಿಗೆ ಧರ್ಮೋಪದೇಶವನ್ನು ನೆರವೇರಿಸಿದರು ದೇವಸ್ಥಾನದಲ್ಲಿ ಮಾಮೂಲಿನಂತೆ ನಡೆಯುವ ಸತ್ಯನಾರಾಯಣ ಪೂಜೆಯಲ್ಲಿ ಭಕ್ತಾದಿಗಳು ಭಾಗವಹಿಸುವಂತೆ ಕಾರ್ಯದರ್ಶಿಯವರು ಕೋರಿರುತ್ತಾರೆ.

ಹರಿಕಥಾ ವಿದ್ವಾಂಸರಿಗೆ ಸನ್ಮಾನ

ವಿದ್ಯಾರಣ್ಯಪುರದಲ್ಲಿರುವ ಶ್ರೀ ಕೃಷ್ಣಾನಂದೇಶ್ವರ ಮಠದ, ಸನಾತನ ಧರ್ಮೋದ್ಧಾರಿಣೀ ಸಭೆಯಲ್ಲಿ ನವರಾತ್ರಿಯಲ್ಲಿ ನಡೆಸಲಾದ ಹರಿಕಥೆಗಾಗಿ ಕಳೆದ ೧೪ನೇ ತಾರೀಕು ವಿ|| ಗೋವಿಂದಾಚಾರ್ಯರಿಗೆ ಮಹಾಜನರು ಸನ್ಮಾನ ಮಾಡಿರುತ್ತಾರೆ

ಮೈಸೂರು ಪೇಟೆ ಧಾರಣೆ

ಕಲ್ಲುಹೂಡಿ	೩೧	೮	೦			
ಬಂಗಾರ ಸಣ್ಣ	೩೯	೦	೦	೩೮	೦	೦
ಸಾರು	೨೮	೧೨	೦			
ಜೋಳ	೩೫	೪	೦	೩೬	೬	೦
ರಾಗಿ	೨೭	೪	೦	೩೩	೧೦	೦
ನವಣೆ	೨೪	೦	೦			
ಕಡಲೆ	೨೫	೮	೦	೨೬	೧೪	೦
ಕಡಲೆಕಾಯಿ	೯	೨	೦	೨೨	೦	೦
ಎಳ್ಳು	೮೪	೮	೦	೮೬	೧೨	೦
ಹರಳುಬೀಜ	೪೫	೧೪	೦			
ಹುರುಳಿ	೨೪	೧೨	೦	೨೬	೦	೦
ಧನಿಯ	೨೬	೦	೦	೨೭	೦	೦
ಹಲಸಂದೆ	೫೪	೦	೦	೬೧	೧೨	೦
ಗೋಡಂಬೀಜ	೩೭	೨	೦			
ಹುಣಿಸೇಹಣ್ಣು	೩	೮	೦	೫	೯	೦
ಮೆಣಸಿನ ಬು	೧೫	೦	೦	೨೬	೧೨	
ತೆಂಗಿನಕಾಯಿ ೧೦೦೦	೯೫	೦	೦	೨೧೬	೦	೦

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂಪ್ರಿಂಟ್

ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್ ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದಕ್ಕೂ

ಗಾಯತ್ರಿ ಟಾಕೀಸ್ ಎದುರು

ಹೈಟ್ ತೆರೆಟ್ಟಂಬ ನ

ಬಿ ಮುನಿಸ್ವಾಮಪ್ಪ,

ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್

ಇವರಲ್ಲಿ ವಿಚಾರಿಸಿರಿ

ಪ್ರವಾಹದಲ್ಲಿ ತೇಲಿಬಂದ ಕೊಪ್ಪರಿಗೆಯಲ್ಲಿ ಮಕ್ಕಳು !

ಒರ್ಗಾಂವ್ರಂತದ ೮೦ ಮೈಲಿ ದೂರದ ಲಪುರ ಎಂಬ ಹಳ್ಳಿಯ ಜನರು ಪ್ರವಾಹದಲ್ಲಿ ತೇಲಿಬರುತ್ತಿದ್ದ ಭಾರಿ ಕಬ್ಬಿಣದ ಕೊಪ್ಪರಿಗೆಯನ್ನು ವಶಪಡಿಸಿಕೊಳ್ಳಲಾಗಿ ಅದರೊಳಗೆ ೫ ರಿಂದ ೬ ವರ್ಷದೊಳಗಿನ ಆರು [illegible] ಕಂಡು ಬಂದು ಅವರಿಗೆ [illegible] ಯಿತು ಮಕ್ಕಳು ಉಪವಾಸದಿಂದ ನರಳುತ್ತಿದ್ದರೂ ಜೀವಂತವಾಗಿದ್ದವು ಕಳೆದ ೮ ನೇ ತಾರೀಕು ಶ್ಯಾಮಪುರ ಎಂಬಲ್ಲಿಗೆ ಪ್ರವಾಹ ಬಂದು ಭೀತಿಗೊಂಡ ತಾಯಿ ತಂದೆಗಳು ಮಕ್ಕಳನ್ನು ಕಾಳುಕಡ್ಡಿ ಹಾಕುವ ಕೊಪ್ಪರಿಗೆಯಲ್ಲಿಟ್ಟು ಒಂದು ಮರಕ್ಕೆ ಕಟ್ಟಿದ್ದರೆಂದೂ, ಅದು ಕಳಚಿಕೊಂಡು ಮುಂದೆ ಸಾಗಿತೆಂದೂ ೨|| ದಿನಗಳನಂತರ ಮಂಡಲಪುರದವರಿಗೆ ಅದು ಸಿಕ್ಕಿತೆಂದೂ ವರದಿಯಾಗಿದೆ

ದೆಹಲಿಯಲ್ಲಿ ವಿಶ್ವ ಗರ್ಲ್ ಗೈಡು ಕಮಿಷನರುಗಳ ಸಮ್ಮೇಳನ

ದೆಹಲಿಯಲ್ಲಿ ಇದೇ ತಿಂಗಳು ೨೨ರಂದು ವಿಶ್ವದ ಗರ್ಲ್ ಗೈಡು ಕಮಿಷನರುಗಳ ದ್ವಿತೀಯ ಅಧಿವೇಶನವು ಸೇರುವುದು ಪ್ರಧಾನಿ ನೆಹರೂರವರು ಅದರಲ್ಲಿ ಭಾಗವಹಿಸುವರು ಏಷ್ಯಾದಲ್ಲಿ ಈ ಸಮ್ಮೇಳನವು ನಡೆಯುವುದು ಇದೇ ಮೊದಲು

ಪ್ರಜಾಮಂಡಲದ ಬಹಿರಂಗ ಸಭೆ

ನಾಳೆ ಸಂಜೆ ೬ ಘಂಟೆಗೆ ಟೌನ್ ಹಾಲ್ ಮೈದಾನದಲ್ಲಿ ನಗರದ ಪ್ರಜಾಮಂಡಲಿಯವರು ಪ್ರಚಲಿತ ವಿಷಯಗಳ ಬಗ್ಗೆ ಬಹಿರಂಗ ಸಭೆಯನ್ನು ಕರೆದಿರುತ್ತಾರೆ ಸರ್ವರೂ ಸಹಕರಿಸಬೇಕಾಗಿ ಸಂಚಾಲಕರು ಕೋರಿರುತ್ತಾರೆ

ವೆಂಕಟಕೃಷ್ಣಯ್ಯ ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ

ನಗರದ ಮಹಾರಾಜಾ ಕಾಲೇಜಿನ ವಿಶ್ವವಿದ್ಯಾಲಯ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ಬರುವ ತಿಂಗಳು ೧೪ನೇ ತಾರೀಕು ನೆಹರೂರವರ ಜನ್ಮದಿನದಂದು ದಿವಂಗತ ವೃದ್ಧ ಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಸ್ಮಾರಕ ಅಖಿಲ ಕರ್ನಾಟಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಪ್ರವೇಶ ಧನ ೬ ರೂ ನೊಡನೆ ಈ ತಿಂಗಳು ೨೫ರೊಳಗೆ ವಿವಿಧ ಕಾಲೇಜುಗಳ ಇಬ್ಬಿಬ್ಬರು ಪ್ರತಿನಿಧಿಗಳ ಹೆಸರನ್ನು ಸೂಚಿಸುವಂತೆ ತಿಳಿಸಲಾಗಿದೆ

ಗುಂಡ್ಲುಪೇಟೆಯಲ್ಲಿ ಹಿಂದೀ ತರಗತಿಗಳು

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯವರು ಬರುವ ಫೆಬ್ರವರಿಯಲ್ಲಿ ನಡೆಸುವ ಪ್ರಾಥಮಿಕ ಮಾಧ್ಯಮ, ರಾಷ್ಟ್ರ ಭಾಷಾ ಮತ್ತು ಪ್ರವೇಶಿಕಾ ಪರೀಕ್ಷೆಗಳಿಗೆ ತರಗತಿಗಳನ್ನು ಇಲ್ಲಿನ ಹಿಂದೀ ಪ್ರಚಾರ ಮಂದಿರದಲ್ಲಿ ಇದೇ ೩೦ ನೇ ತಾರೀಕಿನಿಂದ ಪ್ರಾರಂಭಿಸಲಾಗುತ್ತದೆ ಸೇರಬಯಸುವವರು ವಿವರಗಳನ್ನು ಪ್ರಚಾರಕರಲ್ಲಿ ತಿಳಿಯಬಹುದು

ವುಡ್ ಲ್ಯಾಂಡ್ಸ್

19-10-56 ರಿಂದ ಯಶಸ್ವೀ 4ನೇ ವಾರ

ನಾರಾಯಣ್ ಕಂಪೆನಿಯವರ ಹಿಂದಿ ಚಿತ್ರ

— ದೇವ್ ತಾ —

ಪಾತ್ರ ಅಂಜಲಿದೇವಿ, ಜೆಮಿನಿ ಗಣೇಶ್ ಧೀರ್ ಗುಪ್ತ, ಆಗಾ, ನಂಬಿಯಾರ್ ಸೈಯದಂತಪಾತಾ ಮತ್ತು ಕುಮಾರ ಕಮಲಾ. ರವರ ಮನಮೋಹಕವಾದ ನರ್ತನಾಂಚಿತ ನೃತ್ಯಗಳು

ನೂತನ ಸಂಸ್ಥಾನದ ಉದಯೋತ್ಸವ

ನೂತನ ಮೈಸೂರು ಸಂಸ್ಥಾನದ ಉದಯದ ಸಂಬಂಧವಾಗಿ ಸಂಸ್ಥಾನದ ಸಂಗೀತ ನಾಟಕ ಅಕಾಡೆಮಿಯವರು ೫ ದಿನಗಳ ಕಾಲ ಹಬ್ಬವನ್ನು ವಿಜೃಂಭಣೆಯಿಂದ ನೆರವೇರಿಸಲಿರುವರು ನವೆಂಬರ್ ೧ ರಿಂದ ಪ್ರಾರಂಭವಾಗುವ ಈ ಹಬ್ಬದಲ್ಲಿ ಉತ್ತಮ ಕಲಾವಿದರಿಂದ ನೃತ್ಯ, ನಾಟಕ ಮತ್ತು ಸಂಗೀತ ಕಾರ್ಯಕ್ರಮಗಳು ನಡೆಯುವುವು ಶಿರಸಿ ಮಂಗಳೂರು ಗುಲ್ಬರ್ಗ ಧಾರವಾಡ ಮತ್ತು ಮಡಕೇರಿಗಳಲ್ಲೂ ಇದೇ ರೀತಿಯ ಉತ್ಸವಗಳು ಜರುಗುವುವು

SREE GANESH
TALKIES
TRIUMPHANT 2nd WEEK
FROM TO-DAY

ULYSSES
(Technicolor)
Starring Kirk Douglas and
Sylvana Mangano

SRI GAYATHRI
TALKIES
From 20 10 56 For 3 days
M G M's Powerful Adventurous
Picture
(Cinemascope & Technicolor)
MOON FLEET
Starring Stewart Granger and
George Sanders

Morning Show On Sunday
OUT LAW

ದೇವತಾರ್ಚನೆಗೆ

ಮೈಸೂರು ಎಂ ಆರ್ ಚೆಟ್ಟಪ್ಪನವರ

ಸ್ಪೆಷಲ್ ಪ್ರೇಮಲೀಲಾ

ಅಗರಬತ್ತಿಗಳನ್ನೇ

ಉಪಯೋಗಿಸಿರಿ

ಇಂದೇ ಭೇಟಿ ಮಾಡಿ —

ವಸ್ತು ಪ್ರದರ್ಶನದ A ಬ್ಲಾಕು,
ಸ್ಟಾಲ್ ನಂಬರ್ 14

SRI RAMAKRISHNA VIDYASHALA
Vani Vilas Mohalla
MYSORE
WANTED

A trained Secondary grad Resident Teacher for Middl School on a permaner vacancy

Pay according to Govern nent scales with D A. a Rs 15 P M

The starting salary wi depend on the experience the candidate and his qualif cations, especially in ext curricular activities

Apply before 31st October

Preside

Edited, Printed and Published b
A R Nagarajan at Sadhvi Pre
D Subbaiah Road, Mysore

ಪ್ರಭಾ ★ ಆಕರ್ಷಣೀಯ 4ನೇ ವಾರ - ನೂರಾರು ಜನರ ಪಕ್ಷದಲ್ಲಿ
ಆದರ್ಶ ತರುಣಿಯ ಶುದ್ಧವಾದ ಪ್ರೇಮವು ಶಿವಶಕ್ತಿಯನ್ನೇ ಗೆಲ್ಲ
ಬಹುದು-ಎಂಬುದನ್ನು ಮನಮುಟ್ಟುವಂತೆ ವಿವರಿಸುವ ಪೌರಾಣಿಕ ಚಿ

ಬಿ ಸರೋಜಾದೇವಿ, ಅಶ್ವಥ್, ಸಂಪತ್, ಲೀಲಾ, ವಿದ್ಯಾ, ಪಾರ್ವತಿ, ನಿರಂಜನ್,
ಮಾ|| ಹಿರಣ್ಣಯ್ಯ, ಗಿರಿಮಾಜಿ ಮುಂತಾದವರು ಪಾತ್ರವಹಿಸಿರುವ

- ಕಚ-ದೇವಯಾನಿ -

ವಿವರಗಳಿಗೆ — ನಂದೀಪಿಕ್ಚರ್ಸ್ — ಬೆಂಗಳೂರು 9

ಇಂದೇ ಬಂದು ನೋಡಲು ಮರೆಯಬೇಡಿರಿ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬ್ರಾಂಕಾಲ್
ಉಬ್ಬಸ ಮತ್ತು ಕೆಮ್ಮು
ರೋಗಗಳಿಗೆ [illegible]
ಮೈಸೂರು ಸಂಸ್ಥಾನ ಮತ್ತು
[illegible] ಪ್ರದೇಶಗಳಿಗೆ
ಏಜೆಂಟರು
[illegible]
[illegible]
[illegible]
[illegible]
ಬೆಂಗಳೂರು-2

ಪುಟ : ೧೫] SADHVI : SUNDAY 21—10—1956 ಮೈಸೂರು : ಭಾನುವಾರ ೨೧—೧೦—೧೯೫೬ [ಸಂಚಿಕೆ : ೨೫

ನಾಯಕರಾಗಿ ನಿಜಲಿಂಗಪ್ಪನವರ ಅವಿರೋಧ ಆಯ್ಕೆ

ನಿಜಲಿಂಗಪ್ಪನವರು ನೂತನ ಮೈಸೂರಿನ ಮುಖ್ಯಮಂತ್ರಿ

ಕಾಂಗ್ರೆಸ್ ಪಕ್ಷದ ನಾಯಕರಾಗಿ ಅವಿರೋಧ ಆಯ್ಕೆ

[illegible] ಬೆಂಗಳೂರು ೨೧

ನೂತನ ಮೈಸೂರು ವಿಧಾನ ಸಭಾ ಕಾಂಗ್ರೆಸ್ ಪಕ್ಷದ ಸಭೆಯು ಈ ದಿನ ಬೆಳಿಗ್ಗೆ ೧೧ ಘಂ ೆ ರೆಸಿಡೆನ್ಸಿ ಭವನದಲ್ಲಿ ಸೇರಿ ಶ್ರೀ ಸಿದ್ಧವನ ನಿಜಲಿಂಗಪ್ಪನವರನ್ನು ನಾಯಕರಾಗಿ ಅವಿರೋಧವಾಗಿ ಚುನಾಯಿಸಿತು ಕಾಂಗ್ರೆಸ್ ಪ್ರ ನ ಕಾರ್ಯದರ್ಶಿ ಶ್ರೀ ಕೆ ಪಿ ಮಾಧವನ್ ನಾ ಯರ್‌ರವರು ಎ ಐ. ಸಿ ಸಿ ಪ್ರತಿನಿಧಿಯಾಗಿ ಯಲ್ಲಿ ಭಾಗವಹಿಸಿದ್ದರು

ನಾಯಕರ ಚುನಾವಣೆಯ ಫಲಿತಾಂಶವನ್ನು ಯಲು ರೆಸಿಡೆನ್ಸಿ ಭವನದ ಹೊರಗಡೆ ಸಾವಿ ರು ಜನರು ಸೇರಿದ್ದರು ಫಲಿತಾಂಶ ಪ್ರಕಟ ದೊಡನೆಯೇ ಶ್ರೀ ನಿಜಲಿಂಗಪ್ಪನವರ ಮಿತ್ರ ರು ಅವರಿಗೆ ಹಾರಗಳನ್ನರ್ಪಿಸಿ ಶುಭಾಶ ಗಳನ್ನು ಕೋರಿದರು

ನಾಯಕತ್ವಕ್ಕೆ ಶ್ರೀ ನಿಜಲಿಂಗಪ್ಪನವರ ಹೆಸ ನ್ನು ಶ್ರೀ ಕಡಿದಾಳ್ ಮಂಜಪ್ಪನವರು ಸೂಚಿ ದರು ಶ್ರೀ ಹೆಚ್ ಕೆ ವೀರಣ್ಣಗೌಡರು ವನ್ನು ಅನುಮೋದಿಸಿದರು

ಬೇರಾವ ಹೆಸರುಗಳನ್ನೂ ಸೂಚಿಸದಿಲ್ಲವಾಗಿ ನಿಜಲಿಂಗಪ್ಪನವರು ಚುನಾಯಿತರಾಗಿರುವ ದು ಶ್ರೀ ಮಾಧವನ್‌ನಾಯರರು ಘೋಷಿಸಿದ ಅನಂತರ ಶ್ರೀ ನಿಜಲಿಂಗಪ್ಪನವರನ್ನು ಅಭಿ ದಿಸಿ ಭಾಷಣಗಳಾದುವು. ಶ್ರೀ ಕಡಿದಾಳ್ ಜಪ್ಪನವರು ಅವರಿಗೆ ಮೊದಲು ಹೂವಿನ ಹಾ ನ್ನು ಅರ್ಪಿಸಿದರು

ಶ್ರೀಗಳಾದ ಕೆ ಹನುಮಂತಯ್ಯ, ಕಡಿದಾ ಮಂಜಪ್ಪ, ಎಸ್. ಚನ್ನಯ್ಯ, ಚನ್ನಬಸಪ್ಪ ಎಲಿ, ಹೆಚ್ ಸಿದ್ದವೀರಪ್ಪ, ಮಂತ್ರಿ ಎ ಬಿ , ಹೆಚ್ ಸಿ. ದಾಸಪ್ಪನವರು ಶ್ರೀ ನಿಜಲಿಂ ನವರ ಗುಣಗಾನ ಮಾಡಿದರು.

ಶ್ರೀ ನಿಜಲಿಂಗಪ್ಪನವರು ಉತ್ತರಕೊಡುತ್ತ, ಕರ್ನಾ ರಾಜ್ಯ ಸ್ಥಾಪನೆಯ ತಮ್ಮ ಕನಸು ಈಗ ನಸಾಯಿತೆಂದೂ, ತಮ್ಮ ಮೇಲೆ ಗುರುತರವಾ ಜವಾಬ್ದಾರಿಯು ಬಿದ್ದಿರುವುದೆಂದೂ ಹೇಳಿದ ತಮ್ಮ ಚುನಾವಣೆ ಬಗ್ಗೆ ತಾವು ಹಿಗ್ಗುತ್ತಿ ಂದೂ, ಅಥವಾ ಚುನಾವಣೆಯಾಗದಿದ್ದರೆ ಗ್ಗುತ್ತಿರಲಿಲ್ಲವೆಂದೂ ಅವರು ಹೇಳಿ ತಮಗೆ ಸ ರೂ ಸಹಕಾರ ನೀಡುವಂತೆ ಪ್ರಾರ್ಥಿಸಿದರು ನ್ನು ೧೦ ದಿನಗಳಲ್ಲಿ ತಾವು ನೂತನ ಮಂತ್ರಿ ಡಲದ ಸದಸ್ಯರನ್ನು ಆರಿಸಿಕೊಳ್ಳಬೇಕಾಗಿ ರುವೆಂದೂ, ಮಂತ್ರಿ ಸ್ಥಾನಗಳು ತಮಗೆ ಸಿಗ ಬೇಕೆಂದು ಯಾರೂ ಆತಂಕಪಡಬಾರದೆಂದೂ ಳಿದರು.

ಳಿಗ್ಗೆ ೧೧ ಗಂಟೆಯಲ್ಲಿಯೇ ಶ್ರೀಗಳಾದ . ಚನ್ನಯ್ಯ ಮತ್ತು ಕಡಿದಾಳ್ ಮಂಜಪ್ಪ ರು ಸ್ಪರ್ಧಿಸುತ್ತಿಲ್ಲವೆಂಬ ನಿರ್ಧಾರವನ್ನು ಮಾಧವನ್ ನಾಯರ್‌ರವರಿಗೆ ತಿಳಿಸಿದರು ನಿರ್ಣಯವನ್ನು ಅವರು ದೆಹಲಿಯಲ್ಲಿರುವ ಗ್ರೆಸ್ ಅಧ್ಯಕ್ಷ ಢೇಬರ್‌ರವರಿಗೆ ಫೋನ್ ಲಕ ತಿಳಿಯಪಡಿಸಿದರು

ನೂತನ ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿ

ಎಸ್. ನಿಜಲಿಂಗಪ್ಪನವರು

ಕಾಂಗ್ರೆಸ್ ಚುನಾವಣಾ ಸಮಿತಿಯ ಸರ್ವಾನುಮತದ ಆಯ್ಕೆ

ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯ ನಿರ್ಧಾರ

ಬೆಂಗಳೂರು ೨೧

ಬರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರರನ್ನು ಆರಿಸುವ ಸಲುವಾಗಿ ಪ್ರಾದೇಶಿಕ ಚುನಾವಣಾ ಸಮಿತಿಗೆ ೬ ಜನ ಸದಸ್ಯರನ್ನು ನೆನ್ನೆ ಪ್ರದೇಶ ಕಾಂಗ್ರೆಸ್ ಸಮಿತಿಯು ಸರ್ವಾನುಮತದಿಂದ ಆರಿಸಿತು ಅದರಲ್ಲಿ ಶ್ರೀಗಳಾದ ಹೆಚ್ ಎಸ್ ರುದ್ರಪ್ಪ, ಎ. ಸಿ ಪ.ಗಿಯ್ಯರೆಡ್ಡಿ, ಎ ಭೀಮಪ್ಪನಾಯಕ್, ಎಂ ವಿ ರಾಮರಾವ್, ಹೆಚ್ ಕೆ. ವೀರಣ್ಣಗೌಡ ಮತ್ತು ಎಂ ಎಂ ಪಾಟೀಲರು ಇರುವರು

ಸುಮಾರು ವಾರದ ಹಿಂದೆ ಪ್ರದೇಶ ಕಾಂಗ್ರೆಸ್ ಸಮಿತಿಯು ಇತ್ತೀಚೆಗೆ ಸೇರಿ, ಅಲ್ಲಿ ಚುನಾವಣಾ ಸಮಿತಿಯ ಸದಸ್ಯರ ಸಂಖ್ಯೆಯನ್ನು ಗೊತ್ತುಮಾಡಿದ್ದ ಸಂದರ್ಭದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೇ ೬ ಜನರನ್ನು ನಾಮಕರಣ ಮಾಡಬೇಕೆಂದು ಸೂಚಿಸಿದ್ದರು ಅದು ಕ್ರಮಬಾಹಿರವಾದುದೆಂದೂ, ಎಂ ಪಿ ಸಿ ಸಿಯು ತನ್ನ ಅಧಿಕಾರವನ್ನು ಇತರರಿಗೆ ವಹಿಸಲು ಸಾಧ್ಯವಿಲ್ಲವೆಂದೂ ಎ ಐ ಸಿ ಸಿಯವರು ತಿಳಿಸಲಾಗಿ, ಪುನಃ ಸಭೆ ಸೇರಿ ಮೇಲ್ಕಂಡಂತೆ ತೀರ್ಮಾನಿಸಿತು

ಶ್ರೀ ಟಿ ಸುಬ್ರಹ್ಮಣ್ಯರವರು ೬ ಜನರ ಹೆಸರನ್ನು ಸೂಚಿಸಿ, ಶ್ರೀ ಕೆ. ಲಕ್ಕಪ್ಪನವರು ಅನುಮೋದಿಸಿದನಂತರ, ರೆವಿನ್ಯೂ ಮಂತ್ರಿ ಶ್ರೀ ಚನ್ನಬಸಪ್ಪನವರ ಹೆಸರನ್ನೂ ಸೂಚಿಸಲಾಯಿತು ಆದರೆ ಸಚಿವರು ಐಕ್ಯತೆ ಮತ್ತು ಸೌಹಾರ್ದದ ದೃಷ್ಟಿಯಿಂದ ತಮ್ಮ ಹೆಸರನ್ನು ವಾಪಸು ಪಡೆದರು

ಶ್ರೀ ಎಸ್ ಚನ್ನಯ್ಯನವರು ಮಾತನಾಡಿ, ತಮ್ಮ ಹಲವು ಸ್ನೇಹಿತರ ಅಪೇಕ್ಷೆಯಂತೆ ತಾವು ಚುನಾವಣೆಗೆ ನಿಲ್ಲಲು ಆಲೋಚಿಸಿದ್ದರೂ, ಪಕ್ಷದಲ್ಲಿ ಐಕಮತ್ಯವಿರಬೇಕಾದುದು ಅಗತ್ಯವೆಂದು ನುಡಿದರು

ಪಂಜಾಬು ಮಾಜಿ ಕಾಂಗ್ರೆಸ್ ಮಂತ್ರಿ ಮೇಲೆ ಶಿಸ್ತಿನ ಕ್ರಮ

ಪಂಜಾಬು ಮಂತ್ರಿಮಂಡಲ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿ ವಿರುದ್ಧವಾಗಿ ಪ್ರಚಾರ ಮಾಡುತ್ತಿರುವುದಕ್ಕಾಗಿ ಅಲ್ಲಿನ ಮಾಜಿ ಮಂತ್ರಿ ಲಾಲಾ ಜಗತ್ ನಾರಾಯಣ್‌ರವರನ್ನು ೧ ವರ್ಷ ಕಾಲ ಯಾವ ಚುನಾಯಿತ ಸ್ಥಾನದಲ್ಲೂ ಇರಲು ಅನರ್ಹರೆಂದು ತಿಳಿಸಿ ಅವರ ಮೇಲೆ ಎ ಐ ಸಿ ಸಿ ಯವರು ಶಿಸ್ತಿನ ಕ್ರಮಕೈಗೊಂಡಿದ್ದಾರೆ ಪರಿಣಾಮವಾಗಿ ಅವರು ಎ ಐ ಸಿ ಸಿ ಮತ್ತು ಪ್ರದೇಶ ಸಮಿತಿ ಸದಸ್ಯತ್ವಕ್ಕೆ ಕೂಡಲೇ ರಾಜೀನಾಮೆ ಕೊಡಬೇಕಾಗುವುದು ಅವರು [illegible] ವ್ಯವಸ್ಥೆ ಸಂಬಂಧವಾಗಿ ವಿರೋಧ ಪ್ರಚಾರ ನಡೆಸಿದ್ದಲ್ಲದೆ ಒಂದು ಕೋಮನ್ನು ಮತ್ತೊಂದರ ಮೇಲೆ ಎತ್ತಿಕಟ್ಟುತ್ತಿದ್ದರೆಂಬುದೇ ಶಿಸ್ತಿನ ಕ್ರಮಕೆ ಕಾರಣ

ಆಲ್ಜೀರಿಯಾ ದಂಗೆಕೋರರಿಗಾಗಿ ಶಸ್ತ್ರ ತುಂಬಿದ್ದ ಹಡಗು ವಶ

ಕಳೆದ ಮಂಗಳವಾರ ಉತ್ತರ ಆಫ್ರಿಕಾ ತೀರದಲ್ಲಿ ಫ್ರೆಂಚರು ಅಥಾಸ್ ಎಂಬ ಸುಡಾನ್ ದೇಶಕ್ಕೆ ಸೇರಿದ್ದೆಂದು ಹೇಳಲಾದ ಹಡಗನ್ನು ವಶಪಡಿಸಿಕೊಂಡು, ಶೋಧಿಸಲಾಗಿ ಅದರಲ್ಲಿ ೬ ಕೋಟಿ ಫ್ರಾಂಕುಗಳಷ್ಟು ಬೆಲೆಯ ಶಸ್ತ್ರಾಸ್ತ್ರಗಳಿದ್ದುವೆಂದೂ, ಅವನ್ನು ಸ್ಪೇನಿಷ್ ಮೊರಾಕೊದಲ್ಲಿ ಇಳಿಸಿ ಆಲ್ಜೀರಿಯಾ ದಂಗೆಕೋರರಿಗೆ ಒದಗಿಸಲು ಆಲೋಚಿಸಲಾಗಿತ್ತೆಂದೂ ಹೇಳಲಾಗಿದೆ ಈಜಿಪ್ಟಿನಿಂದ ಹಡಗು ಬಂದಿತ್ತಲ್ಲದೆ, ಅಲ್ಲಿನ ಸೈನಿಕರೇ ಶಸ್ತ್ರಗಳನ್ನು ತುಂಬಿದ್ದರೆಂದು ಹೇಳಲಾಗಿದೆ. ಫ್ರಾನ್ಸ್ ಈ ಬಗ್ಗೆ ವಿಶ್ವಸಂಸ್ಥೆಗೆ ದೂರನ್ನು ಕೊಟ್ಟು ಆಲ್ಜೀರಿಯಾ ಪ್ರಶ್ನೆಯಲ್ಲಿ ಅದು ಅತಿಕ್ರಮ ಪ್ರವೇಶ ಮಾಡುತ್ತಿರುವುದಾಗಿ ಸೂಚಿಸಲಿದೆಯೆಂದು ಹೇಳಲಾಗಿದೆ

ಮಹಾರಾಜರಿಂದ [illegible]

ನವರಾತ್ರಿ ಉತ್ಸವದ ಸಂಬಂಧದಲ್ಲಿ ಶ್ರೀ ಮನ್ಮಹಾರಾಜರು ಶ್ರೀ ವೃದ್ಧಶ್ರೀಗಳಾದ ಋಗ್ವೇದ ಉಪಾಧ್ಯಾಯರು ಶತಾವಧಾನಿಗಳು, ವೆಂಕಟರಾಮಾಭಟ್ಟರು, ಅರಮನೆ [illegible] ಚಾರಕರಾದ ಬೆಟ್ಟದ ಲಕ್ಷ್ಮೀನರಸಿಂಹ ಜೋಯಿಸರು ಮತ್ತು ಅಶ್ವತ್ಥನಾರಾಯಣ ಶಾಸ್ತ್ರಿಗಳಿಗೆ ತಲಾ ೨೦೦ ರೂ. ಬೆಲೆ ಬಾಳುವ ೧ ಜೊತೆ ಕಲಾವತ್ತು ಶಾಲು ಮತ್ತು ಮಗುಟಗಳ ಎಲ್ಲ [illegible] ಕೊಟ್ಟಿರುತ್ತಾರೆ

ಫುಟ್‌ಬಾಲ್ ಪಂದ್ಯ

ನಗರದಲ್ಲಿ ನಡೆಯುತ್ತಿರುವ ಸುಬ್ಬಕೃಷ್ಣಯ್ಯ ಸ್ಮಾರಕ ಫುಟ್‌ಬಾಲ್ ಟೋರ್ನಮೆಂಟಿನ ಅಂಗವಾಗಿ ನೆನ್ನೆ ನಡೆದ ಸೆಮಿ ಫೈನಲ್ಸ್ ಪಂದ್ಯದಲ್ಲಿ ಚಾಂಪಿಯನ್ ಟೀಮಿನವರು ಸ್ಟೂಡೆಂಟ್ಸ್ ಟೀಮಿನವರನ್ನು ೩-೦ ಗೋಲುಗಳಿಂದ ಸೋಲಿಸಿದರು.

○ ಬೆಂಗಳೂರಿನಲ್ಲಿ ಹಲವಾರು ದಿನಗಳಿಂದಲೂ ಅತಿ ವಿಪರೀತ ಮಳೆಯು ಸುರಿಯುತ್ತಿರುವುದಾಗಿ ಹಲವು ಜನರು ಮೃತಪಟ್ಟಿರುವರೆಂದು ವರದಿಯಾಗಿದೆ

ರೈಲಿನಲ್ಲಿ [illegible] ಕೊಲೆಯೇ ?

ಪುಣಾ—ಬೆಂಗಳೂರು ಎಕ್ಸ್‌ಪ್ರೆಸ್ ರೈಲು ನೆನ್ನೆ ಹರಿಹರಕ್ಕೆ ಬಂದಾಗ [illegible] ೧ ತಿಂಗಳಿನ? ಶವವೊಂದು [illegible] ಸಂದರ್ಭದಲ್ಲಿ ಮೃತಪಟ್ಟವರು ಪುಣಾ ನಗರದ ಎಕ್ಸಿಕ್ಯೂಟಿವ್ ಇಂಜಿನಿಯರ್ [illegible] ರಂಗ ಅನಂತರಾಮ್‌ರವರೆಂದು ಗೊತ್ತಾಗಿ ಅವರ ಸಹೋದರ ಪ್ರಭಾಕರ [illegible] ನ್ನು ಗುರುತಿಸಿದರು. ಅವರು ಬಿಜಾಪುರ್ ಮತ್ತು ಬೆಳಗಾಂಗಳ ನಡುವೆ ಕೊಲೆ ಮಾಡಲ್ಪಟ್ಟಿರಬಹುದೆಂದೂ, ಹಂತಕನು ಪತ್ತೆಯಾಗಿಲ್ಲವೆಂದೂ ಹೇಳಲಾಗಿದೆ ಮೃತರು ಪೂನಾದಿಂದ [illegible] ಹೊರಟಿದ್ದರು

ಮಹಾರಾಜರಿಂದ ಪಾಂಡವಪುರ ಸಕ್ಕರೆ ಕಾರ್ಖಾನೆ ಶಂಕುಸ್ಥಾಪನೆ

ಮೈಸೂರು ರಾಜಪ್ರಮುಖರು ಇದೇ [illegible] ತಾರೀಖು ಬೆಳಿಗ್ಗೆ ೧೧ ಘಂಟೆಗೆ ಪಾಂಡವಪುರದಲ್ಲಿ ಸಕ್ಕರೆ ಕಾರ್ಖಾನೆಯ ಶಂಕುಸ್ಥಾಪನೆಯನ್ನು ನೆರವೇರಿಸುವರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸುವರು

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಿಗ್ಗೆ ಶ್ರೀಮತಿ ಎಂ ರಮಾಬಾಯಿಯವರಿಂದ ವೀಣಾವಾದನ ಮತ್ತು ಶ್ರೀ ಗೋವಿಂದಪ್ಪನವರಿಂದ [illegible], ಸಂಜೆ ಶ್ರೀ ಮಾದಯ್ಯನವರಿಂದ ಗಾಯನ, ಮಳವಳ್ಳಿ ಪಾರ್ಟಿಯವರಿಂದ [illegible], ಶ್ರೀಮತಿ ಕಮಲಾ [illegible] ಶ್ರೀನಿವಾಸರವರಿಂದ ಸಂಗೀತ ಮತ್ತು "ಇದು ಯಾವ ಜಾತಿ" ಮತ್ತು "ಗಂಡಸಲ್ಲ ಗಂಡಸು" ಎಂಬ ನಾಟಕಗಳು ಇವೆ

ವೈಟ್ ಲಿಫ್ಟಿಂಗ್ ಬಹುಮಾನಗಳು

ದಸರಾ ವಸ್ತು ಪ್ರದರ್ಶನದಲ್ಲಿ [illegible] ಲಿಫ್ಟಿಂಗ್ ಪಂದ್ಯದಲ್ಲಿ ಈ ರೀತಿ ಬಹುಮಾನಗಳು ಬಂದಿವೆ - ಬ್ಯಾಂಟಂ ವೈಟ್ ಲಿಫ್ಟಿಂಗ್ ೧, ೨ ಮತ್ತು ೩ನೇ ಬಹುಮಾನಗಳು [illegible]ಗಂ ([illegible] ಪೌಂಡು), ಶಿವಯೋಗೀಶ್ವರಯ್ಯ ([illegible] ಪೌಂ) ಮತ್ತು ಪುಷ್ಪಂ ([illegible] ಪೌಂಡು) ಫೆದರ್ ವೈಟ್-ಪ್ರಥಮ ಮೂರು ಬಹುಮಾನಗಳು ಸೈಯದ್ ಮುಕ್ತಾರ ([illegible]) ಕೆ. ಪದ್ಮನಾಭಾಚಾರ್ ([illegible]) ಮತ್ತು ಜಲೀಲ್ ([illegible]) ಲೈಟ್ ವೈಟ್ ಮೂರು ಬಹುಮಾನಗಳು- ಎಸ್ ಸಿ [illegible] ([illegible]) ಕೆ ಲಕ್ಷ್ಮೀನಾರಾಯಣ ([illegible]) ಮತ್ತು ಎಸ್ ಲ ತೀಫ್ ([illegible] ಪೌಂಡು)

ಫ್ಯಾನ್ಸಿ ಡ್ರೆಸ್ ಪಂದ್ಯದಲ್ಲಿ ಗೆದ್ದವರು

ನೆನ್ನೆ ವಸ್ತು ಪ್ರದರ್ಶನದಲ್ಲಿ ನಡೆದ ಫ್ಯಾನ್ಸಿ ಡ್ರೆಸ್ ಪಂದ್ಯದಲ್ಲಿ [illegible] ಹಂಟರ್ ವೇಷ ಧರಿಸಿದ ಶ್ರೀ ಶಿವಕುಮಾರ್‌ರಿಗೆ ಪ್ರಥಮ ಬಹುಮಾನವೂ, [illegible] ವೇಷ ಧರಿಸಿದ ಎ ಎಸ್ ಅಶೋಕ್ ಮತ್ತು ಪಾರ್ಟಿಯವರಿಗೆ ಎರಡನೇ ಬಹುಮಾನವೂ ದೊರಕಿವೆ ಮತ್ತೂ ಹಲವರಿಗೆ ಪ್ರಶಸ್ತಿ ಪತ್ರಗಳನ್ನು ಕೊಡಲಾಗುವುದು

ವಾರಭವಿಷ್ಯ

ತಾ|| ೨೧-೧೦-೫೬ರಿಂದ ೨೭-೧೦-೫೬ರವರೆಗೆ

ಮೇಷ:— ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಸ್ಥಿತಿ ತೃಪ್ತಿಕರ. ಶತ್ರುಗಳ ಪರಾಜಯ. ವ್ಯಾಪಾರವ್ಯವಹಾರಗಳಲ್ಲಿ ಎಚ್ಚರಿಕೆ ಅಗತ್ಯ. ಉದ್ಯೋಗ[illegible] ಪ್ರವಾಸ ಸಂಭವ.

ವೃಷಭ:— ಆರೋಗ್ಯ ಸಾಧಾರಣ. ಆರ್ಥಿಕ ಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ಉದ್ಯೋಗದಲ್ಲಿ ನಿರುತ್ಸಾಹ. ಹೊಸ ಉದ್ಯಮಗಳಿಗೆ ಕೈಹಾಕಬೇಡಿ.

ಮಿಥುನ:— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ವಿದ್ಯಾರ್ಥಿಗಳಿಗೆ ಜಯ. ನೌಕರಿಯಲ್ಲಿ ಪ್ರಶಂಸೆ.

ಕರ್ಕ:— ಆರೋಗ್ಯ ಅತೃಪ್ತಿಕರ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವೃಥಾ ವೈಮನಸ್ಯ. ಶತ್ರುಗಳಿಂದ ಕಿರುಕುಳ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ನಿರುತ್ಸಾಹ.

ಸಿಂಹ:— ಆರೋಗ್ಯ ಚೆನ್ನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ಕಿರುಕುಳ

ಕನ್ಯಾ:— ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ ಸುಖಕರ ಪ್ರವಾಸ.

ತುಲಾ:— ಆರೋಗ್ಯ ಅತೃಪ್ತಿಕರ. ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅಪಜಯ. ನೌಕರಿಯಲ್ಲಿ ಅನಿರೀಕ್ಷಿತ ಪರಿಸ್ಥಿತಿ. ಹೊಸ ಉದ್ಯಮಕ್ಕೆ ಕೈಹಾಕಬೇಡಿ.

ವೃಶ್ಚಿಕ:— ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ಕೈಗೊಂಡ ಕಾರ್ಯಗಳಲ್ಲಿ ವಿಘ್ನ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ತೊಂದರೆ.

ಧನು:— ಆರೋಗ್ಯ ಉತ್ತಮ. ಆರ್ಥಿಕ ಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಪ್ರವಾಸ ಹಿತಕರವಾಗಿರುವುದು.

ಮಕರ:— ಆರೋಗ್ಯ ತೃಪ್ತಿಕರ. ಆರ್ಥಿಕ ಸ್ಥಿತಿ ಉತ್ತಮಗೊಳ್ಳುವುದು. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಉನ್ನತಿ. ನೌಕರಿಯಲ್ಲಿ ತೃಪ್ತಿ.

ಕುಂಭ:— ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ. ಆರ್ಥಿಕ ಪರಿಸ್ಥಿತಿ ಸಾಧಾರಣ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ನೌಕರಿಯಲ್ಲಿ ಕಷ್ಟ. ವರ್ಗಾವಣೆ ಸಂಭವ.

ಮೀನ:— ಆರೋಗ್ಯ ಚೆನ್ನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು. ಶತ್ರುಗಳಿಂದ ಕಿರುಕುಳ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ವೃಥಾ ಕಲಹ. ನೌಕರಿಯಲ್ಲಿ ನಿರುತ್ಸಾಹ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ. ೭-೧೫ ಪಿ.ಎಸ್. ಜಗನ್ನಾಥ-ದೇವರ ನಾಮ. ೭.೩೦ ಗಾನ ವಿಹಾರ. ೮-೧೫ ಬಿಡುವು. ಸಂಗೀತ ಮಧ್ಯಾಹ್ನ ೧೨ ಪಿ. ಎಸ್. ಜಗನ್ನಾಥ-ಸಂಗೀತ. ೧೨-೩೦ ಮತ್ತು ಸಂಜೆ ೫-೩೦ ಡಿ. ರವೀಂದ್ರ-ವೀಣೆ ೧ ಗಾನ ಮಂಜರಿ. ೬-೩೦ ಮುಖವೀಣೆ. ೬-೪೫ ಪ್ರೌಢಶಾಲೆಗಳಿಗಾಗಿ. ೭ ೩೦ ಜಾನಪದ ಗೀತೆ. ೭-೪೦ ಸುನಂದಾಘೋಷ್-ರವೀಂದ್ರ ಸಂಗೀತ. ೮-೧೫ ಕ್ರೀಡಾ ವಿಮರ್ಶೆ. ೮-೩೦ ಗಾತ್ರ ಸಂಗೀತ ೯-೧೫ ಭಾಷಣ. ೯.೩೦ ಕಥಾ ಕಾಲಕ್ಷೇಪ.

ಇನಾಂ ರದ್ದಿಯಾತಿ ಕ್ರಮ ೬ ತಿಂಗಳು ಮುಂದೆ ಹೋಗಲಿ

ಇನಾಂ ಗ್ರಾಮಗಳನ್ನು ೨-೧೦-೫೬ ರ ಲಾಗಾಯ್ತು ಸ್ವಾಧೀನಕ್ಕೆ ತೆಗೆದುಕೊಳ್ಳುವುದಾಗಿ ಸರ್ಕಾರದವರು ಹಠಾತ್ತನೆ ಪ್ರಕಟಿಸಿರುವುದು ನ್ಯಾಯವಲ್ಲ. ಇದು ಕ್ರಮವಾದ ಸ್ವಾಧೀನವಾಗುವುದಿಲ್ಲ. ಈಗ ವರ್ಷದ ಮಧ್ಯ ಕಾಲ. ಬೆಳೆ, ಹಣ ಬಾಬುಗಳ ವಸೂಲಿ ಅವಧಿಯು ಮಾರ್ಚಿ ಆಖೈರಿಗೆ ಮುಗಿಯುತ್ತದೆ. ೨-೧೦-೫೬ ಯಾವ ಲೆಕ್ಕಾಚಾರಕ್ಕೂ ಸೇರುವುದಿಲ್ಲ. ಒಂದು ತಿಂಗಳ ಅವಧಿಯನ್ನೂ ಕೊಟ್ಟಿಲ್ಲ. ೫೫ರಲ್ಲಿ ಆದ ಕಾನೂನಿನಂತೆ ಪರಿಹಾರ ಕೊಡಲು ಯಾರು ಹಕ್ಕುದಾರರೆಂಬುದನ್ನು ಈ ೫|| ವರ್ಷದೊಳಗಾಗಿ ವಿಚಾರಣೆ ಮಾಡಿ ವ್ಯವಸ್ಥೆಗೊಳಿಸಿ ಪರಿಹಾರ ಕೊಟ್ಟು ಇನಾಮುಗಳನ್ನು ತೆಗೆದುಕೊಳ್ಳಲು ಅವಕಾಶವಿತ್ತು. ಹಾಗೆ ಮಾಡದೆ, ಈಗ ಒಂದು ವಾರದ ಅವಧಿಯಲ್ಲಿ ಈ ರೀತಿ ಪ್ರಕಟಣೆ ಹೊರಡಿಸಿರುವುದು ಯಾವ ಕಾರಣದಿಂದಲೂ ನ್ಯಾಯವಲ್ಲ. ಇದರಿಂದ ಇನಾಂದಾರರಿಗೆ ಮಾತ್ರವಲ್ಲದೆ, ರೈತರಿಗೂ ಸಹಾ ತುಂಬಾ ತೊಂದರೆಗೆ ಕಾರಣವಾಗಿದೆ.

ಈ ಪ್ರಕಟಣೆಯನ್ನು ರದ್ದು ಮಾಡಿ, ಏಪ್ರಿಲ್ ೧ ರಿಂದ ಅಥವಾ ಜುಲೈ ೧ ರಿಂದ ವಶಕ್ಕೆ ತೆಗೆದುಕೊಳ್ಳುವ ಏರ್ಪಾಡು ಮಾಡಬೇಕೆಂತಲೂ ಮತ್ತು ನ್ಯಾಯವಾದ ಪರಿಹಾರ ದ್ರವ್ಯ ಕೊಡಬೇಕೆಂದೂ ಇನಾಂದಾರ್ ಸಂಘದವರು ಕಳೆದ ೧೩ರಲ್ಲಿ ಸಭೆ ನಡೆಸಿ ನಿರ್ಣಯ ಮಾಡಿರುತ್ತಾರೆ

ಕಂದಾಯದಿಂದಲೇ ಜೀವನ ಮಾಡುವವರು ಅನೇಕರಿದ್ದಾರೆ. ಅನೇಕ ಗ್ರಾಮಗಳಲ್ಲಿ ಕಂದಾಯ ವಸೂಲಾಗದೆ ನಿಂತಿದೆ ಈ ಕಾರಣದಿಂದ ಆದರೂ ಬರುವ ಮಾರ್ಚಿ ಅಖೈರಾದ ಮೇಲೆ ಸ್ವಾಧೀನ ಕ್ರಮ ಕೈಗೊಳ್ಳುವುದು ನ್ಯಾಯವಾಗಿದೆ. ಅಷ್ಟರೊಳಗಾಗಿ ಹಕ್ಕುದಾರರ ವಿಚಾರಣೆ ನಡೆಸಿ, ಪರಿಹಾರ ಕೊಡಲು ಅವಕಾಶವಾಗುತ್ತದೆ.

ಕೋಲಾರದ ಚಿನ್ನದ ಗಣಿಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಪಕ್ಷಕ್ಕೆ ಮುಂಚೆ ಕೋಟ್ಯಾಂತರ ರೂ ಪರಿಹಾರ ದ್ರವ್ಯ ಕೊಡುವುದಕ್ಕೂ, ೪೫ಲಕ್ಷ ಜಾಸ್ತಿ ಕೊಡುವುದಕ್ಕೂ ಸರ್ಕಾರ ಸಿದ್ಧವಿರುವಾಗ, ತಲೆತಲಾಂತರದ ಹಕ್ಕುದಾರರೂ, ಅಷ್ಟೇ ಅನೇಕ ಬಡವರೂ ಆಗಿರುವ ಇನಾಂದಾರರುಗಳಿಗೆ ಮೊದಲು ಪರಿಹಾರಕೊಡದೆ ಸ್ವಾಧೀನ ತೆಗೆದುಕೊಳ್ಳುವುದು ಸರಿಯಲ್ಲ.

—ಸಿ ವೆಂಕಟಸುಬ್ಬಯ್ಯ

ಸಾರ್ವಜನಿಕರಲ್ಲಿ ಆಯುರ್ವೇದ ವಿದ್ಯಾರ್ಥಿಗಳ ಮನವಿ

ನಗರದಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿ ಸಂಘದವರು ಮನವಿಯೊಂದನ್ನು ಹೊರಡಿಸಿ, ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ಬೇಡಿರುವ ಅತ್ಯವಶ್ಯಕವಾದ ಅನುಕೂಲತೆಗಳನ್ನು ಸರ್ಕಾರದವರು ಒದಗಿಸಿಕೊಡುವಂತೆ ಮಾಡಿ, ವಿದ್ಯಾರ್ಥಿಗಳು ತರಗತಿಗಳಿಗೆ ಹಿಂದಿರುಗುವಂತೆ ಸಾರ್ವಜನಿಕರು ಸಹಾಯ ಮಾಡಲು ಪ್ರಾರ್ಥಿಸಿರುತ್ತಾರೆ. ಮುಷ್ಕರವು ಆರಂಭವಾಗಿ ಸುಮಾರು ೬೦ ದಿನಗಳಾದುವೆಂದೂ, ಸರ್ಕಾರದ ಪತ್ರಿಕಾ ಪ್ರಕಟಣೆಯೊಂದನ್ನು ಮನ್ನಿಸಿ ವಿದ್ಯಾರ್ಥಿಗಳು ಉಪವಾಸ ಮುಷ್ಕರವನ್ನು ನಿಲ್ಲಿಸಿ, ಸರ್ಕಾರದೊಡನೆ ನೇರ ಸಂಧಾನಕ್ಕಾಗಿ ಹೋದಾಗ ಮುಷ್ಕರವನ್ನು ಮುಕ್ತಾಯ ಮಾಡುವಂತೆ ಮಂತ್ರಿಗಳು ಸೂಚಿಸಿದರೇ ವಿನಹ, ಕಾಲೇಜಿನಲ್ಲಿ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ ಯಾವ ನಿರ್ದಿಷ್ಟ ಭರವಸೆಯನ್ನೂ ನೀಡಿಲ್ಲವೆಂದೂ ಅವರು ಹೇಳಿರುತ್ತಾರೆ.

THE CHAMPION METROPOLITAN COLLEGE OF COMMERCE,
"Co-operators' Home", 100' Road, Mysore
ADMISSIONS
APPLICATIONS for admission to classes in Shorthand, Typewriting and Hindi ONLY, leading to November 1957 Examinations are now being received in the mornings and evenings.
Sd/- M. S. PUTTANNA,
Vice-Principal.

ಕರ್ನಾಟಕದ ಕುರುಬರ ಸಮ್ಮೇಳನ

ನಂಜನಗೂಡು ೨೦

ಇಲ್ಲಿನ ಕನಕದಾಸ ವಿದ್ಯಾರ್ಥಿನಿಲಯದಲ್ಲಿ ಮೊನ್ನೆ ಕರ್ನಾಟಕದ ಕುರುಬರ ಸಮ್ಮೇಳನವು ಜರುಗಿತು ವಿಧಾನ ಸಭಾ ಸದಸ್ಯರಾದ ಶ್ರೀ ಟಿ. ಮರಿಯಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಡಾ|| ಸಾವಿತ್ರಿಬಾಯಿ ನಾಗನಗೌಡರು ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ, ಬಹುಕಾಲದಿಂದ ಹರಿದುಹಂಚಿಹೋಗಿದ್ದ ಕನ್ನಡ ನಾಡು ಒಂದಾದ ಬಗ್ಗೆ ಹರ್ಷವನ್ನು ಸೂಚಿಸಿ, ಕನ್ನಡಿಗರೆಲ್ಲರೂ ಸೋದರರಂತೆ ಬಾಳಬೇಕೆಂದು ತಿಳಿಸಿದರು. ಶ್ರೀ ಎ. ಬಿ. ಮರಿಯಪ್ಪನವರು ಸ್ವಾಗತ ಭಾಷಣ ಮಾಡಿದರು.

ಮುಂದೆ ಪ್ರತಿ ಗ್ರಾಮದಲ್ಲೂ ಉಣ್ಣೆ ಕೈಗಾರಿಕೆಗೆ ಪ್ರೋತ್ಸಾಹವೀಯುವುದು ಮತ್ತು ಅದಕ್ಕಾಗಿ ಕುರಿಗಳ ರಕ್ಷಣೆ ಮಾಡುವುದು ಅವಶ್ಯಕವೆಂದೂ, ಸರ್ಕಾರದವರು ಈ ಬಗ್ಗೆ ಗಮನವೀಯಬೇಕೆಂದೂ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಹಿಂದುಳಿದ ಜನಾಂಗದವರ ಅಭಿವೃದ್ಧಿಗಾಗಿ ಸಮಿತಿಯೊಂದನ್ನು ರಚಿಸಬೇಕೆಂದೂ, ಮುಂದಿನ ಚುನಾವಣೆಗಳಲ್ಲಿ ಹಿಂದುಳಿದವರಿಗೆ ಸರಿಯಾದ ಪ್ರಾತಿನಿಧ್ಯ ದೊರಕುವಂತಾಗಬೇಕೆಂದೂ ಕೋರಲಾಯಿತು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಮುಂದಿನ ಚುನಾವಣೆಗಳಲ್ಲಿ ಜನರು ಕಾಂಗ್ರೆಸ್ಸಿಗೇ ಓಟು ಮಾಡುವಂತೆ ಕೋರಿದರು.

ವಿಸ್ತೃತ ಪಂಜಾಬಿಗೆ ಕೈರಾನರೇ ಮುಖ್ಯಮಂತ್ರಿ

ವಿಸ್ತೃತ ಪಂಜಾಬು ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಪಂಜಾಬಿನ ಈಗಿನ ಮುಖ್ಯಮಂತ್ರಿ ಪ್ರತಾಪಸಿಂಗ್ ಕೈರಾನರನ್ನು ಸರ್ವಾನುಮತದಿಂದ ಚುನಾಯಿಸಲಾಗಿದೆ.

ಎಲ್. ಮಹದೇವಯ್ಯನವರಿಗೆ ಪಿತೃವಿಯೋಗ

ಮಹಾರಾಜರ ಸೆಕ್ರೆಟರಿ [illegible]ರಾದ ಶ್ರೀ ಎಲ್. ಮಹದೇವಯ್ಯನವರ ತಂದೆ ಶ್ರೀ ಲಿಂಗಯ್ಯನವರು ಕಳೆದ ಬುಧವಾರ ಮಧ್ಯಾಹ್ನದ ಬಳ ತಮ್ಮ ಸ್ಥಳದಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ಸುಮಾರು ೭೦ ವರ್ಷ ವಯಸ್ಸಾಗಿತ್ತು. ಅರಮನೆಯಲ್ಲಿ ಅವರು ಸೇವೆಯನ್ನೂ ಸಲ್ಲಿಸಿದ್ದರು. ಮೃತರ ಆತ್ಮಕ್ಕೆ ಶಾಂತಿ ಕೋರಿ ಬಂಧುಗಳಿಗೆ ಅನುತಾಪವನ್ನು ಸೂಚಿಸುತ್ತೇವೆ.

ಮಹಿಳೆಯರಿಗೆ ಯಂತ್ರಗಳಲ್ಲಿ ಶಿಕ್ಷಣ

ಬೆಂಗಳೂರಿನಲ್ಲಿ ಮಹಿಳೆಯರಿಗಾಗಿ ವೃತ್ತಿಶಿಕ್ಷಣಾಲಯವೊಂದನ್ನು ಬರುವ ವರ್ಷದಿಂದ ತೆರೆಯಲು ಸರ್ಕಾರದವರು ಆಲೋಚಿಸಿರುತ್ತಾರೆ. ಈ ಬಗ್ಗೆ ಯೋಜನೆಯೊಂದು ಸಿದ್ಧವಾಗಿದೆ. ಯಂತ್ರ ಸಾಮಗ್ರಿಗಳ ಕೆಲಸ ನಡೆಸಲು ಮಹಿಳೆಯರಿಗೂ ಅವಕಾಶ ಕಲ್ಪಿಸುವುದೇ ಇದರ ಉದ್ದೇಶ.

ಶ್ರೀನಿವಾಸ ಕಲ್ಯಾಣ

ಅಶೋಕ ರಸ್ತೆಯ ಶ್ರೀ ಗೀತಾ ಮಂದಿರದಲ್ಲಿ ನಿತ್ಯವೂ ಸಂಜೆ ೬ ಗಂಟೆಗೆ ಶ್ರೀ ಎ. ಎಸ್. ಅಶ್ವತ್ಥನಾರಾಯಣ ಶಾಸ್ತ್ರಿಗಳಿಂದ ಶ್ರೀನಿವಾಸ ಕಲ್ಯಾಣ ಎಂಬ ಪುರಾಣವು ನಡೆಯುವುದು. ಸರ್ವರಿಗೂ ಸ್ವಾಗತವಿದೆ

ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಿಂಪಿಯಾ
ಚಿತ್ರಮಂದಿರಗಳ ನಡುವೆ
ಮೆಟ್ಟೂರ್ ಮಿಲ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ, ಜೇಬಿ, ಅರವಿಂದ್, ಕಟಾವು ಇನ್ನೂ ಅನೇಕ ಮಿಲ್‌ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ. ಉತ್ತಮ ತರಹದ ಪ್ರಿಂಟೆಡ್ ವಾಯಿಲ್ ಮತ್ತು ಚೀಟಿಗಳು.
ಒಮ್ಮೆ ದಯಮಾಡಿ ಭೇಟಿ ಕೊಡಿ
ಇ. ಪಿ. ನಂಜಪ್ಪ

ವಸ್ತು ಪ್ರದರ್ಶನದಲ್ಲಿ ಉದಯ ಕಲಾ
ಮಂಡಲಿಯವರ ನಾಟಕ

ದಸರಾ ವಸ್ತು ಪ್ರದರ್ಶನದಲ್ಲಿ ನಾಳಿದ್ದು
ಕೆ ೭|| ಗಂಟೆಗೆ ಚಾಮರಾಜೇಂದ್ರ ಅಕಸು ಟೆ
ಡಿಂಗ್ ಶಾಲೆಯ ಉದಯ ಕಲಾ ಶಾ
ಮಂಡಲಿಯವರು ಸಾಟ್ಯಕಲಿ ಕೇಸರಿ ಭ
ರಾವ್ ಹನುಮಂತರಾವ್‌ರವರಿಂದ ವಿರಚಿತ
ದ ಬಡತನದ ಭೂತ [illegible] ರವನ್ನು
ನಯಿಸುವರು.

ಅಖಿಲ ಭಾರತ ಸಾಯು
ಸಮಾಜದ ಅಧ್ಯಕ್ಷರ ನಿಧನ

ಅಖಿಲ ಭಾರತ ಸಾಯಿ ಸಮಾಜದ ಅ
ರಾದ ಬಿ ವಿ. ನರಸಿಂಹ ಅಯ್ಯರ್‌ರವರು ಮು
ಸಿನಲ್ಲಿ ಮೊನ್ನೆ ನಿಧನ ಹೊಂದಿದರು. ಅವರ
ನರಸಿಂಹಸ್ವಾಮಿಯವರೆಂದು ಕರೆಯಲಾಗ
ತ್ತು. ಅವರಿಗೆ ೮೨ ವರ್ಷ ವಯಸ್ಸು.

೨೨ಮತ್ತು ೨೫ ತಾ|| ವಸ್ತುಪ್ರದರ್ಶನ
ಮಹಿಳೆಯರಿಗೆ ಮಾತ್ರ ಪ್ರವೇಶ

ದಸರಾ ವಸ್ತು ಪ್ರದರ್ಶನದಲ್ಲಿ ಇದೇ ೨
ತಾರೀಖು ಸೋಮವಾರ ಮತ್ತು ೨೫ನೇ ತಾ
ಖು ಗುರುವಾರ ಮಧ್ಯಾಹ್ನ ಮಹಿಳೆಯರಿಗೆ
ತ್ರ ಪ್ರವೇಶವನ್ನು ಏರ್ಪಡಿಸಲಾಗಿದೆ. ಅ
ತಾರೀಖು ಬೆಳಗ್ಗೆ ರಾಜಮನೆತನದವರು
ಕೊಡುವರು. ಆದ್ದರಿಂದ ಆಗ ಸಾರ್ವಜನಿ
ಪ್ರವೇಶಕ್ಕೆ ಅವಕಾಶವಿಲ್ಲ.

ಹಿಂದಿಯಲ್ಲಿ ಉನ್ನತ ವ್ಯಾಸಂಗಕ್ಕೆ
ವೇತನ

ಹಿಂದಿಯನ್ನು ಐಚ್ಛಿಕ ಭಾಷೆಯಾಗಿ
ರ್, ಪದವಿ ಮತ್ತು ಪದವೀಧರೋತ್ತರ ತ
ಗಳಲ್ಲಿ ಪ್ರಥಮ ಎರಡು ವರ್ಗಗಳಿಗೆ ತೆಗೆದ
ಳ್ಳುವವರಿಗೆ ಭಾರತ ಸರ್ಕಾರದವರು ವೇತ
ನ್ನು ಕೊಡಲಿರುವರು. ಸಂಸ್ಥಾನದ ಒ
ರೀ, ಹೊರಗಾಗಲೀ ವ್ಯಾಸಂಗಕ್ಕೆ ಅವ
ದೆ. ಈ ಬಗ್ಗೆ ಆಸಕ್ತಿಯುಳ್ಳವರು ಮೈಸೂ
ಶ್ವವಿದ್ಯಾಲಯದ ರಿಜಿಸ್ಟ್ರಾರರಿಗಾಗಲೀ,
ಇಲಾಖಾಧಿಕಾರಿಗಳಿಗಾಗಲೀ ಬರುವ
೩೦ ರೊಳಗೆ ಅರ್ಜಿ ಹಾಕಿ ಹೆಚ್ಚಿನ ವಿವರ
ಪಡೆಯಬಹುದು.

ಸಹಕಾರ ಸಂಘದ ವಾರ್ಷಿಕೋತ್ಸ

ರಾಜಧಾನಿಯಲ್ಲಿರುವ ದಿ ಮಾಡಲ್
ಆಪರೇಟಿವ್ ಸೊಸೈಟಿಯ ಪ್ರಥಮ
ಕೋತ್ಸವವು ಕಳೆದ ಮಂಗಳವಾರ ಜರುಗಿ
ಕೆ. ಎಂ. ದೊಡ್ಡಯ್ಯನವರು ಆರಂಭ
ಮಾಡಿದರು ಶ್ರೀ ಸಿ. ದೇವಯ್ಯನವರು
ಭಾಷಣ ಮಾಡಿದರು ಶ್ರೀ ಭಾಸ್ಕರ್ ಮ
ಪುಟ್ಟಸ್ವಾಮಯ್ಯನವರು ಸೊಸೈಟಿ ಏಳಿ
ಮಾತನಾಡಿದರು. ಶ್ರೀ ಎಂ. ಸಣ್ಣಯ್ಯ
ವಂದನೆಗಳನ್ನು ಅರ್ಪಿಸಿದರು.

ಗಡಿಯಾರಗಳು ಮತ್ತು
ಕನ್ನಡಕಗಳು
ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗ
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯು
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣಯ್
ಅಂ
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾ
ಅಶೋಕ ರಸ್ತೆ, ಮೈಸೂರು (Estd.

ಖುಷಿ ಮತ್ತು ಖುಷಿ!
ಬ್ರೆಡ್, ಬನ್ನು, ಬಿಸ್ಕತ್ತು
ನೀಲಗಿರಿ ಬಟರ್
ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲ
ಪ್ರತಿ ಭಾನುವಾರದ
ಸ್ಪೆಷಲ್ ಫ್ರೂಟಿಯೋ ಬ್ರೆ
ಶ್ರೀಕೃಷ್ಣಾ ಬೇಕ
ಡಿ ಸುಬ್ಬಯ್ಯಾ ರೋಡ್, ಮೈಸ
(ನಮ್ಮ ಅಂಗಡಿಯ ಶಾಖೆಯು
ಎಲ್ಲೂ ಇಲ್ಲ)

Edited, Printed and Publi
A. R. Nagarajan at Sadhvi
D. Subbiah Road, Mysore

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೦] SADHVI ; MONDAY 22—10—1956 ಮೈಸೂರು ; ಸೋಮವಾರ ೨೨—೧೦—೧೯೫೬ [ಸಂಚಿಕೆ : ೬೦

ಕಾಂಗ್ರೆಸ್ ಅಧ್ಯಕ್ಷರಾಗಿ ವಿ. ವೆಂಕಟಪ್ಪನವರ ಆಯ್ಕೆ -

ದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ವಿ. ವೆಂಕಟಪ್ಪನವರ ಆಯ್ಕೆ

ಸು. ಪ್ರೋ.] ಬೆಂಗಳೂರು ೨೨

ಸೂರು, ಕರ್ನಾಟಕ ಮತ್ತು ಹೈದರಾಬಾ ರ್ನಾಟಕಗಳ ಕಾಂಗ್ರೆಸ್ ಸಮಿತಿಗಳ ಸದ ಸಭೆಯು ಈ ದಿನ ಬೆಳಿಗ್ಗೆ ೧೧ ಘಂಟೆಗೆ ಕಾಂಗ್ರೆಸ್ ಭವನದಲ್ಲಿ ಸೇರಿ ನೂತನ ಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾಗಿ ಶ್ರೀ ವೆಂಕಟಪ್ಪನವರನ್ನು ಸರ್ವಾನುಮತದಿಂದ ಲಾಯಿತು.

ನವರ ಹೆಸರನ್ನು ಹಾಲಿ ಕೆ.ಪಿ.ಸಿ.ಸಿ. ಅಧ್ಯ ದ ಶ್ರೀ ಸಿ. ಜೆ. ಅಂಬಲಿಯವರು ಸೂಚಿಸಿ ಹೈದರಾಬಾದು ಕರ್ನಾಟಕದ ಶ್ರೀ ಅ ರಾವ್ ಗುಣಮುಖಿಯವರು ಅನುಮೋದಿಸಿ.

ಗಳಾದ ನಿಜಲಿಂಗಪ್ಪ, ಕಡಿದಾಳ್ ಮಂ, ಹನುಮಂತಯ್ಯ ಮುಂತಾದವರು ಭಾಷ ಮಾಡಿ, ಶ್ರೀ ವೆಂಕಟಪ್ಪನವರನ್ನು ಅಭಿನಂದಿಸಿ. ಅವರು ಉತ್ತರವಿತ್ತು, ಆಡಳಿತ ದೃಷ್ಟಿ ದ ನಾವು ಎರಡು ಪ್ರತ್ಯೇಕ ಕನ್ನಡ ಸಂಸ್ಥೆಗಳಿರಬೇಕೆಂದು ಸೂಚಿಸಿದ್ದುದಾಗಿ ನುಡಿ

ದನ್ನು ಧಾರವಾಡದ ಶ್ರೀ ಗುದ್ಲೆಪ್ಪ ಹಳ್ಳಿಯವರು ಟೀಕಿಸಿದರು.

ನೂತನ ಮೈಸೂರು ಕಾಂಗ್ರೆಸ್ ಸಮಿತಿಯು ಹೊಸ ಮೈಸೂರು ರಾಜ್ಯದ ಪ್ರದೇಶ ಕಾಂ ಸಮಿತಿಯೆಂದು ಕರೆಯಲು ತೀರ್ಮಾನಿಸಯಿತು. ಅದರ ಕೇಂದ್ರ ಕಛೇರಿಯು ಸಧ್ಯ ಬೆಂಗಳೂರಿನಲ್ಲೇ ಇರಬೇಕೆಂದೂ ಗೊತ್ತುಪ ಲಾಯಿತು.

ಬೆಳಿಗ್ಗೆ ಕಾಂಗ್ರೆಸ್ ಭವನದಲ್ಲಿ ಸಿ. ಜೆ. ಅಂಬಲಿಯವರು ರಾಷ್ಟ್ರ ಧ್ವಜಾರೋಹಣ ಮಾಡಿ.

ಶ್ರೀ ವಿ. ವೆಂಕಟಪ್ಪನವರು ಚನ್ನಪಟ್ಟಣದವ ೧೯೩೭ರಿಂದ ಮೈಸೂರು ಕಾಂಗ್ರೆಸ್ ಸಂ ಸದಸ್ಯರಾಗಿ ಭಾರತ ಸ್ವಾತಂತ್ರ್ಯ ಚಳು ಮತ್ತು ಮೈಸೂರಿನ ಜವಾಬ್ದಾರಿ ಸರ್ಕಾರ ಹೋರಾಟಗಳಲ್ಲಿ ಭಾಗವಹಿಸಿದ್ದರು. ಇವರು ಶಿವಪುರದಲ್ಲಿ ಮೈಸೂರು ಕಾಂಗ್ರೆಸ್ಸಿನ ಕ್ಷರಾಗಿದ್ದರು. ೧೯೪೮ರಿಂದ ೧೯೫೨ರ ವರೆ ಮೈಸೂರು ಶಾಸನ ಸಭೆಯ ಅಧ್ಯಕ್ಷರಾಗಿ ಇದ್ದರು. ಇವರು ಸ್ವತಂತ್ರಾಲೋಚನೆ, ರಾಷ್ಟ್ರೀಯ ಮನೋಭಾವಗಳಿಗೆ ಮೊದಲೂ ಹೆಸರುವಾಸಿ ಹೊಂದಿದ್ದರು.]

ವೇಳದಲ್ಲಿ ಭಾರತ ಸರ್ಕಾರದ ಆಹಾರ ಕೇಂದ್ರ ಕಛೇರಿ

ಕ್ಷಿಣ ಭಾರತದಲ್ಲಿ ಕೇಂದ್ರ ಸರ್ಕಾರದ ಆ ಕಛೇರಿಯ ಕೇಂದ್ರವೊಂದನ್ನು ತೆರೆಯಲು ಮಾನಿಸಲಾಗಿದೆಯೆಂದೂ, ಅದನ್ನು ಬೆಂಗ, ಮದ್ರಾಸು ಅಥವಾ ಹೈದರಾಬಾದುಗಳ ಸ್ಥಾಪಿಸಲಾಗುವುದೆಂದೂ ಕೇಂದ್ರ ಆಹಾರ ಉ ಮಂತ್ರಿ ಎಂ. ವಿ. ಕೃಷ್ಣಪ್ಪನವರು ತಿಳಿಸಿರು

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ ಕೂಡಲೇ ನಿಲ್ಲಬೇಕು

ಇಲ್ಲದಿದ್ದರೆ ಕಾಲೇಜನ್ನು ಮುಚ್ಚಲಾಗುವುದೆಂದು ಸೂಚನೆ

ಮೈಸೂರು ೨೨

ಸ್ಥಳೀಯ ಸಂಸ್ಥೆಗಳ ಕಮೀಷನರರೂ ಮತ್ತು ದೇಶೀಯ ವೈದ್ಯ ಇಲಾಖಾ ಮುಖ್ಯಾಧಿಕಾರಿಯೂ ಆದ ಶ್ರೀ ಎಂ. ಕೆ. ಅಪ್ಪಾಜಪ್ಪನವರು ಪ್ರಕಟಣೆಯೊಂದನ್ನು ಹೊರಡಿಸಿ, ನಗರದಲ್ಲಿರುವ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಹಿತ ದೃಷ್ಟಿಯಿಂದಲೇ ಮುಷ್ಕರವನ್ನು ಮುಕ್ತಾಯ ಮಾಡಿ ತರಗತಿಗಳಿಗೆ ಹಿಂದಿರುಗಬೇಕೆಂದು ಸೂಚಿಸಿರುತ್ತಾರೆ. ಇದೇ ೨೫ನೇ ತಾರೀಖಿನೊಳಗೆ ತರಗತಿಗಳಿಗೆ ಬರದಿದ್ದರೆ ಕಾಲೇಜನ್ನು ಅನಿರ್ದಿಷ್ಟ ಕಾಲ ಮುಚ್ಚಲಾಗುವುದೆಂದು ಅವರು ತಿಳಿಸಿರುತ್ತಾರೆ.

ಕಳೆದ ತಿಂಗಳು ೨೧ ರಿಂದ ದಸರಾ ಹಬ್ಬದ ದಿನಗಳ ಅಂತ್ಯದ ವರೆಗೂ ರಜಾ ದಿನಗಳೆಂದು ಘೋಷಿಸುವಂತೆ ವಿದ್ಯಾರ್ಥಿಗಳು ಮಾಡಿರುವ ಬೇಡಿಕೆಯನ್ನು ಸರ್ಕಾರದವರು ಅಂಗೀಕರಿಸಿಲ್ಲವೆಂದು ಅವರು ತಿಳಿಸಿ, ಕಾಲೇಜಿನಲ್ಲಿ ಆಗಲೇ ಹೆಚ್ಚು ಉಪಾಧ್ಯಾಯರುಗಳನ್ನು ನೇಮಿಸಿ ಅಧ್ಯಾಪಕರ ಅಭಾವವನ್ನು ನಿವಾರಿಸಲಾಗಿರುವುದೆಂದೂ, ಪ್ರಿನ್ಸಿಪಾಲರನ್ನೂ ನೇಮಿಸಲಾಗಿದೆಯೆಂದೂ ಹೇಳಿರುತ್ತಾರೆ.

ಕಾಲೇಜನ್ನು ಬೆಂಗಳೂರಿಗೆ-ವರ್ಗಾಯಿಸುವ ವಿಷಯವು ಸರ್ಕಾರದ ತೀವ್ರ ಪರ್ಯಾಲೋಚನೆಯಲ್ಲಿರುವುದಾಗಿಯೂ ಅವರು ಸೂಚಿಸಿದರು.

ಕರ್ನಾಟಕ ಕಾಂಗ್ರೆಸ್ ಚುನಾವಣಾ ಸಮಿತಿ

ಬೆಂಗಳೂರು ೨೨

ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ನೆನ್ನೆ ಇಲ್ಲಿ ಶ್ರೀ ಸಿ. ಜೆ. ಅಂಬಲಿಯವರ ಅಧ್ಯಕ್ಷತೆಯಲ್ಲಿ ನಡೆದು, ಮಹಾ ಚುನಾವಣೆಗಳಿಗೆ ಕಾಂಗ್ರೆಸ್ ಪರ ಉಮೇದುವಾರರನ್ನು ಆರಿಸಲು ಚುನಾವಣಾ ಸಮಿತಿಯ ಸದಸ್ಯರನ್ನು ಚುನಾಯಿಸಿತು. ಸಮಿತಿಯಲ್ಲಿ ಶ್ರೀಗಳಾದ ಸಿ. ಜೆ. ಅಂಬಲಿ, ಸಿ. ಎಂ. ಪೂಣಚ್ಚ, ಶಿವನಗೌಡ ಬಿ. ಪಾಟೀಲ್, ವಿ. ಎಸ್. ತಿಮ್ಮಾರೆಡ್ಡಿ, ಆರ್. ಜಿ. ದೂಬೆ, ಎಂ. ಹೆಚ್. ಹೆಗ್ಗಡೆ, ಜಿ. ವಿ. ಹಳ್ಳಿಕೇರಿ, ಸದಾನಂದ ಹೆಗ್ಗಡೆ ಮತ್ತು ಟಿ ಆರ್. ನೆಸ್ವಿಯವರು ಇರುವರು

ಹೊಸ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಐಕ್ಯಗೊಳ್ಳುವ ಮುಂಚೆ ಕೆ. ಪಿ. ಸಿ. ಸಿಯ ಅಂತಿಮ ಸಭೆ ನಡೆಯಿತು

ನೂತನ ಸಂಸ್ಥಾನದ ಕಾಂಗ್ರೆಸ್ ನಾಯಕರಾಗಿ ಆರಿಸಲ್ಪಟ್ಟಿರುವ ಶ್ರೀ ಎಸ್. ನಿಜಲಿಂಗಪ್ಪನವರನ್ನು ಅಭಿನಂದಿಸುವ ನಿರ್ಣಯವನ್ನು ಮಾಡಲಾಯಿತು.

ನೂತನ ಹೈಕೋರ್ಟಿನಲ್ಲಿ ೮ ಜನ ನ್ಯಾಯಾಧೀಶರು

ನೂತನ ಮೈಸೂರು ಸಂಸ್ಥಾನದ ಹೈಕೋರ್ಟಿನಲ್ಲಿ ೮ ಜನ ನ್ಯಾಯಾಧೀಶರುಗಳಿರಬೇಕೆಂದು ನಿರ್ಧಾರವಾಗಿರುವುದಾಗಿ ತಿಳಿದುಬಂದಿದೆ.

ಸಚಿವರಿಗೆ ಬಿನ್ನವತ್ತಳೆ ತಪ್ಪಿಸುವುದಾಗಿ ನಿಜಲಿಂಗಪ್ಪನವರ ಹೇಳಿಕೆ

ಸ್ವಂ. ಸು. ಪ್ರೋ.] ಬೆಂಗಳೂರು ೨೨

ನೆನ್ನೆ ಸಂಜೆ ಇಲ್ಲಿನ ಗಾಂಧಿ ನಗರದಲ್ಲಿ ನೂತನ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರಿಗೆ ಬಿನ್ನವತ್ತಳೆಯನ್ನು ಅರ್ಪಿಸಲಾಯಿತು. ಅವರು ಉತ್ತರವಿತ್ತು, ಹೊಸ ಸಂಸ್ಥಾನದ ರಚನೆಯನಂತರ ಮಂತ್ರಿಗಳಿಗೆ ಜನರು ಮಾನಪತ್ರಗಳನ್ನು ಸಮರ್ಪಿಸುವ ಪದ್ಧತಿಯನ್ನು ತಪ್ಪಿಸುವ ವಿಷಯವನ್ನು ತಾವು ತೀವ್ರವಾಗಿ ಪರಿಶೀಲಿಸುತ್ತಿರುವುದಾಗಿ ನುಡಿದರು. ಮಂತ್ರಿಗಳು ಜನಸಾಮಾನ್ಯರ ಸೇವಕರೆಂದೂ, ಜನರನ್ನು ಅವರು ಗೌರವಿಸಬೇಕೇ ವಿನಃ ಅವರಿಂದ ಮಾನಪತ್ರಗಳನ್ನು ಸ್ವೀಕರಿಸುವುದು ಸರಿಯಲ್ಲವೆಂದೂ ಅವರು ಹೇಳಿದರು

ಜಲಜನಕ ಬಾಂಬು ಪ್ರಯೋಗದ ನಿಷೇಧಕ್ಕಾಗಿ ಬುಲ್ಗಾನಿನ್ ಕರೆ

ಅಮೆರಿಕಾ ಅಧ್ಯಕ್ಷರ ತಿರಸ್ಕಾರ

ರಷ್ಯದ ಪ್ರಧಾನಿ ಮಾರ್ಷಲ್ ಬುಲ್ಗಾನಿನ್ನರು ಅಮೆರಿಕದ ಅಧ್ಯಕ್ಷರಿಗೆ ಮತ್ತೊಂದು ಪತ್ರ ಬರೆದು ಜಲಜನಕ ಬಾಂಬು ಪ್ರಯೋಗ ಪರೀಕ್ಷೆಗಳನ್ನು ನಿಷೇಧಿಸುವ ಬಗ್ಗೆ ಅಮೆರಿಕಾ ಮತ್ತು ರಷ್ಯಗಳಿಗೆ ಕೂಡಲೇ ಒಪ್ಪಂದವಾಗಬೇಕೆಂದು ಸೂಚಿಸಿರುತ್ತಾರೆ. ಅಣು ಶಸ್ತ್ರಾಸ್ತ್ರಗಳನ್ನು ಹೊಂದಿರುವ ಇತರ ರಾಷ್ಟ್ರಗಳ ನಡುವೆಯೂ ಇದೇ ರೀತಿ ಒಪ್ಪಂದವಾಗಬೇಕೆಂದು ಬುಲ್ಗಾನಿನ್ನರು ತಿಳಿಸಿರುವರು.

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಈ ಪತ್ರದ ವಿಷಯವನ್ನು ಖಂಡಿಸಿ, ಇದರಿಂದ ಇತರ ದೇಶವೊಂದು ತಮ್ಮ ಅಂತರಿಕ ವ್ಯವಹಾರದಲ್ಲಿ ಪ್ರವೇಶಿಸಿದಂತಾಗಿರುವುದೆಂದು ತಿಳಿಸಿರುತ್ತಾರೆ

ಬರ್ಮದಲ್ಲಿ ವಿದ್ಯಾರ್ಥಿ ಸಂಘಗಳ ರದ್ದು

ಬರ್ಮಾ ದೇಶದಲ್ಲಿರುವ ಎಲ್ಲಾ ವಿದ್ಯಾರ್ಥಿ ಸಂಘಗಳನ್ನು ೩೦ ದಿನಗಳಲ್ಲಿ ರದ್ದುಗೊಳಿಸುವಂತೆ ಅಲ್ಲಿನ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ವಿದ್ಯಾರ್ಥಿಗಳಲ್ಲಿ ಅಶಿಸ್ತನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಿತಾರ್. ೭-೧೫ ಡಿ. ವಿ. ವಸಂತ್-ದೇವರ ನಾಮ. ೭-೩೦ ಗಾನ ವಿಹಾರ. ೮-೧೫ ರಿಕಾರ್ಡು. ಮಧ್ಯಾಹ್ನ ೧೨ ಆರ್. ಎಂ. ಯಶೋದಾ ಕೃಷ್ಣ-ಪಿಟೀಲು. ೧೨-೩೦ ರಿಕಾರ್ಡು. ೧ ವನಿತಾ ವಿಹಾರ. ೧-೫೦ ಸಿತಾರ್. ೨-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೫-೩೦ ಮತ್ತು ೯-೧೫ ಆರ್. ಎಸ್. ಕೇಶವಮೂರ್ತಿ-ವೀಣೆ. ೬-೩೦ ಬಿ. ವಿ. ಇಂದಿರಾ-ಕಾವ್ಯ ವಾಚನ. ೭-೩೦ ಸಂಸ್ಥಾನದ ಅಭಿವೃದ್ಧಿ ಯೋಜನೆ-ಕನ್ನಡ ಭಾಷಣ. ೮ ಕಾದಂಬರಿ ಮುಟ್ಟಿತು-ನುಡಿ ಚಿತ್ರ. ೮-೩೦ ವಿಶ್ವ ಸಂಸ್ಥೆ ದಿನಾಚರಣೆ-ರಾಷ್ಟ್ರಾಧ್ಯಕ್ಷರ ಸಂದೇಶ. ೧೦ ಚಿತ್ರ ಸಂಗೀತ. ೧೦-೧೫ ಉರ್ದು ಗೀತೆ.

ಮೆಡಿಕಲ್ ಪ್ರದರ್ಶನಕ್ಕೆ ೫೫ ಸಾವಿರ ಜನರ ಭೇಟಿ

ಮೈಸೂರು ೨೨

ದಸರಾ ವಸ್ತು ಪ್ರದರ್ಶನದ ಅಂಗವಾಗಿ ಏರ್ಪಾಡಾಗಿರುವ ವಸ್ತು ಪ್ರದರ್ಶನದ ಮುಕ್ತಾಯ ಸಮಾರಂಭವನ್ನು ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಕೆ. ವಿ. ಪುಟ್ಟಪ್ಪನವರು ನೆನ್ನೆ ನೆರವೇರಿಸಿ, ಇಂತಹ ಪ್ರದರ್ಶನಗಳಿಂದ ಜನರ ಆರೋಗ್ಯ ಭಾಗ್ಯವು ಹೆಚ್ಚಲು ಸಹಾಯವಾಗಲೆಂದು ಹಾರೈಸಿದರು.

ಪ್ರಾರ್ಥನೆಯನಂತರ ಡಾ|| ಅಪ್ಪಾಜಯ್ಯನವರು ಸ್ವಾಗತ ಭಾಷಣ ಮಾಡಿ, ಮೆಡಿಕಲ್ ವಸ್ತು ಪ್ರದರ್ಶನಕ್ಕೆ ಇದುವರೆಗೆ ೫೫ ಸಾವಿರ ಜನರು ಭೇಟಿ ಕೊಟ್ಟಿದ್ದರೆಂದು ತಿಳಿಸಿದರು. ೨,೫೦೦ ಜನರು ತಮ್ಮ ಆರೋಗ್ಯ ಪರೀಕ್ಷೆಯನ್ನು ಮಾಡಿಸಿಕೊಂಡಿರುವರೆಂದೂ, ೧,೫೦೦ ಜನರು ಎಕ್ಸರೇ ಪರೀಕ್ಷೆಯನ್ನು ಮಾಡಿಸಿಕೊಂಡಿರುವರೆಂದೂ ಅವರು ಹೇಳಿ, ಇವುಗಳಿಂದ ಬಂದಿರುವ ಹಣವನ್ನೂ ಮತ್ತು ದಸರಾ ವಸ್ತು ಪ್ರದರ್ಶನದ ಸಮಿತಿಯವರು ನೀಡಿರುವ ಧನ ಸಹಾಯವನ್ನೂ ಸೇರಿಸಿಕೊಂಡು ಮೊಬೈಲ್ ವ್ಯಾನನ್ನು ಕೊಂಡುಕೊಂಡು ಗ್ರಾಮಾಂತರ ಪ್ರದೇಶಗಳಲ್ಲಿ ವೈದ್ಯ ಸಹಾಯ ನೀಡಲು ಏರ್ಪಾಡು ಮಾಡಲಾಗುವುದೆಂದು ತಿಳಿಸಿದರು. ಪ್ರದರ್ಶನದಿಂದ ಸಾರ್ವಜನಿಕರು ತಮ್ಮ ಆರೋಗ್ಯ ರಕ್ಷಣೆ ವಿಷಯವಾಗಿ ಬಹುಮಟ್ಟಿನ ಪ್ರಯೋಜನ ಹೊಂದಿರುವರೆಂದೂ ಅವರು ನುಡಿದರು.

ಮಹಿಳೆಯರ ವಿವಿಧ ವೇಷ ಸ್ಪರ್ಧೆ

ವಸ್ತು ಪ್ರದರ್ಶನದಲ್ಲಿ ನಡೆದ ಮಹಿಳೆಯರ ವಿವಿಧ ವೇಷ ಸ್ಪರ್ಧೆಯಲ್ಲಿ ಶ್ರೀಮತಿಯರಾದ ಪಿ. ಎಸ್. ಪುಷ್ಪಕುಮಾರಿ, ಲಕ್ಷ್ಮಿದ್ವಾರಕಾನಾಥ್ ಮತ್ತು ಎಂ. ಮಾಣಿಕ್ಯರವರಿಗೆ ಪ್ರಥಮ ಮೂರು ಸ್ಥಾನಗಳು ಬಂದಿವೆ.

ಜೂನಿಯರ್ ನೃತ್ಯ ಸ್ಪರ್ಧೆ

ವಸ್ತು ಪ್ರದರ್ಶನದಲ್ಲಿ ನಡೆದ ಜೂನಿಯರ್ ನೃತ್ಯ ಸ್ಪರ್ಧೆಯಲ್ಲಿ ಕುಮಾರಿಯರಾದ ವತ್ಸಲ, ಬೇಬಿ ಚಿತ್ರರೇಖ ಮತ್ತು ಕುಮಾರಿ ಪ್ರಭಾಮಣಿಯವರಿಗೆ ಬಹುಮಾನಗಳೂ, ೫ ಜನರಿಗೆ ಪ್ರಶಸ್ತಿ ಪತ್ರಗಳೂ ಬಂದಿವೆ.

ಸಂಜೀವರೆಡ್ಡಿಯವರು ನೂತನ ಆಂಧ್ರದ ಮುಖ್ಯ ಮಂತ್ರಿ

ನೂತನ ಆಂಧ್ರ ಪ್ರದೇಶ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ನೆನ್ನೆ ಆಂಧ್ರದ ಈಗಿನ ಮುಖ್ಯ ಮಂತ್ರಿ ನೀಲಂ ಸಂಜೀವರೆಡ್ಡಿಯವರು ಬಹುಮತದ ಬೆಂಬಲ ಪಡೆದು ಚುನಾಯಿತರಾದರು. ಅವರು ಮತ್ತು ಮುಖ್ಯ ಮಂತ್ರಿ ಬಿ. ಗೋಪಾಲರೆಡ್ಡಿಯವರಿಗೆ ಬೆಂಬಲವಿದ್ದಿರುವುದೆಂಬುದನ್ನು ತಿಳಿಯಲು ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ರಹಸ್ಯ ಮತದಾನವನ್ನು ತೆಗೆದುಕೊಂಡು, ನಂತರ ವಿಧಿವತ್ತಾದ ಚುನಾವಣೆಯನ್ನು ನಡೆಸಿದರು. ಪಾರ್ಟಿ ಮುಖಂಡರ ಚುನಾವಣೆಯು ಪಕ್ಷದ ಒಳ ವಿಚಾರವಾಗಿರುವುದರಿಂದ ವೋಟಿನ ಫಲಿತಾಂಶವನ್ನು ತಿಳಿಸಬೇಕಾಗಿಲ್ಲವೆಂದೂ ಅವರು ಹೇಳಿದರು.

ನೂತನ ಮೈಸೂರು ಮುಖ್ಯ ಮಂತ್ರಿ ನಿಜಲಿಂಗಪ್ಪನವರು

ಸಂಕ್ಷಿಪ್ತ ಜೀವನ ಪರಿಚಯ

ನೂತನ ಮೈಸೂರಿನ ಪ್ರಥಮ ಮುಖ್ಯ ಮಂತ್ರಿಯಾಗಿ ಚುನಾಯಿತರಾಗಿರುವ ಶ್ರೀ ಸಿದ್ದವನಹಳ್ಳಿ ನಿಜಲಿಂಗಪ್ಪನವರು ೧೯೦೨ರಲ್ಲಿ ಹಾಲುವಾಗಿಲಿಯಲ್ಲಿ ಜನಿಸಿದರು. ಅತಿ ಚಿಕ್ಕ ವಯಸ್ಸಿನಲ್ಲೇ ಇವರಿಗೆ ಪಿತೃವಿಯೋಗವುಂಟಾಯಿತು. ಇವರ ವಿದ್ಯಾಭ್ಯಾಸವು ಸುಲಲಿತವಾಗಿ ನಡೆದು ೧೯೨೪ರಲ್ಲಿ ಮೈಸೂರು ವಿಶ್ವವಿದ್ಯಾಲಯದ ಬಿ.ಎ ಪದವಿಯನ್ನೂ, ೧೯೨೬ರಲ್ಲಿ ಪುಣೆಯಲ್ಲಿ ಎಲ್‌ಎಲ್.ಬಿ ಪದವಿಯನ್ನೂ ಪಡೆದರು.

ವ್ಯಾಸಂಗವು ಮುಗಿದನಂತರ ಚಿತ್ರದುರ್ಗದಲ್ಲಿ ವಕೀಲ ವೃತ್ತಿಯನ್ನು ಆರಂಭಿಸಿದರು. ತಮ್ಮ ಅಸಾಮಾನ್ಯ ಪ್ರತಿಭೆಯಿಂದ ಬಹಳ ಅಲ್ಪ ಕಾಲದಲ್ಲಿಯೇ ವೃತ್ತಿಯ ಯಶಸ್ಸನ್ನು ಗಳಿಸಿದರು. ಈ ವೇಳೆಗೆ ಭಾರತದಲ್ಲೆಲ್ಲಾ ವ್ಯಾಪಕವಾಗಿದ್ದ ಸ್ವಾತಂತ್ರ್ಯ ಚಳುವಳಿಯು ಮೈಸೂರಿನಲ್ಲೂ ಉಗ್ರರೂಪವನ್ನು ತಾಳಿ ಜವಾಬ್ದಾರಿ ಸರಕಾರದ ಹೋರಾಟವು ಆರಂಭವಾಯಿತು. ಶ್ರೀ ನಿಜಲಿಂಗಪ್ಪನವರು ವಕೀಲಿ ವೃತ್ತಿಯನ್ನು ಬಿಟ್ಟು, ೧೯೩೬ರಲ್ಲಿ ರಾಜಕೀಯಕ್ಕೆ ಧುಮುಕಿದರು. ದಿವಂಗತ ಕೆ. ಟಿ. ಭಾಷ್ಯಂ, ಶ್ರೀಗಳಾದ ಟಿ. ಸಿದ್ದಲಿಂಗಯ್ಯ, ಹೆಚ್. ಸಿ. ದಾಸಪ್ಪ, ಟಿ. ಸುಬ್ರಹ್ಮಣ್ಯ, ಕೆ. ಸಿ. ರೆಡ್ಡಿ ಮುಂತಾದವರೊಡನೆ ಸೇರಿ ಮೈಸೂರು ಕಾಂಗ್ರೆಸ್ ಸಂಸ್ಥೆಯ ಪುರೋಭಿವೃದ್ಧಿಗಾಗಿ ಶ್ರಮಿಸಿದರು. ೧೯೪೨ರಲ್ಲಿ ಆರಂಭವಾದ ಸತ್ಯಾಗ್ರಹದಲ್ಲಿ ಭಾಗವಹಿಸಿದುದರಿಂದ [illegible] ದರೋಡೆ ಆಪಾದನೆಗಾಗಿ ಇವರಿಗೆ ೩ ವರ್ಷಗಳ ಕಠಿಣ ಶಿಕ್ಷೆಯು ವಿಧಿಸಲ್ಪಟ್ಟಿತು. ಸರ್ ಮೈಲಿಯವರು ಶ್ರೇಷ್ಠ ನ್ಯಾಯಾಧೀಶರಾಗಿದ್ದಾಗ ಶ್ರೀ ನಿಜಲಿಂಗಪ್ಪ ಮತ್ತು ಇತರರು ಕಾನೂನು ಉಲ್ಲಂಘನೆ ಮಾಡಿದರೆಂದು ಇವರ ವಕೀಲಿ ಸನ್ನದನ್ನು ಮುಟ್ಟುಗೋಲು ಹಾಕಿಕೊಳ್ಳಲಾಯಿತು.

೧೯೪೫ರಲ್ಲಿ ಶ್ರೀಯುತರು ಮೈಸೂರು ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಚುನಾಯಿತರಾದರು. ನಂತರ ೧೯೪೬ರಲ್ಲಿ ಕರ್ನಾಟಕ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟು, ೪ ವರ್ಷಗಳ ಕಾಲ ಆ ಸ್ಥಾನದಲ್ಲಿ ಸೇವೆ ಸಲ್ಲಿಸಿದರು. ತಮಿಳು ನಾಡು ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಶ್ರೀ ಕಾಮರಾಜ ನಾಡಾರರನ್ನು ಬಿಟ್ಟರೆ ಪ್ರದೇಶ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ಇಷ್ಟು ದೀರ್ಘಕಾಲ ವಹಿಸಿದ್ದವರು ಇವರೊಬ್ಬರೇ.

ಶ್ರೀ ನಿಜಲಿಂಗಪ್ಪನವರು ಕೆಲವು ವರ್ಷ ಚಿತ್ರದುರ್ಗದ ಪೌರಸಭಾ ಸದಸ್ಯರಾಗಿಯೂ, ೧೯೩೭ರಿಂದ ೧೯೪೭ರವರೆಗೆ ಮೈಸೂರು ನ್ಯಾಯವಿಧಾಯಕ ಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿರುವರು. ೧೯೫೨ರ ಮಹಾ ಚುನಾವಣೆಯಲ್ಲಿ ಚಿತ್ರದುರ್ಗ ಕ್ಷೇತ್ರದಿಂದ ಭಾರತ ಲೋಕಸಭೆಯ ಸದಸ್ಯರಾಗಿ ಚುನಾಯಿತರಾದರು.

ಡಾII ಪಟ್ಟಾಭಿ ಸೀತಾರಾಮಯ್ಯ, ಪುರುಷೋತ್ತಮದಾಸ್ ಟಂಡನ್ ಮತ್ತು ಪಂಡಿತ ನೆಹರೂರವರು ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿದ್ದಾಗ ಶ್ರೀಯುತರು ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮತ್ತು ಪಾರ್ಲಿಮೆಂಟರಿ ಬೋರ್ಡುಗಳ ಸದಸ್ಯರಾಗಿದ್ದು ಕರ್ನಾಟಕ ಪ್ರಾಂತ ರಚನೆಯ ಬಗ್ಗೆ ಏಕೈಕರಾಗಿ ಹೋರಾಟ ನಡೆಸಿದರು. ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸದಸ್ಯರಾಗುವ ಯೋಗ ಮೈಸೂರಿನಲ್ಲಿ ಬೇರೆ ಯಾರಿಗೂ ಲಭಿಸಿಲ್ಲ

೧೯೪೮ರಲ್ಲಿ ಶಿವಮೊಗ್ಗದಲ್ಲೂ, ೧೯೫೧ರಲ್ಲಿ ಮಡಿಕೇರಿಯಲ್ಲೂ ನಡೆದ ಮಲೆನಾಡು ಸಮ್ಮೇಳನಗಳ ಅಧ್ಯಕ್ಷತೆ ವಹಿಸಿದ್ದರು. ಮಲೆನಾಡಿನ ಅಭಿವೃದ್ಧಿಗಾಗಿ ಅವರು ಮೊದಲಿನಿಂದಲೂ ಬಹಳ ಆಸಕ್ತಿ ಹೊಂದಿರುವರು

ಕರ್ನಾಟಕ ಏಕೀಕರಣಕ್ಕಾಗಿ ಶ್ರೀಯುತರು ಬಹಳವಾಗಿ ಶ್ರಮಿಸಿರುವರು. ಕರ್ನಾಟಕದ ಮೂಲೆಮೂಲೆಗಳಲ್ಲೂ ಸಂಚರಿಸಿ ಜನಾಭಿಪ್ರಾಯವನ್ನು ಸಂಗ್ರಹಿಸಿದರು. ಕರ್ನಾಟಕ ರಾಜ್ಯ ನಿರ್ಮಾಣಕ್ಕಾಗಿ ಹಗಲಿರುಳೂ ದುಡಿದ ಶ್ರೀ ನಿಜಲಿಂಗಪ್ಪನವರು ಈ ರಾಜ್ಯದ ಪ್ರಥಮ ಮುಖ್ಯ ಮಂತ್ರಿಯಾಗಿ ಚುನಾಯಿತರಾಗಿರುವುದು ಕನ್ನಡಿಗರೆಲ್ಲರಿಗೂ ಮಹದಾನಂದವನ್ನುಂಟುಮಾಡಿದೆ

ದಕ್ಷಿಣ ಪ್ರದೇಶದಲ್ಲಿ ೫ ಲಕ್ಷ ಟನ್ ಅಕ್ಕಿ ದಾಸ್ತಾನು

ಬೆಂಗಳೂರು ೨೨

ಕೇಂದ್ರ ಆಹಾರ ಖಾತೆ ಸಹಾಯಕ ಮಂತ್ರಿ ಶ್ರೀ ಎ. ಎಂ. ಕೃಷ್ಣಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ದಕ್ಷಿಣ ಪ್ರದೇಶದಲ್ಲಿ ಸುಮಾರು ೫ ಲಕ್ಷ ಟನ್ ಅಕ್ಕಿಯನ್ನು ದಾಸ್ತಾನು ಮಾಡುವಂತೆ ಭಾರತ ಸರಕಾರದವರು ವ್ಯವಸ್ಥೆ ಮಾಡಿರುವರೆಂದೂ, ಜನರಿಗೆ ಬೇಕಾಗುವ ಧಾನ್ಯವನ್ನು ಫೇರ್ ಪ್ರೈಸ್ ಅಂಗಡಿಗಳ ಮೂಲಕ ಕೊಡಲು ಸಾಧ್ಯವೆಂದೂ ತಿಳಿಸಿರುತ್ತಾರೆ. ಬೆಂಗಳೂರಿನಲ್ಲಿ ಧಾನ್ಯದ ಬೆಲೆಯು ಶೇಕಡ ೧೫-೨೦ ರಷ್ಟು ಕಡಿಮೆಯಾಗಿರುವುದೆಂದು ಸೂಚಿಸಿದರು. ನಿತ್ಯವೂ ಈ ನಗರದಲ್ಲಿ ೩೦೦ ಟನ್ನು ಅಕ್ಕಿಯನ್ನು ಒದಗಿಸುವುದು ಸರಕಾರದ ಆಲೋಚನೆಯಾಗಿದೆಯೆಂದೂ ಅವರು ಹೇಳಿರುತ್ತಾರೆ

ಷೇಕ್ ಅಬ್ದುಲ್ಲಾ ಸಹಚಾರಿಗಳ ಬಿಡುಗಡೆ

ಕಾಶ್ಮೀರ ಸರಕಾರದವರು ಮಾಜಿ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರ ಸಹಚಾರಿಗಳಾದ ಮಾಜಿ ಮಂತ್ರಿ ಮಿರ್ಜಾ ಅಫ್‌ಜಲ್‌ಬೇಗ್, ಅಬ್ದುಲ್ ಗನಿ ಗೋನಿ, ಗುಲಾಂ ಮಹಮದ್ ಬೇಗ್, ಹಕೀಂ ಅಬೀಬುಲ್ಲಾ ಮತ್ತು ಮಾಜಿ ಉಪ ಮಂತ್ರಿ ಮುಬಾರಕ್ ಷಹಾರವರನ್ನು ಬಿಡುಗಡೆ ಮಾಡಿರುತ್ತಾರೆ ಅವರುಗಳು ಕಾಶ್ಮೀರ ರಾಜ್ಯಾಂಗ ಸಭೆಯಲ್ಲಿ ಭಾಗವಹಿಸಲು ಅವಕಾಶ ಕಲ್ಪಿಸುವ ಸಲುವಾಗಿ ಬಿಡುಗಡೆ ಮಾಡಲಾಗಿದೆ.

ವಿದ್ಯಾ ಸಚಿವರಲ್ಲಿ ಹಿಂದಿ ಪ್ರಚಾರ ಸಭೆಯವರ ನಿಯೋಗ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಜಂಟಿ ಕಾರ್ಯದರ್ಶಿಗಳಾದ ಶ್ರೀ ಅವಧನಂದನರವರು, ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿ ಶ್ರೀ ಶ್ರೀಕಂಠಮೂರ್ತಿ, ಮೈಸೂರು ಹಿಂದೀ ಪ್ರಚಾರ ಸಭೆ ಮತ್ತು ಹಿಂದೀ ಪ್ರಚಾರಕ ಕಾರ್ಯದರ್ಶಿ ಶ್ರೀ ಎಂ. ಕೆ. ರಾಜಗೋಪಾಲ ಮತ್ತು ರಿಯಾಸತ್ ಹಿಂದೀ ಪ್ರಚಾರ ಸಮಿತಿಯ ಸಂಚಾಲಕರಾದ ಶ್ರೀ ಎ. ವಿ. ಶ್ರೀನಿವಾಸಮೂರ್ತಿಗಳನ್ನೊಳಗೊಂಡ ಒಂದು ನಿಯೋಗವು ಕಳೆದ ೧೩ನೇ ತಾರೀಖು ವಿದ್ಯಾ ಸಚಿವ ಶ್ರೀ ಎ. ಜಿ. ರಾಮಚಂದ್ರರಾಯರನ್ನು ಭೇಟಿ ಮಾಡಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಚಾರಕ ಶಿಕ್ಷಣ ತರಗತಿಗೆ ಮಾನ್ಯತೆಯನ್ನು ಮುಂದುವರಿಸಿ, ಮೈಸೂರಿನ ಪ್ರಚಾರಕ ವಿದ್ಯಾಲಯಕ್ಕೆ ಮಾನ್ಯತೆಯನ್ನು ಕೊಟ್ಟು, ಸರ್ಕಾರದ ಹೈಸ್ಕೂಲು ಹಿಂದೀ ಅಧ್ಯಾಪಕರುಗಳನ್ನು ಈ ವಿದ್ಯಾಲಯಕ್ಕೆ ಪ್ರಚಾರಕ ಶಿಕ್ಷಣ ಪಡೆಯಲು ವೇತನ ಸಹಿತ ಕಳುಹಿಸಿಕೊಡಬೇಕೆಂದು ಕೋರಿತು. ಅಲ್ಲದೆ ಹಿಂದೀ ಅಧ್ಯಾಪಕರುಗಳಿಗೆ ಅನೇಕ ವರ್ಷಗಳಿಂದ ವಾರ್ಷಿಕ ಬಡ್ತಿಯೇ ಬರದೆ ತುಂಬಾ ತೊಂದರೆಯಾಗಿದೆಯೆಂದೂ, ಕೂಡಲೇ ಬಡ್ತಿಯನ್ನು ಕೊಡಿಸಿಕೊಡಬೇಕೆಂದೂ ಒಂದು ಮನವಿ ಪತ್ರವನ್ನು ಸಲ್ಲಿಸಲಾಯಿತು. ಸಚಿವರು ಎಲ್ಲ ವಿಷಯವನ್ನೂ ಸಾವಧಾನವಾಗಿ ಕೇಳಿ ಈ ಬಗ್ಗೆ ಸೂಕ್ತಕ್ರಮ ಕೈಗೊಳ್ಳುವ ಭರವಸೆಯನ್ನಿತ್ತರು

ವಿಶ್ವ ಸಂಸ್ಥೆಯ ದಿನಾಚರಣೆ

ರಾಜಧಾನಿಯ ವಿಶ್ವ ಸಂಸ್ಥೆಯ ದಿನಾಚರಣೆ ಸಮಿತಿಯ ಆಶ್ರಯದಲ್ಲಿ ನಾಳಿದ್ದು ಟೌನ್‌ಹಾಲಿನಲ್ಲಿ ವಿಶ್ವ ಸಂಸ್ಥೆಯ ದಿನಾಚರಣೆಯು ನೆರವೇರುವುದು. ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು. ಅಂದು ಬೆಳಿಗ್ಗೆ ೯ ಗಂಟೆಗೆ ಧ್ವಜಾರೋಹಣವೂ, ಸಂಜೆ ೬ಕ್ಕೆ ಸಾರ್ವಜನಿಕ ಸಭೆಯೂ ಇವೆ.

ನಗರದಲ್ಲಿ ಸಹಕಾರ ಶಿಕ್ಷಣ

ಅಂತರ ರಾಷ್ಟ್ರೀಯ ಕಾರ್ಮಿಕ ಕಛೇರಿಯ ಆಶ್ರಯದಲ್ಲಿ ಭಾರತ ಸರಕಾರದವರು ಮೈಸೂರು ನಗರದಲ್ಲಿ ೪ ವಾರಗಳು ಪ್ರಾದೇಶಿಕ ಸಹಕಾರ ಶಿಕ್ಷಣ ತರಗತಿಯನ್ನು ನಡೆಸುವರೆಂದು ತಿಳಿದುಬಂದಿದೆ ದೇಶದ ನಾನಾ ಭಾಗಗಳಿಂದ ೪೦ ಜನರು ಅದರಲ್ಲಿ ಭಾಗವಹಿಸುವರು ಬರುವ ತಿಂಗಳು ಮಧ್ಯ ಭಾಗದಲ್ಲಿ ಇದು ಆರಂಭವಾಗಲಿದೆ.

ಹಿಮ ಪ್ರವಾಹದಿಂದ ೨೩ ಜನರ ಮರಣ

ಹಿಮಾಲಯ ಪರ್ವತ ಪ್ರದೇಶದ ಉತ್ತರ ಘರ್ವಾಲ್ ಜಿಲ್ಲೆಯ ನಂದ ಪ್ರಯಾಗದ ಬಳಿ [illegible] ಎಂಬಲ್ಲಿ ಹಿಮ ಪ್ರವಾಹ ಬಿದ್ದು ೨೩ ಮಂದಿ ಗ್ರಾಮಸ್ಥರು ಮೃತಪಟ್ಟಿರುವುದಾಗಿ ವರದಿಯಾಗಿದೆ.

ಆಂಧ್ರದಲ್ಲಿ ಖೈದಿಗಳಿಗೆ ೧ ತಿಂಗಳ ರಿಯಾಯಿತಿ

ನೂತನ ಆಂಧ್ರ ಸಂಸ್ಥಾನದ ರಚನೆಯ ಸಂತೋಷಾರ್ಥವಾಗಿ ಅಲ್ಲಿನ ಸರಕಾರದವರು ಎಲ್ಲಾ ಖೈದಿಗಳಿಗೂ ಒಂದು ತಿಂಗಳ ಸಜಾವನ್ನು ತಗ್ಗಿಸಿರುತ್ತಾರೆ.

ವಸ್ತು ಪ್ರದರ್ಶನದಲ್ಲಿ ಮಕ್ಕಳ ದಿನಾಚರಣೆ

ದಸರಾ ವಸ್ತು ಪ್ರದರ್ಶನದಲ್ಲಿ ನಾಳಿದ್ದು ಮಕ್ಕಳ ದಿನಾಚರಣೆಯನ್ನು ಏರ್ಪಡಿಸಲಾಗಿದೆ. ಬೆಳಿಗ್ಗೆ ೮ ಗಂಟೆಗೆ ಪ್ರಾಥಮಿಕ ಶಾಲಾ ಬಾಲಕ ಬಾಲಕಿಯರುಗಳ ವಿವಿಧ ಆಟ ಸ್ಪರ್ಧೆಗಳೂ, ಸಂಜೆ ೪ಕ್ಕೆ ಶಿಶುವಿಹಾರಗಳ ಮಕ್ಕಳಿಂದ ವ್ಯಾಯಾಮ, ವಿವಿಧ ವೇಷ ಸ್ಪರ್ಧೆ, ಕೋಲಾಟ, ನೃತ್ಯನಾಟಕ ಮುಂತಾದ ಕಾರ್ಯಕ್ರಮಗಳೂ, ಮತ್ತು ವಸ್ತು ಪ್ರದರ್ಶನದ ಆವರಣದಲ್ಲಿ ಮಕ್ಕಳ ಮೆರವಣಿಗೆಯೂ ಜರುಗುವುವು. ಅಂದು ಮಧ್ಯಾಹ್ನ ನಗರದ ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಿಗೆ ರಜಾ ಕೊಡುವಂತೆ ಜಿಲ್ಲಾ ವಿದ್ಯಾಧಿಕಾರಿಗಳನ್ನು ಕೋರಲಾಗಿದೆ. ಅಲ್ಲದೆ ಮಧ್ಯಾಹ್ನ ಬರುವ ಈ ಶಾಲೆಗಳ ಮಕ್ಕಳಿಗೆ ಪ್ರವೇಶ ಧನ ತಲಾ ಒಂದಾಣೆ ಮಾತ್ರ.

ಬರುವ ತಿಂಗಳು ನಗರದಲ್ಲಿ ವೈದ್ಯ ಪ್ರವೀಣರ ಸಮ್ಮೇಳನ

ಭಾರತದ ಫಾರ್ಮಕಾಲಜಿಸ್ಟರುಗಳ ಸಂಘದ ಸದಸ್ಯರು ಬರುವ ತಿಂಗಳು ೧೩ನೇ ತಾರೀಖು ಮೈಸೂರು ನಗರದಲ್ಲಿ ಸಮ್ಮೇಳನ ಸೇರಲಿರುವರು ವೈದ್ಯ ಸಂಶೋಧನೆಯ ಭಾರತೀಯ ಕೌನ್ಸಿಲಿನ ಡೈರೆಕ್ಟರ್ ಸಿ. ಜಿ. ಪಂಡಿತ್‌ರವರು ಅಧ್ಯಕ್ಷತೆ ವಹಿಸುವರು. ಅಲ್ಲದೆ ನಗರದಲ್ಲಿ ಭಾರತೀಯ ಕೌನ್ಸಿಲ್ ಸಭೆಯೂ ೧೬ನೇ ತಾರೀಖು ಸೇರುವುದು. ಕೇಂದ್ರ ಮಂತ್ರಿ ರಾಜಕುಮಾರಿ ಅಮೃತ ಕೌರ್‌ರವರು ಅಧ್ಯಕ್ಷತೆ ವಹಿಸುವರು. ೨೦೦ ಮಂದಿ ಪ್ರತಿನಿಧಿಗಳು ಭಾಗವಹಿಸಲಿರುವರು.

ಹಾಸಿಗೆ - ದಿಂಬು
ಸುಪದ್ಧತಿಯಲ್ಲಿ ಹತ್ತಿ ದಿಂಬು ತಯಾರು ಮಾಡುತ್ತೇವೆ
ಬಾಷುಸಾಬ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

SRI GAYATHRI
TALKIES
To-day : Last Day
MOON FLEET
From 23-10-56 . For 2 days
Warner's
DAM BUSTERS
With:- Richard Todd
Michael Redgrave
A powerful picture depicting the war events of 1944
Along with this a news-reel showing Nehru's visit to Saudi Arabia will also be screened

ಮದ್ರಾಸ್ ಕ್ರಿಕೆಟ್ ಆಟಗಾರ ರಾಂಸಿಂಗರಿಗೆ ೧೨,೦೦೦ ರೂ. ನಿ

ಮದ್ರಾಸಿನ ಸುಪ್ರಸಿದ್ಧ ಕ್ರಿಕೆಟ್ ಆಟಗಾರರಾದ ರಾಮ್‌ಸಿಂಗ್‌ರವರ ಉತ್ತಮ ಆಟವನ್ನು ಮೆಚ್ಚಿ ಅವರಿಗೆ ಭಾರತದ ಕ್ರಿಕೆಟ್ ಸಂಘದ ಅಧ್ಯಕ್ಷರಾದ ವಿಜಯನಗರದ ರಾಜಕುಮಾರರು ಮೊನ್ನೆ ೧೦,೦೦೧ ರೂ.ಗಳನ್ನು [illegible] ದರು. ರಾಂಸಿಂಗ್‌ರವರು ಈಗ ಕ್ರಿಕೆಟ್ [illegible] ತರಬೇತುಗಾರರಾಗಿರುವರು.

ಫುಟ್‌ಬಾಲ್ ಪಂದ್ಯ

ಸುಬ್ಬುಕೃಷ್ಣಯ್ಯ ಸ್ಮಾರಕ 'ಬಿ' ಡಿವಿಷ ಫುಟ್‌ಬಾಲ್ ಪಂದ್ಯವು ನೆನ್ನೆ ಜಯಭೇ ಮತ್ತು ನರಸಿಂಹರಾಜಾ ಯೂನಿಯನ್ ಟೀ ಗಳಿಗೆ ನಡೆದು, ಒಂದೊಂದು ಗೋಲುಗಳಿ ಡ್ರಾ ಆಗಿ ಮತ್ತೆ ನೆನ್ನೆ ನಡೆದು ಪುನಹ ಎರ ಡು ಗೋಲುಗಳಿಂದ ಡ್ರಾ ಆಯಿತು. ಜಯಭೇ ಮ ಟೀಮಿನ ಚಂದ್ರಶೇಖರ್ ಮತ್ತು ಗಂಗ ರಯ್ಯನವರೂ, ನರಸಿಂಹರಾಜಾ ಯೂನಿಯ ನ ಸೈಮನ್ ಮತ್ತು ಶಿಸ್ಪರ್ ಅಹಮದ್ ರೂ ತಲಾ ಒಂದೊಂದು ಗೋಲುಗಳನ್ನು ಡೆದರು.

ಉಪನಿಷತ್ ಕಾಲಕ್ಷೇಪ

ವಾಣೀವಿಲಾಸ ಮೊಹಲ್ಲೆಯ ಆಂಜ ನೇಯ ಮಂದಿರದಲ್ಲಿ ಪ್ರತಿ ನಿತ್ಯವೂ ಸಂಜೆ ೬ ರಿಂದ ವರೆಗೆ ಶ್ರೀಮದ್ಭಾಗವತ ಮತ್ತು ಉಪನಿಷತ್ ಲಕ್ಷೇಪವು ನಡೆಯುವುದು. ಸರ್ವರಿಗೂ ಸ್ವಾ ಗತವುಂಟು.

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರ

ನಾಳೆ ಬೆಳಿಗ್ಗೆ ಭಾರತ ವಾಚನ-ಶ್ರೀಮತಿ ಗಿ ರಮ್ಮ ನಾಗರಾಜ್‌ರವರಿಂದ. ಸಂಗೀತ-ಶ್ರೀಮ ಯರಾದ ಜಿ. ಸುನಂದ ಮತ್ತು ಜಿ. ಯಶೋ ರವರಿಂದ. ಸಂಜೆ : ರಾಗಿಬೀಸುವ ಪದ ಮತ್ತು ಸೋಬಾನೆ ಪದ-ಹಿನಕಲ್ ಹಾಡ ಯರಿಂದ ಸಂಗೀತ-ವಿII ಸಿ. ಎಸ್. ಶಂಕರನಾರಾಯಣ ವರಿಂದ. ನಾಟಕ : "ಕರುಳಿನ ಸೆಳೆತ" ಮ "ನಾಗದೇವ"-ಕರುಣ ಸಂಘದಿಂದ ಮ "ಬಡತನದ ಭೂತ". ಉದಯ ಕಲಾ ಮ ಲಿಯವರಿಂದ.

ELECTRIC MOTOR FOR SALE
½ H P. Motor-25 Cycles. 14
R. P. M. 220 Volts. Cost abo
Rs 100. Enquire:—
Young India Electrical Winding Work
Gandhi Square, Mysore

ಕನ್ನಾನೂರು ಬನೀನುಗಳು
ಮದರಾಸು, ಮಧುರಾ, ಮೈಸೂರು, ಕೊಲ್ಲಂ, ತಲಚೇರಿ ಮೊದಲಾದ ವಸ್ತು ರ್ಶನಗಳಲ್ಲಿ ಉತ್ತಮ ಬಹುಮಾನಗಳನ್ನು ದು ಜನ ಮೆಚ್ಚಿಗೆ ಹೊಂದಿರುವ "ಕನ್ನಾ ಬಿನೋಲಿ ಹೊಸೈರಿ ಫ್ಯಾಕ್ಟರಿ ಬನೀ ಳು" ದಸರಾ ವಸ್ತು ಪ್ರದರ್ಶನದ ಸ್ಟಾಲ್ 34ರಲ್ಲಿ ದೊರೆಯುತ್ತವೆ.
ವಿಳಾಸ:-
ದಿ ಬಿನೋಲಿ ಹೊಸೈರಿ ಫ್ಯಾಕ್ಟರಿ,
ಕನ್ನಾನೂರು

Edited, Printed and Published
A. R. Nagarajan at Sadhvi Pr
D. Subbiah Road, Mysore

THE VYSYA BANK LIMITED
MYSORE BRANCH
-:CHANGE OF ADDRESS:-
On & from WEDNESDAY the 24th OCTOBER 1956
our office will be shifted to a spacious building
at SITE No. 7
(1st Floor of M/s A. Shankara Setty & Sons' Building)
New Statue Square, Mysore
All are requested to kindly note this change in address
M. Suraiah Setty,
Manager.

[illegible] ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71|1. ಅವೆನ್ಯೂ ರೋಡ್
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು -2

ಸ್ತಕ : ೧೮] SADHVI : TUESDAY 23—10—1956 ಮೈಸೂರು : ಮಂಗಳವಾರ ೨೩—೧೦—೧೯೫೬ [ಸಂಚಿಕೆ : ೫೦

- ಸರಳ ರೀತಿಯಲ್ಲಿ ನೂತನ ಸಂಸ್ಥಾನಗಳ ಉದಯ -

ಗ್ರಾಮಾಂತರದಲ್ಲಿ ಹೆಚ್ಚು ಸ್ಪತ್ರೆಗಳ ಸ್ಥಾಪನೆ ಅವಶ್ಯಕ

ದ್ಯ ಸಮ್ಮೇಳನದಲ್ಲಿ ರಾಜಪ್ರಮುಖರ ಭಾಷಣ

ಮಂಡ್ಯ ೨೨

ಸೂರು ಸಂಸ್ಥಾನದ ವೈದ್ಯರ ಸಂಘದ ವಾರ್ಷಿಕ ಸಮ್ಮೇಳನವನ್ನು ಮೈಸೂರಿನ ಪ್ರಮುಖರು ನೆನ್ನೆ ಆರಂಭಗೊಳಿಸಿದರು. ಆ ಭಾಷಣ ಮಾಡಿ, ಗ್ರಾಮಾಂತರದಲ್ಲಿ ಹೆಚ್ಚು ತ್ರೆಗಳನ್ನು ತೆರೆಯಬೇಕೆಂಬ ಬೇಡಿಕೆಗಳು ಯಾಗುತ್ತಿರುವುದಾಗಿಯೂ, ಹಲವು ಆರಿ ಗ್ರಾಮ ಕೇಂದ್ರಗಳಲ್ಲಿ ಆಸ್ಪತ್ರೆಗಳನ್ನು , ಸುತ್ತಮುತ್ತಲಿನ ಜನರಿಗೆ ಅನುಕೂಲ ವಂತೆ ಮಾಡಬೇಕೆಂದೂ, ಪ್ರತಿ ಹತ್ತು ರ ಜನರು ಮತ್ತು ಪ್ರತಿ ಐದು ಮೈಲಿ ಘಾ ಒಂದು ಆಸ್ಪತ್ರೆ ಇರಬೇಕೆಂದೂ ತಿಳಿಸಿ

ವರಲ್ಲಿ ವೈದ್ಯ ಸಂಘವು ಸ್ಥಾಪಿತವಾದಾ ಸ್ಥಾನದಲ್ಲಿ ವೈದ್ಯ ಇಲಾಖೆಗೆ ವೆಚ್ಚವಾಗು ೧೩ ಲಕ್ಷ ರೂ. ಈಗ ೧೦೫ ಲಕ್ಷಕ್ಕೆ ಏ ಕಿಂದೂ, ಪ್ರತಿ ೧೮ ಸಾವಿರ ಜನ ಮತ್ತು ದರ ಮೈಲಿ ಪ್ರದೇಶಕ್ಕೆ ಒಂದು ಆಸ್ಪತ್ರೆ ವೆಂದೂ ಅವರು ನಿರೂಪಿಸಿದರು. ವೈದ್ಯ ವೃತ್ತಿಗೆ ತಕ್ಕಂತೆ ನಡೆಯಬೇಕೆಂದೂ ದರು. ಡಾ|| ಸಿ. ಬಂದೀಗೌಡರು ಸ್ವಾಗ ಣ ಮಾಡಿದರು.

ತ್ರರಾಗಿರುವ, ಸಂಘದ ಅಧ್ಯಕ್ಷ ಡಾ|| ರ್. ರಾಮಲಿಂಗಶೆಟ್ಟಿಯವರ ಭಾಷಣವಾ , ಸಮ್ಮೇಳನದ ಅಧ್ಯಕ್ಷ ಡಾ|| ವೆಂಕಟ ಯರು ಮೂ ಕ ಗಾ ತಿ, ವೈದ್ಯ ವಿದ್ಯಾ ವಿಚಾರವನ್ನು ಪ್ರಸ್ತಾಪಿಸಿದರು. ದ್ವಿತೀ ವಾರ್ಷಿಕ ಯೋಜನೆಯಲ್ಲಿ ಆಗಬೇ ಲಸಗಳನ್ನು ಅವರು ತಿಳಿಸಿದರು. ಮೈ ಸ್ಥಾನದಲ್ಲಿ ೪|| ವರ್ಷಗಳ ತರಗತಿ ಮ [illegible] ಗೃಹ ಶಿಕ್ಷಣ ಗಬೇಕೆಂದು ಸಲಹೆ ಮಾಡಿದರು. ೦ ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾ ತ್ತಾರೆ.

ಗಲ್ ಕೆರೆ ಏರಿ ಒಡೆದು ಭಾರಿ ನಷ್ಟ

ನದಲ್ಲಿ ಮೂರನೇ ಅತ್ಯಂತ ದೊಡ್ಡ ಕೆ ಕುಣಿಗಲ್ ಕೆರೆಯ ಏರಿಯು ೩೦೦ ಷ್ಟು ಒಡೆದುಹೋಗಿ ತುಮಕೂರು-ಮ ಗೂ, ಬೆಳೆಗಳಿಗೂ ವಿಪರೀತ ನಷ್ಟ ರಿಯ ಒತ್ತಿನ ರಸ್ತೆಯಲ್ಲಿ ೨೦ ಅಡಿ ಡಿದೆ. ೨೫ ಲಕ್ಷ ರೂ.ಗಳಷ್ಟು ನಷ್ಟ ವೆಂದು ಹೇಳಲಾಗಿದೆ. ಆದರೆ ಸಾವು ನೂ ಆಗಿಲ್ಲ.

ಸೀನಿಯರ್ ವ್ಯಕ್ತಿ ಸ್ಪರ್ಧೆ

ಪ್ರದರ್ಶನದಲ್ಲಿ ನಡೆದ ಸೀನಿಯರ್ ಸ್ಪ ಯಲ್ಲಿ ಕುಮಾರಿ ನಾಗವೇಣಿ, ಸಂ ಮತ್ತು ಧರ್ಮದರ್ಶಿಗೆ ಕ್ರಮವಾಗಿ ರು ಬಹುಮಾನಗಳು ಬಂದಿವೆ.

ಕರ್ನಾಟಕದಲ್ಲಿ ರಾಜಪ್ರಮುಖರ ಪ್ರವಾಸ ಕಾರ್ಯಕ್ರಮ

ಮೈಸೂರಿನ ರಾಜಪ್ರಮುಖರು ನಾಳಿದ್ದು ಬೆಂಗಳೂರಿನಿಂದ ಹೊರಟು ೨೮ ರವರೆಗೆ ಕರ್ನಾಟಕದಲ್ಲಿ ಪ್ರವಾಸ ಕೈಗೊಳ್ಳುವರು. ೨೬ನೇ ತಾರೀಕು ಧಾರವಾಡದಲ್ಲಿ ಅವರು ಎಸ್. ಎಸ್. ಬಸವನಾಳರ ಪ್ರತಿಮೆಯ ಅನಾವರಣ ಮಾಡುವರು. ಅಲ್ಲದೆ ಬಸವನಾಳರ ಸ್ಮಾರಕ ಸಂಪುಟದ ಸಮಾರಂಭದ ಅಧ್ಯಕ್ಷತೆ ವಹಿಸುವರು. ಕರ್ನಾಟಕ ಸಹಕಾರ ಸಂಘದ ಶಂಕುಸ್ಥಾಪನೆಯನ್ನು ನೆರವೇರಿಸುವರು. ಮಾರನೇ ದಿನ ಸವದತ್ತಿ ಮತ್ತು ಬೈಲಹೊಂಗಲದ ಪೌರಸಭೆಗಳ ಮಾನಪತ್ರವನ್ನು ಸ್ವೀಕರಿಸುವರು. ೨೮ನೇ ತಾರೀಕು ಹುಬ್ಬಳ್ಳಿಯಲ್ಲಿ ಕಲಾ ಶಾಲೆ ಮತ್ತು ಸಂಸ್ಥಾನದ ರಸ್ತೆ ಸಂಚಾರ ಇಲಾಖೆಯ ಕಾರ್ಖಾನೆಯ ಶಂಕುಸ್ಥಾಪನೆಯನ್ನು ನೆರವೇರಿಸುವರು. ೨೯ರ ಬೆಳಿಗ್ಗೆ ಮೈಸೂರಿಗೆ ಹಿಂದಿರುಗುವರು.

ಪಾಕಿಸ್ತಾನದ ಅಧಿಕಾರಿಯಿದ್ದ ವಾಹನದಿಂದ ೧೪,೯೦೦ ರೂ. ವಶ

ಅಮೃತಸರದಿಂದ ನೆನ್ನೆ ಲಾಹೋರಿಗೆ ಬಂದ ಪಾಕಿಸ್ತಾನ ಸರ್ಕಾರದ ನೌಕರರ ಮೋಟಾರು ವಾಹನದಲ್ಲಿದ್ದ ೧೪,೯೦೦ ರೂ. ಗಳ ಭಾರತದ ನೋಟುಗಳನ್ನು ವಶಪಡಿಸಿಕೊಳ್ಳಲಾಯಿತೆಂದು ವರದಿಯಾಗಿದೆ. ಪಾಕಿಸ್ತಾನದ ರಾಷ್ಟ್ರೀಯ ಸಭೆಯ ಕಾರ್ಯದರ್ಶಿ ಎಂ. ಬಿ. ಅಹಮದ್ ಮತ್ತು ಅವರ ಪತ್ನಿಯು ಆ ಮೋಟಾರಿನಲ್ಲಿದ್ದರೆಂದೂ, ಅವರು ಹಣವನ್ನು ತರಲು ಅಮೃತಸರಕ್ಕೆ ಹೋಗಿದ್ದರೆಂದೂ ಹೇಳಲಾಗಿದೆ.

ಗ್ರಾಮಾಂತರ ವಸತಿ ಗೃಹಗಳ ಯೋಜನೆ

ದ್ವಿತೀಯ ಯೋಜನೆ ಅವಧಿಯಲ್ಲಿ ಸಾಮೂಹಿಕ ಮತ್ತು ರಾಷ್ಟ್ರೀಯ ವಿಸ್ತರಣಾ ಸೇವಾ ಯೋಜನೆಗಳ ಅಂಗವಾಗಿ ೭೦೫ ಗೃಹ ವಸತಿಗಳ ಕಾರ್ಯವನ್ನು ನಡೆಸುವಂತೆ ಕೇಂದ್ರದವರು ಸಂಸ್ಥಾನ ಸರ್ಕಾರಗಳಿಗೆ ಸೂಚಿಸಿದ್ದಾರೆ. ಮೈಸೂರಿನಲ್ಲಿ ಅಂತಹ ೧೭ ಪ್ರಾಜೆಕ್ಟುಗಳನ್ನು ನಡೆಸಲಾಗುವುದು. ಈ ಯೋಜನೆ ಪ್ರಕಾರ ಹಳ್ಳಿಗಳನ್ನು ಸ್ವಾವಲಂಬಿಯಾಗಿರುವ ಪೂರ್ಣ ಅಭಿವೃದ್ಧಿಗೊಂಡ ಕ್ಷೇತ್ರಗಳನ್ನಾಗಿ ಮಾಡಲಾಗುವುದು. ನೀರು ಸರಬರಾಜು, ನಿರ್ಮಲೀಕರಣ, ದೀಪ ಮತ್ತು ನೀರಾವರಿ ಸೌಕರ್ಯ, ಸಹಕಾರ ಸಂಘ, ಗೃಹ ಮತ್ತು ಸಣ್ಣ ಕೈಗಾರಿಕೆಗಳು ಇವೇ ಮುಂತಾದ ಸೌಲಭ್ಯಗಳನ್ನು ಇವು ಹೊಂದಿರುವುವು. ಇಂತಹ ಮಾದರಿ ಗ್ರಾಮಗಳನ್ನು ನಿರ್ಮಿಸಲು ೧೦ ಕೋಟಿ ರೂ ವೆಚ್ಚ ಮಾಡಲಾಗುವುದು

ಮಂಡ್ಯದಲ್ಲಿ ಬಾಲಕನ ಬಂಧನ

ಬೆಂಗಳೂರಿನ ಶ್ರೀರಾಮಪುರದ ನಿವಾಸಿ ಶ್ರೀ ಗುರುಮೂರ್ತಿಶಾಸ್ತ್ರಿಗಳ ಮಗನೆಂದು ಹೇಳಲಾದ ಎಸ್. ಜಿ. ವಿಶ್ವನಾಥ್ ಎಂಬ ೧೫ ವರ್ಷದ ಬಾಲಕನು ಮಂಡ್ಯದ ಪೇಟೆ ಬೀದಿಯಲ್ಲಿ ನೂರು ರೂಪಾಯಿನ ನೋಟುಗಳನ್ನು ಮುರಿಸಿ, ಮನಬಂದಂತೆ ವೆಚ್ಚ ಮಾಡುತ್ತಿದ್ದಾಗ ಪೊಲೀಸರಿಗೆ ಅನುಮಾನ ಬಂದು ಆತನನ್ನು ಬಂಧಿಸಿರುತ್ತಾರೆ

ಮಿಸ್ಟರ್ ಮೈಸೂರು ಪ್ರಶಸ್ತಿ

ಮೈಸೂರು ೨೨

ದಸರಾ ಪ್ರದರ್ಶನದಲ್ಲಿ ನಡೆದ ದೇಹ ಸೌಂದರ್ಯ ಸ್ಪರ್ಧೆಯಲ್ಲಿ ಭಾರತ ವಿಮಾನ ಪಡೆಯ ಶ್ರೀ ಪಾರ್ಮರ್‌ರವರು [illegible] ಮಿಸ್ಟರ್ ಮೈಸೂರು ಪ್ರಶಸ್ತಿಯನ್ನು ಪಡೆದಿದ್ದಾರೆ.

ಮೈಸೂರು ಹೈಕೋರ್ಟಿಗೆ ಹೈದ್ರಾಬಾದಿನ ೩,೦೦೦ ಕೇಸುಗಳ ವರ್ಗ

ಹೈದರಾಬಾದು ಹೈಕೋರ್ಟಿನಲ್ಲಿರುವ ಗುಲ್ಬರ್ಗ, ರಾಯಚೂರು ಮತ್ತು ಬೀದರ ಜಿಲ್ಲೆಯ ೪ ತಾಲ್ಲೂಕುಗಳ ಒಟ್ಟು ೧,೦೦೦ ವ್ಯವಹಾರಗಳು ನೂತನ ಮೈಸೂರು ಹೈಕೋರ್ಟಿಗೆ ವರ್ಗಾಯಿಸಲ್ಪಡಲಿವೆ. ಅಲ್ಲದೆ ಅಲ್ಲಿನ ಹೈಕೋರ್ಟಿನ ೩ ಬೆಂಚಿಯಲ್ಲಿ ಹಲವು ಜನರನ್ನು ಮೈಸೂರಿಗೆ ಕಳುಹಲಾಗುವುದು. ಈ ವಿಚಾರವಾಗಿ ಚರ್ಚಿಸಲು ಮೈಸೂರು ರಿಜಿಸ್ಟ್ರಾರು ಅಲ್ಲಿಗೆ ತೆರಳಿರುತ್ತಾರೆ

ದಸರಾ ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ಭಾರತ [illegible] ವಿ|| [illegible]ಟ್ಟರಿಂದ, ಸಂಗೀತ–ಸುಲೋಚನ ಮತ್ತು ಪಾರ್ಟಿಯವರಿಂದ ಸಂಜೆ ರಾಗಿ ಬೀಸುವ ಪದ–ಶ್ರೀಮತಿ ಚಿಂತ್ರಮ್ಮ ಮತ್ತು ಪಾರ್ಟಿಯವರಿಂದ, ರಂಗದ ಕುಣಿತ–ಬಸವಯ್ಯನವರಿಂದ. ಸಂಗೀತ. ಶ್ರೀಮತಿ ಪುಷ್ಪ, ನಾಟಕ–ವಿವಿಧ ನಾಟಕ ಮಂಡಲಿಯವರಿಂದ 'ಜಾನಕೀ ರಮಣ'.

ನೇಪಾಳದ ಹಿತವೇ ಭಾರತದ ಹಿತ

ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರ ಹೇಳಿಕೆ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆನ್ನೆ ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿ ಅಲ್ಲಿನ ದೊರೆಯವರು ಇತ್ತ ಔತಣ ಸಮಾರಂಭದಲ್ಲಿ ಭಾಷಣ ಮಾಡಿ ನೇಪಾಳದ ಹಿತವೇ ಭಾರತದ ಹಿತವೆಂದೂ, ಅವರ ಭದ್ರತೆಗೆ ಉಂಟಾಗುವ ವಿಪತ್ತು ಭಾರತಕ್ಕೂ ಆತಂಕವೇ ಎಂದೂ ತಿಳಿಸಿದರು. ಭಾರತಕ್ಕೆ ಯಾವ ವಿಧವಾದ ಪ್ರಾದೇಶಿಕ ಆಕ್ರಮಣದ ಆಲೋಚನೆಯೂ ಇಲ್ಲವೆಂದೂ, ಇತರ ರಾಜ್ಯಗಳ ಒಳ ವ್ಯವಹಾರಗಳಲ್ಲಿ ಭಾರತವು ಪ್ರವೇಶಿಸುವುದಿಲ್ಲವೆಂದೂ ಸ್ಪಷ್ಟಪಡಿಸಿದರು. ನೇಪಾಳದ ಅಭಿವೃದ್ಧಿಗೆ ಭಾರತವು ಸಹಾಯ ಮಾಡುವುದೆಂದು ಅವರು ನುಡಿದರು.

ಕನ್ನಡ ಗ್ರಂಥಗಳಿಗೆ ರಾಷ್ಟ್ರಾಧ್ಯಕ್ಷರ ಬಹುಮಾನ

ಮಕ್ಕಳಿಗಾಗಿ ಉತ್ತಮ ಪುಸ್ತಕಗಳನ್ನು ನಾನಾ ಭಾಷೆಗಳಲ್ಲಿ ಬರೆದಿರುವವರಿಗೆ ಭಾರತ ಸರ್ಕಾರದವರು ೫೦೦ ರೂ.ಗಳ ೨೩ ಬಹುಮಾನಗಳನ್ನು ಕೊಟ್ಟಿರುತ್ತಾರೆ. ಕನ್ನಡ ಭಾಷೆಯಲ್ಲಿ ಶ್ರೀ ಡಿ. ರಾಜಾರಾಯರು ರಚಿಸಿರುವ ಮಕ್ಕಳ ಸಚಿತ್ರ ಗಣಿತ ಮತ್ತು ಶ್ರೀ ಜಿ. ಎ. ನರಸಿಂಹಮೂರ್ತಿಯವರ ಸಚಿತ್ರ ಬಾಲ ರಾಮಾಯಣಗಳಿಗೆ ಈ ಬಹುಮಾನಗಳು ಬಂದಿವೆ.

ಸರಳ ರೀತಿಯಲ್ಲಿ ಸಂಸ್ಥಾನಗಳ ಉದಯ

ನವೆಂಬರ್ ೧ರಂದು ನೂತನ ಸಂಸ್ಥಾನಗಳು ಸರಳ ಮತ್ತು ಕರ್ತವ್ಯಶಾಲಿಯಾದ ರೀತಿಯಲ್ಲಿ ಆರಂಭವಾಗುವುವೆಂದೂ, ಈ ಬಗ್ಗೆ ವಿಶೇಷ ಸಮಾರಂಭಗಳೇನೂ ಇರುವುದಿಲ್ಲವೆಂದೂ ತಿಳಿದು ಬಂದಿದೆ. ಅಂದು ಸಾರ್ವಜನಿಕ ರಜಾ ದಿವಸವೆಂದು ಘೋಷಿಸುವ ಬಗ್ಗೆ ಇನ್ನೂ ತೀರ್ಮಾನವಾಗಿಲ್ಲ. ಪ್ರಧಾನಿ ನೆಹರೂರವರು ರಾಷ್ಟ್ರಕ್ಕೆ ಅಂದು ಸಂದೇಶ ಪ್ರಸಾರ ಭಾಷಣ ಮಾಡಲಿದ್ದಾರೆ. ವಿಧಿವತ್ತಾದ ಕಾರ್ಯಗಳನ್ನು ನಡೆಸುವ ಬಗ್ಗೆ ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಗೊಳಿಸಲಾಗುತ್ತಿದೆ.

ವಿಧಾನ ಪರಿಷತ್ತಿನ ಮುಕ್ತಾಯ

ಬೆಂಗಳೂರು ೨೨

ಈಗಿನ ಮೈಸೂರು ಸಂಸ್ಥಾನದ ವಿಧಾನ ಪರಿಷತ್ತಿನ ಅಂತಿಮ ಅಧಿವೇಶನವು ನೆನ್ನೆ ಮುಕ್ತಾಯಗೊಂಡಿತು. ಅದಕ್ಕೆ ಮುಂಚೆ ವಿಶ್ವವಿದ್ಯಾಲಯದ ಮಸೂದೆಯನ್ನು ಪರಿಷತ್ತು ಅಂಗೀಕರಿಸಿತು. ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ, ಬಿ. ಕೆ. ಪುಟ್ಟರಾಮಯ್ಯ, ಎಂ. ಪಿ. ಎಲ್. ಶಾಸ್ತ್ರಿ ಮತ್ತು [illegible]ನವರು ಭಾಷಣ ಮಾಡಿ, ಸಂಸ್ಥಾನದಲ್ಲಿ ಪಾರ್ಲಿಮೆಂಟರಿ ಸಂಸ್ಥೆಗಳು ಮಾಡಿರುವ ಕಾರ್ಯಗಳನ್ನು ಪ್ರಶಂಸಿಸಿದರು. ಅಧ್ಯಕ್ಷರು ಮಾತನಾಡಿದನಂತರ, ಸಭೆಯು ಅನಿರ್ದಿಷ್ಟ ಕಾಲ ಮುಂದುವರಿಯಿತು.

ಹಾಂಡುರಾಸಿನಲ್ಲಿ ಮಿಲಿಟರಿ ಆಳ್ವಿಕೆ

ಮಧ್ಯ ಅಮೆರಿಕದ ಬಳಿ ಇರುವ ಹಾಂಡುರಾಸಿನಲ್ಲಿ ೩ ಜನರುಳ್ಳ ಮಿಲಿಟರಿ ಸಮಿತಿಯೊಂದು ರಕ್ತಪಾತವಿಲ್ಲದೆ ಅಲ್ಲಿನ ಆಡಳಿತವನ್ನು ವಹಿಸಿಕೊಂಡಿದೆ. ಮೂವರು ಸದಸ್ಯರಲ್ಲಿ ಮಾಜಿ ಅಧ್ಯಕ್ಷರ ಮಗನೂ ಒಬ್ಬರು. ಈಗಿನ ಅಧ್ಯಕ್ಷ [illegible] ಜೂಲಿಯೋ ಲೋಜಾನೋರವರು ಅಧಿಕೃತ ನಿವಾಸದಿಂದ ಹೊರಡಲು ಉದ್ಯುಕ್ತರಾಗಿದ್ದಾರೆ.

ದೆಹಲಿಗೆ ನಿಜಲಿಂಗಪ್ಪ ಮತ್ತು ವೆಂಕಟಪ್ಪನವರ ಭೇಟಿ

ನೂತನ ಮೈಸೂರು ನಾಯಕರಾಗಿರುವ ಶ್ರೀ ಎಸ್. ನಿಜಲಿಂಗಪ್ಪನವರು ೧-೨ ದಿವಸಗಳಲ್ಲಿ ದೆಹಲಿಗೆ ತೆರಳಿ ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಹೆಸರನ್ನು ಕರ್ನಾಟಕ ಅಥವಾ ಮೈಸೂರು ಪ್ರದೇಶ ಸಮಿತಿಯೆಂದು ಕರೆಯುವ ಬಗ್ಗೆ ಕಾರ್ಯಕಾರಿ ಸಮಿತಿ ಸದಸ್ಯರೊಡನೆ ಚರ್ಚಿಸಲಿರುವರು. ನೂತನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ. ವೆಂಕಟಪ್ಪನವರೂ ಹೋಗಬಹುದೆಂದು ಹೇಳಲಾಗಿದೆ.

ಚಿಕ್ಕತೂರು ಹೋಬಳಿ ಹೊನವಾಡ ಹಳ್ಳಿ ಬಳಿ ಕಳೆದ ೧೬ರಂದು ಶ್ರವಣಬೆಳಗೊಳದ ಕಡೆಯಿಂದ ಬೆಂಗಳೂರಿಗೆ ಹೋಗುತ್ತಿದ್ದ ಒಂದು ಬಸ್ಸು ಹೊನಮಾಚನಹಳ್ಳಿ, ಕೆರೆ ಕೋಡಿ ಮುಂದೆ ವೇಗವಾಗಿ ಸಂಚರಿಸುತ್ತಿದ್ದ ನೀರಿಗೆ ಸಿಕ್ಕಿಕೊಂಡು ಹೋಗಿ ದೂರದಲ್ಲಿ ಪುಡಿಪುಡಿಯಾಗಿ ಬಿದ್ದಿತೆಂದೂ, ಡ್ರೈವರನು ಜನರನ್ನು ಮುಂಚೆಯೇ ಇಳಿಸಿಬಿಟ್ಟಿದ್ದನೆಂದೂ ವರದಿಯಾಗಿದೆ.

ಚುನಾವಣೆಯಲ್ಲಿ ಸ್ಪರ್ಧಿಸಲು ಜನ ಸಂಘದ ಶಾಖೆಯ ನಿರ್ಧಾರ

ಮೈಸೂರು ೨೨.

ಭಾರತೀಯ ಜನ ಸಂಘದ ನಗರ ಶಾಖೆಯ ಸರ್ವಸದಸ್ಯರ ಸಭೆಯು ನೆನ್ನೆ ಶಾಖೆಯ ಅಧ್ಯಕ್ಷ ಡಾ|| ಎಸ್ ಆರ್ ವೆಂಕಟಾಚಾರ್ಯರವರ ಅಧ್ಯಕ್ಷತೆಯಲ್ಲಿ ನಡೆದು, ಮುಂದಿನ ಚುನಾವಣೆಗೆ ನಗರದಿಂದ ಜನಸಂಘದ ಪರವಾಗಿ ಉಮೇದುವಾರರನ್ನು ನಿಲ್ಲಿಸಲು ನಿರ್ಧರಿಸಲಾಯಿತು

ಭಾರತೀಯ ಜನ ಸಂಘಕ್ಕೆ ಸದಸ್ಯರನ್ನು ಸೇರಿಸುವ ಕಾರ್ಯವನ್ನು ತೀವ್ರವಾಗಿ ನಡೆಸುವುದಲ್ಲದೆ, ಪಕ್ಷದ ಸಿದ್ಧಾಂತವನ್ನು ಜನತೆಯಲ್ಲಿ ಪ್ರಸಾರ ಮಾಡಲು ಮತ್ತು ಈ ಸಂಬಂಧದಲ್ಲಿ ನಾಳಿದ್ದಿನಿಂದ [illegible] ದಿನಗಳ ಕಾಲ "ಸದಸ್ಯ ಸಂಗ್ರಹ ಸಪ್ತಾಹ"ವನ್ನು ಆಚರಿಸಲು ತೀರ್ಮಾನಿಸಲಾಯಿತು. ಅದಕ್ಕಾಗಿ ಮನೆಮನೆಗೆ ಬರಲಿರುವ ಜನ ಸಂಘದ ಕಾರ್ಯಕರ್ತರೊಡನೆ ಸಾರ್ವಜನಿಕರು ಸಹಕರಿಸಬೇಕೆಂದು ಮನವಿ ಮಾಡಿಕೊಳ್ಳಲಾಗಿದೆ

ವಸ್ತು ಪ್ರದರ್ಶನದಲ್ಲಿ ಆಕರ್ಷಣೆಗಳು

ಈ ಸಾರಿಯ ದಸರಾ ವಸ್ತು ಪ್ರದರ್ಶನದ ಮಹಿಳೆಯರ ವಿಭಾಗದಲ್ಲಿ [illegible] ಮತ್ತು ಸೀತಾ [illegible] ರಂಗೋಲಿ ಚಿತ್ರಗಳು [illegible] ಕಸೂತಿಯ [illegible] ಇತರ [illegible] ಚಿತ್ರಗಳು [illegible] ಸಾಮಾನು, ತೆಂಗಿನ ಚಿಪ್ಪಿನ [illegible] ಟವಲ್, ಪಕ್ಷಿ ವಿಗ್ರಹಗಳು ಮುಂತಾದವು [illegible] ಆಕರ್ಷಣೀಯವಾಗಿವೆ

ವಿಶ್ವಸಂಸ್ಥೆ ದಿನಾಚರಣೆ

ಶಾರದಾವಿಲಾಸ [illegible] ಕಾಲೇಜಿನಲ್ಲಿ [illegible] ವಿಶ್ವಸಂಸ್ಥೆಯ ದಿನವನ್ನು ಆಚರಿಸಲಾಗುವುದು. ಈ ಸಂದರ್ಭದಲ್ಲಿ ವಿಶ್ವಸಂಸ್ಥೆಗೆ ಸಂಬಂಧಪಟ್ಟ ಚಿತ್ರಪಟಗಳ ಪ್ರದರ್ಶನವನ್ನು ಏರ್ಪಡಿಸಿದೆ

ರೇಡಿಯೋ ಸಂಗೀತ ಸ್ಪರ್ಧೆಯಲ್ಲಿ ಬೆಂಗಳೂರು ಮಹಿಳೆಯ ಜಯ

ಮದ್ರಾಸಿನ ಆಲ್ ಇಂಡಿಯಾ ರೇಡಿಯೋದವರು ಏರ್ಪಡಿಸಿದ್ದ ಕರ್ನಾಟಕ ಸಂಗೀತದ ಸ್ಪರ್ಧೆಯಲ್ಲಿ ಬೆಂಗಳೂರಿನ ಶ್ರೀಮತಿ ಆರ್ [illegible] ವಲ್ಲಿಯವರು ಪ್ರಥಮ ಸ್ಥಾನವನ್ನೂ ಮೈಸೂರಿನ ಶ್ರೀಮತಿ ಎಸ್ ಜಾನಕಿಯವರು ದ್ವಿತೀಯ ಸ್ಥಾನವನ್ನೂ ಪಡೆದಿರುತ್ತಾರೆ. ಹಿಂದಿನ ವರ್ಷ ವೇದವಲ್ಲಿಯವರಿಗೆ ದ್ವಿತೀಯ ಸ್ಥಾನವು ದೊರಕಿತ್ತು

ಕಾಶ್ಮೀರದ "ವಿಮೋಚನೆ"ಗೆ ಪಾಕ್ ಗುಪ್ತಗಾಮಿನವರ ಸಂಚು

ಪಾಕಿಸ್ತಾನದ ಮಲ್ಲಿಕ್ ಎಂಬ [illegible] ಜನರ ೧೩ ಮಂದಿ ನಾಯಕರು ಪಾಕಿಸ್ತಾನ ಸರ್ಕಾರಕ್ಕೆ ಮನವಿ ಮಾಡಿ ಕೂಡಲೇ ಕಾಶ್ಮೀರವನ್ನು ವಿಮೋಚನೆಗೊಳಿಸಲು ತಮಗೆ ಅವಕಾಶವೀಯಬೇಕೆಂದು ಕೋರಿರುವುದಾಗಿ ವರದಿಯಾಗಿದೆ. ಅವರುಗಳು ಹಿಂದೆ ನಡೆದ ಕಾಶ್ಮೀರ ಧಾಳಿಯಲ್ಲಿ ಭಾಗವಹಿಸಿದ್ದರೆಂದೂ ಹೇಳಲಾಗಿದೆ. ವಿಶ್ವಸಂಸ್ಥೆಯು ಬೇಗನೆ ಶಾಂತಿಯುತವಾಗಿ ಕಾಶ್ಮೀರ ಸಮಸ್ಯೆಯನ್ನು ಪರಿಹರಿಸುವುದಾಗಿ ಕೊಡಲ್ಪಟ್ಟ ಭರವಸೆ ಮೇಲೆ ತಾವು ಹೋರಾಟವನ್ನು ನಿಲ್ಲಿಸಿದುದಾಗಿ ಅವರು ಹೇಳುತ್ತಾರೆ

ರೈಲು ಸಾಗಾಣಿಕೆಗೆ ಹೆಚ್ಚು ದರ

ರೈಲುಗಳಲ್ಲಿ ಪದಾರ್ಥಗಳನ್ನು ಸಾಗಿಸುವ ದರವು ಸ್ವಲ್ಪ ಮಟ್ಟಿಗೆ ಏರಲಿರುವುದಾಗಿ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ

ಬ್ರಿಟನ್ನಿನ ೪ನೇ ಅಣು ಬಾಂಬಿನ ಸಿಡಿತ

ದಕ್ಷಿಣ ಆಸ್ಟ್ರೇಲಿಯದಲ್ಲಿ ಬ್ರಿಟನ್ನಿನ ನಾಲ್ಕನೆಯ ಬಾಂಬನ್ನು ಪ್ರಯೋಗಾರ್ಥವಾಗಿ ಸಿಡಿಸಲಾಯಿತೆಂದು ವರದಿಯಾಗಿದೆ. ಇಲ್ಲಿಗೆ ಈಗಿನ [illegible] ಪರೀಕ್ಷೆಗಳು ಮುಕ್ತಾಯವಾಗಿವೆ

ನಿಜಾಮರಿಗೆ ಮುಂದೆಯೂ ರಾಜತ್ವದ ಗೌರವ

ಹೈದರಾಬಾದ್ [illegible] ಹೇಳಿಕೆಯೊಂದನ್ನಿತ್ತು ರಾಜಪ್ರಮುಖ ಪದವಿಯಿಂದ ನಿವೃತ್ತರಾಗಿ ಮುಂದೆ ತಮ್ಮ ಸಂಸ್ಥಾನದ ವ್ಯವಹಾರಗಳಿಗೆ [illegible] ಕೊಡಲಿರುವುದಾಗಿ ತಿಳಿಸಿರುತ್ತಾರೆ. [illegible] ಜನಾಂಗದಲ್ಲಿ ಈಗ ತಿದ್ದುಪಡಿ ಮಾಡಿದ್ದರೂ ತಮ್ಮ ಈಗಿನ ಸ್ಥಾನಮಾನದ ಹಕ್ಕು ಬಾಧ್ಯತೆಗಳನ್ನು ಗೌರವಿಸಿಕೊಂಡು ಬರಲಾಗುವುದೆಂದು ಕೇಂದ್ರ ಗೃಹಮಂತ್ರಿಯವರು ಭರವಸೆಯಿತ್ತಿರುವುದಾಗಿ ಅವರು ಹೇಳುತ್ತಾರೆ. ಆರೋಗ್ಯದ ದೃಷ್ಟಿಯಿಂದ ತಾವು ಮುಂದೆ ಅಧಿಕಾರ ಸ್ವೀಕರಿಸಬಾರದೆಂದು ಮೊದಲೇ ನಿರ್ಧರಿಸಿಕೊಂಡಿದುದಾಗಿಯೂ ಅವರು ಹೇಳುವರು.

ಗೂಳಿ ತಿವಿದು ಮಹಿಳೆಯ ಮರಣ

ಮದ್ರಾಸಿನ ಕೀಲ್ಪಾಕದಲ್ಲಿ ನೆನ್ನೆ ಹುಚ್ಚು ಹಿಡಿದ ಗೂಳಿಯೊಂದು ಲಕ್ಷ್ಮಿಅಮ್ಮಾಳ್ ಎಂಬಾಕೆಯನ್ನು ತಿವಿಯಲಾಗಿ ಆಕೆಯು ಗಾಯಗೊಂಡು ಮೃತಪಟ್ಟಳು

೫೦ ಸಾವಿರ ಡಾಲರಿನ ಅಣು ಗಡಿಯಾರ

ಜಗತ್ತಿನಲ್ಲೇ ಅತ್ಯಂತ ಕರಾರುವಾಕ್ಕಾಗಿ ಕಾಲ ತೋರಿಸುವ ಅಣು ಗಡಿಯಾರವೊಂದನ್ನು ಸೃಷ್ಟಿಸಿ ನ್ಯೂಯಾರ್ಕಿನಲ್ಲಿ ಪ್ರದರ್ಶಿಸಲಾಗಿದೆ. ಅದಕ್ಕೆ ಅಟಾಮಿಕ್ರಾನ್ ಎಂದು ಹೆಸರು. ಅದರ ಬೆಲೆ ೫೦ ಸಾವಿರ ಡಾಲರ್

ಅಡಿಗೆ ಸ್ಪರ್ಧೆ

ವಸ್ತು ಪ್ರದರ್ಶನದಲ್ಲಿ [illegible] ಮತ್ತು [illegible] ಶ್ರೀಮತಿ [illegible] ಕ್ರಮವಾಗಿ [illegible] ತಿಂಡಿ [illegible] ರಾಗಿದ್ದಾರೆ

ಸರ್ಕಾರಿ ಕೈಗಾರಿಕೆಗಳ ನೌಕರರುಗಳಿಗೆ ತಾತ್ಕಾಲಿಕ ಪರಿಹಾರವಿಲ್ಲವೇ?

ನಾನ್ ಗೆಜೆಟೆಡ್ ನೌಕರರಿಗೆ ಸರ್ಕಾರದವರು ಕೊಟ್ಟಿರುವ ತಾತ್ಕಾಲಿಕ ಪರಿಹಾರವನ್ನು ಸರ್ಕಾರಿ ಕೈಗಾರಿಕೆಗಳ [illegible] ನೌಕರರಿಗೆ ಮೊದಲು ಅನ್ವಯಿಸಲಾಗಿಲ್ಲವೆಂದೂ, ಅದರಿಂದ ಅದನ್ನು ಅವರಿಗೆ ಕೊಡಬಾರದೆಂದು ಈಗ ಅಪ್ಪಣೆ ಮಾಡಲಾಗಿದೆಯೆಂದೂ ಗೊತ್ತಾಗಿದೆ. ಇದುವರೆಗೆ ಎಲ್ಲಾ ಸರ್ಕಾರಿ ಆಜ್ಞೆಗಳನ್ನು ಕೈಗಾರಿಕಾ ಸಂಸ್ಥೆಗಳ ನೌಕರರಿಗೆ ಅನ್ವಯಿಸುತ್ತಿದ್ದು ಇದೊಂದನ್ನು ಮಾತ್ರ ಅನ್ವಯ ಮಾಡದಿರುವುದು ಶೋಚನೀಯವೆಂದೂ, ಕೈಗಾರಿಕಾ ಸಂಸ್ಥೆಗಳಲ್ಲಿ ಜೀವನದ ಮಟ್ಟದ ಆಧಾರದ ಮೇಲೆ ಭತ್ಯವನ್ನು ಗೊತ್ತುಮಾಡಿಲ್ಲದಿರುವುದರಿಂದ ಈ ಆಜ್ಞೆಯು ಅವರಿಗೂ ಅನ್ವಯಿಸುವಂತೆ ಮಾಡುವುದು ಅಗತ್ಯವೆಂದೂ ನೌಕರರೊಬ್ಬರು ಪತ್ರ ಬರೆದು ಕೋರಿರುತ್ತಾರೆ

ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಂಪಿಯಾ
ಚಿತ್ರಮಂದಿರಗಳ ನಡುವೆ
ಮೆಟ್ರೆಸ್ ಮೆಷ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ, ಬೇಬಿ, ಅರವಿಂದ್ [illegible] ಇನ್ನೂ ಅನೇಕ ಮಿಲ್ಲುಗಳ [illegible] ನಿಗದಿಯಾದ ಬೆಲೆಯಲ್ಲಿ [illegible] ಪ್ರಿಂಟೆಡ್ ವಾಯಿಲ್ ಮತ್ತು [illegible]ಗಳು.
ಒಮ್ಮೆ ದಯಮಾಡಿ ಭೇಟಿ [illegible]
ಇ. ಸಿ [illegible]

ಅಲ್ಯೂಮಿನಿಯಂ ಹೊದಿಕೆಯ ೧ಮೈಲಿ ಎತ್ತರದ ಮನೆ!

ಚಿಕಾಗೋದ ಸುಪ್ರಸಿದ್ಧ ಶಿಲ್ಪಿಯಾದ ಫ್ರಾಂಕ್ ಲಾಯ್ಡ್ ರೈಟ್‌ರವರು ೧ ಮೈಲಿ ಎತ್ತರದ ಭವನವೊಂದನ್ನು ನಿರ್ಮಿಸಲಿರುವರು. ಅದರಲ್ಲಿ [illegible] ನಿವಾಸ ಸ್ಥಳಗಳೂ [illegible] ಅಡಿ ಎತ್ತರದ ಗೋಪುರವೂ ಇರುವುವೆಂದು ಹೇಳಲಾಗಿದೆ. ಅದನ್ನು ಕಟ್ಟಲು [illegible] ಜನರು ಬೇಕಾಗುವರು. ಉಕ್ಕಿನ ಚೌಕಟ್ಟಿನಲ್ಲಿ ಅಲ್ಯೂಮಿನಿಯಂ ಅಥವಾ ಸ್ಟೇನ್‌ಲೆಸ್ ಸ್ಟೀಲಿನ ಹೊದಿಕೆಯಿಂದ ಭವನವು ಕೂಡಿರುವುದು. ಅದರ ನಿರ್ಮಾಣಕ್ಕೆ ೧೦ ಕೋಟಿ ಡಾಲರ್ ವೆಚ್ಚವಾಗುವುದೆಂದು ಹೇಳಲಾಗಿದೆ

ನೇಪಾಳಕ್ಕೆ ರಾಷ್ಟ್ರಾಧ್ಯಕ್ಷರ ಭೇಟಿ

ನೇಪಾಳದ ರಾಜಧಾನಿ ಖಟ್ಮಂಡುವಿಗೆ ನೆನ್ನೆ ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರು ತೆರಳಿದರು. ಅವರಿಗೆ ಅಲ್ಲಿನ ಪೌರಸಭೆಯವರು ಮಾನಪತ್ರವನ್ನು ಅರ್ಪಿಸಿದರು. ಅವರಿಗೆ ೧ ಲಕ್ಷ ನಗರ ನಿವಾಸಿಗಳು ಅದ್ಭುತ ಸ್ವಾಗತ ಬಯಸಿದರು

ಬಿರುಗಾಳಿಯಿಂದ ಹಡಗು ಮುಳುಗಿ ೨೫ ಜನರ ಮರಣ

ಪೆಸಿಫಿಕ್ ಸಾಗರದಲ್ಲಿ ಫಿಲಿಪೈನ್ ದ್ವೀಪಕ್ಕೆ ಸೇರಿದ ಹಡಗೊಂದು ನೆನ್ನೆ ಮುಳುಗಿ, ೨೫ ಜನರು ಮೃತಪಟ್ಟಿರುತ್ತಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಕ್ಲಾರಿಯೋನೆಟ್ [illegible] ಎಂ ಮರಿಯಪ್ಪ—ದೇವರನಾಮ [illegible] ಎಲ್ ಎಸ್ [illegible] ನಾದ—ಸಂಗೀತ [illegible] ಎಂ ಮರಿಯಪ್ಪ—ಸಂಗೀತ [illegible] ಕ್ಲಾರಿಯೋನೆಟ್ [illegible] ಮತ್ತು [illegible] ವಿಶ್ವ ಸಂಸ್ಥೆ ದಿನ ಚರ್ಚೆ ಕನ್ನಡ ಭಾಷಣ [illegible] ವಿಶೇಷ ಕಾರ್ಯಕ್ರಮ [illegible] ಇಂಗ್ಲೀಷಿನಲ್ಲಿ [illegible] ಕನ್ನಡ [illegible]

ಶ್ರೀ ಬಾಬಾ ಜನರಲ್ ಸ್ಟೋರ್ಸ್,
[illegible] ಅಂಗಡಿ, ದಿವಾನ್ಸ್ ರೋಡ್, ಮೈಸೂರು
[illegible] ಇದೇ ರಸ್ತೆಯಲ್ಲಿ ನೂರು ಗಜ ಉತ್ತರಕ್ಕೆ ಬದಲಾಯಿಸಲಾಗಿದೆ. ಹಿಂದಿನಂತೆ [illegible] ಗ್ರಾಹಕರ ಸಹಕಾರವನ್ನು ಕೋರಲಾಗಿದೆ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ [illegible]
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ ಎಸ್. ಲಕ್ಷ್ಮಣಐಯ್ಯಂಗಾರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911

ಜಿನೀವಾದಲ್ಲಿ ಬ್ರಿಟನ್, ಫ್ರಾನ್ಸ್ ಮತ್ತು ಈಜಿಪ್ಟುಗಳ ಮಾತುಕ

ಸೂಯೆಜ್ ಕಾಲುವೆ ವಿಷಯವಾಗಿ ಜಿನೀವಾ ನಗರದಲ್ಲಿ ಅತಿ ಶೀಘ್ರದಲ್ಲೇ ಬ್ರಿಟನ್, ಫ್ರಾನ್ಸ್ ಮತ್ತು ಈಜಿಪ್ಟುಗಳಿಗೆ ಮಾತುಕತೆಗಳು ನಡೆಯುವುವೆಂದು ವಿ. ಕೆ. ಕೃಷ್ಣಮೆನನ್ನರು ತಿಳಿಸಿರುತ್ತಾರೆ

ಅಸಿಸ್ಟೆಂಟ್ ಕಮಿಷನರರ ವರ್ಗಾವಣೆಗ

ಅಸಿಸ್ಟೆಂಟ್ ಕಮಿಷನರ್ ದರ್ಜೆಯಲ್ಲಿರುವ ಅಧಿಕಾರಿಗಳ ವರ್ಗಾವಣೆಯು ಕೆಳಗೆ ಕಂಡಂತೆ ಆಗಿದೆ – ಮೈಸೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟಾಗಿರುವ ಶ್ರೀ ಓ. ಎಸ್ [illegible]ಮದ್ ಜಾಫರ್ ಅವರಿಗೆ ಇದೇ ನವೆಂಬರ್ ೧ರಿಂದ ನಿವೃತ್ತರಾಗುವ ಪೂರ್ವ ರಜೆಯನ್ನು ಕೊಡಲಾಗಿದೆ. ಕೃಷ್ಣರಾಜೇಂದ್ರ ಆಸ್ಪತ್ರೆಯ ಕಾರ್ಯದರ್ಶಿಯಾಗಿರುವ ಶ್ರೀ ಹೆಚ್. ವಿ [illegible]ಮಂತಯ್ಯನವರಿಗೆ ಬಡ್ತಿ ಕೊಟ್ಟು ಅವರ ಸ್ಥಾನಕ್ಕೆ ನೇಮಿಸಲಾಗಿದೆ. ಮೈಸೂರು ಸಬ್ ಜೈಲಿನ ಸೂಪರಿಂಟೆಂಡೆಂಟರಾದ ಶ್ರೀ ಸಿ ಎಸ್ ಮಲ್ಲಯ್ಯನವರನ್ನು ಬೆಂಗಳೂರು ಸೆಂಟ್ರಲ್ ಜೈಲು ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲಾಗಿದೆ. ಮಂಡ್ಯದ ವಿಶ್ವೇಶ್ವರಯ್ಯ ಕಾಲುವೆ ಪ್ರದೇಶದ ವಿಶೇಷಾಧಿಕಾರಿ ಶ್ರೀ ವಿ. ಸಿ. [illegible]ದೇವಯ್ಯನವರನ್ನು ಮಂಡ್ಯ ಸಕ್ಕರೆ ಕಂಪೆನಿಯ ಕಬ್ಬಿನ ಸೂಪರಿಂಟೆಂಡೆಂಟರಾಗಿಯೂ, ಶ್ರೀ [illegible] ಎಂ ವೆಂಕಟರಾಮಯ್ಯನವರಿಗೆ ಬಡ್ತಿ ಕೊಟ್ಟು ಶ್ರೀ [illegible]ವಸಿದೇವಯ್ಯನವರ ಸ್ಥಾನಕ್ಕೂ ನೇಮಿಸಲಾಗಿದೆ. ಸಾಗರದಲ್ಲಿದ್ದ ಶ್ರೀ ಎಸ್ [illegible]ಹೇಂದ್ರಸ್ವಾಮಿಯವರನ್ನು ಮೈಸೂರು [illegible] ತಯಾರಿಕೆ ಕಂಪನಿ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ

ಜೀವನದ ಹರ್ಷವನ್ನು ಸವಿಯಿ
ಮುದುಕರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !
ಆರೋಗ್ಯ ಐಶ್ವರ್ಯ ದೇಹದಾರ್ಢ್ಯ [illegible] ಬಲಸಂಪತ್ತಿಯನ್ನು ಹೊಂದಿ ದೀರ್ಘ ಜೀವನದಲ್ಲಿ ಆನಂದವನ್ನೂ ಅನುಭವಿಸಬೇಕೆಂಬ ಮಾನವರ ಮಹತ್ತರವಾದ ಆಸೆ [illegible] ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿ [illegible] ಜ್ಞಾಪಕ ಶಕ್ತಿಯ ಅಭಾವ, [illegible] ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ [illegible] ಮುಂತಾದ ರೋಗಗಳಿಗೂ [illegible] ಗುಣಪಡಿಸಲು [illegible] ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಸಾಯಂಕಾಲ 4 ರಿಂದ 8ರ ವರೆಗೆ ಭೇಟಿ ಮಾಡಿ [illegible] ಸ್ತ್ರೀ ಪುರುಷರಿಬ್ಬರ ಗುಪ್ತ [illegible] ವ್ಯಾಧಿಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು [illegible]
ಅವರ ಸಲಹೆ ಪಡೆಯುವುದರಿಂದ [illegible] ಚಿಕಿತ್ಸೆಗಳನ್ನು [illegible] ಕೆಳಗಿನ ವಿಳಾಸದಲ್ಲಿ ಭೇಟಿ [illegible] —
ರಾಣಾ ಮೆಡಿಕಲ್ ಹಾಲ್
ಲೇನ್ ನಂ 1-745, ಅಶೋಕಾ ರಸ್
(ಮೈಸೂರು ಬ್ಯಾಂಕ್ ಬಳಿ [illegible]
ಮೂರನೇ ಕಟ್ಟಡ)

Edited, Printed and Publish
A R Nagarajan at Sadhvi
D Subbiah Road, Mysore

ಕಡೇ ವಾರ! ಕಡೇ ವಾರ
ಮೈಸೂರು ದಸರಾ ವಸ್ತು ಪ್ರದರ್ಶನ 1956
ಈಗಾಗಲೇ 5 ಲಕ್ಷಕ್ಕಿಂತಲೂ ಹೆಚ್ಚು ಜನ ನೋಡಿ ಆನಂದಿಸಿದ್ದಾರೆ
ಕಡೇ ದಿನ 28—10 1956
ಭಾರತ ಸರ್ಕಾರದ ಆಹಾರ ಶಾಖೆಯ ಉಪ ಸಚಿವರಾದ
ಶ್ರೀಯುತ ಎಂ ವಿ ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ
ತಾ॥ 28 10 1956ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ ವಸ್ತು ಪ್ರದರ್ಶನ
ರಂಗ ಮಂಟಪದಲ್ಲಿ 'ಬಹುಮಾನ ವಿನಿಯೋಗ' ಸಮಾರಂಭವು ನಡೆಯುವುದು
ಆ ದಿನ ರಾತ್ರಿ 9 ಘಂಟೆಗೆ ವಸ್ತು ಪ್ರದರ್ಶನ ಮುಕ್ತಾಯವಾಗುವುದು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಅತ್ಯುತ್ತಮ ರೀತಿ [illegible]
ಸುಪ್ರಸಿದ್ಧ
ಚಂದೇರಿ
ಸೀರೆಗಳಿಗೂ
[illegible]
ಗೊಂಬೆಗಳಿಗೂ
'[illegible]' ಸ್ಟೋರ್ಸ್
23, 24, 25ರಲ್ಲಿರುವ
[illegible]

ಪುಟ : ೧೫] SADHVI : WEDNESDAY 24—10—1956 ಮೈಸೂರು : ಬುಧವಾರ ೨೪—೧೦—೧೯೫೬ [ಸಂಚಿಕೆ : ೯೨

ಪೋಲೆಂಡಿನಲ್ಲಿ ರಷ್ಯದ ಸೈನ್ಯಗಳ ಚಲನವಲನ

ಪೋಲೆಂಡಿನ ಕೇವಿಗೆ ರಷ್ಯದ ಯುದ್ಧ ನೌಕೆಗಳು

ರಷ್ಯವೊಡನೆ ಬಿಕ್ಕಟ್ಟಿನ ಪರಿಣಾಮ ?

ಪೋಲೆಂಡಿನಲ್ಲಿ ಸ್ವಾತಂತ್ರ್ಯದ ಚಳುವಳಿ ಬಿರುಸಾಗುತ್ತಿರುವುದರಿಂದಲೂ, ಅಲ್ಲಿನ ಗ್ಡ್ಯ [illegible] ಕೇವಿಗೆ ರಷ್ಯದ ಯುದ್ಧ ನೌಕೆ ಮತ್ತು ಮೂ[illegible] ಡಿಸ್ಟ್ರಾಯರುಗಳು ಬಂದಿರುವುದಾಗಿ ಸುದ್ದಿಯಾಗಿದೆ

ಪೋಲೆಂಡಿನಲ್ಲಿ ರಷ್ಯಾ ಸೈನ್ಯಗಳ ಚಲನವಲನ ಆಗುತ್ತಿರುವುವೆಂದು ವಾರ್ಸಾ ಮತ್ತು ಲಾ[illegible] ನಗರಗಳಿಂದ ಸುದ್ದಿ ಬಂದಿದೆ. ಲಾಡ್ಜ್ [illegible] ಪೋಸ್ನಾನ್ ಮತ್ತು ವಾರ್ಸಾಗಳ ನಡುವೆ [illegible] ಪೋಲೆಂಡು ಮತ್ತು ರಷ್ಯಗಳ ನಡುವೆ ಬಿಕ್ಕಟ್ಟುಂಟಾಗಿರುವುದರಿಂದಲೂ, ಅದ್ದರಿಂದ ರಷ್ಯಾ[illegible]ರ ಚಲನವಲನಗಳನ್ನು ಆಸಕ್ತಿಯಿಂದ ಪರಿಶೀಲಿಸಲಾಗುತ್ತಿದೆಯೆಂದೂ ಹೇಳಲಾಗಿದೆ. [illegible]ಲೆಂಡಿನ ಸೈನ್ಯಗಳು, ಪೋಲೀಸರು ಮತ್ತು [illegible] ಭದ್ರತಾ ದಳಗಳು ಅಲ್ಲಿನ ಕಮ್ಯೂನಿಸ್ಟ್ [illegible] ನೂತನ ನಾಯಕ ವ್ಲಾಡಿಸ್ಲಾವ್ ಗೊಮುಲ್ಕಾರವರಿಗೆ ಬೆಂಬಲವಿತ್ತಿವೆ

ಗೊಮುಲ್ಕಾರವರು ಸ್ಟಾಲಿನ್ನರ ಕಾಲದಲ್ಲಿ [illegible] ವಿರೋಧವಾಗಿ ಸ್ವತಂತ್ರ ನೀತಿಯನ್ನು ಅ[illegible] ಆಗಿನಿಂದಲೂ ಜೈಲಿನಲ್ಲಿಡಲ್ಪಟ್ಟು ಈಚೆ ಬಿಡುಗಡೆಯಾದರು. ಅವರು ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಅಧಿನಾಯಕರಾಗಿ ಆರಿಸಲ್ಪಟ್ಟ[illegible] ಪಕ್ಷದ ಮುಖಂಡ ಸ್ಥಾನದಲ್ಲಿದ್ದ ರಷ್ಯಾ [illegible]ಧಿಕಾರಿ ರೊಕೊಸೊವ್ಸ್ಕಿಯವರನ್ನು ಕೈ[illegible]ಬಿಟ್ಟುದೂ, ಆಂತರಿಕ ವ್ಯವಹಾರಗಳಲ್ಲಿ ಪೋಲೆಂಡು ಸ್ವತಂತ್ರವಾಗಿ ವರ್ತಿಸಬೇಕೆಂದು ಗೊಮುಲ್ಕಾರವರು ಹೇಳುತ್ತಿರುವುದೂ ಬಿಕ್ಕಟ್ಟಿಗೆ ಕಾರಣವಾಗಿದೆ

ಪೋಲೆಂಡಿನ ಅತ್ಯಂತ ಬಹಿರಂಗ ಸಭೆಗಳು[illegible], ಪೋಲೆಂಡಿನ 'ಟಿಟೊ' ಎಂದು ಕರೆಯು[illegible]ರುವ ಗೊಮುಲ್ಕಾರವರಿಗೆ ಬೆಂಬಲ ಸಿ[illegible] ಗೊಮುಲ್ಕಾರವರು ಪಕ್ಷದಲ್ಲೇ [illegible] ಹೋಗಿರಿದ್ದಾರೆ

ನೂತನ ಮೈಸೂರು ಸಂಸ್ಥಾನದ ಉದಯೋತ್ಸವ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಕರೆ

ಬೆಂಗಳೂರು ೨೪

[illegible]ನ ಮೈಸೂರು ಪ್ರದೇಶ ಕಾಂಗ್ರೆಸ್ ಸ[illegible] ಅಧ್ಯಕ್ಷ ಶ್ರೀ ವಿ. ವೆಂಕಟಪ್ಪನವರು ಮ[illegible]ಂದನ್ನು ಹೊರಡಿಸಿ, ನವೆಂಬರ್ ೧ರಂದು [illegible] ಸಂಸ್ಥಾನದ ಉದಯೋತ್ಸವವನ್ನು ಸಾ[illegible]ರು ವೈಭವದಿಂದ ನಡೆಸಬೇಕೆಂದು [illegible]ತ್ತಾರೆ. ಆ ದಿನ ಬೆಳಿಗ್ಗೆ ರಾಷ್ಟ್ರ ಧ್ವಜಾರೋಹಣವನ್ನೂ, ಸಂಜೆ ಬಹಿರಂಗ ಸಭೆಗಳ[illegible]ಸುವಂತೆ ಅವರು ತಿಳಿಸಿರುತ್ತಾರೆ

[illegible]ಸಭೆಗಳಲ್ಲಿ [illegible], ರಾಷ್ಟ್ರೀಯ ಐಕ್ಯತೆ, [illegible] ಮತ್ತು ಭಾಷಾವಾರು ಸಾ[illegible] ನೂತನ ಮೈಸೂರು ಸಂಸ್ಥಾನಕ್ಕೆ [illegible] ಕೋರಿಕೆಗಳ ಬಗ್ಗೆಯೂ, ಪ್ರ[illegible] ನೂತನ ಸರ್ಕಾರಕ್ಕೆ ಸಕಲ ಬೆಂ[illegible] ಕೊಡುವಂತೆಯೂ ಕರಾವು ಮಾಡಬೇ[illegible]ವರು ಹೇಳಿರುವರು

ವಸ್ತುಪ್ರದರ್ಶನವನ್ನೂ ನವರಾತ್ರಿ ಉತ್ಸವವನ್ನೂ ಮುಂದುವರಿಸಲಾಗುವುದು

ನಿಜಲಿಂಗಪ್ಪನವರ ಹೇಳಿಕೆ

ಮೈಸೂರು ೨೪

ದಸರಾ ವಸ್ತು ಪ್ರದರ್ಶನವನ್ನು ಎಂದಿನಂತೆ ಮುಂದುವರಿಸಿಕೊಂಡು ಬರಲಾಗುವುದೆಂದೂ, ನವರಾತ್ರಿ ಮಹೋತ್ಸವವನ್ನು [illegible] ರೀತಿಯಲ್ಲಿ ನಡೆಸಿಕೊಂಡು ಬರಲಾಗುವುದೆಂದೂ ನೂತನ ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿರುವ ಶ್ರೀ ಎಸ್. ನಿಜಲಿಂಗಪ್ಪನವರು ಈ ದಿನ ಬೆಳಿಗ್ಗೆ ವಸ್ತು ಪ್ರದರ್ಶನಕ್ಕೆ ಭೇಟಿ ಕೊಟ್ಟಾಗ ಪತ್ರಿಕಾ ವರದಿಗಾರರ ಪ್ರಶ್ನೆಗೆ ಉತ್ತರವಾಗಿ ತಿಳಿಸಿದರು. ಪರಂಪರಾನುಗತವಾಗಿ ಬಂದಿರುವ ಉತ್ಸವಗಳನ್ನು ನಡೆಸಿಕೊಂಡು ಬರುವುದರಲ್ಲಿ ತಮಗೆ ಪೂರ್ಣ ಆಸಕ್ತಿಯನ್ನು ವ್ಯಕ್ತಪಡಿಸಿದರು

ಚಾಮರಾಜನಗರ ಸತ್ಯಮಂಗಲ ರೈಲ್ವೆಯು ಆಗುವುದರಿಂದಲೇ ಮೈಸೂರಿನ ಪ್ರಾಮುಖ್ಯತೆಯು ಉಳಿಯುವುದೆಂದು ಅವರು ನುಡಿದು, ಈ ರೈಲ್ವೆಯು ಬೇಗನೆ ಆಗುವ ಭರವಸೆಯನ್ನು ಸೂಚಿಸಿದರು

ನೂತನ ಮಂತ್ರಿಮಂಡಲದ ರಚನೆಯ ವಿಚಾರಗಳ ಬಗ್ಗೆ ಪ್ರಶ್ನೆಗಳಿಗೆ ಅವರು ಉತ್ತರ ಕೊಡಲಿಲ್ಲ

ಹೊಸ ಮಂತ್ರಿಮಂಡಲದ ಪ್ರಮಾಣ ವಚನ ಸ್ವೀಕಾರವು ಶುಭ ಲಗ್ನದಲ್ಲಿ ಬೆಂಗಳೂರಿನಲ್ಲಿ ಇದೇ ೩ನೇ ತಾರೀಖು ನಡೆಯುವುದೆಂದು ಅವರು ತಿಳಿಸಿದರು. ಅವರೊಡನೆ ಬಂದಿದ್ದ ಕುಲಪತಿ ಶ್ರೀ ಕೆ. ವಿ. ಪುಟ್ಟಪ್ಪನವರು ಶುಭ ಲಗ್ನದ ವಿಷಯವಾಗಿ ವ್ಯಾಖ್ಯಾನ ಮಾಡಿ ಜಾತ್ಯತೀತ ರಾಜ್ಯದಲ್ಲಿ ಶುಭ ಲಗ್ನಕ್ಕಾಗಿ ಹುಡುಕುವ ಆವಶ್ಯಕವಿಲ್ಲವೆಂದೂ, ಪೂಜಾರಿಗಳ ಪ್ರಾಬಲ್ಯದ ಪದ್ಧತಿಯು ಹೋಗಬೇಕೆಂದೂ ಸೂಚಿಸಿ, ಭಗವಂತನ ಮೇಲೆ ಭಾರವಿಟ್ಟು, ಮಾಡುವ ಕೆಲಸಗಳೆಲ್ಲವೂ ಶುಭದಾಯಕವಾಗಿಯೇ ಪರಿಣಮಿಸುವುವೆಂದೂ ಹೇಳಿದರು

ಗವರ್ನರರು ಬೆಂಗಳೂರು ಮೈಸೂರು ಎರಡು ಕಡೆಗಳಲ್ಲೂ ಇರುವರೆಂದೂ, ಹೆಚ್ಚು ಕಾಲ ಬೆಂಗಳೂರಿನಲ್ಲಿರಬೇಕಾಗುವುದೆಂದೂ ಶ್ರೀ ನಿಜಲಿಂಗಪ್ಪನವರು ಸೂಚಿಸಿದರು.

ಬರುವ ಮಾರ್ಚಿಯಿಂದ ಹೊಸ ಕ್ಯಾಲೆಂಡರ್

ಬರುವ ಮಾರ್ಚಿ ೨೨ರಿಂದ ಭಾರತದಲ್ಲಿ ಹೊಸ ಕ್ಯಾಲೆಂಡರನ್ನು ಜಾರಿಗೆ ತರಲಾಗುವುದು. ಸರ್ಕಾರಿ ಕೆಲಸಕ್ಕಾಗಿ ಉಪಯೋಗಿಸಿಕೊಳ್ಳಲು ಭಾರತ ಸರ್ಕಾರದವರು ಈ ಪದ್ಧತಿಯನ್ನು ಅನುಸರಿಸಲಿರುವರು. ಅದರ ಪ್ರಕಾರ, ಮಾರ್ಚಿ ೨೨ನೇ ತಾರೀಖು ೧೮೭೯ನೇ ಸಂವತ್ಸರದ ಚೈತ್ರ ಶುದ್ಧ ಪ್ರಥಮಾ ಎನಿಸಲಾಗುವುದು. ಈ ಹೊಸ ಏರ್ಪಾಡನ್ನು ಪ್ರಚುರಪಡಿಸಲು ಪ್ರಮುಖ ಕ್ರಮ ಕೈಗೊಳ್ಳಲಾಗುವುದು. ದಿವಂಗತ ಮೇಘನಾದ ಸಹಾರವರ ಅಧ್ಯಕ್ಷತೆಯಲ್ಲಿ ಈ ಬಗ್ಗೆ ಸಮಿತಿಯೊಂದನ್ನು ಸರ್ಕಾರದವರು ರಚಿಸಿದ್ದರು. ಈಗಿರುವ ಕ್ಯಾಲೆಂಡರೂ ಸಹ ಜಾರಿಯಲ್ಲಿರುವುದು

ಮಹಾರಾಜರೊಡನೆ ನಿಜಲಿಂಗಪ್ಪನವರ ಭೇಟಿ

ಮೈಸೂರು ೨೪

ಶ್ರೀ ಎಸ್. ನಿಜಲಿಂಗಪ್ಪನವರು ಈ ದಿನ ಬೆಳಿಗ್ಗೆ ಹಾಲಿ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ ಮತ್ತು ಕೈಗಾರಿಕಾ ಮಂತ್ರಿ ಡಾ|| ನಾಗನಗೌಡರೊಡನೆ ರಾಜಧಾನಿಗೆ ಆಗಮಿಸಿದರು. [illegible] ಅರಮನೆಯಲ್ಲಿ ಬೆಳಿಗ್ಗೆ ೧೧-೩೦ಕ್ಕೆ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ, ಕುಶಲ ಸಂಭಾಷಣೆ ನಡೆಸಿದರು. ಶ್ರೀ ನಿಜಲಿಂಗಪ್ಪನವರ ಪ್ರವಾಸ ಬೆಂಗಳೂರಿಗೆ ಹಿಂದಿರುಗಿದರು. ಇತರ ಇಬ್ಬರು ಮಂತ್ರಿಗಳು ಬೆಳಿಗ್ಗೆ [illegible] ಮಾರ್ಗವಾಗಿ ಬೆಂಗಳೂರಿಗೆ ಪ್ರಯಾಣ ಮಾಡಿದರು

ವಿಮಾನವನ್ನು ತಡೆದು ದಂಗೆಕೋರ ನಾಯಕರ ಬಂಧನ

ಅಲ್ಜೀರಿಯಾದ ಅಗ್ರನಾಯಕರ ಮೇಲೆ ಫ್ರೆಂಚರ ಕ್ರಮ

ಅಲ್ಜೀರಿಯದ ರಾಷ್ಟ್ರೀಯ [illegible] ಐವರು ಮುಖಂಡರನ್ನು ನಿನ್ನೆ ಟ್ಯೂನಿಸ್ಸಿಗೆ ಒಯ್ಯುತ್ತಿದ್ದ ವಿಮಾನವನ್ನು ಫ್ರೆಂಚರ ಜೆಟ್ ಫೈಟರ್ ವಿಮಾನಗಳು ತಡೆದು, ಕೆಳಗಿಳಿಸಿ ನಾಯಕರನ್ನು ದಸ್ತಗಿರಿ ಮಾಡಲಾಯಿತೆಂದು ವರದಿಯಾಗಿದೆ

ದಸ್ತಗಿರಿಯಾದವರು ಅಲ್ಜೀರಿಯಾ ರಾಷ್ಟ್ರೀಯ ವಿಮೋಚನೆ ರಂಗದ ಮಿಲಿಟರಿ ಮುಖ್ಯಸ್ಥ ಮಹಮುದ್ ಬೆನ್ ಬೆಲ್ಲಾ ಮತ್ತು ಇತರ ನಾಲ್ವರು ಪ್ರಧಾನ ರಾಷ್ಟ್ರೀಯ ಮುಖಂಡರು. ಅವರುಗಳು ಟ್ಯೂನಿಸ್ಸಿಗೆ ತೆರಳುವ ಮೊರಾಕೊ ಸುಲ್ತಾನರನ್ನೂ, ಟ್ಯುನೀಷಿಯಾ ಮುಖಂಡರನ್ನೂ ಭೇಟಿ ಮಾಡಿ ಅಲ್ಜೀರಿಯಾ ಪರಿಸ್ಥಿತಿ ಬಗ್ಗೆ ಚರ್ಚಿಸಲು ವಿಮಾನದಲ್ಲಿ ಹೊರಟಿದ್ದನ್ನು ಫ್ರೆಂಚರು ರೇಡಾರ್ ಸಾಧನಗಳಿಂದ ಪತ್ತೆ ಹಚ್ಚಿ ಅವರ ವಿಮಾನವನ್ನು ತಮ್ಮ ವಿಮಾನಗಳಿಂದ ಸುತ್ತುಗಟ್ಟಿ ಕೆಳಗಿಳಿಸಿದರು. ದಸ್ತಗಿರಿಗೆ ಅವರುಗಳು ಯಾರೂ ಅಡ್ಡಿಪಡಿಸಲಿಲ್ಲ. ಅವರ ಕೈಗಳಿಗೆ ಬೇಡಿ ತೊಡಿಸಲಾಯಿತು

ಇವರಿಗೆ ಮುಂಚೆ ಮತ್ತೊಬ್ಬ ರಾಷ್ಟ್ರೀಯ ನಾಯಕರು ಬೇರೊಂದು ವಿಮಾನವನ್ನು ತಪ್ಪಾಗಿ ಹತ್ತಿ ಫ್ರೆಂಚರ ಕೈಗೆ ಸಿಕ್ಕದೆ ಪಾರಾದರು. ಅವರು ಟ್ಯುನೀಷಿಯಕ್ಕೆ ಹೋಗಿದ್ದಾರೆ

ದಸ್ತಗಿರಿಯಾದ ಸುದ್ದಿ ಕೇಳಿ ಟ್ಯೂನಿಸ್ ನಗರದಲ್ಲಿ ಗಲಭೆಗಳಾದುವು. ಮುಷ್ಕರಕ್ಕೆ ಕರೆಯಿತ್ತಾಗಿದೆ. ಮೊರಾಕೋವಿನ ಕೆಸಬ್ಲಾಂಕಾದಲ್ಲೂ ಮುಷ್ಕರ ನಡೆಯಿತು

ಶಾಂತಿಗಾಗಿ ಅಣು ಬಳಕೆಗೆ ೮೨ ರಾಷ್ಟ್ರಗಳ ಸಭೆ ನಿರ್ಧಾರ

ನ್ಯೂಯಾರ್ಕ್ [illegible] ಸಂಯುಕ್ತ ರಾಷ್ಟ್ರಗಳ [illegible] ಶಾಸನವೊಂದನ್ನು ಅಂಗೀಕರಿಸಿ, ಅಂತರ ರಾಷ್ಟ್ರೀಯ "ಶಾಂತಿಗಾಗಿ ಅಣು" ಸಂಸ್ಥೆಯೊಂದನ್ನು ಸ್ಥಾಪಿಸಲು ನಿರ್ಧರಿಸಲಾಗಿದೆ

ಮಹಾ ಚುನಾವಣೆಗೆ ಕಾಂಗ್ರೆಸ್ ಉಮೇದುವಾರರ ಆಯ್ಕೆ

ಪ್ರದೇಶ ಸಮಿತಿಯ ಸೂಚನೆ

ಬೆಂಗಳೂರು ೨೪

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರು ಸೂಚನೆಯೊಂದನ್ನು ಕಳುಹಿಸಿ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಸದಸ್ಯರು ತಮ್ಮ ಪ್ರದೇಶದಲ್ಲಿರುವವರೊಬ್ಬೊಬ್ಬರ ಹೆಸರನ್ನು ವಿಧಾನ ಸಭಾ ಕ್ಷೇತ್ರಗಳಿಗೂ, ಐವರು ಸದಸ್ಯರು ಒಂದುಗೂಡಿ ಒಬ್ಬರ ಹೆಸರನ್ನು ಪಾರ್ಲಿಮೆಂಟಿಗೂ ನವೆಂಬರ್ ೧೫ರೊಳಗೆ ಸೂಚಿಸಬಹುದೆಂದು ತಿಳಿಸುತ್ತಾರೆ.

ಹಾಗೆ ಸೂಚಿಸುವ ಮುಂಚೆ ಉಮೇದುವಾರರ ಹೆಸರು ಮತದಾರರ ಪಟ್ಟಿಯಲ್ಲಿ ಸೇರಿರುವ ವಿಚಾರವನ್ನೂ, ಚುನಾವಣೆ ವೆಚ್ಚವನ್ನು ಅವರು ವಹಿಸಿಕೊಳ್ಳುವ ಅಂಶವನ್ನೂ ತಿಳಿಸಬೇಕೆಂದೂ ಕೋರಲಾಗಿದೆ. ದ್ವಿಸದಸ್ಯ ಕ್ಷೇತ್ರದಲ್ಲಿ ಇಬ್ಬರ ಹೆಸರುಗಳನ್ನು ಸೂಚಿಸಲು ಅವಕಾಶವಿದೆ. ಜಿಲ್ಲಾ ಸಮಿತಿ ಸದಸ್ಯರು ತಮ್ಮ ಸಲಹೆಗಳನ್ನು ಪ್ರಕಟಪಡಿಸುವಂತಿಲ್ಲ

ಪ್ರತಿ ಉಮೇದುವಾರನೂ ಸಕ್ರಿಯ ಸದಸ್ಯನಾಗಿರಬೇಕಾಗಿದೆ, ಅವನು ಸಾಧಿಸಿದ ಕಾರ್ಯ, ಸಮಾಜ ಸೇವೆ ಮತ್ತು ನಡತೆ, ರಚನಾತ್ಮಕ ಕಾರ್ಯ, ಸ್ಥಳೀಯ ಸಂಸ್ಥೆ ಮತ್ತು ಪಾರ್ಲಿಮೆಂಟರಿ ಕೆಲಸ, ಶಿಸ್ತು ಪಾಲನೆ ಮುಂತಾದ ವಿಷಯಗಳನ್ನು ಗಮನಿಸಬೇಕೆಂದೂ ತಿಳಿಸಲಾಗಿದೆ

ಭಾರತದಲ್ಲಿ ಕಾಲೇಜು ಪರೀಕ್ಷೆಗಳ ರದ್ದು ?

ಪರೀಕ್ಷೆಗಳನ್ನು ರದ್ದುಪಡಿಸಿ ಅವುಗಳ ಜಾಗದಲ್ಲಿ ಬೇರಾವುದಾದರೂ ಪದ್ಧತಿಯನ್ನು ಜಾರಿಗೆ ತರುವ ವಿಚಾರವನ್ನು ವಿಶ್ವವಿದ್ಯಾಲಯಗಳೂ, ಉಪಾಧ್ಯಾಯರುಗಳೂ ಪರಿಶೀಲಿಸುತ್ತಿರುವುದಾಗಿ ವಿಶ್ವವಿದ್ಯಾಲಯಗಳ ಗ್ರ್ಯಾಂಟು ಸಮಿತಿ ಅಧ್ಯಕ್ಷರಾದ ಸಿ. ಡಿ. ದೇಶಮುಖ್‌ರವರು ತಿಳಿಸಿರುತ್ತಾರೆ. ಈಗಿನ ಪರೀಕ್ಷಾ ಪದ್ಧತಿಯಲ್ಲಿ ವಿದ್ಯಾರ್ಥಿಯ ಜ್ಞಾಪಕ ಶಕ್ತಿ ಮೇಲೆ ಹೆಚ್ಚಿನ ಮಹತ್ವವನ್ನು ಕಲ್ಪಿಸಲಾಗಿರುವುದೆಂದೂ, ಭಾರತದಲ್ಲೂ ಮತ್ತು ಇತರ ಕಡೆಗಳಲ್ಲೂ ವಿದ್ಯಾಭ್ಯಾಸ ಮಟ್ಟದ ವ್ಯತ್ಯಾಸಕ್ಕೆ ಇದೂ ಒಂದು ಕಾರಣವೆಂದೂ ಅವರು ಅಭಿಪ್ರಾಯಪಟ್ಟಿರುವರು

ಫ್ರೆಂಚ್ ವಿರುದ್ಧವಾಗಿ ಟ್ಯುನಿಸ್, ಮೊರಾಕೊ ನಾಯಕರ ಯುದ್ಧ ಕ್ರಮ

ಮೊರಾಕೊವಿನ ಸುಲ್ತಾನರು, ಟ್ಯೂನಿಸ್ಸಿನಲ್ಲಿ ಅಲ್ಲಿನ ಪ್ರಧಾನಿ ಹಬೀಬ್ ಬೋರ್ಗಿಬಾರವರೊಡನೆಯೂ, ಇತರ ನಾಯಕರೊಡನೆಯೂ ಅಲ್ಜೀರಿಯಾ ಬಗ್ಗೆ ಮಾತುಕತೆ ನಡೆಸುತ್ತಿರುವರು. ಅವರುಗಳ ಸಭೆಯು ಫ್ರೆಂಚರ ವಿರುದ್ಧವಾಗಿ ಯುದ್ಧ ಹೂಡಲಾಗುವ ಸಂಭವ ಹೆಚ್ಚಾಗಿದೆ

ದಿನಕ್ಕೆ ೮ ಗಂಟೆ ಕಾಲ ಕೆಲಸ ಮಾಡಬೇಕು

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಕರೆ

ಬೆಂಗಳೂರಿನ [illegible] ನಾಥ ಪ್ರಮುಖ ಸಮಾರಂಭವೊಂದರಲ್ಲಿ ಡಾ|| ಮೋಕ್ಷಗುಂಡಂ ವಿಶ್ವೇಶ್ವರಯ್ಯನವರು ಮಾತನಾಡಿ, ಪ್ರತಿಯೊಬ್ಬ [illegible] ದಿನಕ್ಕೆ ೮ ಗಂಟೆ [illegible] ಪ್ರಮಾಣಕ ರೀತಿಯಲ್ಲಿ ಕೆಲಸ ಮಾಡಬೇಕೆಂದೂ, ಹಾಗೆ ಮಾಡದಿದ್ದರೆ ಅಂದಿನ ಊಟಕ್ಕೆ ಅವನು ಅರ್ಹನಲ್ಲವೆಂದೂ ತಿಳಿಸಿರುತ್ತಾರೆ. ದೇವರು ಮಾನವನನ್ನು ಕರ್ತವ್ಯ ಸಾಧನೆಗಾಗಿಯೇ ಸೃಷ್ಟಿಸಿರುವನೆಂದೂ ಮಾನವರು ಅದನ್ನರಿತು ನಿತ್ಯವೂ ೮ ಗಂಟೆ ಕಾಲ ಶ್ರಮಪಡಬೇಕೆಂದೂ ಅವರು ಹೇಳಿರುವರು

ಮೊರಾಕೊ ರಾಷ್ಟ್ರೀಯರೊಡನೆ ಫ್ರೆಂಚ್ ಸಂಧಾನದ ರದ್ದು

ಫ್ರೆಂಚ್ ಸರ್ಕಾರದವರು ಸ್ವತಂತ್ರ ಮೊರಾಕೋವಿನ [illegible] ಮಾತುಕತೆಗಳನ್ನು ನಿಲ್ಲಿಸಿದ್ದಾರೆ. ಮೊರಾಕೊವಿನ ಸುಲ್ತಾನರಾದ ಸಿದಿ ಮಹಮದ್ ಯೂಸುಫ್ ಎಂಬುವರು ಟ್ಯುನೀಷಿಯಾ ಪ್ರಧಾನಿ [illegible] ರವರನ್ನು ಸಂಧಿಸಲು ಟ್ಯುನಿಸ್ ನಗರಕ್ಕೆ ಹೋಗಿದ್ದರೆ [illegible] ರನ್ನು [illegible]

ಮಹಾ ಚುನಾವಣೆಗಳಲ್ಲಿ ಮುಸ್ಲಿಂ ಲೀಗಿನ ಪಾತ್ರ

ಭಾರತದ ಮುಸ್ಲಿಂ ಲೀಗಿನ ಕಾರ್ಯಕಾರಿ ಸಮಿತಿ ಮತ್ತು ಕೌನ್ಸಿಲ್ ಸಭೆ [illegible] ಸೇರಿ, [illegible] ಬೇಕೆಂದು [illegible] ಮಾಡಲಾಯಿತು [illegible] ಜನಸಂಘದವರ [illegible] ಬಗ್ಗೆ [illegible] ತೀವ್ರವಾಗಿ ಟೀಕಿಸಲಾಯಿತು.

[illegible] ತೀಕ್ಷ್ಣ ದಾಳಿಗಳ ವಿರುದ್ಧ ದ್ರಾವಿಡ ನಾಯಕರ ಚಳುವಳಿ

[illegible] ಕಾರ್ಯಗಳಿಗೆ ಪರಿವರ್ತಿಸುವ [illegible] ತಾವು [illegible] ಮದ್ರಾಸಿನ ದ್ರಾವಿಡ ಸಂಘದ [illegible] ನಾಯಕರು [illegible] ತಿಳಿಸಿದ್ದಾರೆ. ತಮಿಳು ಪರ ಸಂಘದವರು ಆಂಧ್ರ-ಮದ್ರಾಸು ಗಡಿ ಚಳುವಳಿ ನಡೆಸುತ್ತಿರುವುದನ್ನು ಅವರು ಖಂಡಿಸಿದ್ದಾರೆ. [illegible] ವೆಂಕಟ [illegible] ಪಕ್ಷದವರು [illegible] ಬಳಸು [illegible] ಮಾಡಿದ್ದಾರೆ

ದಸರಾ ಸೇವಾ ಶಿಬಿರದ ಮುಕ್ತಾಯ ಸಮಾರಂಭ

ಭಾರತ ಸೇವಾದಳದವರು ಇಲ್ಲಿನ [illegible] ದೇವಸ್ಥಾನದಲ್ಲಿ ನಡೆಸುತ್ತಿದ್ದ ದಸರಾ ಸೇವಾ ಶಿಬಿರವು ಮುಕ್ತಾಯವಾಯಿತು. ನಗರ ಸೇವಾದಳ ಅಧ್ಯಕ್ಷರಾದ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ನಂತರ, ನಗರ [illegible] ಶ್ರೀ ಕೆ ಎಸ್ [illegible] ಸ್ವಾಗತ ಭಾಷಣ ಮಾಡಿದರು. [illegible] ಶ್ರೀ ಕೆ ರಾಮಚಂದ್ರರಾಯರು ವರದಿಯನ್ನು ಓದಿದರು [illegible] ಶ್ರೀ [illegible] ಎಸ್ ಅನಂತಯ್ಯ [illegible] ಶ್ರೀ ಎಂ [illegible] ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು

ಟಿಬೆಟ್ ಮತ್ತು ಭಾರತಗಳ ನಡುವೆ ವಿಮಾನ ಸಂಚಾರ

[illegible] ಮೊನ್ನೆ ಚೀಣದ ಪ್ರಯಾಣಿಕ ವಿಮಾನವೊಂದು [illegible] ಭಾರತಕ್ಕೆ ಹಾರಿಬಂದಿ [illegible] ಭಾರತದ ವಿಮಾನ [illegible] ಇದೇ ರೀತಿ ಪರೀಕ್ಷಾರ್ಥವಾಗಿ ಟಿಬೆಟ್ಟಿನ ರಾಜಧಾನಿ ಲ್ಹಾಸಾಗೆ ಸದ್ಯದಲ್ಲೇ ಹೋಗಲಿದೆ

೨೦೦ ಟನ್ ಸಿಮೆಂಟ್ ತೊಲೆ ಬಿದ್ದು ಮೂವರ ಮರಣ

[illegible] ರೇವಿನಲ್ಲಿ ನಿರ್ಮಿಸಲ್ಪಡುತ್ತಿರುವ [illegible] ೨೦೦ ಟನ್ ತೂಕದ ಸಿಮೆಂಟಿನ ತೊಲೆ [illegible] ಮೊನ್ನೆ ಕಳಚಿ ಬಿದ್ದುದರಿಂದ ಮೂವರು ಮೃತಪಟ್ಟು [illegible] ಮಂದಿಗೆ ಗಾಯವಾಯಿತೆಂದು ವರದಿಯಾಗಿದೆ. ಇನ್ನೂ ಹಲವು ಮಂದಿ ಮೃತಪಟ್ಟಿರಬೇಕೆಂದು ಹೇಳಲಾಗಿದೆ

ಬೆಳೆಗಳು ಮತ್ತು ಬೇಸಾಯ

[illegible] ವಿದ್ಯಾರಣ್ಯಪುರದಲ್ಲಿರುವ ಶ್ರೀ ಬಿ ಎಸ್ ಸಂಜೀವರೆಡ್ಡಿಯವರು ರಚಿಸಿರುವ ಮೇಲ್ಕಂಡ ಗ್ರಂಥದ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸಿದ್ದೇವೆ [illegible] ಗ್ರಂಥಕರ್ತರ [illegible] ಆಹಾರ ಧಾನ್ಯ, ದ್ವಿದಳ ಧಾನ್ಯ [illegible] ತರಕಾರಿ, [illegible] ಮತ್ತು [illegible] ಹಣ್ಣಿನ [illegible] ವಿವರಿಸಲಾಗಿದೆ. ವ್ಯವಸಾಯ [illegible] ವಿಜ್ಞಾನವು ದಿನ ದಿನಕ್ಕೆ ಹೊಸ [illegible] ಕಾಲ [illegible] ಇಂತಹ ಪುಸ್ತಕವನ್ನು [illegible] ಗ್ರಂಥಕರ್ತರು [illegible] ಗ್ರಂಥವನ್ನು ವ್ಯವಸಾಯ [illegible] ವಿಜ್ಞಾನ [illegible] ಮತ್ತು [illegible] ಗ್ರಂಥವನ್ನು ಅವಶ್ಯವಾಗಿ ನೋಡ ಬೇಕು

ಹರಿಕಥೆ ಮತ್ತು ಸಂಗೀತ

ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ಕೃಷ್ಣ ಗಣಪತಿ ದೇವಸ್ಥಾನದಲ್ಲಿ ನಾಳೆಯ [illegible] ಸಂಜೆ ೬ ಗಂಟೆಗೆ ಭಾರತ [illegible] ಹರಿಕಥೆಯನ್ನು [illegible] ಗೀತಾದೇವಿಯವರಿಂದ ಸಂಗೀತ ಮತ್ತು ನರ್ತನವನ್ನೂ ಏರ್ಪಡಿಸಲಾಗಿದೆ ಸರ್ವರಿಗೂ ಸ್ವಾಗತವಿದೆ

ವಿವಾಹ ಮಹೋತ್ಸವ

ನಗರದ ನರಸಿಂಹರಾಜ ಮೊಹಲ್ಲದಲ್ಲಿರುವ ಶ್ರೀ ಬಿ ಎಂ ದಕ್ಷಿಣಾಮೂರ್ತಿಯವರು ತಮ್ಮ ಕುಮಾರ ಶ್ರೀ ಎಂ ಡಿ ಶಿವಪ್ರಕಾಶ್‌ರವರಿಗೆ [illegible] ಶ್ರೀ ವಾಸುದೇವ ಮೊದಲಿಯಾರ್ ರವರ ಪುತ್ರಿ ಕು|| ಸುಲೋಚನಾದೇವಿಯವರ [illegible] ಕಳೆದ ಗುರುವಾರ ವಿವಾಹವನ್ನು ನೆರವೇರಿಸಿದರು

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	೪೬	೧೨	೦	೪೮	೦	೦
[illegible]	೪೨	೬	೦	೪೬	೧೨	೦
ಕಡ್ಡಿ	೪೬	೦	೦	೪೬	೪	೦
ಕಾರು ಸಣ್ಣ	೨೮	೮	೦	೪೦	೮	೦
ರಾಗಿ	೨೬	[illegible]	[illegible]	೪೨	೪	೦
ಜೋಳ	೪೮	೧೪	೦	೪೬	೧೨	೦
[illegible]	೨೬	೨	೦			
ಕಡಲೆಕಾಯಿ	೨೪	೦	೦	೨೨	೨	೦
ಎಳ್ಳು	೪೪	೦	೦	೫೩	೧೪	೦
ತೊಗರಿ	೨೫	೦	೦	೨೬	೧೪	೦
ಹೆಸರು	೭	೧				
[illegible]	೫೪	೦	೦	೬೦	೦	೦
[illegible]	೨೧	೬	೦	೪೭	೦	೦
[illegible]	೪	೦	೦	೭	೦	೦
ಮೆಣಸಿನಕಾಯಿ	೧೨	೧೪	೦	೨೬	೦	೦
ತೆಂಗಿನಕಾಯಿ ೧೦೦೦	೧೭೮	೦	೦			

ತುಮಕೂರು ಅಡ್ವೊಕೇಟರ ಆತ್ಮಹತ್ಯೆ

ತುಮಕೂರಿನ ಅಡ್ವೊಕೇಟರಾದ ಶ್ರೀ ಟಿ. ಪಿ ಬ್ರಹ್ಮಾಚಾರರವರು ಮೊನ್ನೆ ತಮ್ಮ ಮನೆಯಲ್ಲಿ ನೇಣುಹಾಕಿಕೊಂಡು ಮೃತಪಟ್ಟರೆಂದು ವರದಿಯಾಗಿದೆ ಅವರಿಗೆ ೩೫ ವರ್ಷ ವಯಸ್ಸಾಗಿತ್ತು ಅವರು ದಸರಾ ಸಮಯದಲ್ಲಿ ತಮ್ಮ ಪತ್ನಿ ಮತ್ತು ಪುತ್ರರನ್ನು ಸಾಲಿಗ್ರಾಮಕ್ಕೆ ಕರೆದುಕೊಂಡು ಹೋಗಿ ಬಿಟ್ಟುಬಂದಿದ್ದರು ಆತ್ಮಹತ್ಯೆಯ ಕಾರಣ ತಿಳಿದುಬಂದಿಲ್ಲ.

ಜೂಜುಕಟ್ಟೆ ವಿರುದ್ಧವಾಗಿ ಪ್ರದರ್ಶನ

ಚಿಕ್ಕಮಗಳೂರಿನಲ್ಲಿ ಹಲವಾರು ತಿಂಗಳಿಂದ ಸೂಟಿಂಗ್ ಗ್ಯಾಲರಿ ಎಂಬ ಹೆಸರಿನಲ್ಲಿ ನಡೆಯುತ್ತಿರುವ ಜೂಜಿನ ಕಟ್ಟೆಯನ್ನು ಪ್ರತಿಬಂಧಿಸುವಂತೆ ಅಧಿಕಾರಿಗಳನ್ನು ಒತ್ತಾಯಪಡಿಸಲು ಅಲ್ಲಿನ ನಾಗರಿಕ ಸಂಘದ ಸದಸ್ಯರು ಕಳೆದ ಗುರುವಾರ ಪ್ಲಕಾರ್ಡುಗಳನ್ನು ಹಿಡಿದು ಸೈಕಲ್ ಮೆರವಣಿಗೆ ನಡೆಸಿ ಪ್ರದರ್ಶನ ಮಾಡಿದರು.

೧೧೨ ವರ್ಷದವನ ನಿಧನ

ಹಾಸನ ತಾಲ್ಲೂಕಿನ ಅನೇಕ ಕಡೆ ಬಯಲು ನಾಟಕಗಳಲ್ಲಿ ಹಲವಾರು ವರ್ಷಗಳಿಂದಲೂ ಕೋಡಂಗಿ ಪಾತ್ರದ ಅಭಿನಯ ಮಾಡುತ್ತಿದ್ದ ಬೆಣಗಟ್ಟೆ ಪುಟ್ಟಶೆಟ್ಟರು ಕಳೆದ ಭಾನುವಾರ ಮೃತಪಟ್ಟರು ಅವರಿಗೆ ೧೧೨ ವರ್ಷ ವಯಸ್ಸಾಗಿತ್ತು

ಸರ್ಕಾರಿ ಕೈಗಾರಿಕಾ ನೌಕರರ ಬಹಿರಂಗ ಸಭೆ

ಇತ್ತೀಚೆಗೆ ಮೈಸೂರು ರವರು ಸರ್ಕಾರಿ ಗೆಜೆಟೆಡ್ ನೌಕರರಿಗೆ ಕೊಟ್ಟ ತಾತ್ಕಾಲಿಕ ಪರಿಹಾರವನ್ನು ಸರ್ಕಾರಿ ಕೈಗಾರಿಕೆಗಳಲ್ಲಿರುವ ನೌಕರರಿಗೆ ಅನ್ವಯಿಸದಿರುವುದರ ಬಗ್ಗೆ ಪರಿಶೀಲಿಸಲು ನಾಳೆ ಸಂಜೆ ೫ ಗಂಟೆಗೆ ಬೆಂಗಳೂರಿನಲ್ಲಿ ಐ ಎನ್ ಟಿ ಯು ಸಿ ಅಧ್ಯಕ್ಷರಾದ ಶ್ರೀ ಜಿ ವಿ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ ಎಲ್ಲ ಸರ್ಕಾರಿ ಕೈಗಾರಿಕೆಗಳ ನೌಕರರ ಬಹಿರಂಗ ಸಭೆಯನ್ನು ಕರೆಯಲಾಗಿದೆ

ಮಹದೇಶ್ವರನ ಜಾತ್ರೆ ಯಾತ್ರಿಕರಿಗೆ ಸೂಚನೆ

ಕೊಳ್ಳೇಗಾಲ ತಾಲ್ಲೂಕಿನಲ್ಲಿರುವ ಮಹದೇಶ್ವರ ಜಾತ್ರೆಯು ಈ ತಿಂಗಳು ೩೦ ರಿಂದ ನಡೆಯುವ ಸಂಬಂಧವಾಗಿ ಅಲ್ಲಿಗೆ ಹೋಗುವ ಯಾತ್ರಿಕರಿಗೆ, ಸಂಬಂಧಪಟ್ಟ ಆರೋಗ್ಯ ಅಧಿಕಾರಿಗಳು ಸೂಚನೆಯಿತ್ತು, ಕೊಳ್ಳೇಗಾಲದಲ್ಲಿ ಕಾಲರಾ ವ್ಯಾಧಿ ಹರಡಿರುವುದರಿಂದ ಯಾತ್ರಿಕರು ಕಾಲರಾ ವಿರುದ್ಧದ ಇನಾಕ್ಯುಲೇಷನ್ ಮಾಡಿಸಿಕೊಂಡು ಹೋಗದಿದ್ದರೆ, ಜಾತ್ರೆಗೆ ಬಿಡುವುದಿಲ್ಲವೆಂದು ತಿಳಿಸಿರುತ್ತಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಗೋಟುವಾದ್ಯ ೭-೧೫ ಟಿ ಆರ್. ಮೂರ್ತಿ-ದೇವರ ನಾಮ ೭ ೩೦ ಮತ್ತು ೮ ೧೫ ಕೆ ಎಸ್ ನಾರಾಯಣಾಚಾರ್-ಕಾವ್ಯ ವಾಚನ ಮಧ್ಯಾಹ್ನ ೧೨ ಟಿ. ಆರ್ ಮೂರ್ತಿ ಸಂಗೀತ ೧೨-೩೦ ಹೆಚ್ ಟಿ ವೆಂಕಟರಾಮಯ್ಯ-ಪಿಟೀಲು ೧ ಎಸ್ ಎ ಲತೀಫ್ ಹಿಂದೂಸ್ತಾನಿ ಸಂಗೀತ ೧ ೫೦ ಗೋಟುವಾದ್ಯ. ಸಂಜೆ ೫ ೩೦ ಎಂ ಟಿ ನಾಗಮುತ್ತು ಹಿಂದೂಸ್ತಾನಿ ಗಾತ್ರ ಸಂಗೀತ ೬-೩೦ ಜಾನಪದ ಗೀತೆ ೭ ೩೦ ತಾಳ ವಾದ್ಯ ಕಛೇರಿ ೮ ಹೆಚ್ ಟಿ ವೆಂಕಟರಾಮಯ್ಯ-ಪಿಟೀಲು ೮ ೩೦ ನಿಮ್ಮ ಮೆಚ್ಚಿನ ಗೀತೆಗಳು ೯ ೧೫ ಇಂಗ್ಲಿಷ್ ಭಾಷಣ ೯ ೩೦ ಯಾತ್ರಿಕರ ಮುನ್ನಡೆ ಶಬ್ದ ಚಿತ್ರ ೯-೫೦ ರಿಂದ ೧೧ ರ ವರೆಗೆ ಟಿ ಎಂ. ಸುಬ್ಬಮ್ಮನವರ ನಾಟಕ

ಪಾಕಿಸ್ತಾನಕ್ಕೆ ಚೀಣಾ ಪ್ರಧಾನಿಯ ಭೇಟಿ

ಚೀಣದ ಪ್ರಧಾನಿ ಚೌ ಎನ್ ಲೈ ಯವರು ಪಾಕಿಸ್ತಾನ ಸರ್ಕಾರದ ಆಹ್ವಾನವನ್ನು ಅಂಗೀಕರಿಸಿ ಶೀಘ್ರದಲ್ಲೇ ಅಲ್ಲಿಗೆ ಭೇಟಿ ಕೊಡುವರೆಂದು ಹೇಳಲಾಗಿದೆ

ಎಂ. ಬಿ. ರಾಮಚಂದ್ರರವರ ಗೌರವಾರ್ಥ ಸತ್ಕಾರ

ನಗರದ ಲಕ್ಷ್ಮಿ ಚಿತ್ರ ಮಂದಿರದಲ್ಲಿ ನಡೆಯುತ್ತಿರುವ ಕಾಯಕ್ಕೈಕ್ಸಿನ್ ಕಾರೀ ಚಿತ್ರದ ನಾಯಕ ಸುಪ್ರಸಿದ್ಧ ತಮಿಳು ನಟ ಶ್ರೀ ಎಂ ಜಿ. ರಾಮಚಂದ್ರರವರ ಗೌರವಾರ್ಥವಾಗಿ ಚಿತ್ರ ಮಂದಿರದವರು ನೆನ್ನೆ ಸಂಜೆ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಶ್ರೀ ರಾಮಚಂದ್ರರವರು ಸತ್ಕಾರಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ, ಮೈಸೂರಿನ ಮಹಾಜನರು ಕಲೆಗೆ ನೀಡುತ್ತಿರುವ ಪ್ರೋತ್ಸಾಹಕ್ಕಾಗಿ ಅಭಿನಂದಿಸಿದರು. ಶೀಘ್ರದಲ್ಲೇ ಕರ್ನಾಟಕ ರಾಜ್ಯದ ನಿರ್ಮಾಣವಾಗಲಿದೆಯೆಂದೂ, ದಕ್ಷಿಣ ಭಾರತೀಯರೆಲ್ಲರೂ ಒಟ್ಟಾಗಿ ಕಲಾಭಿವೃದ್ಧಿಗೆ ಶ್ರಮಿಸಬೇಕೆಂದೂ ಅವರು ಸೂಚಿಸಿದರು. ಮುಂದಿನ ವ್ಯವಸ್ಥಾಪಕರೂ ಮತ್ತು ಇತರ ಕಲಾಭಿಮಾನಿಗಳೂ ಅವರಿಗೆ ಪುಷ್ಪಹಾರಗಳನ್ನು ಸಮರ್ಪಿಸಿದರು ಶ್ರೀಯುತರನ್ನು ನೋಡಲು ಚಿತ್ರ ಮಂದಿರದ ಬಳಿ ಅಗಾಧವಾದ ಜನಸಂದಣಿಯು ಸೇರಿದ್ದಿತು

ಶಾರದಾ ವಿಲಾಸ ಶಾಲೆಗೆ ಹೊಸ ಡೈರೆಕ್ಟರ್

ಹೈದರಾಬಾದಿನ ವಿಶ್ವವಿದ್ಯಾಲಯದ ಭೌತಶಾಸ್ತ್ರ ಪ್ರಾಧ್ಯಾಪಕರಾಗಿದ್ದ ಡಾ|| ಎಸ್ ಭಗವಂತಂರವರನ್ನು ಬೆಂಗಳೂರಿನಲ್ಲಿರುವ ಭಾರತ ವಿಜ್ಞಾನ ಶಾಲೆಯ ಡೈರೆಕ್ಟರಾಗಿ ನೇಮಿಸಲಾಗಿರುವುದೆಂದು ವರದಿಯಾಗಿದೆ

ಕಳ್ಳತನದ ಗ್ಯಾಂಗಿನ ಸ್ತ್ರೀಯರ ದಸ್ತಗಿರಿ

ದಸರಾ ಸಮಯದಲ್ಲಿ ನಗರದಲ್ಲಿ ಕಳ್ಳತನ ನಡೆಸುತ್ತಿದ್ದರೆಂದು ಹೇಳಲಾದ ಸ್ತ್ರೀಯರ ಗುಂಪಿನ ಚಿನ್ನಮ್ಮ, ಸುಬ್ಬಮ್ಮ ಮತ್ತು ಇತರ [illegible] ಜನರನ್ನು ಬಂಧಿಸಲಾಗಿದೆ ಅವರುಗಳು ಬೆಂಗಳೂರು, ತಿರುವಾಂಕೂರು, ಮದ್ರಾಸು, ತಿರುನಲ್ವೇಲಿ ಮುಂತಾದ ಕಡೆಗಳವರೆಂದೂ, ಅವರುಗಳಿಗೆ ಹಿಂದೆ ಶಿಕ್ಷೆಗಳಾಗಿದ್ದುದಾಗಿಯೂ ವರದಿಯಾಗಿದೆ. ಹೆಂಗಸರ ಕತ್ತಿನಿಂದ ಚಿನ್ನದ ಸರಗಳನ್ನು ಅಪಹರಿಸುವುದು, ಮಕ್ಕಳ ಕೈ ಬಳೆಗಳನ್ನು ಕಳಚುವುದು ಮುಂತಾದುವುಗಳಲ್ಲಿ ಅವರು ತೊಡಗಿದ್ದರೆಂದು ಹೇಳಲಾಗಿದೆ. ಅವರನ್ನು ನ್ಯಾಯಾಂಗ ಬಂಧನದಲ್ಲಿಡಲಾಗಿದೆ

ಅಂತರ ಸಂಸ್ಥಾನ ಸಚಿವರುಗಳ ಸಭೆ

ಅಂತರ ಸಂಸ್ಥಾನ ಸಚಿವರುಗಳ ಸಭೆ ಮೊನ್ನೆ ಬೆಂಗಳೂರಿನಲ್ಲಿ ನಡೆಯಿತು. ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ವಿಶೇಷ ಆಹ್ವಾನದ ಮೇಲೆ ಸಭೆಗೆ ಹಾಜರಿದ್ದರು

ರಣಜಿತ್ ★ 25 10-56 ರಿಂದ ಅಮೋಘ ಪ್ರದರ್ಶನ

ಪ್ರತಿ ದಿನ ೩ ಆಟಗಳು
ಪ್ರತಿಯೊಬ್ಬರೂ ಕುಟುಂಬ ಸಮೇತರಾಗಿ
ನೋಡಬೇಕಾದ ಭಕ್ತಿರಸದ ಹಿಂದಿ ಚಿತ್ರ

ದೇವಾನಂದ್ ಶಿಲಾಂಬರದ ಅಲಂಕಾರ

ಸಂ. [illegible] . [illegible], ಡಿಕ್ಸನ್, [illegible]
ಮತ್ತು [illegible]
ನಿರ್ದೇಶನ -ಅಮ್ಮಾಭಾಯಿ [illegible]
ಸಂಗೀತ -ಎ. ಆರ್. ಖುರೈಷಿ

Edited, Printed and Published
A R Nagarajan at Sadhvi P
D Subbiah Road, Mysore

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
[illegible]
ಬೆಂಗಳೂರು -2

ಸಂಪುಟ : ೧೩] SADHVI : THURSDAY 25—10—1956 ಮೈಸೂರು : ಗುರುವಾರ ೨೫—೧೦—೧೯೫೬ [ಸಂಚಿಕೆ : ೬೩

ಹಂಗೇರಿಯಲ್ಲಿ ಆಡಳಿತ ಬದಲಾವಣೆಗಾಗಿ ಭಾರಿ ಕ್ರಾಂತಿ

ಪ್ರಭುತ್ವದ ಬದಲಾವಣೆಗಾಗಿ ಹಂಗೇರಿಯಲ್ಲಿ ಕ್ರಾಂತಿ

ಮಾಜಿ ಪ್ರಧಾನಿ ನಾಗಿಯವರ ಪುನರ್ನೇಮಕ

ಹಂಗೇರಿಯಲ್ಲಿ ಪ್ರಭುತ್ವವನ್ನು ಬದಲಾಯಿಸಬೇಕೆಂಬ ಬಗ್ಗೆ ನೆನ್ನೆ ರಾತ್ರಿ ಒಳನಾಡಿನ ರಕ್ಷಣಾ ದಳಗಳವರಿಗೂ, ಪ್ರದರ್ಶನಕಾರರಿಗೂ ತೀವ್ರ ಘರ್ಷಣೆ ನಡೆದು ಅನೇಕ ಸಾವುನೋವುಗಳಾಗಿರುವುದಾಗಿ ವರದಿಯಾಗಿದೆ. ಬುಡಾಪೆಸ್ಟ್ ನಗರದಲ್ಲಿ ಬಹಳವಾಗಿ ಘರ್ಷಣೆಗಳು ಆದುವು. ಅನೇಕ ಮಂದಿ ವಿದ್ಯಾರ್ಥಿಗಳು ಮೆರವಣಿಗೆ ಮತ್ತು ಪ್ರದರ್ಶನಗಳನ್ನು ನಡೆಸಿ ಹಂಗೇರಿಯು ಸ್ವತಂತ್ರವಾಗಬೇಕೆಂದೂ, ಮಾಜಿ ಪ್ರಧಾನಿ ಇಮ್ರೆ ನಾಗಿಯವರನ್ನು ಮತ್ತೆ ಪ್ರಧಾನಿಯಾಗಿ ನೇಮಿಸಬೇಕೆಂದೂ ಘೋಷಿಸಿದರು

ನೆನ್ನೆ ಬೆಳಗಿನ ಜಾವ ನಾಗಿಯವರನ್ನು ಮತ್ತೆ ಪ್ರಧಾನಿಯಾಗಿ ನೇಮಿಸಿ ಘೋಷಣೆ ಹೊರಡಿಸಲಾಯಿತು. ನೂತನ ಸರ್ಕಾರವು ದೇಶದಾದ್ಯಂತ ಮಾರ್ಷಲ್ ಲಾವನ್ನು ಘೋಷಿಸಿ, ಆಸ್ಟ್ರಿಯ ಗಡಿಯನ್ನು ಬಂದ್ ಮಾಡಿತಲ್ಲದೆ, ಇಡೀ ರಾತ್ರಿ ನಡೆದ ಬೀದಿ ಕಾಳಗದನಂತರ ಸೋವಿಯಟ್ ಸೈನ್ಯವನ್ನು ಕರೆಸಿತು. ಪ್ರತಿ ಕ್ರಾಂತಿ ಪಡೆಗಳ ನಿಯೋಗವೊಂದು ನಾಗಿಯವರನ್ನು ಭೇಟಿ ಮಾಡಿ ಕ್ಷಮಾದಾನವೀಯುವುದಾದರೆ ಶರಣಾಗತವಾಗುವುದಾಗಿ ತಿಳಿಸಿತೆಂದೂ, ಆ ಬೇಡಿಕೆಯನ್ನು ಅಂಗೀಕರಿಸಲಾಯಿತೆಂದೂ ಹೇಳಲಾಗಿದೆ.

ಉತ್ತರ ಕರ್ನಾಟಕ ಪ್ರವಾಸಕ್ಕಾಗಿ ಮಹಾರಾಜರ ಪ್ರಯಾಣ

ಮೈಸೂರು ೨೪

ಶ್ರೀಮನ್ಮಹಾರಾಜರು ಈ ದಿನ ಬೆಳಿಗ್ಗೆ ಸ್ಪೆಷಲ್ ರೈಲಿನಲ್ಲಿ ಉತ್ತರ ಕರ್ನಾಟಕದ ಪ್ರವಾಸಕ್ಕಾಗಿ ಇಲ್ಲಿಂದ ಹೊರಟರು. ಅವರೊಡನೆ ಮಹಾರಾಜರ ಕಾರ್ಯದರ್ಶಿ ಶ್ರೀ ಜೆ ಬಿ. ಮಲ್ಲಾರಾಧ್ಯ, ಶ್ರೀ ಎಂ ಗೋಪಾಲಕೃಷ್ಣ ಅರಸ್ ಮತ್ತು ಶ್ರೀ ಬಿ ಸುಬ್ಬರಾಮಯ್ಯನವರೂ ಪ್ರಯಾಣ ಮಾಡಿದರು. ರೈಲು ನಿಲ್ದಾಣದಲ್ಲಿ ಜಿಲ್ಲಾಧಿಕಾರಿಗಳು, ಪುರಸಭಾಧ್ಯಕ್ಷರು, ಪುರಸಭಾ ಕಮೀಷನರು ಮತ್ತು ಇತರ ಪ್ರಮುಖರು ಹಾಜರಿದ್ದು ಶ್ರೀಮನ್ಮಹಾರಾಜರಿಗೆ ಶುಭ ಪ್ರಯಾಣವನ್ನು ಕೋರಿದರು. ಪುರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಹಾರವನ್ನು ಅರ್ಪಿಸಿದರು.

ಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ದಸರಾ ವಸ್ತು ಪ್ರದರ್ಶನದಲ್ಲಿ ನಾಳೆ ಬೆಳಿಗ್ಗೆ ಮತಿ ಎಂ ವಿ ನಾಗಮ್ಮ ಮತ್ತು ಶ್ರೀ ಬಿ ರಯ್ಯನವರಿಂದ ದೇವರ ನಾಮಗಳು ಶ್ರೀ ವೀರಯ್ಯನವರಿಂದ ಬಸವೇಶ್ವರ ವಚನ ಸಂಜೆ ಶ್ರೀ ಚಿಕ್ಕಸ್ವಾಮಿ ಮಂಡಳಿಯವರಿಂದ ನಂತರ, ಶ್ರೀ ಜಿ ಆರ್ ಸ್ವಾಮಿಯವ ಸಂಗೀತ, ಗೌತಮಬುದ್ಧ ನಾಟಕ, ಮಹಿಳೆಯರ ಕಲಾ ಪ್ರೌಢಿಮೆ ಪ್ರದರ್ಶನ ಮತ್ತು ಬೇಸ್ತು, ಅಬ್ಬಾ ಏನ್ ಹೆಂಡ್ತಿ ಮತ್ತು ಟ್ರಲ್ಲಾ ಕೈಲಿ ಎಂಬ ನಾಟಕಗಳೂ ಏರ್ಪಾಡಾಗಿವೆ

ನೂತನ ಮೈಸೂರು ಅಬಕಾರಿ ಕಛೇರಿಯಲ್ಲಿ ಬದಲಾವಣೆಗಳು

ಡೆಪ್ಯುಟಿ ಸೆಕ್ರೆಟರಿಗಳ ನೇಮಕ ಮತ್ತು ಹೆಚ್ಚು ನೌಕರರ ಸಂಖ್ಯೆ

ಬೆಂಗಳೂರು ೨೪

ಬರುವ ನವೆಂಬರ್ ೧ರಿಂದ ನೂತನ ಮೈಸೂರು ರಾಜ್ಯದ ರಚನೆಯು ಜಾರಿಯಾಗುವ ಮೈಸೂರು ಸರ್ಕಾರಿ ಕಛೇರಿಯ ವಿವಿಧ ಇಲಾಖೆಗಳಲ್ಲಿ ಕೆಲಸಗಳು ಹೆಚ್ಚುವುದು ಅವಶ್ಯಕವಾಗಿ ಕಛೇರಿಯ ಎಲ್ಲಾ ವಿಭಾಗಗಳಲ್ಲೂ ಸುಧಾರಣೆಗಳನ್ನು ಮಾಡಲಾಗುವುದು. ಕೃಷಿ [illegible], ಹಣಕಾಸು, ರೆವಿನ್ಯೂ, ವಾಣಿಜ್ಯ ಮತ್ತು ಕೈಗಾರಿಕೆ, ಪ್ಲಾನಿಂಗ್ ಮತ್ತು ಅಭಿವೃದ್ಧಿ ಮುಜರಾಯಿ ಮತ್ತು ವಿದ್ಯುಚ್ಛಕ್ತಿ, ಸ್ಥಳೀಯ ಸಂಸ್ಥೆಗಳು ಮತ್ತು ಆರೋಗ್ಯ ಮತ್ತು ಗೃಹ ಮತ್ತು ನ್ಯಾಯಾಂಗ ಇಲಾಖೆಗಳಿಗೆ ಒಬ್ಬೊಬ್ಬರಂತೆ ಹೊಸದಾಗಿ ೯ ಮಂದಿ ಡೆಪ್ಯುಟಿ ಸೆಕ್ರೆಟರಿಗಳನ್ನು ನೇಮಿಸಲಾಗುವುದು. ಈಗಿರುವ [illegible] ಅಂಡರ್ ಮತ್ತು ಅಸಿಸ್ಟೆಂಟ್ ಸೆಕ್ರೆಟರಿಗಳ ಜೊತೆಗೆ ಇನ್ನೂ [illegible] ಜನರನ್ನು ನೇಮಿಸಲಾಗುವುದು. ಈಗಿರುವ [illegible] ಆಫೀಸ್ ಸೂಪರಿಂಟೆಂಡೆಂಟುಗಳ ಸಂಖ್ಯೆಯು [illegible]ಕ್ಕೂ ಪ್ರಥಮ ದರ್ಜೆ ಗುಮಾಸ್ತರ ಸಂಖ್ಯೆ [illegible] ರಿಂದ [illegible]ಕ್ಕೂ ಹೆಚ್ಚುವವು

ನೂತನ ಮೈಸೂರು ಕಛೇರಿಯಲ್ಲಿ ೩೩ ಇಲಾಖೆಗಳು ಇರುವುವು. ಮರಾಮತ್ತು ಇಲಾಖೆಯಲ್ಲಿ ೩ ಜನ ಚೀಫ್ ಇಂಜನಿಯರರು ಇರುವರು. ಒಬ್ಬರು ರಾಜಮಾರ್ಗಗಳು, ಸರ್ಕಾರಿ ಶಾಪ್, ಕಟ್ಟಡಗಳು ಮತ್ತು ಈಗಿನ ಮೈಸೂರಿನಲ್ಲಿ ಮುಗಿಯದೆ ಇರುವ ನೀರಾವರಿ ಕಾಮಗಾರಿಗಳ ಮೇಲ್ವಿಚಾರಣೆಯುಳ್ಳವರು. ಉಳಿದ ಇಬ್ಬರು ಉತ್ತರ ಮತ್ತು ದಕ್ಷಿಣ ವಿಭಾಗಗಳನ್ನು ನೋಡಿಕೊಳ್ಳುವರು. ಉತ್ತರಕ್ಕೆ ಮುನಿರಾಬಾದು ಮತ್ತು ದಕ್ಷಿಣಕ್ಕೆ ಬೆಂಗಳೂರುಗಳು ಕೇಂದ್ರಗಳಾಗಿರುವುವು

ವಿದ್ಯಾಭ್ಯಾಸ ಇಲಾಖೆಯಲ್ಲಿ ಈಗಿರುವ ೩ ಪ್ರಾದೇಶಿಕ ವಿಭಾಗಗಳ ಜೊತೆಗೆ ಧಾರವಾಡ ಮತ್ತು ರಾಯಚೂರುಗಳಲ್ಲಿ ಇನ್ನೆರಡು ವಿಭಾಗಗಳನ್ನು ಏರ್ಪಡಿಸಲಾಗುವುದು. ತಾಂತ್ರಿಕ ಶಿಕ್ಷಣದ ಮೇಲ್ವಿಚಾರಣೆಗಾಗಿ ಜಾಯಿಂಟ್ ಡೈರೆಕ್ಟರರೊಬ್ಬರನ್ನೂ ವಿದ್ಯಾಭ್ಯಾಸ ಇಲಾಖಾ ಡೈರೆಕ್ಟರ ಸಹಾಯಕ್ಕಾಗಿ ಒಬ್ಬ ಡೆಪ್ಯುಟಿ ಡೈರೆಕ್ಟರರನ್ನೂ ನೇಮಿಸಲಾಗುವುದು

ಡಿವಿಜನಲ್ ಕಮೀಷನರುಗಳ ಸಹಾಯಕ್ಕಾಗಿ ಪ್ರತಿಯೊಬ್ಬರಿಗೂ ಇಬ್ಬರಂತೆ ಅಸಿಸ್ಟೆಂಟ್ ಕಮೀಷನರುಗಳನ್ನು ನೇಮಿಸಲಾಗುವುದು

ಬೇಲೂರು ಮೊಕದ್ದಮೆಯಲ್ಲಿ ಸಾಕ್ಷಿಗಳಾಗಿ ಮಂತ್ರಿಗಳನ್ನು ಕರೆಸಲು ನಿರಾಕರಣೆ

ಬೇಲೂರು ಕೊಲೆ ಮೊಕದ್ದಮೆಯಲ್ಲಿ ಶ್ರೀ ಕೆ ಹನುಮಂತಯ್ಯ, ಗೃಹಮಂತ್ರಿ ಶ್ರೀ ಸಿದ್ದವೀರಪ್ಪ ಮತ್ತು ಇತರರನ್ನು ಆಪಾದಿತರ ಪರವಾಗಿ ಸಾಕ್ಷಿ ಹೇಳಲು ಕರೆಸುವ ಬಗ್ಗೆ ಸಲ್ಲಿಸಲಾಗಿದ್ದ ಅರ್ಜಿಯನ್ನು ನ್ಯಾಯಾಧೀಶರು ತಳ್ಳಿ ಹಾಕಿದ್ದಾರೆ

ನೂತನ ಮೈಸೂರು ಸಂಸ್ಥಾನದ ಉದಯೋತ್ಸವ

ಬೆಂಗಳೂರಿನಲ್ಲಿ ಕಾರ್ಯಕ್ರಮ

ಬೆಂಗಳೂರು ೨೪

ನೂತನ ಮೈಸೂರು ಸಂಸ್ಥಾನದ ಉದಯೋತ್ಸವ ಸಮಾರಂಭವು ಬರುವ ತಿಂಗಳು ೧ನೇ ತಾರೀಕು ಮಧ್ಯಾಹ್ನ ೩-೪೫ ಘಂಟೆಗೆ ಇಲ್ಲಿನ ಸೆಂಟ್ರಲ್ ಕಾಲೇಜ್ ಕ್ರಿಕೆಟ್ ಪೆವಿಲಿಯನ್ನಿನಲ್ಲಿ ಜರುಗುವುದು. ಪ್ರಾರ್ಥನೆಯೊಡನೆ ಕಾರ್ಯಕ್ರಮವು ಆರಂಭವಾಗಿ, [illegible] ಸ್ವಾಗತ ಭಾಷಣ, ಸಂಗೀತ, ರಾಜ್ಯಪಾಲರ ಪ್ರಾರಂಭ ಭಾಷಣ ಮತ್ತು ಮುಖ್ಯ ಮಂತ್ರಿಯವರ ವಂದನಾರ್ಪಣೆಯೊಡನೆ ಸಮಾಪ್ತಿಗೊಳ್ಳುವುದು. ಸಮಾರಂಭವನಂತರ [illegible] ಗವರ್ನರು ಸತ್ಕಾರ ಕೂಟವನ್ನು ಏರ್ಪಡಿಸಿರುವರು. ಅಂದು ಸಂಜೆ ೬ ಗಂಟೆಗೆ ಟೌನ್ ಹಾಲಿನಲ್ಲಿ ಸಾಂಸ್ಕೃತಿಕ ಸಮಾರಂಭ [illegible] ರಾತ್ರಿ ರೆಸಿಡೆನ್ಸಿಯಲ್ಲಿ ಮುಖ್ಯ ಮಂತ್ರಿಗಳು ಭೋಜನ ಕೂಟವನ್ನು ಏರ್ಪಡಿಸಿ [illegible] ಕಟ್ಟಡಗಳಲ್ಲಿ [illegible] ದೀಪಾಲಂಕಾರ [illegible] ವಿದ್ಯುದ್ದೀಪಗಳಿಂದ ಅಲಂಕರಿಸಲಾಗುವುದು

ನೂತನ ಸಂಸ್ಥಾನದ ೧೯ ಜಿಲ್ಲಾ ಕೇಂದ್ರಗಳಲ್ಲೂ ಇಂಥಾ ಬೇರೆ ಸಮಾರಂಭಗಳು ನಡೆಯುವುವು. ತಿಂಡಿ ಹಂಚಲು ಪ್ರತಿ ಜಿಲ್ಲೆಗೂ ೫೦೦ ರೂ ಗಳನ್ನು ಮಂಜೂರು ಮಾಡಲಾಗಿದೆ

ನವೆಂಬರ್ ೧ನೇ ತಾರೀಕು ಸಾರ್ವತ್ರಿಕ ರಜಾ

ನೂತನ ಮೈಸೂರಿನ ಉದಯದ ಸಂತೋಷಾರ್ಥವಾಗಿ ನವೆಂಬರ್ ೧ನೇ ತಾರೀಖು ಸಾರ್ವತ್ರಿಕ ರಜಾ ಕೊಡಲಾಗುವುದು.

ಖೈದಿಗಳಿಗೆ ರಿಯಾಯಿತಿ

ಈ ಸಮಯದಲ್ಲಿ ಸಂಸ್ಥಾನದ ಖೈದಿಗಳಿಗೆ, ಈಗ ಕೊಡಲಾಗಿರುವ ರಿಯಾಯಿತಿಗಳ ಜೊತೆಗೆ ಮತ್ತೆ ಪ್ರತಿ ೧ ವರ್ಷಕ್ಕೆ ೧ ತಿಂಗಳಂತೆ ರಿಯಾಯಿತಿ ಕೊಡಲಾಗುವುದು. ನವೆಂಬರ್ ೧ರ ವೇಳೆಗೆ ಇನ್ನೂ ಮೂರು ತಿಂಗಳಿಗಿಂತ ಕಡಿಮೆ ಅವಧಿಯ ಶಿಕ್ಷೆ ಬಾಕಿಯಿರುವವರನ್ನು ಬಿಡುಗಡೆ ಮಾಡಲಾಗುವುದು

ದೆಹಲಿಗೆ ನಿಜಲಿಂಗಪ್ಪ ಮತ್ತು ವಿ. ವೆಂಕಟಪ್ಪನವರು

ಸ್ವಂ ಸು ತಂತಿ] ಬೆಂಗಳೂರು ೨೪

ಸಂಸ್ಥಾನದ ನೂತನ ನಾಯಕ ನಿಜಲಿಂಗಪ್ಪನವರೂ ಮತ್ತು ಹೊಸ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ವಿ ವೆಂಕಟಪ್ಪನವರೂ ಈ ದಿನ ದೆಹಲಿಗೆ ತೆರಳಿರುವರು ನಾಳೆ ಅವರುಗಳು ಹಿಂದಿರುಗುವರು

ಹೈಕೋರ್ಟಿಗೆ ಹೊರಗಿನ ನ್ಯಾಯಾಧೀಶರು

ಪಂಜಾಬು ಹೈಕೋರ್ಟ್ [illegible] ಗಳೋ, ಅಥವಾ [illegible] ಗಳನ್ನಾಗಲೀ ನೂತನ ಮೈಸೂರು ಸಂಸ್ಥಾನದ ಶ್ರೇಷ್ಠ ನ್ಯಾಯಾಧೀಶರನ್ನಾಗಿ ನೇಮಿಸುವ ಸಂಭವವಿರುವುದೆಂದು ಹೇಳಲಾಗಿದೆ

ಜಿ. ಎನ್. ನಾಗರಾಜರಾಯರು ಮೈಸೂರು ಡಿವಿಜನ್ನಿನ ಕಮೀಷನರು

ನೂತನ ಪ್ರಾಂತದ ಅಧಿಕಾರಿಗಳ ನೇಮಕ

ಬೆಂಗಳೂರು ೨೪

ಬರುವ ಗುರುವಾರದಿಂದ ಆರಂಭವಾಗುವ ನೂತನ ಮೈಸೂರು ಸಂಸ್ಥಾನದ ಬೆಂಗಳೂರು ಡಿವಿಜನ್ನಿಗೆ ಶ್ರೀ ಕೆ ಶಿವರುದ್ರಯ್ಯ, ಮೈಸೂರಿಗೆ ಶ್ರೀ ಜಿ ಎನ್ ನಾಗರಾಜರಾವ್, ಬೆಳಗಾವಿಗೆ ಶ್ರೀ ಕೆ ಪಿ ರಾಮನಾಥಯ್ಯ ಮತ್ತು ಗುಲ್ಬರ್ಗಕ್ಕೆ ಶ್ರೀ ಎನ್ ಎಸ್ ಹಿರಣ್ಣಯ್ಯನವರನ್ನು ಡಿವಿಜನಲ್ ಕಮೀಷನರುಗಳಾಗಿ ನೇಮಿಸಲಾಗಿದೆ.

ಈ ಮೊದಲು ಪ್ರಕಟಿಸಿದ ಶಾಖಾ ಕಾರ್ಯದರ್ಶಿಯಾಗಿ ನೇಮಕವಾಗಿದ್ದ ಶ್ರೀ ಪಿ ಆರ್. ನಾಯಕ್‌ರವರು ಕೂಡಲೇ ಬರಲಾಗದುದರಿಂದ ಶ್ರೀ ಜಿ ಮ್ಯಾಥ್ಯೂಸ್‌ರವರನ್ನು ಆ ಸ್ಥಾನಕ್ಕೆ ನೇಮಿಸಲಾಗಿದೆ. ಈಗ ಎ ಜಿ ಪಿ ಆಗಿರುವ ಶ್ರೀ ತಿಮ್ಮರಾಜ ಅರಸಿನವರನ್ನು ಜೈಲುಗಳ ಐ. ಜಿ. ಯಾಗಿ ನೇಮಿಸಲಾಗುವುದು. ಉಳಿದ ಅಧಿಕಾರಿಗಳ ನೇಮಕವನ್ನು ಮೊದಲೇ ಪ್ರಕಟಿಸಲಾಗಿದೆ

ಉನ್ನತಾಧಿಕಾರಿಗಳ ಮೊಕರೂರಾತಿ

ನೂತನ ಸಂಸ್ಥಾನಕ್ಕೆ ಕೆಳಗೆ ಕಂಡಂತೆ ಉನ್ನತಾಧಿಕಾರಿಗಳನ್ನು ಮೊಕರೂರು ಮಾಡಲಾಗಿದೆ — ಎಲ್ ಮಾಧವರಾವ್-ಎಕ್ಸೈಜು ಕಮೀಷನರ್, ಕೆ ಬಾಲಸುಬ್ರಹ್ಮಣ್ಯಂ-ಕಾರ್ಮಿಕ ಕಮೀಷನರು, ಹೈದರಾಬಾದಿನ ರಜೀದ್-ಗೃಹ ಕಾರ್ಯದರ್ಶಿ, ಆರ್ ಜೆ ರೇಗೊ-ರೆವಿನ್ಯೂ ಬೋರ್ಡ್ ಸದಸ್ಯರು, ಬಿ. ಎಂ ಕೃಷ್ಣನ್-ವಿಮಾ ಇಲಾಖೆ ಕಾರ್ಯದರ್ಶಿ ಮತ್ತು ಕೆ. ಶೇಷಗಿರಿರಾವ್-ರೆವಿನ್ಯೂ ಕಾರ್ಯದರ್ಶಿ

ಮಂತ್ರಿಗಳು ಮತ್ತು ಶಾಸನಸಭಾ ಸದಸ್ಯರ ಭತ್ಯ ಕೋತಾ

ಮಂತ್ರಿಗಳು ಮತ್ತು ಶಾಸನಸಭಾ ಸದಸ್ಯರುಗಳಿಗೆ ಈಗ ಕೊಡಲಾಗುತ್ತಿರುವ ದಿನ ಭತ್ಯವು ಬಹಳ ಹೆಚ್ಚಾಗಿರುವುದರಿಂದ ಅದನ್ನು ಕೋತಾ ಮಾಡಿ ಮಂತ್ರಿಗಳ ಭತ್ಯವನ್ನು ೨೫ ರಿಂದ ೧೦ ರೂ ಗೂ ಶಾಸನ ಸಭಾ ಸದಸ್ಯರ ಭತ್ಯವನ್ನು ೧೫ ರಿಂದ ೧೨ ರೂ ಗೂ ಇಳಿಸಲಾಗುವುದು. ಈ ಬಗ್ಗೆ ಮಸೂದೆಯೊಂದನ್ನು ಶೀಘ್ರದಲ್ಲೇ ತರಲಾಗುವುದು

ರಷ್ಯಾ ಮತ್ತು ಪೋಲೆಂಡ್ ಸೈನ್ಯಗಳಿಗೆ ಘರ್ಷಣೆ

ಪೋಲೆಂಡಿನ ಪೋಜ್ನಾನ್ ನಗರದಲ್ಲಿ ರಷ್ಯ ಮತ್ತು ಪೋಲಿಷ್ ಸೈನ್ಯಗಳಿಗೆ ಘರ್ಷಣೆಗಳಾದುವೆಂದೂ, ಅವನ್ನು ತನಿಖೆ ನಡೆಸಲು ಪೋಲಿಷ್ ಕಮ್ಯೂನಿಸ್ಟರ ನಾಯಕ ಗೊಮುಲ್ಕಾರವರು ಅಲ್ಲಿಗೆ ತೆರಳಿರುವರೆಂದೂ ವರದಿಯಾಗಿದೆ. ಸ್ಟಾಲಿನ್ ಪಂಥೀಯರಾಗಿರುವ ರಕ್ಷಣಾ ಮಂತ್ರಿ ಮಾರ್ಷಲ್ [illegible]ರವರನ್ನು ಆ ಕೆಲಸದಿಂದ ತೆಗೆದು ಬೇರೊಬ್ಬರನ್ನು ನಿಯಮಿಸಲಾಗಿದೆ

ಪಾಂಡವಪುರದಲ್ಲಿ ಸಕ್ಕರೆ ಕಾರ್ಖಾನೆಯ ಸ್ಥಾಪನೆ

ಶ್ರೀಮನ್ಮಹಾರಾಜರ ಭಾಷಣ

ಶ್ರೀಮನ್ಮಹಾರಾಜರು ನೆನ್ನೆ ಬೆಳಿಗ್ಗೆ ಪಾಂಡವಪುರದ ಸಕ್ಕರೆ ಕಾರ್ಖಾನೆಯ ಶಂಕುಸ್ಥಾಪನಾ ಮಹೋತ್ಸವವನ್ನು ನೆರವೇರಿಸಿ, ಸಹಕಾರ ತತ್ವದ ಆಧಾರದ ಮೇಲೆ ಸಂಘಟಿಸಲ್ಪಡುವ ಈ ಕಾರ್ಖಾನೆಯು ದೇಶದ ಇತರ ಕಾರ್ಖಾನೆಗಳಿಗೆ ಆದರ್ಶಪ್ರಾಯವಾಗಲೆಂದು ಹಾರೈಸಿದರು. [illegible] ಸಮಾರಂಭಕ್ಕಾಗಿ ಸಭಾಭವನವನ್ನು ಭವ್ಯವಾಗಿ ಅಲಂಕರಿಸಲಾಗಿತ್ತು. ಪ್ರಮುಖರೆಲ್ಲ ಆಗಮಿಸಿದ್ದರು. ಮಂಡ್ಯದ ಜಿಲ್ಲಾಧಿಕಾರಿಗಳು, ನಗರದ ಪ್ರಮುಖರು ಮತ್ತು [illegible] ಅಧಿಕಾರಿಗಳು [illegible] ಅನಂತರ ಬಿನ್ನವತ್ತಳೆಯನ್ನರ್ಪಿಸಿದರು.

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಅವರು ಮಾತನಾಡಿ ಶ್ರೀಮನ್ಮಹಾರಾಜರು ಭಾಗವಹಿಸುವ, ಪ್ರಸ್ತುತ ಅಧಿಕಾರ [illegible] ಸಮಾರಂಭಗಳಲ್ಲಿ ಇದು ಕೊನೆಯದೆಂದೂ, [illegible] ಸಂಸ್ಥಾನವಾಗಿರುವುದೆಂದೂ ಸೂಚಿಸಿ [illegible] ಭಾಷಣ ಮಾಡಿದರು.

[illegible]

ದೇವಸ್ಥಾನದ ನೌಕರರ ಸಂಬಳ ಹೆಚ್ಚಿಸಲು ಶಿಫಾರಸು

(ಸ್ವಂ ವ) ನಂಜನಗೂಡು ೨೪

ಇಲ್ಲಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನದ ಧರ್ಮದರ್ಶಿಗಳ ಸಭೆಯು ಕಳೆದ [illegible] ವಾರ, [illegible] ಶ್ರೀ ಕೆ ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ದೇವಸ್ಥಾನದ ನೌಕರರು [illegible] ಹಿಂದೆ ತಮಗೆ ಗೊತ್ತುಪಡಿಸಲಾದ ಸಂಬಳವನ್ನೇ ಈಗಲೂ ಕೊಡಲಾಗುತ್ತಿರುವುದೆಂದೂ, [illegible] ಮಾತ್ರ ಸಂಬಳ [illegible] ತಮ್ಮ ಸಂಬಳಗಳನ್ನು ಪುನರ್ವಿಮರ್ಶಿಸಿ, ಇತರ ಸರ್ಕಾರಿ ನೌಕರರಿಗೆ ಕೊಡುತ್ತಿರುವ ಮೇರೆಯೇ ತಮಗೂ [illegible] ಗೊತ್ತುಪಡಿಸಬೇಕೆಂದು ಪ್ರಾರ್ಥಿಸಿದ್ದಾರೆ. ಈಗ ದೇವಸ್ಥಾನದ ಆದಾಯವು [illegible] ಹೆಚ್ಚುತ್ತಿರುವುದಾಗಿಯೂ [illegible] ನ್ಯಾಯವಾಗಿರುವುದೆಂದು ಧರ್ಮದರ್ಶಿಗಳು ಸರ್ಕಾರಕ್ಕೆ ಶಿಫಾರಸು ಮಾಡಿರುವರೆಂದು ತಿಳಿದುಬಂದಿದೆ

ರೈಲ್ವೆಗಳಲ್ಲಿ ಸಾಮಾನು ರವಾನೆಗೆ ಹೆಚ್ಚು ಪ್ರಾಶಸ್ತ್ಯ

ಇನ್ನು ಸ್ವಲ್ಪ ಕಾಲ ಭಾರತದ ರೈಲ್ವೆಗಳಲ್ಲಿ [illegible] ಸಾಮಾನು [illegible] ಹೆಚ್ಚು ಪ್ರಾಶಸ್ತ್ಯವೀಯಲಾಗುವುದೆಂದು ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿದ್ದಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮಧ್ಯ ರೈಲ್ವೆಯಲ್ಲಿ ನೌಕರರ ಮುಷ್ಕರದ ನಿರ್ಧಾರ

ಮಧ್ಯ ರೈಲ್ವೆಯ ನೌಕರರು [illegible] ಹೂಡಲು ನಿರ್ಧರಿಸಿರುವರೆಂದೂ, ಅದಕ್ಕಾಗಿ [illegible] ಗೊತ್ತಾಗಿದೆ [illegible] ಅವರು [illegible] ಮಾಡುತ್ತಾರೆ

ಮದ್ರಾಸಿನಲ್ಲಿ ಗೋ ವಧೆ ರದ್ದು

ಗೋ ವಧೆಯನ್ನು ರದ್ದು ಮಾಡಲು ಮದ್ರಾಸು ಸರ್ಕಾರದವರು ಆಲೋಚಿಸುತ್ತಿರುವುದಾಗಿ ಅಲ್ಲಿನ ವ್ಯವಸಾಯ ಮಂತ್ರಿ ಭಕ್ತವತ್ಸಲಂರವರು ತಿಳಿಸಿದ್ದಾರೆ

ವಸ್ತುಪ್ರದರ್ಶನದಲ್ಲಿ ಪ್ರಜಾ ಯೋಜನೆಯ ವಿಭಾಗ

ದಸರಾ ವಸ್ತು ಪ್ರದರ್ಶನದಲ್ಲಿ ಭಾರತ ಸರ್ಕಾರದ ವಾರ್ತಾ ಮತ್ತು ಪ್ರಸಾರ ಇಲಾಖೆಯ ಪ್ರಜಾ ಯೋಜನೆ ವಿಭಾಗದಲ್ಲಿ ಪ್ರಥಮ ಮತ್ತು ದ್ವಿತೀಯ ಯೋಜನೆಗೆ ಸಂಬಂಧಪಟ್ಟಂತೆ ಚಿತ್ರಪಟಗಳನ್ನು ಪ್ರದರ್ಶಿಸಲಾಗಿದೆ. ನೀರಾವರಿ ಮತ್ತು ವಿದ್ಯುಚ್ಛಕ್ತಿ, ವ್ಯವಸಾಯ ಮತ್ತು ಸಾಮೂಹಿಕ ಯೋಜನೆ, ಕೈಗಾರಿಕೆ, [illegible] ಮತ್ತು [illegible] ಸಾಮಾಜಿಕ ಸೇವೆ [illegible] ವಿಂಗಡಿಸಲಾಗಿದೆ. [illegible] ಯೋಜನೆಗಳ ಮಾದರಿಗಳು, [illegible] ಸುರಂಗ ಮಾರ್ಗ, [illegible] ಇವನ್ನು ಪ್ರೇಕ್ಷಕರು [illegible] ನೋಡಿ [illegible]

ಉಪನಯನ ಮತ್ತು ವಿವಾಹಗಳು

ಚಾಮುಂಡಿಪುರದಲ್ಲಿರುವ ಶ್ರೀ ಲಲಿತಾಂ ಆಯುರ್ವೇದ ಶಾಲೆಯ ಪಂಡಿತ ಶ್ರೀ ಟಿ ಎಸ್ ರಾಮಯ್ಯನವರು ತಮ್ಮ ತೃತೀಯ ಕುಮಾ ಟಿ। ಕೃಷ್ಣಮೂರ್ತಿ ಮತ್ತು ತಮ್ಮ ಭಾವನ ಶ್ರೀ ಆರ್ ವೆಂಕಟರಾಮಯ್ಯನವರ ಮಗ ಸ॥ ವಿ ಸುಬ್ರಹ್ಮಣ್ಯರವರಿಗೆ ನೆನ್ನೆ ಬ್ರಹ್ಮೋ ದೇಶವನ್ನೂ ತಮ್ಮ ದ್ವಿತೀಯಕುಮಾರಿ ಸೌ॥ ರಸ್ವತಮ್ಮನವನ್ನು ಹೆಗ್ಗಡದೇವನಕೋಟೆ ತಾ ಕು ಬೆಳತೂರಿನ ಶ್ರೀ ನಾಗಾ ಜೋಯಿಸರ ಮಾರ ಶ್ರೀ ಎ ನರಸಿಂಹಮೂರ್ತಿಯವ ಕೊಟ್ಟು ನೆನ್ನೆ ವಿವಾಹವನ್ನೂ ನೆರವೇರಿಸಿದ

ಕೃಷ್ಣರಾಜಪೇಟೆ ತಾಲ್ಲೂಕು ಹೊಸಹೊಳ ನ ಶ್ರೀ ಎಸ್ ಪುಟ್ಟಯ್ಯನವರು ತಮ್ಮ ಕುಮಾ ರಿ ಸೌ॥ ಗೌರಮ್ಮನವನ್ನು ಪಾಂಡವಪುರ ತಾ [illegible] ವ ಶ್ರೀ ಬಿ ಕೆ ಹಿರಣ್ಣಯ್ಯನವರ ತ್ರ ಶ್ರೀ ಜಿ ಹೆಚ್ ಸೂರ್ಯನಾರಾಯಣರವ ಕೊಟ್ಟು ನೆನ್ನೆ ಹೊಸಹೊಳಲಿನಲ್ಲಿ ವಿವಾ ನ್ನ ಜರುಗಿಸಿದರು

ಸ್ಟಾಲುಗಳ ಪ್ರದರ್ಶನಕ್ಕೆ ಬಹುಮಾ

ದಸರಾ ವಸ್ತು ಪ್ರದರ್ಶನದಲ್ಲಿ ಭಾರತ ಸ ಟು ಮತ್ತು ಗೈಡುಗಳು ಪ್ರದರ್ಶಿಸುತ್ತಿರುವ [illegible] ಗಳಿಗೆ ಚಿನ್ನದ ಪದಕವನ್ನು ಬಹುಮಾ ವಾಗಿ ಕೊಡಲಾಗಿದೆ

ಬಿಕರಿಗೆ ಸಿದ್ಧವಾಗಿದೆ

ಕರಿ ಮರದ [illegible] ಮತ್ತು [illegible] ಜವಳಿ ಅಂಗಡಿಗೂ [illegible] ಅಂಗಡಿಗೂ ಉತ್ತಮವಾಗಿರುತ್ತೆ

ಗುರುದೇವ ಹಾಲ್,
ಶ್ರೀರಾಂಪೇಟೆ ಮೈಸೂರು [illegible]

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪನಿಗಳ [illegible]
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ [illegible] ದೊರೆಯುತ್ತವೆ
ಒಂದೇ ಭೇಟಿ ಕೊಡಿ
ಕೆ ಎಸ್ ಲಕ್ಷ್ಮಣಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Est) 1911

Edited Printed and Published by
A R Nagaraj at Sadhvi Press
D Subbaiah Road Mysore

ಹಾಸಿಗೆ - ದಿಂಬು
ನಮ್ಮಲ್ಲಿ [illegible] ತಯಾರು ಮಾಡುತ್ತೇವೆ
ಬಾಬುಸಾಬ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಂಪಿಯಾ
[illegible]
[illegible] ಬಟ್ಟೆಗಳು [illegible]
[illegible] ವಾಯಿಲ್ ಮತ್ತು ಚೀಟಿಗಳು
ಒಮ್ಮೆ ದಯಮಾಡಿ ಭೇಟಿ ಕೊಡಿ
ಆ. ಪಿ. ನಂಜಪ್ಪ

ಚಾಮುಂಡೇಶ್ವರಿ ಟಾಕೀಸ್
26—10—56 ರಿಂದ 6 ದಿನಗಳು ಮಾತ್ರ
ಪ್ರತಿದಿನ ಮೂರು ಪ್ರದರ್ಶನಗಳು
★ ಮಾಮನ್ ಮಗಳ್ ★ ತಮಿಳು
[illegible]
ಮುಂದಿನ ಬದಲಾವಣೆ - [illegible] - (ತಮಿಳು) [illegible]

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
25—10—56ರಿಂದ ಅಮೋಘವಾದ 3ನೇ ವಾರ
ವಿಶ್ವಕಲಾ [illegible]
ಕನ್ನಡ ಚಿತ್ರ ★ ಓಹಿಲೇಶ್ವರ
ಪಾತ್ರ - ಶ್ರೀರಂಜಿನಿ (ಜೂನಿಯರ್) ರಾಜಕುಮಾರ್, [illegible], ಜಿ ವಿ ಅಯ್ಯರ್, ನರಸಿಂಹರಾಜು, [illegible] ಮುಂತಾದವರು

ಬೇಕಾಗಿದ್ದಾರೆ

ಒಳ್ಳೆಯ ಅನುಭವವುಳ್ಳ ಒಬ್ಬ ಮ ನೇಜರರೂ ಮತ್ತು ಇಂಗ್ಲಿಷ್ ಬಲ್ಲ ಒಬ್ಬ ಮಾಸ್ತರರೂ ಮೈಸೂರು ಸಿಟಿಯಲ್ಲಿರುವ [illegible] ಟಲ್ ಒಂದಕ್ಕೆ ಬೇಕಾಗಿದ್ದಾರೆ ಅ ಭವ ಮತ್ತು ಇತರ ಸರ್ಟಿಫಿಕೇಟುಗಳೊ ಕೆಳಗೆ ಕಂಡ ವಿಳಾಸದಲ್ಲಿ [illegible] ನೋಡತಕ್ಕದ್ದು

ಪ್ರತಿದಿನ ಕಾಲ ರಾತ್ರಿ 8 ರಿಂದ 9

RAJARAJESWARI MODERN HINDU
MILITARY HOTEL,
272 Near Chamundeswari Talk
Mysore

SREE GANES
TALKIES
ULYSSES
Tomorrow Last day

From 27-10-56 For 3 da
THE SHRIKE
With Jose Ferrar and
June Allyson

SRI GAYATHR
TALKIES
From 25 10 56 For 5 d
Daily 3 Shows
20th Century's the most power
Mexican war picture
Starring Gary Cooper and
Burt Lancaster in
VERA CRUZ
(Technicolor-Cinemascope)
ಇದರೊಡನೆ ಪ್ರಧಾನಿ ನೆಹರೂರವರ [illegible]
ಅರೇಬಿಯಾ ಪ್ರವಾಸದ ಚಿತ್ರವನ್ನೂ
ತೋರಿಸಲಾಗುವುದು

Morning Shows on Sat & Su
HIGH NOON
With - Gary Cooper

ರಾಜಕಮಲ್ ಟಾಕೀಸ್ ★ (ನಾಳೆಯಿಂದ) 26—10—1956ರಿಂದ : ಅಮೋಘ ಪ್ರಾರಂಭ
ದಿನವಹಿ ಮೂರು ಆಟಗಳು
ಗೌರಿ ಮಹಾತ್ಮೆ ★ ಗೌರಿ ಮಹಾತ್ಮೆ
(ತೆಲುಗು)
ಪಾತ್ರ:- ಎನ್ ಟಿ ರಾಮರಾವ್, ರೇಲಂಗಿ, ಮುಕ್ಕಾಮಲ, ಜೂನಿಯರ್ ಶ್ರೀರಂಜಿನಿ, ಸಿ.ಎಸ್.ಆರ್. ಶಾಂತಾರಾವ್ ಮುಂತಾದವರು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೫] SADHVI FRIDAY 36—10—1956 ಮೈಸೂರು : ಶುಕ್ರವಾರ ೨೬—೧೦—೧೯೫೬ [ಸಂಚಿಕೆ : ೮೮

ಹೊಸ ಮಂತ್ರಿಮಂಡಲಗಳ ಬಗ್ಗೆ ದೆಹಲಿ ಮಾತುಕತೆ

ನೂತನ ಸಂಸ್ಥಾನಗಳ ಮಂತ್ರಿಗಳ ಪಟ್ಟಿ

ಕಾಂಗ್ರೆಸ್ ಹೈ ಕಮಾಂಡಿನ ಮುಂದೆ ಮಂಡನೆ

ಬರುವ ಗುರುವಾರದಿಂದ ಉದಯವಾಗಲಿರುವ ಆರು ಹೊಸ ಸಂಸ್ಥಾನಗಳ ನೂತನ ನಾಯಕರುಗಳು ನೆನ್ನೆ ದೆಹಲಿಯಲ್ಲಿ ಕಾಂಗ್ರೆಸ್ ಹೈಕಮಾಂಡಿಗೆ ಹೊಸ ಮಂತ್ರಿಮಂಡಲದ ಸದಸ್ಯರ ಪಟ್ಟಿಗಳನ್ನು ಒಪ್ಪಿಸಿದರೆಂದು ಗೊತ್ತಾಗಿದೆ. ಅಲ್ಪಸಂಖ್ಯಾತರಿಗೂ, ಮಹಿಳೆಯರಿಗೂ ಮತ್ತು ಪ್ರಾದೇಶಿಕ ಹಿತಗಳಿಗೂ ಮಂತ್ರಿಮಂಡಲದಲ್ಲಿ ಯುಕ್ತ ಪ್ರಾತಿನಿಧ್ಯವನ್ನು ಕೊಡುವಂತೆ ಹೈಕಮಾಂಡಿನವರು ಸೂಚಿಸಿದುದಾಗಿ ವರದಿಯಾಗಿದೆ

ಮಂತ್ರಿಮಂಡಲಗಳ ರಚನೆ ಬಗ್ಗೆ ಹೈಕಮಾಂಡಿನವರು ಯಾವ ನಿರ್ದಿಷ್ಟವಾದ ಸೂಚನೆಯನ್ನು ಕಳುಹಿಸಿಲ್ಲವೆಂದೂ, ಸಂಸ್ಥಾನಗಳ ನಾಯಕರು ಮಂತ್ರಿಗಳ ಸಂಖ್ಯೆ ಮತ್ತು ಅವರ ಅಧಿಕಾರಗಳ ಬಗ್ಗೆ ತಾವೇ ನಿರ್ಧರಿಸಬಹುದೆಂದೂ ಸೂಚಿಸಿದುದಾಗಿ ಗೊತ್ತಾಗಿದೆ. ಸಂಸ್ಥಾನಗಳ ಪುನರ್ರಚನೆಯಿಂದ ವರ್ಗಾವಣೆ ಹೊಂದಿದ ಪ್ರದೇಶಗಳ ಹಿತವನ್ನು ಕಡೆಗಣಿಸಬಾರದೆಂದೂ ಸಹಾ ತಿಳಿಸಲಾಗಿದೆ

ದೆಹಲಿಗೆ ತೆರಳಿರುವ ಸಂಸ್ಥಾನದ ನೂತನ ನಾಯಕ ಶ್ರೀ ನಿಜಲಿಂಗಪ್ಪನವರು ಹೆಚ್ಚಿನ ಮಾತುಕತೆಗಳಿಗಾಗಿ ಇಂದೂ ಅಲ್ಲೇ ಇದ್ದು ನಾಳೆ ಹಿಂದಿರುಗುವರೆಂದು ವರದಿಯಾಗಿದೆ

ಮದ್ರಾಸು ಎನ್. ಜಿ. ಓ. ಗಳಿಗೆ ೫ ರೂ. ಹೆಚ್ಚಿನ ತುಟ್ಟಿಭತ್ಯ

ಮದ್ರಾಸು ಸಂಸ್ಥಾನದ ನಾನ್ ಗೆಜೆಟೆಡ್ ನೌಕರರು ಮತ್ತು ೩೦೦ ರೂ. ಒಳಪಟ್ಟು ಸಂಬಳ ಪಡೆಯುತ್ತಿರುವ ಗೆಜೆಟೆಡ್ ಅಧಿಕಾರಿಗಳ ತುಟ್ಟಿಭತ್ಯವನ್ನು ೫ ರೂ. ಗಳಷ್ಟು ಹೆಚ್ಚಿಸಲಾಗುವುದೂ, ಅಲ್ಲಿನ ಸರ್ಕಾರದ ಯಾವ ನೌಕರನೂ ೨೫ ರೂ. ಗಳಿಗಿಂತ ಕಡಿಮೆ ತುಟ್ಟಿಭತ್ಯ ಪಡೆಯಬಾರದೆಂಬುದೇ ಸರ್ಕಾರದ ಆಶಯವೆಂದೂ ಹಣಕಾಸಿನ ಸಚಿವ ಸಿ. ಸುಬ್ರಹ್ಮಣ್ಯಂರವರು ತಿಳಿಸುವರು

“ದೇವಾಸುರ ಹೋರಾಟ” ನಾಟಕಕ್ಕೆ ಪ್ರತಿಬಂಧಕ

ಮದ್ರಾಸಿನ ಸುಪ್ರಸಿದ್ಧ ನಟರಾದ ಎಂ. ಆರ್. ರಾಧ ಎಂಬುವರ ‘ದೇವಾಸುರ ಹೋರಾಟ’ ಎಂಬ ನಾಟಕವು ಹಿಂದೂಗಳ ಮನಸ್ಸನ್ನು ನೋಯಿಸುವುದೆಂಬ ಕಾರಣಕ್ಕಾಗಿ ಮದ್ರಾಸು ಸರ್ಕಾರದವರು ಅದನ್ನು ಪ್ರತಿಬಂಧಿಸಿರುವರು

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ ಮುಂದುವರಿಯುತ್ತಿದೆ

ಮೈಸೂರು ೨೫

ನೇ ತಾರೀಖಿನೊಳಗೆ ತರಗತಿಗಳಿಗೆ ಬರದಿದ್ದರೆ ಕಾಲೇಜನ್ನು ಮುಚ್ಚುವುದಾಗಿ ಸರ್ಕಾರವು ಇತ್ತಿದ್ದ ಎಚ್ಚರಿಕೆಗೆ ಗಮನ ಕೊಡದೆ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳು ತಮ್ಮ ಮುಷ್ಕರವನ್ನು ಮೊನ್ನೆಯೂ ಮುಂದುವರಿಸುತ್ತಿರುವರು

ನಗರ ಪೌರಸಭೆಗಳ ಚುನಾವಣೆ ಮುಂದೆ ಹೋಗುವುದು

ಬೆಂಗಳೂರು ೨೫

ಡಿಸೆಂಬರಿನಲ್ಲಿ ನಡೆಯಬೇಕಾದ ಬೆಂಗಳೂರು ಮತ್ತು ಮೈಸೂರು ಪುರಸಭೆಗಳ ಚುನಾವಣೆಗಳು ಮುಂದೆಹೋಗುವುವೆಂದು ತಿಳಿದುಬಂದಿದೆ. ಫೆಬ್ರವರಿ ತಿಂಗಳಲ್ಲಿ ಮಹಾ ಚುನಾವಣೆಗಳು ನಡೆಯುವುದರಿಂದ ಪುರಸಭಾ ಚುನಾವಣೆಗಳು ಅವುಗಳ ಮಧ್ಯೆ ಸೇರದಂತೆ ಮಾಡಲು ಈ ಕ್ರಮ ಕೈಗೊಳ್ಳಲಾಗುವುದೆಂದು ಗೊತ್ತಾಗಿದೆ. ಇದಲ್ಲದೆ ಪುರಸಭೆಗಳಿಗೆ ಒಬ್ಬ ಸದಸ್ಯ ಕ್ಷೇತ್ರಗಳನ್ನು ಏರ್ಪಡಿಸಬೇಕೆಂದು ಮಾಡಿರುವ ಪುರಸಭಾ ಮಸೂದೆಯು ನಗರ ಸಭೆಗಳಿಗೆ ಅನ್ವಯಿಸುವಂತೆ ಇನ್ನೂ ಶಾಸನವಾಗಿಲ್ಲದಿರುವುದೂ ಇದಕ್ಕೆ ಒಂದು ಕಾರಣವಾಗಿದೆ.

ಬೆಂಗಳೂರು ಜಿಲ್ಲಾಧಿಕಾರಿಗಳಾಗಿ ಶ್ರೀ ವಿ. ಕೆ. ರಾಯರ ನೇಮಕ

ನಿವೃತ್ತಿ ಪೂರ್ವ ರಜಾದ ಮೇಲೆ ಹೋಗಲಿರುವ ಶ್ರೀ ಎಲ್. ಮುನಿಸ್ವಾಮಿಯವರ ಸ್ಥಾನದಲ್ಲಿ ಶ್ರೀ ಜಿ. ವಿ. ಕೆ. ರಾಯರನ್ನು ಬೆಂಗಳೂರು ಜಿಲ್ಲಾಧಿಕಾರಿಗಳಾಗಿ ಬರುವ ೧ನೇ ತಾರೀಖಿನಿಂದ ನೇಮಿಸಲಾಗಿದೆ.

ಹಂಗೇರಿಯಲ್ಲಿ ಆಡಳಿತದ ಬದಲಾವಣೆ

ಇತ್ತೀಚೆಗೆ ಹಂಗೇರಿಯಲ್ಲಿ ನಡೆದ ಕ್ರಾಂತಿಯ ಪರಿಣಾಮವಾಗಿ ಅಲ್ಲಿನ ಆಡಳಿತ ಸೂತ್ರವನ್ನು ಹಿಡಿದಿದ್ದ, ಕಮ್ಯೂನಿಸ್ಟ್ ಪಕ್ಷದ ಎರ್ನೋ ಜೆರೋ ಎಂಬುವರನ್ನು ನೆನ್ನೆ ಪದಚ್ಯುತಿಗೊಳಿಸಿ, ಜನೋಸ್ ಕದಾರ್ ಎಂಬುವರನ್ನು ಅಧಿಕಾರಕ್ಕೆ ತರಲಾಯಿತು. ರಾಷ್ಟ್ರದಲ್ಲಿ ಈಗ ಶಾಂತ ಪರಿಸ್ಥಿತಿಯು ನೆಲೆಸಿರುವುದಾದರೂ, ಬುಡಾಪೆಸ್ಟಿನಲ್ಲಿ ಹಲವು ಕಡೆ ರಕ್ತ ಕದನಗಳೂ, ಬೆಂಕಿ ಪ್ರಕರಣಗಳೂ ನಡೆಯುತ್ತಿರುವುವೆಂದು ಹೇಳಲಾಗಿದೆ. ರಷ್ಯ ಮತ್ತು ಹಂಗೇರಿ ಸೈನ್ಯಗಳು ಪರಿಸ್ಥಿತಿಯನ್ನು ಹತೋಟಿಗೆ ತಂದುವೆಂದು ವರದಿಯಾಗಿದೆ. ಕಡಿದುಹೋಗಿದ್ದ ಹೊರಗಿನ ಸಂಚಾರ ಮತ್ತು ವಾರ್ತಾ ಸಂಪರ್ಕಗಳನ್ನು ಪುನರ್ವ್ಯವಸ್ಥೆಗೊಳಿಸಲಾಗಿದೆ. ರಾಷ್ಟ್ರದಲ್ಲಿ ಶೀಘ್ರದಲ್ಲೇ ಪ್ರಜಾಪ್ರಭುತ್ವ ಆಡಳಿತವನ್ನು ಜಾರಿಗೆ ತರುವುದಾಗಿ ನೂತನ ನಾಯಕ ಕದಾರ್‌ರವರು ತಿಳಿಸಿ, ಅಂತರ ರಾಷ್ಟ್ರೀಯ ಸ್ಫೂರ್ತಿಯಿಂದ ಕೂಡಿದ ಪೂರ್ಣ ಸಮಾನತ್ವವನ್ನು ಗಳಿಸಲು ರಷ್ಯದೊಡನೆ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಪ್ರಯತ್ನಿಸಲಾಗುವುದೆಂದೂ ಭರವಸೆಯಿತ್ತರು

ಈಜಿಪ್ಟ್, ಜಾರ್ಡಾನ್ ಮತ್ತು ಸಿರಿಯ ಸೈನ್ಯಗಳ ಸಮ್ಮಿಳನ

ಈಜಿಪ್ಟ್, ಜಾರ್ಡಾನ್ ಮತ್ತು ಸಿರಿಯಗಳ ಸೈನ್ಯಗಳು ಸಮ್ಮಿಳನಗೊಂಡು, ಇಸ್ರೇಲ್ ಮತ್ತು ಅರಬ್ ರಾಷ್ಟ್ರಗಳಿಗೆ ಯುದ್ಧವೇನಾದರೂ ಸಂಭವಿಸಿದಲ್ಲಿ ಈಜಿಪ್ಟಿನ ಯುದ್ಧ ಮಂತ್ರಿಯವರ ಅಧೀನದಲ್ಲಿ ಕಾರ್ಯಾಚರಣೆಯಲ್ಲಿ ತೊಡಗುವುವೆಂದು ಜಾರ್ಡಾನ್ ಸೈನ್ಯಾಧಿಕಾರಿ ಅಲಿ ನುವಾರ್‌ರವರು ತಿಳಿಸಿರುತ್ತಾರೆ

ಟ್ಯುನೀಷಿಯಾ ಮತ್ತು ಫ್ರೆಂಚ್ ಸೈನ್ಯಗಳಿಗೆ ಘರ್ಷಣೆ

ಟ್ಯುನೀಷಿಯದ ಪ್ರಧಾನಿ ಹಬೀಬಾ ಬೋರ್ಗಿಬಾರವರು ನೆನ್ನೆ ಅಲ್ಲಿನ ಶಾಸನ ಸಭೆಯಲ್ಲಿ ಮಾತನಾಡುತ್ತಾ, ಅಲ್ಜೀರಿಯಾ ಗಡಿ ಪ್ರದೇಶದಲ್ಲಿ ತಮ್ಮ ಸೈನ್ಯಗಳಿಗೂ ಮತ್ತು ಫ್ರೆಂಚ್ ಪಡೆಗಳಿಗೂ ಘರ್ಷಣೆ ನಡೆಯುತ್ತಿರುವುದಾಗಿ ತಿಳಿಸಿದರು. ನಾವು ಅಧೀನಗತಿಗೀಡಾಗಿ ಗುಲಾಮಗಿರಿಯಲ್ಲಿ ಬಾಳುವುದಕ್ಕಿಂತ ಮರಣವನ್ನು ಸ್ವಾಗತಿಸುತ್ತೇವೆ ಎಂದೂ ಅವರು ನುಡಿದರು. ಜಾರ್ಡನ್ ಮತ್ತು ಮೊರಾಕೊ ಸರ್ಕಾರಗಳು ಪ್ಯಾರಿಸ್ಸಿನಲ್ಲಿರುವ ತಮ್ಮ ರಾಯಭಾರಿಗಳನ್ನು ವಾಪಸು ಕರೆಸಲು ನಿರ್ಧರಿಸಿರುವುವು. ಅಲ್ಜೀರಿಯದ ನಾಯಕರನ್ನು ಫ್ರೆಂಚರು ಬಂಧಿಸಿರುವುದರ ಬಗ್ಗೆ ಉಂಟಾಗಿರುವ ಪರಿಸ್ಥಿತಿಯನ್ನು ಕುರಿತು ಈಜಿಪ್ಟಿನ ಅಧ್ಯಕ್ಷ ನಾಸರ್, ಸೌದಿ ಅರೇಬಿಯದ ದೊರೆ ಇಬನ್ ಸಾದ್ ಮತ್ತು ಸಿರಿಯದ ಅಧ್ಯಕ್ಷ ಸುಕ್ರಿ ಎಲ್ ಕೌಟ್ಲೆಯವರು ನೆನ್ನೆ ಪರಸ್ಪರ ವಿಚಾರವಿನಿಮಯ ಮಾಡಿದರೆಂದೂ ಗೊತ್ತಾಗಿದೆ. ಮೆಕೆನ್ಸ್ ಎಂಬಲ್ಲಿ ಮೊರಾಕನ್ನರು ನೆನ್ನೆ ೫೦ ಮಂದಿ ಫ್ರೆಂಚ್ ಪ್ರಜೆಗಳನ್ನು ಕೊಲೆ ಮಾಡಿದರೆಂದು ವರದಿಯಾಗಿದೆ

ಭಾರತಕ್ಕೆ ಇಥಿಯೋಪಿಯಾ ಚಕ್ರವರ್ತಿಗಳ ಆಗಮನ

ಇಥಿಯೋಪಿಯಾ ರಾಜ್ಯದ ಚಕ್ರವರ್ತಿಗಳಾದ ಹೈಲಿಸೆಲಾಸಿಯವರು ಭಾರತದಲ್ಲಿ ೩ ವಾರಗಳ ಪ್ರವಾಸಕ್ಕಾಗಿ ನೆನ್ನೆ ಬೊಂಬಾಯಿಗೆ ಹಡಗಿನಲ್ಲಿ ಆಗಮಿಸಿದರು. ಬೊಂಬಾಯಿನ ಗವರ್ನರ್ ಶ್ರೀ ಬಾಗ್ನಾ ಮತ್ತು ಮುಖ್ಯ ಮಂತ್ರಿ ಶ್ರೀ ಮೊರಾರ್ಜಿಯವರು ಅವರನ್ನು ಸ್ವಾಗತಿಸಿದರು. ಅವರ ಆಗಮನದ ಗೌರವಾರ್ಥವಾಗಿ ೨೧ ಕುಶಾಲ ತೋಪುಗಳನ್ನು ಹಾರಿಸಲಾಯಿತು. ಚಕ್ರವರ್ತಿಗಳು ನವೆಂಬರ್ ೩ ರಂದು ಬೆಂಗಳೂರಿಗೆ ಬಂದು ಸಂಸ್ಥಾನದಲ್ಲಿ ೩ ದಿನಗಳ ಕಾಲ ಇರುವರು. ೩ನೇ ತಾರೀಖು ಬೆಂಗಳೂರಿನಲ್ಲಿ ಟಾಟಾ ವಿಜ್ಞಾನ ಶಾಲೆ, ಹಿಂದೂಸ್ತಾನ ವಿಮಾನ ಕಾರ್ಖಾನೆ, ಲಾಲ್‌ಬಾಗ್, ಟೆಲಿಫೋನ್ ಕಾರ್ಖಾನೆ ಮುಂತಾದುವನ್ನೂ, ೪ನೇ ತಾರೀಖು ಮೈಸೂರಿನಲ್ಲಿ ಶ್ರೀರಂಗಪಟ್ಟಣ, ರೇಷ್ಮೆ ಕಾರ್ಖಾನೆ, ಗಂಧದೆಣ್ಣೆ ಕಾರ್ಖಾನೆ, ಕೃಷ್ಣರಾಜಸಾಗರ ಮುಂತಾದ ಸ್ಥಳಗಳನ್ನೂ ಸಂದರ್ಶಿಸುವರು.

ಫ್ರಾನ್ಸಿಗೆ ಟ್ಯೂನಿಸ್ ಪ್ರಧಾನಿಯ ಎಚ್ಚರಿಕೆ

ಇತ್ತೀಚೆಗೆ ಅಲ್ಜೀರಿಯದ ನಾಯಕರನ್ನು ಫ್ರೆಂಚ್ ಸರ್ಕಾರದವರು ಬಂಧಿಸಿದ ಬಗ್ಗೆ ಟ್ಯೂನಿಸ್ಸಿನ ಪ್ರಧಾನಿಯವರು ಫ್ರಾನ್ಸಿಗೆ ಎಚ್ಚರಿಕೆಯನ್ನಿತ್ತು, ಈ ಘಟನೆಯಲ್ಲಿ ಫ್ರಾನ್ಸಿನ ವಿರುದ್ಧವಾಗಿ ಉತ್ತರ ಆಫ್ರಿಕದ ಎಲ್ಲ ರಾಷ್ಟ್ರಗಳೂ ಒಂದುಗೂಡಿ ತಮ್ಮ ಬಲ ಪ್ರದರ್ಶನ ಮಾಡಬೇಕಾದ ಪ್ರಸಂಗ [illegible] ವೆಂದು ತಿಳಿಸಿರುತ್ತಾರೆ. ಟ್ಯೂನೀಷಿಯಾ ಮತ್ತು ಮೊರಾಕೊಗಳು ತಮಗೆ ಪರಸ್ಪರ ಸಂಬಂಧಪಟ್ಟ ಸಮಸ್ಯೆಗಳ ಬಗ್ಗೆ ಸಹಕಾರ ಮತ್ತು ಸಹಾಯದ ಒಪ್ಪಂದ ಮಾಡಿಕೊಳ್ಳುವುವೆಂದೂ ಹೇಳಲಾಗಿದೆ.

ಬೇಲೂರು ಕೊಲೆ ಮೊಕದ್ದಮೆ ಆಪಾದನೆಗಳ ನಿರಾಕರಣೆ

ಕೃಷ್ಣ, ಮುನಿಸ್ವಾಮಿ, ಗೋವಿಂದರೆಡ್ಡಿ ಯವರ ಹೇಳಿಕೆ

ಸ್ವಂ ಸು ಫೋ :] ಬೆಂಗಳೂರು ೨೫

ಬೇಲೂರು ಕೊಲೆ ಮೊಕದ್ದಮೆಯಲ್ಲಿ ಪ್ರಾಸಿಕ್ಯೂಷನ್ ಪರ ಸಾಕ್ಷಿಗಳ ವಿಚಾರಣೆಯು ಮುಗಿದನಂತರ ಆಪಾದನೆಗಳ ಬಗ್ಗೆ ಇಂದು ಕೃಷ್ಣ, ಮುನಿಸ್ವಾಮಿ ಮತ್ತು ಗೋವಿಂದರೆಡ್ಡಿಯವರ ಅಭಿಪ್ರಾಯವನ್ನು ಕೇಳಲಾಯಿತು

ತನಗೂ, ಮುನಿಸ್ವಾಮಿ ಮತ್ತು ಗೋವಿಂದರೆಡ್ಡಿಗೂ ಯಾವ ಸಂಬಂಧವೂ ಇಲ್ಲವೆಂದೂ, ಜಯಮ್ಮನು ತನ್ನ ಸಾಕ್ಷ್ಯದಲ್ಲಿ ಹೇಳಿರುವ ವಿಚಾರಗಳೆಲ್ಲವೂ ಸುಳ್ಳೆಂದೂ, ಬೇಲೂರರ ಮನೆಯೇ ತನಗೆ ಗೊತ್ತಿಲ್ಲವೆಂದೂ ಕೃಷ್ಣನು ಹೇಳಿ, ಅಲಸೂರಿನಲ್ಲಿ ತನಗೆ ಮನೆಯಿಲ್ಲವೆಂದೂ, ತನ್ನನ್ನು ಬಂಧಿಸಿದುದು ಗುರುಮೂರ್ತಿ ರಸ್ತೆಯಲ್ಲೆಂದೂ ತಿಳಿಸಿದನು

ಗೋವಿಂದರೆಡ್ಡಿಗೆ ತಾನು ಹಣವನ್ನು ಕೊಡಲಿಲ್ಲವೆಂದೂ, ಪೆಟ್ಟಿಗೆಯಲ್ಲಿದ್ದ ಒಡವೆಗಳನ್ನು ತಾನು ತೆಗೆದುಕೊಟ್ಟುದಾಗಿ ಹೇಳಿರುವುದು ಸರಿಯಲ್ಲವೆಂದೂ ಚಾಕುವನ್ನು ತೆಗೆಯಲಾಯಿತೆಂದು ಹೇಳಲಾದ ಭಾವಿಯ ಬಳಿ ತನ್ನನ್ನು ಕರೆದುಕೊಂಡುಹೋಗಿರಲಿಲ್ಲವೆಂದೂ ಪೊಲೀಸರು ಬಲೋದ್ಬಂಧದಿಯಿಂದ ತನ್ನ ರುಜು ಹಾಕಿಸಿಕೊಂಡುದಾಗಿಯೂ ಅವನು ಹೇಳಿದನು

ಮುನಿಸ್ವಾಮಿಯೂ ಸಹಾ ಅದೇ ರೀತಿ ಹೇಳಿ, ಆಪಾದನೆಗಳನ್ನೆಲ್ಲಾ ನಿರಾಕರಿಸಿದನು. ಅವರಿಬ್ಬರೂ ತಮ್ಮ ಪರ ಸಾಕ್ಷಿಗಳಿಲ್ಲವೆಂದು ಹೇಳಿದರು.

ಗೋವಿಂದರೆಡ್ಡಿಯು ತಾನು ಸಾಕ್ಷಿಗಳ ಪಟ್ಟಿಯನ್ನು ಸಲ್ಲಿಸುವುದಾಗಿ ಹೇಳಿ ಆಪಾದನೆಗಳನ್ನು ನಿರಾಕರಿಸಿದನು. ಅಲಸೂರಿನಲ್ಲಿ ತನ್ನ ಭಾವನ ಮನೆಗೆ ಹೋಗುತ್ತಿದ್ದುದಾಗಿಯೂ, ಕೃಷ್ಣನ ಮನೆಗಲ್ಲವೆಂದೂ ಅವನು ತಿಳಿಸಿದನು.

ಮಕ್ಕಳ ಪ್ರದರ್ಶನದಲ್ಲಿ ಬಹುಮಾನ

ದಸರಾ ವಸ್ತು ಪ್ರದರ್ಶನದಲ್ಲಿ ಏರ್ಪಡಿಸಲಾಗಿದ್ದ ಮಕ್ಕಳ ಪ್ರದರ್ಶನದಲ್ಲಿ ಕೆಳಗೆ ಕಂಡಂತೆ ಬಹುಮಾನಗಳು ದೊರೆತಿವೆ.—ಆರು ತಿಂಗಳ ಒಳಗಿನ ಮಕ್ಕಳು-ಜಯಮ್ಮನವರ ಮಗು ಭಾಗ್ಯ, ಪದ್ಮವಲ್ಲಿಯವರ ಮಗು ಮಂಜುನಾಥ್ ಮತ್ತು ಸೈದೀನಾಬಿಯವರ ಮಗು ಅಕ್ಬರ್‌ಪಾಷಾ ಕ್ರಮವಾಗಿ ಮೂರು ಸ್ಥಾನಗಳು. ಜಯಮ್ಮನವರ ಮಗು ಕಮಲ ಮತ್ತು ಸುಬ್ಬಲಕ್ಷಮ್ಮನವರ ಮಗು ಭರತ್‌ಭೂಷಣ್ ಪ್ರಶಂಸಾ ಬಹುಮಾನಗಳು

೬ ತಿಂಗಳಿಂದ ೧ ವರ್ಷದವರೆಗಿನವು-ಫಾತಿಮಾಬೀಯವರ ಮಗ [illegible], ಕಮಲಮ್ಮನವರ ಮಗ ಅಶ್ವತ್ಥನಾರಾಯಣ ಮತ್ತು ಪಾರ್ವತಮ್ಮನವರ ಮಗಳು ರಾಣಿ

೧ರಿಂದ ೧½ ವರ್ಷದವರೆಗೆ-ಗೌರಮ್ಮನವರ ಮಗ ಶ್ರೀಧರ್, ಸರೋಜಮ್ಮನವರ ಮಗ ವೆಂಕಟಕೃಷ್ಣ ಮತ್ತು ಲಕ್ಷ್ಮಮ್ಮನವರ ಮಗ [illegible] ಶ್ರೀಧರ್ ಎಂಬ ಮಗುವಿಗೆ ಚಾಂಪಿಯನ್‌ಷಿಪ್ ದೊರೆತಿದೆ. ಒಟ್ಟು ೧೫೦ ಮಕ್ಕಳು ಭಾಗವಹಿಸಿದ್ದುವು

ಸಿ. ನರಸಿಂಹಮೂರ್ತಿ ನೂತನ ಪ್ರಾಂತದ ವಿದ್ಯಾಧಿಕಾರಿ

ವಿವಿಧ ಇಲಾಖಾ ಮುಖ್ಯಾಧಿಕಾರಿಗಳ ನೇಮಕ

ಬೆಂಗಳೂರು ೨೬.

ನೂತನ ಮೈಸೂರಿನ ವಿವಿಧ ಇಲಾಖಾ ಮುಖ್ಯಾಧಿಕಾರಿಗಳಾಗಿ ಈ ಕೆಳಗೆ ಕಂಡವರನ್ನು ನೇಮಿಸಲಾಗಿದೆ –

ಶ್ರೀ ಪಿ ಕೆ ವೀರಣ್ಣ ಐ ಜಿ ಪಿ, ಶ್ರೀ ಪಿ ಕೃಷ್ಣೋಜಿರಾವ್ ಸಿಂಧ್ಯ ಬೆಂಗಳೂರು ಡಿ ಐ ಜಿ, ಶ್ರೀ ಸಿ ಚಾಂಡಿ ಬೆಳಗಾಂ ಡಿ ಐ ಜಿ., ಇನ್ನೊಬ್ಬ ಡಿ ಐ ಜಿ ಯವರನ್ನು ಸದ್ಯದಲ್ಲೇ ನೇಮಿಸಲಾಗುವುದು ಶ್ರೀ ಎಂ ಕೆ ಅಪ್ಪಾಜಪ್ಪ ಧಾರ್ಮಿಕ ಸಂಸ್ಥೆಗಳ ಕಮಿಷನರ್ ಮತ್ತು ಆಹಾರ ಶಾಖೆ ಡೈರೆಕ್ಟರ್ ಶ್ರೀ ಸಿ ನರಸಿಂಹಮೂರ್ತಿ- ವಿದ್ಯಾ ಇಲಾಖಾ ಡೈರೆಕ್ಟರು, ಶ್ರೀ ಎಚ್ ಮಾಧವರಾವ್ ಅಬ್ಕಾರಿ ಮತ್ತು ಕೆಂಗೆ ಶಾಖೆ ಕಮಿಷನರ್, ಶ್ರೀ ಮಲ್ಲಿಂಜೆ ಅರಸ್-ವ್ಯವಸಾಯ ಇಲಾಖೆ ಡೈರೆಕ್ಟರ್, ಶ್ರೀ ಮುತ್ತಣ್ಣ- ಅರಣ್ಯ ಇಲಾಖಾ ಮುಖ್ಯಾಧಿಕಾರಿ

ಮರಾಮತ್ತು ಇಲಾಖೆ -ಶ್ರೀ ಅನಂತರಾಮ್- ಚೀಫ್ ಇಂಜನಿಯರ್ (ಜನರಲ್), ಶ್ರೀ ಟಿ ರಾಮಸ್ವಾಮಿ ಅಯ್ಯಂಗಾರ್ ಮತ್ತು ಶ್ರೀ ಟಿ ಎಸ್ ಮೂರ್ತಿ-ದಕ್ಷಿಣ ಮತ್ತು ಉತ್ತರ ವಿಭಾಗದ ಚೀಫ್ ಇಂಜನಿಯರುಗಳು

ಶ್ರೀ ಜಿ. ಎಚ್ ಡಿಸಾ-ವಿದ್ಯುಚ್ಛಕ್ತಿ ಇಲಾಖಾ ಮುಖ್ಯಾಧಿಕಾರಿ

ಆರೋಗ್ಯ ಇಲಾಖೆ -ಡಾ| ವೆಂಕಟಸುಬ್ಬರಾವ್-ವೈದ್ಯ ಇಲಾಖಾ ಡೈರೆಕ್ಟರು ಡಾ| ಸೋಮಸುಂದರಂ ಕ್ಷಯರೋಗದ ಆಸ್ಪತ್ರೆ ಸಲಹೆಗಾರರು ಮತ್ತು ಡಾ| ಲಕ್ಷ್ಮಿನಾರಾಯಣ್-ಆರೋಗ್ಯ ಇಲಾಖೆ ಡೈರೆಕ್ಟರು

ಕೈಗಾರಿಕಾ ಇಲಾಖೆ – ಶ್ರೀ ಕೆ ನಾರಾಯಣ ಸ್ವಾಮಿ ಡೈರೆಕ್ಟರು, ಶ್ರೀ ಎಂ ಎಚ್ ಪಾರ್ಥ ಸಾರಥಿ ಅಡಿಷನಲ್ ಡೈರೆಕ್ಟರು, ಶ್ರೀ ಬಿ ವೀರಪ್ಪ ಗ್ರಾಮಾಂತರ ಕೈಗಾರಿಕಾ ಡೈರೆಕ್ಟರು

ಶ್ರೀ ಬಿ ಆರ್ ಮಾಣಿಕ್ಯಂ ಮುಖ್ಯ ಶಿಲ್ಪಿ, ಡಾ|| ಕೆ ಎಸ್ ಎಚ್ ಪಶು ವೈದ್ಯ ಇಲಾಖೆ ಡೈರೆಕ್ಟರು, ಶ್ರೀ ಎಂ ಎಚ್ ಮರಿಗೌಡ ತೋಟಗಳ ಸೂಪರಿಂಟೆಂಡೆಂಟ್ ಶ್ರೀ ಬಿ ಎ ಪಾಂಡುರಂಗ ಲ್ ಸಹಕಾರ ಸಂಘಗಳ ರಿಜಿಸ್ಟ್ರಾರ್, ಶ್ರೀ ಕೆ ಎಚ್ ಮರಿಯಪ್ಪ ಗೌಡ ಚೀಫ್ ಮಾರ್ಕೆಟಿಂಗ್ ಆಫೀಸರ್ ಶ್ರೀ ಕೆ ಡಿ ಲಿಂಗಪ್ಪ ಸ್ಟೋರ್ಸ್ ಪರ್ಚೇಸ್, ಶ್ರೀ ಎ ಲಕ್ಷ್ಮಣರಾವ್ ರೋಡ್ ಟ್ರಾನ್ಸ್ಪೋರ್ಟ್ ಜನರಲ್ ಮ್ಯಾನೇಜರು, ಶ್ರೀ ಅನಂತಪದ್ಮನಾಭರಾವ್ ಸ್ಟ್ಯಾಟಿಸ್ಟಿಷಿಯನ್, ಶ್ರೀ ಎ ನ ಜಾಡಯ್ಯ ಚೀಫ್ ಸೆನ್ಸಸ್ ಕಮಿಷನರು, ಶ್ರೀ ಬಿ ಎಚ್ ಶ್ರೀ ಸಕ್ಕರೆ ಎಂ ಕ ಇಲಾಖೆ ಮುಖ್ಯಾಧಿಕಾರಿ

ಇಲಾಖಾ ಉಪ ದರ್ಜೆಗಳು ಶ್ರೀ ಡಿ ಕೆ. ಶ್ರೀನಿವಾಸಾಚಾರ್ ಮರಾಮತ್ತು ಮತ್ತು ವಿದ್ಯುಚ್ಛಕ್ತಿ ಶ್ರೀ ಎಸ್ ಎ ಎಲ್ ರಜ್ವಿ-ಸ್ಥಳೀಯ ಸಂಸ್ಥೆ ಮತ್ತು ಆರೋಗ್ಯ ರಾಜಿ ಶ್ರೀ ಎಂ ವಾಸುದೇವರಾವ್-ವಾಣಿಜ್ಯ ಮತ್ತು ಕೈಗಾರಿಕೆ. ಶ್ರೀ ಆರ್ ಶ್ರೀನಿವಾಸನ್-ವಿದ್ಯಾ ಇಲಾಖೆ ಶ್ರೀ ಆರ್ ಸಿ ವಾಸುದೇವರಾವ್-ನ್ಯಾಯಾಂಗ ಲಾ ಟಿ ಶ್ರೀ ಎಂ ಸದಾಶಿವರಾವ್-ವಿದೇಶ ಲಾ ಕ್ರೈಮ್ ಶ್ರೀ ಎಸ್ ಮುನಿಸಂಜಪ್ಪ-ಪ್ರಾಂತ ಪುನರ್ವಿಂಗಡಣೆ ಶ್ರೀ ಎಚ್ ರಾಮರಾಜ್ ಅರಸ್ ಕಾನ್ಸ್ಟಿಟ್ಯೂಯೆಂಟ್ಸ್ ಕಂಟ್ರೋಲರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೧೫ ಮತ್ತು ೮-೧೫ ರಾಜನ್ನು ಸಿ. ಆರ್. ಗೌಡ-ದೇವರನಾಮ ೮ ೩೦ ಟಿ ಎಂ ರಾಜಶೇಖರ ಅಭಿಪ್ರಾಯ-ನಾಗೇಶ್ವರ ಮುಖ್ಯ ಪ್ಪ ೧೨ ರಾಜನ್ನು ಸಿ ಆರ್. ಗೌಡ-ಸಂಗೀತ ೧-೪೫ ಬಾಲಜಗತ್ ೩-೫ ೫-೩೦ ಮತ್ತು ೬ ಎಸ್ ಬಿ. ಕೇಶವಮೂರ್ತಿ-ಸಂಗೀತ. ೬-೨೦ ಎಸ್. ಸಿ ರೇವಣ್ಣ ೬-೪೫-ದೇವರನಾಮ ೭ ೩೦ ಪ್ರಸಂಗ ೮-೪೦ ರೇಡಿಯೋ ಸುದ್ದಿ ಪ್ರಸಾರ ೮-೪೦ ಪ್ರಸಾರಾಂಗೀತ ೯-೧೫ ಕಾಮಧೇನು ಪ ಧ್ವನಿಕ ೯-೩೦ ರಾಷ್ಟ್ರೀಯ ಸಂಗೀತ ಕಾರ್ಯಕ್ರಮ ಚೆದಲೀ ಪ್ರಸಾರ

ನೂತನ ಮೈಸೂರಿನ ೪ ಪ್ರಾದೇಶಿಕ ವಿಭಾಗಗಳು

ಕೊಳ್ಳೇಗಾಲ ತಾಲ್ಲೂಕು ಮೈಸೂರು ಜಿಲ್ಲೆಗೆ

ಮೈಸೂರು ೨೬.

ಬರುವ ಗುರುವಾರದಿಂದ ರಚಿತವಾಗುವ ನೂತನ ಮೈಸೂರಿನ ೪ ಪ್ರದೇಶಗಳಿಗೆ ಈ ಕೆಳಗೆ ಕಂಡ ಜಿಲ್ಲೆಗಳು ಸೇರುವುವು –

ಬೆಂಗಳೂರು ವಿಭಾಗ ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಮತ್ತು ಬಳ್ಳಾರಿ

ಮೈಸೂರು–ಮೈಸೂರು, ಮಂಡ್ಯ, ಕೊಡಗು, ದಕ್ಷಿಣ ಕನ್ನಡ, ಚಿಕ್ಕಮಗಳೂರು, ಹಾಸನ ಮತ್ತು ಶಿವಮೊಗ್ಗ ಕೊಯಮತ್ತೂರು ಜಿಲ್ಲೆಯ ಕನ್ನಡ ಪ್ರದೇಶವಾದ ಕೊಳ್ಳೇಗಾಲ ತಾಲ್ಲೂಕನ್ನು ಮೈಸೂರು ಜಿಲ್ಲೆಗೆ ಸೇರಿಸಲಾಗುವುದು

ಬೆಳಗಾಂ–ಬೆಳಗಾಂ, ಬಿಜಾಪುರ ಧಾರವಾಡ ಮತ್ತು ಉತ್ತರ ಕನ್ನಡ

ಗುಲ್ಬರ್ಗ ಗುಲ್ಬರ್ಗ ರಾಯಚೂರು ಮತ್ತು ಬಿದರಿ

ಫುಟ್‌ಬಾಲ್ ಪಂದ್ಯ

ದಸರಾ ಹೈಸ್ಕೂಲ್ ಫುಟ್‌ಬಾಲ್ ಟೂರ್ನಮೆಂಟಿನಲ್ಲಿ ನೆನ್ನೆ ನಗರದ ಮಹಾರಾಜಾ ಹೈಸ್ಕೂಲಿನ ಶ್ರೀ ರಾಮರಾಜೆ ಅರಸ್ ಮತ್ತು ಶ್ರೀ ವೆಂಕಟೇಶರವರು ತಲಾ ಒಂದೊಂದು ಗೋಲುಗಳನ್ನು ಹೊಡೆದು ಜಯಶೀಲರಾದರು [illegible] ಸ್ಕೂಲಿನವರು ಗೋಲನ್ನು ಹೊಡೆಯಲಿಲ್ಲ

ಸ್ವಾಗತ ಸಮಾರಂಭ

ಮೈಸೂರು ಬ್ಯಾಂಕಿನ ನಗರ ಶಾಖೆಯವರು ತಮ್ಮ ಕಚೇರಿಯನ್ನು ನ್ಯೂ ಸ್ಟ್ಯಾಚ್ಯು ಚೌಕಕ್ಕೆ ವರ್ಗಾಯಿಸಿದ ಸಂದರ್ಭದಲ್ಲಿ ಮೊನ್ನೆ ಧನಲಕ್ಷ್ಮೀ ಪೂಜೆ ಮತ್ತು ಸ್ವಾಗತಸಮಾರಂಭವನ್ನು ಏರ್ಪಡಿಸಿ ಪುರ ಪ್ರಮುಖರನ್ನು ಆಹ್ವಾನಿಸಿ ಸತ್ಕರಿಸಿದರು

ವಿವಾಹ ಮಹೋತ್ಸವ

ಬೆಂಗಳೂರಿನಲ್ಲಿರುವ ಶ್ರೀ ಕೆ ವೆಂಕೋಬಾಚಾರ್ಯರು ತಮ್ಮ ಕುಮಾರ ಶ್ರೀ ಆರ್ ವಿ ಸತ್ಯಮೂರ್ತಿಗೆ ಗೌರಿಬಿದನೂರು ತಾಲ್ಲೂಕು ಅಕ್ಕಲ್ಯದ ಹಾವೇರಿ ಮುದ್ದುಕೃಷ್ಣಾಚಾರ್ಯರ ಮಗಳು ಸೌ| ಸರೋಜ ಬಾಯಿಯನ್ನು ತಂದುಕೊಂಡು ಮೊನ್ನೆ ೨೪ ರಂದು ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ಪಶ್ಚಿಮ ನೇಪಾಳಾ ಜೈಲಿನಲ್ಲಿ ಖೈದಿಗಳ ಪ್ರದರ್ಶನ

ಪಶ್ಚಿಮ ನೇಪಾಳದ ಟ್ಯಾಂಸೇನಾ ನಗರದ ಜೈಲಿನಲ್ಲಿ ಕೆಲವು ದಿನಗಳ ಹಿಂದೆ ಖೈದಿಯೊಬ್ಬನ ಸಾವಿನ ಬಗ್ಗೆ ತನಿಖೆ ನಡೆಸುವಂತೆ ಒತ್ತಾಯಪಡಿಸಲು ಇತರ ಖೈದಿಗಳು ಕಳೆದ ವಾರದಂದು ಪ್ರದರ್ಶನ ನಡೆಸಿ, ಜೈಲನ್ನು ಸುಡಿದರಿಂದಲೂ ಪೊಲೀಸರು ಗುಂಡು ಹಾರಿಸಲಾಗಿ ೩ ಜನ ಮೃತಪಟ್ಟರೆಂದೂ ವರದಿಯಾಗಿದೆ.

ಥೈಲ್ಯಾಂಡಿನ ರಾಜರಿಂದ ೧೫ ದಿನಗಳ ಬೌದ್ಧ ದೀಕ್ಷೆ

ಥೈಲ್ಯಾಂಡಿನ ರಾಜರಾದ ಫೂಮಿಫೋನ್ ಅದುಲ್ಯೇದಜರವರು ಕಳೆದ ೨೨ ರಿಂದ ೧೫ ದಿನಗಳ ಕಾಲ ಬೌದ್ಧ ದೀಕ್ಷೆಯನ್ನು ಸ್ವೀಕರಿಸಿರುವರು. ಅವರು ಶಿರೋಮುಂಡನ ಮಾಡಿಕೊಂಡು ಕಾಷಾಯವನ್ನು ಧರಿಸಿ ಅದುಲ್ಯೇದ ಭೂಮಿಬೋ ಎಂಬ ಹೆಸರನ್ನು ಇಟ್ಟುಕೊಂಡಿರುವರು ಈ ಅವಧಿಯಲ್ಲಿ ಅವರ ಪತ್ನಿಯು ರಾಜ್ಯಾಡಳಿತ ನಡೆಸುವರು,

ಆಹಾರವಾಗುವ ಪುಡಿ

ಇಂಗ್ಲೆಂಡಿನಲ್ಲಿ ಹಲವರು ಕಾಂಪ್ಲಾನ್ ಎಂಬ ಒಂದು ವಿಧವಾದ ಬಿಳಿ ಪುಡಿಯನ್ನು ತಯಾರಿಸಿದ್ದಾರೆ ೧ ಒಟ್ಟಲು ತಣ್ಣಗಿರುವ ಅಥವಾ ಬಿಸಿ ನೀರಿಗೆ ಪುಡಿಯನ್ನು ಸೇರಿಸಿದರೆ ಅದು ಒಬ್ಬ ಮನುಷ್ಯನ ಊಟಕ್ಕೆ ಸಾಕಾಗುವಷ್ಟು ಆಹಾರವಾಗುವುದೆಂದು ಹೇಳಲಾಗಿದೆ ಅದರಲ್ಲಿ ೨೧ ವಿಧದ ಧಾತುಗಳಿವೆ ೧ ಪೌಂಡಿನ ಪುಡಿಯಲ್ಲಿ ಮನುಷ್ಯನಿಗೆ ನಿತ್ಯವೂ ಬೇಕಾಗುವಷ್ಟು ಆಹಾರವು ಇರುವುದು

ಸರ್ಕಾರೀ ಕೈಗಾರಿಕೆಗಳ ನೌಕರರಿಗೂ ಪರಿಹಾರ ದೊರೆಯಲಿ

ಮೈಸೂರು ಸರ್ಕಾರಿ ರೇಷ್ಮೆ ನೇಯ್ಗೆ ಕಾರ್ಖಾನೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಎ ರಾಮಣ್ಣನವರು ಹೇಳಿಕೆಯೊಂದನ್ನಿತ್ತು, ಮೈಸೂರು ಸರ್ಕಾರದವರು ನೀಡಿರುವ ತಾತ್ಕಾಲಿಕ ಪರಿಹಾರವು ಸರ್ಕಾರಿ ಕೈಗಾರಿಕಾ ಸಂಸ್ಥೆಗಳ ನೌಕರರಿಗೆ ಅನ್ವಯಿಸುವುದಿಲ್ಲವೆಂದು ಮತ್ತೊಂದು ಪ್ರಕಟಣೆ ಹೊರಡಿಸಿರುವುದು ನ್ಯಾಯವೂ ಮತ್ತು ಧರ್ಮವೂ ಅಲ್ಲವೆಂದೂ ಇದರಿಂದ ಕೆಲಸಗಾರರಲ್ಲಿ ಹೆಚ್ಚಿನ ಅಸಮಾಧಾನ ಹುಟ್ಟಿಗಿದೆಯಲ್ಲದೆ ದ್ವಿತೀಯ ಪಂಚವಾರ್ಷಿಕ ಯೋಜನೆಯು ಯಶಸ್ವಿಯಾಗಲು ಕಾರ್ಮಿಕರ ಸಹಕಾರವನ್ನು ಕೋರುತ್ತಿರುವ ಸರ್ಕಾರ ಈ ರೀತಿ ಕಾರ್ಮಿಕರಿಗೆ ಅನ್ಯಾಯ ಮಾಡಿರುವುದು ಸರಿಯಲ್ಲವಾದ್ದರಿಂದ ಕೂಡಲೇ ಈ ಪರಿಹಾರವು ಸರ್ಕಾರಿ ಕೈಗಾರಿಕಾ ಕಾರ್ಮಿಕರಿಗೂ ಅನ್ವಯವಾಗುವಂತೆ ಆಜ್ಞೆ ಹೊರಡಿಸಬೇಕೆಂದೂ ಸರ್ಕಾರವನ್ನು ಒತ್ತಾಯಪಡಿಸಿರುತ್ತಾರೆ

ಮೈಸೂರು ಪುರಸಭಾ ಕೆಲಸಗಾರರ ಸಂಘದ ಕಾರ್ಯದರ್ಶಿ ಶ್ರೀ ಎಂ ಎಚ್ ಉಗ್ರಪ್ಪನವರು ಹೇಳಿಕೆಯನ್ನಿತ್ತು, ಅತ್ಯಲ್ಪ ವೇತನವನ್ನು ಪಡೆಯುತ್ತಿರುವ ಸ್ಥಳೀಯ ಸಂಸ್ಥೆಗಳ ಕೆಲಸಗಾರರಿಗೂ ತಾತ್ಕಾಲಿಕ ಪರಿಹಾರವು ಅನ್ವಯಿಸುವಂತೆ ಕೂಡಲೇ ಆಜ್ಞೆ ಹೊರಡಿಸಬೇಕೆಂದು ಕೋರಿರುತ್ತಾರೆ ಮತ್ತು ಶೀಘ್ರವಾಗಿ ಪರಿಹಾರ ದೊರೆಯದಿದ್ದಲ್ಲಿ ಪುರಸಭಾ ನೌಕರರು ಮುಂದಿನ ಕ್ರಮ ಕೈಗೊಳ್ಳಲು ನಿರ್ಧರಿಸಿರುವರೆಂದು ತಿಳಿಸಿರುತ್ತಾರೆ

ಕೈರೋದಿಂದ ಫ್ರೆಂಚ್ ರಾಯಭಾರಿಯ ವಾಪಸು

ಫ್ರೆಂಚ್ ಸರ್ಕಾರವು ಕೈರೋದಲ್ಲಿನ ತನ್ನ ರಾಯಭಾರಿಯನ್ನು ವಾಪಸು ಕರೆಸಿದೆಯಲ್ಲದೆ ಅಲ್ಜೀರಿಯನ್ ಪ್ರದೇಶದಲ್ಲಿ ಶಸ್ತ್ರಾಸ್ತ್ರಗಳನ್ನು ಸಾಗಿಸುವುದೆಂದು ಈಜಿಪ್ಟಿನ ಹಡಗುಗಳನ್ನು ಪರಿಶೀಲಿಸುವಂತೆ ತನ್ನ ನಾವೆಗಳಿಗೆ ಆಜ್ಞೆಯಿತ್ತಿದೆ

ಬೊಂಬಾಯಿ ಬಳಿ ಭಾರತದ ಪ್ರಥಮ ಅಣು ರಿಆಕ್ಟರ್

ಅಮೆರಿಕದ ಅಣು ಶಕ್ತಿ ಸಂಸ್ಥೆಯವರು ಭಾರತದಲ್ಲಿ ಬೊಂಬಾಯಿ ಬಳಿ ಅಣು ಶಕ್ತಿ ರಿಆಕ್ಟರನ್ನು ನಿರ್ಮಿಸುವ ಬಗ್ಗೆ ಕೆನಡಾದ ಒಂದು ಸಂಸ್ಥೆಗೆ ಕಂಟ್ರಾಕ್ಟನ್ನು ಕೊಟ್ಟಿರುವರೆಂದು ವರದಿಯಾಗಿದೆ ಇದರ ನಿರ್ಮಾಣಕ್ಕೆ ೧೪೦ ಲಕ್ಷ ಡಾಲರು ವೆಚ್ಚ ತಗಲುವುದೆಂದೂ, ಆ ವೆಚ್ಚದ ಅರ್ಧಕ್ಕಿಂತ ಸ್ವಲ್ಪ ಹೆಚ್ಚು ಭಾಗವನ್ನು ಕೆನಡಾ ರಾಷ್ಟ್ರವೂ ಮತ್ತು ಉಳಿದುದನ್ನು ಭಾರತವೂ ವಹಿಸುವುವು

WANTED

A graduate with experience of teaching Geography and English to S S L C. classes Pay according to qualification and experience Retired persons preferred

CITY TUTORIAL COLLEGE,
Old Agrahar, Mysore

ಒಲಂಪಿಯಾ
ಕಿಕ್ಕಿರಿದ ಜನಸಂದಣಿಯ ೩ನೇವಾರ
ಗುರುದತ್ ಫಿಲಂಸ್‌ರವರ ಹಿಂದಿ ಚಿತ್ರ
ಸಿ. ಐ. ಡಿ.
ಪಾತ್ರ –ದೇವಾನಂದ್, ಶಕಿಲ,
ಜಾನಿವಾಕರ್, ಕೆ ಎನ್ ಸಿಂಗ್

Edited, Printed and Published by A R N[illegible] at Sadhvi Press
D Subbiah Road, Mysore

೩ನೇ ತರಗತಿಯ ಎಲ್ಲ ರೈಲು ಗಾಡಿಗಳಲ್ಲೂ ಮಲಗುವ ಸೌಕರ

ಭಾರತದ ಎಲ್ಲಾ ರೈಲುಗಳ ೩ನೇ ತರಗ ಗಾಡಿಗಳಲ್ಲೂ ಮಲಗುವ ಸೌಕರ್ಯವನ್ನು ಏ ಡಿಸುವ ವಿಷಯವು ಪರಿಶೀಲನೆಯಲ್ಲಿರುವುದಾ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿ ವರು ತಿಳಿಸಿರುತ್ತಾರೆ ಅದಕ್ಕಾಗಿ ಮೇಲ್ಭಾಗ ದಲ್ಲಿ ಮಡಿಸುವ ಸೀಟನ್ನು ಇಡಲಾಗುವುದೆಂದು ಪ್ರತಿ ಸೀಟಿಗೂ ೩ ರೂ ದರವನ್ನು ವಿಧಿಸಲಾ ಪುದೆಂದೂ ಅವರು ಹೇಳಿರುತ್ತಾರೆ ಇನ್ನು ಮುಂ ಹೊರಗಡೆಯಿಂದ ಗಾಡಿಗಳನ್ನು ಆಮದು ಮಾ ಕೂಡದೆಂದೂ, ಭಾರತದ ರೈಲ್ವೆ ವರ್ಕ್‌ಷಾಪ್ ಗಳಲ್ಲೇ ಗಾಡಿಗಳ ಹೊಸ ಮೈಯನ್ನು ಮತದಿ ನಿರ್ಮಿಸಲು ನಿರ್ಧರಿಸಲಾಗಿದೆಯೆಂದೂ ಅವ ತಿಳಿಸಿದ್ದಾರೆ

ಬೊಂಬಾಯಿ ಮಂತ್ರಿಮಂಡ ದಲ್ಲಿ ರಹಸ್ಯವಿರುವುದಿಲ್ಲ

ಬೊಂಬಾಯಿ ಮಂತ್ರಿಮಂಡಲವು ಯಾ ಗುಟ್ಟುಗುಮಾನಿಗೂ ಅವಕಾಶ ಕೊಡದೆ ಬ ರಂಗವಾಗಿಯೇ ಎಲ್ಲ ವಿಷಯಗಳನ್ನೂ ನಿರ್ಧ ಸುವುದೆಂದೂ, ರಹಸ್ಯ ತೀರ್ಮಾನವಾಗಬೇ ಗುವ ಪಕ್ಷದಲ್ಲಿ ತಾವು ರಾಜೀನಾಮೆ ಕೊಡು ದಾಗಿಯೂ ನೂತನ ಬೊಂಬಾಯಿ ಮು ಮಂತ್ರಿ ವೈ ಬಿ. ಚವಾಣರವರು ತಿಳಿಸಿರುತ್ತಾ

ಬಿಳಿಯ ಕಾಗೆ

ಜಂಘಕೋಣದ ರಾಮವಿಲಾಸ್ ಹೋ ರ್ ಸರ್ವೀಸಿನ ಆವರಣದಲ್ಲಿ ಕಳೆದ ಸೋಮವಾ ಹಾಲಿನಂತೆ ಸ್ವಚ್ಛವಾಗಿದ್ದ ಬಿಳಿಯ ಕಾಗೆಯೊ ದು ಕಂಡುಬಂದಿತೆಂದೂ, ಅದು ಕರಿಯ ಕಾ ಯು ಕೂಗುವಂತೆಯೇ ಕೂಗುವುದೆಂದೂ, ಅ ಪದರಂತೆ ಜನರಿಗೆ ಹೆದರುವುದಿಲ್ಲವೆಂದೂ ತಿ ಲಾಗಿದೆ

ವಸ್ತು ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರ

ನಾಳೆ ಬೆಳಿಗ್ಗೆ ಎ ಡಿ ಮಾಲತಿಯವರಿ ದೇವರನಾಮ ಕೆಳದು ಕುಡಿಪರ ಶಾಲೆ ವಿ ಧಿಗಳಿಂದ ವಾದ್ಯ ಗೋಷ್ಠಿ ಸಂಜೆ ಶ್ರೀ ತ ಮ ತಯ್ಯನವರಿಂದ ಬಾವಣಿ ಶ್ರೀಮತಿ ರತ್ನಮ್ಮನವರಿಂದ ಸಂಗೀತ ಶ್ರೀ ಚಟ್ಟ ಜೋಯಿಸರಿಂದ ಯೋಗಾಸನ. ಹಿಂದಿ ತ್ಯ ಸಂಘದವರಿಂದ "ರೀಡ್-ಕಿ-ಹಡ್ಡಿ" ಹಿಂದಿ ನಾಟಕ ವಿಜಯಾ ಆರ್ಟಿಸ್ಟ್ಸ್ ರವ "ಮೊದಲ ಗಂಡ" ಎಂಬ ಕನ್ನಡ ನಾಟಕ ವೀರ್ ಮತ್ತು ಪಾಟಿ ಯವರಿಂದ ನೃ

ಬಿಕರಿಗೆ ಸಿದ್ಧವಾಗಿ
ಕರೀ ಮರದ ಗಾಜಿನ ಬೀರುಗಳು ಮ
ಇತರೆ ಸಾಮಾನು ಜವಳಿ ಅಂಗಡಿಗೂ ಮತ್ತು
ಡ್ರಾಫ್ ಅಂಗಡಿಗೂ ಉತ್ತಮವಾಗಿರುತ್ತ
ಗುರುದೇವ ಹಾಲ್,
ಶ್ರೀರಾಂಪೇಟೆ ಮೈಸೂರು ಇವರಲ್ಲಿ ವಿಚಾ

ವುಡ್‌ಲ್ಯಾಂಡ್ಸ್
26-10-56 ರಿಂದ ಜನಪ್ರಿಯ 5ನೇ
ನಾರಾಯಣ ಕಂಪೆನಿಯವರ ಹಿಂದಿ
–ದೇವ್ ತಾ
ಪಾತ್ರ – ಅಂಜಲಿದೇವಿ, ಜೆಮಿನಿ ಗಣೇ
ಬಿಪಿನ್ ಗುಪ್ತ, ಆಗಾ, ಸಂದಿಕುಮಾರ್
ವೈಜಯಂತಿಮಾಲಾ ಮತ್ತು ಕುಮಾರಿ ಕ
ರವರ ಮನಸೋಹಕವಾದ ಹರ್ಷದಾ
ನೃತ್ಯಗಳು

LATEST C T C PUBLICAT
ಇಂಟರ್‌ಮೀಡಿಯೆಟ್ ವಿದ್ಯಾರ್ಥಿಗಳ
"ವಿರಾಟ ಪರ್ವ ಸಂಗ್ರಹ
ಪ್ರಶ್ನೋತ್ತರಗಳು-ಭಾವಾನುವಾದ ಮ
ಟಿಪ್ಪಣಿಗಳ ಸಹಿತ
ಬೆಲೆ — 0—12—0
— Publishers —
CITY TUTORIAL COLLEGE
Old Agrahar, Mysore
Agents—M/s J Hemmad & So

ಟೆಲಿಫೋನ್ ನಂ. 793

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



[illegible] ಪ್ರತಿಗೆ 3 ಕಾಸು

ಬ್ರಾಂಕಾಲ್
[illegible]
ತಯಾರಕರು
ಶೆಟ್ಟಿ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1 [illegible]
[illegible] ರಸ್ತೆ,
ಬೆಂಗಳೂರು -2

ಃ ೦೫] SADHVI : SATURDAY 27—10—1956 ಮೈಸೂರು : ಶನಿವಾರ ೨೭—೧೦—೧೯೫೬ [ಸಂಚಿಕೆ : ೫೮

ಂಸ್ಥಾನದ ನೂತನ ಸಂಪುಟದಲ್ಲಿ ೧೨ ಜನ ಸಚಿವರು ?

ಜಪ್ರಮುಖರಿಗೆ ಧಾರವಾಡದಲ್ಲಿ ಅದ್ಭುತ ಸ್ವಾಗತ

ಆನೆಗಳಿಂದೊಡಗೂಡಿದ ಭಾರಿ ಮೆರವಣಿಗೆ

ಸೂರಿನ ಶ್ರೀಮನ್ಮಹಾರಾಜರಾದ ಶ್ರೀ ಜ ಮರಾಜಒಡೆಯರ್‌ರವರಿಗೆ ನೆನ್ನೆ ಧಾರ ಲ್ಲಿ ಅದ್ಭುತವಾದ ಸ್ವಾಗತವು ನೀಡಲ್ಪ ಅಲ್ಲಿನ ವೀರಶೈವ ಮಠಗಳಿಂದ ಕಳುಹಿ ಟ್ಟ ಮೂರು ಆನೆಗಳಿಂದೊಡಗೂಡಿದ ಭಾ ರವಣಿಗೆಯಲ್ಲಿ ಶ್ರೀಮನ್ಮಹಾರಾಜರನ್ನು ಬೀದಿಗಳಲ್ಲಿ ಕರೆದೊಯ್ಯಲಾಯಿತು ಮಧ್ಯದಲ್ಲ್ಯೂ ಅನೇಕ ಅಲಂಕೃತವಾದ ಳು ಹಾಕಲ್ಪಟ್ಟಿದ್ದುವು ಹಲವಾರು ಸಂಘ ಗಳವರು ಅವರಿಗೆ ಪುಷ್ಪ ಹಾರಗಳನ್ನು ಸಿದರು

ಮನ್ಮಹಾರಾಜರು ದಿವಂಗತ ಎಸ್ ಎಸ್ ನಾಳರವರ ಸ್ಮಾರಕೋತ್ಸವ ಸಮಾರಂಭ ದ್ಘಾಟಿಸಿ ಅವರ ಪ್ರತಿಮೆಯನ್ನು ಅನಾ ಮಾಡಿದರು ಅವರಿಗೆ ಹಲವು ಮಾನಪ ನ್ನು ಅರ್ಪಿಸಲಾಯಿತು. ಶ್ರೀ ಬಸವನಾ ಕನ್ನಡ ಸಾಹಿತ್ಯ ಸಂಶೋಧನೆಗಾಗಿ ಮಾ ಸೇವೆಯನ್ನು ಶ್ರೀಮನ್ಮಹಾರಾಜರು ಪ್ರ ಅವರ ಸ್ಮಾರಕ ಗ್ರಂಥ ಪ್ರಕಟನೆಗಾ ದಾರ ಧನ ಸಹಾಯ ಮಾಡಿರುವವರನ್ನು ಂದಿಸಿದರು

ವಿವಿಧ ವೇಷ ಸ್ಪರ್ಧೆಯ ಚಾಂಪಿಯನ್‌ಶಿಪ್

ಸರಾ ವಸ್ತು ಪ್ರದರ್ಶನದಲ್ಲಿ ನಡೆದ ವಿವಿಧ ಸ್ಪರ್ಧೆಯಲ್ಲಿ ಶ್ರೀ ಆರ್ ನಂಜುಂಡಯ್ಯ " ಮತ್ತು ಪಾರ್ಟಿ ಯವರು " ಕ್ರೂಸಿಫಿಕೇ ಫ್ ಜೀಸಸ್ " ದೃಶ್ಯವನ್ನು ಪ್ರದರ್ಶಿಸಿ ಪಿಯನ್‌ಷಿಪ್ಪನ್ನು ಗಳಿಸಿರುತ್ತಾರೆ.

ಪ್ರದರ್ಶನದಲ್ಲಿ ನಾಳೆ ಕಾರ್ಯಕ್ರಮ

ೆ ಬೆಳಿಗ್ಗೆ ಮೀನಾಕ್ಷಮ್ಮನವರಿಂದ ವೀಣ ಮ ಬಸವಣ್ಣನವರಿಂದ ಕೀರ್ತನೆ. ೧೦ ಬಹುಮಾನ ವಿನಿಯೋಗ ಸಂಜೆ ಜಾನಕಿಯವರಿಂದ ಭಾರತ ನಾಟ್ಯ ಎನ್ ವಿಶ್ವನಾಥ್ ರವರಿಂದ ಸಂಗೀತ ಹಳ್ಳಿ ಶಾಸ್ತ್ರಿಗಳವರಿಂದ " ಹೀಗೂ ಉಂ ಬ ನಾಟಕ ಭಾರತ ಸೇವಾದಳದವರಿಂ ನಾಟಕ. ಮಾಡಾ ಆರ್ಟಿಸ್ಟ್ಸ್ ರವರಿಂದ ಸಾಗರ " ಎಂಬ ನಾಟಕ ಮಾಡಾ ಯೋಗನ್ನನವರಿಂದ " ಮಗು ಮದುವೆ " ನಾಟಕ ಗಾಯತ್ರಿ ನಾಟಕ ಮಂಡಲಿ ವ " ಇಂದ್ರ ಕೀಲ " ಎಂಬ ನಾಟಕ

ಣ ಭಾರತದಲ್ಲಿ ಈ ಸಾರಿ ಅತ್ಯಧಿಕ ಅಕ್ಕಿ ಬೆಳೆ

ಭಾರತದಲ್ಲಿ ಈ ವರ್ಷ ಆಹಾರ ಧಾ ಬೆಳೆಯು, ಅದರಲ್ಲೂ ಅಕ್ಕಿಯು ಅತ್ಯಧಿ ಬರುವ ನಿರೀಕ್ಷೆಯುಂಟಾಗಿದೆ, ದರಿಂದ ಅವುಗಳ ಬೆಲೆಯು ಇಳಿಯು ಂದೂ ಕೇಂದ್ರ ಸರ್ಕಾರದ ಆಹಾರ ಸ [illegible]ರವರು ತಿಳಿಸಿರುವರು.

ರಾಷ್ಟ್ರಾಧ್ಯಕ್ಷರಿಗೆ ನೇಪಾಳ ರಾಜರಿಂದ ಚಿನ್ನದ ವಿಶ್ವರೂಪ ವಿಗ್ರಹ

ನೇಪಾಳ ಸಂಸ್ಥಾನದಲ್ಲಿ ಪ್ರವಾಸವನ್ನು ಕೈಗೊಂಡಿದ್ದ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರಿಗೆ ಅಲ್ಲಿನ ದೊರೆ ತ್ರಿಭುವನರವರು ಭಗವಂತನ ವಿಶ್ವರೂಪವನ್ನು ತೋರಿಸುವ ಒಂದು ಚಿನ್ನದ ವಿಗ್ರಹವನ್ನೂ ಮತ್ತು ಬುದ್ಧನ ಶಿಲಾ ವಿಗ್ರಹವೊಂದನ್ನೂ ಅರ್ಪಿಸಿದರೆಂದು ಗೊತ್ತಾಗಿದೆ. ರಾಷ್ಟ್ರಾಧ್ಯಕ್ಷರೊಡನೆ ತೆರಳಿದ್ದ ಪರಿವಾರದವರಿಗೂ ನೇಪಾಳದ ಕೈ ಕೆಲಸದ ಹಲವಾರು ವಸ್ತುಗಳನ್ನು ಬಹುಮಾನವಾಗಿ ಕೊಡಲಾಗಿದೆ. ಡಾ|| ರಾಜೇಂದ್ರ ಪ್ರಸಾದರೂ ನೇಪಾಳದ ದೊರೆಗಾಗಿ ಭಾರತದ ಅನೇಕ ಕಲಾಪೂರಿತ ವಸ್ತುಗಳನ್ನೂ ಮತ್ತು ಇತರ ಪದಾರ್ಥಗಳನ್ನೂ ತೆಗೆದುಕೊಂಡೊಯ್ದು ಅರ್ಪಿಸಿದರು. ರಾಷ್ಟ್ರಾಧ್ಯಕ್ಷರು ನೇಪಾಳದ ಪ್ರವಾಸವನ್ನು ಮುಗಿಸಿಕೊಂಡು ಕಳೆದ ಬುಧವಾರ ದೆಹಲಿಗೆ ಹಿಂದಿರುಗಿದರು

ಸಿಂಗಪುರದ ವಿದ್ಯಾರ್ಥಿಗಳ ಮೇಲೆ ಪೊಲೀಸರ ಗುಂಡು

೭ ಜನರ ಮರಣ; ೩೦ ಮಂದಿಗೆ ಗಾಯ

ಸಿಂಗಪುರದಲ್ಲಿ ಕ್ರಾಂತಿಕಾರಿ ವಿದ್ಯಾರ್ಥಿಗಳು ನೆನ್ನೆ ಪುನಃ ದಂಗೆಯನ್ನು ನಡೆಸಿದುದರಿಂದ ಪೊಲೀಸರು ಗುಂಡು ಹಾರಿಸಬೇಕಾಗಿ, ೭ ಜನರು ಮಡಿದು ೧೫ ಜನರಿಗೆ ಗಾಯಗಳಾದುವೆಂದು ವರದಿಯಾಗಿದೆ

LATEST NEWS

೧ನೇ ತಾರೀಖು ನೂತನ ಮಂತ್ರಿ ಮಂಡಲದ ಪ್ರಮಾಣ ವಚನ

೩೦ನೇ ತಾರೀಖು ಮಂತ್ರಿಮಂಡಲದ ಪಟ್ಟಿ ಪ್ರಕಟನೆ

ದೆಹಲಿಯಿಂದ ಹಿಂದಿರುಗಿದ ನಿಜಲಿಂಗಪ್ಪನವರ ಹೇಳಿಕೆ

ಸ್ವಂ ಪು ಫೋ] ಬೆಂಗಳೂರು ೨೭

ದೆಹಲಿಗೆ ತೆರಳಿದ್ದ ಶ್ರೀ ಎಸ್ ನಿಜಲಿಂಗಪ್ಪ ಮತ್ತು ವಿ ವೆಂಕಟಪ್ಪನವರು ಇಂದಿನ ವಾಹನದಲ್ಲಿ ಬಂದರು. ೩೦ ನೇ ತಾರೀಖು ಬೆಳಿಗ್ಗೆ ಅಥವಾ ಮಧ್ಯಾಹ್ನ ಮಂತ್ರಿಗಳ ಪಟ್ಟಿಯನ್ನು ಪ್ರಕಟಿಸುವುದಾಗಿ ಶ್ರೀ ನಿಜಲಿಂಗಪ್ಪನವರು ಹೇಳಿದರು

೧೪ ಕ್ಕೆ ಹೆಚ್ಚಿಲ್ಲದೆ, ೧೨ ಕ್ಕೆ ಕಮ್ಮಿ ಇಲ್ಲದಂತೆ ಸಚಿವರು ಇರುವರು ಕಾಲಾನುಕ್ರಮದಲ್ಲಿ ೭ ಜನರಿಗೆ ಮೀರದಂತೆ ಉಪ ಸಚಿವರನ್ನೂ ನೇಮಿಸಿಕೊಳ್ಳಬೇಕಾಗಬಹುದು ಅಕ್ಟೋಬರ್ ೩೧ ರ ರಾತ್ರಿಗೆ ಮುಹೂರ್ತ [illegible] ಎಲ್ಲ ಕ್ರಮಗಳನ್ನು ಮಾಡು ತ್ತೇನೆ ಎಂದು ಅವರು ಹೇಳಿದರು.

ಮಂತ್ರಿಮಂಡಲವು ನವೆಂಬರ್ ಒಂದರಂದೇ ಪ್ರಮಾಣ ವಚನ ಕೈಗೊಳ್ಳುವ ವೇಳೆಯಲ್ಲಿ ಸಾಮಾನ್ಯ ತತ್ವಗಳನ್ನು ಮಾತ್ರ ತಿಳಿಸಿದ್ದಾರೆ ವ್ಯಕ್ತಿಗಳ ಆಯ್ಕೆ ವಿಚಾರ ಇನ್ನೂ ತೀರ್ಮಾನಕ್ಕೆ ಒಳಪಟ್ಟಿಲ್ಲ. ಈಗಲೇ ಯಾವುದನ್ನೂ ಅಪ್ಪ ರಾಗಿ ಹೇಳುವಂತಿಲ್ಲ—ಎಂದೂ ಅವರು [illegible]

ಮೈಸೂರು ಹೊಸ ಮಂತ್ರಿಮಂಡಲಕ್ಕೆ ೧೨ ಮಂದಿ ಸಚಿವರುಗಳು

ಸಂಸ್ಥಾನದ ಹೊಸ ಪ್ರಧಾನರಾಗಿ ಆರಿಸಲ್ಪಟ್ಟಿರುವ ಶ್ರೀ ಎಸ್. ನಿಜಲಿಂಗಪ್ಪನವರು ತಮ್ಮ ಮಂತ್ರಿಮಂಡಲದಲ್ಲಿ ೧೦ರಿಂದ ೧೨ ಮಂದಿ ಸಚಿವರುಗಳಿರುವರೆಂದು ದೆಹಲಿಯಲ್ಲಿ ತಿಳಿಸಿರುವುದಾಗಿ ವರದಿಯಾಗಿದೆ ಪ್ರಕೃತ ಆಂಧ್ರ ಸಂಸ್ಥಾನದಲ್ಲಿ ೧೪ ಮಂದಿ ಸಚಿವರುಗಳಿರುವರೆಂದು ಶ್ರೀ ಸಂಜೀವರೆಡ್ಡಿಯವರು ತಿಳಿಸಿರುವರು ಕಾಂಗ್ರೆಸ್ ಕಾರ್ಯಕಾರೀ ಸಮಿತಿಯು ೨ ಘಂಟೆಗಳ ಕಾಲ ಸಭೆ ಸೇರಿ ಶ್ರೀಗಳಾದ ನಿಜಲಿಂಗಪ್ಪ ಮತ್ತು ಸಂಜೀವರೆಡ್ಡಿಯವರು ಒಪ್ಪಿಸಿದ ಸಚಿವರುಗಳ ಪಟ್ಟಿಯನ್ನು ಪರಿಶೀಲಿಸಿತೆಂದು ವರದಿಯಾಗಿದೆ [illegible] ಸಭೆಯಲ್ಲಿ ಭಾಗವಹಿಸಿದ್ದರು.

ಇಂದೂರಿನಲ್ಲಿ ಕಾಂಗ್ರೆಸ್ ಮಹಾಧಿವೇಶನದ ಸಿದ್ಧತೆ

ಬರುವ ಜನವರಿ ತಿಂಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ಸಿನ ೬೧ನೇ ಮಹಾಧಿವೇಶನವು ಇಂದೂರಿನಲ್ಲಿ ಸಮಾವೇಶಗೊಳ್ಳುವ ಬಗ್ಗೆ ಸಿದ್ಧತೆಗಳನ್ನು ಈಗಾಗಲೇ ಮಾಡಲಾಗುತ್ತಿದೆ ಅಲ್ಲಿನ ಕೋಟೆ ಬಳಿ ಅಧಿವೇಶನವು ನಡೆಯಲು ಏರ್ಪಡಿಸಿ, ಆ ಪ್ರದೇಶಕ್ಕೆ ರಾಣಿ ಲಕ್ಷ್ಮೀಬಾಯಿ ನಗರವೆಂದು ನಾಮಕರಣ ಮಾಡಲಾಗುವುದು ರಾಷ್ಟ್ರದ ಸ್ವಾತಂತ್ರ್ಯ ಹೋರಾಟದಲ್ಲಿ ಹುತಾತ್ಮರಾದವರ ನೆನಪಿಗಾಗಿ, ಗ್ವಾಲಿಯರಿನಲ್ಲಿ ರಾಣಿ ಲಕ್ಷ್ಮೀಬಾಯಿಯವರ ಸಮಾಧಿ ಬಳಿ ಒಂದು ಜ್ಯೋತಿಯನ್ನು ಹತ್ತಿಸಿ, ಅಲ್ಲಿಂದ ಅದನ್ನು ಇಂದೂರಿನಲ್ಲಿ ಅಧಿವೇಶನವು ನಡೆಯುವ ಸ್ಥಳಕ್ಕೆ ೩೦೦ ಮೈಲಿ ದೂರ ಕಾಲ್ನಡಿಗೆ ಮೆರವಣಿಗೆಯಲ್ಲಿ ತೆಗೆದೊಯ್ಯಲಾಗುವುದು ಲಕ್ಷ್ಮೀಬಾಯಿ ನಗರದ ೬೦ ಅಡಿ ಎತ್ತರದ ಮಹಾದ್ವಾರದ ಬಳಿ ಅಶ್ವಾರೋಹಿ ರಾಣಿ ಲಕ್ಷ್ಮೀಬಾಯಿಯವರ ವಿಗ್ರಹವನ್ನು ಸ್ಥಾಪಿಸಲಾಗುವುದು

೧೮೫೭ರಲ್ಲಿ ಸಿಪಾಯಿ ದಂಗೆಯು ನಡೆದು ಭಾರತ ಸ್ವಾತಂತ್ರ್ಯದ ಹೋರಾಟವು ಆರಂಭವಾದ ಶತಮಾನೋತ್ಸವದ ಜ್ಞಾಪಕೋತ್ಸವವನ್ನು ಸಹಾ ಈ ಸಂದರ್ಭದಲ್ಲಿ ನಡೆಸಲಾಗುವುದು.

ಕಾಶ್ಮೀರದ ಮಾಜಿ ಮಂತ್ರಿಗಳ ಬಂಧನ

ಕಾಶ್ಮೀರದ ಪ್ರಜಾ ಪರಿಷತ್ತಿನ ಪ್ರಮುಖ [illegible] ಮತ್ತು ಶೇಖ್ ಅಬ್ದುಲ್ಲಾ ಮಂತ್ರಿಮಂಡಲದಲ್ಲಿ ರೆವಿನ್ಯೂ ಸಚಿವರೂ ಆದ ಮಿರ್ಜಾ ಅಫ್ಜಲ್ ಬೇಗ್‌ರವರನ್ನು ಹೊಸ ಸ್ವಾತಂತ್ರ್ಯ [illegible] ಬಂಧಿಸಲಾಯಿತು [illegible] ಸಭೆಯಲ್ಲಿ ಭಾಗವಹಿಸಲು [illegible] ಅವರನ್ನು [illegible] ಗೆ ಮಾಡಲಾಗಿತ್ತು ಶೇಖ್ ಅಬ್ದುಲ್ಲಾ ಮಂತ್ರಿಮಂಡಲದ ಉಪ ಸಚಿವ ಮುಬಾರಕ್ ಷಾ ಮತ್ತು ರಾಷ್ಟ್ರೀಯ ರಕ್ಷಣಾ ಸಭೆಯ [illegible] ರನ್ನು ನೆನ್ನೆ ಬಂಧಿಸಲಾಯಿತು.

ನವೆಂಬರ್ ೧ ರಿಂದ ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ ಸಮಾಪ್ತಿ

ಮೈಸೂರು ೨೭

ನಗರದ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ [illegible] ತರಗತಿಗಳಿಗೆ ಹೋಗುತ್ತಿರುವರೆಂದೂ, [illegible] ಮುಷ್ಕರವನ್ನು ಮುಂದುವರಿಸುತ್ತಿರುವರೆಂದೂ ತಿಳಿದುಬಂದಿದೆ. ಆದುದರಿಂದ ಸರ್ಕಾರದ [illegible]ಯಂತೆ ಸದ್ಯದಲ್ಲಿ ಕಾಲೇಜನ್ನು ಮುಚ್ಚುವ ಪ್ರಮೇಯವಿರುವುದಿಲ್ಲ ವಿದ್ಯಾರ್ಥಿಗಳೆಲ್ಲರೂ ಬರುವ ಒಂದನೇ ತಾರೀಖಿನಿಂದ ತರಗತಿಗಳಿಗೆ ಹಿಂದಿರುಗಿ ಹೊಸ ಮಂತ್ರಿಮಂಡಲದವರಿಗೆ ಒಂದು ಅವಕಾಶವನ್ನು ಕಲ್ಪಿಸಿ ಕಾಲೇಜಿನ ಶಿಕ್ಷಣವನ್ನು ಕ್ರಮಪಡಿಸಲು ಪ್ರಯತ್ನಿಸುವರೆಂದೂ ಹೇಳಲಾಗಿದೆ

ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಗಳವರಾಗಿ ಶ್ರೀ ಕೃಷ್ಣಮೂರ್ತಯ್ಯನವರು ಒಂದು ಹೇಳಿಕೆಯನ್ನಿತ್ತು ಕಾಲೇಜಿಗೆ ೫ ಮಂದಿ ವಿದ್ಯಾರ್ಥಿಗಳು ಹೋಗುತ್ತಿರುವರೆಂಬ ಸುದ್ದಿಯು ಸರಿಯಲ್ಲವೆಂದು ತಿಳಿಸಿ, ಯಾರೂ ತರಗತಿಗಳಿಗೆ ಹೋಗಿಲ್ಲವೆಂದೂ, ವಿದ್ಯಾರ್ಥಿಗಳ ನ್ಯಾಯ ಬೇಡಿಕೆಗಳನ್ನು ಪೂರೈಸುವವರೆಗೂ ಮುಷ್ಕರವನ್ನು ಮುಂದುವರಿಸಲು ತೀರ್ಮಾನ ಕೈಗೊಳ್ಳಲಾಗಿರುವುದೆಂದೂ ಹೇಳಿರುವರು

ಮಹಿಳೆಯರ ಕೌಶಲ್ಯ ಪ್ರದರ್ಶನಕ್ಕಾಗಿ ಬಹುಮಾನ

ದಸರಾ ವಸ್ತು ಪ್ರದರ್ಶನದಲ್ಲಿ ನೆನ್ನೆ ಏರ್ಪಾಡಾಗಿದ್ದ ಮಹಿಳೆಯರ ಕೌಶಲ್ಯ ಪ್ರದರ್ಶನದಲ್ಲಿ ಕೆಳಗೆ ಕಂಡಂತೆ ಬಹುಮಾನಗಳು ದೊರೆತಿವೆ.. ಮಾತೃ ಮಂಡಲಿಯವರಿಗೆ 'ಹೀಗಾಗಲೇ ಬಾರದು' ಎಂಬ ನಾಟಕಕ್ಕಾಗಿ ಸಂಘದ ಬಹುಮಾನ, ಶ್ರೀಮತಿ ಸರಸ್ವತಿಯವರಿಗೆ ಮಣ್ಣಿನ ಪಾತ್ರೆಗಾಗಿ ಪ್ರಥಮ ಬಹುಮಾನ, ಶ್ರೀಮತಿ [illegible]ಯವರಿಗೆ [illegible] ಪಾತ್ರಕ್ಕಾಗಿ ದ್ವಿತೀಯ ಬಹುಮಾನ ಮತ್ತು ಶ್ರೀಮತಿ ಲೀಲಾ ರವರಿಗೆ ವಿದ್ಯಾರ್ಥಿನಿಯ ಪಾತ್ರಕ್ಕಾಗಿ ತೃತೀಯ ಬಹುಮಾನ

ನೈವೇಲಿ ಯೋಜನೆಗಾಗಿ ೨೫ ಲಕ್ಷ ಪೌಂಡ್ ಬೆಲೆಯ ಯಂತ್ರಗಳು

ಮದ್ರಾಸು ಪ್ರಾಂತದ ನೈವೇಲಿ ಲಿಗ್ನೈಟ್ [illegible] ಗಣಿಗಾರಿಕೆಗಾಗಿ ಯಂತ್ರ ಸಾಮಗ್ರಿಗಳನ್ನು ಕೊಳ್ಳಲು ಪಶ್ಚಿಮ ಜರ್ಮನಿಯ ಹಲವು ಸಂಸ್ಥೆಗಳಿಗೆ ೨೫ ಲಕ್ಷ ಪೌಂಡು ಬೆಲೆಯ ಆರ್ಡರನ್ನು ಕೊಡಲಾಗಿರುವುದೆಂದು ಕೇಂದ್ರ ಸರ್ಕಾರದ ಉತ್ಪಾದನಾ ಸಚಿವ ಶ್ರೀ ಕೆ. ಸಿ. ರೆಡ್ಡಿಯವರು ತಿಳಿಸಿರುವರು

○ಕೋರ್ಟ್ [illegible] ಎಂಬ [illegible] ಪ್ರಯೋಜನವಾಗಲಿಲ್ಲವೆಂದೂ, ಅವರ ಅಲ್ಲಿನ ಜಿಲ್ಲಾ ನ್ಯಾಯಾಧೀಶರಾದ [illegible] ಕೆಲವು ಮೂರ್ತಿಗಳಂತೆ [illegible] ದನ್ನೆ [illegible]ಮಾಗಿದೆ.

ನೂತನ ಪ್ರಾಂತದ ಜಿಲ್ಲಾ ಕಲೆಕ್ಟರುಗಳು

ಬೆಂಗಳೂರು ೨೭

ನವೆಂಬರ್ ೧ರಿಂದ ಆರಂಭವಾಗುವ ನೂತನ ಪ್ರಾಂತದ ವಿವಿಧ ಜಿಲ್ಲೆಗಳಿಗೆ ಕೆಳಗೆ ಕಂಡಂತೆ ಕಲೆಕ್ಟರುಗಳು ಮತ್ತು ಪೋಲೀಸು ಅಧಿಕಾರಿಗಳನ್ನು ನೇಮಿಸಲಾಗಿದೆ:—

ಕಲೆಕ್ಟರುಗಳು:— ಆರ್. ವೆಂಕಟಾಚಲಂ-ಧಾರವಾಡ, ವಿ. ಎಸ್. ಹಿರೇಮಠ ಉತ್ತರ ಕರ್ನಾಟಕ, ಎಂ ಡಬ್ಲ್ಯು ದೇಸಾಯ್-ಬೆಳಗಾಂ, ಕೆ. ಎ ವಾಲ್ಕೇಕರ್-ಬಿಜಾಪುರ, ಜಿ ಎಸ್. ಶ್ರೀನಿವಾಸನ್-ಗುಲ್ಬರ್ಗ, ಕೆ ಆರ್ ರಾಮಚಂದ್ರನ್-ರಾಯಚೂರು, ವಾಸುದೇವರಾವ್ ಬಿದರಿ, ಹೆಚ್. ನರಸಿಂಹನ್-ದಕ್ಷಿಣ ಕನ್ನಡ ಮತ್ತು ವಿ ಸಿ. ಸುಬ್ಬಯ್ಯ-ಕೊಡಗು

ಪೋಲೀಸು ಅಧಿಕಾರಿಗಳು:— ಎಂ ಆರ್ ಬಿಡಿ-ಧಾರವಾಡ, ಎಂ. ಎಸ್ ಪಾಟೀಲ-ಉತ್ತರ ಕರ್ನಾಟಕ, ಎ. ಎ ಕಾಗಲ್-ಬೆಳಗಾಂ, ಪಿ ಜಿ. ಲಾಡ-ಬಿಜಾಪುರ, ಜಿ. ವೆಂಕಟರಮಣರಾವ್-ಗುಲ್ಬರ್ಗ, ಕೆ. ಸುಬ್ರಹ್ಮಣ್ಯಂ-ರಾಯಚೂರು, ಎ ಬಿ ಕೃಷ್ಣಸ್ವಾಮಿ-ಬೀದರ್, ಇ. ಎಲ್. ಸ್ವಾಮಿ-ದಕ್ಷಿಣ ಕನ್ನಡ ಮತ್ತು ಎಂ ಸಿ. ಮುತ್ತಣ್ಣ-ಕೊಡಗು

ಬೆಂಗಳೂರು ರೇಡಿಯೋದಲ್ಲಿ ಕ್ರಿಕೆಟ್ ಪಂದ್ಯದ ವರದಿ

ಬೊಂಬಾಯಿ ಮತ್ತು ಕಲ್ಕತ್ತಗಳಲ್ಲಿ ಭಾರತ ಮತ್ತು ಆಸ್ಟ್ರೇಲಿಯಾಗಳ ನಡುವೆ ನಡೆಯುವ ೨ ಮತ್ತು ೩ನೇ ಕ್ರಿಕೆಟ್ ಟೆಸ್ಟ್ ಪಂದ್ಯಗಳ ವರದಿಯನ್ನು ಬೊಂಬಾಯಿ ಪಂದ್ಯದ ದಿನಗಳಲ್ಲಿ ೧೧ ಛಂಟೆಯಿಂದ ೧೨-೩೦ ಮತ್ತು ಮಧ್ಯಾಹ್ನ ೪ರಿಂದ ೫-೪೫ರ ವರೆಗೂ ಕಲ್ಕತ್ತದ ಪಂದ್ಯದ ದಿನಗಳಲ್ಲಿ ಬೆಳಿಗ್ಗೆ ೧೦-೧೦ರಿಂದ ೧೨ ಮತ್ತು ಮಧ್ಯಾಹ್ನ ೩-೩೦ರಿಂದ ೪-೩೦ರ ವರೆಗೂ ಬೆಂಗಳೂರು ಕೇಂದ್ರದಿಂದ ಪ್ರಸಾರ ಮಾಡಲಾಗುವುದು

ಬರುವ ಮಾರ್ಚಿಯಲ್ಲಿ ಮಹಾ ಚುನಾವಣೆ

ಪ್ರಧಾನಿ ನೆಹರೂರವರು ಮೊನ್ನೆ ಹೇಳಿಕೆಯೊಂದನ್ನಿತ್ತು, ಮುಂದಿನ ಮಹಾ ಚುನಾವಣೆಗಳು ಮಾರ್ಚ ಮೂರನೇ ವಾರದಲ್ಲಿ ಆರಂಭವಾಗಿ ಕಳೆದ ಬಾರಿ ಆದಂತೆ ಆರು ವಾರಗಳು ನಡೆಯದೆ, ಎರಡೇ ವಾರಗಳಲ್ಲಿ ಮುಕ್ತಾಯವಾಗುವುವೆಂದೂ, ಮೂರನೆಯ ಮಹಾ ಚುನಾವಣೆಗಳು ೧೦ ದಿನಗಳಲ್ಲೇ ಮುಗಿಯುವುವೆಂದೂ, ಕ್ರಮೇಣ ಇದನ್ನು ದೇಶಾದ್ಯಂತ ಒಂದೇ ದಿನದಲ್ಲಿ ನಡೆಸುವ ಗುರಿಯನ್ನು ಇಟ್ಟುಕೊಳ್ಳಲಾಗಿರುವುದೆಂದೂ ತಿಳಿಸಿರುವರು.

ಸ್ಟಾಲಿನ್ ಪ್ರತಿಮೆಯ ಭೇದನ

ಹಂಗೆರಿಯಲ್ಲಿ ನಡೆದ ಗಲಭೆಗಳಲ್ಲಿ ಪ್ರದರ್ಶನಕಾರರು ಬುಡಾಪೆಸ್ಟ್ ನಗರದ ಮಧ್ಯ ಭಾಗದಲ್ಲಿ ಸ್ಥಾಪಿತವಾಗಿದ್ದ ಸ್ಟಾಲಿನರ ಭಾರಿ ಪ್ರತಿಮೆಯನ್ನು ಕೆಡವಿ, ಅದನ್ನು ಛಿದ್ರಛಿದ್ರವಾಗಿ ಹಂಚಿದರೆಂದು ವರದಿಯಾಗಿದೆ

ಇಂಜನಿಯರ್ ವರ್ಗ

ಮುಗು ಆಣೆಕಟ್ಟೆ ಯೋಜನೆಯ ಅಸಿಸ್ಟೆಂಟ್ ಇಂಜನಿಯರ್ ಶ್ರೀ ಕೆ. ವೆಂಕಟೇಶಯ್ಯನವರನ್ನು ಕೊಡಗಿನ ೩ನೇ ಡಿವಿಜನ್ಗೆ ವರ್ಗಾಯಿಸಲಾಗಿದೆ. ಕೊಡಗು ಮೈಸೂರಿನೊಡನೆ ಐಕ್ಯವಾಗುವುದರಿಂದ ಕೊಡಗು ಮರಾಮತ್ತು ಇಲಾಖೆಯನ್ನು ಮೈಸೂರು ಡಿವಿಜನ್ನಿನ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ಬಿ ಪಿ. ಸುರೇಂದ್ರರವರ ಮೇಲ್ವಿಚಾರಣೆಗೆ ಸೇರಿಸಲಾಗಿದೆ

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣಅಯ್ಯರ್
ಅಂಡ್ ಸನ್ಸ್,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು —Estd. 1911

ಹೈದ್ರಾಬಾದ್ ಪ್ರಾಥಮಿಕ ಶಾಲೆ ಅಧ್ಯಾಪಕರಿಗೆ ಹೆಚ್ಚಿನ ವೇತನ

ಹೈದರಾಬಾದಿನಲ್ಲಿ ಪ್ರಾಥಮಿಕ ಶಾಲಾ ಅಧ್ಯಾಪಕರ ಮೂಲ ಸಂಬಳವನ್ನು ಈ ತಿಂಗಳು ಆದಿಯಿಂದ ಹೆಚ್ಚಿಸಿ, ಮೆಟ್ರಿಕ್ಯುಲೇಷನ್ ಪರೀಕ್ಷೆ ಮಾಡಿ, ಉಪಾಧ್ಯಾಯ ಶಿಕ್ಷಣವನ್ನು ಪೂರೈಸಿರುವವರಿಗೆ ೫೦ ರೂ ಸಂಬಳವೂ ಮತ್ತು ಉಪಾಧ್ಯಾಯರ ಶಿಕ್ಷಣ ಪಡೆಯದವರಿಗೆ ೪೦ ರೂ ಸಂಬಳವೂ ನಿಗದಿ ಮಾಡಲಾಗಿದೆ ಈ ಸಂಬಳದಲ್ಲಿ ತಗಲುವ ಹೆಚ್ಚಿನ ವೆಚ್ಚದಲ್ಲಿ ಅರ್ಧ ಭಾಗವನ್ನು ಕೇಂದ್ರ ಸರ್ಕಾರದವರೂ, ಉಳಿದ ಅರ್ಧವನ್ನು ಸಂಸ್ಥಾನ ಸರ್ಕಾರದವರೂ ವಹಿಸುವರೆಂದು ವರದಿಯಾಗಿದೆ.

ಸಹಕಾರ ತತ್ವದ ಆಧಾರದ ಮೇಲೆ ಸಂಸ್ಥಾನದಲ್ಲಿ ೨ ಸಕ್ಕರೆ ಕಾರ್ಖಾನೆ

ಇನ್ನು ಐದು ವರ್ಷದೊಳಗಾಗಿ ಭಾರತದಲ್ಲಿ ಸಹಕಾರ ತತ್ವದ ಆಧಾರದ ಮೇಲೆ ೫೫ ಸಕ್ಕರೆ ಕಾರ್ಖಾನೆಗಳು ಸ್ಥಾಪಿಸಲ್ಪಡುವುವೆಂದೂ, ಅವುಗಳ ಪೈಕಿ ಮೈಸೂರಿನಲ್ಲಿ ಎರಡು ಕಾರ್ಖಾನೆಗಳಿರುವುವೆಂದೂ ಗೊತ್ತಾಗಿದೆ.

ಅಶೋಕಸ್ತಂಭವಿಲ್ಲದ ನೋಟುಗಳ ಚಲಾವಣೆಗೆ ಹೆಚ್ಚು ಅವಧಿ

ಅಶೋಕಸ್ತಂಭದ ಗುರುತುಗಳಿಲ್ಲದ ಭಾರತ ಸರ್ಕಾರದ ಎಲ್ಲ ಕರೆನ್ಸಿ ನೋಟುಗಳ ಚಲಾವಣೆಯು ನಾಳೆಗೆ ಮುಕ್ತಾಯವಾಗುವಂತೆ ನಿಗದಿ ಮಾಡಿದ್ದುದನ್ನು ಇನ್ನೂ ಆರು ತಿಂಗಳ ಕಾಲ ಹೆಚ್ಚಿಸಲಾಗಿದೆ.

ವೆಂಕಟಕೃಷ್ಣಯ್ಯ ಸ್ಮಾರಕ ಕನ್ನಡ ಚರ್ಚಾ ಸ್ಪರ್ಧೆ

ಮಹಾರಾಜಾ ಕಾಲೇಜು ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ಏರ್ಪಡಿಸಲಾಗಿರುವ ವೃದ್ಧಪಿತಾಮಹ ವೆಂಕಟಕೃಷ್ಣಯ್ಯ ಸ್ಮಾರಕ ಅಖಿಲ ಕರ್ನಾಟಕ ಕನ್ನಡ ಚರ್ಚಾ ಸ್ಪರ್ಧೆಗೆ ಪ್ರತಿನಿಧಿಗಳ ಹೆಸರನ್ನು ಕಳುಹಿಸುವ ದಿನವನ್ನು ಇದೇ ೩೦ನೇ ತಾರೀಖಿಗೆ ಮುಂದುವರಿಸಲಾಗಿದೆ

ಶಕ್ತಿಸುಬ್ರಹ್ಮಣ್ಯಸ್ವಾಮಿಯಲ್ಲಿ ಅಷ್ಟತೀರ್ಥೋತ್ಸವ

ನಗರದ ದೇವರಾಜ ಮಾರ್ಕೆಟ್ ವರ್ತಕ ಮಂಡಲಿಯವರು ನಾಳೆ ಬೆಳಿಗ್ಗೆ ೯ ಘಂಟೆಗೆ ಶಕ್ತಿಸುಬ್ರಹ್ಮಣ್ಯಸ್ವಾಮಿಯಲ್ಲಿ ಅಷ್ಟತೀರ್ಥೋತ್ಸವವನ್ನು ನೆರವೇರಿಸುತ್ತಾರೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ	[illegible]	[illegible]
ಬೆಳ್ಳಿ ಗಟ್ಟಿ	[illegible]	
[illegible]	[illegible]	
ಅಕ್ಕಿ ಸಣ್ಣ	[illegible]	[illegible]
ರಾಗಿ	[illegible]	[illegible]
ಜೋಳ	[illegible]	[illegible]
ತೊಗರಿ	[illegible]	[illegible]
ಕಂಬು	[illegible]	[illegible]
ಕಡಲೆಕಾಯಿ	[illegible]	[illegible]
[illegible]	[illegible]	
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹಲಸಂದೆ	[illegible]	[illegible]
[illegible]	[illegible]	[illegible]
[illegible]	[illegible]	[illegible]
ಹುಣಸೆಹಣ್ಣು	[illegible]	[illegible]
[illegible] ೧೦೦೦	[illegible]	[illegible]

ಶುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್
ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯ ರೋಡ್, ಮೈಸೂರು
(ನಮ್ಮ ಅಂಗಡಿಯು ಶಾಖೆಯನ್ನು ಬೇರೆ ಎಲ್ಲೂ ತೆರೆದಿಲ್ಲ)

Edited, Printed and Published by
A. R. Nagarajan at Sadhvi Press
D. Subbiah Road, Mysore

ಫ್ರೆಂಚ್ ಸೈನಿಕರಿಂದ ಟ್ಯುನೀಷಿಯದ ನಗರಗಳ ಆಕ್ರಮಣ

ಫ್ರೆಂಚ್ ಸೈನ್ಯ ಪಡೆಗಳು ಅಲ್ಜೀರಿಯಾ ಮತ್ತು ಲಿಬಿಯಾ ದೇಶಗಳ ಗಡಿ ಸಮೀಪದಲ್ಲಿರುವ ಟ್ಯುನೀಷಿಯದ ಹಲವು ಪಟ್ಟಣಗಳನ್ನು ವಶಪಡಿಸಿಕೊಂಡಿರುವುವೆಂದು ಕೈರೋವಿನ ಟ್ಯುನೀಷಿಯದ ರಾಯಭಾರಿ ಕಛೇರಿಯು ಪ್ರಕಟಿಸಿತೆ. ಸ್ಫ್ಯಾಕ್ಸ್ ಎಂಬ ನಗರದಲ್ಲಿ ರಾಷ್ಟ್ರೀಯವಾದಿಗಳು ಫ್ರೆಂಚರ ವಾಹನಗಳಿಗೆ ಬೆಂಕಿಯನ್ನು ಹಚ್ಚಿಸಿದರೆಂದೂ, ಅವರ ಅಂಗಡಿಗಳಿಗೆ ನಷ್ಟವುಂಟುಮಾಡಿದರೆಂದೂ ಹೇಳಲಾಗಿದೆ

ನವೆಂಬರ್ ೯ ರಿಂದ ಕಲ್ಕತ್ತೆಯಲ್ಲಿ ಎ. ಐ. ಸಿ. ಸಿ. ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನವು ಬರುವ ನವೆಂಬರ್ ೯ ರಿಂದ ೩ ದಿನಗಳು ಕಲ್ಕತ್ತೆಯಲ್ಲಿ ನಡೆಯುವುದು. ೯ ರಂದು ಕಾರ್ಯಕಾರೀ ಸಮಿತಿಯು ೨ ಸಾರಿ ಸೇರುವುದು. ನಂತರ ಸಮಿತಿಯು ಎರಡು ಭಾಗವಾಗಿ, ಒಂದು ಚುನಾವಣಾ ಪ್ರಣಾಳಿಕೆಯನ್ನೂ, ಇನ್ನೊಂದು ಘಟನಾತ್ಮಕ ವಿಷಯವನ್ನೂ ಚರ್ಚಿಸುವುವು ೧೧ನೇ ತಾರೀಖು ಬಹಿರಂಗ ಅಧಿವೇಶನವು ಜರುಗುವುದು

ರೆಬೆಲ್ಲೊರವರು ಗೃಹ ಶಾಖೆ ಕಾರ್ಯದರ್ಶಿ

ಬೊಂಬಾಯಿ ಟ್ರಾನ್ಸ್ಪೋರ್ಟ್ ಕಾರ್ಪೊರೇಷನ್ನಿನ ಉಪಾಧ್ಯಕ್ಷರಾಗಿರುವ ಶ್ರೀ ಆರ್. ಜೆ. ರೆಬೆಲ್ಲೊರವರನ್ನು ನೂತನ ಮೈಸೂರು ಸಂಸ್ಥಾನದ ಗೃಹ ಶಾಖಾ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ಶ್ರೀ ಟಿ. ಕೆ ಕೃಷ್ಣಮೂರ್ತಿಯವರನ್ನು ರೇಷ್ಮೆ ಕೈಗಾರಿಕೆ ಡೈರೆಕ್ಟರಾಗಿಯೂ, ಶ್ರೀ ಟಿ. ಪಿ. ಕೃಷ್ಣಾಚಾರ್ಯರನ್ನು ಗಣಿಗಳ ಡೈರೆಕ್ಟರಾಗಿಯೂ ನೇಮಿಸಲಾಗಿದೆ

ವಿವಾಹ ಮಹೋತ್ಸವ

ಗಂಧವೆಣ್ಣೆ ಕಾರ್ಖಾನೆಯ ನಿವೃತ್ತ ಅಕೌಂಟೆಂಟರಾದ ಅಗರದ ಶ್ರೀ ವಾಸುದೇವರಾಯರು ತಮ್ಮ ಸಹೋದರ ಎ ನರಸಿಂಗರಾಯರ ಪುತ್ರಿ ಸೌ॥ ಶಾಂತಾಬಾಯಿಯನ್ನು ಶ್ರೀ ಗೋವಿಂದರಾವ್ ಪಢಕಿಯವರ ಪುತ್ರ ಶ್ರೀ ಟಿ ವೆಂಕಟೇಶಮೂರ್ತಿಯವರಿಗೆ ಕೊಟ್ಟು ವಿವಾಹವನ್ನು ನೆನ್ನೆ ರಾಜಧಾನಿಯಲ್ಲಿ ನೆರವೇರಿಸಿದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೧೫ ಮತ್ತು ೮-೧೫ ಯಮುನಾ ಮತ್ತು ಶಾರದೆ-ದೇವರ ನಾಮಗಳು. ೭-೩೦ ಅಲಿ ಅಕ್ಬರ್ ಖಾನ್-ಸಿತಾರ್ ೯-೩೦ ಬಾಲಜಗತ್-ನಾಟಕ ವ ಕಾರ್ಯಕ್ರಮ. ಮಧ್ಯಾಹ್ನ ೧೨ ಮತ್ತು ೩-೧೫ ಹೆಚ್ ಆರ್ ಸೀತಾರಾಮಶಾಸ್ತ್ರಿ-ಸಂಗೀತ ೧೨-೩೦ ವಾದ್ಯ ವೃಂದ, ೧ ಸಿನಿಮಾ ಮೆಚ್ಚಿನ ಗೀತೆಗಳು ೨ ೧೫ ಗಾನ ಮಂಜರಿ. ೩. ಸಂಗೀತ ಸಮ್ಮೇಳನ-ಮದ್ರಾಸು ಪ್ರಸಾರ-ಅರಿಯಾಕುಡಿ ರಾಮಾನುಜಯ್ಯಂಗಾರ್ಯರ ಸಂಗೀತ ಮದ್ರಾಸು ಗವರ್ನರ್ ಶ್ರೀ ಶ್ರೀ ಪ್ರಕಾಶರವರಿಂದ ಸಮ್ಮೇಳನದ ಆರಂಭ. ಸಂಜೆ ೫ ಪಾಶ್ಚಾತ್ಯ ಸಂಗೀತ. ೫-೩೦ ರಂಗಪ್ಪ-ಕೊಳಲು. ೬ ೩೦ ಇಂದಿರಾಬಾಯಿ-ದೇವರ ನಾಮಗಳು. ೭-೩೦ ಗೀತಾವಳಿ ೮ ಮತ್ತು ೮-೧೫ ಸಂಗೀತ ಸಮ್ಮೇಳನ-ಕಾರೈಕುಡಿ ಸಾಂಬಶಿವಯ್ಯರ್-ವೀಣೆ. ೮-೩೦ ಭಾಷಣ ದೆಹಲಿ ಪ್ರಸಾರ. ೯-೧೫ ರಂಗಪ್ಪ-ಕೊಳಲು ೯-೩೦ ಸಂಗೀತ ಸಮ್ಮೇಳನ-ಎಂ. ಎಂ. ದಂಡಪಾಣಿ ದೇಶಿಗರ್ ರವರ ಸಂಗೀತ.

ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು
ಪ್ರಭಾ ಮತ್ತು ಒಲಂಪಿಯಾ
ಚಿತ್ರಮಂದಿರಗಳ ನಡುವೆ
ಮೆಟ್ಟೂರ್ ಮಿಲ್, ಬಾಂಗ್ ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ, ಬೇಯಿ, ಅರವಿಂದ್, ಕಟಾವ್ ಇನ್ನೂ ಅನೇಕ ಮಿಲ್ ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ. ಉತ್ತಮ ಸರವೆಯ ಪ್ರಿಂಟೆಡ್ ವಾಯಿಲ್ ಮತ್ತು ಶೀಟಿಗಳು.
ಒಮ್ಮೆ ದಯಮಾಡಿ ಭೇಟಿ ಕೊಡಿ
ಇ. ಪಿ. ನಂಜಪ್ಪ

ಅಮೆರಿಕದಲ್ಲಿ ಕುರೂಪಿ ತರು
ಯರಿಗೆ ಕೃತಕ ಅವಯವಗಳ

ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು
ದ ಬುಧವಾರ ಇಂದೂರಿನ ಯಶವಂತರಾವ್
ಸ್ಪತ್ರೆಯ ಆರಂಭೋತ್ಸವವನ್ನು ನೆರವೇ
ತ್ರಾ. ವೈದ್ಯ ವಿಜ್ಞಾನವು ಬಹಳ ಮಟ್ಟಿಗೆ
ದುವರಿದಿರುವುದೆಂದೂ, ಸತ್ತವರನ್ನು ಬದು
ವುದು ವಿನಹ ಬೇರೆ ಯಾವುದನ್ನಾದರೂ ಆ
ದ ಸಾಧಿಸಬಹುದೆಂದೂ ತಿಳಿಸಿ, ಅಮೆರಿಕ
ರುಣಿಯರು ಸ್ವರದ್ರೂಪಿಗಳಾಗಿಲ್ಲದಿದ್ದರೆ
ಹಲ್ಲುಗಳನ್ನು ಕೀಳಿಸಿ, ಮೂಗುಗಳನ್ನೇ ಕತ್ತ
ಅವಕ್ಕೆ ಪ್ರತಿಯಾಗಿ ಕೃತಕವಾದ ಅವಯವ
ನ್ನು ಜೋಡಿಸಿಕೊಳ್ಳುವರೆಂದು ನುಡಿವರು.

ಮಹಾರಾಜಾ ಕಾಲೇಜಿನಲ್ಲಿ ಎಂ. ವಿ. ಕೃಷ್ಣಪ್ಪನವರ ಭಾಷಣ ಮುಂದ

ಈ ದಿನ ಸಂಜೆ ೫-೩೦ ಘಂಟೆಗೆ ಮಹಾ
ರಾಜಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಕೇಂದ್ರ
ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣ
ವರ ಭಾಷಣವು ಕಾರಣಾಂತರದಿಂದ ಮು
ವರಿಸಲ್ಪಟ್ಟಿದೆ

ನವೆಂಬರ್ ೨ ನೇ ತಾರೀಖು ಬ್ಯಾಂಕುಗಳಿಗೆ ರಜಾ ದೊರೆಯುವು

ನೂತನ ರಾಜ್ಯದ ಉದಯೋತ್ಸವದ ಸ
ಸ್ಮಾರ್ಥವಾಗಿ ನವೆಂಬರ್ ೨ ನೇ ತಾರೀಖು
ವರ್ತ್ರಿಕ ರಜಾ ಮಂಜೂರು ಮಾಡಲಾಗಿ
ದರೂ, ಈಗಿನ ಆಜ್ಞೆಯ ಪ್ರಕಾರ ಇದು
ಕುಗಳಿಗೆ ಅನ್ವಯಿಸುವುದಿಲ್ಲ. ಆದ್ದರಿಂದ
ಕುಗಳಿಗೂ ಇದು ಅನ್ವಯಿಸುವಂತೆ ಆಜ್ಞೆ
ಬೇಕೆಂದು ವಾಚಕರೊಬ್ಬರು ಕೋರಿ ಪತ್ರ
ರುತ್ತಾರೆ

ಚಾಮರಾಜನಗರದಲ್ಲಿ ಅಭಾವ ಪರಿ ಕಾರ್ಯ

ಚಾಮರಾಜನಗರ ತಾಲ್ಲೂಕನ್ನು ಅಭಾ
ದೇಶವೆಂದು ಪರಿಗಣಿಸಿ ಅನೇಕ ಕಾಂಗಾ
ನ್ನು ಮಂಜೂರು ಮಾಡಿರುವುದು ಸರಿಯಷ್ಟ
ಆದರೆ ಈ ಕಾಂಗಾರಿಗಳನ್ನು ಅದೇ ತಾಲ್ಲೂ
ಕೆಲಸವಿಲ್ಲದೆ ಇರುವ ಕಂಟ್ರಾಕ್ಟರುಗಳಿಗೆ
ದೆ ಬೇರೆ ಕಡೆಯವರಿಗೆ ಕೊಡಲಾಗುತ್ತಿದೆ
ದೆ ರೈತರ ಜಮೀನುಗಳನ್ನು ಕಾನೂನು
ಅಕ್ವೈರ್ ಮಾಡಿಕೊಳ್ಳದೆ ಅಕ್ರಮವಾಗಿ
ರ ಮೇಲೆ ಕಾಲುವೆ ತೋಡಿಸಲಾಗುತ್ತಿದೆ
ರಿಂದ ಸರ್ಕಾರದವರು ಮರಾಮತ್ತು ಇಲಾ
ಅಧಿಕಾರಿಗಳಿಗೆ ಸೂಕ್ತ ಸೂಚನೆಯಿತ್ತು
ನ್ಯೂನತೆಗಳನ್ನು ಸರಿಪಡಿಸುವುದಲ್ಲದೆ
ಕಂಟ್ರಾಕ್ಟರುಗಳಿಗೆ ಕಾಂಗಾರಿ ಕೆಲಸ
ಬೇಕು ಎಂದು ಕೋರಿ ವಾಚಕರೊಬ್ಬರು
ಬರೆದಿರುತ್ತಾರೆ

ಜೀವನದ ಹರ್ಷವನ್ನು ಸವಿ
ಹಂಡರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ
ಆರೋಗ್ಯ, ಐಶ್ವರ್ಯ, ದೇಹದಾಢ್ಯ
ಬಲವಿಕೆಯನ್ನು ಹೊಂದಿ ದೀರ್ಘ ಜೀವ
ಲ್ಲಾ ಅವಿರೋಧಗಳನ್ನು ಅನುಭವಿಸಬೇ
ಹೂನವರ ಸುಪ್ರಸಿದ್ಧರಾದ ಅತಿ ಮುಖ್ಯ
ಅನೇಕ ಭಾಗಗಳಲ್ಲಿರುವ ಚಿಟ್ಟು ಹೋದ ಗ್ರ
ತಂದುಕೊಳ್ಳ, ಹ್ಯಾಟೀರ ಶಕ್ತಿಯ ಅಭಾವ,
ಕು, ಸ್ವಪ್ನಸ್ಖಲನ, ಮೂಲವ್ಯಾಧಿ, ನರ
ಬಾಧ್ಯ, ಹಿಸ್ಟೀರಿಯಾ, ಗೊನೋರಿಯಾ,
ಯು, ಅಂಡ ವಾಯು ಮುಂತು ಎಲ್ಲ ಬಗೆ
ಕೆಯು ಮಾತ್ರ, ರೋಗಿಗಳೂ ವಾರ
ಇವುಗಳನ್ನು ಬೇಗನೇ ಗುಣಪಡಿಸಲು
ತರಾಗಿರುವ ಆಸ್ಪತ್ರೆ ರಾಣಾರವರನ್ನು (ಪ್ರ
ವೀಣ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮ
ಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿ
ತು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ
ಸಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳ
ಡುವರು. ಸೂರಕ್ಕೆ ನೂರು ಖಾತರಿ ಕೊ
ವುದು
ಅವರ ಸಲಹೆ ಪಡೆಯುವುದರಿಂದ ಜೀ
ನವನ್ನು ಜವದಂತೆಯೇ ಚಿಕಿತ್ಸೆಗಳನ್ನು
ಡಲಾಗುವುದು. ಕೆಳಗಿನ ವಿಳಾಸದಲ್ಲಿ
ರಿ:—
ರಾಣಾ ಮೆಡಿಕಲ್ ಹಾ
ಲೇನ್ ನಂ. 1-745. ಅಶೋಕಾ
(ಮೈಸೂರು ಬ್ಯಾಂಕ್ ಬಳಿ ವಾಲಿ
ಮೂರನೇ ಕಟ್ಟಡ,)
ಮೈ ಸೂ ರು

ರಿಜಿಸ್ಟರ್ಡ್—ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ ೬ ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೦೫] SADHVI : SUNDAY 28—10—1956 ಮೈಸೂರು : ಭಾನುವಾರ ೨೮—೧೦—೧೯೫೬ [ಸಂಚಿಕೆ : ೮೬

ಹಂಗೇರಿಯಲ್ಲಿ ಶಾಂತಿ ಸ್ಥಾಪನೆಗೆ ನೆಹ್ರೂ ನೆರವಿಗೆ ಮನವಿ

ಹಂಗೇರಿಯಲ್ಲಿ ರಕ್ತಪಾತ ಸಲು ನೆಹರೂರವರಿಗೆ ಮನವಿ

ಪ್ರಧಾನಿ ನಾಗಿಯವರಿಂದ ಭಾರತದ ಪ್ರಧಾನಿಗೆ ಕರೆ

ಂಗೇರಿಯಲ್ಲಿ ರಕ್ತಪಾತವು ಕೊನೆಗೊಳ್ಳು ಮಾಡಬೇಕೆಂದು ಪ್ರಧಾನಿ ನೆಹರೂರವರಿ ಂಗೇರಿಯ ಹೊಸ ಪ್ರಧಾನಿ ನಾಗಿಯವರು ಮೂಲಕ ಮನವಿ ಮಾಡಿಕೊಂಡಿರುತ್ತಾರೆ. 'ಶಾಂತಿಪ್ರಿಯರಾಗಿರುವ ನೆಹರೂರವರು ರಿಯಲ್ಲಿ ಹೋರಾಟ ನಡೆಸುತ್ತಿರುವ ಉಭ ಪಂಗಡಗಳ ನಡುವೆ ಕೂಡಲೇ ಕದನ ಸ್ತಂ ಾಗಲೂ ಸಹಾಯ ಮಾಡಬೇಕೆಂದು ಅವ ೋರಿರುವರು.

ಮಂತ್ರಿಮಂಡಲದ ಬಗ್ಗೆ ಕಮಾಂಡಿನ ನಿರ್ಬಂಧವಿಲ್ಲ

ನಿಜಲಿಂಗಪ್ಪನವರ ವಿವರಣೆ

ಬೆಂಗಳೂರು ೨೮

ತನ ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಪತ್ರಿಕಾ ಪ್ರತಿ ಗಳೊಡನೆ ಸಂಭಾಷಿಸಿ ಹೊಸ ಮೈಸೂರು ಮಂಡಲದ ರಚನೆ ಸಂಬಂಧವಾಗಿ ಹೈಕಮಾಂಡಿನ ಯಾವ ನಿರ್ಬಂಧವೂ ಇಲ್ಲವೆಂ ಹೈ ಕಮಾಂಡಿಗೆ ತಾವು ಮಂತ್ರಿಮಂಡಲದ ನ್ನು ಒಪ್ಪಿಸಿಲ್ಲವೆಂದೂ ಹೇಳಿದರು. ಅ ರ್ಥಿಗಳ ಬಗ್ಗೆ ತಾವು ದೆಹಲಿಯಲ್ಲಿ ದುದಾಗಲೀ, ಯಾವುದೂ ನಿರ್ದಿಷ್ಟವಾ ಂದೂ ಮಂತ್ರಿಗಳ ಹೆಸರಿನ ಪಟ್ಟಿಯು ತಾವು ಒಪ್ಪಿಸುವಂತೆ ಹೈ ಕಮಾಂಡಿ ನಿರೀಕ್ಷಣೆ ಮಾಡಿರಲಿಲ್ಲವೆಂದೂ ಅವರು ರು. ತಮ್ಮ ನಿಲುವಿನ ವಿಚಾರವಾಗಿ ಹೈ ಮಾಂಡಿನವರು ಪ್ರಶಂಸಿಸಿ, ಈ ವಿಚಾರದಲ್ಲಿ ವಿವೇಚನೆಗೆ ಅವಕಾಶವಿತ್ತಿರುವರೆಂದೂ ಹೇಳಿದರು

ನಿಜಲಿಂಗಪ್ಪನವರು ಇಂದು ಚಿತ್ರದುರ್ಗ ರಳುವರು ಅವರು ಅಧಿಕಾರ ಸ್ವೀಕಾರ ಚೆ ಮುಂಚೆ ತಮ್ಮ ವೃದ್ಧ ಮಾತೆಯವರ ಾವ ಪಡೆಯಲು ಹೋಗಲಿದ್ದಾರೆ.

ಟಿ ನಡೆಸುವ ಪ್ರಕರಣದಲ್ಲಿ ಲಭೆ, ೧೪ ಜನರಿಗೆ ದಂಡ

ಮೈಸೂರು ೨೮

ರದ ಕಸಬಿ ಬ್ಲಾಕಿನಲ್ಲಿ, ಕೃಷ್ಣರಾಜೇಂದ್ರ ಯಲ್ಲಿ ಕೆಲಸದಲ್ಲಿರುವ, ಕುರುಬಗೇರಿ ವನು ನಡೆಸುತ್ತಿದ್ದ ಲೂಟಿ ಪ್ರಕರಣದ ಸಿನ ಸಂಬಂಧವಾಗಿ ನೆನ್ನೆ ರಾತ್ರಿ ಎ ಂಪುಗಳವರಿಗೆ ಘರ್ಷಣೆ ನಡೆದು ಕಲ್ಲು ಗಾಯಗೊಳಾಗಿ ಅವರನ್ನು ಆಸ್ಪತ್ರೆ ಸೇರಿಸಿದ್ದು, ಅವರುಗಳಿಗೆ ಚಿಕಿತ್ಸೆ ನಡೆ ನ್ನೆ [illegible] ಪೋಲೀಸರು ಸಂಬಂಧದ ಗಲಭೆ ಜನರ ಮೇಲೆ ಹೂಡಿದ್ದ ಮೊಕದ್ದ ನೆನ್ನೆ ಎಲ್ಲರಿಗೂ ತಲಾ ೫ ರೂ ದಂ ವಿಧಿಸಲಾಯಿತು.

ದಸರಾ ವಸ್ತು ಪ್ರದರ್ಶನಕ್ಕೆ ೫॥ ಲಕ್ಷ ಜನ ಪ್ರೇಕ್ಷಕರು

ಕೇಂದ್ರ ಆಹಾರ ಉಪ-ಮಂತ್ರಿ ಎಂ. ವಿ. ಕೃಷ್ಣಪ್ಪನವರಿಂದ ಬಹುಮಾನ ವಿತರಣೆ

ಮೈಸೂರು ೨೮

ಕಳೆದ ೩೪ ದಿನಗಳಿಂದಲೂ ನಗರದಲ್ಲಿ ನಡೆಯುತ್ತಿರುವ ದಸರಾ ವಸ್ತು ಪ್ರದರ್ಶನಕ್ಕೆ ಸುಮಾರು ೫॥ ಲಕ್ಷ ಜನ ಪ್ರೇಕ್ಷಕರು ಬಂದಿರುವರು. ಟಿಕೆಟ್ಟುಗಳ ಮಾರಾಟದಿಂದ ೧,೦೭,೧೩೦ ರೂ ವಸೂಲಾಗಿರುತ್ತದೆ. ಮಳಿಗೆಗಳ ಬಾಡಿಗೆಯಿಂದ ೮೩,೧೦೦ ರೂ ವಸೂಲಾಗಿದೆ. ಕಳೆದ ವರ್ಷಕ್ಕಿಂತ ಎಲ್ಲಾ ಬಾಬುಗಳಲ್ಲಿಯೂ ಹೆಚ್ಚು ವರಮಾನ ಬಂದಿರುತ್ತದೆ-ಎಂಬ ಅಂಶಗಳನ್ನು ಈ ದಿನ ಬೆಳಿಗ್ಗೆ ವಸ್ತು ಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭದಲ್ಲಿ ಉಪಾಧ್ಯಕ್ಷರಾದ ಶ್ರೀ ಎಂ. ಹೆಚ್. ಪಾಪ [illegible] ಯವರು ತಮ್ಮ ವರದಿಯಲ್ಲಿ ತಿಳಿಸಿದರು

ಸಮಾರಂಭಕ್ಕೆ ಭಾರತದ ನಿವೃತ್ತ ಸೇನಾಧಿಪತಿ ಜ|| ಕಾರಿಯಪ್ಪನವರೇ ಆದಿಯಾಗಿ ಅನೇಕ ಮಹಿಳೆಯರೂ ಮಹನೀಯರೂ ಬಂದಿದ್ದರು

ಕುಮಾರಿಯರಾದ ವಸಂತ ಮತ್ತು ವಿಮಲ ಶೆಟ್ಟಿಯವರಿಂದ ಪ್ರಾರ್ಥನೆಯೂ, ಶ್ರೀಮತಿ ಗಿರಿಜಮ್ಮನವರಿಂದ ಗಾಯನವೂ ಆದನಂತರ ಪ್ರದರ್ಶನ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಸ್ವಾಗತ ಭಾಷಣ ಮಾಡಿ ಈ ಪ್ರದರ್ಶನವು ವರ್ಷವರ್ಷಕ್ಕೂ ಹೆಚ್ಚು ಯಶಸ್ವಿಯಾಗಿ ಪ್ರವರ್ಧಮಾನ ಹೊಂದುತ್ತ ಜ್ಞಾನಾರ್ಜನೆ, ಮನರಂಜನೆ ಮತ್ತು ವ್ಯಾಪಾರಗಳ ಬೆಳವಣಿಗೆಗೆ ಕೇಂದ್ರಸ್ಥಾನವಾಗಿರುವುದೆಂದು ಹೇಳಿದರು.

ವಿವಿಧ ಶಾಖೆಗಳಲ್ಲಿ ಪ್ರಶಸ್ತಿ ಪಡೆದವರಿಗೆ ಭಾರತದ ಆಹಾರ ಉಪ ಮಂತ್ರಿ ಶ್ರೀ ಎಂ ವಿ. ಕೃಷ್ಣಪ್ಪನವರು ಬಹುಮಾನಗಳನ್ನು ಹಂಚಿದರು. ಅವರು ಭಾಷಣ ಮಾಡಿ ಭಾರತದಲ್ಲೆಲ್ಲಾ ಮೊದಲನೆಯದಾದ ಈ ವಸ್ತು ಪ್ರದರ್ಶನವು ಮುಂದೆ ಇನ್ನೂ ಚೆನ್ನಾಗಿ ಬೆಳೆದು ಅಭಿವೃದ್ಧಿ ಹೊಂದಲೆಂದು ಹಾರೈಸಿದರು. ಮೈಸೂರು ನಗರಕ್ಕೆ ಕೃಷ್ಣರಾಜಸಾಗರ ಬೃಂದಾವನ ಮತ್ತು ದಸರಾ ಮಹೋತ್ಸವಗಳು ಎರಡು ಕಣ್ಣಿನಂತಿವೆಯೆಂದೂ ಇವುಗಳನ್ನು ಮುಂದೆಯೂ ಚೆನ್ನಾಗಿ ಅಭಿವೃದ್ಧಿಪಡಿಸಿಕೊಂಡುಬರಬೇಕೆಂದೂ ನುಡಿದರು. ಕೈಗಾರಿಕೆ, ಕಲೆ ಮತ್ತು ವ್ಯವಸಾಯಗಳಿಗೆ ಭಾರತ ಸರ್ಕಾರದವರು ನೀಡುತ್ತಿರುವ ಪ್ರೋತ್ಸಾಹವನ್ನು ಅವರು ವಿವರಿಸಿ, ಈ ಪ್ರದರ್ಶನದಲ್ಲಿ ಇನ್ನೂ ಮುಂದೆ ಒಂದು ಪ್ರತ್ಯೇಕವಾದ [illegible] ಭಾಗವನ್ನು ತೆರೆಯಬೇಕೆಂದೂ, ಇದಕ್ಕೆ ಭಾರತ ಸರ್ಕಾರದಿಂದ ಎಲ್ಲ ಸಹಾಯವನ್ನೂ, ಅವಶ್ಯವಾದರೆ ಧನ ಸಹಾಯವನ್ನೂ ನೀಡುವುದಾಗಿ ಅವರು ನುಡಿದರು

ಕಾರ್ಯದರ್ಶಿ ಶ್ರೀ ವಿ. ಎಸ್. ಕೃಷ್ಣಯ್ಯರವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಮಹಾ ಚುನಾವಣಾ ಉಮೇದುವಾರರ ಆಯ್ಕೆ

ಪ್ರಾದೇಶಿಕ ಕಾಂಗ್ರೆಸ್ ಪ್ರತಿನಿಧಿಗಳ ಹೆಸರುಗಳು

ಬೆಂಗಳೂರು ೨೮

ಬರುವ ಮಹಾ ಚುನಾವಣೆಯಲ್ಲಿ ಸಂಸ್ಥಾನ ಶಾಸನ ಸಭೆಗೂ, ಪಾರ್ಲಿಮೆಂಟಿಗೂ ಕಾಂಗ್ರೆಸ್ ಪರವಾಗಿ ಅಭ್ಯರ್ಥಿಗಳ ಆಯ್ಕೆ ಬಗ್ಗೆ ಕೇಂದ್ರ ಕಾಂಗ್ರೆಸ್ಸಿನ ಆಯ್ಕೆ ಸಮಿತಿಯವರಿಗೆ ನೆರವಾಗಲು ಪ್ರಾದೇಶಿಕ ಚುನಾವಣಾ ಸಮಿತಿಯವರು ಎಲ್ಲ ಜಿಲ್ಲೆಗಳಿಗೂ ಒಬ್ಬೊಬ್ಬ ಪ್ರತಿನಿಧಿಯನ್ನು ನೇಮಿಸಿರುತ್ತಾರೆ ಅವರು ಮುಂದೆ ಕೇಂದ್ರ ಸಮಿತಿಯ ಸದಸ್ಯರಾಗಿ ಬಂದಿರುವ ಶ್ರೀಮನ್ನಾರಾಯಣರವರ ಅಭಿಪ್ರಾಯವನ್ನು ಪಡೆಯಬಹುದು.

ಕೆಳಗೆ ಕಂಡ ವ್ಯಕ್ತಿ ನೇಮಕಗೊಂಡಿದ್ದಾರೆ— ಶ್ರೀಗಳಾದ ವಹಾಲಿ ಮರಿಯಪ್ಪ - [illegible] ಎಚ್ ರಾಮಯ್ಯ-ಚಿತ್ರದುರ್ಗ, ಎಂ ಗೋವಿಂದರೆಡ್ಡಿ-ತುಮಕೂರು, ಟಿ ಸಿ. ನಂಜುಂಡಸ್ವಾಮಿ ಬೆಂಗಳೂರು ಗ್ರಾಮಾಂತರ, ಕೆ ಲಕ್ಕಪ್ಪ ಬೆಂಗಳೂರು ಪೌರಸಭಾ ಪ್ರದೇಶ, ಕೆ ಜಿ. ಒಡೆಯರ್ ಮಂಡ್ಯ, ಎಂ ಮಲ್ಲೇಗೌಡ-ಮೈಸೂರು ನಗರ ಮತ್ತು ಜಿಲ್ಲೆ ಕೆ.ಎಸ್. ಸೂರ್ಯನಾರಾಯಣ ಹಾಸನ, ಎಂ ಆರ್ ಎ ಶಾಸ್ತ್ರಿ-ಚಿಕ್ಕಮಗಳೂರು, ಎಸ್ ಮುನಿರಾಜು- [illegible].

೪೬೮ ಮಂದಿ ರಾಜಕೀಯ ಸಂತ್ರಸ್ತರಿಗೆ ಜಮೀನು

ಈಗಿನ ಮೈಸೂರು ಸರ್ಕಾರದ ಅಂತಿಮ ಬಹುಮಾನ

ಬೆಂಗಳೂರು ೨೮

೪೬೮ ಮಂದಿ ರಾಜಕೀಯ ಸಂತ್ರಸ್ತರಿಗೆ ಮೈಸೂರು ಸರ್ಕಾರದವರು ತಲಾ ೪ ಎಕರೆ ತರಿ ಅಥವಾ ಬಾಗಾಯತು ಜಮೀನು ಅಥವಾ ಐದರಷ್ಟು ಖುಷ್ಕಿ ಪ್ರಮಾಣದ ಖುಷ್ಕಿ ಜಮೀನನ್ನು ಕೊಡುವಂತೆ ಆಜ್ಞೆ ಮಾಡಿರುತ್ತಾರೆ. ಈ ಆಜ್ಞೆಯನ್ನು ನೆನ್ನೆಯಿಂದ ೧೦ ದಿನಗಳಲ್ಲಿ ಜಾರಿಗೆ ತರುವಂತೆ ಸೂಚಿಸಲಾಗಿದೆ ಪಕ್ಷ ಭೇದವಿಲ್ಲದೆ ಎಲ್ಲ ಪಂಗಡಗಳ ರಾಜಕೀಯ ಸಂತ್ರಸ್ತರಿಗೂ ಇದನ್ನು ಕೊಡಲಾಗುವುದು. ಇದುವರೆಗೆ ೭೬೬ ಮಂದಿಗೆ ಜಮೀನನ್ನು ಕೊಡಲಾಗಿದೆ

ಹಂಗೇರಿ ಬಿಕ್ಕಟ್ಟಿನ ಪ್ರಶ್ನೆ ವಿಶ್ವ ಸಂಸ್ಥೆಗೆ

ಭದ್ರತಾ ಸಮಿತಿ ಸಭೆ ಸೇರಿಸಲು ತ್ರಿರಾಷ್ಟ್ರಗಳ ಸೂಚನೆ

ಹಂಗೇರಿ ಬಿಕ್ಕಟ್ಟಿನ ಪ್ರಶ್ನೆಯನ್ನು ವಿಶೇಷವಾಗಿ [illegible] ಲು ಜರೂರು ಅಧಿವೇಶನವನ್ನು ನಡೆಸಬೇಕೆಂದು ಭದ್ರತಾ ಸಮಿತಿಗೆ ಬ್ರಿಟನ್ ಅಮೆರಿಕ ಮತ್ತು ಫ್ರಾನ್ಸುಗಳು ಕೇಳಿವೆ. ಹಂಗೇರಿಯಲ್ಲಿ ರಷ್ಯದ ಸೈನ್ಯಗಳ ಕಾರ್ಯಾಚರಣೆಯನ್ನು ಕುರಿತು ಮೂರು ರಾಷ್ಟ್ರಗಳೂ ಪ್ರಜಾತಂತ್ರೀಯ ವ್ಯವಹಾರ ನಡೆಸಿ [illegible] ತೀರ್ಮಾನಕ್ಕೆ ಬಂದಿವೆ.

ನೂತನ ಮೈಸೂರು ಹೈಕೋರ್ಟ್ ಬೆಂಗಳೂರಿನಲ್ಲಿ

ಈಗಿನ ೩ ಜನ ನ್ಯಾಯಾಧೀಶರು ಮುಂದುವರಿಯುವ ಸಂಭವ

ಬೆಂಗಳೂರು ೨೮

ನವೆಂಬರ್ ೧ ರಿಂದ ನೂತನ ಪ್ರಾಂತದ ರಚನೆಯು ಜಾರಿಯಾಗುವಾಗ, 'ಬಿ' ಸಂಸ್ಥಾನದ ಹೈಕೋರ್ಟಾಗಿರುವ ಮೈಸೂರು ಹೈಕೋರ್ಟು ರದ್ದಾಗುವುದು ಅದರ ಸ್ಥಾನದಲ್ಲಿ ರಾಷ್ಟ್ರಾಧ್ಯಕ್ಷರು ಹೊಸ ಹೈಕೋರ್ಟನ್ನು ನೇಮಿಸಲಿರುವರು. ಈಗ ನ್ಯಾಯಾಧೀಶರುಗಳಾಗಿರುವ ಶ್ರೀ ಆರ್ ವೆಂಕಟರಾಮಯ್ಯ, ನಿಟ್ಟೂರು ಶ್ರೀನಿವಾಸ ರಾವ್ ಮತ್ತು ಹೆಚ್. ಹೊಂಬೇಗೌಡರು ನ್ಯಾಯಾಧೀಶರಾಗಿ ಮುಂದುವರಿಯಬಹುದೆಂದೂ, ಶ್ರೇಷ್ಠ ನ್ಯಾಯಾಧೀಶರು ಮತ್ತು ಇತರ ನ್ಯಾಯಾಧೀಶರ ನೇಮಕದ ವಿಷಯದಲ್ಲಿ ಇನ್ನೂ ಅಷ್ಟೇನು ನಿರ್ಧಾರವಾಗಿಲ್ಲವೆಂದೂ ಹೇಳಲಾಗಿದೆ. ಇನ್ನು ಒಂದೆರಡು ದಿನಗಳಲ್ಲೇ ಈ ಬಗ್ಗೆ ಆಜ್ಞೆ ಹೊರಬೀಳಲಿದೆಯೆಂದು ಗೊತ್ತಾಗಿದೆ

ಪುನರ್ರಚಿತವಾಗುವ ಬೊಂಬಾಯಿ, ಮಧ್ಯಪ್ರದೇಶ, ಪಂಜಾಬು, ಕೇರಳ, ಮೈಸೂರು ಮತ್ತು ರಾಜಸ್ಥಾನಗಳ ಹೈಕೋರ್ಟ್ ಕೇಂದ್ರಗಳನ್ನು ಗೊತ್ತುಪಡಿಸಿ ನೆನ್ನೆ ಕೇಂದ್ರ ಗೃಹ ಮಂತ್ರಿ ಶಾಖೆಯವರು ಆಜ್ಞೆ ಹೊರಡಿಸಿರುವರು. ಇದರ ಪ್ರಕಾರ, ಮೈಸೂರು ಹೈಕೋರ್ಟ್ ಬೆಂಗಳೂರಿನಲ್ಲಿರುವುದು.

ಹಂಗೇರಿಯಲ್ಲಿ ರಾಷ್ಟ್ರೀಯ ಸರ್ಕಾರದ ಸ್ಥಾಪನೆ

'ರಕ್ತಪಾತ' ನಿಲ್ಲಿಸಲು ಸರ್ಕಾರದ ಮನವಿ

ಹಂಗೇರಿಯ ಪ್ರಧಾನಿ ಇಮ್ರಿ ನಾಗಿಯವರು ನೂತನ ರಾಷ್ಟ್ರೀಯ ರಂಗದ ಸರ್ಕಾರವನ್ನು ರಚಿಸಿರುತ್ತಾರೆ. ದಂಗೆಕೋರರನ್ನು ಕೂಡಲೇ ಅಡಗಿಸಲು ಕಾರ್ಮಿಕರ ದಳಗಳ ನಿರ್ಮಾಣಕ್ಕೆ ಮಂತ್ರಿಮಂಡಲವು ನಿರ್ಧರಿಸಿರುತ್ತದೆ ನೆನ್ನೆ ಬೆಳಿಗ್ಗೆ ಸರ್ಕಾರದವರು ಪ್ರಸಾರ ಸಂದೇಶವನ್ನು, ರಕ್ತಪಾತ, ಕೊಲೆಗಳು ಮತ್ತು ವಿನಾಶ ಕೃತ್ಯಗಳನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಹಂಗೇರಿಯಲ್ಲಿ ಇದುವರೆಗೆ ಕಮ್ಯೂನಿಸ್ಟರ ನಾಯಕರಾಗಿದ್ದು ಈಗ ಪದಚ್ಯುತರಾದ ಎರ್ನೊ ಗೀರೊರವರನ್ನು ದಂಗೆಕೋರರು ಕೊಲೆ ಮಾಡಿರುವರೆಂದು ಹೇಳಲಾಗಿದೆ. ಹಂಗೇರಿಗೆ ರಷ್ಯಾ ಸೈನ್ಯಗಳು ಬಂದಿವೆಯೆಂದೂ ಹೇಳಲಾಗುತ್ತಿದೆ.

ಹಲವು ವರದಿಗಳ ಪ್ರಕಾರ ಅಲ್ಲಿ ನಡೆದ ದಂಗೆಯಲ್ಲಿ ಸಹಸ್ರಾರು ಜನರ ಕೊಲೆಯಾಗಿರುವುದೆಂದು ಗೊತ್ತಾಗಿದೆ.

ಸೇವೆಯಲ್ಲಿರುವ ಸರ್ಕಾರಿ ನೌಕರರನ್ನು ವಿವಾಹವಾಗಲು ಮಹಿಳಾ ನೌಕರರಿಗೆ ನಿಷೇಧ

ಸಂಸ್ಥಾನದ ಸರ್ಕಾರೀ ನೌಕರರು ಹೆಂಡತಿಯು ಜೀವಂತವಾಗಿರುವಾಗಲೇ, ಸರ್ಕಾರದ ಅನುಮತಿ ಪಡೆಯದೆ ಪುನರ್ವಿವಾಹ ಮಾಡಿಕೊಳ್ಳುವುದನ್ನು ನಿಷೇಧಿಸಲಾಗಿದೆಯಷ್ಟೆ. ಇದೇ ರೀತಿ ಸರ್ಕಾರದ ಮಹಿಳಾ ನೌಕರರೂ ಪೂರ್ವಭಾವಿಯಾಗಿ ಸರ್ಕಾರದ ಅನುಮತಿಯಿಲ್ಲದೆ ಪತ್ನಿಯುಳ್ಳವನಾದ ಪುರುಷನನ್ನು ವಿವಾಹವಾಗಬಾರದೆಂದು ಆಜ್ಞೆ ಹೊರಡಿಸಲಾಗಿದೆ.

ವಾರ ಭವಿಷ್ಯ

ತಾ|| ೨೯-೧೦-೫೬ರಿಂದ ೪-೧೧ ೫೬ರವರೆಗೆ

ಮೇಷ:— ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವೃಥಾ ವೈಮನಸ್ಯ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ಉದ್ಯೋಗದಲ್ಲಿ ಸಮಸ್ಯೆ.

ವೃಷಭ:— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ ವರ್ಗಾವಣೆ ಸಂಭವ.

ಮಿಥುನ:— ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ನಿರುತ್ಸಾಹ. ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ.

ಕರ್ಕ. ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಬಿಕ್ಕಟ್ಟು ಹೆಚ್ಚುವುದು. ವ್ಯಾಪಾರವ್ಯವಹಾರಗಳಲ್ಲಿ ತೊಂದರೆ. ನೌಕರಿಯಲ್ಲಿ ಸಮಸ್ಯೆ. ವೃಥಾ ವೈಮನಸ್ಯ. ಪ್ರವಾಸ ಸಂಭವ.

ಸಿಂಹ:- ಆರೋಗ್ಯ ಉತ್ತಮಗೊಳ್ಳುವುದು. ಆರ್ಥಿಕ ಪರಿಸ್ಥಿತಿ ಸುಧಾರಿಸುವುದು. ಕೈಗೊಂಡ ಕಾರ್ಯದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ

ಕನ್ಯಾ: ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಶುಭ ಕಾರ್ಯಗಳು ಜರುಗುವುವು. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ಉದ್ಯೋಗದಲ್ಲಿ ಪ್ರೋತ್ಸಾಹ

ತುಲಾ:— ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಸಾಧಾರಣ. ವ್ಯಾಪಾರವ್ಯವಹಾರಗಳಲ್ಲಿ ಅಪಜಯ. ನೌಕರಿಯಲ್ಲಿ ನಿರುತ್ಸಾಹ. ಕುಟುಂಬದಲ್ಲಿ ಅಶಾಂತಿ.

ವೃಶ್ಚಿಕ: ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವೃಥಾ ವಿವಾದ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ. ಉದ್ಯೋಗದಲ್ಲಿ ಸಮಸ್ಯೆ. ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ.

ಧನು:— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ. ವಿದ್ವಜ್ಜನರ ಪರಿಚಯ.

ಮಕರ:— ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ, ಸಮಸ್ಯೆಗಳ ಪರಿಹಾರ. ಶುಭ ಕಾರ್ಯಗಳು ಜರುಗುವುವು. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ಉದ್ಯೋಗದಲ್ಲಿ ನಿರುತ್ಸಾಹ.

ಕುಂಭ. ಆರೋಗ್ಯ ಅತೃಪ್ತಿಕರ. ಆರ್ಥಿಕ ಸ್ಥಿತಿ ಅಸಮರ್ಪಕ. ವೃಥಾ ವಿವಾದ. ಕೈಗೊಂಡ ಕಾರ್ಯ ಹಾನಿ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ನಿರುತ್ಸಾಹ. ಪ್ರವಾಸ ಸಂಭವ

ಮೀನ.- ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಶತ್ರುಗಳಿಂದ ಕಿರುಕುಳ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ಉದ್ಯೋಗದಲ್ಲಿ ಪ್ರಗತಿ ಕಮ್ಮಿ. ಆಪ್ತರಿಂದ ವಂಚನೆ.

ರಾಮಾಯಣ ವಾಚನ

ಮೈಸೂರು ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ವಿಜಯದಶಮಿ ಪ್ರಯುಕ್ತ ನಾಳೆ ರಾತ್ರಿ ೮ ಗಂಟೆಗೆ ಗಮಕ ವಿದುಷಿ. ಗೌರಮ್ಮ ನಾಗರಾಜ್‌ರವರಿಂದ ಶ್ರೀಮದ್ರಾಮಾಯಣದಲ್ಲಿ ಮುದ್ರಿಕಾ ಪ್ರದಾನದ ವಾಚನವನ್ನು ಗಮಕ ವಿದ್ವಾನ್ ಹಿರಣ್ಣಯ್ಯನವರ ಅನುವಾದದೊಡನೆ ಏರ್ಪಡಿಸಲಾಗಿದೆ.

ಗಿರಣಿ ಯಂತ್ರಕ್ಕೆ ಕೈಸಿಕ್ಕಿಕೊಂಡು ಕೈ ಕತ್ತರಿಸಲಾಯಿತು

ಶ್ರೀ ಕೃಷ್ಣರಾಜೇಂದ್ರ ಗಿರಣಿಯ ನೆಯ್ಗೆಯವನಾದ ಸಿದ್ದಯ್ಯ ಎಂಬುವನು ಮೊನ್ನೆ ರಾತ್ರಿ ಯಂತ್ರದ ಬಳಿ ಕೆಲಸ ಮಾಡುತ್ತಿದ್ದಾಗ ಅವನು ಉಟ್ಟಿದ್ದ ಪಂಚೆಯು ಯಂತ್ರದ ಬೆಲ್ಟಿಗೆ ಸಿಕ್ಕಿ ಅವನು ಎಳೆಯಲ್ಪಟ್ಟನು, ಕೈಗೆ ತೀವ್ರ ಜಖಂ ಆಗಿ ಆಸ್ಪತ್ರೆಗೆ ಸೇರಿಸಲ್ಪಟ್ಟನು. ಅಲ್ಲಿ ಅವನ ಕೈಯನ್ನು ಕತ್ತರಿಸಲಾಯಿತೆಂದು ಹೇಳಲಾಗಿದೆ

ಕೈಸಾಲ ಪತ್ರ ಹರಿದುದಕ್ಕಾಗಿ ಸಜಾ

ಮೈಸೂರು ೨೮

ನಂಜನಗೂಡಿನಲ್ಲಿರುವ ಶ್ರೀ ಅಳಲೆ ರಂಗರಾಯರಿಗೆ ಮಲ್ಲಾಪುರದ ಮಾದಪ್ಪ ಉರುಫ್ ಚಿನ್ನಪ್ಪ ಎಂಬುವನು ೮೦೦ ರೂ. ಗಳಿಗೆ ಒಂದು ಕೈಸಾಲ ಪತ್ರವನ್ನು ಬರೆದುಕೊಟ್ಟನು. ಕಳೆದ ಫೆಬ್ರವರಿಯಲ್ಲಿ ಅದಕ್ಕೆ ಬಡ್ಡಿಯನ್ನು ಪಾವತಿ ಮಾಡಿ, ವಸೂಲಿ ಕಟ್ಟುವುದಾಗಿ ಹೇಳಿ ಪತ್ರವನ್ನು ಹರಿದುಹಾಕಿದುದಕ್ಕಾಗಿ ಶ್ರೀ ರಂಗರಾಯರು ಪೊಲೀಸರಿಗೆ ದೂರು ಕೊಟ್ಟಿದ್ದರು. ಈ ಬಗ್ಗೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಲ್ಪಟ್ಟಿದ್ದನು. ಇಲ್ಲಿನ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಅಬ್ದುಲ್ ಮಜೀದ್‌ರವರು ಆಪಾದಿತನಿಗೆ ನೆನ್ನೆ ೧೦ ತಿಂಗಳು ಸಾದಾ ಸಜಾ ಮತ್ತು ೨೦೦ ರೂ. ದಂಡವನ್ನು ವಿಧಿಸಿದರು. ದಂಡ ಕೊಡಲು ತಪ್ಪಿದರೆ ಮತ್ತೆ ಎರಡು ತಿಂಗಳು ಸಾದಾ ಸಜಾ ವಿಧಿಸಲಾಗಿದೆ

ಫುಟ್‌ಬಾಲ್ ಪಂದ್ಯ

ಸುಬ್ಬಕೃಷ್ಣಯ್ಯ ಸ್ಮಾರಕ 'ಬಿ' ಡಿವಿಜನ್ ಫುಟ್‌ಬಾಲ್ ಫೈನಲ್ ಪಂದ್ಯದಲ್ಲಿ ನೆನ್ನೆ ಚಾಂಪಿಯನ್ಸ್ ಮತ್ತು ಜಯಭೀಮ ಟೀಮುಗಳಿಗೆ ನಡೆದು ಚಾಂಪಿಯನ್ಸ್ ಟೀಮಿನವರು ೧-೦ ಗೋಲಿನಿಂದ ಜಯಗಳಿಸಿದರು.

ಆಯುರ್ವೇದಕ್ಕಾಗಿ ಪ್ರತ್ಯೇಕ ಇಲಾಖೆ ಏರ್ಪಡಬೇಕು

ನೂತನವಾಗಿ ರಚಿತವಾಗಲಿರುವ ವಿಶಾಲ ಮೈಸೂರಿನಲ್ಲಿ ಸುಮಾರು ಐನೂರು ಸರ್ಕಾರೀ ಆಯುರ್ವೇದ ಆಸ್ಪತ್ರೆಗಳಾಗುವುವು. ಈ ಆಸ್ಪತ್ರೆಗಳು ಸುವ್ಯವಸ್ಥೆಯಿಂದ ನಡೆಯಲು ಪ್ರತ್ಯೇಕ ಆಯುರ್ವೇದ ಇಲಾಖೆಯಿದ್ದು, ಅದಕ್ಕೆ ಒಬ್ಬರು ಇಲಾಖಾ ಮುಖ್ಯಾಧಿಕಾರಿಗಳು ಅಗತ್ಯ ಆದುದರಿಂದ ಆಯುರ್ವೇದ ಇಲಾಖೆಗೆ ಒಬ್ಬ ಪ್ರತ್ಯೇಕ ಅಧಿಕಾರಿಗಳನ್ನು ಈ ಸಮಯದಲ್ಲಿ ನೇಮಿಸಬೇಕು-ಎಂದು ಆಯುರ್ವೇದ ಮತ್ತು ಯುನಾನಿ ಕಾಲೇಜ್ ಪದವೀಧರರ ಸಂಘದ ಕಾರ್ಯದರ್ಶಿ ಡಾ|| ಬಿ. ಆರ್. ಕಾಮಾಚಾರ್ಯರು ಪ್ರಾರ್ಥಿಸುತ್ತಾರೆ.

ಭಾರತಕ್ಕೆ ಚೀನಾ ಪಾರ್ಲಿಮೆಂಟರಿ ನಿಯೋಗ

ಲೋಕಸಭಾಧ್ಯಕ್ಷ ಶ್ರೀ ಎಂ. ಅನಂತಶಯನಂ ಅಯ್ಯಂಗಾರ್ಯರ ನಾಯಕತ್ವದಲ್ಲಿ ೩ ವಾರಗಳ ಚೀನಾ ಪ್ರವಾಸವನ್ನು ಕೈಗೊಂಡಿದ್ದ ಭಾರತೀಯ ಪಾರ್ಲಿಮೆಂಟ್ ಸದಸ್ಯರ ನಿಯೋಗವು ಕಳೆದ ವಾರ ಸ್ವದೇಶಕ್ಕೆ ಹಿಂದಿರುಗಿತು. ಭಾರತಕ್ಕೆ ತಮ್ಮ ದೇಶದ ಪಾರ್ಲಿಮೆಂಟ್ ಸದಸ್ಯರ ನಿಯೋಗವೊಂದನ್ನು ಕಳುಹಿಸುವಂತೆ ಇತ್ತ ಆಹ್ವಾನವನ್ನು ಚೀನಾ ಸರ್ಕಾರದವರು ಅಂಗೀಕರಿಸಿರುವರೆಂದೂ, ಭಾರತದಲ್ಲಿ ಮಹಾ ಚುನಾವಣೆಗಳಾದನಂತರ ಚೀನಾ ಪಾರ್ಲಿಮೆಂಟಿನ ಅಧ್ಯಕ್ಷ ಲಿ ಯು ಸಾವ್ ಚಿಯವರ ನಾಯಕತ್ವದಲ್ಲಿ ನಿಯೋಗವೊಂದು ಭಾರತಕ್ಕೆ ಆಗಮಿಸಲಿದೆಯೆಂದೂ ಶ್ರೀ ಅನಂತಶಯನಂ ಅಯ್ಯಂಗಾರ್ಯರು ತಿಳಿಸಿರುವರು.

ನೆಹರೂರವರು ರಾಜಕೀಯದಿಂದ ನಿವೃತ್ತರಾಗುವುದಿಲ್ಲ

ಭಾರತದಲ್ಲಿ ಕಾಂಗ್ರೆಸ್ಸಿನ ಯಶಸ್ಸಿಗೆ ವ್ಯಕ್ತಿಗಳ ಪ್ರಭಾವವೇ ಕಾರಣವೆಂಬುದನ್ನು ತಾವು ಒಪ್ಪುವುದಿಲ್ಲವೆಂದೂ, ಆದರೂ ತಾವೂ ಮತ್ತು ತಮ್ಮ ಇತರ ಗೆಳೆಯರೂ ೩೦-೪೦ ವರ್ಷಗಳಿಂದ ಪ್ರಭಾವವನ್ನು ಬೀರುತ್ತಾ, ಕ್ರಾಂತಿ ಕಾಲದ ಅವಶೇಷಗಳಾಗಿ ಮುಂದುವರಿದುಕೊಂಡು ಬಂದಿರುವುದಾಗಿಯೂ ಪ್ರಧಾನಿ ಪಂಡಿತ ನೆಹರೂರವರು ಪತ್ರಿಕಾ ಸಮ್ಮೇಳನವೊಂದರಲ್ಲಿ ಹೇಳಿ ಈ ತಮ್ಮ ಗುಂಪು ಅಳಿದ ಮೇಲೆ ಮುಂದೇನಾಗುವುದೆಂಬುದು ತನಗೆ ಗೊತ್ತಿಲ್ಲವೆಂದೂ, ಇಂತಹ ಪರಿಸ್ಥಿತಿಯಲ್ಲಿ ತಾವು ರಾಜಕೀಯದಿಂದ ನಿವೃತ್ತಿಹೊಂದಬೇಕೆಂಬ ಸಲಹೆಯನ್ನು ಅಂಗೀಕರಿಸಲು ಸಾಧ್ಯವಿಲ್ಲವೆಂದೂ ತಿಳಿಸಿರುವರು.

ಜಾರ್ಡಾನ ದೊರೆಯ ಕೊಲೆ ಸುದ್ದಿಯಿಂದ ಕೋಲಾಹಲ

ಜಾರ್ಡಾನ್ ದೊರೆ ಹುಸೇನರವರು ಕೊಲೆ ಮಾಡಲ್ಪಟ್ಟರೆಂದು ಫ್ರೆಂಚ್ ವಿದೇಶಾಂಗ ಶಾಖೆಯು ತಿಳಿಸಿರುವುದಾಗಿ ಲಂಡನ್ನಿನಲ್ಲಿ ಅಮೆರಿಕಾ ವಾರ್ತಾ ಸಂಸ್ಥೆಗಳು ಪ್ರಕಟಿಸಿದ ಸುದ್ದಿಯಿಂದ ಎಲ್ಲ [illegible] ಗಳ ಬೆಲೆಯಲ್ಲಿ ಬಹಳ ಮಟ್ಟಿನ ವ್ಯತ್ಯಾಸ ತಲೆದೋರಿತು. ಲಂಡನ್ನಿನ ವೃತ್ತಪತ್ರಿಕೆಗಳು ಹುಸೇನರ ಕೊಲೆಯ ವಿಷಯವನ್ನು ತಲೆ ಬರಹದ ಸುದ್ದಿಯಾಗಿ ಪ್ರಕಟಿಸಿದ್ದಲ್ಲದೆ ಒಂದು ಪತ್ರಿಕೆಯು ಹುಸೇನರ ಜೀವನ ಚರಿತ್ರೆಯನ್ನು ಚಿತ್ರಗಳ ಸಹಿತ ಮುದ್ರಿಸಿದ್ದಿತು. ಸ್ವಲ್ಪ ಹೊತ್ತಿನಲ್ಲೇ ಕೊಲೆಯ ಸುದ್ದಿಯು ಸರಿಯಲ್ಲವೆಂದು ವಾರ್ತೆಯು ಬಂದಿತು ದೊರೆ ಹುಸೇನರ ಕಿವಿಗೆ ಈ ಸುದ್ದಿ ಮುಟ್ಟಿದಾಗ ಅವರು ವಿನೋದವಾಗಿ ಮಾತನಾಡುತ್ತಾ ತಾವು ಕೊಲೆಯಾದ ಬಗೆಯನ್ನು ತಿಳಿಯಲು ಕುತೂಹಲರಾಗಿರುವುದಾಗಿ ತಿಳಿಸಿದರು.

ಕೇರಳದ ಆರಂಭೋತ್ಸವದಂದು ಜನಿಸುವ ಶಿಶುವಿಗೆ ಬಹುಮಾನ

ಇದೇ ೧ನೇ ತಾರೀಖು ಮಧ್ಯ ರಾತ್ರಿಯ ನಂತರ ಎರ್ನಾಕುಲಂ ನಗರದ ಪೌರಸಭಾ ಸರಹದ್ದಿನಲ್ಲಿ ಹುಟ್ಟುವ ಮೊದಲನೆಯ ಶಿಶುವಿಗೆ ಹೊಸ ಕೇರಳ ಪ್ರಾಂತ್ಯದ ಪ್ರಾರಂಭೋತ್ಸವ ಸಮಿತಿಯವರು ಒಂದು ಸರವನ್ನು ಮತ್ತು ಉಡುಪನ್ನು ಬಹುಮಾನವಾಗಿ ಕೊಡಲಿರುವರೆಂದೂ. ಅವುಗಳನ್ನು ಅಲ್ಲಿನ ಪ್ರಮುಖರೊಬ್ಬರು ದಾನವಾಗಿ ಕೊಡಲು ಮುಂದೆಬಂದಿರುವರೆಂದೂ ವರದಿಯಾಗಿದೆ. ಶಿಶುವು ಹೆಣ್ಣಾದರೆ ಕೇರಳ ಕುಮಾರಿಯೆಂದೂ, ಗಂಡಾದರೆ ಶ್ರೀ ಕೇರಳ ಎಂದೂ ನಾಮಕರಣ ಮಾಡಲಾಗುವುದೆಂದು ಹೇಳಲಾಗಿದೆ

ಗಣರಾಜ್ಯವಾಗಿ ದಕ್ಷಿಣ ವಿಯಟ್ನಾಮಿನ ಘೋಷಣೆ

ದಕ್ಷಿಣ ವಿಯಟ್ನಾಂ ದೇಶವು ಮೊನ್ನೆಯಿಂದ ಗಣರಾಜ್ಯವಾಯಿತು. ದೀನ್‌ಡೀಮ್‌ರವರು ಅದರ ಪ್ರಥಮ ಅಧ್ಯಕ್ಷರಾಗಿ ಮೊನ್ನೆ ಒಂದು ಲಕ್ಷ ಜನರ ಮುಂದೆ ಪ್ರಮಾಣವಚನ ಸ್ವೀಕರಿಸಿ, ರಾಷ್ಟ್ರದ ಹೊಸ ರಾಜ್ಯಾಂಗವನ್ನು ಘೋಷಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೧೫ ಎಂ. ಎಲ್. ಶಿವಯ್ಯ-ದೇವರ ನಾಮಗಳು. ೮-೧೫ ಉದಯ ಸಂಗೀತ. ಮಧ್ಯಾಹ್ನ ೧೨ ಎಂ ಎಲ್. ಶಿವಯ್ಯ-ಸಂಗೀತ. ೧೨-೩೦ ಮತ್ತು ಸಂಜೆ ೫-೩೦ ಎಸ್. ರಾಜಲಕ್ಷ್ಮೀ-ವೀಣೆ. ೧ ಗಾನ ಮಂಜರಿ. ೬ ೧೫ ಪ್ರೌಢಶಾಲೆಗಳಿಗಾಗಿ. ೭-೦೦ ಜನಪದ ಗೀತೆಗಳು ೭-೩೦ ಹಿಂದಿ ಗೀತೆ. ೮-೧೫ ಕ್ರೀಡಾ ವಿಮರ್ಶೆ. ೮-೩೦ ದೆಹಲಿ ಪ್ರಸಾರ. ೯-೩೦ ಸಂಗೀತ ಸಮ್ಮೇಳನ-ಹಿಂದೂಸ್ಥಾನಿ ಸಂಗೀತ.

ಮನೆ ಭೋಗ್ಯಕ್ಕೆ ಬೇಕಾಗಿದೆ.

ಸ್ವಂತ ವಾಸಕ್ಕೆ, ಮೇನ್ ರಸ್ತೆಯಲ್ಲಿರುವ ಮನೆಯೊಂದು ಶುದ್ಧ ಭೋಗ್ಯಕ್ಕೆ ಸುಮಾರು ೫,೦೦೦ ದಿಂದ ೭,೫೦೦ ರೂ.ಗಳಲ್ಲಿ ಬೇಕಾಗಿದೆ. ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ:-

ಕೆ. ಕೊಡ್ಡಸುಬ್ಬಯ್ಯ,
ಅಡ್ವೊಕೇಟ್, ಮೋಹಿನಿ ಬಿಲ್ಡಿಂಗ್ಸ್,
ಸಂತೆಪೇಟೆ, ಮೈಸೂರು

LATEST C.T.C. PUBLICATION
—ಇಂಟರ್‌ಮೀಡಿಯೆಟ್ ವಿದ್ಯಾರ್ಥಿಗಳಿಗಾಗಿ—
" ವಿರಾಟ ಪರ್ವ ಸಂಗ್ರಹ "
ಪ್ರಶ್ನೋತ್ತರಗಳು-ಭಾವಾನುವಾದ ಮತ್ತು
ಟಿಪ್ಪಣಿಗಳೊಡನೆ
ಬೆಲೆ — 0—12—0
— Publishers —
CITY TUTORIAL COLLEGE
Old Agrahar, Mysore
Agents—M/s J. [illegible] & Sons

Edited, Printed and Published by
A. R. Nagarajan at Sadhvi Press
D. Subbiah Road, Mysore

ದಾವಣಗೆರೆಯಲ್ಲಿ ನೇತ್ರ ಸಂಶೋಧನಾಲಯ-ಕಣ್ಣುಗಳ ಬ್ಯಾಂಕ್

ನೇತ್ರ ವೈದ್ಯ ಡಾ|| ಎಂ.ಸಿ. ಮೋದಿಯವರು ಕಳೆದ ೧೮ ರಿಂದ ದಾವಣಗೆರೆಯಲ್ಲಿ ನಡೆಸುತ್ತಿದ್ದ ಉಚಿತ ನೇತ್ರ ಚಿಕಿತ್ಸಾ ಕೇಂದ್ರವು ಮೊನ್ನೆ ಮುಕ್ತಾಯವಾಯಿತು. ದಾವಣಗೆರೆಯಲ್ಲಿ ಒಂದು ಶಿಕ್ಷಣ ಶಿಬಿರ, ಸಂಶೋಧನಾಲಯ ಮತ್ತು ಕಣ್ಣುಗಳ ಬ್ಯಾಂಕನ್ನು ಶೀಘ್ರದಲ್ಲೇ ತಾವು ಆರಂಭಿಸಲಿರುವುದಾಗಿ ಡಾ|| ಮೋದಿಯವರು ತಿಳಿಸಿದರು. ಪದವೀಧರೋತ್ತರ ನೇತ್ರ ಶಸ್ತ್ರಚಿಕಿತ್ಸಾ ಶಿಕ್ಷಣವನ್ನು ಆರಂಭಿಸುವುದಾಗಿಯೂ, ೧೦೦೦ [illegible] ಸಿಗರಿಗೆಲ್ಲ ಕಣ್ಣು ಶಸ್ತ್ರಕ್ರಿಯೆಯನ್ನು ನೆರವೇರಿಸಲಾಗುವುದೆಂದೂ ಅವರು ಹೇಳಿದರು. ವಿದ್ಯಾರ್ಥಿಗಳಿಗೆ ತರಬೇತಿ ಶಿಬಿರಗಳಲ್ಲಿ ಪಾಠಪ್ರವಚನಗಳನ್ನು, ಶಸ್ತ್ರ ಚಿಕಿತ್ಸಾ ಕೇಂದ್ರದಲ್ಲಿ ಪ್ರಾಯೋಗಿಕ ಶಿಕ್ಷಣವನ್ನು ಕೊಡಲಾಗುವುದೆಂದೂ, ಶಿಬಿರ ಕೇಂದ್ರಗಳನ್ನು ಗುಡಿಸಿಲುಗಳಲ್ಲಿ ನಡೆಸಲು ಏರ್ಪಡಿಸಲಿರುವುದಾಗಿಯೂ ಅವರು ತಿಳಿಸಿದರು.

ಡಿಸೆಂಬರಿನಲ್ಲಿ ಶ್ರೀ ಪ್ರಕಾಶರಿಂದ ನೂತನ ಅಧಿಕಾರದ ಸ್ವೀಕಾರ

ನೂತನ ದ್ವಿಭಾಷಾ ಬೊಂಬಾಯಿ ಪ್ರಾಂತ್ಯ ಗವರ್ನರಾಗಿ ನೇಮಿಸಲ್ಪಟ್ಟಿರುವ, ಮದ್ರಾಸ್ ಗವರ್ನರ್ ಶ್ರೀ ಪ್ರಕಾಶರವರು ತಮಗೆ ಮದ್ರಾಸಿನಲ್ಲಿ ಇನ್ನೂ ಹಲವಾರು ಜರೂರಾದ ಮತ್ತು ತುರ್ತು ಕೆಲಸಗಳಿರುವುದರಿಂದ ನವೆಂಬರ್ ತಿಂಗಳ ಅಂತ್ಯದವರೆಗೂ ತಾವು ಮದ್ರಾಸಿನ ಗವರ್ನರಾಗಿಯೇ ಇದ್ದು, ಡಿಸೆಂಬರ್ ಮೊದಲನೇ ವಾರದಲ್ಲಿ ನೂತನ ಹುದ್ದೆಯನ್ನು ಸ್ವೀಕರಿಸುವುದಾಗಿ ತಿಳಿಸುತ್ತಾರೆ.

ಚೀನಾ ಪ್ರಯಾಣಿಕರ ಹೊಟ್ಟೆಯಲ್ಲಿ ಕಳ್ಳ ರವಾನೆ ಚಿನ್ನ

ಕಳೆದ ೩ನೇ ತಾರೀಖು ದೂರ ಪೂರ್ವದಿಂದ ವ್ಯಾಪಾರ ಹಡಗೊಂದರಲ್ಲಿ ಕಲ್ಕತ್ತೆಗೆ ಆಗಮಿಸಿದ ೭ ಜನ ಚೀನಾ ಪ್ರಯಾಣಿಕರು ಚಿನ್ನವನ್ನು ರವಾನಿಸುತ್ತಿರುವರೆಂದು ಸುಂಕದ ಅಧಿಕಾರಿಗೆ ಅನುಮಾನ ಬಂದು ಅವರನ್ನು ಎಕ್ಸ್‌ರೇ ಮೂಲಕ ಪರೀಕ್ಷಿಸಲಾಗಿ, ೩೦ ಸಾವಿರ ರೂ. ಬೆಲೆ ಬಾಳುವ ೪೮ ಚಿನ್ನದ ಗಟ್ಟಿಗಳು ಅವರ ಹೊಟ್ಟೆಯ ಹಿಂಭಾಗದಲ್ಲಿದ್ದುದು ಪತ್ತೆಯಾಯಿತು. ಅವರ ಮೇಲೆ ಮೊಕದ್ದಮೆಗಳನ್ನು ಹೂಡಲಾಗಿದೆ

ಕೋಲಾರ ಜಿಲ್ಲೆಯಲ್ಲಿ ೩೦ ಕೆರೆಗಳಿಗೆ ನಷ್ಟ

ಇತ್ತೀಚೆಗೆ ಉಂಟಾದ ಅತಿವೃಷ್ಟಿಯಿಂದ ಕೋಲಾರ ಜಿಲ್ಲೆಯ ಬಂಗಾರಪೇಟೆ, ಚಿಂತಾಮಣಿ, ಮಾಲೂರು, ಕೋಲಾರ ಮತ್ತು ಶಿಡ್ಲಘಟ್ಟ ತಾಲ್ಲೂಕುಗಳಲ್ಲಿ ೩೦ ಸಣ್ಣ ಮತ್ತು ದೊಡ್ಡ ಕೆರೆಗಳು ಒಡೆದುಹೋಗಿವೆಯೆಂದೂ, ಅವುಗಳ ದುರಸ್ತಿಗೆ ೫ ಲಕ್ಷ ರೂ. ಬೇಕಾಗುವುದೆಂದೂ ಗೊತ್ತಾಗಿದೆ.

ಶ್ರೀ ಬಾಬಾ ಜನರಲ್ ಸ್ಟೋರ್ಸ್
ನಲ್ಲಿ ಅಂಗಡಿ, ದಿವಾನ್ಸ್ ರೋಡ್, ಮೈಸೂರು
ಮಾಮೂಲಿನಂತೆ ದೀಪಾವಳಿ ಹಬ್ಬಕ್ಕಾಗಿ
ರಹೀವಾರಿ ಪಟಾಕಿ, ಬಾಣಬಿರುಸು ಮು
ಮವನ್ನು ಮಾರಲಾಗುತ್ತೆ. ಗಿರಾಕಿಗಳ ಸಹ
ಕಾರವನ್ನು ಕೋರಲಾಗಿದೆ

ಶುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮ
ನೀಲಗಿರಿ ಬಟರ್
ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗು
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ
೬ ಸುಬ್ಬಯ್ಯ ರೋಡ್, ಮೈಸೂರು
(ನಮ್ಮ ಅಂಗಡಿಯ ಶಾಖೆಯನ್ನು ಬೇರೆ
ಎಲ್ಲೂ ತೆರೆದಿಲ್ಲ)

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿ ಪ್ರತಿ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. [illegible]
ಶ್ರೀ ರಾಮೇಶ್ವರ [illegible] ರಸ್ತೆ,
ಬೆಂಗಳೂರು -2

ಂಪುಟ : ೩೩] SADHVI : MONDAY 29—10—1956 ಮೈಸೂರು : ಸೋಮವಾರ ೨೯—೧೦—೧೯೫೬ [ಸಂಚಿಕೆ : ೮೭

ಫ್ರೆಂಚರ ವಿರುದ್ಧವಾಗಿ ಅರಬ್ ರಾಷ್ಟ್ರಗಳಲ್ಲಿ ಪ್ರದರ್ಶನ

ಅರಬ್ ರಾಜ್ಯಗಳಲ್ಲೆಲ್ಲಾ ಸಾರ್ವತ್ರಿಕ ಮುಷ್ಕರ

ಅಲ್ಜೀರಿಯದಲ್ಲಿ ಫ್ರೆಂಚರ ನೀತಿಗಾಗಿ ಪ್ರತಿಭಟನೆ

ಅಲ್ಜೀರಿಯದಲ್ಲಿ ಫ್ರೆಂಚರ ನೀತಿಯನ್ನು ಪ್ರತಿ ಸಲು ಇಡೀ ಅರಬ್ ದೇಶಗಳಲ್ಲೆಲ್ಲಾ ನಿನ್ನೆ ರ್ವತ್ರಿಕ ಮುಷ್ಕರವು ನಡೆದು, ಸರ್ಕಾರಿ ಕ ರಿಗಳು, ಅಂಗಡಿ ಮುಂಗಟ್ಟುಗಳು, ವಿಮಾನ ್ದಾಣಗಳಲ್ಲೆಲ್ಲಾ ಕೆಲಸ ನಿಂತುಹೋಯಿತು. ಬನಾನಿನಲ್ಲಿ ಸಹಸ್ರಾರು ಜನರು ನಾನಾ ನಗ ಗಳಲ್ಲಿ ಪ್ರದರ್ಶನ ನಡೆಸಿದರು ಫ್ರಾನ್ಸಿನ ಮೇ ಆರ್ಥಿಕ ಮತ್ತು ರಾಜಕೀಯ ಬಹಿಷ್ಕಾರ ಕಲು ಅವರುಗಳು ಘೋಷಿಸಿದರು. ಅಲ್ಲಿನ ಜಧಾನಿ ಅಮ್ಮಾನಿನಲ್ಲಿರುವ ಫ್ರೆಂಚರ ರಾಯ ರಿಯವರ ನಿವಾಸದ ಮೇಲೆ ಕಲ್ಲು ಗುಂಡುಗ ನ್ನು ಎಸೆಯಲಾಯಿತು. ಆದರೆ ಯಾರಿಗೂ ಯವಾಗಲಿಲ್ಲ. ಜನರು ಖಡ್ಗ, ಚಾಕು, ದೊ ಮತ್ತು ಕಾಡುಗೋಲುಗಳನ್ನು ಝಳಪಿಸಿ "ಫ್ರೆಂಚರು ಸಾಯಲಿ" ಎಂದು ಕೂಗು ದ್ದರು.

ಜರೂಸಲೆಮ್ಮಿನಲ್ಲಿ ಫ್ರೆಂಚರ ಉಪ ರಾಯಭಾ ಕಛೇರಿಗೆ ಬೆಂಕಿ ಹಚ್ಚಲಾಯಿತು. ಪೋಲೀ ಮತ್ತು ಮಿಲಿಟರಿಯವರು ಗುಂಡು ಹಾರಿ ರು ಅನೇಕರು ಮಡಿದರು.

ಉತ್ತರ ಅಲ್ಜೀರಿಯದಲ್ಲಿ ಮುಸಲ್ಮಾನರು ಪೂ ಹರತಾಳ ನಡೆಸಿದರು. ಕೈರೊವಿನಲ್ಲೂ ಕೆ ವು ನಿಂತಿತ್ತು.

ಲೋಕಸೇವಾನಿರತ ಬಳೆ ಸಿದ್ದಲಿಂಗಶೆಟ್ಟರ ನಿಧನ

ಷ್ಣರಾಜನಗರದ ಪ್ರಮುಖ ನಿವಾಸಿಗಳಾದ ಕಸೇವಾನಿರತ ಬಳೆ ಸಿದ್ದಲಿಂಗಶೆಟ್ಟರು ನಿನ್ನೆ ಧ್ಯಾಹ್ನ ತಮ್ಮ ೬೯ನೇ ವಯಸ್ಸಿನಲ್ಲಿ ನಿಧನ ಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ತರು ಮೈಸೂರು ಪ್ರಜಾಪ್ರತಿನಿಧಿ ಸಭೆ ತ್ತು ಜಿಲ್ಲಾಬೋರ್ಡುಗಳ ಸದಸ್ಯರಾಗಿದ್ದರು ತ್ತು ಅನೇಕ ದಾನಧರ್ಮ ಕಾರ್ಯಗಳನ್ನು ದ್ದರು. ಇವರ ಸೇವೆಯನ್ನುಮೆಚ್ಚಿ ಶ್ರೀಮನ್ ರಾಜರು ಇವರಿಗೆ ಲೋಕಸೇವಾನಿರತ ಬಿರುದನ್ನು ದಯಪಾಲಿಸಿದ್ದರು. ಮೃತರ ಕ್ಕೆ ಶಾಂತಿಯನ್ನು ಕೋರಿ ಅವರ ಬಂಧುವ ನಮ್ಮ ಹೃತ್ಪೂರ್ವಕ ಅನುತಾಪವನ್ನು ಸುತ್ತೇವೆ.

ಳೂರು ರೇಡಿಯೊ ನಾಳೆ ಕಾರ್ಯಕ್ರಮ

ಗ್ಗೆ ೭-೧೫ ಮತ್ತು ೮-೧೫ ಎಂ ಸೀತಾದೇವಿ. ದೇವರನಾಮಗಳು ೭-೩೦ ವಿಚಾರ. ಮಧ್ಯಾಹ್ನ ೧೨ ಪಿ. ವೆಂಕಟರಾ ಪಿಟೀಲು. ೧೨-೩೦ ರಿಕಾರ್ಡು ೧೨-೪೫ ವಿಚಾರ ೧ ೫೦ ಕ್ಲಾರಿಯೊನೆಟ್ ೩-೧೫ ಳಿಗಳಿಗಾಗಿ. ಸಂಜೆ ೫-೩೦ ಎಂ ಎಸ್ ಳ್ಳಿ ಅಯ್ಯಂಗಾರ್-ಸಂಗೀತ ೭-೦೦ ವಿ ರ್ತ ವಿಮರ್ಶೆ. ೮ ಸಂಗೀತ ಸಮ್ಮೇಳನ ರ್. ಬಾಲಸುಬ್ರಹ್ಮಣ್ಯಂ : ಸಂಗೀತ, ರಿವರ್ತನ. ೯-೩೦ ಸಂಗೀತ ಸಮ್ಮೇಳನ ರ್. ಮಹಾಲಿಂಗಂ : ಕೊಳಲು

ಹಂಗೆರಿಯಿಂದ ರಷ್ಯಾ ಸೇನೆಗಳ ವಾಪಸ್

ಹೋರಾಟ ನಿಲ್ಲಿಸಲು ಹಂಗೆರಿ ಸೈನ್ಯಕ್ಕೆ ಪ್ರಧಾನಿಯವರ ಸೂಚನೆ

ಬುಡಾಪೆಸ್ಟಿನಿಂದ ರಷ್ಯದ ಸೈನ್ಯಗಳನ್ನು ಕೂಡಲೇ ವಾಪಸು ಕರೆಸಿಕೊಳ್ಳಲಾಗುವುದೆಂದು ಹಂಗೆರಿಯ ಪ್ರಧಾನಿ ಇಮ್ರಿ ನಾಗಿಯವರು ತಿಳಿಸಿದ್ದಾರೆ. ಈ ಸೈನ್ಯಗಳು ರುಮೇನಿಯಾ ಮತ್ತು ಉಕ್ರೇನುಗಳಿಂದ ಹಂಗೆರಿಗೆ ಬಂದಿದ್ದುವು. ಅವನ್ನು ಎದುರಿಸುವುದಕ್ಕಾಗಿ ಹಂಗೆರಿಯ ದಂಗೆಕೋರರು ಬುಡಾಪೆಸ್ಟಿನ ಮೇಲೆ ನುಗ್ಗಲು ಯೋಚಿಸುತ್ತಿದ್ದುದಾಗಿ ಹೇಳಲಾಗಿದೆ.

ರಷ್ಯದ ಸೈನ್ಯಗಳು ಹಿಂದಿರುಗುವ ಬಗ್ಗೆ ಪ್ರಧಾನಿ ನಾಗಿ ಮತ್ತು ರಷ್ಯಾ ದಳಪತಿಗಳಿಗೆ ಒಪ್ಪಂದವಾಗಿದೆ. ದಂಗೆಕೋರರ ಮೇಲೆ ಗುಂಡು ಹಾರಿಸುವುದನ್ನು ನಿಲ್ಲಿಸುವಂತೆ ನಾಗಿಯವರು ಸರ್ಕಾರಿ ಸೈನ್ಯಗಳಿಗೆ ಆಜ್ಞೆ ಮಾಡಿದ್ದಾರೆ. ರಾಜಧಾನಿಯಲ್ಲಿ ಹೋರಾಟವು ನಿಂತಿದೆ.

ಇದುವರೆಗೆ ಹೋರಾಟದಲ್ಲಿ ೨,೫೦೦ ಮಂದಿಗಳಿಗೆ ಗಾಯವಾಗಿ ೩೫೦ ಜನರು ಮಡಿದರೆಂದು ಸರ್ಕಾರಿ ರೇಡಿಯೊವು ವರದಿ ಮಾಡಿದೆ.

ಹಂಗೆರಿಯ ಪಶ್ಚಿಮ ಪ್ರಾಂತಗಳು ದಂಗೆಕಾರರ ಕೈಯಲ್ಲಿವೆ. ವಿಜಯವು ತಮ್ಮದೆಂದು ಅವರು ಹೇಳಿದ್ದಾರೆ. ಜೆಕೊಸ್ಲೊವೇಕಿಯಾ ಮತ್ತು ರುಮೇನಿಯಾಗಳಿಂದ ಹಂಗೆರಿಗೆ ೩೫೦ ಟ್ಯಾಂಕುಗಳು ಬರಲಿರುವುದಾಗಿ ಹೇಳಲಾಗುತ್ತಿದೆ.

ಹಂಗೆರಿಯ ರಾಷ್ಟ್ರೀಯ ಫುಟ್‌ಬಾಲ್ ಟೀಮಿನ ಕ್ಯಾಪ್ಟನ್ ಮೇಜರ್ ಫೆರೆಂಕ್ ಪುಸ್ಕಾಸ್ ಎಂಬುವವನನ್ನು ಗುಂಡು ಹಾರಿಸಿ ಕೊಲ್ಲಲಾಗಿದೆ. ಅತನು ರಷ್ಯಾ ಸೈನಿಕರ ವಿರುದ್ಧ ಹೋರಾಟದಲ್ಲಿ ಭಾಗವಹಿಸಿದ್ದನು.

ವಿವಾಹ ಮಹೋತ್ಸವಗಳು

ರಾಜಧಾನಿಯ ಬ್ಯಾಂಕರೂ, ಜವಾಹಿರಿ ವರ್ತಕರೂ, ಆದ ಶ್ರೀ ಎ. ಎಸ್. ಭಾಸ್ಕರಶೆಟ್ಟರು ತಮ್ಮ ಕುಮಾರ ಶ್ರೀ ಗೋವಿಂದಶೆಟ್ಟರಿಗೆ ನಗರದ ಜವಳಿ ವರ್ತಕರಾದ ಶ್ರೀ ಎ. ರಾಮಶೆಟ್ಟರ ಕುಮಾರಿ ಸೌ|| ಸತ್ಯಭಾಮಾರವರನ್ನು ತಂದುಕೊಂಡು ನಿನ್ನೆ ವಿವಾಹವನ್ನು ನೆರವೇರಿಸಿದರು

ಶ್ರೀ ಎ. ಆರ್. ವೆಂಕಟೇಶ ಶ್ರೇಷ್ಠಿಯವರ ಪುತ್ರರಾದ ಶ್ರೀ ನೀಲಕಂಠಶ್ರೇಷ್ಠಿಯವರು ತಮ್ಮ ಕುಮಾರಿ ಸೌ|| ಅನ್ನಪೂರ್ಣಮ್ಮನನ್ನು ಕುಣಿಗಲಿನಲ್ಲಿರುವ ಯಲ್ಲೂರು ವೆಂಕಟೇಶಯ್ಯನವರ ಸಹೋದರ ಶ್ರೀ ವಿ. ಎಲ್. ವೆಂಕಟಸುಬ್ಬಯ್ಯ ಶ್ರೇಷ್ಠಿಯವರಿಗೆ ಕೊಟ್ಟು ನಿನ್ನೆ ವಿವಾಹವನ್ನು ಜರುಗಿಸಿದರು

ಚಾಮರಾಜನಗರ ತಾಲ್ಲೋಕು ಗಣಿಗನೂರು ಗ್ರಾಮಭೋಗಿಗಳಾದ ಶ್ರೀ ಸಿ. ಶೇಷಪ್ಪನವರು ತಮ್ಮ ಪುತ್ರಿ ಸೌ|| ಕಮಲಾಂಬಾಳ್‌ರವರನ್ನು ಬೆಂಗಳೂರಿನ ಶ್ರೀ ಎಂ. ಆರ್. ನಾರಾಯಣಸ್ವಾಮಿ ಅಯ್ಯಂಗಾರ್‌ರವರ ಕುಮಾರ ಶ್ರೀ ಎನ್. ಲಕ್ಷ್ಮಣನ್‌ರವರಿಗೆ ಕೊಟ್ಟು ನಿನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನಡೆಸಿದರು.

ನವೆಂಬರ್ ೧ ರಂದು ರಾಷ್ಟ್ರಾಧ್ಯಕ್ಷರ ಮೆರವಣಿಗೆ

ಸ್ವಂ. ಸು. ಪ್ರೋ.] ಬೆಂಗಳೂರು ೨೮

ನೂತನ ಮೈಸೂರು ಸಂಸ್ಥಾನದ ಆರಂಭೋತ್ಸವವನ್ನು ನೆರವೇರಿಸಲು ಇಲ್ಲಿಗೆ ನವೆಂಬರ್ ೧ ರಂದು ಮಧ್ಯಾಹ್ನ ಆಗಮಿಸಲಿರುವ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರನ್ನು ವಿಮಾನ ನಿಲ್ದಾಣದಿಂದ ಅವರು ಬಿಡಾರ ಮಾಡುವ ಅರಮನೆಗೆ ಮೆರವಣಿಗೆ ಮೂಲಕ ಕರೆದೊಯ್ಯಲಾಗುವುದು

ಹೈಕೋರ್ಟಿಗೆ ೩ ದಿನ ವಿರಾಮ

ಮೈಸೂರು ಹೈಕೋರ್ಟು ಈ ದಿನದಿಂದ ೩ ದಿನಗಳವರೆಗೆ ನಡೆಯುವುದಿಲ್ಲ. ನವೆಂಬರ್ ೧ರಿಂದ ಹೊಸ ಹೈಕೋರ್ಟು ಸ್ಥಾಪಿತವಾಗುವುದು. ನೂತನ ಹೈಕೋರ್ಟಿನಲ್ಲಿ ಹಳೆಯ ಮೈಸೂರು ಸಂಸ್ಥಾನದ ೩,೫೦೦ ಮತ್ತು ಹೊರಗಿನ ೨,೦೦೦ ವ್ಯವಹಾರಗಳು ಇತ್ಯರ್ಥವಾಗಬೇಕಾಗಿವೆ

ತಿರುನಲ್ವೇಲಿ ಜಿಲ್ಲೆಯಲ್ಲಿ ಭೂಕಂಪ

ತಿರುನಲ್ವೇಲಿ ಜಿಲ್ಲೆಯ ಚೆರ್ಮಾದೇವಿ, ವೀರವನಲ್ಲೂರು ಮತ್ತು ಕಲ್ಲಿಡೈಕುರಿಚ್ಚಿ ಎಂಬ ಊರುಗಳಲ್ಲಿ ಕಳೆದ ಮಂಗಳವಾರ ರಾತ್ರಿ ಹಲವು ಸೆಕೆಂಡುಗಳ ಕಾಲ ಭೂಮಿಯು ನಡುಗಿತಂತೆ, ಚೆರ್ಮಾದೇವಿಯಲ್ಲಿ ಅದು ಸ್ವಲ್ಪ ತೀವ್ರವಾಗಿಯೇ ಇದ್ದು, ಬೀರುಗಳಲ್ಲಿ ಇಡಲಾಗಿದ್ದ ಪಾತ್ರೆಗಳು ಕೆಳಕ್ಕೆ ಉರುಳಿದುವೆಂದೂ ವರದಿಯಾಗಿದೆ.

ಭಾರತ ವಾಚನ

ಜಯನಗರದಲ್ಲಿರುವ ಪೌರಾಣಿಕ ಶಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ದ್ವಾದಶಿ ಪ್ರಯುಕ್ತ ನಾಳೆ ಸಂಜೆ ೬-೩೦ಕ್ಕೆ ಶ್ರೀಮತಿ ಹೆಚ್. ಜಾನಕಿದೇವಿ ಮತ್ತು ಬಿ. ವಸುಂಧರಾದೇವಿ ಇವರುಗಳಿಂದ 'ಭೀಮಾಂಜನೇಯ ಭೇಟಿ' ಎಂಬ ಭಾರತಭಾಗದ ವಾಚನವನ್ನು ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನದೊಡನೆ ಏರ್ಪಡಿಸಲಾಗಿದೆ.

ಶ್ರೀಪ್ರಕಾಶರಿಗೆ ಪುತ್ರ ವಿಯೋಗ

ಬೆಂಗಳೂರು ೨೮

ಮದ್ರಾಸಿನ ಗವರ್ನರ್ ಶ್ರೀ ಶ್ರೀಪ್ರಕಾಶರವರ ಏಕತನಯನ ೨೦ ವರ್ಷದ ತಪೋವರ್ಧನರವರು ನಿನ್ನೆ ಇಲ್ಲಿನ ಮಾನಸಿಕ ಆರೋಗ್ಯ ಆಸ್ಪತ್ರೆಯಲ್ಲಿ ಮೃತಪಟ್ಟರು. ೫ ದಿನಗಳ ಹಿಂದೆ ಅವರನ್ನು ಅಲ್ಲಿಗೆ ಸೇರಿಸಲಾಗಿತ್ತು. ಅವಸಾನಕಾಲದಲ್ಲಿ ಮಗನಬಳಿ ತಂದೆಯಿದ್ದರು. ಮೃತರ ಅಣ್ಣ ಯಶೋವರ್ಧನರವರು ಕೆಂಪಾಂಬುಧಿ ಕೆರೆ ಬಳಿ ರುದ್ರಭೂಮಿಯಲ್ಲಿ ನಿನ್ನೆ ಅಂತ್ಯ ಸಂಸ್ಕಾರವನ್ನು ನಡೆಸಿದರು

ಕೆರೆ ಮತ್ತು ರಸ್ತೆ ರಿಪೇರಿಗಾಗಿ ೯ ಲಕ್ಷ ರೂ.

ಇತ್ತೀಚೆಗೆ ಸಂಸ್ಥಾನದಲ್ಲಿ ಆದ ಮಳೆಯ ಪರಿಣಾಮವಾಗಿ ನಷ್ಟವಾದ ನಾನಾ ಕೆರೆ, ರಸ್ತೆ, ಸೇತುವೆ ಮುಂತಾದುವುಗಳ ರಿಪೇರಿಗೆ ೯ ಲಕ್ಷ ರೂ.ಗಳನ್ನು ತಾತ್ಕಾಲಿಕವಾಗಿ ಸರ್ಕಾರದವರು ಮಂಜೂರು ಮಾಡಿರುತ್ತಾರೆ.

ಇಂಜನಿಯರಿಂಗ್ ಪ್ರೊಫೆಸರುಗಳ ನೇಮಕ

ಸ್ವಂ. ಸು. ಪ್ರೋ.] ಬೆಂಗಳೂರು ೨೮

ಮೈಸೂರು ಸರ್ಕಾರದವರು ಕೆಳಗೆ ಕಂಡ ೨೮ ಜನರನ್ನು ಇಂಜನಿಯರಿಂಗ್ ಪ್ರೊಫೆಸರುಗಳಾಗಿ ನೇಮಿಸಿದ್ದಾರೆ:—

ಶ್ರೀಗಳಾದ ಕೆ. ಪ್ರಸನ್ನ, ಕೆ. ಲಕ್ಷ್ಮೀನಾರಾಯಣ, ಹೆಚ್. ಶ್ರೀನಿವಾಸಯ್ಯಂಗಾರ್, ಡಿ. ಎಸ್. ಶಿವಶಂಕರ್, ಪಿ. ಕೆ. ಸತ್ಯನಾರಾಯಣಶೆಟ್ಟಿ, ಗುಲಾಂ ಅಹಮದ್, ಡಿ. ಬಸವರಾಜಯ್ಯ, ಹೆಚ್. ವಿ. ಚನ್ನಬಸವಮೂರ್ತಿ, ಬಿ. ವೀರಪ್ಪ, ಎ. ವಾಸುದೇವರೆಡ್ಡಿ, ವಿ. ರಂಗಣ್ಣ, ಎಂ. ಜಿ. ಬೋರೇಗೌಡ, ಬಿ. ಕೆ. ತಿಮ್ಮಯ್ಯ, ಎಂ. ವೆಂಕಟೇಗೌಡ, ಕೆ. ಸುಬ್ಬಯ್ಯ, ಸೈ. ಸಿ. ದಾಸ್, ಪಿ. ಕೆ. ದಾಸ್, ಆರ್. ಗೋವಿಂದ, ಎಸ್. ಮಲಗಪ್ಪ, ಪಿ. ರಾಮಚಂದ್ರಪ್ಪ, ಹೆಚ್. ವಿ. ಹಿರಣ್ಣಗೌಡ, ಎ. ಸಿ. ದೊರೆಯ್ಯ, ಎ. ಶಿಲ್ಪರಾಜ್, ಎಂ ಬಸಪ್ಪ, ಎಸ್. ನಾಗಪ್ಪ, ಹೆಚ್. ನಂಜಯ್ಯ ಮತ್ತು ಪಿ. ಸಿ. ಮಲ್ಲೇಗೌಡ.

ಹಂಗೆರಿ ವಿಷಯದಲ್ಲಿ ಕೈಹಾಕಲು ವಿಶ್ವಸಂಸ್ಥೆಗೆ ಅಧಿಕಾರವಿಲ್ಲ

ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗೆ ಪ್ರತಿಭಟನಾ ಪತ್ರ

ಹಂಗೆರಿಯಲ್ಲಿ ಇತ್ತೀಚೆಗೆ ನಡೆದ ಘಟನೆಗಳ ಬಗ್ಗೆ ಪರಿಶೀಲನೆ ನಡೆಸಲು ವಿಶ್ವಸಂಸ್ಥೆಗೆ ಅಧಿಕಾರವಿಲ್ಲವೆಂದು ಹಂಗೆರಿಯು ತಿಳಿಸುತ್ತದೆ. ಅಲ್ಲಿನ ಪರಿಸ್ಥಿತಿಯನ್ನು ಪರಿಶೀಲಿಸಲು ನಿನ್ನೆ ದಿನ ಭದ್ರತಾ ಸಮಿತಿಯು ಜರೂರು ಅಧಿವೇಶನವು ಸೇರಲಿದ್ದಿತು. ಈ ವಿಚಾರವನ್ನು ಚರ್ಚೆಗೆ ಇಟ್ಟುಕೊಳ್ಳುವುದನ್ನು ಪ್ರತಿಭಟಿಸಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗೆ ಹಂಗೆರಿಯು ಪತ್ರವನ್ನು ಬರೆದಿದೆ.

ಅಮೆರಿಕದ ಅತ್ಯಂತ ದೊಡ್ಡ ಜಲಜನಕ ಬಾಂಬು

ಅಣು ಶಕ್ತಿಯ ಜಂಟಿ ಕಾಂಗ್ರೆಸ್ಸನಲ್ ಸಮಿತಿಯ ಅಧ್ಯಕ್ಷ ಕ್ಲಿಂಟನ್ ಅಂಡರ್‌ಸನ್‌ರವರು ಒಂದು ಹೇಳಿಕೆಯಿತ್ತು, ಅಮೆರಿಕದಲ್ಲಿ ಅತ್ಯಂತ ದೊಡ್ಡದಾದ ಜಲಜನಕ ಬಾಂಬು ಇರುವುದೆಂದೂ, ನಮ್ಮ ಜನರನ್ನೇ ನಿರ್ನಾಮ ಮಾಡಬಾರದೆಂಬ ದೃಷ್ಟಿಯಿಂದ ನಾವು ಅದನ್ನು ಶತ್ರುಗಳ ನಗರಗಳ ಮೇಲೆ ಪ್ರಯೋಗಿಸಕೂಡದೆಂದು ಆಲೋಚಿಸಿರುವೆವೆಂದೂ ತಿಳಿಸಿರುವರು.

ಡಿಗ್ರಿಗಳಿಗೆ ಬೆಲೆಯಿಲ್ಲದೆ ಹೋಗಬಹುದೆಂದು ನೆಹರೂ ಎಚ್ಚರಿಕೆ

ಅಲಹಾಬಾದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಪ್ರಧಾನಿ ನೆಹರೂರವರು ಮೊನ್ನೆ ಭಾಷಣ ಮಾಡುತ್ತಾ, ಇನ್ನುಮುಂದೆ ವಿಶ್ವವಿದ್ಯಾಲಯದ ಡಿಗ್ರಿಗಳಿಗೆ ಏನೇನೂ ಬೆಲೆ ದೊರೆಯದಂತಹ ಕಾಲ ಬರಬಹುದೇನೊ, ಆದುದರಿಂದ ವಿದ್ಯಾರ್ಥಿಗಳು ಡಿಗ್ರಿಗಳ ವ್ಯಾಮೋಹವನ್ನು ತೊರೆದು, ರಾಷ್ಟ್ರ ನಿರ್ಮಾಣದ ದೃಷ್ಟಿಯಿಂದ ಶ್ರಮಸಾಧನೆಯಲ್ಲಿ ತೊಡಗಬೇಕೆಂದೂ ತಿಳಿಸಿದರು.

ಕರ್ನಾಟಕವು ಶಾಂತಿ ಮತ್ತು ಸಮೃದ್ಧಿಯ ಪ್ರಾಂತವಾಗಲಿ

ಗೋಕಾಕಿನಲ್ಲಿ ಮೈಸೂರು ರಾಜಪ್ರಮುಖರ ಭಾಷಣ

ಗೋಕಾಕಿನಲ್ಲಿ ನೆನ್ನೆ ಅಲ್ಲಿನ ಪೌರಸಭೆ, ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕ್ ಮತ್ತು ಅರ್ಬನ್ ಬ್ಯಾಂಕುಗಳು ಇತ್ತ ಮಾನಪತ್ರಗಳಿಗೆ ಮೈಸೂರಿನ ರಾಜಪ್ರಮುಖರು ಉತ್ತರವಿತ್ತು ಹೊಸ ಮೈಸೂರು ಸಂಸ್ಥಾನದ ಗವರ್ನರರಾಗಿ ತಾವು ನೂತನ ಪ್ರಾಂತದ ಅಭ್ಯುದಯಕ್ಕೆ ಪ್ರಾಮಾಣಿಕವಾಗಿ ಶ್ರಮಿಸುವುದಾಗಿ ನುಡಿದರು. ಕರ್ನಾಟಕವು ಶಾಂತಿ ಮತ್ತು ಸಮೃದ್ಧಿ ಪ್ರಾಂತವಾಗಿ, ಅಜ್ಞಾನ ಮತ್ತು ಬಡತನಗಳು ನಾಮಾವಶೇಷವಾಗಬೇಕೆಂಬುದೇ ತಮ್ಮ ಅಭಿಲಾಷೆಯೆಂದೂ ಅವರು ಹೇಳಿದರು. ಹೊಸ ಸಂಸ್ಥಾನದ ಪ್ರಜೆಗಳ ಮನಸ್ಸು ವಿಶಾಲವಾಗಬೇಕೆಂದೂ, ನೂತನ ಸರ್ಕಾರವು ಅವರ ಆಶೋತ್ತರಗಳನ್ನು ಈಡೇರಿಸಲು ಸಾಧ್ಯವಾದುದೆಲ್ಲವನ್ನೂ ಮಾಡುವದೆಂದೂ ಅವರು ತಿಳಿಸಿದರು

ಬೈಲುಹೊಂಗಲಕ್ಕೆ ಅವರು ಭೇಟಿಯಿತ್ತು ಅಲ್ಲಿನ ಶಾಲೆಯಲ್ಲಿ ವ್ಯವಸಾಯ ವಿಭಾಗವನ್ನು ತೆರೆದರು. ಬೈಲುಹೊಂಗಲದಲ್ಲಿ ರಾಜ್ಯಾಡಳಿತ ನಡೆಸುತ್ತಿದ್ದ ವೀರರಾಣಿ ಕಿತ್ತೂರು ಚನ್ನಮ್ಮನು ಭಾರತ ಸ್ವಾತಂತ್ರ್ಯಕ್ಕಾಗಿ ಹೋರಾಡಿ [illegible] ಮಾಡಿದ ವಿಷಯವನ್ನು ಶ್ರೀಮನ್ಮಹಾರಾಜರು ವಿವರಿಸಿ ಆ ಪಟ್ಟಣದ [illegible] ಕೊಂಡಾಡಿದರು

ಧಾರವಾಡದಲ್ಲಿ ಅವರಿಗೆ ಕರ್ನಾಟಕ ಸೆಂಟ್ರಲ್ ಕೋ-ಆಪರೇಟಿವ್ ಬ್ಯಾಂಕು, ಜಿಲ್ಲಾ ಸ್ಥಳೀಯ ಸಂಸ್ಥೆ ಮತ್ತು ಹರಿಜನ ಸೇವಕ ಸಂಘದವರು ಮಾನಪತ್ರಗಳನ್ನು ಒಪ್ಪಿಸಿದರು. ರಾಜಪ್ರಮುಖರು ಭಾಷಣ ಮಾಡಿ, ಕರ್ನಾಟಕದ ಸ್ವಾತಂತ್ರ್ಯದ ಹೊಸ ಜೀವ ಮೂಡಿದೆಯೆಂದೂ, ನಾಡು ತನ್ನ ಗತವೈಭವವನ್ನು ಸಾಧಿಸಲು ಅವಕಾಶ ಸಿಕ್ಕಿದೆಯೆಂದೂ ನುಡಿದರು. ಎಲ್ಲರೂ ಹಿಂದಿನ ವೈಷಮ್ಯವನ್ನು ಮರೆತು ಒಂದಾಗಿ ಹೊಸ ಪ್ರಾಂತದ ಸರ್ವತೋಮುಖ ಅಭಿವೃದ್ಧಿಗಾಗಿಯೂ, ಕನ್ನಡ ಸಂಸ್ಕೃತಿಯ ಪುನರುದ್ಧಾರಕ್ಕೂ ಶ್ರಮಿಸಬೇಕೆಂದು ತಿಳಿಸಿದರು.

ಫುಟ್‌ಬಾಲ್ ಪಂದ್ಯದ ಬಹುಮಾನ ವಿನಿಯೋಗ

ದೊಡ್ಡಕೆರೆ ಮೈದಾನದಲ್ಲಿ ನೆನ್ನೆ ನಡೆದ ಒನ್ ಡೇ ಫುಟ್‌ಬಾಲ್ ಟೂರ್ನಮೆಂಟಿನಲ್ಲಿ ದಳವಾಯಿ ಸ್ಕೂಲಿನವರು ಮಹಾರಾಜಾ ಹೈಸ್ಕೂಲಿನವರನ್ನು ಸೋಲಿಸಿದರು

ಸುಬ್ಬಕೃಷ್ಣಯ್ಯ [illegible] ವಿಜಯ ದಸರಾ ಟೂರ್ನಮೆಂಟ್ ಮತ್ತು ಒನ್ ಡೇ ಟೂರ್ನಮೆಂಟುಗಳಲ್ಲಿ ಜಯಶಾಲಿಗಳಾದವರಿಗೆ ಪುರಸಭಾ [illegible] ಶ್ರೀ ಚೌಡಯ್ಯನವರು ನೆನ್ನೆ ಬಹುಮಾನಗಳನ್ನು ವಿನಿಯೋಗಿಸಿದರು

* * *

ಹಾಸಿಗೆ-ದಿಂಬು
ನಮ್ಮಲ್ಲಿ [illegible] ಮಾಡುತ್ತೇವೆ
ಬಾಪುಸಾಬ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

SRI GAYATHRI
TALKIES
To-day Last day
VERA CRUZ
From 3-11-56 1 or 2 days
20th Century's most powerful & love Story
Cinemascope in Deluxe color
THE RACERS
Starring – Kirk Douglas and
Gilbert Ronald

[illegible] Printed and Published by [illegible] at Sadhvi Press
[illegible] Road, Mysore

ಜೂನ್ ೫ರ ರಾತ್ರಿ ಗೋವಿಂದರೆಡ್ಡಿ ತನ್ನ ಮನೆಯಲ್ಲಿಯೇ ಇದ್ದನು

೩ನೇ ಆಪಾದಿತನ ಪಕ್ಷ [illegible] ಹೇಳಿಕೆ

ಬೇಲೂರು ಶ್ರೀನಿವಾಸಯ್ಯಂಗಾರ್ಯರ [illegible] ಮೊಕದ್ದಮೆಯಲ್ಲಿ ನೆನ್ನೆ ಆಪಾದಿತರ ಪರ ಸಾಕ್ಷಿಗಳು ಆದುವು. ೩ನೇ ಆಪಾದಿತನ [illegible] ಯು ೩ನೇ ಕೆಂಪತಿ ರತ್ನಮ್ಮನು ಸಾಕ್ಷ್ಯ ನುಡಿದು, ಜೂನ್ ೫ನೇ ತಾರೀಕು ರಾತ್ರಿ ಗಂಡನು ತನ್ನ ಕೊಠಡಿಯಲ್ಲಿ ಮಲಗಿದ್ದುದಾಗಿ ತಿಳಿಸಿ ಆ ದಿನ ಬೆಳಗ್ಗೆ ತಮ್ಮ ಏಳೇ ಮಗುವಿನ ಹುಟ್ಟಿದ ನಕ್ಷತ್ರ ದೋಷ ನಿವಾರಣಾರ್ಥವಾಗಿ ನವಗ್ರಹ ಮತ್ತು ಶಾಂತಿ ಪೂಜೆ ನಡೆಸಲಾಯಿತೆಂದೂ ಮನೆಯಲ್ಲಿ ಪೊಲೀಸರಿಗೆ ದೊರೆತ ಬಟ್ಟೆಯ ಕಲೆಗಳು ಬಾಣಂತಿರಕ್ತಸ್ರಾವದ್ದೆಂದೂ ತಿಳಿಸಿದಳು. ಕಳೆದ ಮೇ ೨೨ನೇ ತಾರೀಕು ವಾಣೀವಿಲಾಸ ಆಸ್ಪತ್ರೆಯಲ್ಲಿ ತಾನು ಮಗುವನ್ನು ಹಡೆದುದಾಗಿ, ಜೂನ್ ೫ನೇ ತಾರೀಕು [illegible] ಆಯಿತೆಂದೂ ಆಕೆಯು ನುಡಿದಳು. ವಾಣೀವಿಲಾಸ ಆಸ್ಪತ್ರೆಯ ಕಛೇರಿ ನೌಕರ [illegible] ರಾಮಸ್ವಾಮಿ ಮತ್ತು ಗೋವಿಂದರೆಡ್ಡಿಯ ದಾಯಾದಿ ನಾರಾಯಣರೆಡ್ಡಿಯವರುಗಳ ಸಾಕ್ಷ್ಯಗಳು ಆದುವು

ಚೀಣದಲ್ಲಿ ಮೋಟಾರು ವಾಹನಗಳೆಲ್ಲಾ ಸರ್ಕಾರದ್ದು

ಕಮ್ಯೂನಿಸ್ಟರ ಚೀಣದಲ್ಲಿ ಖಾಸಗಿಯವರು ಯಾರೂ ಮೋಟಾರು ವಾಹನವನ್ನು ಸ್ವಂತಕ್ಕೆ ಇಟ್ಟುಕೊಂಡಿಲ್ಲ. ದೊಡ್ಡದೊಡ್ಡ ಅಧಿಕಾರಿಗಳಿಗೂ ಸಹಾ ಪ್ರತ್ಯೇಕ ಮೋಟಾರು ಇರುವುದಿಲ್ಲ. ಎಲ್ಲಾ ವಾಹನಗಳೂ ಸರ್ಕಾರದ್ದೇ [illegible] ತಿಳಿಸಿರುತ್ತಾರೆ

ತಿರುವಾಂಕೂರು ವಿಶ್ವವಿದ್ಯಾಲಯದ ಚಾನ್ಸೆಲರ್ ಸ್ಥಾನಕ್ಕೆ ರಾಜರ ರಾಜೀನಾಮೆ

ತಿರುವಾಂಕೂರು ವಿಶ್ವವಿದ್ಯಾಲಯದ ಸ್ಥಾಪನೆಯ ದಿನದಿಂದ ಅದರ ಚಾನ್ಸೆಲರ್ ಆಗಿದ್ದ ತಿರುವಾಂಕೂರು ಕೊಚ್ಚಿ ಸಂಸ್ಥಾನದ ರಾಜಪ್ರಮುಖರು ನವೆಂಬರ್ ಒಂದರಿಂದ ಆ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿರುತ್ತಾರೆ

ಮಕ್ಕಳ ಪ್ರದರ್ಶನದ ಬಹುಮಾನ ವಿನಿಯೋಗ

ಶ್ರೀಮನ್ಮಹಾರಾಣಿ ಶ್ರೀಮತಿ ತ್ರಿಪುರಸುಂದರಮ್ಮಣ್ಣಿಯವರು ನಾಳೆ ಸಂಜೆ ೫ ಗಂಟೆಗೆ ಟೌನ್‌ಹಾಲಿನಲ್ಲಿ ಮಕ್ಕಳ ಪ್ರದರ್ಶನದ ಬಹುಮಾನ ವಿನಿಯೋಗ ಸಮಾರಂಭವನ್ನು ನೆರವೇರಿಸುವರು. ಇಲ್ಲಿಯ ಕೃಷ್ಣರಾಜೇಂದ್ರಪುರಿ ಬಡಾವಣೆಯಲ್ಲಿ ತೆರೆಯಲಿರುವ ಹೆರಿಗೆ ಮತ್ತು ಮಕ್ಕಳ ಯೋಗಕ್ಷೇಮ ಕೇಂದ್ರವನ್ನೂ ಆರಂಭಗೊಳಿಸುವರು

* * *

ಬಿಕರಿಗೆ ಸಿದ್ಧವಾಗಿದೆ
[illegible] ಮಾದರಿಯ ಗಾಜಿನ ಬೀರುಗಳು ಮತ್ತು [illegible] ಅಂಗಡಿಗೂ ಮತ್ತು [illegible] ಅಂಗಡಿಗೂ ಉತ್ತಮವಾಗಿರುತ್ತೆ
ಗುರುದೇವ ಹಾಲ್,
ಶ್ರೀರಾಂಪೇಟೆ, ಮೈಸೂರು ಇವರಲ್ಲಿ ವಿಚಾರಿಸಿ

ಚಾಮುಂಡಿ ಹಾಲ್
ಹನುಮಂತರಾವ್ ರಸ್ತೆ, ಮೈಸೂರು.
ಪ್ರಭಾ ಮತ್ತು ಒಲಂಪಿಯಾ ಚಿತ್ರಮಂದಿರಗಳ ಸಮೀಪ
ಮಿಟ್ಟೂರ್ ಮಲ್, ಲಾಂಗ್‌ಕ್ಲಾತ್, ಬಿನ್ನಿ ಮಿಲ್ಲಿನ ಬಟ್ಟೆಗಳು, ಕ್ಯಾಲಿಕೋ ಪ್ರೇಟಿ, ಅರವಿಂದ್, ಕಟಾವು ಇನ್ನೂ ಅನೇಕ ಮಿಲ್‌ಗಳ ಬಟ್ಟೆಗಳು ನಿಗದಿಯಾದ ಬೆಲೆಯಲ್ಲಿ ಉತ್ತಮ ದರ್ಜೆಯ ಸ್ಪ್ರಿಂಗ್ ಬೆಡ್ ಕಾಯಿರ್ ಮತ್ತು ಚೀಟಿಗಳು.
ಒಮ್ಮೆ ದಯಮಾಡಿ ಭೇಟಿ ಕೊಡಿ
ಇ. ಪಿ. ನಂಜಪ್ಪ

ದ್ವಿತೀಯ ಯೋಜನೆಯಲ್ಲಿ ೧೯॥ ಲಕ್ಷ ಟನ್ ಆಹಾರದ ಬೆಳೆ

ವ್ಯವಸಾಯ ಮಂತ್ರಿ [illegible] ಹೇಳಿಕೆ

[illegible] ಪ್ರತಿ [illegible] ದ್ವಿತೀಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ [illegible] ಲಕ್ಷ ಟನ್ [illegible] ಉತ್ಪತ್ತಿಯಾಗುತ್ತಿರುವುದೆಂದೂ ಹೇಳಿದರು

ಬೆಳೆ ಹೆಚ್ಚಿಸಲು ಸರ್ಕಾರದವರು ಹಲವಾರು [illegible]ಗಳನ್ನು ಕೈಗೊಂಡಿರುವುದಾಗಿಯೂ, [illegible] ಕೃಷಿಕರಿಗೆ [illegible]ನ್ನು ಒದಗಿಸಿ ಪ್ರತಿ [illegible] ಮಾಡಲು ಉದ್ದೇಶವೆಂದೂ ನುಡಿದರು

ಹಂಗೇರಿಯಲ್ಲಿ ಪ್ರತಿ ಸರ್ಕಾರದ ಸ್ಥಾಪನೆ

ಹಂಗೇರಿಯಲ್ಲಿ ಕಮ್ಯೂನಿಸ್ಟರ ವಿರೋಧವಾಗಿ ಪ್ರತಿ ಸರ್ಕಾರವೊಂದನ್ನು ಸ್ಥಾಪಿಸಲಾಗಿದೆ [illegible] ವಿದ್ಯಾರ್ಥಿಗಳು [illegible] ಈ ಸರ್ಕಾರಕ್ಕೆ ಬೆಂಬಲವಿತ್ತಿರುವುದಾಗಿ ಹೇಳಲಾಗಿದೆ. [illegible] ಪ್ರಾಂತಗಳನ್ನು ವಶಕ್ಕೆ ತೆಗೆದುಕೊಂಡಿರುವರೆಂದೂ [illegible]

೩,೦೦೦ ಮಂದಿ ನಿಮ್ನ ವರ್ಗದವರಿಗೆ ಬೌದ್ಧ ದೀಕ್ಷೆ

[illegible] ೩,೦೦೦ ಜನ ನಿಮ್ನ ವರ್ಗದವರು ನೆನ್ನೆ ಬೌದ್ಧ ಮತವನ್ನು ಅವಲಂಬಿಸಿದರು. ನಿಮ್ನ ವರ್ಗ ಸಂಘದ [illegible] ಅಧ್ಯಕ್ಷ [illegible] ಎಲ್ಲರಿಗೂ ಉಪದೇಶವನ್ನು ಇತ್ತರು

* * *

ಕನ್ನಾನೂರು ಬನೀನುಗಳು
[illegible] ಕೈಗಾರಿಕಾ ಪ್ರದರ್ಶನಗಳಲ್ಲಿ ಹತ್ತು ಬಹುಮಾನಗಳನ್ನು ಪಡೆದು ಜನಮೆಚ್ಚಿಗೆ ಹೊಂದಿರುವ ಕನ್ನಾನೂರು ಚಿನೋಲಿ ಹೊಸೈರಿ ಫ್ಯಾಕ್ಟರಿ ಬನೀನುಗಳು ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತವೆ.
ವಿಳಾಸ –
ದಿ ಚಿನೋಲಿ ಹೊಸೈರಿ ಫ್ಯಾಕ್ಟರಿ,
ಕನ್ನಾನೂರು

ರೇಡಿಯೊವಿನಲ್ಲಿ ಕರ್ನಾಟಕ ಮತ್ತು ಹಿಂದೂಸ್ಥಾನಿ ಸಂಗೀತ ಪ್ರಸಾರ

ನೂತನ ವ್ಯವಸ್ಥೆ ಬಗ್ಗೆ ರಾಷ್ಟ್ರಾಧ್ಯಕ್ಷರ ಮೆಚ್ಚಿಗೆ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ನೆನ್ನೆ ದೆಹಲಿಯಲ್ಲಿ ಆಲ್ ಇಂಡಿಯಾ ರೇಡಿಯೋವಿನವರ ಸಂಗೀತ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸಿದರು. ಅವರು ಭಾಷಣ ಮಾಡಿ ರೇಡಿಯೋವಿನವರು ಕರ್ನಾಟಕ ಸಂಗೀತವನ್ನು ಉತ್ತರದಲ್ಲೂ, ಹಿಂದೂಸ್ಥಾನಿ ಸಂಗೀತವನ್ನು ದಕ್ಷಿಣದಲ್ಲೂ ಜನಪ್ರಿಯ ಮಾಡಲು ನಡೆಸುತ್ತಿರುವ ಪ್ರಯತ್ನವನ್ನು ಪ್ರಶಂಸಿಸಿದರು. ಈ ವಿಧಾನದಿಂದ ಹೊಸ ಮಾದರಿಯ ಸಂಗೀತವು ಏರ್ಪಡುವುದೆಂದು ಅವರು ಅಭಿಪ್ರಾಯಪಟ್ಟರು. ಸಂಗೀತವು ದೃಷ್ಟಿಗೋಚರವಾಗುವ ಪ್ರಪಂಚ ಮತ್ತು ಅಗೋಚರ ವಿಶ್ವಗಳ ಸಂಗಮದಂತಿರುವುದೆಂದು ತಿಳಿಸಿದರು

ಬಹುಮತದ ಆಡಳಿತದಲ್ಲಿ ಆದರ್ಶ ಸರ್ಕಾರ ಸಾಧ್ಯವಿಲ್ಲ

ಪ್ರಜಾಶಕ್ತಿಯ ಬಗ್ಗೆ ವಿನೋಬಾ ಭಾವೆಯವರ ಹೇಳಿಕೆ

ಆಧುನಿಕ ಪ್ರಜಾಸತ್ತಾತ್ಮಕ ಪ್ರಭುತ್ವವು ಅಲ್ಪ ಬಹುಪಕ್ಷ ಮಾನ್ಯರಿಂದ ನಡೆಸಲ್ಪಡುತ್ತಿರುವ ಆಕ್ರಿಕೆಯೆಂದು ಆಚಾರ್ಯ ವಿನೋಬಾ ಭಾವೆಯವರು ತಿಳಿಸುತ್ತಾರೆ. ಬಹುಸಂಖ್ಯಾತರ ಆಡಳಿತವು ಸ್ವಾತಂತ್ರ್ಯವು ಮತ್ತು ಆದರ್ಶ ಸರ್ಕಾರವಾಗುವುದಿಲ್ಲವೆಂದು ಅವರು ಹೇಳುತ್ತಾರೆ. ಈಗ ಅಧಿಕಾರವು ಮೇಲ್ಪಟ್ಟದಲ್ಲಿರುವ ಪ್ರಭಾವಶಾಲಿಗಳಾದ ಕೆಲವರ ಕೈಯಲ್ಲಿರುವುದೆಂದೂ, ಅಂತಹ ಜನರ ಕೈಗೆ ಅಧಿಕಾರ ಬಿಟ್ಟುಕೊಡುವುದು ಅನ್ಯಾಯಕರವೆಂದೂ, ಅವರು ಅಭಿಪ್ರಾಯಪಟ್ಟಿದ್ದಾರೆ. ಈಗಿನ ರಾಜಕೀಯ ಮುಖಂಡರು ಕುರುಡರಂತೆಯೂ, ಜನರು ಕುರಿಗಳಂತೆಯೂ ಇರುವರೆಂದೂ ಅವರು ಹೇಳುತ್ತಾರೆ

ಬೆಂಗಳೂರಿಗೆ ನೂತನ ಐ. ಜಿ. ಪಿ ಯವರ ಆಗಮನ

ನೂತನ ಮೈಸೂರು ಸಂಸ್ಥಾನದ ಪೊಲೀಸ್ ಇನ್ಸ್‌ಪೆಕ್ಟರ್ ಜನರಲ್, ಶ್ರೀ ಪಿ ಕೆ ಮೋನಪ್ಪನವರು ನೆನ್ನೆ ಕರ್ನೂಲಿನಿಂದ ಬೆಂಗಳೂರಿಗೆ ಆಗಮಿಸಿದರು. ಅವರು ೧ನೇ ತಾರೀಕು ಶ್ರೀ ತಿಮ್ಮರಾಜ ಅರಸರಿಂದ ಅಧಿಕಾರ ವಹಿಸಿಕೊಳ್ಳುವರು.

* * *

ಗಡಿಯಾರಗಳು ಮತ್ತು ಕನ್ನಡಕಗಳು
ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಒಂದೇ ಭೇಟಿ ಕೊಡಿ
ಕೆ. ಎಸ್. ಲಕ್ಷ್ಮಣಐಯ್ಯರ್ ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd. 1911

* * *

ಮೈಸೂರು ಸಿಟಿ ಮುನಿಸಿಪಾಲಿಟಿ

ಮೈಸೂರು ಸಿಟಿ ಮುನಿಸಿಪಲ್ ಕಮಿಷನರ್‌ರವರ ಆಫೀಸಿನಿಂದ

ರಿವೈಸ್ಡ್ ಟೆಂಡರ್ ನೋಟಿಫಿಕೇಷನ್

S F M 376—56-57/ ತಾ|| 26-10 56

ಮೈಸೂರು ಸಿಟಿ ಮುನಿಸಿಪಲ್ [illegible] ತೆಂಗಿನ ಫಸಲನ್ನು 1957 ನೇ ಜನವರಿ ೧ನೇ ತಾರೀಖಿನಿಂದ 1959 ನೇ ಡಿಸೆಂಬರ್ 31 ನೇ ತಾರೀಖಿನವರೆಗೂ ರೂಢಿಸಿಕೊಳ್ಳಲು ಈ ಕೆಳಗೆ ಕಂಡ ನಿಬಂಧನೆಗಳನ್ನನುಸರಿಸಿ [illegible] ನವೆಂಬರ್ 9 ನೇ ತಾರೀಖು 4 ಘಂಟೆಯೊಳಗೆ ಸೀಲ್ ಮಾಡಿದ ಟೆಂಡರುಗಳನ್ನು ಮುನಿಸಿಪಲ್ ಕಮಿಷನರ್‌ರವರಿಗೆ ಕೊಡಲು ಕರೆಯಲಾಗಿದೆ.

ಪ್ರತಿ ಟೆಂಡರ್ [illegible] ಡಿಪಾಜಿಟ್ಟಾಗಿ ರೂ 1000—0—0 (ಒಂದು ಸಾವಿರ ರೂಪಾಯಿಗಳನ್ನು) ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾ ಮಾಡಿ ಅದರ ಚಲನ್ನನ್ನು ಟೆಂಡರ್ ಜೊತೆಯಲ್ಲಿ ಲಗತ್ತು ಮಾಡಿ ಲಕ್ಕೋಟೆಯಲ್ಲಿಟ್ಟು ಸೀಲು ಮಾಡಿ "1957-59ನೇ ಸಾಲುಗಳ ತೆಂಗಿನ ಫಸಲು ಗುತ್ತಿಗೆ ಸಲುವಾಗಿ" ಎಂದು ನಮೂದಿಸಿ ಮುನಿಸಿಪಲ್ ಕಮಿಷನರ್‌ರವರಿಗೆ ರೂಬರೂ ಆಗಲೀ ಯಾ ಪೋಸ್ಟ್ ಮೂಲಕವಾಗಲೀ 1956 ನೇ ನವೆಂಬರ್ 9 ನೇ ತಾರೀಖು 4 ಘಂಟೆಯೊಳಗಾಗಿ ತಲುಪಿಸಬೇಕು. ಅನಂತರ ಬರತಕ್ಕ ಟೆಂಡರುಗಳನ್ನು ಅಂಗೀಕರಿಸುವುದಿಲ್ಲ

ನಿಬಂಧನೆಗಳು ಮತ್ತು ಇತರೇ ವಿಚಾರಗಳನ್ನು ಮುನಿಸಿಪಲ್ ಆಫೀಸಿನಲ್ಲಿ ತಿಳಿಯಬಹುದು.

(ರುಜು) ಎ. ವಿಶ್ವನಾಥ್,
ಮುನಿಸಿಪಲ್ ಕಮಿಷನರು

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳ-
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : TUESDAY 30—10—1956 ಮೈಸೂರು : ಮಂಗಳವಾರ ೩೦—೧೦—೧೯೫೬ [ಸಂಚಿಕೆ : ೮೮

ಇಸ್ರೇಲ್ ಮತ್ತು ಈಜಿಪ್ಟುಗಳ ಹೋರಾಟದ ಆರಂಭ

ನಗರದಲ್ಲಿ ನೂತನ ಸಂಸ್ಥಾನದ ಉದಯೋತ್ಸವ

ಮೈಸೂರು ೩೦

ನೂತನ ಮೈಸೂರು ಸಂಸ್ಥಾನದ ಉದಯೋತ್ಸವವು ಇದೇ ನವೆಂಬರ್ ೧ ರಿಂದ ೫ ದಿನಗಳ ಕಾಲ ಟೌನ್‌ಹಾಲಿನಲ್ಲಿ ನೆರವೇರುವುದು. ೧ರಂದು ಬೆಳಿಗ್ಗೆ ೯ ಗಂಟೆಗೆ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ರಾಷ್ಟ್ರಧ್ವಜಾರೋಹಣ ಮಾಡುವರು. ಮೈಸೂರು ಡಿವಿಜನಲ್ ಕಮಿಷನರಾದ ಶ್ರೀ ಜಿ. ಎಲ್. ನಾಗರಾಜರಾಯರು ಸೆಲ್ಯೂಟು ಸ್ವೀಕರಿಸುವರು. ೫ ದಿನಗಳವರೆಗೆ ಸಂಗೀತ ಮನರಂಜನೆ, ಭಾಷಣ ಇತ್ಯಾದಿಗಳನ್ನು ಏರ್ಪಡಿಸಲಾಗಿದೆ. ಸಾರ್ವಜನಿಕರು ಭಾಗವಹಿಸಬೇಕೆಂದು ಪೌರಸಭಾ ಕಮಿಷನರ್ ಶ್ರೀ ಎ. ಲಕ್ಷ್ಮೀಕಾಂತ್‌ರವರು ಕೋರಿರುತ್ತಾರೆ.

ಬೆಂಗಳೂರಿಗೆ ಎಂ. ಎಸ್. ಶಂಕರರಾಯರ ವರ್ಗ

ಮೈಸೂರಿನ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರನ್ನು ಬೆಂಗಳೂರು ಇನಾಂ ರದ್ದಿಯಾತಿ ವಿಶೇಷ ಡೆಪ್ಯುಟಿ ಕಮಿಷನರಾಗಿಯೂ, ಆ ಸ್ಥಾನಕ್ಕೆ ನೇಮಿಸಲ್ಪಟ್ಟಿದ್ದ ಶ್ರೀ ಮಹಮದ್ ಸಿರಾಜುದ್ದೀನ್ ಮುಕ್ರಿಯವರನ್ನು ಮೈಸೂರು ಜಿಲ್ಲಾ ಇನಾಂ ರದ್ದಿಯಾತಿ ವಿಶೇಷ ಅಧಿಕಾರಿಯಾಗಿಯೂ ನೇಮಿಸಲಾಗಿದೆ.

ಭದ್ರತಾ ಸಮಿತಿಯಲ್ಲಿ ಹಂಗೆರಿ ಪ್ರಶ್ನೆ

ಚರ್ಚೆ ನಡೆಸಲು ರಷ್ಯದ ಪ್ರಯತ್ನ ವಿಫಲ

ಹಂಗೆರಿಯ ಪರಿಸ್ಥಿತಿಯನ್ನು ಚರ್ಚಿಸುವಂತೆ ರಾಷ್ಟ್ರಗಳು ಮಾಡಿರುವ ಸೂಚನೆಯನ್ನು ಭದ್ರತಾ ಸಮಿತಿಯು ಅಂಗೀಕರಿಸಿತು. ರಷ್ಯದ ಪ್ರತಿನಿಧಿಯು ಅದನ್ನು ತೀವ್ರವಾಗಿ ವಿರೋಧಿಸಿದರೂ ಸಫಲವಾಗಲಿಲ್ಲ. ೯-೧ ಓಟುಗಳಿಂದ ಚರ್ಚೆ ನಡೆಸಲು ಒಪ್ಪಲಾಯಿತು. ಯುಗೊಸ್ಲೇವಿಯವು ಭಾಗವಹಿಸಲಿಲ್ಲ. ಚರ್ಚೆಯನ್ನು ಮುಂದೂಡಲಾಗಿದೆ.

ಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕೊಳಲು ೭-೧೫ ಮತ್ತು ೧೫ ವೈ. ಎಲ್. ಶ್ರೀನಿವಾಸಮೂರ್ತಿ-ದೇವರ ನಾಮ ೭-೩೦ ಹಿಂದಿ ಶಿಕ್ಷಣ. ಮಧ್ಯಾಹ್ನ ೧೨ ಶಾರದಮ್ಮ-ಸಂಗೀತ. ೧೨-೩೦ ಂ ರಾಜಮಾಣಿಕ್ಯಂ-ಪಿಟೀಲು, ಪಿ. ಡಿ. ಸ್ವಾಮಿ ಅಯ್ಯಂಗಾರ್ ಮತ್ತು ಆರ್. ಎಸ್. ರಸ್ವಾಮಿ-ವೀಣೆ. ೧ ವೈ. ಎಲ್. ಶ್ರೀನಿವಾಸ ಮೂರ್ತಿ-ಗಾಯನ ೧ ೫೦ ಕೊಳಲು ೬-೧೫ ವಿದ್ಯಾರ್ಥಿಗಳಿಗಾಗಿ ಸಂಜೆ ೫-೩೦ ಮತ್ತು ಬಿ ಸಂಜೀವಪ್ಪ-ನಾಗಸ್ವರ ೬-೩೦ ನಾವು ಮತ್ತು ನಮ್ಮವರು ೭-೩೦ ಸರ್ದಾರ್ ಪಟೇಲ್ -ಸ್ಮರಣ ಭಾಷಣ. ೮ ೩೦ [illegible] ಕರ್ಮ ಭೂಮಿ, ಜನ್ಮ ಭೂಮಿ. ೯-೧ ನೆಸ್ಕೊ ಅಭಿವೃದ್ಧಿ ಯೋಜನೆ ೯-೩೦ ರೇಡಿಯೋ ಸಂಗೀತ ಸಮ್ಮೇಳನ-ಮದುರೆ ಮಣಿ ಅಯ್ಯರ್‌ರವರ ಹಾಡುಗಾರಿಕೆ

ತಿರುವಾಂಕೂರಿಗೆ ರಾಷ್ಟ್ರಾಧ್ಯಕ್ಷರ ಭೇಟಿ ಇಲ್ಲ

ರಾಷ್ಟ್ರಾಧ್ಯಕ್ಷರು ನಾಳಿದ್ದು ನೂತನ ಕೇರಳ ಸಂಸ್ಥಾನದ ಆರಂಭೋತ್ಸವವನ್ನು ನೆರವೇರಿಸಲು ತಿರುವನಂತಪುರಕ್ಕೆ ಹೋಗಬೇಕಾಗಿದ್ದ ಕಾರ್ಯಕ್ರಮವನ್ನು ರದ್ದು ಮಾಡಿರುತ್ತಾರೆ. ತಿರುವಾಂಕೂರಿನಲ್ಲಿ ಹವಾಗುಣವು ಸರಿಯಾಗಿಲ್ಲದಿರುವುದೇ ಇದಕ್ಕೆ ಕಾರಣ. ರಾಜೇಂದ್ರ ಪ್ರಸಾದರು ಬೆಂಗಳೂರಿನಲ್ಲಿ ನಡೆಯುವ ಉತ್ಸವದಲ್ಲಿ ಭಾಗವಹಿಸಲಿರುವರು. ಅವರು ರೈಲಿನಲ್ಲಿ ಹೊರಟು ನಾಳೆ ರಾತ್ರಿ ಅಥವಾ ನಾಳಿದ್ದು ಬೆಳಿಗ್ಗೆ ಬೆಂಗಳೂರನ್ನು ತಲಪುವರು.

ತರುಣಿಯ ಲಿಂಗ ಪರಿವರ್ತನೆ

ಕೊಲ್ಹಾಪುರದಲ್ಲಿ ತುಳಸಾ ಪಾಟೀಲ್ ಎಂಬ ೧೭ ವರ್ಷದ ತರುಣಿಯು ತಲೆನೋವು ಮತ್ತು ಜ್ವರದಿಂದ ನರಳುತ್ತಿದ್ದು, ಚಿಕಿತ್ಸೆಗಾಗಿ ಆಸ್ಪತ್ರೆಗೆ ಸೇರಿ ಮೊನ್ನೆ ಆಕೆಗೆ ವೈದ್ಯರು ಶಸ್ತ್ರ ಚಿಕಿತ್ಸೆ ನಡೆಸಲಾಗಿ, ಅವಳು ಲಿಂಗಪರಿವರ್ತನೆ ಹೊಂದಿ ಗಂಡಸಾಗುತ್ತಿರುವ ಚಿಹ್ನೆಗಳು ಕಂಡುಬಂದುವೆಂದು ವರದಿಯಾಗಿದೆ.

ಹಂಗೆರಿ ಬಿಕ್ಕಟ್ಟಿನಲ್ಲಿ ನೆಹರೂ ಪ್ರವೇಶಿಸುವುದಿಲ್ಲ

ಹಂಗೆರಿಯಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ಪ್ರವೇಶಿಸಲು ಪಂಡಿತ ನೆಹರೂರವರು ಅಲ್ಲಿನ ಪ್ರಧಾನಿ ನಾಗಿಯವರ ಮನವಿಯನ್ನು ನಿರಾಕರಿಸಿರುವರೆಂದು ವರದಿಯಾಗಿದೆ. ಈ ವಿಚಾರವು ಆಂತರಿಕ ವ್ಯವಹಾರವೆಂದು ನೆಹರೂರವರು ಭಾವಿಸಿರುತ್ತಾರೆ.

ಪ್ರದರ್ಶನದಲ್ಲಿ ಭಾಗವಹಿಸಿದ್ದ ಮಕ್ಕಳಿಗೆ ಹಾಲಿನ ಪುಡಿ ಮತ್ತು ತುಪ್ಪ

ದಸರಾ ವಸ್ತು ಪ್ರದರ್ಶನದ ಸಮಯದಲ್ಲಿ ಏರ್ಪಾಡಾಗಿದ್ದ ಮಕ್ಕಳ ಪ್ರದರ್ಶನದಲ್ಲಿ ಭಾಗವಹಿಸಿದ್ದ ಪ್ರತಿ ಮಗುವಿಗೂ ತಲಾ ೧೧ ಪೌಂಡು ತುಪ್ಪ ಮತ್ತು ೧೦ ಪೌಂಡು ಹಾಲಿನ ಪುಡಿಯನ್ನು ಉಚಿತವಾಗಿ ಕೇಂದ್ರ ಆಹಾರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಕೊಟ್ಟಿರುತ್ತಾರೆ. ಅಲ್ಲದೆ ಪ್ರದರ್ಶನದಲ್ಲಿ ಗಾಂಧಿಯವರ ವಿವಿಧ ಭಾವಗಳನ್ನು ಪ್ರದರ್ಶಿಸಿದ ಭದ್ರಾವತಿಯ ಶ್ರೀ ಆರೋಗ್ಯಸ್ವಾಮಿ ಮತ್ತು ಮಿಸ್ಟರ್ ಮೈಸೂರು ಪ್ರಶಸ್ತಿ ಗಳಿಸಿದ ಶ್ರೀ ಥಾಮಸ್‌ರವರಿಗೆ ತಲಾ ೧೦೦ ಪೌಂಡು ತುಪ್ಪ ಮತ್ತು ೧೧೦ ಪೌಂಡು ಹಾಲಿನ ಪುಡಿಯನ್ನು ಅವರು ಕೊಡಲು ಏರ್ಪಡಿಸಿರುತ್ತಾರೆ. ಸಂಬಂಧಪಟ್ಟವರು ವಸ್ತು ಪ್ರದರ್ಶನದ ಕಛೇರಿಯಲ್ಲಿ ಅವನ್ನು ಪಡೆಯಬಹುದು.

ಧನ್ವಂತರಿ ಜಯಂತಿ

ಆಯುರ್ವೇದ ವೈದ್ಯ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಧನ್ವಂತರಿ ಜಯಂತಿಯನ್ನು ನೆರವೇರಿಸಲಾಗುವುದು. ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತರು ಅಧ್ಯಕ್ಷತೆ ವಹಿಸುವರು. ಡಾ|| ಬಿ. ದೇವೇಂದ್ರಪ್ಪನವರ ಸಂಗೀತವು ಏರ್ಪಾಡಾಗಿದೆ.

ಆರ್. ವೆಂಕಟರಾಮಯ್ಯನವರು ನೂತನ ಮೈಸೂರಿನ ಶ್ರೇಷ್ಠ ನ್ಯಾಯಾಧೀಶರು

ರಾಷ್ಟ್ರಾಧ್ಯಕ್ಷರಿಂದ ನೇಮಕ

ನೂತನ ಮೈಸೂರು ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾಗಿ ಈಗಿನ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಆರ್. ವೆಂಕಟರಾಮಯ್ಯನವರನ್ನು ರಾಷ್ಟ್ರಾಧ್ಯಕ್ಷರು ನೇಮಿಸಿರುತ್ತಾರೆ. ಹೈಕೋರ್ಟ್ ನ್ಯಾಯಾಧೀಶರುಗಳಾದ ಶ್ರೀಗಳು ನಿಟ್ಟೂರು ಶ್ರೀನಿವಾಸರಾಯರು ಮತ್ತು ಹೆಚ್. ಹೊಂಬೇಗೌಡರು ನೂತನ ಹೈಕೋರ್ಟಿನ ನ್ಯಾಯಾಧೀಶರಾಗಿ ನೇಮಿಸಲ್ಪಟ್ಟಿರುವರು. ಅವರುಗಳು ಬರುವ ೧ ರಿಂದ ಅಧಿಕಾರವನ್ನು ವಹಿಸಿಕೊಳ್ಳುವರು.

ಹಂಗೆರಿಯಲ್ಲಿ ಸರ್ಕಾರಕ್ಕೂ ದಂಗೆಕೋರರಿಗೂ ಒಪ್ಪಂದ

ಹಂಗೆರಿಯಲ್ಲಿ ಸರ್ಕಾರಕ್ಕೂ ಮತ್ತು ದಂಗೆಕೋರರಿಗೂ ಒಪ್ಪಂದವಾಗಿದೆ. ದಂಗೆಕೋರರು ಶಸ್ತ್ರಾಸ್ತ್ರಗಳನ್ನು ಒಪ್ಪಿಸಿದ ೨೪ ಗಂಟೆಗಳೊಳಗಾಗಿ ಬುಡಾಪೆಸ್ಟಿನಿಂದ ರಷ್ಯಾ ಸೈನ್ಯಗಳು ವಾಪಸಾಗಲಿವೆ. ಮೊನ್ನೆ ರಾತ್ರಿ ಬಹಳ ಹೊತ್ತಿನವರೆಗೂ ಅಲ್ಲಿ ರಷ್ಯಾ ಟ್ಯಾಂಕುಗಳು ಕಾರ್ಯಾಚರಣೆ ನಡೆಸುತ್ತಿದ್ದುವು. ನೆನ್ನೆ ಶಾಂತಿ ಮೂಡಿತ್ತು.

ಸಿ. ಜೆ. ಅಂಬಲಿಯವರಿಗೆ ಪಾರ್ಶ್ವ ವಾಯು

ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಸಿ. ಜೆ. ಅಂಬಲಿಯವರು ಪಾರ್ಶ್ವವಾಯು ರೋಗಪೀಡಿತರಾಗಿ ಬೆಂಗಳೂರಿನ ಬೌರಿಂಗ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವರು. ಅವರ ಮೆದುಳಿನ ಬಲ ಭಾಗ ಮತ್ತು ಶರೀರದ ಎಡಭಾಗಕ್ಕೆ ಪಾರ್ಶ್ವವಾಯು ತಗುಲಿದೆ. ಅವರು ಮಾತನಾಡುವುದು ಸ್ವಲ್ಪ ಕಷ್ಟವಾಗಿದೆ. ಅವರ ಸ್ಥಿತಿ ಬಗ್ಗೆ ಕಾತರಪಡಬೇಕಾಗಿಲ್ಲವಾದರೂ, ಇನ್ನೂ ಒಂದು ತಿಂಗಳ ಕಾಲ ಅವರು ಆಸ್ಪತ್ರೆಯಲ್ಲಿರಬೇಕಾಗುವುದು.

ಕತ್ತರಿಸಿದ ಕೈ ಕಸದ ತೊಟ್ಟಿಯಲ್ಲಿ

ನಗರದ ಕಬೀರ್ ರಸ್ತೆಯಲ್ಲಿರುವ ಕಸದ ತೊಟ್ಟಿಯೊಂದರಲ್ಲಿ ಕತ್ತರಿಸಿದ ಕೈಯೊಂದು ಬಿದ್ದಿದ್ದುದನ್ನು ಮೊನ್ನೆ ಸಂಜೆ ಪೊಲೀಸರು ಪತ್ತೆಹಚ್ಚಿದರು. ಅದು ವಿಪರೀತ ದುರ್ವಾಸನೆಯಿಂದ ಕೂಡಿತ್ತು. ಕೆಲವು ದಿನಗಳ ಹಿಂದೆ ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲ್ಪಟ್ಟಿದ್ದ ಕೆ. ಆರ್. ಮಿಲ್ಸಿನ ಕಾರ್ಮಿಕನೊಬ್ಬನ ಬಲಗೈಯನ್ನು ಕತ್ತರಿಸಲಾಗಿತ್ತೆಂದೂ, ಅದನ್ನು ಹೂಳುವಂತೆ ಜಮಾದಾರನಿಗೆ ಕೊಡಲಾಗಿತ್ತೆಂದೂ, ಅವನು ತೊಟ್ಟಿಗೆ ಹಾಕಿದ್ದನೆಂದೂ ಹೇಳಲಾಗಿದೆ.

○ ನಗರದಲ್ಲಿರುವ ಶ್ರೀ ಚಾಮರಾಜೇಂದ್ರ ಅಡ್ವಾನ್ಸ್ ಟ್ರೇನಿಂಗ್ ಶಾಲೆಯ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಕಾಲೇಜಿನ ಪ್ರೊ|| ಬಿ. ಕೆ. ಪುಟ್ಟಸ್ವಾಮಿಗೌಡರು ಮಾಡುವರು. ಸಿವಿಲ್ ನ್ಯಾಯಾಧೀಶರಾದ ಶ್ರೀ ಬಿ. ತಿಮ್ಮಪ್ಪರಾಜ ಅರಸುರವರು ಅಧ್ಯಕ್ಷತೆ ವಹಿಸುವರು.

ಇಸ್ರೇಲ್ ಮತ್ತು ಈಜಿಪ್ಟುಗಳ ಹೋರಾಟ ಆರಂಭ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಇಸ್ರೇಲ್ ಸೈನ್ಯಗಳು ನೆನ್ನೆ ರಾತ್ರಿ ಈಜಿಪ್ಟಿನ ಪಡೆಗಳ ಮೇಲೆ ಧಾಳಿ ಮಾಡಿದುದಾಗಿಯೂ, ಈಜಿಪ್ಟಿನ ದಳಗಳು ಭೂಮಿ ಮತ್ತು ಸಮುದ್ರ [illegible] ಮೇಲೆ ಧಾಳಿ ಮಾಡಿದ ಪ್ರಯುಕ್ತ ಇಸ್ರೇಲಿನವರ ಧಾಳಿ ನಡೆಯಿತೆಂದೂ ಇಸ್ರೇಲಿನ ರೇಡಿಯೋ ವರದಿ ಮಾಡಿದೆ.

ನೂತನ ಮೈಸೂರಿನಲ್ಲಿ ಎರಡು ಪೊಲೀಸ್ ವಿಭಾಗಗಳು

ನೂತನ ಮೈಸೂರಿನಲ್ಲಿ ಎರಡು ಪೊಲೀಸ್ ವಿಭಾಗಗಳಿದ್ದು, ಒಂದರ ಕೇಂದ್ರವು ಬೆಂಗಳೂರಿನಲ್ಲೂ ಮತ್ತೊಂದರದು ಬೆಳಗಾಮಿನಲ್ಲೂ ಇರುವುವು. ಇವುಗಳ ಮೇಲ್ವಿಚಾರಣೆಯಲ್ಲಿ ಒಬ್ಬೊಬ್ಬ ಡೆಪ್ಯುಟಿ ಪೊಲೀಸು ಐ. ಜಿ. ಯವರು ಇರುವರು. ಬಳ್ಳಾರಿಯಲ್ಲಿ ಇರುವ ಡಿ. ಐ. ಜಿಯವರ ಕಛೇರಿಯನ್ನು ರದ್ದು ಪಡಿಸಿ, ಅಲ್ಲಿರುವ ಡಿ. ಐ. ಜಿ. ಶ್ರೀ ಚಾಂಡಿಯವರನ್ನು ಬೆಳಗಾಮಿಗೆ ವರ್ಗಾಯಿಸಲಾಗಿದೆ. ಬಳ್ಳಾರಿಯಲ್ಲಿ ಅರಣ್ಯ ಇಲಾಖೆ, ಆರೋಗ್ಯ ಇಲಾಖೆ ಡೆಪ್ಯುಟಿ ಡೈರೆಕ್ಟರ್ ಮತ್ತು ಅಬ್ಕಾರಿ ಇಲಾಖಾ ಡೆಪ್ಯುಟಿ ಕಮಿಷನರ ಡಿವಿಜನ್ ಕಛೇರಿಗಳನ್ನು ಏರ್ಪಡಿಸಲಾಗುವುದು.

ಅಲ್ಜೀರಿಯಾ ರಾಷ್ಟ್ರೀಯರ ಹೋರಾಟಕ್ಕೆ ಅರಬ್ ದೊರೆ ನೆರವು

ಅಲ್ಜೀರಿಯದ ರಾಷ್ಟ್ರೀಯರ ಸ್ವಾತಂತ್ರ್ಯ ಚಳುವಳಿಗೆ ಸಾದಿ ಅರೇಬಿಯಾ ದೊರೆ ಇಬ್ನ್ ಸಾದರು ೧೦ ಲಕ್ಷ ರಿಯಲ್‌ಗಳ ಚಂದಾ ಕೊಟ್ಟಿರುತ್ತಾರೆ.

ನಾಳಿದ್ದು ಬೆಳಿಗ್ಗೆ ನೂತನ ಗವರ್ನರರ ಪ್ರಮಾಣ ವಚನ

ಶ್ರೇಷ್ಠ ನ್ಯಾಯಾಧೀಶರ ಮುಂದೆ ಸಮಾರಂಭ

ಸ್ವಂ. ಸು. ಸಂ.] ಬೆಂಗಳೂರು ೩೦

ಮೈಸೂರು ರಾಜಪ್ರಮುಖರು ನಾಳಿದ್ದು ಬೆಳಿಗ್ಗೆ ನೂತನ ಸಂಸ್ಥಾನದ ಗವರ್ನರರಾಗಿ ಶ್ರೇಷ್ಠ ನ್ಯಾಯಾಧೀಶರ ಸಮ್ಮುಖದಲ್ಲಿ ಇಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸುವರು.

○ ನೂತನ ಮಂತ್ರಿಮಂಡಲದಲ್ಲಿ ಒಟ್ಟು ೧೬ ಜನ ಸಚಿವರುಗಳಿರುವರೆಂದು ನಿರ್ಧಾರವಾಗಿರುವುದಾಗಿ ಗೊತ್ತಾಗಿದೆ.

○ ನೂತನ ಹೈಕೋರ್ಟಿನ ಪ್ರಪ್ರಥಮ ಅಧಿವೇಶನವು ಬರುವ ೫ನೇ ತಾರೀಖು ನಡೆಯುವುದು.

ನಾಳೆ ರಾತ್ರಿ ರಾಜೇಂದ್ರಪ್ರಸಾದರ ಆಗಮನ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ವಿಶೇಷ ರೈಲಿನಲ್ಲಿ ಮದ್ರಾಸಿನಿಂದ ನಾಳೆ ರಾತ್ರಿ ೯-೧೫ ಗಂಟೆಗೆ ಇಲ್ಲಿಗೆ ಆಗಮಿಸುವರು. ಅವರನ್ನು ಸಿವಿಲ್ ಪ್ರದೇಶದ ನಿಲ್ದಾಣದಲ್ಲಿ ರಾಜಪ್ರಮುಖರು, ಶ್ರೀಗಳಾದ ಕಡಿದಾಳ್ ಮಂಜಪ್ಪ, ಎಸ್. ನಿಜಲಿಂಗಪ್ಪ, ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯ ಮುಂತಾದವರು ಸ್ವಾಗತಿಸುವರು.

ದಸರಾ ಉತ್ಸವ ಕಾಲದಲ್ಲಿ ರೈಲ್ವೆ ಸಂಚಾರದ ಅವ್ಯವಸ್ಥೆ

ಕಳೆದ ನವರಾತ್ರಿ ಉತ್ಸವದಲ್ಲಿ ಎಲ್ಲಾ ಏರ್ಪಾಡುಗಳಿಗಿಂತಲೂ ರೈಲ್ವೆ ಸಂಚಾರ ವ್ಯವಸ್ಥೆಯು ಅತ್ಯಂತ ಅಸಮರ್ಪಕವಾಗಿದ್ದಿತೆಂದು ಧಾರಾಳವಾಗಿ ಹೇಳಬಹುದು. ಲಕ್ಷಾಂತರ ಜನರು ಬರುವ ನಿರೀಕ್ಷೆಯಿದ್ದ ಈ ಸಂದರ್ಭದಲ್ಲಿ ರೈಲ್ವೆ ಅಧಿಕಾರಿಗಳು ಸೂಕ್ತವಾದ ಸೌಕರ್ಯಗಳನ್ನು ಕಲ್ಪಿಸದೆ ಸಂಪೂರ್ಣವಾಗಿ ಕರ್ತವ್ಯಲೋಪ ಮಾಡಿದ್ದಾರೆ. ನಗರಕ್ಕೆ ಬಂದ ಅಗಾಧ ಜನಸಂದಣಿಗೆ ಉಂಟಾದ ವಿಪರೀತ ತೊಂದರೆಗಳಲ್ಲಿ ಪ್ರಯಾಣದ ಅಸೌಕರ್ಯವು ಮಿತಿಮೀರಿದ್ದಿತು. ರೈಲ್ವೆಯವರ ಕರ್ತವ್ಯಲೋಪವು ಒಂದು ಅಕ್ಷಮ್ಯ ಅಪರಾಧವೇ ಸರಿ

ಇತರ ಪ್ರಾಂತಗಳಲ್ಲಿ ಇಂತಹ ಸಮಾರಂಭಗಳು ನಡೆದಾಗ ಹಲವಾರು ವಾರಗಳ ಮುಂಚೆಯೇ ತಕ್ಕ ವ್ಯವಸ್ಥೆಗಳನ್ನು ಮಾಡಿ ಸಾರ್ವಜನಿಕರಿಗೆ ತಿಳುವಳಿಕೆ ಕೊಟ್ಟು ಹಲವಾರು ಸ್ಪೆಷಲ್ ಟ್ರೈನುಗಳನ್ನು ಓಡಿಸಿ ಪ್ರಯಾಣಿಕರಿಗೆ ಸೌಲಭ್ಯಗಳನ್ನು ಒದಗಿಸುತ್ತಾರೆ. ಉದಾಹರಣೆಗಾಗಿ ಆವಡಿಯಲ್ಲಿ ನಡೆದ ಕಾಂಗ್ರೆಸ್ ಅಧಿವೇಶನಕ್ಕೆ ಬಂದ ಲಕ್ಷಾಂತರ ಜನರನ್ನು ಪ್ರತಿ ದಿನವೂ ಸಾಗಿಸಲು ಹತ್ತು ನಿಮಿಷಕ್ಕೊಂದರಂತೆ ಸ್ಪೆಷಲ್ ಟ್ರೈನುಗಳನ್ನು ಬಿಡುತ್ತಿದ್ದರು ಹಾಗೆಯೇ ಕುಂಭಕೋಣದಲ್ಲಿ ನಡೆದ ಮಹಾಮಖದ ಕಾಲದಲ್ಲಿಯೂ ಸಮರ್ಪಕವಾದ ಏರ್ಪಾಡು ಮಾಡಲಾಗಿತ್ತು. ಇತರ ಕಡೆಗಳಲ್ಲಿ ನಡೆಯುವ ಅನೇಕ ಸಣ್ಣ ಪುಟ್ಟ ಸಮಾರಂಭಗಳಿಗೂ ವಿಶೇಷ ವ್ಯವಸ್ಥೆಯನ್ನು ಮಾಡಲಾಗುವುದು ಆದರೆ ಮೈಸೂರಿನಲ್ಲಿ ೧೦ ದಿನಗಳ ಕಾಲ ನಡೆಯುವ ಈ ಭಾರಿ ಮಹೋತ್ಸವದಲ್ಲಿ ಸರಿಯಾದ ಏರ್ಪಾಡು ಮಾಡದಿದ್ದುದು ಆಶ್ಚರ್ಯಕರವಾಗಿದೆ

ಸಾಕಾದಷ್ಟು ಸ್ಪೆಷಲ್ ಟ್ರೈನುಗಳನ್ನು ಬಿಡಲಿಲ್ಲ. ಬಂದ ಟ್ರೈನುಗಳ ಕಾಲವೂ ಕ್ಲುಪ್ತವಾಗಿರಲಿಲ್ಲ ನಾಗನಹಳ್ಳಿಗೆ ಬಂದ ಒಂದು ಟ್ರೈನು ಮೈಸೂರನ್ನು ತಲಪಲು ಎರಡು ಗಂಟೆ ಕಾಯಬೇಕಾಯಿತು. ಬೆಂಗಳೂರಿನಿಂದ ಮೈಸೂರಿಗೆ ಹನ್ನೆರಡು ಗಂಟೆ ಕಾಲವನ್ನು ತೆಗೆದುಕೊಳ್ಳಲಾಯಿತು. ಅರಸೀಕೆರೆ ಕಡೆಯಿಂದ ಒಂದು ಸ್ಪೆಷಲ್ ಟ್ರೈನನ್ನು ಬಿಡದೆ ಬಹಳ ತೊಂದರೆಯಾಯಿತು

ಕೃಷ್ಣರಾಜನಗರಕ್ಕೆ ಸಾಕಾದಷ್ಟು ಟ್ರೈನುಗಳನ್ನೂ ಬಿಡದೆ ಸಹಸ್ರಾರು ಜನ ಹೆಂಗಸರು ಮಕ್ಕಳು ಮಳೆಗಾಲಯಲ್ಲಿ ರಾತ್ರಿಯೆಲ್ಲಾ ಪರಿತಪಿಸುವ ದೃಶ್ಯವು ಕರುಣಾಜನಕವಾಗಿದ್ದಿತು. ಈ ಭಾಗದಲ್ಲಿ ಅಧಿಕಾರಿಗಳ ಉದಾಸೀನತೆಯನ್ನು ಎಷ್ಟು ಖಂಡಿಸಿದರೂ ಸಾಲದು ಉತ್ಸವದ ಆನಂದವನ್ನು ಅನುಭವಿಸಲು ಬಂದವರಿಗೆ ಇನ್ನು ಎಂದೆಂದಿಗೂ ಬರಬಾರದೆಂಬಷ್ಟು ಬೇಸರವುಂಟಾಗುತ್ತಿತ್ತು. ಬೆಂಗಳೂರಿನಿಂದ ಹತ್ತು ನಿಮಿಷಕ್ಕೊಂದು ಬಸ್ಸು ಬರುತ್ತಿತ್ತೆಂದಮೇಲೆ ಪ್ರಯಾಣಿಕರ ಸಂಖ್ಯೆಯೆಷ್ಟೆಂಬುದನ್ನು ಊಹಿಸಿ, ರೈಲ್ವೆಯವರು ತಕ್ಕ ಏರ್ಪಾಡು ಮಾಡಬೇಕಾಗಿತ್ತು. ರೈಲ್ವೆಮುಖ್ಯಾಧಿಕಾರಿಗಳು ಸ್ಥಳಕ್ಕೆ ಬಂದಿದ್ದರೂ ಇಂತಹ ಜನಸಂದಣಿಯ ಕಾಲದಲ್ಲಿ ಬಹಿರಂಗವಾಗಿ ಅವರು ಕೇರಂ ಆಟದಲ್ಲಿ ತೊಡಗಿದ್ದರೆಂದಮೇಲೆ ಅವರ ಕರ್ತವ್ಯನಿಷ್ಠೆಯನ್ನು ಬೇರೆ ಹೇಳಬೇಕಾಗಿಲ್ಲ

ಈ ಸಾರಿ ಉತ್ಸವಕ್ಕೆ ಬಂದಿದ್ದ ಲಕ್ಷಾಂತರ ಜನರಿಗೆ ಉಂಟಾದ ತೊಂದರೆಗಳನ್ನು ಕೂಲಂಕಷವಾಗಿ ಪರಿಗಣಿಸಿ ಮುಂದೆ ಇಂತಹ ಪ್ರಸಂಗಗಳಿಗೆ ಅವಕಾಶವಿಲ್ಲದಂತೆ ಇಲಾಖೆಯ ಮೇಲ್ವಿಚಾರಕರು ತಕ್ಕ ಕ್ರಮ ಕೈಗೊಳ್ಳುವುದು ಅಗತ್ಯ. — ನೊಂದ ಪ್ರಯಾಣಿಕ

ರುಮೇನಿಯದಲ್ಲೂ ದಂಗೆ ?

ರುಮೇನಿಯದಲ್ಲಿ ಅಶಾಂತಿಯುಂಟಾಗಿರುವುದೆಂದು ಮ್ಯೂನಿಕ್ಕಿನಿಂದ ವಾರ್ತೆ ಬಂದಿದೆ ರುಮೇನಿಯಾ ಭಾಷೆಯ ಪ್ರಸಾರವೊಂದರಲ್ಲಿ " ರಷ್ಯವು ಹಂಗೇರಿ, ಕಮ್ಯೂನಿಸ್ಟರನ್ನು ಹೊರಡಿಸಿ " ಎಂದು ಕೂಗಿದುದಾಗಿ ಹೇಳಲಾಗಿದೆ ರುಮೇನಿಯಕ್ಕೆ ಹಿಂದೆ ಸೇರಿದ್ದ ಬೆಸ್ಸರೇಬಿಯ ಮತ್ತು ಬುಕೊವಿನಾಗಳನ್ನು ವಾಪಸು ಕೇಳಲಾಗಿದೆ

ಚುನಾವಣೆಯಲ್ಲಿ ಭಾಗವಹಿಸಲು ನಾಸ್ತಿಕ ರಂಗದ ಸ್ಥಾಪನೆ

ಮಹಾ ಚುನಾವಣೆಗಳಲ್ಲಿ ಭಾಗವಹಿಸಲು ನಿರೀಶ್ವರ ವಾದಿಗಳ ರಂಗವೊಂದನ್ನು ಏರ್ಪಡಿಸುವುದಕ್ಕಾಗಿ ಬರುವ ಜನವರಿ ತಿಂಗಳಲ್ಲಿ ಕಡಪಾ ಜಿಲ್ಲೆಯ ಪ್ರೊದ್ದುಟೂರಿನಲ್ಲಿ ದೇಶದ ನಾನಾ ಭಾಗಗಳ ನಾಸ್ತಿಕರ ಶಿಬಿರವು ಒಂದು ವಾರಕಾಲ ನಡೆಯುವುದು. ಇತ್ತೀಚೆಗೆ ಹೈದರಾಬಾದು ಸಂಸ್ಥಾನದ ಸೂರ್ಯಪೇಟೆಯಲ್ಲಿ ನಡೆದ ನಾಸ್ತಿಕರ ಸಮ್ಮೇಳನದಲ್ಲಿ ಶಿಬಿರ ನಡೆಸುವ ನಿರ್ಧಾರ ಮಾಡಲಾಗಿತ್ತು.

'ಪ್ರದೀಪ' ವಾರ ಪತ್ರಿಕೆ

ರಾಜಧಾನಿಯ ಇಟ್ಟಿಗೆಗೂಡಿನ ಶ್ರೀ ಟಿ ಸಿ. ಕೋದಂಡರಾಮಪಿಳ್ಳೆಯವರು ಪ್ರದೀಪ ಎಂಬ ಕನ್ನಡ ವಾರ ಪತ್ರಿಕೆಯನ್ನು ನಾಳೆಯಿಂದ ಹೊರಡಿಸುವುದಾಗಿ ತಿಳಿಯಪಡಿಸಿರುತ್ತಾರೆ

ವಸ್ತು ಪ್ರದರ್ಶನದಲ್ಲಿ ವಿ|| ಎಲ್. ವಿಶ್ವನಾಥ್ ರವರ ಅಮೋಘ ಸಂಗೀತ ಕಛೇರಿ

ದಸರಾ ವಸ್ತು ಪ್ರದರ್ಶನದಲ್ಲಿ ಕಳೆದ ಭಾನುವಾರ ಏರ್ಪಡಿಸಲಾಗಿದ್ದ ವಿದ್ವಾನ್ ಎಲ್. ವಿಶ್ವನಾಥರವರ ಸಂಗೀತವು ಜನಪ್ರಿಯವಾಗಿದ್ದಿತು ಅಲ್ಪ ಕಾಲಾವಧಿಯಲ್ಲೇ ಅತ್ಯುತ್ತಮವಾಗಿ ಹಾಡಿ ಕಛೇರಿ ಕಳೆಗಟ್ಟಿಸಿದರು. ಅಂದು ಹಾಡಿದ ಷಣ್ಮುಖಪ್ರಿಯ ರಾಗದ ವಿನ್ಯಾಸ ಕ್ರಮ ಮತ್ತು "ಸಿದ್ಧಿವಿನಾಯಕಂ " ಕೃತಿ ನೆರವಲು, ಸ್ವರ ವಿನ್ಯಾಸಗಳು ಉನ್ನತ ಮಟ್ಟದ್ದಾಗಿದ್ದು, ಕಡೆಯದಾಗಿ ಹಾಡಿದ' ಬೃಂದಾವನಸಾರಂಗದಕೃತಿ " ಮತ್ತು ತಿಲ್ಲಾನವು ಬಹು ಭಾವಪೂರ್ಣವಾಗಿದ್ದುವು. ಇಂತಹ ಉತ್ತಮ ಸಂಗೀತ ಕಛೇರಿ ಏರ್ಪಡಿಸಿದುದಕ್ಕಾಗಿ ವಸ್ತು ಪ್ರದರ್ಶನ ಸಮಿತಿಯವರು ಅಭಿನಂದನಾರ್ಹರು ಆದರೆ ಹೆಚ್ಚು ಕಾಲಾವಕಾಶ ಕೊಟ್ಟಿದ್ದಲ್ಲಿ ಸಂಗೀತಕ್ಕಾಗಿ ಉತ್ಸುಕರಾಗಿದ್ದ ಶ್ರೋತೃವೃಂದಕ್ಕೆ ನಿರಾಶೆಯಾಗುತ್ತಿರಲಿಲ್ಲ

—ಕಲಾಭಿಮಾನಿ

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ಮುತ್ತು						
ಕೊಯಮುತ್ತೂರುಸಣ್ಣ	೪೪	೮	೦	೪೪	೧೨	೦
ರತ್ನಚೂಡಿ	೪೦	೦	೦	೪೪	೧೦	೦
ಕಡ್ಡಿ	೪೦	೮	೦	೪೨	೪	೦
ಕೆಂಬೂತಿ	೪೨	೨	೦	೪೩	೮	೦
ಕಾರು ಸಣ್ಣ	೩೯	೪	೦	೪೦	೦	೨
ರಾಗಿ	೨೭	೦	೦	೪೪	೮	೦
ಜೋಳ	೪೬	೧೪	೦	೪೬	೧೪	೦
ನವಣೆ	೨೫	೦	೦			
ಕಂಬು	೩೮	೨	೦	೩೮	೮	೦
ಕಡಲೆಕಾಯಿ	೧೦	೮	೦	೨೨	೦	೦
ಎಳ್ಳು	೭೫	೮	೦	೮೭	೮	೨
ಹುರುಳಿ	೨೫	೧೨	೦	೨೬	೧೨	೦
ಹೆಸರು	೪೩	೦	೦	೫೧	೦	೦
ಹಲಸಂದೆ	೪೦	೧೨	೦	೩೨	೧೨	೦
ತೊಗರಿ	೨೯	೧೪	೦			
ಧನಿಯ	೨೧	೪	೦	೨೭	೧೪	೦
[illegible]	೪	೮	೦	೬	೦	೦
ಮೆಣಸಿನಕಾಯಿ	೮	೦	೦	೨೨	೧೨	೦
ತೆಂಗಿನಕಾಯಿ ೧೦೦೦	೧೬೫	೮	೦	೧೭೦	೨	೦

The Mysore Chemicals & Fertilisers, Ltd.,
129, Vanivilasa Road,
MYSORE

Sealed tenders are called for by the undersigned for the purchase of about 200 cart loads of Boiler cinders and 92 tons of coal powder accumulated at the Factory premises in Belagula, on or before the 10th November 1956. For further particulars, the undersigned may be contacted

A. Maniswamy Gowda,
Secretary.
Mysore Chemicals and Fertilisers Ltd

ಡಿಸೆಂಬರ್ ಅಂತ್ಯದೊಳಗೆ ಉಮೇದುವಾರರ ಅಖೈರುಆಯ್ಕೆ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಯವರ ವಿವರಣೆ

ಬೆಂಗಳೂರು ೨೦

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ಮೊನ್ನೆ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ, ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ನಿಲ್ಲುವ ಉಮೇದುವಾರರ ಹೆಸರುಗಳನ್ನು ಡಿಸೆಂಬರ್ ಅಂತ್ಯದೊಳಗೆ ಅಖೈರಾಗಿ ಗೊತ್ತುಪಡಿಸಲಾಗುವುದೆಂದು ತಿಳಿಸಿದರು.

ಸಮಾಜವಾದಿ ಸಮಾಜದ ಗುರಿಯಲ್ಲಿ ನಂಬಿಕೆಯಿರುವವರನ್ನು ಆರಿಸಲಾಗುವುದು ಆಯ್ಕೆ ಸಮಯದಲ್ಲಿ ಸ್ಪರ್ಧೆಗಾಗಿ ಮುಂದೆ ಬರುವವರ ಸಾಮಾಜಿಕ ಮತ್ತು ಆರ್ಥಿಕ ಮನೋಭಾವವನ್ನು ಗಮನಿಸಲಾಗುವುದು.

ಕ್ರಿಸ್ತರು, ಮುಸಲ್ಮಾನರು ಮತ್ತು ಮಹಿಳೆಯರಿಗೆ ಪ್ರಾತಿನಿಧ್ಯವಿರಬೇಕು. ನವೆಂಬರ್ ೧೫ರೊಳಗೆ ಪ್ರದೇಶ ಕಾಂಗ್ರೆಸ್ ಸಮಿತಿಗಳಿಗೆ ಹೆಸರುಗಳನ್ನು ಸೂಚಿಸಬೇಕು ನಂತರ ಜಿಲ್ಲಾ ಪ್ರತಿನಿಧಿಗಳು ಸಂಚಾರ ಮಾಡಿ, ೫ ಜನರ ಹೆಸರುಗಳನ್ನು ಶಿಫಾರಸು ಮಾಡುವರು ಡಿಸೆಂಬರ್ ೧೫ರೊಳಗೆ ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿಯವರು ಆ ಪೈಕಿ ಆಯ್ಕೆ ನಡೆಸಿದನಂತರ ಕೇಂದ್ರ ಸಮಿತಿಯವರು ಪಟ್ಟಿಯನ್ನು ಅಖೈರುಗೊಳಿಸುವರು–ಎಂದು ಅವರು ಹೇಳಿದರು

ಟ್ಯುನೀಷಿಯದಲ್ಲಿ ಘರ್ಷಣೆ

ಟ್ಯುನೀಷಿಯಾ ಉತ್ತರ ಪ್ರದೇಶದಲ್ಲಿ ಫ್ರೆಂಚರಿಗೂ, ಸ್ಥಳೀಯರಿಗೂ ಘರ್ಷಣೆಯಾಗಿ ಉಭಯ ಪಕ್ಷದ ೧೪ ಮಂದಿ ಮೃತಪಟ್ಟಿರುವರೆಂದೂ ೭೦ ಜನರಿಗೆ ಗಾಯಗಳಾದುದಾಗಿಯೂ ಗೊತ್ತಾಗಿದೆ ಫ್ರೆಂಚ್ ವಿಮಾನಗಳು ಒಂದು ಹಳ್ಳಿ ಮೇಲೆ ದಾಳಿ ಬಂದು ಜನರನ್ನು ಚದುರಿಸಿದುವು. ಜನರು ಆಗ ಫ್ರೆಂಚರ ಸಾಮಗ್ರಿ ಸಾಗಣೆಕೆ ಪಡೆಯ ಮೇಲೆ ಧಾಳಿ ಮಾಡುತ್ತಿದ್ದುದಾಗಿ ಹೇಳಲಾಗಿದೆ

ಲಂಚಕ್ಕಾಗಿ ೮ ಅಧಿಕಾರಿ
ವ ಜಾ

೧೬ ಅಧಿಕಾರಿಗಳಿಗೂ, ೪೭ ನೌಕ
ಎ ಚ್ಚ ರಿ ಕೆ

ಬೆಂಗಳೂ

ಸಂಸ್ಥಾನದ ಲಂಚ ನಿರೋಧ ಮತ್ತು
ತನಿಖೆ ಇಲಾಖೆಯು ಕಳೆದ ಸಾಲಿನ ವರ
ರ ಅಧಿಕಾರಿಗಳನ್ನು ವಜಾ ಮಾಡಿ, ೧
ದಿ ಅಧಿಕಾರಿಗಳು ಮತ್ತು ೪೭ ನೌಕರ
ರಿಕೆಯನ್ನು ಕೊಡಲಾಗಿದೆ ಇಲಾಖೆ
೮೯ ಕಛೇರಿಗಳಿಗೆ ಭೇಟಿಯಿತ್ತ ಅಲ್ಲದೆ, ೫
ರಿಗಳಲ್ಲಿ ಹಠಾತ್ತನೆ ತನಿಖೆ ನಡೆಸಿದ್ದರು
ಕಳೆದ ಸಾಲಿನಲ್ಲಿ ೧,೪೭೩ ಹೊಸ ಪ್ರ
ಳು ಬಂದಿದ್ದುವೆಂದೂ, ೮ ಪೈಕಿ ೭೫
ಗಳು ತೀವ್ರ ಅಪರಾಧಕ್ಕೆ ಸಂಬಂಧಪ
ವೆಂದೂ ಹೇಳಲಾಗಿದೆ. ೮೪೮ ವಿಧ್ಯ
ನಿರಾಧಾರವಾಗಿದ್ದುವು ೫೧ ಅರ್ಜಿಗಳ
ಡಿಸಲಾಯಿತು ೫ ಜನ ಅಧಿಕಾರಿಗಳನ
ವಂತವಾಗಿ ನಿವೃತ್ತಿಗೊಳಿಸಿ, ೯ ಮಂದಿ
ಕೆಳಗಿನ ದರ್ಜೆಗೆ ಇಳಿಸಲಾಯಿತು.

ಮನೆಗಳು ಕ್ರಯ

1) ಮೈಸೂರು ಸಿಟಿ ಕೃಷ್ಣರಾಜ ಮೊಹ
ಲ್ಲಾ ಉಮಾಂಬಾ ಅಗ್ರಹಾರದ ಬೀದಿ
ಡೋರ್ ನಂಬರು 563/1.
2) ಚಾಮುಂಡಿ ಎಕ್ಸ್‌ಟೆನ್ಷನ್ 2788
ನಂಬರು ಮನೆ.
3) ಕೃಷ್ಣರಾಜನಗರ ಟೌನ್ ಚಂದ್ರಮ
ಬೀದಿ ಡೋರ್ ನಂಬರು 241.
ವಿವರಗಳಿಗೆ :–

ಜಯ ಅಂಡ್ ಕಂಪೆನಿ
ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈ
ಫೋನ್ 520

Edited, Printed and Publish
A R. Nagarajan at Sadhvi
D. Subbiah Road, Mysore

ಸ್ಟ್ಯಾಂಡರ್ಡ್ ಮಿಲ್ಕ್ ಡೈ
ಬ್ರಾಂಚ್ : ನಾರಾಯಣಶಾಸ್ತ್ರಿ ರಸ್ತೆ, ಮೈಸೂರು
(ಮಹೇಶ್ವರಸ್ವಾಮಿ ದೇವಸ್ಥಾನದ ಎದುರು)

ಮೇಲ್ಕಂಡ ಸ್ಥಳದಲ್ಲಿ ನಮ್ಮ ಡೈರಿಯ ಶಾಖೆಯೊಂದನ್ನು ತಾ|| 1-11-56ರ
ಆರಂಭಿಸಲಾಗುವುದು ಮಾನ್ಯಗಿರಾಕಿಗಳು ಎಂದಿನಂತೆ ಸಹಕರಿಸಬೇಕಾಗಿ ಕೋರುತ್ತೆ

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ

ಮೈಸೂರು
ಸ್ಯಾಂಡಲ್ ಸಾಬೂನು

ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.

ಒಮ್ಮೆ ಉಪಯೋಗಿಸಿ ನೋಡಿ

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಮೆಂಬರು . ಐ. ಎಸ್. ಟಿ. ಎಂ ಎ.

ಟೆಲಿಫೋನ್ ನಂ. 792

ಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಹೊರಗಿನ ಪ್ರದೇಶಗಳಿಗೆ
ಸಂಚಕೆದಾರರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. ಅವೆನ್ಯೂ
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು -2

ಪುಟ : ೦೫] SADHVI : WEDNESDAY 31—10—1956 ಮೈಸೂರು : ಬುಧವಾರ ೩೧—೧೦—೧೯೫೬ [ಸಂಚಿಕೆ : ೬೯

ಆಂಗ್ಲೋ-ಫ್ರೆಂಚ್ ಸೈನ್ಯಗಳಿಂದ ಸೂಯೆಜ್ ಆಕ್ರಮಣವೇ

ಳ ಪ್ರದರ್ಶನ ಸ್ಪರ್ಧೆಯಲ್ಲಿ ಬಹುಮಾನ ವಿನಿಯೋಗ

ಮನ್ಮಹಾರಾಣಿಯವರ ಭಾಷಣ

ಮೈಸೂರು ೩೧

ನ್ಮಹಾರಾಣಿ ಶ್ರೀಮತಿ ತ್ರಿಪುರ ಸುಂದ ಣ್ಣಿಯವರು ನೆನ್ನೆ ಟೌನ್‌ಹಾಲಿನಲ್ಲಿ ಮಕ್ಕ ರ್ಶನದ ಸ್ಪರ್ಧೆಯಲ್ಲಿ ಗೆದ್ದವರಿಗೆ ಬಹು ಗಳನ್ನು ವಿನಿಯೋಗಿಸಿದರು. ಮತ್ತು ರಾ ನ್ನಪುರ ಬಡಾವಣೆಯಲ್ಲಿ ಏರ್ಪಾಡಾಗಿರು ಗೆ ಮತ್ತು ಮಕ್ಕಳ ಯೋಗಕ್ಷೇಮ ಕೇಂ ಆರಂಭೋತ್ಸವವನ್ನು ನೆರವೇರಿಸಿದರು.

ಮತಿ ಶಾಂತಾರವರಿಂದ ಪ್ರಾರ್ಥನೆಯಾ ತರ ಡಾ|| ಎ. ಚೊಕ್ಕಮ್ಮನವರ ಸುಸ್ವಾಗ ನಾಯನವು ನಡೆಯಿತು ಗುಣಾಂಬ ಹೆರಿ ತ್ತು ಮಕ್ಕಳ ಯೋಗಕ್ಷೇಮ ಟ್ರಸ್ಟಿನ ಮ ನಗರದ ರೆಡ್ ಕ್ರಾಸ್ ಸಂಸ್ಥೆಯ ಅಧ್ಯಕ್ಷ ಶ್ರೀ ಜೆ ಬಿ ಮಲ್ಲಾರಾಧ್ಯರವರು ಶ್ರೀ ಮ ರಾಣಿಯವರಿಗೆ ಬಿನ್ನವತ್ತಳೆಯನ್ನು ರಜ ಸಂಪುಟದಲ್ಲಿಟ್ಟು ಒಪ್ಪಿಸಿದರು

ಮತಿ ತ್ರಿಪುರಸುಂದರಮ್ಮಣ್ಣಿಯವರು ತ ಭಾಷಣದಲ್ಲಿ, ಮೈಸೂರು ನಗರದ ಮಕ್ಕಳ ಗಕ್ಷೇಮ ಸಂಸ್ಥೆಗೆ ಬ್ರಿಟಿಷ್ ಚಕ್ರಾಧಿಪತ್ಯ ಕ್ಕಳ ವಾರದ ಸ್ಪರ್ಧೆಗಳಲ್ಲಿ ಪ್ರಥಮ ಸ್ಥಾ ದಿರುವುದಕ್ಕಾಗಿ ಸಂತೋಷವನ್ನು ಸೂಚಿ ಮಕ್ಕಳ ವಾರಾಚರಣೆಯು ಕೇವಲ ಆ ದವಾಗಿರದೆ ಮಹಿಳೆಯರ ಮತ್ತು ಮಕ್ಕಳ ಗಕ್ಷೇಮ ಸಾಧನೆಗಾಗಿ ನಡೆಯುತ್ತಿರುವುದ ಅವರು ಪ್ರಶಂಸಿಸಿದರು ಈ ಗುರಿಯ ಸಾ ಇನ್ನೂ ವಿಪರೀತವಾಗಿ ಶ್ರಮಿಸಬೇಕಾಗಿ ವೆಂದು ಅವರು ಹೇಳಿದರು.

ಎಂ. ರಾಮಸ್ವಾಮಿಯವರಿಂದ ವಂದನಾ ಯಾದನಂತರ ರಾಷ್ಟ್ರ ಗೀತೆಯೊಡನೆ ಸ ಂಭವು ಮುಕ್ತಾಯವಾಯಿತು.

ನಗಹಳ್ಳಿಯಲ್ಲಿ ಮಹದೇಶ್ವರನ ಜಾತ್ರೆ

ನರಸೀಪುರ ತಾಲ್ಲೂಕು ಕಿಂ ಡ ಗ ಹಳ್ಳಿ ಕ್ಕ ಸೇರಿದ ಅರವತ್ತುಗೆಕೊಪ್ಪಲಿನಲ್ಲಿ ಶ್ರೀ ದೇಶ್ವರ ಸ್ವಾಮಿಯ ಕಾರ್ತೀಕ ಮಾಸದ ಯ ವಾರದಿಂದ ೫ನೇ ಕಾರ್ತೀಕದವರೆಗೆ ಮುವುದು ಅದರ ಅಂಗವಾಗಿ ಎಣ್ಣೆಮಜ್ಜ ನೆ, ಹಾಲಂಬ ಸೇವೆ, ಹುಲಿ ವಾಹನೋ ವೃಷಭ ವಾಹನೋತ್ಸವ, ಮತ್ತು ರಥೋ ಳು ಜರಗುವುವು

ಅಂಚೆ ಕಛೇರಿಯ ಪ್ರಾರಂಭೋತ್ಸವ

ನಂಜನಗೂಡು ೩೦

ನ [illegible] ರಸ್ತೆಯಲ್ಲಿ ಕಳೆದ ೭ನೇ ತಾ ಅಂಚೆ ಕಛೇರಿಯ ಪ್ರಾರಂಭೋತ್ಸ ಇ. ಪಿ. ಇನ್ಸ್‌ಪೆಕ್ಟರ್ ಶ್ರೀ ಬಿ [illegible] ನೆರವೇರಿಸಿದರು ಬಡಾವಣೆಯು ಹೊಸ ಕಛೇರಿಯ ಉಪಯೋಗವ ಡೆದುಕೊಳ್ಳಬೇಕೆಂದು ಸದ್ವಿದ್ಯಾ ಶಾಲೆಯ [illegible] ಶ್ರೀ ಬಿ. ವಿ. ಬಾಲಸುಬ್ರಹ್ಮಣ್ಯಂ [illegible] ಸಿದರು ಭಾನುವಾರಗಳಲ್ಲಿ ಕ್ಲಿಯರೆನ್ಸ್ ಯನ್ನು ಎಕ್ಸ್‌ಪ್ರೆಸ್ ಡೆಲಿವರಿ ವಿಶೇಷ ನಡೆಸಬೇಕೆಂದು ಅವರು ಕೋರಿದರು.

ಶ್ರೀಮನ್ಮಹಾರಾಣಿ

ಶ್ರೀ ತ್ರಿಪುರಸುಂದರಮ್ಮಣ್ಣಿಯವರು

ಸೀನಾಯ್ ಮರು ಭೂಮಿಯಲ್ಲಿ ಭೀಕರ ಹೋರಾಟ

ಈಜಿಪ್ಟಿನಲ್ಲಿ ೭೦ ಮೈಲಿ ದೂರ ಇಸ್ರೇಲ್ ಸೈನ್ಯಗಳ ಪ್ರವೇಶ

ಇಸ್ರೇಲ್ ಸೈನ್ಯಗಳು ನೆನ್ನೆ ಮಧ್ಯಾಹ್ನ ಸೀನಾಯ್ ಮರುಭೂಮಿಯಲ್ಲಿ ಈಜಿಪ್ಟಿನ ಸೈನ್ಯಗಳೊಡನೆ ಭೀಕರ ಹೋರಾಟ ನಡೆಸಿ, ಈಜಿಪ್ಟಿನೊಳಗೆ ೭೦ ಮೈಲಿ ದೂರದವರೆಗೂ ಬಂದಿರುವುದಾಗಿ ಹೇಳಲಾಗಿದೆ. ಸೂಯೆಜ್ ಕಾಲುವೆಗೆ ೧೫ ಮೈಲಿ ದೂರದ ಬಳಿ ಹೋರಾಟವಾಗುತ್ತಿದೆ

ನೆನ್ನೆ ರಾತ್ರಿ ಶತ್ರು ಸೈನ್ಯವು ಹಠಾತ್ತನೆ ಧಾಳಿ ನಡೆಸಿ ೭೦ ಮೈಲಿ ದೂರ ಮುಂದುವರಿದಿತ್ತೆಂದೂ, ಅದನ್ನು ಪೂರ್ಣವಾಗಿ ಹತ ಮಾಡಲಾಯಿತೆಂದೂ ಈಜಿಪ್ಟ್ ತಿಳಿಸಿದೆ ಮರುಭೂಮಿಯ ಬಳಿ ಉನ್ನೇಮಿಯಾ ಊರನ್ನು ಇಸ್ರೇಲು ವಶಪಡಿಸಿಕೊಂಡಿದೆ ಈಜಿಪ್ಟಿನವರ ಕಡೆ ೫೦೦ ಜನರಿಗೆ ಸಾವುನೋವುಗಳಾಗಿರುವುದಾಗಿ ಅನಧಿಕೃತ ವರದಿ ತಿಳಿಸಿದೆ ಇಸ್ರೇಲಿನಲ್ಲೆಲ್ಲಾ ಬ್ಲಾಕ್‌ಔಟ್ ಮಾಡಲಾಗಿದೆ.

ಈಜಿಪ್ಟಿನಲ್ಲಿ ಸೈನ್ಯಗಳಿಗೆ ರಜಾವನ್ನು ರದ್ದು ಮಾಡಿ ಎಲ್ಲರೂ ಸೇವೆಗೆ ಸಿದ್ಧವಾಗುವಂತೆ ಕರೆಯೀಯಲಾಗಿದೆ.

ಮೈಸೂರು ನಿಮ್ನವರ್ಗದ ಸಂಘದವರಿಗೂ ಬೌದ್ಧದೀಕ್ಷೆ

ಚನ್ನದ ಗಣಿಯಲ್ಲಿಯ ಸಂಸ್ಥಾನದ ನಿಮ್ನ ವರ್ಗ ಸಂಘದ ಅಧ್ಯಕ್ಷ ಶ್ರೀ ಜೆ.ಸಿ ಆದಿಮೂಲಂ ಅವರು ಕಳೆದ ಶನಿವಾರ ಬಹಿರಂಗ ಸಭೆಯಲ್ಲಿ ಭಾಷಣ ಮಾಡಿ, ಬರುವ ಮಕರ ಸಂಕ್ರಾಂತಿ ಹಬ್ಬದ ದಿನದಲ್ಲಿ ತಾವು ಮತ್ತು ತಮ್ಮ ೩,೦೦೦ ಅನುಯಾಯಿಗಳು ಬೌದ್ಧರಾಗುವುದಾಗಿ ತಿಳಿಸಿದ್ದಾರೆ.

ಬ್ರಿಟನ್ ಮತ್ತು ಫ್ರಾನ್ಸುಗಳಿಂದ ಸೂಯೆಜ್ ಆಕ್ರಮಣದ ಸೂಚನೆ

ಮಧ್ಯ ಪೂರ್ವ ರಾಷ್ಟ್ರಗಳಿಗೆ ಎಚ್ಚರಿಕೆ

ಈಜಿಪ್ಟ್ ಮತ್ತು ಇಸ್ರೇಲ್‌ಗಳ ನಡುವೆ ಆಗುತ್ತಿರುವ ಹೋರಾಟದಲ್ಲಿ ಬ್ರಿಟನ್ ಮತ್ತು ಫ್ರಾನ್ಸುಗಳ ಸೈನ್ಯಗಳು ಬರುವ ಕೆಲವು ಗಂಟೆಗಳಲ್ಲೇ ಪ್ರವೇಶಿಸಲಿರುವುದಾಗಿ ಆ ಎರಡು ರಾಷ್ಟ್ರಗಳೂ ಹೋರಾಟ ನಡೆಸುತ್ತಿರುವ ರಾಷ್ಟ್ರಗಳಿಗೆ ಎಚ್ಚರಿಕೆಯಿತ್ತಿರುವುದಾಗಿ ಬ್ರಿಟನ್ನಿನ ಪ್ರಧಾನಿ ಈಡನ್ನರು ನೆನ್ನೆ ಕಾಮನ್ಸ್ ಸಭೆಯಲ್ಲಿ ಘೋಷಿಸಿದರು. ಪೋರ್ಟ್ ಸೈಯದ್, ಇಸ್ಮೈಲಿಯಾ ಮತ್ತು ಸೂಯೆಜ್ ಆಯಕಟ್ಟು ಪ್ರದೇಶಗಳಿಗೆ ಬ್ರಿಟಿಷ್ ಮತ್ತು ಫ್ರೆಂಚ್ ಸೈನ್ಯಗಳು ಹೋಗಬೇಕಾಗಿರುವುದನ್ನು ಈಜಿಪ್ಟ್ ಒಪ್ಪಬೇಕೆಂದು ಆ ರಾಷ್ಟ್ರಕ್ಕೆ ಸೂಚಿಸಲಾಗಿದೆಯೆಂದೂ ಅವರು ತಿಳಿಸಿದರು ಫ್ರೆಂಚ್ ಪ್ರಧಾನಿ ಮೋಲೆಯವರೊಡನೆ ನೆನ್ನೆ [illegible]. ಸಂಭಾಷಣೆ ನಡೆಸಿದನಂತರ ಈಜಿಪ್ಟ್ ಮತ್ತು ಇಸ್ರೇಲ್‌ಗಳಿಗೆ ಜಂಟಿ ಸಂದೇಶವನ್ನು ಕಳುಹಲಾಗಿದೆ ೧೨ ಗಂಟೆಗಳೊಳಗೆ ಅದಕ್ಕೆ ಈಜಿಪ್ಟಿನ ಉತ್ತರವನ್ನು ಕೇಳಲಾಗಿದೆ.

ಈಜಿಪ್ಟ್ ಮತ್ತು ಇಸ್ರೇಲುಗಳು ಯುದ್ಧವಂತಹ ಕಾರ್ಯಾಚರಣೆಯೆಲ್ಲವನ್ನೂ ನಿಲ್ಲಿಸಿ, ತಮ್ಮ ಸೈನ್ಯಗಳನ್ನು ಸೂಯೆಜ್ ಕಾಲುವೆಯಿಂದ ೧೦ ಮೈಲಿ ಹಿಂದಕ್ಕೆ ಕರೆಸುವಂತೆ ಬ್ರಿಟನ್ ಮತ್ತು ಫ್ರಾನ್ಸುಗಳು ತಿಳಿಸಿವೆ.

ಕರ್ನಾಟಕದಲ್ಲಿ ಲೋಹಿಯಾರವರ ಪ್ರವಾಸ

ಭಾರತದ ಸಮಾಜವಾದಿ ಪಕ್ಷದ ನಾಯಕರಾದ ಡಾ|| ರಾಮಮನೋಹರ ಲೋಹಿಯಾರವರು ನಾಳೆಯಿಂದ ಬರುವ ೧೦ ನೇ ತಾರೀಕಿನವರೆಗೆ ನೂತನ ಮೈಸೂರು ಸಂಸ್ಥಾನದಲ್ಲಿ ಪ್ರವಾಸ ಕೈಗೊಳ್ಳುವರು ನಾಳೆ ಅವರು ಬೆಂಗಳೂರಿಗೆ ಆಗಮಿಸಿ ಮಾರನೇ ದಿನ ಮದ್ದೂರು, ಮಂಡ್ಯಗಳ ಮಾರ್ಗವಾಗಿ ಮೈಸೂರಿಗೆ ಬರುವರು ಅಂದು ಸಂಜೆ ಬಹಿರಂಗ ಸಭೆಯಲ್ಲಿ 'ಭಾಷಣ ಮಾಡುವರು ಮಾರನೇ ದಿನ ಹುಣಸೂರು ಮಾರ್ಗವಾಗಿ ಮಡಕೇರಿಗೆ ತೆರಳುವರು ನಂತರ ಮಂಗಳೂರು, ಸಕಲೇಶಪುರ, ಹಾಸನ, ಬೇಲೂರು. ಚಿಕ್ಕಮಗಳೂರು, ಶಿವಮೊಗ್ಗ, ಶಿರಸಿ, ಧಾರವಾಡ, ಹಾವೇರಿ, ಬ್ಯಾಡಗಿ, ಚಿತ್ರದುರ್ಗ, ಹೊಸಪೇಟೆ ಮತ್ತು ಬಳ್ಳಾರಿಗಳಲ್ಲಿ ಅವರು ಸಂಚರಿಸುವರು.

ನಗರದಲ್ಲಿ ಇಥಿಯೋಪಿಯಾ ಚಕ್ರವರ್ತಿಯವರ ಕಾರ್ಯಕ್ರಮ

ಇಥಿಯೋಪಿಯಾ ಚಕ್ರವರ್ತಿ ಹೇಲಿ ಸೆಲಾಸಿಯವರು ತಮ್ಮ ಪುತ್ರಪುತ್ರರ ಸಮೇತ ನಗರಕ್ಕೆ ೩ನೇ ತಾರೀಕು ಮಧ್ಯಾಹ್ನ ೧೨ ಘಂಟೆಗೆ ಆಗಮಿಸಿ ಲಲಿತಮಹಲಿನಲ್ಲಿ ತಂಗುವರು. ಅವರು ಶ್ರೀರಂಗಪಟ್ಟಣವನ್ನು [illegible] ಸಂಜೆ ೪ ಗಂಟೆಗೆ [illegible] ೪-೪೦ [illegible] ಕಾರ್ಖಾನೆಗಳನ್ನು ಅವರು ಸಂದರ್ಶಿಸುವರು ಸಂಜೆ ಅವರ ಟೆಕ್ನಿಕಲ್ ಇನ್ಸ್ಟಿಟ್ಯೂಟಿಗೆ ಭೇಟಿಯಿತ್ತು, ಅಲ್ಲಿಂದ ಬೃಂದಾವನಕ್ಕೆ ತೆರಳಿ ರಾತ್ರಿ ವಾಪಸು ಬಂದು ಮಾರನೆ ಬೆಳಿಗ್ಗೆ ಬೆಂಗಳೂರಿಗೆ ಹೊರಡುವರು

ಪ್ರಮಾಣ ವಚನ ಸ್ವೀಕಾರ ಸಮಾರಂಭಗಳ ವಿವರ

ಸ್ವಂ.ಸು. ತಂತಿ] ಬೆಂಗಳೂರು ೩೧

ಮೈಸೂರಿನಿಂದ ಈ ಬೆಳಿಗ್ಗೆ ರಾಜಪ್ರಮುಖರು ಇಲ್ಲಿಗೆ ಆಗಮಿಸಿದರು ನಾಳೆ ಬೆಳಿಗ್ಗೆ ೯-೪೦ ಗಂಟೆಗೆ ಅವರು ಇಲ್ಲಿನ ಅರಮನೆಯಲ್ಲಿ ಶ್ರೇಷ್ಠ ನ್ಯಾಯಾಧೀಶರ ಸಮ್ಮುಖದಲ್ಲಿ ಗವರ್ನರರಾಗಿ ಪ್ರಮಾಣ ವಚನವನ್ನು ಸ್ವೀಕರಿಸುವರು.

ಅನಂತರ ಅವರ ಸಮ್ಮುಖದಲ್ಲಿ ಶ್ರೀ ಎಸ್. ನಿಜಲಿಂಗಪ್ಪ ಮತ್ತು ಇತರ ನೂತನ ಸಚಿವರು ಪ್ರಮಾಣ ವಚನ ಕೈಗೊಳ್ಳಲಿರುವರು. ಶ್ರೇಷ್ಠ ನ್ಯಾಯಾಧೀಶರು ಮತ್ತು ಇತರ ನ್ಯಾಯಾಧೀಶರುಗಳು ಅನಂತರ ರಾಜಪ್ರಮುಖರ ಮುಂದೆ ಪ್ರಮಾಣ ವಚನ ಸ್ವೀಕರಿಸುವರು.

O ನಾಳಿದ್ದಿನ ಸಾರ್ವತ್ರಿಕ ರಜಾವು ಬ್ಯಾಂಕು ಮತ್ತು ವಿಮಾ ಸಂಸ್ಥೆಗಳಿಗೆ ಅನ್ವಯಿಸುತ್ತಿಲ್ಲ

ವಿಧಿವತ್ತಾಗಿ ಈಗಿನ ಮಂತ್ರಿಮಂಡಲದ ರಾಜೀನಾಮೆ ಇಲ್ಲ

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ಮಂತ್ರಿಮಂಡಲವು ರಾಜೀನಾಮೆಯನ್ನು ವಿಧಿವತ್ತಾಗಿ ಕೊಡುವುದಿಲ್ಲವೆಂದು ಗೊತ್ತಾಗಿದೆ ಸಚಿವರುಗಳು ಈ ದಿನ ಪತ್ರಿಕಾ ಸಮ್ಮೇಳನದಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ನಡೆಸಿದ ಕಾರ್ಯವನ್ನು ವಿಮರ್ಶಿಸಿದರಲ್ಲದೆ ಪತ್ರಿಕೆಗಳಿಗೆ ಕೃತಜ್ಞತೆಯನ್ನು ಸೂಚಿಸಿದರು.

ವಾಲಿಬಾಲ್ ಪಂದ್ಯಗಾರರಿಗೆ ಸತ್ಕಾರ

ಮೈಸೂರು ೩೧

ಪ್ಯಾರಿಸ್ಸಿನಲ್ಲಿ ನಡೆದ ವಿಶ್ವ ವಾಲಿಬಾಲ್ ಛಾಂಪಿಯನ್‌ಷಿಪ್ ಪಂದ್ಯದಲ್ಲಿ ಭಾರತ ಟೀಮನ್ನು ಪ್ರತಿನಿಧಿಸಿದ್ದ, ಖ್ಯಾತ ವಾಲಿಬಾಲ್ ಆಟಗಾರ ಶ್ರೀ ಬಿ ಶಂಕರನಾರಾಯಣರವರ ಗೌರವಾರ್ಥವಾಗಿ ಅವರ ಗೆಳೆಯರು ಶಾರದಾ ವಿಲಾಸ ವಿದ್ಯಾರ್ಥಿನಿಲಯದಲ್ಲಿ ಕಳೆದ ಶನಿವಾರ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಅದರ ಅಂಗವಾಗಿ ಒಂದು ಪ್ರದರ್ಶನ ವಾಲಿಬಾಲ್ ಪಂದ್ಯವನ್ನು ಏರ್ಪಡಿಸಲಾಗಿತ್ತು ಸಮಾರಂಭವು ಶ್ರೀ ಎಸ್. ಶೇಷಗಿರಿರಾಯರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಶ್ರೀ ಎಸ್ ವಿಶ್ವೇಶ್ವರಮೂರ್ತಿಯವರಿಂದ ಪ್ರಾರ್ಥನೆಯಾದನಂತರ ಶ್ರೀ ವಿ ವಿಶ್ವನಾಥರವರು ಸ್ವಾಗತ ಭಾಷಣ ಮಾಡಿದರು ಶ್ರೀ ಎಂ. ಎಸ್. ಅನಂತಸ್ವಾಮಿಯವರ ವಾದ್ಯ ಸಂಗೀತ, ಮತ್ತು ಶ್ರೀ ವೆಂಕಟದಾಸುರವರಿಂದ ಕನ್ನಡ ಗೀತೆಗಳು ಸಹ ನಡೆದುವು. ಅಡ್ವೊಕೇಟ್ ಶ್ರೀ ಕೆ ಎನ್ ಸೋಮಸುಂದರ್‌ರವರು ಶಂಕರನಾರಾಯಣರವರಿಗೆ ಶುಭ ಕೋರಿದರು ಶ್ರೀ ಶಂಕರನಾರಾಯಣರವರು ಸತ್ಕಾರಕ್ಕಾಗಿ ಕೃತಜ್ಞತೆ ಸೂಚಿಸಿ, ತಮ್ಮ ಪ್ಯಾರಿಸ್ ಪ್ರವಾಸದ ಅನುಭವವನ್ನು ವಿವರಿಸಿ ವಿದೇಶೀಯರ ಆಟದ ಚಮತ್ಕೃತಿಗಳನ್ನು ಭಾರತೀಯರಿಗೆ ಕಲಿಸಲು ತಾವು ವಾಲಿಬಾಲ್ ಶಿಕ್ಷಣ ಸಂಸ್ಥೆಯೊಂದನ್ನು ಸ್ಥಾಪಿಸುವುದಾಗಿ ತಿಳಿಸಿದರು ಅಧ್ಯಕ್ಷರ ಭಾಷಣವಾದನಂತರ ಶ್ರೀ ಎಂ ಪಿ ಅನಂತಸ್ವಾಮಿಯವರು ವಂದನಾರ್ಪಣೆ ಮಾಡಿದರು.

ನರಕ-ಚತುರ್ದಶಿಯ ಅಭ್ಯಂಗನ ಸ್ನಾನ

[illegible] ಶ್ರೀ ಸುಬ್ರಹ್ಮಣ್ಯಶಾಸ್ತ್ರಿ [illegible] ಬರೆದಿರುವ [illegible] —

[illegible] ದೇಶದ ಲೀಲಾವತಿ ಎಂಬ ವೇಶ್ಯೆಯು [illegible] ನಮಸ್ಕರಿಸಿ ನರಕಚತುರ್ದಶಿ ತಿಥಿಯ ಮಹಿಮೆಯನ್ನು ಕುರಿತು ಪ್ರಶ್ನೆ ಮಾಡಲು [illegible] ಪೂರ್ವದಲ್ಲಿ ಮಹಾ ವಿಷ್ಣುವು ದೇವತೆಗಳ ಪ್ರಾರ್ಥನಾನುಸಾರವಾಗಿ ಹಿರಣ್ಯಾಕ್ಷನನ್ನು ಸಂಹರಿಸಿ ಭೂದೇವಿಯ ಕಷ್ಟವನ್ನು ಪರಿಹರಿಸಿ ಕೆಲವು ಕಾಲ ಭೂದೇವಿಯೊಡನೆ ರಮಿಸುತ್ತಿರಲು ಆಗ ಭೂದೇವಿಗೆ ವಿಷ್ಣುವಿನ [illegible] ನರಕಾಸುರನೆಂಬ ದೈತ್ಯನು ಜನಿಸಿದನು. ಅವನು ಘೋರ ತಪಸ್ಸಿನಿಂದ ಬ್ರಹ್ಮನನ್ನು ಮೆಚ್ಚಿಸಿ ವರವನ್ನು ಪಡೆದವನಾಗಿ [illegible] ಜಗವನ್ನು ಪೀಡಿಸುತ್ತಿದ್ದನು. [illegible] ಸಹಿಸಲಾರದೆ ಇಂದ್ರಾದಿಗಳು [illegible] ದೇವತೆಗಳ [illegible] ದ್ವಾಪರ [illegible] ದಲ್ಲಿ ಕೃಷ್ಣ [illegible] ನರಕಾಸುರನನ್ನು ಸಂಹಾರ ಮಾಡುವುದಾಗಿ [illegible] ನರಕಾಸುರ [illegible] ಚತು [illegible]

[illegible] ದಯಕ್ಕೆ [illegible] ಲಕ್ಷ್ಮಿಯು [illegible] ಸನ್ನಿಧ್ಯವೂ [illegible] ಯಾಗಲಿ ಮಹಾ ವಿಷ್ಣುವಿನ [illegible] ದಿನ ತೈಲದಲ್ಲಿ ಮಹಾಲಕ್ಷ್ಮಿಯೂ [illegible] ಗಂಗೆಯೂ ಸನ್ನಿಧ್ಯ [illegible] ಮಾಡಿರುತ್ತಾರೆ. ಆದರಿಂದ [illegible] ವಿಧವೆಯರು, ಬ್ರಹ್ಮಚಾರಿಗಳೂ [illegible] ವಾಗಿ ಅಭ್ಯಂಗನ ಸ್ನಾನವನ್ನು ಮಾಡುವುದು ಶ್ರೇಯಸ್ಕರ

ತೈಲೇ ಲಕ್ಷ್ಮೀರ್ಜಲೇ ಗಂಗಾ ದೀಪಾವಲ್ಯಾಂ ಚತುರ್ದಶೀ ।
[illegible] ಸನ್ನಿಧಾನಂ ಕರೋತಿ ಹಿ ॥

[illegible] ಚತುರ್ದಶೀ
[illegible] ವ್ಯತೀತರೇ ।
[illegible] ನರಕೇ ಪ್ರಪದ್ಯತೇ ॥

ಮನೆಗಳು ಕ್ರಯಕ್ಕಿವೆ

1) ಮೈಸೂರು ಸಿಟಿ [illegible] ಹಿಂದಿನ ರಸ್ತೆ ಡೋರು ನಂಬರ [illegible]
2) [illegible] ಎಕ್ಸ್‌ಟೆನ್ಶ [illegible] 748/9 ನೇ ನಂಬರು ಮನೆ
3) ಕೃಷ್ಣ [illegible] ಚಂದ್ರವಾಳೀಶ್ವರ ಬೀದಿ ಡೋರ್ ನಂಬರು 41

ವಿಚಾರಿಸಿ:

ಜಯ ಲಂಡ್ ಕಂಪೆನಿ,
[illegible] ಮೈಸೂರು ಬ್ಯಾಂಕ್ ರಸ್ತೆ ಮೈಸೂರು
ಫೋನ್ 121

ಮಹಿಳಾ ಸಮ್ಮೇಳನದ ನಗರ ಶಾಖಾ ಸಂಘದ ಸಭೆ

[illegible]

[illegible] ಮಹಿಳಾ [illegible] ನಗರ ಶಾಖಾ ಸಂಘದ ಸಭೆಯು ಮೊನ್ನೆ ಶ್ರೀ [illegible] ಪಾಲಹಳ್ಳಿ ವೆಂಕಮ್ಮ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಹೊಸ ವರ್ಷದ ಅಧಿಕಾರ ವರ್ಗ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾಯಿಸಲಾಯಿತು

ಶ್ರೀಮತಿ [illegible] ಅಧ್ಯಕ್ಷಿಣಿಯಾಗಿಯೂ ಶ್ರೀಮತಿಯರ [illegible] ಪಾಲಹಳ್ಳಿ ವೆಂಕಮ್ಮ ಸೀತಾರಾಮಯ್ಯ ಮತ್ತು ಲೀಲಾವತಿ ಅಂಜನಪ್ಪನವರು ಉಪಾಧ್ಯಕ್ಷಿಣಿಯರಾಗಿಯೂ, ಶ್ರೀಮತಿಯರಾದ ಲಲಿತಮ್ಮ [illegible] ಮತ್ತು [illegible] ಗೌರವ ಖಜಾಂಚಿ ಮತ್ತು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಕಾರ್ಯಕಾರಿ ಸಮಿತಿಗೆ [illegible] ಮಹಿಳೆಯರನ್ನು ತೆಗೆದುಕೊಳ್ಳಲಾಯಿತು

ಸಂಘದ ಅಧ್ಯಕ್ಷಿಣಿಯಾಗಿ ಕೆಲಸ ನಿರ್ವಹಿಸಿದ ಶ್ರೀಮತಿ ರಾಜಕುಮಾರಿ ಲೀಲಾವತಿದೇವಿಯವರ ಸೇವೆಯನ್ನು ಪ್ರಶಂಸಿಸುವ [illegible] ಅಂಗೀಕರಿಸಲಾಯಿತು. ಶ್ರೀಮತಿ [illegible] ಯವರ ನಿಧನಕ್ಕಾಗಿ [illegible] ಸಂತಾಪವನ್ನು ವ್ಯಕ್ತಪಡಿಸಲಾಯಿತು. ಇಂದೂರಿನಲ್ಲಿ ಬರುವ [illegible] ನಡೆಯುವ ಅಖಿಲ ಭಾರತ ಮಹಿಳಾ ಸಮ್ಮೇಳನಕ್ಕೆ ಶ್ರೀಮತಿ ಪಿ. ವೆಂಕಮ್ಮನವರನ್ನು ಪ್ರತಿನಿಧಿಯಾಗಿ ಚುನಾಯಿಸಲಾಯಿತು

ಗೌತಮ ಬುದ್ಧ ನಾಟಕಕ್ಕೆ ವಸ್ತು ಪ್ರದರ್ಶನದಲ್ಲಿ ಬಹುಮಾನ

ದಸರಾ ವಸ್ತು ಪ್ರದರ್ಶನದಲ್ಲಿ ಆಡಿದ [illegible] ನಗರದ [illegible] ಗೌತಮ ಬುದ್ಧ ನಾಟಕಕ್ಕೆ [illegible] ಬಹುಮಾನವು ದೊರಕಿದೆ

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಯ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ. ಇಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು (Estd 1911

ಚಾಮುಂಡಿ ಹಾಲ್

ಹನುಮಂತರಾವ್ ರಸ್ತೆ, ಮೈಸೂರು

ಪ್ರಭಾ ಮತ್ತು ಒಲಂಪಿಯಾ ಚಿತ್ರಮಂದಿರಗಳ ನಡುವೆ
ಮೆಟ್ರೋ ಪಾಲ್ [illegible] ಬಿನ್ನಿ ಮಿಲ್ಲಿನ ಬಟ್ಟೆಗಳು ಕ್ಯಾಲಿಕೋ ಬೇಬಿ, ಅರವಿಂದ್ ಕಟಾವ್ [illegible] ಮಿಲ್‌ಗಳ ಬಟ್ಟೆಗಳು ನ್ಯಾಯವಾದ ಬೆಲೆಯಲ್ಲಿ ಉತ್ತಮ ತರಹೆಯ ಪ್ರಿಂಟ್ [illegible] ಮತ್ತು ಚೀಟಿಗಳು
ಒಮ್ಮೆ ದಯಮಾಡಿ ಭೇಟಿ ಕೊಡಿ
ಇ. ಪಿ. ನಂಜಪ್ಪ

Edited, Printed and Published by A R Nagarajan at Sadhvi Press D Subbiah Road Mysore

ಅಗ್ನಿಸ್ಫೋಟದ ಪರೀಕ್ಷೆಗಾಗಿ ಶರೀರದ ದಾನ

[illegible] ಮಾಡಿಕೊಡಲು [illegible] ಗೋಲ್ಡ್‌ಸ್ಮಿತರ ತಮ್ಮ [illegible] ದಲ್ಲಿ ಬರೆದಿದ್ದಂತೆ [illegible] ಶರೀರವನ್ನು [illegible] ಮೆಡಿಕಲ್ ಕಾಲೇಜಿಗೆ ಒಪ್ಪಿಸಲಾಗಿದೆ

ಕೊಳೆತ ಹುಲ್ಲಿನಲ್ಲಿದ್ದ ಅಕ್ಕಿಯ ಸೇವನೆಯಿಂದ ಇಬ್ಬರ ಮರಣ

ತುಮಕೂರು [illegible] ಕೊಳೆತ ಹುಲ್ಲಿನಲ್ಲಿದ್ದ ಅಕ್ಕಿಯನ್ನು ಉಪಯೋಗಿಸಿ ಊಟ ಮಾಡಿದವರ ಪೈಕಿ ಇಬ್ಬರು ಮೃತಪಟ್ಟಿರುತ್ತಾರೆ. ಆಹಾರವು ವಿಷವಾಗಿದ್ದ [illegible] ಹೇಳಲಾಗಿದೆ. ಇತರರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಇಬ್ಬರ ಸ್ಥಿತಿ ತೀವ್ರವಾಗಿದೆ

ಈಗಿನ [illegible] ಕಛೇರಿಯಲ್ಲಿ ನೂತನ ಪೈಕೋರ್ಟು

ನೂತನ ಮೈಸೂರು ಹೈಕೋರ್ಟನ್ನು ಈಗಿನ [illegible] ಮಂತ್ರಿಗಳ ಕೊಠಡಿಗಳಲ್ಲಿ [illegible] ವಿಧಾನಸೌಧಕ್ಕೆ [illegible] ಕೊಠಡಿ [illegible] ವಿವಿಧ ನ್ಯಾಯಮಂಡಲಿಗಳು [illegible] ಈಗಿನ [illegible]

ಮೈಸೂರು ಪೇಟೆ ಧಾರಣೆ

[illegible]	೪೦ ೦	೩ ೪ ೦
[illegible]	೪೩ ೦	೩ ೦ ೦
ರಾಗಿ	೪೦ ೨ ೦	೩೩ ೧ ೦
ರಾಗಿ	೨೬ ೧೨ ೦	೩೩ ೪ ೦
[illegible]	೨೮ ೨ ೦	೩೬ ೨ ೦
[illegible]	೭ ೯ ೦	೮ ೦
ತವಡು	೪ ೧೪ ೦	
ಕಡಲೆಬೀಜ	೪೩ ೧೪ ೦	
ಎಳ್ಳು	೮೨ ೪ ೦	೯೭ ೬ ೦
ಕಡಲೆ [illegible]	೯ ೪ ೦	೩೦ ೬ ೦
ಹುರುಳಿ	೨೫ ೧೦ ೦	೨೬ ೧೦ ೦
ಹೆಸರು	೪೫ ೦ ೦	೪೭ ೦ ೦
ಹಲಸಂದೆ	೪೦ ೦ ೦	೬೩ ೨ ೦
ಧನ್ಯ	೨೩ ೦ ೦	೨೫ ೧೦ ೦
[illegible]	೪ ೧೩ ೦	೬ ೬ ೦
ಮೆಣಸಿನ ಕಾಯಿ	೪ ೦ ೦	೨೩ ೦ ೦
ತೆಂಗಿನಕಾಯಿ ೧೦೦೦	೧೪೩ ೦ ೦	೨೪೧ ೨ ೦

ಕಾಶ್ಮೀರದ ಮೇಲೆ ಮತ್ತೆ ಧಾಳಿಯ ಕೂಗು

ಕಾಶ್ಮೀರದ ಮೇಲೆ ಪುನಃ ಧರ್ಮಯುದ್ಧವನ್ನು [illegible] ಕೈಗೊಳ್ಳಲಾಗುವುದೆಂದು [illegible] ಆಜಾದ್ ಕಾಶ್ಮೀರದ ಅಧ್ಯಕ್ಷ ಸರ್ದಾರ್ ಅಬ್ದುಲ್ ಖಯೂಂಖಾನ್ [illegible] ಹೇಳಿರುತ್ತಾರೆ. ಆಜಾದ್ ಕಾಶ್ಮೀರ ಸರ್ಕಾರದ ಸ್ಥಾಪನೆಯ [illegible] ಸಮಯದಲ್ಲಿ ಅವರು ಭಾಷಣ ಮಾಡುತ್ತಾ [illegible] ಕಾಶ್ಮೀರ್ ಬಗ್ಗೆ ಅಂತರ [illegible] ಒಪ್ಪಂದಕ್ಕೆ ತಲೆಬಾಗುವುದೆಂದೂ ಇಲ್ಲದಿದ್ದರೆ ಇಷ್ಟರಲ್ಲಿಯೇ ಕಾಶ್ಮೀರ [illegible] ಉಂಡೆಯೇ ಉಲ್ಲಂಘಿಸಲಾಗುತ್ತೆಂದೂ ಅವರು ತಿಳಿಸಿರುವರು

ಶಿವಮೊಗ್ಗದ ಪೌರಸಭಾ ನೌಕರರಿಗೆ ಹೆಚ್ಚು ತುಟ್ಟಿ ಭತ್ಯ

ಶಿವಮೊಗ್ಗ ಪೌರಸಭೆಯವರು ಸರ್ಕಾರದ ಮಂಜೂರಾತಿಯನ್ನು ನಿರೀಕ್ಷಿಸಿ ತಮ್ಮ ನೌಕರರಿಗೆ ತುಟ್ಟಿ ಭತ್ಯವನ್ನು ಹೆಚ್ಚಿಸಿರುತ್ತಾರೆ. ಸರ್ಕಾರದವರು ಅಂಗೀಕರಿಸದಿದ್ದರೆ ಹೆಚ್ಚಾಗಿ ಕೊಡಲಾದ ಹಣವನ್ನು ನೌಕರರ ಸಂಬಳದಲ್ಲಿ ಕಟಾಯಿಸುವಂತೆಯೂ ನಿರ್ಧರಿಸಲಾಗಿದೆ

SREE GANESH
TALKIES
From 1 11-56 For 2 days
JOHNNY DARK
(Technicolor)
With Tony Curtis and Piper Laurie
(With [illegible] wide angle)

From 3 11 [illegible] For 3 days
JUBAL
([illegible] & Technicolor)

[illegible] 11 6 For 2 days
Three Stripes in the Sun
With Aldo Ray & Phill Carey

ನಮ್ಮ ಸಮಸ್ತ ಹಿತೈಷಿಗಳಿಗೆ ದೀಪಾವಳಿ ಶುಭಾಶಯಗಳು



ನ್ಯಾಷನಲ್ ಡೈರಿ

ಬ್ರಾಂಚ್ ನಾರಾಯಣಶಾಸ್ತ್ರಿ ರಸ್ತೆ, ಮೈಸೂರು
([illegible] ಎದುರು)

ಮೋಟಾರ್ [illegible] ಬ್ರಾಂಚನ್ನು ತಾ। 1 11 56ರಿಂದ [illegible] ನಮ್ಮ ಗ್ರಾಹಕರು [illegible] ಸಹಕರಿಸಬೇಕಾಗಿ ಕೋರುತ್ತೇವೆ

ಚಾಮುಂಡೇಶ್ವರಿ ಟಾಕೀಸ್

1-11 56ನೇ ಗುರುವಾರದಿಂದ ಪ್ರತಿದಿನ 3 ಪ್ರದರ್ಶನಗಳು

ಲೋಕೇಶ್ವರಿಯವರ ಕನ್ನಡ ಚಿತ್ರ ★ **ಸ್ತ್ರೀ ರತ್ನ** ★

[illegible] ಸಂಧ್ಯಾ, ವಿದ್ಯಾ, ಸರೋಜಾ [illegible] ಮತ್ತು [illegible] ಮುಂತಾದವರು

ಪ್ರಭುದೇವಾ ಥಿಯೇಟರ್

([illegible] ಟಾಕೀಸ್)

1—1 56ನೇ ಗುರುವಾರದಿಂದ ಅಪೇಕ್ಷೆ 4ನೇ ವಾರ
ವಿಶ್ವಕಲಾ [illegible] ಕನ್ನಡ ಚಿತ್ರ ★ **ಓಹಿಲೇಶ್ವರ**

ಪಾತ್ರ — ಶಿರಂಜನಿ (ಜೂನಿಯರ್) [illegible] ಕುಮಾರ್, ಕಲ್ಯಾಣಕುಮಾರ್, ಜಿ. ವಿ. ಅಯ್ಯರ್ ನರಸಿಂಹರಾಜ, ಮೀನಾಕ್ಷಿ ಮುಂತಾದವರು

ರಿಜಿಸ್ಟರ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ . ೧೫] SADHVI : THURSDAY 1—11—1956 ಮೈಸೂರು : ಗುರುವಾರ ೧—೧೧—೧೯೫೬ [ಸಂಚಿಕೆ : ೯೦

ನೂತನ ಗವರ್ನರ್ ಮತ್ತು ಸಚಿವರಿಂದ ಪ್ರಮಾಣ ವಚನ

ನೂತನ ಮೈಸೂರಿನ ಸಚಿವ ಸಂಪುಟ

ಒಟ್ಟು ೧೩ ಜನ ಮಂತ್ರಿಗಳು

ಸ್ವಂ ಸು ತಂತಿ] ಬೆಂಗಳೂರು ೧

ನೂತನ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರ ಸಚಿವ ಸಂಪುಟದಲ್ಲಿ ಕೆಳಗೆ ಕಂಡವರು ಮಂತ್ರಿಗಳಾಗಿ ಈ ಬೆಳಗ್ಗೆ ಇಲ್ಲಿನ ಅರಮನೆಯಲ್ಲಿ ಗವರ್ನರ್ ಶ್ರೀ ಜಯಚಾಮರಾಜೇಂದ್ರ ಒಡೆಯರವರ ಮುಂದೆ ಪ್ರಮಾಣ ವಚನ ಸ್ವೀಕರಿಸಿದರು

ಶ್ರೀಗಳಾದ
ಎಸ್ ನಿಜಲಿಂಗಪ್ಪ
ಕಡಿದಾಳ್ ಮಂಜಪ್ಪ,
ಎಂ ವಿ ರಾಮರಾವ್,
ಹೆಚ್ ಎಸ್ ರುದ್ರಪ್ಪ
ಹೆಚ್ ಕೆ ವೀರಣ್ಣಗೌಡ
ಟಿ ಮರಿಯಪ್ಪ
ಆರ್ ಚನ್ನಿಗರಾಮಯ್ಯ
ಸಿ ಎಂ ಪೂಣಚ್ಚ,
ಎ ಭೀಮಪ್ಪನಾಯಕ್
ಎ ಬಿ. ಶೆಟ್ಟಿ,
ಎಂ ಪಿ ಪಾಟೀಲ್ ಮತ್ತು
ಜಗನ್ನಾಥರಾವ್ ಚಂದ್ರಿಕಿ

ಇನ್ನೂ ಇಬ್ಬರು ಮಂತ್ರಿಗಳನ್ನು ಮುಂದೆ ತೆಗೆದುಕೊಳ್ಳಲಾಗುವುದೆಂದು ಶ್ರೀ ನಿಜಲಿಂಗಪ್ಪನವರು ತಿಳಿಸಿದ್ದಾರೆ

ನೂತನ ಮೈಸೂರಿನ ಪ್ರಥಮ ಗೌರ್ನರ್

ಶ್ರೀ ಜಯಚಾಮರಾಜ ಒಡೆಯರ್

ಇಂದಿನಿಂದ ದೇವಾಲಯಗಳಲ್ಲಿ ರಾಜಾಶೀರ್ವಾದ ರದ್ದು

ಸಂಸ್ಥಾನದಲ್ಲಿ ಇಂದಿನಿಂದ ಎಲ್ಲಾ ದೇವಸ್ಥಾನ ಮತ್ತು ಇತರ ಮುಜರಾಯಿ ಸಂಸ್ಥೆಗಳಲ್ಲೂ ರಾಜಾಶೀರ್ವಾದದ ಬದಲಾಗಿ ದೇಶದ ಶ್ರೇಯಸ್ಸಿಗಾಗಿ [illegible] ನಡೆಸಬೇಕೆಂದು ಮುಜರಾಯಿ ಕಮೀಷನರು ಸೂಚನೆ ಹೊರಡಿಸಿದ್ದಾರೆ [illegible] ರದ್ದಾಗಿರುವುದೇ ಇದಕ್ಕೆ ಕಾರಣ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದ್

ಇಂದು ನೂತನ ಮೈಸೂರಿನ ಆರಂಭೋತ್ಸವವನ್ನು ನೆರವೇರಿಸುವರು

ಈಜಿಪ್ಟಿನ ರಾಜಧಾನಿ ಕೈರೊ ಮೇಲೆ ಬಾಂಬು ಧಾಳಿ

ಬ್ರಿಟನ್ನಿನ ವಿಮಾನಗಳಿಂದ ಆಕ್ರಮಣ

ಈಜಿಪ್ಟಿನ ರಾಜಧಾನಿ ಕೈರೋ ನಗರದ ಮೇಲೆ ನೆನ್ನೆ ರಾತ್ರಿ ೧೧ ಗಂಟೆ ಹೊತ್ತಿನಲ್ಲಿ ಬ್ರಿಟಿಷ್ ವಿಮಾನಗಳು ಬಾಂಬು [illegible] ಧಾಳಿ ಮಾಡಿದುವೆಂದು ಕೈರೊ ರೇಡಿಯೊ ವರದಿ ಮಾಡಿದೆ ಈಜಿಪ್ಟಿನ ಮಿಲಿಟರಿ ಗುರಿಗಳ ಮೇಲೆ ಬ್ರಿಟನ್ ಮತ್ತು ಫ್ರಾನ್ಸುಗಳ ಜಂಟಿ ಕಮಾಂಡಿಗೆ ಸೇರಿದ ಬಾಂಬರುಗಳ ಧಾಳಿ ನಡೆಯುತ್ತಿರುವುದಾಗಿ ಸೈಪ್ರಸ್ಸಿನಿಂದ ಹೊರಟ ಅಧಿಕೃತ ಪ್ರಕಟನೆ ತಿಳಿಸಿದೆ

ಈಜಿಪ್ಟಿನ ಯಾವ ವಿಮಾನ ನಿಲ್ದಾಣದ ಹತ್ತಿರವೂ ನಾಗರಿಕರು ಇರಬಾರದೆಂದೂ ಬ್ರಿಟನ್ನಿನ ರಕ್ಷಣಾ ಇಲಾಖೆಯು ಈಜಿಪ್ಟಿನ ಜನರಿಗೆ ತಿಳುವಳಿಕೆ ಕೊಟ್ಟಿದೆ

ಇತರ ದೇಶಗಳ ವಿರೋಧವಿದ್ದರೂ ಈ ಎರಡು ರಾಷ್ಟ್ರಗಳು ಈಜಿಪ್ಟಿನ ಮೇಲೆ ಧಾಳಿ ಮಾಡಿವೆ ಸೂಯೆಜ್ ಕಾಲುವೆಯನ್ನು ತಾತ್ಕಾಲಿಕವಾಗಿ ಆಕ್ರಮಿಸುವುದಾಗಿ ಬ್ರಿಟನ್ ಮತ್ತು ಫ್ರಾನ್ಸುಗಳು ಕೊಟ್ಟಿದ್ದ ಸೂಚನೆಯನ್ನು ಈಜಿಪ್ಟ್ ತಿರಸ್ಕರಿಸಿದ ಮೇಲೆ ಈ ಧಾಳಿ ಆರಂಭವಾಯಿತು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಗಾಂಧಿ [illegible] ೭ ೧೫ ಮತ್ತು ಮತ್ತೆ [illegible] ಕೆ. ಲಿಂಗರಾವ್ ಕನ್ನಡ ಗೀತೆಗಳು [illegible] ಹಿಂದಿ ಸಂಗೀತ ಮಧ್ಯಾಹ್ನ [illegible] ದೊರೆಸ್ವಾಮಿ ಅಯ್ಯಂಗಾರ್ ವೀಣೆ [illegible] ವನಿತಾ ವಿಹಾರ [illegible] ಸಂಜೆ [illegible] ಲಿಂಗರಾವ್ ಸಂಗೀತ ೭-೨೦ ನೃತ್ಯ ಗೀತೆ ೭ ೩೦ ಕನ್ನಡದಲ್ಲಿ ಭಾಷಣ [illegible] ಮುಂದಿನ ನೋಟ—ಭಾಷಣ [illegible] ಕನ್ನಡ ಗೀತೆಗಳು [illegible] ರೇಡಿಯೊ ಸಂಗೀತ ಸಮ್ಮೇಳನ

೭ ನೇ ತಾರೀಕು ಬೇಲೂರು ಕೊಲೆ ಮೊಕದ್ದಮೆಯ ತೀರ್ಪು

ಬೆಂಗಳೂರು ೧

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯಲ್ಲಿ ಇದೇ ೭ನೇ ತಾರೀಕು ಸೆಷನ್ಸ್ ನ್ಯಾಯಾಧೀಶರು ತಮ್ಮ ತೀರ್ಪನ್ನು ಕೊಡುವರು ಡಿಫೆನ್ಸ್ ಮತ್ತು ಪ್ರಾಸಿಕ್ಯೂಷನ್ [illegible] ನೆನ್ನೆ ಮುಕ್ತಾಯವಾದುವು ಪ್ರಾಸಿಕ್ಯೂಷನ್ ಪರ ಒಟ್ಟು ೧೧೬ ಮಂದಿಯನ್ನೂ ಮತ್ತು [illegible] ದಿನ [illegible] ಸಾಕ್ಷಿಗಳಾಗಿ ವಿಚಾರಿಸಲಾಯಿತು

ಅಮೆರಿಕಾ ನಿರ್ಣಯಕ್ಕೆ ಬ್ರಿಟನ್ ಫ್ರಾನ್ಸುಗಳ ವೀಟೊ

ಈಜಿಪ್ಟಿನ [illegible] ಭದ್ರತಾ ಸಮಿತಿಯಲ್ಲಿ [illegible] ನಿರ್ಣಯವನ್ನು ನೆನ್ನೆ ಬ್ರಿಟನ್ ಮತ್ತು ಫ್ರಾನ್ಸುಗಳು ವೀಟೊ ಮಾಡಿದುವು [illegible] ನಿರ್ಣಯದ [illegible] ಬ್ರಿಟನ್ ಮತ್ತು ಫ್ರಾನ್ಸುಗಳು [illegible] ಮಾಡಿದುವು ಬೆಲ್ಜಿಯಂ ಮತ್ತು ಆಸ್ಟ್ರೇಲಿಯಗಳು ತಟಸ್ಥವಾಗಿದ್ದುವು

ಅದೇ [illegible] ರಷ್ಯವು ನಿರ್ಣಯವೊಂದನ್ನು ತಂದು ಇಸ್ರೇಲು ತನ್ನ ಸೈನ್ಯಗಳನ್ನು [illegible] ರೇಖೆಯಿಂದ ಹಿಂದಕ್ಕೆ ಕರೆಸುವಂತೆ ಸೂಚಿಸಿತು

ಇಸ್ರೇಲ್-ಬ್ರಿಟನ್-ಫ್ರಾನ್ಸುಗಳ ಬಗ್ಗೆ ಭಾರತದ ಖಂಡನೆ

ಕಷ್ಟಕ್ಕೀಡಾದ ರಾಷ್ಟ್ರಕ್ಕೆ ಅಮೆರಿಕಾ ಸಹಾಯ

ಈಜಿಪ್ಟಿನ ಮೇಲೆ ಇಸ್ರೇಲು ಆಕ್ರಮಣ ನಡೆಸಿರುವುದೂ ಬ್ರಿಟನ್ ಮತ್ತು ಫ್ರಾನ್ಸುಗಳ ಈಜಿಪ್ಟಿಗೆ ಕೊಟ್ಟಿರುವ ಅಂತ್ಯ ಸೂಚನೆಯೂ ವಿಶ್ವಸಂಸ್ಥೆಯ ಪ್ರಣಾಳಿಕೆಯನ್ನು ಉದ್ದಿಶ್ಯಪೂರ್ವಕವಾಗಿ ಉಲ್ಲಂಘಿಸಿದಂತೆಯೇ ಎಂದು ಭಾರತ ಸರ್ಕಾರದವರು ತಿಳಿಸಿದ್ದಾರೆ ಅದರ ತೀವ್ರ ಪರಿಣಾಮವು ಆಫ್ರಿಕಾ ಮತ್ತು ಏಷ್ಯಾಗಳ ಮೇಲೆ [illegible] ಪ್ರದೇಶದಲ್ಲಿ ಯುದ್ಧಕ್ಕೆ [illegible] ಮಾಡುವುದೆಂದು ಸರ್ಕಾರದವರು ಹೇಳಿದ್ದಾರೆ

ರಾಷ್ಟ್ರಾಧ್ಯಕ್ಷರ ಆಗಮನ

ಸ್ವಂ ಸು ತಂತಿ] ಬೆಂಗಳೂರು ೧

ನೂತನ ಮೈಸೂರು ಸಂಸ್ಥಾನದ ಪ್ರಾರಂಭೋತ್ಸವವನ್ನು ನೆರವೇರಿಸಲು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆನ್ನೆ ರಾತ್ರಿ [illegible] ರೈಲಿನಲ್ಲಿ ಇಲ್ಲಿಗೆ ಆಗಮಿಸಿದರು. ಅವರನ್ನು ಶ್ರೀ ಜಯಚಾಮರಾಜ ಒಡೆಯರ್, ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಶ್ರೀ ಕಡಿದಾಳ್ ಮಂಜಪ್ಪ ಹೈಕೋರ್ಟು ನ್ಯಾಯಾಧೀಶರುಗಳ ಮತ್ತು ಕಾಂಗ್ರೆಸ್ ಪ್ರಮುಖರು, ಇತರ ಸಿವಿಲ್ ಮತ್ತು ಮಿಲಿಟರಿ ಅಧಿಕಾರಿಗಳು ಸ್ವಾಗತಿಸಿದರು ಈ ರಾತ್ರಿ ರಾಜೇಂದ್ರ ಪ್ರಸಾದರು ದೆಹಲಿಗೆ ಹಿಂತಿರುಗುವರು

ನೂತನ ಮೈಸೂರು ಗವರ್ನರರ ಮತ್ತು ಸಚಿವರ ಪ್ರಮಾಣ ವಚನ

ಬೆಂಗಳೂರು ಅರಮನೆಯಲ್ಲಿ ಸಮಾರಂಭ

ಸ್ವಂ ಸು ತಂತಿ] ಬೆಂಗಳೂರು ೧

ನೂತನ ಮೈಸೂರು ಸಂಸ್ಥಾನವು ಇಂದು ಆವಿರ್ಭವಿಸಿತು ಅದರ ಅಂಗವಾಗಿ ಮೈಸೂರಿನ ಮಹಾರಾಜಾ ಶ್ರೀ ಜಯಚಾಮರಾಜ ಒಡೆಯರವರು ಈ ಬೆಳಗ್ಗೆ [illegible] ಗಂಟೆಗೆ ಶ್ರೇಷ್ಠ ನ್ಯಾಯಾಧೀಶರ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದರು

ಸಂಸ್ಥಾನದ ನೂತನ ಶ್ರೇಷ್ಠ ಕಾರ್ಯದರ್ಶಿ ಶ್ರೀ ಪಿ ವಿ ಆರ್ ರಾಯರು ರಾಷ್ಟ್ರಾಧ್ಯಕ್ಷರಿಂದ ಮಹಾರಾಜರನ್ನು ಗವರ್ನರಾಗಿ ನೇಮಿಸಿ [illegible] ಬಂದಿದ್ದ [illegible] ಓದಿದರು ಅನಂತರ ಬ್ಯಾಂಡು ರಾಷ್ಟ್ರಗೀತೆಯನ್ನು ನುಡಿಸಿತು ಗವರ್ನರರು ಕೂಡಲೇ ಗೌರವ ಸೆಲ್ಯೂಟನ್ನು ಸ್ವೀಕರಿಸಿದರು

ಅನಂತರ ನೂತನ ಮುಖ್ಯ ಮಂತ್ರಿಯವರು ಮತ್ತು ಇತರ ನೂತನ ಮಂತ್ರಿಮಂಡಲದ ಸದಸ್ಯರು ಅರ್ಧ ಗಂಟೆಯ ಮೇಲೆ ಪ್ರಮಾಣ ವಚನಗಳನ್ನು ತೆಗೆದುಕೊಂಡರು ನೂತನ ಶ್ರೇಷ್ಠ ನ್ಯಾಯಾಧೀಶರು ಮತ್ತು ಜಡ್ಜುಗಳು ಆ ಮೇಲೆ ಪ್ರಮಾಣ ವಚನ ಕೈಗೊಂಡರು.

ತಾವು ಮಂತ್ರಿಗಳನ್ನಾಗಿ ತೆಗೆದುಕೊಳ್ಳಬೇಕೆಂದಿದ್ದ ಹಲವು ಸ್ನೇಹಿತರು ಇತರರನ್ನು ತೆಗೆದುಕೊಳ್ಳುವುದಕ್ಕೆ ಅವಕಾಶವಿತ್ತು ತಾವು ಹಿಂದಕ್ಕೆ ಸರಿದರೆಂದೂ ಇದರಿಂದ ತಮಗೆ ತುಂಬಾ ಸಹಾಯವಾಯಿತೆಂದೂ ಶ್ರೀ ನಿಜಲಿಂಗಪ್ಪನವರು ಹೇಳಿದರು ಶ್ರೀ ಎಸ್ ಚನ್ನಯ್ಯನವರನ್ನು ಅವರು ಈ ಬಗ್ಗೆ ಮುಖ್ಯವಾಗಿ ಪ್ರಶಂಸಿಸಿದರು.

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ವಿ ವೆಂಕಟಪ್ಪನವರು [illegible] ಭವನದಲ್ಲಿ [illegible] ಮಾಡಿದರು, ನೂತನ ಸಂಪುಟದ [illegible] ತ್ತು.

ನೂತನ ಮೈಸೂರಿನ ಮುಖ್ಯ ಮಂತ್ರಿ

ಶ್ರೀ ಎಸ್ ನಿಜಲಿಂಗಪ್ಪ

ನೂತನ ಮೈಸೂರು ರಾಜ್ಯದ ಪ್ರಾರಂಭೋತ್ಸವ

ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ

ಮೈಸೂರು ೧

ಮೈಸೂರು ಜಿಲ್ಲಾ ನೃತ್ಯ, ನಾಟಕ ಮತ್ತು ಸಂಗೀತ ಅಕಾಡೆಮಿಯ ಆಶ್ರಯದಲ್ಲಿ ಈ ದಿನದಿಂದ ನೂತನ ಮೈಸೂರು ರಾಜ್ಯದ ಪ್ರಾರಂಭೋತ್ಸವವು ನಡೆಯುವುದು.

ಅದರ ಅಂಗವಾಗಿ ಬೆಳಿಗ್ಗೆ ಟೌನ್‌ಹಾಲಿನಲ್ಲಿ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ರಾಷ್ಟ್ರಧ್ವಜಾರೋಹಣ ಮಾಡಿದರು. ಮೈಸೂರು ಡಿವಿಜನಲ್ ಕಮಿಷನರಾದ ಶ್ರೀ ಜಿ. ಎಲ್. ನಾಗರಾಜರಾಯರು ಪೋಲೀಸು, ಸ್ಕೌಟ್ಸ್, ಸೇವಾದಳ ಮುಂತಾದ ದಳಗಳಿಂದ ಸಲ್ಯೂಟನ್ನು ಸ್ವೀಕರಿಸಿದರು. ಶ್ರೀ ಎ. ಕೃಷ್ಣಮೂರ್ತಿರಾಯರು ಭಾಷಣ ಮಾಡಿ ಕರ್ನಾಟಕ ರಾಜ್ಯವಾಗಿರುವ ಈ ದಿನವೇ ಸುದಿನವೆಂದು ನುಡಿದು ಈ ಗುರಿಯನ್ನು ಸಾಧಿಸಲು ಶ್ರಮಿಸಿದವರೆಲ್ಲರಿಗೂ ಕೃತಜ್ಞತೆಯನ್ನು ಸೂಚಿಸಿದರು. ನೂತನ ರಾಜ್ಯವು ಸುಭಿಕ್ಷವಾಗಿ ಬೆಳೆದು ಸಕಲರ ಶ್ರೇಯಸ್ಸಾಧನೆಗೂ ಎಲ್ಲರೂ ಸಹಕರಿಸಬೇಕೆಂದು ಪ್ರಾರ್ಥಿಸಿದರು

ಈ ಸಂಜೆ ೫ ಗಂಟೆಗೆ ಟೌನ್‌ಹಾಲಿನಲ್ಲಿ ಸಭೆಯು ವೈಸ್‌ಚಾನ್ಸಲರ್ ಡಾ॥ ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಜರುಗುವುದು. ಶ್ರೀಮತಿ ಎಸ್. ಚೊಕ್ಕಮ್ಮ ಮತ್ತು ಪಾರ್ಟಿಯವರ ಸಂಗೀತ ಮತ್ತು ಶ್ರೀಮತಿ ಸುಂದರಮ್ಮ ಮತ್ತು ಪಾರ್ಟಿಯವರ ನೃತ್ಯ ಮತ್ತು ವೈಲ್ಡ್ ಸಾಂಸ್ಕೃತಿಕ ಸಂಘದವರಿಂದ ಸ್ವರ್ಗದ ಕ್ಯಾನ್‌ವಾಸ್ ಎಂಬ ನಾಟಕಗಳು ಏರ್ಪಾಡಾಗಿವೆ

ಒಟ್ಟು ೫ ದಿನಗಳ ಸಮಾರಂಭವು ಇದೆ. ನಾಳೆ ಸಂಜೆ ಡಾ॥ ಎಂ. ಸಿದ್ದಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಾ॥ ವಿ॥ ಬಿ. ದೇವೇಂದ್ರಪ್ಪ ಮತ್ತು ಪಾರ್ಟಿಯವರ ಸಂಗೀತ, ಶ್ರೀ ವೈ. ಎಸ್. ಸಿಂಧರವರ ತಂಡದವರಿಂದ ನೃತ್ಯ ಮತ್ತು ತರುಣ ಸಂಘದವರಿಂದ ನಾಗಿ ಜೇನ ಎಂಬ ನಾಟಕಗಳು ಏರ್ಪಾಡಾಗಿವೆ

ಈಜಿಪ್ಟಿನ ಸಹಾಯಕ್ಕೆ ೩ ಅರಬ್ ರಾಜ್ಯಗಳ ಸೈನ್ಯ

ಅರಬ್ಬರ ಸಾರ್ವಭೌಮತ್ವದ ರಕ್ಷಣೆಗಾಗಿ ಇಸ್ರೇಲಿನ ವಿರುದ್ಧ ಕಾರ್ಯಾಚರಣೆ ಮಾಡಲು ತಮ್ಮ ಸೈನ್ಯಗಳು ಸಿದ್ಧವಾಗಿರುವುವೆಂದು ಸಿರಿಯಾ, ಜೋರ್ಡಾನ್ ಮತ್ತು ಸಾದಿ ಅರೇಬಿಯಾಗಳು ಈಜಿಪ್ಟಿಗೆ ಭರವಸೆಯಿತ್ತಿವೆ.

ಬರ್ಮಾ ತಮಿಳರಿಂದ ಬೌದ್ಧ ಧರ್ಮ ಸ್ವೀಕಾರ

ರಂಗೂನು ಮತ್ತು ಸುತ್ತಮುತ್ತಲಲ್ಲಿರುವ ೬,೬೦೦ ತಮಿಳರು ಕಳೆದ ಭಾನುವಾರ ಒಂದು ಸಮಾರಂಭದಲ್ಲಿ ಬೌದ್ಧ ಧರ್ಮವನ್ನು ಸ್ವೀಕಾರ ಮಾಡಿದರು. ಅಲ್ಲಿನ ಮಂತ್ರಿಮಂಡಲದ ಹಲವು ಸದಸ್ಯರೂ, ಬರ್ಮಾದ ಪ್ರಮುಖ ಬೌದ್ಧರೂ ಭಾಗವಹಿಸಿದ್ದರು.

ಸತ್ಕಾರ ಕೂಟ

ದಸರಾ ವಸ್ತು ಪ್ರದರ್ಶನ ಸಮಿತಿಯ ಅಧ್ಯಕ್ಷರು ಮತ್ತು ಸದಸ್ಯರುಗಳ ಗೌರವಾರ್ಥವಾಗಿ ಕಳೆದ ಭಾನುವಾರ ಅಖಿಲ ಭಾರತ ವಸ್ತು ಪ್ರದರ್ಶಕರ ಸಂಘದವರು ಸತ್ಕಾರಕೂಟವೊಂದನ್ನು ಏರ್ಪಡಿಸಿದ್ದರು. ಸಮಾರಂಭದಲ್ಲಿ ಭಾಗವಹಿಸಿದ್ದ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಮಾತನಾಡಿ, ಜಪಾನಿನ ಕೀರ್ತಿ ಹೆಚ್ಚಲು ಅಲ್ಲಿನ ಕೈಗಾರಿಕೋದ್ಯಮಗಳೇ ಕಾರಣವೆಂದು ತಿಳಿಸಿದರು. ಭಾರತದಲ್ಲೂ ಸಣ್ಣ ಕೈಗಾರಿಕೋದ್ಯಮಗಳೂ, ಕಾರ್ಮಿಕರೂ ಉತ್ಸಾಹದಿಂದ ಶ್ರಮಿಸಿ, ದೇಶಕ್ಕೆ ಕೀರ್ತಿಯನ್ನು ಗಳಿಸಬೇಕೆಂದು ಕೋರಿದರು. ಶ್ರೀಮತಿ ನಂದಿನಿಯವರ ನೃತ್ಯ ಮತ್ತು ಶ್ರೀಮತಿ ನಾರಣಮ್ಮನವರ ಸಂಗೀತವಾದನಂತರ ಪ್ರದರ್ಶಕರ ಸಮಿತಿ ಅಧ್ಯಕ್ಷ ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಪ್ರದರ್ಶನ ಸಮಿತಿಯ ಉಪಾಧ್ಯಕ್ಷರಾದ ಶ್ರೀ ಪಾರ್ಥಸಾರಥಿಯವರು ವಸ್ತು ಪ್ರದರ್ಶಕರ ಸಂಘದವರ ಸಲಹೆಯಂತೆ ಪ್ರದರ್ಶಕರಿಗೆ ಹೆಚ್ಚು ಸೌಲಭ್ಯಗಳನ್ನು ಏರ್ಪಡಿಸುವ ವಿಷಯವನ್ನು ಪರಿಶೀಲಿಸುವುದಾಗಿ ಭರವಸೆಯಿತ್ತರು.

ಶುಭಾಶಯ !
ಕನ್ನಡಿಗರಿಗೆ - ಕರ್ನಾಟಕಕ್ಕೆ
ಮೂರ್ತಿ ಮಾರ್ಟ್
[illegible] ರಸ್ತೆ : ಮೈಸೂರು

ಮನೆ ಭೋಗ್ಯಕ್ಕೆ ಬೇಕಾಗಿದೆ.

ಸ್ವಂತ ವಾಸಕ್ಕೆ, ಮೇನ್ ರಸ್ತೆಯಲ್ಲಿರುವ ಮನೆಯೊಂದು ಪೂರ್ತ ಭೋಗ್ಯಕ್ಕೆ ಸುಮಾರು ೫,೦೦೦ ದಿಂದ ೭,೫೦೦ ರೂ.ಗಳಲ್ಲಿ ಬೇಕಾಗಿದೆ. ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿರಿ.—

ಜಿ. ದೊಡ್ಡಮಲ್ಲಯ್ಯ,
ಅಸಿಸ್ಟೆಂಟ್, ಸೋಮಾನಿ ಬಿಲ್ಡಿಂಗ್ಸ್,
ಸಂತೆಪೇಟೆ, ಮೈಸೂರು.

ನೂತನ ಸಂಸ್ಥಾನದ ವೆಚ್ಚಕ್ಕೆ ೬೦ ಕೋಟಿ ರೂ.

ಬೆಂಗಳೂರು ೩೧

ನೂತನ ಮೈಸೂರು ಸಂಸ್ಥಾನದಲ್ಲಿ ನಾಳೆಯಿಂದ ಬರುವ ಮಾರ್ಚಿ ೩೧ರ ವರೆಗೆ ನಾನಾ ಇಲಾಖೆಗಳ ಖರ್ಚಿಗಾಗಿ ರಾಜಪ್ರಮುಖರು ೫೯,೭೩,೬೩, ಸಾವಿರ ರೂ ಗಳ ಬಿಲ್ಲಿಗೆ ಅಂಗೀಕಾರವಿತ್ತಿರುವರು

ಹಂಗೇರಿಯಲ್ಲಿ ರಾಷ್ಟ್ರೀಯ ಪಕ್ಷಗಳ ಸರ್ಕಾರ

ಹಂಗೇರಿಯಲ್ಲಿ ಎಲ್ಲಾ ಪ್ರಜಾ ಸತ್ತಾತ್ಮಕ ಪಕ್ಷಗಳಿಂದೊಡಗೂಡಿದ ಮಿಶ್ರ ಸರ್ಕಾರವನ್ನು ರಚಿಸಿ, ಪಶ್ಚಿಮ ದೇಶಗಳಲ್ಲಿರುವಂತೆ ಸ್ವತಂತ್ರ ರೀತಿಯ ಚುನಾವಣೆಗಳನ್ನು ನಡೆಸಲಾಗುವುದೆಂದು ತಿಳಿದುಬಂದಿದೆ. ೯ ವರ್ಷಗಳ ಕಮ್ಯೂನಿಸ್ಟರ ಏಕ ಪಕ್ಷದ ಆಡಳಿತವು ಅಲ್ಲಿ ಕೊನೆಗೊಳ್ಳಲಿರುವುದಾಗಿ ಬುಡಾಪೆಸ್ಟ್ ರೇಡಿಯೋವು ವರದಿ ಮಾಡಿದೆ

ಮೃಗಾಲಯದ ಹೆಣ್ಣಾನೆಗೆ ಮರಿ ಜನನ

ನಗರದ ಮೃಗಾಲಯದಲ್ಲಿ ಹಿಡಿದಿಟ್ಟಿರುವ ೩೦ ವರ್ಷದ ಹೆಣ್ಣಾನೆಯೊಂದು ಮೊನ್ನೆ ೨೦೦ ಪೌಂಡು ತೂಕದ ಮರಿಯನ್ನು ಹಾಕಿತು. ಸೆರೆಯಲ್ಲಿರುವಾಗ ಆನೆಯು ಮರಿ ಹಾಕುವುದಿಲ್ಲವೆಂಬ ಪ್ರತೀತಿಯು ಇದರಿಂದ ಸುಳ್ಳಾಗಿದೆ. ಇತ್ತೀಚೆಗೆ ಕಾಡಿಗೆ ಮೇವಿಗಾಗಿ ಅದು ಹೋಗಿದ್ದಾಗ ಗಂಡು ಆನೆಯ ಸಂಪರ್ಕವಾಗಿರಬೇಕೆಂದು ಹೇಳಲಾಗಿದೆ.

ನೂತನ ಮೈಸೂರಿನ ಉದಯೋತ್ಸವ ಮತ್ತು ದೀಪಾವಳಿ
ಶುಭ ಸನ್ನಿವೇಶದಲ್ಲಿ ನಮ್ಮ ಮಾನ್ಯ
ಗಿರಾಕಿಗಳಿಗೆ ಹೃತ್ಪೂರ್ವಕ
ಶುಭಾಶಯಗಳು
★
ಚಿನೋಲಿ ಹೊಸೈರಿ ಫ್ಯಾಕ್ಟರಿ,
[illegible]

Edited, Printed and Published by
A. R. Nagarajan at Sadhvi Press
D. Subbiah Road, Mysore

ವಿದ್ಯಾರ್ಥಿಗಳಿಂದ ನಿಲಯಗಳ ನಿರ್ಮಾಣಕ್ಕೆ ಕರೆ

ವಿದ್ಯಾರ್ಥಿಗಳು ಬಿಡುವಿನ ಕಾಲದಲ್ಲಿ ದಿ ಶ್ರಮಪಟ್ಟು ವಿದ್ಯಾರ್ಥಿ ನಿಲಯಗಳನ್ನು ನಿರ್ಮಿಸಿಕೊಳ್ಳಬೇಕೆಂದು ಪ್ರಧಾನಿ ನೆಹರೂರವರು ಸಿರುತ್ತಾರೆ ಅವರಿಗೆ ಇಂಜನಿಯರುಗಳು ಸ ಯ ಮಾಡಬೇಕೆಂದೂ ಅವರು ಹೇಳಿರುತ್ತಾ

ಎಲ್. ವಿ. ಬಾಪಟ್‌ರವರ ನಿಧನ

ರಾಜಧಾನಿಯಲ್ಲಿದ್ದ ನಿವೃತ್ತ ಚೀಫ್ ಇಂ ಯರ್ ಎಲ್. ವಿ. ಬಾಪಟ್‌ರವರು ಕಳೆದ ಸ ಮವಾರ ರಾತ್ರಿ ೧೦॥ ಗಂಟೆಯಲ್ಲಿ ನಿಧನಹೊ ದರೆಂದು ತಿಳಿಸಲು ವಿಷಾದಿಸುತ್ತೇವೆ. ಅವ ೬೭ ವರ್ಷ ವಯಸ್ಸಾಗಿತ್ತು. ಅವರ ಸೇವಾ ದಕ್ಷತೆಯನ್ನು ಮೆಚ್ಚಿ ಶ್ರೀಮನ್ಮಹಾರಾಜರು ಸೇವಾಸಕ್ತ ಎಂಬ ಪ್ರಶಸ್ತಿಯನ್ನು ದಯಪಾಲಿಸಿದ್ದರು. ಮೃತರಿಗೆ ಇಬ್ಬರು ಗಂಡು ಮಕ್ಕಳೂ ೭ ಜನ ಹೆಣ್ಣು ಮಕ್ಕಳೂ ಇರುವರು. ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ಬಂಧು ವರ್ಗದವರಿಗೆ ನಮ್ಮ ಅನುತಾಪವನ್ನು ಸೂಚಿಸುತ್ತೇವೆ.

HEARTY GREETINGS
to the people of
Greater Mysore
FROM
T. C. NATARAJ & Co.,
Scientific Opticians
& Chemists,
MYSORE

ನಮ್ಮ ಸಮಸ್ತ ಹಿತೈಷಿಗಳಿಗೂ ದೀಪಾವಳಿ
ಶುಭಾಶಯಗಳು

ನಿಮ್ಮನ್ನೇ ! ವಿಶಾಲ ಮೈಸೂರಿನ ನವೋದಯಾಂಕಿತ ದೀಪಾವಳಿಯ ಶುಭದಿನದಲ್ಲಿ, ಕನ್ನಡ ಜನತೆಗೂ, ನಮ್ಮ ಹಿತೈಷಿಗಳಿಗೂ, ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಾ, ನಮ್ಮಲ್ಲಿ ದೊರೆಯುವ ಅಪ್ಪಟ ಮತ್ತು ತಾಜಾ ಹಸುವಿನ ಹಾಲಿನ ಬೆಲೆಯನ್ನು ಪೌಂಡ್ 1ಕ್ಕೆ 0-3-9ಗೆ ಇಳಿಸಿರುವ ಮತ್ತು ಕೂಪನ್ನುಗಳನ್ನು ಕೊಂಡವರ ಮನೆಗಳಿಗೆ ಹಾಲನ್ನು ತಲುಪಿಸುವ ಉಚಿತ ಸೇವೆಯ ನಿರ್ಧಾರವನ್ನು ತಿಳಿಸಲು ಹರ್ಷಿಸುತ್ತೇವೆ.

"ಕ್ಷೀರ ಕೇಂದ್ರ", ಕಲ್ಯಾಣ ಭವನ ಬಿಲ್ಡಿಂಗ್ಸ್, ತ್ಯಾಗರಾಜಾ ರಸ್ತೆ, ಮೈಸೂರು.

ವಿಶಾಲ ಮೈಸೂರಿನ ರಚನೆಯಾಗಿರುವ ಈ ಶುಭ ದಿನದಲ್ಲಿ ನಮ್ಮ ಎಲ್ಲಾ
ಹಿತೈಷಿಗಳಿಗೂ ದೀಪಾವಳಿಯ ಶುಭಾಶಯಗಳು. ಎಂದಿನಂತೆ
ಮಹಾ ಜನರು ಪ್ರೋತ್ಸಾಹಿಸಬೇಕಾಗಿ ಕೋರಿಕೆ
★ ರಾಜಕಮಲ್ ಮೆಟಲ್ ಸ್ಟೋರ್ಸ್
ಸ್ಟೇನ್‌ಲೆಸ್ ಸ್ಟೀಲ್ ಪಾತ್ರೆ ಅಂಗಡಿ, ಅಶೋಕ ರಸ್ತೆ, ಮೈಸೂರು

ಲಕ್ಷ್ಮಿ ★
1—11—56 ನೇ ಗುರುವಾರದಿಂದ : ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಆಟಗಳು
— ದೀಪಾವಳಿ ಕಾಣಿಕೆ — — ಮಾಡರನ್ ಥಿಯೇಟರ್ಸ್‌ರವರ
ಎಂ. ಕೆ. ರಾಧ, ಜಿ. ವರಲಕ್ಷ್ಮಿ, ಎಂ. ಎನ್. ರಾಜಂ, ಬಿ. ವಿ. ಸರೋಜ, ಮುತ್ತುಲಕ್ಷ್ಮಿ,
ಕರುಣಾನಿಧಿ ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ
★ ಪಾಶವಲೈ ★

ನಮ್ಮ ಸಮಸ್ತ ಮಿತ್ರರಿಗೂ ಮತ್ತು ಹಿತೈಷಿಗಳಿಗೂ
ನೂತನ ಮೈಸೂರಿನ ಉದಯೋತ್ಸವದ ಹರ್ಷೋದ್ಗಾರ !
ದೀಪಾವಳಿಯ ಮತ್ತು ಹೊಸ ವರ್ಷದ
ಹೃತ್ಪೂರ್ವಕ ಅಭಿನಂದನೆಗಳನ್ನು ಸಮರ್ಪಿಸುವೆವು

ಬಾಂಬೆ ಆನಂದ ಭವನ್ ಸ್ಟೋರ್ಸ್,
ಪ್ರಾವಿಷನ್, ಜನರಲ್ ಮರ್ಚಂಟೈಸ್ ಮತ್ತು ಸ್ಟೇನ್‌ಲೆಸ್ ಸ್ಟೀಲ್
ಪಾತ್ರೆಗಳ ವ್ಯಾಪಾರಿಗಳು
ನ್ಯೂ ಸ್ಟ್ಯಾಚ್ಯೂ ಚೌಕ, ಮೈಸೂರು

ಬಾಂಬೆ ಆನಂದ ಭವನ್
ರೆಸ್ಟೋರೆಂಟ್ — ಬೋರ್ಡಿಂಗ್ ಮತ್ತು ಲಾಡ್ಜಿಂಗ್
ಮಕ್ಕಾಜಿ ಚೌಕ : ವಿ. ವಿ. ಮೊಹಲ್ಲಾ
ಮೈಸೂರು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಹೊರಗು ಪ್ರದೇಶಗಳಿಗೆ
ಏಜೆಂಟರು
ಶೆಟ್ಟಿ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. [illegible]
[illegible] ರಸ್ತೆ,
ಬೆಂಗಳೂರು—2

ಸಂಪುಟ : ೦೫] SADHVI : FRIDAY 2—11—1956 ಮೈಸೂರು : ಶುಕ್ರವಾರ ೨—೧೧—೧೯೫೬ [ಸಂಚಿಕೆ [illegible]

ಸೂಯೆಜ್ ಸಮೀಪಕ್ಕೆ ಬ್ರಿಟಿಷ್ ಮತ್ತು ಫ್ರೆಂಚ್ ಪಡೆಗಳು

ಸೂಯೆಜ್ ಕಾಲುವೆ ಬಳಿ ಬ್ರಿಟಿಷ್-ಫ್ರೆಂಚ್ ನೌಕಾ ಪಡೆ

ಬ್ರಿಟನ್ ಮತ್ತು ಫ್ರಾನ್ಸುಗಳ ನೌಕಾ ಪಡೆಗ ಸೂಯೆಜ್ ಕಾಲುವೆ ಉತ್ತರ ಮತ್ತು ದಕ್ಷಿ ಭಾಗಗಳ ಸಮೀಪಕ್ಕೆ ಬರುತ್ತಿರುವುದಾಗಿ ವ ದಿಯಾಗಿದೆ. ಉಭಯ ರಾಷ್ಟ್ರಗಳ ವಿಮಾನ ಬ ಗಳು ಈಜಿಪ್ಟಿನ ಮಿಲಿಟರಿ ಗುರಿಗಳ ಮೇಲೆ ನ್ನೆ ಆಕ್ರಮಣ ಧಾಳಿಯನ್ನು ಮುಂದುವರಿಸಿವೆ.

ಇಸ್ರೇಲಿನ ಪ್ಯಾರಾಚೂಟ್ ಪಡೆಗಳು ಸೂ ಜ್ ಕಾಲುವೆ ಬಳಿ ಇಳಿದುವು. ಇಸ್ರೇಲಿಗಳು ನಾ ತೀರದ ಪ್ರದೇಶವನ್ನು ಪೂರ್ಣವಾಗಿ ಆ ಮಿಸಿ, ಸುತ್ತುವರಿಯಲ್ಪಟ್ಟಿರುವ ಈಜಿಪ್ಟಿನ ದ ಗಳು ಶರಣಾಗತವಾಗಬೇಕೆಂದು ಸೂಚಿಸಿ ವೆ.

ಈಜಿಪ್ಟು ವಿಶ್ವ ಸಂಸ್ಥೆಗೆ ಸಂದೇಶ ಕಳುಹಿಸಿ ಟನ್ ಮತ್ತು ಫ್ರಾನ್ಸುಗಳೊಡನೆ ಈಜಿಪ್ಟು ದ್ಧ ನಡೆಸುವ ಸ್ಥಿತಿಯಲ್ಲಿರುವುದೆಂದು ಸೂ ದೆ. ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲುಗಳು ಪ್ಟಿನ ಮೇಲೆ ಯುದ್ಧ ಘೋಷಿಸಿಯಾದುದಾಗಿ ಸಂಸ್ಥೆಯಲ್ಲಿರುವ ಈಜಿಪ್ಟಿನ ಪ್ರತಿನಿಧಿಗಳು ಸಿದ್ದಾರೆ.

ಮೊನ್ನೆ ವಿಮಾನ ಧಾಳಿಯಲ್ಲಿ [illegible] ಪ್ಟು, ಕೈರೊ, ಅಲೆಕ್ಸಾಂಡ್ರಿಯ, ಪೋರ್ಟ್ ಸಯದ್, ಇಸ್ಮೇಲಿಯಾ ಮತ್ತು ಸೂಯೆಜ್‌ಗಳ ಮೇಲೆ ಧಾಳಿ ನಡೆಯಿತು. ಸೂಯೆಜ್ ಕಾಲುವೆಯಲ್ಲಿ ಹಡಗು ಸಂಚಾರವು ನಿಂತಿದೆ. ಬಾಂಬು ಕಾಲುವೆಯಲ್ಲಿದ್ದ ಈಜಿಪ್ಟಿನ ನೌಕೆಯೊಂದು ಮುಳುಗಿತು.

ಇಸ್ರೇಲುಗಳು ಸಿರಿಯದ ಆಗ್ನೇಯ ಗಡಿಯ ಮಾಡಿದ ಧಾಳಿಯನ್ನು ಸಿರಿಯಾ ಪಡೆಗಳು ಮಟ್ಟಹಾಕಿದುವು.

ಸಿಕಂದರಾಬಾದಿನ ಇಂಜನಿಯರ ಕೊಲೆ

ಸಿಕಂದರಾಬಾದಿನ ಕಂಟೋನ್ಮೆಂಟ್ ಬೋ ನ ನಿವೃತ್ತ ಎಕ್ಸಿಕ್ಯುಟಿವ್ ಇಂಜನಿಯರ್ ಟಿ ಜಿ ಐಬಾರವರು ಕೊಲ್ಲಲ್ಪಟ್ಟಿದ್ದಾರೆ. ಅವ ನೇ ಹುಟ್ಟು ಹಬ್ಬದ ದಿನ ಈ ಕೃತ್ಯವು ನ ದಿದೆ. ಅವರ ಮಗ ಪ್ರಸಿದ್ಧ ಕ್ರಿಕೆಟ್ ಆಟಗಾರ ಹೈಬಾರ ಎಂಬುವರು ತಮ್ಮ ತಂದೆಗೆ ಬ ಪ್ರಾಸ್ತ್ಯಕೆ ಕೋರಲು ಹೋದಾಗ ಈ ದೃಶ್ಯವು ಕಂಡುಬಂದಿತೆಂದು ಹೇಳಲಾಗಿದೆ. ದುಷ್ಟಸಾಸೆ ಕೊಲೆಯಾಗಿರಬೇಕೆಂದು ಹೇಳಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಳಗ್ಗೆ ೭-೫ ಗೋಟುವಾದ್ಯ. ೭-೧೫ ಮ
೭-೧೫ ಸಿ. ಕೆ. ಕಾಂತ—ದೇವರನಾಮ.
೦ ರಿಕಾರ್ಡು. ಮಧ್ಯಾಹ್ನ ೧೨ ಸಿ. ಕೆ.
—ಸಂಗೀತ. ೧೨-೩೦ ರಿಕಾರ್ಡು. ೧೨-೪೫
ಸಂಗತ—ಮಕ್ಕಳ ಕಾರ್ಯಕ್ರಮ. ೧-೫೦
ಮುವಾದ್ಯ. ಸಂಜೆ ೫-೩೦ ಮತ್ತು ೬-೧೫
. ಬಿ ರಾಮಸ್ವಾಮಿ—ಸಂಗೀತ. ೭-೧೫
ನ ೭-೩೦ ಕನ್ನಡ ಭಾಷಣ. ೮ ೮
—ನಾಟಕ. ೯-೩೦ ಪ್ರಸಾರ ಗೀತೆ
ಶಿಯ ಸಂಗೀತ ಸಮ್ಮೇಳನ

ನೂತನ ಮೈಸೂರಿನ ಉದಯೋತ್ಸವ

ರಾಷ್ಟ್ರಾಧ್ಯಕ್ಷ ರಾಜೇಂದ್ರಪ್ರಸಾದರಿಂದ ಆರಂಭ

ನಾಡಿಗೆ ನೆಹರೂರವರ ಶುಭಾಶಯ

ಬೆಂಗಳೂರು ೩

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ನೆನ್ನೆ ಇಲ್ಲಿ ನೂತನ ಮೈಸೂರಿನ ಆರಂಭೋತ್ಸವವನ್ನು ನೆರವೇರಿಸಿದರು. ಸಮಾರಂಭವು ಸರಳವಾಗಿ ನಡೆಯಿತು. ೧೦ ಸಾವಿರ ಜನರು ಭಾಗವಹಿಸಿದ್ದರು. ರಾಷ್ಟ್ರಾಧ್ಯಕ್ಷರು ಈ ಸಮಾರಂಭದ ಗುರುತಿಗಾಗಿ ವಿದ್ಯುಚ್ಛಕ್ತಿ ಸ್ವಿಚ್ಚನ್ನು ಒತ್ತಿದಾಗ ನೂತನ ಮೈಸೂರಿನ ಭೂಪಟವು ದೀಪಾಲಂಕೃತವಾಗಿ ಕಂಗೊಳಿಸಿತು.

ರಾಷ್ಟ್ರಾಧ್ಯಕ್ಷರು ಭಾಷಣ ಮಾಡಿ, ನೂತನ ಮೈಸೂರಿನ ರಚನೆಯಿಂದ ಭಾರತದ ರಾಜಕೀಯ ಐಕ್ಯತೆಯು ಬಲಗೊಂಡು, ಬಹು ಕಾಲದಿಂದಲೂ ಪರಂಪರಾನುಗತವಾಗಿ ಬಂದಿರುವ ವೈವಿಧ್ಯದಲ್ಲಿ ರಾಷ್ಟ್ರದ ಸಾಂಸ್ಕೃತಿಕ ಐಕ್ಯತೆಯು ವೃದ್ಧಿಗೊಳ್ಳುವುದೆಂದು ಹೇಳಿದರು. ಕನ್ನಡಿಗರಿಗಾಗಿ ಪ್ರತ್ಯೇಕ ಸಂಸ್ಥಾನವಾದ ಬಗ್ಗೆ ಅವರು ಕರ್ನಾಟಕದವರನ್ನು ಪ್ರಶಂಸಿಸಿದರು.

ಪ್ರಧಾನಿ ನೆಹರೂರವರು ಸಂದೇಶ ಕಳುಹಿಸಿ ಹೊಸ ರಾಜ್ಯಗಳ ರಚನೆಗೆ ಪೂರ್ವಭಾವಿಯಾಗಿ ಉಂಟಾದ ಭಿನ್ನಾಭಿಪ್ರಾಯ ಮತ್ತು [illegible] ಳು ಕೊನೆಗೊಂಡು ಪ್ರತಿಯೊಬ್ಬರೂ ಹೊಸ ಸಂಸ್ಥಾನದ ಅಭಿವೃದ್ಧಿಗೆ ಶ್ರಮಿಸಬೇಕೆಂದೂ, ಇಡೀ ಭಾರತದ ಶ್ರೇಯಸ್ಸು ಮುಖ್ಯ ಗುರಿಯಾಗಿರಬೇಕೆಂದೂ ತಿಳಿಸಿದ್ದರು.

ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ನೂತನ ಸಂಸ್ಥಾನದ ಉದಯೋತ್ಸವವನ್ನು ನೆರವೇರಿಸುವಂತೆ ರಾಷ್ಟ್ರಾಧ್ಯಕ್ಷರನ್ನು ಪ್ರಾರ್ಥಿಸಿ, ಕರ್ನಾಟಕವು ಯಾವ ಕುಲ ಅಥವಾ ಅರ್ಧ ರಾಷ್ಟ್ರೀಯ ಅಥವಾ ಸಂಕುಚಿತ ರಾಜಕೀಯ ಭಾವನೆಯಿಂದ ಉದ್ಭವವಾದುದಲ್ಲವೆಂದು ಹೇಳಿದರು.

ಮೊದಲು ಶ್ರೀ ಪಿ. ಕಾಳಿಂಗರಾಯರು ಉದಯವಾಗಲಿ ನಮ್ಮ ಚಲುವ ಕನ್ನಡನಾಡು ಎಂಬ ಗೀತೆಯನ್ನು ಸುಶ್ರಾವ್ಯವಾಗಿ ಹಾಡಿದರು. ಅದನ್ನು ರಚಿಸಿದ ಶ್ರೀ ಹುಯಿಲಗೋಳ ನಾರಾಯಣರಾಯರಿಗೂ, ಶ್ರೀ ಪಿ. ಕಾಳಿಂಗರಾಯರಿಗೂ ೧,೦೦೦ ಮತ್ತು ೫೦೦ ರೂ ಗಳ ಬಹುಮಾನವನ್ನು ಸರ್ಕಾರದವರು ಇತ್ತಿದ್ದುದನ್ನು ರಾಷ್ಟ್ರಾಧ್ಯಕ್ಷರು ವಿನಿಯೋಗಿಸಿದರು

ಬಲಿಚಕ್ರವರ್ತಿ ಪಟ್ಟಾಭಿಷೇಕದ ಕಾವ್ಯ ವಾಚನೆ

ಮೈಸೂರು ೩

ಜಯನಗರದ ಪೌರಾಣಿಕ ಶ್ರೀ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ನಾಳೆ ಸಂಜೆ ೭ ಗಂಟೆಗೆ ಬಲಿಚಕ್ರವರ್ತಿ ಪಟ್ಟಾಭಿಷೇಕದ ಕಾವ್ಯವಾಚನವನ್ನು ಶ್ರೀಮತಿಯರಾದ ವಸುಂಧರಾ ದೇವಿ ಮತ್ತು ಬಿ. ಉಮಾದೇವಿಯವರು ಮಾಡುವರು. ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವಿದೆ.

ಈಜಿಪ್ಟಿನ ಮೇಲಿನ ಧಾಳಿಗಾಗಿ ಬ್ರಿಟನ್ನಿಗೆ ಭಾರತದ ಪ್ರತಿಭಟನೆ

ಬ್ರಿಟನ್ನು ಈಜಿಪ್ಟಿನ ಮೇಲೆ ವಿಮಾನ ಧಾಳಿ ನಡೆಸಿದ್ದಕ್ಕಾಗಿ ಭಾರತವು ಪ್ರತಿಭಟನೆಯನ್ನು ಸೂಚಿಸಿದೆ. ಈ ಧಾಳಿಯು ಮಾನವೀಯತೆಯ ವಿಚಾರವನ್ನು ನಿರ್ಲಕ್ಷಿಸಿರುವುದಲ್ಲದೆ, ಏಷ್ಯಾ ಮತ್ತು ಆಫ್ರಿಕಾ ರಾಜ್ಯಗಳಲ್ಲಿ ಕೆಟ್ಟ ಪರಿಣಾಮಗಳಿಗೆ ಕಾರಣವಾಗಿದೆಯೆಂದು ತಿಳಿಸಲಾಗಿದೆ. ಅಧ್ಯಕ್ಷ ನಾಸೆರ್‌ರವರಿಗೆ ನೆಹರೂರವರು ಸಂದೇಶ ಕಳುಹಿಸಿ—ಈಜಿಪ್ಟಿನ ಸಂಕಟದಲ್ಲಿ ಭಾರತದ ಸಹಾನುಭೂತಿಯನ್ನು ವ್ಯಕ್ತಪಡಿಸಿರುತ್ತಾರೆ. ಅಲ್ಲದೆ ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರಿಗೆ ಪತ್ರ ಬರೆದು, ಆಂಗ್ಲೋ-ಫ್ರೆಂಚರ ಪ್ರವೇಶದಿಂದ ಉಂಟಾಗಿರುವ ವಿಶ್ವದ ಬಿಕ್ಕಟ್ಟನ್ನು [illegible] ಮ ಪ್ರಾರ್ಥಿಸಿದ್ದಾರೆ. ಬ್ರಿಟನ್ ರ ಕಾರ್ಯಕ್ರಮವು ತಪ್ಪೆಂದು ಐಸೆನ್‌ಹೋವರರು ತಿಳಿಸಿದ್ದಾರೆ. ರಷ್ಯಾ ದೇಶವು ಸಹಾ ಬ್ರಿಟನ್ ಮತ್ತು ಫ್ರಾನ್ಸುಗಳ ನೀತಿಗೆ ಪ್ರತಿಭಟನೆಯನ್ನು ಸೂಚಿಸಿದೆ.

ಈಜಿಪ್ಟಿನಲ್ಲಿ ಮಾರ್ಷಲ್ ಲಾ ಘೋಷಣೆ

ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರು ನೆನ್ನೆ ತಮ್ಮ ರಾಷ್ಟ್ರದಲ್ಲೆಲ್ಲಾ ಮಾರ್ಷಲ್ ಲಾವನ್ನು ಘೋಷಿಸಿದ್ದಾರೆ. ಅವರು ದೇಶದ ಮಿಲಿಟರಿ ಗವರ್ನರ್ ಜನರಲ್ಲರಾಗಿರುತ್ತಾರೆ. ನಾಸೆರರು ರಾಷ್ಟ್ರಕ್ಕೆ ಪ್ರಸಾರ ಸಂದೇಶವಿತ್ತು, ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲುಗಳು ಈಜಿಪ್ಟಿನ ಮೇಲೆ ವಿನಾ ಕಾರಣ ಧಾಳಿ ಮಾಡಲು ಪಿತೂರಿ ನಡೆಸಿದುದಾಗಿ ತಿಳಿಸಿ, ಈಜಿಪ್ಟಿನವರು ಶರಣಾಗತರಾಗದೆ ಹೋರಾಟ ನಡೆಸುವರೆಂದೂ, ತಮ್ಮ ಸ್ವತಂತ್ರ ನೀತಿಯು ಸಾಮ್ರಾಜ್ಯಶಾಹಿಗಳಿಗೆ ಹಿತವಾಗಿಲ್ಲವೆಂದೂ ತಿಳಿಸಿ,—ಭೀಕರ ಕಾಳಗವನ್ನು ನಡೆಸಲಾಗುವುದೆಂದು ತಿಳಿಸಿದ್ದಾರೆ.

ದೀಪಾವಳಿ ಶುಭಾಶಯ

ದೀಪಾವಳಿ ಹಬ್ಬದ ಶುಭ ಸಂದರ್ಭದಲ್ಲಿ ನಮ್ಮ ಚಂದಾದಾರರು, ಜಾಹಿರಾತುದಾರರು, ವಾಚಕರು, ಹಿತೈಷಿಗಳು ಮುಂತಾದ ಸಮಸ್ತರಿಗೂ ಭಗವಂತನು ಸನ್ಮಂಗಳವನ್ನುಂಟುಮಾಡಲೆಂದು ಹಾರೈಸುತ್ತೇವೆ

—ಸಂಪಾದಕ

ಜಯಚಾಮರಾಜ ಒಡೆಯರಿಗೆ ಅಭಿನಂದನಾ ಪತ್ರ ಸಮರ್ಪಣೆ

ನೂತನ ಮೈಸೂರಿನ ಪ್ರಪ್ರಥಮ ಗವರ್ನರ್ ಅಧಿಕಾರವನ್ನು ವಹಿಸಿಕೊಂಡುದಕ್ಕಾಗಿ ನಗರದ ಸಂತೆಪೇಟೆಯ ವ್ಯಾಪಾರಿಗಳಾದ ಶ್ರೀ ಎ. ಎಸ್. ಕರಿಯಣ್ಣ ಮತ್ತು ಎ. ಬೆಟ್. ಪುಲಿಯಪ್ಪನವರು ರಾಜಭಕ್ತಿಯುತ ಅಭಿನಂದನಾ ಪತ್ರವೊಂದನ್ನು ಅರ್ಪಿಸಿರುತ್ತಾರೆ. ಮೈಸೂರಿನ ಮಹಾರಾಜರಾಗಿಯೂ, ರಾಜಪ್ರಮುಖರಾಗಿಯೂ ಶ್ರೀ ಜಯಚಾಮರಾಜ ಒಡೆಯರ್‌ರವರು ಮೈಸೂರು ಪ್ರಜಾಸ್ತೋಮದ ಅಭ್ಯುದಯಕ್ಕಾಗಿ ಮಾಡಿರುವ ಕೆಲಸಗಳಿಗಾಗಿ ಅವರು ಕೃತಜ್ಞತೆಯನ್ನು ಸೂಚಿಸಿರುತ್ತಾರೆ.

ಬ್ರಿಟನ್ ಮತ್ತು ಫ್ರಾನ್ಸುಗಳೊಡನೆ ಈಜಿಪ್ಟಿನ ಸಂಬಂಧತ್ಯಾಗ

ಬ್ರಿಟನ್ ಮತ್ತು ಫ್ರಾನ್ಸುಗಳೊಡನೆ ಈಜಿಪ್ಟು ರಾಜತಾಂತ್ರಿಕ ಸಂಬಂಧವನ್ನು [illegible] ದೆ. ಕೈರೋವಿನಲ್ಲಿರುವ ಬ್ರಿಟಿಷ್ [illegible] ಟ್ರೆವಿಲಿಯನ್ನರನ್ನು [illegible] ವಿದೇಶಾಂಗ ಮಂತ್ರಿ ಡಾ|| ಫೌಜಿಯವರು ತೀರ್ಮಾನವನ್ನು ತಿಳಿಸಿದರು.

ಹಂಗೇರಿ ಹೋರಾಟದಲ್ಲಿ ೩,೫೦೦ ರಷ್ಯನರ ಮರಣ

ಹಂಗೇರಿಯಲ್ಲಿ ಇತ್ತೀಚೆಗೆ ನಡೆದ ದಂಗೆಯಲ್ಲಿ ೩,೫೦೦ ರಷ್ಯನರು ಕೊಲ್ಲಲ್ಪಟ್ಟು, ೫,೦೦೦ ಮಂದಿಗೆ ಗಾಯವಾಗಿರುವುದೆಂದು ಹೇಳಲಾಗಿದೆ. ಹಂಗೇರಿ ಜನರ ಪೈಕಿ ೧೨,೦೦೦ ಮಂದಿಗೆ [illegible] ನೋವುಗಳಾದುವೆಂದೂ, ಆ ಪೈಕಿ ದಂಗೆಕೋರರ ಕಡೆ ಸೇರಿದ್ದ ೩,೦೦೦ ಮಂದಿ ಇರುವರೆಂದೂ ಗೊತ್ತಾಗಿದೆ.

ಬೊಂಬಾಯಿಯಲ್ಲಿ ಮೊನ್ನೆ ಮಧ್ಯರಾತ್ರಿ ಪ್ರಮಾಣ ವಚನ

ನೂತನ ಬೊಂಬಾಯಿಯ ಮಂತ್ರಿಮಂಡಲವು ಮೊನ್ನೆ ಮಧ್ಯರಾತ್ರಿಯಾದ ೫ ನಿಮಿಷಕ್ಕೆ ಪ್ರಮಾಣವಚನ ಸ್ವೀಕರಿಸಿತು. ಅದರಲ್ಲಿ ಚವಾಣರನ್ನೂ ಸೇರಿ ೧೫ ಸಚಿವರುಗಳೂ, ೯ ಮಂದಿ ಉಪ ಸಚಿವರೂ ಇರುವರು.

ಟೆಲ್ ಅವೀವ್ ಮೇಲೆ ವಿಮಾನ ಧಾಳಿ

ಇಸ್ರೇಲಿನ ಟೆಲ್ ಅವೀವ್ ನಗರದಲ್ಲಿ ಮೊನ್ನೆ ರಾತ್ರಿ ವಿಮಾನ ಧಾಳಿ ನಡೆಯಿತು. ವಿಮಾನ ವಿಧ್ವಂಸಕ ಫಿರಂಗಿಗಳು ಗುಂಡನ್ನು ಹಾರಿಸಿದುವು. ಊರಿನಲ್ಲಿ ಕತ್ತಲು ಕವಿದಿತ್ತು.

ನೂತನ ಮೈಸೂರು ರಾಜ್ಯೋತ್ಸವ

ನೂತನ ಮೈಸೂರು ರಾಜ್ಯದ ಪ್ರಾರಂಭೋತ್ಸವದ ಅಂಗವಾಗಿ ನಗರದ ಕರ್ನಾಟಕ ಸಂಘದ ಆಶ್ರಯದಲ್ಲಿ ನಾಳೆ ಮತ್ತು ನಾಳಿದ್ದು ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಕಾರ್ಯಕ್ರಮಗಳು ನಡೆಯಲಿವೆ. ನಾಳೆ ಸಮಾರಂಭಕ್ಕೆ ಶ್ರೀ ನಿಟ್ಟೂರು ಶ್ರೀನಿವಾಸರಾಯರೂ, ನಾಳಿದ್ದು ಶ್ರೀ ಎಸ್. ವಿ. ಕೃಷ್ಣಮೂರ್ತಿರಾಯರೂ ಅಧ್ಯಕ್ಷತೆ ವಹಿಸುವರು. ನಾಳೆ ಶ್ರೀಮತಿ ಶಕುಂತಲಾಬಾಯಿ ಪಾಂಡುರಂಗರಾಯರಿಂದ ಕಾವ್ಯ ವಾಚನ, ಶ್ರೀಮತಿಯರಾದ ವಿಜಯಲಕ್ಷ್ಮಿ ಮತ್ತು ವಿಶಾಲಾಕ್ಷಮ್ಮನವರಿಂದ ಕನ್ನಡ ಗೀತೆ ಮತ್ತು ಶ್ರೀ ಎಸ್. ವಿ. ರಂಗಣ್ಣನವರಿಂದ ಭಾಷಣ ಮತ್ತು ನಾಳಿದ್ದು ಶ್ರೀಮತಿ ಎಲ್. ಜಿ. ಸುಮಿತ್ರ ಸಹೋದರಿಯರಿಂದ ಕನ್ನಡ ಗೀತೆ ಮತ್ತು ಶ್ರೀಗಳಾದ ಕೆ. [illegible] ರಾಯರು ಮತ್ತು ವಿ. ಸೀತಾರಾಮಯ್ಯನವರಿಂದ ಭಾಷಣಗಳಿವೆ.

ಸೂಚನೆ

ಬಲಿಪಾಡ್ಯಮಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

—ವ್ಯವಸ್ಥಾಪಕ

ನಾರ್ವೆ ರಾಯಭಾರಿಯಾಗಿ ಕಚ್ ರಾಜರ ನೇಮಕ

ನಾರ್ವೆ ಮತ್ತು ಡೆನ್ಮಾರ್ಕುಗಳಲ್ಲಿ ಭಾರತದ ರಾಯಭಾರಿಯಾಗಿ ಭಾರತ ಸರ್ಕಾರದವರು ಕಚ್ ಪ್ರದೇಶದ ರಾಜರನ್ನು ನೇಮಿಸಿರುತ್ತಾರೆ ಇಂಡೊನೇಷ್ಯದಲ್ಲಿ ರಾಯಭಾರಿಯಾಗಿ ಚೀನಾ ಕಾಟೇಜ್ ಸಮಿತಿ ಅಧ್ಯಕ್ಷ ಪ ಘೋಷ ರಥಿಯವರನ್ನೂ, ಅವರ ಸ್ಥಾನಕ್ಕೆ ಕೇಂದ್ರ ಸರ್ಕಾರದ ಹೊರ ದೇಶ ವ್ಯವಹಾರಗಳ ಇಲಾಖಾ ಜಂಟಿ ಕಾರ್ಯದರ್ಶಿ ಟಿ ಎನ್ ಕೌಲ್‌ರವರನ್ನೂ ಮತ್ತೊಬ್ಬ ಕಾರ್ಯದರ್ಶಿ ಎ ಎಸ್ ಝುಣಾರವರನ್ನು ಜಪಾನಿನಲ್ಲಿ ರಾಯಭಾರಿಯಾಗಿಯೂ ನೇಮಿಸಲಾಗಿದೆ

ಹಂಗೇರಿಯಿಂದ ವಾರ್ಸಾ ಒಪ್ಪಂದದ ಪಾಲನೆ ಇಲ್ಲ

ವಾರ್ಸಾ ಒಪ್ಪಂದದಿಂದ ಹಂಗೇರಿಯು ವಿಮುಕ್ತವಾಗಿರುವುದೆಂದೂ, ತನ್ನ ತಾಟಸ್ಥ್ಯ ಸ್ಥಾನದ ಬಗ್ಗೆ ಚತುರ್ರಾಷ್ಟ್ರಗಳು ಭರವಸೆ ನೀಡಬೇಕೆಂದೂ ಹಂಗೇರಿಯು ವಿಶ್ವಸಂಸ್ಥೆಗೆ ಸೂಚಿಸಿದೆ

ಮನೆಗಳು ಕ್ರಯಕ್ಕಿವೆ

1) ಮೈಸೂರು ಸಿಟಿ ಕೃಷ್ಣರಾಜ ಮೊಹಲ್ಲಾ ತಿಲವಾಂಬಾ ಅಗ್ರಹಾರದ ಹಿಂದಿನ ರಸ್ತೆ ಡೋರ್ ನಂಬರು 263/1
2) ಚಾಮುಂಡಿ ಎಕ್ಸ್‌ಟೆನ್‌ಷನ್ 2756/ ನೇ ನಂಬರು ಮನೆ
3) ಕೃಷ್ಣರಾಜನಗರ ಟೌನ್ ಚಂದ್ರಮೌಳೀಶ್ವರ ಬೀದಿ ಡೋರ್ ನಂಬರು 241

ವಿವರಗಳಿಗೆ

ಜಯ ಅಂಡ್ ಕಂಪೆನಿ,
ಹಳೇ ಮೈಸೂರು ಬ್ಯಾಂಕ್ ರಸ್ತೆ ಮೈಸೂರು
ಫೋನ್ 390

ಬೀದಿಗಳಲ್ಲಿ ಪಟಾಕಿಗಳನ್ನು ಎಸೆಯುವುದಕ್ಕೆ ನಿಷೇಧ

ಬೊಂಬಾಯಿ ಪೊಲೀಸು ಕಮೀಷನರು ಪಟಾಕಿಗಳನ್ನು ಹಚ್ಚಿ ಬೀದಿಗಳಲ್ಲಿ ಎಸೆಯುವುದನ್ನು ನಿಷೇಧಿಸಿದ್ದಾರೆ ಕಳೆದ ೩೧ರಿಂದ ನವೆಂಬರ್ ೧೫ರವರೆಗೆ ಈ ಆಜ್ಞೆಯು ಜಾರಿಯಲ್ಲಿರುವುದು ಆಟಂ ಬಾಂಬ್ ಪಟಾಕಿ ಮತ್ತು ವಿಷ ಪದಾರ್ಥವುಳ್ಳ ಪುಟ್‌ಪುಟಿಯಾಗಳನ್ನೂ ಹಚ್ಚಬಾರದೆಂದು ಆಜ್ಞೆ ಮಾಡಲಾಗಿದೆ

ಅಖಿಲ ಕರ್ನಾಟಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ

ರಾಜಧಾನಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಇದೇ ತಿಂಗಳು ೧೭ನೇ ತಾರೀಕು ಅಖಿಲ ಕರ್ನಾಟಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯು ನಡೆಯುವುದು. ಭಾಗವಹಿಸಲಿರುವ ಕಾಲೇಜುಗಳು ಇಬ್ಬರು ಪ್ರತಿನಿಧಿಗಳನ್ನೂ, ನಾಲ್ಕು ರೂ ಪ್ರವೇಶ ಧನವನ್ನೂ ಸಂಘದ ಕಾರ್ಯದರ್ಶಿಯವರಿಗೆ ೬ನೇ ತಾರೀಕಿನೊಳಗೆ ಕಳುಹಿಸಬೇಕೆಂದು ಕೋರಲಾಗಿದೆ

ನಮ್ಮ ಮಾನ್ಯ ಗಿರಾಕಿಗಳಿಗೂ
ಮತ್ತು ಹಿತೈಷಿಗಳಿಗೂ
ದೀಪಾವಳಿ ಶುಭಾಶಯಗಳು
ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ ಎಸ್ ಲಕ್ಷ್ಮಣಅಯ್ಯರ್
ಅಂಡ್ ಸನ್ಸ್,
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ ಮೈಸೂರು (Estd 1911)

Edited Printed and Published by
N R Nagaraju at Sadhvi Press
Subb[illegible] Road, Mysore

ಕೈರೊ ನಿಲ್ದಾಣದೊಡನೆ ವಿದೇಶೀ ವಿಮಾನಗಳ ಸಂಪರ್ಕ ಬಂದು

ಕೈರೊ ವಿಮಾನ ಪ್ರಯಾಣದ ಸಂಪರ್ಕವನ್ನು ಈಜಿಪ್ಟ್ ಸರ್ಕಾರದವರು ರದ್ದುಗೊಳಿಸಿರುವರು ಈ ಕಾರಣದಿಂದ ಪಶ್ಚಿಮ ರಾಷ್ಟ್ರಗಳಿಗೆ ಹೋಗುವ ಭಾರತದ ವಿಮಾನಗಳು ಕೈರೊವಿಗೆ ಬದಲು ಬೇರೂಟ್ ಮಾರ್ಗವಾಗಿ ಹೋಗುವುವೆಂದು ಹೇಳಲಾಗಿದೆ

ಹಾಸಿಗೆ-ದಿಂಬು

ಮಿತವ್ಯಯದಲ್ಲಿ ಹತ್ತಿ ಹಾಸಿಗೆ ತಯಾರು ಮಾಡುತ್ತೇವೆ
ಬಾಹುಸಾರ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

ಜೀವನದ ಹರ್ಷವನ್ನು ಸವಿಯಿರಿ

ಹೆಂಗಸರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಸೆ ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟು ಹೋದ ಗ್ರಂಥಿಗಳು ಸಂರಕ್ಷ, ಜ್ಞಾಪಕ ಶಕ್ತಿಯ ಅಭಾವ ದುಸ್ವಪ್ನಗಳು ಸ್ವಪ್ನಸ್ಖಲನ, ಮೂಲವ್ಯಾಧಿ ನರಗಳ ದೌರ್ಬಲ್ಯ ಸಿಫಿಲಿಸ್ ಗೊನೋರಿಯಾ, ಪಾರ್ಶ್ವವಾಯು ಅಂಡವಾಯು ಮತ್ತು ಎಲ್ಲ ವಿಧವಾದ ಹಳೆಯ ಮೂತ್ರ ರೋಗಗಳಿಗೂ ಕಾರಣವಾಗಿವೆ ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ನಮ್ಮ ರಾಣಾರವರನ್ನು (ಖೈರಂಗಿ ಪ್ರವೀಣ) ಪ್ರತಿದಿನ ಬೆಳಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ. ಇತರ ಸ್ತ್ರೀ ಪುರುಷರುಗಳ ಗುಪ್ತ ಹಾಗೂ ಹಳೆಯ ವ್ಯಾಧಿಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವುದು ನೂರಕ್ಕೆ ನೂರು ಖಾತರಿ ಕೊಡಲಾಗುವುದು

ಅವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ

ರಾಣಾ ಮೆಡಿಕಲ್ ಹಾಲ್,
ಲೇನ್ ನಂ 1-743 ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ ಎಡ ಭಾಗದಿಂದ
ಮೂರನೇ ಕಟ್ಟಡ)
ಮೈಸೂರು

ಮುರಾರ್ಜಿಯವರು ಕೇಂದ್ರ ವಾಣಿಜ್ಯ ಮಂತ್ರಿ

ಬೊಂಬಾಯಿಯ ಮುಖ್ಯ ಮಂತ್ರಿಯಾ ಮುರಾರ್ಜಿದೇಸಾಯಿಯವರು ಕೇಂದ್ರ ವಾಣಿಜ್ಯ ಮಂತ್ರಿಯಾಗುವರು ಅವರು ಈ ತಿಂಗಳು ನೇ ತಾರೀಕು ಅಧಿಕಾರ ವಹಿಸುವರು

ಹುಡುಗಿ ತಪ್ಪಿಸಿಕೊಂಡಿದ್ದಾಳೆ

ಇಬ್ರಿದ್ ಎಂಬ ೧೧ ವಯಸ್ಸಿನ ಹುಡುಗಿ ಳಗೆ ಕಪ್ಪಗೆ ಇದ್ದಾಳೆ ಕೆಂಪು ಸಿಲ್ಕ್ ಜಂಪರ್ ಮತ್ತು ಹಳದಿ ಬಣ್ಣದ ಬಿಳಿ ಪ್ರಿಂಟೆಡ್ ಪೋ ರುವ ಲಂಗ ತೊಟ್ಟಿದ್ದಾಳೆ ಪತ್ತೆ ಮಾಡಿಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುವುದು

ಗೌಸ್ ಪೀರ್,
ಫಾರೆಸ್ಟ್ ಗಾರ್ಡ್, ಗವರ್ನಮೆಂಟ್
ವರ್ಕ್‌ಯಾರ್ಡ್, ಮೈಸೂರು.

- *Grand Benefit Show* -
Now not to see at
SRI GAYATHRI
TALKIES
On 3 11 56 at 10-30 A M
The greatest comedy
A HAUNTING WE WILL GO
With – Laurel & Hardy

ಒಲಂಪಿಯಾ

--11 56 ರಿಂದ ಅಮೋಘ 6ನೇ ವಾ
ಗುರುದತ್ ಫಿಲಂಸ್‌ರವರ ಹಿಂದಿ ಚಿತ್ರ
ಸಿ. ಐ. ಡಿ.
ಪಾತ್ರ ದೇವಾನಂದ್, ವಹಿದಾ ರೆಹಮಾ
ಶಕಿಲ, ಜಾನಿವಾಕರ್ ಕೆ ಎನ್ ಸಿಂಗ್

ನಮ್ಮ ಸಮಸ್ತ ಹಿತೈಷಿಗಳಿಗೂ ದೀಪಾವ
ಶುಭಾಶಯಗಳು

ವಿಶಾಲ ಮೈಸೂರಿನ ನವೋದಯಾಂಕಿತ ದೀಪಾವಳಿಯ ಶುಭದಿನದಲ್ಲಿ, ಕನ್ನಡ ಜನತೆಗೂ ನಮ್ಮ ಹಿತೈಷಿಗಳಿಗೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತಾ, ನಮ್ಮಲ್ಲಿ ದೊರೆಯುವ ಅಪ್ಪಟ ಮತ್ತು ತಾಜಾ ಹಸುವಿನ ಹಾಲಿನ ಬೆಲೆಯನ್ನು ಪೌಂಡ್ 1ಕ್ಕೆ 0-3-9ಗೆ ಇಳಿಸಿರುವ ಮತ್ತು ಕೂಪನ್ನುಗಳನ್ನು ಕೊಂಡವರ ಮನೆಗಳಿಗೆ ಹಾಲನ್ನು ತಲುಪಿಸುವ ಉಚಿತ ಸೇವೆಯ ನಿರ್ಧಾರವನ್ನು ತಿಳಿಸಲು ಹರ್ಷಿಸುತ್ತೇವೆ

"ಕ್ಷೀರ ಕೇಂದ್ರ", ಕಲ್ಯಾಣ ಭವನ ಬಿಲ್ಡಿಂಗ್ಸ್ ತ್ಯಾಗರಾಜಾ ರಸ್ತೆ, ಮೈಸೂರು

ದೀಪಾವಳಿ

ಭಾರತ ಭೂಮಿಯ ಮಹಾ ದಾನಿ
ಬಲಿ ಚಕ್ರವರ್ತಿಯ ತ್ಯಾಗದಿಂದ
ಜನತೆಯು ಸ್ವಾತಂತ್ರ್ಯ ಪಡೆದ ದಿನ
★
ಸ್ವಾತಂತ್ರ್ಯ ಸಮಾರಂಭದಲ್ಲಿ
ದೇವ ದುಂದುಭಿಗಳು
ಮೊಳಗಿದ ಸುದಿನ
★
ನಾಡಿನ ನಲವತ್ತು ಕೋಟಿ
ಜನತೆಯು ನಲ್ಮೆಯಿಂದ ಆಚರಿಸಿ
ನಲಿಯುವ ಮಹಾ ಸುದಿನ

ನಾಡಿನ ನಂದಾ ದೀವಿಗೆಯು ಅಚಂದ್ರಾರ್ಕವಾಗಿ ಮಾನವ ಕೋಟಿಯ ಸ್ಮರಣಪಥದಲ್ಲಿರುವ ದೀಪಾವಳಿ ವೈಭವೋತ್ಸವ ಸಮಾರಂಭದಲ್ಲಿ ನಮ್ಮ ಮಿತ್ರ ಬಾಂಧವರು, ಹಿತೈಷಿಗಳು ಮತ್ತು ಬಂಧು ಮಿತ್ರರೆಲ್ಲರನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುವೆವು

1955ರ ದಸರಾ ವಸ್ತು ಪ್ರದರ್ಶನದಲ್ಲಿ ಸುವರ್ಣ ಪದಕವನ್ನು ಪಡೆದ

ಜಯಲಕ್ಷ್ಮಿ ಬ್ಯಾಂಗಲ್ ಸ್ಟೋರ್ಸ್,
ದೇವರಾಜ ಮಾರ್ಕೆಟ್,
ಮೈಸೂರು
ಫೋನ್ ನಂ 340

"ಸರ್ವೇ ಜನಾಃ ಸುಖಿನೋ ಭವಂತು"

ಕರ್ನಾಟಕ ಪ್ರಾಂತದ ನವೋದಯವಾಗಿ
ದೀಪಾವಳಿ ಬೆಳಗುವ ಈ ಸುದಿನ
ಭಗವಂತನು ತಮ್ಮೆಲ್ಲರಿಗೂ ಆಯುರಾರೋಗ್ಯ ಭಾಗ್ಯ ಕರುಣಿಸಲೆಂದು
ಭಕ್ತಿಯಿಂದ ಬಯಸುವವರು

ಇಂದ್ರ ಕೆಫೆ
ಸಯ್ಯಾಜಿರಾವ್ ರಸ್ತೆ, ಮೈಸೂರು

ಬಾಂಬೆ ಇಂದ್ರಭವನ್
ಸಯ್ಯಾಜಿರಾವ್ ರಸ್ತೆ, ಮೈಸೂರು

ಇಂದ್ರಭವನ್ ಬೋರ್ಡಿಂಗ್ ಮತ್ತು ಲಾಡ್ಜಿಂಗ್
ಧನ್ವಂತ್ರಿ ರಸ್ತೆ ಮೈಸೂರು

ಪ್ರಭಾ ★

ದೀಪಾವಳಿಯ ವಿಶೇಷ ಆಕರ್ಷಣೆ
ಇಂದಿನಿಂದ ಅಮೋಘ ಪ್ರಾರಂಭ
ಬಂಕಿಮ್‌ಚಂದ್ರ ಚಟರ್ಜಿಯವರ ಐತಿಹಾಸಿಕ ಕಾದಂಬರಿಯ ಆಧಾರದ ಮೇಲೆ ತೆಗೆಯಲ್ಪಟ್ಟ ಸುಪ್ರಸಿದ್ಧ ಗೇವಾ ಕಲರ್ ಹಿಂದಿ ಚಿತ್ರ
ಸಂಗೀತ — ಹೇಮಂತ್ ಕುಮಾರ್
ಛಾಯಾಗ್ರಹಣ — ಫಾಲಿ ಮಿಸ್ತ್ರಿ
ಬೀನಾರಾಯ್ ಪ್ರದೀಪ್ ಕುಮಾರ್ [illegible], ಜಯವಂತ್, ಅಜಿತ್, ತಿವಾರಿ, ಬಿಪಿನ್‌ಗುಪ್ತ ಮತ್ತು ಐ ಎಸ್ ಜೋಹರ್ ಪಾತ್ರವಹಿಸಿರುವ, ಫಿಲ್ಮಿಸ್ತಾನ್‌ರವರ
ದುರ್ಗೇಶನಂದಿನಿ ★
ಪ್ರತಿದಿನ ಮೂರು ಆಟಗಳು
ಬೆಳಗಿನ ಪ್ರದರ್ಶನ ಇಂದಿನಿಂದ 5 ದಿನಗಳು
ಬೀನಾರಾಯ್ ಪ್ರದೀಪ್‌ಕುಮಾರ್ ನಟಿಸಿರುವ ಸರ್ದಾರ್

ನಮ್ಮ ಹಿತೈಷಿಗಳು ಮತ್ತು ಮಾನ್ಯ ಗಿರಾಕಿಗಳ ಕೋರಿಕೆ ಮೇರೆ
ಪ್ರತ್ಯೇಕವಾದ ಕನ್ನಡಕದ ಶಾಖೆಯನ್ನು ★
ಈ ದಿನದಿಂದ ಪ್ರಾರಂಭಿಸಿದ್ದೇವೆ ಮಹಾಜನ ಪ್ರೋತ್ಸಾಹವನ್ನು ಕೋರಲಾಗಿದೆ

ಟಿ. ಸಿ. ನಟರಾಜ್ ಮತ್ತು ಕಂಪೆನಿ,
ಕನ್ನಡಕ ಮತ್ತು ಔಷಧಿ ವ್ಯಾಪಾರಿಗಳು,
3-4 ಸಯ್ಯಾಜಿರಾವ್ ರಸ್ತೆ ಮೈಸೂರು

…ಷ್ಟ್ರೇಷನ್ ನಂ. 792

…ನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
…ದಿನ ಪತ್ರಿಕೆಗೆ
…ಜಾಹಿರಾತುಗಳನ್ನು
ಪ್ರಯೋಜನ ಪಡೆಯಿರಿ
…ರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 6 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ರೋಗಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1 [illegible]
ಕಾಂಗ್ರೆಸ್ ಪಕ್ಷದ ಸಾಮಾಜಿಕ ಮತ್ತು ಆ ಕ ನೀತಿಯು ನೂತನ ಭಾರತದ ಆಸ್ತಿಭಾರ ಗುವ ಕೈಗಾರಿಕಾ ಮನೋಭಾವದಿಂದ ಒಡ ಗೂಡಿರುವುದಾಗಿ ಅವರು ತಿಳಿಸಿದರು ಭಾರತದ ಭಾರಿ ಸಾಮಾಜಿಕ-ಆರ್ಥಿಕ ಕ್ರಾಂತಿಯು ಗುತ್ತಿರುವುದೆಂದು ತಿಳಿಸಿ, ಎಲ್ಲ ಭಾರತವ್ಯಾಗ ಗ ಹೋಗಬೇಕೆಂದು ಸೂಚಿಸಿದರು

ಧಾನಸೌಧದ ತನಿಖೆ ವರದಿ ಕಳುಹಲು ಹೆಚ್ಚು ಅವಧಿ

ಂಗಳೂರ ಹೈಕೋರ್ಟಿನ ಮಾಜಿ ನ್ಯಾಯಾ ಶರಾದ ಶ್ರೀ ಸಿ ಸಿ ದೇವರ್‌ರವರ ಅಧ್ಯಕ್ಷ ತೆಯಲ್ಲಿ ನೇಮಕವಾಗಿರುವ ವಿಧಾನಸೌಧದ ತನಿ ಸಮಿತಿಯು ತನ್ನ ವರದಿಯನ್ನು ನಿನ್ನೆ ಸಲ್ಲಿಸ ಕಾಗಿದ್ದುದನ್ನು ಸರ್ಕಾರದವರು ಈ ತಿಂಗಳು ವರೆಗೆ ಹೆಚ್ಚಿಸಿರುತ್ತಾರೆ ಸಮಿತಿಯವ ಕೆಲವು ಅಧಿಕಾರಿಗಳನ್ನು ವಿಚಾರಿಸುವುದರ ತೊಡಗಿದ್ದಾರೆ

ನೇ ತಾರೀಖು ಆಯುರ್ವೇದ ಕಾಲೇಜು ದ್ಯಾರ್ಥಿಗಳ ಮುಷ್ಕರ ಮುಕ್ತಾಯ

ಕಳೆದ ಆಗಸ್ಟ್ ೩೦ರಿಂದ ನಗರದ ಆಯು ೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿ ು ನಡೆಸುತ್ತಿರುವ ಮುಷ್ಕರವನ್ನು ಇದೇ ತಿಂ ರಡು [illegible] ಮುಕ್ತಾಯವಾಗಿದೆ

ಭಾರತದ ಪ್ರಥಮ ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವ

೧೮೫೭ ರಲ್ಲಿ ಭಾರತದಲ್ಲಿ ನಡೆದ ಪ್ರಥಮ ಸ್ವಾತಂತ್ರ್ಯ ಹೋರಾಟದ ಶತಮಾನೋತ್ಸವದ ಕಾರ್ಯಕ್ರಮಗಳನ್ನು ಸಿದ್ಧಪಡಿಸಲು ಕೇಂದ್ರ ಸರ್ಕಾರದವರು [illegible] ಎಸ್ [illegible] ಕೃಷ್ಣ [illegible] ಸಮಿತಿಯೊಂದನ್ನು ನೇಮಿಸಿದ್ದಾರೆ ಅವರಲ್ಲಿ ನೆಹರೂ, ಪಂಡಿತ ಪಂತ್ [illegible] ಮತ್ತು ಬಿ ವಿ ಕೇಸ್ಕರ್, ಉತ್ತರ ಪ್ರದೇಶ [illegible], ಮಧ್ಯ ಪ್ರದೇಶ [illegible] ಮುಖ್ಯ ಮಂತ್ರಿಗಳು [illegible] ಪಾರ್ಲಿಮೆಂಟ್ ಸದಸ್ಯರು ಇರುವರು

ನಾಸರರೊಡನೆ ವಿಶ್ವಸಂಸ್ಥೆ ಅಧಿಕಾರಿ ಬರ್ನ್ಸ್‌ರ ಭೇಟಿ

ಈಜಿಪ್ಟಿನ ಅಧ್ಯಕ್ಷ ನಾಸರ್‌ರವರೊಡನೆ ವಿಶ್ವಸಂಸ್ಥೆ ಪಡೆಗಳ ಮುಖ್ಯಾಧಿಕಾರಿ ಮೇಜರ್ ಜನರಲ್ ಬರ್ನ್ಸ್‌ರವರು ನಿನ್ನೆ [illegible] ಭೇಟಿ ಮಾಡಿ ಮಾತುಕತೆ ನಡೆಸಿದರು [illegible] ನಾಸರ್‌ರವರು ಅಲ್ಲಿ [illegible] ಸಂಭಾಷಣೆ ನಡೆಸಿದರು

ಮದ್ದೂರ ಬಳಿ ಗೂಡ್ಸ್ ರೈಲು ಅಪಘಾತ

ಹಾಸನ ಮತ್ತು ಮದ್ದೂರ ನಿಲ್ದಾಣಗಳ ನಡುವೆ ನಿನ್ನೆ ಬೆಳಗ್ಗೆ ಗೂಡ್ಸ್ ರೈಲೊಂದು ಹೋಗುತ್ತಿದ್ದಾಗ ೫ ಡಬ್ಬಿಗಳು ಕಂಬಿ ತಪ್ಪಿ ಉರುಳಿದುವು ಅದರಿಂದ ರೈಲುಗಳ ಸಂಚಾರವು ನಿಧಾನವಾಗಿ ಪ್ರಯಾಣಿಕರನ್ನು ಟ್ರಾನ್ಸಿಪ್ ಮಾಡಲಾಯಿತು ಈ ಬೆಳಗಿನ ಜಾವದಿಂದ ರಸ್ತೆಯು ಪುನಃ ಸಂಚಾರಕ್ಕೆ ಅನುಕೂಲವಾಗುವಂತೆ ಏರ್ಪಡಿಸಲಾಯಿತು

ಕರ್ನಾಟಕದಲ್ಲಿ ಕಡಿದಾಳ್ ಮಂಜಪ್ಪನವರ ಪ್ರವಾಸ

ಧಾರವಾಡ ಮತ್ತು ಬೆಳಗಾಂ ಜಿಲ್ಲೆಗಳಲ್ಲಿ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಈ ತಿಂಗಳು ೩ನೇ ವಾರದಲ್ಲಿ ಪ್ರವಾಸ ಕೈಗೊಳ್ಳುವರು ಅಲ್ಲಿನ ವಿದ್ಯಾಭ್ಯಾಸ ಪದ್ಧತಿಯನ್ನು ಅವರು ಪರಿಶೀಲಿಸುವರು ಅಬ್ಕಾರಿ ಮಂತ್ರಿ ಶ್ರೀ ಜಗನ್ನಾಥರಾವ್ ಚಂದ್ರಿಕಿಯವರು ಇದೇ ೧೪ನೇ ತಾರೀಖಿನಿಂದ ಹೈದರಾಬಾದು ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು

ಎಸ್.ಕೆ. ವೆಂಕಟರಮಣ ಅಯ್ಯರ ನಿಧನ

ನಿವೃತ್ತ ಜಿಲ್ಲಾಧಿಕಾರಿಗಳಾದ ಶ್ರೀ ಎಸ್ ಕೆ. ವೆಂಕಟರಮಣ ಅಯ್ಯರ್‌ರವರು ಮೊನ್ನೆ ಬೆಂಗಳೂರಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರು ಗುಮಾಸ್ತೆ ಹುದ್ದೆಯಿಂದ ಜಿಲ್ಲಾಧಿಕಾರಿಗಳ ಅಧಿಕಾರವನ್ನೂ ನಿರ್ವಹಿಸಿದ್ದರು ಮೇಲ್ಕೋಟೆ, ನಂಜನಗೂಡು [illegible] ದೇವಾಲಯಗಳ ವಿಚಾರಣಾ ಸಮಿತಿಗಳ ಸದಸ್ಯರಾಗಿದ್ದರು

○ ಭಾರತದ ಪ್ರಧಾನ ವಿಮಾನಾಧಿಕಾರಿಗಳಾದ ಏರ್ ಮಾರ್ಷಲ್ [illegible] ಬೆಂಗಳೂರಿಗೆ ಆಗಮಿಸಿದರು

ಉತ್ತರ ಕರ್ನಾಟಕದಲ್ಲಿ ಸಧ್ಯಕ್ಕೆ ಬೊಂಬಾಯಿ ಶಾಸನಗಳೇ ಜಾರಿ

ಮೈಸೂರಿಗೆ ಸೇರಿರುವ ಮಾಜಿ ಬೊಂಬಾಯಿಯ ಕನ್ನಡ ಭಾಗಗಳಲ್ಲಿ ಸಧ್ಯಕ್ಕೆ ಬೊಂಬಾಯಿ ಶಾಸನಗಳೇ ಜಾರಿಯಲ್ಲಿರುತ್ತವೆಂದು ಬೆಳಗಾಂ ಡಿವಿಜನಲ್ ಕಮೀಷನರಾದ ಶ್ರೀ ಕೆ. ಪಿ ರಾಮನಾದಯ್ಯನವರು ತಿಳಿಸಿರುತ್ತಾರೆ ಇಡೀ ಮೈಸೂರು ಸಂಸ್ಥಾನಕ್ಕೆ ಅನ್ವಯಿಸುವ ಕಾನೂನುಗಳು ಏರ್ಪಡುವವರೆಗೂ ಈಗಿನ ವ್ಯವಸ್ಥೆಯೇ ಮುಂದುವರಿಯುವುದಾಗಿ ಅವರು ಹೇಳುವರು

ಹಿಂದೂ ಮಹಾಸಭೆಯ ಅಧಿವೇಶನ

ಅಖಿಲ ಭಾರತ ಹಿಂದೂ ಮಹಾಸಭೆಯ ೩೦ನೇ [illegible] ಅಧಿವೇಶನವು ನಿನ್ನೆ ಜೋಧಪುರದಲ್ಲಿ ಸೇರಿತು ಲೋಕಸಭಾ ಸದಸ್ಯರಾದ ಎನ್ ಸಿ ಚಟರ್ಜಿಯವರು ಅಧ್ಯಕ್ಷ ಭಾಷಣ ಮಾಡಿ, ಮುಂದಿನ ಮಹಾ ಚುನಾವಣೆಗಳಲ್ಲಿ ಮಹಾಸಭೆಯು ಅಧಿಕ ಸಂಖ್ಯೆಯ ಮತ್ತು ಸಾಮಾಜಿಕ ರಂಗಗಳಲ್ಲಿ ಪ್ರಥಮ ಮಹತ್ವದ ರಚನಾತ್ಮಕ ಕಾರ್ಯಕ್ರಮದ ಆಧಾರದ ಮೇಲೆ ಹೋರಾಟ ನಡೆಸುವುದೆಂದು ತಿಳಿಸಿದರು ಗೋವಧೆ ನಿಷೇಧ, ವಿದೇಶೀ ಮಿಷನರಿಗಳ ವಿಸರ್ಜನೆ, ಸಂಯುಕ್ತ ಮಹಾರಾಷ್ಟ್ರ ಮತ್ತು ಮಹಾ ಗುಜರಾತುಗಳ ನಿರ್ಮಾಣ, ಪಂಜಾಬಿನಲ್ಲಿ ಹಿಮಾಚಲ ಪ್ರದೇಶದ ವಿಲೀನ ಮುಂತಾದುವುಗಳ ಸಾಧನೆಯು ಮಹಾಸಭೆಯ ಗುರಿಯೆಂದು ಅವರು ತಿಳಿಸಿದರು ಇತರ ಯಾವುದೇ ಪಕ್ಷಗಳೊಡನೆ ಸಂಘಟನೆ ಮಾಡಿಕೊಳ್ಳಲಾಗುವುದೆಂದೂ ಅವರು ನುಡಿದರು

ಕೊಟ್ಟಾಯದಲ್ಲಿ ಶೃಂಗೇರಿ ಸ್ವಾಮಿಗಳು

ಶೃಂಗೇರಿಯ ಮಠಾಧೀಶರಾದ ಶ್ರೀ ಶ್ರೀ ವಿದ್ಯಾತೀರ್ಥ ಭಾರತಿ ಸ್ವಾಮಿಗಳವರು ಕೊಟ್ಟಾಯಕ್ಕೆ ಆಗಮಿಸಿದ್ದಾರೆ ಅಲ್ಲಿನ ಭಕ್ತಾದಿಗಳು ಸ್ವಾಮಿಗಳವರ ಸನ್ಮಾನಕ್ಕಾಗಿ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಶ್ರೀಗಳವರು ಅಲ್ಲಿ ಮೂರು ದಿನಗಳ ವರೆಗೆ ಉಪನ್ಯಾಸ ಮಾಡಲಿರುವರು

ಹೆಂಡತಿ ಮತ್ತು ಮಗುವನ್ನು ನಾಲೆಗೆ ತಳ್ಳಿ ಪೋಲೀಸರ ವಶ

ತಿರುಗಾವಲಿನ ನಿವಾಸಿ ಶಾಲ್‌ಖಾನ್ ಎಂಬಾತನು ಜೀವನದಲ್ಲಿ ಬೇಸರಗೊಂಡು ತನ್ನ ಹೆಂಡತಿ ಮತ್ತು ೧ ವರ್ಷದ ಮಗುವನ್ನು ಕಳೆದ ಗುರುವಾರ ಹಳ್ಳದಕೊಪ್ಪಲಿನ ನಾಲೆಗೆ ತಳ್ಳಿ ಮೊನ್ನೆ ಲಕ್ಷ್ಮರ್ ಪೋಲೀಸರಿಗೆ ಅವರ ಮರಣದ ಬಗ್ಗೆ ತಾನೇ ವರದಿ ಮಾಡಿದನೆಂದೂ, ಅವನನ್ನು ಬಂಧಿಸಿ ತನಿಖೆ ನಡೆಸಲಾಗುತ್ತಿರುವುದೆಂದೂ ವರದಿಯಾಗಿದೆ

○ ಈಜಿಪ್ಟಿನಲ್ಲಿ ವಿಶ್ವ ಸಂಸ್ಥೆಯ ಶಾಂತಿ ಪಡೆಯನ್ನು ಏರ್ಪಡಿಸುವುದಕ್ಕೆ ಈಜಿಪ್ಟ್ ಸರ್ಕಾರದವರು ಒಪ್ಪಿರುತ್ತಾರೆ ಪಡೆಯಲ್ಲಿ ಯಾವ ರಾಷ್ಟ್ರಗಳ ಸೈನ್ಯ [illegible] ಎಂಬುದನ್ನು ಈಜಿಪ್ಟ್ ಸರ್ಕಾರದವರು ಪರಿಶೀಲಿಸುತ್ತಿರುವರು

ಸಹಕಾರ ಸಂಘಗಳಲ್ಲಿ ಅಕ್ರಮ ನಡವಳಿಕೆ

ಸಚಿವ ಭೀಮಪ್ಪನಾಯಕರ ಎಚ್ಚರಿಕೆ

ಬೆಂಗಳೂರು ೧೧

ಇಲ್ಲಿ ನಡೆದ ಅಖಿಲ ಭಾರತ ಸಹಕಾರಿಗಳ ವಿಚಾರಚರ್ಚೆ ಅಧ್ಯಕ್ಷತೆ ವಹಿಸಿದ್ದ ಸಹಕಾರ ಮಂತ್ರಿ ಶ್ರೀ ಎ ಭೀಮಪ್ಪನಾಯಕರು ಮಾತನಾಡಿ, ಸಂಸ್ಥಾನದ ಬಹುಮಟ್ಟಿನ ಸಹಕಾರ ಸಂಘಗಳು ನಡೆಸುತ್ತಿರುವ ಕೆಲಸವನ್ನು ಉಗ್ರವಾಗಿ ಟೀಕಿಸಿ, ಅಧಿಕಾರ ಮತ್ತು ಹಣದ ದುರುಪಯೋಗ ಮುಂತಾದ ಅಕ್ರಮ ನಡವಳಿಕೆಗಳಿಲ್ಲದಿರುವ ಯಾವೊಂದು ಸಂಘವೂ ತಮಗೆ ಕಂಡುಬಂದಿಲ್ಲವೆಂದು ಹೇಳಿದರು ಸ್ವಾರ್ಥಕ್ಕಾಗಿ ಸಹಕಾರ ಚಳವಳಿಯನ್ನೇ ವೃತ್ತಿಯನ್ನಾಗಿ ಮಾಡಿಕೊಂಡಿರುವವರನ್ನು ಕಿತ್ತುಹಾಕಲು ತಾವು ಎಲ್ಲಾ ಪ್ರಯತ್ನವನ್ನು ನಡೆಸುವುದಾಗಿ ಅವರು ಎಚ್ಚರಿಕೆಯಿತ್ತರು ಸಹಕಾರ ಚಳುವಳಿಯು ಸರಿಯಾಗಿ ನಡೆಯಲು ಅವಶ್ಯವಿದ್ದರೆ ಸಹಕಾರದ ಕಾನೂನನ್ನು ಬದಲಾಯಿಸುವುದಾಗಿಯೂ ಅವರು ನುಡಿದರು

ರೆವಿನ್ಯೂ ಮಂತ್ರಿ ಶ್ರೀ ಎಂ ಪಿ ಪಾಟೀಲರು ಭಾಷಣ ಮಾಡಿ, ಭಾರತದ ಆರ್ಥಿಕ ಪ್ರಗತಿಗೆ ವ್ಯವಸಾಯ, ಕೈಗಾರಿಕೆ ಮತ್ತು ಸಹಕಾರಗಳು ಸರಿಯಾದ ಮಾರ್ಗದಲ್ಲಿ ಮುಂದುವರಿಯಬೇಕೆಂದು ಸೂಚಿಸಿದರು

ಈಜಿಪ್ಟಿನ ಕದನ ಸ್ತಂಭನಕ್ಕೆ ನಾರ್ವೆ, ಡೆನ್ಮಾರ್ಕ್‌ಗಳ ಪಡೆ

ಸೂಯೆಜ್ ಕಾಲುವೆ ಸಂಚಾರಕ್ಕೆ ಏರ್ಪಾಡು

ವಿಶ್ವಸಂಸ್ಥೆಯು ಏರ್ಪಡಿಸಿರುವ ಅಂತರ ರಾಷ್ಟ್ರೀಯ ಪೋಲೀಸು ಪಡೆಯಲ್ಲಿ ಕೆಲಸ ಮಾಡಲು ಡೆನ್ಮಾರ್ಕ್, ನಾರ್ವೆ ಮತ್ತು ಕೊಲಂಬಿಯಾಗಳ ೧೫೦ ಸೈನಿಕರು ಮುಂಗಡವಾಗಿ ಈಜಿಪ್ಟಿನಲ್ಲಿ ಕದನ ಸ್ತಂಭನದ ಉಸ್ತುವಾರಿಗಾಗಿ ಅಮೆರಿಕದ ವಿಮಾನಗಳಲ್ಲಿ ಹೋಗಿದ್ದಾರೆ

ಸೂಯೆಜ್ ಕಾಲುವೆಯಲ್ಲಿ ಈಜಿಪ್ಟಿನವರು ಮುಳುಗಿಸಿರುವ ಸುಮಾರು ೩೦ ಹಡಗುಗಳನ್ನು ಎತ್ತಿ ದಾರಿ ಸುಗಮ ಮಾಡಲು ವಿಶ್ವಸಂಸ್ಥೆಯು ಹಾಲೆಂಡ್ ಮತ್ತು ಡೆನ್ಮಾರ್ಕ್ ಕಂಪೆನಿಗಳಿಗೆ ಸೂಚಿಸಿದೆ

ಸಾದಿ ಅರೇಬಿಯದಿಂದ ಬ್ರಿಟಿಷರು ಮತ್ತು ಫ್ರೆಂಚರ ಉಚ್ಚಾಟನೆ

ಸಾದಿ ಅರೇಬಿಯದಲ್ಲಿರುವ ಎಲ್ಲಾ ಬ್ರಿಟಿಷರು ಮತ್ತು ಫ್ರೆಂಚರನ್ನು ದೊರೆ ಇಬ್ನ್ ಸಾದರು ಅಲ್ಲಿಂದ ಹೊರದೂಡಿದ್ದಾರೆಂದು ಇಸ್ರೇಲ್ ರೇಡಿಯೊ ತಿಳಿಸಿದೆ [illegible] ಈ ತಿಂಗಳಿಂದ ತಮ್ಮ ದೇಶಕ್ಕೆ ಫ್ರಾನ್ಸಿನ ಸರಕುಗಳು ಬರದಂತೆ ನಿಷೇಧ ಹಾಕಿದೆ

ಈಜಿಪ್ಟಿಗೆ ಭಾರತದ ಪಡೆ

ಪಶ್ಚಿಮ ಏಷ್ಯದಲ್ಲಿ ವಿಶ್ವ ಸಂಸ್ಥೆಯ ಪೋಲೀಸು ಪಡೆಯೊಡನೆ ಕೆಲಸ ಮಾಡಲು ಭಾರತದ ಪ್ರಥಮ ತಂಡವು ಈ ದಿನ ಅಥವಾ ನಾಳೆ ದೆಹಲಿಯಿಂದ ತೆರಳಲಿದೆ ಬ್ರಿಗೇಡಿಯರ್ ರಾಜವಾಡೆ, ಲೆ॥ ಕ॥ ಕೆ ಎ ಎಸ್ ರಾಜಾ ಮತ್ತು ಎ. ಡಿ ಜೆ ಪಿಳ್ಳೈರವರು [illegible] ಬರ್ನ್ಸ್‌ರವರೊಡನೆ ಚರ್ಚಿಸುವರು

ವಾರ ಭವಿಷ್ಯ

ತಾ॥ ೧೧-೧೧-೫೬ರಿಂದ ೧೮-೧೧-೫೬ರವರೆಗೆ

ಮೇಷ:—ಆರೋಗ್ಯ ಚೆನ್ನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ನಿರುತ್ಸಾಹ. ಪ್ರವಾಸದಲ್ಲಿ ತೊಂದರೆ. ಅಲ್ಪರಿಂದ ವಂಚನೆ.

ವೃಷಭ:- ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರವೇಶ. ಪ್ರವಾಸ ಸುಖಕರವಾಗಿರುವುದು

ಮಿಥುನ. ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಾಧಾರಣ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ನಿರುತ್ಸಾಹ. ಹೊಸ ಉದ್ಯಮಗಳಿಗೆ ಕೈಹಾಕಬೇಡಿ.

ಕರ್ಕ:- ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರ ವ್ಯವಹಾರಗಳಲ್ಲಿ ತೊಂದರೆ. ಉದ್ಯೋಗದಲ್ಲಿ ನಿರುತ್ಸಾಹ. ಪ್ರವಾಸ ಬೇಡ

ಸಿಂಹ:—ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಶುಭ ಕಾರ್ಯಗಳು ಜರುಗುವುವು. ಉದ್ಯೋಗದಲ್ಲಿ ಪ್ರೋತ್ಸಾಹ

ಕನ್ಯಾ:—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಶತ್ರುಗಳ ಪರಾಜಯ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ನೌಕರಿಯಲ್ಲಿ ಉತ್ಸಾಹ.

ತುಲಾ:—ಆರೋಗ್ಯ ಅತೃಪ್ತಿಕರ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ಸಮಸ್ಯೆ. ಪ್ರವಾಸದಲ್ಲಿ ಅಡ್ಡಿ

ವೃಶ್ಚಿಕ. ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಲಾಭ. ಉದ್ಯೋಗದಲ್ಲಿ ಯಶಸ್ಸು. ಮಂಗಳ ಕಾರ್ಯಗಳು ಜರುಗುವುವು. ಪ್ರವಾಸ ಹಿತಕರವಾಗಿರುವುದು.

ಧನು:-ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಮೋಷನ್. ಕೈಗೊಂಡ ಕಾರ್ಯಗಳಲ್ಲಿ ಜಯ

ಮಕರ: ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ಉದ್ಯೋಗದಲ್ಲಿ ಉತ್ಸಾಹ. ಸಾಮಾಜಿಕಕ್ಷೇತ್ರದಲ್ಲಿ ಉನ್ನತಿ

ಕುಂಭ. ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ತೊಂದರೆ. ಉದ್ಯೋಗದಲ್ಲಿ ಕಿರುಕುಳ. ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ.

ಮೀನ:- ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಉತ್ಸಾಹ. ಪ್ರವಾಸ-ಸುಖಕರವಾಗಿರುವುದು.

ಫುಟ್‌ಬಾಲ್ ಪಂದ್ಯ

ದಸರಾ ಟೂರ್ನಮೆಂಟ್ ಅಂಗವಾಗಿ ನೆನ್ನೆ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ರೈಲ್ವೆ ಇನ್ಸ್ಟಿಟ್ಯೂಟಿನವರು ಯುವರಾಜಾ ಕಾಲೇಜಿನವರನ್ನು ೫-೨ ಗೋಲುಗಳಿಂದ ಸೋಲಿಸಿದರು.

ಸೂಯೆಜ್ ಕಾಲುವೆ ರಿಪೇರಿ ಕೆಲಸ

ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರ ಹೇಳಿಕೆ

ಈಜಿಪ್ಟಿನಲ್ಲಿ ಒಬ್ಬ ವಿದೇಶೀ ಸೈನಿಕನಿರುವವರೆಗೂ ಸೂಯೆಜ್ ಕಾಲುವೆಯ ರಿಪೇರಿ ಕೆಲಸವನ್ನು ನಡೆಸಲು ಅವಕಾಶ ಕೊಡುವುದಿಲ್ಲವೆಂದು ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರು ತಿಳಿಸಿದ್ದಾರೆ. ಪೋರ್ಟ್ ಸೈಯಿದ್ಡಿಗೆ ದಕ್ಷಿಣ ಭಾಗದಲ್ಲಿರುವ ಸೂಯೆಜ್ ಕಾಲುವೆ ಪ್ರದೇಶವೆಲ್ಲವೂ ಈಜಿಪ್ಟಿನವರ ವಶದಲ್ಲಿರುವುದಾಗಿ ಮಾಸ್ಕೋ ರೇಡಿಯೋವು ತಿಳಿಸಿದೆ.

ಸಿಕಂದರಾಬಾದಿನಲ್ಲಿ ಕ್ರಿಸ್ತ ಪಾದ್ರಿಗಳ ಬಂಧನ

ಸಿಕಂದರಾಬಾದ್ ರೈಲ್ವೆ ನಿಲ್ದಾಣದಲ್ಲಿ ಮೊನ್ನೆ ಪೊಲೀಸರು ರೈಲ್ವೆ ಶಾಸನದ ಪ್ರಕಾರ, ಜನರಿಗೆ ಉಪದ್ರವ ಕೊಡುತ್ತಿದ್ದರೆಂಬ ಕಾರಣಕ್ಕಾಗಿ ೪ ಜನ ಕ್ರಿಸ್ತ ಪಾದ್ರಿಗಳನ್ನು ಬಂಧಿಸಿರುವುದಾಗಿ [illegible]. ಅವರುಗಳು ನಿಲ್ದಾಣದಲ್ಲಿ ಮತೀಯ ಸಾಹಿತ್ಯವನ್ನು ಹರಡುತ್ತಿದ್ದರು. ಹಿಂದೂ ಮತದ ಬಗ್ಗೆ ಅವಾಚ್ಯ ಶಬ್ದಗಳನ್ನಾಡಿ ಜನರಿಗೆ ಮನಸ್ಸನ್ನು ನೋಯಿಸುತ್ತಿದ್ದರೆಂದು ಹೇಳಲಾಗಿದೆ.

ಲಾಟರಿಯಲ್ಲಿ ಬಹುಮಾನ ಪಡೆದರೂ ದುರದೃಷ್ಟ

ಮಧ್ಯ ರೈಲ್ವೆಯ ನಿವೃತ್ತ ನೌಕರ ಯಂಕಯ್ಯ ಎಂಬುವನಿಗೆ ಲಾಟರಿಯೊಂದರಲ್ಲಿ ೧೨,೦೦೦ ರೂಪಾಯಿಗಳ ಬಹುಮಾನ ದೊರೆತಿದೆ. ಆದರೆ ಅವನು ಕೊಂಡಿದ್ದ ಲಾಟರಿ ಟಿಕೆಟ್ಟು ಕಳೆದು ಹೋಗಿರುವುದರಿಂದ ಹಣವನ್ನು ಪಡೆಯಲು ಆಸ್ಪದವಿಲ್ಲವಾಗಿದೆ.

ಕೇರಳದ ೩ ಜನ ಅಧಿಕಾರಿಗಳ ಸಸ್ಪೆಂಡ್

ಹಿಂದಿನ ತಿರುವಾಂಕೂರು-ಕೊಚ್ಚಿ ಸಂಸ್ಥಾನದ ಅರಣ್ಯ ಇಲಾಖಾ ಮುಖ್ಯಾಧಿಕಾರಿಯಾದ ಎಸ್. ವೆಂಕಟೇಶ್ವರ್ ಮತ್ತು ಇನ್ನಿಬ್ಬರು ಇಲಾಖಾಧಿಕಾರಿಗಳನ್ನು ಕೇರಳ ಸರ್ಕಾರದವರು ದುರ್ವರ್ತನೆಗಾಗಿ ಸಸ್ಪೆಂಡ್ ಮಾಡಿದ್ದಾರೆ. ಅವರ ಬಗ್ಗೆ ತನಿಖೆಗಾಗಿ ಆಜ್ಞೆ ಮಾಡಲಾಗಿದೆ. ಕೇರಳ ಹೈಕೋರ್ಟಿನ ನ್ಯಾಯಾಧೀಶರಾದ ಕುಮಾರಪಿಳ್ಳೆಯವರು ವಿಚಾರಣೆ ನಡೆಸುವರು.

ರೈಲುಗಳಲ್ಲಿ ಭಿಕ್ಷುಕರ ಹಾವಳಿ ತಪ್ಪಿಸಲು ಕ್ರಮ

ರೈಲುಗಳಲ್ಲಿ ಭಿಕ್ಷುಕರಿಂದ ಪ್ರಯಾಣಿಕರಿಗೆ ಆಗುತ್ತಿರುವ ತೊಂದರೆಯನ್ನು ತಪ್ಪಿಸುವುದಕ್ಕಾಗಿ ಸೂಕ್ತ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲು ರೈಲ್ವೆ ಬೋರ್ಡಿನವರು ನಿರ್ಧರಿಸಿದ್ದಾರೆ. ಕಳೆದ ವರ್ಷ ಜೂನ್ ಅಖೈರಿನೊಳಗೆ ೯ ತಿಂಗಳಲ್ಲಿ ೧೮ ಲಕ್ಷ ಭಿಕ್ಷುಕರನ್ನು ಬಂಧಿಸಲಾಗಿತ್ತು. ೨೫,೦೦೦ ಜನರು ಟಿಕೆಟ್ಟಿಲ್ಲದೆ ಪ್ರಯಾಣ ಮಾಡಿದ್ದರು. ೧೦ ಸಾವಿರ ಜನರಿಗೆ ಶಿಕ್ಷೆಯಾಗಿತ್ತು.

ಡಿಸೆಂಬರ್ ೫ರಂದು ವಿಮಾ ನೌಕರರ ಸಾಂಕೇತಿಕ ಮುಷ್ಕರ

ವಿಮಾ ನೌಕರರು ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಳ್ಳಲು ಬರುವ ತಿಂಗಳು ೫ನೇ ತಾರೀಖು ಸಾಂಕೇತಿಕ ಮುಷ್ಕರವನ್ನು ನಡೆಸಲಿರುವುದಾಗಿ ಭಾರತದ ವಿಮಾ ಸಂಸ್ಥೆಯ ಅಧ್ಯಕ್ಷರಿಗೆ ನೌಕರರ ಸಂಘವು ತಿಳಿಸಿದೆ.

ಫ್ರಾನ್ಸ್-ಇರಾಕ್ ಸಂಬಂಧತ್ಯಾಗ

ಫ್ರಾನ್ಸಿನೊಡನೆ ಇರಾಕು ರಾಜತಾಂತ್ರಿಕ ಸಂಬಂಧವನ್ನು ಕಡಿದುಹಾಕಿದೆ.

ನ್ಯಾಷನಲ್ ಸ್ಪೋರ್ಟ್ಸ್ ಕ್ಲಬ್ಬಿನ ಅಧಿಕಾರ ವರ್ಗ

ಮೇಲ್ಕಂಡ ಸಂಘದ ಸರ್ವ ಸದಸ್ಯರ ಸಭೆಯು ಶ್ರೀ ಡಿ. ನಾಗರಾಜಭಟ್ಟರ ಅಧ್ಯಕ್ಷತೆಯಲ್ಲಿ ಮೊನ್ನೆ ನಡೆದು, ಪ್ರಸಕ್ತ ಸಾಲಿಗೆ ಶ್ರೀ ಬಿ. ಎಸ್. ಹಿರಣ್ಣಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ನಾಗರಾಜಭಟ್ಟರು ಉಪಾಧ್ಯಕ್ಷರಾಗಿಯೂ, ಶ್ರೀ ಆರ್. ರಾಜಗೋಪಾಲ್ ಮತ್ತು ಶ್ರೀ ಎಂ. ಎನ್. ನಾಗರಾಜ್‌ರವರು ಜಂಟಿ ಕಾರ್ಯದರ್ಶಿಗಳಾಗಿಯೂ, ಶ್ರೀ ಕೆ ಶ್ರೀನಿವಾಸ್, ವಿ. ಎ. ಶರ್ಮ, ಎಂ. ಎನ್. ಶ್ರೀಕಂಠ ಮತ್ತು ಎ. ಎಸ್. ನಾಗರಾಜ್‌ರವರು ಸದಸ್ಯರಾಗಿಯೂ ಚುನಾಯಿಸಲ್ಪಟ್ಟರು. ಶ್ರೀ ಡಿ ರಂಗಣ್ಣ ಮತ್ತು ಶ್ರೀ ಟಿ. ಆರ್. ರಂಗನಾಥ್‌ರವರು ಕ್ರಿಕೆಟ್ ಕ್ಯಾಪ್ಟನ್ ಮತ್ತು ವೈಸ್ ಕ್ಯಾಪ್ಟನ್‌ಗಳಾಗಿಯೂ ಮತ್ತು ಶ್ರೀ ಜಿ. ನಂಜುಂಡಸ್ವಾಮಿ ಮತ್ತು ಶ್ರೀ ರಾಘವೇಂದ್ರಭಟ್ಟರು, ಕಬಡ್ಡಿ ಕ್ಯಾಪ್ಟನ್ ಮತ್ತು ವೈಸ್ ಕ್ಯಾಪ್ಟನ್‌ಗಳಾಗಿಯೂ ಚುನಾಯಿತರಾದರು

ಕಾಶ್ಮೀರದಲ್ಲಿ ಉರ್ದು ಸರ್ಕಾರಿ ಭಾಷೆ

ಕಾಶ್ಮೀರದಲ್ಲಿ ಅಧಿಕೃತ ಭಾಷೆಯು ಉರ್ದು ಆಗಿರಬೇಕೆಂದು ಅಲ್ಲಿನ ಸಂವಿಧಾನ ಸಭೆಯು ನಿರ್ಧರಿಸುತ್ತಿದೆ. ಕಾಶ್ಮೀರಿ, ಡೋಗ್ರಿ, ಬಲ್ಟಿ, ದಾರ್ಡಿ, ಪಂಜಾಬಿ, ಪಹಾರಿ, ಲಡಖಿ, ಈ ಭಾಷೆಗಳು ಪ್ರಾದೇಶಿಕ ಭಾಷೆಗಳೆಂದು ಗೊತ್ತುಪಡಿಸಲಾಗಿದೆ. ಕಾಶ್ಮೀರದ ಅಧಿಪತಿ ಸದರ್ ಇ ರಿಯಾಸತ್ತರ ಚುನಾವಣೆ ಮತ್ತು ಅವರ ವೇತನವನ್ನೂ ಗೊತ್ತುಪಡಿಸಲಾಗಿದೆ. ಅವರಿಗೆ ಮಾಹೆಯಾನಾ ೫,೫೦೦ ರೂ ಸಂಬಳ ಮತ್ತು ಸಿಬ್ಬಂದಿ, ಪ್ರವಾಸ ಮತ್ತು ಇತರ ವೆಚ್ಚಕ್ಕಾಗಿ ವರ್ಷಕ್ಕೆ ಒಟ್ಟು ೧,೯೦,೦೦೦ ರೂ. ಕೊಡಬೇಕೆಂದು ನಿರ್ಧರಿಸಲಾಗಿದೆ. ಅವರಿಗೆ ಉಚಿತ ಗೃಹ ವಸತಿ ಮತ್ತು ಮೋಟಾರು ವಾಹನ ಸೌಲಭ್ಯಗಳಿರುತ್ತವೆ. ಅಲ್ಲಿ ಇನ್ನುಮುಂದೆ ಸಚಿವರು, ಉಪಸಚಿವರು, ಹೈಕೋರ್ಟು ನ್ಯಾಯಾಧೀಶರುಗಳು ಸಂಸ್ಥಾನದ ರಾಜ್ಯಾಂಗದ ಹೆಸರಿನಲ್ಲಿ ಪ್ರಮಾಣವಚನ ಸ್ವೀಕರಿಸಲಿರುವರು.

ಬಳ್ಳಾರಿಗೆ ಹಲವು ಸರ್ಕಾರಿ ಕಛೇರಿಗಳು

ಬೆಂಗಳೂರಿನಿಂದ ಬಳ್ಳಾರಿಗೆ ಹಲವು ಸರ್ಕಾರಿ ಕಛೇರಿಗಳನ್ನು ವರ್ಗಾಯಿಸಲು ಆಲೋಚಿಸಲಾಗುತ್ತಿದೆ. ಆಂಧ್ರದ ಪ್ರಾದೇಶಿಕ ಕಛೇರಿಗಳನ್ನು ಬಳ್ಳಾರಿಯಿಂದ ವರ್ಗಾಯಿಸಿದನಂತರ ಆ ಊರಿನ ಪ್ರಾಮುಖ್ಯತೆಯು ಹೋಗದಿರುವಂತೆ ನೋಡಿಕೊಳ್ಳಲು ಅರಣ್ಯ ಇಲಾಖೆಯ ಡಿವಿಜನಲ್ ಕಛೇರಿಯನ್ನೂ; ಅಬ್ಕಾರಿ ಮತ್ತು ವ್ಯವಸಾಯ ಇಲಾಖೆಯ ಶಾಖೆಗಳನ್ನೂ ಅಲ್ಲಿಗೆ ವರ್ಗಾಯಿಸಲಾಗುವುದೆಂದು ಗೊತ್ತಾಗಿದೆ.

ಹರಿಕಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಕುಮಾರಿ ಶ್ರೀ ಕೆ. ಯಶೋದಮ್ಮನವರಿಂದ ಈ ಸಂಜೆ ೭ ಘಂಟೆಗೆ ಚಂದ್ರಹಾಸ ಎಂಬ ಹರಿಕಥೆಯೂ, ನಾಳೆ ಸಂಜೆ ೭ ಘಂಟೆಗೆ ರುಕ್ಮಿಣಿ ಕಲ್ಯಾಣ ಎಂಬ ಹರಿಕಥೆಯೂ ನಡೆಯುವುವು ಪೌರಸಭಾ ಸದಸ್ಯ ಡಾ॥ ಬಿ. ಜಿ ದಾಸ್‌ರವರು ಅಧ್ಯಕ್ಷತೆ ವಹಿಸುವರು. ವರ್ತಮಾನ್ ಪತ್ರಿಕೆ ಸಂಪಾದಕರಾದ ಶ್ರೀ ಎಂ. ಎನ್. ತಿಮ್ಮಯ್ಯನವರು ಭಾಷಣ ಮಾಡುವರು.

ಶ್ರೀ ವಿಶಾರದ ಕೃಷ್ಣಪ್ಪನವರ ರಾಮ ಮಂದಿರದಲ್ಲಿ 12-11-56ನೇ ಸೋಮವಾರದ ಕಾರ್ಯಕ್ರಮ

ಪ್ರಾತಃಕಾಲ 10 ಘಂಟೆಗೆ ದೇವರ ಪೂಜೆ

ಸ್ಪರ್ಧೆಗಳು : ಪ್ರವೇಶ ಧನ 8 ಆಣೆ

ಸಾಯಂಕಾಲ 5 ಘಂಟೆಗೆ

ಶ್ರೀಮತಿ ಅನಸೂಯರವರ ಗಾಯನ
ಟಿ. ಮಹದೇವಪ್ಪನವರ ಪಿಟೀಲು
ಶ್ರೀ ಟಿ. ವಿ. ಎಸ್. ಮಣಿಯವರ ಮೃದಂಗ

ಸಾಯಂಕಾಲ 6-30 ಘಂಟೆಗೆ

ವಿ. ವಿ. ದೊರೆಸ್ವಾಮಯ್ಯಂಗಾರ್ಯರ ವೀಣಾವಾದನ
ಸಂ॥ ರಾ॥ ಟಿ. ಚೌಡಯ್ಯನವರ ಪಿಟೀಲು
ಸಂ॥ ರಾ॥ ಟಿ. ಎಂ. ಪುಟ್ಟಸ್ವಾಮಯ್ಯನವರ ಮೃದಂಗ

ಟಿಕೆಟ್ ದರ. 2 ರೂಪಾಯಿಗಳಿಂದ ರೂ. 1 ಮಾತ್ರ

ದೇವತಾರ್ಚನೆಗೆ
ಮೈಸೂರು ಎಂ. ಆರ್. ಚಿಟ್ಟಿಪ್ಪನವರ
ಸ್ಪೆಷಲ್ ಪ್ರೇಮಲೀಲಾ
ಅಗರಬತ್ತಿಗಳನ್ನೇ
ಉಪಯೋಗಿಸಿರಿ
ಪ್ರೇಮಲೀಲಾ ಅಗರಬತ್ತಿ ಫ್ಯಾಕ್ಟರಿ,
ಮೈಸೂರು

ಬ್ರಿಟಿಷ್ ರಾಣಿಯವರ ಸ್ವಾಗ ಸಮಾರಂಭಕ್ಕೆ ಬಹಿಷ್ಕಾರ

ಬ್ರಿಟಿಷ್ ರಾಣಿಯವರು ಲಂಡನ್ನಿನಲ್ಲಿ ಮೊನ್ನೆ ಏರ್ಪಡಿಸಿದ್ದ ವಾರ್ಷಿಕ ಸ್ವಾಗತ ಸಮಾರಂಭಕ್ಕೆ ಈಜಿಪ್ಟ್, ಸಿರಿಯಾ ಮತ್ತು ಸೌದಿ ಅರೇಬಿಯಾ ಪ್ರತಿನಿಧಿಗಳಲ್ಲದೆ, ಲೆಬನಾನ್, ಜೋರ್ಡಾನ್, ಇರಾಕ್, ಲಿಬ್ಯ ಮತ್ತು ಯೆಮೆನ್ ರಾಜ್ಯಗಳ ಪ್ರತಿನಿಧಿಗಳೂ ಬಹಿಷ್ಕಾರ ಹಾಕಿದ್ದಾರೆ. ಈಜಿಪ್ಟ್. ಸಿರಿಯಾ ಮತ್ತು ಸೌದಿ ಅರೇಬಿಯಾಗಳು ಬ್ರಿಟನ್ನಿನೊಡನೆ ತಮ್ಮ ರಾಜತಾಂತ್ರಿಕ ಸಂಬಂಧವನ್ನು ಕಡಿದಿವೆ.

ಪಿಟೀಲು ಮತ್ತು ನೃತ್ಯ ತರಗತಿಗಳು

ನಗರದ ದಿವಾನರ ಅಗ್ರಹಾರದಲ್ಲಿರುವ ಕಲಾ ಸದನದಲ್ಲಿ ಪಿಟೀಲುವಾದನ ಮತ್ತು ನೃತ್ಯ ತರಗತಿಗಳು ನಾಳೆಯಿಂದ ಪ್ರಾರಂಭವಾಗಲಿವೆ. ಸೇರಬಯಸುವವರು ಗಣೇಶ ಕಾರ್ಯಾಲಯಕ್ಕೆ [illegible] ತಿಳಿಸಬೇಕು ಮತ್ತು ವಿವರಗಳನ್ನು ಸದನದಲ್ಲಿ ಮಧ್ಯಾಹ್ನ ೩ ಗಂಟೆಯಿಂದ ೭ ರ ವರೆಗೆ ತಿಳಿಯಬಹುದು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ. ೭-೧೫ ಎ. ಎನ್. ನಾಗೇಂದ್ರ-ದೇವರ ನಾಮ. ೭-೩೦ ಗಾನ ಹಾರ. ೮-೧೫ ಉದಯ ಸಂಗೀತ. ಮಧ್ಯಾ ೧೨ ಸಂಗೀತ. ೧೨-೩೦ ವಿ. ಅಲಂಕಾರ ವೀಣೆ. ೧ ಗಾನ ಮಂಜರಿ. ೧-೪೦ ಗ್ರಾಮ ೨-೧೫ ವಿದ್ಯಾರ್ಥಿಗಳಿಗಾಗಿ. ಸಂಜೆ ೫- ವಿ. ಅನಂತರಾಮು-ವೀಣೆ. ೬-೩೦ ಜಾನಪದ ಗೀತೆ. ೭-೩೦ ಮತ್ತು ೮ ಪಿ. ಎಲ್. ಶ್ರೀನಿ ಹಿಂದಿ ಗೀತೆ ೮-೧೫ ಶ್ರೀ [illegible] ಕುಮಾರ ವ್ಯಾಸ: ರೂಪಕ. ೯-೧೫ ಭಾ ೯-೩೦ ಕಥಾ ಕಾಲಕ್ಷೇಪ.

ಶುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮ
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ
(ನಮ್ಮ ಅಂಗಡಿ ಶಾಖೆ ಮತ್ತು ಶಾಖೆ ಎ
ಕೆ ರಿ ದಿ ಲ್ಲ)
ಡಿ ಸುಬ್ಬಯ್ಯಾ ರೋಡ್, ಮೈಸೂರು

— C.T.C. PUBLICATIONS —
The best and the most useful guide for the
S. S. L. C. ENGLISH II PAP
with
- *Answers to the latest 10 qu. papers of the Public Examina*
- *Models of Essay, Epitomy and Paraphrase*
- *Guidance for the Grammar and General English portion*

Price :- Rs. 1-4-0
Agents :- M/s J. Hassanand & S
Publishers :—
CITY TUTORIAL COLLEGE, MYS

Edited, Printed and Publishe
A. R. Nagarajan at Sadhvi P
D. Subbiah Road, Mysore

THE CHAMPION METROPOLITAN COLLEGE OF COMMERCE,
"Co-operators' Home", 100' Road, Mysore
ADMISSIONS
APPLICATIONS for admission to classes in Shorthand Typewriting and Hindi ONLY, leading to November 195 Examinations are now being received in the mornings an evenings.
Sd/- M. S. PUTTANN
Vice-Principal.

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಖಚಿತೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀ [illegible] ರಸ್ತೆ,
ಬೆಂಗಳೂರು -2

ು : ೦೮] SADHVI : MONDAY 12—11—1956 ಮೈಸೂರು : ಸೋಮವಾರ ೧೨—೧೧—೧೯೫೬ [ಸಂಚಿಕೆ : ೧೦೦

ಯುದ್ಧದಲ್ಲಿ ಈಜಿಪ್ಟಿನ ನೆರವಿಗೆ ೨॥ ಲಕ್ಷ ಚೀಣಾದ ಜನರು

ರೂ ಪ್ರತಿ ದಿನವೂ ಹಣ್ಣು ನ್ನು ಸೇವಿಸುವಂತಾಗಬೇಕು

ಮಾನ ವಿನಿಯೋಗ ಸಮಾರಂಭದಲ್ಲಿ ಗವರ್ನರರ ಭಾಷಣ

ಬೆಂಗಳೂರು ೧೨

ತ್ರಿಕೆ ಮುಂತಾದ ನಿಂಬೆ ಜಾತಿಯ ಫಲಗಳ
) ಭಾರತ ಪ್ರದರ್ಶನವು ಇಲ್ಲಿ ನಡೆದು ನೆನ್ನೆ
ರ್ನರ್ ಶ್ರೀ ಜಯಚಾಮರಾಜ ಒಡೆಯರ
ಹುಮಾನ ವಿನಿಯೋಗ ಮಾಡಿದರು. ೭೫
ಮಾನಗಳನ್ನು ಹಂಚಲಾಯಿತು. ಏಳು
ಷ ಬಹುಮಾನಗಳು ಕೊಡಲ್ಪಟ್ಟವು
ವರ್ನರರು ತಮ್ಮ ಭಾಷಣದಲ್ಲಿ ನಿಂಬೆ ಜಾ
ಫಲಗಳ ಉಪಯೋಗವನ್ನು ಒತ್ತಿ ಹೇಳಿ
ಾನ್ಯ ಜನರು ಅವುಗಳನ್ನು ನಿತ್ಯವೂ ಸೇವಿ
ಅವಕಾಶವಾಗಬೇಕೆಂದು ಸೂಚಿಸಿದರು. ಈ
ಗಳಲ್ಲಿ ಪೌಷ್ಟಿಕಾಂಶವು ಹೇರಳವಾಗಿರುವ
) ಅವರು ಹೇಳಿ, ಅವುಗಳ ಅಭಿವೃದ್ಧಿಗಾಗಿ
ಯ ಯೋಜನೆಯಲ್ಲಿ ೬೦ ಲಕ್ಷ ರೂ.
ತೆಗೆದಿಡಲಾಗಿದೆಯೆಂದೂ ಹೊಸ ತೋ
ನ್ನು ಮಾಡುವವರಿಗೆ ತಲಾ ೨೦೦ ರೂ.
ಕೊಡಲಾಗುವುದೆಂದೂ, ತಿಳಿಸಿದರು.
ೃಸೂರು ಸಂಸ್ಥಾನದಲ್ಲಿ ೨೩ ಸಾವಿರ ಎಕ
ಮಾನಿನಲ್ಲಿ ಅದರ ಬೇಸಾಯವಾಗುತ್ತಿರು
ಗಿಯೂ, ಹಲವು ಕಡೆ ಚಕೋತ, ಸಾತ
ಹಣ್ಣುಗಳನ್ನೂ ಬೆಳೆಯಲಾಗುತ್ತಿರುವುದೆಂ
ಸೂಚಿಸಿದರು

ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ.
ಕೃಷ್ಣಪ್ಪನವರು ಸ್ವಾಗತ ಭಾಷಣ ಮಾಡಿ
ರಿಕದಲ್ಲಿ ಜನರು ತಲಾ ೮೮ ಪೌಂಡು,
ನ್‌ನಲ್ಲಿ ೮೩ ಮತ್ತು ಭಾರತದಲ್ಲಿ ೩೬ ಪೌಂ
ಹಣ್ಣನ್ನು ಸೇವಿಸುತ್ತಿರುವುದಾಗಿ ತಿಳಿಸಿದರು

ನಿಜಲಿಂಗಪ್ಪನವರಿಗೆ ದೇಹಾಲಸ್ಯ

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನ
ನೆನ್ನೆ ಬೆಳಿಗ್ಗೆ ಮದ್ರಾಸಿನಿಂದ ಹಿಂದಿರುಗಿದ
ಅವರು ಗಂಟಲು ವ್ಯಾಧಿಯಿಂದ ವಿಶ್ರಾಂತಿ
ಯುತ್ತಿದ್ದಾರೆ. ಗವರ್ನರರು ಕಾರಲ್ಟನ್ ಭವ
ಲ್ಲಿ ಅವರನ್ನು ಭೇಟಿ ಮಾಡಿ ೧೫ ನಿಮಿಷಗ
ಗೆ ಅವರೊಡನಿದ್ದರು.

ಸಂಸ್ಥಾನಗಳ ಗವರ್ನರರಿಗೆ ಭತ್ಯದ ನಿಗದಿ

ಭಾರತ ಸರ್ಕಾರದವರು ನಾನಾ ಪ್ರಾಂತಗಳ
ರ್ನರುಗಳ ಭತ್ಯವನ್ನು ನಿಗದಿ ಮಾಡಿದ್ದಾರೆ.
ದ ಪ್ರಕಾರ, ಸಂಪ್ಚುಯರಿ ಭತ್ಯ, ಮನರಂಜ
ಮಿಲಿಟರಿ ಕಾರ್ಯದರ್ಶಿಯ ಸಿಬ್ಬಂದಿ, ರಾಜ
ನಗಳು, ಮೋಟಾರು ವಾಹನ ಮತ್ತು ಪ್ರವಾ
ಸ್ವಗಳನ್ನು ಒಟ್ಟುಗೂಡಿಸಿ ವರ್ಷದ ಮೊತ್ತ
ಗೊತ್ತುಪಡಿಸಲಾಗಿದೆ ಅದರಂತೆ ಮೈ
ರಿನ ಗವರ್ನರರಿಗೆ ೪೦,೮೦೦ ರೂ. ಬರುವ
ಇತರ ಗವರ್ನರುಗಳಿಗೆ ಈ ರೀತಿ ಕೊಡ
ಗುವುದು:- ಆಂಧ್ರ ೪೬,೮೦೦, ಬೊಂಬಾ
೬೮,೮೦೦, ಕೇರಳ ೩೪,೩೦೦, ಮಧ್ಯ ಪ್ರ
೪೩,೫೦೦, ಮದ್ರಾಸು ೬೭,೮೦೦ ಪಂಜಾ
೩೦,೮೦೦ ಮತ್ತು ರಾಜಾಸ್ಥಾನ ೪೦,೦೦೦

ಈಜಿಪ್ಟ್ ಯುದ್ಧಕ್ಕೆ ಚೀಣದಿಂದ ೨॥ ಲಕ್ಷ ಸ್ವಯಂಸೇವಕರು

ಈಜಿಪ್ಟಿನ ಯುದ್ಧದಲ್ಲಿ ಆಕ್ರಮಣಕಾರರ ವಿರುದ್ಧವಾಗಿ ಕಾದಾಡಲು ಚೀಣದ ೨॥ ಲಕ್ಷ ಸ್ವಯಂಸೇವಕರು ಮುಂದೆಬಂದಿರುವರೆಂದು ಹೇಳಲಾಗಿದೆ ರಷ್ಯದಲ್ಲಿ ಸಹಸ್ರಾರು ಜನರು ಅದಕ್ಕೆ ಸಿದ್ಧರಾಗಿರುವರು ರಷ್ಯನರು ಸ್ವಯಂ ಸೇವಕರಾಗಿ ಹೋಗಲು ಅಲ್ಲಿನ ಸರ್ಕಾರದವರು ಅನುಮತಿಯಿತ್ತಿದ್ದಾರೆಂದು ಹೇಳಲಾಗಿದೆ, ರಷ್ಯದ ಸ್ವಲ್ಪ ಭಾಗದ ಸೈನ್ಯಗಳನ್ನು ವಜಾ ಮಾಡಲಾಗುತ್ತಿದೆಯೆಂದೂ ವರದಿಯಾಗಿದೆ,

ಸೂಯೆಜ್ ಕಾಲುವೆ ಪ್ರದೇಶದಲ್ಲಿ ವಿಶ್ವಸಂಸ್ಥೆ ಸೈನ್ಯ ಪಡೆ

ಕಾವಲು ಕಾಯಲು ಈಜಿಪ್ಟ್ ಒಪ್ಪಿಲ್ಲ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ವಿಶ್ವ ಸಂಸ್ಥೆಯ ಸೈನ್ಯವನ್ನು ಇಡಲು ಈಜಿಪ್ಟ್ ಇನ್ನೂ ಒಪ್ಪಿಲ್ಲವೆಂದು ಸೈನ್ಯ ಪಡೆಯ ಮುಖ್ಯಾಧಿಕಾರಿ ಬರ್ನ್ಸ್‌ರವರು ತಿಳಿಸುತ್ತಾರೆ. ಸೀನಾಯ್ ಪರ್ಯಾಯ ದ್ವೀಪದ ಮೂಲಕ ಕಾಲುವೆಗೆ ವಿಶ್ವ ಸಂಸ್ಥೆಯ ಮಿಲಿಟರಿ ವೀಕ್ಷಕರನ್ನು ಕಳುಹಲು ಇಸ್ರೇಲು ಒಪ್ಪಿಲ್ಲವೆಂದೂ ಅವರು ಹೇಳುತ್ತಾರೆ. ಇತ್ತೀಚೆಗೆ ಈಜಿಪ್ಟಿನ ಮೇಲೆ ಧಾಳಿ ಮಾಡಿ, ಇಸ್ರೇಲು ಈ ಪರ್ಯಾಯ ದ್ವೀಪವನ್ನು ವಶಪಡಿಸಿಕೊಂಡಿದೆ

ಇಸ್ಮೇಲಿಯದಲ್ಲಿ ವಿಶ್ವಸಂಸ್ಥೆ ಸೈನ್ಯವನ್ನು ಮೊದಲು ಇಳಿಸಲಾಗುವುದೆಂದೂ, ಅನಂತರ ಕಾಲುವೆಯ ಪಶ್ಚಿಮ ಭಾಗದಲ್ಲಿ ನಿಲ್ಲಿಸಲಾಗುವುದೆಂದೂ ಬರ್ನ್ಸ್‌ರವರು ಸೂಚಿಸಿದ್ದಾರೆ.

ಭಾರತಕ್ಕೆಲ್ಲಾ ಒಂದು ಹೈಯರ್ ಸೆಕೆಂಡರಿ ಪರೀಕ್ಷೆ

ಸೆಕೆಂಡರಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟಂತೆ ಭಾರತ ಸರ್ಕಾರದವರು ಸಮಿತಿಯನ್ನು ಪುನರ್ರಚಿಸುತ್ತಾರೆ ಪರೀಕ್ಷಾ ಪದ್ಧತಿಯಲ್ಲಿ ಸುಧಾರಣೆ ಮತ್ತು ವಿದ್ಯಾಭ್ಯಾಸದಲ್ಲಿ ಉನ್ನತ ಮಟ್ಟದ ಸಾಧನೆಗಾಗಿ ಉದ್ದೇಶಿಸಲಾಗಿದೆ. ಸಮಿತಿಯವರು ಇಡೀ ದೇಶಕ್ಕೆ ಅನ್ವಯಿಸುವಂತೆ ಹೈಯರ್ ಸೆಕೆಂಡರಿ ಶಾಲಾ ಪರೀಕ್ಷೆಯನ್ನು ನಡೆಸಲಿರುವರು. ಭಾರತದ ಯಾವ ಸಂಸ್ಥಾನದವರಾದರೂ ಅದರಲ್ಲಿ ಕೂಡಬಹುದು ಸಮಿತಿಯ ಕೇಂದ್ರವು ಅಜ್ಮೀರಿನಲ್ಲಿರುವುದು.

ಜಾಡಮಾಲಿಗಳಿಂದ ಸಂಬಳದ ನಿರಾಕರಣೆ

ನಂಜನಗೂಡಿನ ಪೌರಸಭಾ ಜಾಡಮಾಲಿಗಳು ಕಳೆದ ತಿಂಗಳ ಸಂಬಳವನ್ನು ತೆಗೆದುಕೊಳ್ಳಲು ನಿರಾಕರಿಸಿದ್ದಾರೆ. ಸ್ಟಾಫ್ ಸೆಲೆಕ್ಟೆಡ್ ನೌಕರರಿಗೆ ಸರ್ಕಾರದವರು ಕೊಟ್ಟಿರುವಂತೆ ತಮಗೂ ಭತ್ಯವನ್ನು ಹೆಚ್ಚಿಸಬೇಕೆಂದು ಅವರು ಒತ್ತಾಯ ಪಡಿಸಿದ್ದಾರೆ. ಪೌರಸಭೆಯ ಅಧಿವೇಶನವು ಕಳೆದ ಶುಕ್ರವಾರ ನಡೆದು, ಜಾಡಮಾಲಿಗಳಿಗೆ ಹೆಚ್ಚು ಭತ್ಯವನ್ನು ಕೊಡುವುದಕ್ಕೆ ಸರ್ಕಾರದವರ ಮಂಜೂರಾತಿಯನ್ನು ಕೋರಲಾಗಿದೆ

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರದ ಬಗ್ಗೆ ನಿಯೋಗ

ಮೈಸೂರು ೧೨

ಇಲ್ಲಿನ ನಾಗರಿಕರ ಸಮಿತಿ ಸಭೆಯು ನೆನ್ನೆ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆದು, ನಗರದ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳು ನಡೆಸುತ್ತಿರುವ ಮುಷ್ಕರದ ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಶ್ರೀಗಳಾದ ಎ. ಕೃಷ್ಣಮೂರ್ತಿರಾವ್, ಎ ರಾಮಣ್ಣ ಮತ್ತು ಎಸ್ ಭೈರಪ್ಪನವರುಳ್ಳ ಸಮಿತಿಯು ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರನ್ನು ಭೇಟಿ ಮಾಡುವಂತೆ ಗೊತ್ತುಮಾಡಲಾಯಿತು.

ಸಂಗೀತ ಸ್ಪರ್ಧೆಗಳಲ್ಲಿ ಗೆದ್ದವರು

ನಗರದ ಪಡುವಾರಂ ಕೃಷ್ಣಪ್ಪನವರ ಶ್ರೀ ಪ್ರಸನ್ನ ಸೀತಾರಾಮ ಮಂದಿರದ ಆಶ್ರಯದಲ್ಲಿ ಏರ್ಪಡಿಸಲಾಗಿದ್ದ ಸಂಗೀತ ಸ್ಪರ್ಧೆಗಳಲ್ಲಿ ಕೆಳಗೆ ಕಂಡವರು ಜಯಗಳಿಸಿದ್ದಾರೆ:— ಜೂನಿಯರ್ ವಿಭಾಗ: ಶ್ರೀಮತಿಗಳಾದ ಆರ್ ವಸಂತಕುಮಾರಿ, ಎಸ್ ಚಂಪಕ, ಆರ್. ಲಲಿತ, ಎಸ್. ರಮಾ, ಶ್ರೀ ಎಚ್ ಸಂಪತ್ಕುಮಾರ್ ಮತ್ತು ಶ್ರೀಮತಿ ಹೆಚ್. ಎ. ಇಂದಿರಾ ಸೀನಿಯರ್ ವಿಭಾಗ: ಶ್ರೀಮತಿಗಳಾದ ಎಂ ಕೆ ಸರಸ್ವತಿ, ಕೆ. ಆರ್. ಶಾರದಾ, ಎಂ ಆರ್. ಸ್ವರ್ಣಕುಮಾರಿ ಮತ್ತು ಹೆಚ್. ಉಮಾದೇವಿ. ವಿದ್ವತ್ ವಿಭಾಗ: ಶ್ರೀಮತಿಗಳಾದ ಆರ್. ಇಂದಿರ ಮತ್ತು ಎಂ ಎ. ಅನಕ. ದೇವರನಾಮ ಸ್ಪರ್ಧೆ: ಶ್ರೀಮತಿಯರಾದ ಆರ್. ಇಂದಿರಾ, ಹೆಚ್. ಉಮಾದೇವಿ ಮತ್ತು ಎಂ. ಕೆ ಸರಸ್ವತಿ. ದೇವರ ನಾಮದ ಸ್ಪರ್ಧೆಯ ಬಹುಮಾನವನ್ನು ಶ್ರೀ ಕೆ. ಗೋಪಾಲಾಚಾರ್ಯರು ತಮ್ಮ ತಂದೆ ದಿವಂಗತ ಗೋವಿಂದ ದಾಸರ ಹೆಸರಿನಲ್ಲಿ ಕೊಟ್ಟಿರುತ್ತಾರೆ.

ಸ್ಪರ್ಧೆಗಳಲ್ಲಿ ಉತ್ತೀರ್ಣರಾದವರಿಗೆ ಬಹುಮಾನವೀಯುವ ಸಮಾರಂಭವನ್ನು ನಾಳೆ ಸಂಜೆ ೪॥ ಗಂಟೆಗೆ ಮಂದಿರದಲ್ಲಿ ಏರ್ಪಡಿಸಲಾಗಿದೆ. ಸಂಗೀತ ರತ್ನ ಟಿ ಚೌಡಯ್ಯನವರು ಅಧ್ಯಕ್ಷತೆ ವಹಿಸುವರು. ಜಯಶೀಲರಾದವರು ಸಮಾರಂಭಕ್ಕೆ ಬಂದು ಬಹುಮಾನಗಳನ್ನು ಪಡೆಯಬೇಕೆಂದು ಕೋರಲಾಗಿದೆ.

ಗೋಹತ್ಯಾ ನಿರೋಧ ಶಾಸನಕ್ಕಾಗಿ ಒತ್ತಾಯ

ಭಾರತದ ಗೋಹತ್ಯಾ ನಿರೋಧ ಸಮಿತಿಯು ನಗರ ಶಾಖೆಯ ಆಶ್ರಯದಲ್ಲಿ ಮೊನ್ನೆ ಗೋಪಾಷ್ಟಮಿ ದಿನಾಚರಣೆಯ ಅಂಗವಾಗಿ ವಿವಿಧ ಮೊಹಲ್ಲಾಗಳಲ್ಲಿ ಸಭೆಗಳನ್ನು ನಡೆಸಲಾಯಿತು. ಗೋವಿನ ಬಗ್ಗೆ ಭಾರತ ಸರ್ಕಾರದ ನೀತಿಯನ್ನು ಕಟುವಾಗಿ ಟೀಕಿಸಲಾಯಿತು ಸಮಗ್ರ ಭಾರತದಲ್ಲಿ ಈಗಲೇ ಗೋಹತ್ಯಾ ನಿರೋಧಕ್ಕೆ ಕಾನೂನು ಮಾಡಬೇಕೆಂದೂ, ಪ್ರತಿ ಗ್ರಾಮದಲ್ಲೂ ಗೋವುಗಳ ಮೇವಿಗಾಗಿ ಸಾಕಷ್ಟು ಗೋಮಾಳಗಳನ್ನು ಬಿಡಬೇಕೆಂದೂ, ಗೋ ವಂಶದ ಅಭಿವೃದ್ಧಿಗಾಗಿ ಹೋರಿಗಳ ಸಂರಕ್ಷಣೆಗೆ ಸಮರ್ಪಕ ರೀತಿಯಲ್ಲಿ ಗಮನವಿತ್ತು, ಗೋ ಶಾಲೆಗಳನ್ನು ಹೆಚ್ಚಾಗಿ ಏರ್ಪಡಿಸಬೇಕೆಂದೂ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು.

ಹೆಚ್ಚು ಉತ್ಪತ್ತಿ ಮತ್ತು ಸಂಯಮದಿಂದ ಆರ್ಥಿಕ ಪ್ರಗತಿ ಸಾಧನೆ

ಎ. ಐ. ಸಿ. ಸಿ. ಅಧಿವೇಶನದ ಕರೆ

ಜನ ಸಾಮಾನ್ಯರು ತಮ್ಮ ಸೊಂಟ ಕಟ್ಟಿ ಹೆಚ್ಚು ಉತ್ಪಾದನೆ ಮಾಡಬೇಕೆಂದೂ, ದ್ವಿತೀಯ ಪಂಚವಾರ್ಷಿಕ ಯೋಜನೆಯನ್ನು ಸಾಧಿಸಲು ಹೆಚ್ಚು ಸಂಯಮದಿಂದ ವರ್ತಿಸಬೇಕೆಂದೂ ಕಲ್ಕತ್ತದಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸೂಚಿಸಿದೆ. ಕಾಂಗ್ರೆಸ್ಸಿನ ಆರ್ಥಿಕ ಕಾರ್ಯಕ್ರಮದ ಬಗ್ಗೆ ದೀರ್ಘವಾದ ಹೇಳಿಕೆಯೊಂದನ್ನಿತ್ತು, ಈಗಿನ ಅಂತರ ರಾಷ್ಟ್ರೀಯ ಪರಿಸ್ಥಿತಿಯು ಕಳವಳಕರವಾಗಿರುವುದೆಂದೂ, ಅದರಿಂದ ಭಾರತೀಯರ ಜೀವನದ ಮೇಲೆ ಏನೂ ತೊಂದರೆಯಾಗದಂತೆ ಭಾರತೀಯರು ಮಾಡಿಕೊಳ್ಳಬೇಕಾಗಿದೆಯೆಂದೂ ತಿಳಿಸಲಾಗಿದೆ. ಅನಾವಶ್ಯಕವಾಗಿ ಪದಾರ್ಥಗಳನ್ನು ಹಾಳುಮಾಡಬಾರದೆಂದೂ, ಹಣದ ಉಬ್ಬರಕ್ಕೆ ಅವಕಾಶವೀಯಬಾರದೆಂದೂ ಹೇಳಿಕೆಯು ಸೂಚಿಸಿದೆ.

ಅಲೆಕ್ಸಾಂಡ್ರಿಯದಲ್ಲಿ ವಿಮಾನ ಧಾಳಿ ಎಚ್ಚರಿಕೆ

ಈಜಿಪ್ಟಿನ ಅಲೆಕ್ಸಾಂಡ್ರಿಯಾ ರೇವಿನಲ್ಲಿ ಸೀಜ್‌ಫೈರ್ ಆದ ಮೇಲೆ ನೆನ್ನೆ ಇದೇ ಮೊದಲಾಗಿ ವಿಮಾನ ಧಾಳಿ ಎಚ್ಚರಿಕೆ ಧ್ವನಿ ಮಾಡಲಾಯಿತೆಂದೂ, ತೀರದ ವಿಮಾನ ವಿಧ್ವಂಸಕ ಫಿರಂಗಿಗಳು ಗುಂಡನ್ನು ಹಾರಿಸಿದುದಾಗಿಯೂ ವರದಿಯಾಗಿದೆ.

೧೫ನೇ ತಾ॥ ವಿಶ್ವೇಶ್ವರಯ್ಯನವರ ಭಾವಚಿತ್ರ ಅನಾವರಣ

ನಗರದ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ಇಂದು ಸಂಜೆ ಭಾರತ ರತ್ನ ಎಂ. ವಿಶ್ವೇಶ್ವರಯ್ಯನವರ ಭಾವಚಿತ್ರದ ಅನಾವರಣವನ್ನು ನಡೆಸಬೇಕಾಗಿದ್ದುದು ಇದೇ ೧೫ನೇ ತಾರೀಖಿಗೆ ಮುಂದುವರಿಸಲ್ಪಟ್ಟಿದೆ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಭಾವಚಿತ್ರದ ಅನಾವರಣ ಮಾಡುವರು

ಸಂಗೀತ ಕಛೇರಿ

ನೂರಡಿ ರಸ್ತೆ ಚೌಕದ ಬಳಿ ಇರುವ ಮುಂಟೇಶ್ವರಸ್ವಾಮಿ ದೇವಸ್ಥಾನದಲ್ಲಿ ಈ ಸಂಜೆ ೭ ಗಂಟೆಗೆ ರೇಡಿಯೊ ಸಂಗೀತಗಾರರಾದ ಕುಮಾರಿ ಜಾಹ್ನವಿಯವರ ಗಾಯನವು ಸೂಕ್ತ ಪಕ್ಕ ವಾದ್ಯಗಳೊಡನೆ ನಡೆಯುವುದು. ಅರುಣ ಪತ್ರಿಕಾ ಸಂಪಾದಕರಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ.

ಭಾರತದ ಪ್ಯಾಥಾಲಜಿಸ್ಟರ ವಾರ್ಷಿಕ ಸಭೆ

ಭಾರತದ ಪ್ಯಾಥಾಲಜಿಸ್ಟರ ಸಂಘದ ೭ನೇ ವಾರ್ಷಿಕ ಸಭೆಯ ಆರಂಭೋತ್ಸವವನ್ನು ನಾಳೆ ಬೆಳಿಗ್ಗೆ ೧೦ ಗಂಟೆಗೆ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ರಾಜಧಾನಿಯ [illegible] ಭವನದಲ್ಲಿ ನೆರವೇರಿಸುವರು. ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಭಾಷಣ ಮಾಡುವರು. ಪ್ಯಾಥಾಲಜಿಸ್ಟರ ಸಂಘದ ಅಧ್ಯಕ್ಷ ಶ್ರೀ ಸಿ. ಜಿ. ಪಂಡಿತರು ಅಧ್ಯಕ್ಷತೆ ವಹಿಸುವರು

ಕರ್ನಾಟಕ ಸಂಗೀತದ ಸ್ವಚ್ಛತೆ ಉಳಿಯಬೇಕು

ಸಂಗೀತ ರತ್ನ ಟಿ. ಚೌಡಯ್ಯನವರ ಭಾಷಣ

ಮೈಸೂರು ೧೧

ನವ ಕರ್ನಾಟಕದ ಉದಯದ ಸಂತೋಷಾರ್ಥವಾಗಿ ನಗರದ ಬಿಡಾರಂ ಕೃಷ್ಣಪ್ಪನವರ ಪ್ರಸನ್ನ ಶ್ರೀ ಸೀತಾರಾಮ ಮಂದಿರದಲ್ಲಿ ಮೊನ್ನೆಯಿಂದ ಏರ್ಪಟ್ಟಿರುವ ಸಂಗೀತ ಕಛೇರಿಗಳ ಆರಂಭ ಸಮಯದಲ್ಲಿ ಮಂದಿರದ ಅಧ್ಯಕ್ಷರಾದ ಶ್ರೀ ಕೆ. ಪುಟ್ಟೋರಾಯರು ಮತ್ತು ಕಾರ್ಯದರ್ಶಿ ಸಂಗೀತ ರತ್ನ ಟಿ. ಚೌಡಯ್ಯನವರು ಭಾಷಣ ಮಾಡಿದರು.

ಅಧ್ಯಕ್ಷರು ಮಾತನಾಡಿ ಮಂದಿರದ ಅಭಿವೃದ್ಧಿಗೆ ಕಾರಣರಾದವರನ್ನು ಅಭಿನಂದಿಸಿದರು ಗಾನ ವಿಶಾರದ ಬಿಡಾರಂ ಕೃಷ್ಣಪ್ಪನವರ ಸೇವಾ ಫಲವಾಗಿ ಮಂದಿರವು ಕಲಾಕ್ಷೇತ್ರವಾಗಿ ಪರಿಣಮಿಸಿದೆಯೆಂದೂ, ಅವರ ಸಮಸ್ತ ಕಾರ್ಯಕ್ರಮಗಳಲ್ಲೂ ಕಲಾ ಪ್ರೇಮಿಗಳು ನೆರವಾಗಬೇಕೆಂದೂ ಪ್ರಾರ್ಥಿಸಿದರು

ಶ್ರೀ ಟಿ. ಚೌಡಯ್ಯನವರು ತಮ್ಮ ಭಾಷಣದಲ್ಲಿ ಶ್ರೀ ಬಿಡಾರಂ ಕೃಷ್ಣಪ್ಪನವರ ಗುಣಾತಿಶಯಗಳನ್ನು ಹೊಗಳಿ, ಎಂತಹ ನಾಸ್ತಿಕನಿಗಾದರೂ ದೈವ ಭಕ್ತಿಯು ಉಂಟಾಗುವಂತೆ ಅವರು ಅತಿ ರಮ್ಯವಾದ ಮಂದಿರವನ್ನು ಕಟ್ಟಿಸಿ ಕರ್ನಾಟಕಕ್ಕೂ, ಭಾರತಕ್ಕೂ ಆದರ್ಶವನ್ನಾಗಿ ಮಾಡಿರುವರೆಂದು ತಿಳಿಸಿದರು

ಉತ್ತರ ಕರ್ನಾಟಕದವರು ಉತ್ತರಾದಿ ಸಂಗೀತವನ್ನೂ, ದಕ್ಷಿಣ ಕನ್ನಡದವರು ಮಲಬಾರು ಸಂಗೀತವನ್ನೂ ಮಿಶ್ರಣ ಮಾಡಿ ಹಾಡುವರೇನೊ, ಈ ಸಂಗೀತಗಳಿಂದ ಕರ್ನಾಟಕ ಸಂಗೀತವು ಮಲಿನವಾಗದಂತೆ ನೋಡಿ ಕೊಳ್ಳುವುದು ಕರ್ನಾಟಕ ಸಂಗೀತ ವಿದ್ವಾಂಸರ ಕರ್ತವ್ಯವೆಂದು ಹೇಳಿದರು

ಮಳೆ ಅನಾಹುತ ಪ್ರದೇಶದಲ್ಲಿ ಸಚಿವ ವೀರಣ್ಣಗೌಡರ ಪ್ರವಾಸ

ಪುನರ್ವಸತಿ ಮಂತ್ರಿ ಶ್ರೀ ಹೆಚ್ ಕೆ ವೀರಣ್ಣಗೌಡರು ಇತ್ತೀಚಿನ ಮಳೆಯಿಂದ ಬೆಳೆ, ಜಮೀನು ಮತ್ತು ಕೆರೆಗಳಿಗೆ ಆಗಿರುವ ನಷ್ಟವನ್ನು ಪರಿಶೀಲಿಸಲು ತುಮಕೂರಿನಲ್ಲಿ ಪ್ರವಾಸ ಹೊರಟಿದ್ದಾರೆ ಅವರು ತಾಲೂಕಿನ ಕೆರೆಗಳನ್ನು ಪರಿಶೀಲಿಸುವರು ಕೋಲಾರದಲ್ಲಿ ೮೦ ಕೆರೆಗಳು ಒಡೆದು, ಅದರ ರಿಪೇರಿ ಮತ್ತು ಜಮೀನುಗಳ ಪುನರ್ವಸತಿಗೆ ಲಕ್ಷಾಂತರ ರೂಪಾಯಿ ಬೇಕಾಗುತ್ತದೆಂದು ಅವರು ತಿಳಿಸಿದ್ದಾರೆ.

ಹಂಗೇರಿಯಲ್ಲಿ ಯುರೇನಿಯಂ ಗಣಿಗಳ ಸಿಡಿತ

ದಕ್ಷಿಣ ಹಂಗೇರಿಯ ಮೆಕ್‌ಸೆಕ್ ಎಂಬಲ್ಲಿ ದಂಗೆಕೋರರು ಯುರೇನಿಯಂ ಗಣಿಗಳು ರಷ್ಯದವರ ವಶಕ್ಕೆ ಸಿಗದಂತೆ ಮಾಡಲು ಅವನ್ನು ಆಸ್ಫೋಟಿಸಿದ್ದಾರೆಂದು ವರದಿಯಾಗಿದೆ ಅನೇಕ ವರ್ಷಕಾಲವಾದರೂ ಅಲ್ಲಿ ಯುರೇನಿಯಂ ಧಾತುವು ದೊರೆಯುವ ಸಂಭವವೇ ಇಲ್ಲದಂತೆ ದಂಗೆಕೋರರು ಮಾಡಿರುವರೆಂದು ಹೇಳಲಾಗಿದೆ. ಈ ಗಣಿಗಳು ಯೂರೋಪಿನಲ್ಲೇ ಅತ್ಯಂತ ಭಾರಿಯವೆಂದು ಹೇಳಲಾಗಿದೆ. ಅಲ್ಲದೆ ಡಾನ್ಯೂಬ್ ನದಿಯ ಸೇತುವೆಯನ್ನೂ ಅವರು ನಾಶಪಡಿಸಿದ್ದಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ ೭-೧೫ ಜೆ. ಸಿ. ಅಸ್ನಟೂರ ಮತ್ತು ಜೆ. ಸಿ. ಸರೋಜಮ್ಮ-ದೇವರ ನಾಮ ೭-೩೦ ಗಾನ ವಿಹಾರ. ೮-೧೫ ರಿಕಾರ್ಡ್. ಮಧ್ಯಾಹ್ನ ೧೨ ಟಿ ಲಕ್ಷ್ಮೀನಾರಾಯಣ ಶಾಸ್ತ್ರಿ-ಸಂಗೀತ. ೧೨-೩೦ ರಿಕಾರ್ಡ್. ೧-೨ ವನಿತಾ ವಿಹಾರ ೧-೩೦ ವೀಣೆ ೨ ೧೫ ಪ್ರಾಥಮಿಕ ಶಾಲೆಗಳಿಗಾಗಿ. ಸಂಜೆ ೫-೩೦ ಮತ್ತು ೯ ೧೫ ಚಿಟ್ಟಿ ಕೃಷ್ಣ ಅಯ್ಯಂಗಾರ್-ಸಂಗೀತ ೬-೩೦ ರಿಕಾರ್ಡ್ ೭ ೩೦ ಕನ್ನಡ ಭಾಷಣ. ೮ ಕವಿ ಕಾವ್ಯ ಪರಿಚಯ ೮ ೩೦, ೧೦ ಮತ್ತು ೧೦-೫ ವಾರ್ತೆಗಳು.

ಮುಷ್ಕರ ಹೂಡದಂತೆ ಕಾರ್ಮಿಕರಿಗೆ ನೆಹರೂರವರ ಮನವಿ

ಪ್ರಧಾನಿ ನೆಹರೂರವರು ಮೊನ್ನೆ ಕಲ್ಕತ್ತದಲ್ಲಿ ಪ್ರಚಂಡ ಸಭೆಯೊಂದನ್ನುದ್ದೇಶಿಸಿ ಭಾಷಣ ಮಾಡುತ್ತಾ, ಭಾರತದಲ್ಲಿ ೧೦ ವರ್ಷಗಳ ಶಾಂತಿ ಮತ್ತು ನೆಮ್ಮದಿಯಿದ್ದರೆ ದೇಶವು ಭಾರಿ ಕೈಗಾರಿಕೆಗಳಲ್ಲೂ ಸಹ ಸ್ವಾವಲಂಬಿಯಾಗುವುದೆಂದು ಭರವಸೆಯಿತ್ತರು. ಅನಂತರ ಅಮೇರಿಕ ಅಥವಾ ರಷ್ಯಾದ ಕೈಗಾರಿಕಾ ಪ್ರಗತಿ ಸಾಧನೆ ಮಾಡಿರುವ ರಾಷ್ಟ್ರಗಳನ್ನೂ ಭಾರಿ ಕೈಗಾರಿಕಾ ಉಪಕರಣಗಳಿಗಾಗಿ ಭಾರತವು ಬೇಡಬೇಕಾಗಿಲ್ಲವೆಂದೂ ಈ ಗುರಿಯನ್ನು ವೈಷಮ್ಯವಿಲ್ಲದೆ ಅಥವಾ ಸಮಾಜ ಘಾತಕವಾಗದಂತೆ ಸಾಧಿಸಬೇಕೆಂದೂ ಅವರು ಸೂಚಿಸಿದರು.

ಗಿರಣಿಗಳು ಮತ್ತು ಕಾರ್ಖಾನೆಗಳಲ್ಲಿರುವ ಕಾರ್ಮಿಕರು ಮುಷ್ಕರ ಹೂಡಿ ದೇಶದ ಉತ್ಪತ್ತಿಯನ್ನು ಕಡಿಮೆ ಮಾಡಬಾರದೆಂದೂ, ಅವರು ತಮ್ಮ ಕುಂದುಕೊರತೆಗಳನ್ನು ಆಡಳಿತದವರೊಡನೆ ಶಾಂತ ರೀತಿಯಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕೆಂದೂ ಸೂಚಿಸಿದರು ಅವಶ್ಯಕ ಪದಾರ್ಥಗಳ ಬೆಲೆಗಳನ್ನು ಕೃತಕವಾಗಿ ಹೆಚ್ಚಿಸಿದ ವರ್ತಕರಂತೆ ಈ ಸಮಾಜಘಾತಕ ಕೆಲಸದಲ್ಲಿ ಉದ್ಯುಕ್ತರಾಗುವವರ ಬಗ್ಗೆ ತೀವ್ರ ಕ್ರಮ ಕೈಗೊಳ್ಳಲಾಗುವುದೆಂದೂ ಅವರು ಎಚ್ಚರಿಸಿದರು

ಬ್ರಿಟನ್ನಿನಲ್ಲಿ ೫ ವಿಧದ ತಕ್ಸೀರುಗಳಿಗೆ ಗಲ್ಲು ಶಿಕ್ಷೆ

ಐದು ಬಗೆಯ ಕೊಲೆಯನ್ನು ಮಾಡುವವರಿಗೆ ಮಾತ್ರ ಮರಣದಂಡನೆಯನ್ನು ವಿಧಿಸಲು ಬ್ರಿಟಿಷ್ ಸರಕಾರದವರು ಹೊಸ ಯೋಜನೆಯೊಂದನ್ನು ಪ್ರಕಟಿಸಿದ್ದಾರೆ ಅದರ ಪ್ರಕಾರ ಕಳ್ಳತನ, ದಸ್ತಗಿರಿಯನ್ನು ತಡೆಯಲು ಅಥವಾ ತಪ್ಪಿಸುವ ಯತ್ನಕ್ಕಾಗಿ ಕೊಲೆ ಮಾಡುವುದು, ಪೋಲೀಸು ಅಥವಾ ಬಂದಿಖಾನೆಗಳ ಅಧಿಕಾರಿಗಳ ಕೊಲೆ, ಗುಂಡು ಹಾರಿಸಿ ಅಥವಾ ಆಸ್ಫೋಟಕ ವಸ್ತುಗಳನ್ನು ಎಸೆದು ಕೊಲೆ ಮಾಡಿದವರಿಗೆ ಮರಣದಂಡನೆ ವಿಧಿಸಲು ಅಲ್ಲಿ ಕಾನೂನನ್ನು ತರಲಾಗುವುದು ಇಲ್ಲಿನ ಕಾಮನ್ಸ್ ಸಭೆಯು ಮರಣದಂಡನೆಯನ್ನು ರದ್ದುಗೊಳಿಸಬೇಕೆಂದು ಅಭಿಪ್ರಾಯ ಸೂಚಿಸಿದೆ

ಬುಡಾಪೆಸ್ಟಿನಲ್ಲಿ ಶಾಂತಿ

ಹಂಗೆರಿಯ ರಾಜಧಾನಿ ಬುಡಾಪೆಸ್ಟಿನಲ್ಲಿ ಶಾಂತಿಯು ನೆಲಸಿರುವುದಾಗಿ ಮಾಸ್ಕೋ ರೇಡಿಯೋ ತಿಳಿಸಿದೆ ಪ್ರತಿಕ್ರಾಂತಿ ಪಡೆಗಳಿಗೆ ಸೇರಿದ ಪುಂಡರು ರಷ್ಯದ ಸ್ವತ್ತುಗಳನ್ನು ಲೂಟಿಮಾಡಿರುವುದಲ್ಲದೆ, ನಾಶಪಡಿಸಿರುವುದಾಗಿ ಹೇಳಲಾಗಿದೆ ವಿದ್ಯುಚ್ಛಕ್ತಿ ಗ್ಯಾಸ್ ಮತ್ತು ನೀರಿನ ಸರಬರಾಯಿಗಳು ಊರಿನ ನಾನಾ ಭಾಗಗಳಲ್ಲಿ ನಷ್ಟಪಡಿಸಲ್ಪಟ್ಟಿವೆ

ಈಜಿಪ್ಟಿನ ಆಕ್ರಮಣಕಾರರಿಗೆ ಶಿಕ್ಷೆ ಆಗಬೇಕು

ರಷ್ಯಾ ನಾಯಕ ಕ್ರುಶ್ಚೇವರ ಟೀಕೆ

ಈಜಿಪ್ಟಿನ ಮೇಲೆ ಆಕ್ರಮಣ ನಡೆಸಿದ ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲುಗಳ ಮೇಲೆ ತೀವ್ರ ಶಿಕ್ಷೆ ವಿಧಿಸಬೇಕೆಂದು ರಷ್ಯದ ಕಮ್ಯೂನಿಸ್ಟ್ ನಾಯಕ ಕ್ರುಶ್ಚೇವರು ತಿಳಿಸಿದ್ದಾರೆ. ಈಜಿಪ್ಟಿನಿಂದ ವಿದೇಶೀಯರು ಕಾಲ್ತೆಗೆಯುವವರೆಗೂ ರಷ್ಯವು ಈಜಿಪ್ಟಿಗೆ ಬೆಂಬಲವೀಯುವುದೆಂದು ಅವರು ಹೇಳಿದ್ದಾರೆ. ಹಂಗೆರಿ ವಿಚಾರವನ್ನು ಪ್ರಸ್ತಾಪಿಸಿ, ಅಲ್ಲಿ ಜನತೆಯ ಪ್ರಜಾಪ್ರಭುತ್ವವನ್ನು ಬುಡಮೇಲು ಮಾಡುವ ಉದ್ದೇಶದಿಂದ ಯುವಜನರನ್ನು ದಂಗೆಗೆಳೆಸುವ ಪ್ರಯತ್ನ ನಡೆದಿತ್ತೆಂದೂ, ಯುವ ಜನರಿಗೆ ಸರಿಯಾದ ಶಿಕ್ಷಣವೀಯಬೇಕಾಗಿದೆಯೆಂದೂ ಅವರು ಸೂಚಿಸಿದ್ದಾರೆ.

ಟೈಪ್‌ರೈಟರ್ ಬೇಕಾಗಿದೆ

ಪೋರ್ಟೆಬಲ್ ಟೈಪ್‌ರೈಟರ್ ಬೇಕಾಗಿದೆ. ಕೆಳಗೆ ಕಂಡ ವಿಳಾಸಕ್ಕೆ ಪತ್ರ ವ್ಯವಹಾರ ನಡೆಸುವುದು.

"X" C/o ಸಾಧ್ವಿ,
ಮೈಸೂರು

ವಿಶಾಲ ಮೈಸೂರು ದಿನಾಚರಣೆ

ಮೈಸೂರು ೧೧

ನಗರದಲ್ಲಿರುವ ಕಾಲೇಜುಗಳ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನೆನ್ನೆ ಬೆಳಿಗ್ಗೆ ವಿಶಾಲ ಮೈಸೂರಿನ ದಿನಾಚರಣೆಯು ದಾಸಪ್ರಕಾಶ ಭವನದಲ್ಲಿ ನೆರವೇರಿಸಲ್ಪಟ್ಟಿತು ಸಂಘದ ಅಧ್ಯಕ್ಷರಾದ ಶ್ರೀ [illegible] ಯವರು ಅಧ್ಯಕ್ಷತೆ ವಹಿಸಿದ್ದರು

ಉಪಾಹಾರಾನಂತರ, ಶ್ರೀ ಎಂ. ರಾಜಶೇಖರಮೂರ್ತಿಯವರಿಂದ ಪ್ರಾರ್ಥನೆ ನಡೆಯಿತು. ಕಾರ್ಯದರ್ಶಿ ಶ್ರೀ ಎಸ್. ಕೆಂಡಗಣ್ಣಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಸಿದ್ಧರಾಜೇ ಅರಸುರವರು ಕನ್ನಡ ಗೀತೆಗಳನ್ನು ಸುಶ್ರಾವ್ಯವಾಗಿ ಹಾಡಿದರು ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಉಪನ್ಯಾಸ ಮಾಡಿ, ಕರ್ನಾಟಕದ ಹಿರಿಮೆಯನ್ನು ವಿವರಿಸಿದರು

ಶ್ರೀಗಳಾದ ಜಗರಂ ರಂಗಯ್ಯ ಮತ್ತು ಕೆ ಆರ್ ರಾಮಮೂರ್ತಿಯವರು ಭಾಷಣ ಮಾಡಿ, ವಿಶಾಲ ಮೈಸೂರು ಆದ ಬಗ್ಗೆ ಕನ್ನಡಿಗರೆಲ್ಲರಿಗೂ ಸಂತೋಷವಾಗಿದೆಯೆಂದು ತಿಳಿಸಿದರು.

ಅಧ್ಯಕ್ಷರ ಭಾಷಣ ಮತ್ತು ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಸರ್ಕಾರಿ ನೌಕರರು ಅನುಗ್ರಹ ಭಾವನೆ ಬಿಡಬೇಕು

ಮುಖ್ಯ ಮಂತ್ರಿ ನಿಜಲಿಂಗಪ್ಪನವರ ಕರೆ

ಶಿವಮೊಗ್ಗದಲ್ಲಿ ನಡೆದ ಅಧಿಕಾರಿಗಳ ಸಭೆಯಲ್ಲಿ ಕಳೆದ ೭ ನೇ ತಾರೀಕು ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಭಾಷಣ ಮಾಡಿ, ಜಿಲ್ಲೆಯ ಅಧಿಕಾರಿಗಳು ತಮ್ಮ ಕರ್ತವ್ಯವನ್ನು ಭಯ ಅಥವ ಅನುಗ್ರಹ ಭಾವನೆಯನ್ನು ಬಿಟ್ಟು ನಡೆಸಬೇಕೆಂದು ತಿಳಿಸಿದರು ಅವರ ಬಗ್ಗೆ ಸರ್ಕಾರವು ಈ ವರ್ತನೆಯನ್ನು ನಿರೀಕ್ಷಿಸುವುದೆಂದೂ, ಹಾಗೆ ಮಾಡದವರು ಸಂಸ್ಥಾನದ ಸೇವೆಗೆ ಅರ್ಹರಲ್ಲವೆಂದೂ ಅವರು ಅಭಿಪ್ರಾಯಪಟ್ಟರು

ಹಂಗೆರಿಯಿಂದ ರಷ್ಯಾ ಸೈನ್ಯದ ವಾಪಸಿಗಾಗಿ ಕರೆ

ಹಂಗೆರಿಯಿಂದ ರಷ್ಯವು ತನ್ನ ಸೈನ್ಯಗಳನ್ನು ವಾಪಸು ಕರೆಸಿಕೊಳ್ಳಬೇಕೆಂದೂ, ಅಲ್ಲಿ ವಿಶ್ವಸಂಸ್ಥೆಯ ಆಶ್ರಯದಲ್ಲಿ ಸ್ವತಂತ್ರ ಚುನಾವಣೆಗಳಾಗಬೇಕೆಂದೂ ವಿಶ್ವಸಂಸ್ಥೆಯ ಸಾಧಾರಣ ಸಭೆಯಲ್ಲಿ ಇಟಲಿಯು ಮಂಡಿಸಿದ್ದ ನಿರ್ಣಯವು ೪೮-೮ ಓಟುಗಳಿಂದ ಅಂಗೀಕೃತವಾಯಿತು ಕ್ಯೂಬ, ಐರ್ಲೆಂಡ್, ಪಾಕಿಸ್ತಾನ ಮತ್ತು ಪೆರುಗಳು ಇಟಲಿಯ ಜೊತೆಗೆ ಸೇರಿ ನಿರ್ಣಯವನ್ನು ಮಂಡಿಸಿದ್ದುವು ಭಾರತ ಮತ್ತು ಕಮ್ಯೂನಿಸ್ಟ್ ರಾಜ್ಯಗಳು ವಿರೋಧಿಸಿದುವು. ವಿಶ್ವಸಂಸ್ಥೆಯ ಆಶ್ರಯದಲ್ಲಿ ಸ್ವತಂತ್ರ ರಾಷ್ಟ್ರಗಳ ಚುನಾವಣೆಗಳನ್ನು ನಡೆಸುವುದಕ್ಕೆ ಭಾರತವು ವಿರೋಧಿಸುವುದಾಗಿ ವಿ ಕೆ ಕೃಷ್ಣಮೆನನ್ನರು ತಿಳಿಸಿದ್ದಾರೆ

* * *

ಶ್ರೀ ಬಿಡಾರಂ ಕೃಷ್ಣಪ್ಪನವರ ರಾಮ ಮಂದಿರದಲ್ಲಿ 13. 11. 56ನೇ ಮಂಗಳವಾರದ ಕಾರ್ಯಕ್ರಮ

ಸಾಯಂಕಾಲ 5 ಘಂಟೆಗೆ

ಆರ್ ವಿ ಎ. ದೇಶಿಕಾಚಾರ್ಯರ	ವೇಣು ವಾದನ
ವಿ ಟಿ ಗುರುರಾಜಪ್ಪನವರ	ಪಿಟೀಲು
ಹೆಚ್ ಪದ್ಮನಾಭಯ್ಯರವರ	ಮೃದಂಗ

ಸಾಯಂಕಾಲ 6-30 ಘಂಟೆಗೆ

ಶ್ರೀಮತಿ ಗೌರಿ ಕುಪ್ಪುಸ್ವಾಮಿಯವರ	ಗಾಯನ
ಶ್ರೀಮತಿ ರುಕ್ಮಿಣಿಯವರ	ಪಿಟೀಲು
ಶ್ರೀಮತಿ ಕೃಷ್ಣವೇಣಿಯವರ	ಮೃದಂಗ

ಟಿಕೆಟ್ ದರ: 2 ಕಛೇರಿಗಳಿಂದ ರೂ. 1 ಮಾತ್ರ

ಕನ್ನಾನೂರು ಬಿಸ್ಕೀಟುಗಳು

ಮದರಾಸು, ಮದುರಾ, ಮೈಸೂರು, ಕುಂಭಕೋಣಂ, ತಲಚೇರಿ ಮೊದಲಾದ ವಸ್ತು ಪ್ರದರ್ಶನಗಳಲ್ಲಿ ಉತ್ತಮ ಬಹುಮಾನಗಳನ್ನು ಪಡೆದು ಜನ ಮೆಚ್ಚಿಗೆ ಹೊಂದಿರುವ "ಕನ್ನಾನೂರು ಚಿನೋಲಿ ಹೊಸೈರಿ ಫ್ಯಾಕ್ಟರಿ ಬಿಸ್ಕೀಟುಗಳು" ಎಲ್ಲಾ ಅಂಗಡಿಗಳಲ್ಲಿಯೂ ದೊರೆಯುತ್ತವೆ.

ವಿಳಾಸ:-

ದಿ ಚಿನೋಲಿ ಹೊಸೈರಿ ಫ್ಯಾಕ್ಟರಿ,
ಕನ್ನಾನೂರು

ಗೋ ಸಂವರ್ಧನಾ ದಿನಾಚರ

ನಂಜನಗೂಡು ೧

ಗೋ ಸಂವರ್ಧನಾ ದಿನಾಚರಣೆಯನ್ನು ಇ ನ ಪಶು ವೈದ್ಯ ಆಸ್ಪತ್ರೆಯಲ್ಲಿ ಶ್ರೀ ಬಿ. ವಿ. ಕ ಡಿತರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಕಾರ್ಯದರ್ಶಿ ಶ್ರೀ ಬಿ. ವಿ. ಬಾಲಸುಬ್ರಹ್ಮಣ್ಯ ನವರು ಸ್ವಾಗತ ಭಾಷಣ ಮಾಡಿ, ೧೩೦ ಜೊತೆ ತ್ತುಗಳೂ ಮತ್ತು ಉತ್ತಮವಾದ ಹಸುಗಳ ತಾಲ್ಲೋಕಿನ ಎಲ್ಲಾ ಭಾಗಗಳಿಂದ ಪ್ರದರ್ಶನ ಬಂದಿವೆಯೆಂದು ತಿಳಿಸಿದರು. ಪಶು ವೈದ್ಯರಾ ಶ್ರೀ ಎಂ ಎಲ್ ಕೃಷ್ಣನ್‌ರವರು ಗೋವುಗಳನ್ನ ಸಾಕುವ ವಿಧಾನವನ್ನು ವಿವರಿಸಿದರು. ಪ್ರದರ್ಶ ನದಲ್ಲಿ ಭಾಗವಹಿಸಿದ ಉತ್ತಮ ರಾಸುಗಳಿಗೆ ಬಹುಮಾನಗಳನ್ನು ಪುರಸಭಾ ಅಧ್ಯಕ್ಷರಾದ ಶ್ರೀ ಕೆ ವೆಂಕಟಸುಬ್ಬರವರು ವಿನಿಯೋಗಿಸಿದರು ಶ್ರೀ ಕೆ. ವಿಶ್ವೇಶ್ವರಗೌಡರು ಮತ್ತು ಶ್ರೀ ಮ ಮದ್ ಸಾಹೇಬರು ಗೋವುಗಳ ಪಾಲನೆ ಮತ್ತು ಸಮಾಜದಲ್ಲಿ ಗೋವಿನ ಸ್ಥಾನಗಳನ್ನು ವಿವರಿ ದರು. ಶ್ರೀ ಪಾಲ್ ಸುಬ್ಬಯ್ಯನವರ ಎತ್ತುಗ ಮತ್ತು ಸಿಂಧಿ ಹಸುವಿಗೆ ಪ್ರಥಮ ಬಹುಮಾನ ಳು ದೊರಕಿದುವು. ಕಡಲೆ ಅಂಗಡಿ ಶ್ರೀ ಬಸ ಯ್ಯನವರ ಸಿಂಧಿ ಹಸುವಿಗೆ ಎರಡನೆಯ ಬ ಮಾನವೂ, ಶ್ರೀ ಡಿ ಕೆ. ರಂಗನಾಥರವರ ನ ಡು ಹಸುವಿಗೆ ಮೂರನೆಯ ಬಹುಮಾನವ ದೊರೆತವೆ ಶ್ರೀ ವೈ. ಕೆ. ಎಸ್. ಲಕ್ಷ್ಮಣಶೆ ರು ವಂದನಾರ್ಪಣೆ ಮಾಡಿದರು

ಕ್ರಿಕೆಟ್ ಪಂದ್ಯ

ಇಲ್ಲಿನ ಹೈಸ್ಕೂಲ್ ಮೈದಾನದಲ್ಲಿ ಟೌ ಬ್ಬಿನವರಿಗೂ, ಎಲ್ಸ್‌ಟಿರ್ಸ್ ಕ್ಲಬ್ಬಿನವರಿಗೂ ಕ್ರಿ ಕೆಟ್ ಪಂದ್ಯ ನಡೆದು ಟೌನ್ ಕ್ಲಬ್ಬಿನವರು ಯಗಳಿಸಿದರು.

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ — ಕಲ್ಪ

ಔಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ. 59
ಭೇಟಿಯ ಕಾಲ:-
ಬೆಳಿಗ್ಗೆ 7 30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7 30
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು

ನವರತ್ನ — ಕಲ್ಪ
ಉಪಯೋಗಿಸಿರಿ

ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ ಗೋಮೇಧಿಕ, ನೀಲ, ಪುಷ್ಯರಾಗ ಮತ್ತು ಪ್ರಕೆ ಶಿಲೆ ಮುಂತಾದ 9 ಅಮೂಲ್ಯ ಪದಾರ್ಥಗಳ ಯೋಗ. ಇದರಿಂದ ನರಗಳ ದೌರ್ಬಲ್ಯ, ಉ ದರ ಸಂಬಂಧದ ವ್ಯಾಧಿಗಳು, ದಮ್ಮು ಕೆಮ್ಮು ಮೂಲವ್ಯಾಧಿ, ನಾಳವ್ರಣ, ಬಹುಮೂತ್ರ, ಪ್ರ ಮೇಹ ಮತ್ತು ನಿಮ್ಮ ಇತರ ಎಲ್ಲಾ ಸಾಮಾನ್ಯ ನೂ ತೀವ್ರವಾದ ಖಾಯಿಲೆಗಳೂ ಸಂಪೂರ್ಣ ಗುಣ ಹೊಂದುವುವು ಅತ್ಯುತ್ತಮ ಆರೋಗ್ಯ ಯುಕ್ತವಾದ ಔಷಧಿ ಇದಾಗಿದೆ.

ವಿಶಾಖಪಟ್ಟಣ, ರಾಜಮಹೇಂದ್ರಿ, ಗುಂಟೂರ್ ಬೆಜವಾಡ, ಮದ್ರಾಸು, ಬೆಂಗಳೂರು, ಕಡಯ ಪ್ಪೂರು, ಮಧುರೆ, ತಿರುಚನಾಪಳ್ಳಿ, ತಂಜಾವೂರ ಸೇಲಂ, ಕಲ್ಲಿಕೋಟೆ, ಎರ್ನಾಕುಲಂ, ಕೊಟ್ಟಾಯ ತ್ರಿವೇಂದ್ರಂ, ತಿರುನಲ್ವೇಲಿ, ಕಾಂಚೀಪುರಂ, ಕಡಲೂ ರು, ಕುಂಭಕೋಣಂ, ಕೈಲಾರ್ ಮತ್ತು ಹೈದರಾ ಮುಗಳ ವಿಳಾಸ ಮತ್ತು ಇತರ ಉಚಿತ ಸಾಹಿತ್ಯ ಗೆ ಬರೆಯಿರಿ:-

NAVRATNA KALPA PHARMACY,
JULLUNDUR CITY (India)

Edited, Printed and Published
A. R. Nagarajan at Sadhvi Pre
O. Subbiah Road, Mysore

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಚಂದಾ ದರ
ಎಂಟು ತಿಂಗಳ ಮುಂಗಡ
ತಿಂಗಳಿಗೆ ಎಂಟಾಣೆ
ಒಂದೇ ಮುಂಗಡ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೨] SADHVI | TUESDAY 13—11—1956 ಮೈಸೂರು | ಮಂಗಳವಾರ ೧೩—೧೧—೧೯೫೬ [ಸಂಚಿಕೆ : ೧೦೦

ಈಜಿಪ್ಟಿಗೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯ ಭೇಟಿ

ರೋಗ ಲಕ್ಷಣ ಶಾಸ್ತ್ರಜ್ಞರ ಸಮ್ಮೇಳನ

ಮೈಸೂರು ೧೨.

ಭಾರತದ ರೋಗ ಲಕ್ಷಣ ಶಾಸ್ತ್ರಜ್ಞರ (ಪ್ಯಾಥಾಲಜಿಸ್ಟ್ಸ್) ಏಳನೇ ವಾರ್ಷಿಕ ಅಧಿವೇಶನವು ಬೆಳಿಗ್ಗೆ ಕ್ರಾಫರ್ಡ್ ಭವನದಲ್ಲಿ ಆರಂಭವಾಯಿತು.

ಕುಮಾರಿ ಲೀಲಾವತಿಯವರಿಂದ ಪ್ರಾರ್ಥನೆಯಾದನಂತರ ಉಪಕುಲಪತಿ ಡಾ|| ಕೆ. ವಿ. ಪುಟ್ಟಪ್ಪನವರು ಸ್ವಾಗತ ಭಾಷಣ ಮಾಡಿದರು. ಶರೀರವು ಜೀವಾತ್ಮನಿಗೆ ದೇವಾಲಯವೆಂಬ ಭಾವನೆ ಇರುವುದೆಂದೂ, ಅದನ್ನು ದೈವಶಕ್ತಿಯ ಪ್ರಕಾಶಕ್ಕೆ ಸಿದ್ಧಪಡಿಸಬೇಕೆಂದೂ ಅವರು ತಿಳಿಸಿದರು. ದೈಹಿಕವಾದ ಶಕ್ತಿಗಳ ಅಸಂಗತ ಸಮ್ಮಿಲನವೇ ಅನೇಕ ವ್ಯಾಧಿಗಳಿಗೆ ಕಾರಣವೆಂದು ಅವರು ಹೇಳಿ, ವೈದ್ಯರುಗಳ ಗುರಿಯು ವೈದ್ಯದ ಅವಶ್ಯಕತೆಯನ್ನೇ ನಿರ್ಮೂಲ ಮಾಡುವುದಾಗಿರಬೇಕೆಂದು ಸೂಚಿಸಿದರು.

ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪರು ಆರಂಭ ಭಾಷಣ ಮಾಡಿ, ಅತಿ ಮಾನುಷ ಶಕ್ತಿಗಳು ರೋಗಕ್ಕೆ ಕಾರಣವೆಂಬ ಭಾವನೆಯಿಂದ ಪೂರ್ವ ಕಾಲದ ಜನರು ಹಲವು ಬಗೆ ಮಂತ್ರ, ತಂತ್ರ ಮತ್ತು ಕ್ರಿಯೆಗಳನ್ನು ಆಚರಿಸುತ್ತಿದ್ದರೆಂದೂ, ವಿಜ್ಞಾನ ಯುಗದಲ್ಲಿ ಹೊಸ ಸಂಶೋಧನೆಗಳಿಂದ ರೋಗಗಳನ್ನು ನಿವಾರಿಸಲು ಅದ್ಭುತವಾದ ಸಾಧನಗಳನ್ನು ಕಂಡುಹಿಡಿಯಲಾಗಿದೆಯೆಂದೂ [illegible] ಇನ್ನೂ ಹೆಚ್ಚಿನ ಸಂಶೋಧನೆಗಳಿಗೆ ಅವಕಾಶವಿದೆಯೆಂದೂ ಅವರು ಹೇಳಿದರು.

ಆರೋಗ್ಯ ಮಂತ್ರಿ ಶ್ರೀ ಎ. ಜಿ. [illegible]ಪಣ ಮಾಡಿ, ರೋಗಗಳ ನಿವಾರಣೆಯಲ್ಲಿ ವಿಜ್ಞಾನದ ಶಾಸ್ತ್ರವನ್ನು ವಿವರಿಸಿ, ಇನ್ನೂ ಹೆಚ್ಚು ವೃದ್ಧಿಗೆ ಬರಬೇಕೆಂದು ಸೂಚಿಸಿದರು.

ಭಾರತ ವೈದ್ಯ ಸಂಶೋಧನಾ ಸಂಸ್ಥೆಯ ನಿರ್ದೇಶಕರಾದ ಡಾ|| ಸಿ. ಜಿ. ಪಂಡಿತ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿ ಭಾಷಣ ಮಾಡಿ, ಶರೀರದ ರೋಗ ಲಕ್ಷಣ ಸಂಶೋಧನೆಗೆ ಯಾವ ಮಿತಿ ಅಥವಾ ಮೇರೆಗಳೂ ಇಲ್ಲವೆಂದೂ, ಈ ಕಾರ್ಯಗಳು ಸರ್ವತೋಮುಖವಾಗಿ ನಡೆಯಬೇಕೆಂದೂ ಹೇಳಿದರು.

ದೇವರ ವಿಗ್ರಹದ ಮುಂದೆ ಭಕ್ತ ಸರ್ಪ

[illegible] ಬಳಿ ಹೊರಗು ಗ್ರಾಮದ ಶಿವ ಗುಡಿಯಲ್ಲಿ ಕಳೆದ ಒಂದು ವಾರದಿಂದ ಒಂದು ಸರ್ಪ ಸೇರಿಕೊಂಡಿದೆ. ಪೂಜೆ ಮಾಡುವಾಗ ಅದು ಹೊರಗೆ ದಾರಿ ಕೊಡುತ್ತದೆ. ಬಾಕಿ ಕಾಲ ವಿಗ್ರಹದ ಪದತಲದಲ್ಲಿ ಮಲಗಿರುತ್ತದೆ. [illegible] ಮತ್ತು ಹಣ್ಣುಗಳಿಂದ ಪೂಜಿಸಿದರೂ ಅದು [illegible]ವುದಿಲ್ಲ. ಹಾಲು ಮೊಟ್ಟೆಗಳನ್ನು ಮುಟ್ಟುತ್ತಿಲ್ಲ. ಸರ್ಪವು ಉಪವಾಸದಿಂದ ದಿನೇ ದಿನೇ ಕೃಶವಾಗುತ್ತಿದೆ. ಅದನ್ನು ನೋಡಲು ಜನಸಂದಣಿ ಸೇರುತ್ತಿದೆ.

ವಿಶ್ವಸಂಸ್ಥೆಯ ಪಡೆಯೊಡನೆ ಈಜಿಪ್ಟಿಗೆ ಹ್ಯಾಮರ್‌ಶೀಲ್ಡರು

ವಿಶ್ವಸಂಸ್ಥೆಯ ಪೋಲೀಸು ಪಡೆಯ ಪ್ರಥಮ ತಂಡವು ಈ ದಿನ ಈಜಿಪ್ಟಿಗೆ ತೆರಳುವುದೆಂದೂ ತಾವೂ ಸಹ ಇಂದು ಕೈರೋವಿಗೆ ಹೋಗುವುದಾಗಿಯೂ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಶೀಲ್ಡರು ತಿಳಿಸಿರುತ್ತಾರೆ. ಪಡೆಯ ಆಗಮನಕ್ಕೆ ಈಜಿಪ್ಟ್ ಒಪ್ಪಿರುವುದಾಗಿಯೂ ಅವರು ಹೇಳಿರುವರು. ಈಜಿಪ್ಟಿನಲ್ಲಿ ಹ್ಯಾಮರ್‌ಶೀಲ್ಡರು ೩ ದಿನಗಳ ಕಾಲವಿರುವರು. ಡೆನ್ಮಾರ್ಕಿನ ಸೈನಿಕರು ಈಜಿಪ್ಟಿನಲ್ಲಿ ಉಸ್ತುವಾರಿ ನಡೆಸುವುದಕ್ಕಾಗಿ ಈಗಾಗಲೇ ನೇಪಲ್ಸ್ ಪಟ್ಟಣಕ್ಕೆ ಬಂದಿದ್ದಾರೆ.

ಸುಡಾನಿನಲ್ಲಿ ಜರೂರು ಪರಿಸ್ಥಿತಿ

ಈಜಿಪ್ಟಿನ ಪರಿಸ್ಥಿತಿಯ ಪರಿಣಾಮವಾಗಿ ಸುಡಾನಿನಲ್ಲಿ ಜರೂರು ಪರಿಸ್ಥಿತಿಯುಂಟಾಗಿರುವುದಾಗಿ ಅಲ್ಲಿನ ಸರ್ಕಾರದವರು ಘೋಷಿಸಿರುವರೆಂದು ಗೊತ್ತಾಗಿದೆ.

ಚಿನ್ನದ ಗಣಿಯಲ್ಲಿ ಮುಷ್ಕರ

ಕೋಲಾರದ ಚಿನ್ನದ ಗಣಿಗಳ ಪೈಕಿ ಮೈಸೂರು ಗಣಿಯ ಇಂಜನ್ ಡ್ರೈವರುಗಳು ಮೊನ್ನೆಯಿಂದ ಮುಷ್ಕರ ಹೂಡಿದ್ದಾರೆ. ದಿನಕ್ಕೆ ಎಂಟು ಗಂಟೆ ಬದಲು ೬ ಗಂಟೆ ಕಾಲ ಮಾತ್ರ ತಮ್ಮಿಂದ ಕೆಲಸ ತೆಗೆದುಕೊಳ್ಳಬೇಕೆಂದು ಅವರು ಒತ್ತಾಯ ಮಾಡಿದ್ದಾರೆ. ಇವರುಗಳ ಮುಷ್ಕರದಿಂದ ಗಣಿಯ ಒಳಗಡೆ ಕೆಲಸಮಾಡುತ್ತಿರುವ ೪,೦೦೦ ಕಾರ್ಮಿಕರು ಉದ್ಯೋಗ ಮಾಡಲು ಸಾಧ್ಯವಾಗಿಲ್ಲ.

ಶಂಕರಾನಂದ ಭಾರತೀ ಸ್ವಾಮಿಗಳವರ ನಿಧನ

ಮೈಸೂರು ೧೨.

ನಗರದ ಅಶೋಕಾ ರಸ್ತೆಯಲ್ಲಿರುವ ಗೀತಾ ಪ್ರಚಾರಿಣೀ ಸಭೆಯ ಸಂಸ್ಥಾಪಕರೂ, ಪೋಷಕರೂ ಆಗಿದ್ದ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳವರು ನಿನ್ನೆ ಬೆಂಗಳೂರಿನಲ್ಲಿ ದೇಹವನ್ನು ತ್ಯಜಿಸಿದರೆಂದು ಇಲ್ಲಿಗೆ ವಾರ್ತೆ ಬಂದಿದೆ. ಅವರಿಗೆ [illegible] ರೋಗದಿಂದ [illegible]. ಈ ದಿನ ಹಿರೋಹಳ್ಳಿ ಬಳಿಯ ಅವರ ಆಶ್ರಮದಲ್ಲಿ ಅವರ ದೇಹವನ್ನು ಸಮಾಧಿ ಮಾಡಲಾಗುವುದು. ಶ್ರೀ ಸ್ವಾಮಿಗಳು ಹಿರೋಹಳ್ಳಿಯಿಂದ ಬಹಳ ವರ್ಷಗಳ ಹಿಂದೆ ನಗರಕ್ಕೆ ಆಗಮಿಸಿ ಜನರಿಗೆ ಗೀತಾ ಬೋಧೆಯನ್ನು ಮಾಡುತ್ತಾ ಭಕ್ತಿ ಮಾರ್ಗವನ್ನು ಹೇಳಿಕೊಡುತ್ತಿದ್ದರು.

ಮೈಸೂರಿನಲ್ಲೆಲ್ಲಾ ಒಂದೇ ಗೇಣಿ ಶಾಸನ

ನೂತನ ಮೈಸೂರಿನ ಎಲ್ಲ ಭಾಗಗಳಿಗೂ ಅನ್ವಯವಾಗುವ ಒಂದೇ ವಿಧದ ಗೇಣಿ ಶಾಸನವನ್ನು ಜಾರಿಗೆ ತರಬೇಕಾದ ಜರೂರು ಕಾರ್ಯವನ್ನು ಮೈಸೂರು ಸರ್ಕಾರವು ಕೈಗೊಳ್ಳಬೇಕಾಗಿ ಬರುತ್ತದೆಂದು ರೆವಿನ್ಯೂಮಂತ್ರಿ ಶ್ರೀ ಎಂ. ಪಿ. ಪಾಟೀಲರು ತಿಳಿಸಿರುತ್ತಾರೆ. ಬೊಂಬಾಯಿ ಶಾಸನವು ಮೈಸೂರಿಗೆ ಬರುವ ಎಲ್ಲ ಕರ್ನಾಟಕ ಪ್ರದೇಶಗಳಲ್ಲಿ ಜಾರಿಯಲ್ಲಿರುವ [illegible] ಬೇಕಾಗಿದೆ.

ಕೃಷ್ಣ ಮತ್ತು ಮುನಿಸ್ವಾಮಿಗಳ ಪರವಾಗಿಯೂ ಅಪೀಲು

ಬೇಲೂರು ಕೊಲೆ ಮೊಕದ್ದಮೆ ಪ್ರತಿಧ್ವನಿ

ಸ್ವಂ. ವ. ತಂತಿ] ಬೆಂಗಳೂರು ೧೨.

ಬೇಲೂರು ಕೊಲೆ ಮೊಕದ್ದಮೆಯ ೧ ಮತ್ತು ೨ನೇ ಆಪಾದಿತರಾದ ಕೃಷ್ಣ ಮತ್ತು ಮುನಿಸ್ವಾಮಿಯವರ ಪರವಾಗಿಯೂ ಹೈಕೋರ್ಟಿನಲ್ಲಿ ಅಪೀಲನ್ನು ದಾಖಲ್ ಮಾಡಲಾಗಿದೆ.

ಕೊಲಂಬೊ ರಾಷ್ಟ್ರಗಳ ಸಭೆಯಲ್ಲಿ ಈಜಿಪ್ಟ್ ಮತ್ತು ಹಂಗೆರಿ ಪ್ರಶ್ನೆ

ಪಾಕಿಸ್ತಾನದ ಪ್ರತಿನಿಧಿಯು ಬಂದಿರಲಿಲ್ಲ

ಕೊಲಂಬೊ ರಾಷ್ಟ್ರಗಳಾದ ಭಾರತ, ಇಂಡೊನೇಷ್ಯ, ಬರ್ಮಾ ಮತ್ತು ಸಿಂಹಳಗಳ ಪ್ರಧಾನಿಗಳು ನೆನ್ನೆ ದೆಹಲಿಯಲ್ಲಿ ಸಭೆ ಸೇರಿ ಈಜಿಪ್ಟ್ ಮತ್ತು ಹಂಗೆರಿ ಪರಿಸ್ಥಿತಿಗಳನ್ನು ಚರ್ಚಿಸಿದರು. ಮತ್ತೊಂದು ರಾಷ್ಟ್ರವಾದ ಪಾಕಿಸ್ತಾನದ ಪ್ರಧಾನಿಯಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ ಭಾಗವಹಿಸಿರಲಿಲ್ಲ. ಇಂದು ಸಹ ಸಮ್ಮೇಳನವು ಸೇರಿ, ಜಂಟಿ ಹೇಳಿಕೆಯೊಂದನ್ನು ಹೊರಡಿಸಲಾಗುವುದು. ಸಭೆಯಲ್ಲಿ ಪಾಕಿಸ್ತಾನವು ಭಾಗವಹಿಸದೇ ಇದ್ದ ಬಗ್ಗೆ ಪ್ರಸ್ತಾಪಿಸಲಾಯಿತೆಂದು ಹೇಳಲಾಗಿದೆ. ನೆಹರೂರವರು ಭಾಷಣ ಮಾಡಿ ಈಜಿಪ್ಟಿನ ಸಶಸ್ತ್ರ ಸೈನ್ಯಗಳ ಜೊತೆಗೆ ಸೇರಲು ಯಾವ ಸ್ವಯಂಸೇವಕರೂ ಹೋಗಬಾರದೆಂದು ತಿಳಿಸಿದುದಾಗಿ ಗೊತ್ತಾಗಿದೆ. ಪುನಃ ಬಾಂಡುಂಗ್ ಸಮ್ಮೇಳನ ಕರೆಯಲು ಈಗ ಸಾಧ್ಯವಾಗದೆಂದು ನೆಹರೂ, ಬಂಡಾರನಾಯಕೆ ಮತ್ತು ಬರ್ಮಾದ ಉಬಾಸ್ವೆಯವರು ಅಭಿಪ್ರಾಯಪಟ್ಟುದಾಗಿ ಹೇಳಲಾಗಿದೆ.

ಬೇಲೂರು ಕೊಲೆ ಮೊಕದ್ದಮೆ ಬಗ್ಗೆ ಹೈಕೋರ್ಟಿಗೆ ಅಪೀಲು

ಗೋವಿಂದರೆಡ್ಡಿ ಪರ ಅರ್ಜಿ

ಬೆಂಗಳೂರು ೧೨.

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯಲ್ಲಿ ಸೆಷನ್ಸ್ ನ್ಯಾಯಾಧೀಶರ ತೀರ್ಪಿನ ವಿರುದ್ಧವಾಗಿ ೩ನೇ ಆಪಾದಿತ ಗೋವಿಂದರೆಡ್ಡಿಯ ಪರ ಅವರ ವಕೀಲರುಗಳಾದ ಮದ್ರಾಸಿನ ಶ್ರೀ ಬಿ. ಟಿ. ಸುಂದರರಾಜನ್, ಬ್ಯಾರಿಸ್ಟರ್ ಶ್ರೀ ಕೃಷ್ಣಮೂರ್ತಿ ಮತ್ತು ಶ್ರೀ ಕೆ. ಎಸ್. ಚಂದ್ರಶೇಖರ್‌ರವರು ಅಪೀಲನ್ನು ಹೂಡಿದ್ದಾರೆ.

ಈ ಅರ್ಜಿಯಲ್ಲಿ ಆಪಾದಿತರ ಹೇಳಿಕೆ ಸಾಕ್ಷ್ಯವನ್ನು ಅಂಗೀಕರಿಸದೇ ಇರುವುದಕ್ಕೆ ನ್ಯಾಯಾಧೀಶರು ಇತ್ತಿರುವ ಕಾರಣಗಳು ಸಮಂಜಸವಾಗಿಲ್ಲವೆಂದೂ, ಕೈ ಬೆರಳಿನ ಗುರುತಿನ ಸಂಬಂಧದ ಸಾಕ್ಷ್ಯದಲ್ಲಿ ಹೊಂದಾಣಿಕೆಯಿಲ್ಲವೆಂದೂ, ಸಂದರ್ಭಾನುಸಾರವಾದ ಸಾಕ್ಷ್ಯದ ಆಧಾರದ ಮೇಲೆ [illegible] ಈ ಮೊಕದ್ದಮೆಯಲ್ಲಿ ತಮ್ಮ ಕಕ್ಷಿಯು ತಪ್ಪಿತಸ್ಥನೆಂದು ಹೇಳಲು ಸಾಧ್ಯವಿಲ್ಲವೆಂದೂ ತಿಳಿಸಲಾಗಿದೆ. ಸಂದರ್ಭಾನುಸಾರದ ಸಾಕ್ಷ್ಯಗಳು [illegible]ವೆಯೆಂದೂ ಪ್ರತಿಪಾದಿಸಲಾಗಿದೆ.

ಸರ್ಕಾರಿ ಕಛೇರಿ ಕೆಲಸ ಬೆಳಿಗ್ಗೆ ೧೦|| ಯಿಂದ ಸಂಜೆ ೫|| ವರೆಗೆ

ಸಂಸ್ಥಾನ ಸರ್ಕಾರದ ಪ್ರಕಟಣೆ

ಸ್ವಂ. ವ. ತಂತಿ] ಬೆಂಗಳೂರು ೧೨.

ಸಂಸ್ಥಾನದ ಕಛೇರಿಗಳಲ್ಲಿ ಇನ್ನುಮುಂದೆ ಬೆಳಿಗ್ಗೆ ೧೦|| ಗಂಟೆಯಿಂದ ಸಂಜೆ ೫|| ವರೆಗೆ ಕೆಲಸವನ್ನು ನಡೆಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

○ ಮೈಸೂರಿಗೆ ಹೊಸ ಕನ್ನಡ ಪ್ರದೇಶಗಳಿಂದ ಬಂದಿರುವ ಸರ್ಕಾರಿ ನೌಕರರ ಮಕ್ಕಳಿಗೆ ಈ ವರ್ಷದ ಪರೀಕ್ಷೆಯಲ್ಲಿ ವಿಶೇಷ ಸೌಕರ್ಯಗಳನ್ನು ಏರ್ಪಡಿಸಲಾಗುವುದು. ಅವರುಗಳು ಇದುವರೆಗೆ ಹೊಂದಿದ್ದ ಪಾಠ ಕ್ರಮವೇ ಈ ವರ್ಷವೂ ಇರುವುದು.

○ ವಿಧಾನಸೌಧಕ್ಕೆ ಇಲ್ಲಿನ ಅಠಾರಾ ಕಛೇರಿಯನ್ನು ಈ ತಿಂಗಳು ಡಿಸೆಂಬರಿನೊಳಗೆ ಪೂರ್ತಿಯಾಗಿ ರವಾನಿಸಲಾಗುವುದು. ಮಂತ್ರಿಗಳ ಕೊಠಡಿಗಳು ೨೦ ನೇ ತಾರೀಖಿನೊಳಗೆ ಸಿದ್ಧವಾಗುವುವು.

ಎ.ಐ.ಸಿ.ಸಿ. ಮುಂದೆ ಪ್ರದರ್ಶನ

ಕಲ್ಕತ್ತದಲ್ಲಿ ಮೊನ್ನೆ ೨೦೦ ಜನರು ಎ.ಐ.ಸಿ.ಸಿ. ಅಧಿವೇಶನದ ಸ್ಥಳದ ಸ್ವಲ್ಪ ದೂರದಲ್ಲಿ ಪ್ರದರ್ಶನ ನಡೆಸಿ ಗೋವಾವನ್ನು ವಿಮುಕ್ತಗೊಳಿಸಲು ನೆಹರೂರವರು ಕೂಡಲೇ ಕಾರ್ಯಾಚರಣೆ ನಡೆಸಬೇಕೆಂದು ಕೂಗಿದರು. ಅವರನ್ನು ಅಧಿವೇಶನದ ಸ್ಥಳಕ್ಕೆ ೧ ಮೈಲಿ ದೂರದಲ್ಲಿ ಪೋಲೀಸರು ತಡೆದರು. ಅಲ್ಲಿನ ಕ್ರಾಂತಿಕಾರಿ ಸಮಾಜವಾದಿ ಪಕ್ಷದವರು ಪ್ರದರ್ಶನವನ್ನು ಏರ್ಪಡಿಸಿದ್ದರು.

ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರುಗಳಿಗೆ ಸನ್ಮಾನ

ಬರುವ ತಿಂಗಳಲ್ಲಿ ವಿಶೇಷ ಸಮಾರಂಭ

ಬೆಂಗಳೂರು ೧೨.

ಬರುವ ತಿಂಗಳು ೧೬ನೇ ತಾರೀಖು ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ತಿನವರು ವಿಶೇಷ ಸಮಾರಂಭವನ್ನು ನಡೆಸಿ, ಪರಿಷತ್ತಿನ ಮಾಜಿ ಅಧ್ಯಕ್ಷರುಗಳನ್ನು ಸನ್ಮಾನಿಸಲಿರುವರು. ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ಸಮಾರಂಭದ ಉದ್ಘಾಟನೆಯನ್ನು ನೆರವೇರಿಸುವರು. ಬಿಹಾರಿನ ಗವರ್ನರ್ ಶ್ರೀ ಆರ್. ಆರ್. ದಿವಾಕರರು ಅಧ್ಯಕ್ಷತೆ ವಹಿಸುವರು.

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಹಿಂದಿನ ಅಧ್ಯಕ್ಷರುಗಳ ಭಾವಚಿತ್ರಗಳನ್ನು ಅನಾವರಣ ಮಾಡುವರು.

○ ರಾಷ್ಟ್ರಾಧ್ಯಕ್ಷರು ವಿಶೇಷಾಜ್ಞೆಯೊಂದನ್ನು ಹೊರಡಿಸಿ, ೧೯೩೯ರ ರಸ್ತೆ ಸಂಚಾರ ಶಾಸನವನ್ನು ತಿದ್ದುಪಡಿ ಮಾಡಿದ್ದಾರೆ. ಇದರ ಪ್ರಕಾರ, ಹಳೆ ಬೊಂಬಾಯಿ ಸಂಸ್ಥಾನದ ಕನ್ನಡ ಪ್ರದೇಶಗಳ ರಸ್ತೆ ಸಂಚಾರ ವ್ಯವಸ್ಥೆಯನ್ನು ಮೈಸೂರು ಸರ್ಕಾರವಾಗಲೀ ಅಥವಾ ಆ ಸರ್ಕಾರದ [illegible] ವಹಿಸಿಕೊಳ್ಳಬಹುದು. [illegible] ಅನ್ವಯಿಸುತ್ತದೆ.

ವಿಶ್ವ ಸಂಸ್ಥೆ ಮತ್ತು ಅಂಗ ಸಂಸ್ಥೆಗಳಲ್ಲಿ ಚೀಣಕ್ಕೆ ಪ್ರಾತಿನಿಧ್ಯಬೇಕು

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆ ಸಮಾರಂಭದಲ್ಲಿ ನಿಜಲಿಂಗಪ್ಪನವರ ನುಡಿ

ಮೈಸೂರು ೧೩

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಪ್ರಾದೇಶಿಕ ಸಹಕಾರ ಶಿಕ್ಷಣ ತರಗತಿಯ ಆರಂಭೋತ್ಸವವನ್ನು ನೆನ್ನೆ ಸಂಸ್ಥಾನದ ಸಹಕಾರ ಮಂತ್ರಿ ಶ್ರೀ ಎ ಭೀಮಪ್ಪನಾಯಕರು ಇಲ್ಲಿನ ಹಳೆಯ ಆಕಾಶವಾಣಿ ಕಟ್ಟಡದಲ್ಲಿ ನೆರವೇರಿಸಿದರು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ತಮ್ಮ ಅನಾರೋಗ್ಯದ ನಿಮಿತ್ತ ಈ ಕೆಲಸವನ್ನು ನಿರ್ವಹಿಸಲಾಗಲಿಲ್ಲ

ಒಂಭತ್ತು ಏಷ್ಯಾ ರಾಷ್ಟ್ರಗಳ ಸಹಕಾರ ಕೆಲಸದಲ್ಲಿ ನಿರತರಾಗಿರುವ ೩೦ ಮಂದಿ ಅಧಿಕಾರಿಗಳಿಗೆ ೧ ತಿಂಗಳು ಈ ತರಗತಿಯಲ್ಲಿ ತರಬೇತು ಕೊಡಲಾಗುವುದು

ಬೆಂಗಳೂರಿನಲ್ಲಿರುವ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಏಷ್ಯಾ ಪ್ರದೇಶ ಕಾರ್ಯಾಲಯದ ಡೈರೆಕ್ಟರ್ ಶ್ರೀ ರೀನೆ ಲಿವ್‌ಚೀರವರು ಸ್ವಾಗತ ಭಾಷಣ ಮಾಡಿ, ಇಂತಹ ತರಬೇತಿ ಕ್ರಮವನ್ನು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯು ಏಷ್ಯದಲ್ಲಿ ಕೈಗೊಂಡಿರುವುದು ಇದು ಮೊದಲನೆಯ ಬಾರಿಯೆಂದು ತಿಳಿಸಿದರು ಏಷ್ಯಾ ರಾಷ್ಟ್ರಗಳು ಪ್ರಾಮುಖ್ಯವೆಂದು ಪರಿಗಣಿಸಿರುವ ವಿಷಯಗಳನ್ನು ಪ್ರತಿ ವರ್ಷದ ತರಗತಿಯಲ್ಲೂ ಚರ್ಚಿಸಲಾಗುವುದೆಂದೂ ಈ ವರ್ಷದ ವಿಷಯವು ಅಧಿಕ ಉದ್ಯೋಗ ಅವಕಾಶ ಕಲ್ಪಿಸುವ ಸ್ವಕಸುಬು, ಗೃಹ ಮತ್ತು ಅಲ್ಪ ಪ್ರಮಾಣದ ಉದ್ಯಮಗಳ ಸಹಕಾರಿ ಸಂಘಟನೆಗೆ ಸಂಬಂಧಿಸಿರುವುದಾಗಿಯೂ ಅವರು ನುಡಿದರು ಗ್ರಾಮಾಂತರಗಳಲ್ಲಿ ಇಂತಹ ಕೈಗಾರಿಕೆಗಳ ಉಪಯುಕ್ತತೆಯನ್ನು ಅವರು ಸೂಚಿಸಿದರು

ಶ್ರೀ ಎಸ್ ನಿಜಲಿಂಗಪ್ಪನವರ ಭಾಷಣವನ್ನು ಶ್ರೀ ಭೀಮಪ್ಪನಾಯಕರು ಓದಿದರು ಅವರು ಹಿಂದೆ ನಡೆದ ತರಗತಿಗಳ ವಿಚಾರವನ್ನು ಪ್ರಸ್ತಾಪಿಸಿ, ಈ ವರ್ಷ ಏಷ್ಯಾ ಸಮಸ್ಯೆಗಳನ್ನು ಪರಿಗಣಿಸಬೇಕಾಗಿರುವ ಈ ತರಗತಿಯಲ್ಲಿ ಪ್ರಜಾ ಚೀಣದವರು ಭಾಗವಹಿಸಿದ್ದರೆ ಏಷ್ಯ ಪ್ರಾತಿನಿಧ್ಯವು ಪರಿಪೂರ್ಣವಾಗುತ್ತಿತ್ತೆಂದು ಅಭಿಪ್ರಾಯಪಟ್ಟರು. ವಿಶ್ವಸಂಸ್ಥೆಯ ಆಶ್ರಯದಲ್ಲಿ ಸಹಕಾರದ ಮೂಲಕ ನಡೆಸುವ ಕ್ರಮಗಳಲ್ಲಿ ಚೀಣದ ಬಹುಸಂಖ್ಯಾತರನ್ನು ಪ್ರತಿನಿಧಿಸುವ ಸರ್ಕಾರವು ಭಾಗವಹಿಸಿದ್ದರೆ ಭಾರತಕ್ಕೆ ಸಮಾಧಾನವಾಗುವುದೆಂದು ಹೇಳಿದರು ಈ ವಿಚಾರದ ಮಹತ್ವವನ್ನು ನಾನಾ ರಾಷ್ಟ್ರಗಳು ಎಷ್ಟು ಜಾಗ್ರತೆಯಿಂದ ಮನಗಂಡರೆ ಅಷ್ಟಕ್ಕೂ ಜಗತ್ತಿಗೆ ಒಳ್ಳೆಯದೆಂದೂ, ವಿಶ್ವ ಸಂಸ್ಥೆಯಲ್ಲಿ, ಅದರ ಅಂಗ ಸಂಸ್ಥೆಗಳಲ್ಲೂ ಚೀಣವು ಪ್ರತಿನಿಧಿಸಲ್ಪಡಬೇಕಾಗುವುದೆಂದೂ ಸೂಚಿಸಿದರು

ಈಜಿಪ್ಟಿನ ಘಟನೆಗಳನ್ನು ಅವರು ಪ್ರಸ್ತಾಪಿಸಿ, ವಿಶ್ವಸಂಸ್ಥೆಯ ಭದ್ರತಾ ಸಮಿತಿಯ ಎರಡು ಖಾಯಂ ಸದಸ್ಯ ರಾಷ್ಟ್ರಗಳು ಯುದ್ಧದ ಜ್ವಾಲೆಯನ್ನು ಹಬ್ಬಿಸಿರುವುವೆಂದೂ, ಪ್ರಪಂಚದ ಅಭಿಪ್ರಾಯಕ್ಕೆ ಅವು ಈಗ ತಲೆಬಾಗಿ ತಮ್ಮ ವರ್ತನೆಯನ್ನು ಬದಲಾಯಿಸಿಕೊಂಡುದಾಗಿಯೂ ಅವರು ಹೇಳಿದರು ಹಂಗೇರಿ ಮತ್ತು ಈಜಿಪ್ಟ್‌ಗಳಲ್ಲಿ ಯುದ್ಧದ ಕಾವೇರ ತೊಡಗಿದಾಗ ವಿಶ್ವಸಂಸ್ಥೆಯ ಈ ಸಂಘವು ಅಧಿಕ ಪ್ರಗತಿಯನ್ನು ಸಾಧಿಸಲು ತಾಳ್ಮೆಯಿಂದ ನಡೆಸುತ್ತಿರುವ ಕೆಲಸಕ್ಕಾಗಿ ತೃಪ್ತಿಯನ್ನು ಸೂಚಿಸಿದರು

ತರಗತಿಗಳ ಡೈರೆಕ್ಟರ್ ಶ್ರೀ [illegible] ಅವರ ವಂದನಾರ್ಪಣೆಯಾದನಂತರ ಶ್ರೀಮತಿಗಳಾದ ಕನಕ ಮತ್ತು ಪದ್ಮರವರಿಂದ ಸಂಗೀತ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ನಗರದಲ್ಲಿ ಮಕ್ಕಳ ದಿನಾಚರಣೆ

ನಗರದ ಪುರಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೪ ಗಂಟೆಗೆ ಟೌನ್ ಹಾಲ್ ಮೈದಾನದಲ್ಲಿ ಮಕ್ಕಳ ದಿನಾಚರಣೆಯ ಸಂಬಂಧವಾಗಿ ಸಾರ್ವಜನಿಕ ಸಭೆಯನ್ನು ನಡೆಸಲಾಗುವುದು.

ತಿರುಪತಿಯಲ್ಲಿ ತೆಂಗಲೆ ವಡಗಲೆ ಬಗ್ಗೆ ಕೋರ್ಟಿನಲ್ಲಿ ವ್ಯಾಜ್ಯ

ತಿರುಪತಿಯ ಗೋವಿಂದರಾಜಸ್ವಾಮಿ ದೇವಾಲಯದಲ್ಲಿ ದೇಶಿಗರ ಶಾತ್ತುಮುರೈ ದಿನ ತೆಂಗಲೆಯವರ ಪದ್ಧತಿಯಂತೆಯೇ ವೇದಾಂತ ದೇಶಿಕರ ಮಂಗಳಾಶಾಸನವನ್ನು ನಡೆಸಬೇಕೆಂದು ಚಿತ್ತೂರಿನ ಜಿಲ್ಲಾ ನ್ಯಾಯಾಧೀಶರು ಆಜ್ಞೆ ಮಾಡಿದ್ದರೆ ಅದರ ಮೇಲೆ ವಡಗಲೆ ಗುಂಪಿನ ಶ್ರೀ ಎ.ವಿ. ರಂಗಾಚಾರಿಯವರು ಅಪೀಲು ಮಾಡಿದ್ದಾರೆ. ನ್ಯಾಯಾಧೀಶರ ತೀರ್ಪಿನ ಮೇಲೆ ತಡೆ ಹುಕುಂ ಆಗಬೇಕೆಂಬ ಅರ್ಜಿಯನ್ನು ಆಂಧ್ರ ಹೈಕೋರ್ಟಿನವರು ತಿರಸ್ಕರಿಸಿದ್ದಾರೆ

ವಿಶ್ವಸಂಸ್ಥೆಯ ಭಾರತದ ಪಡೆಗೆ ರಾಜೇಂದ್ರಸಿಂಹಜಿ

ಭಾರತದ ಮಾಜಿ ಶ್ರೇಷ್ಠ ಸೇನಾನಿ ಜನರಲ್ ರಾಜೇಂದ್ರಸಿಂಹಜಿಯವರು ಈಜಿಪ್ಟಿನಲ್ಲಿ ಬಸ್ತುವಾರಿ ನಡೆಸುವ ವಿಶ್ವಸೇನೆಯ ಭಾರತದ ಪಡೆಯ ಅಧಿನಾಯಕರಾಗುವರೆಂದು ಗೊತ್ತಾಗಿದೆ

ಪ್ರಜಾ ಸಮಾಜವಾದಿ ಪಕ್ಷದ ಉಮೇದುವಾರರಾಗುವವರಿಗೆ ಸೂಚನೆ

ಬರುವ ಮಾರ್ಚಿ ತಿಂಗಳಿನಲ್ಲಿ ನಡೆಯಲಿರುವ ಮಹಾ ಚುನಾವಣೆಯಲ್ಲಿ ಮೈಸೂರು ಜಿಲ್ಲೆ ಮತ್ತು ನಗರ ಕ್ಷೇತ್ರಗಳಿಂದ ಪ್ರಜಾ ಸೋಷಲಿಸ್ಟ್ ಪಕ್ಷದ ಪರವಾಗಿ ಪಕ್ಷದ ಟಿಕೆಟ್ಟಿಗಾಗಿ ಅರ್ಜಿ ಹಾಕಲಿಚ್ಛಿಸುವವರು ಪಕ್ಷದ ಪ್ರಧಾನ ಕಾರ್ಯದರ್ಶಿಯವರಿಗೆ ಅರ್ಜಿಗಳನ್ನು ಇದೇ ೧೮ನೇ ತಾರೀಖಿನೊಳಗೆ ತಲುಪಿಸಬೇಕು. ಅರ್ಜಿ ನಮೂನೆಗಳು ನಗರದ ಅವಿನಾಶ್ ಬಿಲ್ಡಿಂಗ್‌ನಲ್ಲಿರುವ ಪಕ್ಷದ ಕಛೇರಿಯಲ್ಲಿ ದೊರೆಯುತ್ತವೆ ವಿಧಾನ ಸಭೆಗೆ ಸ್ಪರ್ಧಿಸುವವರು ೧೦ ರೂ., ಲೋಕಸಭೆಗೆ ಸ್ಪರ್ಧಿಸುವವರು ೨೦ ರೂ ಪ್ರವೇಶಧನ ಪಾವತಿ ಮಾಡಬೇಕು ಹೆಚ್ಚಿನ ವಿವರಗಳಿಗೆ ಪ್ರಧಾನ ಕಾರ್ಯದರ್ಶಿ ಶ್ರೀ ಎಂ ವಿ ತಿಮ್ಮಯ್ಯನವರೊಡನೆ ವ್ಯವಹರಿಸಬಹುದು

ಮಂಡ್ಯ ಜಿಲ್ಲಾ ವಿದ್ಯಾರ್ಥಿ ಸಂಘದ ಅಧಿಕಾರಿ ವರ್ಗ

ನಗರದಲ್ಲಿರುವ ಮಂಡ್ಯ ಜಿಲ್ಲಾ ವಿದ್ಯಾರ್ಥಿ ಸಂಘದ ಕಾರ್ಯಕಾರಿ ಸಮಿತಿಗೆ ಕೆಳಗೆ ಕಂಡವರು ಆರಿಸಲ್ಪಟ್ಟಿರುವರು - ಶ್ರೀ ಬಿ ಮುದ್ದಾಚಾರ್-ಅಧ್ಯಕ್ಷರು ಶ್ರೀ ಹೆಚ್ ಚಿಕ್ಕಲಿಂಗೇಗೌಡ ಉಪಾಧ್ಯಕ್ಷರು ಶ್ರೀ ಕೆ ಆರ್ ಬಾಲಸುಬ್ರಹ್ಮಣ್ಯಂ ಕಾರ್ಯದರ್ಶಿ ಶ್ರೀಮತಿ ವೈ ಹೆಚ್ ಪದ್ಮಾಕ್ಷಿ-ಸಹ ಕಾರ್ಯದರ್ಶಿ ಶ್ರೀ ಎ ಸಿ ಶ್ರೀಕಂಠಯ್ಯ-ಖಜಾಂಚಿ ಹತ್ತು ಜನ ಸದಸ್ಯರನ್ನು ಚುನಾಯಿಸಲಾಯಿತು

ಪೌರಸಭಾ ವಿದ್ಯಾರ್ಥಿನಿಲಯದ ಸಂಘ

ನಗರದ ಪೌರಸಭಾ ವಿದ್ಯಾರ್ಥಿ ನಿಲಯ ಸಂಘದ ಅಧಿಕಾರವರ್ಗದ ಚುನಾವಣೆಯು ನೆನ್ನೆ ನಡೆದು ಶ್ರೀ ಎ ಕೃಷ್ಣಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಎಸ್ ಆರ್. ಲಕ್ಷ್ಮೀನಾರಾಯಣರವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ ಆರ್ ಬಾಲಸುಬ್ರಹ್ಮಣ್ಯಂ ಮತ್ತು [illegible] ಗಂಗಪ್ಪನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು

C T C PUBLICATIONS

A Guide to Opt. Accountancy

* Complete answers to the latest six public exam papers in the full size statements on crossruled paper.

Price 1-12-0

A Guide to Eng. II Paper

* General English, Grammar and composition with answers to the latest 10 Exam papers

Price 1 1-0

Agents - M s J Nonmal & Sons

Publishers -

CITY TUTORIAL COLLEGE, MYSORE

ನೆಹರೂರವರಿಂದ ಮಿಲಿಟರಿ ಒಪ್ಪಂದಗಳ ಖಂಡನೆ

ಪ್ರಧಾನ ನೆಹರೂರವರು ಅಟ್ಲಾಂಟಿಕ್ ಮತ್ತು ವಾರ್ಸಾ ರಾಷ್ಟ್ರಗಳ [illegible] ಗಳಂತಹ ಮಿಲಿಟರಿ ಒಪ್ಪಂದಗಳನ್ನು ಖಂಡಿಸಿ, ಅವು ಯುದ್ಧ ಮನೋಭಾವವನ್ನು ಹುಟ್ಟಿಸುವ ಸಾಧನಗಳಾಗಿವೆಯೆಂದು ತಿಳಿಸಿದ್ದಾರೆ ಬಾಗ್ದಾದ್ ಒಪ್ಪಂದವನ್ನು ರಷ್ಯಾ ವಿರುದ್ಧವಾಗಿ ಮಾಡಿಕೊಳ್ಳಲಾಯಿತೆಂದೂ, ದೊಡ್ಡ ರಾಷ್ಟ್ರಗಳು ತಮ್ಮ ಸೈನ್ಯಗಳನ್ನು ಇತರ ದೇಶಗಳಲ್ಲಿ ಇಡುವುದರಿಂದ ಶಾಂತಿ ಮತ್ತು ಭದ್ರತೆಯು ಸಾಧನೆಯಾಗುವುದಿಲ್ಲವೆಂದೂ ಅವರು ಹೇಳಿದ್ದಾರೆ ಅಂತರ ರಾಷ್ಟ್ರೀಯ ವ್ಯವಹಾರಗಳು ಉತ್ತಮವಾಗಲು ಪಂಚಶೀಲ ತತ್ವಗಳನ್ನು ಅನುಸರಿಸಬೇಕೆಂದು ಅವರು ಸೂಚಿಸಿದ್ದಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಮತ್ತು ೮-೧೫ ಆರ್ ಚಂದ್ರಸಿಂಗ್-ದೇವರನಾಮಗಳು ೭-೩೦ ಹಿಂದಿ ಶಿಕ್ಷಣ ೮-೩೦ ಮಕ್ಕಳ ದಿನಾಚರಣೆ. ವಿಶೇಷ ಕಾರ್ಯಕ್ರಮ ಮಧ್ಯಾಹ್ನ ೧೨ ಮತ್ತು ೩ ಜಿ ಎಲ್ ಗಣೇಶಶಾಸ್ತ್ರಿ-ವೀಣೆ ೧೨ ೩೦ ನಾಟಕ ಮಂಜರಿ [illegible] ಆರ್ ಚಂದ್ರಸಿಂಗ್ ಗಾಯನ. ೧ ೫೦ ಕೋಲಾರ [illegible] ಪ್ರೌಢಶಾಲೆಗಳಿಗಾಗಿ ಸಂಜೆ ೫-೩೦ ವಿ ನಾದಮುನಿ ನಾಗಸ್ವರ ೬ ೫ ವಿದೇಶ ಸಂಗೀತ ೬ ೩೦ ಗೀತಾವಳಿ ರೆಕಾರ್ಡು ೬-೩೦ ಗ್ರಾಮಸ್ಥರಿಗಾಗಿ ಕಾರ್ಯಕ್ರಮ ೮ ರಾಷ್ಟ್ರೀಯ ಮಕ್ಕಳ ದಿನಾಚರಣೆ ಭಾಷಣ ೮-೧೫ ವಿ ನಾದಮುನಿ ನಾಗಸ್ವರ ೯-೩೦ ರಾಷ್ಟ್ರೀಯ ಕಾರ್ಯಕ್ರಮ ೯ ೩೦ ಪಿ ಕಾಳಿಂಗರಾವ್ ಜಾನಪದ ಗೀತೆಗಳು ೧೦-೧೫ ಕೆ ಎಸ್ ನಾರಾಯಣ ಅಯ್ಯಂಗಾರ್ ಗೋಟುವಾದ್ಯ

ಮೈಸೂರು ಪೇಟೆ ಧಾರಣೆ

[illegible]	೩೩	೮	೦			
ರಾಗಿ	೨೪	೨	೦	೨೮	೨	೦
ಜೋಳ	೩೪	೦	೦	೩೭	೧೪	೦
[illegible]	೨೭	೦	೦	೨೭	೧೪	೦
ಕಡಲೆಕಾಯಿ	೧೧	೧೦	೦	೨೦	೧೨	೦
ಎಳ್ಳು	೮೭	೬	೦	೮೭	೧೪	೦
ಕಡಲೆಬೇಳೆ	೪೯	೦	೦	೪೦	೦	೦
ಹೆಸರುಬೇಳೆ	೪೨	೦	೦			
ಹುರುಳಿ	೨೪	೧೦	೦	೨೬	೦	೦
[illegible]	೪೩	೬	೦	೪೬	೨	೦
ಹಲಸಂದೆ	೪೩	೦	೦	೩೨	೮	೦
[illegible]	೪೯	೪	೦			
ಧನಿಯ	೨೬	೮	೦	೨೬	೪	೦
[illegible]	೪	೬	೦	[illegible]	೨	೦
ಮೆಣಸಿನಕಾಯಿ	೯	೦	೦	೨೪	೦	೦
[illegible] (೨೫ ಪೌಂಡು)	೯	೦	೦			
ತೆಂಗಿನಕಾಯಿ ೧೦೦೦	೯೬	೦	೦	೩೧೦	೦	೦

ಟೈಪ್‌ರೈಟರ್ ಬೇಕಾಗಿದೆ

ಪೋರ್ಟಬಲ್ ಟೈಪ್‌ರೈಟರ್ ಬೇಕಾಗಿದೆ ಬೆಲೆ ಕಂಡ ವಿವರಗಳೊಡನೆ ಪತ್ರ ವ್ಯವಹಾರ ನಡೆಸುವುದು

"X" C/o ಸಾಧ್ವಿ

ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್‌ರವರ ಆಫೀಸು

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ

ನಂಜನಗೂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನದ ಹುಂಡಿ ಗೋಲಕಗಳಲ್ಲಿ ದೊರಕಿರುವ ಚಿನ್ನ ಬೆಳ್ಳಿಯನ್ನು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರ್ ಸಾಹೇಬರವರ ಆಫೀಸಿನಲ್ಲಿ ಬಹಿರಂಗವಾಗಿ ತಾರೀಖು 17 12 56ನೇ ಸೋಮವಾರ ಮಧ್ಯಾಹ್ನ 3 ಗಂಟೆಗೆ ಹರಾಜು ಮಾಡಲಾಗುವುದು. ಇಷ್ಟಪಟ್ಟವರು ಹರಾಜು ವೇಳೆಗೆ ಸರಿಯಾಗಿ ಹಾಜರಾಗಿ ಧರ ಕೂಗುವ ಮೂಲಕ ಮಾಲುಗಳನ್ನು ಪಡೆಯಬಹುದು

ಹರಾಜು ಮಾಡುವ ಬೆಳ್ಳಿ ಮತ್ತು ಚಿನ್ನದ ಮಾಲುಗಳನ್ನು ಹರಾಜು ಕಾಲದಲ್ಲಿ ತೋರಿಸಲಾಗುವುದು

	ರೂ	ಆ	ಪೈ
ಬೆಳ್ಳಿ ತೊಲ	16,230	0	0
ಚಿನ್ನ ತೊಲ	133	0	0

Edited, Printed and Published by A R Nagarajan at Sadhvi Press D Subbiah Road, Mysore

ಕಾಂಗ್ರೆಸ್ಸಿನ ಚುನಾವಣಾ ಪ್ರಣಾಳಿಕೆ

ವರಮಾನಗಳ ಸಮನ್ವಯ ಮತ್ತು ಕಡಿಮೆ ಸಂಬಳದವರಿಗೆ ಹೆಚ್ಚು ವೇತನ

ವರಮಾನಗಳಲ್ಲಿರುವ ತಾರತಮ್ಯವನ್ನು ತಗ್ಗಿಸುವುದು, ಕಡಿಮೆ ಸಂಬಳ ಬರುವ ವರ್ಗಗಳಿಗೆ ಕನಿಷ್ಠಾಂಶದ ವೇತನವನ್ನು ಗೊತ್ತುಪಡಿಸುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ಜಾರಿಗೆ ತರುವಂತಾಗಬೇಕೆಂದು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಉಪ ಸಮಿತಿಯು ತಯಾರಿಸಿರುವ ಚುನಾವಣಾ ಪ್ರಣಾಳಿಕೆಯಲ್ಲಿ ಸೂಚಿಸಲಾಗಿದೆ ವ್ಯವಸಾಯೇತರ ಭಾಗದಲ್ಲಿ ವರಮಾನದ ಪರಮಾವಧಿಯನ್ನು ಸಮಿತಿಯು ಪರಿಶೀಲಿಸಿ, ನಿಗದಿಯಾದ ಹಣಕ್ಕಿಂತ ಹೆಚ್ಚು ಸಂಪಾದನೆ ಮಾಡುವುದನ್ನು ತಪ್ಪಿಸಬೇಕೆಂದು ಅಭಿಪ್ರಾಯಪಟ್ಟಿದೆ

ಇಸ್ರೇಲಿನಿಂದ ೫೦ ಲಕ್ಷ ಡಾಲರ್ ಈಜಿಪ್ಟ್ ಸಾಮಗ್ರಿ ಅಪಹಾರ

ಇಸ್ರೇಲು ಈಜಿಪ್ಟಿನ ಮೇಲೆ ಆಕ್ರಮಣ ನಡೆಸಿ ಸೀನಾಯ್ ಪರ್ಯಾಯ ದ್ವೀಪದಲ್ಲಿದ್ದ ೫೦ ಲಕ್ಷ ಡಾಲರ್ ಬೆಲೆಯ ಈಜಿಪ್ಟಿನ ಯುದ್ಧ ಸಾಮಗ್ರಿಗಳನ್ನು ಅಪಹರಿಸಿತೆಂದು ವರದಿಯಾಗಿದೆ

ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆ

ಮಹಾರಾಜಾ ಕಾಲೇಜಿನ ವಿಶ್ವವಿದ್ಯಾಲಯ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫॥ ಗಂಟೆಗೆ ಎಂ ವೆಂಕಟಕೃಷ್ಣಯ್ಯನವರ ಸ್ಮಾರಕ ಅಂತರ ಕಾಲೇಜು ಕನ್ನಡ ಚರ್ಚಾ ಸ್ಪರ್ಧೆಯು ಮಂತ್ರಿ ಶ್ರೀ ಹೆಚ್ ಕೆ ವೀರಣ್ಣಗೌಡರ ಅಧ್ಯಕ್ಷತೆಯಲ್ಲಿ ಜರುಗುವುದು

ಭಾರತದ ವೈದ್ಯ ಸಂಶೋಧನಾ ಮಂಡಲಿಯ ಸಲಹಾ ಸಮಿತಿ ಸಭೆ

ಭಾರತದ ವೈದ್ಯ ಸಂಶೋಧನಾ ಮಂಡಲಿಯ ವೈಜ್ಞಾನಿಕ ಸಲಹಾ ಬೋರ್ಡು ಮತ್ತು ಸಮಿತಿಯ ವಾರ್ಷಿಕ ಸಭೆಗಳ ಆರಂಭೋತ್ಸವವು ಇದೇ ೧೪ನೇ ತಾರೀಖು ಬುಧವಾರ ಬೆಂಗಳೂರಿನ [illegible] ಭವನದಲ್ಲಿ ನೆರವೇರುವುದು. ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ಅಧ್ಯಕ್ಷತೆ ವಹಿಸುವರು ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಸ್ವಾಗತ ಭಾಷಣ ಮಾಡುವರು

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ — ಕಲ್ಪ
ಔಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಅಶೋಕ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು · ಫೋನ್ ನಂ 59
- ಭೇಟಿಯ ಕಾಲ -
ಬೆಳಗ್ಗೆ 7 30 ರಿಂದ 12-30 ಮತ್ತು
ಮಧ್ಯಾಹ್ನ 1 ರಿಂದ 7 30
ಮೇಲಿನ ಕಾರ್ಯಕ್ರಮವನ್ನು ಗಮನಿಸಿ
ಮತ್ತು ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ -- ಕಲ್ಪ
ಉಪಯೋಗಿಸಿ

ಇದು [illegible] ಶಕ್ತಿ. ಮುಪ್ಪು, ಹಸಿವು, [illegible] ನ್ಯೂರಸ್ತೇನಿಯ, [illegible], [illegible] ಮತ್ತು [illegible] ಮುಂತಾದ ರೋಗಗಳಿಗೆ [illegible] ಎಲ್ಲಾ ಸಾಮಾನ್ಯ ಹಾಗೂ [illegible] ಆರೋಗ್ಯಕ್ಕಾಗಿ [illegible] ಔಷಧಿ ಇದೊಂದೇ

NAVRATNA KALPA PHARMACY,
JULLUNDUR CITY (India)

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆಯ ಬೆಲೆ

ಬ್ರಾಂಕಾಲ್
ಉಬ್ಬಸ ಮತ್ತು ಕೆಮ್ಮು [illegible]
[illegible]
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ದಂಚಿಕೆದಾರರು
ಸತ್ಯ ಅಂಡ್ ಕೋ.,
[illegible]
11/1. [illegible]
[illegible]
ಬೆಂಗಳೂರು -2

ಂಪುಟ : [illegible]] SADHVI : WEDNESDAY 14—11—1956 ಮೈಸೂರು : ಬುಧವಾರ ೧೪—೧೧—೧೯೫೬ [ಸಂಚಿಕೆ : [illegible]

ಮಾಸ್ಕೋವಿಗೆ ಡಾಗ್ ಹ್ಯಾಮರ್‌ಷೀಲ್ಡರ ಭೇಟಿ ಸಂಭವ

ರ ಮತ್ತು ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ-ಸಮ್ಮೇಳನ

ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡಾರರಿಂದ ಆರಂಭ

ಮೈಸೂರು ೧೪

ಜಿಲ್ಲಾ ಕಾಂಗ್ರೆಸ್ ಸಮಿತಿಯ ಆಶ್ರಯ ಜಿಲ್ಲೆ ಮತ್ತು ನಗರ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವು ಬರುವ ತಿಂಗಳು ಮೊದಲ ವಾರದಲ್ಲಿ ಸೇರುವುದು. ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡಾರರು ಆರಂಭೋತ್ಸವನ್ನು ನೆರವೇರಿಸುವರು. ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು. ಸಮ್ಮೇಳನದ ಕಾರ್ಯಕ್ರಮವನ್ನು ಇದೇ ೧೬ನೇ ತಾರೀಕು ಭಾನುವಾರ ಸೇರುವ ಜಿಲ್ಲಾ ಕಾಂಗ್ರೆಸ್ಸಿನ ಕಾರ್ಯಸಮಿತಿ ಸಭೆಯಲ್ಲಿ ಗೊತ್ತುಪಡಿಸಲಾಗುವುದು. ಜಿಲ್ಲೆಯೊಳಗೆ ತಾಲ್ಲೂಕು ಸಮಿತಿಗಳು ಆ ಪ್ರದೇಶಗಳ ಅಭಿವೃದ್ಧಿಗೆ ಸಂಬಂಧಪಟ್ಟ [illegible]ಗಳನ್ನು ಪಟ್ಟಿ ಮಾಡಿಕಳುಹಬೇಕೆಂದೂ [illegible]ಳನಕ್ಕೆ ಆಹ್ವಾನಿಸಬೇಕಾದಂತಹ ಕಾಂಗ್ರೆಸ್ ಕಾರ್ಯಕರ್ತರ ವಿಳಾಸಗಳ ಪಟ್ಟಿಗಳನ್ನು [illegible] ಸಮಿತಿಗೆ ೧೫ರೊಳಗೆ ತಲಪಿಸುವಂತೆ ಕೋರಲಾಗಿದೆ

ಡ್ ಸ್ಪೀಕರ್ ಕಾನೂನು ಉಲ್ಲಂಘನೆಗೆ ದಂಡ

ತ್ರಿ ೧೧ ಗಂಟೆಯ ಮೇಲೂ ಲೌಡ್ ಸ್ಪೀಕರ್ ಹಾಕಿ ಸುತ್ತಮುತ್ತಲ ಜನರಿಗೆ ನೆಮ್ಮದಿ [illegible] ಮಾಡಿದರೆಂಬ ಕಾರಣಕ್ಕಾಗಿ [illegible] ಟೌನ್ ಹಾಲ್ [illegible]ದಲ್ಲಿರುವ [illegible] ಭವನ [illegible] ನ ಕ್ಯಾಷಿಯರ್ ಬಿ. ಕೆ. ಮೂರ್ತಿಯವರಿ[illegible] ಗರದ ದ್ವಿತೀಯ ನ್ಯಾಯಾಧೀಶರು ನೆನ್ನೆ [illegible] ದಂಡವನ್ನು ವಿಧಿಸಿದರು

ಪೂನಾ ಆರ್ಟ್ಸ್ ಸಂಘ

[illegible] ಮೊಹಲ್ಲಾದಲ್ಲಿರುವ "ಪೂನಾ ಆರ್ಟ್ಸ್" ಸಂಘದ ಜನರಲ್ ಬಾಡಿ [illegible] ಸಭೆ ಶ್ರೀ ಟಿ. ಕೆ. ಶ್ರೀಕಂಠ[illegible]ವರನ್ನು ಅಧ್ಯಕ್ಷರಾಗಿಯೂ, ಶ್ರೀ ಎಂ. ಕೃಷ್ಣಮೂರ್ತಿಯವರನ್ನು ಕಾರ್ಯದರ್ಶಿಗಳಾಗಿಯೂ, ಶ್ರೀ ಎ. ಎಸ್. [illegible]ಯವರನ್ನು ಖಜಾಂಚಿಯಾಗಿಯೂ ಚುನಾಯಿಸಲಾ[illegible] ಸಂಘದ ವಾರ್ಷಿಕೋತ್ಸವವನ್ನು ಡಿಸೆಂಬರ್ ತಿಂಗಳಲ್ಲಿ ನೆರವೇರಿಸಲು ತೀರ್ಮಾನಿಸ[illegible]ತು

ವನಂತಪುರದ ಕೋರ್ಟುಗಳಿಗೆ ವಕೀಲರ ಬಹಿಷ್ಕಾರ

[illegible] ಹೈಕೋರ್ಟಿನ ಒಂದು ಶಾಖೆಯು [illegible]ನಂತಪುರದಲ್ಲಿ ಸ್ಥಾಪಿಸಲ್ಪಡುವವರೆಗೆ [illegible] ಯಾವ ಕೋರ್ಟಿಗೂ ಅಲ್ಲಿನ ವಕೀಲ[illegible] ಹೋಗಕೂಡದೆಂದು ಮೊನ್ನೆ ನಿರ್ಧರಿ[illegible] ಜಿಲ್ಲೆಯ ಎಲ್ಲ ವಕೀಲರುಗಳೂ [illegible] ಕ್ಷರು, ಪ್ರಧಾನಿ, ಭಾರತದ ಶ್ರೇಷ್ಠ ನ್ಯಾ[illegible]ರು ಮುಂತಾದವರಿಗೆ ಈ [illegible] ರ್ಣಯವನ್ನು ಕಳುಹಿಸಿರುವರು

ಕೊಡಗಿನ ಮಾಜಿ ಮಂತ್ರಿ ಮೇಲೆ ಹೈಕೋರ್ಟಿಗೆ ಅರ್ಜಿ

ಬೆಂಗಳೂರು ೧೪

ಕೊಡಗಿನ ಸೋಮವಾರಪೇಟೆ ತಾಲ್ಲೂಕಿನ [illegible] ಗ್ರಾಮದಲ್ಲಿ ಸರ್ಕಾರದಿಂದ ಘೋಷಿಸಲಾದ ಅರಣ್ಯ ಪ್ರದೇಶದಲ್ಲಿ ೫೦ ಎಕರೆ ಜಮೀನನ್ನು ಕೊಡಗಿನ ಮಾಜಿ ಮಂತ್ರಿ [illegible] ನವರಿಗೆ ಕೊಟ್ಟಿರುವ ನ್ಯಾಯಬದ್ಧತೆಯನ್ನು ಪ್ರಶ್ನಿಸಿ ಕೊಡಗಿನ ಶ್ರೀ [illegible] ಹೈಕೋರ್ಟಿನಲ್ಲಿ [illegible]

[illegible]

ವಾರಕ್ಕೆ ಮೂರು ದಿನ ಸಾರ್ವಜನಿಕರಿಗೆ ಮುಖ್ಯ ಮಂತ್ರಿಗಳ ಭೇಟಿ

ಮುಖ್ಯ ಮಂತ್ರಿಗಳು ಈ [illegible]ಗ ಸಾರ್ವಜನಿಕರಿಗೆ ವಾರದಲ್ಲಿ ಮೂರು ದಿನಗಳವರೆಗೆ ತಮ್ಮ ಕಛೇರಿಯಲ್ಲಿ ಭೇಟಿಯಾಗುವರು. ಸೋಮವಾರ ಮತ್ತು ಗುರುವಾರಗಳಲ್ಲಿ ಮಧ್ಯಾಹ್ನ ೪ ರಿಂದ ೫ ರವರೆಗೆ ಮತ್ತು ಶನಿವಾರ ಬೆಳಿಗ್ಗೆ ೧೧ ರಿಂದ ೧೨ ರವರೆಗೆ ಭೇಟಿಯಾಗಲಾಗುವುದು. ತಮ್ಮ ನಿವಾಸದಲ್ಲಿ ಯಾರಿಗೂ ಅವರು ಭೇಟಿ ಕೊಡುವುದಿಲ್ಲ. ಭೇಟಿ ಮಾಡಬೇಕೆನ್ನುವವರು ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯವರಿಗೆ ೧ ವಾರಕ್ಕೆ ಮುಂಚೆ ಭೇಟಿಯ ಉದ್ದೇಶವನ್ನು ತಿಳಿಸಿ ಬರೆಯುವಂತೆ ಕೋರಲಾಗಿದೆ

ನಾಳಿದ್ದು ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರದ ಸಮಾಪ್ತಿ

ಸರ್ಕಾರದ ಆಶ್ವಾಸನೆ ಬಗ್ಗೆ ವಿದ್ಯಾರ್ಥಿ ಸಂಘದ ಹೇಳಿಕೆ

ಮೈಸೂರು ೧೪

ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ನಾಳಿದ್ದು ತಮ್ಮ ಮುಷ್ಕರವನ್ನು ಮುಕ್ತಾಯ ಮಾಡಿ ತರಗತಿಗಳಿಗೆ ಹಿಂದಿರುಗುವರೆಂದು ಸಂಘದ ಕಾರ್ಯದರ್ಶಿಯವರು ತಿಳಿಸಿದ್ದಾರೆ. ನೆನ್ನೆ ಕಾಲೇಜಿಗೆ ಆರೋಗ್ಯ ಮತ್ತು ವಿದ್ಯಾ ಮಂತ್ರಿಗಳು ಭೇಟಿ ಕೊಟ್ಟಾಗ ವಿದ್ಯಾರ್ಥಿಗಳು ಅವರೊಡನೆ ತಮ್ಮ ಪ್ರಾಸಂಗಿಕ [illegible] ವಿಷಯಗಳನ್ನು ಚರ್ಚಿಸಿದರು. ಸರ್ಕಾರದ ಭರವಸೆ ಮತ್ತು ಜನರಲ್ ಕಾರ್ಯ[illegible] ಎಸ್. ಚನ್ನಯ್ಯ ಮೊದಲಾದವರ ಸೂಚನೆ ಪ್ರಕಾರ ತಾವು ಮುಷ್ಕರ ಮುಕ್ತಾಯ[illegible]ವಾಗಿ ಅವರು ಸೂಚಿಸಿದ್ದಾರೆ

[illegible] ಅಗ್ರಹಾರದ ಶ್ರೀ ರಾಮ ಸೇವಾ ಸಂಘದ ಆಶ್ರಯದಲ್ಲಿ ಈ ಸಂಜೆ ೬ ಗಂಟೆಗೆ ಶ್ರೀ ಪಿ. ಆರ್. ಸುಬ್ಬರಾಮಯ್ಯನವರು ಭಕ್ತ [illegible] ಮಾಡುವರು

ಪ್ರಧಾನಿ ನೆಹರೂ

ಈ ದಿನ [illegible]

ಹಂಗೇರಿಯಲ್ಲಿ ರಷ್ಯಾ ನಾಯಕರು

ಹಂಗೇರಿಗೆ ರಷ್ಯದ ಪ್ರಥಮ ಉಪ ಪ್ರಧಾನಿ ಅನಸ್ತಾಸ್ ಮಿಕೋಯನ್ ಮತ್ತು ಕ್ರುಶ್ಚೇವರೂ ಸೇರಿ ೧೪ ಮಂದಿ ರಷ್ಯ ನಾಯಕರು ಆಗಮಿಸಿ ಅಲ್ಲಿನ ಸರ್ಕಾರದ ಮುಖಂಡರೊಡನೆ ರಷ್ಯಾ ವಿರುದ್ಧವಾಗಿ ಆ ದೇಶದ ದಂಗೆಯ ಮುಕ್ತಾಯದ ವಿಚಾರವನ್ನು ಕುರಿತು ಮಾತುಕತೆ ನಡೆಸುತ್ತಿರುವರೆಂದು ವರದಿಯಾಗಿದೆ. ಹಂಗೇರಿಯ ಮಾಜಿ ಪ್ರಧಾನಿ ನಾಗಿಯವರನ್ನು ಅಲ್ಲಿನ ಸರ್ಕಾರಕ್ಕೆ ತೆಗೆದುಕೊಳ್ಳಲು ಪ್ರಯತ್ನಗಳಾಗುತ್ತಿವೆ. ರಾಷ್ಟ್ರವ್ಯಾಪಿ ಮುಷ್ಕರವು ನಡೆಯುತ್ತಿದೆ. ಬುಡಾಪೆಸ್ಟ್ ಬಳಿ ಅಲ್ಲಲ್ಲೇ ಹೋರಾಟ ನಡೆಯುತ್ತಿದೆ.

ಕಾಂಗ್ರೆಸ್ಸನ್ನು ವಿರೋಧಿಸಿದ್ದವರಿಗೆ ಉಮೇದುವಾರಿಕೆ ಇಲ್ಲ

ಕಳೆದ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಅಧಿಕೃತ ಉಮೇದುವಾರರನ್ನು ವಿರೋಧಿಸಿದವರನ್ನು ಈ ಸಾರಿಯ ಚುನಾವಣೆಗಳಲ್ಲಿ ಕಾಂಗ್ರೆಸ್ ಉಮೇದುವಾರರಾಗಿ ತೆಗೆದುಕೊಳ್ಳಲಾಗುವುದಿಲ್ಲವೆಂದು ಅಧ್ಯಕ್ಷ ಡೇಬರ್‌ರವರು ಸೂಚಿಸಿದ್ದಾರೆ

ಗುಂಡುಕಲ್ಲು ಎತ್ತಿಹಾಕಿ ಪತ್ನಿಯ ಕೊಲೆಗಾಗಿ ೭ ವರ್ಷ ಸಜಾ

ಮೈಸೂರು ೧೪

ರಾಜಧಾನಿಯ [illegible] ರಾಮಯ್ಯ [illegible] ಕಳೆದ ಜೂನ್ ೭ ರಂದು ತನ್ನ ಹೆಂಡತಿ, [illegible] ನ್ಯಾಯವಿಚಾರಣೆ [illegible] ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಮುನಿಸ್ವಾಮಿ[illegible] ವರ್ಷ [illegible] ಶಿಕ್ಷೆಯನ್ನು ವಿಧಿಸಿದರು

ಹಂಗೇರಿಯಲ್ಲಿ ವಿಶ್ವಸಂಸ್ಥೆ ವೀಕ್ಷಕರ ತನಿಖೆಗೆ ಅವಕಾಶವಿಲ್ಲ

ಮಾಸ್ಕೋವಿಗೆ ಹ್ಯಾಮರ್‌ಷೀಲ್ಡರ ಭೇಟಿ ಸಂಭವ

ವಿಶ್ವಸಂಸ್ಥೆಯ ವೀಕ್ಷಕರು ಹಂಗೇರಿಯ ಪರಿಸ್ಥಿತಿಯ ತನಿಖೆ ನಡೆಸಲು ಹಂಗೇರಿ ಸರ್ಕಾರವು ಅವಕಾಶವನ್ನು ನಿರಾಕರಿಸಿರುವುದಾಗಿ ಗೊತ್ತಾಗಿದೆ. ಹಂಗೇರಿಯ ವಿದೇಶಾಂಗ ಸಚಿವರು ಸಂಸ್ಥೆಯ ಕೇಂದ್ರ ಕಛೇರಿಗೆ ತಂತಿ ಕಳುಹಿಸಿ ಹಂಗೇರಿ ಪರಿಸ್ಥಿತಿಯು ಒಳನಾಡಿನ ವಿಷಯಕ್ಕೆ ಸಂಬಂಧಿಸಿರುವುದಾಗಿ ತಿಳಿಸಿದ್ದಾರೆ. ಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರು ತನಿಖೆಗೆ ಅವಕಾಶದ ಬಗ್ಗೆ ಹಂಗೇರಿ ಸರ್ಕಾರಕ್ಕೂ, ರಷ್ಯಾ ಸರ್ಕಾರಕ್ಕೂ ಮನವಿ ಮಾಡಿದ್ದರು. ಹಂಗೇರಿಯು ವಿಶ್ವಸಂಸ್ಥೆಯ ನಿರ್ಣಯವನ್ನು ಉಲ್ಲಂಘಿಸಿದಂತೆ ಆ ರಾಷ್ಟ್ರಕ್ಕೆ ವಿವೇಕ ಹೇಳಲು ರಷ್ಯದ ಪ್ರಧಾನಿ ಬುಲ್ಗಾನಿನ್ನರಿಗೆ ಅವರು ವಿಶೇಷ ರೀತಿಯ ಮನವಿ ಮಾಡಿದ್ದರು

ಹಂಗೇರಿ ಸರ್ಕಾರದ ಉತ್ತರವು ಬಂದಮೇಲೆ ಹ್ಯಾಮರ್‌ಷೀಲ್ಡರು ತಮ್ಮ ಕೈರೋ ಪ್ರವಾಸವನ್ನು ಮುಂದುವರಿಸಿದ್ದಾರೆ

ಹಂಗೇರಿಯಲ್ಲಿ ನಿರ್ಬಾಧಿತ ಚುನಾವಣೆಗಳನ್ನು ಅಂತರ ರಾಷ್ಟ್ರೀಯ ಮೇಲ್ವಿಚಾರಣೆಯಲ್ಲಿ ನಡೆಸುವ ಯುಕ್ತಾಯುಕ್ತತೆಯನ್ನು ಒತ್ತಿ ಹೇಳಲು ಹ್ಯಾಮರ್‌ಷೀಲ್ಡರು ಮಾಸ್ಕೋವಿಗೂ, ನಂತರ ಸಾಧ್ಯವಾದರೆ ಬುಡಾಪೆಸ್ಟಿಗೂ ಭೇಟಿ ಕೊಡುವ ನಿರೀಕ್ಷೆಯಿದೆ

ಬೆಂಗಳೂರು ಪೌರಸಭೆಗೆ ಒಂದು ವರ್ಷ ಜೀವದಾನ

ಸ್ವಂ. ಟು. ಫೋ.] ಬೆಂಗಳೂರು ೧೩

ಇಲ್ಲಿನ ಕಾರ್ಪೊರೇಷನ್ನಿನ ಅವಧಿಯನ್ನು ಬರುವ ತಿಂಗಳಿಂದ ೧ ವರ್ಷ ಹೆಚ್ಚಿಸಿ ಸರ್ಕಾರದವರು ಈ ದಿನ ವಿಶೇಷಾಜ್ಞೆಯೊಂದನ್ನು ಹೊರಡಿಸಿದ್ದಾರೆ. ಬರುವ ತಿಂಗಳು ಪೌರಸಭೆಗೆ ಚುನಾವಣೆ ನಡೆಯಬೇಕಾಗಿತ್ತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಿತಾರ್ ೭-೧೫ ಶ್ರೀ ಟಿ. ವೆಂಕಟರಾಮಯ್ಯ ದೇವರನಾಮ ೭-೩೦ ಮ[illegible] ರಾಮಸ್ವಾಮಿ ಅಯ್ಯಂಗಾ[illegible] ಮಧ್ಯಾಹ್ನ ೧೨ ಮತ್ತು ರಾ[illegible] ಸುಶೀಲಾ [illegible] ಟಿ. ವೆಂಕಟರಾಮಯ್ಯ [illegible] ಸಂಜೆ [illegible] ಸಂಗೀತ [illegible] ಗೀತೆ [illegible] ಇಂಗ್ಲಿಷ್ ಭಾಷಣ [illegible] ಕ್ರಮ [illegible]

ಯಕ್ಷಗಾನ

[illegible] ಅಗ್ರಹಾರದ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ಈ ರಾತ್ರಿ [illegible] ಗಂಟೆಗೆ ಶ್ರೀ [illegible] ಎಂಬ ಪ್ರಸಂಗವು ನಡೆಯುತ್ತದೆ

ಭಾರತದ ಮೇಲೆ ವಿಶ್ವಸಂಸ್ಥೆ [illegible] ಕರೆ!

[illegible] ಕಾಶ್ಮೀರ ಸಮಸ್ಯೆಯನ್ನು [illegible] ವಿಶ್ವಸಂಸ್ಥೆಯಿಂದ ಭಾರತದ ವಿರುದ್ಧ [illegible] ಕಾಶ್ಮೀರದ [illegible] ಕಾಶ್ಮೀರ ಸಮಸ್ಯೆಯು [illegible] ವಿಶ್ವಸಂಸ್ಥೆಯು [illegible] ಹೇಳಿದೆ.

ಕಾಶ್ಮೀರದ ಲೋಕಸಭಾ ಸದಸ್ಯನ ಬಂಧನ

ಭಾರತ ಪಾರ್ಲಿಮೆಂಟಿನ ಕಾಶ್ಮೀರದ ಸದಸ್ಯರಾಗಿರುವ ಗುಲಾಂ ಕದೀರ್ ರವರನ್ನು [illegible] ಜಮ್ಮುವಿನಲ್ಲಿ ದಸ್ತಗಿರಿ ಮಾಡಲಾಯಿತು. ಕಾಶ್ಮೀರ ಸಂಸ್ಥಾನದ ವಿರುದ್ಧವಾಗಿ ಆಕ್ಷೇಪಣೀಯವಾದ ಸಾಹಿತ್ಯಗಳನ್ನು ಇವರು [illegible] ಹೇಳಲಾಗಿದೆ.

ನಾಗಿಯವರಿಗೆ ಟಿಟೊ ಪತ್ರ

[illegible]

ಮೈಸೂರಿಗೆ ಬೊಂಬಾಯಿ ಮತ್ತು ಹೈದರಾಬಾದಿನ ೩೦೦ ಬಸ್ಸುಗಳು

ಬೊಂಬಾಯಿನ [illegible] ಮತ್ತು ಹೈದರಾಬಾದಿನ [illegible] ಬಸ್ಸುಗಳು ೩|| ಸಾವಿರ ಕೆಲಸಗಾರರೊಡನೆ ಮೈಸೂರು ಸರ್ಕಾರದ ರಸ್ತೆ ಸಂಚಾರ ಇಲಾಖೆಗೆ ಒಪ್ಪಿಸಲ್ಪಟ್ಟಿರುವುದಾಗಿ ತಿಳಿದುಬಂದಿದೆ. ಸಂಸ್ಥಾನ ಪುನರ್ವಿಂಗಡಣೆ ಪರಿಣಾಮವಾಗಿ ಈ ವ್ಯವಸ್ಥೆಯಾಗಿದೆ.

ಕನ್ನಡ ಸಾಹಿತ್ಯ ಸಮ್ಮೇಳನ ಮುಂದಕ್ಕೆ

ಬರುವ ತಿಂಗಳು ಕಡೆ ವಾರದಲ್ಲಿ ಧಾರವಾಡದಲ್ಲಿ ನಡೆಯಬೇಕಾಗಿದ್ದ ೩೯ನೇ ಕನ್ನಡ ಸಾಹಿತ್ಯ ಸಮ್ಮೇಳನವು ಬರುವ ವರ್ಷ ಮೇ ತಿಂಗಳಿಗೆ ಮುಂದುವರಿಸಲ್ಪಟ್ಟಿದೆಯೆಂದು ಗೊತ್ತಾಗಿದೆ.

ಮೈಸೂರು ಪೇಟೆ ಧಾರಣೆ

[illegible]

[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]			
[illegible]	[illegible]	[illegible]	[illegible]			
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]			
[illegible]	[illegible]	[illegible]	[illegible]			
[illegible]	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]			
[illegible]	[illegible]	[illegible]	[illegible]	[illegible]	[illegible]	[illegible]

ರಷ್ಯದಿಂದ ಭಾರತಕ್ಕೆ ೫೫ ಕೋಟಿ ರೂ. ಸಾಲ

ಶೇಕಡ ೨|| ಯಂತೆ ಬಡ್ಡಿಯ ೫೫ ಕೋಟಿ ರೂಗಳ ಸಾಲವನ್ನು ಭಾರತಕ್ಕೆ ಕೊಡಲು ರಷ್ಯವು ಮುಂದೆಬಂದಿದೆಯೆಂದು ವರದಿಯಾಗಿದೆ. ೧೨ ವರ್ಷಗಳಲ್ಲಿ ಇದರ ತೀರುವೆಯಾಗಬೇಕೆಂದು ಹೇಳಲಾಗಿದೆ. ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿಯವರು ಮಾಸ್ಕೋವಿಗೆ ಭೇಟಿ ಕೊಟ್ಟನಂತರ ಈ ವಿಷಯದ ಪ್ರಸ್ತಾಪವಾಗಿದೆ. ರಷ್ಯದಿಂದ ಎಂಜಿನ್ ಯಂತ್ರ ಮತ್ತು ಸಾಮಗ್ರಿಗಳನ್ನು ತರಬೇಕೆಂಬ ವಿಚಾರವನ್ನು ಭಾರತವು ಶೀಘ್ರದಲ್ಲೇ ನಿರ್ಧರಿಸಲಿದೆ.

ಪಂಜಾಬು ಮಂತ್ರಿಮಂಡಲಕ್ಕೆ ೫ ಜನ ಹೆಚ್ಚು ಸಚಿವರು

ಪಂಜಾಬಿನ ಮುಖ್ಯಮಂತ್ರಿ ಕೈರಾನರು ತಮ್ಮ ಮಂತ್ರಿಮಂಡಲಕ್ಕೆ ಸರ್ದಾರ್ ಗುರುಬಚನಸಿಂಗ್ ಬಾಜ್ವಾ, ಸರ್ದಾರ್ ದರ್ಬಾರ್ ಸಿಂಗ್, ಸರ್ದಾರ್ ಹರಿಚರಣಸಿಂಗ್, ಪ್ರಬೋಧಚಂದ್ರ ಮತ್ತು ಸರ್ದಾರ್ ಪ್ರೇಮಸಿಂಗ್ ರವರನ್ನು ಸಚಿವರುಗಳಾಗಿ ತೆಗೆದುಕೊಂಡಿದ್ದಾರೆ. ಅಲ್ಲಿ ಈಗ ೧೫ ಜನ ಮಂತ್ರಿಗಳಿರುವರು.

WANTED

Young and smart English knowing assistant owning a cycle. Apply:—

C/o JAYA & Co.,
House, Lands and Finance Agents
Old Mysore Bank Building,
MYSORE

Edited, Printed and Published by
S. R. Nagarajan at Sadhvi Press
[illegible] Subbiah Road, Mysore

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವವಿಖ್ಯಾತವಾಗಿರುವ
ನವರತ್ನ—ಕಲ್ಪ
[illegible]
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
[illegible] : ಫೋನ್ ನಂ. 5[illegible]
[illegible]
ಬೆಳಿಗ್ಗೆ 7-30 ರಿಂದ 12-30 ರವರೆಗೆ
ಮಧ್ಯಾಹ್ನ 4 ರಿಂದ 7 30
[illegible]
ನವರತ್ನ — ಕಲ್ಪ
[illegible]

NAVRATNA KALPA PHARMACY,
JULLUNDUR CITY (India)

ಹಾಸನದ 44ನೇ ದನಗಳ ಪ್ರದರ್ಶನ ಮತ್ತು 7ನೇ ವಸ್ತು ಪ್ರದರ್ಶನ

ದನಗಳ ಪ್ರದರ್ಶನ ತಾ|| 1-1-1957 ರಿಂದ 7-1-1957 ರ ವರೆಗೆ
ವಸ್ತು ಪ್ರದರ್ಶನ ತಾ|| 27-12-195[illegible] ರಿಂದ 13-1-1957 ರ ವರೆಗೆ
[illegible]
[illegible] ಈ ಸಾಲು [illegible] ಅಖಿಲ ಕರ್ನಾಟಕ
[illegible] ಸ್ಪರ್ಧೆಯನ್ನು ಏರ್ಪಡಿಸಿರುತ್ತೆ
[illegible]
[illegible]
[illegible] ದಾಸಪ್ಪ, ಛೇರ್ಮನ್, ದನಗಳ ಮತ್ತು ವಸ್ತು ಪ್ರದರ್ಶನ ಸಮಿತಿ
ಎಂ. ಎಸ್. [illegible]ರಂಗಯ್ಯ, ಸೆಕ್ರೆಟರಿ, ವಸ್ತು ಪ್ರದರ್ಶನ ಸಮಿತಿ
ಹೆಚ್. ಎಂ. ಅಬ್ದುಲ್ ಹಫೀಜ್ ಮತ್ತು ಬಿ. ಹೆಚ್. ಎಂ [illegible],
ಸೆಕ್ರೆಟರಿಗಳು, ದನಗಳ ಪ್ರದರ್ಶನ ಸಮಿತಿ

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಶೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಇಂದೇ ಉಪಯೋಗಿಸಿ ನೋಡಿ
★
ಈ ಸಾಬೂನು [illegible] ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
[illegible]

VIDYA TUTORIAL COLLEGE
Dalvoy High School Buildings Mysore
The best Institute in Mysore :: Record Results every Session
*INTER:—Eng., Kan., Sans., Hindi. P. C. M., C. B. Z., H. E. L.
H. E. G., P. E. M., Commerce etc.*
*B. A., B. Sc., B.Com.—Eng. Kan., Sans., Hindi. P. C. M., C. B. Z.
H. E. P., H. E. G., P. E. M., Commerce etc*
1st D. E. — Maths.
L. C. E., L. M. E., L. E. E. — Physics & Maths
Ladies also admitted — Join at once
Enquiries 5-30 to 8 30 P. M.

CITY TUTORIAL COLLEGE, MYSORE
— The oldest & the best of its kind —
INTERMEDIATE EXAMINATION . MARCH 1957
Admissions received for the following Combinations
P. C. M., P. E. M., P. C. B., C. B. Z., H. E. L.,
ENGLISH—KANNADA & SAMSKRITA
* All Subjects for the L. C. E. 1st Year Exams of March 57
For best guidance: READ C. T. C. PUBLICATIONS

JOIN:
GLOBE TUTORIAL COLLEGE
(Sadvidya Pathasala Buildings, Mysore)
Excellent Coaching for Intermediate Students
Subjects:—English, Kannada & P. C. M.
Experienced lecturers handle classes
*Enquire between 7.30 A.M. and 10.30 A.M.
and 5.30 P.M. and 7.30 P.M.*
S. S. L. C. CLASSES IN FULL SWING

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿಯ ಪ್ರತಿಗೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೫] SADHVI : THURSDAY. 15—11—1956. ಮೈಸೂರು : ಗುರುವಾರ ೧೫—೧೧—೧೯೫೬. [ಸಂಚಿಕೆ : ೨೦೪

ಸಂಸ್ಥಾನದ ಕಛೇರಿಗಳಲ್ಲಿ ಕೆಲಸ ೧೦ ರಿಂದ ೫ ರವರೆಗೆ

…ರದಲ್ಲಿ ಮಕ್ಕಳ ದಿನಾಚರಣೆ

ಮೈಸೂರು, ೧೫

…ಧಾನಿ ನೆಹರೂರವರ ಹುಟ್ಟಿದ ಹಬ್ಬದ ಸಂಬಂಧ …ನೆನ್ನೆ ಪೌರಸಭೆಯ ಆಶ್ರಯದಲ್ಲಿ ಮಕ್ಕಳ …ಚರಣೆಯನ್ನು ನೆರವೇರಿಸಲಾಯಿತು. … ಬಾಲಕಬಾಲಕಿಯರುಗಳ ತಂಡವೊಂ… ಮೃಗಾಲಯಕ್ಕೆ ಬೆಳಗ್ಗೆ ಕರೆದೊಯ್ಯಲಾ…

…ಧ್ಯಾಹ್ನ ಟೌನ್ ಹಾಲ್ ಮೈದಾನದಲ್ಲಿ ನ… ಸಮಾರಂಭದಲ್ಲಿ ನಾನಾ …ಶಾಲೆಗಳ …ಶಾಲೆಗಳ ಮಕ್ಕಳ ವ್ಯಾಯಾಮ ಪ್ರದ…, ಲೆಜಿಂ ಮತ್ತು ಕ್ರೀಡೆಗಳು ಆದುವು. …ನೆ ಕಾಟುಬಲವನಕು ವ್ಯಾಯಾಮ ಪ್ರದ… ಮಾಡಿದರು. ಪೌರಸಭಾಧ್ಯಕ್ಷರು, ಡಿ. … ಶ್ರೀ ವಾಸುದೇವಯ್ಯ ಮತ್ತು ಜಿಲ್ಲಾ ವಿ… …ಧಿಕಾರಿಗಳಾದ ಶ್ರೀ ಶ್ರೀರಂಗರಾಜುರವರು …ಷಣ ಮಾಡಿ, ಮಕ್ಕಳು ಪ್ರವರ್ಧ…ಕ್ಕೆ ಬರಬೇಕಾದರೆ ಶಿಸ್ತು ಮತ್ತು ವಿಧೇಯ…ನ್ನು ಪಾಲಿಸಬೇಕೆಂದೂ, ದೇಶ ಪ್ರೇಮ… ರೂಢಿಸಬೇಕೆಂದೂ ಹೇಳಿದರು. ಬಾಡ…ಕುಗಳು ಆದುವು.

…ಹಾರಾಜರ ಶ್ರೇಯಃಪ್ರಾರ್ಥನೆ

…ಸೂರು ಅರಮನೆಯ ಅವಸರದ ಹೋಬಳಿ… …ಗಾ ಸಂಘದವರು ಶ್ರೀಮನ್ಮಹಾರಾಜ… …ಶ್ರೇಯಃಪ್ರಾರ್ಥನೆಯನ್ನು ಶ್ರೀ ತ್ರಿನಯನೇಶ್ವರ …ದೇವಸ್ಥಾನದಲ್ಲಿ ಮೊನ್ನೆ ನೆರವೇರಿಸಿದ… ದರ್ಬಾರ್ ಬಕ್ಷಿ ಶ್ರೀ ಹೆಚ್. ಎಲ್. ದೇ… …ಶೆ ಅರಸ್‌ರವರು ದಯಮಾಡಿಸಿ …ದವನ್ನು ಸ್ವೀಕರಿಸಿದರು. …ಮಾ ಕೈಲ್ಯಾಣ ಮಹೋದಯ… ವಿ… …ಪ್ರಾರ್ಥನೆಯಾದನಂತರ ದರ್ಬಾರ್ ಬ… …ವರು ಹಿಂದೂ-ಮುಸ್ಲಿಂ ಐಕ್ಯತೆಯ ವಿಷ… …ಗಿ ಭಾಷಣ ಮಾಡಿದರು. ಮುಸ… …ಸಿಡೆಂಟರಾದ ಡಾಕ್ಟರ್ ಸಿದ್ದಿಕ್ ಷರೀಫ್ …ವಂದನೆಯನ್ನರ್ಪಿಸಿದರು. ಸಂಜೆ ಶ್ರೀ ತ್ರಿ…ನೇಶ್ವರಸ್ವಾಮಿಯವರಿಗೆ ರುದ್ರಾಕ್ಷಿ ಮಂಟ…ಪದ ಸೇವೆ ನಡೆಯಿತು.

ಹರಿಕಥೆ

…ಂತಿ ದಿವಸ ಕಾಳಮ್ಮನ ಗುಡಿ ಬೀದಿ …ರಾಜೇಶ್ವರಿ ರಾಮಲಿಂಗೇಶ್ವರ ದೇವಸ್ಥಾನ… …ವೃಂದಾವನೋತ್ಸವ ಪ್ರಯುಕ್ತ ಈ ಸಂಜೆ …ಗೆ ಕುಮಾರಿ ಶ್ರೀ ಕೆ. ಯಶೋದಮ್ಮನ… …ಶ್ರೀ ಕೃಷ್ಣ ಗಾರುಡಿ ಎಂಬ ಹರಿಕಥೆಯು …ಪ್ರೊಫೆಸರ್ ಛೇರ್ಮನ್ ಶ್ರೀ ಎಸ್. …ಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಗಾಂಧಿ ವ್ಯಾಸಂಗ ಗೋಷ್ಠಿ

…ಂಧಿ ವಿಚಾರ ಪರಿಷತ್ತಿನ ನಗರ ಶಾಖೆ…ಯದಲ್ಲಿ ನಾಳೆ ಸಂಜೆ ೫-೩೦ಕ್ಕೆ ಗಾಂ… …ಯಲ್ಲಿ ಜೀವನದ ಮೂಲ ಮೌಲ್ಯಗಳ… ವಿಷಯಕ್ಕೆ ಸಂಬಂಧಿಸಿದ ವ್ಯಾಸಂಗಗೋ… …ರಮಾವಿಲಾಸ ಅಗ್ರಹಾರದ ಶ್ರೀ … …ಸುಬ್ರಹ್ಮಣ್ಯ ಅಯ್ಯರ್‌ರವರ ಮನೆಯಲ್ಲಿ …ಪರಿಷತ್ತಿನ ಕಛೇರಿಯಲ್ಲಿ ನಡೆಯುತ್ತದೆ.

ಮೈಸೂರಿಗೆ ಸೇರಬೇಕಾದ ಉಳಿದ ಕನ್ನಡ ಭಾಗಗಳ ಪ್ರಶ್ನೆ

ಕಂದಾಯ ಮಂತ್ರಿ ವೀರಣ್ಣಗೌಡರ ಭಾಷಣ

ಮೈಸೂರು ೧೫

ಅಖಿಲ ವಿಶ್ವವಿದ್ಯಾಲಯದ ಪತ್ರಿಕೋದ್ಯಮ ಸಂಘದ ಆಶ್ರಯದಲ್ಲಿ ನೆನ್ನೆ ನಡೆದ ಚರ್ಚಾ ಕೂಟದಲ್ಲಿ ಕಂದಾಯ ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ಅಧ್ಯಕ್ಷಭಾಷಣ ಮಾಡಿ, ಮೈಸೂರಿಗೆ ಸೇರಬೇಕಾದ ಹಲವಾರು ಕನ್ನಡ ಭಾಗಗಳ ವಿಷಯವನ್ನು ಪ್ರಾದೇಶಿಕ ಮಂಡಲಿಯಲ್ಲಿ ಪ್ರಸ್ತಾಪಿಸಿ ನಿರ್ಧಾರವನ್ನು ಕೈಗೊಳ್ಳಬಹುದೆಂದು ಹೇಳಿದರು. ಚರ್ಚೆಯಲ್ಲಿ ಕೇಳಲಾದ ಪ್ರಶ್ನೆಗಳಿಗೆ ಅವರು ಉತ್ತರವಿತ್ತು ಮೇಲ್ಕಂಡಂತೆ ತಿಳಿಸಿದರಲ್ಲದೆ, ತಾವು ಮೈಸೂರು ಐಕ್ಯದ ವಿರೋಧಿಗಳಾಗಿದ್ದರೂ, ಆದರೆ ಹಿರಿಯ ನಾಯಕರು ಸಮಗ್ರ ದೇಶದ ದೃಷ್ಟಿಯಿಂದ ಈ ಬಗ್ಗೆ ನಿರ್ಧಾರ ಕೈಗೊಂಡು ಪಾರ್ಲಿಮೆಂಟು ಅದ್ಕೆ ರಾಗಿ ತನ್ನ ತೀರ್ಮಾನ ಕೊಟ್ಟಮೇಲೆ ಎಲ್ಲರೂ ತಲೆಬಾಗಬೇಕೆಂದೂ ಅವರು ನುಡಿದರು.

ಪ್ರಾರಂಭದಲ್ಲಿ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಸ್ವಾಗತ ಭಾಷಣ ಮಾಡಿದರು. ಚರ್ಚೆಗಿಂತ ಶಿಸ್ತು ಚೆನ್ನ ಎಂಬುದು ಚರ್ಚಾ ವಿಷಯವಾಗಿತ್ತು. ಭಾಷಣಕಾರರಾದ ಆರು ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಬಹುಮಾನಗಳನ್ನು ಹಂಚಲಾಯಿತು. ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಈಜಿಪ್ಟ್ ಮತ್ತು ಹಂಗೇರಿಯಿಂದ ವಿದೇಶೀ ಪಡೆ ವಾಪಸಾಗಬೇಕು

ಕೊಲಂಬೊ ರಾಷ್ಟ್ರಗಳ ಜಂಟಿ ಹೇಳಿಕೆ

ಬರ್ಮ, ಸಿಂಹಳ, ಇಂಡೋನೇಷ್ಯ ಮತ್ತು ಭಾರತಗಳ ಪ್ರಧಾನಿಗಳು ನೆನ್ನೆ ಜಂಟಿ ಹೇಳಿಕೆಯಿತ್ತು, ಈಜಿಪ್ಟಿನಲ್ಲಿ ಆಕ್ರಮಣ ನಡೆಸಿರುವ ಆಂಗ್ಲೋ–ಫ್ರೆಂಚ್ ಮತ್ತು ಇಸ್ರೇಲಿ ಸೈನ್ಯಗಳ ವಾಪಸಾತಿಗೆ ಸರತ್ತು ಹಾಕುವುದನ್ನು ಖಂಡಿಸಿದ್ದಾರೆ. ವಿಶ್ವಸಂಸ್ಥೆಯ ನಿರ್ಣಯವನ್ನು ಪೂರ್ಣವಾಗಿ ಕಾರ್ಯಗತಗೊಳಿಸಬೇಕೆಂದೂ, ಈಜಿಪ್ಟಿನಿಂದ ಎಲ್ಲಾ ವಿದೇಶೀ ಸೈನ್ಯಗಳೂ ವಾಪಸಾಗಬೇಕೆಂದೂ ಅವರು ಸೂಚಿಸಿದ್ದಾರೆ. ಹಂಗೇರಿಗೆ ರಷ್ಯಾ ಸೈನ್ಯವನ್ನು ಪುನಃ ಕಳುಹಿಸಿದುದಕ್ಕಾಗಿ ವಿಷಾದಿಸಿ, ಸೈನ್ಯಗಳು ಬೇಗನೆ ವಾಪಸಾಗಬೇಕೆಂದೂ, ಹಂಗೇರಿ ಜನರು ತಮ್ಮ ಭವಿಷ್ಯವನ್ನು ಮತ್ತು ತಮ್ಮ ಸರ್ಕಾರದ ಸ್ವರೂಪವನ್ನೂ ಹೊರಗಿನವರ ಪ್ರವೇಶವಿಲ್ಲದೆ ನಿರ್ಧಾರ ಮಾಡಿಕೊಳ್ಳಲು ಅವಕಾಶ ಹೊಂದಬೇಕೆಂದೂ ಸೂಚಿಸಿದ್ದಾರೆ.

ಪೋಲೀಸು ಲಾಕಪ್ಪಿನಲ್ಲಿ ಶವ

ವಿದ್ಯುಚ್ಛಕ್ತಿ ಉಪಕರಣಗಳ ಕಳುವಿಗಾಗಿ ವಿಚಾರಣೆಗೆ ಗುರಿಯಾಗಿರುವ ಚಿಕ್ಕರಾಮಯ್ಯ ಎಂಬುವನು ಕೋಲಾರ ಜಿಲ್ಲೆಯ ಮಾಸ್ತಿ ಪೋಲೀಸು ಲಾಕಪ್ಪಿನಲ್ಲಿ ಕತ್ತಿಗೆ ನೇಣುಹಾಕಿಕೊಂಡು ಮೃತನಾಗಿದ್ದಾನೆ. ರೆವಿನ್ಯೂ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಲಕ್ಷ್ಮೀನರಸಯ್ಯರವರು ಮಹಜರು ನಡೆಸಿದರು. ಅವನು ಆತ್ಮಹತ್ಯೆ ಮಾಡಿಕೊಂಡಿರಬಹುದೆಂದು ತಿಳಿಸಲಾಗಿದೆ.

ಸರ್ಕಾರಿ ಕಛೇರಿಗಳಲ್ಲಿ ಕೆಲಸದ ಕಾಲ ೧೦ರಿಂದ ೫

ಸಂಸ್ಥಾನ ಸರ್ಕಾರದ ಆಜ್ಞೆ

ಸ್ವಂ. ಪ. ವರದಿ] ಬೆಂಗಳೂರು ೧೫

ಸಂಸ್ಥಾನದ ಎಲ್ಲಾ ಸರ್ಕಾರಿ ಕಛೇರಿಗಳಲ್ಲೂ ಕೆಲಸದ ಕಾಲವು ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೫ರವರೆಗೆ ಇರುವಂತೆ ನಿಗದಿ ಮಾಡಿ ಸರ್ಕಾರದವರು ಆಜ್ಞೆ ಹೊರಡಿಸಿರುತ್ತಾರೆ. ಮಧ್ಯದಲ್ಲಿ ಅರ್ಧ ಗಂಟೆ ಕಾಲ ವಿರಾಮವಿರುವುದು. ಈ ಬಗ್ಗೆ ಹೊರಡಿಸಲಾಗಿರುವ ಸೂಚನೆಯಲ್ಲಿ ನೌಕರರು ಕಾಲದ ಅವಧಿಯನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ತಿಳಿಸಲಾಗಿದೆ.

ದೆಹಲಿಯಲ್ಲಿ ನೆಹರೂರವರ ವರ್ಧಂತಿ

ದೆಹಲಿಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ತಮ್ಮ ೬೭ನೇ ವರ್ಷ ವರ್ಧಂತಿಗಾಗಿ ಏರ್ಪಡಿಸಲಾಗಿದ್ದ ಮಕ್ಕಳ ದಿನಾಚರಣೆಯಲ್ಲಿ ಭಾಗವಹಿಸಿದ್ದರು. ೧ ಲಕ್ಷ ಬಾಲಕಬಾಲಕಿಯರು ನೆಹರೂ ಜಿಂದಾಬಾದ್ ಎಂದು ಕೂಗಿದರು. ಸಾಮೂಹಿಕ ವ್ಯಾಯಾಮ, ನೃತ್ಯ ಮತ್ತು ನಾಡಗೀತೆಗಳು ಆದುವು. ಶಾಂತಿಯ ಸಂಕೇತ ಪಾರಿವಾಳವನ್ನು ನೆಹರೂರವರು ಹಾರಿಸಿದರು. ಅವರ ಹುಟ್ಟು ಹಬ್ಬದ ಗುರುತಿಗಾಗಿ ಮಕ್ಕಳು ೬೭ ಪಾರಿವಾಳಗಳನ್ನು ಹಾರಿಸಿದರು. ಈ ಸಮಾರಂಭಕ್ಕೆ ಇಂಡೋನೇಷ್ಯ, ಬರ್ಮ ಮತ್ತು ಸಿಂಹಳಗಳ ಪ್ರಧಾನಿಗಳೂ; ನಾನಾ ರಾಯಭಾರಿಗಳೂ ಆಗಮಿಸಿದ್ದರು. ನಂತರ ನೆಹರೂರವರಿಗೆ ಒಂದು ಟೇಬಲ್ ಲ್ಯಾಂಪ್, ರಾಮೇಶ್ವರದ ಚಿಪ್ಪುಗಳಿಂದ ಮಾಡಿದ ಹೂವಿನ ಪಾತ್ರೆ ಮತ್ತು ದಂತದ ಟ್ರೇಗಳನ್ನು ಬಹುಮಾನವಾಗಿ ಕೊಡಲಾಯಿತು.

ಭದ್ರಾವತಿ ಕಾರ್ಖಾನೆ ಕಾರ್ಮಿಕರಿಂದ ೫ ವರ್ಷ ಕೈಗಾರಿಕಾ ಶಾಂತಿ

ಭದ್ರಾವತಿಯ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಯ ಕಾರ್ಮಿಕರ ಸರ್ವ ಸದಸ್ಯರ ಸಭೆಯು ಮೊನ್ನೆ ನಡೆದು ಕಾರ್ಮಿಕರ ೪೦ ಬೇಡಿಕೆಗಳ ಸಂಬಂಧವಾಗಿ ಆಡಳಿತದವರು ಕೊಡಲು ಸಿದ್ಧವಾದ ಸೌಲಭ್ಯಗಳನ್ನು ಒಪ್ಪಿ ೫ ವರ್ಷ ಕಾಲ ಮುಷ್ಕರ ನಡೆಸಬಾರದೆಂಬ ಕೈಗಾರಿಕಾ ಶಾಂತಿಗೆ ಒಪ್ಪಿರುತ್ತಾರೆ

ಕಾವ್ಯ ವಾಚನ

ಜಯನಗರದ ಶ್ರೀ ಪೌರಾಣಿಕ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ಈ ಸಾಯಂಕಾಲ ೬-೩೦ ಗಂಟೆಗೆ ಉತ್ಥಾನ ದ್ವಾದಶಿ ಪ್ರಯುಕ್ತ ಶ್ರೀಮತಿ ವಸುಂಧರಾದೇವಿ ಮತ್ತು ಬಿ. ಉಮಾದೇವಿಯವರಿಂದ ತುಳಸಿಮಹಿಮೆ ಕಾವ್ಯ ವಾಚನವೂ, ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವೂ ನಡೆಯಲಿದೆ.

ಕೊಕ್ಕೊ ಪಂದ್ಯ

ಮಹಾರಾಜಾ ಹೈಸ್ಕೂಲು ಮತ್ತು ಬನುಮಯ್ಯ ಶಾಲೆಗಳಿಗೆ ನೆನ್ನೆ ನಡೆದ ಸಿಲ್ವರ್ ಜೂಬಿಲಿ ಅಂತರ ಪ್ರೌಢಶಾಲಾ ಕೊಕ್ಕೊ ಪಂದ್ಯದಲ್ಲಿ ಮಹಾರಾಜಾ ಶಾಲೆಯವರು [illegible] ಪಾಯಿಂಟುಗಳಿಂದ ಗೆದ್ದರು

ಸಂಸ್ಥಾನದ ನೌಕರರಿಗೂ ಕೇಂದ್ರದ ಮಟ್ಟದಂತೆ ತುಟ್ಟಿಭತ್ಯ

ಸರ್ಕಾರದವರ ತೀವ್ರ ಪರ್ಯಾಲೋಚನೆ

ಸ್ವಂ. ಪ. ವರದಿ] ಬೆಂಗಳೂರು ೧೫

ನೌಕರರ ತುಟ್ಟಿ ಭತ್ಯವನ್ನು ಕೇಂದ್ರ ಸರ್ಕಾರದ ನೌಕರರ ಮಟ್ಟಕ್ಕೆ ಹೆಚ್ಚಿಸುವ ವಿಷಯವನ್ನು ಮೈಸೂರು ಸರ್ಕಾರದವರು ತೀವ್ರವಾಗಿ ಪರಿಶೀಲಿಸುತ್ತಿರುವರೆಂದು ಗೊತ್ತಾಗಿದೆ

○ ನೂತನ ಶಾಸನಸಭಾಧಿವೇಶನವು ಡಿಸೆಂಬರ್ ೧೯ನೇ ತಾರೀಖು ಸೇರುವಂತೆ ಹಂಗಾಮಿಯಾಗಿ ಗೊತ್ತುಪಡಿಸಲಾಗಿದೆ.

ಬರುವ ತಿಂಗಳು ಅಮೆರಿಕಾಕ್ಕೆ ನೆಹರೂ ಭೇಟಿ

ಪ್ರಧಾನಿ ನೆಹರೂರವರು ಬರುವ ಆರು ವಾರಗಳಲ್ಲಿ ಅಮೆರಿಕಕ್ಕೆ ಭೇಟಿ ಕೊಡುವರೆಂದು ವಾಷಿಂಗ್ಟನ್ನಿನಲ್ಲಿರುವ ಭಾರತದ ರಾಯಭಾರಿ ಜಿ. ಎಲ್. ಮೆಹತಾರವರು ತಿಳಿಸಿರುತ್ತಾರೆ. ನೆಹರೂರವರು ಐಸೆನ್‌ಹೋವರರನ್ನು ಭೇಟಿ ಮಾಡಲಿರುವರು.

ಜಾರ್ಡಾನಿನಲ್ಲಿ ಎಣ್ಣೆ ಪೈಪು ಲೈನಿನ ಆಸ್ಫೋಟನ

ಇರಾಕಿನ ಕಿರ್ಕುಕ್ ಎಂಬಲ್ಲಿಂದ ಇಸ್ರೇಲಿನ ಹೈಫಾವರೆಗೆ ಹಾಕಿರುವ ಎಣ್ಣೆ ಪೈಪು ಲೈನನ್ನು ಉತ್ತರ ಜಾರ್ಡಾನಿನಲ್ಲಿ ರಾತ್ರಿಯಲ್ಲಿ ಸಿಡಿಸಿರುವುದಾಗಿಯೂ, ಬಹಳ ದೂರದವರೆಗೂ ಜ್ವಾಲೆಯು ಹರಡಿ ಎಣ್ಣೆಯು ಸುರಿದುಹೋಗುತ್ತಿರುವುದಾಗಿಯೂ ವರದಿಯಾಗಿದೆ.

ಮೈಸೂರು ತಲಚೇರಿ ರೈಲು ಮಾರ್ಗ

ಮೈಸೂರು-ತಲಚೇರಿಗಳ ನಡುವೆ ರೈಲು ಮಾರ್ಗದ ಇಂಜನಿಯರಿಂಗ್ ಸರ್ವೆಯನ್ನು ನೆನ್ನೆ ತಲಚೇರಿಯಿಂದ ಆರಂಭಿಸಲಾಯಿತು.

ಮಾದರಿ ಪಾರ್ಲಿಮೆಂಟ್ ಚುನಾವಣೆ

ಮಹಾರಾಜಾ ಕಾಲೇಜಿನ ಪಾರ್ಲಿಮೆಂಟರಿ ಕ್ಲಬ್ಬಿನ ಆಶ್ರಯದಲ್ಲಿ ಮಾದರಿ ಪಾರ್ಲಿಮೆಂಟ್ ಚುನಾವಣೆಯು ಶ್ರೀ ಚಲುವರಾಜ್‌ರವರ ನೇತೃತ್ವದಲ್ಲಿ ನಡೆದು ವಿವಿಧ ಪಕ್ಷಗಳ ಅಧಿಕಾರ ವರ್ಗಗಳ ಚುನಾವಣೆಗಳು ಆದುವು. ಕಾಂಗ್ರೆಸ್ ಪಕ್ಷಕ್ಕೆ ಶ್ರೀಗಳಾದ ಜೆ. ಶಂಕರೇಗೌಡ, ಎ. ಸಿ. ಶ್ರೀಕಂಠಯ್ಯ ಮತ್ತು ಎಚ್. ಚಿಕ್ಕಲಿಂಗೇಗೌಡ; ಕಮ್ಯೂನಿಸ್ಟ್ ಪಕ್ಷಕ್ಕೆ ಶ್ರೀಗಳಾದ ಟಿ. ರಾಮಕೃಷ್ಣರೆಡ್ಡಿ, [illegible] ಎಚ್. [illegible] ಮತ್ತು ಬಿ. ವೈ. [illegible]ಕಂಠರಾಜ್; ಪಿ. [illegible] ಪಿ.ಗೆ ಶ್ರೀಗಳ್ [illegible], ಸಿ. ವೀರಬಸವಣ್ಣ, ಎಸ್. ಎಸ್. ಚಂದ್ರಶೇಖರಯ್ಯ ಮತ್ತು ಬಿ. ಸಿ. [illegible] ಮತ್ತು ಸಮಾಜವಾದಿ ಪಕ್ಷಕ್ಕೆ ಶ್ರೀಗಳಾದ ಕ್ರಿಸ್ಟೋಫರ್, [illegible], ಎಂ. ಎಸ್. [illegible] ಮತ್ತು ಕೆ. ಜಿ. [illegible] ಕ್ರಮವಾಗಿ ನಾಯಕ, ಉಪನಾಯಕ ಮತ್ತು ವಿಪ್‌ಗಳಾಗಿ ಆರಿಸಲ್ಪಟ್ಟರು. ಈ ಮಾದರಿ ಪಾರ್ಲಿಮೆಂಟು ಈ ತಿಂಗಳು ಕಡೆಯ ವಾರದಲ್ಲಿ ನಡೆಯುವುದು.

ಆಲ್ಜೀರಿಯಕ್ಕೆ ಮಿತ ಸ್ವಾತಂತ್ರ್ಯ

ಆಲ್ಜೀರಿಯಾದಲ್ಲಿ ದಂಗೆ ಸ್ತಂಭನಕ್ಕಾಗಿ ಹೋರಾಟ ನಡೆಸುತ್ತಿರುವವರೊಡನೆ ಸಂಧಾನ ನಡೆಸಲು ಫ್ರಾನ್ಸ್ ಸಿದ್ಧವಾಗಿರುವುದೆಂದು ಫ್ರಾನ್ಸಿನ ಪ್ರಧಾನ ಮಂತ್ರಿಯವರು ತಿಳಿಸುತ್ತಾರೆ. ಸೀಸ್‌ಫೈರ್ ಆದನಂತರ ಆಲ್ಜೀರಿಯದ ಚುನಾಯಿತ ಪ್ರತಿನಿಧಿಗಳೊಡನೆ ಸಂಧಾನ ನಡೆಸಲಾಗುವುದೆಂದೂ ಅವರು ಹೇಳಿರುವರು. ಆಲ್ಜೀರಿಯಕ್ಕೆ ಮಿತವಾದ ಸ್ವಾತಂತ್ರ್ಯವೀಯಬೇಕಾಗುವುದೆಂದೂ, ಎರಡು ರಾಷ್ಟ್ರಗಳಿಗೂ ಈಗಿರುವ ಸಂಬಂಧವು ಮುಂದುವರಿಯಬೇಕಾದುದೆಂದೂ ಅವರು ನುಡಿದಿರುವರು.

SREE GANESH
TALKIES
THE CREATURE
WALKS AMONG US
(To-morrow last day)

From 17-11-56
The *Unexpected* from
Alfred Hitchcock
THE TROUBLE
WITH HARRY
(Technicolor & Vistavision)

WANTED

Young and smart English knowing assistant owning a cycle. Apply:—

C/o JAYA & Co.,
House, Lands and Finance Agents
Old Mysore Bank Building,
MYSORE

WANTED

Immediately a spacious and decent accommodation *(upstairs) in Asoka Road or in* the Road leading to Mandi Police Station from Asoka Road. Contact:-V. Venkatesh, 653. Kashipathy Agrahar, near Lakshmi Talkies, Mysore.

ರಷ್ಯಕ್ಕೆ ಅಟ್ಲಾಂಟಿಕ್ ರಾಷ್ಟ್ರಗಳ ಸೇನಾನಿಯ ಎಚ್ಚರಿಕೆ

ರಷ್ಯವು ರಾಕೆಟ್ ಅಸ್ತ್ರಗಳನ್ನು ಪ್ರಯೋಗಿಸಿದರೆ ಪಶ್ಚಿಮ ರಾಷ್ಟ್ರಗಳು ಅದಕ್ಕೆ ಪ್ರತೀಕಾರ ಮಾಡುವುದಾಗಿ ಅಟ್ಲಾಂಟಿಕ್ ಕೂಟ ರಾಷ್ಟ್ರ ಸೇನೆಗಳ ಪ್ರಧಾನಾಧಿಕಾರಿಯವರು ಎಚ್ಚರಿಕೆ ಯಿತ್ತಿರುವರು.

ವಿವಾಹ ಮಹೋತ್ಸವ

ಗಗೇಶ್ವರಿಯ ಶ್ರೀ ಅನಂತಕೃಷ್ಣ ಅಯ್ಯರ್‌ರವರು ತಮ್ಮ ಸಹೋದರ ಶ್ರೀ ಪರಶುರಾಮ ಅಯ್ಯರ್‌ರವರ ಕುಮಾರಿ ಸೌ|| ಲಲಿತಾಂಬಾಳ್‌ರವರನ್ನು ನೀಲಗಿರಿಯಲ್ಲಿರುವ ಪ್ಲಾಂಟರ್ ಶ್ರೀ ಕೆ. ವಿ. ಸುಂದರಂ ಅಯ್ಯರ್‌ರವರ ಕುಮಾರ ಶ್ರೀ ಕೆ. ಎಸ್. ಬಾಲಸುಬ್ರಹ್ಮಣ್ಯಂರವರಿಗೆ ಕೊಟ್ಟು ನಮ್ಮ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ಜೀವನದ ಹರ್ಷವನ್ನು ಸವಿಯಿರಿ

ಹೆಂಗರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ವೀರ್ಯ, ದೇಹದಾರ್ಢ್ಯ ಮತ್ತು ಲವಲವಿಕೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬುದು ಜೀವನದ ಮಹತ್ತರವಾದ ಆಶೆ. ಮನುಷ್ಯ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿಗಳು ಷಂಡತ್ವ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ, ಹಿಸ್ಟೀರಿಯ, ಗೂರಲುರೋಗ, ಮಾರ್ಕ ವಾಯು, ಅಂಡ ವಾಯು ಮತ್ತು ಎಲ್ಲ ವಿಧವಾದ ಚರ್ಮ ಮೂತ್ರ ರೋಗಗಳಿಗೂ ಕಾರಣವಾಗಿವೆ. ಇವುಗಳನ್ನು ಕೂಡಲೆ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ|| ರಾಜಾರವರನ್ನು (ಲೈಂಗಿಕ ತಜ್ಞರು) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ. ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಇತರ ವ್ಯಾಧಿಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು. ನೂರಕ್ಕೆ ನೂರು ಖಾತರಿ ಕೊಡಲಾಗುವುದು.

ಅವರ ಸಲಹೆ ಪಡೆಯುವುದರಿಂದ ಹೊಸ ಜೀವನವನ್ನು ಪಡೆಯಬಹುದು. ಚಿಕಿತ್ಸೆಗಳನ್ನು ಗೌಪ್ಯವಾಗಿಡಲಾಗುವುದು. ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿ:—

ರಾಜಾ ಮೆಡಿಕಲ್ ಹಾಲ್,
ಲೇನ್ ನಂ. 1-745. ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ ಬಲಗಡೆ ಮೊದಲನೇ ಕಟ್ಟಡ.)
ಮೈಸೂರು

ಚಾಮುಂಡೇಶ್ವರಿ ಟಾಕೀಸ್
ತಾ|| 16—11—56 ರಿಂದ : ದಿನವಹಿ 3 ಆಟಗಳು
ವಿಜಯಾ ಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ ★ ಮಿಸ್ಸಿಯಮ್ಮ
ನಟವರ್ಗ :- ಸಾವಿತ್ರಿ, ಜಮುನ, ಆರ್. ಗಣೇಶನ್, ತಂಗವೇಲು
ಸಾರಂಗಪಾಣಿ ಮುಂತಾದವರು

ಒಲಂಪಿಯಾ ಟಾಕೀಸ್
16-11-56 ರಿಂದ : : ಅಮೋಘ ಪ್ರಾರಂಭ
ನವಕೇತನರವರ ಹಿಂದಿ ಚಿತ್ರ ★ ಫನ್ ಟೂಷ್
ಪಾತ್ರ: ದೇವಾನಂದ್, ಶೀಲಾರಮಣಿ, ಕೆ. ಎನ್. ಸಿಂಗ್ ಮತ್ತು ಕುಂಕುಂ
ನಿರ್ದೇಶನ: ಚೇತನಾನಂದ್ — ಸಂಗೀತ: ಎಸ್. ಡಿ ಬರ್ಮನ್

ಪ್ರಭುದೇವಾ ಥಿಯೇಟರ್
(ಸದ್ವಾ ಟಾಕೀಸ್)
15-11-56ನೇ ಗುರುವಾರದಿಂದ : ಅಮೋಘ 6 ನೆಯ ವಾರ
ವಿಶ್ವಕಲಾರವರ ಕನ್ನಡ ಚಿತ್ರ ★ ಓಹಿಲೇಶ್ವರ
ಕರ್ನಾಟಕ ಫಿಲಂಸ್ ರಿಲೀಸ್

ಕಡೂರಿನಲ್ಲಿ ೩೦ ಸಾವಿರ ರೂ. ಚಿನ್ನ, ಪ್ರೋನೋಟು ಕಳುವು

ಕಡೂರಿನ ಪ್ರಸಿದ್ಧ ಲೇವಾದೇವಿಗಾರರಾದ ಶಿವನಾಜಿ ಡೋಲಾಜಿ ಎಂಬ ವರ್ತಕರ ಮನೆಗೆ ಕಳೆದ ಸೋಮವಾರ ರಾತ್ರಿ ಯಾರೋ ಕಳ್ಳರು ಬೆಂಚು ತೆಗೆದು ನುಗ್ಗಿ ಅವರ ಅಂಗಡಿಯ ಟೇಬಿನಲ್ಲಿದ್ದ ಬೀಗದಕೈಗಳಿಂದ ಕಬ್ಬಿಣದ ಪೆಟ್ಟಿಗೆ ಬಾಗಿಲನ್ನು ತೆಗೆದು ೩೫ ಸಾವಿರ ರೂ ಬೆಲೆಯ ಬಂಗಾರದ ಸಾಮಾನುಗಳನ್ನೂ, ಅಷ್ಟೇ ಮೊಬಲಗಿನ ಪ್ರೋನೋಟುಗಳನ್ನೂ ಅಪಹರಿಸಿಕೊಂಡುಹೋಗಿರುವುದಾಗಿ ವರದಿಯಾಗಿದೆ. ದೊಡ್ಡ ಪೆಟ್ಟಿಗೆಯನ್ನು ತಿರುವಿ ಹುಡಿ ಮಾಡಿ ಅದರೊಳಗೆ ಇಳಿದುಬಂದಿದ್ದರೆಂದು ಹೇಳಲಾಗಿದೆ. ಪೆಟ್ಟಿಗೆಯಲ್ಲಿದ್ದ ಬೆಳ್ಳಿ ಸಾಮಾನುಗಳನ್ನು ಕಳ್ಳರು ಮುಟ್ಟಿಲ್ಲ

ಗೃಹಕೃತ್ಯದ ನೋಟೀಸು

ಮೈಸೂರು ಜಿಲ್ಲಾ ಗುಂಡ್ಲುಪೇಟೆ ಟವನ್ನಿನಲ್ಲಿರುವ ಉಸ್ಮಾನ್‌ಖಾನ್ ಸಾಹೇಬರ ಮಗ ಜಿ.ಓ. ಮಜೀದ್‌ಖಾನ್ ಈ ಮೂಲಕ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:— ನನ್ನ ತಂದೆ ಉಸ್ಮಾನ್‌ಖಾನ್ ಸಾಹೇಬರಿಗೆ 85 ವರ್ಷಕ್ಕೂ ಮೀರಿದಾಗ ವಯಸ್ಸಾಗಿರುತ್ತೆ. ಇವರು ನನ್ನ ಬಂಧುಗಳಾದ ಜಿ. ಆರ್. ಅಮೀರ್‌ಖಾನ್ ಸಾಹೇಬರವರ ಮನೆಯಲ್ಲಿ ದೀರ್ಘಕಾಲದಿಂದಲೂ ಮನೆವಾಸಿಯಾಗಿರುತ್ತಾರೆ. ನನ್ನ ತಂದೆಯವರು ತಾ|| 29-3-1937ರಲ್ಲೂ ತಮ್ಮ ಪಿತ್ರಾರ್ಜಿತವಾದ ಆಸ್ತಿಪಾಸ್ತಿಗಳನ್ನು ನನಗೂ, ನನ್ನ ತಮ್ಮ ದಿವಂಗತ ಅಹಮದ್‌ಖಾನರಿಗೂ ವಿಭಾಗ ಮಾಡಿಕೊಟ್ಟು ತಮ್ಮ ಸಾಕ್ಷಿ ಸಹಿ ರಿಜಿಸ್ಟರ್ ದಸ್ತಾವೇಜು ಮಾಡಿಸಿರುತ್ತಾರೆ. ನನ್ನ ತಮ್ಮನ ಕಾಲಾನಂತರ ಅವನ ಭಾಗದ ಸ್ವತ್ತುಗಳೂ ನನಗೆ ಏಕೈಕ ಬಂಧುವಾದ ನನ್ನ ಹಕ್ಕಿಗೆ ಬಂದು ನನ್ನ ಸ್ವಾಧೀನಾನುಭವದಲ್ಲಿರುತ್ತೆ

ಈಚೆಗೆ ಸದರಿ ಸ್ವತ್ತುಗಳನ್ನು ಅಭಿವೃದ್ಧಿಪಡಿಸಿರುತ್ತೇನೆ ಮತ್ತು ಸ್ವತ್ತುಗಳೆಲ್ಲಾ ನನ್ನ ಸ್ವಾಧೀನಾನುಭವದಲ್ಲಿಯೇ ಇರುತ್ತವೆ. ಹಾಲಿ ನನ್ನ ತಂದೆಗೆ ಆಲೋಚನಾ ಸ್ಥಿತಿ ಇರುತ್ತೆ. ನಾನು ಅನೇಕ ಬಾರಿ ನನ್ನ ತಂದೆಯವರನ್ನು ನನ್ನ ಮನೆಗೆ ಬಂದು ಇರಲು ಕೇಳಿಕೊಂಡಾಗ್ಯೂ ನಾನು ಬಹು ದಿನಗಳಿಂದಲೂ ಇರುವ ಈ ಮನೆಯಲ್ಲಿಯೇ ಇರುತ್ತೇನೆ ಎಂದು ನನ್ನ ಮನೆಗೆ ಬರಲು ನಿರಾಕರಿಸಿರುತ್ತಾರೆ. ಪ್ರಕೃತ ನನ್ನ ತಂದೆಯ ಆಲೋಚನಾ ಸ್ಥಿತಿಯನ್ನು ದುರುಪಯೋಗಪಡಿಸಿಕೊಳ್ಳಲು ಹಲವರು ನನಗಾಗದವರು ನನ್ನ ತಂದೆಯಿಂದ ಆಸ್ತಿಪಾಸ್ತಿಗಳನ್ನು ಲಪಟಾಯಿಸಲು ಪ್ರಯತ್ನಿಸುತ್ತಿರುವುದಾಗಿ ತಿಳಿಯಬರುತ್ತೆ. ನನಗೆ ಸೇರಿದ ಸ್ವತ್ತುಗಳನ್ನು ಯಾರಾದರೂ ನನ್ನ ತಂದೆಯವರಿಂದ ಯಾವುದೇ ರೀತಿಯಲ್ಲಿ ಪರಭಾರೆ ಪತ್ರಗಳನ್ನು ಮಾಡಿಸಿಕೊಂಡಲ್ಲಿ ನನ್ನನ್ನು ಯಾವ ರೀತಿಯಲ್ಲೂ ಬದ್ಧಪಡಿಸುವುದಿಲ್ಲ, ಹಾಗೂ ನನಗೆ ಆಗುವ ನಷ್ಟನಷ್ಟಗಳಿಗೆ ಅವರೇ ಜವಾಬ್ದಾರರಾಗುತ್ತಾರೆ-ತಿಳಿಯುವುದು

—:ಷೆಡ್ಯೂಲ್ ಸ್ವತ್ತುಗಳ ತಪಶೀಲ್:—

ಗುಂಡ್ಲುಪೇಟೆ ತಾಲ್ಲೂಕು, ಕಸಬಾ ಹೋಬಳಿ, ದೊಡ್ಡತುಪ್ಪೂರು ಗ್ರಾಮದಲ್ಲಿರುವ ಸರ್ವೆ 111ನೇ ನಂಬರು, ಎಕರೆ 5, ಗುಂಟೆ 11, ಆಕಾರ 4-8-0 ರೂಪಾಯಿ ಉಳ್ಳದ್ದು ಮತ್ತು ಸರ್ವೆ 142/2ನೇ ನಂಬರು, ಎಕರೆ 2, ಗುಂಟೆ 39, ಆಕಾರ 2-0-0 ಉಳ್ಳದ್ದು. ಮತ್ತು ಗುಂಡ್ಲುಪೇಟೆ ಟವನ್ನಿನಲ್ಲಿರುವ ಡೋರ್ ನಂಬರು 883 ಮತ್ತು 884 ಉಳ್ಳ 2 ಮನೆಗಳು. ಮತ್ತು ಗುಂಡ್ಲುಪೇಟೆ ಟವನ್ನಿನಲ್ಲಿರುವ ಪೂರ್ವಕ್ಕೆ ಪಾಪಾಸೇಟ್ ಮನೆ, ಪಶ್ಚಿಮಕ್ಕೆ ಆರ್. ಮಹಮದ್‌ಪೀರ್ ಸಾಬರ ಮನೆ, ದಕ್ಷಿಣಕ್ಕೆ ರೋಡು, ಉತ್ತರಕ್ಕೆ ಆರ್. ಮಹಮದ್‌ಪೀರ್ ಸಾಬರ ಹಿತ್ತಲು—ಈ ಮಧ್ಯೆ ಇರುವ ಖಾಲಿ ನಿವೇಶನ ಒಂದು.

ಜಿ. ಓ. ಮಜೀದ್ ಖಾನ್

ತಾ|| 2-11-56

Edited, Printed and Published by
A. R. Nagarajan at Sadhvi Press
D. Subbiah Road, Mysore

ಮೈಸೂರು ಪೇಟೆ ಧಾರಣೆ

ಭತ್ತ ಭಂಗಾರ ಮತ್ತು ಕೊಯಮತ್ತೂರು ಸಣ್ಣ	೪೯	೨	೦	೫೬	೧೦	
ರಕ್ತಚೂಡಿ	೪೪	೧೪	೦	೪೮	೨	
ಕೆಂಬೂತಿ	೪೯	೧೨	೦			
ಕಡ್ಡಿ	೪೯	೮	೦			
ಕಾರು ಸಣ್ಣ	೪೧	೦	೦	೪೨	೪	
ರಾಗಿ	೨೯	೧೬	೦	೨೬	೧೦	
ಜೋಳ	೪೪	೧೨	೦	೪೮	೨	
ಕಂಬು	೨೯	೧೨	೦	೨೯	೧೦	
ನವಣೆ	೨೪	೪	೦	೨೪	೮	
ಕಡಲೆಕಾಯಿ	೧೨	೪	೦	೨೦	೨	
ಎಳ್ಳು	೯೬	೦	೦	೯೦	೦	
ಹರಳುಬೀಜ	೪೦	೧೩	೦	೪೧	೨	
ಹುರುಳಿ	೨೯	೬	೦	೨೮	೧೪	
ಹೆಸರು	೪೨	೦	೦	೪೪	೦	
ಅಲಸಂದೆ	೪೬	೨	೦	೬೬	೧೪	
ಧನಿಯ	೨೮	೧೨	೦	೪೦	೧೨	
ಸಾಸುವೆ	೬೦	೦	೦			
ಕೊಬ್ಬರಿಬೀಜ	೪೪	೮	೦			
ಹುಣಸೇಹಣ್ಣು	೪	೨	೦	೮	೪	
ತೆಂಗಿನಕಾಯಿ	೬	೮	೦	೨೬	೦	
ಹತ್ತಿ (೨೪ ಪೌಂಡು)	೬	೧೧	೦	೪	೦	
ತೆಂಗಿನಕಾಯಿ ೧೦೦೦	೨೦೧	೦	೦			

Join:
GLOBE TUTORIAL
COLLEGE
(*Sadvidya Pateshala Buildings*)
Excellent Coaching for
Inter, P. C. M., English,
and Kannada
Experienced Lecturers handle classes
Enquiries 7-30 to 10-30 A.M. and
5-30 P.M. to 7-30 P.M.

ಲಕ್ಷ್ಮಿ ★ 16-11-56 ರಿಂದ
ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
ಮಲೈಕ್ಕಳ್ಳ
(ತಮಿಳು)
ಪಾತ್ರ:- ಎಂ.ಜಿ ರಾಮಚಂದ್ರನ್, ಭಾನುಮತಿ, ಸುರಭಿ, ಬಾಲಸರಸ್ವತಿ, ಎಂ. ಜಿ. ಚಕ್ರಪಾಣಿ, ಟಿ ಬಾಲಸುಬ್ರಹ್ಮಣ್ಯಂ, ಡೊರೆರಾಜ್, ಶ್ರೀರಾಂ ಮುಂತಾದವರು
ನೃತ್ಯ — ಸಾಯಿಸುಬ್ಬಲಕ್ಷ್ಮಿ
ಇಂದು ಕಡೇ ದಿನ : [illegible]

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ—ಕಲ್ಪ
ಔಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ರೂಂ ನಂ. 5
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7.30
ರೋಗಿಗಳ ಕಾಯಿಲೆಗಳನ್ನು ಪರೀಕ್ಷಿಸಿ
ಮತ್ತು ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಕೊಡುವರು
ಇವರು ಸಕಾಲಕ್ಕೆ ಸಂಯೋಗಿ ಸ್ಥಳದಲ್ಲಿರದ ವಿಳಾಸದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗ
ಇದು ವೀರ್ಯ, ಶಕ್ತಿ, ಬುದ್ಧಿ, ಹಸಿವು, [illegible] ಗೋಮೂತ್ರ, ಶೀಲ, ರಕ್ತ ರೋಗ ಮತ್ತು [illegible] ೨೮-೩೨ ೨ ಅಮೂಲ್ಯ ಪದಾರ್ಥಗಳ ಸಂಯೋಗ ನಿಮ್ಮ ಎಲ್ಲಾ ಸಾಮಾನ್ಯ ಹಾಗೂ ತೀವ್ರ ವ್ಯಾಧಿಗಳಿಗೂ ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಆಗಿರುತ್ತದೆ.
NAVRATNA KALPA PHARMACY,
JULLUNDUR CITY (India)

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಚಿಕಿತ್ಸೆ
*
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
[illegible]
ಬೆಂಗಳೂರು -2

ಟ : ೧೫] SADHVI : FRIDAY 16—11—1956 ಮೈಸೂರು : ಶುಕ್ರವಾರ ೧೬—೧೧—೧೯೫೬ [ಸಂಚಿಕೆ : ೨೦೪

ಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರ ಮುಕ್ತಾಯ

ಸೂರು ನೂತನ ಸಂಸ್ಥಾನದ ಅತ್ಯಂತ ಭಾರಿ ವಿಭಾಗ

ಷನರ್ ಜಿ.ಎಸ್.ನಾಗರಾಜರಾಯರ ಹೇಳಿಕೆ

ಮೈಸೂರು ೧೬

ಸೂರು ಡಿವಿಜನಲ್ ಕಮಿಷನರಾದ ಶ್ರೀ ಎಸ್. ನಾಗರಾಜರಾಯರು ನೆನ್ನೆ ಪತ್ರಿಕಾ ಪ ತಿನಿಧಿಗಳನ್ನು ಕರೆದು ನೂತನ ಸಂಸ್ಥಾನದ ರು ವಿಭಾಗದ ಬಗ್ಗೆ ವಿವರಗಳನ್ನಿತ್ತರು ನ ಸಂಸ್ಥಾನದಲ್ಲಿ ಮೈಸೂರು ಡಿವಿಜನ್ನು ದೊಡ್ಡದೆಂದೂ, ಇಲ್ಲಿ ಅನೇಕ ಭಾರಿ ಜನೆಗಳು, ಅರಣ್ಯ ಪ್ರದೇಶ ಮತ್ತು ವಿದ್ಯು ಕೇಂದ್ರಗಳು ಇರುವುದಾಗಿಯೂ ಅವರು ದರು.

ತನ ಸಂಸ್ಥಾನದ ರಚನೆಗೆ ಮುಂಚೆ ಸಂ ಪಲ್ಲದ ನಾನಾ ವಿಭಾಗಗಳಲ್ಲಿ ಯಾವ ವ [illegible] ಅವುಗಳನ್ನು ಮುಂದುವರಿಯುವುದೆಂದೂ, ನಂತರ ಸ ಸಮನ್ವಯ ಆವಶ್ಯಕ ವ್ಯವಸ್ಥೆಯಾಗಲಿರು ರೆಂದೂ ಅವರು ತಿಳಿಸಿದರು.

ನಾಂ ರದ್ದಿಯಾತಿ ಶಾಸನವನ್ನು ಅರ್ಜಿ ಭಾ ಷ್ಟ್ಯ ಈ ಡಿವಿಜನ್ನಿಗೇ ಅನ್ವಯಿಸಲಿರುವ ಅವರು ಸೂಚಿಸಿ, ತದ್ದಾಗುವುದೆಂದು ಪ್ರ ಶಾದ ಗ್ರಾಮಗಳ ಇನಾಂದಾರರಿಗೆ ಸಕ್ಕ ರ್ಕಾರದ ೧೦ ರಷ್ಟು ಪರಿಹಾರವನ್ನು ಕೊ ಡುವುದೆಂದೂ ಉಳಿದುದನ್ನು ಕ್ರಮೇಣ ಮಾಡಲಾಗುವುದೆಂದೂ ನುಡಿದರು.

ದ ಬೆಳೆಯು ಒಳ್ಳೆಯದು. ಸಮ್ಮ ವಿಭಾಗ ಸಮರ್ಪಕವಾಗಿರುವುದೆಂದೂ, ರಾಗಿ ಸರಬರಾಯಿಗೆ ೪ ರಿಂದ ೧೬ ಅಣೆಗಳಷ್ಟು ದೆಂದೂ ಹೇಳಿದರು.

ಕೈಗಾರಿಕೆಗಳಲ್ಲಿ ಕಾಣ ಸರ್ಕಾರದ ವಿಚಾ ಪ್ರಸ್ತಾಪಿಸಿ, ಬೆಳ್ಳಿ ಏರಿಯಾದಲ್ಲಿ ಕಾ ಶೋಧನ ಬಗ್ಗೆ, ಬರುವ ಅಬ್ಕಾರಿ ಹರಾಜು ಲ್ಲಿ ಯಾವ ಕ್ರಮ ಕೈಗೊಳ್ಳಬೇಕೆಂಬು ನಿರ್ಧರಿಸಲಾಗುವುದೆಂದು ಸೂಚಿಸಿದರು ಹೊಸದಲ್ಲಿ ಇದುವರೆಗೆ ತಮಗೆ ನಲ್ಲಿ ಸಲ್ಲಿಸಿದ್ದ ಅರ್ಜಿಗಳನ್ನು ಮುಂದೆ ಕಡಿತದಲ್ಲಿ ಪಡೆಯುವುದಕ್ಕೆ ತಕ್ಕ ಮಾಗಿರುವುದಾಗಿಯೂ ಹೇಳಿದರು. ಜನಲ್ ಕಮಿಷನರವರ ಕಛೇರಿಯು ಇ ಟೇ ಅಂಕಣಗಳ ಕಟ್ಟಡದಲ್ಲಿ ತೆಗೆಯ ವುದಾಗಿ ಗೊತ್ತಾಗಿದೆ ಕಮಿಷನರು ಯ ವಿಸ್ತರಣೆ ಮತ್ತು ಗ್ರಾಮ ಹೆ ನೆಗಳ ಡಿವಿಜನಲ್ ಅಭಿವೃದ್ಧಿ ಕಮಿಷನ ರರು.

ಗದಲ್ಲಿ ಅವರ ಕಛೇರಿಯಲ್ಲದೆ, ವಿ ಡೆವಲಪ್ಮೆಂಟ್ ಡೆಪ್ಯುಟಿ ಡೈರೆಕ್ಟರ್, ಪೋಲೀ ಐ.ಜಿ., ಸಹಕಾರ ಸಂಸ್ಥೆಗಳ ಡೆಪ್ಯುಟಿ ರ ಕಛೇರಿಗಳೂ ಇರುತ್ತವೆ.

ಮಂತ್ರಿಗಳಿಗೆ ಇನ್ನು ಮುಂದೆ ಆಪ್ತ ಕಾರ್ಯದರ್ಶಿಗಳು

ನದ ಮಂತ್ರಿಗಳು ಹೊಂದಿರುವ ಪಿಸ ಸ್ಟೆಂಟರ ಬದಲು ಆಪ್ತ ಕಾರ್ಯದರ್ಶಿ ನೇಮಿಸುವ ವಿಷಯವು ಸರ್ಕಾರದ ಪರಿ ಶೀಲನೆಯಲ್ಲಿರುವುದಾಗಿ ತಿಳಿದುಬಂದಿದೆ.

ಸರ್ಕಾರಿ ಕಾರ್ಖಾನೆಗಳಲ್ಲಿ ಕೈಗಾರಿಕಾ ಶಾಂತಿ

ಸಂಸ್ಥಾನ ಸರ್ಕಾರದ ಪರಿಶೀಲನೆ

ಬೆಂಗಳೂರು ೧೬

ಭದ್ರಾವತಿ ಕಬ್ಬಿಣದ ಕಾರ್ಖಾನೆಯಲ್ಲಿ ಬರುವ ೫ ವರ್ಷಗಳವರೆಗೆ ಕೈಗಾರಿಕಾ ಶಾಂತಿಯು [illegible] ಫಲದಿಂದ ಉತ್ಪನ್ನ [illegible]. ಸರ್ಕಾರದವರು [illegible] ಕೈಗಾರಿಕಾ [illegible] ವಿಷಯವನ್ನು [illegible] ಗೊತ್ತಾಗಿದೆ. ಈ ಬಗ್ಗೆ [illegible] ತಮ್ಮ ಅಭಿಪ್ರಾಯವನ್ನು ಮಂತ್ರಿಮಂಡಲಕ್ಕೆ ಒಪ್ಪಿಸಿ [illegible] ಗೊತ್ತಾಗಿದೆ. ಭದ್ರಾವತಿ [illegible] ೧೦ ಲಕ್ಷ ರೂ. ಹೆಚ್ಚು ವೆಚ್ಚವಾಗಲಿದೆ.

ಭಾರತಕ್ಕೆ ರಷ್ಯದಿಂದ ೬೦ ಕೋಟಿ ರೂ. ಸಾಲ

ಕೈಗಾರಿಕಾ ಯೋಜನೆಗಳ ಸಂಬಂಧವಾಗಿ ಭಾರತಕ್ಕೆ ರಷ್ಯ ೬೦ ಕೋಟಿ ರೂ. ಗಳ ದೀರ್ಘಾವಧಿ ಸಾಲವನ್ನು ಕೊಡಲಿದೆ. ಅದನ್ನು ಭಾರತ ಸರ್ಕಾರದವರು ಅಂಗೀಕರಿಸಿರುತ್ತಾರೆ. ಶೇಕಡ ೨½ ಬಡ್ಡಿಯ ಈ ಸಾಲವು ೧೨ ವಾರ್ಷಿಕ ಕಂತುಗಳಲ್ಲಿ ತೀರ್ವೆಯಾಗುವುದು. ಈ ಸಾಲವು ನೂರು ಕೋಟಿ ರೂ. ವರೆಗೂ ಹೆಚ್ಚಬಹುದು. ದ್ವಿತೀಯ ಯೋಜನೆ ಅವಧಿಯಲ್ಲಿ ಗೊಬ್ಬರ, ಕಲ್ಲಿದ್ದಲು ಗಣಿ, ಎಣ್ಣೆ ಶುದ್ಧೀಕರಣ ಮತ್ತು ಭಾರಿ ಕೈಗಾರಿಕೆಗಳಿಗೆ ಸಂಬಂಧಿಸಿದ ಯಂತ್ರಗಳನ್ನು ಆಮದು ಮಾಡುವ ಸಂಬಂಧವಾಗಿ ಈ ಸಾಲವನ್ನು ತೆಗೆದುಕೊಳ್ಳಲಾಗುವುದು.

ಪಾಕಿಸ್ತಾನದ ಸೈನ್ಯ ಪಡೆ ಪ್ರವೇಶಕ್ಕೆ ಈಜಿಪ್ಟಿನ ವಿರೋಧ

ಈಜಿಪ್ಟಿನಲ್ಲಿ ಶಾಂತಿ ಪಾಲನೆ ಮಾಡುವ ವಿಶ್ವಸಂಸ್ಥೆಯ ಪೋಲೀಸು ಪಡೆಯಲ್ಲಿ ಪಾಕಿಸ್ತಾನದ ತಂಡವನ್ನು ಸೇರಿಸುವುದಕ್ಕೆ ಈಜಿಪ್ಟು ಆಕ್ಷೇಪಿಸಿರುವುದಾಗಿ ಪಾಕಿಸ್ತಾನಕ್ಕೆ ವಿಶ್ವಸಂಸ್ಥೆಯವರು ತಿಳಿಸಿರುತ್ತಾರೆ. ಈಜಿಪ್ಟಿಗೆ ಒಂದು ತಂಡವನ್ನು ಕಳುಹಲು ಪಾಕಿಸ್ತಾನವು ಸಿದ್ಧವಾಗಿತ್ತು

ಲಜಪತರಾಯರ ದಿನಾಚರಣೆ

ಭಾರತ ಸ್ವಾತಂತ್ರ್ಯದ ಸಮರದಲ್ಲಿ ಪ್ರಮುಖ ಪಾತ್ರ ವಹಿಸಿ ಹುತಾತ್ಮರಾದ ಪಂಜಾಬಿನ ಲಾಲಾ ಲಜಪತರಾಯರ ದಿನಾಚರಣೆಯನ್ನು ನಾಳೆ ಸಂಜೆ ೭ ಗಂಟೆಗೆ ನಗರ ಕಾಂಗ್ರೆಸ್ ಕಛೇರಿಯಲ್ಲಿ ನೆರವೇರಿಸಲಾಗುವುದು. ಕಾರ್ಯಕರ್ತರು ಮತ್ತು ಅಭಿಮಾನಿಗಳು ಬರಬೇಕೆಂದು ಕೋರಲಾಗಿದೆ

ಶ್ರೀಕಂಠೇಶ್ವರಸ್ವಾಮಿ ರಥೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಚಿಕ್ಕ ರಥೋತ್ಸವವು ಇದೇ ತಿಂಗಳು ೧೯ನೇ ತಾರೀಕು ಸೋಮವಾರ ನೆರವೇರುವುದು. ಇದರ ಅಂಗವಾಗಿ ಕಳೆದ ೧೩ ರಿಂದ ವಿವಿಧ ಉತ್ಸವಗಳು ಆರಂಭವಾಗಿವೆ.

ನಿಜಲಿಂಗಪ್ಪನವರ ಆಗಮನ

ಮೈಸೂರು ೧೬

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಈ ಬೆಳಿಗ್ಗೆ ಕರ್ನಾಟಕ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಶ್ರೀ ಪಾವಟೆಯವರೊಡನೆ ನಗರಕ್ಕೆ ಆಗಮಿಸಿದರು. ಅವರನ್ನು ಜಲದರ್ಶಿನಿಯಲ್ಲಿ ಡಿವಿಜನಲ್ ಕಮಿಷನರ್, ಜಿಲ್ಲಾಧಿಕಾರಿಗಳು, ಪೌರಸಭಾಧ್ಯಕ್ಷರು, ಕಮಿಷನರು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು, ಮುಂತಾದವರು ಸ್ವಾಗತಿಸಿದರು. ಪೌರಸಭಾ ಸದಸ್ಯ ಶ್ರೀ ಎ. ಕೃಷ್ಣಮೂರ್ತಿರಾಯರು ಮುಖ್ಯ ಮಂತ್ರಿಗಳಿಗೆ ಹೂವಿನ ಹಾರವನ್ನು ಅರ್ಪಿಸಿದರು

ಶ್ರೀ ನಿಜಲಿಂಗಪ್ಪನವರು ಈ ರಾತ್ರಿ ಬೆಂಗಳೂರಿಗೆ ಹಿಂದಿರುಗುವರು. ಅಲ್ಲಿಂದ ದೆಹಲಿಗೆ ತೆರಳಿ ನೂತನ ಸಂಸ್ಥಾನದ ಆಡಳಿತ ವ್ಯವಸ್ಥೆಯನ್ನು ಕುರಿತು ಕೇಂದ್ರ ಮಂತ್ರಿಗಳೊಡನೆ ಚರ್ಚಿಸುವರು

ರೈಲಿನಲ್ಲಿ ಸಿನಿಮಾ

ಕಲ್ಕತ್ತಾ-ದೆಹಲಿ ಜನತಾ ಎಕ್ಸ್‌ಪ್ರೆಸ್ ಟ್ರೈನುಗಳು ಓಡುತ್ತಿರುವಾಗಲೇ ಗಾಡಿಗಳಲ್ಲಿ ಸಿನಿಮಾಗಳನ್ನು ತೋರಿಸುವ ಕಾರ್ಯಕ್ರಮವು ನೆನ್ನೆಯಿಂದ ಆರಂಭವಾಯಿತು. ಧನಬಾದ್ ಮತ್ತು ಕಾನ್ಪುರ ನಗರಗಳ ನಡುವೆ ಈ ರೀತಿ ಪ್ರದರ್ಶಿಸಲಾಗುವುದು. ಇದಕ್ಕೆ ೨ ಆಣೆ ದರವನ್ನಿಡಲಾಗಿದೆ.

ರಷ್ಯಕ್ಕೆ ಹಂಗೆರಿ ಜನರ ಸಾಮೂಹಿಕ ಗಡೀಪಾರು

ಕಳೆದ ಹಲವಾರು ದಿನಗಳಲ್ಲಿ ಹಂಗೆರಿ ಜನರನ್ನು ಭಾರಿ ಪ್ರಮಾಣದಲ್ಲಿ ರಷ್ಯಕ್ಕೆ ಗಡೀಪಾರು ಮಾಡಲಾಗಿರುವುದೆಂದು ಬ್ರಿಟಿಷ್ ವಿದೇಶಾಂಗ ಕಛೇರಿಯು ತಿಳಿಸಿದೆ. ಈ ಗಡೀಪಾರು ಸಂಖ್ಯೆಯು ಕಡಿಮೆಯಾಗಬೇಕೆಂದು ಹಂಗೆರಿಯ ಈಗಿನ ಪ್ರಧಾನಿ ಜಾನಸ್ ಕಾಡಾರ್‌ರವರು ರಷ್ಯಕ್ಕೆ ತಿಳಿಸಲಿದ್ದಾರೆಂದು ಹೇಳಲಾಗಿದೆ

ರುಮೇನಿಯದಲ್ಲೂ ರಷ್ಯಾ ವಿರುದ್ಧದ ಗಲಭೆ

ರುಮೇನಿಯಕ್ಕೆ ಸೇರಿರುವ ಟ್ರಾನ್ಸಿಲ್ವೇನಿಯದಲ್ಲಿ ಗಲಭೆ, ದಸ್ತಗಿರಿ ಮತ್ತು ರಷ್ಯಾ ವಿರುದ್ಧ ಪ್ರದರ್ಶನಗಳು ಆಗುತ್ತಿವೆಯೆಂದು ವರದಿಯಾಗಿದೆ. ಆ ಪ್ರದೇಶದಲ್ಲಿ ಹಂಗೆರಿ ಜನರೇ ವಿಶೇಷವಾಗಿರುವರು. ಅಲ್ಲಿನ ವಿದ್ಯಾರ್ಥಿಗಳು ರಷ್ಯಾ ವಿರುದ್ಧವಾಗಿ ಪ್ರದರ್ಶನ ನಡೆಸಿದರೆಂದೂ, ಹಂಗೆರಿಯ ಸ್ವಾತಂತ್ರ್ಯದ ಹೋರಾಟಗಾರರಿಗೆ ಸಹಾನುಭೂತಿ ತೋರಿಸಲು ೩ ನಿಮಿಷ ಮೌನವನ್ನು ತಾಳಿದರೆಂದೂ ಹೇಳಲಾಗಿದೆ. ನೂರಾರು ವಿದ್ಯಾರ್ಥಿಗಳ ಬಂಧನವಾಗಿದೆ.

ಅಕ್ಕಿ ಡಿಪ್ಪೋಗಳನ್ನು ತೆರೆಯಲು ಒತ್ತಾಯ

ನಗರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಮಂಗಳವಾರ ಶ್ರೀ ಎಸ್. ಕೃಷ್ಣಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆದು ಈಗ ಮುಚ್ಚಲಾಗಿರುವ ಆಹಾರ ಡಿಪ್ಪೋಗಳನ್ನು ಪೌರಸಭೆಯವರು ಪುನಃ ತೆರೆಯಬೇಕೆಂದು ಒತ್ತಾಯಪಡಿಸಲಾಯಿತು.

ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರ ಸಮಾಪ್ತಿ

ಕಾಲೇಜನ್ನು ಅಭಿವೃದ್ಧಿಪಡಿಸುವುದಾಗಿ ಸಚಿವರುಗಳ ಭರವಸೆ

ಮೈಸೂರು ೧೬

ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳು ತಮ್ಮ ೯೦ ದಿನಗಳ ಮುಷ್ಕರವನ್ನು ಮುಕ್ತಾಯ ಮಾಡಿ ಈ ದಿನ ತರಗತಿಗಳಿಗೆ ಹಿಂದಿರುಗಲು ನಿರ್ಧರಿಸಿದರು.

ಈ ಮಧ್ಯಾಹ್ನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರೂ, ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರೂ, ಜನರಲ್ ಕಾರಿಯಪ್ಪನವರೂ ಕಾಲೇಜಿಗೆ ಭೇಟಿಯಿತ್ತು, ವಿದ್ಯಾರ್ಥಿಗಳಿಗೆ ಹಿತೋಪದೇಶ ಮಾಡಿದರು. ವಿದ್ಯಾರ್ಥಿಗಳ ಬೇಡಿಕೆಗಳ ಬಗ್ಗೆ ಸಚಿವರುಗಳು ಸಹಾನುಭೂತಿಯನ್ನು ತೋರಿದರು. ಈ ಕಾಲೇಜು ಇರುವ ಹೀನ ಸ್ಥಿತಿಗಾಗಿ ಶ್ರೀ ನಿಜಲಿಂಗಪ್ಪನವರು ಆಶ್ಚರ್ಯವನ್ನು ವ್ಯಕ್ತಪಡಿಸಿ ಅದನ್ನು ಉತ್ತಮಪಡಿಸಲು ಎಲ್ಲ ಸಹಾಯವನ್ನೂ ನೀಡುವುದಾಗಿ ತಿಳಿಸಿದರು. ಮೈಸೂರು ನಗರದ ಜನರು ಮುಂದೆಬಂದು ಕಟ್ಟಡ ಮುಂತಾದ ಸೌಲಭ್ಯಗಳನ್ನು ಒದಗಿಸದಿದ್ದರೆ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕಾಗಬಹುದೆಂದು ಅವರು ಸೂಚಿಸಿದರು.

ಪಶು ಪ್ರವರ್ಧನ ನಿಲಯದಲ್ಲಿ ಕಾಲೇಜಿಗೆ ವಸತಿಯನ್ನು ಕಲ್ಪಿಸಿ ಈಗಿನ ಆಸ್ಪತ್ರೆಯಲ್ಲಿ ನೂರು ಹಾಸಿಗೆಗಳ ಸೌಲಭ್ಯವನ್ನು ಕಲ್ಪಿಸುವುದೇ ಮುಂತಾದ ವಿಚಾರಗಳನ್ನು ಸರ್ಕಾರದವರು ಪರಿಶೀಲಿಸುವರೆಂದು ಶ್ರೀ ಎ. ಬಿ. ಶೆಟ್ಟಿಯವರು ತಿಳಿಸಿದರು.

ಮಕ್ಕಳ ದಿನಾಚರಣೆ

ನಗರದ ಶಿಶು ಸಾಹಿತ್ಯ ಸಂಘದವರು ನರಸಿಂಹರಾಜ ಮೊಹಲ್ಲಾದಲ್ಲಿ ಸ್ಥಾಪಿಸಿರುವ "ಉದಯ ರವಿ" ಆಟದ ಕೇಂದ್ರದಲ್ಲಿ ನೆನ್ನೆ ಸೆಂಟ್ರಲ್ ಎಕ್ಸೈಸ್ ಇನ್ಸ್‌ಪೆಕ್ಟರಾದ ಶ್ರೀ ಅನಂತಸಿಂಗ್‌ರವರ ಅಧ್ಯಕ್ಷತೆಯಲ್ಲಿ ಮಕ್ಕಳ ದಿನಾಚರಣೆಯನ್ನು ನೆರವೇರಿಸಿದರು. ಶ್ರೀ [illegible]ಳಾದ ವಿಜಯಲಕ್ಷ್ಮಿ ಮತ್ತು ಸುಮಿತ್ರಾರವರಿಂದ ಪ್ರಾರ್ಥನೆಯಾದನಂತರ ಕೇಂದ್ರದ ನಾಯಕರಾದ ಶ್ರೀ ಎಂ. ಶಿವಣ್ಣನವರು ಸ್ವಾಗತ ಭಾಷಣ ಮಾಡಿದರು. ಮಕ್ಕಳಿಂದ ವಿವಿಧ ಮನರಂಜನೆ ಕಾರ್ಯಕ್ರಮಗಳು ಆದುವು. ಅಧ್ಯಕ್ಷರು ಭಾಷಣ ಮಾಡಿ ಇಂತಹ ಕೇಂದ್ರಗಳ ಆವಶ್ಯಕತೆಯನ್ನು ವಿವರಿಸಿ, ಮಕ್ಕಳು ದೇಶದ ಮುಂದಿನ ಪ್ರಜೆಗಳಾಗಬೇಕೆಂದು ಹಾರೈಸಿದರು. ವಂದನಾರ್ಪಣೆಯಾದನಂತರ ಸಮಾರಂಭವು ರಾಷ್ಟ್ರಗೀತೆಯೊಡನೆ ಮುಕ್ತಾಯಗೊಂಡಿತು.

ರಂ. ಶ್ರೀ. ಮುಗಳಿಯವರಿಗೆ ಸನ್ಮಾನ

ಕನ್ನಡ ಸಾಹಿತ್ಯ ಚರಿತ್ರೆಯನ್ನು ರಚಿಸಿ ರಾಷ್ಟ್ರಪತಿಗಳ ಪ್ರಶಸ್ತಿ ಪಡೆದ ಡಾ|| ರಂ. ಶ್ರೀ. ಮುಗಳಿಯವರನ್ನು ಗೌರವಿಸಲು ಇದೇ ೨೫ರಂದು ನಗರದಲ್ಲಿ ಸನ್ಮಾನ ಸಮಾರಂಭವೊಂದನ್ನು ನಡೆಸಲಾಗುವುದು. ಇದಕ್ಕಾಗಿ ಇಲ್ಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಶಿವರಾಮಕಾರಂತರು ಸಮಾರಂಭದ ಅಧ್ಯಕ್ಷತೆ ವಹಿಸಲು ಒಪ್ಪಿರುತ್ತಾರೆ.

ಮತ್ಸ್ಯಗಳನ್ನು ಕೊಲ್ಲುವ ೫ ಅಡಿ ಉದ್ದದ ಪಕ್ಷಿಗಳು

ಮತ್ಸ್ಯಗಳು, ಮೊಸಳೆ, ಮತ್ತು [illegible]ಗಳನ್ನು ಕೊಲ್ಲುವ ೫ ಅಡಿ ಉದ್ದದ [illegible] ಎಂಬ ಒಂದು ಜಾತಿಯ ಪಕ್ಷಿಗಳ ಸೈನ್ಯ [illegible] ಕ್ಷಿಗಳನ್ನು ಧರಂಗಾಬಾದು ಮತ್ತು [illegible] ಯ ಜಿಲ್ಲೆಗಳಲ್ಲಿ ಕೊಲ್ಲಲಾಗಿದೆ. [illegible] ಕ್ಷಿಗಳು ಆ ಜಿಲ್ಲೆಗಳಲ್ಲಿ ಕಾಣಿಸಿಕೊಂಡಿದ್ದುವು. ಓಡಿಸಲ್ಪಟ್ಟ ಪಕ್ಷಿಗಳ ಸೈನ್ಯ ಒಂದು [illegible] ಬಂದಿತೆಂದೂ, [illegible] ಆಕಾಶದಿಂದ ಹೊಡೆದಾಗ ಆತನೊಡನೆ ಅದು ಹೋರಾಡಿತೆಂದೂ, ಕಡೆಗೆ ಬಂದೂಕಿನಿಂದ ಅದನ್ನು [illegible] ತೆಂದೂ ಹೇಳಲಾಗಿದೆ. [illegible] ಪುರಾತನಕಾಲದ್ದೆಂದೂ, ಹಿಂದೆ [illegible] ಎಂದೂ ಪ್ರಕಟಿಸಿದೆ.

ತಿರುವನಂತಪುರದ ಕೋರ್ಟು ಬಳಿ ವಕೀಲರ ಪಿಕೆಟಿಂಗ್

ತಿರುವನಂತಪುರದ ವಕೀಲರುಗಳು [illegible]

ನರಸಿಂಹಯ್ಯ ಸ್ಮಾರಕ ಸಂಗೀತ ಸ್ಪರ್ಧೆ

[illegible]

ಬಂಗಳೂರು ರೇಡಿಯೋ [illegible] ಕಾರ್ಯಕ್ರಮ

[illegible]

೯೭ ವರ್ಷದವನೊಡನೆ ೨೭ ವರ್ಷದವಳ ವಿವಾಹ

ನ್ಯೂಯಾರ್ಕ್ ಸಂಸ್ಥಾನದ [illegible] ವರ್ಷದ [illegible] ಎಂಬ ೨೭ ವರ್ಷದವಳನ್ನು ವಿವಾಹವಾಗಿದ್ದಾನೆ. [illegible] ಮೂರು ಮೊಮ್ಮಕ್ಕಳೂ, [illegible] ಮರಿಮಕ್ಕಳೂ ಈ ವಿವಾಹ ಸಮಾರಂಭದಲ್ಲಿ ಭಾಗವಹಿಸಿದ್ದರು.

ದಾರಿದ್ರ್ಯದಿಂದ ಅಯೋಧ್ಯೆಯ ರಾಜಪುತ್ರಿಯ ಆತ್ಮಹತ್ಯೆ

[illegible] ಅಯೋಧ್ಯೆಯ [illegible] ರಾಜಕುಮಾರಿ [illegible] ಎಂಬ ೨೭ ವರ್ಷದ ತರುಣಿಯು [illegible] ಕಷ್ಟ ಸಹಿಸಲಾರದೆ [illegible] ಆತ್ಮಹತ್ಯೆ ಮಾಡಿಕೊಂಡಿದ್ದಾಳೆ. [illegible]

ಚಿಕೋರಿ ಆಮದಿಗೆ ನಿಷೇಧ

[illegible] ಆಮದಿಗೆ ನಿಷೇಧ [illegible] ಸರ್ಕಾರ ನಿರ್ಧರಿಸಿದ್ದಾರೆ.

ಹಾಲು ಮತ್ತು [illegible] ಹಾಲಿನಪುಡಿ [illegible]

[illegible]

ಸಂಸ್ಥಾನದ ಮುಸ್ಲಿಮರ ಸಮ್ಮೇಳನ

[illegible] ಮುಸ್ಲಿಮರ ಸಮ್ಮೇಳನ [illegible] ತಿಂಗಳು [illegible]

ಬ್ಯಾಂಕುಗಳಲ್ಲಿ ಭತ್ತದ ಮೇಲಿನ ಮುಂಗಡಕ್ಕೆ ನಿರ್ಬಂಧವಿಲ್ಲ

ಭತ್ತ ಮತ್ತು ಅಕ್ಕಿಯನ್ನು ಕೊಳ್ಳುವ ಬಗ್ಗೆ ಬ್ಯಾಂಕಿನವರು ಸಾಲ ಕೊಡಬಾರದೆಂದು ವಿಧಿಸಿದ್ದ ನಿರ್ಬಂಧವನ್ನು ರಿಸರ್ವ್ ಬ್ಯಾಂಕಿನವರು ಮೊನ್ನೆಯಿಂದ ತಪ್ಪಿಸಿದ್ದಾರೆ. ಸುಗ್ಗಿ ಕಾಲ ಸಮೀಪಿಸುತ್ತಿರುವುದ[illegible] ಈ ನಿರ್ಣಯವನ್ನು ಮಾಡಲಾಗಿದೆ.

ಮನೆ ಕ್ರಯಕ್ಕಿದೆ

ಮೈಸೂರು ೧೮ ನಂಬರ ಮೊಹಲ್ಲಾ ಮಿರ್ಜಾ [illegible] ರಸ್ತೆ (ಲಷ್ಕರ್ ಬಸಪ್ಪನವರ ಗರಡಿ [illegible] ರಸ್ತೆ) ೧೬೨೨ನೇ ನಂಬರು ಮನೆ ದೊಡ್ಡ ಸಂಸಾರದ ವಾಸಕ್ಕೆ ಅನುಕೂಲವಾಗಿ ಕಲ್ಲು, ದಿಂಡುಗಳಿಂದ ಕಟ್ಟಿದ ಇಟ್ಟಿಗೆ ಕಟ್ಟಡದ ಮಹಡಿ ಮನೆ. ಸದರಿ ಮನೆಯಲ್ಲಿ ವಾಸಿರುವ ಮಾಲೀಕರಾದ ಬಿ. ಲಿಂಗಯ್ಯನವರಲ್ಲಿ ವಿಚಾರಿಸಬಹುದು.

[illegible] PUBLICATIONS

A Guide to Opt. Accountancy

* Complete answers to the latest six public exam papers in the full size statements on creamlaid paper.

Price 1-12-0

A Guide to Eng. II Paper

* General English, Grammar and composition with answers to the latest 10 Exam papers.

Price 1-4-0

Agents. M/s J. Nanumal & Sons [illegible]

CITY TUTORIAL COLLEGE, MYSORE

Edited, Printed and Published by A. R. Nagarajan at Sadhvi Press D. Subbiah Road, Mysore

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ—ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಂತಹ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ. 59
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7 30
ಮೇಲಿನ ಕಾರ್ಯಕ್ರಮವನ್ನು ಗಮನಿಸಿ
ಮತ್ತು ಅವರ ಖಂಡಿತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ [illegible]
ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಗಳು
ಇದು ಪಿತ್ತ, ಕೆಮ್ಮು, ಮುಪ್ಪು, ಹಸಿವೆ, [illegible] 9 ಅಮೂಲ್ಯ [illegible] ಉತ್ಕೃಷ್ಟ [illegible] ಔಷಧಿ ಇದೊಂದೇ.
NAVRATNA KALPA PHARMACY,
JULLUNDUR CITY (India)

City Municipal Office, Mysore

Dated 11th November 56

NOTIFICATION

No. C. 2 P. R. 247/56 57

Notice is hereby given to the inhabitants of the Munici-pality of Mysore that the Municipal Council desires to fram the following byelaws for licensing and registering th Coolies and Carriers in the Octroi office, Mysore.

Any inhabitant of the Municipality objecting to th proposed byel w may within one month from the date of th notice send his *objections in writing to the Municipal Counc*

Byelaws for licensing and Registration of Coolies an Carriers in the Octroi Office, Mysore framed under Sectio 51 (1) (a b) and Section 82 (1) of the Mysore City Munic palities Act.

1 No person shall work for hire as a cooly or a carr to carry goods to and from the godowns in the octroi off without taking a license from the Municipal Commission or from an officer authorised by him to issue license.

2 The license shall be renewable once in 6 months a the licensee shall pay such license fee as may be fixed by t Municipal Council subject to a maximum of Rs. 2-0-0 f 6 months.

3 A Register of licenses shall be maintained by t Octroi-Superintendent in his office.

4. Every licensee on duty shall wear a badge provid by the Municipal Council.

5. The Municipal Commissioner has power to revo cancel or suspend the license on account of the misbehavi of the licensee or for any other sufficient cause His deci is final.

6. The license is not transferable

7. Every licensee is entitled to receive only such hire a scale fixed by the Municipal Council.

8. Breach of the byelaws 1, 2, 4 and 7 will render offender liable to a fine not exceeding Rs. 10-0-0.

A VISWANAT
Municipal Comm

16-11-56 ರಿಂದ
ಲಕ್ಷ್ಮಿ [illegible]
ದಿನವೂ 3 ಪ್ರದರ್ಶನ
[illegible]
(ತಮಿಳು)
(ಹೊಸ ಕಾಪಿ)
ಪಾತ್ರ:— [illegible]
[illegible]

Benefit show in aid of
NATIONALS SPORTS CLUB.
[illegible]
Columbia's one of the World's most wonder Drama
5,000 FINGERS OF Dr.T.
(Technicolor)
With Peter Lind Hayes
and Mary Healy
at GANESH TALKIES
[illegible] A.M.
on SUNDAY the 10th Nov. 1956

ಹಾಸನದ ದನಗಳ 44ನೇ ಪ್ರದರ್ಶನ
ಮತ್ತು 7 ನೇ ವಸ್ತು ಪ್ರದರ್ಶನ
ದನಗಳ ಪ್ರದರ್ಶನ ತಾ|| 1-1-1957 ರಿಂದ 7-1 1957 ರ ವರೆಗೆ
ವಸ್ತು ಪ್ರದರ್ಶನ ತಾ|| 27-12-1955 ರಿಂದ 13-1-1957 ರ ವರೆಗೆ
ದನಗಳಿಗೆ ಹುಲ್ಲು ನೀರಿನ ಸೌಕರ್ಯ ಚೆನ್ನಾಗಿರುತ್ತ
ಕಳೆದ ಸಾಲಿನಂತೆ ಈ ಸಾಲಿನಲ್ಲೂ ಅಖಿಲ ಕರ್ನಾಟಕ
ನಾಟಕ ಸ್ಪರ್ಧೆಯನ್ನು ಏರ್ಪಡಿಸುತ್ತೆ
[illegible]
[illegible]
ಕೆ. ಬಿ. ವಾಸಪ್ಪ, ಚೇರ್ಮನ್, ದನಗಳ ಮತ್ತು ವಸ್ತು ಪ್ರದರ್ಶನ ಸಮಿತಿ.
ಎಚ್. ಎಸ್. ಶ್ರೀಕಂಠಯ್ಯ, ಸೆಕ್ರೆಟರಿ, ವಸ್ತು ಪ್ರದರ್ಶನ ಸಮಿತಿ
ಮೆಸರ್ಸ್. ಎಂ. ಅಬ್ದುಲ್ [illegible] ಮತ್ತು ಜಿ. [illegible] ಎಂ. ಸಿದ್ದಪ್ಪ,
ಸೆಕ್ರೆಟರಿಗಳು, ದನಗಳ ಪ್ರದರ್ಶನ ಸಮಿತಿ.

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿಯ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : SATURDAY 17—11—1956 ಮೈಸೂರು : ಶನಿವಾರ ೧೭—೧೧—೧೯೫೬ [ಸಂಚಿಕೆ : ೧೦೫

ಹಂಗೆರಿ ಪರಿಸ್ಥಿತಿ ತನಿಖೆ ಮಂಡಲಕ್ಕೆ ಭಾರತದ ಸದಸ್ಯ

ಡಾ|| ವಿಶ್ವೇಶ್ವರಯ್ಯನವರ ಜೀವನದ ಆದರ್ಶ

ಭಾವಚಿತ್ರ ಅನಾವರಣದಲ್ಲಿ ನಿಜಲಿಂಗಪ್ಪನವರ ಭಾಷಣ

ಮೈಸೂರು ೧೬

ಎರಡು ಕೋಟಿ ಕನ್ನಡಿಗರಿಗೆ ಮಾತ್ರವೇ ಅಲ್ಲದೆ ಭಾರತೀಯರಿಗೆಲ್ಲಾ ಡಾ|| ಎಂ. ವಿಶ್ವೇಶ್ವರಯ್ಯನವರು ಆದರ್ಶಪ್ರಾಯರಾಗಿರುತ್ತಾರೆ. ಅವರ ಉದ್ಯೋಗಶೀಲತೆ, ಕಾರ್ಯ ತತ್ಪರತೆ ಮತ್ತು ದೇಶಾಭಿಮಾನಗಳು ಸರ್ವರಿಗೂ ಮಾರ್ಗದರ್ಶಕವಾಗಿವೆ–ಎಂಬುದಾಗಿ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ನೆನ್ನೆ ಇಲ್ಲಿನ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ನುಡಿದರು. ಎ. ಎಸ್. ಹಿರಣ್ಣಯ್ಯನವರು ಪುಸ್ತಕ ಭಂಡಾರಕ್ಕೆ ಸಮರ್ಪಿಸಿದ್ದ ವಿಶ್ವೇಶ್ವರಯ್ಯನವರ ಭಾವಚಿತ್ರದ ಅನಾವರಣವನ್ನು ಮಾಡಿ ಅವರು ಆವೇಶಪೂರಿತ ಭಾಷಣ ಮಾಡಿದರು. ಇದಕ್ಕಾಗಿ ನಡೆದ ಸಮಾರಂಭವು ವಿಶಾಲವಾಗಿತ್ತು.

ಪ್ರಾರ್ಥನೆ ಮತ್ತು ಗಾಯನವಾದನಂತರ ಪುಸ್ತಕ ಭಂಡಾರದ ಸಮಿತಿ ಅಧ್ಯಕ್ಷರಾದ ಶ್ರೀ ಪಿ. ಗೋಪಾಲಕೃಷ್ಣ ಶೆಟ್ಟರು ಸ್ವಾಗತ ಭಾಷಣ ಮಾಡಿ, ೫೦ ವರ್ಷಗಳ ಹಿಂದೆ ಸರ್ ಎಂ. ವಿಶ್ವೇಶ್ವರಯ್ಯನವರಿಂದ ಸ್ಥಾಪಿತವಾದ ನಗರದ ಸಾರ್ವಜನಿಕ ಪುಸ್ತಕ ಭಂಡಾರವು ಇದುವರೆಗೆ ಇಲ್ಲಿನ ನಿವಾಸಿಗಳಿಗೆ ಸಲ್ಲಿಸಿರುವ ಸೇವೆಯನ್ನು ವಿವರಿಸಿ, ಇದಕ್ಕೆ ಸರ್ಕಾರದಿಂದಲೂ, ಪೌರಸಭೆಯಿಂದ ಮತ್ತು ಮಹಾಜನಗಳಿಂದಲೂ ಹೆಚ್ಚಿನ ಸಹಾಯವು ದೊರೆಯಬೇಕೆಂದು ಮನವಿ ಮಾಡಿದರು.

ಶ್ರೀ ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ವಿಶ್ವೇಶ್ವರಯ್ಯನವರ ಗುಣಾತಿಶಯಗಳನ್ನು ಕೊಂಡಾಡಿದರು. ನೆನ್ನೆ ಅವರೊಡನೆ ತಾವು ನಡೆಸಿದ ಸಂಭಾಷಣೆಯ ವಿವರಗಳನ್ನು ಶ್ರೀ ನಿಜಲಿಂಗಪ್ಪನವರು ನಿರೂಪಿಸಿ, ಸಂಸ್ಥಾನದಲ್ಲಿ ಲಂಚಗುಳಿತನವನ್ನು ಸಂಪೂರ್ಣವಾಗಿ ತೊಡೆದು ಹಾಕುವಂತೆ ವಿಶ್ವೇಶ್ವರಯ್ಯನವರು ಒತ್ತಾಯಪೂರ್ವಕವಾಗಿ ತಮಗೆ ಸೂಚಿಸಿದರೆಂದು ತಿಳಿಸಿದರು.

ಅನೇಕ ವಿಧಗಳಲ್ಲಿ ಪ್ರಗತಿ ಹೊಂದಿರುವ ಮೈಸೂರು ಸಂಸ್ಥಾನವು ಕರ್ನಾಟಕ ಏಕೀಕರಣದ ಹಿಂದೆ ಬೀಳಬಹುದೆಂಬ ಶಂಕೆಯು ಅವರಿಗಿದ್ದಿತಾದರೂ, ಇತ್ತೀಚೆಗೆ ಮೈಸೂರಿನ ಹೊರಗಡೆ ನಡೆಯುತ್ತಿರುವ ಅಭಿವೃದ್ಧಿ ಕಾರ್ಯಗಳಿಂದ ಅವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿರುವರೆಂದೂ ಶ್ರೀ ನಿಜಲಿಂಗಪ್ಪನವರು ನುಡಿದರು. ಮೈಸೂರು ಸಂಸ್ಥಾನದ ಏಳಿಗೆಗೆ ನಡೆದಿರುವ ಎಲ್ಲ ಪ್ರಗತಿ ಸಾಧನೆಗೆ ಶ್ರೀ ವಿಶ್ವೇಶ್ವರಯ್ಯನವರು ಅಸ್ತಿಭಾರ ಹಾಕಿದರೆಂದು ಹೇಳಿ, ಅವರು ಇಂದಿಗೂ ಪ್ರತಿ ದಿನ ದೇಶದ ಆರ್ಥಿಕ ಉನ್ನತಿಗಾಗಿ ಸದಾ ಕಾಲವೂ ಚಿಂತನೆ ಮಾಡುತ್ತಿರುವರೆಂದೂ, ಅವರ ಮೇಲ್ಪಂಕ್ತಿಯಂತೆ ಎಲ್ಲರೂ ದೇಶಸೇವೆಯಲ್ಲಿ ಪ್ರಯತ್ನಪಡಬೇಕೆಂದೂ ನುಡಿದರು.

ಸಂಸ್ಥಾನದ ಕೆಳ ದರ್ಜೆ ನೌಕರರ ಸ್ಥಿತಿಯನ್ನು ಉತ್ತಮಪಡಿಸಿ, ಅವರಿಗೆ ಸಾಧ್ಯವಾದಷ್ಟು ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಸರ್ಕಾರದವರು ಆಲೋಚಿಸುತ್ತಿರುವುದಾಗಿ ಮುಖ್ಯ ಮಂತ್ರಿಗಳು ಹೇಳಿದರು. ಸಾರ್ವಜನಿಕ ಪುಸ್ತಕ ಭಂಡಾರಕ್ಕೆ ಪೌರಸಭೆಯವರು ಈಗ ಕೊಡುತ್ತಿರುವ ಸಾಲಿಯಾನ ೪೦೦ ರೂ. ಸ್ವಲ್ಪವೂ ಸಾಲದೆಂದೂ, ಇನ್ನೂ ನಾಲ್ಕು ಸಾವಿರಕ್ಕಾದರೂ ಏರಿಸಬೇಕೆಂದೂ ಅವರು ಹೇಳಿ ನಮ್ಮ ಸಂಸ್ಥಾನದ ಪೌರಸಭೆಗಳಲ್ಲಿ ಈಗಿರುವ ಕಂದಾಯದ ಪ್ರವೃತ್ತಿ ಬಹಳ ಕಡಿಮೆಯೆಂದೂ, ಅದನ್ನು ಹೆಚ್ಚಿಸಿ ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗಿಸಬೇಕೆಂದೂ ಸೂಚಿಸಿದರು.

ಕಾರ್ಯದರ್ಶಿಯವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಹಂಗೆರಿ ಪರಿಸ್ಥಿತಿ ತನಿಖೆ ಮಂಡಲದಲ್ಲಿ ಭಾರತದ ಪ್ರತಿನಿಧಿ

ಹಂಗೆರಿಯ ಪರಿಸ್ಥಿತಿ ಬಗ್ಗೆ ತನಿಖೆ ನಡೆಸಲು ನಾರ್ವೆ ನ್ಯಾಯಾಧೀಶ ಆಸ್ಕರ್ ಗುಂಡರ್‌ಸನ್, ಭಾರತದ ಆರ್ಥರ್ ಲಾಲ್ ಮತ್ತು ಕೊಲಂಬಿಯದ ಆಲ್ಬರ್ಟೊ ಲ್ಲೆರಾಸ್‌ರವರನ್ನು ವೀಕ್ಷಕರನ್ನಾಗಿ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಷೀಲ್ಡ್ ನೇಮಿಸಿರುತ್ತಾರೆ. ಅವರು ವಿಶ್ವಸಂಸ್ಥೆಗೆ ವರದಿ ಮಾಡುವಂತೆ ಸೂಚಿಸಲಾಗಿದೆ. ಲಾಲ್‌ರವರು ವಿಶ್ವಸಂಸ್ಥೆಯಲ್ಲಿ ಭಾರತದ ಖಾಯಂ ಪ್ರತಿನಿಧಿಗಳು. ತನಿಖೆಗೆ ಹಂಗೆರಿಯು ಪ್ರವೇಶಾನುಮತಿ ತಿರಸ್ಕರಿಸುತ್ತಿದೆ.

ಪೋರ್ಟ್ ಸೈಯದ್ ಬಿಡಲು ಬ್ರಿಟನ್-ಫ್ರಾನ್ಸ್‌ಗಳ ಅಸಮ್ಮತಿ

ಪೋರ್ಟ್ ಸೈಯದ್ದಿನಲ್ಲಿರುವ ಬ್ರಿಟಿಷ್ ರಾಜತಾಂತ್ರಿಕ ಅಧಿಕಾರಿಯನ್ನು ಅಲ್ಲಿನ ಮಿಲಿಟರಿ ಗವರ್ನರರನ್ನಾಗಿ ನೇಮಿಸಲಾಗಿದೆಯೆಂದು ವರದಿಯಾಗಿದೆ. ಈ ಪ್ರದೇಶದಿಂದ ಪಾಳೆಯಗಳು ಬ್ರಿಟನ್ನಾಗಲೀ ಅಥವಾ ಫ್ರಾನ್ಸಾಗಲೀ ಬಿಟ್ಟುಕೊಡಲ್ಲವೆಂದೂ, ಅದಕ್ಕೆ ಪ್ರತಿಯಾಗಿ ಆ ಪ್ರದೇಶದಲ್ಲಿ ಹೆಚ್ಚಿನ ಸೈನ್ಯಗಳನ್ನು ಜಮಾಯಿಸಲಾಗುತ್ತಿರುವುದಾಗಿ ಹೇಳಲಾಗಿದೆ.

ಮೈಸೂರು ಹೈಕೋರ್ಟು ಜಡ್ಜರಾಗಿ ಪದ್ಮನಾಭಯ್ಯನವರ ನೇಮಕ

ಶ್ರೀ ಕೆ. ಎನ್. ಪದ್ಮನಾಭಯ್ಯನವರನ್ನು ಮೈಸೂರು ಹೈಕೋರ್ಟಿನ ಅಡಿಷನಲ್ ಜಡ್ಜರಾಗಿ ೬ ತಿಂಗಳ ಅವಧಿಗೆ ನೇಮಿಸಲಾಗಿದೆ. ಅವರು ಅಧಿಕಾರ ವಹಿಸಿದಂದಿನಿಂದ ಈ ಆಜ್ಞೆಯು ಜಾರಿಗೆ ಬರುವುದು

ಸಹಾಯಾರ್ಥ ನಾಟಕ

ನಗರದ ಪೂರ್ಣಿಮಾ ಕಲಾ ಮಂದಿರದವರು ನಾಳೆ ಸಂಜೆ ೬|| ಗಂಟೆಗೆ ಟೌನ್‌ಹಾಲಿನಲ್ಲಿ ತಮ್ಮ ಮೊಟ್ಟಮೊದಲನೆ ಕನ್ನಡ ಸಾಮಾಜಿಕ ನಾಟಕವಾದ 'ಅಟಂ ಬಾಂಬ್' ಅನ್ನು ಅಭಿನಯಿಸುವರು. ಡೆಕ್ಕನ್ ಹೆರಾಲ್ಡ್ ಪತ್ರಿಕೆಯ ನಗರ ಶಾಖಾ ವ್ಯವಸ್ಥಾಪಕರಾದ ಶ್ರೀ ಬಿ. ಕೆ. ಗೌಡರು ಅಧ್ಯಕ್ಷತೆ ವಹಿಸುವರು. ಶ್ರೀ ನಿರಂಜನಯ್ಯನವರು ಭಾಷಣ ಮಾಡುವರು.

ಜನವರಿ ೨೧ ನೇ ತಾರೀಕು ಎಸ್. ಎಸ್. ಎಲ್. ಸಿ. ಪರೀಕ್ಷೆ

ಬೆಂಗಳೂರು ೧೬

೧೯೫೭ನೇ ಇಸವಿಯ ಎಸ್. ಎಸ್. ಎಲ್. ಸಿ. ಪರೀಕ್ಷೆಯು ಜನವರಿ ೧೪ನೇ ತಾರೀಕು ಆರಂಭವಾಗತಕ್ಕದ್ದೆಂದು ಗೊತ್ತುಪಡಿಸಲಾಗಿದ್ದುದನ್ನು ಬದಲಾಯಿಸಿ ಜನವರಿ ೨೧ನೇ ತಾರೀಕು ನಡೆಯುವುದೆಂದು ಇಲಾಖಾ ಪ್ರಕಟನೆಯಲ್ಲಿ ತಿಳಿಸಲಾಗಿದೆ. ಟೀಚರ್ಸ್ ಸರ್ಟಿಫಿಕೇಟು ಪರೀಕ್ಷೆಗಳೂ ಮತ್ತು ಕನ್ನಡ ಪಂಡಿತರು ಮತ್ತು ಮುನ್ಷಿಗಳ ಪರೀಕ್ಷೆಗಳೂ ಅದೇ ದಿನ ಆರಂಭವಾಗಲಿವೆ.

ಈಜಿಪ್ಟಿನಲ್ಲಿ ಶಾಂತಿ ಪಾಲನೆಗಾಗಿ ಭಾರತದ ತಂಡದ ಪ್ರಯಾಣ

ಈಜಿಪ್ಟಿನಲ್ಲಿ ಶಾಂತಿ ಪಾಲನೆಗಾಗಿ ಏರ್ಪಟ್ಟಿರುವ ವಿಶ್ವಸಂಸ್ಥೆಯ ಪೋಲೀಸು ಪಡೆಯ ಅಂಗವಾಗಿ ಭಾರತದ ತಂಡದ ಪ್ರಥಮ ಭಾಗವು ನೆನ್ನೆ ವಿಶ್ವಸಂಸ್ಥೆಯ ವಿಮಾನದಲ್ಲಿ ಆಗ್ರಾದಿಂದ ನೇಪಲ್ಸಿಗೆ ಪ್ರಯಾಣ ಮಾಡಿತು. ಮೇಜರ್ ಪ್ರಾಣನಾಥ್‌ರವರ ನೇತೃತ್ವದಲ್ಲಿ ೪ ಅಧಿಕಾರಿಗಳು ಮತ್ತು ೯೨ ಸೈನಿಕರು ಹೊರಟರು. ಇವರುಗಳು ಮಹಾ ಯುದ್ಧ ಮತ್ತು ಕೊರಿಯಾ ಶಾಂತಿ ಪಡೆಗಳಲ್ಲಿ ಭಾಗವಹಿಸಿದ್ದವರು. ನೆಹರೂ ಮತ್ತು ಕೇಂದ್ರ ರಕ್ಷಣಾ ಮಂತ್ರಿ ಕಟ್ಜುರವರು ಶುಭ ಸಂದೇಶ ಕಳುಹಿದ್ದರು. ಅವರನ್ನು ಪ್ರಧಾನ ಸೇನಾನಿ ಜನರಲ್ ಶ್ರೀ ನಾಗೇಶ್‌ರವರು ಬೀಳ್ಕೊಟ್ಟರು.

ವಿದ್ಯುಚ್ಛಕ್ತಿ ದರವನ್ನು ಇಳಿಸಬೇಕು

[illegible] ಮತ್ತು ಸಚಿವರಿಗೆ ಹಿಟ್ಟಿನ ಗಿರಣಿಯವರ ಮನವಿ

ಮೈಸೂರು ೧೬

ನಗರದ ಹಿಟ್ಟಿನ ಗಿರಣಿ ಮಾಲೀಕರ ಸಂಘದ ಪ್ರತಿನಿಧಿಗಳು ನೆನ್ನೆ ಜಲಸನ್ನಿಧಿಯಲ್ಲಿ [illegible] ಮತ್ತು ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರನ್ನು ಭೇಟಿ ಮಾಡಿ, ವಿದ್ಯುಚ್ಛಕ್ತಿ ದರದ ವಿಷಯವಾಗಿ ಮನವಿಯೊಂದನ್ನು ಸಲ್ಲಿಸಿ, ಆ ಬಗ್ಗೆ ಸಣ್ಣಪುಟ್ಟ ಬಳಕೆಗಾರರಿಗೆ ಆಗಿರುವ ತೊಂದರೆಗಳನ್ನು ಅರಿಕೆ ಮಾಡಿದರು.

ವಿದ್ಯುಚ್ಛಕ್ತಿ ಮೋಟಾರುಗಳ ಅಭಾವಕ್ಕಾಗಿ ಬರುವ ಮಾರ್ಚಿ ಮುಗಿಯುವವರೆಗೂ ಹಳೇ ದರವನ್ನೇ ಮುಂದುವರಿಸುವಂತೆಯೂ, ಕಡಿಮೆ ಅಶ್ವಶಕ್ತಿಯ ಮೋಟಾರುಗಳನ್ನು ಇಲಾಖೆಯ ಮೂಲಕ ಸಂಘದ ಸದಸ್ಯರುಗಳಿಗೆ ಸರಬರಾಜು ಮಾಡಿಸುವಂತೆಯೂ ಮತ್ತು ಕನಿಷ್ಠಾಂಶದ ದರವನ್ನು ಸಂಸ್ಥಾನದಾದ್ಯಂತ ಒಂದೇ ವಿಧವಾಗಿ, ಅಶ್ವಶಕ್ತಿ ಒಂದಕ್ಕೆ ೫೦ ಯೂನಿಟ್ಟುಗಳ ಆಧಾರದ ಮೇಲೆ ಗೊತ್ತುಮಾಡಬೇಕೆಂದೂ ಕೋರಲಾಯಿತು. ಪವರ್ ಫ್ಯಾಕ್ಟರ್ ದಂಡವನ್ನು ರದ್ದುಗೊಳಿಸುವಂತೆಯೂ ಬೇಡಲಾಯಿತು.

ಮಂತ್ರಿಗಳು ಶಾಂತವಾಗಿ ಆಲಿಸಿ, ಸಂಬಂಧಪಟ್ಟ ಅಧಿಕಾರಿಗಳೊಡನೆ ಈ ವಿಚಾರವನ್ನು ಚರ್ಚಿಸಿ, ಸೂಕ್ತವಾದ ಕ್ರಮ ಕೈಗೊಳ್ಳುವುದಾಗಿ ಭರವಸೆಯಿತ್ತರು.

ಬೆಂಗಳೂರು ಪೌರಸಭೆಯಲ್ಲಿ ಗೊಂದಲ ಮತ್ತು ಸಭಾತ್ಯಾಗ

ಚುನಾವಣೆ ಮುಂದುವರಿಕೆ ಬಗ್ಗೆ ಅಸಮಾಧಾನ

ಬೆಂಗಳೂರು ೧೬

ಇಲ್ಲಿನ ಪೌರಸಭೆಯ ಚುನಾವಣೆಗಳನ್ನು ಮುಂದುವರಿಸಿ ಸಭೆಯ ಅವಧಿಯನ್ನು ೧ ವರ್ಷದವರೆಗೆ ಹೆಚ್ಚಿಸಿದುದಕ್ಕಾಗಿ ನೆನ್ನೆ ಪೌರಸಭಾಧಿವೇಶನದಲ್ಲಿ ಗೊಂದಲವಾಗಿ, ವಿರೋಧ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು.

ಸರ್ಕಾರದವರು ಈ ಬಗ್ಗೆ ವಿಶೇಷಾಜ್ಞೆ ಹೊರಡಿಸುವ ಮುಂಚೆ ಪೌರಸಭೆಯ ಸಲಹೆಯನ್ನು ಕೇಳದಿದ್ದುದಕ್ಕಾಗಿ ಪ್ರಶ್ನೆಗಳನ್ನು ಹಾಕಲಾಯಿತು.

ಅಧ್ಯಕ್ಷತೆ ವಹಿಸಿದ್ದ ಉಪಾಧ್ಯಕ್ಷಿಣಿ ಶ್ರೀಮತಿ ಗ್ರೇಸ್ ಟಕ್ಕರ್‌ರವರು ಉತ್ತರವಿತ್ತು, ಸರ್ಕಾರದವರು ವಿಶೇಷಾಜ್ಞೆ ಹೊರಡಿಸುವ ಮುಂಚೆ ಕಾರ್ಪೊರೇಷನ್ನಿನಿಂದ ಅಂಕಿಅಂಶಗಳನ್ನು ತರಿಸಿಕೊಂಡಿದ್ದರೆಂದು ಹೇಳಿದರು.

ವಿರೋಧ ಪಕ್ಷದ ಸದಸ್ಯರಾದ ಶ್ರೀ ಎ. ನಾಗೇಶರಾಯರು ನಿರ್ಣಯವನ್ನು ಮಂಡಿಸಿ, ಸರ್ಕಾರದ ವರ್ತನೆಯು ಸರ್ವಾಧಿಕಾರದಿಂದ ಕೂಡಿದೆಯೆಂದೂ, ಪೌರಸಭೆಯ ಅಭಿಪ್ರಾಯವನ್ನು ಕೇಳದೆ ಚುನಾವಣೆಗಳನ್ನು ಮುಂದುವರಿಸಿರುವುದು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕನ್ನು ಕಸಿದುಕೊಂಡಂತಾಗಿದೆಯೆಂದೂ ಸೂಚಿಸಿದರು.

ನಿರ್ಣಯವನ್ನು ಅಧ್ಯಕ್ಷರು ತಳ್ಳಿಹಾಕಲಾಗಿ ವಿರೋಧ ಪಂಗಡದವರು ಸಭಾತ್ಯಾಗ ಮಾಡಿದರು.

ಮಧ್ಯ ಪೂರ್ವದಲ್ಲಿ ಪುನಃ ಯುದ್ಧದ ಭಯ !

ಆಂಗ್ಲೊ–ಫ್ರೆಂಚರ ಪಡೆಗಳ ಬಗ್ಗೆ ನೆಹರೂರವರ ಕಟುವಾದ ಟೀಕೆ

ಲೋಕ ಸಭೆಯಲ್ಲಿ ನೆನ್ನೆ ಪ್ರಧಾನಿ ನೆಹರೂರವರು ಮಾತನಾಡಿ, ಪಶ್ಚಿಮ ಏಷ್ಯದಲ್ಲಿ ಪರಿಸ್ಥಿತಿಯು ಮತ್ತಷ್ಟು ಕೆಟ್ಟು ಪುನಃ ಯುದ್ಧವಾಗುವ ಚಿಹ್ನೆಗಳು ಕಾಣಬರುತ್ತಿರುವುದಾಗಿ ಹೇಳಿದರು. ಕೆಲವು ದಿನಗಳ ಹಿಂದೆ ಪರಿಸ್ಥಿತಿಯು ಉತ್ತಮವಾಗುತ್ತಿದ್ದಿತೆಂದು ತಾವು ಗ್ರಹಿಸಿದ್ದುದಾಗಿಯೂ, ಆದರೆ ಈಗ ವಿಷಮಿಸಿದೆ ಎಂದೂ ಅವರು ಹೇಳಿದರು. ಈಜಿಪ್ಟಿನಲ್ಲಿ ಆಂಗ್ಲೋ-ಫ್ರೆಂಚರು ಭದ್ರವಾಗಿ ನೆಲಯೂರಿರುವರೆಂದೂ, ಅವರ ಸೈನ್ಯಗಳು ಅಲ್ಲಿಯೇ ಇದ್ದರೆ ಪರಿಸ್ಥಿತಿ ಹದಗೆಟ್ಟು ಬೇಗನೆ ಹೊಸ ವಿಪತ್ತಿನ ಕಾರ್ಯಾಚರಣೆಗಳಾಗುವ ಸನ್ನಿವೇಶವಿದೆಯೆಂದೂ ಅವರು ಸೂಚಿಸಿದರು.

ಪೋರ್ಟ್ ಸೈಯದ್ದಿಗೆ ಸಧ್ಯದಲ್ಲೇ ಭಾರತದ ಸೈನ್ಯ ಪಡೆಯನ್ನು ಕಳುಹಲಾಗುವುದೆಂದೂ ಅವರು ನುಡಿದರು.

ಬಡಬಗ್ಗರಿಗೆ ಅನ್ನದಾನ

ನಗರದ ಅಶೋಕಾ ರಸ್ತೆ ರವೆ ಬೀದಿ ಚೌಕದ ಶ್ರೀ ಶನಿ ಮಹಾತ್ಮೆ ಪುರಾಣ ವಾಚನದ ಅಂಗವಾಗಿ ನಾಳೆ ಮಧ್ಯಾಹ್ನ ೧೨ ಗಂಟೆಗೆ ದೊಡ್ಡ ಪೇಟೆ ವರ್ತಕ ಮಂಡಳಿಯವರು ಬಡಬಗ್ಗರಿಗೆ ಅನ್ನದಾನವನ್ನು ಏರ್ಪಡಿಸಿರುತ್ತಾರೆ.

ರಾಷ್ಟ್ರದ ಅಭಿವೃದ್ಧಿಯಲ್ಲಿ ವೈದ್ಯ ಸಂಶೋಧನೆಯ ಪಾತ್ರ

ವೈದ್ಯರ ಸಮ್ಮೇಳನದಲ್ಲಿ ಗವರ್ನರರ ಭಾಷಣ

ಮೈಸೂರು ೧೬

ಭಾರತದ ವೈದ್ಯ ಸಂಶೋಧನಾ ಮಂಡಲಿಯ ವೈಜ್ಞಾನಿಕ ಸಲಹಾ ಸಮಿತಿ ಮತ್ತು ಮಂಡಲಿಯ ಆರಂಭೋತ್ಸವವು ನೆನ್ನೆ ಕ್ರಾಫರ್ಡ್ ಭವನದಲ್ಲಿ ಮೈಸೂರಿನ ಗವರ್ನರ್ ಶ್ರೀ ಜಯಚಾಮರಾಜ ಒಡೆಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಶ್ರೀಮತಿಯರಾದ [illegible] ವೈದ್ಯನಾಥನ್ ಮತ್ತು ಲೀಲಾವತಿಯವರಿಂದ ಪ್ರಾರ್ಥನೆಯಾದ ನಂತರ ಮೈಸೂರು ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಶ್ರೀ ಕೆ. ವಿ. ಪುಟ್ಟಪ್ಪನವರು ಸ್ವಾಗತ ಭಾಷಣ ಮಾಡಿ, ಪ್ರಾಚೀನ ಶಾಸ್ತ್ರೀಯ ವೈದ್ಯ ಪದ್ಧತಿಯಾದ ಆಯುರ್ವೇದದ ಬಗ್ಗೆ ವಿಕಾರ ಮತ್ತು ಅಸೂಯೆಗಳಿಲ್ಲದೆ, ಸತ್ಯದ ಶೋಧನೆಯಲ್ಲಿ ತೊಡಗುವ ವಿಜ್ಞಾನದ ನಿಜವಾದ ಸ್ಫೂರ್ತಿಯಿಂದ ಪರಿಶೀಲನೆ ನಡೆಸಿ, ಪ್ರಾಚೀನವಾದ ಈ ಪದ್ಧತಿಯು ಮುಂದುವರಿಯುವಂತೆ ಮಾಡುವುದಕ್ಕೆ ನಾವು [illegible] ನುಡಿದರು. ಆಯುರ್ವೇದ ಮತ್ತು ಅಲೋಪತಿಗಳ ನಡುವೆ ಈ ರೀತಿ ಭೇದವು ಹೋಗಬೇಕೆಂದೂ, ಮಾನವನ ಆರೋಗ್ಯ ಮತ್ತು ರೋಗಗಳನ್ನು ಗುಣಪಡಿಸುವ ಒಂದೇ ಒಂದು ಸಂಯೋಜಿತ ವಿಜ್ಞಾನವಿರಬೇಕೆಂದೂ ಅವರು ಹೇಳಿದರು. ಈ ಎರಡು ಪದ್ಧತಿಗಳ ನಡುವೆ ಸಂಬಂಧವುಂಟಾಗಬೇಕೆಂದು ಆಶಿಸಿದರು. ಆಯುರ್ವೇದ ಸಂಶೋಧನೆಗೆ ಪ್ರಾಮುಖ್ಯತೆ ಇತ್ತೆಂದೂ, ಪ್ರಾಚೀನ ಆಯುರ್ವೇದಾಚಾರ್ಯರ ಸಂಶೋಧನಾ ಪರಂಪರೆಯು ಈಚೆಗೆ ನಿಂತುಹೋಯಿತೆಂದೂ, ಅದಕ್ಕೆ ಆಧುನಿಕ ವೈಜ್ಞಾನಿಕ ಸಂಶೋಧನೆಯ ನೆರವು ದೊರೆಯಬೇಕೆಂದೂ ಅವರು ಹೇಳಿದರು. ಔಷಧಿಗಳು ಸುಲಭ ದರದಲ್ಲಿ ದೊರೆತು ಸರ್ವರಿಗೆ ಲಭಿಸಬೇಕೆಂದೂ ಸೂಚಿಸಿದರು. ಹಲವು ಗೃಹ ಚಿಕಿತ್ಸೆಗಳು ಮನೆಗಳಲ್ಲಿ ಅಜ್ಞಾತವಾಗಿಯೂ ತಿಳಿದಿದ್ದ ವಿಷಯವನ್ನು ಅವರು ಜ್ಞಾಪಿಸಿದರು. ವೈದ್ಯ ವೃತ್ತಿಯಲ್ಲಿ ಲಾಭದ ಉದ್ದೇಶವಿಲ್ಲದೆ ಸೇವಾ ಭಾವನೆಯು ಎದ್ದು ಕಾಣಬೇಕೆಂದೂ, ಪ್ರಾದೇಶಿಕ ಭಾಷೆಗಳಲ್ಲಿ ವೈದ್ಯಕೀಯ ಶಿಕ್ಷಣಕ್ಕೆ ಅವಕಾಶವಾಗಬೇಕೆಂದೂ ಸೂಚಿಸಿದರು.

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಸ್ವಾಗತ ಬಯಸಿ, ಆಧುನಿಕ ವೈದ್ಯರುಗಳಿಗೆ ಆಯುರ್ವೇದದ ಬಗ್ಗೆ ಸಹಾನುಭೂತಿ ಮತ್ತು ಗೌರವವಿರಬೇಕೆಂದು ಹೇಳಿದರು. ಸುಲಭ ಬೆಲೆಯಲ್ಲಿ ದೊರೆಯುತಕ್ಕ ಔಷಧಿಗಳನ್ನು ಕಂಡುಹಿಡಿಯುವುದು ಅವಶ್ಯಕವೆಂದು ಅವರು ಸೂಚಿಸಿದರು. ಗ್ರಾಮಾಂತರದ ಕಡೆಗೆ ವೈದ್ಯರುಗಳ ಗಮನವು ಹೆಚ್ಚಬೇಕೆಂದೂ ಅವರು ಹೇಳಿ, [illegible] ಮುಂತಾದ ಕಠಿಣ ರೋಗಗಳ ಬಗ್ಗೆ ಸೂಕ್ತ ಪರಿಹಾರವನ್ನು ಕಂಡುಹಿಡಿಯುವುದು ಅಗತ್ಯವೆಂದು ನುಡಿದರು. ಕೇಂದ್ರ ಸರ್ಕಾರದ ಆರೋಗ್ಯ ಇಲಾಖೆಯ ಕಾರ್ಯದರ್ಶಿ ಶ್ರೀ ವಿ. ಕೆ. ಬಿ. ಪಿಳ್ಳೆಯವರು ಆರಂಭ ಭಾಷಣ ಮಾಡಿ ಇತ್ತೀಚೆ ನಡೆದಿರುವ ಸಂಶೋಧನೆಗಳನ್ನು ವಿವರಿಸಿದರು.

ಅಧ್ಯಕ್ಷರು ಭಾಷಣ ಮಾಡಿ ವೈದ್ಯ ಸಂಶೋಧನೆಗೆ ಮೆಡಿಕಲ್ ಕಾಲೇಜುಗಳು ಸೂಕ್ತ ಕೇಂದ್ರಗಳಾಗಿವೆ ಎಂದು ಹೇಳಿದರು. ಭಾರತದಲ್ಲಿ ಆರೋಗ್ಯ ಸಮಸ್ಯೆಗಳು ಇತರ ದೇಶಗಳಂತೆಯೇ ಇದ್ದರೂ, ಇಲ್ಲಿ ಉದ್ಭವಿಸುವ ವ್ಯಾಧಿಗಳು ವಿಶೇಷವಾಗಿವೆಯೆಂದೂ, ಮೇಲಾಗಿ ಪೌಷ್ಟಿಕಾಹಾರದ ಸಮಸ್ಯೆಯೂ ಇದೆಯೆಂದೂ ಹೇಳಿದರು. ಆಧುನಿಕ ಸುಖೀ ರಾಜ್ಯದಲ್ಲಿ ವೈದ್ಯಕೀಯ ಸಂಶೋಧನೆಯ ಸ್ಥಾನ ಬಹು ಮುಖ್ಯವೆಂದೂ, ಪ್ರಜಾವರ್ಗದವರ ಆರೋಗ್ಯ ಭಾಗ್ಯವೆ ಮುಖ್ಯ ಆಧಾರವಾಗಿಲ್ಲದ ಯಾವ ಅಭಿವೃದ್ಧಿ ಯೋಜನೆಯನ್ನೂ ಕೈಗೊಳ್ಳಲು ಸಾಧ್ಯವಿಲ್ಲವೆಂದೂ ಅವರು ತಿಳಿಸಿದರು. ದೇಶದ ಆರ್ಥಿಕ ಸ್ಥಿತಿಯು ಅನುಕೂಲಿಸಿದಂತೆಲ್ಲಾ ವೈದ್ಯ ವಿದ್ಯಾಭ್ಯಾಸ ಮತ್ತು ಸಂಶೋಧನೆಗೆ ಹೆಚ್ಚು ಬೆಂಬಲವು ದೊರೆಯುವುದೆಂದು ಅವರು ಸೂಚಿಸಿದರು.

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ರಷ್ಯದ ವಿರುದ್ಧವಾಗಿ ಟೋಕಿಯೋವಿನಲ್ಲಿ ಪ್ರದರ್ಶನ

ಟೋಕಿಯೋವಿನಲ್ಲಿರುವ ರಷ್ಯ ರಾಯಭಾರಿ ಕಛೇರಿಗೆ ೬೦೦ ಜನ ಜಪಾನಿ ಬಲ ಪಕ್ಷದ ರಾಷ್ಟ್ರೀಯರು ನೆನ್ನೆ ನುಗ್ಗಿ ಗಲಭೆ ಮಾಡಿದರು. ಒಬ್ಬ ಪೋಲೀಸನಿಗೆ ತೀವ್ರ ಗಾ[illegible] ಜನರನ್ನು ಬಂಧಿಸಲಾಗಿದೆ. ರಷ್ಯದೊಡನೆ ಜಪಾನು ಮಾಡಿಕೊಂಡಿರುವ ಒಪ್ಪಂದವನ್ನು ಅಲ್ಲಿನ ಪಾರ್ಲಿಮೆಂಟು ಅಂಗೀಕರಿಸುವುದನ್ನು ವಿರೋಧಿಸಲು ಅವರು ಈ ರೀತಿ ಪ್ರದರ್ಶನ ನಡೆಸಿದು[illegible]

ಮದ್ರಾಸಿನಲ್ಲಿ ತುಟ್ಟಿ ಭತ್ಯ ಹೆಚ್ಚಿತು

ಮದ್ರಾಸಿನ ಸರ್ಕಾರಿ ನೌಕರರುಗಳಿಗೆ ತುಟ್ಟಿ ಭತ್ಯವನ್ನು ಹೆಚ್ಚಿಸಲಾಗಿದೆ. ಅದರ ಪ್ರಕಾರ ೩೯ ರೂ. ತಿಂಗಳು ಬರುವವರಿಗೆ ೨೫ ರೂ. ನಂತೆಯೂ ಹೆಚ್ಚು ಸಂಬಳ ಬರುವವರಿಗೆ ಕೇವಲ ೧೭½ ರ ಯ ಸಹ ಭತ್ಯವೀಯಲಾಗುವುದು. ಅಲ್ಲದೆ ೩೦೦ಕ್ಕಿಂತ ಹೆಚ್ಚು ೪೦೦ ರೂ. ಒಳಗೆ ಸಂಬಳ ಬರುವ ನಾನ್‌ಗೆಜೆಟೆಡ್ ನೌಕರರಿಗೆ ೫ ರೂ. ಹೆಚ್ಚಾಗಿ ಕೊಡಲಾಗುವುದು. ಕಳೆದ ೧೦ರಿಂದ ಇದು ಜಾರಿಗೆ ಬರಲಿದೆ. ೫೫೦ ರೂ ಗಿಂತ ಹೆಚ್ಚು ಸಂಬಳ ಬರುವ ಅವಿವಾಹಿತರಿಗೂ ಮತ್ತು ೪೦೦ ರೂ. ಗಿಂತ ಹೆಚ್ಚು ಬರುವ ಅಧಿಕಾರಿಗಳಿಗೂ ಇದನ್ನು ಕೊಡಲಾಗುವುದಿಲ್ಲ

ವಿಚಿತ್ರ ಕರು

ಅರಕಲಗೂಡು ತಾಲ್ಲೂಕು ರಾಮನಾಥಪುರದ ಹೋಬಳಿ ಕೊಪ್ಪವಾಳು ಗ್ರಾಮದ ಪಟೇಲ ಶ್ರೀ ಬಸಪ್ಪನ ಮನೆಯಲ್ಲಿ ಜನಿಸಿದ ಒಂದು ಕರುವಿಗೆ, ನಾಲ್ಕು ಕಣ್ಣು, ಆರು ಕಾಲು, ಎರಡು ಮೂತ್ರಕೋಶ ಮತ್ತು ೩ ಬಾಲಗಳಿವೆ

ಕನ್ನಡ ಪ್ರಬಂಧ ಸ್ಪರ್ಧೆ

ನಗರದ ಶ್ರೀ ಸುತ್ತೂರು ಶಿವರಾತ್ರೀಶ್ವರ ವಿದ್ಯಾರ್ಥಿನಿಲಯದ ಸಂಘದವರು ಕರ್ನಾಟಕ ಏಕೀಕರಣ ಮಹೋತ್ಸವದ ಅಂಗವಾಗಿ ಅಖಿಲ ಕರ್ನಾಟಕ ಅಂತರ ಕಾಲೇಜು ಕನ್ನಡ ಪ್ರಬಂಧ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಉತ್ತಮವಾದ ಮೂರು ಪ್ರಬಂಧಗಳಿಗೆ ಬಹುಮಾನವೀಯಲಾಗುವುದು. ಕರ್ನಾಟಕದ ಎಲ್ಲ ಕಾಲೇಜು ವಿದ್ಯಾರ್ಥಿ ವಿದ್ಯಾರ್ಥಿನಿಯರೂ ಭಾಗವಹಿಸಬಹುದು. ೨೫ ಪುಟಗಳಿಗೆ ಮೀರದ ಪ್ರಬಂಧವನ್ನು ತಮ್ಮ ಹೆಸರು, ತರಗತಿ, ವಿಳಾಸ ಇತ್ಯಾದಿ ವಿವರಗಳೊಡನೆ ಇದೇ ೩೦ನೇ ತಾರೀಖಿನೊಳಗೆ ಸಂಘದ ಕಾರ್ಯದರ್ಶಿಯವರಿಗೆ ಕಳುಹಿಸಬೇಕು. ಕರ್ನಾಟಕ ಏಕೀಕರಣಕ್ಕಾಗಿ ದುಡಿದ ಮಹನೀಯರು, ಕರ್ನಾಟಕದ-ಸಂಸ್ಕೃತಿ, ಸಾಹಿತ್ಯ, ಸಂಗೀತ ಮತ್ತು ಕಲೆ, ಪ್ರಕೃತಿ ಸಂಪತ್ತು, ಕೆಲವು ಆಧುನಿಕ ಕವಿಗಳು, ವಚನ ಸಾಹಿತ್ಯ; ಮತ್ತು ಬೇಂದ್ರೆ, ಕುವೆಂಪು, ಕಾರಂತ್, ಶ್ರೀನಿವಾಸ, ಡಿ. ವಿ. ಜಿ., ತೀ. ನಂ. ಶ್ರೀ ಯವರ ಪೈಕಿ ಒಬ್ಬರು-ಈ ಎಂಟು ವಿಷಯಗಳ ಪೈಕಿ ಒಂದರ ಬಗ್ಗೆ ಪ್ರಬಂಧವನ್ನು ಬರೆಯಬೇಕು

ಜಿಲ್ಲಾ ಬೋರ್ಡುಗಳಿಗೆ ಒಂದೇ ವಿಧದ ಆಡಳಿತ ಪರಿಶೀಲನಾ ಸಭೆ

ಸಂಸ್ಥಾನದ ಜಿಲ್ಲಾಬೋರ್ಡ್ ಮತ್ತು ಗ್ರಾಮ ಪಂಚಾಯತಿಗಳಿಗೆ ಒಂದೇ ವಿಧವಾದ ಆಡಳಿತ ವ್ಯವಸ್ಥೆ ಮಾಡುವ ಬಗ್ಗೆ ಪರ್ಯಾಲೋಚನೆ ನಡೆಸಲು ಡಿವಿಜನಲ್ ಕಮೀಷನರುಗಳ ಸಭೆಯು ಸಧ್ಯದಲ್ಲೇ ಬೆಂಗಳೂರಿನಲ್ಲಿ ಸೇರಲಿದೆ. ಜಿಲ್ಲಾ ಬೋರ್ಡುಗಳ ಕಾರ್ಯದಲ್ಲಿ ಹೆಚ್ಚಿನ ಸಂಖ್ಯೆಯ ನಾಗರಿಕರು ಭಾಗವಹಿಸಲು ಸಾಧ್ಯವಾಗುವ ವಿಚಾರವನ್ನು ಅಲ್ಲಿ ಪರಿಶೀಲಿಸಲಾಗುವುದು.

ಆಯುರ್ವೇದ ಕಾಲೇಜಿನ ಅಭಿವೃದ್ಧಿ

ಮಂತ್ರಿಗಳ ಭರವಸೆ

ಮೈಸೂರು ೧೬

ನಗರದ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳು ನೆನ್ನೆ ಧನ್ವಂತರಿ ಪೂಜೆಯನ್ನು ನೆರವೇರಿಸಿ ತಮ್ಮ ೪೦ ದಿನದ ಮುಷ್ಕರವನ್ನು ಮುಕ್ತಾಯಗೊಳಿಸಿದರು. ಇದಕ್ಕಾಗಿ ಒಂದು ಸಮಾರಂಭವು ಏರ್ಪಾಡಾಗಿತ್ತು. ಶ್ರೀಮತಿ ಸತ್ಯವತಿಯವರಿಂದ ಪ್ರಾರ್ಥನೆ ನಡೆದಮೇಲೆ ಪ್ರಿನ್ಸಿಪಾಲ್ ಶ್ರೀ ಎಸ್. ವೆಂಕಟನಾರಾಯಣರಾಯರು ಕಾಲೇಜಿನ ಇತಿಹಾಸವನ್ನೂ, ಅದರ ಅಭಿವೃದ್ಧಿಗೆ ಆಗಬೇಕಾದ ಕಾರ್ಯಕ್ರಮಗಳನ್ನೂ ನಿರೂಪಿಸಿದರು.

ವಿದ್ಯಾರ್ಥಿಗಳ ಪರವಾಗಿ ಶ್ರೀ ಎಂ. ಆರ್. ಶೆಟ್ಟಿಯವರು ಭಾಷಣ ಮಾಡಿ, ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸಿಕೊಳ್ಳಲು ಅನಿವಾರ್ಯವಾಗಿ ಮುಷ್ಕರ ಹೂಡಿದ ಅಂಶವನ್ನೂ, ಈಗ ದೊರೆತಿರುವ ಭರವಸೆಯ ಮೇಲೆ ಅದನ್ನು ಮುಕ್ತಾಯ ಮಾಡಲು ಕೈಗೊಂಡ ನಿರ್ಧಾರವನ್ನೂ ವಿವರಿಸಿದರು. ಕಾಲೇಜನ್ನು ಉತ್ತಮಪಡಿಸಲು ಸರ್ಕಾರದವರು ಎಲ್ಲಾ ನೆರವನ್ನೂ ನೀಡಬೇಕೆಂದು ಕೋರಿದರು

ಮುಷ್ಕರದ ಮುಕ್ತಾಯದಲ್ಲಿ ಮುಖ್ಯ ಪಾತ್ರವನ್ನು ವಹಿಸಿ ಸಂಧಾನ ನಡೆಸಿದ ಮಾಜಿ ಸೇನಾಪತಿ ಜನರಲ್ ಕಾರಿಯಪ್ಪನವರು ಭಾಷಣ ಮಾಡಿ, ಕಾಲೇಜಿನ ಶೋಚನೀಯ ಸ್ಥಿತಿಗಾಗಿ ಮರುಕಪಟ್ಟರಲ್ಲದೆ, ತಮ್ಮ ನ್ಯಾಯವಾದ ಬೇಡಿಕೆಗಳನ್ನು ಸಾಧಿಸಲು ವಿದ್ಯಾರ್ಥಿಗಳು ಅಕ್ರಮ ಮಾರ್ಗಗಳನ್ನು ಕೈಗೊಂಡು ವ್ಯರ್ಥ ಕಾಲಹರಣ ಮಾಡಬಾರದೆಂದು ಸೂಚಿಸಿದರು. ರಾಷ್ಟ್ರದ ಪುನರುದ್ಧಾರ ಕಾರ್ಯದಲ್ಲಿ ಅವರು ತಮ್ಮ ಪಾತ್ರವನ್ನು ವಹಿಸಬೇಕೆಂದೂ ನುಡಿದರು.

ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ಮಾತನಾಡಿ, ಕಾಲೇಜಿನ ಉನ್ನತಿಗಾಗಿ ಆದಷ್ಟು ಬೇಗನೆ ಸೂಕ್ತ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿದರು. ಈಗ ಇರುವ ೩೦೦ ಮಂದಿ ವಿದ್ಯಾರ್ಥಿಗಳಿಗೆ ಆಸ್ಪತ್ರೆಯ ೩೩ ಹಾಸಿಗೆಗಳು ಸಾಕಾಗಲಾರದೆಂದು ಅವರು ಹೇಳಿ, ಅದನ್ನು ನೂರಕ್ಕಾದರೂ ಹೆಚ್ಚಿಸುವುದಲ್ಲದೆ ವಸ್ತು ಪ್ರದರ್ಶನದ ಕಟ್ಟಡದಲ್ಲಿ ಕಾಲೇಜನ್ನು ನಡೆಸುವ ವಿಷಯವನ್ನು ಪರ್ಯಾಲೋಚಿಸಲಾಗುವುದೆಂದು ಹೇಳಿದರು. ಇದಲ್ಲದೆ ಉತ್ತಮ ವರ್ಗದ ಅಧ್ಯಾಪಕರನ್ನು ನೇಮಿಸಲಾಗುವುದೆಂದೂ, ಒಳ್ಳೆಯ ಪುಸ್ತಕ ಭಂಡಾರ, ಪ್ರಯೋಗ ಶಾಲೆ, ಮುಂತಾದ ಸೌಲಭ್ಯಗಳನ್ನು ಒದಗಿಸಲಾಗುವುದೆಂದೂ ಹೇಳಿದರು.

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮಾತನಾಡಿ, ಮಹಾಜನರ ಸೇವೆಗಾಗಿ ಸಿದ್ಧರಾಗುತ್ತಿರುವ ವಿದ್ಯಾರ್ಥಿಗಳ ಶಿಕ್ಷಣದ ಬಗ್ಗೆ ಪೂರ್ಣ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ಇತರ ಪದ್ಧತಿಗಳಂತೆಯೇ ಆಯುರ್ವೇದವೂ ಸಹ ಒಂದು ಶಾಸ್ತ್ರೀಯವಾದ ವೈದ್ಯ ಕ್ರಮವೆಂದು ಅವರು ನುಡಿದರು. ಆಧುನಿಕ ವಿಜ್ಞಾನದ ನೆರವಿನಿಂದ ಅದು ಇನ್ನೂ ಅಭಿವೃದ್ಧಿಗೆ ಬರಬೇಕೆಂದೂ ಹೇಳಿದರು. ಮೈಸೂರು ಆಯುರ್ವೇದ ಕಾಲೇಜಿನ ವಿಚಾರದಲ್ಲಿ ಇದುವರೆಗೆ ತೋರಿಸಲಾಗಿರುವ ಅನಾದರಣೆ ಬಗ್ಗೆ ಅವರು ತಮ್ಮ ದುಃಖವನ್ನು ವ್ಯಕ್ತಪಡಿಸಿ, ಇಂತಹ ಪರಿಸ್ಥಿತಿಯಲ್ಲೂ ವಿದ್ಯಾರ್ಥಿಗಳು ತಾಳ್ಮೆಯಿಂದ ಪಾಠಪ್ರವಚನಗಳನ್ನು ಇದುವರೆಗೆ ನಡೆಸಿಕೊಂಡುಬಂದಿರುವುದು ಅವರ ದೇಶಾಭಿಮಾನದ ಕುರುಹೆಂದು ನುಡಿದರು. ವಿದ್ಯಾರ್ಥಿಗಳ ಮುಷ್ಕರವು ಮುಕ್ತಾಯವಾಗಿರುವುದಕ್ಕಾಗಿ ಸಂತೋಷವನ್ನು ವ್ಯಕ್ತಪಡಿಸಿ, ಇನ್ನು ಮುಂದೆ ಮುಷ್ಕರದ ಪ್ರಸಂಗವು ಉಂಟಾಗಬಾರದೆಂದು ಹಾರೈಸಿದರು. ಸರ್ಕಾರದ ಸಹಕಾರದಿಂದ ಅಗತ್ಯವಾದ ಸುಧಾರಣೆಗಳನ್ನು ಪಡೆಯಲು ಸಾಧ್ಯವೆಂದು ಅವರು ಹೇಳಿದರು.

ಮೈಸೂರು ನಗರವು ದಿನೇದಿನೇ ಕ್ಷೀಣಿಸುತ್ತಿರುವ ಬಗ್ಗೆ ಅನೇಕರು ವಿಷಾದವನ್ನು ವ್ಯಕ್ತಪಡಿಸುತ್ತಿರುವರು. ಈ ನಗರವು ನಮ್ಮ ಅತ್ಯಂತ ಸುಂದರವಾದ ಪಟ್ಟಣಗಳಲ್ಲಿ ಒಂದು. ಬೆಂಗಳೂರಿಗಿಂತಲೂ ಇದು ಚೆನ್ನಾಗಿರುತ್ತದೆ. ಆದರೆ ಇಲ್ಲಿ ಸಾಕಾದಷ್ಟು ಜೀವಕಳೆ ಇರುವುದಿಲ್ಲ. ಮೈಸೂರಿನವರು ಮುಂದೆ ಬಂದು ಕಟ್ಟಡ ಸ್ಥಳದ ಸೌಲಭ್ಯಗಳನ್ನು ಒದಗಿಸದಿದ್ದರೆ ಈ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸಬೇಕಾದೀತು ಎಂದು ಶ್ರೀ ನಿಜಲಿಂಗಪ್ಪನವರು ಹೇಳಿದರು

ಇನ್ನು ಒಂದು ವಾರದೊಳಗೆ ಕಾಲೇಜಿಗೆ ಬೇಕಾದ ಹಲವು ಸೌಲಭ್ಯಗಳನ್ನು ಒದಗಿಸಲಾಗುವುದೆಂದು ಅವರು ತಿಳಿಸಿದರು

ಶ್ರೀ ನಾರಾಯಣಸ್ವಾಮಿಯವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರ ಗೀತೆಯಾಯ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರ

ಬೆಳಿಗ್ಗೆ ೭-೫ ಸಂಗೀತ. ೭.೧೫ ಮತ್ತು ೮-೧ ಎಸ್. ವಿ. ರಾಜೇಶ್ವರಿ ಮತ್ತು ಎಸ್. ವಿ. [illegible] ಸೂರ್ಯ-ಗೀತಾವಳಿ. ೭-೩೦ ಬಿಸ್ಮಿಲ್ಲಾ ಖಾನ್ ಪಾರ್ಟಿ-ಶಹನಾಯ್. ೮ ೩೦ ವಲ್ಲಭಂ ಕಲ್ಯಾಣ ಸುಂದರಂ-ಸಂಗೀತ. ೯-೩೦ ಬಾಲ ಜಗತ್. ಮಕ್ಕಳ ಕಾರ್ಯಕ್ರಮ. ಮಧ್ಯಾಹ್ನ ೧೨ ಮತ್ತು ೩-೧೫ ಪಾರ್ವತಿ ಮತ್ತು ಶಂಗಮ್ಮ-ಗಾಯನ ೧೨-೩೦ ವಾದ್ಯ ವೃಂದ. ೧ ನಿಮ್ಮ ಮೆಚ್ಚಿನ ಗೀತೆಗಳು. ೧-೩೦ ಎಂ. ಎಸ್. ಗೋಪಾಲಸ್ವಾಮಿ-ಗಾಯನ ಸಂಜೆ ೫ ಪಾಶ್ಚಾತ್ಯ ಗೀತ ೫-೩೦ ಮತ್ತು ೧೦ ಜೆ. ಮುನಿಸ್ವಾಮಿ ಟಪ್ಪ-ನಾಗಸ್ವರ. ೬-೫ ವಿರಾಮ ಸಂಗೀ ೬-೩೦ ಭಕ್ತಿಗೀತೆ. ೭.೩೦ ಶಕ್ತಿ ನೋಟ ನಾಟಕ ೮ ೩೦ ಗಣಿತ ಶಾಸ್ತ್ರ ಪ್ರವೀ ಶಕುಂತಲಾದೇವಿ. ಕಾರ್ಯಕ್ರಮ ೯-೧೫ [illegible] ಸಂಗೀತ. ೯-೩೦ ಗಾಯನ

THE CHAMPION METROPOLITAN COLLEGE OF COMMERCE,
"Co-operators' Home", 100' Road, Mysore
ADMISSIONS
APPLICATIONS for admission to classes in Shorthand Typewriting and Hindi ONLY, leading to November 1957 Examinations are now being received in the mornings and evenings
Sd/- M. S. PUTTANNA,
Vice-Principal.

Don't forget to visit
5,000 FINGERS OF Dr. T.
Columbia's Technicolor Hit
at GANESH TALKIES
at 6-30 p. m. tomorrow

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತನಾಗಿರುವ
ನವರತ್ನ — ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ.
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲಿನ ಕಾರ್ಯಕ್ರಮಗಳನ್ನು ಗಮನಿ
ಮತ್ತು ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಅವರು ಸಕಾಲಕ್ಕೆ ಸಂಯೋಗ [illegible]
ವಿಮಾನದಲ್ಲಿ ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಿಸಿರಿ
ಇದು ರತ್ನ, ಚಿನ್ನ, ಮುತ್ತು, [illegible], ಗೋಮೇಧಿಕ, ಹವಳ, ಪದ್ಮರಾಗ ಮತ್ತು [illegible] ಇವೇ 9 ಅಮೂಲ್ಯ ರತ್ನಗಳ [illegible] ಎಲ್ಲಾ [illegible] ಕಾಯಿಲೆಗಳಿಗೂ ಅತ್ಯುತ್ತಮ ಆರೋಗ್ಯ[illegible] ಔಷಧ ಇದೊಂದೇ.
NAVRATNA KALPA PHARMAC
JULLUNDUR CITY (Ind

Edited, Printed and Publish
A. R. Nagarajan at Sadhvi P
D. Subbiah Road, Mysore

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[illegible]
ಬ್ರಾಂಕಾಲ್
ಉಬ್ಬಸ ಮತ್ತು ಕೆಮ್ಮು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಶೆಟ್ಟಿ ಅಂಡ್ ಕೋ.,
ದಿನಸಿ ವ್ಯಾಪಾರಸ್ಥರು
71/1, [illegible]
[illegible] ರಸ್ತೆ,
ಬೆಂಗಳೂರು -2

ಸಂಪುಟ : [illegible]] SADHVI : SUNDAY 18—11—1956 ಮೈಸೂರು : ಭಾನುವಾರ ೧೮—೧೧—೧೯೫೬ [ಸಂಚಿಕೆ : [illegible]

ಚತುರ್ರಾಷ್ಟ್ರ ಮತ್ತು ಭಾರತಗಳ ಶಸ್ತ್ರ ಸನ್ಯಾಸ ಸಭೆಗೆ ಕರೆ

ಕಪಿಲಾ ಹತ್ತಿ ಗಿರಣಿ ಕಾರ್ಮಿಕರ ಉಪವಾಸ ಸತ್ಯಾಗ್ರಹ

ನಂಜನಗೂಡು ೧೭

ಕಪಿಲಾ ಟೆಕ್ಸ್‌ಟೈಲ್ ಮಿಲ್ಲಿನ ಆಡಳಿತ ಮಂಡಲಿಯವರು ಕಳೆದ ಜುಲೈ ೨೦ರಂದು ಪ್ರಕಟವಾದ ಕೈಗಾರಿಕಾ ನ್ಯಾಯಾಲಯದ ತೀರ್ಪನ್ನು ಜಾರಿಗೆ ತರದೆ ಸೆಪ್ಟೆಂಬರ್ ೧೭ರಂದು ಆದ ಒಪ್ಪಂದದ ಶರತ್ತುಗಳನ್ನು ಮುರಿದುಹಾಕಿ, ಕೆಲಸಗಾರರು ಮತ್ತು ಅಧಿಕಾರಿಗಳ ಮೇಲೆ ದಬ್ಬಾಳಿಕೆ ನಡೆಸುತ್ತಿರುವುದನ್ನು ಪ್ರತಿಭಟಿಸಿ ನಾಳೆಯಿಂದ ಮಿಲ್ಲಿನ ಮುಂಭಾಗದಲ್ಲಿ ಕೆಲಸಗಾರರು ಉಪವಾಸ ಸತ್ಯಾಗ್ರಹವನ್ನು ಪ್ರಾರಂಭಿಸುತ್ತಾರೆಂದು ಕೆಲಸಗಾರರ ಸಂಘದ ಅಧ್ಯಕ್ಷ ಶ್ರೀ ಎಸ್. ರೇವಣ್ಣನವರು ತಿಳಿಸುತ್ತಾರೆ. ರಾಜೀನಾಮೆಯಿತ್ತಿರುವ ಮ್ಯಾನೇಜರ್ ಶ್ರೀ ಎಸ್. ವಿ. ಎನ್. ರಾಯರು ತಮ್ಮ ಉದ್ಯೋಗದಲ್ಲಿ ಮುಂದುವರಿಯುವಂತೆ ನೈತಿಕ ಒತ್ತಾಯವನ್ನು ಮಾಡುವುದೂ ಸಹ ಸತ್ಯಾಗ್ರಹದ ಮತ್ತೊಂದು ಉದ್ದೇಶ. ಸತ್ಯಾಗ್ರಹವು ಶ್ರೀ ರೇವಣ್ಣನವರಿಂದ ಆರಂಭಿಸಲ್ಪಟ್ಟು ಕೆಲಸಗಾರರ ಹಿತಸಾಧನೆಯ ಗುರಿಯನ್ನು ಮುಟ್ಟುವವರೆಗೂ ಮುಂದುವರಿಯುವುದೆಂದು ತಿಳಿಸಲಾಗಿದೆ

ಜನರಲ್ ತಿಮ್ಮಯ್ಯನವರು ಭಾರತದ ಹೊಸ ಸೇನಾನಿ

ಪೂರ್ವ ಕಮಾಂಡಿನ ಸೈನ್ಯಾಧಿಕಾರಿಯಾದ ಲೆ॥ ಜ॥ ಕೆ. ಎಸ್. ತಿಮ್ಮಯ್ಯನವರನ್ನು, ಬರುವ ಮೇ ೧೫ ರಿಂದ ನಿವೃತ್ತರಾಗಲಿರುವ ಜನರಲ್ ಶ್ರೀನಾಗೇಶ್‌ರವರ ಸ್ಥಾನದಲ್ಲಿ ಭಾರತದ ಸೈನ್ಯಗಳ ಮುಖ್ಯ ಸೇನಾಧಿಕಾರಿಯಾಗಿ ನೇಮಿಸಲಾಗಿದೆ. ಶ್ರೀ ತಿಮ್ಮಯ್ಯನವರು ಕೊಡಗಿನವರು. ಅವರು ಕೊರಿಯಾ ಯುದ್ಧದಲ್ಲಿ ಭಾರತದ ಶಾಂತಿ ಪಾಲನಾ ಪಡೆಯ ನಾಯಕರಾಗಿದ್ದರು

ಹಂಗೇರಿಯಲ್ಲಿ ವಿಶ್ವಸಂಸ್ಥೆ ಪ್ರವೇಶ ಕೂಡದು

ಹಂಗೇರಿ ಮತ್ತು ಜೆಕೊಸ್ಲೊವಾಕಿಯಾ ಸರ್ಕಾರದವರು ನಿನ್ನೆ ಜಂಟಿ ಹೇಳಿಕೆಯಿತ್ತು, ಹಂಗೇರಿ ಸಮಸ್ಯೆಯಲ್ಲಿ ವಿಶ್ವಸಂಸ್ಥೆಯು ಪ್ರವೇಶಿಸಕೂಡದೆಂದು ತಿಳಿಸಿವೆ. ಹಂಗೇರಿಯ ಘಟನೆಗಳು ಒಳ ವಿದ್ಯಮಾನಗಳಿಗೆ ಸಂಬಂಧಪಟ್ಟವೆಂದು ಉಭಯ ಸರ್ಕಾರಗಳೂ ಅಭಿಪ್ರಾಯಪಟ್ಟಿವೆ.

ತುಂಗ ಜಲಾಶಯದ ಕೆಲಸ ಇನ್ನೂ ಒಂದು ವರ್ಷ

ಮರಾಮತ್ತು ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ತುಂಗಾ ಜಲಾಶಯಕ್ಕೆ ಭೇಟಿಯಿತ್ತು ಅದರ ಕೆಲಸವು ಮುಗಿಯಲು ಇನ್ನೂ ಒಂದು ವರ್ಷ ಕಾಲ ಹಿಡಿಯುವುದೆಂದು ಹೇಳಿದ್ದಾರೆ. [illegible] ಮೈಲಿ ದೂರದವರೆಗೆ ಹೋಗುವಷ್ಟು ನೀರನ್ನು ಈಗ ಬಿಡಲಾಗುತ್ತಿರುವುದೆಂದೂ, [illegible] ಅಷ್ಟು ಕಡಿಮೆ ಸಿಬ್ಬಂದಿಯೊಡನೆ ಮುಂದುವರಿಸುವ ವಿಚಾರ ಮಾಡಲಾಗುತ್ತಿರುವುದಾಗಿಯೂ ಅವರು ತಿಳಿಸಿದರು.

ಭಾರತ ಮತ್ತು ಚತುರ್ರಾಷ್ಟ್ರ ಶಸ್ತ್ರ ಸನ್ಯಾಸ ಸಮ್ಮೇಳನ

ಅಣ್ವಸ್ತ್ರ ಪರೀಕ್ಷಣ ನಿಷೇಧ ಒಪ್ಪಂದಕ್ಕೆ ಸಿದ್ಧವಾಗಿ ರಷ್ಯಾ

ಬ್ರಿಟನ್, ಫ್ರಾನ್ಸ್, ಅಮೇರಿಕ ಮತ್ತು ರಷ್ಯಾ ಈ ಚತುರ್ರಾಷ್ಟ್ರಗಳು ಮತ್ತು ಭಾರತದ ಅಗ್ರನಾಯಕರ ಶಸ್ತ್ರ ಸನ್ಯಾಸ ಸಭೆಯೊಂದನ್ನು ಕರೆಯಲು ರಷ್ಯಾ ನಿನ್ನೆ ಸೂಚಿಸಿದೆ. [illegible] ಪ್ರದೇಶಗಳಲ್ಲಿ ವಿಮಾನಗಳ ಮೂಲಕ ಪರಿಶೀಲನೆ ನಡೆಸುವ ಬಗ್ಗೆ ಅಮೇರಿಕದ ಅಧ್ಯಕ್ಷ ಐಸನ್‌ಹೋವರ್ ಮಾಡಿದ್ದ ಸಲಹೆಯನ್ನು ಕೆಲವು ಕಡೆಗಳಲ್ಲಿ ಅನುಸರಿಸುವುದಕ್ಕಾಗಿಯೂ, ಉತ್ತರ ಅಟ್ಲಾಂಟಿಕ್ ಮತ್ತು ವಾರ್ಸಾ ಒಪ್ಪಂದ ರಾಷ್ಟ್ರಗಳ ನಡುವೆ ಆಕ್ರಮಣ ವಿರುದ್ಧದ ಒಪ್ಪಂದವನ್ನು ಮಾಡಿಕೊಳ್ಳುವುದಕ್ಕಾಗಿಯೂ ಸಿದ್ಧವಾಗಿರುವುದಾಗಿ ರಷ್ಯಾ ತಿಳಿಸಿದೆ. ಪೂರ್ವ ಮತ್ತು ಪಶ್ಚಿಮ ಯೂರೋಪುಗಳ ಗಡಿಯ ಉಭಯ ಪಾರ್ಶ್ವಗಳಲ್ಲೂ ೫೦೦ ಮೈಲಿವರೆಗೆ ವಿಮಾನಗಳ ಮೂಲಕ ಫೋಟೋ ತೆಗೆದುಕೊಳ್ಳಬಹುದೆಂಬುದು ರಷ್ಯದ ಸಲಹೆಯಾಗಿದೆ

ಉತ್ತರ ಅಟ್ಲಾಂಟಿಕ್ ಮತ್ತು ವಾರ್ಸಾ ಒಪ್ಪಂದಗಳ ರಾಷ್ಟ್ರಗಳಲ್ಲಿ ವಿದೇಶಿ ಪಡೆಗಳಿರುವ ಪ್ರದೇಶಗಳಿಗೆ ಇದು ಅನ್ವಯಿಸುವುದು. ಯುದ್ಧದ ಹುಚ್ಚು ಭಾವನೆಯನ್ನು ಬೆಳೆಯಗೊಡದಿರಲೂ ಮತ್ತು ಶಸ್ತ್ರಾಸ್ತ್ರ ಸ್ಪರ್ಧೆಯ ತಪ್ಪಿಸಿ, ತೀವ್ರ ಯುದ್ಧವು ಪುನಃ ಆರಂಭವಾಗದಂತೆ ಮಾಡಲೂ ರಷ್ಯವು ಈ ರೀತಿ ಸೂಚಿಸಿದೆ. ಈ ಐದು ರಾಷ್ಟ್ರಗಳ ಶಸ್ತ್ರ ಸನ್ಯಾಸದ ಸಲಹೆಯನ್ನು ಮಾಡಿ [illegible] ಅಣುಶಕ್ತಿ ಬಾಂಬಿನ ಪರೀಕ್ಷೆ ಮತ್ತು [illegible] ಬೇಕೆಂದೂ ತಿಳಿಸಿದೆ.

ನಾಸೆರರೊಡನೆ ಡ್ಯಾಗ್ ಹ್ಯಾಮರ್‌ಶೀಲ್ಡರ ಸಂಭಾಷಣೆ

ಈಜಿಪ್ಟಿನ ಅಧ್ಯಕ್ಷ ನಾಸೆರರೊಡನೆ ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡ್ಯಾಗ್ ಹ್ಯಾಮರ್‌ಶೀಲ್ಡರು ನಿನ್ನೆ ಮಾತುಕತೆ ನಡೆಸಿದರು. ಅವರು ಅಲ್ಲಿನ ವಿದೇಶಾಂಗ ಮಂತ್ರಿಗಳೊಡನೆಯೂ ಸಂಭಾಷಿಸಿದರು. ವಿಶ್ವಸಂಸ್ಥೆಯ ಪೋಲೀಸು ದಳವು ಕೆಲಸ ಮುಗಿದನಂತರ ವಾಪಸು ಹೋಗುವ ಬಗ್ಗೆ ಈಜಿಪ್ಟಿಗೆ ಭರವಸೆ ಕೊಡಬೇಕೆಂದು ನಾಸೆರರು ಕೇಳಿರುವುದಾಗಿ ತಿಳಿಸಲಾಗಿದೆ

ಪೌರಸಭಾಧಿವೇಶನದಲ್ಲಿ ಕೋತಿಗಳು

ಮೊನ್ನೆ ನಡೆದ ಬೆಂಗಳೂರು ಪೌರಸಭಾಧಿವೇಶನದ ಸಮಯದಲ್ಲಿ ಸದಸ್ಯರ ಸ್ಥಾನಗಳಲ್ಲಿ ಎರಡು ಕೋತಿಗಳು ಕುಳಿತಿದ್ದುವು. ಇಂತಹ ಅಪೂರ್ವ 'ಸಹೋದ್ಯೋಗಿ'ಗಳನ್ನು ಕಂಡು ಪಕ್ಕದಲ್ಲಿ ಕುಳಿತಿದ್ದ ಸದಸ್ಯರೊಬ್ಬರು ಅಧ್ಯಕ್ಷರ ಗಮನವನ್ನು ಸೆಳೆದು "ಈ ಸದಸ್ಯರು ಯಾವಾಗ ಚುನಾಯಿತರಾದರೆಂದು" ಕೇಳಲಾಗಿ, ಮೊದಲು ಈ ವಿಷಯವು ಸಭೆಗೆ ಅರ್ಥವಾಗಲಿಲ್ಲ. ನಂತರ ಅಧ್ಯಕ್ಷರ ಸೂಚನೆ ಮೇರೆ ಜವಾನರು ಅವನ್ನು ಹೊರಕ್ಕೆ ಓಡಿಸಿದರು.

ಡಾ॥ ಟಿ. ಎಸ್. ಸಿದ್ದಪ್ಪನವರ ನಿಧನ

ಮೈಸೂರು ೧೭

ನಗರದ ಪ್ರಮುಖ ನಿವಾಸಿಗಳೂ, ವಯೋವೃದ್ಧರೂ ಆದ ಡಾ॥ ಟಿ. ಎಸ್. ಸಿದ್ದಪ್ಪನವರು ಮೊನ್ನೆ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಕಳೆದ ಗುರುವಾರ ಮನೆಯಲ್ಲಿ ಆಕಸ್ಮಾತ್ ಬಿದ್ದು ಗಾಯವಾಗಿ ಆಸ್ಪತ್ರೆಯನ್ನು ಸೇರಿದ್ದರು. ಅವರಿಗೀಗ [illegible] ವರ್ಷ ವಯಸ್ಸಾಗಿತ್ತು. ಅವರ ಅಂತ್ಯಕ್ರಿಯೆಯು ನಿನ್ನೆ ನಡೆಯಿತು. ಡಾ॥ ಸಿದ್ದಪ್ಪನವರು ಸರ್ಕಾರದ ಹಲವಾರು ಆಸ್ಪತ್ರೆಗಳಲ್ಲಿ ವೈದ್ಯರಾಗಿ ನಿವೃತ್ತರಾಗಿದ್ದರು. ಅವರು ಅನೇಕ ಪರೋಪಕಾರ ಕಾರ್ಯಗಳನ್ನು ನಡೆಸಿದ್ದರು. ವಿದ್ಯಾರ್ಥಿ ನಿಲಯ, ರೇಣುಕಾ ದೇವಾಲಯ ಮುಂತಾದವುಗಳನ್ನು ಸ್ಥಾಪಿಸಿದ್ದರು. ಮೃತರ ಆತ್ಮಕ್ಕೆ ಶಾಂತಿ ಕೋರಿ ಬಂಧುಮಿತ್ರರಿಗೆ ಪ್ರಾಮಾಣಿಕ ಅನುತಾಪವನ್ನು ಸೂಚಿಸುತ್ತೇವೆ

ಬೆಂಗಳೂರಿಗೆ ಚೀಣದ ಪ್ರಧಾನಿ ಚೌ ಎನ್ ಲೈ ಭೇಟಿ

ಏಷ್ಯಾದಲ್ಲಿ ಪ್ರವಾಸ ಕೈಕೊಳ್ಳಲು ನಿನ್ನೆ ಚೀಣದ ಪ್ರಧಾನಿ ಚೌ ಎನ್ ಲೈಯವರು ಪೀಕಿಂಗ್ ನಗರದಿಂದ ಪ್ರಯಾಣ ಮಾಡಿದರು. ಅವರೊಡನೆ ಉಪ ಪ್ರಧಾನಿ ಮಾರ್ಷಲ್ ಹೋ ಲುಂಗ್ ಮತ್ತು ಉಪವಿದೇಶಾಂಗ ಮಂತ್ರಿ [illegible] ಮುಂತಾದವರೂ ತೆರಳಿದರು. ಚೌ ರವರು ಪ್ರಧಾನಿ ನೆಹರೂರವರನ್ನು ಭೇಟಿ ಮಾಡಲಿರುವರು. ಇದು ಅವರ ಅತ್ಯಂತ ಮಹತ್ವವಾದ ಕಾರ್ಯಕ್ರಮವೆಂದು ಹೇಳಲಾಗಿದೆ. ಚೌ ರವರು ಬೊಂಬಾಯಿ, ಪೂನಾ, ಬೆಂಗಳೂರು, ಮದ್ರಾಸು ಮತ್ತು ಕಲ್ಕತ್ತೆಗಳನ್ನು ಸಂದರ್ಶಿಸುವರು. ಅನಂತರ ಪಾಕಿಸ್ತಾನವನ್ನು ಅವರು ಭೇಟಿ ಮಾಡಲಿರುವರು

ಟಿಪ್ಪು ಸುಲ್ತಾನರ ಸ್ಮಾರಕ ವಸ್ತುಗಳ ದಾನ

[illegible] ಟಿಪ್ಪು ಸುಲ್ತಾನರ ಮತ್ತು ಮೈಸೂರಿನ [illegible] ಸ್ಮಾರಕ ವಸ್ತುಗಳನ್ನು ನಿನ್ನೆ ಈಗಿನ ವೆಲ್ಲಿಂಗ್ಟನ್ ಡ್ಯೂಕರು ಲಂಡನ್ನಿನಲ್ಲಿರುವ ಭಾರತದ ಹೈಕಮಿಷನರ್ ವಿಜಯಲಕ್ಷ್ಮಿ ಪಂಡಿತರಿಗೆ ಒಪ್ಪಿಸಿ, ಮದ್ರಾಸು ರಾಜಭವನದಲ್ಲಿದ್ದ ವೆಲ್ಲಿಂಗ್ಟನ್ನರ ಛಾಯಾಚಿತ್ರವನ್ನು ಅವರಿಂದ ಪಡೆದರು. ಟಿಪ್ಪು ಸುಲ್ತಾನರ ಮಕ್ಕಳ ೧೮ ಪೆನ್ಸಿಲ್ ಚಿತ್ರಗಳು, ಟಿಪ್ಪುರವರು ಉಪಯೋಗಿಸುತ್ತಿದ್ದ ಉಡುಪುಗಳು ಮತ್ತು ಚಿನ್ನದ [illegible] ಯಂತ್ರವನ್ನು ದಾನವಾಗಿ ಕೊಡಲಾಗಿದೆ.

ಉಪನ್ಯಾಸ

ಶಾರದಾವಿಲಾಸ ಲಾ ಕಾಲೇಜಿನ [illegible] ನಾಳೆ ಮಧ್ಯಾಹ್ನ ೩ ಗಂಟೆಗೆ ವಿಧಾನಸಭಾ ಸದಸ್ಯ ಶ್ರೀ ಎಸ್. ಶ್ರೀನಿವಾಸ ಅಯ್ಯಂಗಾರರು ಭಾರತದಲ್ಲಿ ಪಾರ್ಲಿಮೆಂಟರಿ ಪದ್ಧತಿ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಸಂಸ್ಥಾನದ ವಿದ್ಯಾಭ್ಯಾಸ ಪದ್ಧತಿಯ ಪರಿಷ್ಕರಣ

ಮೈಸೂರು ಮತ್ತು ಕರ್ನಾಟಕ ಉಪಕುಲಪತಿಗಳ ಸಮಾಲೋಚನೆ

ಮೈಸೂರು ೧೭

ಕರ್ನಾಟಕ ವಿಶ್ವವಿದ್ಯಾಲಯದ ಉಪಕುಲಪತಿಗಳಾದ ಶ್ರೀ ಡಿ. ಸಿ. ಪಾವಟೆಯವರೂ, ಮೈಸೂರಿನ ಶ್ರೀ ಕೆ. ವಿ. ಪುಟ್ಟಪ್ಪನವರೂ ಕಳೆದ ೩ ದಿನಗಳಿಂದಲೂ ಸಮಾಲೋಚನೆ ನಡೆಸಿ, ಸಂಸ್ಥಾನದ ವಿದ್ಯಾಭ್ಯಾಸ ಕ್ರಮದ ಪರಿಷ್ಕರಣಕ್ಕಾಗಿ ಹಲವು ಸೂತ್ರಗಳನ್ನು ಸಿದ್ಧಗೊಳಿಸಿರುವರು. ಕನ್ನಡ ಭಾಷೆಯಲ್ಲಿ ಪಾಠಪ್ರವಚನಗಳನ್ನು ನಡೆಸುವುದು, ವಿದ್ಯಾ ಇಲಾಖೆಯ ಮುಖ್ಯಾಧಿಕಾರಿ ಸ್ಥಾನವನ್ನು ಶಿಕ್ಷಣ ವಿಚಾರದಲ್ಲಿ ಪರಿಣತರನ್ನೇ ನೇಮಿಸುವುದು, ಮತ್ತು ಏಕೀಕೃತವಾಗಿರುವ ಕನ್ನಡ ಭಾಗಗಳ ಶಿಕ್ಷಣ ಪದ್ಧತಿಗಳನ್ನು ಪರಿಶೀಲಿಸಿ ಎಲ್ಲ ಭಾಗಗಳಲ್ಲಿಯೂ ಒಂದೇ ಬಗೆಯ ವಿಧಾನವನ್ನು ಜಾರಿಗೆ ಕೊಡುವುದಕ್ಕಾಗಿ ಸಲಹೆ ಮಾಡಲು ನಿಪುಣರ ಸಮಿತಿಯೊಂದನ್ನು ನೇಮಿಸುವುದು ಮತ್ತು ಅದರ ಸಲಹೆಗಳು ಬರುವವರೆಗೆ ಒಂದೆರಡು ವರ್ಷಕಾಲ ಯಾವ ಬದಲಾವಣೆಗಳನ್ನೂ ಮಾಡದಿರುವುದು-ಇವೇ ಮುಂತಾದವುಗಳ ಬಗ್ಗೆ ಉಪಕುಲಪತಿಗಳು ಒಮ್ಮತಾಭಿಪ್ರಾಯಕ್ಕೆ ಬಂದಿರುವರೆಂದು ತಿಳಿದುಬಂದಿದೆ. ಈ ವಿಚಾರವನ್ನು ಶ್ರೀ ಪಾವಟೆಯವರು ನಿನ್ನೆ ಪತ್ರಿಕಾ ಗೋಷ್ಠಿಯಲ್ಲಿ ವಿವರಿಸಿದರು.

ಕರ್ನಾಟಕದಲ್ಲಿರುವ ಒಟ್ಟು [illegible] ಕಾಲೇಜುಗಳನ್ನು ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳಿಗೆ ಸಮವಾಗಿ ಹಂಚುವ ಸಲಹೆಯನ್ನು ತಾವು ಸರ್ಕಾರಕ್ಕೆ ಮಾಡಲಿರುವುದಾಗಿಯೂ ಶ್ರೀ ಪಾವಟೆಯವರು ನುಡಿದರು. ಹಿಂದಿ ಭಾಷೆಯು ರಾಷ್ಟ್ರೀಯ ವ್ಯವಹಾರಗಳಲ್ಲಿ ಹೆಚ್ಚು ಪ್ರಾಮುಖ್ಯತೆ ಪಡೆಯುವುದರಿಂದ ವಿದ್ಯಾಭ್ಯಾಸ ಕ್ರಮದಲ್ಲಿ ಅದಕ್ಕೆ ಹೆಚ್ಚಿನ ಗಮನ ಕೊಡಬೇಕೆಂದೂ ಸೂಚಿಸಿದರು.

ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಕ್ರಮವು ಇತರ ಕಡೆಗಳಿಗಿಂತಲೂ ಹಿಂದೆ ಬಿದ್ದಿದೆಯೆಂದು ಅವರು ಅಭಿಪ್ರಾಯಪಟ್ಟರು. ಈ ಎಲ್ಲ ವಿಚಾರಗಳ ಬಗ್ಗೆ ಸರ್ಕಾರದವರೊಡನೆ ವಿಶದವಾಗಿ ಅವರು ಸಮಾಲೋಚನೆ ನಡೆಸಲಿರುವುದಾಗಿಯೂ ಹೇಳಿದರು.

ಇಸ್ರೇಲ್ ಸೈನ್ಯಗಳ ವಾಪಸಿಗೆ ಷರತ್ತು

ಇಸ್ರೇಲು ತನ್ನ ಸೈನ್ಯಗಳನ್ನು ಈಜಿಪ್ಟಿನಿಂದ ವಾಪಸ್ ತೆಗೆದುಕೊಳ್ಳುವ ಬಗ್ಗೆ ಮೂರು ಷರತ್ತುಗಳನ್ನು ಹಾಕಿದೆ. ಈಜಿಪ್ಟಿನ ಪಡೆಗಳು ಇಸ್ರೇಲ್ ಮೇಲೆ ಧಾಳಿ ಮಾಡಲು ಗಾಜಾ ಪ್ರದೇಶವನ್ನು ಉಪಯೋಗಿಸದಿರುವುದು, ಕೆಂಪು ಸಮುದ್ರ ಮತ್ತು ಅಕಾಬಾ ಖಾರಿಯ ನಡುವೆ ಇರುವ ಜಲಸಂಧಿಯಲ್ಲಿ ಈಜಿಪ್ಟು ಅಡ್ಡಿ ತರದಿರುವುದು ಮತ್ತು ಎಲಿಯಾತ್ ರೇವಿಗೆ ಬರುವ ಹಡಗುಗಳನ್ನು ತಡೆಯದಿರುವುದು-ಇವುಗಳೇ ಆ ಷರತ್ತುಗಳು.

ವಾರ ಭವಿಷ್ಯ

ತಾ॥ ೧೮-೧೧-೫೬ ರಿಂದ ೨೪-೧೧-೫೬ ರವರೆಗೆ

ಮೇಷ — ಆರೋಗ್ಯದ ಬಗ್ಗೆ ಲಕ್ಷ್ಯವಿಡಿ. ವಿಶೇಷ ಕಷ್ಟಗಳು. ವ್ಯಾಪಾರಗಾರರಿಗೆ ನಷ್ಟ. ಎಲ್ಲಾ ಸ್ತ್ರೀಯರಿಗೆ ಅಧಿಕ ಚಿಂತೆ. ಜನ್ಮನಕ್ಷತ್ರದವರಿಗೆ ಅನಿರೀಕ್ಷಿತ ಧನಾಗಮ.

ವೃಷಭ—ಆರೋಗ್ಯ ಸಿಟ್ಟಿಗೆ ಪಕ್ಕಿಗೆ ಆನಾರೋಗ್ಯ. ಸಕಲ ಕಾರ್ಯದಲ್ಲೂ ವಿಜಯ. ಧನಾಗಮಕ್ಕೆ ಕೊರತೆ ಇಲ್ಲ. ಪ್ರವಾಸದಲ್ಲಿ ಸುಖ. ಮಂಗಳ ಕಾರ್ಯ. ವ್ಯವಸಾಯದಲ್ಲಿ ಲಾಭ.

ಮಿಥುನ—ಆರೋಗ್ಯ ಸಿಟ್ಟಿಗೆ ವ್ಯಾಪಾರ ವ್ಯವಹಾರಗಳಲ್ಲಿ ಜಯ. ಪ್ರವಾಸದಲ್ಲಿ ಸಂತೋಷ. ಮಂಗಳ ಕಾರ್ಯಕ್ಕೆ ಅಡ್ಡಿ.

ಕಟಕ—ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದಿರಿ. ವ್ಯಾಪಾರವ್ಯವಹಾರಗಳಲ್ಲಿ ಸುಖವಿಲ್ಲ. ಪ್ರವಾಸ ಬೇಡ. ಸಾಹಸದಿಂದ ಪುಣ್ಯಕ್ಷೇತ್ರ ಪ್ರವಾಸ ಯೋಗ.

ಸಿಂಹ—ರೋಗ, ಋಣ ಮತ್ತು ಶತ್ರು ಬಾಧೆ ಹೆಚ್ಚು. ಸಂಚಾರದ ಬಗ್ಗೆ ಜಾಗರೂಕತೆ ಇರಬೇಕು. ವ್ಯಾಪಾರಗಾರರಿಗೆ ಸಾಮಾನ್ಯ. ಉದ್ಯೋಗದಲ್ಲೂ ಪ್ರಗತಿ ಇಲ್ಲ.

ಕನ್ಯಾ—ಸ್ತ್ರೀಪುತ್ರರ ದೇಹಾರೋಗ್ಯ ಸರಿಯಿಲ್ಲ. ಧನಾಗಮಕ್ಕೆ ತೊಂದರೆ ಇಲ್ಲ. ಮನೆಯಲ್ಲಿ ಮಂಗಳ ಕಾರ್ಯ. ವ್ಯಾಪಾರ, ವ್ಯವಸಾಯಗಾರರಿಗೆ ಉತ್ತಮ ಫಲ. ಶತ್ರುವಿನ ಮೇಲೆ ಯುಕ್ತಿಯಿಂದ ಜಯ.

ತುಲಾ—ಆರೋಗ್ಯದ ಬಗ್ಗೆ ಗಮನಕೊಡಿ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಶತ್ರು ಭಯ. ಪ್ರವಾಸದಲ್ಲಿ ಕಷ್ಟ.

ವೃಶ್ಚಿಕ—ನಿಮ್ಮ ಮತ್ತು ಕಳತ್ರ ಪುತ್ರರ ದೇಹಾರೋಗ್ಯ ಸರಿಯಿಲ್ಲ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಪ್ರವಾಸದಲ್ಲಿ ತೊಂದರೆ.

ಧನು—ದೇಹಾಲಸ್ಯ. ಪ್ರವಾಸದಲ್ಲಿ ಸುಖವಿಲ್ಲ. ವ್ಯಾಪಾರವ್ಯವಹಾರಗಳಲ್ಲಿ ಸಾಮಾನ್ಯ ಫಲ. ವ್ಯವಸಾಯಗಾರರಿಗೆ ನಷ್ಟ.

ಮಕರ—ಆರೋಗ್ಯ ಉತ್ತಮ. ವ್ಯಾಪಾರಗಾರರಿಗೆ ಅಧಿಕ ಲಾಭ. ಸತ್ಪುರುಷರ ಸಹವಾಸ. ಮನೆ, ಭೂಮಿ ಲಾಭ.

ಕುಂಭ—ಆರೋಗ್ಯ ಸಿಟ್ಟಿಗೆ ವ್ಯಾಪಾರ ವ್ಯವಹಾರಗಳಲ್ಲಿ ಲಾಭ. ಪ್ರವಾಸದಲ್ಲಿ ಸನ್ಮಾನ. ಸಾಹಸ ಕಾರ್ಯ. ವ್ಯವಸಾಯಗಾರರಿಗೆ ಉತ್ತಮ.

ಮೀನ—ದೇಹಾರೋಗ್ಯಕ್ಕೆ ಗಮನ ಕೊಡಿ. ವ್ಯಾಪಾರಗಾರರಿಗೆ ಲಾಭ. ಪ್ರವಾಸ ಉತ್ತಮ. ವ್ಯವಸಾಯಗಾರರಿಗೆ ಒಳ್ಳೆಯ ಕಾಲ, ಯಶಸ್ಸು.

ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವ

ಧಾರವಾಡದಲ್ಲಿರುವ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವವು ಬರುವ ತಿಂಗಳ ೨ನೇ ತಾರೀಕು ನಡೆಯುವುದು. ಮೈಸೂರಿನ ಗವರ್ನರರು ಅಧ್ಯಕ್ಷತೆ ವಹಿಸುವರು.

ದೇವತಾರ್ಚನೆಗೆ
ಮೈಸೂರು ಎಂ. ಆರ್. ಚೆಟ್ಟಿಪ್ಪನವರ
ಸ್ಪೆಷಲ್ ಪ್ರೇಮಲೀಲಾ
ಅಗರಬತ್ತಿಗಳನ್ನೇ
ಉಪಯೋಗಿಸಿರಿ
ಪ್ರೇಮಲೀಲಾ ಅಗರಬತ್ತಿ ಫ್ಯಾಕ್ಟರಿ,
ಮೈಸೂರು

ಈಜಿಪ್ಟಿನಿಂದ ವಿದೇಶೀ ಸೈನ್ಯ ಹೊರಡದಿದ್ದರೆ ಪ್ರತೀಕಾರ

ಈಜಿಪ್ಟಿನಿಂದ ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲುಗಳು ತಮ್ಮ ಸೈನ್ಯಗಳನ್ನು ವಾಪಸ್ ಕರೆಸದಿದ್ದರೆ ತಾವು ಅವುಗಳ ಮೇಲೆ ಬಲಪ್ರಯೋಗ ಮಾಡಬಹುದೆಂದು ಅರಬ್ ಲೀಗಿನ ೯ ರಾಷ್ಟ್ರಗಳು ಎಚ್ಚರಿಕೆಯಿತ್ತಿವೆ.

ವೆಂಕಟಗಿರಿ ರಾಜರಿಂದ ೪,೦೦೦ ಎಕರೆ ಭೂದಾನ

ಆಂಧ್ರದ ವೆಂಕಟಗಿರಿ ಟವನ್ನಿನಲ್ಲಿ ಮೊನ್ನೆ ಸಮಾರಂಭವೊಂದು ನಡೆದು ಅಲ್ಲಿನ ರಾಜರು ತಾವು ಕಟ್ಟಿಸಿದ ಆಸ್ಪತ್ರೆಯನ್ನು ಸರ್ಕಾರದ ವಶಕ್ಕೆ ಕೊಟ್ಟರು. ಅಲ್ಲದೆ ೩,೦೦೦ ಎಕರೆ ಜಮೀನನ್ನು ಭೂದಾನವಾಗಿ ಒಪ್ಪಿಸಿದರು.

ಪರೀಕ್ಷೆಯಲ್ಲಿ ಪಾಸು ಮಾಡಿಸುವುದಾಗಿ ಹೇಳಿ ಮೋಸ ಮಾಡಿದ್ದಕ್ಕೆ ಸಜಾ

ಚನ್ನರಾಯಪಟ್ಟಣ ತಾಲ್ಲೂಕು ಅಗ್ರಹಾರ ಗ್ರಾಮದ ಕಾಶೀಪತಯ್ಯನವರ ಮಗ ಎಸ್. ಶ್ರೀಪತಿ, ಎಸ್. ಶರ್ಮ ಮುಂತಾದ ಹಲವಾರು ಹೆಸರುಗಳುಳ್ಳ ಕೆ. ಸುಬ್ರಹ್ಮಣ್ಯ ಎಂಬುವನಿಗೆ ಬೆಂಗಳೂರು ನಗರ ನ್ಯಾಯಾಧೀಶರು ಮೋಸ ಮಾಡಿದ್ದಕ್ಕಾಗಿ ೧ ವರ್ಷ ಕಠಿಣ ಸಜಾ ವಿಧಿಸಿದ್ದಾರೆ. ಆತನು ಕಳೆದ ವರ್ಷ ಜನವರಿಯಲ್ಲಿ ಅಲ್ಲಿನ ಒಂದು ವಿದ್ಯಾರ್ಥಿ ನಿಲಯದ ಕಾರ್ಯದರ್ಶಿ ಕೆ ಎ ವಿಶ್ವನಾಥರಿಗೆ ಪರೀಕ್ಷೆಯಲ್ಲಿ ಪಾಸು ಮಾಡಿಸುವುದಾಗಿ ಹೇಳಿ ಅವರಿಂದ ೭೦ ರೂ ವಿನ ಬೈಸಿಕಲ್, ೩೩ ರೂ ಗಳ ಚಿನ್ನದ ಗುಂಡಿಗಳು ಮತ್ತು ೪೫ ರೂ ಅನ್ನು ತೆಗೆದುಕೊಂಡುಹೋಗಿ ಅವನ್ನು ಗಿರವಿ ಇಟ್ಟನೆಂದು ಆಪಾದಿಸಲಾಗಿತ್ತು. ಅಷ್ಟೇ ಅಲ್ಲದೇ ೬೦೦ ರೂ ಬೆಲೆಯ ಕ್ಯಾಮರಾ ಸೈಕಲ್ಲನ್ನು ಶ್ರೀ ವಿಶ್ವನಾಥರಿಂದ ಪಡೆದು, ಭಾರತ ಸರ್ಕಾರದ ವಿದ್ಯಾರ್ಥಿ ವೇತನ ಕೊಡಿಸುವುದಾಗಿ ನಂಬಿಸಿದ್ದನೆಂದು ಹೇಳಲಾಗಿದೆ.

ಕಬಡ್ಡಿ ಪಂದ್ಯ

ನಗರದ ಮಹಾತ್ಮ ವಿದ್ಯಾರ್ಥಿನಿಲಯದ ಮತ್ತು ಒಲಂಪಿಯ ಕಬಡ್ಡಿ ಟೀಮುಗಳ ನಡುವೆ ಪಂದ್ಯವು ಈ ದಿನ ಬೆಳಿಗ್ಗೆ ನಡೆದು ಮಹಾತ್ಮ ವಿದ್ಯಾರ್ಥಿ ನಿಲಯದವರು ೪೩-೩೩ ಪಾಯಿಂಟುಗಳಿಂದ ಜಯಗಳಿಸಿದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕೊಳಲು ೭-೧೫ ಬಿ ರಾಜಣ್ಣ ದೇವರ ನಾಮ ೭-೩೦ ಗಾನ ವಿಹಾರ ೮-೧೫ ಉಭಯ ಸಂಗೀತ ಮಧ್ಯಾಹ್ನ ೧೨ ಭಾರತ ಮಾತು. ಮತ್ತು ಲಿಪಿ ಗಾಯನ ೧೨-೩೦ ನಾದ ಮೇಳ ೧ ಗಾನ ಮಂಜರಿ ೧ ೩೦ ಕೊಳಲು ೨ ೧೫ ವೈಧಶಾಲೆಗಳಿಗಾಗಿ. ಸಂಜೆ ೫-೩೦ ವಾದ್ಯಮೇಳ ೬-೫ ವಿರಾಮ ಸಂಗೀತ ೬-೩೦ ಜಾನಪದ ಗೀತೆ ೭ ೩೦ ಭಾಷಣ ೮ ಶೇಷಲಕ್ಷ್ಮಿ ಬಳ್ಳೇರಿ–ಹಿಂದಿ ಭಜನೆ. ೯-೩೦ ದೇವರನಾಮ ೯-೧೫ ಧಾರವಾಡ ೯.೩೦ ಕೆ ಗುರುರಾಯರಿಂದ ಕಥಾ ಕಾಲಕ್ಷೇಪ



Edited, Printed and Published by
A. R. Nagarajan at Sadhvi Press
D. Subbiah Road, Mysore

ಎ. ಸಿ. ಸಿ. ದಳದ ದಿನಾಚರಣೆ

ಮೈಸೂರು ೧೮

ನಗರದ ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ಶಾಲಾ ಎ. ಸಿ. ಸಿ. ದಳದ ವಾರ್ಷಿಕೋತ್ಸವವು ನೆನ್ನೆ ವೈಭವದಿಂದ ಜರುಗಿತು. ಮೇಜರ್ ಸಿ ಆರ್ ಸಿಂಗ್‌ರವರು ಅಧ್ಯಕ್ಷತೆ ವಹಿಸಿದ್ದರು.

ಧ್ವಜವಂದನೆಯಾದನಂತರ ಅಧ್ಯಕ್ಷರು ಎ. ಸಿ. ಸಿ. ದಳದ ಪರಿಶೀಲನೆ ನಡೆಸಿ, ಸೆಲ್ಯೂಟ್ ಸ್ವೀಕರಿಸಿದರು. ಮೈಸೂರು ಪೋಲೀಸು ಬ್ಯಾಂಡಿನೊಡನೆ ಎ ಸಿ ಸಿ ದಳದವರು ಕವಾಯತು ನಡೆಸಿದರು. ಅಗ್ನಿ ಶಾಮಕ ಸೇವಾ ಪ್ರದರ್ಶನವನ್ನು ನಡೆಸಲಾಯಿತು.

ದಳದ ಸಾರ್ಜೆಂಟ್ ಗೌರಿಶಂಕರ್ ಮತ್ತು ಕಾರ್ಪೋರಲ್ ಅರುಣಾರವರಿಗೆ ರಜತ ಪಾತ್ರೆಗಳ ಬಹುಮಾನವನ್ನು ಕೊಡಲಾಯಿತು. ಶ್ರೀ ಅರುಣಾರವರಿಗೆ ಅಧ್ಯಕ್ಷರು ತಮ್ಮದೇ ಆದ ವಿಶೇಷ ಬಹುಮಾನವನ್ನೂ ಕೊಟ್ಟರು.

ಅಧ್ಯಕ್ಷರು ಭಾಷಣ ಮಾಡಿ ಇಂದಿನ ಬಾಲಕರನ್ನು ಉತ್ತಮ ಪೌರರನ್ನಾಗಿ ಮಾಡುವ ಪ್ರಯತ್ನದಲ್ಲಿ ಎ. ಸಿ ಸಿ ದಳ, ಭಾರತ ಸೇವಾದಳ ಮುಂತಾದುವುಗಳ ಪಾತ್ರವನ್ನು ವಿವರಿಸಿ, ಮಕ್ಕಳು ಭಾರತ ಪ್ರಜೆಗಳಾಗಲು ಈಗಿನಿಂದಲೇ ಶಿಸ್ತು, ಸನ್ನಡತೆ, ವೃತ್ತಿ ಗೌರವ ಮುಂತಾದುವನ್ನು ಅಭ್ಯಾಸ ಮಾಡಬೇಕೆಂದು ಸೂಚಿಸಿದರು. ಶಾಲೆಯಲ್ಲಿ ಕೂಡಲೇ ದಳದ ಜೂನಿಯರ್ ಡಿವಿಜನ್ನನ್ನು ವಿಸ್ತರಿಸಲು ಸಹಾಯ ಮಾಡುವುದಾಗಿ ಅವರು ಆಶ್ವಾಸನೆಯಿತ್ತರು. ಮುಖ್ಯೋಪಾಧ್ಯಾಯರಾದ ಶ್ರೀ ಕೆ.ವಿ ನಾರಾಯಣರಾವ್‌ರಿಂದ ವಂದನಾರ್ಪಣೆ ಮತ್ತು ಲಘು ಉಪಹಾರದೊಡನೆ ಸಮಾರಂಭವು ಮುಕ್ತಾಯವಾಯಿತು.

ಗಾಣದ ಎಣ್ಣೆ ಕೈಗಾರಿಕಾ ಸಮ್ಮೇಳನ

ನಗರದ ಮರದ ಗಾಣದ ಎಣ್ಣೆ ಕೈಗಾರಿಕಾ ಸಹಕಾರ ಸಂಘದ ಆಶ್ರಯದಲ್ಲಿ ಸಂಸ್ಥಾನದ ಗಾಣದ ಎಣ್ಣೆ ಕೈಗಾರಿಕಾ ಸಮ್ಮೇಳನವು ಇದೇ ಡಿಸೆಂಬರ್ ೨ ರಂದು ನಗರದಲ್ಲಿ ಸೇರುವುದು. ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಸಂಘೋತ್ಸವವನ್ನು ನೆರವೇರಿಸುವರು. ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಸ್ ರುದ್ರಪ್ಪನವರು ಅಧ್ಯಕ್ಷತೆ ವಹಿಸುವರು.

ಮಗಳ ಕೊಲೆಗಾಗಿ ತಾಯಿಯ ಬಂಧನ

ಬೆಳಗೊಳದಲ್ಲಿರುವ ಹರ್ಕಾರ್ ಉರುಫ್ ಚೋಟುಸಾಬ್ ಎಂಬುವರ ಪತ್ನಿ ಅಮೀನಾಬಿ ಎಂಬಾಕೆಯು ಕಳೆದ ಶನಿವಾರ ತನ್ನ ಮಗಳು ೯ ವರ್ಷದ ಮೈದುನ್ನಿಸಾಳನ್ನು ಹೊಡೆದು ಕೊಲೆ ಮಾಡಿದಳೆಂಬ ಕಾರಣಕ್ಕಾಗಿ ಆಕೆಯನ್ನು ಶ್ರೀರಂಗಪಟ್ಟಣದ ಪೋಲೀಸರು ಬಂಧಿಸಿರುತ್ತಾರೆ.

Join:
GLOBE TUTORIAL COLLEGE
(Sadvidya Patashala, Mysore)
Excellent Coaching for
Inter, P. C. M., Kan., Eng.

ರುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀಕೃಷ್ಣಾ ಬೇಕರಿ,
(ನಮ್ಮ ಅಂಗಡಿ ಶಾಖೆಯನ್ನು ನಾವು ಎಲ್ಲೂ ತೆರೆದಿಲ್ಲ)
ಡಿ ಸುಬ್ಬಯ್ಯಾ ರೋಡ್, ಮೈಸೂರು

ಪೋರ್ಟ್ ಸೈಯದ್ದಿನ ಸಿಹಿ ನೀರಿನ ಕಾಲುವೆಯ ನಾಶ

ಪೋರ್ಟ್ ಸೈಯದ್ದಿನಲ್ಲಿರುವ ಸಿಹಿ ನೀರಿನ ಕಾಲುವೆಯನ್ನು ವಿನಾಶಕಾರಕರು ಒಡೆದು ಹಾಕಿರುವರೆಂದೂ, ಅದರಿಂದ ಬ್ರಿಟಿಷ್ ಮತ್ತು ಫ್ರೆಂಚರಿಗಿಂತ ಈಜಿಪ್ಟಿನ ಜನರಿಗೇ ಹೆಚ್ಚು ತೊಂದರೆಯಾಗುವುದೆಂದೂ ವರದಿಯಾಗಿದೆ.

ಸರ್ ಚಾರಲ್ಸ್ ಡಾರ್ವಿನ್ನರ ಉಪನ್ಯಾಸ

ನಗರದ ಯುವರಾಜಾ ಕಾಲೇಜಿನಲ್ಲಿ ನಾಳೆ ಸಂಜೆ ೫॥ ಗಂಟೆಗೆ ವಿಜ್ಞಾನ ಸಂಶೋಧನೆಯ ವಿಷಯವಾಗಿ ಸರ್ ಚಾರಲ್ಸ್ ಡಾರ್ವಿನ್ನರು ಉಪನ್ಯಾಸ ಮಾಡುವರು. ಡಾ॥ ಎಲ್. ಸಿ[illegible]ಯ್ಯನವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ. ಉಪನ್ಯಾಸಕರು ಥಿಯರಿ ಆಫ್ ಎವಲ್ಯೂಷನ್ ಸಿದ್ಧಾಂತದ ಪ್ರತಿಪಾದಕರಾದ ಚಾರಲ್ಸ್ ಡಾರ್ವಿನ್ನರ ಮೊಮ್ಮಕ್ಕಳು.

ಸಂತಾಪ ಸೂಚಕ ಸಭೆ

ನಗರದ ಗೀತಾ ಪ್ರಚಾರಿಣೀ ಸಭೆಯ ಸ್ಥಾಪಕರಾದ ಶ್ರೀ ಶಂಕರಾನಂದ ಭಾರತಿ ಸ್ವಾಮಿಗಳವರ ನಿಧನದ ಪ್ರಯುಕ್ತ ಈ ದಿನ ಸಂಜೆ ೬ ಗಂಟೆಗೆ ಗೀತಾ ಪ್ರಚಾರಿಣೀ ಸಭಾ ಮಂದಿರದಲ್ಲಿ ಸಭೆ ನಡೆಯುತ್ತದೆ. ಸರ್ವರೂ ದಯಮಾಡಬೇಕೆಂದು ಕೋರಲಾಗಿದೆ.

ಸಪ್ಟೆಂಬರ್ ತಿಂಗಳಲ್ಲಿ ಪಾಸಾದವರಿಗೂ ಘಟಿಕೋತ್ಸವದಲ್ಲಿ ಪ್ರಶಸ್ತಿ ಕೊಡಬೇಕು

ಈ ಸಾಲಿನ ಸೆಪ್ಟೆಂಬರ್ ಪರೀಕ್ಷೆಗಳಲ್ಲಿ ತೇರ್ಗಡೆ ಹೊಂದಿರುವ ವಿದ್ಯಾರ್ಥಿಗಳು ಬರುವ ತಿಂಗಳು ನಡೆಯಲಿರುವ ಘಟಿಕೋತ್ಸವದಲ್ಲಿ ಪದವಿಗಳನ್ನು ಸ್ವೀಕರಿಸಲು ಅವಕಾಶ ಕಲ್ಪಿಸಬೇಕೆಂದೂ, ಪರೀಕ್ಷೆಗಳಲ್ಲಿ ಸುಮಾರು ೫೦೦ ಮಂದಿ ಉತ್ತೀರ್ಣರಾಗಿರುವರೆಂದೂ, ಈಗ ಅವಕಾಶ ಕೊಡದಿದ್ದರೆ ಬರುವ ವರ್ಷದವರೆಗೂ ಅವರು ಕಾಯಬೇಕಾಗುವುದೆಂದೂ ತಿಳಿಸಿ, ಪದವಿ ಪರೀಕ್ಷೆಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಯೊಬ್ಬರು ಪತ್ರ ಬರೆದು ಕೋರಿರುತ್ತಾರೆ.

ಜೀವನದ ಹರ್ಷವನ್ನು ಸವಿಯಿರಿ
ಹೆಂಗಸರಿಗೆ ಕಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಮತ್ತು ಚೆಲುವಿಕೆಯನ್ನು ಹೊಂದಿ ದೀರ್ಘ ಜೀವನದ ಆನಂದಗಳನ್ನು ಅನುಭವಿಸಬೇಕೆಂಬುವ ಮಾನವರ ಮಹತ್ವದ ಆಕಾಂಕ್ಷೆ [illegible]. ಅನೇಕ ಭಾಗಗಳಲ್ಲಿರುವ ಹೊಟ್ಟೆ ನೋವು [illegible], ಜೀರ್ಣ ಶಕ್ತಿಯ ಅಭಾವ, [illegible], [illegible], ಮೂಲವ್ಯಾಧಿ, ನರಗಳ ದೌರ್ಬಲ್ಯ, [illegible], ಹಿಸ್ಟೀರಿಯಾ, [illegible], ಅಂಗ ವಾಯು ಮತ್ತು ಎಲ್ಲ ವಿಧವಾದ [illegible] ರೋಗಗಳಿಗೂ [illegible] (ದಿನ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8 ರ ವರೆಗೆ ಭೇಟಿ ಮಾಡಿರಿ. [illegible]

[illegible]

ರಾಜಾ ಮೆಡಿಕಲ್ ಹಾಲ್,
ಲೇನ್ ನಂ. 1-745, ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ [illegible] ಮುಂದಿನ ಕಟ್ಟಡ)
ಮೈಸೂರು

ಒಲಂಪಿಯಾ ಟಾಕೀಸ್
15-11 56 ರಿಂದ :: ಅಮೋಘ ಪ್ರಾರಂಭ
ನವಕೇತನರವರ ಹಿಂದಿ ಚಿತ್ರ ★ ಫನ್ ಟೂ ಷ್
ಪಾತ್ರ: ದೇವಾನಂದ್, ಶೀಲಾರಮಣಿ, ಕೆ ಎನ್. ಸಿಂಗ್ ಮತ್ತು ಕುಂಕುಂ
ನಿರ್ದೇಶನ: ಚೇತನಾನಂದ್ — ಸಂಗೀತ: ಎಸ್. ಡಿ ಬರ್ಮನ್

CITY TUTORIAL COLLEGE, MYSORE
— The oldest & the best of its kind —
INTERMEDIATE EXAMINATION - MARCH 1957
Admissions received for the following Combinations
P. C. M., P E M, P. C B, C. B Z, H. E L.,
ENGLISH KANNADA & SAMSKRITA
* All Subjects for the I. C. E 1st Year Exam of March 57
For best guidance :— READ C. T. C PUBLICATIONS

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೦೫] SADHVI : MONDAY 19—11—1956 ಮೈಸೂರು : ಸೋಮವಾರ ೧೯—೧೧—೧೯೫೬ [ಸಂಚಿಕೆ : ೦೦೬

ಪಾಕಿಸ್ತಾನದ ನಾಯಕರ ವಿರುದ್ಧ ಬಾಗ್ದಾದಿನಲ್ಲಿ ಗಲಭೆ

ಬಾಗ್ದಾದಿನಲ್ಲಿ ಪಾಕಿಸ್ತಾನದ ನಾಯಕರ ವಿರುದ್ಧ ಪ್ರದರ್ಶನ

ಪೊಲೀಸರೊಡನೆ ಘರ್ಷಣೆಯಲ್ಲಿ ಅನೇಕರ ಮರಣ

ಪಾಕಿಸ್ತಾನದ ಅಧ್ಯಕ್ಷ ಇಸ್ಕಂದರ್ ಮಿರ್ಜಾ ಮತ್ತು ಪ್ರಧಾನಿ ಹೆಚ್. ಎಸ್. ಸುಹ್ರಾವರ್ದಿಯವರು ಬಾಗ್ದಾದ್ ಒಪ್ಪಂದದ ರಾಷ್ಟ್ರಗಳ ಸಭೆಯಲ್ಲಿ ಭಾಗವಹಿಸಲು ನೆನ್ನೆ ಇರಾಕಿನ ರಾಜಧಾನಿಗೆ ಆಗಮಿಸಿದಾಗ ಅವರ ವಿರುದ್ಧವಾಗಿ ೫೦೦ ಜನರು ಪ್ರದರ್ಶನ ನಡೆಸಿದರೆಂದೂ, ಬಾಗ್ದಾದ್ ಒಪ್ಪಂದದ ಮತ್ತು ಪಾಕಿಸ್ತಾನ ಸರ್ಕಾರದ ವಿರುದ್ಧವಾಗಿ ಘೋಷಣೆಗಳನ್ನು ಕೂಗಿದರೆಂದೂ ದೆಹಲಿಗೆ ಬಂದ ಸುದ್ದಿ. ಪೂರ್ವ ವಾರ್ತಾ ಸಂಸ್ಥೆಯ ಸುದ್ದಿಯು ತಿಳಿಸಿದೆ.

ಪೊಲೀಸರಿಗೂ ಪ್ರದರ್ಶನಕಾರರಿಗೂ ಘರ್ಷಣೆಯಾಗಿ ಅನೇಕರು [illegible] "ಓ[illegible]ಗಿದೆ. ಆ ರಾಜಧಾನಿಯ ಬೀದಿಗಳಲ್ಲಿ ಜನ ಮೆರವಣಿಗೆ ನಡೆಸಿದಾಗ, ಈಜಿಪ್ಟಿನ ಅಧ್ಯಕ್ಷ ನಾಸರ್ ಮತ್ತು ಪ್ರಜೆಗಳಿಗೆ ಬೆಂಬಲ ಸೂಚಿಸುವ ಮತ್ತು ಬಾಗ್ದಾದ್ ಒಪ್ಪಂದವನ್ನು ಖಂಡಿಸುವ ಕೂಗುಗಳು ಕೇಳಿಬಂದಿತು. ಘರ್ಷಣೆಯ ವಿವರ ಮತ್ತು ಅದರಲ್ಲಿ ಸತ್ತವರು ಮತ್ತು ಗಾಯಗೊಂಡವರ ಬಗ್ಗೆ ವಿವರಗಳು ಬಂದಿಲ್ಲ.

ತುರ್ಕಿ ಮತ್ತು ಇರಾಕು ಪ್ರಧಾನಿಗಳೊಡನೆ ಮಾತುಕತೆ ನಡೆಸಲು ಪಾಕಿಸ್ತಾನದ ನಾಯಕರು ಅಲ್ಲಿಗೆ ತೆರಳಿದ್ದಾರೆ. ಈ ಸಂಭಾಷಣೆಯಲ್ಲಿ ಭಾಗವಹಿಸಬೇಕೆಂಬ ಆಹ್ವಾನವನ್ನು ಇರಾನು ನಿರಾಕರಿಸಿದೆ.

ಪಾರ್ಲಿಮೆಂಟಿನಲ್ಲಿ ಲಜಪತರಾಯರ ಭಾವಚಿತ್ರ ಅನಾವರಣ

ಪಾರ್ಲಿಮೆಂಟಿನ ಮಧ್ಯ ಭಾಗದಲ್ಲಿರುವ ಕಟ್ಟಡದಲ್ಲಿ ನೆನ್ನೆ ಲಾಲಾ ಲಜಪತರಾಯರ ಭಾವಚಿತ್ರವನ್ನು ಪಂ|| ನೆಹರೂರವರು ಅನಾವರಣ ಮಾಡಿದರು. ದೇಶದಲ್ಲಿ ಸಮಾಜವಾದದ ವಿಚಾರ ವಾಹಿನಿಯನ್ನು ಮೊದಲು ಅವರು ಹರಿಸಿದರೆಂದು ಹೇಳಿದರು. ಭಾವಚಿತ್ರವನ್ನು ಪ್ರಜಾ ಸೇವಕರ ಸಂಘದ ಪರವಾಗಿ ಪುರುಷೋತ್ತಮದಾಸ್ ಟಂಡನ್‌ರವರು ಲೋಕಸಭಾಧ್ಯಕ್ಷರಿಗೆ ಒಪ್ಪಿಸಿದರು.

ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಐಕ್ಯವಿಲ್ಲ

ಮೈಸೂರು ೧೮

ಕರ್ನಾಟಕ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಶ್ರೀ ಡಿ. ಸಿ. ಪಾವಟೆಯವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಕರ್ನಾಟಕ ಮತ್ತು ಮೈಸೂರು ವಿಶ್ವವಿದ್ಯಾಲಯಗಳ ಐಕ್ಯ ಪ್ರಶ್ನೆಯೇ ಇಲ್ಲವೆಂದೂ, ಮೈಸೂರು ವಿಶ್ವವಿದ್ಯಾಲಯದ ಶಾಸನವನ್ನು ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಅನ್ವಯಿಸುವುದು ಸಾಧ್ಯವಿಲ್ಲವೆಂದೂ ತಿಳಿಸಿದ್ದಾರೆ.

ಶ್ರೀ ಪಾವಟೆಯವರು ನೆನ್ನೆ ಶ್ರೀ ಎ. ಸಿ. ದೇವೇಗೌಡರೊಡನೆ ಇಲ್ಲಿನ ಮೆಡಿಕಲ್ ಕಾಲೇಜು, ಇಂಜಿನಿಯರು ಕಾಲೇಜು ಮತ್ತು ಮಕ್ಕಳ [illegible] ಕೇಂದ್ರಕ್ಕೆ ಭೇಟಿಯಿತ್ತರು.

ಸಂಸ್ಥಾನದ ಆಯುರ್ವೇದ ವೈದ್ಯರ ಸಂಘಗಳ ಸಂಘಟನೆ

ಮೈಸೂರು ವೈದ್ಯರ ಸಂಘದ ಕರೆ

ಮೈಸೂರು ೧೮

ನಗರದಲ್ಲಿರುವ ಆಯುರ್ವೇದ ವೈದ್ಯರ ಸಂಘದ ಆಡಳಿತ ಸಮಿತಿಯ ಸಭೆಯು ಕಳೆದ ೧೬ರಂದು ನಡೆದು ನೂತನ ಮೈಸೂರು ಸಂಸ್ಥಾನದ ಆಯುರ್ವೇದ ವೈದ್ಯ ಸಂಘಗಳೆಲ್ಲವೂ ಒಂದುಗೂಡಬೇಕೆಂದು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ನಗರದಲ್ಲಿರುವ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗ ಮಾಡದ [illegible] ಆಯುರ್ವೇದ ವೈದ್ಯರುಗಳೆಲ್ಲರೂ [illegible] ಆಗಿರುವುದೆಂದೂ, ಈ ಕಾಲೇಜನ್ನು ನಗರದಲ್ಲೇ ಉಳಿಸಬೇಕೆಂದೂ, ಈ ಸಂಬಂಧವಾಗಿ ಮುಖ್ಯ ಮಂತ್ರಿಗಳನ್ನು ಭೇಟಿ ಮಾಡಲು ಪಂಡಿತರುಗಳ ನಿಯೋಗ ಹೋಗಬೇಕೆಂದೂ ಸೂಚಿಸುವ ಮತ್ತೊಂದು ನಿರ್ಣಯವೂ ಸಹ ಸರ್ವಾನುಮತದಿಂದ ಅಂಗೀಕೃತವಾಯಿತು.

ಗಾಂಧಿ ವಿಚಾರ ಪರಿಷತ್ತಿನ ವ್ಯಾಸಂಗ ಗೋಷ್ಠಿ

ರಮಾವಿಲಾಸ ಅಗ್ರಹಾರದಲ್ಲಿ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರ ಮನೆಯಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ನಗರ ಶಾಖಾ ಕಾರ್ಯಾಲಯದಲ್ಲಿ ಈ ಸಂಜೆ ೫ ಗಂಟೆಗೆ ಸತ್ಯಾಗ್ರಹ ಜೀವನದ ಬಗ್ಗೆಯೂ, ೨೨ನೇ ತಾರೀಖು ಸಂಜೆ ೫|| ಗಂಟೆಗೆ ಪ್ರಶ್ನೋತ್ತರಗಳ ಬಗ್ಗೆಯೂ ವ್ಯಾಸಂಗ ಗೋಷ್ಠಿಗಳು ನಡೆಯುವುವು.

ಸೂಯೆಜ್ ಬಿಕ್ಕಟ್ಟಿನಿಂದ ಭಾರತದ ವ್ಯಾಪಾರಕ್ಕೆ ಧಕ್ಕೆ

ಬೆಲೆ ಹೆಚ್ಚಿಸದಂತೆ ವರ್ತಕರಿಗೆ ಕೇಂದ್ರ ಮಂತ್ರಿ ಕರೆ

ಪಶ್ಚಿಮ ಏಷ್ಯಾ ಪರಿಸ್ಥಿತಿಯ ಪರಿಣಾಮವಾಗಿ ಭಾರತವು ಆಮದು ವ್ಯಾಪಾರವನ್ನು ಕಡಿಮೆ ಮಾಡಬೇಕಾಗುವುದೆಂದು ಕೇಂದ್ರ ವಾಣಿಜ್ಯ ಮಂತ್ರಿ ಮುರಾರ್ಜಿ ದೇಸಾಯಿಯವರು ತಿಳಿಸಿದ್ದಾರೆ. ಹೆಚ್ಚು ಆಮದಿನ ಗೋಜಿಗೆ ಹೋಗಬಾರದೆಂದೂ, ವಿದೇಶೀ ನಾಣ್ಯಗಳ ವಿನಿಮಯದ ಪ್ರಶ್ನೆಯನ್ನು ಆಲೋಚಿಸಬೇಕಾಗಿರುವುದೆಂದೂ ಅವರು ಹೇಳಿದ್ದಾರೆ.

ವರ್ತಕರು ಪದಾರ್ಥಗಳ ಅಭಾವದ ಭೀತಿಗೆ ಕಾರಣವಾಗದಿರುವಂತೆಯೂ, ಒಳನಾಡಿನ ಬೆಲೆಗಳನ್ನು ಹೆಚ್ಚಿಸದಂತೆಯೂ ಅವರು ಸೂಚಿಸಿದ್ದಾರೆ. ದ್ವಿತೀಯ ಯೋಜನೆ ಅವಧಿಯಲ್ಲಿ ರಫ್ತು ವ್ಯಾಪಾರ ಹೆಚ್ಚಬೇಕೆಂದೂ ಅವರು ನುಡಿದಿದ್ದಾರೆ.

ಹೇಲಿ ಸೆಲಾಸಿಯವರಿಂದ ಕಾಶಿ ವಿಶ್ವವಿದ್ಯಾಲಯಕ್ಕೆ ೧ ಲಕ್ಷ ರೂ.

ಕಾಶಿಯ ಹಿಂದೂ ವಿಶ್ವವಿದ್ಯಾಲಯಕ್ಕೆ ಇಥಿಯೋಪಿಯಾ ಚಕ್ರವರ್ತಿ ಹೇಲಿ ಸೆಲಾಸಿಯವರು ೧ ಲಕ್ಷ ರೂ ದಾನ ಮಾಡಿದ್ದಾರೆ. ಅವರು ನೆನ್ನೆ ಕಲ್ಕತ್ತಾದಿಂದ ಪ್ರಯಾಣ ಮಾಡಿದರು. ಅವರು [illegible]ಗೆ ಭೇಟಿ ಕೊಡುವರು

ನಾನ್‌ಗೆಜೆಟೆಡ್ ನೌಕರರಿಗೆ ಹೆಚ್ಚಿನ ತುಟ್ಟಿ ಭತ್ಯದ ಪ್ರಶ್ನೆ

ಕ್ರಮಪ್ರಕಾರವಾಗಿ ಆಯೋಗಕ್ಕೆ ಮಾಡಲು ಮುಖ್ಯ ಮಂತ್ರಿಯವರ ಸೂಚನೆ

ಬೆಂಗಳೂರು ೧೮

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರ ಬಳಿ ನೆನ್ನೆ ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರ ಸಂಘದ ಅಧ್ಯಕ್ಷ ಮತ್ತು ಇತರ ಪ್ರಮುಖರು ನಿಯೋಗ ಹೋಗಿದ್ದರು. ಬೆಂಗಳೂರಿನ [illegible] ಕಛೇರಿ ಮತ್ತು ಇತರ ಸರ್ಕಾರಿ ಕಛೇರಿಗಳಲ್ಲಿ ಕೆಲಸದ ಕಾಲವನ್ನು ಬೆಳಗ್ಗೆ ೧೦ ಗಂಟೆಯಿಂದ ಸಂಜೆ ೫|| ವರೆಗೆ ನಡೆಸುವ [illegible] ಈ ವಿಚಾರವನ್ನು ಸಹಾನುಭೂತಿಯಿಂದ ಪರಿಶೀಲಿಸಲಾಗುವುದೆಂದು ಮುಖ್ಯ ಮಂತ್ರಿಯವರು ತಿಳಿಸಿದರು.

ತುಟ್ಟಿ ಭತ್ಯ ಮತ್ತು ಇತರ ಭತ್ಯಗಳಲ್ಲಿ ತಾರತಮ್ಯವಿರುವುದನ್ನು ಮುಖ್ಯ ಮಂತ್ರಿಯವರ ಗಮನಕ್ಕೆ ತರಲಾಗಿ, ಈ ವಿಚಾರವನ್ನು ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ, ಭತ್ಯವನ್ನು ಹೆಚ್ಚಿಸಬೇಕೆಂಬ ತತ್ವವನ್ನು ಒಪ್ಪಿಕೊಂಡಿರುವುದಾದರೂ, ಆರ್ಥಿಕ ವೆಚ್ಚವನ್ನು ಯಾವ ರೀತಿ ವಹಿಸಬೇಕೆಂಬ ಪ್ರಶ್ನೆಯು ಉಳಿದಿದೆಯೆಂದೂ, ಸಂಬಳದ ದರ್ಜೆಯನ್ನು ಕ್ರಮಬದ್ಧವಾಗಿ ಹೆಚ್ಚಿಸಬೇಕೆಂದಿರುತ್ತದೆ, ಕೂಡಲೇ ಮಾಡುವಂತಿಲ್ಲವೆಂದೂ ಮುಖ್ಯಮಂತ್ರಿಯವರು ಸೂಚಿಸಿದರು. ನಿಯೋಗದವರು ಹಣಕಾಸಿನ ಮಂತ್ರಿ ಶ್ರೀ ಮರಿಯಪ್ಪನವರನ್ನೂ ಭೇಟಿ ಮಾಡಿದ್ದರು.

ಭಾರತಕ್ಕೆ ಟಿಬೆಟ್ಟಿನ ಲಾಮಾಗಳ ಭೇಟಿ

ಭಾರತ ಸರ್ಕಾರದ ಆಹ್ವಾನದಂತೆ, ಬುದ್ಧ ಜಯಂತಿ ಸಮಾರಂಭದಲ್ಲಿ ಭಾಗವಹಿಸಲು ಟಿಬೆಟ್ಟಿನ ದಲೈಲಾಮಾ ಮತ್ತು ಪಂಚೆನ್ ಲಾಮಾರವರು ನಾಳೆ ಲ್ಹಾಸಾ ನಗರದಿಂದ ಪ್ರಯಾಣ ಮಾಡುವರು. ಸಿಕ್ಕಿಮ್ಮಿನ ರಾಜರೂ ಮತ್ತು ಅಲ್ಲಿರುವ ರಾಜಕೀಯ ಅಧಿಕಾರಿಗಳಾದ ಅಪ್ಪಾಸಾಹೇಬ್ ಪಂತ್‌ರವರೂ ಲಾಮಾರವರನ್ನು ಭಾರತ ಸರ್ಕಾರದ ಪರವಾಗಿ ಸ್ವಾಗತಿಸುವರು. [illegible]ನೇ ತಾರೀಕು ಅವರು ದೆಹಲಿಗೆ ಆಗಮಿಸುವರು. ಅವರೊಡನೆ [illegible] ಮಂದಿ ಅಧಿಕಾರಿಗಳೂ, [illegible] ಜನ ಯಾತ್ರಿಕರೂ ಬರುವರು.

ವಿಶಾಖಪಟ್ಟಣದಲ್ಲಿ ಡೀಸೆಲ್ ಎಂಜಿನ್ ಕಾರ್ಖಾನೆ

ಡೀಸೆಲ್ ಇಂಜನ್ನುಗಳನ್ನು ತಯಾರಿಸುವ ಕಾರ್ಖಾನೆಯೊಂದನ್ನು ಅತಿ ಶೀಘ್ರದಲ್ಲೇ ವಿಶಾಖಪಟ್ಟಣದಲ್ಲಿ ಸ್ಥಾಪಿಸಲಾಗುವುದೆಂದೂ, ಮುಖ್ಯವಾಗಿ ಹಡಗಿಗೆ ಬೇಕಾಗುವ ಇಂಜನ್ನನ್ನು ಅಲ್ಲಿ ತಯಾರಿಸಲಾಗುವುದೆಂದೂ ಕೇಂದ್ರ ಉತ್ಪಾದನಾ ಮಂತ್ರಿ ಕೆ. ಸಿ. ರೆಡ್ಡಿಯವರು ತಿಳಿಸಿದ್ದಾರೆ. ಆಂಧ್ರದ ಇತರ ಪ್ರದೇಶದಲ್ಲಿ ಒಂದು ಸೀಮೆ ಗೊಬ್ಬರದ ಕಾರ್ಖಾನೆಯನ್ನು ೨೦ ಕೋಟಿ ರೂ ಬಂಡವಾಳದಿಂದ ಸ್ಥಾಪಿಸಲಾಗುವುದೆಂದೂ ಅವರು ನುಡಿದಿದ್ದಾರೆ.

ಡಿಸೆಂಬರ್ ೧೯ ರಂದು ನೂತನ ಶಾಸನ ಸಭೆಗಳ ಅಧಿವೇಶನ

ಸ್ವಂ. ಸು. ಸಂ.] ಬೆಂಗಳೂರು ೧೮

ಬರುವ ತಿಂಗಳು ೧೯ನೇ ತಾರೀಖು ಬೆಳಗ್ಗೆ ೧೦–೩೦ಕ್ಕೆ ನೂತನ ಸಂಸ್ಥಾನದ ಉಭಯ ಶಾಸನ ಸಭೆಗಳು ವಿಧಾನ ಸೌಧ ಕಟ್ಟಡದಲ್ಲಿ ಆರಂಭವಾಗುವುವು. ಅಧಿವೇಶನದ ಜಂಟಿ ಸಭೆಗಳನ್ನು ಉದ್ದೇಶಿಸಿ ಗವರ್ನರರು ಭಾಷಣ ಮಾಡುವರು. ಮಧ್ಯಾಹ್ನ ಸ್ಪೀಕರ್ ಮತ್ತು ವಿಧಾನ ಪರಿಷತ್ತಿನ ಅಧ್ಯಕ್ಷರ ಚುನಾವಣೆ ನಡೆಯುವುವು.

○ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ಬೆಳಗ್ಗೆ ದೆಹಲಿಗೆ ವಿಮಾನದಲ್ಲಿ ತೆರಳಿದರು. ೨೩ನೇ ತಾರೀಖು ಅವರು ಹಿಂದಿರುಗುವರು

ಸ್ಕೂಲ್ ಫೈನಲ್ ವಿದ್ಯಾರ್ಥಿಗಳಿಗೆ ರೋಟರಿ ಕ್ಲಬ್ಬಿನ ಬಹುಮಾನ

ಮೈಸೂರು ೧೮

ನಗರದ ರೋಟರಿ ಕ್ಲಬ್ಬಿನ ಸಮುದಾಯ ಸೇವಾ ಸಮಿತಿಯವರು ಬರುವ ವರ್ಷ ಎಸ್.ಎಸ್.ಎಲ್.ಸಿ ಪರೀಕ್ಷೆಯಲ್ಲಿ ಪ್ರಥಮ ಬಾರಿಗೆ ಒಟ್ಟಿನಲ್ಲಿ ಹೆಚ್ಚು ಅಂಕಗಳನ್ನು ಗಳಿಸುವ ನಗರದ ಒಬ್ಬ ವಿದ್ಯಾರ್ಥಿಗೂ, ಒಬ್ಬ ವಿದ್ಯಾರ್ಥಿನಿಗೂ ತಲಾ ೫೦ ರೂ ಬೆಲೆಯ ಪದಕವನ್ನು ಕೊಡಲಿರುವುದಾಗಿ ಸಮಿತಿಯವರು ತಿಳಿಸಿರುತ್ತಾರೆ.

ಮುರಾರ್ಜಿ ದೇಸಾಯಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿ

ಕರ್ನಾಟಕ ವಿಶ್ವವಿದ್ಯಾಲಯದವರು ಇದೇ ಡಿಸೆಂಬರ್ ೩ನೇ ತಾರೀಖು ನಡೆಯುವ ಘಟಿಕೋತ್ಸವ ಸಮಯದಲ್ಲಿ ಕೇಂದ್ರ ವಾಣಿಜ್ಯ ಮಂತ್ರಿ ಮುರಾರ್ಜಿ ದೇಸಾಯಿಗೆ ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ಕೊಡಲಿದ್ದಾರೆ. ಅದೇ ಸಮಯದಲ್ಲಿ ಮಾಸ್ತಿಯವರಿಗೂ ಗೌರವ ಪ್ರಶಸ್ತಿಯನ್ನು ಕೊಡಲಾಗುವುದು. ಮೈಸೂರಿನ ಗವರ್ನರರು ಅಧ್ಯಕ್ಷತೆ ವಹಿಸುವರು.

ಕೈಗಾರಿಕಾ ಗೃಹ ವಸತಿಗಾಗಿ ಮೈಸೂರಿಗೆ ೧೭ ಲಕ್ಷ ರೂ.

ಕಳೆದ ಸೆಪ್ಟೆಂಬರ್ ೩೦ [illegible] ಕಾರ್ಮಿಕರ ಗೃಹ ವಸತಿಗಾಗಿ ಮೈಸೂರು [illegible] ಸ್ಥಾನಕ್ಕೆ ಕೇಂದ್ರ ಸರ್ಕಾರದವರು ೧[illegible] ರೂ ಗಳ ಸಹಾಯವನ್ನು ಕೊಟ್ಟಿದ್ದಾರೆ. ಭದ್ರಾವತಿಯಲ್ಲಿ ಒಂದು ಕೊಠಡಿಯ ೩೭೦ ಮತ್ತು ಎರಡು ಕೊಠಡಿಗಳ ೩೦ ಬಾಡಿಗೆ ಮನೆಗಳನ್ನು ಕಟ್ಟಲಾಗುವುದು

ಢಾಕಾದಲ್ಲಿ ಉಪ್ಪಿನ ಪಡಿತರ

ಪೂರ್ವ ಪಾಕಿಸ್ತಾನದ ರಾಜಧಾನಿ ಢಾಕಾದಲ್ಲಿ ಈ ದಿನದಿಂದ ಉಪ್ಪನ್ನು ಪಡಿತರದ ಮೂಲಕ, ಪ್ರತಿ ವಾರ ತಲಾ ೨ ಛಟಾಕಿನಷ್ಟು, ಹಂಚಲಾಗುವುದು. ಸೇರಿಗೆ ೪ ಆಣೆಯಂತೆ ಅಲ್ಲಿ ಉಪ್ಪಿನ ಮಾರಾಟ ಮಾಡಲಾಗುವುದು

○ ಸೂಯೆಜ್ ಕಾಲುವೆಯ ಸಂಚಾರ ಮಾರ್ಗದಲ್ಲಿ ಇರುವ ಅಡ್ಡಿಗಳನ್ನು ತೆಗೆಯಲು ಈಜಿಪ್ಟಿಗೆ ಸಹಾಯ ಮಾಡುವುದಾಗಿ ವಿಶ್ವಸಂಸ್ಥೆಯ [illegible]ರ್ ಒಪ್ಪಿರುವುದಾಗಿ ಗೊತ್ತಾಗಿದೆ

ರಷ್ಯದಲ್ಲಿ ಹೆಚ್ಚು ಸಂಪಾದನೆ ಮತ್ತು ಅಧಿಕ ಜೀವನದ ವೆಚ್ಚ

ರಷ್ಯಕ್ಕೆ ಭೇಟಿ ಕೊಟ್ಟಿದ್ದ ಮದ್ರಾಸಿನ ಶ್ರೀನಿವಾಸನ ಹೇಗಸ್ತನ್ನರು ಅಲ್ಲಿನ ಜೀವನ ಮಟ್ಟವನ್ನು ವಿವರಿಸಿದ್ದಾರೆ. ಅಲ್ಲಿ ಉಪಾಧ್ಯಾಯರಿಗೆ ತಿಂಗಳಿಗೆ ೫೦೦ ರೂ ನಿಂದ ೧೨೫೦ ರೂ. ವರೆಗೂ, ಹೆಚ್ಚು ಪ್ರವೀಣರಾದವರಿಗೆ ೧,೨೫೦ ರಿಂದ ೩೦೦೦ ರೂ ವರೆಗೂ ಸಂಬಳ ಬರುವುದೆಂದೂ, ಅಲ್ಲಿ ಐಚ್ಛಿಕ ವಿಷಯವೆಂಬುದಿಲ್ಲದೆ ಎಲ್ಲರೂ ವಿಜ್ಞಾನ, ಚರಿತ್ರೆ, ಭೂಗೋಳ ಮುಂತಾದುವನ್ನು ಓದುವರೆಂದೂ ಅವರು ತಿಳಿಸಿದ್ದಾರೆ ೧೦ ವರ್ಷದವರೆಗೂ ಪರೀಕ್ಷೆಯೇ ಇರುವುದಿಲ್ಲ. ಇಷ್ಟು ಹೆಚ್ಚು ಸಂಬಳವಿದ್ದರೂ ಜನರಿಗೆ ಕಷ್ಟವಿಲ್ಲದಿಲ್ಲ ನೇರವಾದ ತೆರಿಗೆಯನ್ನು ಹೆಚ್ಚಾಗಿ ಹಾಕಲಾಗಿದೆ. ವಿದ್ಯಾಭ್ಯಾಸ, ವೈದ್ಯೋಪಚಾರ ಮುಂತಾದುವು ಉಚಿತವಾಗಿವೆ. ಒಂದು ಜೊತೆ ಪಾದರಕ್ಷೆಗೆ ೨೭೫ ರೂ. ಮತ್ತು ಒಂದು ಸೂಟಿಗೆ ೧,೫೫೦ ರೂ ಬೆಲೆಯಾಗುತ್ತದೆ. ಶಾಲೆಗಳಲ್ಲಿ ಪ್ರತಿ ೧೭ ವಿದ್ಯಾರ್ಥಿಗಳಿಗೆ ಮತ್ತು ವಿಶ್ವವಿದ್ಯಾಲಯದಲ್ಲಿ ಪ್ರತಿ ೧೧ ಮಂದಿಗೆ ಒಬ್ಬೊಬ್ಬ ಉಪಾಧ್ಯಾಯರಿರುವರು-ಎಂಬುದಾಗಿ ಅವರು ತಿಳಿಸಿದ್ದಾರೆ.

ಗುಂಡ್ಲುಪೇಟೆಯಲ್ಲಿ ನೆಹರೂ ಜಯಂತಿ

ಗುಂಡ್ಲುಪೇಟೆಯ ಹಿಂದಿ ಪ್ರಚಾರ ಮಂದಿರದಲ್ಲಿ ಕಳೆದ ೧೪ನೇ ತಾರೀಖು ಮಂದಿರದ ಸದಸ್ಯರೂ ಮತ್ತು ವಿದ್ಯಾರ್ಥಿಗಳೂ ನೆಹರೂರವರ ಜಯಂತ್ಯುತ್ಸವವನ್ನು ನೆರವೇರಿಸಿದರು. ಅಲ್ಲಿನ ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಜನಪಟ್ಟಿ ರಂಗರಾಜುರವರು ಅಧ್ಯಕ್ಷತೆ ವಹಿಸಿದ್ದರು ಶ್ರೀಗಳಾದ ಆರ್. ಕೃಷ್ಣಸ್ವಾಮಿ, ಸೇತುಕುಮಾರ್ ಮತ್ತು ಕೆ ಆರ್. ನಾಗರಾಜ್‌ರವರು ನೆಹರೂರವರ ಜೀವನ ಚರಿತ್ರೆಯನ್ನೂ, ಅವರ ಗುಣಾತಿಶಯಗಳನ್ನೂ ವಿವರಿಸಿ ಭಾಷಣ ಮಾಡಿದರು. ಶ್ರೀ ಎ. ಸೀತಾರಾಮಯ್ಯನವರಿಂದ ವಂದನಾರ್ಪಣೆಯಾಗಿ, ರಾಷ್ಟ್ರಗೀತೆ ಮತ್ತು ಸಿಹಿ ತಿಂಡಿ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು

ವಿವಾಹ ಮಹೋತ್ಸವಗಳು

ಅಬೀದ್ ಅಂಡ್ ಕಂಪೆನಿಯ ಶ್ರೀ ಎಸ್ ಎಂ ಇಸ್ಮಾಯಿಲ್ ಸೇಟ್‌ರವರ ಕುಮಾರಿ ಜುಲೇಖಾಬಾಯಿಯವರನ್ನು ಮದ್ರಾಸಿನ ಮಹಮದ್ ಇಸ್ಮಾಯಿಲ್ ಮೂಸಾ ಸೇಟ್‌ರವರ ಪುತ್ರ ಶ್ರೀ ಮಹಮದ್ ಹುಸೇನ್ ಸೇಟ್‌ರವರಿಗೆ ಕೊಟ್ಟು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಲಾಯಿತು ಮತ್ತು ಶ್ರೀ ಇಸ್ಮಾಯಿಲ್ ಸೇಟರ ಮಗ ಶ್ರೀ ಸಲೀಂ ಸಾಬಿ ಮಹಮದ್‌ರವರಿಗೆ ಬೆಂಗಳೂರಿನ ರೇಡಿಯೋ ಸೆಂಟರಿನ ಶ್ರೀ ಹಾಸಿಂ ಸತ್ತಾರ್ ಸೇಟರ ಮಗಳು ರಜಿಯಬಾಯಿಯವರನ್ನು ತಂದುಕೊಂಡು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಲಾಯಿತು.

ಹಿಂದಿ ಪ್ರಚಾರಕ ಶಿಕ್ಷಣ ವಿದ್ಯಾಲಯ

ಮದ್ರಾಸಿನ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭೆಯ ಪ್ರವೀಣ ಮತ್ತು ಪ್ರಚಾರಕ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ಹಿಂದಿ ಪಂಡಿತರನ್ನು ಶಾಲೆಗಳಲ್ಲಿ ಖಾಯಂ ಗ್ರೇಡಿನಲ್ಲಿ ಇಡಲು ಸರ್ಕಾರದವರು ಒಪ್ಪಿ ಮಾಡಿರುವರನ್ನು, ಗ್ರೇಡ್ ಪಡೆದು ಕೆಲಸವನ್ನು ಖಾಯಂ ಮಾಡಿಕೊಳ್ಳಲು ಅನುಕೂಲವಾಗುವಂತೆ ಹಿಂದಿ ಪಂಡಿತರಿಗಾಗಿ ನಗರದಲ್ಲಿ ಪ್ರಚಾರಕ ವಿದ್ಯಾಲಯವನ್ನು ದಕ್ಷಿಣ ಭಾರತ ಸಭೆಯವರು ಡಿಸೆಂಬರ್ ೫ರಿಂದ ಬರುವ ಏಪ್ರಿಲ್ ೩೦ರವರೆಗೆ ನಡೆಸುವರು. ರಾಷ್ಟ್ರಭಾಷಾ ವಿಶಾರದ, ಹಿಂದಿ ರತ್ನ, ಹಿಂದಿ ಸಾಹಿತ್ಯ ಪ್ರವೀಣ ಇತ್ಯಾದಿ ಪರೀಕ್ಷೆಗಳ ಪೈಕಿ ಯಾವುದಾದರೊಂದು ಉತ್ತೀರ್ಣರಾದವರು ವೆ. ಟ್ರೈನ್ಡ್ ಲೋಯರ್, ಅಥವಾ ಎಸ್. ಎಸ್. ಎಲ್. ಸಿ. ಪಾಸಾಗಿದ್ದರೆ, ಈ ವಿದ್ಯಾಲಯಕ್ಕೆ ಸೇರಬಹುದು. ಈ ತಿಂಗಳು ಅಖೈರಿನೊಳಗೆ ಮದ್ರಾಸಿನ ಹಿಂದಿ ಪ್ರಚಾರ ಸಭೆಯವರಿಗೆ ೩ ಆಣೆ ಸ್ಟಾಂಪಿನೊಡನೆ ಅರ್ಜಿ ಕಳುಹಿಸಿ ತಿಳಿಯಬಹುದು. ಅರ್ಜಿ ನಮೂನೆಗಳು ನಗರದ ಹಿಂದಿ ಕಾರ್ಯಾಲಯದಲ್ಲಿ ದೊರೆಯುವುವು.

ಖಟ್ಮಂಡು ಬಳಿ ವಿಶ್ವ ಬೌದ್ಧರ ಕಾಂಗ್ರೆಸ್

ನೇಪಾಳದ ರಾಜಧಾನಿ ಬಳಿ ಬುದ್ಧ ದೇವನ ಜನ್ಮಸ್ಥಳದ ಹತ್ತಿರ ಮೊನ್ನೆ ವಿಶ್ವಬೌದ್ಧರ ಕಾಂಗ್ರೆಸ್ಸು ಸೇರಿದ್ದಿತು. ನೇಪಾಳ ದೊರೆ ಮಹೇಂದ್ರ ವಿಕ್ರಮಶಾಹನವರು [illegible] ವನ್ನು ನೆರವೇರಿಸಿದರು. ೩೦ ರಾಷ್ಟ್ರಗಳ ೬೦೦ ಮಂದಿ ಪ್ರತಿನಿಧಿಗಳು ಅದರಲ್ಲಿ ಭಾಗವಹಿಸಿದ್ದಾರೆ ಅಹಿಂಸೆ, ಶಾಂತಿ, ಭ್ರಾತೃ ಭಾವ ಮುಂತಾದ ಬುದ್ಧನ ತತ್ವಗಳನ್ನು ಜಗತ್ತು ಒಪ್ಪಬೇಕೆಂದು ದೊರೆಯು ತಮ್ಮ ಭಾಷಣದಲ್ಲಿ ತಿಳಿಸಿ ಮತಗಳು ಪರಸ್ಪರ ವೈಷಮ್ಯ ಬೆಳೆಯಲು ಸಾಧನವಾಗಬಾರದೆಂದು ನುಡಿದರು ನೇಪಾಳದ ಪ್ರಧಾನಿ ಟಂಕಾ ಪ್ರಸಾದ ಆಚಾರ್ಯರು ಸ್ವಾಗತ ಭಾಷಣ ಮಾಡಿದರು ಬರ್ಮದ ಉ ಚಂದ್ರಮಣಿಯವರನ್ನು ಧರ್ಮಾನುಶಾಸಕರಾಗಿ ಚುನಾಯಿಸಲಾಯಿತು.

ವಿಶ್ವ ಬೌದ್ಧರ ಸಂಘದ ಅಧ್ಯಕ್ಷ ಜಿ ಪಿ ಮಲಲಶೇಖರರವರು ಅಧ್ಯಕ್ಷ ಭಾಷಣಮಾಡಿ, ಬೌದ್ಧರು ವಿಶ್ವದ ಐದನೇ ಒಂದು ಭಾಗದ ಪ್ರಜೆಗಳಾಗಿರುವರೆಂದೂ, ಆಧುನಿಕ ವೈಜ್ಞಾನಿಕ ಸಾಧನಗಳನ್ನು ಮತಗಳು ಉಪಯೋಗಿಸಿಕೊಳ್ಳಬೇಕೆಂದೂ ತಿಳಿಸಿದರು. ಅಂಬೇಡ್ಕರರು ಭಾಷಣ ಮಾಡಿ ಬೌದ್ಧ ಧರ್ಮವೇ ಸಕಲ ಮತಗಳಿಗಿಂತಲೂ ಶ್ರೇಷ್ಠವೆಂಬುದನ್ನು ಸಾರಲು ತಾವು ಅದರಲ್ಲಿ ಭಾಗವಹಿಸಿರುವುದಾಗಿ ನುಡಿದರು. ಅವರು ಭಾಷಣ ಮಾಡಲೆದ್ದಾಗ ಇಡೀ ಪ್ರತಿನಿಧಿ ಸಮೂಹವೇ ಅದ್ಭುತ ಹರ್ಷಧ್ವನಿಗೈಯಿತು.

ಮಲಲಶೇಖರರವರು ಅಂಬೇಡ್ಕರರ ಮತಾಂತರದ ಬಗ್ಗೆ ಮಾತನಾಡಿ ಅಂಬೇಡ್ಕರ್ ಹಾಗೂ ಅವರ ೩ ಲಕ್ಷ ಅನುಯಾಯಿಗಳ ಮತಾಂತರವು ಹಿಂದೆಂದೂ ಆಗದ ಆಶ್ಚರ್ಯಕರ ಘಟನೆಯೆಂದು ನುಡಿದರು

ಭಾರತದಲ್ಲಿ ಐಕ್ಯಕ್ಕೆ ಕಾಶ್ಮೀರ ರಾಜ್ಯಾಂಗ ಸಭೆಯ ಒಪ್ಪಿಗೆ

ಕಾಶ್ಮೀರವು ಭಾರತದ ಅಂತರ್ಗತವೆಂಬುದನ್ನು ಅಲ್ಲಿನ ರಾಜ್ಯಾಂಗ ಸಭೆಯು ಅಧಿಕೃತವಾಗಿ ಅಂಗೀಕರಿಸಿದೆ. ಸಮಾಜವಾದಿ ಸಮಾಜದ ದೃಷ್ಟಿ ತತ್ವವನ್ನು ಅದು ಅನುಮೋದಿಸಿದೆ ನೂತನ ರಾಜ್ಯಾಂಗವು ಬರುವ ಜನವರಿ ೨೬ರಿಂದ ಜಾರಿಗೆ ಬರಲಿದೆ

ಈಜಿಪ್ಟಿನ ಆಕ್ರಮಣಕ್ಕಾಗಿ ಕ್ಷಮಾಪಣೆ ಇಲ್ಲ

ಆಂಗ್ಲೋ-ಫ್ರೆಂಚರು ಈಜಿಪ್ಟಿನಲ್ಲಿ ಪ್ರವೇಶಿಸಲೆಸಗಿದ ಬಗ್ಗೆ ಬ್ರಿಟಿಷ್ ಸರ್ಕಾರವು ಕ್ಷಮಾಪಣೆ ಕೇಳಬೇಕಾಗಿಲ್ಲವೆಂದು ಅಲ್ಲಿನ ಪ್ರಧಾನಿ ಆಂಟೊನಿ ಈಡನ್ನರು ತಿಳಿಸಿದ್ದಾರೆ. ಈ ಕ್ರಮದಿಂದ ಹೋರಾಟದ ಎಲ್ಲೆಯನ್ನು ಸಂಕುಚಿತಗೊಳಿಸಲಾಯಿತಲ್ಲದೆ, ವಾಸ್ತವಿಕ ದೃಷ್ಟಿಯಿಂದ ಪರಿಹಾರವನ್ನು ಕಂಡುಹಿಡಿಯಲು ಜಗತ್ತಿಗೆ ಅವಕಾಶವಾಯಿತೆಂದು ಅವರು ಹೇಳಿದ್ದಾರೆ.

ಬ್ರಿಟನ್ ಮತ್ತು ಫ್ರಾನ್ಸುಗಳಿಂದ ಅಮೆರಿಕದ ಶಸ್ತ್ರಾಸ್ತ್ರ ಬಳಕೆ

ಈಜಿಪ್ಟಿನ ಕದನದಲ್ಲಿ ಬ್ರಿಟನ್ ಮತ್ತು ಫ್ರಾನ್ಸುಗಳು ಅಮೆರಿಕದ ಶಸ್ತ್ರಾಸ್ತ್ರಗಳನ್ನು ಉಪಯೋಗಿಸಿರುವುವೆಂದು ಅಮೆರಿಕದ ರಕ್ಷಣಾ ಮಂತ್ರಿಯವರು ತಿಳಿಸಿದ್ದಾರೆ. ಹಾಗೆ ಶಸ್ತ್ರಾಸ್ತ್ರ ಬಳಸಕೂಡದೆಂದು ಅಮೆರಿಕವು ಎರಡು ರಾಷ್ಟ್ರಗಳಿಗೂ ಮೊದಲೇ ಸೂಚಿಸಿದ್ದಿತು.

ಬ್ಯಾಂಕುಗಳು ವರ್ತಕರಿಗೆ ಮುಂಗಡ ಕೊಡುವುದಕ್ಕೆ ವಿರೋಧ

ವರ್ತಕರು ಸುಗ್ಗಿ ಕಾಲದಲ್ಲಿ ಭತ್ತ ಮತ್ತು ಅಕ್ಕಿಯನ್ನು ಶೇಖರಿಸಲು ಬ್ಯಾಂಕುಗಳು ಮುಂಗಡ ಕೊಡುವಂತೆ ರಿಸರ್ವ್ ಬ್ಯಾಂಕು ಸೂಚನೆಯಿತ್ತ ಬಗ್ಗೆ ನಗರದ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಶ್ರೀ ವಿಶ್ವನಾಥ್‌ರವರು ಪತ್ರ ಒಂದು ಪ್ರಕಟಿಸಿರುತ್ತಾರೆ ಇದರಿಂದ ಬಡವರಿಗೆ ತುಂಬಾ ಅನಾನುಕೂಲವಾಗುವುದೆಂದೂ ಈ ಆಜ್ಞೆಯನ್ನು ಜನಸಾಮಾನ್ಯರು ಪ್ರತಿಭಟಿಸಬೇಕೆಂದೂ ಅವರು ಕೋರಿದ್ದಾರೆ.

ಮಧ್ಯ ಪ್ರಾಚ್ಯ ರಾಷ್ಟ್ರಗಳಿಗೆ ಪಾಕಿಸ್ತಾನದ ಅಧ್ಯಕ್ಷ ಮತ್ತು ಪ್ರಧಾನಿ

ಇ[illegible] ಸಕ್ಕತೆ [illegible] ಇಸ್ಕಂದರ್ ಮಿರ್ಜಾ ಮತ್ತು ಪ್ರಧಾನಿ ಸುಹ್ರಾವರ್ದಿಯವರು ಬಾಗದಾದ್ [illegible] ಅವರು ತುರ್ಕಿಯ ರಾಜಧಾನಿ [illegible] ಹೋಗುವರು [illegible] ರಿಯಾದಿಗೆ ಭೇಟಿ ಕೊಡಲು ಅವರು ಉದ್ದೇಶಿಸಿದ್ದಾರೆ ಬಾಗ್ದಾದ್ ಕೂಟದ ರಾಷ್ಟ್ರಗಳ [illegible] ಈಜಿಪ್ಟಿನ ಮೇಲೆ ನಡೆಸಿದ ಧಾಳಿಯಿಂದ ಆ ಒಕ್ಕೂಟದ [illegible] ಸಂದರ್ಭದಲ್ಲಿ ಅವರು ಪ್ರವಾಸ ಕೈಗೊಂಡಿರುವರು.

ಭಾರತಕ್ಕೆ ೩ ಚಕ್ರದ ಮೋಟಾರುಗಳು

[illegible] ಚಕ್ರಗಳ ಮೋಟಾರುಗಳನ್ನು [illegible] ಲಂಡನ್ನಿನ [illegible] ಕಂಪೆನಿಯೊಂದು ಸಂಧಾನ ನಡೆಸುತ್ತಿದೆ [illegible] ಲಕ್ಷ ರೂ. ವಿನ ೩,೦೦೦ [illegible] ಮೊದಲನೇ ವರ್ಷದಲ್ಲಿ ಮಾರುವ [illegible] ಕಂಪೆನಿಯು ಹೊಂದಿದೆ ಕ್ರಮೇಣ ಭಾರತದಲ್ಲಿಯೇ ಇಂತಹ ಮೋಟಾರನ್ನು ತಯಾರಿಸುವ ವಿಷಯವನ್ನೂ ಚರ್ಚಿಸಲಾಗುತ್ತಿದೆ.

ಕೊಳದಲ್ಲಿ ಮುಳುಗಿ [illegible] ಇಂಜಿನಿಯರರ ಮರಣ

[illegible] ಪ್ರದೇಶದ [illegible] ಕೆಲಸ ಮಾಡುತ್ತಿರುವ [illegible] ಕೊಳದಲ್ಲಿ ಮುಳುಗಿ ಮೃತಪಟ್ಟರು [illegible] ಪಕ್ಷಿಯನ್ನು ಹೊಡೆದು ಅದು [illegible] ಬಿದ್ದಿತೆಂದೂ, ಅದನ್ನು ತೆಗೆದುಕೊಳ್ಳ [illegible] ಜೊತೆಗೆ ಸಿಕ್ಕಿ [illegible] ಮೃತರಾದರೆಂದೂ ವರದಿಯಾಗಿದೆ.

ಬೇಂದ್ರೆಯವರ ಕೃತಿಗಳ ಬಗ್ಗೆ ಉಪನ್ಯಾಸ ಮಾಲೆ

ಇಲ್ಲಿನ ಮಹಾರಾಜಾ ಕಾಲೇಜಿನ ಕನ್ನಡ ಸಂಘದ ಆಶ್ರಯದಲ್ಲಿ ನಾಳೆ, ನಾಳಿದ್ದು, ಮತ್ತು ಬುಧವಾರ ಸಂಜೆ ೫ ಗಂಟೆಗೆ ಕರ್ನಾಟಕದ ಕವಿ ದ. ರಾ. ಬೇಂದ್ರೆಯವರ ಕೃತಿಗಳ ಬಗ್ಗೆ ಉಪನ್ಯಾಸ ಮಾಲೆಯನ್ನು ಏರ್ಪಡಿಸಲಾಗಿದೆ ನಾಳೆ [illegible] ಬಗ್ಗೆ ಶ್ರೀ ಎಂ. ಗೋ[illegible], ನಾಳಿದ್ದು ಬೇಂದ್ರೆಯವರ [illegible] ಪ್ರೇಮ ಸಿದ್ಧಾಂತದ ಬಗ್ಗೆ ಶ್ರೀ [illegible], ಕಾವ್ಯದ [illegible] ಬಗ್ಗೆ ಶ್ರೀ ಜಿ. ಎಸ್. ಶಿವರುದ್ರಪ್ಪನವರೂ ಮತ್ತು ಬುಧವಾರ ಬೇಂದ್ರೆಯವರ ನಾಟಕಗಳು ಎಂಬ ವಿಷಯವಾಗಿ ಶ್ರೀ ಸಿ ಡಿ ಗೋವಿಂದರಾಯರೂ ಮತ್ತು ಅವರ ಆಧ್ಯಾತ್ಮ ಗೀತೆಗಳ ಬಗ್ಗೆ ಶ್ರೀ ಪ್ರಭುಶಂಕರರವರೂ ಉಪನ್ಯಾಸಗಳನ್ನು ಮಾಡುವರು ಶ್ರೀಗಳಾದ [illegible] ಶಿವರಾಮಶಾಸ್ತ್ರಿ, ಎಂ ರಾಮರಾವ್ ಮತ್ತು ಎಸ್ ವಿ ರಂಗಣ್ಣನವರು ಆಯಾ ದಿನಗಳಲ್ಲಿ ಅಧ್ಯಕ್ಷತೆ ವಹಿಸುವರು

ಈಜಿಪ್ಟಿನಿಂದ ಕದನ ಸ್ತಂಭನ ನಿಯಮೋಲ್ಲಂಘನೆ

ಇಸ್ರೇಲ್ ಸರ್ಕಾರದ ಆಪಾದನೆ

ಸೀನಾಯ್ ಪರ್ಯಾಯ ದ್ವೀಪದಲ್ಲಿ ನೆನ್ನೆ ಈಜಿಪ್ಟು ಕದನ ಸ್ತಂಭನದ ನಿಯಮೋ ಘನೆ ಮಾಡಿತೆಂದೂ, ಸೂಯೆಜ್ ಕಾಲುವೆಯ ೨೦ ಮೈಲಿ ದೂರದವರೆಗೂ ಈಜಿಪ್ಟಿನ ಗ ಪಡೆಯು ನುಗ್ಗಿತೆಂದೂ ಇಸ್ರೇಲಿನ ವಕ್ತಾ ಸೇನಾಧಿಕಾರಿಯೊಬ್ಬರು ತಿಳಿಸಿದ್ದಾರೆ ಜನ ಅರಬ್ ಸೈನಿಕರನ್ನು ಕೊಂದು, ಐವರ ಬಂಧಿಸಲಾಯಿತೆಂದು ಅವರು ತಿಳಿಸಿದ್ದಾ

ರಷ್ಯದಲ್ಲಿ ಅಣುಶಸ್ತ್ರ ಪರೀಕ್ಷ

ರಷ್ಯವು ಮೊನ್ನೆ ಬಹಳ ಎತ್ತರದಿಂದ ಅ ಶಸ್ತ್ರವನ್ನು ಎತ್ತಿಹಾಕಿ ಸಿಡಿಸಿತೆಂದೂ, ಈ ಯೋಗವು ಯಶಸ್ವಿಯಾದುದಾಗಿಯೂ ತ ಲಾಗಿದೆ ಕಳೆದ ಸೆಪ್ಟೆಂಬರಿನಲ್ಲಿ ಅಲ್ಲಿ ಎರಡು ೦ ಪರೀಕ್ಷೆ ನಡೆಸಲಾಗಿತ್ತು ಇದುವರೆಗೆ ರಷ್ಯ ೧೭ ಸಾರಿ ಈ ಪರೀಕ್ಷೆಗಳನ್ನು ಕೈಗೊಂಡಿದೆ.

ಶಿವಲಿಂಗ ಸ್ಥಾಪನೆ ಮತ್ತು ಪುಣ್ಯಾರಾಧ

ಶಂಕರಾನಂದ ಭಾರತೀ ಸ್ವಾಮಿಗಳವರ ನವ ಪ್ರಯುಕ್ತ ಇದೇ ೨೧ನೇ ತಾರೀಖು ವಾರ ಪಾಂಡವಪುರದ ಬಳಿ ಇರುವ ಹಿರೇ ಬೆಟ್ಟದಲ್ಲಿ ಅವರ ಸಮಾಧಿ ಮೇಲೆ ಶಿವಲಿಂ ಸ್ಥಾಪನೆ ಮತ್ತು ಪುಣ್ಯಾರಾಧನೆಗಳನ್ನು ಏ ಡಿಸಲಾಗಿದೆ. ಭಕ್ತ ಮಹಾಶಯರು ದಯಮಾ ಸಬೇಕೆಂದು ಕೋರಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರ

ಬೆಳಗ್ಗೆ ೭-೫ ಕೊಳಲು ೭ ೧೫ ಪಿ. ಆರ್ ಸದ್ಯಾವರ್ತನ್ನ-ದೇವರ ನಾಮ ೭-೩೦ ಗಾ ವಿಹಾರ ೮-೧೫ ರೆಕಾರ್ಡ್. ಮಧ್ಯಾಹ್ನ ೧ ಮತ್ತು ೧ ೫೦ ಸಿ ಟಿ. ಶ್ರೀನಿವಾಸರವ ನಿಂದ ಗಾನ. ೧೨ ೩೦ ರೆಕಾರ್ಡ್ ಸಂಗೀ ೨-೪೫ ವನಿತಾ ವಿಹಾರ-ಮಹಿಳೆಯರ ಕಾ ಕ್ರಮ. ೩-೧೫ ಶ್ರೋತೃ ಕೋರಿಕೆಗಾಗಿ. ಸಂ ೫-೩೦ ಮತ್ತು ೬-೧೫ ಎ ಎಸ್. ಶಿವರು ಪ್ಪ-ಪಿಟೀಲು ೬-೫ ವಿರಾಮ ಸಂಗೀತ ೭ ಎಂ ರಾಘವೇಂದ್ರ-ಕಾವ್ಯ ವಾಚನ ೭-೪ ಭಾರತೀಯ ಜನಜೀವನ-ಪ್ರಸಂಗ ೮ ನಾಟ ದ ಹುಟ್ಟು-ರೂಪಕ. ೮-೩೦ ರಾಷ್ಟ್ರೀಯ ಸ ಗೀತ. ೧೦ ಚಿತ್ರ ಸಂಗೀತ ೧೦-೧೫ ಉದ ಗೀತೆ

ಕಣ್ಣಾನೂರು ಬನೀನುಗಳು

ಮದರಾಸು, ಮದುರೈ, ಮೈಸೂರು, ಕ ಕೋಣಂ, ತಲಚೇರಿ ಮೊದಲಾದ ವಸ್ತು ಪ್ರ ದರ್ಶನಗಳಲ್ಲಿ ಉತ್ತಮ ಬಹುಮಾನಗಳನ್ನು ಮ ಜನ ಮೆಚ್ಚಿಗೆ ಹೊಂದಿರುವ "ಕಣ್ಣಾನೂ ಚೆನೋಲಿ ಹೊಸೈರಿ ಫ್ಯಾಕ್ಟರಿ ಬನೀ ಳು" ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತ

ವಿಳಾಸ –

ದಿ ಚೆನೋಲಿ ಹೊಸೈರಿ ಫ್ಯಾಕ್ಟರಿ,
ಕಣ್ಣಾನೂರು

Edited, Printed and Published
A. R. Nagarajan at Sadhvi Pr
Subbiah Road, Mysore

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ ಲಿ.
ಮೈಸೂರು

ಫೋನ್ ನಂ 375 : : ತಾ॥ 14-11-1956

ಪ್ರಕಟಣೆ

ಈ ಸೊಸೈಟಿಯ ಬಟ್ಟೆ ಶಾಖೆಯಲ್ಲಿರುವ ಸರಕಾದ ಕೋಟಿಂಗ್, ಷರ್ಟಿಂಗ್, ಚಿಟ್ಸ್, ಇತ್ಯಾದಿ ಸುಮಾರು 4,000-0-0 (ಅಸಲು ಬೆಲೆಯಂತೆ) ಬೆಲೆ ಬಾಳುವ ಬಟ್ಟೆಗಳನ್ನು ಒಟ್ಟಾಗಿ ಕೊಳ್ಳಲು ಇಷ್ಟ ಉಳ್ಳವರು ಅಸಲು ಬೆಲೆಗೆ ಯಾವ ದರದ ಸೋಡಿ (Discount) ಬಿಟ್ಟರೆ ಕೊಳ್ಳಲು ಸಿದ್ಧರಿರುವರೆಂಬ ಅಂಶವನ್ನು ಸೀಲಾದ ಕವರಿನಲ್ಲಿ 30-11 56 ರೊಳಗೆ ಸೊಸೈಟಿಗೆ ಕಳುಹಿಸಬಹುದೆಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ. ಒಟ್ಟಾಗಿಯೇ ಕೊಡಲ್ಪಡುತ್ತ. ಚಿಲ್ಲರೆಯಾಗಿ ಕೊಡುವುದಿಲ್ಲ ಸೊಸೈಟಿಗೆ ಸರಿಯಾದ ಬೆಲೆ ಬರದಿದ್ದಲ್ಲಿ ಮಾರದಿರುವ ಅಧಿಕಾರವನ್ನು ಕಾಪಾಡಲಾಗಿದೆ. ಮಾಲುಗಳ ಪಟ್ಟಿಯನ್ನೂ, ಮಾಲುಗಳನ್ನೂ ಸೊಸೈಟಿಯ ಕೆಲಸದ ವೇಳೆಯಲ್ಲಿ ನೋಡಬಹುದು. ಕೆಲಸದ ಕಾಲ-ಬೆಳಗ್ಗೆ 8-30 ರಿಂದ 11-30 ಸಾಯಂಕಾಲ 4 ರಿಂದ 7.

ಎನ್. ರಾಮಸ್ವಾಮಿ, ಕಾರ್ಯದರ್ಶಿ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಒಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71|1, [illegible]
ಶ್ರೀ [illegible] ರಸ್ತೆ,
ಬೆಂಗಳೂರು -2

ಸಂಪುಟ : ೧೩] SADHVI : TUESDAY 20—11—1956 ಮೈಸೂರು : ಮಂಗಳವಾರ, ೨೦—೧೧—೧೯೫೬ [ಸಂಚಿಕೆ : ೦೦೬

ಬಲ್ಗೇರಿಯಾ ಮತ್ತು ರುಮೇನಿಯಗಳಿಗೂ ರಷ್ಯಾ ಸೇನೆ

ಎಲ್.ಎಂ.ಪಿ.ಗಳಿಗೆ ಎಂ.ಬಿ.ಬಿ.ಎಸ್. ಪದವಿ ಪಡೆಯಲವಕಾಶ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಭರವಸೆ

ಬೆಂಗಳೂರು ೨೦

ಮೊನ್ನೆ ಸಂಜೆ ಇಲ್ಲಿನ ಮೆಡಿಕಲ್ ಕಾಲೇಜಿನ [illegible]ದಲ್ಲಿ ಅಧ್ಯಕ್ಷತೆ ವಹಿಸಿ ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಭಾಷಣ ಮಾಡಿ ಎಲ್ ಎಂ. ಪಿ ಡಿಪ್ಲೊಮಾ ಪಡೆದ [illegible] ತಮ್ಮ ವೈದ್ಯಕೀಯ ಜ್ಞಾನವನ್ನು ಹೆಚ್ಚಿಸಿಕೊಳ್ಳಲು ಅವಕಾಶವಾಗುವಂತೆ ಅವರಿಗಾಗಿ ಮೆಡಿಕಲ್ ಕಾಲೇಜಿನಲ್ಲಿ ಸಂಕ್ಷಿಪ್ತ ಎಂ. ಬಿ. ಬಿ. ಎಸ್ ಶಿಕ್ಷಣದ ವ್ಯವಸ್ಥೆ ಮಾಡುವ ಅಂಶವನ್ನು [illegible]ಗಣಿಸಿ ಈ ಬಗ್ಗೆ ಅಗತ್ಯವಾದ ಸಹಾಯ ನೀಡುವ ಭರವಸೆಯನ್ನಿತ್ತರು.

ಶ್ರೀ ಬಿ. ಕೆ. ನಾರಾಯಣರಾಯರು ತಮ್ಮ ಭಾಷಣದಲ್ಲಿ ಎಲ್ ಎಂ ಪಿ ಗಳಿಗೆ ಸಂಕ್ಷಿಪ್ತ ಎಂ. ಬಿ. ಬಿ ಎಸ್ ಶಿಕ್ಷಣವೀಯಲು ಕೇಂದ್ರ ಸರ್ಕಾರದವರು ಭರವಸೆ ಕೊಟ್ಟಿರುವುದಾಗಿ [illegible]

ನಾಳಿದ್ದು ಇಂಜನಿಯರಿಂಗ್ ಮುಂತಾದ ಪರೀಕ್ಷಾ ಫಲಿತಾಂಶ

ಮೈಸೂರು ವಿಶ್ವವಿದ್ಯಾಲಯದ ಇಂಜನಿಯರಿಂಗ್, ಬಿ ಎಸ್‌ಸಿ. (ಟೆಕ್ಸ್‌ಟೈಲ್), [illegible] ಎಸ್.ಸಿ.(ಅಗ್ರಿಕಲ್ಚರ್) ಪಿ ಕಾಂ ; ಬಿ ಕಾಂ ; [illegible] ಎಲ್ ; ಬಿ ಎಲ್ ಮತ್ತು ಎಲ್ ಎಂ. [illegible] ಪರೀಕ್ಷೆಗಳ ಫಲಿತಾಂಶಗಳು ನಾಳಿದ್ದು ಬೆಳಿಗ್ಗೆ [illegible] ಗಂಟೆಗೆ ಪ್ರಕಟವಾಗುವುವು.

ನೆಹರೂರವರಿಗೆ ಅಸಂಖ್ಯಾತ ಶುಭಾಶಯ ಸಂದೇಶಗಳು

[illegible]ಮಾನದ ಶ್ರೇಯಃಪ್ರಾರ್ಥನೆಗಾಗಿ ಮನವಿ

ಪ್ರಧಾನಿ ನೆಹರೂರವರು ತಮ್ಮ ೬೭ನೇ ಹುಟ್ಟಿದ ಹಬ್ಬದ ಸಂಬಂಧದಲ್ಲಿ ಬಂದಿರುವ ಶುಭಾಶಯಗಳಿಗಾಗಿ ಕೃತಜ್ಞತೆಯನ್ನು ಸೂಚಿಸಿ ಹೇಳಿಕೆಯೊಂದನ್ನು ಇತ್ತಿದ್ದಾರೆ. ತಮಗೆ ಸಹಸ್ರ ಪತ್ರಗಳೂ ಮತ್ತು ತಂತಿಗಳೂ ಬಂದಿವೆಯೆಂದೂ, ಅವನ್ನು ಒಡೆದು ನೋಡುವುದಕ್ಕೂ [illegible] ಸಿಬ್ಬಂದಿಯನ್ನೇ ನೇಮಿಸಬೇಕಾಗುವುದೆಂದೂ ಅವರು ತಿಳಿಸುತ್ತಾರೆ. ಸ್ನೇಹಿತರ [illegible] ಪತ್ರಗಳನ್ನು ನೋಡಬೇಕಾಗುವುದೆಂದೂ ಅವರ ಹಾಗೆ ಮಾಡಲು ಇತರ ಎಲ್ಲ ಕೆಲಸಗಳನ್ನೂ ಒತ್ತಟ್ಟಿಗಿಡಬೇಕಾಗುವುದೆಂದೂ [illegible] ಹೇಳಿ, ಸ್ನೇಹಿತರು ಮೌನ ರೀತಿಯಲ್ಲಿ ಶ್ರೇಯಃಪ್ರಾರ್ಥನೆ ಮಾಡಿದರೆ ಅದೇ ಸಾಕೆಂದು ತಿಳಿಸುತ್ತಾರೆ.

ಈಜಿಪ್ಟಿಗೆ ಕೆನಡಾ ಪಡೆ ಬರಲು ನಾಸೆರರ ಅಸಮ್ಮತಿ

ಈಜಿಪ್ಟಿಗೆ ಆಗಮಿಸುವ ವಿಶ್ವ ಸಂಸ್ಥೆಯ [illegible] ಪಡೆಯಲ್ಲಿ ಕೆನಡಾ ಸೈನ್ಯದ ಒಂದು ತಂಡವಿರುವ ಬಗ್ಗೆ ಈಜಿಪ್ಟಿನ ಅಧ್ಯಕ್ಷ ನಾಸೆರರು ಅಸಮ್ಮತಿ ಸೂಚಿಸಿರುವರೆಂದು ಹೇಳಲಾಗಿದೆ.

ಹಂಗೆರಿಯ ಈಗಿನ ಸರ್ಕಾರ ಸ್ವತಂತ್ರವಲ್ಲ

ರಷ್ಯದ ನೀತಿಯ ಬಗ್ಗೆ ನೆಹರೂರವರ ಟೀಕೆ

ಪ್ರಧಾನಿ ನೆಹರೂರವರು ನೆನ್ನೆ ಲೋಕ ಸಭೆಯಲ್ಲಿ ಮಾತನಾಡಿ, ಹಂಗೆರಿಯಲ್ಲಿ ಇತ್ತೀಚೆಗೆ ನಡೆದಿರುವ ಘಟನೆಗಳಿಂದ ಅಲ್ಲಿನ ಸರ್ಕಾರವು ಸ್ವತಂತ್ರ ಸರ್ಕಾರವೆಂದು ಭಾವಿಸಲು ಸಾಧ್ಯವಿಲ್ಲವೆಂದೂ, ಅದನ್ನು ಜನರ ಮೇಲೆ ಹೇರಿದ್ದಾರೆ [illegible] ಈ ಸರ್ಕಾರದಿಂದ ಅಲ್ಲಿನ ಜನರು [illegible] ಸ್ವಾತಂತ್ರ್ಯಕ್ಕಾಗಿ ಹೋರಾಡಿದವರು ತಮ್ಮ [illegible] ಎಂದೂ [illegible] ಹಂಗೆರಿಯಲ್ಲಿ ರಷ್ಯ ಪ್ರವೇಶ ಮಾಡಿ [illegible] ರಷ್ಯದ ಘನತೆಗೆ [illegible] ತಗುಲಿದೆಯೆಂದೂ ಅವರು ಅಭಿಪ್ರಾಯಪಟ್ಟರು.

ಹಂಗೆರಿ ವಿಷಯವಾಗಿ ನೆಹರೂರವರು [illegible] ಬಗ್ಗೆ ಆಕ್ಷೇಪಿಸಿದ್ದ ಪ್ರಜಾ ಸಮಾಜವಾದಿ ಸದಸ್ಯರು ನೆನ್ನೆ [illegible] ಮಾತನ್ನು [illegible]

ಈಜಿಪ್ಟಿನಿಂದ ಬ್ರಿಟನ್-ಫ್ರಾನ್ಸ್ ಮತ್ತು ಇಸ್ರೇಲುಗಳು ಕೂಡಲೇ ವಾಪಸಾಗಬೇಕೆಂದೂ, ಈಜಿಪ್ಟಿನಲ್ಲಿ ಆಗಾಧ ನಷ್ಟವಾಗಿರುವುದೆಂದೂ ಅವರು ಹೇಳಿದರು.

ಶಾಂತಿ ಸ್ಥಾಪನೆಯ ಬಗ್ಗೆ ಹಿರಿಯ ರಾಷ್ಟ್ರಗಳು ಅಪೇಕ್ಷಿಸಿದರೆ ಭಾರತವು ಸಹಾಯ ಮಾಡಲು ಸಿದ್ಧವೆಂದೂ ಅವರು ಘೋಷಿಸಿದರು.

ಬಲ್ಗೇರಿಯಾ ಮತ್ತು ರುಮೇನಿಯಗಳಿಗೆ ರಷ್ಯಾ ಸೇನೆ

ಆಂತರಿಕ ಸ್ಥಿತಿಯ ಹತೋಟಿಗಾಗಿ

ಹಂಗೆರಿ ಮತ್ತು ಪೋಲೆಂಡುಗಳಂತೆ, ಬಲ್ಗೇರಿಯದಲ್ಲಿ ಆಂತರಿಕ ಅವ್ಯವಸ್ಥೆಯಾಗದಂತೆ ರಕ್ಷಣೆ ನೀಡಲು ರಷ್ಯಾ ಸೈನ್ಯಗಳು ಬಲ್ಗೇರಿಯಕ್ಕೆ ಹೋಗಿವೆಯೆಂದು ವರದಿಯಾಗಿದೆ. ವಾರ್ಸಾ ಒಪ್ಪಂದಕ್ಕೆ ಬಲ್ಗೇರಿಯವು ಸೇರಿದ್ದರೂ, ಇದುವರೆಗೆ ಅಲ್ಲಿಗೆ ರಷ್ಯಾ ಸೈನ್ಯಗಳನ್ನು ಕಳುಹಿಸಿರಲಿಲ್ಲ. ತುರ್ಕಿಗೆ ಬೆದರಿಕೆ ಹಾಕುವ ಉದ್ದೇಶಕ್ಕೇನಲ್ಲ, ಬಲ್ಗೇರಿಯದ ಪರಿಸ್ಥಿತಿಯನ್ನು ಹತೋಟಿಯಲ್ಲಿಟ್ಟುಕೊಳ್ಳಲು ರಷ್ಯಾ ಸೈನ್ಯಗಳನ್ನು ಅಲ್ಲಿಗೆ ಕಳುಹಲಾಗಿದೆ. ರುಮೇನಿಯಕ್ಕೂ ರಷ್ಯದ ಸಶಸ್ತ್ರ ಬಲಗಳು ಹೋಗಿವೆಯೆಂದು ಗೊತ್ತಾಗಿದೆ. ಅಲ್ಲಿ ರಷ್ಯನವರು ತಮ್ಮ ವಿಮಾನ ಬಲವನ್ನು ಹೆಚ್ಚಿಸಿಕೊಂಡಿದ್ದಾರೆಂದು ಹೇಳಲಾಗಿದೆ.

ಸಿ. ಎಸ್. ಝಾ ಜಪಾನಿಗೆ ಭಾರತದ ರಾಯಭಾರಿ

ಕೇಂದ್ರ ಸರ್ಕಾರದ ಹೊರ ವ್ಯವಹಾರಗಳ ಇಲಾಖೆ ಜಂಟಿ ಕಾರ್ಯದರ್ಶಿ ಚಂದ್ರಶೇಖರ ಝಾರವರನ್ನು ಜಪಾನಿನಲ್ಲಿ ಭಾರತದ ರಾಯಭಾರಿಯಾಗಿ ನೇಮಿಸಲಾಗಿದೆ.

ಸಣ್ಣ ಕೈಗಾರಿಕೆಗಳಿಗೆ ಉತ್ತೇಜನ

ಡಾ॥ ಲೋಕನಾಥನ್‌ರವರ ವಿವರಣೆ

ಮೈಸೂರು ೨೦

ಕೇಂದ್ರ ಆರ್ಥಿಕ ಸಂಶೋಧನಾ ಸಮಿತಿಯ ಡೈರೆಕ್ಟರಾದ ಡಾ॥ ಪಿ ಎಸ್. ಲೋಕನಾಥನ್‌ರವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಗೃಹ ಕೈಗಾರಿಕೆಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರದವರು ಸಕಲ ಸಹಾಯಗಳನ್ನು ನೀಡಲು ಸಿದ್ಧರಾಗಿರುವರೆಂದು ತಿಳಿಸಿದರು. ಇದೀ ವ್ಯವಸ್ಥೆ ಮುಂದುವರಿದರೆ ಸಣ್ಣ ಕೈಗಾರಿಕೆಗಳ ಬೆಳವಣಿಗೆಗೆ [illegible] ಕೇವಲ ಬಂಡವಾಳವು ಮಾತ್ರವೇ ಅಲ್ಲದೆ [illegible] ಮತ್ತು [illegible] ಗೃಹ ಕೈಗಾರಿಕೆಗಳ ಉನ್ನತಿಗೆ ಮುಖ್ಯ ಸಾಧನಗಳೆಂದು ಅವರು ಹೇಳಿದರು. ಇದುವರೆಗೆ ಸರ್ಕಾರದವರು ನೀಡಿರುವ ಧನ ಸಹಾಯವನ್ನು [illegible] ಕೈಗಾರಿಕೆಗಾರರು ಉಪಯೋಗಿಸಿಕೊಂಡಿಲ್ಲದಿರುವುದಕ್ಕಾಗಿ ಅವರು [illegible] ವ್ಯಕ್ತಪಡಿಸಿದರು. ಉತ್ಪತ್ತಿಯಾದ ಸಾಮಾನುಗಳ ಸರಿಯಾಗಿ ಮಾರಾಟವಾಗಲು ತಕ್ಕ ವ್ಯವಸ್ಥೆ ಮಾಡುವುದು ಅಗತ್ಯವೆಂದು ಅವರು ಹೇಳಿ ಸಣ್ಣ ಕೈಗಾರಿಕೆಗಳು ಅನೇಕ ಕಡೆಗಳಲ್ಲಿ ದೊಡ್ಡ ಕೈಗಾರಿಕೆಗಳಿಗೆ ಸಹಕಾರಿಯಾಗುವುವೆಂದೂ ನುಡಿದರು.

ಇಲ್ಲಿನ ಆಕಾಶವಾಣಿ ಕಟ್ಟಡದಲ್ಲಿ ನಡೆಯುತ್ತಿರುವ ಅಂತರ ರಾಷ್ಟ್ರೀಯ ಸಹಕಾರ ಶಿಕ್ಷಣ ಕೇಂದ್ರದ ಸದಸ್ಯರನ್ನುದ್ದೇಶಿಸಿ ನೆನ್ನೆ ಅವರು ಭಾಷಣ ಮಾಡಿ ಗೃಹ ಕೈಗಾರಿಕೆಗಳ ಬೆಳವಣಿಗೆಗೆ ಇರುವ ಸಾಧಕಬಾಧಕಗಳನ್ನು ವಿವರಿಸಿದರು.

೧೫೦ ವರ್ಷದ ವೃದ್ಧರ ನಿಧನ

ಮೈಸೂರು ೨೦

ನಗರದಲ್ಲಿರುವ ಅಶೋಕಪುರದ ದೊಡ್ಡ ಗರಡಿಯ ಪ್ರಸಿದ್ಧ ಉಸ್ತಾದರಾದ ಶ್ರೀ ದೊಡ್ಡ ವೆಂಕಟಪ್ಪನವರು ಈ ಬೆಳಿಗ್ಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಅವರಿಗೆ ೧೫೦ ವರ್ಷ ವಯಸ್ಸಾಗಿತ್ತು. ಅವರು ಹಿಂದೆ ಸುಪ್ರಸಿದ್ಧ ಪೈಲ್ವಾನ್ ಹಳೇಪೈಲ್ವಾನರೊಡನೆ ಕುಸ್ತಿ ಮಾಡಿ ಪ್ರಖ್ಯಾತಿಗೆ ಬಂದಿದ್ದರು. ಅವರ ಕುಟುಂಬದಲ್ಲಿ ಮಕ್ಕಳು ಮೊಮ್ಮಕ್ಕಳು ಮತ್ತು ಮರಿಮಕ್ಕಳೂ ಸೇರಿ [illegible] ಮಂದಿ ಇದ್ದಾರೆ. ಮೃತರ ಆತ್ಮಕ್ಕೆ ಶಾಂತಿ ಕೋರಿ ಬಂಧುಮಿತ್ರರಿಗೆ ಅನುತಾಪವನ್ನು ಸೂಚಿಸುತ್ತೇವೆ.

ನೋಟಿನಾರು ಹರಿದು ಮರಣ

ನಗರದ ಚಾಮುಂಡಿಪುರದ ಬಡಾವಣೆಯ [illegible] ಸೊಸೈಟಿ ಫಾರಂ ಕಡೆಯಿಂದ ಬರುತ್ತಿದ್ದ ಅರಮನೆ ಮೋಟಾರೊಂದು ಹರಿದು ಎಲಕ್ಕ ಎಂಬ ಮಡಿವಾಳರವನು ನೆನ್ನೆ ಮೃತಪಟ್ಟನೆಂದು ವರದಿಯಾಗಿದೆ. ಮೃತನು ಆಗ ತಾನೆ ಮಡಿ ಬಟ್ಟೆಗಳನ್ನು ಒಬ್ಬರ ಮನೆಗೆ ಕೊಟ್ಟು ಹಿಂದಿರುಗುತ್ತಿದ್ದಾಗ ಈ ದುರ್ಘಟನೆಯು ನಡೆಯಿತು. ಶವವನ್ನು ಪರೀಕ್ಷೆಗಾಗಿ ಕಳುಹಲಾಯಿತು. ಡಿ. ಎಸ್. ಪಿ.ಯವರೂ ಮತ್ತು ಇತರ ಪೊಲೀಸು ಅಧಿಕಾರಿಗಳೂ ತನಿಖೆ ನಡೆಸಿದರು.

ಕೈರೊ ಭೇಟಿಗೆ ಪಾಕಿಸ್ತಾನದ ಪ್ರಧಾನಿಗೆ ಅನುಮತಿಯಿಲ್ಲ

ಇಸ್ಲಾಮಿಕ್ ಏಕಮತ್ಯದ ಧ್ಯೇಯ ಸಾಧನೆಗಾಗಿ ಕೈರೋಗೆ ಭೇಟಿ ಕೊಡಲು, ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಮಾಡಿದ್ದ ಸೂಚನೆಯನ್ನು ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರು ನಿರಾಕರಿಸಿದ್ದಾರೆಂದು ವರದಿಯಾಗಿದೆ. ಇದರಿಂದ ಸುಹ್ರಾವರ್ದಿಯವರು ತಮ್ಮ ಕೈರೊ ಪ್ರವಾಸವನ್ನು ರದ್ದುಗೊಳಿಸಿದ್ದಾರೆ. ಈಜಿಪ್ಟಿನ ಅಧ್ಯಕ್ಷರು ಪಾಕಿಸ್ತಾನದ ಪ್ರಧಾನಿಯವರ ಗಮನವನ್ನು ಈಗಿನ ಕಷ್ಟ ಸನ್ನಿವೇಶದ ಕಡೆಗೆ ಸೆಳೆದಿದ್ದಾರೆ.

ಒಂದು ವಾರದಲ್ಲಿ ಈಜಿಪ್ಟಿನಿಂದ ವಾಪಸಾಗಲು ಕರೆ

ಬ್ರಿಟಿಷ್, ಫ್ರೆಂಚ್ ಮತ್ತು ಇಸ್ರೇಲಿಗಳಿಗೆ ಈಜಿಪ್ಟಿನ ಎಚ್ಚರಿಕೆ

ಈ ವಾರದಲ್ಲಿ ಬ್ರಿಟಿಷ್, ಫ್ರೆಂಚ್ ಮತ್ತು ಇಸ್ರೇಲಿಗಳು ಈಜಿಪ್ಟಿನಿಂದ ವಾಪಸು ಹೋಗಬೇಕೆಂದೂ, ಇಲ್ಲದಿದ್ದರೆ ಎಲ್ಲದಲ್ಲೇ ಪೂರ್ಣ ಅವ್ಯವಸ್ಥೆಯಾಗುವುದೆಂದೂ ಈಜಿಪ್ಟಿನ ರಾಜಕೀಯ ವ್ಯವಹಾರಗಳ ಮುಖ್ಯಾಧಿಕಾರಿ ಅಲಿ ಸಾಬ್ರಿಯವರು ಎಚ್ಚರಿಕೆಯಿತ್ತಿದ್ದಾರೆ. ಪುನಃ ಹೋರಾಟವಾರಂಭವಾದರೆ ಈಜಿಪ್ಟು ಇತರ ದೇಶಗಳಿಂದ ಸ್ವಯಂಸೇವಕರನ್ನು ಸಹಾಯಕ್ಕಾಗಿ ಕರೆಯುವುದೆಂದೂ ಅವರು ತಿಳಿಸಿರುವರು.

ರಷ್ಯಾ ಮತ್ತು ಪೋಲೆಂಡುಗಳಿಗೆ ಒಡಂಬಡಿಕೆ

ಪೋಲೆಂಡಿನಲ್ಲಿ ರಷ್ಯದ ಸೈನ್ಯಗಳ ಪ್ರಮಾಣದ ಬಗ್ಗೆ ರಷ್ಯಾ ಮತ್ತು ಪೋಲೆಂಡುಗಳಿಗೆ ಒಡಂಬಡಿಕೆಯಾಗಿದೆಯೆಂದು ಮಾಸ್ಕೊ ರೇಡಿಯೋ ತಿಳಿಸಿದೆ. ರಷ್ಯದಲ್ಲಿ ಬಂಧಿಸಿಟ್ಟಿರುವ ಪೋಲಿಷ್ ಪ್ರಜೆಗಳ ಬಿಡುಗಡೆಯನ್ನು ಉಭಯ ರಾಷ್ಟ್ರಗಳೂ ಚರ್ಚಿಸಿವೆ. ರಷ್ಯಾ ಸೈನ್ಯಗಳು ತಾತ್ಕಾಲಿಕವಾಗಿ ಪೋಲೆಂಡಿನಲ್ಲಿರುವುವೆಂದೂ, ಪೋಲಿಷ್ ಸರ್ಕಾರದ ಅನುಮತಿ ಪಡೆದು ಆ ರಾಜ್ಯದಲ್ಲಿ ರಷ್ಯಾ ಸೈನಿಕರ ಚಲನವಲನಗಳಾಗುವುವೆಂದೂ ಉಭಯ ರಾಷ್ಟ್ರ ಪ್ರತಿನಿಧಿಗಳು ಹೊರಡಿಸಿರುವ ಜಂಟಿ ಹೇಳಿಕೆಯು ಸೂಚಿಸಿದೆ

ತಮಿಳು ಸಂಘದ ಆರಂಭ ಭಾಷಣ

ವಿಶ್ವವಿದ್ಯಾಲಯದ ತಮಿಳು ಸಂಘದ ಆರಂಭ ಭಾಷಣವನ್ನು ನಾಳೆ [illegible] ಗಂಟೆಗೆ ಮಹಾರಾಜಾ ಕಾಲೇಜು ಸೀನಿಯರ್ ಬಿ. ಎ. ಕೊಠಡಿಯಲ್ಲಿ ಪ್ರೊ॥ ಎ. [illegible] ಕೆ. [illegible]ರವರು ಮಾಡುವರು. ಡಾ॥ ವಿ. ಸುಬ್ರಹ್ಮಣ್ಯಂರವರು ಅಧ್ಯಕ್ಷತೆ ವಹಿಸುವರು.

ಮೈಸೂರು ಸಂಸ್ಥಾನಕ್ಕೆ ಬೊಂಬಾಯಿಯ ೬,೦೦೦ ಕೈದಿಗಳು

ನೂತನ ಮೈಸೂರು ಸಂಸ್ಥಾನಕ್ಕೆ ಬೊಂಬಾಯಿ ಸಂಸ್ಥಾನದಿಂದ ೬,೦೦೦ ಕೈದಿಗಳ ವರ್ಗಾವಣೆ ಬಗ್ಗೆ ವ್ಯವಸ್ಥೆ ಮಾಡಲಾಗಿದೆಯೆಂದೂ, ಹಿಂದಿನ ಮೈಸೂರಿನಲ್ಲಿ ೩,೫೦೦ ಕೈದಿಗಳಿದ್ದರೆಂದೂ, ಈಗ ಇನ್ನೂ ೬,೦೦೦ ಮಂದಿಗೆ ವಸತಿ ಕಲ್ಪಿಸಬೇಕಾಗಿದೆಯೆಂದೂ ಗೊತ್ತಾಗಿದೆ.

ಉಳುವವನಿಗೇ ಭೂಮಿ ಕೊಡುವ ಶಾಸನ ರದ್ದು

ಕನ್ನಡ ಶಾಸನಸಭಾಸದಸ್ಯರ ಅಭಿಪ್ರಾಯ

ಸಂಸ್ಥಾನದ ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಮೈಸೂರಿನಲ್ಲಿ [illegible] ಕನ್ನಡ ಶಾಸನಸಭಾಸದಸ್ಯರುಗಳ ಸಭೆಯನ್ನು [illegible] ಕರೆದಿದ್ದರು. [illegible] ಹೆಚ್ಚು ಮಂದಿ ಭಾಗವಹಿಸಿದ್ದರು. [illegible] ಉಳುವವನೇ ಭೂಮಿಯ ಒಡೆಯನಾಗಲು ಅವಕಾಶ ಕಲ್ಪಿಸುವ ಬೊಂಬಾಯಿ ಗೇಣಿ ಶಾಸನದ ಅನ್ವಯದ ವಿಷಯವನ್ನು [illegible] ಚರ್ಚಿಸಲಾಯಿತು. [illegible] ನಡೆದ ಚರ್ಚೆಯಲ್ಲಿ ಅನೇಕ ಸದಸ್ಯರು ಈ ಶಾಸನವನ್ನು ರದ್ದು ಮಾಡಬೇಕೆಂಬ ಅಭಿಪ್ರಾಯಪಟ್ಟರು. [illegible] ವಿಚಾರವನ್ನು ಮೈಸೂರು ಮಂತ್ರಿಮಂಡಲಕ್ಕೆ [illegible] 10ರ, ನಂತರ [illegible] ತಿಳಿಸಿದ್ದಾರೆ.

ಅಣ್ವಸ್ತ್ರಗಳ ನಿಷೇಧಕ್ಕೆ ಬೌದ್ಧರ ಕರೆ

ಖಟ್ಮಂಡು ಸಮ್ಮೇಳನದಲ್ಲಿ ನಿರ್ಣಯ

ಖಟ್ಮಂಡು, [illegible] ಬೌದ್ಧರ ಸಮ್ಮೇಳನ [illegible] ಪ್ರತಿನಿಧಿಗಳು [illegible] ಅಣ್ವಸ್ತ್ರಗಳ [illegible] ಸಮ್ಮೇಳನ [illegible]

ಬಲ್ಗೇರಿಯದ ಮಾಜಿ ಪ್ರಧಾನಿ ಮತ್ತು ಅನುಚರರ ಬಂಧನ

[illegible] ಮಾಜಿ ಪ್ರಧಾನಿ [illegible] ಬಲ್ಗೇರಿಯ [illegible] ಬಂಧಿಸಲಾಗಿದೆ [illegible]

ಪಂಚಾಯಿತಿ ಅಧ್ಯಕ್ಷ ಚುನಾವಣೆಯಲ್ಲಿ ತೀವ್ರ ಘರ್ಷಣೆ

[illegible] ಎಂಬ ಗ್ರಾಮದ ಅಧ್ಯಕ್ಷ [illegible] ನಡೆಯುತ್ತಿದ್ದಾಗ [illegible] ಆಯಿತೆಂದೂ, [illegible] ಪೋಲೀಸರು [illegible] ಆಸ್ಪತ್ರೆಗೆ [illegible]

ಸೂಯೆಜ್ ಬಳಿ ಧ್ವಜದ ಮೇಲೆ ಬ್ರಿಟಿಷ್ ಹೆಲಿಕಾಪ್ಟರ್ ಪಡೆ ಧಾಳಿ

ಬ್ರಿಟಿಷ್ ಹೆಲಿಕಾಪ್ಟರ್ [illegible] ಪೋರ್ಟ್ [illegible] ನ್ನು [illegible]

ಬೆಂಗಳೂರು ರೇಡಿಯೊ [illegible] ಕಾರ್ಯಕ್ರಮ

[illegible] ಎಂ. ವೆಂಕಟಪ್ಪ [illegible]

ಮೈಸೂರಿಗೆ ಸೇರಿದ ಕನ್ನಡ ಭಾಗಗಳಲ್ಲಿ ಸಂಬಳ ಖೋತಾ ಇಲ್ಲ

ನೂತನ ಮೈಸೂರಿನಲ್ಲಿ ಸೇರಿ[illegible] ಕನ್ನಡ ಭಾಗಗಳ [illegible] ಸರ್ಕಾರಿ ನೌಕರರ ಸಂಬಳದ ಪ್ರಮಾಣವು ಮೊದಲಿನಂತೆಯೇ ಇರು[illegible] ರೆವಿನ್ಯೂ ಮಂತ್ರಿ ಎಂ. ಪಿ. ಪಾಟೀಲರು ಬೆಳಗಾಂವಿ[illegible] ಅವರು [illegible] ಅಧಿಕಾರಿಗಳನ್ನು ಭೇಟಿಮಾಡಿ ಈ [illegible] ಮೈಸೂರಿನಲ್ಲಿ ಸೇರಿರುವ [illegible] ಪ್ರದೇಶಗಳಲ್ಲಿ ಪ್ರವಾಸ ಮಾಡುತ್ತಿರುವ [illegible] ಮಂತ್ರಿ ಶ್ರೀ ಜಗನ್ನಾಥ ಪಂಡರೀ[illegible] ವಿಲೀನವಾಗುವ ಮುಂಚೆ ಅಲ್ಲಿನ ನೌಕರರ ಪಡೆಯುತ್ತಿದ್ದ ಸಂಬಳ [illegible] ವಾಗಿ ಹೇಳಿದರು.

ರಷ್ಯದ ಝಾರ್ ಚಕ್ರವರ್ತಿಯ ಮೊಮ್ಮಗನಿಗೆ ಗುಮಾಸ್ತೆ ಹುದ್ದೆ

ಇಂಗ್ಲೆಂಡಿನ [illegible] ಎಂಬ ಊರಿನಲ್ಲಿ ರಷ್ಯದ ಝಾರ್ ಚಕ್ರವರ್ತಿ ಎರಡನೇ ಅಲೆಕ್ಸಾಂಡರನ ಮೊಮ್ಮಗ [illegible] ಅಲೆಕ್ಸಾಂಡರ್ ಯೂರೀವ್‌ಸ್ಕಿಯವರು [illegible] ಸಂಬಳದ ವೇಳೆ [illegible] ಗುಮಾಸ್ತರಾಗಿದ್ದಾರೆ. ಅವರು ಅಲೆಕ್ಸ್ ಎಂದು ಹೆಸರಿಟ್ಟುಕೊಂಡು ಕೆಲಸಮಾಡುತ್ತಿದ್ದರು. [illegible] ದಿಂದ ವಿಮುಕ್ತರಾಗ [illegible] ತಿಳಿದ ಮೇಲೆ ಅವರು ಯಾರೆಂಬುದು ವ್ಯಕ್ತವಾಯಿತು

ಸಿಮೆಂಟಿನ ಬದಲು ಹೊಸ ವಸ್ತು

ಸಿಮೆಂಟನ್ನು [illegible] ಪ್ಲಾಸ್ಟಿಕ್ [illegible] ಕ್ರೀಟ್ [illegible] ಗಿದೆ

ಹ್ಯರ್ ಪರ್ಚೇಸ್ ರೀತಿಯಲ್ಲಿ ಸಿಂಗರ್ ಹೊಲಿಗೆ ಮಿಷನ್

[illegible] ಸಿಂಗರ್ ಮಿಷನ್ [illegible] ಜನರಿಗೆ [illegible] (ನ್ಯಾಸಾರು ಸಿಟಿ ನೂತ್ರ) [illegible] ತಿಳಿದುಬಂದಿದೆ

ಇಸ್ರೇಲ್ ಗಡಿ ಬಳಿ ಗಲಭೆ

ಕಳೆದ ವಾರಾಂತ್ಯದಲ್ಲಿ ಇಸ್ರೇಲ್ ಗಡಿ [illegible] ಎಂಬ ಊರಿನಲ್ಲಿ ಗಲಭೆ ನಡೆದು [illegible] ಮಂದಿ ಹತರಾಗಿದ್ದಾಗಿ ವರದಿಯಾಗಿದೆ. ಗಾಜಾದಲ್ಲಿರುವ ವಿಶ್ವಸಂಸ್ಥೆಯ ಅಧಿಕಾರಿಗಳು [illegible] ವನ್ನು ವ್ಯಕ್ತಪಡಿಸುತ್ತಾರೆ. [illegible] ಇಸ್ರೇಲಿಗಳು [illegible] ಅಧಿಕಾರಿಯು ಟೀಕಿಸಿದ್ದಾರೆ

ಸಂಸ್ಥಾನದ ಫುಟ್‌ಬಾಲ್ ಸಂಘದ ಸ್ಥಾಪನೆ

ಸಂಸ್ಥಾನ [illegible] ಮೈಸೂರು ಫುಟ್‌ಬಾಲ್ ಸಂಘವನ್ನು ಮೊನ್ನೆ ಬೆಂಗಳೂರಿನಲ್ಲಿ ಸ್ಥಾಪಿಸಲಾಯಿತು. [illegible] ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅದರ ಆರಂಭೋತ್ಸವವನ್ನು ನೆರವೇರಿಸಿ, ಸರ್ಕಾರದವರು ಕ್ರೀಡೆಗಳಿಗೆ ಹೆಚ್ಚಿನ ಉತ್ತೇಜನವೀಯುವರೆಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಮಾಜಿ ಹೈಕೋರ್ಟ್ ನ್ಯಾಯಾಧೀಶ ಶ್ರೀ ಬಿ. ವಾಸುದೇವಮೂರ್ತಿಯವರು ವಹಿಸಿದ್ದರು. ನೂತನ ಸಂಸ್ಥಾನದ [illegible] ಫುಟ್‌ಬಾಲ್ ಕ್ಲಬ್ಬುಗಳ ಪ್ರತಿನಿಧಿಗಳು ಇದರಲ್ಲಿ ಭಾಗವಹಿಸಿದ್ದರು. ಸಂಘದ ಕೇಂದ್ರ ಕಛೇರಿಯು ಬೆಂಗಳೂರಿನಲ್ಲಿರುವುದು. ಜಿಲ್ಲೆಗಳಲ್ಲಿ ಸ್ವತಂತ್ರವಾದ ಶಾಖೆಗಳಿರುವುವು

[illegible] ತಡವಾದರೆ ಈಜಿಪ್ಟಿನ ಯುದ್ಧ

[illegible] ಸೈನ್ಯವನ್ನು [illegible] ಪತ್ರಿಕೆಯು ಪ್ರಕಟಿಸಿ, ಯುದ್ಧ [illegible] ಈಜಿಪ್ಟಿಗೆ [illegible] ಮತ್ತೆ ಯುದ್ಧವಾಗಬಹುದೆಂದು ಅದು ಸೂಚಿಸಿದೆ

ಹಂಗೆರಿ ಕ್ರಾಂತಿಕಾರಿಗಳ ಮೇಲೆ ಜೆಕೊಸ್ಲೊವೇಕಿಯದ ಗುಂಡು

[illegible] ಎಂಬ [illegible] ಮೇಲೆ ಮೊನ್ನೆ ಜೆಕೊಸ್ಲೊವೇಕಿಯಾ ಫಿರಂಗಿಗಳು ಗುಂಡು ಹಾರಿಸಿದುವೆಂದು ಆಸ್ಟ್ರಿಯಾ ಪತ್ರಿಕೆಯೊಂದು ತಿಳಿಸಿದೆ

ಮದ್ರಾಸ್ ಗವರ್ನರರಾಗಿ ಎ. ಜೆ. ಜಾನರ ನೇಮಕ

ಮಾಜಿ ತಿರುವಾಂಕೂರು ಕೊಚ್ಚಿ ಸಂಸ್ಥಾನದ ಮುಖ್ಯ ಮಂತ್ರಿಯಾಗಿದ್ದ ಎ. ಜೆ. ಜಾನರವರನ್ನು ಮದ್ರಾಸಿನ ಗವರ್ನರರಾಗಿ ನೇಮಿಸಲಾಗಿದೆ. ಅವರು [illegible] ಅಧಿಕಾರವನ್ನು [illegible] ಸ್ವೀಕರಿಸುವರು

ಬ್ರಿಟಿಷ್ ಫ್ರೆಂಚ್ ಪಡೆಗಳೊಡನೆ ಪೋರ್ಟ್ ಸೈಯದ್ದಿನ ನಿವಾಸಿಗಳ ಅಸಹಕಾರ

ಪೋರ್ಟ್ ಸೈಯದ್ ಪ್ರದೇಶದಲ್ಲಿರುವ [illegible] ಅಧಿಕಾರಿಗಳೂ ಮತ್ತು [illegible] ಬ್ರಿಟಿಷ್ ಮತ್ತು ಫ್ರೆಂಚ್ ಸೈನಿಕರೊಡನೆ [illegible] ಮಾಡಿರುವರು. [illegible] ಪರಿಸ್ಥಿತಿಯನ್ನು ಹತೋಟಿಗೆ ತರಲು [illegible] ಪಡೆಗಳಿಗೆ ಹೆಚ್ಚಿನ ಅಧಿಕಾರ [illegible] ಬೇಕಾಗುವುದೆಂದು ವರದಿಯಾಗಿದೆ

ಚಾಮರಾಜನಗರದಲ್ಲಿ ವಿದ್ಯುಚ್ಛಕ್ತಿ ತೊಂದರೆ

ಕಳೆದ ೧೫ ದಿನಗಳಿಂದ ಚಾಮರಾಜನಗರದ [illegible] ತೊಂದರೆ [illegible] ಗಂಟೆಗಟ್ಟಲೆ ವಿದ್ಯುಚ್ಛಕ್ತಿಯು ನಿಂತುಹೋಗುತ್ತದೆ. ಬೆಳಗಿನ ಹೊತ್ತು ಮಿಲ್ಲು, ರೇಡಿಯೊ ಮುಂತಾದವುಗಳನ್ನು ಬಳಸುವವರಿಗೆ ಪದೇಪದೇ ತೊಂದರೆಯಾಗುತ್ತಿದೆ. ರಾತ್ರಿ ಹೊತ್ತು ಗಾಢಾಂಧಕಾರವಾಗುತ್ತದೆ. ಮೇಲ್ಪಟ್ಟ ಅಧಿಕಾರಿಗಳು ಕೂಡಲೇ ಗಮನ ಕೊಟ್ಟು ಇದನ್ನು ಕ್ರಮಪಡಿಸಬೇಕು ಎಂದು ಅಲ್ಲಿನ ನಿವಾಸಿಗಳೊಬ್ಬರು ಕೋರಿದ್ದಾರೆ

ನಗರದಲ್ಲಿ ಪೀಟರ್‌ಪಿಟ್ಮನ್ನರ ಭಾಷಣ

ಶೀಘ್ರಲಿಪಿಯನ್ನು ಕಂಡುಹಿಡಿದ ಇಂಗ್ಲೆಂಡಿನ ಸರ್ ಐಸಾಕ್ ಪಿಟ್ಮನ್ನರ ಮೊಮ್ಮಕ್ಕಳಲ್ಲಿ ಒಬ್ಬರಾದ ಮಿ|| ಪೀಟರ್‌ಪಿಟ್ಮನ್ನರು ನಗರದಲ್ಲಿರುವ [illegible] ಕಾಲೇಜಿನಲ್ಲಿ ನಾಳೆ [illegible] ಗಂಟೆಗೆ ವಿದ್ಯಾರ್ಥಿಗಳನ್ನು ಉದ್ದೇಶಿಸಿ [illegible] ಮಾಡುವರು. [illegible] ಅಂದು ಮಧ್ಯಾಹ್ನ ೩ ಗಂಟೆಗೆ [illegible] ಶೀಘ್ರಲಿಪಿಗಾರರನ್ನು ಉದ್ದೇಶಿಸಿ ಭಾಷಣ ಮಾಡುವರು. [illegible] ಶೀಘ್ರಲಿಪಿಗಾರರೆಲ್ಲರೂ ಬರುವಂತೆ [illegible] ಕಾಲೇಜ್ ಆಫ್ ಕಾಮರ್ಸಿನವರು ಕೋರಿದ್ದಾರೆ

ತ. ರಾ. ಸುಬ್ಬರಾಯರಿಗೆ ಸತ್ಕಾ

ಮೈಸೂರು, [illegible]

ಸುಪ್ರಸಿದ್ಧ ಸಾಹಿತಿಗಳೂ ಮತ್ತು ಕಾದಂಬರಿಕಾರರೂ ಆದ ಶ್ರೀ ತ. ರಾ. ಸುಬ್ಬರಾಯರು ರಚಿಸಿರುವ 'ಸಿಡಿಲ ಮೊಗ್ಗು' ಎಂಬ ಕಾದಂಬರಿ ಗ್ರಂಥದ ಪ್ರಕಾಶನದ [illegible] ಸಂದರ್ಭದಲ್ಲಿ ಅವರನ್ನು ಅಭಿನಂದಿಸಲು [illegible] ಶ್ರೀ [illegible] ಸೀತಾರಾಂರವರು [illegible] ಗಾಯತ್ರಿ ಭವನದಲ್ಲಿ ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು. ಅನೇಕ ಸಾಹಿತಿಗಳು [illegible] ಬಂದಿದ್ದರು. ಇದುವರೆಗೆ ಶ್ರೀ ತ ರಾ ಸು ಅವರು ೪೫ ಪುಸ್ತಕಗಳನ್ನು ಪ್ರಕಟಿಸಿರುವುದಾಗಿ ಹೇಳಿ ಅವರು ಇನ್ನೂ ಹೆಚ್ಚು ಸಾಹಿತ್ಯ ಸೇವೆ ಮಾಡಲೆಂದು ಶ್ರೀ ಸೀತಾರಾಂರವರು [illegible] ರು ಶ್ರೀಗಳಾದ ಪರಮೇಶ್ವರಭಟ್ಟ, ಗೋಪಾಲಕೃಷ್ಣ ಅಡಿಗ, ಹೆಚ್. ಎಂ. ಶಂಕರನಾರಾಯಣರಾವ್ ಮತ್ತು ಎ. ಸೀತಾರಾಂರವರು ಮಾತನಾಡಿ ಶ್ರೀ ತ ರಾ ಸು ರವರನ್ನು ಅಭಿನಂದಿಸಿ, ಅವರ ಸಾಹಿತ್ಯ ಸೇವೆಯು [illegible] ವಾಗಿ ನಡೆಯಲೆಂದು ಹಾರೈಸಿದರು. ಶ್ರೀ ತ ರಾ ಸುಬ್ಬರಾಯರು ಸತ್ಕಾರಕ್ಕಾಗಿ ವಂದನೆಯನ್ನು ಸಲ್ಲಿಸಿ ತಮ್ಮ ಕಾರ್ಯದಲ್ಲಿ ಮುಂದೆಯೂ ಎಲ್ಲರೂ ಸಹಕರಿಸಬೇಕೆಂದು ಕೋರಿದರು

ತಿರುವನಂತಪುರದಲ್ಲಿ ವಕೀಲರ ಸತ್ಯಾಗ್ರಹ

ತಿರುವನಂತಪುರದಲ್ಲಿ ಕೇರಳ ಹೈಕೋರ್ಟಿನ ಒಂದು ಶಾಖೆಯನ್ನು ತೆರೆಯುವಂತೆ ಒತ್ತಾಯಮಾಡಿ ಅಲ್ಲಿನ ವಕೀಲರುಗಳು ಕೋರ್ಟು ಪಿಕೆಟಿಂಗ್ ಅನ್ನು ಮುಂದುವರಿಸುತ್ತಿರುವರು. ತಮ್ಮ ಬೇಡಿಕೆಯನ್ನು ನಡೆಸಿಕೊಡುವಂತೆ [illegible] ರಾಷ್ಟ್ರಪತಿಗಳು, ಪ್ರಧಾನಿಯವರು, ಕೇಂದ್ರ ಗೃಹ ಮಂತ್ರಿಗಳು, ಸುಪ್ರೀಂ ಕೋರ್ಟಿನ ಶ್ರೇಷ್ಠ ನ್ಯಾಯಾಧೀಶರು ಮತ್ತು ಕೇರಳ ಗವರ್ನರರಿಗೆ ಬಹಿರಂಗ ಪತ್ರ ಬರೆದಿದ್ದಾರೆ. [illegible] ಪ್ಲೀಡರುಗಳನ್ನು ಬಿಟ್ಟು [illegible] ಹೋಗುತ್ತಿಲ್ಲ [illegible] ಮೊಕದ್ದಮೆಗಳನ್ನು ಅಲ್ಲಿನ ಜಿಲ್ಲಾ ನ್ಯಾಯಾಧೀಶರು ವಜಾ ಮಾಡಿದ್ದಾರೆ.

ತುಮಕೂರು ಕಾಲೇಜು ವಿದ್ಯಾರ್ಥಿಗಳ ಪ್ರದರ್ಶನ

ವಿದ್ಯಾರ್ಥಿಯೊಬ್ಬನ ಬಗ್ಗೆ ವೇತನದ ಸಮಿತಿ ಸದಸ್ಯರ ವರ್ತನೆಗಾಗಿ ಪ್ರತಿಭಟ

ತುಮಕೂರು ಪ್ರಥಮ ದರ್ಜೆ ಕಾಲೇಜಿನ ಸುಮಾರು ೧೫೦೦ ವಿದ್ಯಾರ್ಥಿಗಳು ನೆನ್ನೆ ತರಗತಿಯಿಂದ ಹೊರಬಂದು ಬೀದಿಗಳಲ್ಲಿ ಪ್ರದರ್ಶನ ನಡೆಸಿದರು. ವಿದ್ಯಾರ್ಥಿ ವೇತನ ಸಮಿತಿಯ [illegible] ಸದಸ್ಯರೊಬ್ಬರ ಬಳಿ ಒಬ್ಬ ವಿದ್ಯಾರ್ಥಿಯು ಹೋಗಿದ್ದಾಗ ಅವನನ್ನು ಸದಸ್ಯರು ಹೊಡೆದರೆಂದೂ, ಅದಕ್ಕಾಗಿ ಪ್ರತಿಭಟಿಸಲು ಬೋರ್ಡುಗಳನ್ನು ಹಿಡಿದು ಬೀದಿಗಳಲ್ಲಿ ಮೆರವಣಿಗೆ ನಡೆಸಿ, ಸದಸ್ಯರನ್ನು ಖಂಡಿಸುವ ಘೋಷಣೆಗಳನ್ನು [illegible] ಎಂದೂ ವರದಿಯಾಗಿದೆ. ಅವರ ವರ್ತನೆಯನ್ನು ಖಂಡಿಸುವ ನಿರ್ಣಯವನ್ನು ವಿದ್ಯಾರ್ಥಿಗಳ ಸಭೆಯಲ್ಲಿ ಅಂಗೀಕರಿಸಲಾಯಿತು

೦ ಬೆಳಗಾವಿಯನ್ನೂ ಸಹ ಮೈಸೂರು [illegible] ಬೋರ್ಡಿನ ಒಂದು ಅಧಿವೇಶನವು [illegible] ವಂತೆ ಗೊತ್ತು ಮಾಡಲಾಗಿದೆ.

Join
GLOBE TUTORIAL COLLE
(Sadvidya Patashala, Mysore)
Excellent Coaching for
Inter, P. C. M., Kan., En

Edited, Printed and Published
R. Nagarajan at Sadhvi Pre
Subbiah Road, Mysore

THE NATIONAL INSTITUTE OF COMMERCE,
1677 Old Mysore Bank Road Mysore
FRESH ADMISSIONS for TYPEWRITING and SHORT HAND are now being received during the mornings and evenings. The Institute is well equipped and is centrally located. Apply sharp

[illegible] ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ · ೧೫] SADHVI : WEDNESDAY 21—11—1956 ಮೈಸೂರು : ಬುಧವಾರ ೨೧—೧೧—೧೯೫೬ [ಸಂಚಿಕೆ : ೧೦೬

ಯೂರೋಪಿನ ರಾಷ್ಟ್ರಗಳಲ್ಲಿ ಪೆಟ್ರೋಲ್ ಎಣ್ಣೆ ಅಭಾವ

ಯೂರೋಪಿನಲ್ಲಿ ಪೆಟ್ರೋಲ್ ಎಣ್ಣೆಯ ಅಭಾವ

ಮಧ್ಯ ಪ್ರಾಚ್ಯದ ಪರಿಸ್ಥಿತಿಯ ಪರಿಣಾಮವಾಗಿ, ಯೂರೋಪಿನ ನಾನಾ ರಾಜ್ಯಗಳಲ್ಲಿ ಪೆಟ್ರೋಲಿನ ಅಭಾವವುಂಟಾಗುತ್ತಿದೆ. ಟರ್ಕಿಯಲ್ಲಿ ನೆನ್ನೆ ಪೆಟ್ರೋಲ್ ರೇಷನಿಂಗ್ ಜಾರಿಗೆ ಬಂದಿತು. ಹಾಲೆಂಡಿನಲ್ಲಿ ಭಾನುವಾರದ ವಿಹಾರ ಮೋಟಾರು ಸಂಚಾರವನ್ನು ನಿಷೇಧಿಸಲಾಗಿದೆ. ಪಶ್ಚಿಮ ಜರ್ಮನಿಯಲ್ಲಿ ಪೆಟ್ರೋಲ್ ಮತ್ತು ಡೀಸಲ್ ಎಣ್ಣೆಗಳ ಉಪಯೋಗದ ಬಗ್ಗೆ ನಿರ್ಬಂಧ ಹಾಕಲಾಗಿದೆ. ಪ್ಯಾರಿಸ್ ನಗರದಲ್ಲಿ ಎಣ್ಣೆ [illegible] ಸ್ಟೇಷನುಗಳು ಖಾಲಿಯಾಗುತ್ತಿವೆ. [illegible] ಶೇಕಡ ೩೦ ರಷ್ಟು ಪೆಟ್ರೋಲ್ [illegible] ಜನರು ಕ್ಯೂ ನಿಲ್ಲಲು ಪ್ರಾರಂಭಿಸಿದ್ದಾರೆ. ಇಸ್ರೇಲಿನಲ್ಲಿ ಪೆಟ್ರೋಲ್ ಬೆಲೆಯು ಶೇಕಡ ೧೦ ರಷ್ಟು ಹೆಚ್ಚಿದೆ. [illegible] ಪೆಟ್ರೋಲ್ ಪಡಿತರವು ಸ್ವಲ್ಪ ಮಟ್ಟಿಗೆ ಜಾರಿಗೆ ಬಂದಿರುತ್ತದೆ.

ವಿಶ್ವ ಸಂಸ್ಥೆ ಪಡೆಗಳ ಕೆಲಸದ ಬಗ್ಗೆ ಈಜಿಪ್ಟಿನ ಷರತ್ತು

ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಶೀಲ್ಡ್ ಅಂಗೀಕಾರ

ವಿಶ್ವ ಸಂಸ್ಥೆಯ ಮಧ್ಯ ಪ್ರಾಚ್ಯದ ಪಡೆಗಳು ಈಜಿಪ್ಟಿನಲ್ಲಿ ನಡೆಸಬೇಕಾದ ಕಾರ್ಯಗಳ ಬಗ್ಗೆ ಈಜಿಪ್ಟಿನ ಅಧ್ಯಕ್ಷರು ವಿಧಿಸಿರುವ ಷರತ್ತುಗಳನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಶೀಲ್ಡರು ಅಂಗೀಕರಿಸಿರುವುದಾಗಿ ತಿಳಿದುಬಂದಿದೆ. ಆಂಗ್ಲೋ ಫ್ರೆಂಚ್ ಸೈನ್ಯಗಳು ವಾಪಸಾದ ಮೇಲೆ ಸೂಯೆಜ್ ಕಾಲುವೆಯಲ್ಲಿ ವಿಶ್ವಸಂಸ್ಥೆ ಪಡೆಗಳು ಇರಬಾರದೆಂಬುದಕ್ಕೆ ಹ್ಯಾಮರ್‌ಶೀಲ್ಡರು ಒಪ್ಪಿರುವುದಾಗಿ ಗೊತ್ತಾಗಿದೆ. ಅಲ್ಲದೆ ಸೂಯೆಜ್ ಕಾಲುವೆಯಲ್ಲಿ ಅನಿರ್ಬಂಧಿತ ಹಡಗು ಸಂಚಾರದ ಬಗ್ಗೆ ವಿಶ್ವಸಂಸ್ಥೆ ಪಡೆಗಳು ಪ್ರವೇಶಿಸಬಾರದೆಂದು ಈಜಿಪ್ಟ್ ಹೇಳಿರುವುದನ್ನೂ ಹ್ಯಾಮರ್‌ಶೀಲ್ಡರು ಸಮ್ಮತಿಸಿರುವುದಾಗಿ ಹೇಳಲಾಗಿದೆ. ಕಾಲುವೆಯನ್ನು ಸಂಚಾರಕ್ಕೆ ಅನುಕೂಲಪಡಿಸಲು ವಿಶ್ವ ಸಂಸ್ಥೆಯು ಸಹಾಯ [illegible]ವುದು.

ಬೆಂಗಳೂರು ನಗರಕ್ಕೆ ಕಾವೇರಿ ನೀರಿನ ಸರಬರಾಜು

ಬೆಂಗಳೂರು ನಗರಕ್ಕೆ ಕಾವೇರಿ ನದಿ ನೀರನ್ನು ಒದಗಿಸುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ [illegible] ಮತ್ತು [illegible] ಮಂತ್ರಿ ಶ್ರೀ [illegible] ಕೆ. ವೀರಣ್ಣಗೌಡರು ತಿಳಿಸಿರುತ್ತಾರೆ. [illegible] ೬೦ ಮೈಲಿಯ ಕೊಳಾಯಿಗಳ [illegible] ತಗಲುವುದೆಂದೂ, ಈ ಬಗ್ಗೆ ಸರ್ವೆ [illegible] ಸಬ್ ಡಿವಿಜನ್ ಒಂದನ್ನು ಏರ್ಪಡಿಸಲಾಗುವುದೆಂದೂ ಹೇಳಿ ಭಾರತರತ್ನ ಎಂ. ವಿಶ್ವೇಶ್ವರಯ್ಯನವರೇ ಇದನ್ನು ಮೊದಲೇ ಸೂಚಿಸಿದ್ದರೆಂದೂ ಅವರು ನುಡಿದರು. ಬೆಂಗಳೂರು ನಗರದ ಪ್ರಜಾ ಸಂಖ್ಯೆಯು ಹೆಚ್ಚುತ್ತಿರುವುದರಿಂದ ಪ್ಪಗೊಂಡನಹಳ್ಳಿ ನೀರು ನಗರಕ್ಕೆ ಸಾಕಾಗುವುದಿಲ್ಲವೆಂದು ಅವರು ಹೇಳಿರುವರು.

ಭಾರತವು ಕಾಮನ್‌ವೆಲ್ತನ್ನು ತ್ಯಜಿಸುವುದು ಸೂಕ್ತವಲ್ಲ

ವಿದೇಶಾಂಗ ನೀತಿ ಬಗ್ಗೆ ನೆಹರೂರವರ ಸಮರ್ಥನೆ

ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ವಿದೇಶಾಂಗ ನೀತಿ [illegible] ಭಾರತವು [illegible] ಸಂಬಂಧವನ್ನು ಇಟ್ಟುಕೊಂಡಿರುವುದನ್ನು ಸಮರ್ಥಿಸಿದರು. ಈಜಿಪ್ಟಿನ ಮೇಲೆ ಆಂಗ್ಲೋ ಫ್ರೆಂಚ್ [illegible] ದೃಷ್ಟಿಯಿಂದ ಈ ವಿಷಯವನ್ನು [illegible] ಎಂದೂ ನುಡಿದರು.

ಹಂಗೇರಿಯ ಪರಿಸ್ಥಿತಿ [illegible].

ಪೂರ್ವ ಯೂರೋಪಿನ ಎಲ್ಲಾ [illegible] ಸೈನ್ಯವನ್ನು [illegible] ಅದರ ಜನ [illegible] ಸೈನ್ಯಗಳು ವಾಪಸಾಗಬೇಕೆಂದೂ [illegible] ಅಭಿಪ್ರಾಯಪಟ್ಟಿರುವರು.

ತಾಯಲೂರು ಕೆರೆ ತುಂಬಿದ್ದಕ್ಕೆ ಕಾಸಿಗೆ ೨ ಸೇರು ಅಕ್ಕಿ ಮಾರಾಟ

ಮುಳಬಾಗಿಲು ತಾಲ್ಲೂಕು ತಾಯಲೂರು ಕೆರೆಯು ಮೂರು ವರ್ಷಗಳನಂತರ ಈಗ ಮತ್ತೊಮ್ಮೆ ತುಂಬಿ ಕೋಡಿ ಬಿದ್ದುದಕ್ಕಾಗಿ ಸಂತೋಷವನ್ನು ಸೂಚಿಸಲು ಅಲ್ಲಿ ೧,೫೦೦ ಸೇರು ಉತ್ತಮ ರಕಂ ಅಕ್ಕಿಯನ್ನು ಕಾಸಿಗೆ ೨ ಸೇರಿನಂತೆ ಕಳೆದ ೧೮ ರಂದು ಮಾರಲಾಯಿತು. ಕೇಂದ್ರ ಆಹಾರ ಖಾತೆ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರ ಮಾರಾಟ ಮಾಡಿದರು. ೫೦೦ ವರ್ಷಗಳ ಹಿಂದೆ ಈ ಕೆರೆಯನ್ನು ನಿರ್ಮಿಸಲಾಯಿತು. ೫೦ ವರ್ಷಗಳಿಗೊಮ್ಮೆ ಕೆರೆಯು ತುಂಬಿ ಕೋಡಿ ಬೀಳುತ್ತಿದ್ದಿತೆಂದು ಹೇಳಲಾಗಿದೆ.

ಭಾನುವಾರ ಮೋಟಾರು ಸಂಚಾರಕ್ಕೆ ನಿಷೇಧ

ಸ್ವಿಟ್ಸರ್ಲೆಂಡಿನಲ್ಲಿ ಪೆಟ್ರೋಲಿನ ಬಳಕೆಯನ್ನು ಶೇಕಡ ೧೦ ರಷ್ಟು ಕಡಿಮೆ ಮಾಡುವ ಉದ್ದಿಶ್ಯದಿಂದ ದೇಶದ ಅತ್ಯಂತ [illegible] ಮೋಟಾರು ವಾಹನಗಳ ಸಂಚಾರವನ್ನು ನಿಷೇಧಿಸಲಾಗುವುದೆಂದು ವರದಿಯಾಗಿದೆ. ಈ ವ್ಯವಸ್ಥೆಯು ಯಶಸ್ವಿಯಾಗದಿದ್ದರೆ, ಬೇರೆ ವಿಧದ ಮಾರ್ಗಗಳನ್ನು ಯೋಚಿಸಲಾಗಿರುವುದೆಂದೂ ಹೇಳಲಾಗಿದೆ.

ಕೆರೆಯಲ್ಲಿ ಮುಳುಗಿ ಯುವಕನ ಮರಣ

ಹೊಸ [illegible] ಬಡಾವಣೆಯ [illegible] ಕೆರೆಯಲ್ಲಿ ಮೊನ್ನೆ ಸ್ನಾನಕ್ಕಾಗಿ ಹೋಗಿದ್ದ ಚಿನ್ನಸ್ವಾಮಿ ಎಂಬ ೨೦ ವರ್ಷದ ತರುಣನು ಕಾಲುಜಾರಿ ಮುಳುಗಿ ಮೃತಪಟ್ಟನೆಂದು ವರದಿಯಾಗಿದೆ.

ತಿರುವನಂತಪುರದಲ್ಲಿ ಭಾರಿ ಹರತಾಳ

ತಿರುವನಂತಪುರದಲ್ಲಿ ಹೈಕೋರ್ಟು ಬೆಂಚನ್ನು ಸ್ಥಾಪಿಸದಿರುವ ಬಗ್ಗೆ ಪ್ರತಿಭಟಿಸಲು ನೆನ್ನೆ ಅಲ್ಲಿ 'ಹೈಕೋರ್ಟು ದಿನಾಚರಣೆಯು' ನಡೆದು ವಕೀಲರು, ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ಮೆರವಣಿಗೆಗಳನ್ನು ನಡೆಸಿದರು. ಅಲ್ಲಿನ ಹೋಟೆಲು ಮೊದಲಾಗಿ ಎಲ್ಲಾ ವ್ಯಾಪಾರ ಸಂಸ್ಥೆಗಳು ಮುಚ್ಚಲ್ಪಟ್ಟಿದ್ದುವು. ವಿದ್ಯಾರ್ಥಿಗಳು ಕಾಲೇಜುಗಳಿಗೆ ಹೋಗಲಿಲ್ಲ. ಪಟ್ಟಣದಲ್ಲಿ [illegible] ಮೋಟಾರು [illegible] ಕಪ್ಪು ಪಟ್ಟಿಗಳನ್ನು [illegible] ಸಿನಿಮಾ ಮಂದಿರಗಳು ಪ್ರದರ್ಶನವನ್ನು ನಿಲ್ಲಿಸಿದ್ದುವು.

[illegible] ಕಛೇರಿ ಮತ್ತು ಬ್ಯಾಂಕುಗಳು ಕೆಲಸ ನಡೆಸಿದವು. [illegible] ಪತ್ರಿಕೆ ಮಾರಾಟ [illegible] ಜನರಿಗೆ [illegible] ನಡೆಯಿತು [illegible] ಪ್ರದರ್ಶನ ಮಾಡಿದರು.

ಹಂಗೇರಿ ಪರಿಸ್ಥಿತಿ ಪರಿಶೀಲನೆಗೆ ವಿಶ್ವ ಸಂಸ್ಥೆ ವೀಕ್ಷಕರಿಗೆ ಅವಕಾಶ

ಸಂಸ್ಥೆಯ ಸಾಧಾರಣ ಸಭೆಗೆ ಭಾರತದ ನಿರ್ಣಯ

ಹಂಗೇರಿಯ ಒಳನಾಡಿನಲ್ಲಿರುವ ಪರಿಸ್ಥಿತಿ[illegible] ವೀಕ್ಷಕರ ಪರಿಶೀಲನೆಗೆ ಅವಕಾಶವೀಯಲು ಹಂಗೇರಿಗೆ ಸೂಚಿಸುವ ನಿರ್ಣಯವೊಂದನ್ನು ಭಾರತವು ವಿಶ್ವ ಸಂಸ್ಥೆಯ ಸಾಧಾರಣಾ ಸಭೆಯಲ್ಲಿ ಮೊನ್ನೆ ಮಂಡಿಸಿತು. ಹಂಗೇರಿಯ ನಿವಾಸಿಗಳನ್ನು ಬಲಾತ್ಕಾರದಿಂದ ಗಡೀಪಾರು ಮಾಡಲಾಗುತ್ತಿರುವುದೆಂದು ತಿಳಿದುಬಂದಿರುವುದೆಂದೂ ಆದರೆ ಗಡೀಪಾರುಗಳಾಗಿಲ್ಲವೆಂದು ಹಂಗೇರಿ ಸರ್ಕಾರವು ತಿಳಿಸಿರುವುದೆಂದೂ ನಿರ್ಣಯವು ತಿಳಿಸಿ, ಹಂಗೇರಿಯು ಈ ಬಗ್ಗೆ ಪರಿಶೀಲನೆಗೆ ಅವಕಾಶ ಕೊಡಬೇಕೆಂದು ಸೂಚಿಸಿರುತ್ತದೆ.

ಹಳದಿ ಬಣ್ಣದ ಮಳೆ

[illegible] ಪಾಂಡ್ಯಪುರಂ ಎಟ್ಟಿಯಾಪುರದ ಬಳಿ ಒಂದು ಗ್ರಾಮದಲ್ಲಿ ಕಳೆದ ಶುಕ್ರವಾರ ಭಾರಿ ಮಳೆ ಬಂದಿತು. ಮಳೆಯ ನೀರು ಪೂರ್ಣವಾಗಿ ಹಳದಿ ಬಣ್ಣದಿಂದ ಕೂಡಿತ್ತು. ಮನೆ ಮೇಲ್ಛಾವಣಿ ಮತ್ತು ರಸ್ತೆಗಳು ಹಳದಿ ಬಣ್ಣವಾಗಿದ್ದುವು. ಸುತ್ತಮುತ್ತಲಿನಲ್ಲಿ ಈ ತರಹೆಯ ಮಳೆ [illegible] ಬಿದ್ದಿಲ್ಲ.

ಬ್ರಿಟನ್ನಿನಲ್ಲಿ ಪೆಟ್ರೋಲ್ ಪಡಿತರ

ಬರುವ ತಿಂಗಳು ೧೭ ರಿಂದ ಬ್ರಿಟನ್ನಿನಲ್ಲಿ ಪೆಟ್ರೋಲನ್ನು ಪಡಿತರದ ಮೂಲಕ ಹಂಚಲಾಗುವುದೆಂದು ಬ್ರಿಟನ್ನಿನ ಮಂತ್ರಿ ಆಬ್ರಿ ಜೋನ್ಸ್‌ರವರು ತಿಳಿಸುತ್ತಾರೆ. ಮೋಟಾರು ವಾಹನಗಳು ಬಳಸುವ ಸ್ಪಿರಿಟ್, ಡೀಸೆಲ್ ಎಣ್ಣೆ ಮುಂತಾದುವುಗಳಿಗೂ ಇದು ಅನ್ವಯಿಸುವುದು.

ಪೋರ್ಟ್ ಸೈಯದ್ದಿನಲ್ಲಿ ಆಕ್ರಮಣಕಾರರ ದಬ್ಬಾಳಿಕೆ

ಪೋರ್ಟ್ ಸೈಯದ್ದಿನಲ್ಲಿ ಆಂಗ್ಲೋ-ಫ್ರೆಂಚರು ದಬ್ಬಾಳಿಕೆ ಕ್ರಮಗಳನ್ನು ಕೈಕೊಳ್ಳುತ್ತಿರುವುದಾಗಿ ಈಜಿಪ್ಟ್ ವಿಶ್ವ ಸಂಸ್ಥೆಗೆ ದೂರಿತ್ತಿದೆ. ಮಾನವ ಹಕ್ಕುಬಾಧ್ಯತೆ ನಿಬಂಧನೆಗಳನ್ನು ಉಲ್ಲಂಘಿಸಿ ಅಲ್ಲಿ ಕ್ರೌರ್ಯ ನಡೆಸಲಾಗುತ್ತಿದೆಯೆಂದು ಆಪಾದಿಸಲಾಗಿದೆ. ಮಾರ್ಷಲ್‌ಲಾವನ್ನು ಘೋಷಣೆ ಮಾಡದೆ ಜಾರಿಗೆ ತರಲಾಗಿದೆಯೆಂದೂ, ಮಿಲಿಟರಿ ನ್ಯಾಯ ಮಂಡಲಿಗಳು ಈಜಿಪ್ಟಿನ ಜನರನ್ನು ವಿಚಾರಿಸುತ್ತಿರುವುದಾಗಿಯೂ ಆಪಾದಿಸಲಾಗಿದೆ.

ಕಾಶ್ಮೀರದ ರಾಜ್ಯಾಂಗ ಸಭೆ ನಿರ್ಣಯದ ಬಗ್ಗೆ ಪಾಕಿಸ್ತಾನದ ಆಕ್ಷೇಪಣೆ

ಕಾಶ್ಮೀರ ರಾಜ್ಯಾಂಗ ಸಭೆಯು ಭಾರತದಲ್ಲಿ ಕಾಶ್ಮೀರದ ಐಕ್ಯದ ವಿಚಾರವನ್ನು [illegible] ಅಂಗೀಕರಿಸಿರುವುದನ್ನು ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ಆಕ್ಷೇಪಿಸಿ, ಅದರಿಂದ ಭಾರತ ಮತ್ತು ಪಾಕಿಸ್ತಾನಗಳ ಸಂಬಂಧವು ವಿಷಮಗೊಳ್ಳುವುದೆಂದು ಎಚ್ಚರಿಕೆಯಿತ್ತಿರುತ್ತಾರೆ. ಕಾಶ್ಮೀರ ರಾಜ್ಯಾಂಗ ಸಭೆಯು ಈ ನಿರ್ಧಾರ ಕೈಕೊಳ್ಳಲು ಅದಕ್ಕೆ ಹಕ್ಕಿಲ್ಲವೆಂದೂ ಅವರು ತಿಳಿಸುತ್ತಾರೆ. ಪಾಕಿಸ್ತಾನದ ಅಧಿಕಾರಿಯೊಬ್ಬರು ಈ ವಿಚಾರವನ್ನು ವಿಶ್ವ ಸಂಸ್ಥೆಯ ಗಮನಕ್ಕೆ ತಂದಿರುತ್ತಾರೆ.

೨ ಮೆದುಳುಗಳಿಂದ ಕೂಡಿದ ಶಿಶು

ಸ್ಪೇನಿನ ರಾಜಧಾನಿ ಮ್ಯಾಡ್ರಿಡ್ ನಗರದ ಒಂದು ಖಾಸಗಿ ಆಸ್ಪತ್ರೆಯಲ್ಲಿ ಒಬ್ಬ ಹೆಂಗಸು ತಲೆಯಲ್ಲಿ ಎರಡು ಮೆದುಳುಗಳುಳ್ಳ ಹೆಣ್ಣು ಮಗುವನ್ನು ಪ್ರಸವಿಸಿದಳೆಂದೂ, ಒಂದು ತಿಂಗಳ ಹಿಂದೆ ಇದೇ ರೀತಿಯ ಮತ್ತೊಂದು ಶಿಶುವು ಜನಿಸಿತ್ತೆಂದೂ ವರದಿಯಾಗಿದೆ. ಆ ಮಗುವು ದೀರ್ಘ ಕಾಲ ಬದುಕಬಲ್ಲದೆಂದೂ ಅದಕ್ಕೆ ಮಹತ್ತರವಾದ ಬುದ್ಧಿಶಕ್ತಿಯಿರುವುದೆಂದೂ ವೈದ್ಯರುಗಳು ಅಭಿಪ್ರಾಯಪಟ್ಟಿರುವರು.

ಭಾರತದಲ್ಲಿ ನೆಲೆಸಲು ಬ್ರಿಟನ್ನಿನ ವಿಜ್ಞಾನಿ ಹಾಲ್ಡೇನರ ಆಶಯ

[illegible] ನಡೆಯುತ್ತಿರುವ ಮಾನವಕೋಟಿಯ ತೀರ್ಪಿಗೆ ಒಳಗಾದ [illegible] ರಾಷ್ಟ್ರವಲ್ಲದ [illegible] ತದಲ್ಲಿ ನೆಲೆಸಲು ಅಪೇಕ್ಷಿಸಿರುವುದಾಗಿಯೂ ಪ್ರಸಿದ್ಧ ಬ್ರಿಟಿಷ್ ವಿಜ್ಞಾನಿ ಜೆ. ಬಿ. ಎಸ್. ಹಾಲ್ಡೇನರು ತಿಳಿಸಿದ್ದಾರೆ. ಅವರು ಲಂಡನ್ ವಿಶ್ವವಿದ್ಯಾಲಯದ ಪ್ರೊಫೆಸರ್ ಹುದ್ದೆಗೆ ರಾಜೀನಾಮೆ ಸಲ್ಲಿಸಿರುವರು. ಬ್ರಿಟನ್ನಿನ ನಾಗರಿಕ ರಾಜ್ಯವಲ್ಲವೆಂದೂ, [illegible] ಜನಗಳ ರಕ್ತವನ್ನು ಅದು ಹರಿಸಿದೆ ಎಂದೂ ಅವರು ಹೇಳಿದ್ದಾರೆ. ಅವರೊಡನೆ ಅವರ ಪತ್ನಿಯೂ ಭಾರತದಲ್ಲಿ ನೆಲೆಸಲು ಇಚ್ಛಿಸಿರುತ್ತಾರೆ. ಭಾರತದಲ್ಲಿ ವಿಜ್ಞಾನ ಸಂಶೋಧನೆ ನಡೆಸಲು ಅವರು ಆಶಿಸಿದ್ದಾರೆ. ಆಧುನಿಕ ಯುದ್ಧತಂತ್ರಗಳಿಂದ ಆಗುವ ದುಷ್ಪರಿಣಾಮವನ್ನು ಅವರು ಭಾರತದ ಜನತೆಗೆ ತಿಳಿಸಲಿದ್ದಾರೆ.

ಭಾರತದ ಪ್ರಜಾ ಸಮಾಜವಾದೀ ಸಮ್ಮೇಳನ

ಬೆಂಗಳೂರು —

ಪ್ರಜಾ ಸಮಾಜವಾದೀ ಪಕ್ಷದ ರಾಷ್ಟ್ರೀಯ ಸಮ್ಮೇಳನವು ಇದೇ ತಿಂಗಳು ೨೩ ರಿಂದ ೩ ದಿನಗಳವರೆಗೆ ಈ ನಗರದಲ್ಲಿ ಸೇರುತ್ತದೆ. ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ೨೧ ಮತ್ತು ೨೨ನೇ ತಾರೀಕುಗಳಲ್ಲಿ ನಡೆಯುವುದು

ಸಮ್ಮೇಳನದಲ್ಲಿ ಭಾಗವಹಿಸಲು ವಿದೇಶಗಳಿಂದ ಸಮಾಜವಾದಿ ಮುಖಂಡರು ಆಗಮಿಸಲಿರುವರು. ಸೋಷಲಿಸ್ಟ್ ಇಂಟರ್‌ನ್ಯಾಷನಲ್ ಸಂಸ್ಥೆಯ ಕಾರ್ಯದರ್ಶಿ ಕರ್ಟ್ ಕ್ರಿಸ್ಟ್ಯಾಂ ಮತ್ತು ನಾಜಿ ಪ್ರಧಾನ ಕಾರ್ಯದರ್ಶಿ ಜೂಲಿಯಸ್ ಬ್ರಂಥಾಲ್, ಇಂಡೊನೇಷ್ಯದ ಸಮಾಜವಾದಿ ಪಕ್ಷದ ನಾಯಕರಲ್ಲೊಬ್ಬರಾದ ಶ್ರೀಮತಿ ಷರೀರ್ನಾ ಮತ್ತು ಪ್ರಧಾನ ಕಾರ್ಯದರ್ಶಿ ಸಿಜೋರತ್, ಕೆನಡದ ಶ್ರೀಮತಿ ಕ್ಯಾಸ್‌ಗ್ರೈನ್ ಮುಂತಾದವರು ಸಮ್ಮೇಳನದಲ್ಲಿ ಭಾಗವಹಿಸುವರು.

ಭಾರತದ ಅನೇಕ ಪ್ರಜಾ ಸಮಾಜವಾದಿ ಮುಖಂಡರೂ ಭಾಗವಹಿಸಲಿರುವರು. ಬಿಹಾರದ ಗಂಗಾಶರಣರವರು ಅಧ್ಯಕ್ಷತೆ ವಹಿಸುವರು.

ಬಂಧಿತ ಈಜಿಪ್ಟ್ ಅಧಿಕಾರಿಗಳ ಪ್ರದರ್ಶನ

ಗಾಜಾ ಪ್ರದೇಶದಲ್ಲಿ ಇಸ್ರೇಲಿ ಸೈನಿಕರಿಂದ ಬಂಧಿತರಾದ ಈಜಿಪ್ಟಿನ ಸೈನಿಕರು ಮತ್ತು ಅಧಿಕಾರಿಗಳಲ್ಲಿ ಇಬ್ಬರನ್ನು ಇಸ್ರೇಲಿಗಳು ಹೋಟೆಲೊಂದರಲ್ಲಿ ಜನಸಮೂಹದ ಮುಂದೆ ಕರೆತಂದ. ಪ್ರದರ್ಶಿಸಿದರು ಆ ಸೈನಿಕ ಮೇಜರ್ ಜನರಲ್ ಯೂಸುಫ್ ಅಬ್ದುಲ್ಲಾ ಎಲ್. ಅಗ್ರೂಡಿಯವರು ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಿದಾಗ ಅನೇಕ ಪ್ರಶ್ನೆಗಳಿಗೆ ಉತ್ತರವಿತ್ತರು ಮತ್ತೊಬ್ಬರು ಪತ್ರಿಕಾ ಪ್ರತಿನಿಧಿಗಳಿಗೆ ಇದಕ್ಕೆ ಉತ್ತರ ಕೊಡಬೇಕಾಗಿಲ್ಲವೆಂದು ಹೇಳಿದರು

ಪಿರಿಯಾಪಟ್ಟಣ ಮತ್ತು ಹುಣಸೂರು ತಾಲ್ಲೂಕುಗಳಲ್ಲಿ ಭೂದಾನ ಪ್ರಚಾರ

ಕಳೆದ ವಾರ ಜಿಲ್ಲಾ ಭೂದಾನ ಸಹಾಯಕ ಸಮಿತಿಯ ಸಂಚಾಲಕ ಶ್ರೀ ಎಸ್. ಎ. ಸೋಜನಾರ್ಥ್‌ರವರು ಕೆಲವು ಸ್ನೇಹಿತರೊಡನೆ ಪಿರಿಯಾಪಟ್ಟಣ, ಕಂಪಲಾಪುರ, ಹುಣಸೂರು, ಹನಗೋಡು, ರತ್ನಪುರಿ ಮುಂತಾದ ಕಡೆಗಳಲ್ಲಿ ಭೂದಾನ ಪ್ರಚಾರವನ್ನು ಕೈಗೊಂಡಿದ್ದರು. ಕಂಪಲಾಪುರದ ಶ್ರೀ ಸಿದ್ದೇಗೌಡರು ಎರಡು ಎಕರೆ ಭೂಮಿ ದಾನವಿತ್ತರು. ಹುಣಸೂರು, ಹನಗೋಡು, ರತ್ನಪುರಿಗಳಲ್ಲಿ ನಡೆದ ಕಾರ್ಯಕ್ರಮಗಳಲ್ಲಿ ವಿಧಾನಸಭಾ ಸದಸ್ಯರಾದ ಶ್ರೀ ಡಿ. ದೇವರಾಜ ಅರಸರೂ, ಸ್ಥಳೀಯ ಪ್ರಮುಖರೂ ಭಾಗವಹಿಸಿದ್ದರು. ರತ್ನಪುರಿಯಲ್ಲಿ ನಾಲ್ಕೈದು ಗ್ರಾಮದ ಜನರಿದ್ದ ಭಾರಿ ಸಭೆಯಲ್ಲಿ ಶ್ರೀಗಳಾದ ದೇವರಾಜ ಅರಸ್, ಮಂಜುನಾಥನ್ ಮತ್ತು ಕೃಷ್ಣಮೂರ್ತಿ ಇವರುಗಳು ಭಾಷಣ ಮಾಡಿ ಭೂದಾನ ಚಳುವಳಿ, ಗ್ರಾಮರಾಜ್ಯ, ಸರ್ವೋದಯ ವಿಷಯಗಳನ್ನು ವಿವರಿಸಿದರು. ರತ್ನಪುರಿಯನ್ನು ಕೇಂದ್ರವಾಗಿಟ್ಟುಕೊಂಡು ಹುಣಸೂರು ತಾಲ್ಲೂಕಿನಲ್ಲಿ ನಿಶ್ಚಿತ ರೀತಿಯ ಪ್ರಚಾರ ಕಾರ್ಯಕ್ರಮವನ್ನು ನಡೆಸಬೇಕೆಂದು ನಿರ್ಧರಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ ನಾಗಸ್ವರ ೭-೫೫ ಘನೇಂದ್ರ ಕುಮಾರಿ ಕೇಸರಿ ದೇವಿ [illegible] ಕಾವ್ಯ ವಾಚನ ಮಧ್ಯಾಹ್ನ [illegible] ಘನೇಂದ್ರ ಕುಮಾರಿ ಕೇಸರಿ ದೇವಿ [illegible] ವೆಂಕಟಗಿರಿಯಪ್ಪ [illegible] ಸಂಗೀತ. [illegible]

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾ ಸಭೆ

ಮೈಸೂರು —

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭೆಯ ೧೫ನೇ ಅಧಿವೇಶನವು ಬರುವ ಡಿಸೆಂಬರ್ ೩, ೪ ಮತ್ತು ೫ನೇ ತಾರೀಖುಗಳಲ್ಲಿ ನಗರದಲ್ಲಿ ಸೇರುವುದು. ಭಾವಸಾರ ಕ್ಷತ್ರಿಯರ ಸಾಮಾಜಿಕ, ಔದ್ಯೋಗಿಕ ಮತ್ತು [illegible]ಕ ಸಮಸ್ಯೆಗಳನ್ನು ಚರ್ಚಿಸುವುದೇ ಅಧಿವೇಶನದ ಉದ್ದೇಶ. ಮಹಾರಾಷ್ಟ್ರ, ಮಧ್ಯಪ್ರದೇಶ, ಗುಜರಾತು, ಮದರಾಸು ಮುಂತಾದ ನಾನಾ ಪ್ರದೇಶಗಳಲ್ಲಿರುವ ಪ್ರತಿನಿಧಿಗಳನ್ನು ಆಹ್ವಾನಿಸಲಾಗುವುದು. ಈ ಅಧಿವೇಶನದ ಅಂಗವಾಗಿ ಮಹಿಳಾ ಸಭೆಯೂ, ವಿದ್ಯಾರ್ಥಿ ಮತ್ತು ವಿದ್ವತ್ ಪರಿಷತ್ತೂ ನಡೆಯುವುವು. ಸಮ್ಮೇಳನದ ಅಂಗವಾಗಿ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಜೋಲಿಗೆ ಬಟ್ಟೆ ಮೇಲೆ [illegible] ಕೆಲಸದ ವಸ್ತುಗಳನ್ನು ಪ್ರದರ್ಶನಕ್ಕಾಗಿ ಸ್ವೀಕರಿಸಲಾಗುವುದು. ಉತ್ತಮ ಕಲೆಗಳಿಗೆ [illegible] ನೀಡಲಾಗುವುದು. ಪ್ರತಿನಿಧಿಗಳಾಗಿ ಮತ್ತು ಪ್ರೇಕ್ಷಕರಾಗಿ ಬರುವವರು ಬರುವ ೨೫ನೇ ತಾರೀಕಿನೊಳಗೆ ತಿಳಿಸಬೇಕು. ಈ ಸಂಬಂಧವಾಗಿ ಶ್ರೀ [illegible] ಎನ್. [illegible] ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ.

ಗಾಣದ ಎಣ್ಣೆ ಕೈಗಾರಿಕೆಯ ಪುನರುಜ್ಜೀವನ

ಗಾಣದ ಎಣ್ಣೆ ಕೈಗಾರಿಕೆಯನ್ನು ಪುನರುಜ್ಜೀವನಗೊಳಿಸುವುದಕ್ಕಾಗಿ [illegible] ಗಾಣದ ಎಣ್ಣೆ ಸಹಕಾರ ಸಂಘದವರು ಬರುವ ತಿಂಗಳು ೨ನೇ ತಾರೀಕು [illegible] ಗಾಣದ ಎಣ್ಣೆ ತಯಾರಿಕೆ, ರಕ್ಷಣೆ [illegible] ವಿಷಯದಲ್ಲಿ ಭಾಗವಹಿಸ [illegible] ೭ ರಿಂದ ಸಂಜೆ ೮ ಗಂಟೆಗೆ [illegible] ಸಭೆಯು ನಡೆಯುವುವು. ಎಲ್ಲಾ [illegible] ಇದೇ ೩೦ನೇ ತಾರೀಕಿನೊಳಗೆ ಸಮ್ಮೇಳನದ [illegible] ಮನವಿ ಕೊಡಲಾಗಿದೆ

ಸೇವಾದಳ ಸೇವಾ ಸಂಘದ ಶಾಖಾ ಸಭೆ

ಭಾರತದ ಸಾಮಾಜಿಕ ಸೇವಾ ಸಮ್ಮೇಳನದ ನಗರ ಶಾಖಾ ಸಭೆಯು [illegible] ದಾಸಪ್ರಕಾಶದಲ್ಲಿ ಸೇರಿದ್ದಿತು. [illegible]ರ್ ಅಡಿಯೊರವರು ಅಧ್ಯಕ್ಷತೆ ವಹಿಸಿದ್ದರು. ಶಾಖೆಯ ಗೌರವ ಕಾರ್ಯದರ್ಶಿ ಶ್ರೀಮತಿ ಕಾವೇರಮ್ಮ ಶ್ರೀಕಂಠಸ್ವಾಮಿಯವರು, ಬರುವ ತಿಂಗಳು ಜಯಪುರದಲ್ಲಿ ನಡೆಯುವ ಸಂಸ್ಥೆಯ ವಾರ್ಷಿಕ ಅಧಿವೇಶನದ ವಿವರಗಳನ್ನು ವಿವರಿಸಿದರು. ಸಮ್ಮೇಳನಕ್ಕೆ ಪ್ರತಿನಿಧಿಗಳನ್ನು ಕಳುಹಬೇಕೆಂದು ನಿರ್ಧರಿಸಲಾಯಿತು. ನಗರದಲ್ಲಿರುವ ಸಾಮಾಜಿಕ ಸೇವಾ ಸಂಘಗಳು ಮತ್ತು ಕಾರ್ಯಕರ್ತರುಗಳು ಶಾಖೆಯ ಸದಸ್ಯರಾಗಿ [illegible] ಕೃತಿಗಳನ್ನು ಸಂಯೋಜಿಸಬೇಕೆಂದು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು

ವಿವಿಧ ಅಪರಾಧಗಳಿಗಾಗಿ ದಂಡ

ನಗರದ ದ್ವಿತೀಯ ನ್ಯಾಯಾಧೀಶರು ಮೊನ್ನೆ ದಿನ [illegible] ಮೊಕದ್ದಮೆಯಲ್ಲಿ ಹೊಸ ಬೊಂಬು ಬಜಾರಿನ ವ್ಯಾಪಾರಿ ಶ್ರೀ ಸೈಯದ್ ಅಹಮದ್‌ರವರು ೮ ದಿನದೊಳಗೆ [illegible] ಕಾಯ್ದಿಸಿದ್ದರಿಂದ ಅವರಿಗೆ ೨೫ ರೂ. ದಂಡ ವಿಧಿಸಿದರು. [illegible] ಮತ್ತು ಮೊಹ್ನೆ ಬಾಷಾ ಎಂಬುವರು ಸಟ್ಟಾ ಜೂಜಾಡುತ್ತಿದ್ದರೆಂದು ದೂಡಿದ್ದ ಮೊಕದ್ದಮೆಯಲ್ಲಿ ಅವರುಗಳಿಗೆ ತಲಾ ೧೫ ರೂ. ದಂಡವನ್ನು ಹಾಕಲಾಗಿದೆ.

ವಾಷಿಂಗ್ಟನ್ನಿಗೆ ಬರುವ ತಿಂಗಳು ನೆಹರೂ ಭೇಟಿ

ಅಮೆರಿಕಕ್ಕೆ ನೆಹರೂರವರು ಬರುವ ತಿಂಗಳು ಭೇಟಿ ಕೊಡುವರಷ್ಟೆ. ಅವರು ೧೪ನೇ ತಾರೀಕು ದಿಲ್ಲಿಯಿಂದ ಹೊರಟು ೧೬ಕ್ಕೆ ವಾಷಿಂಗ್ಟನ್ ನಗರವನ್ನು ತಲುಪುವರು. ಅವರು ಲಂಡನ್ ಮೂಲಕ ಪ್ರಯಾಣ ಮಾಡುವರು. ವಾಷಿಂಗ್ಟನ್ನಿನಲ್ಲಿ ಅವರು ೪ ದಿನಗಳವರೆಗೆ ಇರುವರು. ಅವರು ಅಂತರ್ರಾಷ್ಟ್ರೀಯ ಪರಿಸ್ಥಿತಿ ಮತ್ತು ಅಮೆರಿಕಾ-ಭಾರತ ವ್ಯವಹಾರಗಳ ಬಗ್ಗೆ ಅಧ್ಯಕ್ಷ ಐಸೆನ್‌ಹೋವರೊಡನೆ ಚರ್ಚಿಸುವರು. ವಾಪಸು ಬರುವಾಗ ಕೆನಡಾ ರಾಜಧಾನಿ ಆಟ್ಟವಾವಿಗೂ ಹೋಗುವರು

ರಾಷ್ಟ್ರೀಯ ಚೀಣದ ಹಡಗು ಸಮುದ್ರದ ಪಾಲು

[illegible] ಮತ್ತು ಪೆಸ್ಕಡೋರ್ಸ್ ದ್ವೀಪಗಳ [illegible] ರಾಷ್ಟ್ರೀಯ ಚೀಣದ [illegible] ಸಮುದ್ರದಲ್ಲಿ ಮುಳುಗಿರುತ್ತದೆ. ಅ[illegible] ಜನ ಪ್ರಯಾಣಿಕರಿದ್ದರು. [illegible] ಪರಿಶೀಲನೆ ನಡೆಸಿದರೂ ಪತ್ತೆ ಆಗಿಲ್ಲ.

ಮಕ್ಕಳಿಗೆ ಹಾಲಿನ ಹಂಚಿಕೆ

ವಾಣಿವಿಲಾಸ ಮೊಹಲ್ಲಾ ನ್ಯೂ ಮಿಕ್ಸೆಡ್ ಪ್ರಾಥಮಿಕ ಶಾಲೆಯಲ್ಲಿ ಕಳೆದ ಶನಿವಾರ, ಭಾರತ ಸರ್ಕಾರದವರು ಕೊಟ್ಟಿರುವ ಹಾಲಿನ ಪುಡಿಯಿಂದ ಹಾಲನ್ನು ತಯಾರಿಸಿ ಮಕ್ಕಳಿಗೆ ಹಂಚಲಾಯಿತು. ಮುಖ್ಯೋಪಾಧ್ಯಾಯ ಶ್ರೀ ವೆಂಕಟನರಸಿಂಹಾಚಾರ್ಯರು ಹಾಲನ್ನು ಸರ್ಕಾರದವರು ಹಂಚುವ ವಿವರವನ್ನು ಮಕ್ಕಳಿಗೆ ವಿಶದವಾಗಿ ತಿಳಿಸಿದರು. ಶ್ರೀ ತಿಮ್ಮೇಗೌಡರು ಭಾಷಣ ಮಾಡಿದರು. ಚಮಾಲ್ ಮಠದ ಬೀದಿ ಪ್ರೈಮರಿ ಶಾಲೆಯಲ್ಲಿ ಕಳೆದ ಸೋಮವಾರ ಪೌರಸಭಾ ಸದಸ್ಯ ಶ್ರೀ ಹೆಚ್. ಎಂ. ಮುದ್ದಯ್ಯನವರ ಅಧ್ಯಕ್ಷತೆಯಲ್ಲಿ ಇದೇ ರೀತಿ ಹಾಲನ್ನು ತಯಾರಿಸಿ ಬಾಲಕರುಗಳಿಗೆ ವಿನಿಯೋಗಿಸಲಾಯಿತು.

ಪಂಡಿತ ಆರ್. ಕೃಷ್ಣಮೂರ್ತಿಯವರಿಗೆ ಪ್ರಶಸ್ತಿ

ನಗರದಲ್ಲಿರುವ ಅರಮನೆ ಸಂಸ್ಕೃತ ಪಾಠಶಾಲೆಯ ಪಂಡಿತರಾದ ಶ್ರೀ ಆರ್. ಕೃಷ್ಣಮೂರ್ತಿಯವರಿಗೆ ಅಯೋಧ್ಯೆಯ ಸಂಸ್ಕೃತ ಕಾರ್ಯಾಲಯದವರು ಮಹಾ ವಿದ್ವತ್[illegible] ಎಂಬ ಪ್ರಶಸ್ತಿಯನ್ನು ಕೊಟ್ಟಿರುತ್ತಾರೆ. ಪ್ರಶಸ್ತಿಗಳ ವಿನಿಯೋಗಾರ್ಥವಾಗಿ ಕಾರ್ಯಾಲಯದವರು ಕಳೆದ ವಿಜಯದಶಮಿ ದಿನ [illegible] ದರ್ಶನ ಪೀಠಾಧಿಪತಿಗಳ [illegible] ವಿದ್ವತ್ಸಭೆಯನ್ನು ನಡೆಸಿದರು.

ಯುಗೊಸ್ಲಾವಿಯದ ಮುಖಂಡನ ಬಂಧನ

ಯುಗೊಸ್ಲಾವಿಯದ ರಾಷ್ಟ್ರೀಯ ಸಭೆಯ ಮಾಜಿ ಅಧ್ಯಕ್ಷ ಮಿಲೊವನ್ ಜಿಲಾಸ್‌ರವರನ್ನು ಮೊನ್ನೆ ಬಂಧಿಸಲಾಯಿತು. ಅವರಿಗೂ, ಯುಗೊಸ್ಲಾವಿಯದ ಇತರ ಮುಖಂಡರುಗಳಿಗೂ ತೀವ್ರ ಭಿನ್ನಾಭಿಪ್ರಾಯವುಂಟಾಗಿ, ಅವರ ಗೃಹವನ್ನು ಶೋಧಿಸಿ, ಅನಂತರ ದಸ್ತಗಿರಿ ಮಾಡಲಾಯಿತು.

ಗೋವಾ ಬಾಲಕಿಗೆ ೧೪ ವರ್ಷ ಸಜಾ

ಗೋವಾ ಸತ್ಯಾಗ್ರಹದಲ್ಲಿ ಭಾಗವಹಿಸಿ ೮ ತಿಂಗಳ ಹಿಂದೆ ದಸ್ತಗಿರಿಯಾಗಿದ್ದ ಕುಮಾರಿ ಶಾ[illegible]ಬೇಡಿ ಎಂಬಾಕೆಗೆ ಅಲ್ಲಿನ ಮಿಲಿಟರಿ ನ್ಯಾಯಮಂಡಲಿಯವರು ೧೪ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ.

ಮಹಾರಾಜಾ ಹೈಸ್ಕೂಲು ಸಂಘದ ದಿನಾಚರಣೆ

ನಗರದಲ್ಲಿರುವ ಮಹಾರಾಜಾ ಹೈಸ್ಕೂಲು ವಿದ್ಯಾರ್ಥಿಗಳ ಸಂಘದ ದಿನಾಚರಣೆಯು ಮತ್ತು ನಾಳಿದ್ದು ಸಂಜೆ ೫ ಗಂಟೆಗೆ ನಡೆಯುವುದು. ನಾಳೆ ಮಾಜಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅದರ ಆರಂಭೋತ್ಸವವನ್ನು ನೆರವೇರಿಸುವರು. ವಿದ್ಯಾ ಇಲಾಖೆ ಡೆಪ್ಯೂಟಿ ಡೈರೆಕ್ಟರ್ ಶ್ರೀ ಟಿ. ವಾಸುದೇವಯ್ಯನವರು ಮಾರನೇ ದಿನ ಸಮಾರಂಭದ ಅಧ್ಯಕ್ಷತೆ ವಹಿಸುವರು.

ವಿವಾಹ ಮಹೋತ್ಸವ

ಬೆಂಗಳೂರಿನ ನಿವೃತ್ತ ಆರ್.ಎಂ. ಎಸ್ಸಿನ ಸ ಮಾಸ್ತರಾದ ಶ್ರೀ ಇ. ಆರ್. ರಾಮರಾಯರು ಮ್ಮ ಕುಮಾರಿ ಚಿ॥ ಸುಬ್ಬಮ್ಮನನ್ನು ಕಾರ್ ಸುಬ್ಬರಾಯರ ಮಗ್ಗಳೂ, ಕೇಂದ್ರ ಅಬ್ ರಿ ಮತ್ತು ಸುಂಕದ ಇನ್ಸ್‌ಪೆಕ್ಟರೂ ಆದ ಶ್ರೀ ಎಸ್. ರಂಗಸ್ವಾಮಿಯವರಿಗೆ ಕೊಟ್ಟು ಮೊನ್ನೆ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ಶಾಲಾ ಸಾಹಿತ್ಯ ಸಂಘದ ಮುಕ್ತಾಯ ಸಮಾರಂಭ

ನಗರದ ಮರಿಮಲ್ಲಪ್ಪನವರ ಮಾಧ್ಯಮಿಕ ಶಾಲಾ ಸಾಹಿತ್ಯ ಸಂಘದ ಮುಕ್ತಾಯ ಸಮಾರಂಭವು ನಾಳೆ ಸಂಜೆ ೪ ಗಂಟೆಗೆ ನಡೆಯುವುದು. ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಾದ ಕೆ. ಬಸವಯ್ಯನವರು ಅಧ್ಯಕ್ಷತೆ ವಹಿಸುವರು.

Edited, Printed and Published b
A. K. Nagarajan at Sadhvi Pre
D. Subbiah Road, Mysore

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ ಲಿ.
ಮೈಸೂರು

[illegible] ನಂ 570 : : ತಾ॥ 14-11-1956

ಪ್ರಕಟಣೆ

ಈ ಸೊಸೈಟಿಯ ಬಟ್ಟೆ ಶಾಪಿಯಲ್ಲಿರುವ ತರಹಾವಾರಿ ಶೂಟಿಂಗ್, ಷರ್ಟಿಂಗ್, ಚೀಟ್ಸ್, ಇತ್ಯಾದಿ ಸುಮಾರು 4,000-0-0 (ಅಸಲು ಬೆಲೆಯಂತೆ) ಬೆಲೆ ಬಾಳುವ ಬಟ್ಟೆಗಳನ್ನು ಒಟ್ಟಾಗಿ ಕೊಳ್ಳಲು ಇಷ್ಟ ಉಳ್ಳವರು ಅಸಲು ಬೆಲೆಗೆ ಯಾವ ದರದಲ್ಲಿ ಸೋಡಿ (Discount) ಬಟ್ಟೆ ಕೊಳ್ಳಲು ಸಿದ್ಧರಿರುವರೆಂಬ ಅಂಶವನ್ನು ಸೀಲಾದ ಕವರಿನಲ್ಲಿ 30-11-56 ರೊಳಗೆ ಸೊಸೈಟಿಗೆ ತಲಪಿಸಬಹುದೆಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ. ಒಟ್ಟಾಗಿಯೇ ಕೊಡಲ್ಪಡುತ್ತೆ. ಬಿಲ್ಲರೆಯಾಗಿ ಕೊಡುವುದಿಲ್ಲ. ಸೊಸೈಟಿಗೆ ಸರಿಯಾದ ಬೆಲೆ ಬರದಿದ್ದಲ್ಲಿ ಮಾರದೇ ಇರುವ ಅಧಿಕಾರವನ್ನು ಕಾಪಾಡಲಾಗಿದೆ. ಮಾಲುಗಳ ಪಟ್ಟಿಯನ್ನೂ, ಮಾಲುಗಳನ್ನೂ ಸೊಸೈಟಿಯ ಕೆಲಸದ ವೇಳೆಯಲ್ಲಿ ನೋಡಬಹುದು. ಕೆಲಸದ ಕಾಲ-ಬೆಳಿಗ್ಗೆ 8-30 ರಿಂದ 11-30; ಸಾಯಂಕಾಲ 4 ರಿಂದ 7.

ಎ. ರಾಮಸ್ವಾಮಿ, ಕಾರ್ಯದರ್ಶಿ



ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
■
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಹಂಚಿಕೆದಾರರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1, [illegible]
ಶ್ರೀನಿವಾಸಾಚಾರ್ ಬೀದಿ,
ಬೆಂಗಳೂರು -2

ಸಂಪುಟ : ೧೫] SADHVI : THURSDAY 22—11—1956 ಮೈಸೂರು : ಗುರುವಾರ ೨೨—೧೧—೧೯೫೬ [ಸಂಚಿಕೆ : [illegible]

ಈಜಿಪ್ಟಿನಿಂದ ಕ್ರಮಕ್ರಮವಾಗಿ ಬ್ರಿಟಿಷ್ ಪಡೆ ವಾಪಸು

ಈಜಿಪ್ಟಿನಿಂದ ಕ್ರಮಕ್ರಮವಾಗಿ ಬ್ರಿಟಿಷ್ ಸೇನೆ ವಾಪಸು

ಬ್ರಿಟನ್, ಫ್ರಾನ್ಸ್, ಇಸ್ರೇಲುಗಳ ಕ್ರಮಲೋಪದ ಬಗ್ಗೆ ಹ್ಯಾಮರ್‌ಶೀಲ್ಡರ ಆಕ್ಷೇಪಣೆ

ವಿಶ್ವಸಂಸ್ಥೆಯ ಸಾಧಾರಣ ಸಭೆಯ ನಿರ್ಣಯದಂತೆ ಈಜಿಪ್ಟಿನಿಂದ ತಮ್ಮ ಸೈನ್ಯಗಳನ್ನು ಏತಕ್ಕಾಗಿ ವಾಪಸು ಕರೆಸಿಲ್ಲವೆಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಶೀಲ್ಡರು ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲುಗಳನ್ನು ಪ್ರಶ್ನಿಸಿದ್ದಾರೆ. ಪಶ್ಚಿಮ ಏಷ್ಯಾ ಬಿಕ್ಕಟ್ಟಿನ ಸಂದರ್ಭದಲ್ಲಿ ಆ ರಾಷ್ಟ್ರಗಳು ತಮ್ಮ ನಿಲುವೇನೆಂಬುದನ್ನು ತಿಳಿಸಬೇಕೆಂದು ಅವರು ಸೂಚಿಸಿ ಆ ಪ್ರಶ್ನೆಗಳನ್ನು ಹಾಕಿದ್ದಾರೆ. ಎಷ್ಟು ಹೊತ್ತಿಗೆ ವಾಪಸು [illegible] ಹಾಗೆ ಮಾಡಲು ಅಂಗೀಕರಿಸಿರುವ ಕ್ರಮವೇನು; ಈ ಬಗ್ಗೆ ಪ್ರಗತಿ ಆಗಿರುವುದು ಅಥವಾ ಆಗದಿರುವುದರ ಬಗ್ಗೆ ಕಾರಣ? ಸಂಸ್ಥೆಯ ನಿರ್ಣಯಕ್ಕೆ ಮನ್ನಣೆ—ಈ ವಿಷಯಗಳ ಮೇಲೆ ಅವರು ಉತ್ತರವನ್ನು ನಿರೀಕ್ಷಿಸಿದ್ದಾರೆ.

ಬ್ರಿಟನ್ನು ಪೋರ್ಟ್ ಸೈಯದ್ದಿನಿಂದ ತನ್ನ ಸೈನ್ಯವನ್ನು ವಾಪಸು ಕರೆಸಿಕೊಳ್ಳುವ ಭರವಸೆಯನ್ನು ಪಾಲಿಸುವುದೆಂದೂ, ಆದರೆ ವಿಶ್ವಸಂಸ್ಥೆಯು ಸಾಕಷ್ಟು ಪೋಲೀಸು ಪಡೆಯನ್ನು ಈಜಿಪ್ಟಿನಲ್ಲಿ ಇರಿಸಬೇಕೆಂದೂ ಬ್ರಿಟನ್ನು ಅಭಿಪ್ರಾಯಪಟ್ಟಿದೆ. ಕ್ರಮಕ್ರಮವಾಗಿ ತನ್ನ ಸೈನ್ಯವನ್ನು ಬ್ರಿಟನ್ನು ವಾಪಸು ಪಡೆಯಲಿದೆಯೆಂದೂ, ಆದರೆ ಪರಿಸ್ಥಿತಿಯು ತಿಳಿಯಾಗಿಲ್ಲವೆಂದೂ ಹೇಳಲಾಗಿದೆ.

ಶಿಶುವೊಂದರ ಬಗ್ಗೆ ಇಬ್ಬರು ಹೆಂಗಸರಿಗೆ ವ್ಯಾಜ್ಯ

[illegible] ಹೆರಿಗೆ ಆಸ್ಪತ್ರೆಯಲ್ಲಿ ಜನಿಸಿದ ಒಂದು ಮಗುವು ತಮ್ಮದೆಂಬ ಬಗ್ಗೆ ಇಬ್ಬರು ಮಹಿಳೆಯರಿಗೆ ಜಿಜ್ಞಾಸೆ ಹುಟ್ಟಿ ಅಲ್ಲಿನ ಡಾಕ್ಟರರು ಅದನ್ನು ಬಗೆಹರಿಸಬೇಕಾಗಿದೆ. ಇಬ್ಬರು ಹೆಂಗಸರೂ ಕಳೆದ ೧೬ರ ರಾತ್ರಿ ಹೆಣ್ಣು ಮಕ್ಕಳನ್ನು ಪ್ರಸವಿಸಿದರು. ಆ ಪೈಕಿ ಒಂದು ಸತ್ತು ಹೋಯಿತು. ಈ ಸುದ್ದಿಯನ್ನು ಒಬ್ಬ ದಾದಿಯು ಇಬ್ಬರ ಪೈಕಿ ಒಬ್ಬ ಮಹಿಳೆಗೆ ತಿಳಿಸಿದಳು. ಸ್ವಲ್ಪ ಹೊತ್ತಿನಲ್ಲೇ ಮತ್ತೊಬ್ಬ ದಾದಿಯು ಬಂದು ಮಗುವು ಜೀವಂತವಾಗಿರುವುದೆಂದು ಆಕೆಗೆ ತಿಳಿಸಲಾಗಿ ಇದರಿಂದ ಮಗುವಿನ ತಾಯಿ ಯಾರು ಎಂಬ ಜಿಜ್ಞಾಸೆ ಮೂಡಿತು. ಇಬ್ಬರು ಬಾಣಂತಿಯರೂ ತಮ್ಮ ಹಕ್ಕು ಸಾಧನೆ ಮಾಡುತ್ತಿರುವರು.

ಈಜಿಪ್ಟ್ ದಿನಾಚರಣೆ

ನಗರದ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ [illegible] ಸಂಜೆ ೬॥ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಈಜಿಪ್ಟ್ ದಿನಾಚರಣೆಯನ್ನು ಏರ್ಪಡಿಸಲಾಗಿದೆ. ಕರ್ನಾಟಕ ಪ್ರಾಂತ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಎಸ್. ಎಲ್. [illegible] ಮತ್ತು ಜಂಟೂರು ಪತ್ರಿಕೆ ಸಂಪಾದಕ "ಜ" [illegible] ಭಾಷಣ ಮಾಡುವರು.

ಕೇರಳದ ಗವರ್ನರರು
ಬಿ. ರಾಮಕೃಷ್ಣರಾಯರು

ಈ ದಿನ [illegible]

ಬುಡಾಪೆಸ್ಟಿನಲ್ಲಿ ೨ ದಿನಗಳ ಸಾರ್ವತ್ರಿಕ ಮುಷ್ಕರ

ಕೆಲಸಕ್ಕೆ ಹಾಜರಾಗುವ [illegible] ಸೂಚನೆಯನ್ನು ಬುಡಾಪೆಸ್ಟಿನ ಕಾರ್ಮಿಕರ ನಾಯಕರು ವಾಪಸು ತೆಗೆದುಕೊಂಡು ಇಂದು ೪೮ ಗಂಟೆಗಳ ಸಾರ್ವತ್ರಿಕ ಮುಷ್ಕರಕ್ಕೆ ಸೂಚನೆಯಿತ್ತಿದ್ದಾರೆ. ರಾಷ್ಟ್ರೀಯ ಕಾರ್ಮಿಕರ ಸಮ್ಮೇಳನವನ್ನು ನಡೆಸಲು ಪೋಲೀಸರು ಮತ್ತು ಸೈನಿಕರು ಅವಕಾಶವೀಯದಿದ್ದುದೇ ಇದಕ್ಕೆ ಕಾರಣ. ಹಂಗೆರಿಯ ಯುರೇನಿಯಂ ಗಣಿಯು ೬,೦೦೦ ಕಾರ್ಮಿಕರ ವಶದಲ್ಲಿದೆ. ಕಳೆದ ವಾರವೂ ಹಂಗೆರಿ ಜನರಿಗೂ, ರಷ್ಯನ್ ಪಡೆಗಳಿಗೂ ಕಾದಾಟವಾಯಿತು. ರಷ್ಯಾ ಸೈನ್ಯಗಳ ಸ್ಥಾನದಲ್ಲಿ ಮಂಗೋಲಿಯದ ಪಡೆಗಳನ್ನು ರಷ್ಯನರು ಹೊಸದಾಗಿ ಕರೆತಂದಿರುವುದಾಗಿ ಹೇಳಲಾಗಿದೆ.

ಗಫಾರ್ ಖಾನರಿಗೆ ತೀವ್ರ ಖಾಯಿಲೆ

ವಿಚಾರಣಾ ಬಂಧಿಯಾಗಿಡಲ್ಪಟ್ಟಿರುವ, ಗಡಿನಾಡಿನ ಕೆಂಪು ಅಂಗಿಯವರ ನಾಯಕ ಖಾನ್ ಅಬ್ದುಲ್ ಗಫಾರ್ ಖಾನರು ವ್ಯಾಧಿಗ್ರಸ್ತರಾಗಿರುವುದಾಗಿಯೂ, ಅವರ ಸ್ಥಿತಿಯು ತೀವ್ರಗತಿಯಲ್ಲಿ ಕೆಡುತ್ತಿರುವುದೆಂದೂ ಅವರ ಸಹೋದ್ಯೋಗಿ [illegible] ತಿಳಿಸಿದ್ದಾರೆ. ಅವರನ್ನು ಒಂಟಿಯಾಗಿ ಬಂಧಿಸಿಟ್ಟಿರುವುದು, [illegible]ವಿಲ್ಲದ ಜಾಗ, ಇವೇ ಮುಂತಾದ ಕಾರಣಗಳಿಗಾಗಿ ಅವರ ದೇಹ ಸ್ಥಿತಿಯು ಕೆಟ್ಟಿರುವುದಾಗಿ ಹೇಳಲಾಗಿದೆ.

ಗೋ ಸಂವರ್ಧನ ಸಪ್ತಾಹ

ನಗರದ ಪಶು ವೈದ್ಯ ಶಾಲೆಯಲ್ಲಿ ಗೋ ಸಂವರ್ಧನ ಸಪ್ತಾಹದ ಅಂಗವಾಗಿ ನಾಳೆ ಸಂಜೆ ೫ ಗಂಟೆಗೆ ಗೋ ಪ್ರದರ್ಶನ ಮತ್ತು ಬಹುಮಾನ ವಿನಿಯೋಗಗಳು ಇವೆ. ಶ್ರೀಮತಿ ಲೀಲಾವತಿ ರಂಜನಪ್ಪನವರು ಬಹುಮಾನಗಳನ್ನು ಹಂಚುವರು. ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು. ಶ್ರೀ ವೈ. ಯಾಮುನಾಚಾರ್ಯರು ಭಾಷಣ ಮಾಡುವರು.

ಸಂಸ್ಥಾನದಲ್ಲಿ ಸರ್ವೋದಯದ ಯೋಜನೆ

ಸಚಿವ ಭೀಮಪ್ಪನಾಯಕರ ಸೂಚನೆ

ಬೆಂಗಳೂರು ೨೧

ಸರ್ವೋದಯ ಇಲಾಖಾ ಮಂತ್ರಿ ಶ್ರೀ ಎ. ಭೀಮಪ್ಪನಾಯಕರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ಬೆಳಗಾಂ, ಕಾರವಾರ, ಧಾರವಾಡ ಮತ್ತು ಬಿಜಾಪುರ ಜಿಲ್ಲೆಗಳ ಕೇಂದ್ರಗಳಲ್ಲಿ ಸರ್ವೋದಯ ಯೋಜನೆಯು ಜಾರಿಯಲ್ಲಿರುವುದೆಂದೂ, ಅದನ್ನು ಇಡೀ ಸಂಸ್ಥಾನದ ಇತರ ಜಿಲ್ಲೆಗಳಿಗೂ ಅನ್ವಯಿಸುವ ವಿಷಯವನ್ನು ತಾವು ಪರಿಶೀಲಿಸುತ್ತಿರುವುದಾಗಿಯೂ ತಿಳಿಸಿ, ಪ್ರತಿ ಜಿಲ್ಲೆಯ ೨೦ ಅಥವಾ ೪೦ ಗ್ರಾಮಗಳನ್ನು ಈ ಕೆಲಸಕ್ಕೆ ಆರಿಸಿ ಅಲ್ಲಿ ಗಾಂಧಿ ತತ್ವ ಪ್ರಚಾರ ಮತ್ತು ಸಹಕಾರದ ಆಧಾರದ ಮೇಲೆ ಇತರ ಅಭಿವೃದ್ಧಿ [illegible] ನಡೆಸುವುದೇ ಯೋಜನೆಯ [illegible] ಹಳೆ ಮೈಸೂರಿನ ಜಿಲ್ಲೆಗಳಲ್ಲಿ [illegible] ಕೇಂದ್ರಗಳನ್ನು [illegible] ಮುಂದುವರಿಸಲಾಗುವುದು. ಈ ಯೋಜನೆ ಮತ್ತು ರಾಷ್ಟ್ರೀಯ ವಿಸ್ತರಣಾ [illegible]ಗಳನ್ನು ಸಮನ್ವಯಗೊಳಿಸುವ ವಿಚಾರದ ಬಗ್ಗೆ ಪರಿಶೀಲಿಸಲೂ ಯೋಚಿಸಲಾಗಿದೆ.

ಬೆಂಗಳೂರು ರೇಡಿಯೋವಿನಲ್ಲಿ ಒಲಂಪಿಕ್ ಕ್ರೀಡೆಗಳ ಪ್ರಸಾರ

ಮೆಲ್ಬೋರ್ನ್ ನಗರದಲ್ಲಿ ನಡೆಯುವ ಒಲಂಪಿಕ್ ಕ್ರೀಡೆಗಳ ವಿವರವನ್ನು ಬೆಂಗಳೂರಿನ ರೇಡಿಯೋವಿನವರು ಇಂದಿನಿಂದ ಡಿಸೆಂಬರ್ ೯ ರವರೆಗೆ ದಿನವೂ ಸಂಜೆ ಪ್ರಸಾರ ಮಾಡುವರು. ಈ ದಿನ, ನಾಳೆ ಮತ್ತು ೨೫; ಡಿಸೆಂಬರ್ ೬ ಮತ್ತು ೯ ಸಂಜೆ ೭ಗೆ, ನಾಳಿದ್ದು ಮತ್ತು ೨೮ ರಂದು ೫ ಮತ್ತು ೮ ರಂದು ರಾತ್ರಿ ೮ಕ್ಕೆ ಪ್ರಸಾರ ಮಾಡಲಾಗುವುದು. ನವೆಂಬರ್ ೨೭, ೩೦; ಡಿಸೆಂಬರ್ ೧ ಮತ್ತು ೨ರ ರಾತ್ರಿ ೯-೧೫ಕ್ಕೂ, ನವೆಂಬರ್ ೨೬ ಮತ್ತು ಡಿಸೆಂಬರ್ ೪ಕ್ಕೆ ರಾತ್ರಿ ೯॥ ಗಂಟೆಗೂ, ನವೆಂಬರ್ ೨೨ ಮತ್ತು ಡಿಸೆಂಬರ್ ೭ ರಂದು ರಾತ್ರಿ ೧೦ ಗಂಟೆಗೂ ಪ್ರಸಾರವಿದೆ.

೧೬೯ ದಿನ ಪ್ರಜ್ಞೆ ತಪ್ಪಿ ಅನಂತರ ಪ್ರಸವ

ರಸ್ತೆಯ ಅಪಘಾತಕ್ಕೆ ಒಳಗಾದ ಎಲ್ಸೀ [illegible] ಎಂಬ ಗರ್ಭಿಣಿಯೊಬ್ಬಳು ೧೬೯ ದಿನಗಳವರೆಗೆ ಪ್ರಜ್ಞಾವಿಹೀನಳಾದನಂತರ ಈಗ ಆಸ್ಪತ್ರೆಯಲ್ಲಿ ಗಂಡು ಮಗುವೊಂದನ್ನು ಪ್ರಸವಿಸಿರುವುದಾಗಿ ಇಂಗ್ಲೆಂಡಿನ ನ್ಯೂಕ್ಯಾಸಲ್ ನಗರದ ವರದಿಯೊಂದು ತಿಳಿಸಿದೆ. ತಾಯಿಯು ಬದುಕುವುದು ಅಸಂಭವವೆಂದು ವೈದ್ಯರು ಅಭಿಪ್ರಾಯಪಟ್ಟಿರುತ್ತಾರೆ. ಪಕ್ಕದಲ್ಲಿ ಹೋದ ಲಾರಿಯೊಂದು ಸಾಗಿಸುತ್ತಿದ್ದ ದಿಮ್ಮಿಯು ತಲೆಗೆ ಬಲವಾಗಿ ತಗಲಿ ಆಕೆಗೆ ಸ್ಮೃತಿ ತಪ್ಪಿತ್ತು.

ಲಂಡನ್ ಯುವತಿಯೊಡನೆ ಕೂಚ್ ಬಿಹಾರ್ ರಾಜರ ವಿವಾಹ

ಕೂಚ್ ಬಿಹಾರಿನ ಮಹಾರಾಜರನ್ನು [illegible] ತಿಂಗಳಲ್ಲಿ ತಾನು ವಿವಾಹವಾಗುವುದಾಗಿ ಲಂಡನ್ನಿನ ೨೬ ವರ್ಷದ [illegible] ಎಂಬ ಯುವತಿಯು ತಿಳಿಸಿದ್ದಾಳೆ. ಉಭಯರಿಗೂ ಪರಸ್ಪರ ಪ್ರೇಮವು ಇರುವುದೆಂದು ಆಕೆ ಹೇಳಿದ್ದಾಳೆ. ಆಕೆಯು ಲಂಡನ್ ಪೋಲೀಸು ಕಾನ್ಸ್ಟೇಬಲೊಬ್ಬನ ಮಗಳು. ಅವಳು ಒಂದು ಬಾರಿ ವಿವಾಹವಾಗಿ ನ್ಯಾಯಸ್ಥಾನದಲ್ಲಿ ವಿಚ್ಛೇದನ ಮಾಡಿಕೊಂಡಿರುವಳು.

ಸಹಾಯ ಪಡೆದ ಶಾಲೆಗಳ ಉಪಾಧ್ಯಾಯರಿಗೆ ಪರಿಹಾರ

ವಿದ್ಯಾ ಮಂತ್ರಿ [illegible] ಪ್ರಕಟಣೆ

ಬೆಂಗಳೂರು ೨೧

ವಿದ್ಯಾ ಮಂತ್ರಿ ಶ್ರೀ [illegible]ನವರು ಮೊನ್ನೆ ಪ್ರೈಮರಿ ಉಪಾಧ್ಯಾಯರ ನಿಯೋಗವೊಂದಕ್ಕೆ ಆಶ್ವಾಸನವಿತ್ತು, ಸಹಾಯ ಪಡೆದ ಶಾಲಾ ಉಪಾಧ್ಯಾಯರುಗಳಿಗೆ ವೇತನ [illegible] ತಾತ್ಕಾಲಿಕ ಪರಿಹಾರವನ್ನು ಸಂಸ್ಥಾನ ಸರ್ಕಾರದವರು ಕೊಡಲು ಸಿದ್ಧವಾಗಿರುವರೆಂದೂ, ಆದರೆ ಶಾಲಾ ಆಡಳಿತ ವರ್ಗದವರು ಉಳಿದ ಭಾಗವನ್ನು ವಹಿಸಿಕೊಳ್ಳಬೇಕೆಂದೂ ಸೂಚಿಸಿದ್ದಾರೆ. ನಿಯೋಗದವರು ಮಂತ್ರಿಗಳಿಗೆ ಅರಿಕೆ ಮಾಡಿ, ನಾನ್ ಗೆಜೆಟೆಡ್ ನೌಕರರಿಗೆ ಕೊಡುತ್ತಿರುವ ತಾತ್ಕಾಲಿಕ ಪರಿಹಾರವನ್ನು ತಮಗೂ ಒದಗಿಸುವಂತೆ ಕೋರಿದ್ದರು.

ನೂತನ ಮೈಸೂರಿನ ಸಮಸ್ಯೆಗಳು

ಕೇಂದ್ರದ ಅಧಿಕಾರಿಗಳೊಡನೆ ನಿಜಲಿಂಗಪ್ಪನವರ ಸಂಭಾಷಣೆ

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಮೊನ್ನೆ ದೆಹಲಿಯಲ್ಲಿ ಕೇಂದ್ರ ಸರ್ಕಾರದ ಮಂತ್ರಿಗಳು ಮತ್ತು ಯೋಜನಾ ಮಂಡಲಿಯ ಸದಸ್ಯರೊಡನೆ ನೂತನ ಮೈಸೂರಿನ ಹಣಕಾಸು ಮತ್ತು ಇತರ ಸಮಸ್ಯೆಗಳನ್ನು ಚರ್ಚಿಸಿದರು. ಅವರು ಕೇಂದ್ರ ಹಣಕಾಸಿನ ಮಂತ್ರಿ ಕೃಷ್ಣಮಾಚಾರಿಯವರನ್ನೂ [illegible] ವಿಶೇಷವಾಗಿ ಭೇಟಿ ಮಾಡಿದ್ದರು. ಸಂಸ್ಥಾನ ಸರ್ಕಾರದ [illegible]ಗಳನ್ನು [illegible] ವಹಿಸಿಕೊಳ್ಳಲಾಗುವುದೆಂದು ಗೊತ್ತಾಗಿದೆ.

ಈಡನ್ನರಿಗೆ ವಿಪರೀತ ಆಯಾಸ

ಬ್ರಿಟಿಷ್ ಪ್ರಧಾನಿ ಆಂಟೊನಿ ಈಡನ್ನರು ಬಿಡುವಿಲ್ಲದೆ ಕೆಲಸ ಮಾಡಿ ಈಗ ವಿಪರೀತ ಆಯಾಸಗೊಂಡಿದ್ದಾರೆ. ಅವರಿಗೆ ಪೂರ್ಣ ವಿಶ್ರಾಂತಿಯು ಬೇಕೆಂದು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. ಅವರು ತಮ್ಮ ಎಲ್ಲಾ ಸಾರ್ವಜನಿಕ ಕಾರ್ಯಕ್ರಮಗಳನ್ನೂ ರದ್ದುಗೊಳಿಸಿದ್ದಾರೆ. ಅವರ ಮಂತ್ರಿಮಂಡಲದಲ್ಲಿ ಎರಡು ಗುಂಪುಗಳಿಗೆ ಸೂಯೆಜ್‌ನಿಂದ ಬ್ರಿಟಿಷ್ ಸೈನ್ಯದ ವಾಪಸಾತಿ ಬಗ್ಗೆ ಭಿನ್ನಾಭಿಪ್ರಾಯವುಂಟಾಗಿ ಮಿತವಾದಿಗಳ ಮಾತಿಗೆ ಹೆಚ್ಚು ಪ್ರಾಶಸ್ತ್ಯ ದೊರೆಯಿತೆಂದೂ, ಸಹಜವಾಗಿ ಈಡನ್ನ[illegible] ಮೌನ ಧಾರಣೆ ಮಾಡಿರುವರೆಂದೂ ಹೇ[illegible]. ಅವರು ದೀರ್ಘಕಾಲ ವಿಶ್ರಾಂತಿ ಪ[illegible] ಆರ್. ಎ. ಬಟ್ಲರರು ಅವರ ಸ್ಥಾನಕ್ಕೆ [illegible]ವರು.

ಪೀಟರ್ ಪಿಟ್ಮನ್ನರಿಗೆ ಸತ್ಕಾರ

ಮೈಸೂರು ೨೭,

ನೂರಿಪ್ಪತ್ತು ವರ್ಷಗಳ ಹಿಂದೆ ಇಂಗ್ಲೆಂಡಿನ [illegible] ಶೀಘ್ರಲಿಪಿಯನ್ನು ಕಂಡುಹಿಡಿದ ಐಸಾಕ್ ಪಿಟ್ಮನ್ನರ ಮರಿಮೊಮ್ಮಗರಾದ ಮಿ|| ಪೀಟರ್ ಜೆ ಪಿಟ್ಮನ್ನರ ಗೌರವಾರ್ಥವಾಗಿ ನೆನ್ನೆ ಟೌನುಹಾಲಿನ [illegible] ದಲ್ಲಿ ಒಂದು ಸತ್ಕಾರ ಸಮಾರಂಭ [illegible] ನಡೆಯಿತು. ಪ್ರಾರ್ಥನೆ ಮತ್ತು [illegible] ಸಂಗೀತವಾದನಂತರ ಟ್ರೈನಿಂಗ್ ಕಾಲೇಜ್ ಆಫ್ ಕಾಮರ್ಸಿನ ಪ್ರಿನ್ಸಿಪಾಲರಾದ ಶ್ರೀ ಸೀತಾರಾಮಯ್ಯನವರು ಮಿ|| ಪಿಟ್ಮನ್ನರ ಪರಿಚಯ ಮಾಡಿಕೊಟ್ಟು ಅವರಿಗೆ ಸ್ವಾಗತ ಬಯಸಿದರು. ಶೀಘ್ರಲಿಪಿಯ ವಿಚಾರವಾಗಿ ಕಾವ್ಯ ರಚಿಸಿದ್ದ ಇಂಗ್ಲೀಷಿನ ಪದ್ಯಗಳನ್ನು ಅವರು ಓದಿದರು.

ಮಿ|| ಪೀಟರ್ ಪಿಟ್ಮನ್ನರು ಭಾಷಣ ಮಾಡಿ, ತಮ್ಮ ಮುತ್ತಾತಂದಿರಾದ ಐಸಾಕ್ ಪಿಟ್ಮನ್ನರು ಕಂಡುಹಿಡಿದ ಶೀಘ್ರಲಿಪಿಯು ಇಂದಿನ ವ್ಯವಹಾರ ಪ್ರಪಂಚದಲ್ಲಿ ಎಷ್ಟುಮಟ್ಟಿಗೆ ಸಹಾಯಕವಾಗಿರುವುದೆಂಬುದನ್ನು ವಿವರಿಸಿದರು. ಎಲ್ಲಾ ಉದ್ಯಮಗಳ ಯಶಸ್ಸಿಗೂ ಸರಿಯಾದ ಲೆಕ್ಕಾಚಾರಗಳನ್ನಿಡುವ ಪದ್ಧತಿಯು ಅತ್ಯವಶ್ಯಕವೆಂದು ಅವರು ಹೇಳಿ, ಭಾರತದಲ್ಲಿ ಇತ್ತೀಚೆಗೆ ಆಗುತ್ತಿರುವ ವಾಣಿಜ್ಯ ಮತ್ತು ಇತರ [illegible] ವಿದ್ಯೆಯ ಪ್ರಗತಿಯನ್ನು ಪ್ರಶಂಸಿಸಿದರು. ವಾಣಿಜ್ಯ ವಿದ್ಯೆಯಿಂದ ರಾಷ್ಟ್ರದ ಅಭಿವೃದ್ಧಿಯು ಬಹುಮಟ್ಟಿಗೆ ಸಾಧಿಸಲ್ಪಡುವುದೆಂದು ಅವರು ಹೇಳಿ, ಅದರಲ್ಲಿ ತೊಡಗಿರುವವರೆಲ್ಲರಿಗೂ ಯಶಸ್ಸನ್ನು ಕೋರಿದರು.

ಶ್ರೀ ಸಿ ವಿ ರಾಮಸ್ವಾಮಯ್ಯನವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯಾಗಿ ಸಭೆ ಮುಗಿಯಿತು

ಭಾವಸಾರ ವಿದ್ಯಾರ್ಥಿ ಪರಿಷತ್ತಿನ ಸ್ವಾಗತ ಸಮಿತಿ

ಬರುವ ಜನವರಿ ತಿಂಗಳು ನಗರದಲ್ಲಿ ಸೇರಲಿರುವ ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ಮಹಾಪರಿಷತ್ತಿನ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ. ಶ್ರೀ ಎ ಎ [illegible] ಅವರ ಅಧ್ಯಕ್ಷರಾಗಿಯೂ, ಶ್ರೀ [illegible] ಶಂಕರರಾಯರು ಉಪಾಧ್ಯಕ್ಷರಾಗಿಯೂ, [illegible] ಶ್ರೀ [illegible] ಕಾರ್ಯದರ್ಶಿಯಾಗಿಯೂ [illegible] ನಾರಾಯಣರಾಯರು [illegible] ಆರಿಸಲ್ಪಟ್ಟಿದ್ದಾರೆ

ವಿವಾಹ ಮಹೋತ್ಸವ

ಬೆಂಗಳೂರಿನ ಶ್ರೀ ಬಿ ವಿ ವೆಂಕಟರಾಮಯ್ಯ ನವರು ತಮ್ಮ ಕುಮಾರಿ ಸೌ|| ಸರಸ್ವತಮ್ಮನವರನ್ನು ಕನ್ನಂಬಾಡಿಯ ಶ್ರೀ ಕೆ ಎಸ್ ಗೋಪಾಲಕೃಷ್ಣಯ್ಯಂಗಾರರ ಹಿರಿಯ ಮಗನಾದ ಶ್ರೀ [illegible] ಪಾರ್ಥಸಾರಥಿಯವರಿಗೆ ಕೊಟ್ಟು ಈ ದಿನ ತ್ಯಾಗರಾಜಾ ರಸ್ತೆಯಲ್ಲಿರುವ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ವಿವಾಹವನ್ನು ನೆರವೇರಿಸಿದರು

ಕ್ರಿಕೆಟ್ ಪಂದ್ಯ

ನಗರದಲ್ಲಿರುವ ಕೆ ಎಂ ಪಿ ಟಿ ಸಿ ಟೀಮಿನವರಿಗೂ, ಜಯನಗರದ ಟೀಮಿನವರಿಗೂ ನೆನ್ನೆ ನಡೆದ ಕ್ರಿಕೆಟ್ ಪಂದ್ಯದಲ್ಲಿ ಜಯನಗರದವರು [illegible] ರನ್ನುಗಳಿಂದ ಗೆದ್ದರು. ಮೊದಲನೇ ಆಟದಲ್ಲಿ ಕೆ ಎಂ ಪಿ ಟಿ ಸಿ ಯವರಿಗೆ [illegible] ಮತ್ತು ಎರಡನೆಯದರಲ್ಲಿ [illegible] ರನ್ನುಗಳೂ ಜಯನಗರದವರಿಗೆ ಕ್ರಮವಾಗಿ [illegible] ಮತ್ತು [illegible] ರನ್ನುಗಳೂ ದೊರೆತುವು. ಸಿ. ಕೆ [illegible] ಅವರು ಬೌಲಿಂಗಿನಲ್ಲಿ ಹ್ಯಾಟ್ರಿಕ್ ಗಳಿಸಿದರು

ದಸ್ತೆ ಪ್ರಾರಂಭೋತ್ಸವ ಮತ್ತು ಕಟ್ಟಿಯ ಗುದ್ದಲಿ ಪೂಜೆ

ಗಾಂಧಿ ಸ್ಮಾರಕ ನಿಧಿಯ ಸಂಚಾಲಕರು [illegible] ಸ್ಥಾಪಿಸಿರುವ [illegible] ಸೇವಾ ಕೇಂದ್ರದ ಆಶ್ರಯದಲ್ಲಿ ನಾಳೆ ಬೆಳಿಗ್ಗೆ [illegible] ಗ್ರಾಮದಲ್ಲಿ ಶ್ರೀ [illegible] ದಸ್ತೆಯ ಪ್ರಾರಂಭೋತ್ಸವವನ್ನೂ ಮತ್ತು [illegible] ಗೌಡರ [illegible] ಕಟ್ಟೆಗೆ [illegible] ಗುದ್ದಲಿ ಪೂಜೆಯನ್ನೂ [illegible] ರಿಗಳಾದ ಶ್ರೀ ಡಿ. [illegible] ಚನ್ನರುದ್ರಪ್ಪನವರು ನೆರವೇರಿಸುವರು

ಸರ್ವಸೇವಾ ಸಂಘದ ಸಾಮಾನ್ಯ ಅಧಿವೇಶನ

ಅಖಿಲ ಭಾರತ ಸರ್ವ ಸೇವಾ ಸಂಘದ ಸಾಧಾರಣ ಮಂಡಲಿಯ ಅಧಿವೇಶನವು ಮೊನ್ನೆ ಪಳನಿಯಲ್ಲಿ ಶ್ರೀ ಧೀರೇಂದ್ರ ಮುಜುಮುದಾರರು ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಮೂರು ದಿನಗಳವರೆಗೆ ಅದು ಸೇರುವುದು. ಆಚಾರ್ಯ ವಿನೋಬಾ ಭಾವೆಯವರು ಅದರಲ್ಲಿ ಭಾಗವಹಿಸಿದ್ದರು. ಸರ್ವ ಸೇವಾ ಸಂಘದ ಚಟುವಟಿಕೆಯಲ್ಲಿ ಆಸಕ್ತಿ ಹೊಂದಿರುವ ಹಲವು ವಿದೇಶೀಯರೂ ಬಂದಿದ್ದರು

ಮುಖ್ಯ ಚುನಾವಣೆ ಮತ್ತು ಖಾದಿ ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಅಧಿವೇಶನವು ಪರಿಶೀಲನೆ ನಡೆಸಿತು

ಅಧಿಕಾರವನ್ನು ಕಿತ್ತುಕೊಳ್ಳುವಂತಹ ರಾಜಕೀಯದಲ್ಲಿ ಪ್ರತ್ಯಕ್ಷ ಅಥವಾ ಪರೋಕ್ಷವಾಗಿ ಸಂಘದ ಸದಸ್ಯರು ಭಾಗವಹಿಸಬಾರದೆಂದು ಗೊತ್ತುಪಡಿಸಲಾಯಿತು. ಅಡೆತಡೆ ಮತ್ತು ವಿರೋಧ ಸಂದರ್ಭಗಳಲ್ಲಿ ಸಂಘದ ಸದಸ್ಯರು ಒಂದೇ ರೀತಿಯಲ್ಲಿ ವರ್ತಿಸಬೇಕೆಂದೂ ನಿರ್ಧರಿಸಲಾಯಿತು. ರಾಷ್ಟ್ರದಲ್ಲಿ ಅಹಿಂಸಾಯುತ ಸಮಾಜವನ್ನು ಕಟ್ಟಬೇಕೆಂಬ ಗುರಿಯನ್ನು ಸಂಘವು ಹೊಂದಿರುವುದರಿಂದ ಸಮಾಜವನ್ನು ಒತ್ತಾಯವಿಲ್ಲದೆ ನಿರ್ಮಾಣ ಮಾಡಬೇಕೆಂಬುದು ಸಂಘದ ಅಭಿಪ್ರಾಯವಾಗಿದೆಯೆಂದು ಸಂಘದ ಕಾರ್ಯದರ್ಶಿಗಳು ತಿಳಿಸಿದರು

ಹಿಂದೂ ಧರ್ಮಕ್ಕೆ ವಾಪಸು

ವೆಲ್ಲೂರು ಬಳಿ ಪಳ್ಳಿಕೊಂಡದಲ್ಲಿ ಆರ್ಯ ಸಮಾಜದ [illegible] ಸಂಸ್ಕಾರದಿಂದ [illegible] ಹಿಂದೂ ಧರ್ಮವನ್ನು ಸ್ವೀಕರಿಸಿದುದಾಗಿ ವರದಿಯಾಗಿದೆ. ತಮಿಳುನಾಡು ಹಿಂದೂ ಮಹಾಸಭೆಯ ಕಾರ್ಯದರ್ಶಿ ಎ ಎಂ ಪುರುಷೋತ್ತಮರವರು ಆ ಸಮಾರಂಭವನ್ನು ನಡೆಸಿದರು.

ಭಾರತಕ್ಕೆಲ್ಲಾ ಒಂದೇ ಚಿರತೆ !

ಭಾರತದ ಕಾಡುಗಳಲ್ಲಿ ಚಿರತೆಗಳ ವಂಶವು ನಾಶವಾಗುತ್ತಿರುವುದೆಂದೂ ಆ ಜಾತಿಯ ಕಾಡು ಪ್ರಾಣಿ ಈಗ ಒಂದೇ ಒಂದು ಇರುವುದೆಂದೂ [illegible] ವನ್ಯಮೃಗ ರಕ್ಷಣಾ [illegible] ಯವರು ಈ ಪರಿಸ್ಥಿತಿಯನ್ನು ಪರಿಶೀಲಿಸಿ, ಅವನ್ನು [illegible] ಸೂಕ್ತ ಕ್ರಮದ [illegible] ಸಲಹೆ ಮಾಡಲಿರುವರು

ರಾಮಾಭ್ಯುದಯ ಸಭಾ ಮಂದಿರದ ಕಟ್ಟಡದ ನಿಧಿಗೆ ದ್ರವ್ಯ ಸಹಾಯ

ನಗರದ ಶ್ರೀರಾಮಸೇವಾ [illegible] ಶ್ರೀ ರಾಮಾಭ್ಯುದಯ ಸಭಾ ಮಂದಿರದ ಕಟ್ಟಡದ ನಿಧಿಗೆ [illegible] ಉದಾರವಾದ ಸಹಾಯ ಮಾಡಿದರು. ಪ್ರತಿ ವರ್ಷವೂ [illegible] ದಿನ ರಾಮದೇವರಿಗೆ [illegible] ನಡೆಸಲಾಗುತ್ತದೆ

ಸಟ್ಟಾ ಜೂಜು ಪತ್ತೆ

ನರಸಿಂಹರಾಜ ಮೊಹಲ್ಲಾದ [illegible] ೨ ನೆಯ [illegible] ಸಟ್ಟಾ ಜೂಜಾಟ [illegible] ಪೊಲೀಸರು ಪತ್ತೆ ಹಚ್ಚಿ, ಅವನಿಂದ [illegible] ರೂ [illegible] ಸಟ್ಟಾ ಚೀಟಿಗಳನ್ನೂ ವಶಪಡಿಸಿಕೊಂಡು ಅವನ ಮೇಲೆ ಮೊಕದ್ದಮೆ ಹೂಡಿದ್ದಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಗಾಂಧಿ ಕಥಾವಳಿ, [illegible] ಎಸ್ [illegible] ಕನ್ನಡ ಗೀತೆ [illegible] ಶಿಕ್ಷಣ [illegible] ಮಧ್ಯಾಹ್ನ [illegible] ಸಂಜೆ [illegible] ಆರ್ [illegible] ಸಂಗೀತ [illegible] ವಾದ್ಯವೃಂದ [illegible] ವನಿತಾ ವಿಹಾರ [illegible] ಸಂಗೀತ [illegible] ಗೀತೆ [illegible] ಸಂಸ್ಥಾನದ ಅಭಿವೃದ್ಧಿ ಯೋಜನೆ. ಕನ್ನಡ ಭಾಷಣ [illegible] ಚೌಡಯ್ಯ [illegible] ಪ್ರಸಾರ.

ಟಿಟೋರವರ ಬಗ್ಗೆ ರಷ್ಯಾ, ಜೆಕ್ ರಾಷ್ಟ್ರಗಳಲ್ಲಿ ವಿರೋಧ ಪ್ರಚಾರ

ಕಮ್ಯೂನಿಸ್ಟರ ಒಕ್ಕೂಟವನ್ನು ಒಡೆಯಲು ಯುಗೋಸ್ಲಾವಿಯದ ಅಧ್ಯಕ್ಷ ಮಾರ್ಷಲ್ ಟಿಟೋರವರು ಪ್ರಯತ್ನಿಸುತ್ತಿರುವುದಾಗಿ ರಷ್ಯದ ಕಮ್ಯೂನಿಸ್ಟ್ ಪಕ್ಷದ ಪತ್ರಿಕೆ ಪ್ರಾವ್ಡಾ ಆಪಾದಿಸಿದೆ. ಟಿಟೋರವರು ಇತರ ಕಮ್ಯೂನಿಸ್ಟ್ ಪಕ್ಷಗಳ ವ್ಯವಹಾರಗಳಲ್ಲಿ ಪ್ರವೇಶಿಸಿ, ಪ್ರತಿಗಾಮಿ ಪ್ರಚಾರಕ್ಕೆ ಕೈ ಹಾಕಿರುವುದಾಗಿ ಅದು ಹೇಳಿದೆ. ಜೆಕೊಸ್ಲೊವೇಕಿಯದ ಕಮ್ಯೂನಿಸ್ಟ್ ಪಕ್ಷದ ಪತ್ರಿಕೆ ರೂಡಿ ಪ್ರವೊ ಎಂಬುದೂ ಟಿಟೋರನ್ನು ಖಂಡಿಸಿದೆ. ಟಿಟೋರವರು ಇತ್ತೀಚಿಗೆ ಭಾಷಣ ಮಾಡಿ ಹಂಗೆರಿ ಮುಂತಾದ ಕಡೆಗಳ ವಿದ್ಯಮಾನಗಳನ್ನು ವಿವರಿಸಿ ಸ್ಟಾಲಿನ್ನರ ನೀತಿ ವಿರುದ್ಧವಾಗಿ ಅಲ್ಲಿ ಘಟನೆಗಳು ಆಗುತ್ತಿರುವುದಾಗಿ ತಿಳಿಸಿದ್ದರು.

ಪಾಕಿಸ್ತಾನಕ್ಕೆ ಕಾಶ್ಮೀರದ ಪ್ರಧಾನಿಯ ಎಚ್ಚರಿಕೆ

ಕಾಶ್ಮೀರದ ರಾಜ್ಯಾಂಗಕ್ಕೆ ಸಭೆಯ ಸದಸ್ಯರುಗಳು ಮೊನ್ನೆ ರುಜು ಹಾಕಿದರು. ಮುಖ್ಯಮಂತ್ರಿ ಬಕ್ಷಿ ಗುಲಾಂ ಮಹಮದ್‌ರವರು ಮಾತನಾಡಿ, ಆಕ್ರಮಿತ ಕಾಶ್ಮೀರದಲ್ಲಿರುವ ೧೦ ಲಕ್ಷ ಜನರನ್ನು ವಿಮುಕ್ತಗೊಳಿಸುವ ವಿಷಯವು ನಮಗೆ ಈಗ ಚಿಂತೆಗೆಡೆಮಾಡಿರುವುದೆಂದು ಹೇಳಿದರು. ಕಾಶ್ಮೀರದ ವಿಷಯವನ್ನು ಪಾಕಿಸ್ತಾನದ ಪ್ರಸ್ತಾಪಿಸಬಾರದೆಂದೂ ಅವರು ಎಚ್ಚರಿಕೆಯಿತ್ತರು. ಕಾಶ್ಮೀರಿಗಳ ಭವಿಷ್ಯವು ಅಖೈರಾಗಿ ತೀರ್ಮಾನವಾಗಿರುವುದಾಗಿಯೂ, ಭಾರತದಲ್ಲಿ ಕಾಶ್ಮೀರದ ಐಕ್ಯವನ್ನು ಕಡಿದುಹಾಕಲು ಸಾಧ್ಯವಿಲ್ಲವೆಂದೂ ಅವರು ನುಡಿದರು.

ಭಾರತ-ಪಾಕಿಸ್ತಾನಗಳ ನಡುವೆ ಅಪರಾಧಿ ವಿನಿಮಯ ಒಪ್ಪಂದ

ಅಪರಾಧ ಮಾಡಿದವರನ್ನು ಪರಸ್ಪರ ವಿನಿಮಯ ಮಾಡಿಕೊಳ್ಳುವ ಬಗ್ಗೆ ಒಪ್ಪಂದವನ್ನು ಭಾರತ ಮತ್ತು ಪಾಕೀಸ್ತಾನಗಳು ಮಾಡಿಕೊಳ್ಳುವ ಬಗ್ಗೆ ಪರಿಶೀಲನೆ ನಡೆಸಲಾಗುತ್ತಿರುವುದೆಂದು ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ

ಬುಡಾಪೆಸ್ಟ್‌ಗೆ ರಷ್ಯದಲ್ಲಿರುವ ಭಾರತದ ರಾಯಭಾರಿ ಭೇಟಿ

ಹಂಗೇರಿ ರಾಜಧಾನಿ ಬುಡಾಪೆಸ್ಟಿಗೆ ರಷ್ಯದಲ್ಲಿರುವ ಭಾರತದ ರಾಯಭಾರಿ ಕೆ ಪಿ ಎಸ್. ಮೆನನ್ನರು ಭೇಟಿಕೊಟ್ಟು, ಅಲ್ಲಿನ ವಿದ್ಯಮಾನಗಳನ್ನು ವರದಿಮಾಡುವಂತೆ ಪ್ರಧಾನಿ ನೆಹರೂರವರು ಸೂಚಿಸಿದ್ದಾರೆ.

ಬೇಕಾಗಿದ್ದಾರೆ

ಮಹಾರಾಜಾ ಕಾಲೇಜು ಮನಶ್ಶಾಸ್ತ್ರ ಇಲಾಖೆಯಲ್ಲಿ ಕೆಲವು ಪ್ರಯೋಗಗಳನ್ನು ನಡೆಸಲಾಗುತ್ತಿದೆ. ಅದಕ್ಕೆ ಅನಕ್ಷರಸ್ಥರ ಸಹಕಾರವು ಬೇಕಾಗಿದೆ. ನಗರದಲ್ಲಿರುವ ಅನಕ್ಷರಸ್ಥರು ತಮ್ಮ ಬಿಡುವು ಕಾಲದಲ್ಲಿ ಕಾಲೇಜಿನ ಮನಶ್ಶಾಸ್ತ್ರ ಇಲಾಖೆಗೆ ಬೆಳಿಗ್ಗೆ ೧೧ರಿಂದ ಮಧ್ಯಾಹ್ನ ೪ರವರೆಗೆ ಬಂದು ಕಾಣಬೇಕು. ಪ್ರಯೋಗವು ಸುಮಾರು ೧ ಗಂಟೆ ಕಾಲ ಹಿಡಿಯುವುದು. ಒಪ್ಪಿದವರಿಗೆ ತಲಾ ೧ ರೂ. ಸಂಭಾವನೆಯನ್ನು ಕೊಡಲಾಗುವುದು. ವಯಸ್ಸು ೧೮ರಿಂದ ೩೫ರೊಳಗೆ ಇರಬೇಕು. ಈ ವಿಷಯವನ್ನು ಓದುಗರು ಇತರರಿಗೂ ತಿಳಿಸಿ ಸಹಕರಿಸಬೇಕೆಂದು ಪ್ರಾರ್ಥಿಸುತ್ತೇನೆ

ಎಲ್. ನಾರಾಯಣರಾವ್ ಪವಾರ್,
ಲೆಕ್ಚರರ್, ಮಹಾರಾಜಾ ಕಾಲೇಜು

ಕ್ರಿ. ಶ. ೨೦೦೧ರಲ್ಲಿ ಪ್ರಜಾ ಸಂಖ್ಯೆ ೪೦೦ ಕೋಟಿ

ಪ್ರಖ್ಯಾತ ಬ್ರಿಟಿಷ್ ವಿಜ್ಞಾನಿ ಸರ್ [illegible] ಲ್ಸ್ ಡಾರ್ವಿನ್ನರು ಮದ್ರಾಸಿನಲ್ಲಿ ಭಾಷಣ ಮಾಡಿ, ಜಗತ್ತಿನಲ್ಲಿ ಪ್ರಜಾ ಸಂಖ್ಯೆಯು ಅತಿವೇಗದಲ್ಲಿ ಹೆಚ್ಚುತ್ತಿರುವುದೆಂದು ಅಭಿಪ್ರಾಯಪಟ್ಟಿದ್ದಾರೆ. ಈಗ ಇರುವ ೨೫೦ ಕೋಟಿ ಪ್ರಜಾ ಸಂಖ್ಯೆಯು ಕ್ರಿ. ಶ ೨೦೦೧ ರಲ್ಲಿ ೪೦೦ ಕೋಟಿ ಆಗುವುದೆಂದು ಅವರು ಹೇಳಿದ್ದಾರೆ

ಇರಾಕಿಗೆ ಬ್ರಿಟನ್ನಿನ ಶಸ್ತ್ರಾಸ್ತ್ರ

ಅರಬ್ ರಾಷ್ಟ್ರಗಳಲ್ಲೊಂದಾದ ಇರಾಕಿಗೆ ಬ್ರಿಟನ್ನು ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಸರಬರಾಜು ಮಾಡುತ್ತಿದೆ. ಇತ್ತೀಚೆಗೆ ಇನ್ನು ಕೆಲವು [illegible] ಗೊಂದು ಮೊನ್ನೆ ಬಾಗ್ದಾದಿಗೆ ತಲುಪಿ [illegible] ಶಸ್ತ್ರಾಸ್ತ್ರಗಳ ಪೂರ್ಣ ಸರಬರಾಜು ಆದರೆ ಇರಾಕ್ ಸೇನೆಯು ಅತ್ಯಂತ ಬಲಶಾಲಿಯಾಗುವುದಾಗಿ ಹೇಳಲಾಗಿದೆ

ಕರ್ನಾಟಕದಲ್ಲಿ ಢೇಬರ ಪ್ರವಾಸ

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು [illegible] ೨೭ನೇ ತಾರೀಖಿನಿಂದ ೪ ದಿವಸಗಳು ಧಾರವಾಡ, ಬೆಳಗಾಂ, ಕಾರವಾರ ಮತ್ತು ಮಂಗಳೂರು [illegible] ಲ್ಲೆಗಳಲ್ಲಿ ಪ್ರವಾಸ ಕೈಗೊಳ್ಳುವರು. ಅವರೊಡನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎ. ಕೆಂ[illegible] ರವರು ಇರುವರು.

Join:
GLOBE TUTORIAL COLLE
(*Sadvidya Patashala, Mysore*)
Excellent Coaching for
Inter, P. C. M., Kan., E

ಜೀವನದ ಹರ್ಷವನ್ನು-ಸವಿಯ
ಪಂಡರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ
ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ [illegible] ಲವಲವಿಕೆಯನ್ನು ಹೊಂದಿ ದೀರ್ಘ ಜೀವನ [illegible] ಲ್ಲಾ ಆನಂದಗಳನ್ನು ಅನುಭವಿಸಬೇಕೆಂ[illegible] ಮಾನವರ ಕುಪತ್ತರವಾದ [illegible] ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂ[illegible] ಪಂಡತ್ವ, ಜ್ಞಾಪಕ ಶಕ್ತಿಯ ಅಭಾವ, [illegible] ಕು, ಸ್ವಪ್ನಸ್ಖಲನ, ಮೂತ್ರವ್ಯಾಧಿ, ನರಗಳ [illegible] ರ್ಬಲ್ಯ, ಸಿಫಿಲಿಸ್, ಗೊನೋರಿಯಾ, [illegible] ಯು, ಅಂಗ ವಾಯು ಮತ್ತು ಎಲ್ಲ ವಿಧವಾ[illegible] ಕೀಯ ಮೂತ್ರ ರೋಗಗಳಿಗೂ [illegible] ಇವುಗಳನ್ನು ಕೂಡಲೇ ಗುಣಪಡಿಸಲು [illegible] ಕರಾಗಿರುವ ಡಾ|| ರಾಜಾರವರನ್ನು (ಭಂಗ[illegible] ರೀ) ಪ್ರತಿದಿನ ಬೆಳಿಗ್ಗೆ 9 ರಿಂದ 12 ಮತ್ತು [illegible] ಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿ [illegible] ರು ಫ್ರೀ ಪರೀಕ್ಷಿಸ್ಪರ ಗುಪ್ತ [illegible] ವಾಯಿಲೆಗಳಿಗೂ ಪ್ರತ್ಯಾಕ [illegible] ಮಾಡು [illegible] ವುದು.
ಅವರ ಸಲಹೆ [illegible] ಸವನ್ನು ಪಡೆದಂತೆಯೇ [illegible] ಪಡಲಾಗುವುದು. ಕೆಳಗಿನ ವಿಳಾಸದಲ್ಲಿ ಭೇಟಿ[illegible] ರಿ:—
ರಾಜಾ ಮೆಡಿಕಲ್ ಹಾಲ್,
ಬ್ಲಾಕ್ ನಂ 1-745. ಆರೋಗ್ಯ ರಸ್ತೆ
(ಮೈಸೂರು ಬ್ಯಾಂಕ್ [illegible] ಮೂಲೆ [illegible])
ಮೈಸೂರು

Edited, Printed and Published
A. R. Nagarajan at Sadhvi P
D. Subbiah Road, Mysore

ಪ್ರಭುದೇವಾ ಥಿಯೇಟರ್
(ಪಡ್ಡಾ ಟಾಕೀಸ್)
ಅಮೋಘ 7ನೇ ವಾರ
ವಿಶ್ವಕಲಾವಿದರ ಕನ್ನಡ ಚಿತ್ರ ★ **ಓಹಿಲೇಶ್ವರ**
[ಕರ್ನಾಟಕ ಫಿಲಂಸ್ ರಿಲೀಸ್

[illegible] No. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
[illegible]

[illegible]

ಚಂದಾ ದರ

[illegible]

ಸಂಪುಟ : [illegible]] SADHVI) FRIDAY 23-11-1956 ಮೈಸೂರು : ಶುಕ್ರವಾರ ೨೩-೧೧-೧೯೫೬ [ಸಂಚಿಕೆ : [illegible]

ಕೆ. ಎಫ್. ಪಾಟಿಲರು ಮೈಸೂರು ಸಚಿವರಾಗುವ ಸಂಭವ

ಬೆಂಗಳೂರು ಪೌರಸಭೆ ಅವಧಿ ಹೆಚ್ಚಿಸಿದ ವಿರುದ್ಧ ರಿಟ್ ಅರ್ಜಿ

ಬೆಂಗಳೂರು ೨೨

ಇಲ್ಲಿನ ಪೌರಸಭೆಯ ಅವಧಿಯನ್ನು ೧ ವರ್ಷ ಹೆಚ್ಚಿಸಿ ಸರ್ಕಾರದವರು ಹೊರಡಿಸಿದ ವಿಶೇಷಾಜ್ಞೆಯ ಸತ್ಯಮತ್ವದ ಬಗ್ಗೆ ಪ್ರಶ್ನಿಸಿ, ಕಮ್ಯೂನಿಸ್ಟ್ ಪಕ್ಷದ ನಗರ ಶಾಖೆಯವರು ಹೈಕೋರ್ಟಿನಲ್ಲಿ ನೆನ್ನೆ ರಾಜ್ಯಾಂಗದ ೨೨೬ನೇ ವಿಧಿ ಪ್ರಕಾರ ರಿಟ್ ಅರ್ಜಿಯೊಂದನ್ನು ಸಲ್ಲಿಸಿದ್ದಾರೆ. ವಿಶೇಷಾಜ್ಞೆಯು ನಿರರ್ಥಕ ಮತ್ತು ಜಾರಿಗೆ ತರಕೂಡದೆಂದು ಆಜ್ಞೆಯಾಗಬೇಕೆಂದು ಕೋರಲಾಗಿದೆ

ರೈಲ್ವೆ ಪ್ರಯಾಣಿಕರ ಮೇಲೆ ತೆರಿಗೆ

ಜಾತ್ರೆ, ಮೇಳ, ಪ್ರದರ್ಶನ ಮುಂತಾದುವು ನಡೆಯುವ ಸ್ಥಳಗಳಿಗೆ ಹೋಗುವ ರೈಲು ಪ್ರಯಾಣಿಕರ ಮೇಲೆ ತೆರಿಗೆಯನ್ನು ಹಾಕಲು ಅವಕಾಶವೀಯುವ ಮಸೂದೆಯನ್ನು ನೆನ್ನೆ ಲೋಕ ಸಭೆಯು ಅಂಗೀಕರಿಸಿತು. ಏರ್ ಕಂಡಿಷನ್ಡ್ ಮತ್ತು ಪ್ರಥಮ ತರಗತಿಗಳಲ್ಲಿ ಪ್ರಯಾಣ ಮಾಡುವವರಿಗೆ ೧॥ ರೂ., ಎರಡನೇ ತರಗತಿಯವರಿಗೆ ೧ ರೂ ಮತ್ತು ೩ನೇ ತರಗತಿಯವರಿಗೆ ೮ ಆಣೆಯಂತೆ ವಿಧಿಸಲಾಗುವುದು. ಇಷ್ಟು ಸಂಚಾರವಿರುವ ಕಡೆಯೂ ಪ್ರಯಾಣಿಕರಿಗೆ ಇದೇ ರೀತಿ ತೆರಿಗೆ ವಿಧಿಸುವಂತೆ ಸಂಸ್ಥಾನ ಸರ್ಕಾರಗಳಿಗೆ ಕೇಂದ್ರದವರು ಸೂಚಿಸಲಿದ್ದಾರೆ

ನೇಪಾಳದ ದೇವಾಲಯದಲ್ಲಿ ಬೌದ್ಧ ಭಿಕ್ಷುಗಳಿಗೆ ಪ್ರವೇಶವಿಲ್ಲ

ನೇಪಾಳದ ರಾಜಧಾನಿ ಖಟ್ಮಂಡುವಿನಲ್ಲಿರುವ ಪಶುಪತಿನಾಥ ದೇವಾಲಯಕ್ಕೆ ನೆನ್ನೆ ಸುಮಾರು ನೂರು ಮಂದಿ ಬೌದ್ಧ ಭಿಕ್ಷುಗಳು ಹೋದಾಗ ಅವರಿಗೆ ಪ್ರವೇಶಾವಕಾಶ ದೊರೆಯಲಿಲ್ಲವೆಂದು ವರದಿಯಾಗಿದೆ. ಅಸ್ಪೃಶ್ಯರು ಮತ್ತು ಹಿಂದೂಗಳಲ್ಲದವರು ಒಳಗೆ ಬರಲು ಅವಕಾಶವಿಲ್ಲವೆಂದು ಅವರಿಗೆ ತಿಳಿಸಲಾಯಿತು. [illegible] ಭಿಕ್ಷುಗಳು ತಿಳಿಸಲಾಗಿ, ಪೂಜಾರಿಗಳು ಬಾಗಿಲುಗಳನ್ನು ಹಾಕಿ [illegible] ಎಂದು ಹೇಳಲಾಗಿದೆ. ನಿರಾಶೆಗೊಂಡ ಭಿಕ್ಷುಗಳು ಬಾಗಿಲು [illegible] ಛಾಯಾ ಚಿತ್ರವನ್ನು ತೆಗೆದುಕೊಂಡು ಹಿಂತಿರುಗಿದರು. ಅವರುಗಳು ಇಲ್ಲಿ ಸೇರಿದ್ದ ವಿಶ್ವ ಬೌದ್ಧರ ಸಮ್ಮೇಳನದ ಪ್ರತಿನಿಧಿಗಳೆಂದು ಗೊತ್ತಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಪಿಟೀಲು. ೭-೧೫ ಮತ್ತು [illegible] ಪ್ರಸನ್ನ ಲಕ್ಷ್ಮೀ-ದೇವರನಾಮ ೭-೩೦ [illegible]. [illegible] ಸಂಗೀತ [illegible] ಬಾಲಜಗತ್. [illegible] ಸಂಜೆ [illegible] ಸೀತಾಲಕ್ಷ್ಮಿ, ವೆಂಕಟೇಶ-ಸಂಗೀತ [illegible] ಸಂಗೀತ. [illegible] ಕಾವ್ಯ ಲೋಕ. [illegible] ಕಾರ್ಯಕ್ರಮ

ಫಿಲೋಮಿನಾ ಕಾಲೇಜು ಅಧ್ಯಾಪಕರುಗಳ ಮುಷ್ಕರ

ಸಂಬಳ ಕೊಡದಿದ್ದುದಕ್ಕಾಗಿ ಪ್ರತಿಭಟನೆ

ಮೈಸೂರು ೨೨

ಇಲ್ಲಿನ ಸೇಂಟ್ ಫಿಲೋಮಿನಾ ಕಾಲೇಜಿನ ೩೫ ಮಂದಿ ಉಪಾಧ್ಯಾಯರು ಈ ದಿನ ಬೆಳಗ್ಗೆ ೧೦॥ ಗಂಟೆಗೆ ಪಾಠ ಹೇಳಲು ತರಗತಿಗಳಿಗೆ ಹೋಗದೆ ನಿಂತುಬಿಟ್ಟರು. ಕಾಲೇಜಿನ ಪ್ರಿನ್ಸಿಪಾಲರು ಅವರುಗಳ ಬಗ್ಗೆ ವಿನಯ ಮತ್ತು ಗೌರವದಿಂದ ನಡೆದುಕೊಳ್ಳದಿದ್ದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ತಮಗೆ ಸಂಬಳ ಭತ್ಯವನ್ನು ಕೊಡಬೇಕೆಂದು ಕೋರುವ ಮನವಿಯೊಂದನ್ನು ಸಲ್ಲಿಸಲು ನೆನ್ನೆ ದಿನ ಅವರುಗಳು ಪ್ರಿನ್ಸಿಪಾಲರ ಬಳಿ ಹೋದಾಗ ಅವರನ್ನು ತುಚ್ಛವಾಗಿ ಕಾಣಲಾಯಿತಂತೆ. ಗೊತ್ತಾಗಿದೆ. ಉಪಾಧ್ಯಾಯರುಗಳಿಗೆ ಇದುವರೆಗೂ ಸಂಬಳ ಭತ್ಯವನ್ನು ಕೊಟ್ಟಿರುವುದಿಲ್ಲ

ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆಗಾಗಿ ದಂಡ

ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆಗಾಗಿ ನಗರದ ಅಂಗಡಿ ಸಿಬ್ಬಂದಿ ಇನ್ಸ್‌ಪೆಕ್ಟರರು ಹೂಡಿದ್ದ ಮೊಕದ್ದಮೆಯಲ್ಲಿ ದೇವರಾಜ ಮಾರ್ಕೆಟ್ಟಿನ ಕಿಲ್ಲದ ಅಂಗಡಿ ಮಾಲೀಕರು ಶ್ರೀ ಎಂ. ಎಸ್. ಸತ್ಯನಾರಾಯಣ, ಮಾರ್ಕೆಟ್ಟಿನ [illegible] ಅಂಗಡಿಯ ಶ್ರೀ [illegible] ಮತ್ತು [illegible] ಅಂಗಡಿಯ ಶ್ರೀ ಸೀತಾರಾಂರವರಿಗೆ ತಲಾ ೫ ರೂ ದಂಡವನ್ನು ವಿಧಿಸಲಾಗಿದೆ. ಅದೇ ಕಾರಣಕ್ಕಾಗಿ ೧೧೦೦ [illegible] ಶ್ರೀ ಎಸ್ ವಿ. [illegible]ರವರಿಗೆ ೩ ರೂ ಮತ್ತು ಮುಖ್ಯ ಅಂಚೆ ಕಛೇರಿಯ ಕ್ಯಾಂಟೀನಿನ ಕಾರ್ಯದರ್ಶಿ ಶ್ರೀ ಪಿ ವೆಂಕಟರಾಮಯ್ಯನವರಿಗೆ ೩ ರೂ. ದಂಡವನ್ನು ಹಾಕಲಾಗಿದೆ

ಸಂಗೀತ ಕಛೇರಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ [illegible] ಶ್ರೀ ವಿ. ಎನ್. ರಾಯರ ವೀಣಾವಾದನ ಕಛೇರಿಯು [illegible] ಎಂ. ಎಸ್. ರಾಮಣ್ಣನವರ ಘಟದೊಡನೆ ನಡೆಯುವುದು

ಕಾರವಾರ ರೇವಿನ ಅಭಿವೃದ್ಧಿಗಾಗಿ ಜಪಾನಿನ ನೆರವು

ನೂತನ ಮೈಸೂರು ಪ್ರಾಂತದ ಕಾರವಾರ ಮತ್ತು ಹೊನ್ನಾವರ ರೇವುಗಳನ್ನು ಅಭಿವೃದ್ಧಿಪಡಿಸಲು ಭಾರತವು ಜಪಾನಿನ ಸಹಕಾರವನ್ನು ಪಡೆಯಲಿರುವುದೆಂದೂ, ಈ ಸಂಬಂಧವಾಗಿ ಭಾರತಕ್ಕೆ ಜಪಾನಿನ ನಿಯೋಗವೊಂದು ಸದ್ಯದಲ್ಲೇ ಬರುವುದೆಂದೂ ವರದಿಯಾಗಿದೆ.

ಹೊಸ ಮಾದರಿ ಚರಕಕ್ಕೆ ೧ ಲಕ್ಷ ರೂ. ಬಹುಮಾನ

ಹೆಚ್ಚು ನೂಲು ತೆಗೆಯಲು ಸಾಧಕವಾಗುವ ಹೊಸ ಮಾದರಿ ಅಂಬರ್ ಚರಖವನ್ನು ತಯಾರಿಸಿ ಕೊಟ್ಟವರಿಗೆ ೧ ಲಕ್ಷ ರೂ ಬಹುಮಾನವನ್ನು ಕೇಂದ್ರ ಸರ್ಕಾರದವರು ಕೊಡಲಿರುವರು

ಚಿನ್ನದ ಗಣಿ ರಾಷ್ಟ್ರೀಕರಣಕ್ಕೆ ಕೇಂದ್ರದಿಂದ ೪೫ ಲಕ್ಷ ರೂ. ಸಾಲ

ಸ್ವ. ವ. ಪ್ರೆ.] ಬೆಂಗಳೂರು ೨೨

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ದಿನ ದೆಹಲಿಯಿಂದ ಹಿಂತಿರುಗಿದರು. ಬೆಳಗ್ಗೆ ೧೧ ಗಂಟೆಗೆ ಮಂತ್ರಿಮಂಡಲವು ಅವರ ಅಧ್ಯಕ್ಷತೆಯಲ್ಲಿ ಸಭೆಯಾಗಿ ದೆಹಲಿಯಲ್ಲಿ [illegible] ವಿಚಾರಗಳನ್ನು ಅವರು ಅಲ್ಲಿ ವಿವರಿಸಿದರೆಂದು ಗೊತ್ತಾಗಿದೆ.

ವಿಶಾಲ ಮೈಸೂರಿಗೆ ಕೇಂದ್ರದಿಂದ ಆಗಬೇಕಾದ ಸಹಾಯವನ್ನು ಶ್ರೀ ನಿಜಲಿಂಗಪ್ಪನವರು ದೆಹಲಿಯಲ್ಲಿ ಪ್ರಸ್ತಾಪಿಸಿದರೆಂದು ಹೇಳಲಾಗಿದೆ.

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣಕ್ಕಾಗಿ ಕಂಪೆನಿಯವರಿಗೆ ಪರಿಹಾರವೀಯಲು ಕೇಂದ್ರದವರು ಮೈಸೂರು ಸರ್ಕಾರಕ್ಕೆ ೪೫ ಲಕ್ಷ ರೂ ಸಾಲವೀಯುವರೆಂದು ತಿಳಿದುಬಂದಿದೆ.

ವಿಧಾನ ಸೌಧ ತನಿಖೆ ಸಮಿತಿ ಮುಂದೆ ಹನುಮಂತಯ್ಯನವರ ಸಾಕ್ಷ್ಯ

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕಳೆದ ಮಂಗಳವಾರ ವಿಧಾನ ಸೌಧದ ತನಿಖೆ ಸಮಿತಿ ಮುಂದೆ ತಮ್ಮ ಸಾಕ್ಷ್ಯವನ್ನಿತ್ತರು. ಅವರು ಅಧಿಕಾರದಲ್ಲಿದ್ದಾಗ ವಿಧಾನ ಸೌಧ ಕಟ್ಟಿಸಿದ ಇಲಾಖೆಯನ್ನು ಅವರು ವಹಿಸಿಕೊಂಡಿದ್ದರು

ಬ್ರಿಟಿಷ್ ಸೈನಿಕರಿಗೂ ಈಜಿಪ್ಟಿನವರಿಗೂ ಮುಷ್ಟಿ ಕಾಳಗ

ಪೋರ್ಟ್ ಸೈಯದ್ದಿಗೆ ನೆನ್ನೆ ವಿಶ್ವಸಂಸ್ಥೆಯ ಪಹರೆ ತಂಡವು ಪ್ರವೇಶಿಸುತ್ತಿದ್ದಾಗ ಅಲ್ಲಿಂದ ಹೊರಟ ಬ್ರಿಟಿಷ್ ಪಡೆಗಳಿಗೂ, ಈಜಿಪ್ಟಿನವರಿಗೂ [illegible] ಮುಷ್ಟಿ ಕಾಳಗವಾಯಿತೆಂದೂ, ಅನೇಕ ಪ್ರದರ್ಶನಕಾರರನ್ನು ಬಂಧಿಸಲಾಯಿತೆಂದೂ ವರದಿಯಾಗಿದೆ. ವಿಶ್ವಸಂಸ್ಥೆ ಪಡೆಗಳಿಗೆ ಸ್ವಾಗತ ಕೋರುವ ಬೋರ್ಡುಗಳನ್ನು ಹಿಡಿದಿದ್ದ ಈಜಿಪ್ಟಿನವರು "ಆಂಗ್ಲೋ-ಫ್ರೆಂಚ್ ಅತ್ಯಾಚಾರಿಗಳೇ ಈಜಿಪ್ಟಿನಿಂದ ತೊಲಗಿರಿ" ಎಂದು ಕೂಗುತ್ತಿದ್ದರು

ಸಿರಿಯದ ಗಡಿ ಬಳಿ ಇಸ್ರೇಲ್ ಮತ್ತು ಆಂಗ್ಲೋ-ಫ್ರೆಂಚ್ ಸೇನೆ

ಸಿರಿಯಾ ಇಸ್ರೇಲ್ ಮತ್ತು ಜೋರ್ಡಾನ್-ಇಸ್ರೇಲ್ ಗಡಿ ಬಳಿ ಇಸ್ರೇಲಿನ ಸೈನ್ಯಗಳನ್ನು ಕೇಂದ್ರೀಕರಿಸಲಾಗಿದೆಯೆಂದೂ, ಅವುಗಳೊಡನೆ ಆಂಗ್ಲೋ-ಫ್ರೆಂಚರ ಪಡೆಗಳಿವೆಯೆಂದೂ ಸಿರಿಯವು ನೆನ್ನೆ ವಿಶ್ವಸಂಸ್ಥೆಗೆ ತಿಳಿಸಿ, ಈ ಬಗ್ಗೆ ಪ್ರತಿಭಟನೆ ಸೂಚಿಸಿರುತ್ತದೆ.

● ಕಂಠೀರವ ಸ್ಟುಡಿಯೋದ [illegible]

ಬೆಂಗಳೂರಿನಲ್ಲಿ ಶ್ರೀ ಕಂಠೀರವ ಸ್ಟುಡಿಯೋ [illegible] ಈ ರಾತ್ರಿ ೭॥ ಗಂಟೆಗೆ [illegible] ನಡೆಯುವುದು. ಬೆಂಗಳೂರಿನ [illegible] ಮೈಸೂರಿನ [illegible] ಎಲೆಕ್ಟ್ರಿಕ್ [illegible] ಗಂಗಪ್ಪನವರು [illegible] ವಹಿಸುವರು.

ಕೆ. ಎಫ್. ಪಾಟೀಲರು ಮೈಸೂರಿನ ಸಚಿವರಾಗುವರೇ ?

ಸ್ವ. ವ. ಪ್ರೆ.] ಬೆಂಗಳೂರು ೨೨

ಮೈಸೂರಿನ ಮಂತ್ರಿಮಂಡಲಕ್ಕೆ [illegible] ಮಾಜಿ ಮಂತ್ರಿ ಶ್ರೀ ಕೆ. ಎಫ್. ಪಾಟೀಲರನ್ನು [illegible] ಸಂಭವವಿದೆಯೆಂದು ತಿಳಿದುಬಂದಿದೆ. [illegible]

[illegible] ಶ್ರೀ [illegible]

[illegible]

ಹಂಗೆರಿ ಜನತ ಗಡೀಪಾರು ನಿಲ್ಲಬೇಕು

ವಿಶ್ವಸಂಸ್ಥೆಯಲ್ಲಿ [illegible] ನಿರ್ಣಯ ಅಂಗೀಕಾರ

ಹಂಗೆರಿಯಿಂದ ಜನರನ್ನು ಗಡೀಪಾರು ಮಾಡುವುದು [illegible] ರಷ್ಯದ ಸೈನ್ಯಗಳನ್ನು [illegible] ಮತ್ತು ಹಂಗೆರಿ ಸ್ಥಿತಿ ಬಗ್ಗೆ [illegible] ವಿಶ್ವಸಂಸ್ಥೆ [illegible] ರಾಷ್ಟ್ರದ [illegible] ವಿಶ್ವಸಂಸ್ಥೆಯ [illegible] ಸಭೆಯು ಅಂಗೀಕರಿಸಿರುತ್ತದೆ. [illegible] ರಾಷ್ಟ್ರಗಳು ಮತ್ತು [illegible] ವಿರೋಧಿಸಿದುವು. ಭಾರತ, [illegible], ಸಿಲೋನ್ ಮತ್ತು ಅಫ್ಘಾನಿಸ್ತಾನಗಳು ತಟಸ್ಥವಾಗಿದ್ದುವು.

[illegible] ವಿಶ್ವಸಂಸ್ಥೆಯ [illegible] ಭಾರತವು [illegible] ಅಂಗೀಕೃತವಾಗಿದೆ

ಅಣು ಬಾಂಬು ಪ್ರಯೋಗಿಸುವುದಕ್ಕಾಗಿ ವಿಜ್ಞಾನಿಗಳ ವಿಷಾದ

[illegible] ಅಣು ಬಾಂಬಿನ ತಯಾರಿಕೆ [illegible] ಎಂಬ ವಿಷಯ ಚರ್ಚೆ [illegible] ಅಲ್ಬರ್ಟ್ ಐನ್‌ಸ್ಟೀನ್ [illegible] ತಮ್ಮ ಪಾತ್ರಕ್ಕಾಗಿ ಅನೇಕ ವಿಜ್ಞಾನಿಗಳು [illegible] ಹಿರೋಷಿಮಾ ನಾಗಸಾಕಿ [illegible] ಎಂದು ಅವರು ಹೇಳಿದರು. ಅಣು ಬಾಂಬಿನ ತಯಾರಿಕೆ [illegible] ಎಲ್ಲಾ ಶಸ್ತ್ರಾಸ್ತ್ರಗಳೂ [illegible] ಜಗತ್ತಿನ ಭವಿಷ್ಯದ ಬಗ್ಗೆ ವಿಜ್ಞಾನಿಗಳಿಗೆ [illegible] ಎಂದೂ ಅವರು ಹೇಳಿದರು

ಅಂತರ ಸಂಸ್ಥಾನ ವ್ಯಾಪಾರದ ಮೇಲೆ ಮಾರಾಟ ತೆರಿಗೆ

ಅಂತರ ಸಂಸ್ಥಾನಗಳ ವ್ಯಾಪಾರದ ಮೇಲೆ ಕೇಂದ್ರ ಸರ್ಕಾರದವರು [illegible] ಮಾರಾಟ ತೆರಿಗೆ ವಿಧಿಸುವ [illegible] ಲೋಕಸಭೆಯಲ್ಲಿ ಕೇಂದ್ರ [illegible] ಮಂತ್ರಿ [illegible] ಸಂಸ್ಥಾನಗಳು [illegible] ಸಂಸ್ಥಾನಗಳಲ್ಲಿ ವಿಧಿಸಲ್ಪಡುವ [illegible] ವಿಶೇಷ ಪದಾರ್ಥಗಳ [illegible] ಎಲ್ಲಾ [illegible]

ಮೈಸೂರು ಸಂಸ್ಥಾನದಲ್ಲಿ ವಿವಿಧ ಪಾರಿಭಾಷಿಕ ಸಮಿತಿಗಳು

ಅಖಿಲ ಭಾರತ ಪಾರಿಭಾಷಿಕ ವಿದ್ಯಾಭ್ಯಾಸ [illegible] ಕೇರಳ [illegible] ಮೈಸೂರು [illegible] ಮತ್ತು ಆಂಧ್ರ ಪ್ರದೇಶಗಳಲ್ಲಿ [illegible] ಸಮಿತಿಗಳನ್ನು [illegible] ಬೆಂಗಳೂರು [illegible] ಮತ್ತು [illegible]

ರಾಮಕೃಷ್ಣ ಮಠದ ಸಹಿತ ಧನ ಸಹಾಯಕ್ಕಾಗಿ ಮನವಿ

[illegible] ಶ್ರೀ ರಾಮಕೃಷ್ಣ [illegible] ಶ್ರೀ [illegible] ಸ್ವಾಮಿಗಳವರು [illegible] ರೂ. [illegible]

ಜಗತ್ತಿನಲ್ಲೇ ಅತ್ಯಂತ ಎತ್ತರದ ಕಟ್ಟಡ

[illegible] ನ್ಯೂಯಾರ್ಕ್ ನಗರದ [illegible] ಎಂಪೈರ್ ಸ್ಟೇಟ್ ಬಿಲ್ಡಿಂಗ್ [illegible]

ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಬಳದ ಪ್ರಶ್ನೆ

ಪ್ರಾಥಮಿಕ ಶಾಲಾ ಅಧ್ಯಾಪಕರ ಸಂಬಳವನ್ನು [illegible] ಕೇಂದ್ರ ಸರ್ಕಾರ [illegible] ಸಂಸ್ಥಾನಗಳು [illegible] ಕೇಂದ್ರದವರು [illegible] ಲೋಕಸಭೆಯಲ್ಲಿ ಕೇಂದ್ರ ವಿದ್ಯಾ ಖಾತೆ ಮಂತ್ರಿ ಶ್ರೀಮಾಲಿಯವರು [illegible]

ತನ್ನ ಪ್ರತಿಮೆ ಸ್ಥಾಪನೆ ಬಗ್ಗೆ ನೆಹರೂರವರ ಉದಾಸೀನ

[illegible]

ಹಿರಿಜನರ ಕಲಾಸನದೊಳಗಿನ ಸಭೆ

[illegible]

ಇನ್ನೂ ಎರಡು ಸಕ್ಕರೆ ಕಾರ್ಖಾನೆಗಳಿಗೆ ಅನುಮತಿ

[illegible]

ಹಿಂದಿ ಪ್ರಚಾರಕ ಶಿಕ್ಷಣ ವಿದ್ಯಾಲಯದ ಸಮಾರಂಭ

[illegible] ಹಿಂದಿ ಪ್ರಚಾರಕ ಶಿಕ್ಷಣ [illegible] ವಿದ್ಯಾಲಯದ [illegible] ಹಿಂದಿ ಪ್ರಚಾರ [illegible] ಅಧ್ಯಕ್ಷತೆಯಲ್ಲಿ ನಡೆಯುವುದು

ಭಾವಸಾರ ವಿದ್ಯಾರ್ಥಿ ಪರಿಷತ್ತಿನ ಸಮಿತಿ ಸಭೆ

ಅಖಿಲ ಭಾರತ ಭಾವಸಾರ ಕ್ಷತ್ರಿಯ [illegible] ವಿದ್ಯಾರ್ಥಿ [illegible] ಸಭೆಯು [illegible] ವಿದ್ಯಾರ್ಥಿ ನಿಲಯದಲ್ಲಿ ಸೇರಲಿದೆ [illegible]

ಇಂಗ್ಲೆಂಡಿನಲ್ಲಿ ನ್ಯೂಸ್ ಪ್ರಿಂಟ್ ತಯಾರಿಕೆ

[illegible] ನ್ಯೂಸ್ ಪ್ರಿಂಟ್ [illegible] ಆಂಧ್ರ [illegible] ಮಧ್ಯ ಪ್ರದೇಶದಲ್ಲಿ [illegible]

ಗೋವಾ ಪ್ರದೇಶಗಳಲ್ಲಿ ಹಂಗಾಮಿ ಸ್ವತಂತ್ರ ಸರ್ಕಾರ

ಪೋರ್ಚುಗೀಸರ ಆಡಳಿತದಿಂದ ರಾಷ್ಟ್ರೀಯರು ವಿಮುಕ್ತಿಗೊಳಿಸಿರುವ ದಾದ್ರಾ ಮತ್ತು [illegible] ಪ್ರದೇಶದಲ್ಲಿ ಸ್ವತಂತ್ರವಾದ ಸರ್ಕಾರವನ್ನು ಹಂಗಾಮಿಯಾಗಿ ರಚಿಸಲು [illegible] ರಾಷ್ಟ್ರೀಯರು ಪ್ರಯತ್ನಿಸುತ್ತಿರುವುದಾಗಿ [illegible] ಗೋವಾದ [illegible] ಆರ್. ಜಿ. ಕಾಮತ್‌ರವರು [illegible]

ಓಪಿಸ ಅಧಿಕಾರಕ್ಕಾಗಿ ಸನ್ಯಾಸಿಗಳ ಒತ್ತಾಯ

[illegible] ಅಖಿಲ ಭಾರತ [illegible] ಸಮ್ಮೇಳನದಲ್ಲಿ ಸನ್ಯಾಸಿಗಳಿಗೆ [illegible] ಅಧಿಕಾರವನ್ನು [illegible] ಒತ್ತಾಯ ಮಾಡುವ [illegible] ಸನ್ಯಾಸಿಗಳಿಗೆ [illegible] ಸೂಚಿಸಲಾಯಿತು. [illegible] ಮತ್ತು [illegible] ತೆರಿಗೆ ಹಾಕಬೇಕೆಂದು [illegible]

ಮೈಸೂರು ಪೇಟೆ ಧಾರಣೆ

[illegible]

ಒಲಂಪಿಯಾ ಟಾಕೀಸ್
23-11-56 ರಿಂದ . ಅವೋಘ 2ನೇ ವಾರ
[illegible]
ಫುಟ್ ಟ್ರೂಪ್
ಪಾತ್ರ: [illegible]
ಕೆ. ಎನ್. [illegible]

ಬೈಸಿಕಲ್ಲು ಕಳೆದುಹೋಗಿದೆ

ತಾ|| 21-11-56 ನೇ ಬುಧವಾರ 10-30 ಘಂಟೆಯ ಸಮಯದಲ್ಲಿ ಗೌ|| ಮಹಾರಾಜ [illegible] 921857 ನೇ ನಂಬರಿನ ಜರ್ಮನ್ Diamant ಬೈಸಿಕಲ್ಲೊಂದು ಕಳೆದುಹೋಗಿದೆ. ಯಾರಾದರೂ ತೆಗೆದುಕೊಂಡು ಹೋಗಿದ್ದರೆ ಅದನ್ನು ದಯವಿಟ್ಟು ಈ ಕೆಳಗೆ ಸಹಿ ಮಾಡಿರುವವರಿಗೆ ತಲುಪಿಸಿದರೆ ಸೂಕ್ತ ಬಹುಮಾನ ಕೊಡಲಾಗುವುದು

ಬಿ. ಎಸ್. ಕೃಷ್ಣಪ್ಪ, ಸಂಸ್ಕೃತ ಪಂಡಿತ,
ಗೌ|| ಮಹಾರಾಜ [illegible] ಹೈಸ್ಕೂಲು, ಮೈಸೂರು

Edited, Printed and Published by
S. R. Nagarajan at Sadhvi Press
Subbiah Road, Mysore

ಅಣುವನ್ನು ಭೇದಿಸುವ ಮತ್ತು ಸಂಯೋಜಿಸುವ ಯಂತ್ರ

ಅಣುವನ್ನು ಭೇದಿಸುವ ಮತ್ತು [illegible] ಸಂಯೋಜಿಸುವ ಯಂತ್ರವೊಂದನ್ನು [illegible] ನಿರ್ಮಿಸಲಾಗುತ್ತಿದೆ [illegible] ಅದು ಮುಗಿಯುವುದು.

ಉಪಾಧ್ಯಾಯರ ಸಮ್ಮೇಳನ

[illegible] ಉಪಾಧ್ಯಾಯರ ಸಮ್ಮೇಳನವು [illegible] ಡಿಸ್ಟ್ರಿಕ್ಟ್ [illegible] ದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು [illegible] ವಿದ್ಯಾಧಿಕಾರಿಗಳಾದ ಶ್ರೀ [illegible] ಸ್ವಾಗತ [illegible] ಭಾಷಣಗಳನ್ನು ಮಾಡಿದರು. [illegible] ಸಂಗೀತ, ನೃತ್ಯ, ನಾಟಕ [illegible] ಅಧ್ಯಕ್ಷರು ಭಾಷಣ ಮಾಡಿ [illegible] ತಿಳಿಸಿದರು.

ಹರಿಜನರ ಸೌಕರ್ಯಗಳಿಗೆ [illegible]

ನಂಜನಗೂಡು ತಾಲ್ಲೂಕು [illegible] ಹರಿಜನ ಕೇಂದ್ರದಲ್ಲಿ [illegible] ಸರ್ಕಾರದವರು [illegible] ಗ್ರಾಂಟು ಸರಿಯಾಗಿ ವಿನಿಯೋಗವಾಗ[illegible] ಹರಿಜನರಿಗೆ [illegible] ಸಂಬಂಧಪಟ್ಟ ಅಧಿಕಾರಿಗಳು [illegible] ಪರಿಶೀಲಿಸುವುದು ಅಗತ್ಯ [illegible] ಹರಿಜನ [illegible] ತಿಳಿಸಿದ್ದಾರೆ

○ [illegible] ವಿಶ್ವವಿದ್ಯಾಲಯದ [illegible]

ಮೋತಿಲಾಲ್ ಟಾಕೀ
ಮೈಸೂರು
23-11-56 ರಿಂದ ಪ್ರತಿ ದಿನ 3 [illegible]
[illegible] ಪಿಕ್ಚರ್ಸ್‌ರವರ
ಬಹುತ್ ದಿನ್ ಹು
ಪಾತ್ರ: ಮಧುಬಾಲ, ಎಂ. ಕೆ. [illegible]
ರತನ್ ಕುಮಾರ್ ಮತ್ತು ಆಗ
ನಿರ್ಮಾಪಕರು ಮತ್ತು ನಿರ್ದೇಶ
ಎಸ್. ಎಸ್. ವಾಸನ್

ಚಾಮುಂಡೇಶ್ವ
ಟಾಕೀಸ್
23-11-56 ರಿಂದ : 2 ನೇ
ಮಿಸ್ಸಿಯಮ
ಪಾತ್ರ:- ಸಾವಿತ್ರಿ, ಜಮುನ, [illegible]
ತಂಗವೇಲು, ಸಾರಂಗಪಾಣಿ

SRI GAYATH
TALKIES
From 23-11-56 : For
FORBIDDEN PLANE
(Technicolor & Cinemasco
With -Walter Pidgeon
Anne Francis and
Leslie Nielson
Morning Shows on 24th &
Dangerous Mission
(Technicolor)
With -Victor Mature
Piper Laurie and
Vincent Price

[illegible] ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ
[illegible]
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
[illegible]

ಸಾಧ್ವಿ

[illegible]

ಬ್ಯಾಂಕಾಲ್
[illegible]
[illegible]
ಕಮ್ಮ ಅಂಡ್ ಕೋ.,
[illegible]
71/1. [illegible]
[illegible]
ಬೆಂಗಳೂರು –2

[illegible] : ೦೮] SADHVI : SATURDAY 24—11—1956 ಮೈಸೂರು : ಶನಿವಾರ [illegible] [ಸಂಚಿಕೆ : [illegible]

ತಿರುಚ್ಚಿಬಳಿ ಭಾರಿ ರೈಲು ಅನಾಹುತ: ೨೦೦ ಸಾವುನೋವು

ಮಾನವ ಸಮಾಜದ ಉನ್ನತಿಯಲ್ಲಿ ವಿದ್ಯಾಭ್ಯಾಸದ ಪಾತ್ರ

[illegible]

ಮೈಸೂರು ೨೦

ಗ್ರಾಮಾಂತರ ಪ್ರದೇಶಗಳಲ್ಲಿ ವಿದ್ಯಾ ಪ್ರಸಾ ದ ವಿಷಯವಾಗಿ ಸಂಶೋಧನೆ ನಡೆಸಿ ಸಲಹೆ ಡಲು ನೇಮಿಸಲ್ಪಟ್ಟಿರುವ ಅಂತರ ರಾಷ್ಟ್ರೀ ಅರಬ್ ನಿಯೋಗದವರ ಗೌರವಾರ್ಥವಾಗಿ ಬೆಳಗ್ಗೆ ವಯಸ್ಕರ ಶಿಕ್ಷಣ ಸಮಿತಿಯವರು ಮಾರಂಭವೊಂದನ್ನು ಏರ್ಪಡಿಸಿದ್ದರು. [illegible] ಗಳಾದ ಶಾಂತರಾಜಯ್ಯನವರು ಮತ್ತು [illegible] ಯವರಿಂದ ಪ್ರಾರ್ಥನೆಯಾದನಂತರ, ಸಮಿ ಯ ಅಧ್ಯಕ್ಷರೂ ಮತ್ತು ನಿಯೋಗದ ಸದಸ್ಯ ಆದ ಶ್ರೀ ತಿ. ಭದ್ರಯ್ಯನವರು ಸ್ವಾಗತ ಷಣ ಮಾಡಿ, ಸಾಮಾಜಿಕ ಶಿಕ್ಷಣದಲ್ಲಿ ಮೈ ರು ಸಂಸ್ಥಾನವು ವಹಿಸುತ್ತಿರುವ ಪಾತ್ರವ ವಿವರಿಸಿದರು

ನಿಯೋಗದ ನಾಯಕರೂ, ಬೀರೂಟ್‌ನಲ್ಲಿ [illegible] ಕದ ವಿಶ್ವವಿದ್ಯಾಲಯದ ವಿದ್ಯಾ ಇಲಾಖೆ ಮುಖ್ಯಾಧಿಕಾರಿಗಳೂ ಆದ ಡಾ|| ಹಬೀಬ್ [illegible] ಯವರು ತಮ್ಮ ಸಹೋದ್ಯೋಗಿಗಳ ವಾಗಿ ಸತ್ಕಾರಕ್ಕಾಗಿ ಧನ್ಯವಾದವನ್ನು ಹೇಳಿ ಸಂಸ್ಥಾನದಲ್ಲಿ ನಡೆಯುತ್ತಿರುವ ಶಿಕ್ಷಣ ಪ್ರ ರ ಕಾರ್ಯಕ್ರಮದ ಬಗ್ಗೆ ಮೆಚ್ಚಿಗೆಯನ್ನು ವ್ಯಕ್ತ ಪಡಿಸಿದರು. ೨೦ನೇ ಶತಮಾನವನ್ನು ಸಾಮಾ ಪ್ರಜೆಯ ಯುಗವೆಂದು ಕರೆಯಲಾಗುತ್ತಿದೆ ದೂ, ಸಮಾಜದಲ್ಲಿರುವ ಪಿಡುಗುಗಳನ್ನು ವಾರಿಸಲು ವಿದ್ಯಾ ಪ್ರಸಾರವೇ ಅತ್ಯಂತ ಪ್ರ ಖ್ಯವಾದ ಸಾಧನವೆಂದೂ ಅವರು ನುಡಿದು, ಗ್ರಾಮಾಂತರಗಳಲ್ಲಿ ವಿಶೇಷವಾಗಿ ಹರಡಿರುವ ಜ್ಞಾನ, ಆಲಸ್ಯ, ದಾರಿದ್ರ್ಯ ಮುಂತಾದುವ ನಿವಾರಿಸಲು [illegible] ದೇಶಿಂದು ಕೋರಿದರು

ಡಾ|| ಎಂ. ಸಿದ್ದಲಿಂಗಯ್ಯನವರು [illegible] ನಲ್ಲಿ ವಯಸ್ಕರ [illegible] ವಿದ್ಯಾಭ್ಯಾಸಕ್ಕೆ [illegible] ಮ ತಿಳಿಸಿ, ಮೈಸೂರು [illegible] ಯು ನಡೆಸುತ್ತಿರುವ ಕೆಲಸಕಾರ್ಯಗಳನ್ನು ಪಿಸಿದರು.

ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಜಿ. ಸೂರ್ಯನಾರಾಯಣರಾಯರಿಂದ ವಂದ ನೆಯಾದನಂತರ ರಾಷ್ಟ್ರಗೀತೆಯೊಂದಿಗೆ ರಂಭವು ಮುಗಿಯಿತು.

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ [illegible]

ನಗರದಲ್ಲಿರುವ [illegible] ಭಾರತೀಯ ವಿದ್ಯಾ ಪರಿಷತ್ತಿನ [illegible] ನಾಳೆ ಮಧ್ಯಾಹ್ನ ೩ ಗಂಟೆಗೆ [illegible] ಯುತ್ತದೆಂದೂ, ಸದಸ್ಯರೆಲ್ಲರೂ ಬರಬೇಕೆಂ ಸೂಚಿಸಲಾಗಿದೆ

೨೯ ರಿಂದು ಚಿನ್ನದ ಗಣಿಗಳ ರಾಷ್ಟ್ರೀಕರಣ

ಕೇಂದ್ರದಿಂದ ಅಗತ್ಯ ಸಹಾಯದ ನಿರೀಕ್ಷೆ

ಬೆಂಗಳೂರು ೨೨

ಕೋಲಾರದ ಚಿನ್ನದ ಗಣಿಗಳನ್ನು ಇದೇ ತಿಂಗಳು ೨೯ರಂದು ರಾಷ್ಟ್ರೀಕರಣ ಮಾಡಲಾಗುತ್ತದೆ. ಅವನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳುವ ಸಂಬಂಧವಾಗಿ ಸಮಾರಂಭವೊಂದನ್ನು ನಡೆಸಲಾಗುವುದು. ಸಂಸ್ಥಾನ ಪುನರ್ವಿಂಗಡಣಾ ಇಲಾಖೆಯ ಕಾರ್ಯದರ್ಶಿ ಶ್ರೀ ಎಸ್. ಮರಿಸಿದ್ದಯ್ಯನವರನ್ನು ಗಣಿ ಆಡಳಿತ ಸಮಿತಿಯ ಉಪಾಧ್ಯಕ್ಷರನ್ನಾಗಿ ನೇಮಿಸಲು ಸರ್ಕಾರದವರು ನಿರ್ಧರಿಸಿರುವರೆಂದು ತಿಳಿದುಬಂದಿದೆ

ಗಣಿ ಕೆಲಸಗಳಲ್ಲಿ ಜಾನ್ ಟೇಲರ್ ಕಂಪೆನಿಯವರ ತಾಂತ್ರಿಕ ಸಲಹೆ ಪಡೆಯುವ ಬಗ್ಗೆ ಸಂಧಾನ ನಡೆಯುತ್ತಿದೆ

ಕಂಪೆನಿಗೆ [illegible] ಲಕ್ಷ ರೂ. ಪರಿಹಾರವನ್ನು ಕೊಡಬೇಕಾಗುವುದಲ್ಲದೆ [illegible] ಲಕ್ಷ ರೂ. ಆಸ್ತಿಯನ್ನು ಹಿಂದಿರುಗಿಸಲೂ ನಿರ್ಧರಿಸಲಾಗಿದೆ. ಕೇಂದ್ರ ಸರ್ಕಾರದವರು ಈ ಬಗ್ಗೆ ಅಗತ್ಯವಾದ ಸಹಾಯ ಕೊಡುವರೆಂದು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರು ತಿಳಿಸಿ, ಗಣಿಗಳ ರಾಷ್ಟ್ರೀಕರಣದ ಬಗ್ಗೆ ತೊಂದರೆಯೇನೂ ಇಲ್ಲವೆಂದು ಹೇಳಿದ್ದಾರೆ

ಬೀದಿಗಳಲ್ಲಿ ಅಂಧಕಾರವನ್ನು ಪೌರಸಭೆಯವರು ತಪ್ಪಿಸುವರೇ ?

ವಿದ್ಯುಚ್ಛಕ್ತಿ ದರಗಳ ಪುನರ್ವಿಮರ್ಶೆಯ ಪರಿಣಾಮವಾಗಿ ನಗರದ ಬೀದಿಗಳಲ್ಲಿ ಉರಿಯುವ ದೀಪಗಳ ಕಾಲವನ್ನು ಪೌರಸಭೆಯವರು [illegible] ಸಂಜೆ ೭ ರಿಂದ ಬೆಳಗ್ಗೆ ೫ ಗಂಟೆವರೆಗೆ ದೀಪಗಳು ಉರಿಯುವಂತೆ [illegible] ವಾಗಿ ತಿಳಿದುಬಂದಿದೆ. ಹಗಲು ಕಡಿಮೆಯಾಗಿ, ಸಂಜೆ ಆರು ಗಂಟೆಯೊಳಗೆ ಕತ್ತಲೆಯಾಗುತ್ತಿರುವ ಈ ಕಾಲದಲ್ಲಿ ಈ ಏರ್ಪಾಡಿನಿಂದ ಪುರಜನರಿಗೆ ಎಷ್ಟು ತೊಂದರೆಯಾಗುತ್ತಿರುವುದೆಂಬುದನ್ನು ಹೇಳಬೇಕಿಲ್ಲ. ಅದರಲ್ಲೂ ಮಳೆ, ಹೊಗೆ ಮತ್ತು ಗಾಳಿಗಳ ಸಮಯದಲ್ಲಿ ಈ ತೊಂದರೆಯು ಇನ್ನೂ ವಿಪರೀತವಾಗಿ ಆಗುತ್ತಿದೆ. ಸಂಜೆ ೭ ಗಂಟೆಗೆ ಬೀದಿ ದೀಪಗಳು ಹತ್ತುವವರೆಗೆ ಕತ್ತಲಲ್ಲಿ [illegible] ಜನರಿಗೆ ಉಂಟಾಗುತ್ತಿರುವ ತೊಂದರೆಯನ್ನು ತಪ್ಪಿಸಲು ಪೌರಸಭೆಯವರು ಸಂಜೆ ೬ ಗಂಟೆಯಿಂದಲೇ ದೀಪಗಳನ್ನು ಹಚ್ಚಲು ಏರ್ಪಡಿಸಬೇಕು. ಅವಶ್ಯವಾದರೆ ಬೆಳಗ್ಗೆ ೪ ಅಥವಾ ೪|| ಗಂಟೆಗೆ ನಿಲ್ಲಿಸಬಹುದು

ಗ್ರಾಮಾಂತರಗಳಲ್ಲಿ ಸಹಾ. ಬೆಳದಿಂಗಳ ಕಾಲವನ್ನು ಅನುಸರಿಸಿ ಬೀದಿಯ ಸೀಮೆಯೆಣ್ಣೆ ದೀಪಗಳನ್ನು ಉರಿಸಲು ಪೌರಸಭೆಗಳು, ಪಂಚಾಯಿತಿಗಳು ಏರ್ಪಾಡು ಮಾಡುತ್ತವೆ. ಹೀಗಿರುವಲ್ಲಿ ನಗರದ ಪೌರಸಭೆಯವರು ಅಗತ್ಯವಾದ ಕಾಲದಲ್ಲಿ ದೀಪಗಳು ಉರಿಯುವಂತೆ ಏರ್ಪಡಿಸಿ ಮೂಲಭೂತವಾದ ಕರ್ತವ್ಯವನ್ನು ನಿರ್ವಹಿಸಿ ಪ್ರಜೆಗಳ ತೊಂದರೆಯನ್ನು ನಿವಾರಿಸುವರೆಂದು ಆಶಿಸಲಾಗಿದೆ. — ಪುರವಾಸಿ

ತೂತ್ತುಕುಡಿ ಎಕ್ಸ್‌ಪ್ರೆಸ್ ರೈಲು ಅನಾಹುತ

ಸೇತುವೆ ಕುಸಿದುದರಿಂದ ಎಂಜಿನ್ ಮತ್ತು ಗಾಡಿಗಳು ನೀರಿನ ಪಾಲು

[illegible]

ಮದ್ರಾಸಿನಿಂದ ತೂತ್ತುಕುಡಿಗೆ ಹೋಗುತ್ತಿದ್ದ ತೂತ್ತುಕುಡಿ ಎಕ್ಸ್‌ಪ್ರೆಸ್ ರೈಲು ಮಧ್ಯಾಹ್ನ [illegible] ನಿಲ್ದಾಣಗಳ ನಡುವೆ [illegible] ಗಂಟೆಯಲ್ಲಿ [illegible] ನದಿಯ ಸೇತುವೆ ಮೇಲೆ ಹೋಗುತ್ತಿದ್ದಾಗ ಘೋರ ಅನಾಹುತಕ್ಕೆ ಒಳಗಾಗಿ ೧೫೦ ಜನರು ಮಡಿದು, ೭೦ ಮಂದಿ ಪ್ರಯಾಣಿಕರಿಗೆ ಗಾಯವಾದುದಾಗಿ ವರದಿಯಾಗಿದೆ. ಗಾಯಗೊಂಡವರಲ್ಲಿ ೨೭ ಮಂದಿ ಮಹಿಳೆಯರೂ ಇರುವರು. ಡ್ರೈವರ್ ಮತ್ತು ಇಬ್ಬರು ಫೈರ್‌ಮನ್ನುಗಳೂ ಮೃತಪಟ್ಟಿರುತ್ತಾರೆ. ಗಾರ್ಡುಗಳು ಸುರಕ್ಷಿತವಾಗಿದ್ದಾರೆ.

ವಿಪರೀತ ಮಳೆ ಮತ್ತು ನದಿಯಲ್ಲಿ ಭಾರಿ ಪ್ರವಾಹ ಬಂದು ದಡವು ಕುಸಿದಾಗ ಸಣ್ಣ ಸೇತುವೆಯು [illegible] ದಡವನ್ನು ಸೇರಿದ್ದ ಇಂಜನ್ನು ಮತ್ತು ೭ ಗಾಡಿಗಳು ನದಿಗೆ ಬಿದ್ದುವು. ಒಟ್ಟು ೧೩ ಗಾಡಿಗಳಿದ್ದ ರೈಲಿನ ಹಿಂಭಾಗದಲ್ಲಿದ್ದವರು ಸುರಕ್ಷಿತವಾಗಿರುತ್ತಾರೆ. ಪ್ರವಾಹದ ಪರಿಸ್ಥಿತಿಯಿಂದ ರಕ್ಷಣಾ ಕಾರ್ಯಗಳಿಗೆ ಅಡ್ಡಿಯಾಗಿದೆ. ನೀರಿನಲ್ಲಿ ಬಿದ್ದಾಗ [illegible] ತರಗತಿಯ ಮೂರು ಗಾಡಿಗಳು [illegible].

೬೦ ಜನ ಗಾಯಗೊಂಡವರನ್ನು ತಿರುಚಿ ಆಸ್ಪತ್ರೆಗೆ ಸೇರಿಸಲಾಗಿದೆ

ಉತ್ತರ ಭಾರತದಿಂದ ಯಾತ್ರೆಗಾಗಿ ಹೊರಟಿದ್ದ ೬೩ ಜನ ಪ್ರಯಾಣಿಕರು ಮುಂದುಗಡೆ ಗಾಡಿಯಲ್ಲಿದ್ದರು. ಬೆಂಗಳೂರಿನ [illegible] ಸೇಟ್ ಎಂಬುವರು ಮೃತರಾಗಿದ್ದಾರೆ.

ದಕ್ಷಿಣ ಭಾರತದ ಪ್ರಖ್ಯಾತ ಸಂಗೀತ ವಿದುಷಿ ಸಾವಿತ್ರಿ ಗಣೇಶನ್‌ರವರು ಅಪಘಾತದಲ್ಲಿ ಮಡಿದಿದ್ದಾರೆ.

ತಿರುಚಿರಾಪಳ್ಳಿ ಕಡೆಗೆ ಹೋಗುವ ರೈಲು ಸಂಚಾರವನ್ನು ಈಗ ಮೀಟರ್‌ಗೇಜ್ [illegible] ಗಿಸಲಾಗಿದೆ

ಸಾವುನೋವುಗಳ ಸಂಖ್ಯೆಯು ೨೦೦ಕ್ಕಿಂತ ಹೆಚ್ಚಿರಬಹುದೆಂದು [illegible] ರುವರು.

ಪರಿಹಾರದ ರೈಲೊಂದು [illegible] ಮತ್ತು [illegible] ರುವುದರಿಂದ ಮುಖ್ಯ [illegible] ದರಲ್ಲಿರುವ ಗಾಯಗೊಂಡವರ [illegible] ದು ವೈದ್ಯಕೀಯ ಸಹಾಯದ ಗಾಡಿಯು ದಾರಿಯಲ್ಲಿರುವುದು ಮತ್ತು ತಿರುಚ್ಚಿ ನಡುವೆ [illegible] ಕೊಚ್ಚಿ ಹೋಗಿದೆ. ಅಲ್ಲಿ ಸಂಚಾರಕ್ಕೆ ಅನುಕೂಲವಾಗಿಲ್ಲವೆಂದು ತಿಳಿಸಲಾಗಿದೆ.

ಅಪಘಾತದ ಬಗ್ಗೆ ನಾಳೆ ದಿನ ತನಿಖೆ ನಡೆಸಲಾಗುವುದು. ೬ ಅಡಿ ನೀರು ಹರಿಯುತ್ತಿರುವುದರಿಂದ ಪ್ರಯಾಣಿಕರನ್ನು ಬೇರೆ ರೀತಿ ಸಾಗಿಸಲು ದುಸ್ತರವಾಗಿದೆಯೆಂದು ರೈಲ್ವೆ ಮಂತ್ರಿಯವರು ಲೋಕಸಭೆಯಲ್ಲಿ ನೆನ್ನೆ ತಿಳಿಸಿದರು. ಒಟ್ಟು ೭ ಗಾಡಿಗಳಲ್ಲಿ ೬೦೦ ಜನರು ಕೂಡಲು ಅವಕಾಶವಿದೆ.

೨೧ ವರ್ಷಗಳ ಹಿಂದೆ [illegible] ಬಳಿ ಇಂಥದೇ ಘೋರವಾದ ಅನಾಹುತವು ಸಂಭವಿಸಿತ್ತು.

ಸೇತುವೆಯ ದಕ್ಷಿಣ ಭಾಗದಲ್ಲಿ ೭೫ ಅಡಿಯಷ್ಟು ದೊಡ್ಡ ಬಿರುಕು ಬಿಟ್ಟಿತ್ತೆಂದು ಪ್ರಯಾಣಿಕರೊಬ್ಬರು ಹೇಳಿದ್ದಾರೆ

ಆಯುರ್ವೇದ ಕಾಲೇಜಿನ [illegible]

[illegible]

ಬೆಂಗಳೂರು ೨೨

ಮೈಸೂರಿನಲ್ಲಿರುವ ಆಯುರ್ವೇದ [illegible] ಕಲ್ಪಿಸಲಾಗಿದೆ. [illegible] ಆರೋಗ್ಯ ಮಂತ್ರಿ ಶ್ರೀ ಎ. ವಿ. [illegible] ತಿಳಿಸಿ, [illegible] ಆಯುರ್ವೇದ ವಿದ್ಯಾರ್ಥಿಗಳಿಗೆ [illegible] ಶಿಕ್ಷಣವನ್ನು ಕೊಡಬೇಕಾಗುವುದೆಂದು ಹೇಳಿದರು.

○ಶ್ರೀ ಕೆ. ಎ. [illegible] ಪ್ರಮಾಣ ವಚನವನ್ನು [illegible] ವಹಿಸಿಕೊಂಡರು.

○ಬೇಲೂರು [illegible] ಯೆಂದಿರಾದ ಶ್ರೀ [illegible] ಬೆಳಗ್ಗೆ ತಮ್ಮ ಗೃಹದಲ್ಲಿ [illegible] ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ೮೦ ವರ್ಷವಾಗಿತ್ತು.

ಕಛೇರಿಗಳ ಕೆಲಸದ ವೇಳೆ ಬೆಳಗ್ಗೆ ೧೦|| [illegible] ಸಂಜೆ [illegible]

ಬೆಂಗಳೂರು ೨೨

ಸಂಸ್ಥಾನದ ಸರ್ಕಾರಿ ಕಛೇರಿಗಳಲ್ಲಿ ಕೆಲಸದ ವೇಳೆಯನ್ನು ಇನ್ನು ಮೇಲೆ ಬೆಳಗ್ಗೆ ೧೦ ರಿಂದ ಸಂ ಜೆ ೫ ಗಂಟೆವರೆಗೆ [illegible] ೧೦ ೩೦ ರಿಂದ [illegible] ಲ್ಲಿ ಅರ್ಧ ಗಂಟೆ ವಿರಾಮವಿರುವುದು.

ಮೈಸೂರು [illegible]

[illegible] ನ್ಯಾಯಾಧಿಕಾರ ಸಂಸ್ಥೆ

ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರ [illegible] ಸಂಸ್ಥೆ [illegible] ಅಥವಾ [illegible] ಗಲ್ಲ, [illegible] ಹೇಳಿದ್ದಾರೆ.

ಸಂತಾಪ ಸೂಚಕ ಸಭೆ

ದಿವಂಗತ [illegible] ಸ್ವಾಮಿಯವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲು ನಾಳೆ ಬೆಳಗ್ಗೆ ೯ ಗಂಟೆಗೆ [illegible] ವ [illegible] ಸಂಸ್ಕೃತ ಪಾಠಶಾಲೆಯಲ್ಲಿ [illegible] ಸಭೆಯನ್ನು [illegible] ಏರ್ಪಡಿಸಿರುವರು. [illegible] ಮಠದ ಶ್ರೀ ಶ್ರೀ ಶಿವರಾತ್ರಿ ರಾಜೇಂದ್ರ ಸ್ವಾಮಿಗಳು ಅಧ್ಯಕ್ಷತೆ ವಹಿಸುವರು.

ಗೋಸಂವರ್ಧನ ಸಪ್ತಾಹದಲ್ಲಿ ಬಹುಮಾನ ವಿನಿಯೋಗ

ಮೈಸೂರು ೨೩

ನಗರದ ಪುರಭವನದಲ್ಲಿ [illegible] ಲಾದ ಗೋಸಂವರ್ಧನ ಸಪ್ತಾಹದ ಅಂಗವಾಗಿ ಬಹುಮಾನ ವಿನಿಯೋಗ ಸಮಾರಂಭವು ನಿನ್ನೆ ದಿನ ನಡೆಯಿತು. ಪೌರಸಭಾ [illegible] ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಸುಧಾರವರಿಂದ ಪ್ರಾರ್ಥನೆಯಾದ ನಂತರ ಡಾ|| ನರಸಿಂಹಮೂರ್ತಿಯವರು ಸ್ವಾಗತ ಭಾಷಣ ಮಾಡಿ ಸಪ್ತಾಹದ ಉದ್ದೇಶವನ್ನು ವಿವರಿಸಿದರು. ಶ್ರೀ ಎಂ. ಯಾದವೇಂದ್ರಯ್ಯನವರು ಭಾಷಣ ಮಾಡಿ ಭರತಖಂಡದಲ್ಲಿ ವೇದಗಳ ಕಾಲದಿಂದಲೂ ಗೋಮಾತೆಗೆ ಇರುವ ಪ್ರಾಮುಖ್ಯತೆಯನ್ನು ವಿವರಿಸಿ ಮಾನವನ ಜೀವನಕ್ಕೆ ಅತ್ಯಗತ್ಯವಾದ ಗೋವುಗಳನ್ನು ಸರಿಯಾಗಿ ಪಾಲನೆ ಮಾಡುವುದರಲ್ಲಿ ಸಕಲರೂ ಬದ್ಧಕಂಕಣರಾಗಬೇಕೆಂದು ಸೂಚಿಸಿದರು.

ದನಗಳು ಮತ್ತು ಇತರ ಪ್ರಾಣಿಗಳ ಅಭಿವೃದ್ಧಿಗಾಗಿ ಕಳೆದ [illegible] ವರ್ಷಗಳಿಂದಲೂ ಭಾರತ ಸರ್ಕಾರದವರು ಕೈಗೊಂಡಿರುವ ಕಾರ್ಯಕ್ರಮಗಳನ್ನು ಡಾ|| ಶೇಷಗಿರಿರಾಯರು ವಿವರಿಸಿದರು. ಶ್ರೀಮತಿ ಲೀಲಾವತಿ ಅಂಜನಪ್ಪನವರು ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಗೋಸಂರಕ್ಷಣೆಯ ಅವಶ್ಯಕತೆಯನ್ನು ಹೃದಯಂಗಮವಾಗಿ ವಿವರಿಸಿದರು. ಶ್ರೀ ಬಿ. ಲಿಂಗಯ್ಯನವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಜೂಜಾಟಕ್ಕೆ ಶಿಕ್ಷೆ

ಕಳೆದ ಸೆಪ್ಟೆಂಬರ್ ೨ನೇ ತಾರೀಖಿನ ರಾತ್ರಿ ವಿಲ್ಸನ್ ಹೊಸಹಳ್ಳಿಯ ಬೋರಯ್ಯನ ಅಂಗಡಿಯಲ್ಲಿ ಸಂಜೀಗೌಡ ಮತ್ತು ಇತರ [illegible] ಜನರು ಜೂಜಾಡುತ್ತಿದ್ದುದಕ್ಕಾಗಿ ನಗರದ ೨ನೇ ನ್ಯಾಯಾಧೀಶರು ನಿನ್ನೆ ಆರೋಪಿಗಳಿಗೆ ತಲಾ [illegible] ರೂ. ಜುಲ್ಮಾನೆ ಮತ್ತು ಕೋರ್ಟು ಏಳುವವರೆಗೆ ಸಜಾ ಶಿಕ್ಷೆಯನ್ನೂ, ಸ್ಥಳವನ್ನು ಕೊಟ್ಟಿದ್ದಕ್ಕಾಗಿ ಅಂಗಡಿ ಬೋರಯ್ಯನಿಗೆ ೩೦ ರೂ. ಜುಲ್ಮಾನೆಯನ್ನೂ ವಿಧಿಸಿರುತ್ತಾರೆ.

ಅರ್ಧ ವೆಚ್ಚದಲ್ಲಿ ರಸ್ತೆ ನಿರ್ಮಾಣ

ಸ್ಥಳೀಯವಾಗಿ ದೊರಕುವ ಸಾಮಗ್ರಿ ಮತ್ತು ಮಣ್ಣಿನ ಉಪಯೋಗದಿಂದ ಅರ್ಧ ವೆಚ್ಚದಲ್ಲಿ ಪಕ್ಕಾ ರಸ್ತೆಗಳನ್ನು ನಿರ್ಮಾಣ ಮಾಡುವ ಒಂದು ಹೊಸ ವಿಧಾನವನ್ನು ಕೇಂದ್ರ ರಸ್ತೆ ಸಂಶೋಧನಾ ಶಾಲೆಯವರು ಕಂಡುಹಿಡಿದಿರುವರು. ೧೦ ಅಡಿ ಅಗಲದ ಒಂದು ಮೈಲಿ ರಸ್ತೆಗೆ ತಗಲುವ [illegible] ಸಾವಿರ ರೂ. ವೆಚ್ಚವು ಹೊಸ ವಿಧಾನದಿಂದ ೧೨,೦೦೦ ರೂ.ಗೆ ಇಳಿಯುವುದೆಂದು ಹೇಳಲಾಗಿದೆ. ಹೊಸ ವಿಧಾನವನ್ನು ಅನುಸರಿಸುವುದರಿಂದ ಕೋಟಿಗಟ್ಟಲೆ ಹಣವನ್ನು ಉಳಿಸಬಹುದೆಂದು ಶಾಲೆಯ ಡೈರೆಕ್ಟರ್ ಮೊಹ್ತಾರವರು ತಿಳಿಸಿರುತ್ತಾರೆ.

ಪ್ರವಾಹದಲ್ಲಿ ಬಸ್ಸು ಮಗುಚಿ ಇಬ್ಬರು ಸ್ತ್ರೀಯರ ಮರಣ

ವಿಂಧ್ಯಮೂರು ಎಂಬಲ್ಲಿಂದ ನೆಲ್ಲೂರಿಗೆ ಕಳೆದ ಮಂಗಳವಾರ ಬರುತ್ತಿದ್ದ ಬಸ್ಸೊಂದು ಮಾರ್ಗದಲ್ಲಿ ಪ್ರವಾಹ ಬಂದ ಒಂದು ನದಿಯ ಮೇಲೆ ಹಾಯ್ದು ಹೋಗಲು ಯತ್ನಿಸಿ ತಲೆಕೆಳಗಾಯಿತೆಂದೂ, ಒಬ್ಬ ಗರ್ಭಿಣಿ ಮತ್ತು ಆಕೆಯ [illegible] ಇವರಿಬ್ಬರೂ ಕೊಚ್ಚಿಹೋದರೆಂದೂ ವರದಿಯಾಗಿದೆ. ಉಳಿದವರು ಬಸ್ಸಿನಲ್ಲೇ [illegible] ಗಂಟೆಗಳ ತನಕ ಇದ್ದು ಪ್ರವಾಹ ಇಳಿದ ಮೇಲೆ [illegible] ಎಂದರೆಂದು ಹೇಳಲಾಗಿದೆ.

ಪೋರ್ಟ್ ಸೈಯದ್ದಿಗೆ ವಿಶ್ವಸಂಸ್ಥೆ ಪಡೆಗಳ ಪ್ರವೇಶ

ವಿಶ್ವಸಂಸ್ಥೆಯ ನಾರ್ವೆ ಪಡೆಯು ಪೋರ್ಟ್ ಸೈಯದ್ದಿನ ಬ್ರಿಟಿಷ್ ಆಕ್ರಮಿಸಿರುವ ಪ್ರದೇಶಕ್ಕೆ ಹೋಯಿತೆಂದು ವರದಿಯಾಗಿದೆ. ಇದರಿಂದ ಬ್ರಿಟಿಷ್ ಪಡೆಗಳು ವಾಪಸು ಹೋಗಬೇಕೆಂಬ ಅರ್ಥವಲ್ಲವೆಂದು ಅಲ್ಲಿರುವ ಬ್ರಿಟಿಷ್ ಪ್ರತಿನಿಧಿ ಜನರಲ್ ಸ್ಟಾಕ್‌ವೆಲ್‌ರವರು ತಿಳಿಸಿದ್ದಾರೆ.

ಈಜಿಪ್ಟಿನಿಂದ ಆಂಗ್ಲೋ-ಫ್ರೆಂಚ್ ತಂಡಗಳ ವಾಪಸಾತಿ ಆರಂಭ

ವಿಶ್ವಸಂಸ್ಥೆಯ ನಿರ್ಣಯಗಳಿಗೆ ಅನುಸಾರವಾಗಿ ಈಜಿಪ್ಟಿನಿಂದ ತಮ್ಮ ಪಡೆಗಳ ಪೈಕಿ ಹಲವು ತಂಡಗಳನ್ನು ಈಗಾಗಲೇ ವಾಪಸು ಕರೆಸಿಕೊಂಡುದಾಗಿಯೂ ಅಥವಾ ಕರೆಸಿಕೊಳ್ಳಲಿರುವುದಾಗಿಯೂ ಬ್ರಿಟನ್ ಫ್ರಾನ್ಸ್ ಮತ್ತು ಇಸ್ರೇಲುಗಳು ನೆನ್ನೆ ತಿಳಿಸಿವೆ. ಒಂದು ಬ್ರಿಟಿಷ್ ದಳವನ್ನು ತಕ್ಷಣವೇ ವಾಪಸು ಕರೆಸುವುದಾಗಿ ಬ್ರಿಟನ್ನು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಯವರಿಗೆ ತಿಳಿಸಿದೆ. ಈಜಿಪ್ಟಿನ ಕಾರ್ಯಾಚರಣೆಯಲ್ಲಿ ಉಪಯೋಗಿಸಲ್ಪಟ್ಟ ಫ್ರೆಂಚ್ ಪಡೆಗಳ [illegible] ಹಿಂದಕ್ಕೆ ಕಳಿಸಲ್ಪಟ್ಟಿದೆಯೆಂದು ಫ್ರಾನ್ಸ್ ತಿಳಿಸಿದೆ. ಈಜಿಪ್ಟಿನ ಯುದ್ಧ ರಂಗದಿಂದ ತನ್ನ ಸೈನ್ಯಗಳನ್ನು ಸ್ವಲ್ಪ ದೂರದವರೆಗೆ ವಾಪಸು ಕರೆಸಿಕೊಂಡಿರುವುದಾಗಿ ಇಸ್ರೇಲು ಹೇಳಿದೆ.

ಪುಸ್ತಕದ ಬಗ್ಗೆ ಗಲಭೆಯಲ್ಲಿ ಪಾಕಿಸ್ತಾನದ ಪಾತ್ರ

'ಮಹಾನ್ ಗುರುಗಳು' ಎಂಬ ಪುಸ್ತಕದ ಸಂಬಂಧವಾಗಿ ಉತ್ತರ ಭಾರತದ ಹಲವಾರು ಕಡೆಗಳಲ್ಲಿ ಗಲಭೆಗಳು ನಡೆದುವಷ್ಟೆ. ಅಂತಹ ಗಲಭೆಗಳಲ್ಲಿ ಮುಸ್ಲಿಮರು ಹಿಂಸಾತ್ಮಕ ಪ್ರದರ್ಶನಗಳನ್ನು ನಡೆಸಿದರೆಂದೂ, ಭಾರತಕ್ಕೆ ಬಂದಿದ್ದ ಪಾಕಿಸ್ತಾನೀಯರು ಅದರಲ್ಲಿ ಭಾಗವಹಿಸಿದ್ದರೆಂದೂ [illegible] ಲೋಕಸಭೆಯಲ್ಲಿ ತಿಳಿಸಿರುತ್ತಾರೆ.

ಭೂದಾನ ಕೆಲಸಕ್ಕೆ ಗಾಂಧಿ ಸ್ಮಾರಕ ನಿಧಿ ಸಹಾಯವಿಲ್ಲ

ಪಳನಿಯಲ್ಲಿ ನಡೆದ ಅಖಿಲ ಭಾರತ ಸರ್ವ ಸೇವಾ ಸಂಘದ ಕಾರ್ಯಕಾರಿ ಮಂಡಲಿಯು, ಬರುವ ಜನವರಿಯಿಂದ ಭೂದಾನ ಕಾರ್ಯಕ್ರಮಕ್ಕೆ ಗಾಂಧಿ ಸ್ಮಾರಕ ನಿಧಿ [illegible] ದ್ರವ್ಯವಾಗಿ ತೆಗೆದುಕೊಳ್ಳಬಾರದೆಂದು ನೆನ್ನೆ ನಿರ್ಧರಿಸಿತು. ಭೂದಾನ ಚಳವಳಿಯನ್ನು ನಡೆಸುತ್ತಿರುವ ಪ್ರಾಂತೀಯ ಭೂದಾನ ಸಮಿತಿಗಳನ್ನು ವಿಸರ್ಜಿಸಲೂ ನಿರ್ಧರಿಸಲಾಯಿತು. ಸಣ್ಣಪುಟ್ಟ ಸಮಿತಿಗಳನ್ನೂ ವಿಸರ್ಜಿಸಲಾಗುವುದು. ಹಿಂದಿನ ದಿನ ಆಚಾರ್ಯ ವಿನೋಬಾ ಭಾವೆಯವರು ಸಮ್ಮೇಳನದಲ್ಲಿ ಭಾಷಣ ಮಾಡಿದನಂತರ ಈ ನಿರ್ಧಾರವನ್ನು ಕೈಗೊಳ್ಳಲಾಯಿತು.

ಸೂಯೆಜ್ ಕಾಲುವೆ ರಿಪೇರಿ ವೆಚ್ಚ ಬ್ರಿಟನ್-ಫ್ರಾನ್ಸ್ ವಹಿಸಲಿ

ವಿಶ್ವಸಂಸ್ಥೆಯ [illegible] ರಾಷ್ಟ್ರಗಳ [illegible] ಸಲಹಾ ಸಮಿತಿಯಲ್ಲಿ ಭಾರತವು ಸಲಹೆಯೊಂದನ್ನು ಮಂಡಿಸಿ ಸೂಯೆಜ್ ಕಾಲುವೆಯ ರಿಪೇರಿ ವೆಚ್ಚವನ್ನು ಪೂರ್ಣವಾಗಿ ಬ್ರಿಟನ್ ಮತ್ತು ಫ್ರಾನ್ಸ್‌ಗಳು ವಹಿಸಬೇಕೆಂದು ಸೂಚಿಸಿದೆ. ಈ ಕೆಲಸಕ್ಕೆ ೪ ಕೋಟಿ ಡಾಲರ್ ಹಣ ಬೇಕಾಗುವುದೆಂದು ಹೇಳಲಾಗಿದೆ.

೧,೩೮೦ ಮಂದಿ ನಿರುದ್ಯೋಗೀ ಪ್ರವೀಣರು

ಭಾರತದಲ್ಲಿ ೧,೩೮೦ ಮಂದಿ ವಿಜ್ಞಾನಿಗಳು ಮತ್ತು ಪಾರಿಭಾಷಿಕ ಪ್ರವೀಣರು ನಿರುದ್ಯೋಗಿಗಳಾಗಿರುವರೆಂದು ಕೇಂದ್ರ ವೈಜ್ಞಾನಿಕ ಮತ್ತು ಕೈಗಾರಿಕಾ ಸಂಶೋಧನಾ ಮಂಡಲವು ಸೂಚಿಸಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವಾರ್ತೆ ೭-೧೫ ಮತ್ತು [illegible] ಎಸ್. [illegible] ನಾದಸ್ವರ ೭-೪೦ [illegible] ೮ ೩೦ ಆರ್. ವೇದವಲ್ಲಿ-ಸಂಗೀತ [illegible] ಬಿ. [illegible] ಸಂಗೀತ [illegible] ೧ ರಿಂದ [illegible] ಕೃಷ್ಣ-ರಾಯರ [illegible] ಚಿತ್ರ ಸಂಗೀತ [illegible] ಪಾಶ್ಚಿಮಾತ್ಯ ಸಂಗೀತ [illegible] ಗೀತ [illegible] ಕಥೆಗಳು ಕನ್ನಡ ಭಾಷಣ [illegible] ಎರಡು [illegible] ನಾಟಕಗಳು [illegible] ಪ್ರಚಲಿತ ವಿಷಯ ಭಾಷಣ [illegible] ರೇಡಿಯೋ [illegible] ದಿವಸದ [illegible] ಕಾರ್ಯಕ್ರಮ [illegible]

ಹಾಸನ ಜಿಲ್ಲಾ ಬೋರ್ಡು ಪ್ರೌಢ ಶಾಲೆಗಳ ಪ್ರಥಮ ಸಮ್ಮೇಳನ

ಗೊರೂರು ೨೨

ಹಾಸನ ಜಿಲ್ಲಾ ಬೋರ್ಡ್ ಪ್ರೌಢಶಾಲೆಗಳ ನೌಕರರ ಪ್ರಥಮ ಸಮ್ಮೇಳನವು ಕಳೆದ ೧೮ನೇ ತಾರೀಕು ಶ್ರೀ ಗೊರೂರು ರಾಮಸ್ವಾಮಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆದು ಹಾಸನ ಜಿಲ್ಲಾ ಬೋರ್ಡ್ ಪ್ರೌಢಶಾಲೆಗಳ ಸಂಘವೊಂದನ್ನು ಸ್ಥಾಪಿಸಲಾಯಿತು.

ಪ್ರಾರ್ಥನೆ ಮತ್ತು ವ್ಯವಸ್ಥಾಪಕ ಶ್ರೀ ಹರಿಕೃಷ್ಣನ್‌ರವರಿಂದ ಸ್ವಾಗತ ಭಾಷಣಗಳಾದನಂತರ ಇಲ್ಲಿನ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ [illegible] ರಾಮಯ್ಯನವರು ಜಿಲ್ಲಾ ಬೋರ್ಡ್ ಪ್ರೌಢಶಾಲೆಗಳ ಸ್ಥಾಪನೆ ಮತ್ತು ಕಾರ್ಯಚಟುವಟಿಕೆಗಳ ಬಗ್ಗೆ ವರದಿಯನ್ನು ಒಪ್ಪಿಸಿದರು. ಅಧ್ಯಕ್ಷರು ಭಾಷಣ ಮಾಡಿ, ಪ್ರೌಢಶಾಲಾ ಉಪಾಧ್ಯಾಯರು ಮತ್ತು ಇತರ ನೌಕರರು ಸಂಘಟಿತರಾಗಿ ತಮ್ಮ ಕುಂದುಕೊರತೆಗಳನ್ನು ಶಾಂತಿ ಮಾರ್ಗಗಳಲ್ಲಿ ಪರಿಹರಿಸಿಕೊಳ್ಳಬೇಕೆಂದು ತಿಳಿಸಿ ಅವರೊಡನೆ ತಾವು ಸಹಕರಿಸುವುದಾಗಿ ಭರವಸೆಯಿತ್ತರು. ಸಂಘದ ನಿಯಮಾವಳಿಗಳ ಅಂಗೀಕಾರ ಮತ್ತು ಅಧಿಕಾರವರ್ಗದ ಚುನಾವಣೆಯಾದನಂತರ ಕಾರ್ಯದರ್ಶಿ ಶ್ರೀ ಗುರುಬಸಪ್ಪನವರು ವಂದನಾರ್ಪಣೆ ಮಾಡಿದರು.

ಸಮ್ಮೇಳನದಲ್ಲಿ ಮುಂದೆ ಕಂಡ ನಿರ್ಣಯಗಳನ್ನು ಅಂಗೀಕರಿಸಲಾಯಿತು:- ಸ್ಥಳೀಯವಾಗಿ ನೇಮಿಸಲ್ಪಟ್ಟಿರುವ ಅಭ್ಯರ್ಥಿಗಳನ್ನು ಅವರು ಕೆಲಸಕ್ಕೆ ಸೇರಿದಂದಿನಿಂದ ಖಾಯಂ ಮಾಡಬೇಕು, ಜಿಲ್ಲಾ ಬೋರ್ಡು ಪ್ರೌಢಶಾಲಾ ನೌಕರರಿಗೆ ಸರ್ಕಾರಿ ಪ್ರೌಢಶಾಲೆಗಳಂತೆಯೇ ಸಂಬಳ, ಭತ್ಯ ಮುಂತಾದ ಸೌಲಭ್ಯಗಳನ್ನು ಕೊಡಬೇಕು, ಮುಖ್ಯೋಪಾಧ್ಯಾಯರುಗಳನ್ನು ಖಾಯಂ ಮಾಡಿ, ಹೆಚ್ಚಿನ ಸಂಬಳದ ಮಟ್ಟಕ್ಕೆ ಏರಿಸಬೇಕು ಮತ್ತು ನಿವೃತ್ತರಾದವರನ್ನು ನೇಮಿಸುವುದನ್ನು ತಪ್ಪಿಸಬೇಕು. ಇತ್ತೀಚೆಗೆ ನೀಡಿರುವ ತಾತ್ಕಾಲಿಕ ಪರಿಹಾರವನ್ನು ಕೊಡಬೇಕು ಮತ್ತು ಪೆನ್‌ಷನ್ ಪದ್ಧತಿಯನ್ನು ಜಾರಿಗೆ ಕೊಡಬೇಕು.

ಮಾತಿನ ವೇಗದಲ್ಲಿ ಟೈಪ್ ಮಾಡುವ ಯಂತ್ರ

ಫ್ರಾನ್ಸಿನಲ್ಲಿ ಸಧ್ಯದಲ್ಲೇ ಎಲೆಕ್ಟ್ರಾನಿಕ್ ಟೈಪ್‌ರೈಟರನ್ನು ಮಾರಾಟಕ್ಕೆ ಕೊಡಲಾಗುವುದು. ಇದು ಮಾತನಾಡುವಷ್ಟೇ ವೇಗದಲ್ಲಿ ಟೈಪ್ ಮಾಡಬಲ್ಲದು. ಶೀಘ್ರಲಿಪಿ ಯಂತ್ರದ ಕೆಲಸ ಮಾಡುವುದು. ಇದರ ಬೆಲೆ ೪೦೦ ಪೌಂಡು. ಇದು ಅತ್ಯಂತ ವೇಗವಾಗಿ ಬರೆಯಬಲ್ಲ ಯಂತ್ರವೆಂದು ಹೇಳಲಾಗಿದೆ.

Join
GLOBE TUTORIAL COLLEGE
(Sadvidya Patashala, Mysore)
Excellent Coaching for
Inter, P. C. M., Kan., Eng.

Ready For Sale
INTERMEDIATE CHEMISTRY
By D. V. Venkatasubbiah M. Sc.,
(Retd. Asst. Professor of Chemistry)
Contains Answers to Twenty
Question papers of Mysore
University
1952-56—(up-to-date)
Price Rs. 4-00
Publisher.—D. V. K. MURTHY,
Krishnamurthypuram, Mysore
Available at all leading
Book sellers

ಕೋಲಾರ ಖಜಾನೆಯಲ್ಲಿ ೪೨,೦ ರೂ. ಪತ್ತೆಯಿಲ್ಲ

ಕೋಲಾರ ಜಿಲ್ಲೆ [illegible] ಖಜಾನೆ ಈಚೆಗೆ ತಪಾಸಣೆ ನಡೆಸಿದಾಗ ೪೨,೦೦೦ ರೂ. ಗಳ ಕಡಿಮೆ ಬಂದುದಾಗಿ ವರದಿಯಾಗಿದೆ. [illegible] ಕಂಡು ಪರಿಶೀಲಕ ಅಧಿಕಾರಿಗಳಾಗಿ [illegible] ಯುಗಳಲ್ಲದೆ, ಕೈಲಾಸಕ್ಕೆ ತಮ್ಮ [illegible] ರೂಪು ಅರಿಕೆಗಳನ್ನು ಕಳುಹಿಸಲಾಯಿತೆಂದೂ [illegible] ಬರುವುದು ತಡವಾಗಿ [illegible] ಲಗಳನ್ನು ತಪಾಸಣೆ ಮಾಡಲಾಯಿತೆಂದೂ, [illegible] ವರು ವಾಪಸು ಒಂದು [illegible] ಹೊಬಲಗು ಒಳಗೆ ಇಲ್ಲವೆಂದು [illegible] ಎಲ್ಲಾ [illegible] ಗಳನ್ನು ತಪಾಸಣೆ ಮಾಡಿ [illegible] ಸಾವಿರ ರೂ. ಕಡಿಮೆಯಾಗಿದ್ದುದು [illegible] ಯಾಯಿತೆಂದೂ ಹೇಳಲಾಗಿದೆ.

ಈಜಿಪ್ಟಿನ ರೇವುಗಳಲ್ಲಿ ನಾಲ್ಕು ರಾಷ್ಟ್ರಗಳಿಗೆ ನಿಷೇಧ

ಈಜಿಪ್ಟಿನ ರೇವುಗಳಿಗೆ ಬ್ರಿಟನ್, ಫ್ರಾನ್ಸ್, ಇಸ್ರೇಲ್ ಮತ್ತು ಆಸ್ಟ್ರೇಲಿಯಾಗಳ [illegible] ಪ್ರವೇಶವಿಲ್ಲವೆಂದು ಈಜಿಪ್ಟ್ ಸರ್ಕಾರದವರು ಸೂಚಿಸಿರುವರೆಂದು ವರದಿಯಾಗಿದೆ.

ವಿಶ್ವಸಂಸ್ಥೆ ಮುಂದೆ ಜಿಬ್ರಾಲ್ಟರ್ ಪ್ರಶ್ನೆ ಇಲ್ಲ

ಜಿಬ್ರಾಲ್ಟರ್ ಪ್ರಶ್ನೆಯನ್ನು ವಿಶ್ವಸಂಸ್ಥೆಯ ಮುಂದೆ ತರುವ ಅಗತ್ಯವು ಕಂಡುಬಂದಿಲ್ಲವೆಂದೂ, ಈ ಸಮಸ್ಯೆಯ ಇತ್ಯರ್ಥವನ್ನು ಬ್ರಿಟನ್ನಿನೊಡನೆ ನೇರವಾಗಿಯೇ ಮಾಡುವ ಮಾತುಕತೆಗಳ ಮೂಲಕ ಮಾಡಬಹುದಾಗಿ ತಾವು ನಂಬಿರುವುದಾಗಿಯೂ ಸ್ಪೇನ್ ವಿಶ್ವಸಂಸ್ಥೆಯಲ್ಲಿ ತಿಳಿಸಿದೆ.

ದೇವಣ್ಣನವರ ಉಪವಾಸ

ನಂಜನಗೂಡು ಕಪಿಲಾ ಹತ್ತಿ ಗಿರಣಿ ಕಾರ್ಮಿಕರ ಮುಖಂಡರಾದ ಶ್ರೀ ಎಸ್. ದೇವಣ್ಣನವರು ರಾಜಭವನದ ಮುಂಭಾಗದಲ್ಲಿ ಕಳೆದ ಆರು ದಿನಗಳಿಂದ ಉಪವಾಸ ನಡೆಸುತ್ತಿದ್ದಾರೆ. ಅವರ [illegible] ಗಿರುವುದಾಗಿ ತಿಳಿದುಬಂದಿದೆ.

○ ಅಪರಾಧ, ಹಿಂಸೆ ಮತ್ತು ಲಿಂಗ ಭಾವನೆಯನ್ನು ಪ್ರೇರೇಪಿಸುವ ಭಯಾನಕ ಚಿತ್ರ ಸಾಹಿತ್ಯಗಳ ಆಮದಿಗೆ ನಿಷೇಧ ಹಾಕುವ ಮಸೂದೆಯನ್ನು ಲೋಕಸಭೆಯು ನೆನ್ನೆ ಅಂಗೀಕರಿಸಿತು.

ಉತ್ತಮವಾದ ಕಟ್ಟಡದ
ಪ್ಲಾನುಗಳುಮತ್ತು ಬ್ಲೂಪ್ರಿಂ
ಮಾಡಿಕೊಡುವುದಲ್ಲದೆ ಮತ್ತು ಸಿಮೆಂಟ್
ಸಹಾಯ ಎಸ್ಟಿಮೇಟ್ ಮಾಡಿಕೊಡುವುದ
ಗಾಯತ್ರಿ ಟಾಕೀಸ್ ಎದುರು
[illegible] ಅಂಗಡಿಯಲ್ಲಿ
[illegible]
ಡಿಸೈನರ್ ಮತ್ತು ಲೈಸೆನ್ಸ್ [illegible]
ಇವರಲ್ಲಿ ವಿಚಾರಿಸಿ

ರುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮ
ನೀಲಗಿರಿ ಬಟರ್
[illegible]
ಸ್ಪೆಷಲ್ ಪೊಟ್ಯಾಟೋ ಬ್ರೆಡ್
ಶ್ರೀ ಕೃಷ್ಣಾ ಬೇಕರಿ
(ನಮ್ಮ ಅಂಗಡಿ [illegible]
[illegible])
ಡಿ. ಸುಬ್ಬಯ್ಯ ರೋಡ್, ಮೈಸೂರು

Edited, Printed and Published
A. R. Nagarajan at Sadhvi Pr
D. Subbiah Road, Mysore

ರಾ ಜ ಭ ವ ನ
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

ಸೆಟ್ ದೋಸೆ (ಬೆಣ್ಣೆ, ಪಲ್ಯ), ಅಪ್ಪಟ ತುಪ್ಪದಿಂದ ತಯಾರಿಸಿದ "ಕೇಸರಿಭಾತ್"
ಘಮಘಮಿಸುವ ಕಾಫಿ, ಟೀ ವಗೈರೆಯನ್ನು ಒಮ್ಮೆ ಬಂದು ಸವಿಯಿರಿ

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಥಮಸ್ಥಾನದ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
[illegible]



[illegible]

ಚಂದಾ ದರ
ಸಿಟಿಯೊಳಗೆ [illegible]
ತಿಂಗಳಿಗೆ [illegible]
[illegible]
ತಿಂಗಳಿಗೆ [illegible]
ಬಿಡಿ ಪತ್ರಿಕೆ [illegible]

ಸಂಪುಟ : ೧೮] SADHVI । SUNDAY 25—11—1956 ಮೈಸೂರು । ಭಾನುವಾರ ೨೫—೧೧—೧೯೫೬ [ಸಂಚಿಕೆ : [illegible]

ಹಂಗೆರಿ ಮಾಜಿ ಪ್ರಧಾನಿ ನಾಗಿ ಬಂಧನ-ಗಡೀಪಾರು

ವಸ್ತು ಪ್ರದರ್ಶನದ ಕಟ್ಟಡದಲ್ಲಿ ಆಯುರ್ವೇದ ಕಾಲೇಜು

ಆರೋಗ್ಯ ಮಂತ್ರಿ ಎ. ಬಿ. ಶೆಟ್ಟಿಯವರ ಹೇಳಿಕೆ

ಬೆಂಗಳೂರು ೨೫

ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜು ನಗರಾಯುಕ್ತ [illegible] ಸರ್ಕಾರದ ಮುಂದೆ ಇಟ್ಟಿರುವುದಾಗಿ ಶಿಕ್ಷಣ ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟಿಯವರು ತಿಳಿಸಿ, ಕಾಲೇಜನ್ನು ಮೈಸೂರಿನಲ್ಲಿರುವ ವಸ್ತು ಪ್ರದರ್ಶನಶಾಲೆಯ ಕಟ್ಟಡದ ಒಂದು ಭಾಗಕ್ಕೆ ವರ್ಗಾಯಿಸಲಾಗುವುದೆಂದು ಹೇಳಿದರು. ಕಾಲೇಜಿನ [illegible] ಚಿಕಿತ್ಸಾ ಶಿಕ್ಷಣಕ್ಕೆ ಏರ್ಪಡಿಸಲಾಗುವುದು.

ಈಗಿರುವ ೩೩ ಹಾಸಿಗೆಗಳ ಸಂಖ್ಯೆಯನ್ನು ೧೦೦ಕ್ಕೆ ಹೆಚ್ಚಿಸಿ, ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಕರ್ಯವನ್ನು ಕಲ್ಪಿಸಲಾಗುವುದು. ಮುಂದೆ ಆಸ್ಪತ್ರೆಯಲ್ಲೂ ಚಿಕಿತ್ಸಾ ಶಿಕ್ಷಣ ವ್ಯವಸ್ಥೆ ಮಾಡಲಾಗುವುದು.

ಕಾಲೇಜು ವಿದ್ಯಾರ್ಥಿಗಳಿಗೆ ಅರಮನೆಯ [illegible] ವಿದ್ಯಾರ್ಥಿನಿಲಯದ ಸೌಕರ್ಯವನ್ನು ಏರ್ಪಡಿಸಲು ಕ್ರಮ ಕೈಗೊಳ್ಳಲಾಗಿದೆ.

ಕಾಲೇಜಿಗೆ ಒಬ್ಬ ಪ್ರಿನ್ಸಿಪಾಲ್ ಮತ್ತು [illegible] ಅಧ್ಯಾಪಕರನ್ನು ನೇಮಿಸಲು ನಿರ್ಧರಿಸಲಾಗಿದೆ ಎಂದೂ ಸಹ ಮಂತ್ರಿಗಳು ತಿಳಿಸಿದರು.

ಈಜಿಪ್ಟಿನಿಂದ ಬ್ರಿಟಿಷ್ ಮತ್ತು ಯಹೂದ್ಯರ ಉಚ್ಚಾಟನೆ

ಈಜಿಪ್ಟಿನಲ್ಲಿರುವ [illegible] ದೇಶ ಬಿಟ್ಟು ಹೋಗಬೇಕೆಂದೂ [illegible] ಅವರನ್ನು [illegible] ಶಿಬಿರಗಳಿಗೆ [illegible] ಎಲ್ಲಾ ಬ್ರಿಟಿಷ್ ಮತ್ತು ಫ್ರೆಂಚ್ ಪ್ರಜೆಗಳ [illegible] ದಿನಗಳಲ್ಲಿ [illegible] ಸ್ವಿಟ್ಜರ್ಲೆಂಡ್ ಸರ್ಕಾರಕ್ಕೆ [illegible] ಬಂದಿರುವುದಾಗಿ ಗೊತ್ತಾಗಿದೆ. ಸ್ವಿಟ್ಜರ್ಲೆಂಡ್ ಸರ್ಕಾರದವರು [illegible] ಒಪ್ಪಿದ್ದಾರೆ.

ರೈಲು ಅಪಘಾತದಲ್ಲಿ ೧೩೭ ಜನರ ಪ್ರಾಣಹಾನಿ

ಮೊನ್ನೆ ದಿಲ್ಲಿಗೆ [illegible] ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ [illegible] ಪ್ರಾಣ ಬಿಟ್ಟಿರುವುದಾಗಿ ದಕ್ಷಿಣ ರೈಲ್ವೆ [illegible] ತಿಳಿಸಿದ್ದಾರೆ. ಒಟ್ಟು ೧೧೦ ಮಂದಿ ಗಾಯಗೊಂಡವರಲ್ಲಿ [illegible] ದಕ್ಷಿಣ ರೈಲ್ವೆಯಲ್ಲಿ [illegible] ಜನರು ಅಪಘಾತದಲ್ಲಿ [illegible].

ನದಿಯ [illegible] ಶವಗಳು [illegible] ದೊರೆತಿಲ್ಲ.

ಹಂಗೆರಿಯ ಮಾಜಿ ಪ್ರಧಾನಿ ನಾಗಿಯವರ ಬಂಧನ

ಗೊತ್ತಿಲ್ಲದ ಸ್ಥಳಕ್ಕೆ ರವಾನೆ

ಹಂಗೆರಿಯ ಮಾಜಿ ಪ್ರಧಾನಿ ಇಮ್ರೆ ನಾಗಿಯವರನ್ನು ರಷ್ಯದ ಸೈನಿಕರು ಬಂಧಿಸಿರುವುದಾಗಿ ತಿಳಿದುಬಂದಿದೆ. ಅವರನ್ನೂ ಅವರ ಸಹೋದ್ಯೋಗಿಗಳನ್ನೂ ಬಂಧಿಸಿ ಗಡೀಪಾರು ಮಾಡಲಾಗಿದೆ. ಇದಕ್ಕೆ ಮೊದಲು ನಾಗಿಯವರು ಬುಡಾಪೆಸ್ಟಿನಲ್ಲಿರುವ ಯುಗೊಸ್ಲಾವ್ ರಾಯಭಾರ ಕಛೇರಿಯಲ್ಲಿ ಆಶ್ರಯ ಪಡೆದು ಮೊನ್ನೆ ತಾನೆ ತಮ್ಮ ನಿವಾಸಕ್ಕೆ ಹಿಂದಿರುಗಲು ಹೊರಟಿದ್ದರು.

ಯುಗೊಸ್ಲಾವಿಯದ ರಾಜಧಾನಿ ಬೆಲ್‌ಗ್ರೇಡಿನ 'ಬೋರ್ಬಾ' ಎಂಬ ಪತ್ರಿಕೆಯು ನಾಗಿಯವರ ವಿಚಾರವನ್ನು ಪ್ರಕಟಿಸಿ ಅವರನ್ನೂ ಅವರ ಸಹೋದ್ಯೋಗಿಗಳನ್ನೂ ರಷ್ಯದ ಪಡೆ [illegible] ಗೊತ್ತಿಲ್ಲದ ಪ್ರದೇಶಕ್ಕೆ ಸಾಗಿಸಿರುವರೆಂದು ಹೇಳಿದೆ. ನಾಗಿಯವರ ರಕ್ಷಣೆ ಬಗ್ಗೆ ಕಳೆದ ವಾರ ಯುಗೊಸ್ಲಾವಿಯಾ-ಹಂಗೆರಿ ಸರ್ಕಾರಗಳ ಒಪ್ಪಂದದ ಪರಿಣಾಮವಾಗಿ ಅವರು ತಮ್ಮ ೧೫ ಮಂದಿ ಬೆಂಬಲಿಗರು, ೧೫ ಮಹಿಳೆಯರು, ೧೭ ಮಕ್ಕಳೊಡನೆ ಹಿಂದಿರುಗಿದ್ದರೆಂದು ಪತ್ರಿಕೆಯು ಸೂಚಿಸಿದೆ. ಅವರನ್ನು ಬಸ್ಸಿನಲ್ಲಿ ಕರೆದೊಯ್ದಾಗ ರಷ್ಯದ ಅಧಿಕಾರಿಯು ಇದನ್ನು ಹತ್ತಿದರಲ್ಲದೆ ರಷ್ಯದ ಸೈನಿಕರು ಬಸ್ಸನ್ನು ಮುತ್ತಿ ಅವನ್ನು ತಮ್ಮ ಸೈನ್ಯ ಶಿಬಿರಕ್ಕೆ ಕರೆದುಕೊಂಡು ಹೋದುದಾಗಿ ಹೇಳಲಾಗಿದೆ.

ಬಸ್ಸಿನಲ್ಲಿದ್ದ ಇಬ್ಬರು ಯುಗೊಸ್ಲಾವಿಯಾ ರಾಯಭಾರಿ ಅಧಿಕಾರಿಗಳು ಅದನ್ನು ಪ್ರತಿಭಟಿಸಿದರೆಂದೂ, ಆದರೆ ಅವರನ್ನು ಬಸ್ಸಿನಿಂದ ಎತ್ತಿ ಹಾಕಲಾಯಿತೆಂದೂ ಪತ್ರಿಕೆಯು ಸೂಚಿಸಿದೆ. ಹಂಗೆರಿ ಮತ್ತು ಯುಗೊಸ್ಲಾವಿಯಾ ಸರ್ಕಾರಗಳ ಒಪ್ಪಂದಕ್ಕೆ ರಷ್ಯದ ಅಧಿಕಾರಿಗಳು ಭಂಗ ತರುತ್ತಿದ್ದಾರೆಂದು ತಿಳಿಸಿದಾಗ, ಒಪ್ಪಂದಕ್ಕೂ ತಮಗೂ ಸಂಬಂಧವಿಲ್ಲವೆಂದೂ, ಅವರನ್ನು [illegible] ತಮ್ಮ ವಶಕ್ಕೆ ತೆಗೆದುಕೊಳ್ಳಲು ಅಪ್ಪಣೆಯಾಗಿದೆಯೆಂದೂ ಅವರು ಉತ್ತರವಿತ್ತರೆಂದು ಹೇಳಲಾಗಿದೆ.

ಈ ಘಟನೆ ಬಗ್ಗೆ ಯುಗೊಸ್ಲಾವಿಯವು ಹಂಗೆರಿ ಸರ್ಕಾರದ ಸಮಜಾಯಿಷಿ ಕೇಳಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ ೭-೧೫ ವಿ ಆರ್ ಗಂಗಾಧರಯ್ಯ-ದೇವರನಾಮ ೭ ೩೦ ಗಾನ ವಿಹಾರ ೮-೧೫ ರಿಕಾರ್ಡು ಮಧ್ಯಾಹ್ನ ೧೨ ವಿ ಆರ್ ಗಂಗಾಧರಯ್ಯ-ಸಂಗೀತ ೧೨-೩೦ ಕೆ. ಎಸ್. [illegible] ವೀಣೆ ೧೨ ೪೫ ರಿಕಾರ್ಡು ೧-೩೦ ಮುಖವೀಣೆ. ೨ ೧೫ ಪ್ರೌಢಶಾಲೆಗಳಿಗಾಗಿ ಸಂಜೆ ೫ ೩೦ ವೀಣೆ ೬ ೫ ಸಂಗೀತ. ೬-೩೦ ಜಾನಪದಗೀತೆ ೭-೩೦ ಬುದ್ಧಸ್ಮಿತ-ಕೆ ಎಸ್ ನರಸಿಂಹಸ್ವಾಮಿಯವರ ಕವಿತೆ ೮ ರವೀಂದ್ರ-ಸಂಗೀತ ೮-೧೫ [illegible]ದಿಂದ ೮ ೩೦ [illegible] ೯-೩೦ ಕಥಾಕಾಲಕ್ಷೇಪ

ಫಿಲೋಮಿನಾ ಕಾಲೇಜು ಅಧ್ಯಾಪಕರ ಮುಷ್ಕರದ ಮುಕ್ತಾಯ

ಪ್ರಿನ್ಸಿಪಾಲರಿಂದ ಪ್ರಕಟಣೆ

ಮೈಸೂರು ೨೫

ನಗರದ ಸೇಂಟ್ ಫಿಲೋಮಿನಾ ಕಾಲೇಜಿನ ಉಪಾಧ್ಯಾಯರುಗಳು ತಮ್ಮ [illegible] ಭತ್ಯದ ವಿಚಾರವಾಗಿ ಪ್ರಿನ್ಸಿಪಾಲರಾದ ಫಾದರ್ [illegible]ಯವರಲ್ಲಿ ಮಾತನಾಡಲು ಹೋದಾಗ ಅವರು ತಿರಸ್ಕಾರ ಭಾವನೆಯಿಂದ ವರ್ತಿಸಿದುದಕ್ಕಾಗಿ ಮೊನ್ನೆ ಉಪಾಧ್ಯಾಯರುಗಳು ಪಾಠಗಳನ್ನು ಹೇಳದೆ ಮುಷ್ಕರ ಹೂಡಿದ್ದರಷ್ಟೆ? ನೆನ್ನೆ ಮಧ್ಯಾಹ್ನ ಪ್ರಿನ್ಸಿಪಾಲರು ಉಪಾಧ್ಯಾಯರುಗಳನ್ನು ಬರಮಾಡಿಕೊಂಡು ತಮ್ಮ ವರ್ತನೆಗಾಗಿ ವಿಷಾದವನ್ನು ವ್ಯಕ್ತಪಡಿಸಿದರೆಂದೂ ಮತ್ತು ಉಪಾಧ್ಯಾಯರ ಬೇಡಿಕೆಗಳನ್ನು ಅನುಕೂಲಕರವಾಗಿ ಪರಿಶೀಲಿಸಲು ಲಿಖಿತಮೂಲಕ ಭರವಸೆಯಿತ್ತಿರುವರೆಂದೂ ತಿಳಿದುಬಂದಿದೆ. ಈ ಕಾರಣದಿಂದ ಉಪಾಧ್ಯಾಯರ ಮುಷ್ಕರವು ಮುಕ್ತಾಯಗೊಂಡು ಅವರು ಪಾಠಗಳನ್ನು ನಡೆಸುವರೆಂದು ಹೇಳಲಾಗಿದೆ.

ನೆನ್ನೆ ಮುಷ್ಕರದ ಪರಿಣಾಮವಾಗಿ ಪ್ರಿನ್ಸಿಪಾಲರು ಕಾಲೇಜಿಗೆ ರಜಾ ಕೊಟ್ಟಿರುವಂತೆ ಪ್ರಕಟಿಸಿದುದಾಗಿಯೂ ಗೊತ್ತಾಗಿದೆ.

ಸಟ್ಟಾ ಜೂಜಾಡುತ್ತಿದ್ದವರಿಗೆ ಶಿಕ್ಷೆ

ಸಟ್ಟಾ ಜೂಜಾಡುತ್ತಿದ್ದುದಕ್ಕಾಗಿ ದೇವರಾಜಾ ಪೋಲೀಸರು ಹೂಡಿದ್ದ ಮೊಕದ್ದಮೆಗಳಲ್ಲಿ ನಗರ ನ್ಯಾಯಾಧೀಶರು ಮುಂದೆ ಕಂಡಂತೆ ಜುಲ್ಮಾನೆಯನ್ನು ವಿಧಿಸಿದ್ದಾರೆ :—ಕೃಷ್ಣರಾಜ ಮೊಹಲ್ಲೆಯ ಅಬ್ದುಲ್ ರಹಮಾನನಿಗೆ ೧೫ ರೂ, [illegible] ಬೀದಿಯ ಚೆಲುವಯ್ಯ ಮತ್ತು ವೆಂಕಟಪ್ಪ, ನಾಗ ಮತ್ತು ರಾಜು ಎಂಬುವರಿಗೆ ತಲಾ ೧೦ ರೂ ಮತ್ತು ವೆಂಕಟರಮಣಯ್ಯ, ರಾಜು ಮತ್ತು [illegible] ಎಂಬುವರಿಗೆ ತಲಾ ೧೫ ರೂ.

ಕೈಗಾರಿಕಾ ನ್ಯಾಯಮಂಡಲದ ತೀರ್ಪಿನ ಪೂರ್ಣ ಜಾರಿ

ಕಬಿನಿ ಹತ್ತಿ ಗಿರಣಿ ಅಧಿಕಾರಿಗಳ ಹೇಳಿಕೆ

ನಂಜನಗೂಡು ೨೪

ಇಲ್ಲಿನ ಕಬಿನಿ ಹತ್ತಿ ಗಿರಣಿ ಅಧಿಕಾರವರ್ಗದವರು ಕಾರ್ಮಿಕರ ಸಂಘಕ್ಕೆ ಪತ್ರವೊಂದನ್ನು ನೆನ್ನೆ ಬರೆದು, ಕೈಗಾರಿಕಾ ನ್ಯಾಯಮಂಡಲದ ತೀರ್ಪನ್ನು ಪೂರ್ಣ ಜಾರಿಗೆ ತರಲಾಗಿರುವುದೆಂದೂ, [illegible] ವಿದ್ಯಮಾನಗಳಲ್ಲಿ ಅದು ಇದುವರೆಗೆ ಜಾರಿಯಾಗದಿದ್ದ ಪಕ್ಷದಲ್ಲಿ ಅದನ್ನು ಸರಿಪಡಿಸಲಾಗುವುದೆಂದೂ, ಈ ವಿಚಾರವನ್ನು ಕಳೆದ ತಿಂಗಳಿನಲ್ಲೇ ಸಂಘದ ಕಾರ್ಯದರ್ಶಿ ಮತ್ತು ಸದಸ್ಯರುಗಳಿಗೆ ತಿಳಿಸಲಾಗಿತ್ತೆಂದೂ ಹೇಳಿದ್ದಾರೆ. ಈಗಲೂ ಸಹ ಅದೇ ವಿಷಯವನ್ನು ಒತ್ತಿ ಹೇಳುತ್ತಾ [illegible], ಇಷ್ಟು ಭರವಸೆಯಿತ್ತ ಮೇಲೂ ಸಂಘದ ಅಧ್ಯಕ್ಷರು ಉಪವಾಸ ಮಾಡಿದರೆ ಅದು ಅವರ ಜವಾಬ್ದಾರಿಯೆಂದು ಸೂಚಿಸಿದ್ದಾರೆ.

[illegible] ಸತ್ಯಾಗ್ರಹದಲ್ಲಿ ಮಾಜಿ ಅಡ್ವೊಕೇಟ್ ಜನರಲ್ಲರ ಬಂಧನ

ತಿರುವನಂತಪುರದಲ್ಲಿ ೪೭ ಜನ ಸತ್ಯಾಗ್ರಹಿಗಳಿಗೆ ಶಿಕ್ಷೆ

ತಿರುವನಂತಪುರದಲ್ಲಿ [illegible] ಒಂದರ [illegible]ಕ್ಕಾಗಿ ಅಲ್ಲಿನ [illegible] ಸಂಬಂಧದಲ್ಲಿ [illegible] ಪಿಕೆಟಿಂಗ್ [illegible] ಕಛೇರಿಗೆ ಹೋಗದಂತೆ [illegible] ಮಾಡಲಾಯಿತು [illegible], ಅವರ [illegible] ಮತ್ತು [illegible] ೪೭ ಮಂದಿ ಸತ್ಯಾಗ್ರಹಿಗಳನ್ನು ಬಂಧಿಸಲಾಯಿತು. ಈ ಸತ್ಯಾಗ್ರಹಿಗಳಲ್ಲಿ ಮಾಜಿ ಅಡ್ವೊಕೇಟ್ ಜನರಲ್ [illegible] ಕೃಷ್ಣ ಪಿಳ್ಳೆ ಮತ್ತು ಇಬ್ಬರು ಮಾಜಿ ಶಾಸಕರೂ ಸೇರಿರುವರು. ದಸ್ತಗಿರಿಯಾದವರಿಗೆಲ್ಲಾ ತಲಾ ೨೫ ರೂ ದಂಡ, ತಪ್ಪಿದರೆ ೧ ವಾರ ಸಾದಾ ಸಜಾ ವಿಧಿಸಲಾಗಿ, ಅವರುಗಳು ದಂಡ ಕೊಡದೆ ಜೈಲಿಗೆ ಹೋದರು. [illegible] ಎಲ್ಲರೂ ಸಹ ಇವೇ ಕಾರಣಕ್ಕಾಗಿ ದಸ್ತಗಿರಿಯಾಗಿದೆ.

ಮಹಾರಾಜಾ ಪ್ರೌಢಶಾಲೆಯ ಸಂಘದ ವಾರ್ಷಿಕೋತ್ಸವ

ಮೈಸೂರು ೨೪

ನಗರದಲ್ಲಿರುವ ಮಹಾರಾಜಾ ಪ್ರೌಢಶಾಲೆಯ ಸಂಘದ ವಾರ್ಷಿಕೋತ್ಸವವನ್ನು ಕಾಂಗ್ರೆಸ್ ಮುಖಂಡರಾದ ಶ್ರೀ ಎಸ್ ಚನ್ನಯ್ಯನವರು ಮೊನ್ನೆ ಆರಂಭಗೊಳಿಸಿದರು.

ಪ್ರಾರ್ಥನೆಯನಂತರ, ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ ವಿ. ಸೂರ್ಯನಾರಾಯಣರವರು ಸ್ವಾಗತ ಭಾಷಣ ಮಾಡಿದರು. ವಿವಿಧ ವೇಷಗಳ ಸ್ಪರ್ಧೆ [illegible] ಗೆದ್ದ ಬಾಲಕರಿಗೆ ಬಹುಮಾನ ವಿನಿಯೋಗ ಮಾಡಲಾಯಿತು.

ಶ್ರೀ ಎಸ್ ಚನ್ನಯ್ಯನವರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳ ಮಾನಸಿಕ ಬೆಳವಣಿಗೆಯಲ್ಲಿ [illegible] ಬಗ್ಗೆಯೂ ಗಮನ ಕೊಡಬೇಕೆಂದು ಸೂಚಿಸಿದರು.

ಕಾರ್ಯದರ್ಶಿ ಶ್ರೀ [illegible] ವಂದನಾರ್ಪಣೆ ಮಾಡಿದ ನಂತರ ಸಮಾರಂಭವು ಮುಕ್ತಾಯವಾಯಿತು. '[illegible]' ಎಂಬ ನಾಟಕವನ್ನು ಅಭಿನಯಿಸಲಾಯಿತು.

ವಿದ್ಯಾ ಗಣಪತಿ ಮಹೋತ್ಸವ

ನಗರದ ಚಾಮರಾಜೇಂದ್ರ ವೃತ್ತಿ ಶಿಕ್ಷಣ ಶಾಲೆಯಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ವಿದ್ಯಾ ಗಣಪತಿ ಮಹಾ ಮಂಗಳಾರತಿಯು ನೆರವೇರುವುದು. ಕೇಂದ್ರ ಸರ್ಕಾರದ, ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ಅಧಿಕಾರಿ ಶ್ರೀ ಕೆ ಎಲ್. ನಂಜಪ್ಪನವರು ಅಧ್ಯಕ್ಷತೆ ವಹಿಸುವರು. ಶ್ರೀ [illegible] ಸುಬ್ಬರಾಯಾಚಾರ್ಯರು ಉಪನ್ಯಾಸ ಮಾಡುವರು. ಶ್ರೀಮತಿ [illegible] ಮತ್ತು ವೃಂದದವರಿಂದ ಸಂಗೀತವು ಏರ್ಪಾಡಾಗಿದೆ.

ವಾರ ಭವಿಷ್ಯ

೨೫-೧೧-೫೬ ರಿಂದ ೧-೧೨-೫೬ ರ ವರೆಗೆ

ಮೇಷ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಪ್ರವಾಸದಲ್ಲಿ ತೊಂದರೆ ಉದ್ಯೋಗದಲ್ಲಿ ಕಿರುಕುಳ.

ವೃಷಭ — ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗಿರುವುದು

ಮಿಥುನ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಉತ್ತಮ ಶುಭ ಕಾರ್ಯಗಳಿಗೆ ಅಡ್ಡಿ. ಕ್ಷೇತ್ರಪ್ರವಾಸ ಸಂಭವ ವ್ಯಾಪಾರವ್ಯವಹಾರಗಳಲ್ಲಿ ಸಾಮಾನ್ಯ ಫಲಗಳು ನೌಕರಿಯಲ್ಲಿ ಪ್ರೋತ್ಸಾಹ

ಕರ್ಕ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಸಾಧಾರಣ ಕೈಗೊಂಡ ಕಾರ್ಯಗಳಿಗೆ ವಿಘ್ನ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ನಿರುತ್ಸಾಹ

ಸಿಂಹ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಶತ್ರುಗಳಿಂದ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಅಪಘಾತ ಭಯ ಉದ್ಯೋಗದಲ್ಲಿ ಕಿರುಕುಳ

ಕನ್ಯಾ — ಆರೋಗ್ಯದ ಬಗ್ಗೆ ಎಚ್ಚರಿಕೆ ಅವಶ್ಯಕ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನಿರ್ದಿಷ್ಟ ಪರಿಸ್ಥಿತಿ ಪ್ರವಾಸ ಅಹಿತಕರವಾಗಿರುವುದು ಉದ್ಯೋಗದಲ್ಲಿ ಉತ್ಸಾಹ

ತುಲಾ — ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಸಾಮಾನ್ಯ ಪರಿಸ್ಥಿತಿ. ಪ್ರವಾಸದಲ್ಲಿ ಅಡ್ಡಿ

ವೃಶ್ಚಿಕ — ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ ಶುಭ ಕಾರ್ಯಗಳು ಜರುಗುವವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗಿರುವುದು

ಧನು — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸದಲ್ಲಿ ಅಡ್ಡಿ ಆಧ್ಯಾತ್ಮಸಾಧನೆಯಲ್ಲಿ ಸಂಯಮ ಅಗತ್ಯ

ಮಕರ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗಿರುವುದು

ಕುಂಭ — ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಸಮರ್ಪಕ ಶುಭ ಕಾರ್ಯಗಳು ಜರುಗುವವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಉತ್ಸಾಹ. ವಿದ್ವಜ್ಜನರ ಪರಿಚಯ.

ಮೀನ — ಆರೋಗ್ಯ ಸಮರ್ಪಕ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ಉದ್ಯೋಗದಲ್ಲಿ ಪ್ರಶಂಸೆ ನೂತನ ಪರಿಚಯಗಳು

ಕಳ್ಳರ ಬಂಧನ

ಕರ್ಜನ್‌ಪಾರ್ಕ್ ಬಸ್ತಿಯ ಪಾರ್ಕ್ ರೆಸ್ಟೋರೆಂಟಿನಲ್ಲಿ ಪೆಟ್ಟಿಗೆಯೊಂದನ್ನು ಅಪಹರಿಸಿಕೊಂಡು ಹೋಗುತ್ತಿದ್ದ ಕೃಷ್ಣರಾಜನಗರದ ಸಿದ್ದೇಗೌಡ ಮತ್ತು ದೇವರಾಜ ಮಾರ್ಕೆಟ್ಟಿನಲ್ಲಿ ೬೦ ಕನ್ನಡಿಗಳನ್ನು ಅಪಹರಿಸಿಕೊಂಡುಹೋಗುತ್ತಿದ್ದ ಚಿಕ್ಕಮಗಳೂರಿನ ರಾಮುವನ್ನು ಪೋಲೀಸರು ಮೊನ್ನೆ ರಾತ್ರಿ ಬಂಧಿಸಿರುವರು

SREE GANESH
TALKIES
From 24-11-56 For 3 days
MAN OF THE MOMENT
Starring – Norman Wisdom
and Belinda Lee

From 27-11-56 For 2 days
INNOCENTS IN PARIS

ಭಾರತದಲ್ಲಿ ಇನ್ನೂ ಐದು ಮೆಡಿಕಲ್ ಕಾಲೇಜುಗಳು

ಕಾನ್ಪುರ, ಜಾಂನಗರ ರಾಂಚಿ, ಭೋಪಾಲ್‌ಗಳಲ್ಲಿ ಒಂದೊಂದು, ಕೇರಳದಲ್ಲಿ ಒಂದು ಮತ್ತು ದಿಹಲಿಯಲ್ಲಿ ಒಂದು ಮೆಡಿಕಲ್ ಕಾಲೇಜುಗಳ ೨ನೆಯ ಯೋಜನೆ ಕಾಲದಲ್ಲಿ ಏರ್ಪಡಿಸಲಾಗುವುದೆಂದು ಲೋಕಸಭೆಯಲ್ಲಿ ಆರೋಗ್ಯ ಉಪ ಮಂತ್ರಿ ಮುರಕತಂ ಚಂದ್ರಶೇಖರರವರು ತಿಳಿಸಿರುತ್ತಾರೆ ಭಾರತದಲ್ಲಿ ಈಗ ೪೪ ಮೆಡಿಕಲ್ ಕಾಲೇಜುಗಳು ಇವೆಯೆಂದೂ, ಪ್ರತಿ ವರ್ಷವೂ ೩,೬೦೦ ಜನರನ್ನು ಸೇರಿಸಿಕೊಳ್ಳಲಾಗುತ್ತಿರುವುದೆಂದೂ ಅವರು ತಿಳಿಸಿದರು

ಭಾರತದಿಂದ ೨೪ ಕೋಟಿ ರೂ. ಹಡಗುಗಳ ಕ್ರಯ

ಬ್ರಿಟನ್, ಜರ್ಮನಿ, ಇಟಲಿ ಮತ್ತಿತರ ರಾಷ್ಟ್ರಗಳಿಂದ ಒಟ್ಟು ೨೪ ಕೋಟಿ ರೂಗಳ ಹಡಗುಗಳನ್ನು ಭಾರತವು ಕೊಳ್ಳಲಿದೆ ಈ ಬಗ್ಗೆ ಆಯಾ ದೇಶಗಳಿಗೆ ಸೂಚನೆ ಕೊಡಲಾಗಿದೆ ೧೫-೨೦ ವರ್ಷಗಳ ಹಿಂದೆ ಕಟ್ಟಲಾಗಿದ್ದ ಹಡಗುಗಳು ಈಗ ನಿರುಪಯುಕ್ತವೆಯೆಂದು ಹೇಳಲಾಗಿದೆ.

ಭಾರತಕ್ಕೆ ಸಿಂಧಿ ಹಸುಗಳ ಆಮದು

ಭಾರತಕ್ಕೆ ಹಲಕೆಲವು ಸಿಂಧಿ ಹಸುಗಳನ್ನು ಆಮದು ಮಾಡಿಕೊಳ್ಳಲಾಗುವುದೆಂದೂ, ಅವನ್ನು ಮಾರಾಟಮಾಡಲು ಪಾಕಿಸ್ತಾನ ಸರ್ಕಾರದವರು ಒಪ್ಪಿರುವರೆಂದೂ ಗೊತ್ತಾಗಿದೆ

ಮರಣದಂಡನೆ ರದ್ದಿನ ಮಸೂದೆ ತಿರಸ್ಕಾರ

ಮರಣ ದಂಡನೆಯನ್ನು ರದ್ದುಗೊಳಿಸಬೇಕೆಂದು ಸೂಚಿಸುವ ಮಸೂದೆಯೊಂದನ್ನು ಲೋಕಸಭೆಯಲ್ಲಿ ಎಂ ಎಲ್ ಅಗರವಾಲ್‌ರವರು ತಂದಿದ್ದು ಅದನ್ನು ತಿರಸ್ಕರಿಸಲಾಯಿತು. ೫-೧೦ ವರ್ಷಗಳವರೆಗಾದರೂ ಅದನ್ನು ರದ್ದುಗೊಳಿಸಬೇಕೆಂದು ಎನ್ ಸಿ ಚಟರ್ಜಿಯವರು ಸೂಚಿಸಿದ್ದರು ನ್ಯಾಯಾಂಗ ಶಾಖಾ ಸಚಿವ ಪಾಟಸ್ಕರ್‌ರವರು ಉತ್ತರವಿತ್ತು, ನ್ಯಾಯಾಧೀಶರುಗಳು ಸಿಕ್ಕಾಪಟ್ಟೆ ಮರಣದಂಡನೆ ವಿಧಿಸುತ್ತಿಲ್ಲವೆಂದೂ ಸಮಾಜದ ಹಿತಕ್ಕಾಗಿ ಅವಶ್ಯಕವೆಂದು ತೋರಿದಾಗ ಮರಣದಂಡನೆ ವಿಧಿಸಲಾಗುತ್ತಿದೆಯೆಂದೂ ತಿಳಿಸಿದರು

ಕಾಂಗ್ರೆಸ್ಸಿಗೆ ಭೋಪಾಲ್ ನವಾಬರಿಂದ ೨೫,೦೦೦ ರೂ.

ಇಂದೂರಿನಲ್ಲಿ ಬರುವ ಜನವರಿಯಲ್ಲಿ ಸೇರುವ ಕಾಂಗ್ರೆಸ್ ಅಧಿವೇಶನಕ್ಕಾಗಿ ಭೋಪಾಲಿನ ನವಾಬರು ೨೫,೦೦೦ ರೂ ಕೊಟ್ಟಿರುತ್ತಾರೆ.

ಟಿ ಪಿ. ಕೈಲಾಸಂ ದಿನಾಚರಣೆ

ನಗರದ ಯುವರಾಜಾ ಕಾಲೇಜಿನ ಲಲಿತ ಕಲಾ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ದಿ॥ ಟಿ ಪಿ ಕೈಲಾಸಂ ದಿನಾಚರಣೆಯನ್ನು ಏರ್ಪಡಿಸಲಾಗಿದೆ ಪ್ರಜಾವಾಣಿ ಪತ್ರಿಕೆಯ ಶ್ರೀ ಇ ಆರ್ ಸೇತೂರಾಂರವರು ಕೈಲಾಸಂರವರ ವಿಷಯವಾಗಿ ಭಾಷಣ ಮಾಡುವರು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಎಲ್ ಸೀಬಯ್ಯನವರು ಅಧ್ಯಕ್ಷತೆ ವಹಿಸುವರು.

Join
GLOBE TUTORIAL COLLEGE
(Sadvidya Patashala, Mysore)
Excellent Coaching for
Inter, P. C. M., Kan., Eng.

ಬಿಸಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
(ನಮ್ಮ ಅಂಗಡಿ ಶಾಖೆಯನ್ನು ನಾವು ಎಲ್ಲೂ ತೆರೆದಿಲ್ಲ)
ಡಿ ಸುಬ್ಬಯ್ಯಾ ರೋಡ್, ಮೈಸೂರು

ಬಹುಮಾನ ಪಡೆದ ಹಸುಗಳು

ಮೈಸೂರು ೨೫

ಮೊನ್ನೆ ಇಲ್ಲಿನ ಜಾನುವಾರು ಪ್ರದರ್ಶನದಲ್ಲಿ ನಡೆದ ಗೋ ಸಂವರ್ಧನ ಸಪ್ತಾಹದ ಅಂಗವಾಗಿ ಕೆಳಗೆ ಕಂಡ ಪಶುಗಳಿಗೆ ಬಹುಮಾನಗಳು ಬಂದಿವೆ ಒಟ್ಟು ೪೪ ಬಹುಮಾನಗಳನ್ನು ಹಂಚಲಾಗಿದೆ ಹೆಚ್ಚು ಹಾಲು ಕರೆವ [illegible] ಹಸು ಮತ್ತು ಕರುವಿನ ಪರ್ಯಾಯ ಪಾರಿತೋಷಕದ ಬಟ್ಟಲು ತುರುವೇಕೆರೆ ಗಾರ್ಡನ್ನಿನ ಶ್ರೀ ಬಿ ಎ ಕಾವೇರಪ್ಪನವರಿಗೆ ಬಂದಿತು :-

ಪ್ರಥಮ ಬಹುಮಾನ ಪಡೆದವು:- ಶ್ರೀ ಬಿ ಎ ಕಾವೇರಪ್ಪನವರ ಹಳ್ಳಿಕಾರ್ ಹಸು ಮತ್ತು ಕರು, ಅವರ ಸಿಂಧಿ ಹಸು ಮತ್ತು ಕರು, ಶ್ರೀ ರಾಮಯ್ಯನವರ ಕ್ರಾಸ್ ಬ್ರೀಡಿನ ಬಿಳಿ ಮತ್ತು ಕಪ್ಪು ಬಣ್ಣದ ಹಸು ಮತ್ತು ಶ್ರೀ ಹೆಚ್ ಎಲ್ ನಾರಾಯಣಶಾಸ್ತ್ರಿಯವರು ಮತ್ತು ಕುಚೇಲಪ್ಪನವರ ಕೆಂಪು ಮತ್ತು ಬಿಳಿಯ ಕ್ರಾಸ್ ಬ್ರೀಡ್ ಹಸು, ಕೃತಕ ವೀರ್ಯದಿಂದ ಹುಟ್ಟಿದ ಬಿ ಎ. ಕಾವೇರಪ್ಪನವರ ಹೈಫರ್ ಹಸು, ಶ್ರೀ [illegible]ರವರ ಹಳ್ಳಿಕಾರ್ ಹಸು; ಶ್ರೀ ಕುಚೇಲಪ್ಪನವರ ಕ್ರಾಸ್‌ಬ್ರೀಡ್ ಹೈಫರ್ ಹಸು, ಶ್ರೀ ಎಂ. ಮಲ್ಲರಾಜಅರಸರ ಹಳ್ಳಿಕಾರ್ ಹಸು, ಶ್ರೀ ನಾರಾಯಣರವರ ಕ್ರಾಸ್‌ಬ್ರೀಡ್ ಹೈಫರ್ ಹಸು.

ಶ್ರೀ ಲಿಂಗೇಗೌಡರ, ಶ್ರೀ ಬಿ ಎ ಕಾವೇರಪ್ಪನವರ ಹಳ್ಳಿಕಾರ್ ಮತ್ತು ಜರ್ಸಿ ಮತ್ತು ಪುಟ್ಟಚೆನ್ನಯ್ಯನವರ ಕ್ರಾಸ್‌ಬ್ರೀಡ್ ಗೂಳಿಗಳು.

ಎಮ್ಮೆಗಳಿಗೆ ಬಹುಮಾನ

ಶ್ರೀ ಬಿ ಎ ಕಾವೇರಪ್ಪನವರ ಮುರ್ರಾ ಜಾತಿಯ ಮತ್ತು ಶ್ರೀ ನಂಜಪ್ಪನವರ ಸ್ಥಳೀಯ ಎಮ್ಮೆಗಳು, ಬಿ ಎ ಕಾವೇರಪ್ಪನವರ ಕೋಣ ಆಹಾರ ಸಂಶೋಧನಾಲಯದ ಎಮ್ಮೆ.

○ ಸಂಸ್ಥಾನದ ಜಿಲ್ಲಾ ವೈದ್ಯಾಧಿಕಾರಿಗಳ ಸಮ್ಮೇಳನವು ಈ ತಿಂಗಳು ಕಡೆಯಲ್ಲಿ ಬೆಂಗಳೂರಿನಲ್ಲಿ ಸೇರುವುದು.

ಕೃಷಿಯಲ್ಲಿ ಅಗ್ರೇಸರ್ ಕೊಡುಗೆ ನೀಡಿಸಿದವರೊಬ್ಬರ ಪಾರಿತೋ

ಮೈಸೂರು ನಗರದಿಂದ ಕೃಷಿ ಮಂತ್ರಿಗ

[illegible]

ಮೈಸೂರು ನಗರದ ಸಂಜೆ [illegible] ಗಿ೦ ರೂ. [illegible] ಒಂದನ್ನು ಕೃಷಿ ಮಂತ್ರಿ [illegible] ಶಾಸ್ತ್ರಿಯವರಿಗೆ ಒಪ್ಪಿಸಿ [illegible] ನಲ್ಲಿ ಪ್ರವಾಸ ಮಾಡಿದಾಗ, [illegible] ಕೊಡಿಸಿ ಹೆಚ್ಚು ಸಾಮಾನುಗಳನ್ನು [illegible] ಕ್ಷಾತ್ರ [illegible] ನವನ್ನು ಕೃಷಿಗಳ [illegible] ರಂತೆ ತಿಳಿಸಿರುತ್ತಾರೆ [illegible] ಕೊರ್ಟ್ಸನವರಿಗೆ [illegible] ಕೃಷ್ಣ [illegible] ನವಾಯಿತು ಆಗಿದೆ.

ಪ್ಯಾರಿಸ್ಸಿನಲ್ಲಿ ಪೆಟ್ರೋಲು ಕ್ಷಾ

ಪ್ಯಾರಿಸ್ ನಗರದಲ್ಲಿರುವ ಪ್ರತಿ [illegible] ಪೆಟ್ರೋಲು ಬಂಕುಗಳ [illegible] ಮುಚ್ಚಲ್ಪಟ್ಟಿರುವುವೆಂದು [illegible] ತಿಗಳಲ್ಲಿ ೧ ಗ್ಯಾಲನ್ ಪೆಟ್ರೋಲಿಂತ [illegible] ಬಟ್ಟುಕೊಳ್ಳಬೇಕೆಂದು ನಿರ್ದೇಶ [illegible]

ದೇವತಾರ್ಚನೆಗ
ಮೈಸೂರು ಎಂ. ಆರ್. [illegible]
ಸ್ಪೆಷಲ್ ಪ್ರೇಮಲೀಲಾ
ಅಗರಬತ್ತಿಗಳನ್ನೇ
ಉಪಯೋಗಿಸಿರಿ
ಪ್ರೇಮಲೀಲಾ ಅಗರಬತ್ತಿ ಫ್ಯಾಕ್ಟರಿ,
ಮೈಸೂರು

Edited, Printed and Published b
A. R. Nagarajan at Sadhvi Pre
D. Subbiah Road, Mysore

CITY TUTORIAL COLLEGE, MYSORE
— The oldest & the best of its kind —
INTERMEDIATE EXAMINATION - MARCH 1957
Admissions received for the following Combinations
P C M, P E M, P.C B, C B.Z, H.E.L,
ENGLISH, KANNADA & SAMSKRITA
* All Subjects for the I. C E 1st Year Exams of March 57

For best guidance: READ C T C PUBLICATIONS

Central Food Technological Research Institute, Myso

TENDER NOTIFICATION

Sealed Tenders are invited from established Build Contractors for the construction of a Hall for storing gra Tapioca and other Paste goods in the premises of the Instit at an approximate cost of Rs 10,000.

Tender Papers consisting of 3 sets of bill of quanti can be had from the undersigned during working hour payment of Rs 3 per set, which is non-refundable.

Completed Tenders in duplicate together with an ear deposit of Rs 500 strictly in cash or by Bank Draft sho be delivered to the undersigned at the Central Fo Technological Research Institute, V. V. Mohalla, Myso so as to reach him before 3 P. M. on Wednesday the December 1956.

Tenders received will be opened the same day 3-30 P M in the presence of the contractors or th representatives who may be present at the time The Direc Central Food Technological Research Institute, Myso reserves the right to accept or reject the lowest or any te without assigning any reason thereof The work will h to be completed in all respects within 3 months from date of award failing which a penalty of Rs 10 per would be levied for any extra time taken over the stipula date of completion

A. W. de Souza,
Administrative Offic

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[illegible] ಪತ್ರಿಕೆ 3 ಕಾಸು

ಬ್ರಾಂಕಾಲ್
[illegible]
[illegible]
[illegible]
ಶಕ್ತಿ ಅಂಡ್ ಕೋ.,
[illegible]
71/1. [illegible]
[illegible]
ಬೆಂಗಳೂರು–2

ಸಂಪುಟ : ೧೫] SADHVI : MONDAY 26–11–1956 ಮೈಸೂರು : ಸೋಮವಾರ ೨೬–೧೧–೧೯೫೬ [ಸಂಚಿಕೆ : ೨೩೯

ಆಸ್ವಾನ್ ಅಣೆಕಟ್ಟು ಕಟ್ಟಲು ಪಶ್ಚಿಮ ರಾಷ್ಟ್ರಗಳ ಸಹಾಯ

ಸ್ವಾನ್ ಅಣೆಕಟ್ಟು ನಿರ್ಮಾಣಕ್ಕೆ ಪಶ್ಚಿಮ ರಾಷ್ಟ್ರಗಳ ನೆರವು

ಈಜಿಪ್ಟಿನ ಆಸ್ವಾನ್ ಅಣೆಕಟ್ಟಿನ ನಿರ್ಮಾಣ ಗಿ ಪಾಶ್ಚಾತ್ಯ ರಾಷ್ಟ್ರಗಳು ಧನ ಸಹಾಯ ಡಲು ಸಿದ್ಧವಿರುವುವೆಂದೂ, ಆದರೆ ಈಜಿಪ್ಟ್ ಷ್ಟ್ರಗಳ ಸಂಬಂಧವು ಬದಲಾಗಬೇಕೆಂದೂ [illegible] ಈಜಿಪ್ಟಿಗೆ ಕೆಲವು ದಿನಗಳಿಂದ ಸಿಕ್ಕಿರುವುದೆಂದೂ, ಈ ಬಗ್ಗೆ ಈಜಿಪ್ಟಿನ ಪ್ರತಿಕ್ರಿಯೆಯು ಇನ್ನೂ ತಿಳಿದುಬಂದಿಲ್ಲವೆಂದೂ ವರದಿಯಾಗಿದೆ.

ಈಜಿಪ್ಟಿನಿಂದ ಆಕ್ರಮಣ ಪಡೆಗಳು ಕೂಡಲೆ ವಾಪಸಾಗಬೇಕು

ಶ್ವಸಂಸ್ಥೆ ಸಭೆಯಲ್ಲಿ ಅಧಿಕ ಬಹುಮತದ ನಿರ್ಣಯ

ಈಜಿಪ್ಟಿನ ಮೇಲೆ ಬ್ರಿಟನ್ನು, ಫ್ರಾನ್ಸ್ ಮತ್ತು ಇಸ್ರೇಲುಗಳು ಆಕ್ರಮಣ ನಡೆಸಿರುವ ವಿಷಯವಾಗಿ ಕಳೆದ ಮೂರು ದಿನಗಳಿಂದಲೂ ವಿಶ್ವಸಂಸ್ಥೆಯ ಸಭೆಯಲ್ಲಿ ಚರ್ಚೆ ನಡೆದು, ಈಜಿಪ್ಟಿನ ಮೇಲ್ಕಂಡ ಮೂರು ರಾಷ್ಟ್ರಗಳ ಆಕ್ರಮಣ ಪಡೆಗಳು ಒಡನೆಯೇ ಹಿಂದಕ್ಕೆ ಹೋಗಬೇಕೆಂಬ ಏಷ್ಯಾ ಮತ್ತು ಆಫ್ರಿಕಾ ರಾಷ್ಟ್ರಗಳ ನಿರ್ಣಯವನ್ನು ಮಂಡಿಸಲಾಯಿತು. ೬೩ ರಾಷ್ಟ್ರಗಳು ಅದಕ್ಕೆ ಬೆಂಬಲ ನೀಡಿ ಪ್ರಚಂಡ ಬಹುಮತದಿಂದ ಅದು ಅಂಗೀಕೃತವಾಯಿತು. ಈ ಸನ್ನಿವೇಶದಲ್ಲಿ ಅಮೇರಿಕವು ರಷ್ಯದೊಡನೆ [illegible]ವಾಗಿ ಸಹವರ್ತನೆಯನ್ನು ಪ್ರದರ್ಶಿಸಿ [illegible] ಬ್ರಿಟನ್, ಫ್ರಾನ್ಸ್, ಇಸ್ರೇಲ್, ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾ ರಾಷ್ಟ್ರಗಳು ನಿರ್ಣಯದ ವಿರೋಧವಾಗಿ ಓಟು ಕೊಟ್ಟುವು. [illegible] ಮುಗಿದನಂತರ, ವಿಶ್ವಸಂಸ್ಥೆಯು [illegible] ಪ್ರದೇಶದಲ್ಲಿ ಸೂಯೆಜ್ ಕಾಲುವೆಯನ್ನು ದುರಸ್ತಿ[illegible] ಪಡಿಸುವ ಬಗ್ಗೆ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್ ಷೀಲ್ಡ್ ರಿಗೆ ಅಧಿಕಾರ ಕೊಡುವ ನಿರ್ಣಯವು ಅಂಗೀಕಾರವಾಯಿತು. ಈ ಕಾರ್ಯಕ್ಕಾಗಿ ಮೂವರು ಪರಿಣತರನ್ನು ತಾವು ನೇಮಿಸಿರುವುದಾಗಿಯೂ ಅವರು ತಿಳಿಸಿದರು

ಗಿಯವರ ಅಪಹರಣದ ಬಗ್ಗೆ ವಿಶ್ವ ಸಂಸ್ಥೆ ಮುಂದೆ ಚರ್ಚೆ

ಹಂಗೇರಿಯ ಮಾಜಿ ಪ್ರಧಾನಿ ನಾಗಿಯವರ ಮತ್ತು ಅವರ ೪೦ ಮಂದಿ ಅನುಯಾಯಿಗಳ ಬುಡಾಪೆಸ್ಟಿನಲ್ಲಿರುವ ಯುಗೋಸ್ಲಾವಿಯಾ ರಾಯಭಾರ ಕಚೇರಿಯಿಂದ ಅಪಹರಿಸಿ, ಗೊತ್ತಿಲ್ಲದ ಸ್ಥಳಕ್ಕೆ ಗಡೀಪಾರು ಮಾಡಿರುವ ಸಂಬಂಧವಾಗಿ ಯುಗೋಸ್ಲಾವಿಯವು ರಷ್ಯಾ ಮತ್ತು ಹಂಗೇರಿಗಳಿಗೆ ಪ್ರತಿಭಟನೆಯನ್ನು ಕಳುಹಿಸಿದೆ. ವಿಷಯವನ್ನು ವಿಶ್ವ ಸಂಸ್ಥೆಯ ಜನರಲ್ ಅ[illegible] ಮುಂದೆ ಚರ್ಚೆಗೆ ತರಲು ಯುಗೋಸ್ಲಾವಿಯವು ಯೋಚಿಸುತ್ತಿರುವುದೆಂದೂ ಗೊತ್ತಾಗಿದೆ. ನಾಗಿಯವರೂ, ಅವರ ಅನುಯಾಯಿಗಳೂ ಯುಗೋಸ್ಲಾವಿಯಾಕ್ಕೆ ಹೋಗಲು ಅಪೇಕ್ಷಿಸಿ ಅಲ್ಲಿಗೆ [illegible]ರುವುದಾಗಿ ಹಂಗೇರಿ ಸರ್ಕಾರವು ಪ್ರಕಟಿಸಿ[illegible]ದಾಗಿ ಹೇಳಲಾಗಿದೆ

ರಂ. ಶ್ರೀ. ಮುಗಳಿಯವರಿಗೆ ಸನ್ಮಾನ

ಮೈಸೂರು ೨೫.

ಕನ್ನಡ ಸಾಹಿತ್ಯ ಚರಿತ್ರೆ ಗ್ರಂಥಕ್ಕಾಗಿ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿರುವ ಡಾ॥ ರಂ. ಶ್ರೀ. ಮುಗಳಿಯವರನ್ನು ಅಭಿನಂದಿಸಲು ಇಲ್ಲಿನ ಕರ್ನಾಟಕ ಸಂಘದವರು ನೆನ್ನೆ ಸಂಜೆ ಪುರಭವನದಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಶ್ರೀ ಕೋ. ಶಿವರಾಮಕಾರಂತರು ಅಧ್ಯಕ್ಷತೆ ವಹಿಸಿದ್ದರು

ಶ್ರೀಮತಿ ಎಸ್. ಪಿ. ಪದ್ಮಾವತಿಯವರಿಂದ ಪ್ರಾರ್ಥನೆ ಆದನಂತರ, ಸಂಘದ ಅಧ್ಯಕ್ಷ ಶ್ರೀ ಎಸ್. ವಿ. ರಂಗಣ್ಣನವರು ಸ್ವಾಗತ ಭಾಷಣ ಮಾಡಿ ಶ್ರೀ ಮುಗಳಿಯವರಿಗೆ ದೊರಕಿರುವ ಪ್ರಶಸ್ತಿಯು ಕನ್ನಡಿಗರಿಗೆ ಹೆಮ್ಮೆಯೆಂದು ತಿಳಿಸಿದರು. ಸಮಾರಂಭಕ್ಕೆ ಯಶಸ್ಸನ್ನು ಕೋರಿ ಬಂದಿದ್ದ ಸಂದೇಶಗಳನ್ನು ಶ್ರೀ ನಿರಂಜನರವರು ಓದಿದರು. ಶ್ರೀಮತಿ ಗೌರಮ್ಮ ನಾಗರಾಜರಾವ್ ರವರಿಂದ ಭಾರತ ವಾಚನವಾದನಂತರ ಶ್ರೀಗಳಾದ ಅನಂತರಂಗಾಚಾರ್, ಜಿ. ಎಸ್. ಶಿವರುದ್ರಪ್ಪ, ಶ್ರೀಮತಿ ಎಸ್. ರತ್ನಮ್ಮ ಮತ್ತು ಶ್ರೀ ಕೃಷ್ಣಮೂರ್ತಿಯವರು ಭಾಷಣ ಮಾಡಿ ಶ್ರೀ ಮುಗಳಿಯವರು ಕನ್ನಡ ಸಾಹಿತ್ಯಕ್ಕೆ ಸಲ್ಲಿಸಿರುವ ಸೇವೆಯನ್ನು ಪ್ರಶಂಸಿಸಿ, ಅವರಿಗೆ ದೊರೆತಿರುವ ಸನ್ಮಾನಕ್ಕಾಗಿ ಅವರನ್ನು ಅಭಿನಂದಿಸಿದರು. ಶ್ರೀಮತಿಯರಾದ ವಿಜಯಲಕ್ಷ್ಮಿ ಮತ್ತು ವಿಶಾಲಾಕ್ಷಿ ಮತ್ತು ಶ್ರೀಮತಿ ಸುನಂದ ಮತ್ತು ಯಶೋದರವರು ಕನ್ನಡ ಕವನಗಳನ್ನು ಹಾಡಿದರು

ಅನಂತರ ಶ್ರೀ ಮುಗಳಿಯವರು ಉತ್ತರವಿತ್ತು, ಸನ್ಮಾನಕ್ಕಾಗಿ ಕೃತಜ್ಞತೆಯನ್ನು ಸೂಚಿಸಿ, ತಮಗೆ ದೊರೆತಿರುವ ಪ್ರಶಸ್ತಿಯು ಕನ್ನಡಿಗರಿಗೆ ಸಂದ ಗೌರವವೆಂದು ತಿಳಿಸಿದರು. ತಾವು ಕನ್ನಡ ಸಾಹಿತ್ಯ ಚರಿತ್ರೆಯ ಗ್ರಂಥವನ್ನು ರಚಿಸಲು ಮೈಸೂರು ನಗರದಲ್ಲಿಯೇ ೧೫ ವರ್ಷಗಳ ಹಿಂದೆ ತಮಗೆ ಸ್ಫೂರ್ತಿಯೂ, ನೆರವೂ ಉಂಟಾಯಿತೆಂದು ಅವರು ಹೇಳಿ ಈ ಗ್ರಂಥ ಪ್ರಕಟಣೆಗೆ ಬಂದ ಎಡರುತೊಡರುಗಳನ್ನು ವಿವರಿಸಿದರು. ಇದೇ ವಿಷಯವಾಗಿ ತಾವು ಮತ್ತೊಂದು ಗ್ರಂಥವನ್ನು ಬರೆಯಲು ಹೊರಟಿರುವುದಾಗಿಯೂ ಅವರು ತಿಳಿಸಿದರು. ಕನ್ನಡ ಸಾಹಿತ್ಯದಲ್ಲಿ ಪ್ರಚಂಡವೂ ಮತ್ತು ಪ್ರಾಮಾಣಿಕವೂ ಆದ ವಿಮರ್ಶಾ ಗ್ರಂಥಗಳೂ, ಲೇಖನಗಳೂ ಹೆಚ್ಚುಹೆಚ್ಚಾಗಿ ಹೊರಬೀಳಬೇಕೆಂಬ ವಿಷಯವಾಗಿ ಅವರು ದೀರ್ಘವಾದ ಭಾಷಣವನ್ನು ಮಾಡಿದರು

ಅಧ್ಯಕ್ಷರು ಭಾಷಣ ಮಾಡಿ ಪ್ರಜಾಪ್ರಭುತ್ವ ಕಾಲದಲ್ಲಿ ಸಾಹಿತ್ಯದ ಬೆಳವಣಿಗೆಗೆ ಇರುವ ತೊಡಕುಗಳನ್ನು ವಿವರಿಸಿ, ಶ್ರೀ ಮುಗಳಿಯವರಂತಹ ವಿದ್ವಾಂಸರು ಸ್ವಂತ ಪ್ರಯತ್ನದಿಂದ ಅಮೂಲ್ಯವಾದ ಗ್ರಂಥಗಳನ್ನು ಪ್ರಕಟಿಸುವುದರಲ್ಲಿ ತೊಡಗುವುದಕ್ಕಾಗಿ ಅಭಿನಂದನೆಯನ್ನು ಸಲ್ಲಿಸಿದರು

ಶ್ರೀ ಕೆ. ರಾಮಸ್ವಾಮಿಯವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಅನಾಥಾಲಯದ ತೋಟದಲ್ಲಿ ದೇವಸ್ಥಾನ ಕಟ್ಟಲು ಪ್ರಯತ್ನ

ಸೋಷಲಿಸ್ಟ್ [illegible] ತಕರಾರು

ಮೈಸೂರು ೨೫.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರಿಂದ ಸ್ಥಾಪಿತವಾದ ಅನಾಥಾಲಯಕ್ಕೆ ಸೇರಿದ ತೋಟದ ಒಂದು ಭಾಗವನ್ನು ದಾನವಾಗಿ ಪಡೆದು, ಅಲ್ಲಿ ದೇವಸ್ಥಾನವನ್ನು ಕಟ್ಟಲು ತೋಟದ ಬೇಲಿಯನ್ನು ಕತ್ತರಿಸಿ ಪಾಯ ತೆಗೆಯುವುದರಲ್ಲಿ ತೊಡಗಿದ್ದ ಮೇಲುಕೋಟೆ ರಾಮದೇವರ ಮಠದ ಮಠಾಧಿಪತಿಗಳಾದ ಶ್ರೀ ನಾರಾಯಣಾಚಾರ್ಯರು ಪವರ ಕೆಲಸದಲ್ಲಿ ನಿರತರಾಗಿರುವಾಗ ಮೊದಲನೇ ವಾರ್ಡಿನ ಕೌನ್ಸಿಲರ್ [illegible]ನವರು ತಕರಾರನ್ನು ಹೂಡಿರುತ್ತಾರೆ. ಅವರಿಗೆ ಪೌರಸಭೆಯವರು ಕಟ್ಟಡ ಕಟ್ಟಲು ಕೊಟ್ಟಿರುವ ಲೈಸೆನ್ಸು ಕ್ರಮಬದ್ಧವಾಗಿಲ್ಲವೆಂದೂ, ಸದರಿ ತೋಟಕ್ಕೆ ಸೇರಿದ ಜಮೀನನ್ನು ದಾನ ಮಾಡಲು ಯಾರಿಗೂ ಹಕ್ಕಿರುವುದಿಲ್ಲವೆಂದೂ ಸೂಚಿಸಿ ಅನಾಥಾಲಯದವರು ದಾವಾ ಹೂಡಿರುತ್ತಾರೆ.

ಹರಿಕಥಾ ಕಾಲಕ್ಷೇಪ

ಸಂತೆಪೇಟೆಯಲ್ಲಿರುವ ಗಾಣಿಗರ ಶ್ರೀ ರಾಮ ಮಂದಿರದಲ್ಲಿ ಇಂದಿನಿಂದ ಪ್ರತಿನಿತ್ಯವೂ ಸಂಜೆ ೫-೩೦ ಗಂಟೆಗೆ ಶ್ರೀ ಟಿ.ಕೆ. ವೇಣುಗೋಪಾಲದಾಸರಿಂದ ಶ್ರೀನಿವಾಸ ಕಲ್ಯಾಣ ಕಥೆಯನ್ನು ನಡೆಸಲು ಏರ್ಪಡಿಸಲಾಗಿದೆ.

ದೆಹಲಿಗೆ ದಲೈಲಾಮಾರವರ ಆಗಮನ

ದೆಹಲಿಯಲ್ಲಿ ನಡೆಯುವ ಬುದ್ಧನ ೨,೫೦೦ನೇ ಮಹಾಪರಿನಿರ್ವಾಣ ಸಮಾರಂಭದಲ್ಲಿ ಭಾಗವಹಿಸಲು ಟಿಬೆಟ್ಟಿನ ಬೌದ್ಧ ಧಾರ್ಮಿಕ ನಾಯಕರಾದ ದಲೈಲಾಮಾ ಮತ್ತು ಪಂಚೆನ್ ಲಾಮಾರವರು ಭಾರತದ ಪಡೆಯ ಡಕೋಟಾ ವಿಮಾನವೊಂದರಲ್ಲಿ ಅಲ್ಲಿಗೆ ನೆನ್ನೆ ಸಂಜೆ ಆಗಮಿಸಿದರು. ಅವರೊಡನೆ ಸಿಕ್ಕಿಂ ದೇಶದ ರಾಜರೂ ಬಂದರು. ಪ್ರಧಾನಿ ನೆಹರೂ, ಉಪರಾಷ್ಟ್ರಪತಿ ಡಾ॥ ರಾಧಾಕೃಷ್ಣನ್, ಬರ್ಮದ ಮಾಜಿ ಪ್ರಧಾನಿ ಊ ನು, ಶ್ರೀಮತಿ ಇಂದಿರಾ ಗಾಂಧಿ, ಕೇಂದ್ರದ ಸಚಿವರುಗಳು ಮತ್ತು ನಾನಾ ದೇಶಗಳ ರಾಯಭಾರಿಗಳು ಅವರಿಗೆ ಆದ್ಯಸ್ವಾಗತ ನೀಡಿದರು. ಅಲ್ಲಿ ಸೇರಿದ್ದ ಅಗಾಧ ಜನಸಂದಣಿಯು ಅವರಿಗೆ ಜಯಕಾರ ಹಾಕಿತು

ಪಂಡಿತ ನೆಹರೂ ಮತ್ತು ಡಾ॥ ರಾಧಾಕೃಷ್ಣನ್ ರವರು ದಲೈಲಾಮಾರವರಿಗೆ, ಟಿಬೆಟ್ಟಿನ ಪದ್ಧತಿ ಪ್ರಕಾರ, ಮೊದಲು ಒಂದು ಬಿಳಿಯ ರೇಷ್ಮೆ ಪಟ್ಟೆಯನ್ನೂ ಮತ್ತು ಹೂವಿನ ಬೊಕೆಯನ್ನೂ ಅರ್ಪಿಸಿದರು. ಲಾಮಾರವರು [illegible] ಟ್ಟಿಗಳಿಗೆ ಮುತ್ತಿಟ್ಟು, ಅವನ್ನು ಅವರುಗಳಿಗೇ ವಾಪಸು ಕೊಟ್ಟರು

ದಲೈಲಾಮಾರವರು ಅಲ್ಲಿ ಸೇರಿದ್ದ ಭಾರಿ ಸಮೂಹವನ್ನುದ್ದೇಶಿಸಿ ಭಾಷಣ ಮಾಡಿ ತಮ್ಮ ಈ ಭೇಟಿಯಿಂದ ಭಾರತ ಮತ್ತು ಟಿಬೆಟ್ಟುಗಳ ಸಾಂಸ್ಕೃತಿಕ ಮತ್ತು ರಾಜಕೀಯ ಸಂಬಂಧಗಳು ಉತ್ತಮಗೊಳ್ಳುವವೆಂಬ ಆಶೆಯನ್ನು ವ್ಯಕ್ತಪಡಿಸಿದರು

ಅನೀತಿ ವ್ಯಾಪಾರಕ್ಕಾಗಿ ಸಜಾ ಮತ್ತು ದಂಡ

ಮೈಸೂರು ೨೫.

ಕೃಷ್ಣರಾಜನಗರದ [illegible] ನ್ಯಾಯಾಲಯದ [illegible] ೨ ವರ್ಷ ಕಠಿಣ ಶಿಕ್ಷೆ ಮತ್ತು ೨೦೦ ರೂ. ಜುಲ್ಮಾನೆ, ತಪ್ಪಿದರೆ ೬ ತಿಂಗಳು ಕಠಿಣ ಶಿಕ್ಷೆಯನ್ನೂ; ಅವರಿಬ್ಬರಿಗೆ ೧ ವರ್ಷ ಕಠಿಣ ಶಿಕ್ಷೆಯನ್ನೂ ವಿಧಿಸಿದರು.

ಎಂ. ಪಿ. ನರಸಿಂಹಯ್ಯನವರ ನಿಧನ

[illegible] ವ ಶ್ರೀ ಎಂ. ಪಿ. ನರಸಿಂಹಯ್ಯನವರು [illegible] ತಮ್ಮ ೫೬ನೇ ವಯಸ್ಸಿನಲ್ಲಿ [illegible] ನಿಂದ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧುವರ್ಗದವರಿಗೆ ಹೃತ್ಪೂರ್ವಕ ಸಹಾನುಭೂತಿಯನ್ನು ಸೂಚಿಸುತ್ತೇವೆ.

ಕಾಂಗ್ರೆಸ್ಸಿಗೆ ಬಲವಾದ ವಿರೋಧ ಪಕ್ಷ ರಚಿಸಲು ಕರೆ

ಪ್ರಜಾ ಸಮಾಜವಾದಿ ಪಕ್ಷದ [illegible]

[illegible] ಪ್ರಜಾ ಸಮಾಜವಾದಿ ಪಕ್ಷದ [illegible] ಶ್ರೀ [illegible] ಕಾಂಗ್ರೆಸ್ [illegible] ಪ್ರಜಾ ಸಮಾಜವಾದಿ ಪಕ್ಷವನ್ನು [illegible]

ರೈಲು ದುರಂತದಲ್ಲಿ ಸತ್ತವರ ಸಂಖ್ಯೆ ೧೪೭

[illegible] ಎಕ್ಸ್‌ಪ್ರೆಸ್ ರೈಲು [illegible] ಇದುವರೆಗೆ ಒಟ್ಟು ೧೪೭ [illegible]

ಮಾನವ ಜನಾಂಗದ ಸೌಹಾರ್ದದಲ್ಲಿ ವಿದ್ಯಾಭ್ಯಾಸದ ಪಾತ್ರ

ಪೌರ ಸತ್ಕಾರ ಸಮಾರಂಭದಲ್ಲಿ ಅರಬ್ ನಿಯೋಗದ ನಾಯಕರ ಹೇಳಿಕೆ

ಮೈಸೂರು ೨೬

ಅರಬ್ ರಾಜ್ಯಗಳ ಗ್ರಾಮಾಂತರ ಶಿಕ್ಷಣಪದ್ಧತಿಯ ವಿಚಾರಣೆಗಾಗಿ ನೇಮಿಸಲ್ಪಟ್ಟಿರುವ ಅಂತರರಾಷ್ಟ್ರೀಯ ನಿಯೋಗದ ಸದಸ್ಯರ ಗೌರವಾರ್ಥವಾಗಿ ನಗರದ ಪೌರಸಭೆಯವರು ಮೊನ್ನೆ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ನಗರದ ಅನೇಕ ಗಣ್ಯ ಮಹನೀಯರೂ, ಮಹಿಳೆಯರೂ ವಿಧಾನ ಪರಿಷತ್ತಿನ ಅಧ್ಯಕ್ಷ ಶ್ರೀ ಟಿ ಸುಬ್ರಹ್ಮಣ್ಯರವರೂ, ಆರ್ಥಿಕ ಸಚಿವರಾದ ಶ್ರೀ ಟಿ ಮರಿಯಪ್ಪನವರೂ, ಶ್ರೀ ಚನ್ನಯ್ಯನವರೂ ಬಂದಿದ್ದರು.

ಪೌರಸಭಾಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಸ್ವಾಗತ ಭಾಷಣ ಮಾಡಿ ನಿಯೋಗದವರ ಕಾರ್ಯ ಕಲಾಪಗಳಿಗೆ ಯಶಸ್ಸನ್ನು ಕೋರಿದುದಲ್ಲದೆ ನಗರದಲ್ಲಿ ನಡೆಯುತ್ತಿರುವ ಅಕ್ಷರ ಪ್ರಚಾರ ಕಾರ್ಯಕ್ರಮಗಳನ್ನು ವಿವರಿಸಿದರು

ನಿಯೋಗದ ನಾಯಕರಾದ ಅಬೀದ್ ಎ ಕುರಾನಿಯವರು ಸತ್ಕಾರಕ್ಕಾಗಿ ಧನ್ಯವಾದವನ್ನು ಸಲ್ಲಿಸಿ ಅರಬ್ಬಿ ದೇಶಗಳಿಗೂ ಭರತಖಂಡಕ್ಕೂ ಸಾವಿರಾರು ವರ್ಷಗಳಿಂದ ಸಾಂಸ್ಕೃತಿಕ ಸಂಬಂಧವು ಇರುವುದೆಂದು ಹೇಳಿ, ಹಲವು ವಿಚಾರಗಳಲ್ಲಿ ಅರಬ್ಬಿ ಸಂಸ್ಕೃತಿ ಮತ್ತು ತತ್ತ್ವ ಶಾಸ್ತ್ರಗಳಿಗೆ ಭಾರತವೇ ಮೂಲ ಸ್ಥಾನವಾಗಿರುವುದೆಂದು ನುಡಿದರು. ಗಣಿತದಲ್ಲಿ ಉಪಯೋಗಿಸಲ್ಪಡುವ ಸಂಖ್ಯೆಗಳನ್ನು ಅರಬ್ಬಿ ಸಂಖ್ಯೆಯೆಂದು ಪಾಶ್ಚಿಮಾತ್ಯರು ಹೇಳುತ್ತಿರುವರಾದರೂ ಅವುಗಳನ್ನು ಅರಬ್ಬಿ ದೇಶವು ಭಾರತದಿಂದ ಸಾವಿರಾರು ವರ್ಷಗಳ ಹಿಂದೆಯೇ ಕಲಿತುದರಿಂದ ಅರಬ್ಬರು ಅದನ್ನು ಹಿಂದೂ ಅಂಕೆಗಳೆಂದೇ ಈಗಲೂ ಕರೆಯುತ್ತಿರುವರೆಂದು ಅವರು ಹೇಳಿದರು

ಹಿಂಸಾವಾದಿಗಳ ಪ್ರಾಬಲ್ಯವನ್ನು ಎದುರಿಸಿ ಸಮಾಜದ ಪಿಡುಗುಗಳನ್ನು ನಿವಾರಿಸಿ ಆತ್ಮನಿರ್ಧಾರದ ಹಕ್ಕನ್ನೂ, ರಾಷ್ಟ್ರ ಸ್ವಾತಂತ್ರ್ಯವನ್ನೂ ಗಳಿಸುವುದರಲ್ಲಿ ಮಹಾತ್ಮ ಗಾಂಧಿಯವರು ಹಾಕಿಕೊಟ್ಟಿರುವ ಮಾರ್ಗವು ಈಗಲೂ ತಮ್ಮ ದೇಶದ ತರುಣರಿಗೆ ಸ್ಫೂರ್ತಿಯನ್ನುಂಟುಮಾಡುತ್ತಿರುವುದಾಗಿ ಅವರು ನುಡಿದರು. ಇಂದಿನ ನಾಯಕರಾದ ಪ್ರಧಾನಿ ನೆಹರೂರವರ ಶಾಂತಿ ಸಾಧನೆಯ ಕಾರ್ಯಕ್ರಮಗಳು ಸಹಾ ತಮ್ಮ ದೇಶ ಬಾಂಧವರ ಮೆಚ್ಚುಗೆಯನ್ನು ಪಡೆದಿರುವುದೆಂದು ಅವರು ತಿಳಿಸಿದರು

ವಿಜ್ಞಾನದ ಪ್ರಗತಿಯಿಂದ ಜಗತ್ತಿನ ವಿವಿಧ ಭಾಗಗಳು ಪರಸ್ಪರ ಸಮೀಪಕ್ಕೆ ಬಂದಿರುವುದೇನೋ ಸಹಜ, ಆದರೆ ಇದರಿಂದಲೇ ಪ್ರಪಂಚದ ರಾಷ್ಟ್ರಗಳ ಸ್ನೇಹಸೌಹಾರ್ದಗಳು ಬೆಳೆಯುವುವೆಂದು ಹೇಳಲು ಸಾಧ್ಯವಿಲ್ಲ. ಹತ್ತಿರ ಬಂದಂತೆಲ್ಲಾ ಘರ್ಷಣೆಗಳೂ ಹೆಚ್ಚಬಹುದು. ಅಂತಹವು ಇತ್ತೀಚೆಗೆ ಉಂಟಾಗುತ್ತಿವೆ. ಆದುದರಿಂದ ಜನಾಂಗಗಳಲ್ಲಿ ನಿಜವಾದ ಹೃದಯ ಪರಿವರ್ತನೆಯಾಗಬೇಕು. ಇದಕ್ಕೆ ಸೂಕ್ತವಾದ ವಿದ್ಯಾಪ್ರಗತಿಯು ಅತ್ಯಗತ್ಯ. ಅನೇಕ ದೇಶಗಳಲ್ಲಿ ವ್ಯವಸಾಯವೇ ಪ್ರಧಾನ ವೃತ್ತಿಯಾಗಿರುವುದರಿಂದ ಜನರು ವಿಶೇಷವಾಗಿ ಗ್ರಾಮಾಂತರಗಳಲ್ಲಿ ವಾಸಿಸುತ್ತಿದ್ದಾರೆ. ಆದುದರಿಂದ ಜ್ಞಾನ ಪ್ರಸಾರ ಕಾರ್ಯವು ಹಳ್ಳಿಗಳಲ್ಲಿಯೇ ಹೆಚ್ಚಾಗಿ ನಡೆಯಬೇಕು. ಧ್ಯೇಯ ಸಾಧನೆಯ ಮೂಲಕ ವಿಶ್ವದ ಜನಾಂಗಗಳಲ್ಲಿ ಸ್ನೇಹ ಸೌಹಾರ್ದಗಳನ್ನು ಬೆಳೆಸಲು ಎಲ್ಲರೂ ಸಹಕರಿಸಬೇಕು. ಎಂಬುದಾಗಿ ಅವರು ನುಡಿದರು

ನಿಯೋಗದವರ ಗೌರವಾರ್ಥವಾಗಿ ನೆನ್ನೆ ಸಂಜೆ [illegible] ಭವನದಲ್ಲಿ ವಯಸ್ಕರ ಶಿಕ್ಷಣ ಸಮಿತಿಯವರು ಸಂಗೀತ, ನೃತ್ಯ, ವಾದ್ಯಗೋಷ್ಠಿ ಮುಂತಾದ ಮನರಂಜನೆಯ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು

[illegible] Printed and Published by A. T. Nagarajan at Sadhvi Press, [illegible] Road, Mysore

ಸರ್ಕಾರದವರು ಹಿಂದಿ ಭಾಷೆಗೆ ಹೆಚ್ಚು ಪ್ರೋತ್ಸಾಹ ಕೊಡಬೇಕು

ಪ್ರಚಾರಕ ವಿದ್ಯಾಲಯದಲ್ಲಿ ಟಿ. ಸುಬ್ರಹ್ಮಣ್ಯರವರ ಭಾಷಣ

ಮೈಸೂರು ೨೬

ನಗರದ ಹಿಂದೀ ಪ್ರಚಾರಕ ವಿದ್ಯಾಲಯದಲ್ಲಿ ನಡೆಯುತ್ತಿದ್ದ ಶಿಕ್ಷಣದ ಸತ್ರಾಂತ ಸಮಾರಂಭದ ಅಧ್ಯಕ್ಷತೆಯನ್ನು ವಿಧಾನ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಟಿ ಸುಬ್ರಹ್ಮಣ್ಯರವರು ನೊನ್ನೆ ಸಂಜೆ ವಹಿಸಿ ಭಾಷಣ ಮಾಡಿ, ಮೈಸೂರು ಸರ್ಕಾರದವರು ಹಿಂದಿ ಭಾಷೆಯ ಪ್ರಚಾರಕ್ಕಾಗಿ ಇದುವರೆಗೆ ನೀಡಿರುವ ಸಹಾಯವು ಸ್ವಲ್ಪವೂ ಸಾಲದೆಂದೂ, ಇನ್ನು ಮುಂದಾದರೂ ಅವರು ಉದಾರವಾದ ನೆರವನ್ನು ನೀಡಬೇಕೆಂದೂ ಸೂಚಿಸಿದರು. ಹಿಂದಿಯು ರಾಷ್ಟ್ರ ಭಾಷೆಯೆಂದು ಈಗಾಗಲೇ ಅಂಗೀಕರಿಸಲ್ಪಟ್ಟಿದೆ. ದೇಶದ ಎಲ್ಲ ವ್ಯವಹಾರಗಳೂ ಆ ಭಾಷೆಯಲ್ಲಿಯೇ ನಡೆಯುವ ಕಾಲವು ಸಮೀಪಿಸುತ್ತಿದೆ. ಇಂಗ್ಲಿಷ್ ಭಾಷೆಯು ಎಂದೆಂದಿಗೂ ಇಲ್ಲಿ ನೆಲೆಸಿರುವುದೆಂದು ಭಾವಿಸಲು ಅವಕಾಶವಿಲ್ಲ. ಆದ್ದರಿಂದ ನಮ್ಮ ತರುಣ ತರುಣಿಯರು ಹೆಚ್ಚುಹೆಚ್ಚಾಗಿ ಹಿಂದಿ ಭಾಷೆಯನ್ನು ಅಭ್ಯಾಸ ಮಾಡಿ, ರಾಷ್ಟ್ರೀಯ ವ್ಯವಹಾರಗಳಲ್ಲಿ ತಮ್ಮ ಪಾತ್ರವನ್ನು ವಹಿಸಲು ಸಿದ್ಧರಾಗಬೇಕು—ಎಂದು ಅವರು ನುಡಿದರು

ಹಿಂದಿ ಭಾಷೆಯಿಂದ ಯಾವ ಪ್ರಾಂತೀಯ ಭಾಷೆಗೂ ಧಕ್ಕೆಯುಂಟಾಗುವುದಿಲ್ಲ. ಒಂದು ಭಾಷೆಯು ಇನ್ನೊಂದು ಭಾಷೆಯನ್ನು ತೊಡೆದು ಹಾಕುವುದೆಂಬುದು ಸುಳ್ಳು. ಈ ಬಗ್ಗೆ ಯಾರೂ ಸಂಶಯಪಡಬೇಕಾಗಿಲ್ಲ—ಎಂದು ಅವರು ಹೇಳಿ ಹಿಂದಿ ಭಾಷೆಯಲ್ಲಿ ಪರಿಣತರಾದವರಿಗೆ ಮುಂದೆ ಸರ್ಕಾರ ಮತ್ತು ಖಾಸಗಿ ವ್ಯವಹಾರಗಳಲ್ಲಿ ಹೆಚ್ಚಿನ ಪುರಸ್ಕಾರ ದೊರೆಯುವುದೆಂದು ತಿಳಿಸಿದರು. ಮೈಸೂರು ನಗರದಲ್ಲಿ ನಡೆಯುತ್ತಿರುವ ಹಿಂದಿ ಪ್ರಚಾರ ಕಾರ್ಯಗಳಿಗಾಗಿ ಮೆಚ್ಚುಗೆಯನ್ನು ಸೂಚಿಸಿದರು

ಮೊದಲು ಪ್ರಾರ್ಥನೆಯಾದನಂತರ, ವ್ಯವಸ್ಥಾಪಕರಾದ ಶ್ರೀ ಎಂ ಕೆ ರಾಜಗೋಪಾಲ್‌ರವರು ಸ್ವಾಗತ ಭಾಷಣ ಮಾಡಿದರು. ವಿದ್ಯಾಲಯದಲ್ಲಿ ಆಚಾರ್ಯರಾದ ಶ್ರೀ ಬಿ ಎಸ್ ಸುದರ್ಶನಾಚಾರ್ಯರು ಶಿಕ್ಷಣ ಕ್ರಮದ ವಿವರಗಳನ್ನು ತಿಳಿಸಿದರು. ಕಡೆಯಲ್ಲಿ ಶ್ರೀ ಎನ್. ನಾಗಪ್ಪನವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಹಾಕಿ ಪಂದ್ಯದಲ್ಲಿ ರಾಮಕೃಷ್ಣ ಶಾಲೆಗೆ ಶೀಲ್ಡ್

ನಗರದಲ್ಲಿರುವ ಶ್ರೀ ರಾಮಕೃಷ್ಣ ವಿದ್ಯಾಶಾಲಾ ವಿದ್ಯಾರ್ಥಿಗಳು ಸಿಲ್ವರ್ ಜ್ಯೂಬಿಲಿ ಹಾಕಿ ಟೂರ್ನಮೆಂಟಿನಲ್ಲಿ ಸೆಂಟ್ ಫಿಲೋಮಿನಾ ಶಾಲೆಯವರೊಡನೆ ಫೈನಲ್ ಪಂದ್ಯವಾಡಿ ೧-೦ ಗೋಲಿನಿಂದ ಜಯಗಳಿಸಿ ಮೂರನೆ ಬಾರಿಗೆ ಶೀಲ್ಡನ್ನು ಗಳಿಸಿಕೊಂಡರು. ಬಿ ಕೆ ಕಾರಿಯಪ್ಪನವರು ಗೋಲನ್ನು ಹೊಡೆದರು. ಅದಕ್ಕೆ ಮುಂಚೆ ರಾಮಕೃಷ್ಣ ಶಾಲೆಯವರು ಮಹಾರಾಜಾ ಹೈಸ್ಕೂಲ್ ವಿದ್ಯಾರ್ಥಿಗಳನ್ನು ಮೊದಲನೆ ರೌಂಡಿನಲ್ಲಿ ೫-೦ ಮತ್ತು ಹಾರ್ಡ್ವಿಕ್ ಶಾಲೆಯವರನ್ನು ಸೆಮಿಫೈನಲ್ಸ್‌ನಲ್ಲಿ ೧-೦ ಗೋಲಿನಿಂದ ಸೋಲಿಸಿದ್ದರು.

ಕಳುವು ಮಾಡುತ್ತಿದ್ದಾಗ ಬಂಧನ

ನಗರದ ರಾಮವಿಲಾಸ ಅಗ್ರಹಾರದಲ್ಲಿರುವ ಶ್ರೀ ಅಹೋಬಲ ಮಠಕ್ಕೆ ನಾಗಪ್ಪ ಎಂಬ ಹಳೇ ಕೇಡಿಯೊಬ್ಬನು ಕಳೆದ ಗುರುವಾರ ಹೋಗಿ ದೇವರ ಸೇವೆಯ ನೆಪದಿಂದ ಅಲ್ಲಿದ್ದ ಬೆಳ್ಳಿ ಸಾಮಾನುಗಳನ್ನು ತೆಗೆದು ಗಂಟು ಕಟ್ಟುತ್ತಿದ್ದಾಗ ಶಾಸ್ತ್ರಿಗಳ ಶಬ್ದವಾಗಲು ಅಲ್ಲಿನ ವಿದ್ಯಾರ್ಥಿಗಳು ಓಡಿಬಂದು ಅವನನ್ನು ಹಿಡಿದು ಪೊಲೀಸರ ವಶಕ್ಕೆ ಒಪ್ಪಿಸಿದರು

ದಾಂಪತ್ಯ ವಿಚ್ಛೇದನವನ್ನು ಸುಲಭಗೊಳಿಸುವ ಮಸೂದೆ

ದಾಂಪತ್ಯ ವಿಚ್ಛೇದನವನ್ನು ಸುಲಭಗೊಳಿಸುವ ಖಾಸಗಿ ಮಸೂದೆಯೊಂದನ್ನು ಲೋಕಸಭೆಯಲ್ಲಿ ಇಂದಿರಾಮಾಯದೇವಿಯವರು ತಂದಿರುತ್ತಾರೆ

ರೂಪಾಯಿಗೆ ೩ ಸೇರಿನಂತೆ ಅಕ್ಕಿ ಒದಗಿಸಲು ಮನವಿ

ನಂಜನಗೂಡು ೨೪

ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಆರ್ ಚನ್ನರುದ್ರಪ್ಪನವರು ಇಲ್ಲಿಗೆ ನೆನ್ನೆ ಭೇಟಿಯಿತ್ತರು. ಪುರಸಭೆಯ ಉಪಾಧ್ಯಕ್ಷ ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರು ಮತ್ತು ಶಾಸನಸಭಾ ಸದಸ್ಯ ಶ್ರೀ ಎಂ ಲಿಂಗಣ್ಣನವರು ಅವರನ್ನು ಸಂಧಿಸಿ ಟೌನಿನಲ್ಲಿರುವ ಸರ್ಕಾರದ ೧,೫೦೦ ಪಲ್ಲಾ ಅಕ್ಕಿಯನ್ನು ಜನರಿಗೆ ರೂಪಾಯಿಗೆ ೩ ಸೇರಿನಂತೆ ಬಿಕರಿ ಮಾಡುವಂತೆ ಕೋರಿದರು. ಅವರ ಮನವಿಯನ್ನು ಪರಿಶೀಲಿಸುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು

ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿನಿಯೋಗ

ಇಲ್ಲಿನ ವಿದ್ಯಾಪೀಠದ ೧೯ನೇ ತಂಡದ ವಿದ್ಯಾರ್ಥಿಗಳಿಗೆ ನೆನ್ನೆ ಸುತ್ತೂರು ಶ್ರೀ ಶಿವರಾತ್ರೀಶ್ವರ ಸ್ವಾಮಿಗಳವರು ಪ್ರಶಸ್ತಿ ಪತ್ರಗಳನ್ನು ಹಂಚಿದರು. ಸಬ್ ಡಿವಿಜನ್ ಆಫೀಸರ್ ಶ್ರೀ ಜಿ. ಸಿ. ಚನ್ನರಾಜ ಅರಸಿನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಬಿ ಎ. ಸತ್ಯನಾರಾಯಣರವರು ಮಾತನಾಡಿ ಇದುವರೆಗೆ ವಿದ್ಯಾಪೀಠದಲ್ಲಿ ೫೫೦ ಮಂದಿ ಶಿಕ್ಷಣ ಪಡೆದಿರುವುದಾಗಿ ತಿಳಿಸಿದರು. ಶ್ರೀ ಕೆ ವಿಶ್ವೇಶ್ವರಗೌಡರು ಭಾಷಣ ಮಾಡಿ ಶಿಕ್ಷಣ ಪಡೆದವರು ತಮ್ಮ ಗ್ರಾಮಗಳಿಗೆ ಹಿಂದಿರುಗಿದಮೇಲೆ ಜನರಿಗೆ ಸೇವೆಯನ್ನು ಸಲ್ಲಿಸಬೇಕೆಂದೂ, ವಿದ್ಯಾಪೀಠಕ್ಕೆ ಕೀರ್ತಿ ತರಬೇಕೆಂದೂ ಸೂಚಿಸಿದರು

ಪ್ರಾದೇಶಿಕ ಸೈನ್ಯದಲ್ಲಿ ಕಡ್ಡಾಯದ ಸೇವಾ ಶಾಸನ

ದೃಢಕಾಯರಾದ ಸರ್ಕಾರಿ ನೌಕರರನ್ನು ಪ್ರಾದೇಶಿಕ ಸೈನ್ಯಕ್ಕೆ ಸೇರಿಸುವುದಕ್ಕೆ ಅವಕಾಶ ನೀಡುವ ಮಸೂದೆಯನ್ನು ಲೋಕಸಭೆಯು ಅಂಗೀಕರಿಸಿದೆ. ಸಾರ್ವಜನಿಕ ಸೇವೆಗಳಲ್ಲಿ ಪಾರಿಭಾಷಿಕ ವಿದ್ಯೆ ಕಲಿತವರನ್ನು ತೆಗೆದುಕೊಳ್ಳುವ ಬಗ್ಗೆ ಇರುವ ತೊಂದರೆಯನ್ನು ನಿವಾರಿಸಲು ಮಸೂದೆಯನ್ನು ತರಲಾಗಿದೆಯೆಂದು ಕೇಂದ್ರ ರಕ್ಷಣಾ ಮಂತ್ರಿ ಕಟ್ಜೂರವರು ತಿಳಿಸಿದ್ದಾರೆ. ಭಾರತ ಸರ್ಕಾರದವರು ನಾಗರಿಕರನ್ನು ರಕ್ಷಣಾ ಸೇವೆಗೆ ಕರೆಯಲು ಇದರಿಂದ ಅವಕಾಶವಾಗಿದೆ. ಹೆಂಗಸರೂ ಅದರಲ್ಲಿ ಸೇರಲು [illegible] ಮಸೂದೆ ಬಗ್ಗೆ ಚರ್ಚೆಯಲ್ಲಿ ಜೋಕಿಂ ಆಳ್ವರವರು ಭಾಷಣ ಮಾಡಿ, ೧೯೫೭ರಲ್ಲಿ ಪಾಕಿಸ್ತಾನವು ಗುಣ ಮತ್ತು ಮೊತ್ತದಲ್ಲಿ ಏಷ್ಯದಲ್ಲೇ ಪ್ರಥಮ ವಿಮಾನ ಬಲವುಳ್ಳ ರಾಷ್ಟ್ರವಾಗುವುದರಿಂದ ಭಾರತ ಸರ್ಕಾರದವರು ಎಚ್ಚರಿಕೆ ವಹಿಸಬೇಕೆಂದು ಸೂಚಿಸಿದರು

ಬೊಂಬಾಯಿಯಲ್ಲಿ ನೆಹರೂ ಜಯಂತಿ

ಬೊಂಬಾಯಿಯಲ್ಲಿರುವ ರಾಷ್ಟ್ರೀಯ ಕನ್ನಡ ವಿದ್ಯಾಭ್ಯಾಸಸಂಘದ ಪ್ರೌಢಶಾಲೆಯಲ್ಲಿ ಕಳೆದ ೧೪ನೇ ತಾರೀಖು ನೆಹರೂರವರ ೬೭ನೇ ಹುಟ್ಟುಹಬ್ಬದ ದಿನಾಚರಣೆಯು ನೆರವೇರಿತು. ಬೊಂಬಾಯಿಯ ಹಿರಿಯ ಶಾಸನಸಭಾಧ್ಯಕ್ಷರಾಗಿದ್ದ ಶ್ರೀ ಆರ್ ಎಸ್ ಹುಕ್ಕೇರಿಕರ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಹಾಯಾರ್ಥ ಕ್ರಿಕೆಟ್ ಪಂದ್ಯಗಳ [illegible] ನಡೆಯಿತು. ಶ್ರೀ ಹುಕ್ಕೇರಿಕರ್‌ರವರು ನೆಹರೂರವರ ಜೀವನದಲ್ಲಿ ಹಲವು ಮುಖ್ಯ ಘಟನೆಗಳನ್ನು ವಿವರಿಸಿದರು. ಶಾಲಾ ಪ್ರಿನ್ಸಿಪಾಲರಾದ ಶ್ರೀ ಎ. ನರಸಿಂಹಯ್ಯನವರು ಸ್ವಾಗತ ಭಾಷಣ ಮಾಡಿದರು. ಸಮಾರಂಭದಲ್ಲಿ ನೆಹರೂರವರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿತ್ತು. ಶ್ರೀ ನಾಗರಾಜ್‌ರವರು ವಂದನಾರ್ಪಣೆ ಮಾಡಿದರು

ಬಲ್ಗೇರಿಯಾ [illegible]ದಲ್ಲಿ [illegible] ದೇಶಕ್ಕೆ ಪ್ರಾಶಸ್ತ್ಯ

೫೫ ೫೬ನೇ ಸಾಲಿನಲ್ಲಿ ಬಲ್ಗೇರಿಯಾ [illegible] ಕೆಲಸದಲ್ಲಿ ಉತ್ತಮ [illegible] ಭಾರತ ದೇಶದ ಕೇಂದ್ರಕ್ಕೆ ರಾಷ್ಟ್ರೀಯ ಬಲ್ಗೇರಿಯಾ [illegible] ಬಹುಮಾನವನ್ನು [illegible] ಮೈಸೂರಿಗೆ ಬಂದಿದ್ದು ನಗರದಲ್ಲಿ [illegible]ವರು ಸಭೆ ಸೇರಿದ್ದರು

ಡಿಸೆಂಬರ್ ೪ನೇ ತಾರೀಖು ಬೆಂಗಳೂರಿಗೆ ಚೌ ಎನ್ ಲೈ ಭೇ

ಚೀನದ ಪ್ರಧಾನಿ ಚೌ ಎನ್ ಲೈ ಅವ ಇದೇ ತಿಂಗಳು ೨೮ರಂದು ದೆಹಲಿಗೆ ಆಗಮಿ ವರು. ಅವರು ಡಿಸೆಂಬರ್ ೬ನೇ ತಾರೀಖು ಬೆಂ ಗಳೂರಿಗೆ ಬಂದು ಯಂತ್ರ ಕಾರ್ಖಾನೆ ಮತ್ತು ಹಿಂದೂಸ್ತಾನ ವಿಮಾನ ಕಾರ್ಖಾನೆಗಳನ್ನು ದರ್ಶಿಸುವರು. ಅವರಿಗೆ ಅಲ್ಲಿ ಪೌರ ಸ್ವಾಗತ ಸಹ ಏರ್ಪಾಡಾಗುವುದು. ಪ್ರಾಯಶಃ ಅವ ಬೃಂದಾವನ ಮತ್ತು ಮೈಸೂರುಗಳಿಗೆ ಭೇ ಯಾಯಬಹುದು

ಬ್ರಿಟನ್-ಫ್ರಾನ್ಸುಗಳೊಡನೆ ಈಜಿಪ್ಟಿನ ವ್ಯಾಪಾರವಿಲ್ಲ

ಬ್ರಿಟನ್ ಮತ್ತು ಫ್ರಾನ್ಸುಗಳೊಡನೆ ವ್ಯಾ ವನ್ನು ಈಜಿಪ್ಟು ನಿಷೇಧಿಸಿ, ಅದರ ಬದಲು ಇತರ ರಾಷ್ಟ್ರಗಳೊಡನೆ ವ್ಯಾಪಾರ ಸಂಬಂಧ ಟ್ಟುಕೊಳ್ಳಲು ನಿರ್ಧರಿಸಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರ

ಬೆಳಗ್ಗೆ ೭-೧೫ ಡಾ. ಬಿ. ವೆಂಕಟೇಶಯ್ಯ ದೇವರ ನಾಮಗಳು ೭-೪೦ ಗಾಂಧಿ ವಿಚಾರ ಧ್ಯಾಹ್ನ ೧೨ ಮತ್ತು ೨ ಕಳಸಪ್ಪ—ಹಾಸ್ಯ ೧೨-೪೫ ವನಿತಾ ವಿಹಾರ. ಸಂಜೆ ೫-೩೦ ಕ ಬಿ. ವೆಂಕಟೇಶಯ್ಯ—ಸಂಗೀತ ೭-೩೦ ಕೆ ಎ ವೆಂಕಟೇಶಯ್ಯ—ಕಾವ್ಯ ವಾಚನ ೮ ನರಕ ದಲ್ಲಿ ನಾರದರು: ಟಿ. ಎಸ್. ರಾಮಚಂದ್ರ ಯರ ನಾಟಕ ೮ ೩೦ ಕೇಸರಿ ಪ್ರವಾಸ. ೯ ಎ ದೊರೆಸ್ವಾಮಿ ಅಯ್ಯಂಗಾರ್-ವೀಣೆ ಚಿತ್ರ ಸಂಗೀತ. ೧೦ ೧೫ ಉರ್ದು ಗೀತೆ

ಕಣ್ಣಾನೂರು ಬನೀನುಗಳು

ಮದರಾಸು, ಮಧುರಾ, ಮೈಸೂರು, ಕ ಕೋಲಂ, ತಲಚೇರಿ ಮೊದಲಾದ ವಸ್ತು ಪ್ರ ದರ್ಶನಗಳಲ್ಲಿ ಉತ್ತಮ ಬಹುಮಾನಗಳನ್ನು ದು ಜನ ಮೆಚ್ಚುಗೆ ಪಡೆದಿರುವ "ಕಣ್ಣಾನೂ ಚಿರೋಲಿ ಹೊಸೈರಿ ಫ್ಯಾಕ್ಟರಿ ಬನೀನು ಳು" ಎಲ್ಲಾ ಕಡೆಗಳಲ್ಲಿಯೂ ದೊರೆಯುತ್ತ

ವಿಳಾಸ –

ದಿ ಚಿರೋಲಿ ಹೊಸೈರಿ ಫ್ಯಾಕ್ಟರಿ,

ಕಣ್ಣಾನೂರು

SRI GAYATHR
TALKIES
FORBIDDEN PLANET
Extended for to-day & to-morrow
on public request

From 28-11-56
M. G. M.s most attractive Musi
& Dance Picture in Technicol
INVITATION TO THE
DANCE
Featuring :- Jane Kelly
& Belita

ತಿಳುವಳಿಕೆ ನೋಟೀಸು

ಇದರಿಂದ ಸಮಸ್ತ ಜನಗಳೂ ತಿಳಿಯ ಪಡಿಸುವುದೇನೆಂದರೆ –

[illegible] ಗ್ರಾಮದ [illegible] 16ನೇ [illegible]

ಗ್ರಾಮದ [illegible]

26-11-56 [illegible]

[illegible] ನಂ. 793

ಸಂಸ್ಥಾನದ [illegible]
[illegible]
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ [illegible]
[illegible]



[illegible]

ಚಂದಾ ದರ
[illegible]
[illegible]
[illegible]
[illegible]
[illegible]

ಸಂಪುಟ : [illegible]] SADHVI : TUESDAY 27—11—1956 ಮೈಸೂರು : ಮಂಗಳವಾರ ೨೭—೧೧—೧೯೫೬ [ಸಂಚಿಕೆ : [illegible]

ಪೋರ್ಟ್ ಸೈಯದ್ದಿಗೆ ಹೆಚ್ಚಿನ ಬ್ರಿಟಿಷ್-ಫ್ರೆಂಚ್ ಸೇನೆ ?

ಬಿ. ವಿ. ಪಂಡಿತರಿಗೆ ಸತ್ಕಾರ

ಮೈಸೂರು ೨೬

ಮೈಸೂರು ಓರಿಯಂಟಲ್ ಇಂಸ್ಟಿಟ್ಯೂಟಿನ [illegible] ಎಸ್. ಸುಬ್ಬರಾಮಯ್ಯ [illegible] ನಿವಾಸದಲ್ಲಿ [illegible] ಶ್ರೀ ಶ್ರೀಕಂಠೇಶ್ವರ [illegible] ಬಿ ವಿ ಪಂಡಿತರನ್ನು [illegible] ಶ್ರೀಮತಿ ಗೌರಮ್ಮ ನಾಗರಾಜ್‌ರವರಿಂದ [illegible] ರಂಗಯ್ಯನವರು [illegible], ಶ್ರೀ ಬಿ ವಿ ಪಂಡಿತರು [illegible] ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ಪಂಡಿತರ ಗುಣಗಳನ್ನು ಪ್ರಶಂಸಿಸಿ, ಎಲ್ಲರಲ್ಲೂ [illegible] ಬುದ್ಧಿಯೂ, [illegible] ಭಗವಂತನು ಅನುಗ್ರಹಿಸಲೆಂದು [illegible]. ಸತ್ಕಾರಕ್ಕಾಗಿ ಶ್ರೀ ಪಂಡಿತರು ಧನ್ಯವಾದವನ್ನು ಸಮರ್ಪಿಸಿ ಸೂಕ್ತ ಉತ್ತರವಿತ್ತರು. ಶ್ರೀ ಬಿ ಎಸ್. ಸುಬ್ಬರಾಮಯ್ಯನವರಿಂದ ವಂದನೆ [illegible]. ಈ ಸಂದರ್ಭದಲ್ಲಿ [illegible] ಗಿರಿಜಾ ಕಲ್ಯಾಣ ಎಂಬ ಹರಿಕಥೆಯು [illegible]

ಕೋಟಿ ರೂ. ದುರುಪಯೋಗಕ್ಕಾಗಿ ದಾಲ್ಮಿಯಾರವರ ಮೇಲೆ ದಾವಾ

ಭಾರತ ವಿಮಾ ಕಂಪೆನಿಯ [illegible] ಕೋಟಿ ರೂ [illegible] ದುರುಪಯೋಗಪಡಿಸಿಕೊಂಡರೆಂದು [illegible] ರಾಮಕೃಷ್ಣ ದಾಲ್ಮಿಯಾ ಮತ್ತು [illegible] ಮೇಲೆ ದೆಹಲಿ ನ್ಯಾಯಾಲಯದಲ್ಲಿ [illegible] ಹೂಡಲಾಗಿದೆ. ದಾಲ್ಮಿಯಾರವರನ್ನು [illegible] ವರ್ಷ ದಸ್ತಗಿರಿ [illegible]

[illegible]ಗಳೂರು [illegible] ಕಾರ್ಯಕ್ರಮ [illegible] ಬೆಳಿಗ್ಗೆ [illegible] ಗೋಟು ವಾದ್ಯ [illegible] ಸಂಗೀತ [illegible] ಗೋಟು ವಾದ್ಯ [illegible] ಸಂಗೀತ [illegible] ಸಂಗೀತ

ತಾತ್ಕಾಲಿಕ ಪರಿಹಾರಕ್ಕಾಗಿ ಒತ್ತಾಯ

ಜಾಡಮಾಲಿಗಳ ಸಭೆಯಲ್ಲಿ ನಿರ್ಣಯ

ಮೈಸೂರು ೨೬

ನಗರದ ಪೌರಸಭೆಯ ಸುಮಾರು ೭೦೦ ಮಂದಿ ಜಾಡಮಾಲಿಗಳು ತಮಗೆ [illegible] ಸಂಬಳದ [illegible] ವೇತನ ಕೊಡಬೇಕೆಂದು ಕೋರುವ ಬೋರ್ಡುಗಳನ್ನು ಹಿಡಿದು ನೆನ್ನೆ ಮಧ್ಯಾಹ್ನ ಮುಖ್ಯ ಬೀದಿಗಳಲ್ಲಿ ಪ್ರದರ್ಶನ ಮತ್ತು ಮೆರವಣಿಗೆಗಳನ್ನು ನಡೆಸಿದರು. ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಅವರುಗಳ ಬಹಿರಂಗ ಸಭೆ ನಡೆದು, ಸಂಘದ [illegible] ಶ್ರೀ ಎಂ ಎಸ್ [illegible] ಶ್ರೀ ಎಸ್ ಸೋಮಸುಂದರಮ್‌ರವರು ಭಾಷಣ ಮಾಡಿದರು [illegible] ತಾತ್ಕಾಲಿಕ ಪರಿಹಾರವನ್ನು ತಮಗೂ [illegible] ಕೊಡುವ ಸಂಬಳದೊಡನೆ [illegible] ಸಂಘವು ಉಗ್ರ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದು ನಿರ್ಧರಿಸಲಾಯಿತು. [illegible] ನೌಕರರ ಸಂಬಳದಂತೆ ಸಂಸ್ಥಾನದ ಎಲ್ಲಾ ನೌಕರರಿಗೂ [illegible] ಕೊಡಬೇಕೆಂದು ಒತ್ತಾಯ ಮಾಡಲಾಯಿತು. [illegible] ಮುಷ್ಕರ ನಡೆಸುತ್ತಿರುವ ಜಾಡಮಾಲಿಗಳ [illegible] ಬೆಂಬಲ [illegible]

ಮೃತ ಗುರುಗಳ [illegible] ಸಮಾರಂಭ

ಶ್ರೀ ಪೂಜ್ಯ ಶ್ರೀ ಶ್ರೀ ಚಂದ್ರಶೇಖರ [illegible] ಮಹಾಸ್ವಾಮಿಗಳು ಮೈಸೂರಿಗೆ ದಯಮಾಡಿ [illegible] ಶ್ರೀ ಎಂ ಎಸ್ [illegible] ಧರ್ಮಶಾಲೆಯಲ್ಲಿ [illegible] ಮಾಡಿರುತ್ತಾರೆ. ಶ್ರೀ ಪೂಜ್ಯರ [illegible] ಸಮಾರಂಭವು ([illegible]) ನಾಳೆ ಬೆಳಿಗ್ಗೆ [illegible] ನಡೆಯುತ್ತದೆ [illegible] ಸಮಾರಂಭದಲ್ಲಿ ಭಾಗವಹಿಸುವಂತೆ ಕೋರಲಾಗಿದೆ

ರಾಷ್ಟ್ರಾದ್ಯಂತ ರೈಲು ಸೇವೆಗಳ ಪರಿಶೀಲನೆಗೆ ವ್ಯವಸ್ಥೆ

ಅರಿಯಲೂರು ಬಳಿ ರೈಲು ದುರಂತದ ಸಂಬಂಧವಾಗಿ ನ್ಯಾಯಾಂಗ ವಿಚಾರಣೆ ನಡೆಸಲು ಭಾರತ ಸರ್ಕಾರದವರು [illegible] ಹೈಕೋರ್ಟಿನ ನ್ಯಾಯಾಧೀಶರಾದ [illegible] ನೇಮಿಸಿದ್ದಾರೆಂದೂ, ಭಾರತದ ರೈಲ್ವೆಯ ಎಲ್ಲಾ ಸೇವೆಗಳನ್ನು ಪರಿಶೀಲನೆ ನಡೆಸಲು ಕ್ರಮ ಕೈಗೊಳ್ಳಲಾಗುವುದೆಂದೂ ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿದ್ದಾರೆ.

ಹೈದರಾಬಾದಿನಿಂದ ಮೈಸೂರಿಗೆ ೧೫ ಮಂದಿ [illegible] ವರ್ಗ

ಹೈದರಾಬಾದು ಸಂಸ್ಥಾನವನ್ನು ವಿಂಗಡಿಸಿ ಆಂಧ್ರ, ಮಹಾರಾಷ್ಟ್ರ ಮತ್ತು ಮೈಸೂರು ಸಂಸ್ಥಾನಗಳಲ್ಲಿ ವಿಲೀನಗೊಳಿಸಿದ ಸಂದರ್ಭದಲ್ಲಿ ಹೈದರಾಬಾದಿನ [illegible] ಆಸ್ಪತ್ರೆಯಲ್ಲಿದ್ದ ಬುದ್ಧಿ ವಿಕಲರಾದ [illegible] ಮಂದಿ ರೋಗಿಗಳನ್ನು ವಿಂಗಡಿಸಿ, ಆಂಧ್ರಕ್ಕೆ [illegible] ಮಂದಿಯನ್ನೂ, ಮಹಾರಾಷ್ಟ್ರ ಮತ್ತು ಮೈಸೂರುಗಳಿಗೆ ಕ್ರಮವಾಗಿ [illegible] ಮತ್ತು ೧೫ ಮಂದಿಯನ್ನೂ ಕಳುಹಿಸಲಾಗಿದೆ

ಬೆಂಗಳೂರಿಗೆ ಟಿಬೆಟ್ಟಿನ [illegible] ಭೇಟಿ

[ಸ್ವಂ ಸು ಪ್ರೋ] ಬೆಂಗಳೂರು ೨೬

ಟಿಬೆಟ್ಟಿನ ದಲೈ ಲಾಮಾ ಮತ್ತು ಪಂಚೆನ್ ಲಾಮಾರವರು ಬರುವ ತಿಂಗಳು [illegible] ತಾರೀಖು ಇಲ್ಲಿಗೆ ಆಗಮಿಸುವರು. ನೇಪಾಳದ ಪ್ರಧಾನಿ ಟಂಕಾ ಪ್ರಸಾದ ಆಚಾರ್ಯರವರು [illegible] ಬರಲಿದ್ದಾರೆ

ಚಿನ್ನದ ಗಣಿಗಳ ರಾಷ್ಟ್ರೀಕರಣ ಸಮಾರಂಭ

ನಾಳೆ [illegible] ಚಿನ್ನದ ಗಣಿಗಳ ಅಧಿಕಾರ [illegible] ಮುಖ್ಯ ಮಂತ್ರಿಯವರು ಅಧ್ಯಕ್ಷರು ಮತ್ತು ಶ್ರೀ ಎಸ್ ನಿಜಲಿಂಗಪ್ಪನವರು ಪ್ರಥಮ ಉಪಾಧ್ಯಕ್ಷ ಮತ್ತು ಮ್ಯಾನೇಜಿಂಗ್ ಡೈರೆಕ್ಟರಾಗುವರೆಂದೂ ಈ ದಿನ ಹೊರಟ ಸರ್ಕಾರಿ ಪ್ರಕಟಣೆಯೊಂದು ತಿಳಿಸಿದೆ. ಮಂಡಲಿಯಲ್ಲಿ ಇನ್ನೂ ನಾಲ್ಕು ಜನ ಸದಸ್ಯರುವರು

ಪ್ರಜಾ ಸಮಾಜವಾದಿ ಸಮ್ಮೇಳನದಲ್ಲಿ ಸರ್ಕಾರದ ಖಂಡನೆ

ಭಾರತದ ಪ್ರಜಾ ಸಮಾಜವಾದಿ ಸಮ್ಮೇಳನವು ದೇಶದ ನಾನಾ ಕಡೆಗಳಲ್ಲಿ ಪೊಲೀಸಿನವರ ಜುಲುಂ ಅನ್ನು ಖಂಡಿಸುವ ನಿರ್ಣಯವನ್ನು ಇಂದು ಅಂಗೀಕರಿಸಿತು. ಪೂರ್ವ ಯೂರೋಪಿನ ಬಗ್ಗೆ ಭಾರತ ಸರ್ಕಾರದ ನೀತಿಯನ್ನು ಟೀಕಿಸಿ, ಜಯಪ್ರಕಾಶ ನಾರಾಯಣರ ನಿಲುವನ್ನು ಸಮರ್ಥಿಸಲಾಯಿತು. ಹಂಗೆರಿಯಿಂದ ರಷ್ಯದ ಸೇನೆಗಳು ವಾಪಸಾಗಬೇಕೆಂದು ಒತ್ತಾಯಪಡಿಸಲಾಯಿತು.

ಪೋರ್ಟ್ ಸೈಯದ್ದಿಗೆ ಹೆಚ್ಚು ವಿದೇಶೀ ಸೈನ್ಯ

ಈಜಿಪ್ಟಿನಿಂದ ಹೊರಡಬೇಕೆಂದು ವಿಶ್ವಸಂಸ್ಥೆಯು [illegible], ಆ ಬಗ್ಗೆ [illegible] ಆಗುತ್ತಿದ್ದರೂ, ಪೋರ್ಟ್ ಸೈಯದ್ದಿಗೆ ಹೆಚ್ಚಿನ ಬ್ರಿಟಿಷ್ ಸೈನ್ಯಗಳು ಬರುತ್ತಿರುವ [illegible] ಟ್ಯಾಂಕು [illegible] ಬಂದಿಳಿದುದಾಗಿ ಹೇಳಲಾಗಿದೆ

ಪ್ರೌಢ ಶಾಲಾ ಸಾಹಿತ್ಯ ಸಂಘದ ವಾರ್ಷಿಕೋತ್ಸವ

ಹರಿಮಲ್ಲಪ್ಪನವರ ಪ್ರೌಢ ಶಾಲಾ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ [illegible] ಗಂಟೆಗೆ ನೆರವೇರುವುದು. ಕನ್ನಡ ಸಾಹಿತಿಗಳಾದ ಶ್ರೀ ಕ ರಾ. ಸುಬ್ಬರಾಯರು ಮುಖ್ಯ ಭಾಷಣ ಮಾಡುವರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಬಸವಯ್ಯನವರು ಅಧ್ಯಕ್ಷತೆ ವಹಿಸುವರು

ರೈಲ್ವೆ ಸಚಿವ ಲಾಲ್‌ಬಹದ್ದೂರ್ ಶಾಸ್ತ್ರಿಯವರ ರಾಜೀನಾಮೆ

ರೈಲು ದುರಂತದ ಬಗ್ಗೆ [illegible]

ತಿರುಚಿನಾಪಳ್ಳಿ ಬಳಿ [illegible] ರೈಲು ದುರಂತಕ್ಕಾಗಿ ರೈಲ್ವೆ ಮಂತ್ರಿ ಶ್ರೀ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಮ್ಮ ಹುದ್ದೆಗೆ ರಾಜೀನಾಮೆ ಕೊಟ್ಟಿದ್ದಾರೆ. ಅವರ ರಾಜೀನಾಮೆಯನ್ನು [illegible] ಪ್ರಧಾನಿ ನೆಹರೂರವರು [illegible] ಮಾಡಿದ್ದಾರೆ.

ಪ್ರಧಾನಿಯವರು ಈ ವಿಚಾರವನ್ನು ಲೋಕ ಸಭೆಯಲ್ಲಿ ತಿಳಿಸಿ, ಶಾಸ್ತ್ರಿಯವರು [illegible] ಬೇರೆ ವ್ಯವಸ್ಥೆಯಾಗುವವರೆಗೆ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಧಿಕಾರದಲ್ಲಿ ಮುಂದುವರಿಯುವರು

ಶ್ರೀ ಶಾಸ್ತ್ರಿಯವರು [illegible] ರಾಜೀನಾಮೆ ಪತ್ರವನ್ನು ಒಪ್ಪಿಸಿದರೆಂದೂ, [illegible] ಗೊತ್ತಾಗಿದೆ. [illegible] ಶಾಸ್ತ್ರಿಯವರು [illegible] ಸಂದರ್ಭಗಳಲ್ಲಿ [illegible] ಒಳ್ಳೆಯದೆಂದೂ, ಅದರಿಂದ [illegible] ಆಗುವುದೆಂದೂ ತಿಳಿಸಿದ್ದಾರೆ [illegible] ಅವರು ಅಭಿಪ್ರಾಯ ಪಟ್ಟಿದ್ದಾರೆ

ಡಾ॥ ರಾಧಾಕೃಷ್ಣನ್‌ರವರಿಗೆ ಪತ್ನೀವಿಯೋಗ

ಭಾರತದ ಉಪ ರಾಷ್ಟ್ರಪತಿ ಡಾ॥ ರಾಧಾಕೃಷ್ಣನ್‌ರವರ ಪತ್ನಿ ಶ್ರೀಮತಿ [illegible] ಇಂದು ಬೆಳಿಗ್ಗೆ ಮದರಾಸಿನಲ್ಲಿ [illegible] ಹೊಂದಿದರೆಂದು ತಿಳಿಸಲು [illegible]. ಮೃತರಿಗೆ [illegible] ವರ್ಷ ವಯಸ್ಸಾಗಿತ್ತು. [illegible] ರೋಗಗ್ರಸ್ತರಾಗಿದ್ದರು. ಮೃತರಿಗೆ [illegible] ಮಂದಿ ಪುತ್ರಿಯರೂ ಮತ್ತು ಒಬ್ಬ ಪುತ್ರನೂ ಇದ್ದಾರೆ. [illegible] ಆತ್ಮಕ್ಕೆ ಭಗವಂತನು ಶಾಂತಿಯನ್ನು ಕರುಣಿಸಲೆಂದು ಕೋರಿ, [illegible] ಬಂಧು ವರ್ಗದವರಿಗೆ ನಮ್ಮ ಹೃತ್ಪೂರ್ವಕವಾದ ಸಹಾನುಭೂತಿಯನ್ನು ಸೂಚಿಸುತ್ತೇವೆ

ರೈಲು ಅಪಘಾತದಲ್ಲಿ ಬೆಂಗಳೂರಿನ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ [illegible]

[illegible] ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ ಬೆಂಗಳೂರಿನ ವೃತ್ತಿ ಶಿಕ್ಷಣಾಲಯದ ಅಧ್ಯಾಪಕ [illegible] ಮೃತಪಟ್ಟಿದ್ದಾರೆ. ಅವರೊಡನೆ [illegible] ಜನ [illegible] ವಿದ್ಯಾರ್ಥಿಗಳ ಪೈಕಿ [illegible] ಮತ್ತು [illegible] ಗಾಯಗೊಂಡು [illegible] ಆಸ್ಪತ್ರೆಯಲ್ಲಿದ್ದಾರೆ. ಉಳಿದ [illegible] ಮೃತಪಟ್ಟಿರುವರು.

ಒಳಚರಂಡಿ ವ್ಯವಸ್ಥೆಯ ಪ್ರಾರಂಭ

ಮೈಸೂರು ೨೩.

ಸ್ಥಳೀಯ ಸಂಸ್ಥೆಗಳ ಸಚಿವರಾದ ಶ್ರೀ ಚನ್ನಿಗರಾಮಯ್ಯನವರು ಮೊನ್ನೆ ಇಲ್ಲಿನ ಅಶೋಕಪುರದ ಒಳಚರಂಡಿ ವ್ಯವಸ್ಥೆಯ ಆರಂಭೋತ್ಸವವನ್ನು ನೆರವೇರಿಸಿದರು. ಪೌರಸಭೆಯವರು ಹೊಂದಿರುವ ೧೩-೪ ಲಕ್ಷ ರೂ. ಒಳಚರಂಡಿ ಯೋಜನೆಯ ಅಂಗವಾಗಿ ಇದನ್ನು ನಿರ್ಮಿಸಲಾಗುವುದು. ಇದಕ್ಕೆ ೧.೧ ಲಕ್ಷ ರೂ ವೆಚ್ಚ ತಗಲುವುದು.

ಪೌರಸಭಾಧ್ಯಕ್ಷ ಶ್ರೀ ಕೃಷ್ಣಮೂರ್ತಿರಾವ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣ ಮತ್ತು ಇತರ ಪೌರ ಅಧಿಕಾರಿಗಳೊಡನೆ ಸಚಿವರು ಪೌರಸಭಾ ಫಾರಂ, ಅಶೋಕನ ಶಂಕರ ಮಠದ ಬಳಿ ನಿವೇಶನಗಳು, ಜಲಪುರಿ ಮತ್ತು ಕಾರ್ಮಿಕರ ಬ್ಲಾಕಿನ ಬಡಾವಣೆ, ಕೆಸರೆ ಬ್ಲಾಕ್, ಬುಡಬುಡಕೆ ಕೇರಿ, ಕಲಾಸಗೇರಿ ಮತ್ತು ಆಕಾಶವಾಣಿ ಕಟ್ಟಡದ ಹಿಂಭಾಗದ ವಾದರಿ ಗೃಹಗಳ ಪರಿಶೀಲನೆ ನಡೆಸಿದರು. ಅಲ್ಲಿನ ನಿವಾಸಿಗಳು ಸಚಿವರಿಗೆ ತಮ್ಮ ಕುಂದುಕೊರತೆಗಳನ್ನು ಅರಿಕೆ ಮಾಡಿದರು.

ವಚನಗಾನ ತರಗತಿಗಳು

ನಗರದ ದಿವಾನರ ರಸ್ತೆಯಲ್ಲಿರುವ ಮಹಿಳಾ ಸದನದಲ್ಲಿ ಎಂ. ಬಿ. ಗೋಪಾಲಾಚಾರ್ಯರ ಸ್ಮಾರಕ ಸಮಿತಿಯವರು ನಡೆಸುತ್ತಿರುವ ಧಾರ್ಮಿಕ ಕಾಲಕ್ಷೇಪದ ಅಂಗವಾಗಿ ವಚನ ಗಾನ ತರಗತಿಗಳನ್ನು ಇದೇ ಡಿಸೆಂಬರ್ ೨ ರಿಂದ ೩ ತಿಂಗಳ ಕಾಲ ಏರ್ಪಡಿಸಲಾಗಿದೆ. ವರ್ಣಗಳನ್ನು ಹಾಡುವಷ್ಟು ಪಕ್ವರಾದರೂ ಬಲ್ಲ ವಿದ್ಯಾರ್ಥಿನಿಯರು ಬಂದು ಸೇರಬಹುದು. ಆಸ್ಥಾನ ವಿದ್ವಾನ್ ಬಿ. ಎಂ. ಶಿವಪ್ಪನವರು ತರಗತಿಗಳನ್ನು ನಡೆಸುವರು. ಸೇರಬಯಸುವವರು ಒಂದು ರೂಪಾಯಿ ಪ್ರವೇಶ ಧನವನ್ನು ನಾಳಿದ್ದಿನೊಳಗೆ ಸದನದ ಕಾರ್ಯದರ್ಶಿಗಳಿಗೆ ತಲುಪಿಸಬೇಕು. ಮತ್ತಾವ ಶುಲ್ಕವನ್ನೂ ಕೊಡಬೇಕಾಗಿಲ್ಲ.

ಅಂತರ ಪ್ರೌಢ ಶಾಲಾ ಚರ್ಚಾ ಕೂಟ

ನಗರದ ಶಾರದಾ ವಿಲಾಸ ಪ್ರೌಢ ಶಾಲೆಯಲ್ಲಿ ರಾಜಕಾರ್ಯ ಪ್ರವೀಣ ಎನ್. ಎಸ್. ಸುಬ್ಬರಾವ್ ಸ್ಮಾರಕ ಚರ್ಚಾ ಸ್ಪರ್ಧೆಯು ಕಳೆದ ಭಾನುವಾರ ನಡೆಯಿತು. ತರುಣ ಪತ್ರಿಕೆಯ ಸಂಪಾದಕರಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. "ನಮ್ಮ ಮಕ್ಕಳು ನಮ್ಮ ವಿಷಯದಲ್ಲಿ ಹೆಮ್ಮೆಪಟ್ಟುಕೊಳ್ಳುವುದಿಲ್ಲ" ಎಂಬುದು ಚರ್ಚಾ ವಿಷಯವಾಗಿತ್ತು. ನಗರದ ಹತ್ತು ಶಾಲೆಗಳ ಇಪ್ಪತ್ತು ವಿದ್ಯಾರ್ಥಿಗಳು ಸ್ಪರ್ಧಿಸಿದ್ದರು. ಕೆಳಗೆ ಕಂಡವರಿಗೆ ಬಹುಮಾನಗಳು ದೊರೆತುವು:—ಪ್ರಥಮ ಬಹುಮಾನ: ಶಾರದಾ ವಿಲಾಸ ಹೈಸ್ಕೂಲಿನ ಎನ್. ವಿ. ಜಗನ್ನಾಥ್, ದ್ವಿತೀಯ ಬಹುಮಾನ: ಹಾರ್ಡ್ವಿಕ್ ಹೈಸ್ಕೂಲಿನ ಎಸ್. ಕೃಷ್ಣಸ್ವಾಮಿ, ತೃತೀಯ ಬಹುಮಾನ: ಶಾರದಾ ವಿಲಾಸ ಹೈಸ್ಕೂಲಿನ, ಗೋಪಾಲಸ್ವಾಮಿ ಮತ್ತು ನಾಲ್ಕನೆಯ ಬಹುಮಾನ: ಮಹಾರಾಣಿ ಹೈಸ್ಕೂಲಿನ ಶ್ರೀಮತಿ ಅಂಬುಜಾಕ್ಷಿ. ಸಂಸ್ಥೆಯ ಬಹುಮಾನವು ಶಾರದಾ ವಿಲಾಸ ಪ್ರೌಢ ಶಾಲೆಗೆ ದೊರೆಯಿತು. ಅಧ್ಯಕ್ಷರ ಭಾಷಣ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಮಳೆಗಾಲದಲ್ಲಿ ರೈಲು ಸೇತುವೆ ಪರಿಶೀಲನೆಗೆ ಗಸ್ತು

ಒಂದೇ ಸಮನೆ ಮಳೆ ಮತ್ತು ಪ್ರವಾಹ ಬರುವ ಸಮಯದಲ್ಲಿ ರೈಲು ಸೇತುವೆಗಳ ಪರಿಶೀಲನೆಗೆ ಸದಾ ಗಸ್ತು ಮಾಡುವ ಪಡೆ ಏರ್ಪಡಿಸುವ ವಿಷಯವನ್ನು ರೈಲ್ವೆ ಅಧಿಕಾರಿಗಳು ಪರಿಶೀಲಿಸುವರೆಂದು ರೈಲ್ವೆ ಉಪ ಮಂತ್ರಿ ಅಳಗೇಶನ್ ಅವರು ತಿಳಿಸಿದ್ದಾರೆ.

ಸೂರ್ಯಗ್ರಹಣ ವಿಚಾರ

ಆಸ್ಥಾನ ಮಹಾ ವಿದ್ವಾನ್ ಸಂಕರ್ಷಣ ಜೋಯಿಸರು ಈ ರೀತಿ ಬರೆದಿರುತ್ತಾರೆ:

ತಾ|| ೨-೧೨-೫೬ನೇ ಕಾರ್ತಿಕ ಬಹುಳ ಅಮಾವಾಸ್ಯೆ ಭಾನುವಾರ ಸೂರ್ಯ ಗ್ರಹಣವು ಮಧ್ಯಾಹ್ನ ಘಂ ೧-೫೦ ರಿಂದ [illegible]ರೊಳಗೆ ಮೈಸೂರು ಸಂಸ್ಥಾನದಲ್ಲಿ ಸಂಭವಿಸುತ್ತದೆ. ಈ ಗ್ರಹಣವು ಮೈಸೂರು, ಮಂಡ್ಯ, ಬೆಂಗಳೂರು ಮತ್ತು ಕೋಲಾರ ಜಿಲ್ಲೆಗಳಲ್ಲಿ ಕಾಣಿಸುವುದಿಲ್ಲ. ಆದುದರಿಂದ ಈ ಜಿಲ್ಲೆಗಳಲ್ಲಿರುವವರಿಗೆ ಗ್ರಹಣಾಚರಣೆ ಇಲ್ಲ. ಹಾಸನ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ-ಈ ಊರುಗಳ ಮಧ್ಯದಲ್ಲಿರುವ ಪ್ರದೇಶಗಳಲ್ಲಿ ಗ್ರಹಣವು ದೃಶ್ಯಾದೃಶ್ಯವಾಗಿರುವುದರಿಂದ ಈ ಊರುಗಳಲ್ಲಿರುವವರು ಗ್ರಹಣವು ಕಂಡಲ್ಲಿ ನೋಡಿ ಆಚರಿಸುವುದು. ಚಿಕ್ಕಮಗಳೂರು ಮತ್ತು ಚಿತ್ರದುರ್ಗಕ್ಕೆ ಉತ್ತರದಲ್ಲಿರುವ ಇತರ ಊರುಗಳಲ್ಲೂ, ಶಿವಮೊಗ್ಗ, ಬಳ್ಳಾರಿ ಜಿಲ್ಲೆಗಳಲ್ಲೂ ಗ್ರಹಣವು ದೃಗ್ಗೋಚರವಾಗುವುದರಿಂದ ಅಲ್ಲಿ ಗ್ರಹಣಾಚರಣೆಯುಂಟು.

ಗ್ರಹಣವು ಕಾಣುವ ಕಡೆಗಳಲ್ಲೆಲ್ಲಾ ಗ್ರಹಣದ ದಿವಸ ಮೋಕ್ಷಕಾಲದವರೆಗೂ ಭೋಜನಕ್ಕೆ ಅವಕಾಶವಿರುವುದಿಲ್ಲ. ಗ್ರಹಣ ಮೋಕ್ಷವಾದ ಮೇಲೆ ಸ್ನಾನಾನಂತರ ಪಾಕ ಮಾಡಿ ಭೋಜನ ಮಾಡಬೇಕು. ಸಿದ್ಧಾಂತಾಚರಣೆಯವರು ಮಾರ್ಗಶಿರ ಶುಕ್ಲ ಪ್ರಥಮಾ ತಿಥಿ ಕಾಲಶ್ರಾದ್ಧವನ್ನು ಗ್ರಹಣ ಮೋಕ್ಷಾನಂತರ ಮಾಡಬೇಕು. ವೃಶ್ಚಿಕ ರಾಶಿಯವರು ಶಾಂತಿ ಮಾಡಿಕೊಳ್ಳುವುದು ಶ್ರೇಯಸ್ಕರ.

ಅಂತರ ಪ್ರೌಢ ಶಾಲಾ ಆಶು ಭಾಷಣ ಸ್ಪರ್ಧೆ

ಶಾರದಾ ವಿಲಾಸ ಪ್ರೌಢ ಶಾಲೆಯ ಹಿರಿಯ ತರುಣರ ಸಂಘದ ಆಶ್ರಯದಲ್ಲಿ ಆಶು ಭಾಷಣ ಸ್ಪರ್ಧೆಯು ಕಳೆದ ಭಾನುವಾರ ನಡೆಯಿತು. ಶ್ರೀ ಬಿ. ಎಸ್. ದತ್ತಾತ್ರೇಯರವರು ಅಧ್ಯಕ್ಷತೆ ವಹಿಸಿದ್ದರು. ನಗರದ ೧೦ ಶಾಲೆಗಳಿಂದ ೨೦ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಈ ಕೆಳಗೆ ಕಂಡವರಿಗೆ ಬಹುಮಾನಗಳು ದೊರೆತುವು:—ಪ್ರಥಮ ಬಹುಮಾನ: ಮಹಾರಾಣಿ ಹೈಸ್ಕೂಲಿನ ಶ್ರೀಮತಿ ಎಂ. ಎಸ್. ಪದ್ಮ, ದ್ವಿತೀಯ ಬಹುಮಾನ: ಹಾರ್ಡ್ವಿಕ್ ಹೈಸ್ಕೂಲಿನ ಗೋವಿಂದರಾವ್, ತೃತೀಯ ಬಹುಮಾನ: ಕಾನ್ವೆಂಟ್ ಹೈಸ್ಕೂಲಿನ ಶ್ರೀಮತಿ ಕೆ. ಸೌಭಾಗ್ಯ ಮತ್ತು ನಾಲ್ಕನೆಯ ಬಹುಮಾನ: ಮಹಾರಾಜಾ ಹೈಸ್ಕೂಲಿನ ವೆಂಕಟೇಶಯ್ಯ. ಸಂಸ್ಥೆಯ ಬಹುಮಾನವು ಮಹಾರಾಣಿ ಪ್ರೌಢ ಶಾಲೆಗೆ ದೊರೆಯಿತು. ಅಧ್ಯಕ್ಷ ಭಾಷಣ, ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಕೊಕ್ಕೊ ಮತ್ತು ಕಬಡ್ಡಿ ಕ್ರೀಡಾ ಸ್ಪರ್ಧೆ

ಮೈಸೂರು ಜಿಲ್ಲಾ ಕೊಕ್ಕೊ ಮತ್ತು ಕಬಡ್ಡಿ ಸಂಘದ ಆಶ್ರಯದಲ್ಲಿ ಕೊಕ್ಕೊ ಮತ್ತು ಕಬಡ್ಡಿ ಸ್ಪರ್ಧೆಗಳನ್ನು ಡಿಸೆಂಬರ್ ಎರಡನೇ ವಾರದಲ್ಲಿ ನಡೆಸಲಾಗುತ್ತದೆ. ಪುರುಷ ವಿಭಾಗದ ಸಂಸ್ಥೆಗಳು ೭ ರೂ. ಪ್ರವೇಶ ಧನವನ್ನೂ ಮತ್ತು ಮಹಿಳಾ ವಿಭಾಗದವರ ಕೊಕ್ಕೊಗೆ ಮಾತ್ರ ೪ ರೂ. ಪ್ರವೇಶ ಧನವನ್ನೂ ಸಂಚಾಲಕರಿಗೆ ಬರುವ ೩ನೇ ತಾರೀಖಿನೊಳಗಾಗಿ ಕಳುಹಿಸಿಕೊಡಬೇಕು. ಸ್ಪರ್ಧೆಯಲ್ಲಿ ಪ್ರಥಮ ಮತ್ತು ದ್ವಿತೀಯ ಸ್ಥಾನ ಪಡೆಯುವ ಸಂಸ್ಥೆಗಳಿಗೆ ಬಹುಮಾನವನ್ನೂ, ಹಾಗೂ ಅರ್ಹತಾ ಪತ್ರವನ್ನೂ ಕೊಡಲಾಗುವುದು.

ಉಪನ್ಯಾಸ

ಯುವರಾಜಾ ಕಾಲೇಜಿನ ಭೌತ ವಿಜ್ಞಾನ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫-೧೫ಕ್ಕೆ ಕಾಲೇಜಿನ ಪ್ರಿನ್ಸಿಪಾಲರಾದ ಡಾ|| ಎಲ್. ಸೀಬಯ್ಯನವರು "ರಾಮನ್ ಎಫೆಕ್ಟ್" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಅಸ್ಪೃಶ್ಯತಾ ನಿವಾರಣೆಯಲ್ಲಿ ಉನ್ನತ ಸೇವೆಗಾಗಿ ಪದಕ

ಅಸ್ಪೃಶ್ಯತಾ ನಿವಾರಣಾ ಕಾರ್ಯದಲ್ಲಿ ಉನ್ನತ ಸೇವೆ ಸಲ್ಲಿಸುವವರಿಗಾಗಿ ಮೈಸೂರ್ ಸರ್ಕಾರದವರು ೧೨೦ ರೂ. ಬೆಲೆಯ ಪ್ರಥಮ ದರ್ಜೆಯ ಎರಡು ಚಿನ್ನದ ಪದಕಗಳನ್ನೂ ಮತ್ತು ೫೦ ರೂ ಬೆಲೆಯ ದ್ವಿತೀಯ ದರ್ಜೆಯ ೭ ಪದಕಗಳನ್ನೂ ಕೊಡಲು ನಿರ್ಧರಿಸಿರುವರು. ಸಾರ್ವಜನಿಕ ಭಾವಿಗಳಲ್ಲಿ ಹರಿಜನರು ನೀರು ತೆಗೆದುಕೊಳ್ಳಲು ಅವಕಾಶ, ಹೋಟೇಲುಗಳಿಗೆ ಹರಿಜನರ ಪ್ರವೇಶ ಮತ್ತು ಹರಿಜನರು ಮತ್ತು ಸವರ್ಣೀಯರ ನಡುವೆ ವಿವಾಹ ಸಂಬಂಧಗಳ ಏರ್ಪಡಿಸುವುದು- ಈ ಕಾರ್ಯಗಳನ್ನು ಮಾಡುವವರಿಗೆ ಪ್ರಥಮ ದರ್ಜೆ ಪದಕಗಳನ್ನು ಕೊಡಲಾಗುವುದು. ದೇವಾಲಯಗಳಿಗೆ ಹರಿಜನರ ಪ್ರವೇಶ ಮತ್ತು ಹರಿಜನರ ವಸತಿಗಳಲ್ಲಿ ಸಮಾಜ ಸುಧಾರಣಾ ಕಾರ್ಯಗಳನ್ನು ಮಾಡುವವರಿಗೆ ದ್ವಿತೀಯ ದರ್ಜೆ ಪದಕಗಳನ್ನು ಕೊಡಲಾಗುವುದು. ಈ ಸಂಬಂಧವಾಗಿ ಪ್ರಸಕ್ತ ಸಾಲಿಗೆ ಆರು ಸಾವಿರ ರೂ. ಗಳನ್ನು ಮಂಜೂರು ಮಾಡಲಾಗಿದೆ.

ಕಪಿಲಾ ಹತ್ತಿ ಗಿರಣಿ ಕಾರ್ಮಿಕರ ಬೇಡಿಕೆಗಳು

ನಂಜನಗೂಡಿನ ಕಪಿಲಾ ಹತ್ತಿ ಗಿರಣಿ ಕಾರ್ಮಿಕರಿಗೂ, ಆಡಳಿತದವರಿಗೂ ಇರುವ ವಿವಾದದ ಸಂಬಂಧವಾಗಿ ಕಾರ್ಮಿಕರ ಸಂಘದ ಕಾರ್ಯದರ್ಶಿಯವರು ಕೈಗಾರಿಕಾ ನ್ಯಾಯಮಂಡಲದ ತೀರ್ಪಿನ ಪ್ರಕಾರ ಕೆಳಗೆ ಕಂಡ ಕೆಲಸಗಳನ್ನು ಆಡಳಿತದವರು ನಡೆಸಬೇಕಾಗಿದೆಯೆಂದು ತಿಳಿಸಿರುತ್ತಾರೆ:—ತೀರ್ಪಿನ ೧ನೇ ಕಲಂ ಪ್ರಕಾರ ೭೦ ಜನ ಕಾರ್ಮಿಕರಿಗೆ ಕೃಷ್ಣರಾಜೇಂದ್ರ ಗಿರಣಿಯ ಕೂಲಿ ಮತ್ತು ಬಡ್ತಿ ಬರಬೇಕು; ಕೆಲಸಕ್ಕೆ ಸೇರಿದಂದಿನಿಂದಲೇ ತುಟ್ಟಿಭತ್ಯವನ್ನು ೨೦೦ ಜನರಿಗೆ ಕೊಡಬೇಕು. ರಾತ್ರಿ ಶಿಫ್ಟಿನ ಭತ್ಯ ಮತ್ತು ರೀಲುಗಳಿಗೆ ೧ ಆಣೆ ಹೆಚ್ಚುವರಿ ಕೂಲಿಯನ್ನು ಮುಂದುವರಿಸಬೇಕು (ಈ ಸೌಲಭ್ಯವನ್ನು ತೀರ್ಪು ಕೊಡಲಾದನಂತರ ನಿಲ್ಲಿಸಲಾಗಿದೆ) ನೆಯ್ಗೆಯವರಿಗೆ ೧೭-೯-೫೬ರ ಒಪ್ಪಂದದಂತೆ ಕೂಲಿ ನಿಗದಿ ಮಾಡಬೇಕು. ಮತ್ತು ವೈಂಡರ್ಸ್, ಡ್ರಾಯರ್ಸ್ ಮುಂತಾದವರ ಕೂಲಿಯನ್ನು ಸುಧಾರಿಸಬೇಕು.

ಮೈಸೂರು ಪೇಟೆ ಧಾರಣೆ

ಕೊಯಮತ್ತೂರು ಸಣ್ಣ	೬೦	೪	೦			
ಸೇಲಂ ಸಣ್ಣ	೫೮	೧೨	೦			
ಆನೆಕೊಂಬಿನ ಸಣ್ಣ	೭೬	೮	೦	೭೯	೬	೦
ರಾಗಿ	೨೬	೮	೦	೩೦	೩	೦
ಜೋಳ	೩೩	೦	೦	೩೭	೪	೦
ನವಣೆ	೨೪	[illegible]	೦			
ಕಂಬು	೩೨	೨	೦			
ಕಡಲೆಕಾಯಿ	೧೩	೨	೦	೧೯	೬	೦
ಎಳ್ಳು	೯೦	೦	೦			
ಹರಳುಬೀಜ	[illegible]	[illegible]	೦	[illegible]	೧೦	೦
ಹುಚ್ಚೆಳ್ಳು	[illegible]	೦	೦	[illegible]	೨	೦
ಹುರುಳಿ	೨೦	೦	೦	೨೬	೬	೦
ಹೆಸರು	೪೦	೦	೦	[illegible]	೧೦	೦
[illegible]	೨೧	೧೦	೦	[illegible]	೧೪	೦
ಕಡಲೆ	[illegible]	[illegible]	೦			
[illegible]	[illegible]	೨	೦	[illegible]	೧೨	೦
ಧನಿಯ	೨೦	೬	೦	೩೦	[illegible]	೦
ಮೆಣಸಿನಕಾಯಿ	[illegible]	೧೨	೦	೨೦	೧೪	೦
ಹತ್ತಿ ಮಣ	೯	೦	೦			
ತೆಂಗಿನಕಾಯಿ ೧೦೦೦	೧೦೪	[illegible]	೦			

GLOBE TUTORIAL COLLEGE
(Sadvidya Patashala, Mysore)
Excellent Coaching for
Inter, P. C. M., Kan., Eng.
Classes between 7-30 &
10-30 A.M.

Edited, Printed and Published by
A. R. Nagarajan at Sadhvi Press
D. Subbiah Road, Mysore

ಯಲಹಂಕದಲ್ಲಿ ಮಾದರಿ ಚುನಾವಣೆ

ಬೆಂಗಳೂರು ಬಳಿ ಇರುವ ಯಲಹಂ ಇದೇ ಡಿಸೆಂಬರ್ ೮ ರಂದು ಮಾದರಿ ಚು ಣೆಯನ್ನು ಭಾರತದ ಚುನಾವಣಾಧಿಕಾರಿ ಮಾರಸೇನರವರು ಘಟಿಸುವರು. ಇದರಲ್ಲಿ ಮೈಸೂರು, ಆಂಧ್ರ, ಕೇರಳ ಮತ್ತು ಮದ್ರಾ ಚುನಾವಣಾಧಿಕಾರಿಗಳು ಭಾಗವಹಿಸುವರು.

ಅನುರಾಧಾ ಆರ್ಟ್ಸ್ ಅಧಿಕಾರ

ಚಾಮರಾಜ ಮೊಹಲ್ಲಾ ಗೊಲ್ಲಗೇ ರುವ ಅನುರಾಧಾ ಆರ್ಟ್ಸ್ ಸಂಸ್ಥೆ ನೇ ಸದಸ್ಯರ ಸಭೆಯು ಕಳೆದ ೧೮ನೇ ಕು ನಡೆದು, ಶ್ರೀ ಕೆ. ನಂಜಯ್ಯನವರು ಅಧ್ಯ ರಾಗಿಯೂ, ಶ್ರೀ ಎಂ. ಜಿ. ಗೋಪಾಲಸ್ವಾ ವರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ. ವಿ. ದೇವ್ ರವರು ಖಜಾಂಚಿಯಾಗಿಯೂ, ಶ್ರೀ ಬಿ. ಶಾಂತಮೂರ್ತಿಯವರು ಕಾರ್ಯ ಯಾಗಿಯೂ, ಶ್ರೀ ಡಿ. ಜಾನಕರವರು ಸಂ ರಾಗಿಯೂ ಮತ್ತು ಶ್ರೀ ರಾಮಚಂದ್ರ ನವರು ದಿಗ್ದರ್ಶಕರಾಗಿಯೂ ಚುನಾಯಿ ದರು.

ಕಾವ್ಯ ವಾಚನ

ಜಯನಗರದ ಕೌಂಡೇಶ ಹಾರಿಗ್ಯಾ ಕಂಠಶಾಸ್ತ್ರಿಗಳವರ ಮನೆಯಲ್ಲಿ ನಾಳೆ ೭-೩೦ ಗಂಟೆಗೆ ಏಕಾದಶಿ ಪ್ರಯುಕ್ತ ಶ್ರೀ ಪಟ್ಟಾಭಿಷೇಕದ ವಿಚಾರವಾಗಿ ವನಿತಾ ಜದ ವಿದ್ಯಾರ್ಥಿನಿಯರು ಶ್ರೀಮತಿಗಳಾದ ಜಾನಕೀ, ಬಿ. ವಸುಂಧರ ಮತ್ತು ಬಿ. ವರಿಂದ ಕಾವ್ಯ ವಾಚನವನ್ನೂ ಮತ್ತು ಶ್ರೀ ಹ್ನಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವನ್ನೂ ರ್ಪಡಿಸಲಾಗಿದೆ.

ಯಕ್ಷಗಾನ

ಮೈಸೂರು ಸೀತಾವಿಲಾಸ ಅಗ್ರಹಾರದ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರ ಕ್ತ ನಾಳೆ ರಾತ್ರಿ ೮ ಗಂಟೆಯಿಂದ ಶ್ರೀ ಚಾಮುಂ ಡೇಶ್ವರಿ ಯಕ್ಷಗಾನ ಕಲಾ ಮಂಡಲಿಯ ವಿದುರಾತಿಥ್ಯ ಎಂಬ ಕಥೆಯನ್ನು ನಡೆಸುತ್ತ ಸರ್ವರಿಗೂ ಸ್ವಾಗತವಿದೆ

ಜೀವನದ ಹರ್ಷವನ್ನು ಸವಿ
ಹುಡುಗರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !
ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ [illegible] ಲವಲವಿಕೆಯನ್ನು [illegible] ಕ್ಕ ಅಸಂಖ್ಯಗಳನ್ನು [illegible] ಮಾನವರ ಮಹತ್ತರವಾದ [illegible] ಅನೇಕ ಭಾಗಗಳಲ್ಲಿರುವ [illegible] ಸಂತಸ, ಜ್ಞಾಪಕ ಶಕ್ತಿಯ ಅಭಾವ, [illegible] ಕು, ಸ್ವಪ್ನಸ್ಖಲನ, ಮೂಲವ್ಯಾಧಿ, [illegible] ಬಲ್ಯ, [illegible], ಮುಂತಾದ ರೋಗಗಳು [illegible] ತರಾಗಿರುವ ನಮ್ಮ ರಾಜಾ [illegible] (ಪ್ರತಿದಿನ ಬೆಳಿಗ್ಗೆ 8 ರಿಂದ 12 [illegible] ಧ್ಯಾಹ್ನ 4 ರಿಂದ 8 [illegible] ರು [illegible] ಸುಪ್ತ [illegible] ಚಿಕಿತ್ಸೆಗಳನ್ನು [illegible] ವುದು.
[illegible]
ದಿನ: —
ರಾಜಾ ಮೆಡಿಕಲ್ ಹಾಲ್
ಲೈಸೆನ್ಸ್ ನಂ. 1-745. ಆರೋಗ್ಯ [illegible]
(ಮೈಸೂರು ಬ್ಯಾಂಕ್ ಬಳಿ [illegible]
[illegible])
ಮೈಸೂರು

ಮನುಷ್ಯನನ್ನೆ ಪ್ರಾಣಾಧಾರವಾಗಿರುವ ಅನ್ನ ! ಇಹಪರಗಳ ಸಾಧನೆಗೆ ನೆರವಾಗುವ ಭಕ್ತಿ ! ಇವೆರಡರ ಸ್ವಾರಸ್ಯದ ಹೋರಾಟವೇನು ! ಎಂಬುದನ್ನು ತಿಳಿಯಬಯಸುವ ಕುತೂಹಲಿಗಳ ಕನ್ನಡ [illegible]
ಮೈಸೂರು ನ್ಯೂ ಆಪೇರಾ ಚಿತ್ರಮಂದಿರದಲ್ಲಿ ಭಕ್ತವಿಜಯ
ನವೆಂಬರ್ 30ರಿಂದ ಬಿಡುಗಡೆ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
ತಾರಾಗಣ:— ಪಂಢರೀಬಾಯಿ, [illegible] ರಾಜಕುಮಾರ್, ಡಿಕ್ಕಿ ಮಾಧವರಾವ್, [illegible] [illegible] ಕೆ. ಎಸ್. [illegible]
[Sri Raghavendra Release

ರಿಜಿಸ್ಟರ್ ನಂ. 752

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ರೋಗಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಇತರ ಪ್ರದೇಶಗಳಿಗೆ
ಏಜಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
73/1, [illegible]
[illegible] ರೋಡ್,
ಬೆಂಗಳೂರು -2

ಸಂಪುಟ : ೧೫] SADHVI : WEDNESDAY 28—11—1956 ಮೈಸೂರು : ಬುಧವಾರ ೨೮—೧೧—೧೯೫೬ [ಸಂಚಿಕೆ : [illegible]

ಪೋರ್ಟ್‌ಸೈಯದ್ದಿಗೆ ಫ್ರೆಂಚ್‌ಪಡೆ ಪ್ರವೇಶದ ತನಿಖೆಗೆ ಕರೆ

ಕಾಂಗ್ರೆಸ್ಸಿನಿಂದ ಅಧಿಕಾರದ ದುರುಪಯೋಗ

ಸಂಸ್ಥೆಯ ಸರ್ವಾಧಿಕಾರತ್ವಕ್ಕಾಗಿ ಪ್ರಜಾ ಸಮಾಜವಾದಿ ಪಕ್ಷ ಸಮ್ಮೇಳನದ ಖಂಡನೆ

ಬೆಂಗಳೂರು ೨೭

ಇಲ್ಲಿ ಸೇರಿರುವ ಭಾರತದ ಪ್ರಜಾ ಸಮಾಜ ವಾದಿ ಪಕ್ಷದ ರಾಷ್ಟ್ರೀಯ ಸಮ್ಮೇಳನದಲ್ಲಿ ದಿನ ರಾಜಕೀಯ ಜೀವನವು ಕ್ಷಿಪ್ರವಾಗಿ ಕೆಡುತ್ತಿರುವುದರ ಬಗ್ಗೆ ಆತಂಕವನ್ನು ವ್ಯಕ್ತಪಡಿಸಿ, ಆಡಳಿತ ನಡೆಸುತ್ತಿರುವ ಕಾಂಗ್ರೆಸ್ ಪಕ್ಷದ ನೀತಿಯಿಂದ ಲಂಚಗುಳಿತನ, ಪಕ್ಷಪಾತ ಮುಂತಾದುವು ಹೆಚ್ಚಿ ಕಾಂಗ್ರೆಸ್ಸು ರಾಜಕೀಯ ಅಧಿಕಾರವನ್ನು ದುರುಪಯೋಗಪಡಿಸಿರುವುದನ್ನು ಖಂಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ವಿಕೇಂದ್ರೀಕರಣದ ನೀತಿಯನ್ನು ಅನುಸರಿಸುವುದಾಗಿ ಕಾಂಗ್ರೆಸ್ಸು ತಿಳಿಸಿದ್ದರೂ, ಅವರ ವರ್ತನೆಯು ಸರ್ವಾಧಿಕಾರದಿಂದ ಕೂಡಿ ದ್ದೆಂದು ನಿರ್ಣಯವು ತಿಳಿಸಿದೆ. ಇದರಿಂದ ಭಾರತದಲ್ಲಿ ಪ್ರಜಾ ಪ್ರಭುತ್ವಕ್ಕೆ ಅಪಾಯವುಂ ಟಾಗಿ, ಅದನ್ನು ತಡೆಯಲು ಬಲವಾದ ವಿರೋಧ ಪಕ್ಷವಿರಬೇಕೆಂದೂ ಸೂಚಿಸಲಾಗಿದೆ.

ಸಾಮಾನ್ಯ ಮನುಷ್ಯನ ಆರ್ಥಿಕ ಸ್ಥಿತಿಯನ್ನು ಉತ್ತಮಪಡಿಸುವುದರಲ್ಲಿ ಕಾಂಗ್ರೆಸ್ ಆಡಳಿತವು ವಿಫಲಗೊಂಡಿರುವುದಾಗಿ ನಿರ್ಣಯವು ಘೋಷಿಸಿದೆ. ಭೂ ಸುಧಾರಣೆ ಮತ್ತು ಕೈಗಾರಿಕಾ ನೀತಿಗಳ ಬಗ್ಗೆಯೂ ಅತೃಪ್ತಿ ವ್ಯಕ್ತವಾಗಿದೆ.

ಮೈಸೂರಿನಲ್ಲಿ ಜಿಲ್ಲಾ ಬೋರ್ಡು ಚುನಾವಣೆಗಳನ್ನು ನಡೆಸದಿರುವ ಬಗ್ಗೆ ಶ್ರೀ ಎಂ. ಹುಚ್ಚೇ ಡರು ಟೀಕಿಸಿದರು.

ಕಾಂಗ್ರೆಸ್ ಅಧಿವೇಶನಕ್ಕಾಗಿ ಹೋಳ್ಕರರಿಂದ ೨೬,೦೦೦ ರೂ.

ಬರುವ ಜನವರಿ ತಿಂಗಳಲ್ಲಿ ಇಂದೂರಿನಲ್ಲಿ ಸೇರುವ ೬೨ ನೇ ಕಾಂಗ್ರೆಸ್ ಅಧಿವೇಶನಕ್ಕಾಗಿ ಇಂದೂರಿನ ಹೋಳ್ಕರರು ೨೬,೦೦೦ ರೂ.ಗಳ ದಾನ ಕೊಟ್ಟಿರುತ್ತಾರೆ.

ಉಪನ್ಯಾಸ

ನಗರದ ಮಹಾರಾಜಾ ಕಾಲೇಜಿನಲ್ಲಿ ವಿಶ್ವ ವಿದ್ಯಾಲಯದ ಸಂಸ್ಕೃತ ಸಂಘದ ಆಶ್ರಯದಲ್ಲಿ ಸಂಜೆ ೫|| ಗಂಟೆಗೆ ಇತಿಹಾಸದ ಪ್ರೊಫೆಸರ್ ಡಾ|| ಎಸ್. ಶ್ರೀಕಂಠಶಾಸ್ತ್ರಿಯವರು ಗಣೇಶ ಉಪಾಸನೆ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಗಳೂರು ಆಕಾಶವಾಣಿ ಕಾರ್ಯಕ್ರಮ ಬೆಳಗ್ಗೆ ೭-೫ ಕೊಳಲು. ೭-೧೫ ಗೀತ ವಾದನ. ೭-೩೦ ಮತ್ತು ೮-೧೫ ಪಿ. ಕಳ್ಳಣ್ಣ [illegible] ವಾಚನ. ಮಧ್ಯಾಹ್ನ ೧೨ ಜಿ. ಆರ್. [illegible] ಸಪ್ತ-ಸಂಗೀತ. ೧೨-೩೦ ಕಾಟ್ಟುಕ್ಕುರುಚ್ಚಿ [illegible] ಮೂರ್ತಿ-ಪಿಟೀಲು ೧ ಸಿತಾರ್. ೧-೩೦ [illegible]. ಸಂಜೆ ೫-೩೦ ಎ. ಆರ್. [illegible] -ಸಿತಾರ್. ೬-೫ ವಿರಾಮ ಸಂಗೀತ. ೬-೩೦ [illegible] ಗೀತೆಗಳು. ೭-೩. ತಾಳ ವಾದ್ಯ. ೮ ಕಾಟ್ಟುಕ್ಕುರುಚ್ಚಿ ಕೃಷ್ಣಮೂರ್ತಿ-ಪಿಟೀಲು. ೮-೩೦ ದೆಹಲಿ ಪ್ರಸಾರ. ೯-೧೫ ಮೈಸೂರು ಸರ್ಕಾರದ ಅಭಿವೃದ್ಧಿ ಯೋಜನೆ-ಇಂಗ್ಲಿಷ್ ಭಾಷಣ. ೧೦-೧೫ [illegible].

೭೬ ಲಕ್ಷ ರೂ. ಬಾಕಿಯ ತೀರ್ವೆಗಾಗಿ ಪಾಕಿಸ್ತಾನಕ್ಕೆ ಒತ್ತಾಯ

ಪಶ್ಚಿಮ ಪಾಕಿಸ್ತಾನದ ಮಧ್ಯ ಬರಿ ದೋಆಬ್ ಮತ್ತು ದೀಪಾಲಪುರದಲ್ಲಿ ಎರಡು ಕಾಲುವೆಗಳಿಗೆ ಭಾರತವು ಒದಗಿಸಿದ ನೀರಿಗಾಗಿ ಪಾಕಿಸ್ತಾನವು ಕೊಡಬೇಕಾದ ೭೬ ಲಕ್ಷ ರೂ. ಗಳನ್ನು ಕೂಡಲೇ ಭಾರತದ ರಿಸರ್ವ್ ಬ್ಯಾಂಕಿಗೆ ಕಟ್ಟುವಂತೆ ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಸೂಚಿಸಿದ್ದಾರೆ. ಕಳೆದ ೬ ವರ್ಷಗಳಿಂದ ಈ ಬಾಕಿಯನ್ನು ಕೊಟ್ಟಿಲ್ಲ. ಅದನ್ನು ಅನಿರ್ದಿಷ್ಟಕಾಲದವರೆಗೆ ಮುಂದುವರಿಸಲು ಭಾರತ ಸರ್ಕಾರದವರು ವಿರೋಧವಾಗಿದ್ದಾರೆ.

ಇಂಡೋನೇಷ್ಯಾ ಉಪಾಧ್ಯಕ್ಷ ಹಟ್ಟಾರವರ ರಾಜೀನಾಮೆ

ಇಂಡೋನೇಷ್ಯದ ಉಪಾಧ್ಯಕ್ಷ ಡಾ|| ಮಹಮದ್ ಹಟ್ಟಾರವರು ತಮ್ಮ ಹುದ್ದೆಗೆ ರಾಜೀನಾಮೆಯನ್ನು ಇತ್ತಿದ್ದಾರೆ. ಅಲ್ಲಿನ ಆಂತರಿಕ ಪರಿಸ್ಥಿತಿ ಬಗ್ಗೆ ಅಧ್ಯಕ್ಷ ಸುಕಾರ್ನೊರವರಿಗೆ ಅತೃಪ್ತಿಯುಂಟಾಗಿದೆ. ಹಟ್ಟಾರವರು ಅಲ್ಲಿನ ನೂತನ ಪ್ರಧಾನಿಯಾಗಬಹುದೆಂದು ಊಹಿಸಲಾಗಿದೆ.

ಈಜಿಪ್ಟಿಗೆ ಭಾರತದ ಮೂರನೇ ಶಾಂತಿ ಪಡೆ

ವಿಶ್ವಸಂಸ್ಥೆಯ ಶಾಂತಿ ಪಡೆಯನ್ನು ಸೇರಲು ಆಗ್ರಾದಿಂದ ನೆನ್ನೆ ಭಾರತದ ಮೂರನೇ ಸೈನ್ಯ ದಳವು ಪ್ರಯಾಣ ಮಾಡಿತು. ಅದರಲ್ಲಿ ೧೮೭ ಮಂದಿ ಅಧಿಕಾರಿಗಳು ಮತ್ತು ಸೈನಿಕರಿದ್ದರು. ಮೊದಲು ಹೊರಟ ಪಡೆಗಳ ೧೫೦ ಸೈನಿಕರು ಸೂಯೆಜ್ ಕಾಲುವೆಯನ್ನು ನೆನ್ನೆ ತಲುಪಿದರು. ಅಲ್ಲಿ ಈಗ ವಿಶ್ವಸಂಸ್ಥೆಯ ೧,೫೫೫ ಸೈನಿಕರು ಇರುವರು.

ಸಂಸ್ಥಾನದಲ್ಲೆಲ್ಲಾ ಒಂದೇ ಸಮನಾದ ಮಾರಾಟ ತೆರಿಗೆ

ಮೈಸೂರು ಸಂಸ್ಥಾನದಲ್ಲೆಲ್ಲಾ ಒಂದೇ ರೀತಿಯ ಮಾರಾಟ ತೆರಿಗೆ ಶಾಸನವನ್ನು ರಚಿಸಲು ಸರ್ಕಾರದವರು ಆಲೋಚಿಸಿದ್ದಾರೆ. ಅದನ್ನು ಮಾಡುವವರೆಗೆ ಹೊಸತ ಸಂಸ್ಥಾನದ ರಚನೆಗೆ ಮುಂಚೆ ಆಯಾ ಪ್ರದೇಶಗಳಲ್ಲಿದ್ದ ಶಾಸನಗಳೇ ಮುಂದುವರಿಯುತ್ತವೆಂದು ಸರ್ಕಾರಿ ಪ್ರಕಟಣೆಯೊಂದು ತಿಳಿಸಿದೆ.

ಸರ್ಕಾರಿ ಬಸ್ಸಿನ ಡ್ರೈವರ್ ಮತ್ತು ಕಂಡಕ್ಟರಿಗೆ ಸಜಾ

ಕೈಗಾರಿಕಾ ಸಚಿವ ಶ್ರೀ ಪಾಟೀಲರು ಕಳೆದ ೧೪ ನೇ ತಾರೀಖು [illegible] ಮೈಸೂರಿಗೆ ಬರುತ್ತಿದ್ದಾಗ ಅವರ ಮೋಟಾರಿಗೆ ಸ್ಥಳ ಕೊಡಲಿಲ್ಲವೆಂದು ಸರ್ಕಾರೀ ಬಸ್ಸಿನ ಡ್ರೈವರ್ ತಿಮ್ಮಯ್ಯ ಮತ್ತು ಕಂಡಕ್ಟರ್ ಪುಟ್ಟಸ್ವಾಮಿಯವರಿಬ್ಬರಿಗೂ ನಗರದ ದ್ವಿತೀಯ ನ್ಯಾಯಾಧೀಶರು ತಲಾ ೧೦ ರೂ. ದಂಡ ವಿಧಿಸಿದ್ದಾರೆ.

ವಿಧಾನ ಸಭೆಯ ಹಂಗಾಮಿ ಅಧ್ಯಕ್ಷರು

ವಿಶಾಲ ಮೈಸೂರಿನ ವಿಧಾನ ಸಭೆಯ ಹಂಗಾಮಿ ಅಧ್ಯಕ್ಷರಾಗಿ ಕೋಲಾರದ ಶ್ರೀ ಬಿ. ಎಸ್. ಸುಬ್ಬಲಕ್ಷ್ಮನವರನ್ನು ನೇಮಿಸಲಾಗಿದೆ. ಅವರು [illegible].

ಪೋರ್ಟ್ ಸೈಯದ್ದಿನಲ್ಲಿ ಫ್ರೆಂಚರಿಂದ ಹೆಚ್ಚು ಶಸ್ತ್ರ ಶೇಖರಣೆ

ವಿಶ್ವ ಸಂಸ್ಥೆಯ ತನಿಖೆಗಾಗಿ ಭಾರತದ ಮಂತ್ರಿಯ ಒತ್ತಾಯ

ಪೋರ್ಟ್‌ಸೈಯದ್ದಿನಲ್ಲಿ ಫ್ರೆಂಚರು ಹೆಚ್ಚು ಹೆಚ್ಚು ಶಸ್ತ್ರ ಶೇಖರಣೆ ಮಾಡುತ್ತಿರುವುದರ ಬಗ್ಗೆ ಬಂದಿರುವ ವರದಿಗಳನ್ನು ವಿಶ್ವಸಂಸ್ಥೆಯವರು ತನಿಖೆ ನಡೆಸಬೇಕೆಂದು ಸಂಸ್ಥೆಯ ಸಾಧಾರಣ ಸಭೆಯಲ್ಲಿ ನೆನ್ನೆ ಭಾರತದ ಮಂತ್ರಿ ವಿ. ಕೆ. ಕೃಷ್ಣಮೆನನ್ನರು ಒತ್ತಾಯ ಮಾಡಿದರು. ಈ ಬಗ್ಗೆ ಉಂಟಾಗಿರುವ ಅನುಮಾನ ಪರಿಹಾರ ಮಾಡುವಂತೆ ಫ್ರೆಂಚ್ ಸರ್ಕಾರವನ್ನು ಹ್ಯಾಮರ್ ಷೀಲ್ಡರು ಪ್ರಶ್ನಿಸುವಂತೆ ಅವರು ಕೋರಿದರು. ಈ ಸುದ್ದಿಯು ಸುಳ್ಳಾದರೆ ಅಂತಹದನ್ನು ತಡೆಗಟ್ಟುವುದು ಅಗತ್ಯವೆಂದು ಅವರು ಸೂಚಿಸಿದರು.

ಆಂಗ್ಲೋ-ಫ್ರೆಂಚ್, ಈಜಿಪ್ಟ್ ಸೈನ್ಯಗಳ ನಡುವೆ ವಿಶ್ವ ದಳ

ವಿಶ್ವಸಂಸ್ಥೆಯ ಶಾಂತಿ ಪಡೆಯನ್ನು ದಕ್ಷಿಣ ಪೋರ್ಟ್ ಸೈಯದ್ದಿನ ಭಾಗದಲ್ಲಿ ಆಂಗ್ಲೋ ಫ್ರೆಂಚ್ ಮತ್ತು ಈಜಿಪ್ಟ್ ಸೈನ್ಯಗಳ ನಡುವೆ ಇಂದು ನಿಲ್ಲಿಸಲು ನಿಶ್ಚಯಿಸಿದೆ ಎಂದು ಪ್ರಧಾನ ಸೇನಾನಿ ಬರ್ನ್ಸ್‌ರವರು ತಿಳಿಸಿರುತ್ತಾರೆ.

ಚಿಯಾಂಗ್ ಕೈಷೇಕರಿಗೆ ಚೀನಾ ಸರ್ಕಾರದ ಹುದ್ದೆಯೇ ?

ಫಾರ್ಮೋಸಾದಿಂದ ಚಿಯಾಂಗ್ ಕೈಷೇಕರು ಜನತಾ ಚೀನಕ್ಕೆ ಬರುವುದಾದರೆ ಅವರಿಗೆ ಭಾರಿ ಸರ್ಕಾರಿ ಹುದ್ದೆಯನ್ನು ಕೊಡಲಾಗುವುದೆಂದು ಚೌ ಎನ್ ಲೈಯವರು ಸೂಚನೆಯಿತ್ತಿರುವುದಾಗಿ ವರದಿಯಾಗಿದೆ.

ಆಂಧ್ರ ಮಂತ್ರಿಮಂಡಲಕ್ಕೆ ಸೇರಲು ಗೋಪಾಲ ರೆಡ್ಡಿ ಒಪ್ಪಿಗೆ

ಆಂಧ್ರ ಪ್ರದೇಶದ ಮಂತ್ರಿಮಂಡಲಕ್ಕೆ ಸೇರಲು ಮಾಜಿ ಮುಖ್ಯ ಮಂತ್ರಿ ಬಿ. ಗೋಪಾಲರೆಡ್ಡಿಯವರು ಸಮ್ಮತಿಸಿರುತ್ತಾರೆ. ಅವರು ನಾಳೆ ಪ್ರಮಾಣ ವಚನ ಸ್ವೀಕರಿಸುವರು.

ವಿಶಾಲ ಮೈಸೂರು ಸಂಸ್ಥಾನದ ರೆವಿನ್ಯೂ ಬೋರ್ಡಿನ ಅಧ್ಯಕ್ಷರು

ಮಾಜಿ ಬೊಂಬಾಯಿಯ ಸರ್ಕಾರಿ ನ್ಯಾಯಮಂಡಲದ ಅಧ್ಯಕ್ಷರಾಗಿದ್ದ ಶ್ರೀ ಎಸ್. ಎಸ್. ಮಾಲಿಮಠರವರನ್ನು ನೂತನ ಮೈಸೂರಿನ ರೆವಿನ್ಯೂ ಬೋರ್ಡು ಅಧ್ಯಕ್ಷರಾಗಿ ನೇಮಿಸಲಾಗಿದೆ. ನಿವೃತ್ತ ಜಿಲ್ಲಾ ನ್ಯಾಯಾಧೀಶ ಶ್ರೀ ದೇವಧರ್, ನಿವೃತ್ತ ಡೆಪ್ಯುಟಿ ಕಲೆಕ್ಟರ್ ಶ್ರೀ ಎಸ್. ಕೆ. ಹುಬ್ಲಿ ಮತ್ತು ಶ್ರೀ ಆರ್. ಜೆ. ರೇಗೋರವರು ಹೊಸ ಸದಸ್ಯರಾಗಿರುತ್ತಾರೆ. ಕಳೆದ ೧ನೇ ತಾರೀಖಿನಿಂದ ಈ ನೇಮಕಗಳು ಜಾರಿಗೆ ಬಂದಿವೆ.

○ನಂಜನಗೂಡು ತಾಲ್ಲೂಕು ಕಾಂಗ್ರೆಸ್ ಕಾರ್ಯಕರ್ತರ ಸಭೆಯು ನಾಳೆ ಮಧ್ಯಾಹ್ನ ೩-೩೦ ಗಂಟೆಗೆ ನಂಜನಗೂಡಿನಲ್ಲಿರುವ ಶ್ರೀ ಕನಕದಾಸ ವಿದ್ಯಾರ್ಥಿ ನಿಲಯದಲ್ಲಿ ಜರುಗುವುದು. ಕಾಂಗ್ರೆಸ್ ಅಭಿಮಾನಿಗಳೂ ಮತ್ತು ಕಾರ್ಯಕರ್ತರೂ ಸಕಾಲಕ್ಕೆ ದಯಮಾಡಬೇಕೆಂದು ಪ್ರಾರ್ಥಿಸಲಾಗಿದೆ.

ಆಹಾರದ ಬೆಲೆ ಏರಿಕೆಗಾಗಿ ಸಮಾಜವಾದಿಗಳ ಪ್ರತಿಭಟನೆ

ಮೈಸೂರು ೨೭

ಸಮಾಜವಾದಿ ಪಕ್ಷದ ನಗರ ಶಾಖಾ ಸಮಿತಿಯ ಸಭೆಯು ಕಳೆದ ಶನಿವಾರ ನಡೆದು ಅರಿಯಲೂರು ರೈಲು ದುರಂತದಲ್ಲಿ ಮಡಿದವರ ಮತ್ತು ನೊಂದವರ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿ, ರೈಲು ಆಡಳಿತದವರ ಬೇಜವಾಬ್ದಾರಿತನವನ್ನು ಖಂಡಿಸಲಾಯಿತು. ಆಹಾರದ ಬೆಲೆಯು ಏರುತ್ತಿರುವುದಕ್ಕಾಗಿ ಪ್ರತಿಭಟಿಸಿ, ಬ್ಯಾಂಕುಗಳು ಬೆಳೆಗಳ ಮುಂಗಡ ಹಣ ಕೊಡುತ್ತಿರುವುದನ್ನು ಖಂಡಿಸಲಾಯಿತು. ಬೆಂಗಳೂರು ಪೌರಸಭೆಯ ಚುನಾವಣೆಗಳನ್ನು ಮುಂದುವರಿಸುವುದಕ್ಕಾಗಿ ಟೀಕಿಸಲಾಯಿತು.

ಶಾಲ ಕಳುವಿಗಾಗಿ ಸಜಾ

ಮೈಸೂರು ತಾಲ್ಲೂಕು ನಾಗನಹಳ್ಳಿಯ ಮಹದೇವ ಎಂಬುವನು ತನ್ನ ನಾದಿನಿ ಲಿಂಗಮ್ಮನ ಮಗಳು ಪುಟ್ಟಮ್ಮನು ಮಲಗಿದ್ದಾಗ ಆಕೆಯ [illegible]ನಲ್ಲಿದ್ದ ಶಾಲನ್ನು ಅಪಹರಿಸಿ ಗಿರವಿ ಇಟ್ಟುದಕ್ಕಾಗಿ ಅವನಿಗೆ ೧೫ ದಿನ ಕಠಿಣ ಸಜಾ ವಿಧಿಸಲಾಗಿದೆ.

ಟಿ. ಚೌಡಯ್ಯನವರಿಗೆ ನಿಧಿ ಸಮರ್ಪಣೆ ಮತ್ತು ಬಿನ್ನವತ್ತಳೆ

ಅರವತ್ತು ವರ್ಷ ತುಂಬಿದ ಸಂತೋಷಾರ್ಥವಾಗಿ ಸಂಗೀತರತ್ನ ಟಿ. ಚೌಡಯ್ಯನವರಿಗೆ ನಗರದ ನಿವಾಸಿಗಳ ಪರವಾಗಿ ನಾಳೆ ಸಂಜೆ ೬ ಗಂಟೆಗೆ ಪಳ್ಳದಕೇರಿಯಲ್ಲಿರುವ ಕಂಟ್ರಾಕ್ಟರ್ ಶ್ರೀ ಎಂ. ವಿ. ನಾಗಪ್ಪನವರ ಗೃಹದಲ್ಲಿ ಸನ್ಮಾನ ಪತ್ರ ಮತ್ತು ನಿಧಿಯನ್ನು ಸಮರ್ಪಿಸಲಾಗುವುದು.

ವಿಶ್ವಸಂಸ್ಥೆ ಪಡೆಗಾಗಿ ೧ ಕೋಟಿ ಡಾಲರ್ ವೆಚ್ಚಕ್ಕೆ ಒಪ್ಪಿಗೆ

ಈಜಿಪ್ಟಿನಲ್ಲಿ ವಿಶ್ವಸಂಸ್ಥೆ ಪಡೆಯ ನಿರ್ವಹಣೆಗಾಗಿ ಪ್ರಾರಂಭದಲ್ಲಿ ೧ ಕೋಟಿ ಡಾಲರ್ ಹಣವನ್ನು ವೆಚ್ಚ ಮಾಡುವುದಕ್ಕೆ ವಿಶ್ವಸಂಸ್ಥೆಯ ಸಾಧಾರಣ ಸಭೆಯು ನೆನ್ನೆ ಸಮ್ಮತಿಯಿತ್ತಿತು. ರಷ್ಯಾ ಮತ್ತು ಬೆಂಬಲಿಗ ರಾಷ್ಟ್ರಗಳು ಅದನ್ನು ವಿರೋಧಿಸಿದುವು. ಈ ವೆಚ್ಚವನ್ನು ಆಕ್ರಮಣಕಾರಿ ರಾಷ್ಟ್ರಗಳು ವಹಿಸಬೇಕೆಂದು ರಷ್ಯಾ ಸೂಚಿಸಿತು.

ಬೆಳಗಾಮಿನಲ್ಲಿ ಢೇಬರರು

ಕರ್ನಾಟಕದಲ್ಲಿ ೪ ದಿನಗಳ ಪ್ರವಾಸ ಕೈಗೊಳ್ಳಲು ನೆನ್ನೆ ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಬೆಳಗಾಮಿಗೆ ಆಗಮಿಸಿದರು. ಅವರನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ. ವೆಂಕಟಪ್ಪನವರು ಸ್ವಾಗತಿಸಿದರು. ಕಾಂಗ್ರೆಸ್ಸು ಪ್ರಜೆಗಳ ಸೇವೆಗಾಗಿ ಇರುವ ಸಂಸ್ಥೆಯೆಂದು ಢೇಬರ್‌ರವರು ತಿಳಿಸಿದರು. ಅವರು ೧೦,೦೦೦ ಜನರನ್ನುದ್ದೇಶಿಸಿ ಭಾಷಣ ಮಾಡಿ, ದೇಶದಿಂದ ಬಡತನ ಮತ್ತು ಹಸಿವನ್ನು ಪೂರ್ಣವಾಗಿ ನಾಶಮಾಡಬೇಕಾಗಿದೆಯೆಂದು ಹೇಳಿದರು.

ಹೈಕೋರ್ಟಿನ ಸತ್ಯಾಗ್ರಹದಲ್ಲಿ ೧೧೧ ಬಂಧನಗಳು

ತಿರುವನಂತಪುರದಲ್ಲಿ ಹೈಕೋರ್ಟಿನ [illegible] ಯನ್ನು ವರ್ಗಾಯಿಸುವಂತೆ ಒತ್ತಾಯಪಡಿಸಲು ನಡೆಯುತ್ತಿರುವ ಚಳುವಳಿಯಲ್ಲಿ ಇದುವರೆಗೆ ೧೧೧ ಮಂದಿಯನ್ನು ಬಂಧಿಸಲಾಗಿದೆ. ಆ ಪೈಕಿ ೨೦ ಮಂದಿ ವಕೀಲರೂ ಇರುವರು

ಪೋರ್ಚುಗಲ್ ಅಧ್ಯಕ್ಷರ ಪತ್ನಿಗೆ ಗೋವಾ ನಾರಿಯರ ಮನವಿ

ಪೋರ್ಚುಗಲ್ಲಿನ ಸರ್ವಾಧಿಕಾರಿ ಪ್ರಧಾನ ಮಂತ್ರಿಯಾದ ಡಾ॥ ಸಾಲಜಾರ್ ಮತ್ತು ಅಧ್ಯಕ್ಷ ಲೋಪಜ್‌ರವರಿಗೆ ಗೋವದ ನಾರಿಯರು ಮಾಡಿಕೊಂಡ ಪ್ರಾರ್ಥನೆಯು ನಿರರ್ಥಕವಾಗಲು, ಅವರುಗಳು ಈಗ ಅಧ್ಯಕ್ಷರ ಪತ್ನಿಗೆ ಮನವಿ ಮಾಡಿ ಪೋರ್ಚುಗೀಸರು ಗೋವಾದಿಂದ ಹೊರಡಬೇಕೆಂದೂ, ಮನುಷ್ಯನ ತಾಳ್ಮೆಗೆ ಮಿತಿಯಿರುವುದೆಂದೂ, ಇನ್ನೂ ಕಾಲ ಮಿಂಚಿಲ್ಲವೆಂದೂ ತಿಳಿಸಿರುತ್ತಾರೆ. ಕ್ರಿಸ್ತ ಧರ್ಮದ ನೀತಿ ಮತ್ತು ನ್ಯಾಯದ ಪ್ರಕಾರ ಪೋರ್ಚುಗಲ್ಲು ಭಾರತದ ಪ್ರದೇಶವನ್ನು ಶಾಂತಿಯುತವಾಗಿ ಬಿಟ್ಟು ಹೊರಡಬೇಕೆಂದೂ ಅವರು ಹೇಳಿದ್ದಾರೆ

ಚಿನ್ನದ ಕಳ್ಳಸಾಗಣೆಗಾಗಿ ೮ ಮಂದಿ ಬಂಧನ

ರಾಬರ್ಟ್ಸನ್‌ಪೇಟೆಯ [illegible] ಸಾಗಾಣಿಕೆ ವ್ಯವಸ್ಥೆಯನ್ನು ಮೊನ್ನೆ ಪೊಲೀಸರು ಪತ್ತೆಹಚ್ಚಿ ೧೫ ತೊಲ ಚಿನ್ನವನ್ನು ಹಿಡಿದು, ಕಳ್ಳಸಾಗಣೆಯವರೆಂದು, ೮ ಮಂದಿಯನ್ನು ಹಿಡಿದು [illegible] ಸಂಬಂಧಿಸಿದಂತೆ ಬಂಧಿಸುವಂತಾಗಿದೆ. ಆ ಕಳ್ಳಮಾಲಿನ ಬೆಲೆ ಸುಮಾರು ೧೦೦೦೦ ರೂ ಆಗುವುದು

ಸಂಸ್ಥಾನದಲ್ಲಿ ಭೂ ಸುಧಾರಣ ಬಗ್ಗೆ ಶಾಸನ ಸಭಾಸದಸ್ಯರೊಡನೆ ಚರ್ಚೆ

ರೆವಿನ್ಯೂ ಮಂತ್ರಿ ಶ್ರೀ ಎಂ. ಪಿ. ಪಾಟೀಲರು ಕಳೆದ ಗುರುವಾರ [illegible] ರಲ್ಲಿ ಶಾಸನ ಸಭಾ ಸದಸ್ಯರೊಡನೆ ಹೊಸ ಭೂ ಸುಧಾರಣಾ ವಿಷಯವಾಗಿ ಚರ್ಚೆ ನಡೆಸಿದರು. ಭೂ ಸುಧಾರಣೆ [illegible] ವ್ಯತ್ಯಾಸ ಮತ್ತು ಗೇಣಿದಾರರ ಹಿತ [illegible] ಸಮಸ್ಯೆಗಳನ್ನು ಸದಸ್ಯರು ತಿಳಿಸಿದರು. ಯಾವುದೇ ಭೂ ಸುಧಾರಣೆ ಕಾರ್ಯಕ್ರಮವು ಜಮೀನ್ದಾರರ ಮಧ್ಯಮ ವರ್ಗದ ಹಿತವನ್ನು ಲಕ್ಷಿಸಬೇಕೆಂದೂ ಅವರಿಗೆ ಪೆಟ್ಟು ಬೀಳಬಾರದೆಂದೂ ಸದಸ್ಯರು ಸಚಿವರಿಗೆ ಸೂಚಿಸಿದರು

ತಡೆ ಆಜ್ಞೆಯನ್ನು ರದ್ದು ಮಾಡಲು ಅರ್ಜಿ

ನಾರಾಯಣಶಾಸ್ತ್ರಿ ರಸ್ತೆಯಲ್ಲಿರುವ ಅನಾಥಾಲಯದ ಮುಂದಿನ ತೋಟದಲ್ಲಿ ದೇವಾಲಯವೊಂದನ್ನು ಕಟ್ಟಲು [illegible] ಚಾರ್ಯ ಎಂಬುವರು ಲೈಸೆನ್ಸು ಪಡೆದು ಕೆಲಸ ನಡೆಸುತ್ತಿದ್ದುದಕ್ಕೆ ಅನಾಥಾಲಯದ ಕಾರ್ಯದರ್ಶಿಗಳು ಪ್ರಥಮ ಮುನ್ಸೀಫರ ಕೋರ್ಟಿನಿಂದ ತಡೆ ಆಜ್ಞೆಯನ್ನು ಪಡೆದಿದ್ದುದರ ವಿರುದ್ಧವಾಗಿ ಮುಜರಾಯಿ [illegible] ಲಕ್ಷ್ಮೀನರಸಿಂಹಯ್ಯನವರು ನೆನ್ನೆ [illegible] ಆಜ್ಞೆಯನ್ನು ರದ್ದುಗೊಳಿಸುವಂತೆ ಕೋರಿದ್ದಾರೆ

Ready For Sale
INTERMEDIATE CHEMISTRY
By D V Venkatasubbiah M. Sc.,
(Retd Asst Prof of Chemistry)
Contains Answers to Twenty Question papers of Mysore University
1952–56 (up to date)
Price Rs [illegible]-0-0
Publisher – D V K MURTHY,
Krishnamurthipuram, Mysore
Available at all leading Book sellers

Edited, Printed and Published by
A R N [illegible] at Sadhvi Press
D Subbaiah Road, Mysore

ರೈಲು ದುರಂತದಲ್ಲಿ ಕಳ್ಳತನಕ್ಕಾಗಿ ೮೨ ಜನರ ಬಂಧನ

ಅರಿಯಲೂರು ರೈಲು ದುರಂತದಲ್ಲಿ ಸತ್ತವರ ಗಾಯಗೊಂಡವರ ಸಾಮಾನುಗಳನ್ನು ಕಳವು ಮಾಡಿದರೆಂಬ ಕಾರಣಕ್ಕಾಗಿ ೮೨ ಜನರನ್ನು ಪೊಲೀಸರು ಬಂಧಿಸಿ ಅವರಲ್ಲಿದ್ದ ೧೨೦೦೦ ರೂ ನಗದು ಮತ್ತು ವಸ್ತುಗಳನ್ನು ವಶಪಡಿಸಿಕೊಂಡಿದ್ದಾರೆ. ಸುತ್ತಮುತ್ತಲ ಗ್ರಾಮಸ್ಥರು ನದಿಯಲ್ಲಿ ಕೊಚ್ಚಿಕೊಂಡು ಬಂದ ಹಣ ಥೈಲಿಗಳನ್ನು ಸಂಗ್ರಹಿಸಿ ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ

"ಭೂಗೋಳ ಸಂಗ್ರಹ"

ಅರಕಲಗೂಡಿನ ಶ್ರೀ ಎ ಎಸ್ ನಾರಾಯಣರವರು ರಚಿಸಿರುವ ಭೂಗೋಳ ಸಂಗ್ರಹ ಪುಸ್ತಕದ ಒಂದನೇ ಭಾಗವನ್ನು ಅವರಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ದಕ್ಷಿಣ ಅಮೇರಿಕಾ ಆಫ್ರಿಕಾ ಮತ್ತು ಆಸ್ಟ್ರೇಲಿಯಾ ಖಂಡಗಳ ಭೂವಿವರಗಳನ್ನು ಸಂಗ್ರಹವಾಗಿ ಕೊಡಲಾಗಿದೆ. ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಇದು ಬಹಳ ಉಪಯುಕ್ತವಾಗಿದೆ. ಇದರ ಬೆಲೆ ಐದು ಆಣೆ. ಪ್ರತಿಗಳು ಹಾಸನ ಜಿಲ್ಲೆಯ ಗೊರೂರು ಪ್ರೌಢಶಾಲಾ ಉಪಾಧ್ಯಾಯ ಶ್ರೀ ಎ ಎಸ್ ಚಂದ್ರಶೇಖರಯ್ಯನವರಲ್ಲಿ ದೊರೆಯುತ್ತವೆ

ಕ್ರಿಕೆಟ್ ಪಂದ್ಯ

ಕೆ ಎಂ ಪಿ ಸಿ ಸಿ ರವರಿಗೂ, ಜಯನಗರದ ಕ್ಲಬ್ಬಿಗೂ ಕಳೆದ ಭಾನುವಾರ ನಡೆದ ಕ್ರಿಕೆಟ್ ಪಂದ್ಯದಲ್ಲಿ ಕೆ. ಎಂ. ಪಿ. ಸಿ. ಸಿ. ಯವರು ೧೦ ವಿಕೆಟ್ಟುಗಳಿಂದ ಜಯಗಳಿಸಿದರು. ಜಯನಗರದವರು ಎರಡು ಇನ್ನಿಂಗುಗಳಲ್ಲಿ ೮೦ ಮತ್ತು [illegible] ರನ್ನುಗಳನ್ನು ಮಾಡಿದ್ದರು. ಗೆದ್ದ ಟೀಮಿನವರು ೧ನೇ ಇನ್ನಿಂಗ್ಸಿನಲ್ಲಿ [illegible] ರನ್ನು ಮಾಡಿ ಎರಡನೆಯದರಲ್ಲಿ ಒಬ್ಬನೂ ಔಟಾಗದೆ ೯೪ ರನ್ನುಗಳನ್ನು ಗಳಿಸಿದರು

ಜಿಲ್ಲಾ ಕಾಂಗ್ರೆಸ್ ಸಮಿತಿ ಸದಸ್ಯರು

ಎಂ. ಪಿ. ಸಿ. ಸಿ. ಯ ಹೊಸ ನಿಬಂಧನೆಗಳ ಪ್ರಕಾರವಾಗಿ ಯಾವ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಚುನಾವಣೆ ನಡೆದು ಪುನರ್ರಚನೆ ಆಗಿಲ್ಲವೋ ಆ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಹಿಂದಿನ ಎಂ. ಪಿ. ಸಿ. ಸಿ. ನಿಯಮದ ಪ್ರಕಾರ ಜಿಲ್ಲಾ ಕಾಂಗ್ರೆಸ್ ಸಮಿತಿಯ ಸದಸ್ಯರಾಗಿದ್ದವರು (ಜನರಲ್ ಬಾಡಿ ಸದಸ್ಯರು) ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಸದಸ್ಯರಾಗುತ್ತಾರೆಂಬುದಾಗಿ ಮೈಸೂರು ಪ್ರದೇಶ ಕಾಂಗ್ರೆಸ್ ಚುನಾವಣಾ ಸಮಿತಿಯು ತಿಳಿಸುತ್ತದೆ

In the Court of the District Judge at Mysore

No 94 of 55

Petitioner
E Srinivasa Iyer
Vs
Respondents
Gita Silk Mills, Ltd, Mysore

In the matter of the Mysore Companies Act 1938, and of the Gita Silk Mills, Ltd., Mysore

Notification under Rule 52 (Form No 19) read with Rule 3 under the Rules framed by the High Court of Mysore, Bangalore under the Mysore Companies Act 1938

By an order made by the Court in the above matter dated the 12th day of November 1955 on the petition of the petitioner shareholder it was ordered that the said company be wound up by Court under the provisions of the Mysore Companies Act.

M. S. RANGANATHAN,
Advocate for the Petitioner
Mysore
27-11-56

ಇಥಿಯೋಪಿಯಾದಿಂದ ಈಜಿಪ್ಟ್ ಅಧಿಕಾರಿಯ ಉಚ್ಚಾಟನೆ

ಇಥಿಯೋಪಿಯದ ಚಕ್ರವರ್ತಿಯ [illegible] ಪ್ರಿನ್ಸ್ [illegible] ಯನ್ನು ಕೊಲೆ ಮಾಡಿಸಿ ತಮ್ಮ ದೇಶದಲ್ಲಿದ್ದ ಈಜಿಪ್ಟ್ ರಾಯಭಾರ ಕಚೇರಿಯ ಮಿಲಿಟರಿ ಅಧಿಕಾರಿಯನ್ನು ಹೊರಕ್ಕೆ ಕಳುಹಲಾಗಿದೆಯೆಂದು ತಿಳಿಸಿರುತ್ತಾರೆ

ಜೇಬುಗಳ್ಳತನಕ್ಕಾಗಿ ಸಜಾ

ಅನೇಕ ಬಾರಿ ಶಿಕ್ಷೆ ಅನುಭವಿಸಿರುವ ಭಾಂಗಿ ರಾಮು ಉರುಫ್ ಲಂಗಾರಿ ಎಂಬುವನು ಕಳೆದ ಶನಿವಾರ ನಗರದ ಬಸ್ ಸ್ಟ್ಯಾಂಡಿನಲ್ಲಿ ಜೇಬುಗಳ್ಳತನ ನಡೆಸಿದನೆಂದು ದೇವರಾಜಾ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಪ್ರಥಮ ನಗರ ನ್ಯಾಯಾಧೀಶರು ನೆನ್ನೆ ಆಪಾದಿತನಿಗೆ ೨ ವರ್ಷ ಕಠಿಣ ಸಜಾ ವಿಧಿಸಿ, ಅನಂತರ ಒಂದು ವರ್ಷ ತನ್ನ ನಿವಾಸವನ್ನು ಪ್ರತಿ ದಿನ ತಿಳಿಸಬೇಕೆಂದು ಆಜ್ಞೆ ಮಾಡಿರುತ್ತಾರೆ

ಕಳ್ಳತನಕ್ಕಾಗಿ ಶಿಕ್ಷೆ

ಕೃಷ್ಣರಾಜನಗರದ ಸಿದ್ದೇಗೌಡ ಎಂಬುವನು ಕಳೆದ ಶುಕ್ರವಾರ ರಾತ್ರಿ ಹಾರ್ಡ್‌ವಿಕ್ ರೆಸ್ಟೊರೆಂಟಿನಲ್ಲಿ ಪೆಟ್ಟಿಗೆಯೊಂದನ್ನು ಕದ್ದನೆಂದು ದೇವರಾಜಾ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರದ ಪ್ರಥಮ ನ್ಯಾಯಾಧೀಶರು ಆಪಾದಿತನಿಗೆ ಒಂದು ವಾರ ಕಠಿಣ ಶಿಕ್ಷೆಯನ್ನು ವಿಧಿಸಿದರು

ಬ್ಯಾಡ್ಮಿಂಟನ್ ಪಂದ್ಯ

ನಂಜನಗೂಡಿನಲ್ಲಿ ಕಳೆದ ಶನಿವಾರ ಅಲ್ಲಿನ ಸರ್ವೀಸ್ ಕ್ಲಬ್ಬಿನವರಿಗೂ ಮತ್ತು ಮಂಡ್ಯದ ಪಿ ಡಬ್ಲ್ಯು ಡಿ ಟೀಮಿನವರಿಗೂ ಬ್ಯಾಡ್ಮಿಂಟನ್ ಪಂದ್ಯವು ನಡೆದು, ನಂಜನಗೂಡು ಕ್ಲಬ್ಬಿನವರು ೨೯–೧೯ ಮತ್ತು ೨೯–೨೩ ಪಾಯಿಂಟುಗಳಿಂದ ಜಯಗಳಿಸಿದರು. ಸರ್ವೀಸ್ ಟೀಮಿನ ಕ್ಯಾಪ್ಟನ್ ಎಂ ಚನ್ನಬಸವಯ್ಯ ಮತ್ತು ಇತರರು ಉತ್ತಮ ಆಟವನ್ನು ಆಡಿದರು.

ಮೈಸೂರು ಟಾಯ್ಸ್ ಕಾರ್ಖಾನೆಗೆ
ಕಾರ್ಮಿಕರ ಸಂಘದ ಪ್ರತಿನಿಧಿಗಳ ಭೇ

ನಗರದಲ್ಲಿ ನಡೆಯುತ್ತಿರುವ ಅಂತರ ರಾ [illegible] ಯ ಕಾರ್ಮಿಕರ ಸಂಘದ ಸಹಕಾರ ಶಿಕ್ಷಣದ ಶಿಕ್ಷಕರು ಮತ್ತು ಇತರ ಪ್ರತಿನಿಧಿಗಳು [illegible] ಲಾಕ ಮೊಹಲ್ಲಾದಲ್ಲಿರುವ ಮೈಸೂರು ಟಾ [illegible] ಕಾರ್ಖಾನೆಗೆ ಕಳೆದ ವಾರ ಭೇಟಿಯಿತ್ತ [illegible] ಗೃಹ ಕೈಗಾರಿಕೆಯ ರೀತ್ಯಾ ತಯಾರಿಸುತ್ತಿ [illegible] ಸಾಮಾನುಗಳನ್ನು ಅವರುಗಳು ವೀಕ್ಷಿಸಿ [illegible] ಗೆಯನ್ನು ಸೂಚಿಸಿದರು. ಅವರನ್ನು ಶ್ರೀ [illegible] ಪ್ಪನವರು ಸ್ವಾಗತಿಸಿದರು

ಮೈಸೂರು ಪೇಟೆ ಧಾರಣೆ

ಬಂಗಾರದ ಸಣ್ಣ ಪುಲ್ಲ

ಕೊಯಮುತ್ತೂರು ಸಣ್ಣ	೪೧	೦	೦	೪೦
ರಸ್ತಾಳಿ	೨೫	೦	೦	
ಅಕ್ಕಿಕೊಂಬಿನ ಸಣ್ಣ	೨೫	೧೦	೦	೨೫
ರಾಗಿ	೨೬	೦	೦	೪೬
ಜೋಳ	೪೬	೬	೦	೪೬
ನವಣೆ	೨೨	೦	೦	೨೪
ಕಂಬು	೪೦	೦	೦	
ಕಡಲೆಕಾಯಿ	೯೪	೦	೦	೯೮
ಎಳ್ಳು	೯೦	೯೪	೦	
ಹುರುಳಿಬೀಜ	[illegible]	೦	೦	[illegible]
ಕಡಲೆಬೀಜ	೪೦	೦	೦	[illegible]
ಹುರುಳಿ	೨೫	೨	೦	೨೫
ತೊಗರಿ	[illegible]	[illegible]	೦	[illegible]
ಹುಲಸಂದಿ	[illegible]	೦	೦	[illegible]
ಧನಿಯ	೨೪	೨	೦	೪೧
ಮೆಣಸಿನಕಾಯಿ	[illegible]	೦	೦	೧೯
ಹುಣಸೇಹಣ್ಣು	[illegible]	೦	೦	[illegible]
ತೆಂಗಿನಕಾಯಿ ೧೦೦೦	೩೬೮	೦	೦	

ಸಪೋಟಾ ಗಿಡಗಳು ಮಾರಾಟಕ್ಕಿವೆ

ಉತ್ತಮ ಮಾದರಿ ಕಲ್ಕತ್ತದಿಂದ ತರಿಸಿರುವ [illegible] ಮಾಡಿದ ಸಪೋಟ ಗಿಡಗಳು ಮೈಸೂ [illegible] ಹಾರ್ಟಿಕಲ್ಚರಲ್ ಸೊಸೈಟಿ ಮೈಸೂರು ([illegible] ಪಾರ್ಕಿನಲ್ಲಿ) ಗಿಡ ಒಂದಕ್ಕೆ ೧ [illegible] ರೂ ನಂತೆ ದೊರೆಯುತ್ತವೆ

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಮೆಂಬರು ಐ ಎಸ್ ಬಿ ಎಂ ಎ

ರಿಜಿಸ್ಟರ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಖ್ಯಾತಪಡೆದ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬಿಡಿಯ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : THURSDAY 29—11—1956 ಮೈಸೂರು : ಗುರುವಾರ ೨೯—೧೧—೧೯೫೬ [ಸಂಚಿಕೆ : ೧೨೬

ಸಂಸ್ಥಾನದ ಎನ್. ಜಿ. ಓಗಳ ಸಂಬಳದ ತನಿಖೆ ಸಮಿತಿ

ಈಜಿಪ್ಟಿನಿಂದ ಬ್ರಿಟಿಷ್ ಸೈನ್ಯದ ಪೂರ್ಣ ವಾಪಸಾತಿಯಿಲ್ಲ

ಲಂಡನ್ [illegible] ಪ್ರಧಾನಿ ಬಲ್ಗಾನಿನ್ [illegible] ಅಮೆರಿಕದ [illegible] ಪ್ರಶ್ನೆ ಪ್ರತಿನಿಧಿಗೆ [illegible] ಬ್ರಿಟನ್ನಿನ [illegible] ಪ್ರಧಾನಿ ಆರ್. ಎ. ಬಟ್ಲರ್‌ರವರು ಕೇಳಿಯನ್ನು, ಬ್ರಿಟನ್ನು ಈಜಿಪ್ಟಿನಿಂದ ಪೂರ್ಣವಾಗಿ ಸೈನ್ಯಗಳನ್ನು ವಾಪಸು ಕರೆಸುವುದೆಂದು ಭಾವಿಸಬಾರದು ಎಂದು ಹೇಳಿದರು. [illegible] ಸಂಸ್ಥೆಯ ಜತೆ ಸಹಕರಿಸಿ ಕೆಲಸ ಮಾಡಲು ಬ್ರಿಟನ್ನು ಇಚ್ಛಿಸುತ್ತದೆಂದೂ, ಸಂಸ್ಥೆಯು ಕಾಲುವೆಯನ್ನು ಸ್ವಲ್ಪ ಸ್ವಚ್ಛ ಮಾಡಿಕೊಳ್ಳಬೇಕೆಂದೂ, ಸೈನ್ಯ ಪಡೆಗಳ ಸಂಖ್ಯೆಯು ಮುಖ್ಯವಾಗಿರದೆ ಅದರ ಶಕ್ತಿಯ ಮಹತ್ವವಿರುವುದೆಂದೂ, [illegible] ಸಂಸ್ಥೆಯವರು [illegible] ಬರುಗಿಸುವ ಬಗ್ಗೆ ಬ್ರಿಟನ್ನಿಗೆ ಭರವಸೆ [illegible] ವೆಂದೂ ಅವರು ಹೇಳಿದರು.

ತಿರುವನಂತಪುರದ ವಕೀಲರ ಸತ್ಯಾಗ್ರಹ ಮುಕ್ತಾಯ

ತಿರುವನಂತಪುರದಲ್ಲಿ ಹೈಕೋರ್ಟಿನ ಒಂದು ಪೀಠವನ್ನು ತೆರೆಯಬೇಕೆಂದು ಒತ್ತಾಯಪಡಿಸಿ ಅಲ್ಲಿನ ವಕೀಲರು ೨೦ ದಿನಗಳಿಂದ ನಡೆಸುತ್ತಿದ್ದ ಚಳುವಳಿಯನ್ನು ನಿಲ್ಲಿಸಲು ನಿರ್ಧರಿಸಲಾಗಿದೆ. ಇದಕ್ಕೆ ಮುಂಚೆ ಅಲ್ಲಿನ ಗವರ್ನರರು [illegible] ನಿಯೋಗವನ್ನು ಕಳುಹಿಸಿ ಹೈಕೋರ್ಟಿನ [illegible] ನ್ಯಾಯಾಧೀಶರು [illegible]ಯಲ್ಲಿ ಕುಳಿತುಕೊಳ್ಳುವರೆಂದು ಭರವಸೆಯಿತ್ತಿರುವರು.

ಪಾಕಿಸ್ತಾನದ ವೈರಿ-ಭಾರತ

ಪಾಕ್ ಮುಸ್ಲಿಂ ಲೀಗಿನ ಅಧ್ಯಕ್ಷರ ಹೇಳಿಕೆ

ಪಾಕಿಸ್ತಾನಕ್ಕೆ ಭಾರತವೊಂದೇ ಶತ್ರು ದೇಶ, ತಾನು ಮಾಡಿಕೊಳ್ಳುವ ಎಲ್ಲಾ ಒಪ್ಪಂದಗಳೂ ಭಾರತದ ವಿರುದ್ಧವಾಗಿರಬೇಕೆಂದೂ ಪಾಕಿಸ್ತಾನದ ಮುಸ್ಲಿಂ ಲೀಗಿನ [illegible] ಅಬ್ದುರ್ ರಬ್ ನಿಶ್ತಾರರು ತಿಳಿಸಿದ್ದಾರೆ. ಭಾರತದ ವಿರುದ್ಧವಾಗಿ ಪಾಕಿಸ್ತಾನಕ್ಕೆ [illegible] ಮಾಡುವ ಯಾವ ರಾಷ್ಟ್ರದೊಡನೆಯಾದರೂ ಪಾಕಿಸ್ತಾನವು ರಕ್ಷಣೆ ಮತ್ತು [illegible] ಒಪ್ಪಂದ ಮಾಡಿಕೊಳ್ಳಲು ಸಿದ್ಧವಾಗಿರುವುದೆಂದು ಅವರು ಹೇಳಿದ್ದಾರೆ.

ಹಿಂದಿ ಸ್ಪರ್ಧೆ ಬಹುಮಾನ ವಿತರಣೋತ್ಸವ ಸಮಾರಂಭ

ನಗರದ [illegible] ಮಾಧ್ಯಮಿಕ ಶಾಲೆಯಲ್ಲಿ ನಾಳೆ ಸಂಜೆ ೪ ಗಂಟೆಗೆ ಸಾಹಿತ್ಯ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನ ವಿತರಣೆಯನ್ನು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ವಿದ್ಯಾರ್ಥಿಗಳಿಗೆ ಪಾರಿತೋಷಕವನ್ನು ಹಂಚಲಾಗುವುದು.

ದೆಹಲಿಗೆ ಚೀನಾ ಪ್ರಧಾನಿ ಚೌ ಎನ್‌ಲೈಯವರ ಆಗಮನ

ವಿಮಾನ ನಿಲ್ದಾಣದಲ್ಲಿ ಅದ್ಭುತ ಸ್ವಾಗತ

ಚೀನಾದ ಪ್ರಧಾನಿ ಚೌ ಎನ್‌ಲೈಯವರು ಅಲ್ಲಿನ ಉಪ ಪ್ರಧಾನಿ ಮಾರ್ಷಲ್ ಹೋ ಲಂಗ್‌ರೊಡನೆ ನಿನ್ನೆ ದೆಹಲಿಗೆ ಭಾರತ ಸರ್ಕಾರದ ವಿಶೇಷ ವಿಮಾನವೊಂದರಲ್ಲಿ ಆಗಮಿಸಿದಾಗ ಅವರಿಗೆ ಅದ್ಭುತ ಸ್ವಾಗತವನ್ನು ನೀಡಲಾಯಿತು. ಪಂಡಿತ ನೆಹರೂ ಮತ್ತು ರಾಷ್ಟ್ರಪತಿ [illegible] ಉಪ ರಾಷ್ಟ್ರಪತಿ [illegible] ಅವರನ್ನು ಸ್ವಾಗತಿಸಿದರು. ವಿಮಾನ ನಿಲ್ದಾಣದಲ್ಲಿ ನೆರೆದಿದ್ದ ಸಾವಿರ ಜನ ಸಮೂಹವು [illegible] ಚೌ ಮತ್ತು ನೆಹರೂರವರು ಭಾರತ ಚೀನಾ, ವಿಶ್ವಶಾಂತಿ ಮತ್ತು ಅಂತರ ರಾಷ್ಟ್ರೀಯ ಸಹಕಾರದ ಅವಶ್ಯಕತೆಯನ್ನು ಒತ್ತಿ ಹೇಳಿದರು. ಚೌ ಮತ್ತು ಹೋ ಲಂಗ್‌ರವರು ಸೆಲ್ಯೂಟ್ ಮತ್ತು ಗೌರವ ರಕ್ಷೆಯನ್ನು ಸ್ವೀಕರಿಸಿದರು. ಮಕ್ಕಳು ಅವರ ಮೇಲೆ ಗುಲಾಬಿ ಹೂ ದಳಗಳನ್ನು ಚೆಲ್ಲಿದರು. ಭಾರತದಲ್ಲಿ ಚೌರವರು ೧೨ ದಿನಗಳವರೆಗೆ ಇರುವರು.

ಬೆಂಗಳೂರಿಗೆ ಅವರು ೧ನೇ ತಾರೀಖು ಬಂದಾಗ ಅವರಿಗೆ ಪೌರಸಭೆಯವರು ಮಾನಪತ್ರವನ್ನು ಅರ್ಪಿಸುವರು.

ರೈಲ್ವೆ ಬೋರ್ಡಿನ ವಿಸರ್ಜನೆಗೆ ಲೋಕ ಸಭೆಯಲ್ಲಿ ಒತ್ತಾಯ

ಅರಿಯಲೂರು ರೈಲು ದುರಂತದ ಬಗ್ಗೆ ಲೋಕಸಭೆಯಲ್ಲಿ ೨½ ಗಂಟೆ ಕಾಲ ಚರ್ಚೆ ನಡೆದಾಗ, ಪಿ ಎಸ್ ಪಿ ಸದಸ್ಯ ಶ್ರೀ ಎಂ ವಲ್ಲ[illegible]ರವರು ರೈಲ್ವೆ ಬೋರ್ಡನ್ನು ವಿಸರ್ಜಿಸಬೇಕೆಂದು ಕೇಳಿದರು. ಇದರಿಂದ ದೇಶಕ್ಕೆ ಯಾವ ಪ್ರಯೋಜನವೂ ಇಲ್ಲವೆಂದೂ, ಅದರ [illegible] ರೈಲ್ವೆ ಅಧಿಕಾರಿಗಳನ್ನು [illegible] ಮಾಡಬೇಕೆಂದೂ ಅವರು ಒತ್ತಾಯಪಡಿಸಿದರು. ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ಉತ್ತರವಿತ್ತು, [illegible] ದುರಂತಗಳಲ್ಲಿ [illegible] ಎಂದು ಹೇಳಿದರು. [illegible] ಸಭೆಯ ಕಾರ್ಯಕಲಾಪವನ್ನು ಮುಗಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗಾಂಧಿ ಸ್ಮರಣೆ ೭-೧೫ ಬಿ. ವಿ. [illegible] ಭಾಗವತರ್-ಕೀರ್ತನ [illegible] ೭-೩೦ ಹಿಂದಿ ವಾರ್ತೆ ೮-೧೫ [illegible] ಮಧ್ಯಾಹ್ನ ೧೨ ಸಂಗೀತ. ೧೨-೩೦ [illegible] ೧೨-೪೫ [illegible] ೧-೪೫ [illegible] ಗಮಕ-ಸಂಗೀತ. ೨-೧೫ [illegible] ಗಾಗಿ. ಸಂಜೆ ೫-೩೦ [illegible] ಸ್ವಾಮಿ-ಸಂಗೀತ. ೬-೫ [illegible] ೬-೩೦ [illegible] ೭-೩೦ ಪ್ರಶ್ನೋತ್ತರ. ೮-೩೦ ರಾಷ್ಟ್ರೀಯ ಕಾರ್ಯಕ್ರಮ ೯-೧೫ [illegible] ೯-೩೦ ಬುದ್ಧನ ಬಗ್ಗೆ [illegible] ೧೦ [illegible]-ಹಿಂದಿ ವಿಶೇಷ ಕಾರ್ಯಕ್ರಮ.

ನಗರದಲ್ಲಿ ಪ್ರಾದೇಶಿಕ ಕಾಂಗ್ರೆಸ್ಸಿನವರ ಸಮ್ಮೇಳನ

ಬರುವ ತಿಂಗಳು ೧೫ ಮತ್ತು ೧೬ ರಂದು

ಮೈಸೂರು ೨೯

ಬರುವ ಮಹಾ ಚುನಾವಣೆಗಳ ಸಂಬಂಧವಾಗಿ ಮುಂದಿನ ತಿಂಗಳು ೧೫ ಮತ್ತು ೧೬ರಂದು ರಾಜಕೀಯ ಸಮ್ಮೇಳನವೊಂದನ್ನು ಪ್ರಾದೇಶಿಕ ಸಮಿತಿಯು ನಗರದಲ್ಲಿ ಕರೆದಿದೆ. ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜನಾಡಾರರು ಅದರ ಉದ್ಘಾಟನೆಯನ್ನು ನೆರವೇರಿಸುವರು. ಮೈಸೂರು ವಿಭಾಗದ ಸಮಿತಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎ ವೆಂಕಟಪ್ಪನವರು ಆರಂಭ ಭಾಷಣ ಮಾಡುವರು. ಶ್ರೀ ಎಸ್ ನಿಜಲಿಂಗಪ್ಪನವರು ಮುಖ್ಯ ಭಾಷಣ ಮಾಡುವರು. ಪ್ರಾದೇಶಿಕ ಸಮಿತಿ ಸದಸ್ಯರು, ಶಾಸನಸಭಾ ಮತ್ತು ಸ್ಥಳೀಯ ಸಂಸ್ಥೆಗಳ ಕಾಂಗ್ರೆಸ್ ಸದಸ್ಯರು, ಜಿಲ್ಲಾ ಮತ್ತು ತಾಲ್ಲೂಕು ಕಾಂಗ್ರೆಸ್ ಸದಸ್ಯರುಗಳು ಅದರಲ್ಲಿ ಭಾಗವಹಿಸುವರು. ಅವರು ೧ ರೂ. ಶುಲ್ಕವನ್ನು ಕೊಡಬೇಕು. ಸದಸ್ಯರು ಡಿಸೆಂಬರ್ ೧೦ರೊಳಗೆ ನಿರ್ಣಯಗಳನ್ನು ಸೂಚಿಸಬಹುದು.

ಮೈಸೂರು ನಗರ ಮತ್ತು ಜಿಲ್ಲಾ ಕಾಂಗ್ರೆಸ್ ಸಮಿತಿಗಳು ಜಂಟಿಯಾಗಿ ಸ್ವಾಗತ ಸಮಿತಿಯನ್ನು ಸ್ಥಾಪಿಸಿರುವರು.

ಆ ಕಾಲೇಜಿನಲ್ಲಿ ಪ್ರಜಾ ಸಮಾಜವಾದಿ ಮುಖಂಡರ ಭಾಷಣ

ನಗರದ ಶಾರದಾವಿಲಾಸ ಆ ಕಾಲೇಜಿನ ಆವರಣದಲ್ಲಿ ನಾಳೆ ಬೆಳಿಗ್ಗೆ ೧೧½ ಗಂಟೆಗೆ ಪ್ರಜಾ ಸಮಾಜವಾದಿ ಮುಖಂಡರಾದ ಮುಕುಟಬಿಹಾರಿಲಾಲ್, ಫರೀದ್ ಅನ್ಸಾರಿ ಮತ್ತು ಪ್ರೇಂಭಸೀನ್‌ರವರು ಭಾಷಣ ಮಾಡುವರು. ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಅಧ್ಯಕ್ಷ ಶ್ರೀ ಕೆ. ಆರ್ ಕಾರಂತರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಡಿಸೆಂಬರ್ ೩೦ ನೇ ತಾರೀಖು ಚೌಡಯ್ಯನವರಿಗೆ ಸನ್ಮಾನಪತ್ರ

ಸಂ|| ಟಿ ಚೌಡಯ್ಯನವರಿಗೆ ಇದೇ ಡಿಸೆಂಬರ್ ೩೦ನೇ ತಾರೀಖು ಮೈಸೂರು ಪೌರರ ಪರವಾಗಿ ಸನ್ಮಾನಪತ್ರ ಮತ್ತು ನಿಧಿಯನ್ನು ಸಮರ್ಪಿಸಲು ಏರ್ಪಾಡಾಗುತ್ತಿದೆ. ಈ ಸಮಾರಂಭವು [illegible] ನಡೆಯುವುದೆಂದು [illegible] ಪತ್ರಿಕೆಯಲ್ಲಿ ತಪ್ಪಾಗಿ ಬಿದ್ದಿತ್ತು. ಈ ಸಂಬಂಧವಾಗಿ ನಾಳೆ ಸಂಜೆ ೭ ಗಂಟೆಗೆ ಮೈಸೂರು ಹಳ್ಳದಕೇರಿಯಲ್ಲಿರುವ ಎಕ್ಸೈಸ್ ಕಂಟ್ರಾಕ್ಟರ್ ಶ್ರೀ ಎಂ ವಿ ನಾಗಪ್ಪನವರ ಮನೆಯಲ್ಲಿ ಪೂರ್ವಭಾವಿ ಸಭೆ ನಡೆಯುತ್ತದೆ.

ಶಾಸ್ತ್ರಿ ಕಥನ

ನಗರದ [illegible] ಬಳಿ ಇರುವ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ನಾಳೆ ಬೆಳಿಗ್ಗೆ ೧೦ ಗಂಟೆಗೆ ಶಾಸ್ತ್ರಿ ನಾರಾಯಣಸ್ವಾಮಿ ಪೂಜಾ ಹವನವೂ ಮತ್ತು ೧½ ಗಂಟೆಗೆ ಸಂತರ್ಪಣೆಯೂ ನಡೆಯುವುದರಿಂದ ಆಯುರ್ವೈದ್ಯ ಮಹಾಜನರು ಬರುವಂತೆ ನಗರದ ಆಯುರ್ವೈದ್ಯ ಮಂಡಲಿಯವರು ಕೋರಿದ್ದಾರೆ.

ರಾಜಧನದ ರದ್ದಿಗಾಗಿ ಪ್ರಜಾ ಸಮಾಜವಾದಿಗಳ ಕರೆ

ಬೆಂಗಳೂರು ೨೯

ಇಲ್ಲಿ ಸೇರಿದ್ದ ಭಾರತದ ಪ್ರಜಾ ಸಮಾಜವಾದಿಗಳ ಸಮ್ಮೇಳನವು ತಮ್ಮ ಪಕ್ಷದ ನೀತಿಯ ಬಗ್ಗೆ ನಿರ್ಣಯವನ್ನು ಅಂಗೀಕರಿಸಿತು. ಮಾಜಿ ಅರಸರುಗಳಿಗೆ ಸಲ್ಲುತ್ತಿರುವ ರಾಜಧನವನ್ನು ರದ್ದು ಮಾಡುವಂತೆ ಗುಜರಾತಿನ ಸರ್ದಾರ್ ಮೆಹತಾರವರು ಮಂಡಿಸಿದ ತಿದ್ದುಪಡಿಯು ಅಂಗೀಕಾರವಾಯಿತು. ರಾಜರುಗಳ ಪದವಿಯ ಮೇಲೆ [illegible], ಸರ್ಕಾರ ಮುಂದುವರಿಯುವುದನ್ನು ತಪ್ಪಿಸಬೇಕೆಂದೂ ನಿರ್ಧರಿಸಲಾಯಿತು.

ಎನ್. ಜಿ. ಓಗಳ ಸಂಬಳದ ಬಗ್ಗೆ ತನಿಖೆ ಸಮಿತಿ

ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ಚಿತ್ರದುರ್ಗದಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ಸರ್ಕಾರಿ ನೌಕರರ ಸಂಬಳ ಮತ್ತು ತುಟ್ಟಿಭತ್ಯ ಕೊಡುವ ಬಗ್ಗೆ ಪರಿಶೀಲನೆ ನಡೆಸಲು ಸಮಿತಿಯೊಂದನ್ನು ರಚಿಸಲಾಗುವುದೆಂದು ತಿಳಿಸುತ್ತಾರೆ. ಸಂಸ್ಥಾನದಲ್ಲಿರುವ ಎಲ್ಲಾ ಗೋಶಾಲೆಗಳನ್ನೂ ಸರ್ಕಾರದ ಆಡಳಿತಕ್ಕೆ ವರ್ಗಾಯಿಸುವ ಬಗ್ಗೆ ಶಾಸನ ಮಾಡಲಾಗುವುದೆಂದೂ ಅವರು ಹೇಳಿರುವರು.

ಅಮೆರಿಕದವರಿಂದ ಅಣಕು ಅಣು ಬಾಂಬು ಧಾಳಿ

ಕಳೆದ ವಾರಾಂತ್ಯದಲ್ಲಿ ಉತ್ತರ ಧ್ರುವದ ಪ್ರದೇಶ ೧೭ ಸಾವಿರ ಮೈಲಿ ದೂರದವರೆಗೂ [illegible] ಅಮೆರಿಕದ [illegible] ಜೆಟ್ ಬಾಂಬರ್ ವಿಮಾನಗಳು ಹಾರಾಡುತ್ತಾ ಅಣಕು ಅಣು ಬಾಂಬು ಧಾಳಿ ನಡೆಸಿದುವು.

ಹೋಟೇಲು ಮಾಲೀಕರಿಗೆ ದಂಡ

[illegible] ಹೋಟೇಲಿನ ಕಾರ್ಮಿಕರ ರಜಾ ದಿನಗಳ ರಿಜಿಸ್ಟರ್ ಮತ್ತು ವೇತನದೊಡನೆ ಸಾಪ್ತಾಹಿಕ ರಜಾ ದಿನದ ರಿಜಿಸ್ಟರನ್ನು ಇಡದೆ ಮತ್ತು ಕೆಲಸದ ವೇಳೆಯ ಪಟ್ಟಿಯನ್ನು ಹಾಕದಿದ್ದ ಕಾರಣಕ್ಕಾಗಿ ಹೋಟೇಲಿನ ಮಾಲೀಕರಾದ ಶ್ರೀ ಸುಬ್ಬರಾಯರಿಗೆ ನಗರದ ದ್ವಿತೀಯ ನ್ಯಾಯಾಧೀಶರು ೩೦ ರೂ ದಂಡ ವಿಧಿಸಿದ್ದಾರೆ.

ಧನ್ವಂತರಿ ಜಯಂತಿ

ನಂಜನಗೂಡು ೨೯

ಭಿಷಗ್ರತ್ನ ಶ್ರೀ ಬಿ ವಿ. ಪಂಡಿತರು ತಮ್ಮ ಧನ್ವಂತರಿ ನಿವಾಸದಲ್ಲಿ ನಾಳೆ ಸಂಜೆ ೫ ಗಂಟೆಗೆ ಎಂದಿನಂತೆ ಧನ್ವಂತರಿ ಜಯಂತಿ ಮಹೋತ್ಸವವನ್ನು ನೆರವೇರಿಸಲು ಏರ್ಪಡಿಸಿದ್ದಾರೆ. '[illegible]' ಎಂಬ ವಿಷಯವಾಗಿ ಮಹಾರಾಜಾ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎಸ್ ರಾಮಚಂದ್ರರಾಯರಿಂದ, ಭಾಷಣವೂ ಮತ್ತು ಸಂ|| ಟಿ ಚೌಡಯ್ಯನವರ ಪಿಟೀಲು ಮತ್ತು ಸಂ|| ಟಿ. ಎಂ ಪುಟ್ಟಸ್ವಾಮಯ್ಯನವರ ಮೃದಂಗ ಪಕ್ಕವಾದ್ಯದೊಡನೆ [illegible] ಘಟದೊಡನೆ ಗಾಯಕ [illegible] ರವರ ಗಾಯನವೂ ಏರ್ಪಾಡಾಗಿವೆ.

ಮದ್ರಾಸಿನಲ್ಲಿ ಮೈಸೂರು ವೈದ್ಯರಿಗೆ ಶಿಕ್ಷಣ

ಬೆಂಗಳೂರು ೨೮

ಮದ್ರಾಸು ಮತ್ತು ಮೈಸೂರು ವೈದ್ಯ ಕಾಲೇಜು ಅಧಿಕಾರಿಗಳ ಸಭೆಯು ನೆನ್ನೆ ಆರೋಗ್ಯ ಮಂತ್ರಿ ಶ್ರೀ ಎ ಬಿ ಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದು ಮೈಸೂರು ವೈದ್ಯರಿಗೆ ಮದ್ರಾಸಿನಲ್ಲಿ ಅಲ್ಪಾವಧಿಯ ಶಿಕ್ಷಣವನ್ನೇರ್ಪಡಿಸುವ ವಿಷಯವನ್ನು ನಿರ್ಧರಿಸಲಾಯಿತು. [illegible] ರೇಡಿಯಾಲಜಿ, ಪ್ಯಾಥಾಲಜಿ, ರಕ್ತದ ಬ್ಯಾಂಕು ಮುಂತಾದ ವಿಷಯಗಳ ಬಗ್ಗೆ ಮೈಸೂರಿನ ವೈದ್ಯರಿಗೆ ಮದ್ರಾಸಿನಲ್ಲಿ ೩ ತಿಂಗಳ ಕಾಲ ಶಿಕ್ಷಣವೀಯಲಾಗುವುದು. ವಿವಿಧ ವಿಷಯಗಳಲ್ಲಿ ತರಪೇತು ಪಡೆಯಲು ಒಂದು ಸಲಕ್ಕೆ ೬ ಮಂದಿ ವೈದ್ಯರನ್ನು ಕಳುಹಲಾಗುವುದು. ಈ ಯೋಜನೆಯನ್ನು ಆರೋಗ್ಯ ಮಂತ್ರಿಗಳು ತಯಾರಿಸಿರುತ್ತಾರೆ. ಮೈಸೂರು ಕಾಲೇಜಾಧಿಕಾರಿಗಳು ವೈದ್ಯರುಗಳನ್ನು ಚುನಾಯಿಸುವರು

ಭದ್ರಾವತಿ ಕಾರ್ಖಾನೆ ಕಾರ್ಮಿಕರಿಗೆ ೩ ತಿಂಗಳ ಬೋನಸ್ಸು

ಭದ್ರಾವತಿ ಕಬ್ಬಿಣದ ಕಾರ್ಖಾನೆ ಕಾರ್ಮಿಕರಿಗೆ ೧೯೫೫—೫೬ನೇ ಸಾಲಿಗೆ ಸಂಬಂಧಿಸಿದಂತೆ ೩ ತಿಂಗಳ ಬೋನಸ್ಸನ್ನು ಕೊಡುವ ಬಗ್ಗೆ ಆಡಳಿತ ಮತ್ತು ಕಾರ್ಮಿಕ ವರ್ಗದವರಿಗೆ ಒಪ್ಪಂದವಾಗಿದೆ. ಇದರ ಪ್ರಕಾರ ೬ ಲಕ್ಷ ರೂ ಅನ್ನು ಹಂಚಲಾಗುವುದು. ಒಪ್ಪಂದದ ಪ್ರಕಾರ ವೇತನ, ಬಡ್ತಿ ಮುಂತಾದುವನ್ನು ಕೊಡಲು ಆಡಳಿತದವರು ವರ್ಷಕ್ಕೆ ೧೦ ಲಕ್ಷ ರೂ ಹೆಚ್ಚಾಗಿ ಒದಗಿಸಬೇಕಾಗುವುದು

ವಿದ್ಯಾರ್ಥಿನಿಲಯ ನಿವಾಸಿಗಳ ಪ್ರದರ್ಶನ

ಮದ್ರಾಸಿನ ತಿರುವಲ್ಲಿಕ್ಕೇಣಿಯ ವಿಕ್ಟೋರಿಯಾ ವಿದ್ಯಾರ್ಥಿ ನಿಲಯದಲ್ಲಿರುವ ೩೦೦ ವಿದ್ಯಾರ್ಥಿಗಳು ನೆನ್ನೆ ರಾತ್ರಿ ನಿಲಯದ ಆವರಣದಲ್ಲಿ ಪ್ರದರ್ಶನ ನಡೆಸಿ, ನಿತ್ಯವೂ ರಾತ್ರಿ ೯ ಗಂಟೆಯನಂತರ ಹಾಜರಿ ಪದ್ಧತಿಯನ್ನು ವಾರ್ಡನ್ ಜಾರಿಗೆ ತಂದುದನ್ನು ಪ್ರತಿಭಟಿಸಿದರು. ಪೋಲೀಸರು ಬಂದು ಅವರುಗಳನ್ನು ಕೊಠಡಿಗಳಿಗೆ ಕಳುಹಿಸಿದರು

ಮಂಡ್ಯದ ಸಕ್ಕರೆ ಕಾರ್ಖಾನೆಯಲ್ಲಿ ೧೦೦ ಕಾರ್ಮಿಕರ ವಜಾ

ಮಂಡ್ಯದ ಸಕ್ಕರೆ ಕಾರ್ಖಾನೆಯವರು ೧೦೦ ಜನ ಕಾರ್ಮಿಕರನ್ನು ಅವರು ವಯಸ್ಸು ಮೀರಿದರೆಂಬ ಕಾರಣಕ್ಕಾಗಿ ಕೆಲಸದಿಂದ ನಿವೃತ್ತಿ ಮಾಡಿರುತ್ತಾರೆ. ಇದನ್ನು ಕಾರ್ಮಿಕ ಸಂಘದವರು ಪ್ರತಿಭಟಿಸಿ ಈ ಬಗ್ಗೆ ಆಡಳಿತದವರಿಗೂ ಕಾರ್ಮಿಕರಿಗೂ ಒಪ್ಪಂದವಾಗಿರಲಿಲ್ಲವೆಂದೂ, [illegible] ವಜಾವು ಅಕ್ರಮವೆಂದೂ ಸೂಚಿಸಿದ್ದಾರೆ. ಕೈಗಾರಿಕಾ ವಿವಾದ ಶಾಸನವನ್ನು ಮುರಿದುದಕ್ಕಾಗಿ ಆಡಳಿತದವರ ಮೇಲೆ ಮೊಕದ್ದಮೆ ಹೂಡುವಂತೆ ಸರ್ಕಾರಕ್ಕೆ ಒತ್ತಾಯಪಡಿಸಲಾಯಿತು. ವಜಾ ಆದವರನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳುವಂತೆ ಒತ್ತಾಯಪಡಿಸಲಾಯಿತು. ಇವನ್ನೂ ಮತ್ತು ಕೆಲಸಗಾರರ ಇನ್ನೂ ಹಲವು ಬೇಡಿಕೆಗಳನ್ನೂ ಆಡಳಿತ ವರ್ಗದವರು ಸಲ್ಲಿಸದಿದ್ದರೆ ಮುಷ್ಕರದ ಬ್ಯಾಲಟ್ ತೆಗೆದುಕೊಳ್ಳುವಂತೆ ಸೂಚಿಸಲಾಯಿತು.

ದೇವಣ್ಣನವರ ಉಪವಾಸ ಮುಕ್ತಾಯ

ನಂಜನಗೂಡಿನ ಕಪಿಲಾ [illegible] ಕಳೆದ ಒಂದು ವಾರದಿಂದಲೂ ಉಪವಾಸ ಕೈಕೊಂಡಿದ್ದ ಕಾರ್ಮಿಕರ ನಾಯಕ ಶ್ರೀ ದೇವಣ್ಣನವರು ನೆನ್ನೆ ಮಧ್ಯಾಹ್ನ ೧ ಗಂಟೆಗೆ ಉಪವಾಸ ಮುಕ್ತಾಯ ಮಾಡಿದರು

Edited, Printed and Published by
A. K. Nagarajan at Sadhvi Press
D. Subbiah Road, Mysore

ವೈದ್ಯಕೀಯ ಸಂಶೋಧನೆಗಾಗಿ ೭೮ ಲಕ್ಷ ರೂ.

ಮೈಸೂರು ೨೮

ಇಲ್ಲಿ ಕಳೆದ ಎರಡು ವಾರಗಳಿಂದಲೂ ನಡೆಯುತ್ತಿದ್ದ ಭಾರತೀಯ ವೈದ್ಯ ಸಂಶೋಧನಾ ಮಂಡಲಿಯ ವೈಜ್ಞಾನಿಕ ಸಲಹಾ ಸಮಿತಿಯು ನೆನ್ನೆ [illegible] ಯೋಜನೆಗಳನ್ನು [illegible] ಶಿಫಾರಸು ಮಾಡಿ ಅವಕ್ಕಾಗಿ ೭೮ ಲಕ್ಷ ರೂ ಅನ್ನು ಮಂಜೂರು ಮಾಡಿತು

ಇನಾಂದಾರರುಗಳ ಸಭೆ

ನಗರದ ವೈಸರಾಯ್ ರಸ್ತೆಯಲ್ಲಿರುವ ಶ್ರೀ ಗಂಧನಹಳ್ಳಿ ಜಹಗೀರುದಾರ್ ಶ್ರೀ ಕೃಷ್ಣರಾಯರ ಗೃಹದಲ್ಲಿ ಬರುವ ತಿಂಗಳು ೩ನೇ ತಾರೀಕು ಸಂಜೆ ೫ ಗಂಟೆಗೆ ಇನಾಂದಾರರುಗಳ ಸಭೆ ನಡೆಯುವುದು. ೯ ನೇ ತಾರೀಕು ಸಂಸ್ಥಾನದ ಇನಾಮುದಾರರ ವಾರ್ಷಿಕ ಸಭೆಯು ಬೆಂಗಳೂರಿನಲ್ಲಿ ಸೇರುವುದೆಂದೂ, ಅದರಲ್ಲಿ ಮಂಡಿಸಬೇಕಾದ ವಿಷಯಗಳು ಇದ್ದರೆ ೩ ನೇ ತಾರೀಕಿನ ಸಭೆಯ ಮುಂದೆ ಇನಾಂದಾರರು ತರಬೇಕೆಂದೂ ಶ್ರೀ ಪಿ ವೆಂಕಟಸುಬ್ಬಯ್ಯನವರು ಕೋರಿರುತ್ತಾರೆ

ಬ್ಯಾಸ್ಕೆಟ್ ಬಾಲ್ ಪಂದ್ಯ

ಮೈಸೂರು ಸ್ಪೋರ್ಟ್ಸ್ ಬ್ಯಾಸ್ಕೆಟ್ ಬಾಲ್ ಪಂದ್ಯವನ್ನು ನೆನ್ನೆ [illegible] ಆರಂಭಿಸಿದರು. ಮೊದಲನೇ ಕ್ರೀಡೆಯಲ್ಲಿ ನ್ಯಾಷನಲ್ ಇಂಜನಿಯರಿಂಗ್ ಇನ್ಸ್ಟಿಟ್ಯೂಟಿನವರು ಮೈಸೂರು ಸ್ಪೋರ್ಟ್ಸ್ ಟೀಮಿನವರನ್ನು ೪೦-೧೭ ಪಾಯಿಂಟುಗಳಿಂದ ಸೋಲಿಸಿದರು

"ಹರಿಜನರ ಸೌಲಭ್ಯಗಳಿಗೆ ಲೋಪ" ಲೇಖನಕ್ಕೆ ಉತ್ತರ

ಕಳೆದ ೨೩ನೇ ತಾರೀಕು ಸಾಧ್ವಿ ಪತ್ರಿಕೆಯಲ್ಲಿ ನಂಜನಗೂಡು ತಾಲ್ಲೂಕು ನೇರಳೆ ಗ್ರಾಮಕ್ಕೆ ಸಂಬಂಧಿಸಿದಂತೆ ಮೇಲ್ಕಂಡ ಶಿರೋನಾಮೆಯಲ್ಲಿ ಬಂದ ಲೇಖನದ ಸಂಬಂಧವಾಗಿ ಗ್ರಾಮದ ಪಂಚಾಯಿತಿಯ ಹಲವಾರು ಹರಿಜನ ಸದಸ್ಯರು ಪತ್ರ ಬರೆದು ಸರ್ಕಾರದವರು ಕೊಟ್ಟಿರುವ ಗ್ರಾಂಟು ಸರಿಯಾಗಿ ಉಪಯೋಗವಾಗುತ್ತಿರುವುದೆಂದೂ, ರೇಡಿಯೊವು ಸಾರ್ವಜನಿಕರಿಗಾಗಿ ಉಪಯೋಗಿಸಲ್ಪಡುತ್ತಿದೆಯೆಂದೂ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ಪರಿಶೀಲನೆ ನಡೆಸಿಯವರೆಂದೂ ತಿಳಿಸಿರುತ್ತಾರೆ

ಇಂದೂರು ಕಾಂಗ್ರೆಸ್ಸಿಗೆ ಹುತಾತ್ಮರ ಜ್ಯೋತಿ

ಒಲಂಪಿಕ್ ಕ್ರೀಡೆಗಳ [illegible] ಜ್ಯೋತಿಯೊಂದನ್ನು ಒಯ್ಯಲಾಗುವಂತೆ ಈ ಬಾರಿ ಸೇರುವ ಇಂದೂರು ಕಾಂಗ್ರೆಸ್ ಅಧಿವೇಶನಕ್ಕೆ ಗ್ವಾಲಿಯರಿನಿಂದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಹುತಾತ್ಮರ ಜ್ಞಾಪಕಾರ್ಥವಾಗಿ ಜ್ಯೋತಿಯೊಂದನ್ನು ತೆಗೆದುಕೊಂಡುಹೋಗಲಾಗುವುದು. ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ಶತಮಾನೋತ್ಸವ ವರ್ಷದ ಮೊದಲನೇ ದಿನ ಅದು ಇಂದೂರನ್ನು ತಲುಪುವುದು

○ ಅರಿಜುಲಾದ ಟೈಟ ಪ್ರಾಂತದಲ್ಲಿ ನೆನ್ನೆ ಇನ್ನೂ ಮೂರು ಶವಗಳು ದೊರಕುವು. ಇದುವರೆಗೆ ಒಟ್ಟು ೧೫೧ ಮಂದಿ ಮಡಿದಿದ್ದಾರೆ

SARADA VILAS HIGH SCHOOL,
MYSORE

Wanted a part time typewriting instructor for the Commercial Institute attached to the School Appointment temporary Persons with experience preferred

K V NARAYAN
Head-Master

ಸಂಸ್ಥಾನಗಳಲ್ಲಿ ೧೧ ರಾಜಕೀಯ ಪಕ್ಷಗಳಿಗೆ ಮನ್ನಣೆ

ಮುಖ್ಯ ಚುನಾವಣಾಕಮಿಷನರ್ ರಾಜಕೀಯ ಪಕ್ಷಗಳ ಚಿಹ್ನೆಗಳನ್ನು ಗೊತ್ತುಪಡಿಸುವ ಸಂದರ್ಭದಲ್ಲಿ ಚುನಾವಣಾ ಕಮಿಷನ್ನಿನವರು ೧೧ ರಾಜಕೀಯ ಪಕ್ಷಗಳಿಗೆ ಮನ್ನಣೆಯೀಯಲು ನಿರ್ಧರಿಸಿದ್ದಾರೆ. ಇನ್ನೂ ನಾಲ್ಕು ಪಕ್ಷಗಳ ಮನ್ನಣೆ ಪ್ರಶ್ನೆಯು ಪರಿಶೀಲನೆಯಲ್ಲಿದೆ. ಇದಲ್ಲದೆ ಅಖಿಲ ಭಾರತದ ಮಟ್ಟದಲ್ಲಿ ಕಾಂಗ್ರೆಸ್ ಪ್ರಜಾ ಸಮಾಜವಾದಿ, ಕಮ್ಯೂನಿಸ್ಟ್ ಮತ್ತು ಜನಸಂಘಗಳೂ ಇರುತ್ತವೆ. ಪ್ರಾಂತೀಯ ಮಟ್ಟದಲ್ಲಿ ಆಂಧ್ರ, ಬೊಂಬಾಯಿ ಮತ್ತು ಮೈಸೂರುಗಳಿಗೆ ಅನ್ವಯಿಸುವ ರೈತ ಮತ್ತು ಕಾರ್ಮಿಕ ಪಕ್ಷವೊಂದು ಮನ್ನಣೆ ಪಡೆದಿದೆ. ಅದರ ಚಿಹ್ನೆ ಸೈಕಲ್ಲು

ಅಸ್ಸಾಮಿನಲ್ಲಿ ಮತ್ತೊಂದು ಎಣ್ಣೆ ಗಣಿ

ಅಸ್ಸಾಮಿನ ನಹೋರ್ಕಟಿಯಾದಲ್ಲಿ ದೊರೆಯುತ್ತಿರುವುದರ ಜೊತೆಗೆ ಮೋರಾನ್ ಎಂಬಲ್ಲೂ ಎಣ್ಣೆಯು ಸಿಗುವುದೆಂದು ಗೊತ್ತಾಗಿದೆ. ೧೩,೦೫೯ ಅಡಿ ಕೆಳಗೆ ಎಣ್ಣೆಯು ಪತ್ತೆಯಾಗಿದೆ. ಆಗ್ನೇಯ ಏಷ್ಯಾದಲ್ಲಿ ಇದು ಅತ್ಯಂತ ಆಳವಾದ ಎಣ್ಣೆ ಬಾವಿ. ಎರಡು ಪ್ರದೇಶಗಳಿಂದ ಭಾರತಕ್ಕೆ ಬೇಕಾಗುವ ಎಣ್ಣೆಯಲ್ಲಿ ಶೇಕಡ ೫೦ರಷ್ಟು ಭಾಗವು ಅಸ್ಸಾಮಿನಲ್ಲೇ ದೊರೆಯುವುದೆಂದು ಭಾವಿಸಲಾಗಿದೆ.

ಹೈಕೋರ್ಟು ಬೆಂಚುಗಳಿಗೆ ನ್ಯಾಯಮಂಡಲದ ವಿರೋಧ

ಒಂದು ಸಂಸ್ಥಾನದ ಬೇರೆಬೇರೆ ಕಡೆಗಳಲ್ಲಿ ಹೈಕೋರ್ಟುಗಳು ಕೆಲಸ ನಡೆಸಬಾರದೆಂದು ನ್ಯಾಯಮಂಡಲವು ಭಾರತ ಸರ್ಕಾರಕ್ಕೆ ಶಿಫಾರಸು ಮಾಡಿದೆ. ಶಾಖೆಗಳಾಗಿ ಹೈಕೋರ್ಟು ಕೂಡುವುದರಿಂದ ನ್ಯಾಯ ನಿರ್ವಹಣೆಗೆ ಧಕ್ಕೆ ಬರುವುದೆಂದು ಅಭಿಪ್ರಾಯಪಡಲಾಗಿದೆ

ರಾಷ್ಟ್ರಾಧ್ಯಕ್ಷರಿಗೆ ಬುದ್ಧದೇವನ ಸುವರ್ಣ ಪ್ರತಿಮೆ

ಬರ್ಮಾದ ಮಾಜಿ ಪ್ರಧಾನಿ ಊ ನುರವರು ಕಳೆದ ಭಾನುವಾರ ದೆಹಲಿಯಲ್ಲಿ ರಾಷ್ಟ್ರಾಧ್ಯಕ್ಷರಿಗೆ ಬುದ್ಧನ ಚಿನ್ನದ ಪ್ರತಿಮೆಯೊಂದನ್ನು ಅರ್ಪಿಸಿದರು. ಬುದ್ಧನ ಬಗ್ಗೆ ದೆಹಲಿಯಲ್ಲಿ ಗೋಷ್ಠಿಯೊಂದು ನಡೆದು ರಾಷ್ಟ್ರಾಧ್ಯಕ್ಷರು ಅದರಲ್ಲಿ ಭಾಗವಹಿಸಿದ್ದರು

ಗಾಣದ ಎಣ್ಣೆ ತಯಾರಕರ ಸಮ್ಮೇಳನ

ಬರುವ ತಿಂಗಳು ೩ ನೇ ತಾರೀಕು ಬೆಳಿಗ್ಗೆ ೧೧ ಗಂಟೆಗೆ ಶ್ರೀ ಬಸಮ್ಮಯ್ಯನವರ ಪ್ರೌಢ ಶಾಲೆಯಲ್ಲಿ ಅಖಿಲ ಮೈಸೂರು ಗಾಣದ ಎಣ್ಣೆ ಕೈಗಾರಿಕೆಗಾರರ ಸಮ್ಮೇಳನವು ನಡೆಯುವುದು. ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಸ್ ರುದ್ರಪ್ಪನವರು ಅಧ್ಯಕ್ಷತೆ ವಹಿಸುವರು. ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಆರಂಭೋತ್ಸವವನ್ನು ನೆರವೇರಿಸುವರು

ಮಂತ್ರಿಯ ಆಸ್ತಿ ಜಪ್ತಿ

ಲಾಹೋರಿನ ಸಿವಿಲ್ ನ್ಯಾಯಾಧೀಶ ಒಬೇದುಲ್ಲಾ ಖಾನರು ಪಶ್ಚಿಮ ಪಾಕಿಸ್ತಾನದ ಅಬ್ಕಾರಿ ಮಂತ್ರಿ ಅಬ್ದುಲ್ ಗನಿ ಗುಮಾನ್ ರವರ ಆಸ್ತಿಯನ್ನು ಜಪ್ತಿ ಮಾಡಲು ವಾರಂಟನ್ನು ಹೊರಡಿಸಿದ್ದಾರೆ. ಮಂತ್ರಿಗಳ ಆಸ್ತಿ ಪಟ್ಟಿಯನ್ನು ಸಿದ್ಧಪಡಿಸಲೂ ನ್ಯಾಯಾಧೀಶರು ಆಜ್ಞೆ ಮಾಡಿದ್ದಾರೆ. ಒಂದು ವಿದ್ಯಮಾನದಲ್ಲಿ ಮಂತ್ರಿಯು ಒಬ್ಬರಿಗೆ ೧ ಲಕ್ಷ ರೂ ಕೊಡಬೇಕೆಂದು ಅಲ್ಲಿನ ನ್ಯಾಯಾಧೀಶರು ಆಜ್ಞೆ ಮಾಡಿದ್ದರು

ಅಧ್ಯಾತ್ಮ ರಾಮ ಸಪ್ತಾಹ

[illegible] ಸಂಗ್ರಹ ಪತ್ರಿಕೆ ಮತ್ತು [illegible] ಸ್ವರಾಜ್ಯ ಸಂಘದ ಸಂಬಂಧವಾದ ಅಧ್ಯಾತ್ಮ ರಾಮ ಸಪ್ತಾಹವನ್ನು ಮೈಸೂರು [illegible] ಗಲ್ಲಿಯಲ್ಲಿರುವ [illegible] ರಾಮಮಂದಿರದಲ್ಲಿ ಏರ್ಪಡಿಸಲಾಗಿದೆ. ಕಳೆದ ೨೫ನೇ ತಾರೀಕಿನಿಂದಲೂ ಈ ಸಂಬಂಧವಾದ ಕಾರ್ಯಕ್ರಮಗಳು ನಡೆಯುತ್ತಿವೆ. [illegible] ರಾಮ ಪಟ್ಟಾಭಿಷೇಕವೂ ಮತ್ತು ೨ನೇ ತಾರೀಕು [illegible] ನಡೆಯುವುದು. ಮಹಾಜನರು ಈ ಉತ್ಸವದಲ್ಲಿ ಭಾಗಿಗಳಾಗಬೇಕೆಂದು ಕೋರಲಾಗಿದೆ

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ಅಧಿಕಾರಿಗಳು

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಮೈಸೂರು ನಗರ ಶಾಖಾ ಸದಸ್ಯರ ಸಭೆಯು ಕಳೆದ ಭಾನುವಾರ ಶ್ರೀ ಪಿ ರಾಮಣ್ಣನವರ ಅಧ್ಯಕ್ಷತೆಯಲ್ಲಿ ನಡೆದು, ಪ್ರಸಕ್ತ ಸಾಲಿಗೆ ಶ್ರೀ ಪಿ ರಾಮಣ್ಣನವರನ್ನು ಅಧ್ಯಕ್ಷರಾಗಿಯೂ, ಶ್ರೀ ವಿ ಎಸ್ ಕುಮಾರ್ ರವರನ್ನು ಉಪಾಧ್ಯಕ್ಷರಾಗಿಯೂ, ಶ್ರೀ ಕೆ ವಿ ಅರ್ನಾಲ್ಡ್ ರವರನ್ನು ಕೋಶಾಧಿಕಾರಿಯಾಗಿಯೂ ಮತ್ತು ಶ್ರೀ ಕೆ ಆರ್ ತಮ್ಮಯ್ಯನವರನ್ನು ಕಾರ್ಯದರ್ಶಿ ಮತ್ತು ಶ್ರೀ ಜಿ ಗಂಗಾಧರರವರನ್ನು ಸಹಕಾರ್ಯದರ್ಶಿಯಾಗಿಯೂ ಚುನಾಯಿಸಲಾಯಿತು

GLOBE TUTORIAL COLLEGE
(Sadvidya Pathashala, Mysore)
Excellent Coaching for
Inter, P. C. M., Kan., Eng.
Classes between 7-30 &
10 30 A.M

ಲಕ್ಷ್ಮಿ ★ 30-11-56 ನೇ
ಶುಕ್ರವಾರದಿಂದ
ಪ್ರತಿ ದಿನ 3 ಆಟಗಳು
[illegible] ತೆಲುಗು ಚಿತ್ರ
ದೇವದಾಸು
[illegible]
[illegible]
ಕೊನೆಯ ದಿನ "[illegible]"

THE NATIONAL INSTITUTE OF COMMERCE,
1677 Old Mysore Bank Road Mysore
FRESH ADMISSIONS for TYPEWRITING and SHORT HAND are now being received during the mornings and evenings The Institute is well equipped and is centrally located Apply sharp

ಕಡೇ ವಾರ
ಪ್ರಭು ದೇವಾ ಥಿಯೇಟರ್
(ಪದ್ಮಾ ಟಾಕೀಸ್)
29—11—56ನೇ : ಗುರುವಾರದಿಂದ : ಅಮೋಘ ೩ ನೇ ವಾರ
[illegible]
ಕನ್ನಡ ಚಿತ್ರ ★ ಓಹಿಲೇಶ್ವರ
[ಕರ್ನಾಟಕ ಫಿಲಂಸ್ ರಿಲೀಸ್

ರಣಜಿತ್ ★ 30 11 56ರಿಂದ
ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
[illegible]
★ ಚೋರಿ ಚೋರಿ ★
[illegible]

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಬ್ರಾಂಕಾಲ್
ಕ್ಯಾಲ್ಸಿಯಂ ಮತ್ತು ಗ್ಲೂಕೋಸು
ಮಿಶ್ರಣದ ಇಂಜೆಕ್ಷನ್
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1 [illegible]
ಶ್ರೀರಾಮಪುರಂ ರೋಡ್,
ಬೆಂಗಳೂರು -2

: ೧೫] SADHVI : FRIDAY 30-11-1956 ಮೈಸೂರು : ಶುಕ್ರವಾರ ೩೦-೧೧-೧೯೫೬ [ಸಂಚಿಕೆ : ೨೩೦

ಕೋಲಾರದ ಚಿನ್ನದ ಗಣಿಗಳು ಸರ್ಕಾರದ ವಶ -

...ಲಾರದ ಚಿನ್ನದ ಗಣಿಗಳು ಸರ್ಕಾರದ ವಶ

...ಮಂತ್ರಿಯವರಿಂದ ಕಂಪೆನಿಯವರಿಗೆ ೨೬ ಕೋಟಿ ರೂ. ಚೆಕ್ಕಿನ ಪ್ರದಾನ

ಕೋಲಾರ ೩೦

...ವರ್ಷಗಳಿಂದ ಜಾನ್ ಟೇಲರ್ ಕಂ...ಬ್ರಿಟಿಷರ ಸಂಸ್ಥೆಯೊಂದು ನಿರ್ವಹಿಸುತ್ತಿದ್ದ ಕೋಲಾರದ ಚಿನ್ನದ ಗಣಿಗಳನ್ನು ನಿನ್ನೆ ಸರ್ಕಾರದವರು ತಮ್ಮ ವಶಕ್ಕೆ ...ಕೊಂಡರು. ಗಣಿ ಪ್ರದೇಶದಲ್ಲಿ ಬೆಳಿಗ್ಗೆ ...ಮುಖ್ಯಮಂತ್ರಿ ಶ್ರೀ ಎಸ್. ನಿಜಲಿಂಗಪ್ಪನವರು ...ಬಂಧದಲ್ಲಿ ಸಮಾರಂಭದ ಅಧ್ಯಕ್ಷತೆ ವ...ಪೆನಿ ಮ್ಯಾನೇಜಿಂಗ್ ಡೈರೆಕ್ಟರ್ ಜಾನ್...ಗೆ ೧೨ ಕೋಟಿ ರೂ. ಗಳ ಚೆಕ್ಕ...ನ್ನಿತ್ತರು. ಕಂಪೆನಿಯ ರಾಷ್ಟ್ರೀಕರಣ ...೨೬ ಕೋಟಿ ರೂ. ಪರಿಹಾರ ದ್ರವ್ಯ ...ಕೆಂದು ಒಪ್ಪಂದವಾಗಿದೆ. ಬಾಕಿ ಹಣ ಮುಂದೆ ಪಾವತಿ ಮಾಡಲಾಗುವುದು

...ಸರ್ಕಾರವೊಂದನ್ನು ಬಿಟ್ಟರೆ ಜಗತ್ತಿನಲ್ಲಿ ಬೇರಾವ ಸರ್ಕಾರವೂ ಚಿನ್ನದ ಕೆಲಸವನ್ನು ನಿರ್ವಹಿಸುತ್ತಿಲ್ಲವೆಂ...ವಾಗಿದೆ. ವರ್ಷಕ್ಕೆ ೫ ಲಕ್ಷ ತೊಲ ಚಿನ್ನ ಉತ್ಪತ್ತಿಯಾಗುವುದು

...ಮಂತ್ರಿಯವರು ಭಾಷಣ ಮಾಡಿ, ...ಘಟನೆಯು ರಾಷ್ಟ್ರದ ಇತಿಹಾಸದಲ್ಲಿ ಪ್ರಾಮುಖ್ಯವಾದುದೆಂದೂ, ...ಕಾರಕ್ಕೆ ಬಂದಮೇಲೆ ಇಂತಹ ಮಹ...ನೆಯು ಆಗಿರುವುದನ್ನು [illegible] ...ಸ್ಪರವಾಗಿಯೂ ಕೆಲಸ ಕಂಡಿರುವ ...ಕಾರ್ಯದ ನಿರ್ವಹಣೆಗೆ ಸಹಕಾರ ನೀಡ...ದೆ ಬಂದಿರುವುದಕ್ಕಾಗಿ ಅವರಿಗೆ ಕೃತಜ್ಞತೆ ಸೂಚಿಸಿದರು

...ಯ ಮ್ಯಾನೇಜಿಂಗ್ ಡೈರೆಕ್ಟರ್ ಮಿ|| ...ಟೇಲರ್‌ರವರು ಮುಖ್ಯ ಮಂತ್ರಿ...ವಂದಿಸಿ, ಗಣಿಗಳ ಅಭಿವೃದ್ಧಿಗೆ ...ವನ್ನು ಕೆಲಸವನ್ನು ಕಂಪೆನಿಯವ...ರುವುದಾಗಿ ತಿಳಿಸಿದರು. ಗಣಿಗಳು ...ಲ್ಲಿ ಅತ್ಯಂತ ಭಾರಿಯಾಗಿಲ್ಲವೆಂದೂ ...ತವಾಗಿವೆಯೆಂದು ಹೇಳಿದರು. ಮೈ...ರಾಜ್ಯಕ್ಕೆ ತಮ್ಮ ಕೈಲಾದಷ್ಟು ಸೇವೆ ...ಮುಂದೆಯೂ ಸಲ್ಲಿಸುವುದಾಗಿ ಹೇಳಿ

...ರು ರೇಡಿಯೋ ನಾಳೆ ಕಾರ್ಯಕ್ರಮ

೭-೫ ಸುದ್ದಿಗಳು ೭-೧೫ ಮತ್ತು ...ವಿ. ವೆಂಕಟರಾಮಯ್ಯ-ದೇವರನಾಮ ...ಕೇಳಲು ಮಧ್ಯಾಹ್ನ ೧-೩ ಸಂಗೀತ ...ಮತ್ತು ೧೩-೪೫ ರಿಕಾರ್ಡು ೧-೩೦ ಪಿ ...೫-೩೦ ಮತ್ತು ೮ ಕೆ. ಎಸ್. ನಂ...ಸಂಗೀತ ೬ ೫ ರಿಕಾರ್ಡು ೬-೩೦ ...೬-೫೦ ಲೋಕಜೀವನ-ಕೃಷಿ ...೭ ೩೦ ರೇಡಿಯೋ [illegible] ...೯-೧೫ ಸ್ಪೆಷಲ್ ಕಾರ್ಯ...ರಾಷ್ಟ್ರೀಯ ಸಂಗೀತ ಕಾರ್ಯ...

ಬೀದಿ ದೀಪಗಳು ಸರಿಯಾಗಿ ಉರಿಯುವಂತೆ ಮಾಡಬೇಕು

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೩೦

ನಗರದ ಬೀದಿಗಳಲ್ಲಿ ವಿದ್ಯುಚ್ಛಕ್ತಿ ದೀಪಗಳು ಪದೇ ಪದೇ ಕೆಟ್ಟುಹೋಗಿ ಜನರಿಗೆ ಬಹಳ ತೊಂದರೆಯುಂಟು ಮಾಡುತ್ತಿರುವುದರಿಂದ [illegible]ವರು ಇದನ್ನು ಕ್ರಮಪಡಿಸಿ ದೀಪಗಳು ಸರಿಯಾಗಿ ಉರಿಯುವಂತೆ ಮಾಡಬೇಕೆಂದು ಕೋರುವ ಶ್ರೀ ಶ್ರೀಕಂಠಸ್ವಾಮಿ [illegible] ನಿನ್ನೆ ಪೌರಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. [illegible] ಸದಸ್ಯರು ಅಭಿಪ್ರಾಯಪಟ್ಟರು

ವಿದ್ಯಾರ್ಥಿನಿಲಯದಲ್ಲಿ ದಿನೇ ದಿನೇ ಹೆಚ್ಚುತ್ತಿರುವ ಕಳ್ಳತನ ಮತ್ತು ತೊಂದರೆಗಳನ್ನು ತಪ್ಪಿಸಲು ಅಲ್ಲಿ ಒಂದು ಪೊಲೀಸು ಠಾಣೆಯನ್ನು ಸರ್ಕಾರದವರು ತೆರೆಯಬೇಕೆಂಬ [illegible] ನಿರ್ಣಯವೂ ಸಹ ಅಂಗೀಕರಿಸಲ್ಪಟ್ಟಿತು

ಕಳೆದ [illegible] ದಲ್ಲಿ ಮಡಿದವರಿಗೆ ಸಂತಾಪವನ್ನು ವ್ಯಕ್ತಪಡಿಸುವ [illegible] ಅಂಗೀಕರಿಸಲಾಯಿತು

ನಗರದಲ್ಲಿ ಪೌರಸಭೆಯ ಲಾರಿ ಡಿಪೋಗಳು

ನಗರದಲ್ಲಿರುವ ಕಸ [illegible] ಸಂಗ್ರಹಿಸಲು [illegible] ಪೌರಸಭೆಯವರು ಅಶೋಕ ರಸ್ತೆಯಲ್ಲಿರುವ [illegible] ಕಟ್ಟಡ ಛತ್ರ, [illegible] ಮಾರ್ಕೆಟ್, [illegible] ಅಶೋಕಪುರ ಮತ್ತು ಕನ್ನೇಗೌಡನಕೊಪ್ಪಲಿನಲ್ಲಿ ಒಂದೊಂದು ಲಾರಿ ಡಿಪೋಗಳನ್ನು ತೆರೆದಿದ್ದಾರೆ. ಅಲ್ಲಿ ಲಾರಿಯನ್ನು [illegible] ಸೇರಿಸಿ ಸಾಗಾಟ ಮಾಡಲಾಗುತ್ತಿದೆ

ವಿದ್ಯಾರ್ಥಿ ನಿಲಯದಲ್ಲಿ ಬಟ್ಟೆ ಕಳುವು

ವಾಣಿವಿಲಾಸ ಮೊಹಲ್ಲಾದಲ್ಲಿರುವ ಶ್ರೀ ಕೆ. ಹೆಚ್. ರಾಮಯ್ಯನವರ ವಿದ್ಯಾರ್ಥಿ ನಿಲಯದಲ್ಲಿ ನಿನ್ನೆ ರಾತ್ರಿ ಸುಮಾರು ೬೦ ರೂ. ಬೆಲೆ ಬಾಳುವ ಬಟ್ಟೆಗಳನ್ನು ಕಳ್ಳರು ಕಿಟಕಿಗಳ ಮೂಲಕ ಕಳುವು ಮಾಡಿಕೊಂಡುಹೋಗಿರುವುದಾಗಿ ವಿದ್ಯಾರ್ಥಿಗಳು ತಿಳಿಸಿರುತ್ತಾರೆ

ಸಮಾಜ ಶಿಕ್ಷಣ ಸಪ್ತಾಹ

ಮೈಸೂರು ೩೦

ನಗರದ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ನಾಳೆಯಿಂದ ಸಮಾಜ ಶಿಕ್ಷಣ ಸಪ್ತಾಹವನ್ನು ಏರ್ಪಡಿಸಲಾಗಿದೆ. ನಾಳೆ ಸಂಜೆ ೬ ಗಂಟೆಗೆ ಡಾ|| ಎಂ. ವಿ. ಕೃಷ್ಣರಾಯರು ಸಪ್ತಾಹದ ಅಂಗವಾಗಿ ಪುಸ್ತಕ ಪ್ರದರ್ಶನವನ್ನು ಆರಂಭಿಸಲಿರುವರು

ನಗರದ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೮|| ಘಂಟೆಗೆ [illegible] ಸದನದಲ್ಲಿ ಶ್ರೀ ಎಲ್. [illegible]ಯ್ಯನವರಿಂದ ಭಾಷಣ ಮತ್ತು ಪುಸ್ತಕ ಭಂಡಾರದ ಆರಂಭೋತ್ಸವವೂ, ೯ ಘಂಟೆಗೆ ಪೊಲೀಸು ಶಿಕ್ಷಣ ಶಾಲೆಯಲ್ಲಿ ಶ್ರೀ ಹೆಚ್. ರಾಜಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಡಾ|| ಎಂ. ವಿ. ಕೃಷ್ಣರಾಯರ ಭಾಷಣವೂ ಏರ್ಪಾಡಾಗಿದೆ

ವಿಶ್ವಸಂಸ್ಥೆ ವೀಕ್ಷಕರಿಗೆ ಹಂಗೆರಿಯಲ್ಲಿ ಪ್ರವೇಶಕ್ಕೆ ನಿರಾಕರಣೆ

ಹಂಗೆರಿ ಪ್ರಧಾನಿಯಿಂದ ರಷ್ಯಾ ಸೈನ್ಯ ಉಪಯೋಗದ ಸಮರ್ಥನೆ

ವಿಶ್ವಸಂಸ್ಥೆಯವರು ಹಂಗೆರಿಯ ಪರಿಸ್ಥಿತಿಯನ್ನು ಅರಿಯಲು ಕಳುಹಿಸಬೇಕೆಂದಿರುವ ವೀಕ್ಷಕರ ಮಂಡಲವು ಅಲ್ಲಿಗೆ ಹೋಗಲು ಅವಕಾಶವನ್ನು ಹಂಗೆರಿಯ ಪ್ರಧಾನಿ ಕಾದಾರ್ [illegible] ನಿರಾಕರಿಸಿರುತ್ತಾರೆ. ಈ ವಿಷಯವನ್ನು ಅವರು ರಷ್ಯದ ಕಮ್ಯೂನಿಸ್ಟ್ ಪತ್ರಿಕೆ ಪ್ರಾವ್ಡಾಕ್ಕೆ ತಿಳಿಸಿದರಲ್ಲದೆ, ಹಂಗೆರಿಯಲ್ಲಿ ರಷ್ಯದ ಸೈನ್ಯಗಳ ಉಪಯೋಗವು ನ್ಯಾಯವಾದುದೆಂದು ಹೇಳಿರುತ್ತಾರೆ. ವಿಶ್ವಸಂಸ್ಥೆಯ ತನಿಖೆ ಮಂಡಲಿಯವರ ಪ್ರವೇಶದಿಂದ ಹಂಗೆರಿಯಲ್ಲಿ ತೊಂದರೆಯಾಗಬಹುದೆಂದೂ ಹಂಗೆರಿಯವರು ತಮ್ಮ ಶಸ್ತ್ರಾಸ್ತ್ರಗಳನ್ನು ಕೆಳಗಿಡದಿರುವರೆಂದೂ ಅವರು ತಿಳಿಸಿ ಹಂಗೆರಿಯವರು ತಮ್ಮ ಹಿಂಬಾಲಕರಿಗೆ ವಿಶ್ವಸಂಸ್ಥೆಯ ಅಥವಾ ಅಮೆರಿಕಾ ಸೈನ್ಯ ಸಹಾಯ [illegible] ಹೇಳುವರು. ರಷ್ಯದ ಪ್ರವೇಶದಿಂದ ಹಂಗೆರಿಯಲ್ಲಿ ಪ್ರತಿಕ್ರಾಂತಿಕಾರರು ಅಧಿಕಾರಕ್ಕೆ ಬರುವುದು ತಪ್ಪಿತೆಂದೂ ಅವರು ನುಡಿದಿರುತ್ತಾರೆ

ಇಂಜನಿಯರಿಂಗ್ ಪರೀಕ್ಷೆ ಫಲಿತಾಂಶಗಳು

ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಇಂಜನಿಯರಿಂಗಿನ ಒಂದು, ಎರಡು ಮತ್ತು ಮೂರನೇ ತರಗತಿ ಪರೀಕ್ಷೆಗಳ ಫಲಿತಾಂಶಗಳನ್ನು ವಿಶ್ವವಿದ್ಯಾನಿಲಯದವರು ಈ ದಿನ ಬೆಳಿಗ್ಗೆ ಪ್ರಕಟಿಸಿದರು. ಆದರೆ ಒಂದು ಪ್ರತಿಯನ್ನು ಅಂಚೆ ಮೂಲಕ ಪತ್ರಿಕೆಗೆ ಕಳುಹಿಸಿಕೊಡಲಾಗಿದೆ. ಪತ್ರಿಕೆ ಮೇಲೆ ಪೂರ್ವಭಾವಿಯಾದ ಸೂಚನೆಯನ್ನು ಈ ಫಲಿತಾಂಶಗಳ ಬಗ್ಗೆ ವಿಶ್ವವಿದ್ಯಾನಿಲಯದವರು ಕೊಟ್ಟಿರಲಿಲ್ಲ.

ಹಿಂದಿ ಪ್ರಥಮಾ ಪರೀಕ್ಷೆಗೆ ಆವೇದನ ಪತ್ರ

ಬೆಂಗಳೂರಿನಲ್ಲಿರುವ ಹಿಂದಿ ಸಾಹಿತ್ಯ ಸಮಿತಿಯವರು ಬರುವ ತಿಂಗಳು ೨೩ ರಂದು ನಡೆಸುವ ಪ್ರಥಮಾ ಪರೀಕ್ಷೆಗೆ ಕುಳಿತುಕೊಳ್ಳುವವರು ನಗರದ ಸೀತಾರಾಮಯ್ಯರ ರಸ್ತೆಯಲ್ಲಿರುವ ಹಿಂದಿ ಸಾಹಿತ್ಯ ಸಮಿತಿ ಕಛೇರಿಯಲ್ಲಿ ಆವೇದನ ಪತ್ರಗಳನ್ನು ಇದೇ ಡಿಸೆಂಬರ್ ೫ರೊಳಗೆ ಪಡೆಯಬಹುದು. ಪರೀಕ್ಷೆಗೆ ಕುಳಿತುಕೊಳ್ಳುವವರಿಗೆ ಉಚಿತವಾಗಿ ಹಿಂದಿ ತರಗತಿಗಳನ್ನು ನಿತ್ಯವೂ ಸಂಜೆ ೬ ಗಂಟೆಯಿಂದ ಜಿಲ್ಲಾ ಮತ್ತು ಮಾದರಿ ಶಾಲೆಯಲ್ಲೂ ಏರ್ಪಡಿಸಲಾಗಿದೆ

ಸ್ಕೂಲ್ ಫೈನಲ್‌ನಲ್ಲಿ ಸಂಗೀತದ ಪ್ರಶಸ್ತಿ ಪಡೆಯುವವರಿಗೆ ಬಹುಮಾನ

ಸಂಸ್ಥಾನದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ [illegible] ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಅದರಲ್ಲಿ ಪ್ರಥಮ ಸ್ಥಾನವನ್ನು ಪಡೆಯುವ ವಿದ್ಯಾರ್ಥಿನಿಗೆ ಪ್ರತಿ ವರ್ಷವೂ ಶ್ರೀಮತಿ ರಂಗಮ್ಮನವರ ಹೆಸರಿನಲ್ಲಿ ನಗದು ಬಹುಮಾನವೊಂದನ್ನು [illegible]

ಭಾರತ-ಚೀಣದ ೧೦೦ ಕೋಟಿ ಪ್ರಜೆಗಳ ಗಾಢ ಸ್ನೇಹ ಅಗತ್ಯ

ಶಾಂತಿನಿಕೇತನದಲ್ಲಿ ಚೀಣಾ-ಪ್ರಧಾನಿ ಚೌ ಎನ್ ಲೈ ಅವರ ಭಾಷಣ

ಚೀಣದ ಪ್ರಧಾನಿ ಚೌ ಎನ್ ಲೈ ಅವರು [illegible] ಶಾಂತಿನಿಕೇತನ [illegible] ಭಾಷಣ ಮಾಡಿ, ಏಷ್ಯಾ ಮತ್ತು ಆಫ್ರಿಕಾ ಖಂಡದಲ್ಲಿ ಐಕ್ಯ ಭಾವನೆಯು ಬೆಳೆಯಬೇಕೆಂದು ಹೇಳಿದರು. [illegible] ಯುದ್ಧ ಸಂಭವವನ್ನು ತಡೆಗಟ್ಟಬಹುದೆಂದು ಅವರು ಅಭಿಪ್ರಾಯಪಟ್ಟರು. ಈ ವಿಚಾರದಲ್ಲಿ ಭಾರತ ಮತ್ತು ಚೀಣಗಳ ಗಾಢವಾದ ಸ್ನೇಹವು ಅತ್ಯಂತ ಸಹಾಯಕವಾಗುವುದೆಂದೂ ಅವರು ತಿಳಿಸಿ, ಎರಡು ರಾಷ್ಟ್ರಗಳ ಒಟ್ಟು ೧೦೦ ಕೋಟಿ ಪ್ರಜೆಗಳ ಒಗ್ಗಟ್ಟಿನಿಂದ ಏಷ್ಯಾ ಮತ್ತು ಆಫ್ರಿಕದಲ್ಲಿ ಶಾಂತಿಪಾಲನೆಗೆ ಬಲವತ್ತರವಾದ ಸ್ನೇಹ ಮತ್ತು ನೈತಿಕ ಬಲವು ಏರ್ಪಡುವುದೆಂದೂ ಅವರು ಸೂಚಿಸಿದರು.

ಚೀಣದ [illegible] ಮತ್ತು ವಿಶ್ವಸಂಸ್ಥೆಯಲ್ಲಿ ಅದಕ್ಕೆ ಪ್ರಾತಿನಿಧ್ಯದ ಪ್ರಶ್ನೆಯಲ್ಲಿ ಭಾರತವು ಕೊಡುತ್ತಿರುವ ಬೆಂಬಲವನ್ನು ಅವರು ಪ್ರಶಂಸಿಸಿ, ಭಾರತದ ಅಸ್ತಿತ್ವ ಮತ್ತು ಸಾರ್ವಭೌಮತ್ವಕ್ಕೆ ರಕ್ಷಣೆ ಮತ್ತು ವಿಶ್ವ ಶಾಂತಿಗೆ ಚೀಣವು ಸದಾ ಬೆಂಬಲ ನೀಡುವುದೆಂದು ಸೂಚಿಸಿದರು

ಭಾವಿಗೆ ಭಾವಮೈದುನನನ್ನು ತಳ್ಳಿದ ಆಪಾದಿತನಿಂದ [illegible]

[illegible] ೧೦ ವರ್ಷದ [illegible] ಬಾವಿಗೆ [illegible] ತಳ್ಳಿದನೆಂದು [illegible] ನ್ಯಾಯಾಧೀಶರು [illegible] ಆಪಾದಿತನು ತಪ್ಪಿತಸ್ಥನಲ್ಲವೆಂದು [illegible] ಬಾಲಕನು [illegible] ಹಲವರು [illegible] ಹೇಳಲಾಗಿದೆ.

ಚಿನ್ನದ ಗಣಿ ಆಡಳಿತ ಸಮಿತಿ

ಕೋಲಾರದ ಚಿನ್ನದ ಗಣಿಗಳ ಆಡಳಿತ ನಿರ್ವಹಿಸಲು ಸರ್ಕಾರದವರು ಮುಖ್ಯ ಮಂತ್ರಿಯವರ ಅಧ್ಯಕ್ಷತೆಯಲ್ಲಿ ನೇಮಿಸಿರುವ ಸಮಿತಿಯಲ್ಲಿ ಹಣಕಾಸಿನ ಕಾರ್ಯದರ್ಶಿ ಶ್ರೀ ಟಿ. [illegible]ಸ್, ಭೂಗರ್ಭ ಇಲಾಖಾ ಡೈರೆಕ್ಟರ್ ಶ್ರೀ ಬಿ. ಸಿ. ಕೃಷ್ಣಾಚಾರ್ ಮತ್ತು ಜಾನ್ ಟೇಲರ್ ಕಂಪೆನಿಯ ಒಬ್ಬ ಪ್ರತಿನಿಧಿಯನ್ನು ಸದಸ್ಯರಾಗಿ ನೇಮಕಗೊಳಿಸಲಾಗಿದೆ. ಸಮಿತಿಯ ಉಪಾಧ್ಯಕ್ಷರಾಗಿ ನೇಮಕವಾಗಿರುವ ಶ್ರೀ ಎಚ್. ಮುನಿ[illegible] ಸ್ಥಾನದಲ್ಲಿ ಶ್ರೀ ಕೆ. ಬಾಲಸುಬ್ರಹ್ಮಣ್ಯಂರವರನ್ನು ಸಂಸ್ಥಾನ [illegible] ಕಾರ್ಯದರ್ಶಿಯಾಗಿ ನೇಮಿಸಲಾಗಿದೆ.

ವಿಶ್ವವಿದ್ಯಾನಿಲಯದ ನಿವೃತ್ತ ಪ್ರಾಧ್ಯಾಪಕ ಡಾ|| ಎಂ. ವಿ. ಕೃಷ್ಣರಾಯರು ನಿಧಿಯೊಂದನ್ನು ಸಂಸ್ಥಾನ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅದನ್ನು [illegible]

ಮಹಾ ಚುನಾವಣೆ ಬಗ್ಗೆ ಜನಸಂಘದ ಕಾರ್ಯಕ್ರಮ

ಮೈಸೂರು ೨೯

ಭಾರತೀಯ ಜನ ಸಂಘದ ನಗರ ಶಾಖಾ ಕಾರ್ಯಕಾರಿ ಸಮಿತಿಯ ಜರೂರು ಸಭೆಯು ನೆನ್ನೆ ರಾತ್ರಿ ನಡೆದು, ಸಭಾ ಧಿಕಾರ ಪ್ರಸ್ತಾಪಿತ ಯುಕ್ತ ಕಾಂಗ್ರೆಸ್ಸು ಮತ್ತು ರಾಷ್ಟ್ರ ವಿರೋಧಿ ರಾಜಕೀಯ ಪಕ್ಷಗಳ ವಿರುದ್ಧವಾಗಿ ಮಹಾ ಚುನಾವಣೆಗಳಲ್ಲಿ ನೇರವಾದ ಸ್ಪರ್ಧೆ ನಡೆಸಲು ಮತ್ತು ಆ ಪಕ್ಷಗಳ ವಿರುದ್ಧವಾಗಿ ಬಹುಮುಖ ಸ್ಪರ್ಧೆಯನ್ನು ತಪ್ಪಿಸಲು ಸೂಕ್ತ ಕಂಡ ಕಡೆ ಇತರ ಪಕ್ಷಗಳೊಡನೆ ಸ್ನೇಹ ಬೆಳೆಸಿಕೊಳ್ಳುವಂತೆ ತೀರ್ಮಾನಿಸಲಾಯಿತು. ಚುನಾವಣೆಗೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಕ್ರಮಗಳನ್ನೂ ಕೈಗೊಳ್ಳಲು ೭ ಜನ ಸದಸ್ಯರುಳ್ಳ ಸಮಿತಿಯೊಂದನ್ನು ರಚಿಸಲಾಯಿತು. ಗೋವಾದಲ್ಲಿರುವ ಭಾರತದ ರಾಜಕೀಯ ಮುಖಂಡರ ಬಿಡುಗಡೆಗಾಗಿ ಕೇಂದ್ರ ಸರ್ಕಾರದವರು ಪ್ರಯತ್ನಿಸಬೇಕೆಂದು ಒತ್ತಾಯಪಡಿಸಲಾಯಿತು.

ಅರಿಯಲೂರು ರೈಲ್ವೆ ದುರಂತಕ್ಕಾಗಿ ವಿಷಾದವನ್ನು ಸೂಚಿಸಿ, ಸಾವುನೋವುಗಳಾದವರಿಗೆ ಸೂಕ್ತ ಪರಿಹಾರ ಕೊಡಬೇಕಲ್ಲದೆ, ಮುಂದೆ ಇಂತಹ ದುರ್ಘಟನೆಗಳಾಗದಂತೆ ಎಚ್ಚರಿಕೆ ವಹಿಸಬೇಕೆಂದು ತಿಳಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

"ಓಹಿಲೇಶ್ವರ" ಚಿತ್ರದ ೫೦ನೇ ದಿನೋತ್ಸವ

ನಗರದ ಪ್ರಭಾ ಚಿತ್ರ ಮಂದಿರದಲ್ಲಿ ಪ್ರದರ್ಶಿಸಲ್ಪಡುತ್ತಿರುವ ಓಹಿಲೇಶ್ವರ ಚಿತ್ರದ ೫೦ನೇ ದಿನೋತ್ಸವದ ಸಂದರ್ಭದಲ್ಲಿ ಚಿತ್ರ ಮಂದಿರದವರು ನೆನ್ನೆ ಪತ್ರಿಕೋದ್ಯೋಗಿಗಳನ್ನೂ, ಪುರಪ್ರಮುಖರನ್ನೂ ಆಹ್ವಾನಿಸಿ ಸತ್ಕರಿಸಿದರು.

ಬಹಿರಂಗ ಸಭೆ

ಅಖಿಲ ಭಾರತೀಯ ಮಜ್ದೂರ್ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ದತ್ತೋಪಂತ ಠೇಂಗಡಿಯವರು ಬರುವ ೪ನೇ ತಾರೀಖು ನಗರಕ್ಕೆ ಆಗಮಿಸಿ, ಅಂದು ಸಂಜೆ ೬ ಗಂಟೆಗೆ ಓವಲ್ ಮೈದಾನದಲ್ಲಿ ನಗರದ ಜನಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯನ್ನುದ್ದೇಶಿಸಿ ಭಾಷಣ ಮಾಡುವರು.

ಶಾಸನ ಸಭಾ ಸದಸ್ಯರ ನಿವಾಸ

೨೦೦ ಮಂದಿ ಶಾಸನಸಭಾ ಸದಸ್ಯರು ವಾಸಿಸಲು ಅನುಕೂಲವಾದ ಗೃಹವೊಂದನ್ನು ನಿರ್ಮಿಸಲು ಸರ್ಕಾರದವರು ನಿರ್ಧರಿಸಿದ್ದಾರೆ. ಬೆಂಗಳೂರು ರೆಸಿಡೆನ್ಸಿ ಅಥವಾ ಕ್ರೆಸೆಂಟ್ ಬಳಿ ಅದನ್ನು ಕಟ್ಟಲಾಗುವುದು.

ಹೋಟೇಲುಗಳಿಗೆ ಮಾತ್ರ

"ಹಿಂದೂಸ್ಥಾನ" ನಂತೆಯೇ ಇರುವ 6 ಔನ್ಸ್ ಲಕ್ಕಿ ಗ್ಲಾಸ್ ಟಂಬ್ಲರುಗಳನ್ನು ಡಜನ್ ಒಂದಕ್ಕೆ ರೂ 1-14-0 ಯಂತೆ ಈ ಜಾಹಿರಾತನ್ನು ಪತ್ರಿಕೆಯನ್ನು ತರುವವರಿಗೆ ಮಾತ್ರ ಕೊಡುತ್ತೇವೆ. ಇಂದೇ ತ್ವರೆ ಮಾಡಿರಿ

ಜೆ. ಬಿ. ಮಂಗಾರಾಂ ಅಂಡ್ ಕಂ.,
ಪ್ರಭಾ ಟಾಕೀಸ್ ಹತ್ತಿರ,
ಹಳೇ ಬ್ಯಾಂಕ್ ರಸ್ತೆ, ಮೈಸೂರು

ಫ್ರಾನ್ಸಿಗೆ ರಷ್ಯದಿಂದ ೬ ಲಕ್ಷ ಟನ್ ಎಣ್ಣೆ ಸರಬರಾಜು

ಫ್ರಾನ್ಸ್, ಇಟಲಿ, ಸಿರಿಯ ಮತ್ತು ಇತರ ಯುರೋಪ್ ಮತ್ತು ಮಧ್ಯ ಪೂರ್ವ ರಾಷ್ಟ್ರಗಳಿಗೆ ಎಣ್ಣೆ ಸರಬರಾಜು ಮಾಡಲು ರಷ್ಯ ಮುಂದೆ ಬಂದಿದೆಯೆಂದು ನ್ಯೂಯಾರ್ಕ್ ಟೈಮ್ಸ್ ಪತ್ರಿಕೆಯು ತಿಳಿಸಿದೆ. ಬ್ರಿಟನ್ನಿಗೆ ಸರಬರಾಜು ಮಾಡುವ ಉದ್ದೇಶವಿಲ್ಲವೆಂದೂ ಹೇಳಲಾಗಿದೆ. ಫ್ರಾನ್ಸಿಗೆ ೬ ಲಕ್ಷ ಟನ್ ಎಣ್ಣೆಯನ್ನು ರಷ್ಯ ಕೊಡಬಹುದು.

ಆಕ್ರಮಣಕಾರರಿಗೆ ಶಿಕ್ಷೆ ವಿಧಿಸಲು ಈಜಿಪ್ಟಿನ ಕರೆ

ಈಜಿಪ್ಟಿನಲ್ಲಿ ಆಕ್ರಮಣ ನಡೆಸಿದವರ ಮೇಲೆ ತೀವ್ರವಾದ ಶಿಕ್ಷೆ ವಿಧಿಸುವಂತೆ ವಿಶ್ವಸಂಸ್ಥೆಯಲ್ಲಿ ನೆನ್ನೆ ಈಜಿಪ್ಟು ಒತ್ತಾಯಪಡಿಸಿತು. ಆಕ್ರಮಣಕಾರರು ತಾವು ಆಕ್ರಮಿಸಿರುವ ಪ್ರದೇಶವನ್ನು ಬಿಟ್ಟು ಹೋಗಬೇಕೆಂದು ಅವರ ಆಸ್ತಿಗಳನ್ನು ಜಫ್ತಿಮಾಡಿ ನಷ್ಟ ತುಂಬಿಕೊಡಬೇಕೆಂದೂ ಒತ್ತಾಯಪಡಿಸಲಾಗಿದೆ. ಆಕ್ರಮಣಕಾರರು ಒಪ್ಪದಿದ್ದರೆ ಆಯಾ ರಾಷ್ಟ್ರಗಳ ಮೇಲೆ ಆರ್ಥಿಕ ದಿಗ್ಬಂಧನ ಮುಂತಾದ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಈಜಿಪ್ಟು ಹೇಳಿದೆ.

ಆಯುರ್ವೇದ ಮತ್ತು ಯುನಾನಿ ಪದವೀಧರರ ಸಮ್ಮೇಳನ

ನಗರದ ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ೧೧ನೇ ಸಮ್ಮೇಳನವು ನಾಳೆ ಬೆಳಿಗ್ಗೆ ೯ ಗಂಟೆಗೆ ಹಾಸನದಲ್ಲಿ ನಡೆಯುವುದು. ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಆರಂಭೋತ್ಸವವನ್ನು ನೆರವೇರಿಸುವರು. ಪದವೀಧರರ ಸಂಘದ ಅಧ್ಯಕ್ಷ ಶ್ರೀ ಎಂ. ಗುಂಡಪ್ಪನವರು ಅಧ್ಯಕ್ಷತೆ ವಹಿಸುವರು.

ಪ್ರಜಾ ಸಮಾಜವಾದಿ ಪಕ್ಷದ ಹೊಸ ಅಧಿಕಾರ ವರ್ಗ

ಪ್ರಜಾ ಸಮಾಜವಾದಿ ಪಕ್ಷದ ಹೊಸ ಅಧಿಕಾರವರ್ಗದ ಚುನಾವಣೆಯು ನೆನ್ನೆ ನಡೆದು, ಗಂಗಾಶರಣಸಿಂಹರವರು ಪುನಃ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ತ್ರಿಲೋಕಸಿಂಗರು ಪುನಃ ಕಾರ್ಯದರ್ಶಿಗಳಾದರು. ಕಾರ್ಯಕಾರಿ ಸಮಿತಿಯಲ್ಲಿ ಆಚಾರ್ಯ ಕೃಪಲಾನಿ, ಅಶೋಕಮೆಹತಾ, ಹೆಚ್. ವಿ. ಕಾಮತ್, ಕೆ. ಆರ್. ಕಾರಂತ್, ಪಿ. ಸಿ. ಘೋಷ್ ಮುಂತಾದವರು ಇದ್ದಾರೆ.

SRI GAYATHRI
TALKIES
Daily 3 Shows
From 30-11-56 For 2 days
20th Century's Academy
Award Picture
MARTY
Starring – Ernest Borgnine
and Betsy Blair

Morning Shows on Sat & Sun
M G M's
THOUSAND CHEERS

ಕಾಶ್ಮೀರದ ನಿರ್ಧಾರದ ಬಗ್ಗೆ ಪಾಕಿಸ್ತಾನದ ಪ್ರತಿಭಟನೆ

ಕಾಶ್ಮೀರವು ಭಾರತದಲ್ಲಿ ಐಕ್ಯವಾಗಿರುವುದೆಂದು ಅಲ್ಲಿನ ರಾಜ್ಯಾಂಗ ಸಭೆಯು ಮಾಡಿರುವ ನಿರ್ಣಯವನ್ನು ಕುರಿತು ಪಾಕಿಸ್ತಾನವು ಭದ್ರತಾ ಸಮಿತಿಗೆ ಪತ್ರ ಬರೆದು ಭಾರತ ಸರ್ಕಾರದ [illegible] ಬಗ್ಗೆ ಸಮಜಾಯಿಷಿ ಕೇಳುವಂತೆ ಸೂಚಿಸಿದೆ. ಭದ್ರತಾ ಸಮಿತಿಯ ಮುಂದೆ ಇರುವ ಸಮಸ್ಯೆಯನ್ನು ವಿರೋಧಿಸಿಯಾಗಲಿ ಅಥವಾ ಅದಕ್ಕೆ ಅಡ್ಡಿ ಬರುವಂತಾಗಲೀ ವರ್ತಿಸುವುದಿಲ್ಲವೆಂದು ೧೯೫೧ರಲ್ಲಿ ಭಾರತವು ಭದ್ರತಾ ಸಮಿತಿಗೆ ತಿಳಿಸಿದ್ದುದನ್ನು ಪಾಕಿಸ್ತಾನವು ಎತ್ತಿ ತೋರಿಸಿದೆ.

ಪಾರ್ಲಿಮೆಂಟಿನ ವಿಸರ್ಜನೆಗೆ ನಿರ್ಧಾರ

ಬರುವ ಏಪ್ರಿಲ್ ಗರೊಳಗೆ ಪಾರ್ಲಿಮೆಂಟಿನ ಉಭಯ ಸಭೆಗಳನ್ನೂ ವಿಸರ್ಜಿಸಲು ಭಾರತ ಸರ್ಕಾರದವರು ನಿರ್ಧರಿಸಿರುವರೆಂದು ವರದಿಯಾಗಿದೆ.

ಮಾರ್ಕೆಟ್ ವರ್ತಕರ ಮೇಲಿನ ಮೊಕದ್ದಮೆ ವಾಪಸಿಗಾಗಿ ಒತ್ತಾಯ

ನಗರದ ದೇವರಾಜ ಮಾರ್ಕೆಟ್ ವರ್ತಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಭಾನುವಾರ ಶ್ರೀ ಎಂ. ಗೋಪಾಲರಾಯರ ಅಧ್ಯಕ್ಷತೆಯಲ್ಲಿ ನಡೆದು, ಮಾರ್ಕೆಟ್ಟಿನ ಅನೇಕ ವ್ಯಾಪಾರಿಗಳ ಮೇಲೆ ಹೂಡಲಾಗಿರುವ ಮೊಕದ್ದಮೆಗಳನ್ನು ಪೌರಸಭೆ ಮತ್ತು ವರ್ತಕರುಗಳ ಹಿತದೃಷ್ಟಿಯಿಂದ ಪೌರಸಭೆಯ ಆಡಳಿತ ವರ್ಗದವರು ವಾಪಸು ತೆಗೆದುಕೊಳ್ಳುವಂತೆ ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ದಾಮೋದರ ಕಣಿವೆ ಕಾರ್ಮಿಕರಿಂದ ಸಾಮೂಹಿಕ ಉಪವಾಸ

ದಾಮೋದರ ಕಣಿವೆ ಯೋಜನೆಯ ಕಾರ್ಮಿಕರು ಸಂಬಳ ಮತ್ತು ಬೋನಸ್ ಆದಿಯಾದ ಪ್ರಶ್ನೆಗಳಿಗೆ ಸಂಬಂಧಿಸಿದ ತಮ್ಮ ಬೇಡಿಕೆಗಳನ್ನು ಸಲ್ಲಿಸುವಂತೆ ಒತ್ತಾಯಪಡಿಸಲು ಉಪವಾಸ ಮುಷ್ಕರವನ್ನು ಸಾಮೂಹಿಕವಾಗಿ ಕೈಗೊಳ್ಳುವುದಾಗಿ ನೋಟೀಸು ಕೊಟ್ಟಿರುತ್ತಾರೆ.

ಬೆಂಗಳೂರಿಗೆ ಫುಟ್‌ಬಾಲ್ ಕೇಂದ್ರ ಸಂಸ್ಥೆ ಕಛೇರಿ ವರ್ಗ ಸರಿಯಲ್ಲ

ಮೈಸೂರು ನಗರದಲ್ಲಿ ಮೊದಲು ಫುಟ್‌ಬಾಲ್ ಸಂಸ್ಥೆಯನ್ನು ಸ್ಥಾಪಿಸಲಾಯಿತೆಂದೂ, ಅದನ್ನು ಈಚೆಗೆ ಬೆಂಗಳೂರಿಗೆ ವರ್ಗಾಯಿಸಿದುದು ಸರಿಯಲ್ಲವೆಂದೂ, ಮೈಸೂರಿನಲ್ಲಿಯೇ ಕೇಂದ್ರ ಸಂಸ್ಥೆಯನ್ನು ಉಳಿಸಬೇಕೆಂದೂ ಟಿ. ಎಸ್. ಅರಸು ಎಂಬುವರು ಪತ್ರ ಬರೆದು ತಿಳಿಸಿದ್ದಾರೆ.

SREE GANESH
TALKIES
Gala Release on 1-12-56
TO HELL & BACK
(Cinemascope and Technicolor)
Auto-biography of Audie Murphy.
The most decorated Hero & celebrated
Film Actor

Edited Printed and Published by
A. R. Nagarajan at Sadhvi Press
D Subbarao Road, Mysore

THE NATIONAL INSTITUTE OF COMMERCE,
1677 Old Mysore Bank Road Mysore
FRESH ADMISSIONS for TYPEWRITING and SHORT HAND are now being received during the mornings and evenings. The Institute is well equipped and is centrally located. Apply sharp

ಒಲಿಂಪಿಯಾ ಟಾಕೀಸ್ ★ 30-11-56 ರಿಂದ 3ನೇ ವಾರ
ಪ್ರತಿ ದಿನ 3 ಪ್ರದರ್ಶನಗಳು
ನವಕೇತನದವರ ಹಿಂದಿ ಚಿತ್ರ — ಫಂಟೂಷ್ — ಪಾತ್ರ ದೇವಾನಂದ್ ಶೀಲಾರಮಣಿ,

5 ಜೊತೆ ಭಾರಿ ಕುಸ್ತಿಗಳು
2-12-56ನೇ ಭಾನುವಾರ 4 ಘಂಟೆಗೆ
ಮೈಸೂರು ದೊಡ್ಡಕೆರೆ ಫುಟ್‌ಬಾಲ್ ಮೈದಾನದಲ್ಲಿ
ನಡೆಯುತ್ತವೆ

1 ಪೈ॥ ಕಾಪೂರ್ ಫಜಲುದ್ದೀನ್ ಮೊದಲನೇ ಮಗ ಪೈ॥ ಜಮಾಲ್ ಮತ್ತು ಕನ್ನೇಗೌಡನಕೊಪ್ಪಲು ಪೈ॥ ಬಸವಯ್ಯನವರ ಶಾಗಿರ್ದು ಪೈ॥ ಮಹದೇವು
2. ಮೈಸೂರು ಸ್ಟಾರ್ ರಾಮು ಮಗ ಪೈ॥ ತಿಪ್ಪಯ್ಯ ಉ॥ ವೀರ ಅಭಿಮನ್ಯು ಮತ್ತು ಕಾಪೂರ್ ಫಜಲುದ್ದೀನ್ ಚಿಕ್ಕ ಮಗ ಪೈ॥ ಸರ್ದಾರ್
3 ಕನ್ನೇಗೌಡನಕೊಪ್ಪಲು ಪೈ॥ ಬಸವಯ್ಯನವರ ಮಗ ಪೈ॥ ಬಸವಯ್ಯ ಮತ್ತು ಪೈ॥ ಅಬ್ದುಲ್‌ಹುಸೇನ್ ಶಾಗಿರ್ದು ಪೈ॥ ಸಾಬ್ಜಾನ್
4 ದೇವರಸನಹಳ್ಳಿ ಪೈ॥ ಕೆಂಚಪ್ಪನ ಮಗ ಪೈ॥ ನಾರಾಯಣಸ್ವಾಮಿ ಮತ್ತು ಮೈಸೂರು ಪೈ॥ ಸುದರ್ಶನ್ ಶಾಗಿರ್ದ ಪೈ॥ ವಿಶ್ವನಾಥ್
5. ಹಜರ್‌ಬಾದ್ ಮಾದಪ್ಪನ ಮಗ ಪೈ॥ ಮಹದೇವು ಮತ್ತು ಬಟ್ಟಟ್ಟಿ ಕಟ್ಟೆ ಪೈ॥ ಅಬ್ದುಲ್ ಕರೀಂ

ಮನುಷ್ಯನಿಗೆ ಪ್ರಾಣಾಧಾರವೆನಿಸಿರುವ ಅನ್ನ !
ಅನಾಥರ ಸಂಕಷ್ಟಕ್ಕೆ ನೆರವಾಗುವಂಥ ಶಕ್ತಿ !
ಬಡವರ ಸ್ವಾರ್ಥಿಯು ಪರಿಣಾಮವೇನು !
ಎಂಬುದನ್ನು ತಿಳಿಯಪಡಿಸುವ ಮಹೋನ್ನತ ಚಿತ್ರ
ಮೈಸೂರು ನ್ಯೂ ಅಪೇರಾ
ಚಿತ್ರ ಮಂದಿರದಲ್ಲಿ
ಭಕ್ತವಿಜಯ
ತಾರಾಗಣ – ಪಂಢರಿಬಾಯಿ ಮೈನಾವತಿ, ರಾಜಕುಮಾರ್, ಚಿಕ್ಕ ವರದರಾಜ್ ನರಸಿಂಹರಾಜು ನಂದಿರಾಜ್, ಹೆಚ್. ಬಿ. ಶೇಷಾಚಲಂ
(ಕನ್ನಡ ಚಿತ್ರ)
30—11—56 ರಿಂದ : ಅಮೋಘ ಪ್ರಾರಂಭ
ಪ್ರತಿ ದಿನ 3 ಪ್ರದರ್ಶನಗಳು

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಈದಿನ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : SATURDAY 1—12—1956 ಮೈಸೂರು : ಶನಿವಾರ ೧—೧೨—೧೯೫೬ [ಸಂಚಿಕೆ : [illegible]

ಭಾರತ ಸರ್ಕಾರದವರಿಂದ ೧೬ ಕೋಟಿ ರೂ. ಹೊಸ ತೆರಿಗೆ

ಬಂಡವಾಳದ ಮೇಲಿನ ಲಾಭದ ತೆರಿಗೆ

ಕೇಂದ್ರ ಸರ್ಕಾರಕ್ಕೆ ೧೬ ಕೋಟಿ ರೂ.ಗಳ ಹೆಚ್ಚು ವರಮಾನ

ವರ್ಷಕ್ಕೆ ೧೬ ಕೋಟಿ ರೂ ವರಮಾನ ಬರುವಂತಹ ಹಲವಾರು ಹೊಸ ತೆರಿಗೆಗಳನ್ನು ವಿಧಿಸಲಾಗುವುದೆಂದು ಲೋಕಸಭೆಯಲ್ಲಿ ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ನೆನ್ನೆ ತಿಳಿಸಿದರು. ಕಳೆದ ಏಪ್ರಿಲ್ ೧ ರಿಂದ ಬಂಡವಾಳಗಳ ಮೇಲೆ ಬರುವ ಲಾಭಕ್ಕೆ ತೆರಿಗೆ ಹಾಕಲಾಗುವುದು ೧೫ ಸಾವಿರ ರೂ. [illegible] ಕನಿಷ್ಠಾಂಶವನ್ನು ೫,೦೦೦ ರೂ ಗೆ ಇಳಿಸಲಾಗುವುದು ಅದಲ್ಲದೆ ಬಂಡವಾಳದ ಲಾಭವೂ ಸೇರಿ ಒಟ್ಟು ವರಮಾನವು ೧೦,೦೦೦ಕ್ಕೆ ಹೆಚ್ಚಿಲ್ಲದಿದ್ದರೂ ವಿನಾಯಿತಿಯು ದೊರೆಯುವುದು.

ಕಂಪೆನಿಗಳು ಕೊಡಬೇಕಾದ ಸೂಪರ್ ಟ್ಯಾಕ್ಸ್ ದರವನ್ನು ಹೆಚ್ಚಿಸಲಾಗುವುದೆಂದು ಸಚಿವರು ಹೇಳಿದರು. ಶೇಕಡ ೬ರಿಂದ ೧೦ರ ವರೆಗೆ ಡಿವಿಡೆಂಡ್ ಬರುವ ಸಂಸ್ಥೆಗಳಿಗೆ ರೂ. ಗೆ ೨ ಆಣೆಯಂತೆಯೂ, ೧೦ರಿಂದ ೧೫ರ ವರೆಗೆ ೪ ಆಣೆಯಂತೆಯೂ, ಅದಕ್ಕಿಂತ ಹೆಚ್ಚಿನದಕ್ಕೆ ೬ ಆಣೆಯಂತೆಯೂ ತೆರಿಗೆಯನ್ನು ಹಾಕಲಾಗುವುದು.

ಕಂಪೆನಿಗಳ ಡಿಪ್ರೆಸಿಯೇಷನ್ ಮತ್ತು ರಿಸರ್ವ್ ನಿಧಿಗಳ ಮೇಲೆ ಹತೋಟಿ ಇಡಲಾಗುವುದು ಬಂಡವಾಳ ಹಾಕದಿರುವ ಕಂಪೆನಿಗಳ ಮೇಲೆ ಸೂಪರ್ ಟ್ಯಾಕ್ಸ್ ಅನ್ನು ೪ ಆಣೆಯಿಂದ ೬ ಆಣೆಗೆ ಹೆಚ್ಚಿಸಲಾಗುವುದು

ನೇಪಾಳ ಸರ್ಕಾರದ ವಿರುದ್ಧ ಪಿತೂರಿ

ನೇಪಾಳ ಸರ್ಕಾರದ ವಿರುದ್ಧವಾಗಿ ಸಶಸ್ತ್ರ ದಂಗೆ ನಡೆಸುವ ಪಿತೂರಿಯೊಂದು ಪತ್ತೆಯಾಗಿ [illegible] ಜನರಿಗೆ ೬ ತಿಂಗಳಿಂದ ೩½ ವರ್ಷದವರೆಗೆ ಸಜಾ ವಿಧಿಸಲಾಗಿದೆ. ಅಮೆರಿಕದಲ್ಲಿ ವಿದ್ಯುಚ್ಛಕ್ತಿ ಕೆಲಸದ ಶಿಕ್ಷಣ ಪಡೆದಿರುವ ಭದ್ರ ಶಂಷೇರ್ [illegible]ರವರಿಗೆ ೧ ವರ್ಷ ಮತ್ತು ಅವರ ಇಬ್ಬರು ಸಹೋದ್ಯೋಗಿಗಳಿಗೆ ತಲಾ ೩½ ವರ್ಷ ಸಜಾ ವಿಧಿಸಲಾಗಿದೆ ಧನಸಾ ಎಂಬ ಮಹಿಳೆಗೆ ೬ ತಿಂಗಳು ಸಜಾ ಆಗಿದೆ ಬಾಲ್ಯರನ್ನು ಖುಲಾಸೆ ಮಾಡಲಾಗಿದೆ ವಿದೇಶೀಯರ ಹಣ ಸಹಾಯದಿಂದ ಈ ಪಿತೂರಿ ನಡೆಸಲಾಗಿತ್ತೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ನಾಗಸ್ವರ ೬-೧೫ ಮತ್ತು [illegible] ಎಂ ಶ್ರೀನಿವಾಸಮೂರ್ತಿ-ಕೀರ್ತನಾ [illegible] ೭-೩೦ ರಿಕಾರ್ಡು ೮ ೩೦ ಎಂ ಶಂಕರನಾರಾಯಣಶಾಸ್ತ್ರಿ-ವೀಣೆ ೮-೪೫ ಬಾಲಜಗ[illegible] ಮಧ್ಯಾಹ್ನ ೧೨ ಮತ್ತು ೫-೧೫ ಎ.ಎಲ್. [illegible]-ಸಂಗೀತ ೧೨-೩೦ ವಾದ್ಯವೃಂದ [illegible] ೧ ನಿಮ್ಮ ಮೆಚ್ಚಿನ ಗೀತೆಗಳು. ೧-೫೦ ಎಂ. ಕೌಸಲ್ಯ-ಗಾಯನ ಸಂಜೆ ೫ ಶಾಸ್ತ್ರೀಯ ಸಂಗೀತ. ೫-೩೦ ಸಂಗೀತ. ೬-೫ ವಿರಾಮ ಸಂ[illegible] ೬ ೩೦ ರಿಕಾರ್ಡು. ೭-೩ [illegible] ಕಿರುನಾಟಕಗಳು. ೮-೩೦ ಅಭ್ಯುದಯ [illegible] ಯೋಜನೆ-ಚರ್ಚೆ ೮-೫೦ ವಾರ್ತೆ [illegible] ೯-೩೦ ಕೃಷ್ಣ ಸ್ನಾತಕ.

ಸನ್ಮಾನಗಳ ಬಗ್ಗೆ ಪೌರಸಭೆಯಲ್ಲಿ ಆಕ್ಷೇಪಣೆ

ಮೈಸೂರು ೧

ಕೊನ್ನೆ ನಡೆದ ಪೌರಸಭೆಯಲ್ಲಿ ಡಾ|| ಬಿ ಜಿ ದಾಸ್‌ರವರು ಮಾತನಾಡಿ, ಸಭೆಗಳಲ್ಲಿ [illegible] ಸನ್ಮಾನಗಳ [illegible] ಎಂದು ಸೂಚಿಸಿದರು [illegible] ಮುಂದಿನ [illegible] ಸಭೆಯ ಗಮನಕ್ಕೆ ತರಲಾಯಿತು

ನಗರದಲ್ಲಿ ನಟಿಯರು ಮತ್ತು ಇತರ ಮಹನೀಯರುಗಳಿಗೆ ಆಗುತ್ತಿರುವ ಸನ್ಮಾನ ಸಮಾರಂಭಗಳ ವಿಷಯವನ್ನು ಶ್ರೀ [illegible] ಪ್ರಸ್ತಾಪಿಸಿ, ಪೌರ ಸನ್ಮಾನ [illegible] ಆಕ್ಷೇಪಿಸಿದರು ಪೌರಸಭಾಧ್ಯಕ್ಷರು [illegible] ಒಬ್ಬ ಸದಸ್ಯರಿಗೆ ಮಾತ್ರ ತಿಳಿಸುತ್ತಿದ್ದುದು ಸಭೆಯ ಗೌರವಕ್ಕೆ ಕಡಿಮೆಯೆಂದು ತಿಳಿಸಲಾಯಿತು ಪುರಸಭಾಧ್ಯಕ್ಷರು [illegible] ಸನ್ಮಾನ ಸಮಿತಿಗಳಲ್ಲಿರಬೇಕೆಂದೂ ಸಲಹೆ ಮಾಡಲಾಯಿತು

ಆಹಾರ ಪದಾರ್ಥಗಳ ಮೇಲೆ ರಿಸರ್ವ್ ಬ್ಯಾಂಕಿನವರು ಪುನಃ [illegible] ವ್ಯವಸ್ಥೆಯನ್ನು ಶ್ರೀ ಶ್ರೀಕಂಠಸ್ವಾಮಿಯವರು ಆಕ್ಷೇಪಿಸಿ, ಇದರಿಂದ ಧಾನ್ಯಗಳ ಬೆಲೆಯು ಪುನಃ ಹೆಚ್ಚುವುದೆಂದೂ ಸೂಚಿಸಿದರು

ಮನೆಗಂದಾಯದ ಪುನರ್ವಿಮರ್ಶೆ ಮತ್ತು ನೀರು ಸರಬರಾಜಿನಲ್ಲಿ ಲೋಪದೋಷಗಳನ್ನು ಹಲವರು ಸದಸ್ಯರು ಎತ್ತಿ ತೋರಿಸಿದರು.

[illegible] ವಿಷಯವಾಗಿ [illegible] ಪತ್ರಕರ್ತರಿಗೆ ಮುಂಗಡ ಹಣದ ಬಗ್ಗೆ ರಿಸರ್ವ್ ಬ್ಯಾಂಕಿನವರಿಗೂ ಪತ್ರ ಬರೆಯಲಾಗುತ್ತದೆಂದು ಅಧ್ಯಕ್ಷರು ತಿಳಿಸಿದರು ಪೌರಸಭೆ [illegible] ಕೊಳವನ್ನು ಸಭ್ಯದಲ್ಲಿ ಮುಚ್ಚಲಾಗುವುದೆಂದೂ ಅದಕ್ಕೆ ನೀರಿನ ಕೊಳಾಯಿಯನ್ನು ಹಾಕುವ ಬಗ್ಗೆ ಸರ್ಕಾರದವರೊಡನೆ ಪತ್ರವ್ಯವಹಾರ ನಡೆಸಲಾಗುವುದೆಂದೂ ಅಧ್ಯಕ್ಷರು ಸೂಚಿಸಿದರು

ಸಹಾಯಾರ್ಥ ವಿವಿಧ ವಿನೋದಾವಳಿ

ವಸಂತ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸಿನ ಪುಸ್ತಕ ಭಂಡಾರದ ನಿಧಿಗಾಗಿ ಒಂದು ಸಹಾಯಾರ್ಥ ವಿವಿಧ ವಿನೋದಾವಳಿಯನ್ನು ನಾಳೆ ಸಂಜೆ ೫ ೩೦ ಘಂಟೆಗೆ [illegible] ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದೆ "[illegible]" ಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎ ತಿಮ್ಮಯ್ಯನವರು ಅಧ್ಯಕ್ಷತೆ ವಹಿಸುವರು

ಗೀತಾ ಪ್ರಚಾರಿಣೀ ಸಭೆ

ನಗರದ ಅಶೋಕ ರಸ್ತೆಯಲ್ಲಿರುವ ಗೀತಾ ಪ್ರಚಾರಿಣೀ ಸಭೆಯ ಆಶ್ರಯದಲ್ಲಿ ಈ ಸಂಜೆ [illegible] ಘಂಟೆಗೆ ಗೀತಾ ವ್ಯಾಖ್ಯಾನವನ್ನು ನಡೆಸುವ ಬಗ್ಗೆ [illegible] ಸಭೆಯೊಂದು ಏರ್ಪಾಡಾಗಿದೆ. [illegible] ಮಹನೀಯರು [illegible] ಬೇಕೆಂದು ಕೋರಲಾಗಿದೆ.

ನಗರದಲ್ಲಿ ಸಹಕಾರ ಶಿಕ್ಷಣ ಇಂಟರ್ ಕಾಲೇಜು

ಬೆಂಗಳೂರು ೩೦

ಮೈಸೂರು ನಗರದಲ್ಲಿರುವ ಸಹಕಾರ ಶಿಕ್ಷಣ ಶಾಲೆಯ ದರ್ಜೆಯನ್ನು ಹೆಚ್ಚಿಸಿ, ಇಂಟರ್ ಕಾಲೇಜನ್ನಾಗಿ ಪರಿವರ್ತಿಸುವ ವಿಷಯವು ಸಂಸ್ಥಾನ ಸಹಕಾರ ಸಂಸ್ಥೆಗಳ ರಿಜಿಸ್ಟ್ರಾರರು ತಯಾರಿಸಿರುವ ದ್ವಿತೀಯ ಯೋಜನೆ ಕಾರ್ಯಕ್ರಮದ ಪಟ್ಟಿಯಲ್ಲಿ ಸೇರಿದೆ. ಇದಲ್ಲದೆ, ಇಲ್ಲಿ [illegible] ಒಂದು ಪ್ರಾದೇಶಿಕ ಶಾಲೆಯನ್ನು ತೆರೆಯಲಾಗುವುದು [illegible] ಪ್ರಾದೇಶಿಕ ಶಾಲೆಯಾಗಿ ಪರಿವರ್ತಿಸಲಾಗುವುದು. ಧಾರವಾಡ ಮತ್ತು [illegible]ಗಳಲ್ಲಿರುವ ೫ ಶಾಲೆಗಳು ಎಂದಿನಂತೆ ಮುಂದುವರಿಯುವುವು ಶಿಕ್ಷಣದ ವೆಚ್ಚವನ್ನು ಪೂರ್ಣವಾಗಿ ಸಂಸ್ಥಾನ ಸರ್ಕಾರ ಮತ್ತು ರಿಸರ್ವ್ ಬ್ಯಾಂಕುಗಳು ವಹಿಸುವುವು ಪ್ರತಿ ವರ್ಷ ಈ ಸಂಸ್ಥೆಗಳಲ್ಲಿ ೨೦೦ ಮಂದಿಗೆ ತರಬೇತು ಕೊಡಲಾಗುವುದು

ಹೈಕೋರ್ಟಿನ ಚಳುವಳಿಗಾರರ ಬಿಡುಗಡೆ

ಹೈಕೋರ್ಟು ಬೆಂಚಿನ ಸ್ಥಾಪನೆಗಾಗಿ ನಡೆದ ಚಳುವಳಿಯಲ್ಲಿ ಶಿಕ್ಷೆಗೆ ಗುರಿಯಾದ ೩೦ ಜನರನ್ನು ನೆನ್ನೆ ಜೈಲಿನಿಂದ ಬಿಡುಗಡೆ ಮಾಡಲಾಯಿತು ಅವರುಗಳಿಗೆ ೫ ದಿನಗಳಿಂದ ೫ ವಾರದವರೆಗೆ ಸಜಾ ಕೊಡಲಾಗಿತ್ತು ಚಳುವಳಿಯನ್ನು ನಿಲ್ಲಿಸಿದ ಪರಿಣಾಮವಾಗಿ ಬಂಧವಿಮೋಚನೆಯಾಗಿದೆ

ಸಾಮೂಹಿಕ ವಿದ್ಯಾಭ್ಯಾಸ ಸಪ್ತಾಹದ ಕಾರ್ಯಕ್ರಮ

ನಗರದ ಸಾರ್ವಜನಿಕ ಪುಸ್ತಕ ಭಂಡಾರದ ಆಶ್ರಯದಲ್ಲಿ ಇಂದಿನಿಂದ ಆರಂಭವಾಗಿರುವ ಅಖಿಲ ಭಾರತ ಸಾಮೂಹಿಕ ವಿದ್ಯಾಭ್ಯಾಸ ಸಪ್ತಾಹ ಆಚರಣೆಯ ಅಂಗವಾಗಿ ನಾಳೆ ಸಂಜೆ ೫ ಗಂಟೆಗೆ ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ [illegible] ಸಂಸ್ಥೆಯ ಸಹಕಾರ ಶಿಕ್ಷಣ ತರಗತಿ ಮುಖ್ಯಾಧಿಕಾರಿಗಳಾದ ಮಿ|| ಡಬ್ಲ್ಯು. [illegible] ಭಾಷಣ ಮಾಡುವರು. [illegible] ಶ್ರೀ ಸಿ. ಜೆ. [illegible]ರವರು ಅಧ್ಯಕ್ಷತೆ ವಹಿಸುವರು

ಹತ್ತು ಮನೆಗಳಿಗೆ ನುಗ್ಗಿ ಕಳ್ಳತನ

ನಗರದ ಸೀತಾವಿಲಾಸ-ಅಗ್ರಹಾರದಲ್ಲಿರುವ ಹತ್ತು ಮನೆಗಳಿಗೆ ನೆನ್ನೆ ರಾತ್ರಿ ಕಳ್ಳರು ನುಗ್ಗಿ ಸುಮಾರು ೩೦೦ ರೂ ಬೆಲೆಯ [illegible], ಕೊಡ, ಚಿಟ್ಟಿ, ಸೀರೆ, ಗುದ್ದಲಿ, ಪಿಕಾಸಿ ಬಕೆಟ್ ಮುಂತಾದ ಪದಾರ್ಥಗಳನ್ನು ಕದ್ದುಕೊಂಡು ಹೋಗಿರುವರು [illegible] ಒಳಗೆ ನುಗ್ಗಿ [illegible] ಬಾಗಿಲುಗಳನ್ನು ತೆಗೆಯಲಾಗದಂತೆ [illegible] ಸಿಕ್ಕಿಸಿ ಹೋಗಿದ್ದರಿಂದ, ಬೆಳಗ್ಗೆ ಎದ್ದವರು [illegible] ಬಂದಿದೆ

ಮೈಸೂರು ಜಿಲ್ಲಾ ಬೋರ್ಡುಗಳ ಪುನರ್ ಸ್ಥಾಪನೆ

ಡಿವಿಷನಲ್ ಕಮಿಷನರುಗಳ ಸಭೆ ಅಭಿಪ್ರಾಯ

[illegible]] ಬೆಂಗಳೂರು ೧

ಸ್ಥಳೀಯ ಸಂಸ್ಥೆಗಳ ಸಚಿವ ಶ್ರೀ ಆರ್. ಚನ್ನಿಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಈ ದಿನ ಸಂಸ್ಥಾನದ ನಾಲ್ವರು ಡಿವಿಷನಲ್ ಕಮಿಷನರುಗಳ ಸಭೆಯು ನಡೆದು ಸ್ಥಳೀಯ ಸಂಸ್ಥೆಗಳ ಆಡಳಿತದ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಮತ್ತು ಡಿವಿಷನಲ್ ಕಮಿಷನರುಗಳಿಗೆ ಹೆಚ್ಚಿನ ಅಧಿಕಾರವಿರಬೇಕೆಂದು ಗೊತ್ತುಮಾಡಲಾಯಿತು ಹಳೆಯ ಮೈಸೂರಿನಲ್ಲಿ ರದ್ದಾದ ಜಿಲ್ಲಾ ಬೋರ್ಡುಗಳನ್ನು ಪುನಃ ಸ್ಥಾಪಿಸಬೇಕೆಂದು ಅಭಿಪ್ರಾಯಪಡಲಾಯಿತು ನಗರ ಪೌರಸಭೆಗಳನ್ನು ಬಿಟ್ಟು ಮಿಕ್ಕವುಗಳ ಮೇಲೆ ಡಿವಿಷನಲ್ ಕಮಿಷನರಿಗೆ ಹೆಚ್ಚು ಅಧಿಕಾರವಿರಬೇಕೆಂದು ತೀರ್ಮಾನಿಸಲಾಯಿತು.

ಬ್ರಿಟಿಷ್ ಆರ್ಥಿಕ ನಿಯೋಗದ ಆಗಮನ

ಭಾರತದಲ್ಲಿ ಪ್ರವಾಸ ಕೈಗೊಂಡಿರುವ ಬ್ರಿಟಿಷಿನ ಆರ್ಥಿಕ ನಿಯೋಗದವರು ಈ ದಿನ ಇಲ್ಲಿಗೆ ಆಗಮಿಸಿದರು ಅವರು ಇಲ್ಲಿ ಎರಡು ದಿನಗಳವರೆಗೆ ಇರುವರು ಬೇಲೂರು, ಹಳೇಬೀಡು ಮತ್ತು ಮೈಸೂರುಗಳನ್ನು ಅವರು ಸಂದರ್ಶಿಸುವರು

ಚೌ ಎನ್ ಲೈ ಸ್ವಾಗತ ಸಮಾರಂಭದಲ್ಲಿ ಆಸ್ಫೋಟನೆ

ದೆಹಲಿಯ ಪೌರಸಭೆಯವರು ನೆನ್ನೆ ಚೀನಾದ ಪ್ರಧಾನಿ ಚೌ ಎನ್ ಲೈಯವರಿಗೆ ಮಾನಪತ್ರ ಸಮರ್ಪಣ ಸಮಾರಂಭವನ್ನು ನಡೆಸುತ್ತಿದ್ದಾಗ ವೇದಿಕೆಗೆ ಸ್ವಲ್ಪ ದೂರದಲ್ಲಿ ಪಟಾಕಿ ಸಿಡಿದು ಒಬ್ಬ ಅಧಿಕಾರಿಯ ಕಾಲಿಗೆ ಗಾಯವಾಗಿ ಅವರನ್ನು ಆಸ್ಪತ್ರೆಗೆ ಸಾಗಿಸಲಾಯಿತು ಜನರು ಗಾಬರಿಯಾಗಬಾರದೆಂದು ನೆಹರೂರವರು [illegible] ಈ ಬಗ್ಗೆ ತನಿಖೆ ನಡೆಸುವುದಾಗಿ ಸೂಚಿಸಿದರು. ಪಟಾಕಿಯು ಅಧಿಕಾರಿಯ [illegible] ತಳಗೆ ಬಿದ್ದು ಸಿಡಿಯಿತೆಂದು ಹೇಳಲಾಗಿದೆ

ಕಾವ್ಯ ವಾಚನ ಮತ್ತು ಕವಿ ಸನ್ಮಾನ

ನಗರದ ಸಾರ್ವಜನಿಕ ಪುಸ್ತಕ ಭಂಡಾರದಲ್ಲಿ ಇಂದು ಸಂಜೆ ೬ ಗಂಟೆಗೆ ವಿಶ್ವವಿದ್ಯಾಲಯದ ತೆಲುಗು ಅಧ್ಯಾಪಕರಾದ ಅಭಿನವ [illegible] ಬಿ. ರಾಮಯ್ಯನವರು ಕೃಷ್ಣ ಕಥಾ ವಿಪಂಚಿ ಎಂಬ ಕೃಷ್ಣ ದೇವರಾಯ ಚರಿತ್ರೆಯ ಕಾವ್ಯದ ಕೆಲವು ಭಾಗಗಳ ವಾಚನ ಮಾಡುವರು ನಗರದ ತೆಲುಗು ಭಾಷಾಭಿಮಾನಿಗಳು ಕವಿ ಸನ್ಮಾನ ಮಾಡುವರು ಮಹಾರಾಜಾ ಕಾಲೇಜ ಪ್ರಿನ್ಸಿಪಾಲರಾದ ಶ್ರೀ ಸಿ. ಡಿ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾಗತವಿದೆ.

ನಿಧನ

ರಾಜಪುರೋಹಿತ ಶ್ರೀ ವಿಶ್ವೇಶ್ವರಭಟ್ಟರ ಮಕ್ಕಳು ಶ್ರೀ ವಿ ಕೃಷ್ಣಮೂರ್ತಿ ಎಂಬವರು ಹಲವಾರು ದಿನಗಳಿಂದಲೂ ರೋಗಗ್ರಸ್ತರಾಗಿದ್ದು ಕಳೆದ ೨೮ ರಂದು ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಧನ್ವಂತರಿ ಜಯಂತಿ ಉತ್ಸವ

ನಂಜನಗೂಡು

ಧನಗೃಷ್ಣ ಬ ಎ ಪಂಡಿತರು ನೆನ್ನೆ ತಮ್ಮ ಭವನದಲ್ಲಿ ಎಂದಿನಂತೆ ಧನ್ವಂತರಿ ಜಯಂತಿ ಮಹೋತ್ಸವವನ್ನು ವಿಶೇಷ ಶ್ರದ್ಧಾಭಕ್ತಿಯಿಂದ ನೆರವೇರಿಸಿದರು ಸ್ಥಳೀಯ [illegible] ನೂರಾರು ಜನ ಬಂಧುಮಿತ್ರರು ಆಗಮಿಸಿದ್ದರು

ಬೆಳಗ್ಗೆ ಶಾಸ್ತ್ರೋಕ್ತವಾಗಿ ಧನ್ವಂತರಿ ಪೂಜೆಯೂ, ಮಧ್ಯಾಹ್ನ ಸಂತರ್ಪಣೆಯೂ ಜರುಗಿದುವು ಸಂಜೆ ಸಭೆಯು ನಡೆಯಿತು ಶ್ರೀ ಲಕ್ಷ್ಮೀಶಯವರಿಂದ ಪ್ರಾರ್ಥನೆಯಾದನಂತರ, ಶ್ರೀ ಪಂಡಿತರು ಸ್ವಾಗತ ಭಾಷಣ ಮಾಡಿ ೩೪ ವರ್ಷಗಳಿಂದಲೂ ತಾವು ನಡೆಸಿಕೊಂಡು ಬರುತ್ತಿರುವ ಧನ್ವಂತರಿ ಮಹೋತ್ಸವದ ವಿವರವನ್ನು ತಿಳಿಸಿ, ಆಯುರ್ವೇದ ವಿದ್ಯೆಯ ಉನ್ನತಿಗೆ ಎಲ್ಲರೂ ನೆರವಾಗಬೇಕೆಂದು ಕೋರಿದರು

ಮಹಾರಾಜಾ ಕಾಲೇಜಿನ ಸಂಸ್ಕೃತ ಪ್ರಾಧ್ಯಾಪಕರಾದ ಶ್ರೀ ಎಸ್ ರಾಮಚಂದ್ರರಾಯರು 'ದೇವವೈದ್ಯರು' ಎಂಬ ವಿಷಯವಾಗಿ ಉಪನ್ಯಾಸ ಭಾಷಣ ಮಾಡಿ, ಭಾರತ ಸಂಸ್ಕೃತಿಯ ಪ್ರಾಚೀನತೆಯನ್ನೂ, ಅದರಲ್ಲಿ ಆಯುರ್ವೇದಕ್ಕೆ ಇರುವ ಅಗ್ರಸ್ಥಾನವನ್ನೂ ನಿರೂಪಿಸಿದರು ದೇವವೈದ್ಯರುಗಳಾದ ಅಶ್ವಿನಿ ಕುಮಾರರು ಋಷಿಗಳಿಗೂ ಮತ್ತು ಮಾನವರಿಗೂ ಅಪೂರ್ವವಾದ ಚಿಕಿತ್ಸೆಗಳನ್ನು ನಡೆಸಿ ಮೆಚ್ಚುಗೆಯನ್ನು ಪಡೆದ ಕಥನವನ್ನು ಅವರು ಹೃದಯಂಗಮವಾಗಿ ವಿವರಿಸಿದರು ಇಂದಿನ ವಿಜ್ಞಾನ ಸಂಶೋಧನೆಯಲ್ಲಿ ಇನ್ನೂ ಕಂಡುಹಿಡಿಯಲ್ಪಡದಿರುವ ಅನೇಕ ಚಿಕಿತ್ಸೆಗಳನ್ನು ಪ್ರಾಚೀನ ವೈದ್ಯ ಶಾಸ್ತ್ರಜ್ಞರು ಯಶಸ್ವಿಯಾಗಿ ನಡೆಸುತ್ತಿದ್ದುದನ್ನು ಸಹ ಅವರು ನಿದರ್ಶನಪೂರ್ವಕವಾಗಿ ತಿಳಿಸಿದರು

ಸದ್ವೈದ್ಯಶಾಲೆಯ ಕೆಲಸಗಾರರು ನಡೆಸಿದ ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನು ಹಂಚಲಾಯಿತು

ಗಾಯಕ ಸಾಮ್ರಾಟ್ ವಿ ನಕ್ಕಿರ್ ಶ್ರೀಕಂಠ ರಾಜರತ್ನರ ಗಾಯನವು ವಿ|| ಟಿ ಚೌಡಯ್ಯನವರ ಪಿಟೀಲು, ವಿ|| ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗ ಮತ್ತು ವಿ|| ರಂಗನಾಥರವರ ಘಟಸಹಿತ ಅಮೋಘವಾಗಿ ನಡೆಯಿತು

ಹೋಟೇಲುಗಳಿಗೆ ಮಾತ್ರ

'ಹಿಂದೂಸ್ತಾನ್' ಸಂತೆಯ ಇರುವ 6 ಔನ್ಸ್ ಲಕ್ಕಿ ಗ್ಲಾಸ್ ಟಂಬ್ಲರುಗಳನ್ನು ಡಜನ್ ಒಂದಕ್ಕೆ ರೂ 1-14 0 ರಂತೆ ಈ ಜಾಹಿರಾತನ್ನು ಪತ್ರಿಕೆಯನ್ನು ತರುವವರಿಗೆ ಮಾತ್ರ ಕೊಡುತ್ತೇವೆ ಇಂದೇ ತ್ವರೆ ಮಾಡಿರಿ

ಜೆ ಬಿ ಮಂಗಾರಾಂ ಅಂಡ್ ಕೋ,
ಪ್ರಭಾ ಟಾಕೀಸ್ ಹತ್ತಿರ,
ಹಳೇ ಬ್ಯಾಂಕ್ ರಸ್ತೆ ಮೈಸೂರು

ಭಾರತದ ಒಳನಾಡಿನಲ್ಲಿ ಜಲ ಮಾರ್ಗದ ಸಂಚಾರ

ಒಳನಾಡಿನಲ್ಲಿ ಜಲ ಮಾರ್ಗಗಳ ಮೂಲಕ ಸಂಚಾರ ಸಂಪರ್ಕವನ್ನು ವಿಸ್ತರಿಸುವ [illegible] ಪ್ರವೀಣರು ಯೋಜನೆಯೊಂದನ್ನು ಸಿದ್ಧಗೊಳಿಸಿರುವರೆಂದೂ, ಅದರ ಪರಿಶೀಲನೆಗೆ ಸರ್ಕಾರದವರು ಸಮಿತಿಯೊಂದನ್ನು ನೇಮಿಸಲಿರುವರೆಂದೂ ಗೊತ್ತಾಗಿದೆ ಗಂಗಾ ಮತ್ತು ನರ್ಮದಾ, ನರ್ಮದಾ-ಗೋದಾವರಿ, ನರ್ಮದಾ-ತಪತಿ, ಸೋಣಾ ಮೂಲಕ ಗಂಗಾ ಮಹಾನದಿಗಳಿಗೆ ಕಾಲುವೆಗಳನ್ನು ಕಟ್ಟಿ ಸಂಪರ್ಕವನ್ನುಂಟುಮಾಡಲೂ, ಕನ್ಯಾಕುಮಾರಿ ಮೂಲಕ ಕಲ್ಕತ್ತಾ ಮತ್ತು ಕೊಚ್ಚಿಗಳ ನಡುವೆ ದೋಣಿ ಸಂಚಾರವೇರ್ಪಡಿಸಲೂ ಯೋಜನೆಯು ಸೂಚಿಸಿದೆ

ಸಹಾಯಾರ್ಥ ಸಿನಿಮಾ ಪ್ರದರ್ಶನ

ವಿದ್ಯಾರ್ಥಿ ಕ್ಷೇತ್ರದ ಚಳುವಳಿಯ ಸಹಾಯಾರ್ಥವಾಗಿ ನಾಳೆ ಬೆಳಗ್ಗೆ ೧೦|| ಗಂಟೆಗೆ ಲಕ್ಷ್ಮೀ ಚಿತ್ರಮಂದಿರದವರು [illegible] ಎಂಬ ಚಿತ್ರವನ್ನು ಪ್ರದರ್ಶಿಸುವರು ಮಹಾಜನರು ಪ್ರೋತ್ಸಾಹಿಸುವಂತೆ ಕೋರಲಾಗಿದೆ.

ಡ್ರೈವರು ಮತ್ತು ಕಂಡಕ್ಟರಿಗೆ ಜುಲ್ಮಾನೆ

ಸರ್ಕಾರಿ ಬಸ್ಸಿನ ಡ್ರೈವರ್ ಮತ್ತು ಕಂಡಕ್ಟರಿಗೆ ಸಜಾ ಎಂಬುದಾಗಿ ಕಳೆದ ೨೮ರಂದು ಪತ್ರಿಕೆಯಲ್ಲಿ ಶಿರೋನಾಮೆಯು ತಪ್ಪಾಗಿ ಬಿದ್ದಿರುವುದನ್ನು ಜುಲ್ಮಾನೆ ಎಂಬುದಾಗಿ ಓದಿಕೊಳ್ಳಬೇಕೆಂದು ವಿನಂತಿ

ಬೈಸಿಕಲ್ ಕಳೆದುಹೋಗಿದೆ

3 || 9 11 56 ರಲ್ಲಿ ಮಹಾರಾಜಾ ಹೈಸ್ಕೂಲು ಆವರಣದಲ್ಲಿ 106132 ನಂಬರು ಮತ್ತು ಲೈಸೆನ್ಸ್ ನಂ 13105 ಇರುವ ಫಿಲಿಪ್ಸ್ ಸೈಕಲ್ಲು ಕಳೆದುಹೋಗಿದೆ ಸಿಕ್ಕಿದವರು ಪೋಲೀಸಿನವರಿಗೆ, ಕೆಳಕಂಡ ವಿಳಾಸಕ್ಕಾಗಲೀ ತಂದು ಕೊಟ್ಟರೆ ತಕ್ಕ ಬಹುಮಾನ ಕೊಡಲಾಗುತ್ತದೆ

ಆರ್ ಚನ್ನನಾಯಗರ್,
ಟೀಚರ್ ಮಹಾರಾಜಾ ಹೈಸ್ಕೂಲು,
ಮೈಸೂರು

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂಪ್ರಿಂಟ್

ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್ ಕಟ್ಟಡಕ್ಕೆ ಎಸ್ಟಿಮೇಟ್ ಮಾಡಿಕೊಡುವುದಕ್ಕೂ,
ಗಾಯತ್ರಿ ಟಾಕೀಸ್ ಎದುರು
ಪ್ಲಾಟ್ ಅಂಗಡಿಯಲ್ಲಿ
ಬಿ ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿ

Edited Printed and Published by
A R Nagarajan at Sadhvi Press
D Subbiah Road, Mysore

ಭಾರತಕ್ಕೆ ಅಮೆರಿಕದ ಹೊಸ ರಾಯಭಾರಿ

ಭಾರತಕ್ಕೆ ಅಮೆರಿಕದ ರಾಯಭಾರಿಯಾಗಿ ಅಲ್ಲಿನ ರೆಡ್ ಕ್ರಾಸ್ ಸಂಸ್ಥೆಯ ಮಾಜಿ ಅಧ್ಯಕ್ಷ ಎಲ್ಸ್‌ವರ್ತ್ ಬಂಕರ್‌ರವರನ್ನು ನೇಮಿಸಲಾಗಿದೆ ಅವರು ಜನವರಿಯಲ್ಲಿ ಅಧಿಕಾರ ಸ್ವೀಕರಿಸುವರು

ಮದ್ರಾಸು ರಾಜಕೀಯ ಸಂತ್ರಸ್ತರಿಗೆ ಉದ್ಯೋಗ

ದೇಶದ ಸ್ವಾತಂತ್ರ್ಯಕ್ಕಾಗಿ ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ್ದ ರಾಜಕೀಯ ಕೆಲಸಗಾರರಿಗೆ ಸಾಮೂಹಿಕ ಮತ್ತು ಖಾದಿ ಅಭಿವೃದ್ಧಿ ಯೋಜನೆಗಳಲ್ಲಿ ಉದ್ಯೋಗ ಕಲ್ಪಿಸುವಂತೆ ಮದ್ರಾಸು ಸರ್ಕಾರದವರು ಆಜ್ಞೆ ಮಾಡಿದ್ದಾರೆ

ಚಾಮರಾಜನಗರದ ಇಂಟರ್ ಕಾಲೇ ಸಂಘದ ಆರಂಭ ಸಮಾರಂಭ

ಚಾಮರಾಜನಗರದ ಇಂಟರ್‌ಮೀಡಿಯ ಕಾಲೇಜು ಸಂಘದ ಆರಂಭ ಸಮಾರಂಭವ ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಕುಮಾ ಮಿಯವರ ಅಧ್ಯಕ್ಷತೆಯಲ್ಲಿ ಮೈಸೂರಿನ ಸ ಗಳಾದ ಶ್ರೀ ಎ ಸೀತಾರಾಮ್‌ರವರು ೬ ಸಂಜೆ ೪|| ಗಂಟೆಗೆ ನೆರವೇರಿಸುವರು ಸ ರಿಗೂ ಆಹ್ವಾನವಿದೆ

GLOBE TUTORIAL COLLE
(Sadvidya Patashala, Mysore)
Excellent Coaching for
Inter, P. C. M., Kan., E
Classes between 7-30 &
10-30 A M

THE NATIONAL INSTITUTE OF COMMERCE,
1677 Old Mysore Bank Road Mysore
FRESH ADMISSIONS for TYPEWRITING and SHORTHAND are now being received during the mornings and evenings The Institute is well equipped and is centrally located Apply sharp

VIDYA TUTORIAL COLLEGE,
(DALVOY HIGH SCHOOL BUILDINGS MYSORE)
Classes commenced in full swing — *The best institute for tuition*
INTER B A, B Sc, Ist B E — *All Subjects - All Parts*
L C E L M L, L E E — *Physics & Maths*
Join at once — *Ladies also admitted*
Separate section formed in INTER, B A, B sc ENGLISH for college going students
Enquiries 5 30 to 8 30 P M

TENDER NOTICE

TENDER FOR TRANSPORT OF COFFEE FROM COORG COLLECTING DEPOTS TO CURING WORKS AT TELLICHERRY, MANGALORE, MYSORE AND FRASERPET DURING THE CALENDAR YEAR 1957

Sealed tenders are invited from Transport Contractors having sufficient experience in transport work for transport of coffee consignments from the following Collecting Depots to the Curing Works noted below during the calendar year 1957, so as to reach the undersigned not later than 5 P M on 13-12 1956

Sl No	From Collecting Depot at	To Curing Works of
	I. Collecting depots of M/s Volkart Brothers, Tellicherry	
1	Mercara	(1) M/s Volkart Brothers Tellicherry
2	Somwarpet	
3	Virajpet	
4	Gonicoppal	(2) M/s Volkart Brothers, Mangalore
5	Napoklu	
	II Collecting depots of M/s Aspinwall & Co Ltd, Mangalore	
6	Mercara	M/s Aspinwall & Co Ltd, Mangalore
7	Somwarpet	
8	Virajpet	
	III. Collecting depots of M/s Peirce, Leslie & Co Ltd, Mangalore	
9	Mercara	M/s Peirce, Leslie and Co Ltd, Mangalore
10	Somwarpet	
	IV Collecting depot of the Chamundi Curing Works, Mysore	
11	Gonicoppal	The Chamundi Curing Works, Mysore
	V Collecting depot of the Coorg Coffee Growers' Co-operative Society Ltd, Mercara	
12	Kutta	M/s Kushalnagar Works, Fraserpet
	VI Collecting depot of the Consolidated Coffee Estates (1943) Ltd, Pollibetta	
13	Pollibetta	M/s Kushalnagar Works Fraserpet

2. Conditions of transport and other details will be available at the offices of the Asst Coffee Marketing Officers at Mysore and Mangalore and will be furnished on request

Bangalore
Dated 28-11-1956

Chief Coffee Marketing Officer

THE CHAMPION METROPOLITAN COLLEGE OF COMMERCE,
"Co-operators Home" 100 Road Mysore
ADMISSIONS
APPLICATIONS for admission to classes in Shorthand, Typewriting and Hindi ONLY, leading to November 1957 Examinations are now being received in the mornings and evenings
Sd/- M. S PUTTANNA,
Vice Principal

5 ಜೊತೆ ಭಾರಿ ಕುಸ್ತಿಗಳು
2-12-56ನೇ ಭಾನುವಾರ 4 ಗಂಟೆಗೆ
ಮೈಸೂರು [illegible] ನಲ್ಲಿ
ನಡೆಯುತ್ತವೆ
1 ಪೈ|| [illegible] ಮತ್ತು [illegible] ಪೈ|| [illegible]
2 ಮೈಸೂರು [illegible] ಪೈ|| [illegible] ಮತ್ತು [illegible] ಪೈ|| ಸರ್ದಾರ್
3 ಕನ್ನೇಗೌಡನಕೊಪ್ಪಲು ಪೈ|| ಬಸವಯ್ಯನವರ ಶಿಷ್ಯ ಪೈ|| ಬಸವಯ್ಯ ಮತ್ತು ಪೈ|| [illegible] ಪೈ|| ಸಾಬ್ಜಾನ್
4. ದೇವರಸನಹ ಪೈ|| ಕೃಷ್ಣನ ಶಿಷ್ಯ ಪೈ|| ನಾರಾಯಣಸ್ವಾಮಿ ಮತ್ತು ಮೈಸೂರು ಪೈ|| ಸುದರ್ಶನ್ ಶಿಷ್ಯ ಪೈ|| ವಿಶ್ವನಾಥ್
5. ನಜರ್‌ಬಾದ್ ಮಾದಪ್ಪನ ಶಿಷ್ಯ ಪೈ|| ಮಹದೇವು ಮತ್ತು [illegible] ಪೈ|| [illegible] ಕರೀಂ

[illegible] No. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ -

[illegible] ಪತ್ರಿಕೆ ೬ ಕಾಸು

ಬ್ರಾಂಕಾಲ್
[illegible]
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. [illegible]
ಶ್ರೀರಾಮಮಂದಿರ ರಸ್ತೆ,
ಬೆಂಗಳೂರು –2

ಸಂಪುಟ : ೧೫] SADHVI । SUNDAY 2—12—1956 ಮೈಸೂರು । ಭಾನುವಾರ ೨—೧೨—೧೯೫೬ [ಸಂಚಿಕೆ : [illegible]

ಸಿರಿಯದ ಮೇಲೆ ನಾಲ್ಕು ರಾಷ್ಟ್ರಗಳ ಆಕ್ರಮಣ ಸಿದ್ಧತೆ?

ಸಿರಿಯದ ಮೇಲೆ ಸಶಸ್ತ್ರ ಆಕ್ರಮಣಕ್ಕೆ ಸಿದ್ಧತೆ

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿಗೆ ಸಿರಿಯಾ ಮಂತ್ರಿಯ ದೂರು

ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡ್‌ರಿಗೆ ಸಿರಿಯದ ವಿದೇಶಾಂಗ ಮಂತ್ರಿ ಸಲಾ ಬಿತರ್‌ರವರು ತಂತಿಯನ್ನು ಕಳುಹಿಸಿ, ಸ್ವರಾಷ್ಟ್ರದ ಮೇಲೆ ಸಶಸ್ತ್ರ ಆಕ್ರಮಣ ನಡೆಸಲು ಬ್ರಿಟನ್, ಫ್ರಾನ್ಸ್, ಇಸ್ರೇಲ್, ಟರ್ಕಿ ಮತ್ತು ಇತರ ರಾಷ್ಟ್ರಗಳವರು ಸಿದ್ಧತೆ ಮಾಡುತ್ತಿರುವುದಾಗಿ ತಿಳಿಸುತ್ತಾರೆ. ಸಿರಿಯದ ಸ್ವಾತಂತ್ರ್ಯ ಮತ್ತು ಅಸ್ತಿತ್ವಕ್ಕೆ ಬೆದರಿಕೆಯುಂಟಾಗುತ್ತಿದೆಯೆಂದು ತಂತಿಯು ತಿಳಿಸಿದೆ. ಸಿರಿಯಾ ಜೋರ್ಡಾನ್-ಇಸ್ರೇಲಿ ಗಡಿ ಸಾಲಿನ ಹಿಂದೆ ಇಸ್ರೇಲಿ ಸೈನ್ಯಗಳು ಜಮಾಯಿಸುತ್ತಿವೆಯೆಂದೂ, ಟರ್ಕಿಯ ರಾಜಕಾರಣವೇತ್ತರು ನಡೆಸುತ್ತಿರುವ ಪ್ರಚಾರಗಳು ಸಿರಿಯದ ಅಸ್ತಿತ್ವಕ್ಕೆ ಧಕ್ಕೆ ತರುವಂತಹವೆಂದೂ ಸಿರಿಯಾ ಮಂತ್ರಿಯು ಸೂಚಿಸಿರುವರು

ಕೃತಕ ರೇಷ್ಮೆ, ಮೋಟಾರು ಮತ್ತು ಮೋಟಾರುಸೈಕಲ್ಲಿನ ಮೇಲೆ ತೆರಿಗೆ

ಕೇಂದ್ರ ಸರ್ಕಾರದವರು ವಿಧಿಸಲಿರುವ ಹೊಸ ತೆರಿಗೆಗಳ ಪೈಕಿ ಕೃತಕ ರೇಷ್ಮೆ ಮೇಲೆ ಹೆಚ್ಚಿನ [illegible] ವಿಧಿಸಲಾಗುವುದು. ಪೌಂಡಿಗೆ ೩ [illegible] ನಂತೆ ಅವುದು ಸುಂಕ ಹಾಕಿದರೂ, ಸಧ್ಯ [illegible] ಅದು ೧೦ ಅಥವಾ ೨ ರೂ ಆಗುವುದು. [illegible] ೧೬೦ ಲಕ್ಷ ರೂ ವರಮಾನದ ನಿರೀಕ್ಷೆಯಿದೆ. ಸ್ವದೇಶೀಯವಾದ ಕೃತಕ ರೇಷ್ಮೆ ಮೇಲೆ [illegible] ಸುಂಕವನ್ನು ಪೌಂಡಿಗೆ ೧॥ ರೂ ನಂತೆ [illegible] ವಿಧಿಸಲಾಗುವುದು. ಇದರಿಂ ೭೦ ಲಕ್ಷ ರೂ ಬರಲಿದೆ

ಹೆಚ್ಚು ವೆಚ್ಚ ಮಾಡಬೇಕಾದ ಮೋಟಾರುಗಳಿಗೆ ೩,೦೦೦ ರೂ ಸುಂಕವನ್ನು ವಿಧಿಸಲು ಕೇಂದ್ರ ಮಂತ್ರಿಯವರು ಆಲೋಚಿಸಿದ್ದಾರೆ. ಟ್ರಕ್ಕು ಮತ್ತು ಸಣ್ಣ ಕಾರುಗಳಿಗೆ ಅದನ್ನು ವಿಧಿಸುವದಿಲ್ಲ. ಇದರಿಂದ ೮೦ ಲಕ್ಷ ರೂ ವರಮಾನ [illegible]

ಮೋಟಾರು ಸೈಕಲ್, ಸ್ಕೂಟರುಗಳು ಮತ್ತು [illegible] ಗಳ ಮೇಲೆ ವಿಧಿಸಲಾಗುವ ಹೆಚ್ಚಿನ [illegible] ಯಿಂದ ೫೦ ಲಕ್ಷ ರೂ ವರಮಾನದ ನಿರೀಕ್ಷೆಯಿದೆ. ಇಲ್ಲದೆ ವಿದೇಶೀ ಸುಂಕಗಳ ಮೇಲೆ ೨೦ ರೂ ಗೆ ೨ ಆಣೆಯಿಂದ ೧೦ ರೂ ಗೆ [illegible] ತೆರಿಗೆಯನ್ನು ಹೆಚ್ಚಿಸಲಾಗುವುದು

ಉಪನ್ಯಾಸ

ಯುವರಾಜಾ ಕಾಲೇಜು ತೆಲುಗು ಸಂಘದ [illegible] ಯದಲ್ಲಿ ನಾಳೆ ಸಂಜೆ ೫ ಗಂಟೆಗೆ, ಮಹಾರಾಜಾ ಕಾಲೇಜಿನ ತೆಲುಗು ಪ್ರಾಧ್ಯಾಪಕರಾದ [illegible] ಸುಬ್ಬರಾಮಪ್ಪನವರು ತೆಲುಗು ಮತ್ತು ಕನ್ನಡ ಭಾಷೆಗಳಲ್ಲಿ ಪರಸ್ಪರ ಪ್ರಭಾವ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ಶ್ರೀ [illegible] ಕಾಮೇಶ್ವರಮ್ಮ [illegible] ಅಧ್ಯಕ್ಷತೆ ವಹಿಸುವರು

ಹಂಗೇರಿ ಪ್ರಶ್ನೆ ಬಗ್ಗೆ ನೆಹರೂ ಚೌ ಎನ್ ಲೈರವರ ಭಿನ್ನಮತ

ಚೀಣದ ಪ್ರಧಾನಿ ಚೌ ಎನ್ ಲೈಯವರು ನೆನ್ನೆ ರಾತ್ರಿ ಪ್ರಧಾನಿ ನೆಹರೂರವರೊಡನೆ ಸಂಭಾಷಣೆಯನ್ನು ಮುಗಿಸಿಕೊಂಡು ನೆನ್ನೆ ಪ್ರವಾಸ ನಗರಾಭಿಮುಖವಾಗಿ ತೆರಳಿದರು. ದೆಹಲಿ ಬಿಡುವ ಮುಂಚೆ ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ಹಂಗೇರಿ ಬಗ್ಗೆ ಭಾರತ ಮತ್ತು ಚೀಣಾಗಳು ಒಂದೇ ಅಭಿಪ್ರಾಯವನ್ನು ಹೊಂದಿರಬೇಕೆಂಬ ಅವಶ್ಯಕತೆಯಿಲ್ಲವೆಂದೂ ಉಭಯರೂ ಸಮ್ಮತಿ ಇದ್ದ ಅಭಿಪ್ರಾಯಗಳನ್ನು ಹೊಂದಿರುವುದಾಗಿಯೂ ಚೌರವರು ಹೇಳಿದರು. ಅಮೆರಿಕದ ಪತ್ರಿಕಾ ಪ್ರತಿನಿಧಿಯೊಬ್ಬರು ಕೇಳಿದ ಪ್ರಶ್ನೆಗೆ ಉತ್ತರವಾಗಿ, ಅಮೆರಿಗರು ಚೀಣಾಕ್ಕೆ ಹಿಂತಿರುಗಿದರೆ ಯಾವ [illegible] ಕೊಡಬೇಕೆಂಬುದು ನಿರ್ಧರವಾಗಿಲ್ಲವೆಂದೂ, ಚಿಯಾಂಗ್‌ರಿಂದ ಚೀಣಾ ಸರ್ಕಾರದ ಸೂಚನೆಗೆ ಉತ್ತರ ಬಂದಿಲ್ಲವೆಂದೂ ಹೇಳಿದರು. ಅಮೆರಿಕದ ಪ್ರಜೆಗಳು ಉತ್ತಮ ರೀತಿಯಲ್ಲಿ ನಡೆದುಕೊಂಡರೆ ಚೀಣಾ ಸರ್ಕಾರದವರು ಅವರುಗಳನ್ನು ಬಿಡುಗಡೆ ಮಾಡಬಹುದೆಂದೂ ಸೂಚಿಸಿದರು

ಅಲ್ಜೀರಿಯದಲ್ಲಿ ಸಾಮೂಹಿಕ ಬಂಧನಗಳು

ಯೂರೋಪಿನಲ್ಲಿರುವ ಅತ್ಯಂತ [illegible] ಪ್ರದೇಶವಾದ ಅಲ್ಜೀರಿಯದಲ್ಲಿ ಅರಬರಿಗೂ, ಪೋಲೀಸರಿಗೂ ಘರ್ಷಣೆ ನಡೆದು, ಸಾಮೂಹಿಕ ದಸ್ತಗಿರಿಗಳು ಆಗಿವೆಯೆಂದೂ, ನಾಡಿನಲ್ಲಿ ವಿಶೇಷ ಅಶಾಂತಿ ಉಂಟಾಗಿರುವುದಾಗಿಯೂ ವರದಿಯಾಗಿದೆ. ಓರಾನಾದಲ್ಲಿ ಪೋಲೀಸರು ಗುಂಡು ಹಾರಿಸಿದಾಗ ೨೦ ಮಂದಿಗಿಂತ ಹೆಚ್ಚು ಜನರು ಮಡಿದರೆಂದು ಹೇಳಲಾಗಿದೆ.

ಜಿಲ್ಲಾ ಮತ್ತು ನಗರ ಕಾಂಗ್ರೆಸ್ ಸದಸ್ಯರ ಸಭೆ

ನಗರದಲ್ಲಿ ಈ ತಿಂಗಳು ೧೫ ಮತ್ತು ೧೬ರಂದು ಸೇರಲಿರುವ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನದ ಸಂಬಂಧವಾದ ಪೂರ್ವಭಾವಿ ಕೆಲಸಗಳ ಪರಿಶೀಲನೆಗಾಗಿ ನಾಳೆ ಮಧ್ಯಾಹ್ನ ೩॥ ಗಂಟೆಗೆ ಜಿಲ್ಲಾ ಕಾಂಗ್ರೆಸ್ ಕಾರ್ಯಾಲಯದಲ್ಲಿ ಜಿಲ್ಲಾ ಮತ್ತು ನಗರ ಕಾಂಗ್ರೆಸ್ ಸದಸ್ಯರ ಸಭೆಯು ನಡೆಯುವುದು. ಸದಸ್ಯರುಗಳು ಇದನ್ನೇ ಆಹ್ವಾನವೆಂದು ಭಾವಿಸಿ ಸಭೆಗೆ ಬರಬೇಕೆಂದು ಕೋರಲಾಗಿದೆ. ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸಲು ಒಪ್ಪಿರುವರು

ಮೂಕ ಅರ್ಜಿಗಳಿಗೆ ಸರ್ಕಾರ ಗಮನ ಕೊಡುವುದಿಲ್ಲ

ಸರ್ಕಾರಿ ನೌಕರರು ಮತ್ತು ಅಧಿಕಾರಿಗಳ ಮೇಲೆ ಆಪಾದನೆ ಮಾಡಿ ಬರುವ ಮೂಕ ಅರ್ಜಿ ಅಥವಾ ತಂತಿಗಳನ್ನು ಗಮನಕ್ಕೆ ತೆಗೆದುಕೊಳ್ಳುವುದಿಲ್ಲವೆಂದು ಸರ್ಕಾರದ ಪ್ರಕಟಣೆಯೊಂದು ತಿಳಿಸಿದೆ. ಯಾವ ನೌಕರನ ಮೇಲಾದರೂ ದೂರನ್ನು ಹೇಳಲು ಸಾರ್ವಜನಿಕರು ಮಂತ್ರಿಗಳ ಬಳಿ ಹೋಗಬಹುದೆಂದೂ, ಆ ಬಗ್ಗೆ ತನಿಖೆ ನಡೆದರೆ ಅದರಲ್ಲಿ ಸಾಕ್ಷ್ಯ ನೀಡಲು ಅವರು ಸಿದ್ಧವಾಗಿರಬೇಕೆಂದೂ ತಿಳಿಸಲಾಗಿದೆ

ಮುಸ್ಲಿಮರು ಪ್ರತ್ಯೇಕ ರಾಜಕೀಯ ಪಕ್ಷ ಕಟ್ಟಬಾರದು

ಸಂಸ್ಥಾನದ ಮುಸ್ಲಿಮರ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

(ಸ್ವಂ ವ. ಪೋ) ಬೆಂಗಳೂರು ೨

ಸಂಸ್ಥಾನದ ಮುಸ್ಲಿಮರ ಎರಡು ದಿನಗಳ ಸಮ್ಮೇಳನವು ಇಂದು ಇಲ್ಲಿ ಮಾಜಿ ಮಂತ್ರಿ ಶ್ರೀ ಮಹಮೂದ್ ಶರೀಫ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು. ಅವರು ಭಾಷಣ ಮಾಡಿ ವಿಶಾಲ ಮೈಸೂರಿನ ರಚನೆ ಬಗ್ಗೆ ಸಂತೋಷವನ್ನು ವ್ಯಕ್ತಪಡಿಸಿ ಹೊಸ ಪ್ರಾಂತದ ಅಭಿವೃದ್ಧಿಗಾಗಿ ಮುಸ್ಲಿಮರು ಇತರ ಬಹು ಸಂಖ್ಯಾತ ಕೋಮು [illegible] ಸಹಕರಿಸಿ ಎಲ್ಲ ವಿಧವಾದ ತ್ಯಾಗಗಳನ್ನೂ ಮಾಡುವರೆಂಬುದನ್ನು ತೋರಿಸಲು ಸಿದ್ಧರಾಗಿರುವರೆಂದೂ, ಆದರೆ ಹಿಂದೆ ಏಳು ಲಕ್ಷವಿದ್ದು ಈಗ ೧೫ ಲಕ್ಷಕ್ಕೆ ಏರಿರುವ ಮುಸ್ಲಿಂ ಜನಾಂಗದವರಿಗೆ ನಾನಾ ಕ್ಷೇತ್ರಗಳಲ್ಲಿ ಸರಿಯಾದ ಪ್ರಾತಿನಿಧ್ಯಗಳು ದೊರಕದೆ ನಿರಾಶೆಗೊಂಡಿರುವರೆಂದೂ, ಈ ಕೊರತೆಯನ್ನು ನಿವಾರಿಸಿ ಅವರಿಗೆ ಸೂಕ್ತ ಸ್ಥಾನಮಾನಗಳನ್ನು ಕೊಡಬೇಕೆಂದೂ ತಿಳಿಸಿದರು

ಮುಂದುವರಿದು, ಮುಸ್ಲಿಮರು ದೇಶದಲ್ಲಿ ಪ್ರತ್ಯೇಕ ರಾಜಕೀಯ ಪಕ್ಷವನ್ನು ರಚಿಸಿ ಅದನ್ನು ನಿರ್ವಹಿಸುವುದು ಯುಕ್ತವಲ್ಲವೆಂದು ಅವರು ಹೇಳಿದರು. ಪ್ರಧಾನಿ ನೆಹರೂರವರ ವಿದೇಶಾಂಗ ನೀತಿಯನ್ನು ಅವರು ಪುರಸ್ಕರಿಸಿದರು

ಸರ್ ಮಿರ್ಜಾ ಇಸ್ಮಾಯಿಲ್ ಸಂದೇಶ

ಸಮ್ಮೇಳನಕ್ಕೆ ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮಾಯಿಲ್ ಸಂದೇಶ ಕಳುಹಿಸಿ, ಭಾರತೀಯ ಮುಸ್ಲಿಮರು ತಮ್ಮ ಮತ್ತು ನಾಡಿನ ಹಿತದೃಷ್ಟಿಯಿಂದ ಇತರ ಕೋಮಿನವರೊಡನೆ ಪೂರ್ಣವಾಗಿ ಸಹಕರಿಸಬೇಕೆಂದು ಸೂಚಿಸುತ್ತಾ ಮುಸ್ಲಿಮರ ಪ್ರತ್ಯೇಕ ರಾಜಕೀಯ ಸಂಸ್ಥೆಯು ಇರುವುದು ಸರಿಯಲ್ಲವೆಂಬುದು ತಮ್ಮ ದೃಢ ಅಭಿಪ್ರಾಯವೆಂದು ಅವರು ತಿಳಿಸಿದ್ದಾರೆ. ತಮ್ಮ ಸಾಮಾಜಿಕ ವಿದ್ಯಾಭ್ಯಾಸ ಮುಂತಾದ ಹಿತ ಸಾಧನೆಗಾಗಿ ಮುಸ್ಲಿಮರು ಪ್ರತ್ಯೇಕ ಸಂಸ್ಥೆಗಳನ್ನು ಹೊಂದಬಹುದೆಂದು ಅಭಿಪ್ರಾಯಪಟ್ಟಿರುವರು. ಆದರೆ ರಾಜಕೀಯದಲ್ಲಿ ಮಾತ್ರ ಇತರರೊಡನೆ ಸೇರಿ ಕೆಲಸ ಮಾಡಬೇಕೆಂದೂ, ಪ್ರತ್ಯೇಕವಾಗಿರಬಾರದೆಂದೂ ಅವರು ಹೇಳಿರುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಿತಾರ್. ೭-೧೫ ಕೆ ಬಸವರಾಜ್ ಅವರಿಂದ-ದೇವರನಾಮ. ೭-೩೦ ಗಾನವಿಹಾರ ೮-೧೫ ಉದಯ ಸಂಗೀತ ಮಧ್ಯಾಹ್ನ ೧೨ ಕ್ಕೆ [illegible] ಸಂಗೀತ. ೧೨-೩೦ ಪಿಟೀಲುವಾದನ ೧ [illegible], ೧-೫೦ ಸಿತಾರ್ ೨-೧೫ ಪ್ರೌಢ ಶಾಲೆಗಳಿಗಾಗಿ, ಸಂಜೆ ೫-೩೦ [illegible] ಎಸ್ ರಾಮಕೃಷ್ಣ ಪಿಟೀಲುವಾದನ [illegible] ೬-೨೦ ಜಾನಪದಗೀತೆ ೭-೨೦ ಮತ್ತು ೮ [illegible] ಹಿಂದೀ [illegible] ೮-೬ ಕನ್ನಡ ವಚನ. [illegible] ಶ್ರೀ [illegible] ೯-೩೦ [illegible] ೯-೧೫ ಭಾಷಣ, ೯-೩೦ ಕಥಾ ಕಾಲಕ್ಷೇಪ.

ಲಿಂಗನಮಕ್ಕಿಯಲ್ಲಿ ಶರಾವತಿ ಅಣೆಕಟ್ಟಿನ ನಿರ್ಮಾಣ

ಬೆಂಗಳೂರು ೨

ಶರಾವತಿ ನದಿಯ ಮೇಲೆ ೪೦ ಕೋಟಿ ರೂ. ವೆಚ್ಚದಿಂದ ನಿರ್ಮಿಸಲಾಗುವ ದೊಡ್ಡದಾದ ವಿದ್ಯುಚ್ಛಕ್ತಿ ಯೋಜನೆಯನ್ನು ಲಿಂಗನಮಕ್ಕಿ ಎಂಬಲ್ಲಿ ಕಟ್ಟಲಾಗುವುದೆಂದು ಲೋಕೋಪಯೋಗಿ ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ನೆನ್ನೆ ತಿಳಿಸಿದರು.

ಅಲ್ಲಿ ೧,೪೦,೦೦೦ ಕಿಲೋವಾಟ್ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡಬಹುದೆಂದೂ, ಅದರ ಮೊದಲನೆ ಭಾಗವು ೧೯೬೧-೬೨ ರಲ್ಲಿ ಪೂರ್ತಿಯಾಗುವುದೆಂದೂ ಅವರು ಹೇಳಿದರು. ಅಲ್ಲಿ ವಿದ್ಯುಚ್ಛಕ್ತಿಯನ್ನು [illegible] ಶಕ್ತಿಯು ಮೇಲೆ [illegible] ಪ್ರಮಾಣದಲ್ಲಿ ಉತ್ಪತ್ತಿ ಮಾಡಬಹುದೆಂದೂ, ಯೋಜನೆಯು ಪೂರ್ಣವಾಗಿ ಕಾರ್ಯಗತವಾದ ಮೇಲೆ ೭,೧೦,೦೦೦ ಕಿಲೋವಾಟ್ ವಿದ್ಯುಚ್ಛಕ್ತಿ ತಯಾರಾಗಬಹುದೆಂದೂ ಅವರು ತಿಳಿಸಿದರು. ಜೋಗದ ಮೇಲ್ಗಡೆ ೫ ಮೈಲಿ ದೂರದಲ್ಲಿ ೧೬೫ ಅಡಿ ಎತ್ತರದ ಅಣೆಕಟ್ಟನ್ನು ನಿರ್ಮಿಸಿ ೧೫,೦೦೦ ಕೋಟಿ ಘನ ಅಡಿ ಜಲವನ್ನು ಅಲ್ಲಿ ಶೇಖರಿಸಬಹುದು

ಹಂಗೇರಿಗೆ ವಿಶ್ವಸಂಸ್ಥೆ ವೀಕ್ಷಕರನ್ನು ಕಳುಹುವ ಪ್ರಯತ್ನ ವಿಫಲ

ಹಂಗೇರಿಯ ಪರಿಸ್ಥಿತಿ ಬಗ್ಗೆ ಪರಿಶೀಲನೆ ನಡೆಸಲು ವಿಶ್ವಸಂಸ್ಥೆಯ ವೀಕ್ಷಕರ ತಂಡವನ್ನು ಕಳುಹುವ ಬಗ್ಗೆ ನಡೆಸಿರುವ ಪ್ರಯತ್ನವು ವಿಫಲವಾಗಿರುವುದೆಂದು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡ್‌ರವರು ವರದಿ ಮಾಡಿದರು. ಸಂಸ್ಥೆಯ ೭೯ ರಾಷ್ಟ್ರಗಳು ಮಾಡಿರುವ ನಿರ್ಧಾರದ ಕಾಲಕ್ಕಾಗಿ [illegible] ಬಗ್ಗೆ [illegible] ಭಾರತ, ಬ್ರಿಟನ್, ಫ್ರಾನ್ಸ್ ಮತ್ತು ಇತರ ರಾಷ್ಟ್ರಗಳೊಡನೆ ಅಮೆರಿಕವು ಸಮಾಲೋಚನೆಯನ್ನು ನಡೆಸಿತು. ಹಂಗೇರಿ ನಗರದ ಸಂಸ್ಥೆಯ ವೀಕ್ಷಕ ಮಂಡಲಿಯನ್ನು ಕಳುಹುವಂತೆ ಏರ್ಪಾಟು ಮಾಡುವ ಬಗ್ಗೆ ಅಮೆರಿಕವು ನಿರ್ಣಯವೊಂದನ್ನು ತರಲಿದೆ

ಹಂಗೇರಿಯಲ್ಲಿ ರಷ್ಯಾ ಸೈನಿಕರು ೨೫,೦೦೦ [illegible] ಕೊಂದು, ೩ ಲಕ್ಷ ಮಂದಿ ಮತ್ತು ಗಾಯಗೊಳಿಸಿ, ೧ ಲಕ್ಷ ಜನರನ್ನು ಆಸ್ಟ್ರಿಯಾಕ್ಕೆ ನಿರಾಶ್ರಿತರನ್ನಾಗಿ ಕಳುಹಿಸಿರುವುದಾಗಿ [illegible] ಪ್ರತಿನಿಧಿ [illegible] ತಿಳಿಸಿದ್ದಾರೆ.

ಕಾಲೇಜಿನ ಪಾರ್ಲಿಮೆಂಟರಿ ಕ್ಲಬ್ಬಿನ ಆರಂಭ ಭಾಷಣ

ನಗರದ ಮಹಾರಾಜಾ ಕಾಲೇಜಿನ ಪಾರ್ಲಿಮೆಂಟರಿ ಕ್ಲಬ್ಬಿನ ಆರಂಭ ಭಾಷಣವನ್ನು ಶಾಸನಸಭಾಧ್ಯಕ್ಷ ಶ್ರೀ ಟಿ. ಸುಬ್ರಹ್ಮಣ್ಯರವರು ನಾಳೆ ಸಂಜೆ ೫॥ ಗಂಟೆಗೆ ಮಾಡುವರು. ಪ್ರಿನ್ಸಿಪಾಲರಾದ ಶ್ರೀ ಸಿ. ಡಿ. ನರಸಿಂಹಯ್ಯನವರು ಅಧ್ಯಕ್ಷತೆ ವಹಿಸುವರು

ವಾರ ಭವಿಷ್ಯ

ತಾ|| ೨-೧೨-೫೬ ರಿಂದ ೮-೧೨-೫೬ ರವರೆಗೆ

ಮೇಷ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಪ್ರವಾಸದಲ್ಲಿ ತೊಂದರೆ ಉದ್ಯೋಗದಲ್ಲಿ ಕಿರುಕುಳ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ

ವೃಷಭ — ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಶುಭ ಕಾರ್ಯಗಳು ಜರುಗುವುವು

ಮಿಥುನ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸ ಹಿತಕರವಾಗಿರುವುದು ಆಪ್ತರ ಭೇಟಿ

ಕರ್ಕ — ಆರೋಗ್ಯದ ಬಗ್ಗೆ ಎಚ್ಚರಿಕೆಯಿಂದಿರಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಕಿರುಕುಳ ಪ್ರವಾಸದಲ್ಲಿ ಅಡ್ಡಿ

ಸಿಂಹ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ಸಮಸ್ಯೆ ಪ್ರವಾಸ ಕೈಗೊಳ್ಳಬೇಡಿ

ಕನ್ಯಾ — ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ಸಮರ್ಪಕ ಶುಭ ಕಾರ್ಯಗಳು ಜರುಗುವುವು ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ

ತುಲಾ — ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಸಮರ್ಪಕ ಮಿತ್ರರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ

ವೃಶ್ಚಿಕ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಕೈಗೊಂಡ ಕಾರ್ಯಗಳಲ್ಲಿ ಜಯ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗಿರುವುದು

ಧನು — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಾಧಾರಣ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ ವ್ಯಾಪಾರವ್ಯವಹಾರಗಳಲ್ಲಿ ಅಲ್ಪ ಪ್ರಗತಿ ಉದ್ಯೋಗದಲ್ಲಿ ಸಾಧಾರಣ ಪರಿಸ್ಥಿತಿ

ಮಕರ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಸುಖಕರ ಪ್ರವಾಸ

ಕುಂಭ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅಸಮರ್ಪಕ ಕೈಗೊಂಡ ಕಾರ್ಯಗಳಿಗೆ ವಿಘ್ನ ವ್ಯಾಪಾರ ವ್ಯವಹಾರಗಳಲ್ಲಿ ಅಡ್ಡಿ ನೌಕರಿಯಲ್ಲಿ ನಿರುತ್ಸಾಹ

ಮೀನ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ ಪ್ರವಾಸ ಸುಖಕರವಾಗಿರುವುದು

GLOBE TUTORIAL COLLEGE
(Sadvidya Patasala, Mysore)
Excellent Coaching for
Inter, P. C. M., Kan., Eng.
Classes between 7 30 & 10 30 A M

ದೇವತಾರ್ಚನೆಗೆ
ಮೈಸೂರು ಎಂ ಆರ್ ಚೆಟ್ಟಿಯವರ
ಸ್ಪೆಷಲ್ ಪ್ರೇಮಲೀಲಾ
ಅಗರಬತ್ತಿಗಳನ್ನೇ
ಉಪಯೋಗಿಸಿರಿ
ಪ್ರೇಮಲೀಲಾ ಅಗರಬತ್ತಿ ಫ್ಯಾಕ್ಟರಿ
ಮೈಸೂರು

ವೈದ್ಯರು ಸಾರ್ವಜನಿಕರೊಡನೆ ಸಂಪರ್ಕವನ್ನು ಬೆಳೆಸಬೇಕು

ವೈದ್ಯಾಧಿಕಾರಿಗಳ ಸಮ್ಮೇಳನದಲ್ಲಿ ಆರೋಗ್ಯ ಮಂತ್ರಿಗಳ ಸಲಹೆ

ಬೆಂಗಳೂರು ೧

ಇಲ್ಲಿ ನೆನ್ನೆ ಸೇರಿದ್ದ ಜಿಲ್ಲೆಗಳ ವೈದ್ಯ ಮತ್ತು ಆರೋಗ್ಯಾಧಿಕಾರಿಗಳ ಸಮ್ಮೇಳನದಲ್ಲಿ ಆರೋಗ್ಯ ಮಂತ್ರಿ ಶ್ರೀ ಎ ಬಿ ಶೆಟ್ಟಿಯವರು ಭಾಷಣ ಮಾಡಿ, ಆಸ್ಪತ್ರೆಗಳಲ್ಲಿ ದಕ್ಷತೆಯ ಜೊತೆಗೆ ಶುದ್ಧಭಾವ ಮತ್ತು ನ್ಯಾಯ ರೀತಿಯ ಆಡಳಿತ ನಿರ್ವಹಣೆಯು ಅತ್ಯವಶ್ಯಕವೆಂದು ಹೇಳಿದರು ವೈದ್ಯರು ಸಾರ್ವಜನಿಕರೊಡನೆ ಉತ್ತಮ ಸಂಬಂಧವನ್ನು ಕಲ್ಪಿಸಿಕೊಳ್ಳಬೇಕೆಂದು ಅವರು ಸೂಚಿಸಿದರು

ವೈದ್ಯರುಗಳ ಸಮಸ್ಯೆಗಳು ಬಹಳವಾಗಿದ್ದು, ಅನೇಕ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವುದರಿಂದ ತೃಪ್ತಿಕರವಾಗಿ ಕರ್ತವ್ಯ ಪಾಲಿಸಲು ವೈದ್ಯರು ಮತ್ತು ಸಹಾಯಕರುಗಳ ಅವಶ್ಯಕತೆಯು ಹೆಚ್ಚಾಗಿದೆಯೆಂದು ತಿಳಿಸಿದರು ಇಲ್ಲಿನ ಮೆಡಿಕಲ್ ಕಾಲೇಜು ಸ್ವಲ್ಪ ಮಟ್ಟಿಗೆ ಈ ಕೊರತೆಯನ್ನು ನಿವಾರಿಸುವುದಾಗಿಯೂ, ಮೈಸೂರಿನಲ್ಲಿರುವ ಆಯುರ್ವೇದ ಕಾಲೇಜಿನ ಪದವಿ ಹೆಚ್ಚಿಸುವ ಸಂದರ್ಭದಲ್ಲಿ ಅಲ್ಲಿಂದಲೂ ದೊರೆಯುವ [illegible] ವೈದ್ಯರ ಸೇವೆಯನ್ನು ಉಪಯೋಗಿಸಿಕೊಳ್ಳಬಹುದೆಂದೂ ಅವರು ನುಡಿದರು

ಆಸ್ಪತ್ರೆಗಳಲ್ಲಿ ಹೆಚ್ಚು ಜನ ರೋಗಿಗಳಿರುವುದನ್ನು ಪ್ರಸ್ತಾಪಿಸಿ ಅದರಿಂದ ಚಿಕಿತ್ಸೆ ಮತ್ತು ಶುಶ್ರೂಷೆಯ ಮಟ್ಟಕ್ಕೆ ಸ್ವಲ್ಪ ಲೋಪ ಬಂದಿರುವುದೆಂದೂ, ಈ ಬಗ್ಗೆ ನಡೆಸುತ್ತಿರಬೇಕಾದ ವಿಧಾನದ ಸಂಬಂಧವಾಗಿ ಶೀಘ್ರದಲ್ಲೇ ಸೂಚನೆಯೊಂದನ್ನು ಸರ್ಕಾರದವರು ಕಳುಹಿಸಲಿರುವರೆಂದೂ ಅವರು ಹೇಳಿದರು

ಮಾಜಿ ಮೈಸೂರು ರೆಸಿಡೆಂಟ್ ಬಾರ್ಟನ್ನರ ನಿಧನ

ಮೈಸೂರು ಮತ್ತು ಹೈದರಾಬಾದು ಸಂಸ್ಥಾನಗಳಲ್ಲಿ ಬ್ರಿಟಿಷ ರೆಸಿಡೆಂಟರಾಗಿದ್ದ ಸರ್ ವಿಲಿಯಂ ಬಾರ್ಟನ್ನರು ಕಳೆದ ಗುರುವಾರ ಇಂಗ್ಲೆಂಡಿನ ಸಸೆಕ್ಸ್ ನಗರದಲ್ಲಿ ನಿಧನ ಹೊಂದಿದರು

ಪಬ್ಲಿಕ್ ಸರ್ವೀಸ್ ಕಮಿಷನ್ನಿಗೆ ಮಲ್ಲಿಕಾರ್ಜುನಪ್ಪನವರ ರಾಜೀನಾಮೆ

ಮೈಸೂರು ಪಬ್ಲಿಕ್ ಸರ್ವೀಸ್ ಕಮಿಷನ್ನಿನ ಸದಸ್ಯರಾದ ಶ್ರೀ ಹೆಚ್ ಎಂ ಮಲ್ಲಿಕಾರ್ಜುನಪ್ಪನವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದರೆ ಗವರ್ನರರು ಅದನ್ನು ಸ್ವೀಕರಿಸಿದ್ದಾರೆ.

ಚಿನ್ನದ ಗಣಿ ಪ್ರದೇಶದಲ್ಲಿ ಸೀರಾ ಅಂಗಡಿಗಳು

ಕೋಲಾರದ ಚಿನ್ನದ ಗಣಿಗಳ ಪ್ರದೇಶದಲ್ಲಿ ಸೀರಾ ಅಂಗಡಿಗಳನ್ನು ತೆರೆಯಲು ಮೈಸೂರು ಸರ್ಕಾರದವರು ನಿರ್ಧರಿಸಿರುವರೆಂದು ತಿಳಿದುಬಂದಿದೆ

ಗಾಂಧಿ ವಿಚಾರ ವ್ಯಾಸಂಗ ಗೋಷ್ಠಿ

ನಗರದ ಕೃಷ್ಣವಿಲಾಸ ರಸ್ತೆಯಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಕಾರ್ಯಾಲಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಪ್ರಶ್ನೋತ್ತರ ಗೋಷ್ಠಿಯೊಂದು ನಡೆಯುವುದು ಶ್ರೀ ಎಸ್ ವಿ ಮಂಜುನಾಥರಾವರು ಉತ್ತರ ಕೊಡುವರು

Life Insurance Corporation of India
Unit Mys Govt Insurance
Dept P B

Application having been received for the issue of a Duplicate of policy No 469086 on the life of Jois Subbar[illegible], it is hereby notified that the Duplicate will be issued unless valid objection thereto is received by the undersigned within one month from this date

K V Krishnamurthy,
Asst Divisional Manager

Bangalore
30 11 56

Edited Printed and Published by A R Nagarajan at Sadhvi Press D Subbaiah Road, Mysore

ರಷ್ಯಾ ಕಮ್ಯೂನಿಸ್ಟರ ಅನುಕರಣಕ್ಕಾಗಿ ಪಶ್ಚಾತ್ತಾಪ

ಭಾರತದ ಕಮ್ಯೂನಿಸ್ಟ್ ಕಾರ್ಯದರ್ಶಿ ಅಜಯಘೋಷರ ಹೇಳಿಕೆ

[illegible] ಭಾರತದ ಕಮ್ಯೂನಿಸ್ಟ್ ಪಕ್ಷದ [illegible] ಹೇಳಿಕೆಗೆ, ಉತ್ತರವಾಗಿ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ ಅಜಯಘೋಷರು ಒಂದು ಹೇಳಿಕೆಯಿತ್ತು, ಹಿಂದೆ ಪಕ್ಷದಲ್ಲಿ [illegible] ಉತ್ತಮವೆಂದು ಭಾರತೀಯ ಕಮ್ಯೂನಿಸ್ಟರು [illegible] ಹೇಳಿದ್ದಾರೆ [illegible] ಮತ್ತು ಕಮ್ಯೂನಿಸ್ಟ್ [illegible] ಕಮ್ಯೂನಿಸ್ಟರು [illegible] ಕಮ್ಯೂನಿಸ್ಟರ [illegible] ಅವರು ಹೇಳಿದ್ದಾರೆ ಇದರಿಂದ ಕಮ್ಯೂನಿಸ್ಟ್ ಮತ್ತು [illegible] ಪ್ರಪಂಚದಲ್ಲಿರುವ ಕಮ್ಯೂನಿಸ್ಟ್ ಪಕ್ಷಗಳು ಪಕ್ಷದ [illegible] ಬೇಕೆಂದು [illegible] ಇಲ್ಲವೆಂದೂ ಅವರು ಸೂಚಿಸಿದ್ದಾರೆ

ಪೂರ್ಣವಾಗಿ ಕಾಶ್ಮೀರ ನುಂಗಲು ಭಾರತದ ಹವಣಿಕೆ

ವಿಶ್ವ ಸಂಸ್ಥೆಯಲ್ಲಿ ಪಾಕಿಸ್ತಾನದ ವಿದೇಶಾಂಗ ಮಂತ್ರಿಯ ಹೇಳಿಕೆ

ವಿಶ್ವ ಸಂಸ್ಥೆಯ ಸಾಧಾರಣ ಸಭೆಯಲ್ಲಿ ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರು ಭಾಷಣ ಮಾಡಿ, ಕಾಶ್ಮೀರವನ್ನು ಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಲು ಭಾರತವು ಹವಣಿಸುತ್ತಿರುವುದಾಗಿ ತಿಳಿಸಿದರು. ಭದ್ರತಾ ಸಮಿತಿ ಕೊಟ್ಟಿದ್ದ ಆದೇಶಗಳನ್ನು ಭಾರತವು ತಳ್ಳಿಹಾಕಿ ದಬ್ಬಾಳಿಕೆಯ ಆಡಳಿತದಲ್ಲಿ ಸಿಕ್ಕಿದ್ದ ಹಲವರನ್ನು ಸೆರೆಯಿಟ್ಟು, ರಾಜ್ಯಾಂಗ ಸಭೆಯನ್ನು ರಚಿಸಿದ್ದಿತೆಂದೂ ಅವರು ಹೇಳಿದರು

ಸಿವಿಲ್ ನ್ಯಾಯಾಧೀಶರ ವರ್ಗ

ನಗರದ ಹಂಗಾಮಿ ಸಿವಿಲ್ ನ್ಯಾಯಾಧೀಶರಾದ ಶ್ರೀ ಬಿ ತಿಮ್ಮಪ್ಪರಾಜ ಅರಸರನ್ನು ಬಳ್ಳಾರಿಗೆ ವರ್ಗಾಯಿಸಲಾಗಿದೆ ಅಲ್ಲಿದ್ದ ಸಿವಿಲ್ ನ್ಯಾಯಾಧೀಶರಾದ ಶ್ರೀ ಎ ಎಚ್ ಕೃಷ್ಣಮೂರ್ತಿಯವರನ್ನು ಮೈಸೂರಿಗೆ ವರ್ಗಾಯಿಸಲಾಗಿದೆ

SRI RAMA INSTITUTE OF COMMERCE
Narasimharaja Mohalla,
Mysore
Admissions received for Senior and Junior Type-writing and Shorthand For further particulars please contact —
S E SUBBA RAO,
Principal

ಹೋಟೇಲುಗಳಿಗೆ ಮಾತ್ರ
“ಹಿಂದೂಸ್ತಾನ” ಕಂಪೆನಿಯ ನಂಬರ 6 ಟೀಡಸ್ಟ್ [illegible] ಪೌಂಡ್ ಒಂದಕ್ಕೆ ರೂ 1 14 0 ಯಂತೆ [illegible] ಕೊಡುತ್ತೇವೆ ಇಂದೇ ಖರೀದಿ ಮಾಡಿರಿ
[illegible] ಅಂಡ್ ಕೋ ,
ಕೃಷ್ಣಾ ಟಿ ಡಿಪೋ ಪಕ್ಕದ,
ಹಳೇ ಬ್ಯಾಂಕ್ ರಸ್ತೆ ಮೈಸೂರು

ಇಂದೂರು ಕಾಂಗ್ರೆಸ್ ಅಧಿವೇಶನದ ಸಿದ್ಧತೆಗಳು

[illegible]

[illegible] ಸಮ್ಮೇಳನ

[illegible]

City Municipality,
Mysore, Dated 28-11-1956

Subject Quotations for the suppl
the following materials.

Quotations are invited
the supply of the mater
(noted below) so as to re
this office on or before
10th Dec 56

The quotations should
superscribed as "Quotati
for "

Failure to make suppl
within the specified time,
entail cancellation of t
orders and the purchases b
made at the risk of the
proved tenderer from ot
sources

(Sd.) A VISWANA
Municipal Commiss

Particulars	*Quantity requir*
1) ADV Tyres (Dunlop) 500x19	24
2) -do- Tubes	24
3) ADV Tyres (Dunlop) 800x19	4
4) -do- Tubes	4

VIDYA TUTORIAL COLLEGE,
(DALVOY HIGH SCHOOL BUILDINGS MYSORE)
Classes commenced in full swing
INTER B A, B Sc — *The best institute for tuiti*
Ist B E — *All Subjects - All Parts*
L C E L M E, L E E — *Physics & Mat*
Join at once — *Ladies also admitte*
Separate section formed in INTER, B A, B Sc, ENGLISH for college going students
Enquiries 5 30 to 8 30 P M

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[illegible] ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಟ : ೧೩] SADHVI : MONDAY 3—12—1956 ಮೈಸೂರು : ಸೋಮವಾರ ೩—೧೨—೧೯೫೬ [ಸಂಚಿಕೆ : ೩೩೦

ರಾಕಿನಲ್ಲಿ ಮಾರ್ಷಲ್ ಲಾ ; ಪಾರ್ಲಿಮೆಂಟಿನ ಸಸ್ಪೆಂಡು

ಗಾಣದ ಕೈಗಾರಿಕೆಗೆ ಸಕಲ ಧದ ಪ್ರೋತ್ಸಾಹ ಅಗತ್ಯ

ತ್ರಿಯಂಬಕ ಭಟ್ಟರ ಭಾಷಣ

ಮೈಸೂರು ೩

ನದ ಗಾಣದ ಎಣ್ಣೆ ಕೈಗಾರಿಕೆಗಾರರ ನನ್ನು ನೆನ್ನೆ ಲನುಮಯ್ಯನವರ ಶಾಲೆ ಡೆಯಿತು ಅನೇಕ ಜಿಲ್ಲೆಗಳಿಂದ ಪ್ರತಿನಿ ಬಂದಿದ್ದರು ವ್ಯವಸಾಯ ಮಂತ್ರಿ ಶ್ರೀ ರುದ್ರಪ್ಪನವರು ಅಧ್ಯಕ್ಷತೆ ವಹಿಸಿ ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗ ರು ಈ ಮಹೋತ್ಸವವನ್ನು ನೆರವೇರಿಸಿದರು ಆರ್ ಪದ್ಮರವರಿಂದ ಪ್ರಾರ್ಥನೆ ನಂತರ ಶ್ರೀ ಎ ದೇವರಾಜ್‌ರವರು ಸ್ವಾಗತ ಮಾಡಿದರು ಮುಖ್ಯ ಮಂತ್ರಿಗಳ ಮ ಬಿನ್ನವತ್ತಲೆಯನ್ನು ಸಮರ್ಪಿ ಗಾಣದ ಕೈಗಾರಿಕೆಯಲ್ಲಿ ತೊಡಗಿರುವ ಸಮಸ್ಯೆಗಳನ್ನು ನಿರೂಪಿಸಿ ಅವರ ಹಿ ಸರ್ಕಾರದವರಿಂದ ಸೂಕ್ತ ಪರಿಹಾರ ಮ ಕೋರಿದರು

ಸ್ ನಿಜಲಿಂಗಪ್ಪನವರು ತಮ್ಮ ಭಾಷ ಕೈಗಾರಿಕೆಗಳ ಅಭಿವೃದ್ಧಿಯು ಅಗ ಬೇಕಿದೆ ಗ್ರಾಮಾಂತರಗಳಲ್ಲಿ ಜ ಉದ್ಯೋಗಕ್ಕೆ ಮೂಲಾಧಾರವಾದ ಈ ಕೈ ಗೆ ಪ್ರೋತ್ಸಾಹ ಕೊಡುವುದು ಸರ್ಕಾ ವ್ಯವೆಂದು ಹೇಳಿ, ಇದಕ್ಕಾಗಿ ಸರ್ಕಾ ಎಲ್ಲಾ ನೆರವನ್ನೂ ನೀಡುವುದಾಗಿ ಭರ ತ್ತರು

ರು ತಮ್ಮ ಭಾಷಣದಲ್ಲಿ ಮಹಾತ್ಮಾ ವರ ಆದರ್ಶದಂತೆ ಗೃಹ ಕೈಗಾರಿಕೆಗ ಯಾವಕ್ಕೆ ತರುವುದು ಎಲ್ಲರ ಕರ್ತವ್ಯ ಡಿದರು ಗೃಹ ಕೈಗಾರಿಕೆಗಳಿಂದ ತ ವಸ್ತುಗಳನ್ನೇ ಸಾರ್ವಜನಿಕರು ಹೆ ಗಿ ಬಳಸಬೇಕೆಂದು ಅವರು ಕೋರಿ

ಕೇಂದ್ರ ಖಾದಿ ಮತ್ತು ಗ್ರಾಮ ಕೈ ಸಮಿತಿ ಸಂಚಾಲಕರಾದ ಶ್ರೀ ಶ್ರೀ ಭಟ್ಟರು ಸ್ವಾರಸ್ಯವಾದ ಭಾಷಣ ಮಾ ದ ಎಣ್ಣೆ ಕೈಗಾರಿಕೆಗೆ ಭವ್ಯವಾದ ಭವಿ ದು ನುಡಿದರು ಗೃಹ ಕೈಗಾರಿಕೆಗಳ ನೇ ಪಂಚವಾರ್ಷಿಕ ಯೋಜನೆಯ ಗಿಟ್ಟಿರುವ ೩೦ ಕೋಟಿ ರೂಪಾಯಿ ರ್ತಿಗಳವರು ಸದುಪಯೋಗಿಸಿ ತಮ್ಮ ಜೀವನವನ್ನು ಉತ್ತಮಗೊಳ ಸೂಚಿಸಿದರು ಗಿರಣಿಗಳಲ್ಲಿ ತಯಾ ಣ್ಣೆಯು ನಿಸ್ಸಾರವಾಗಿಯೂ ಮತ್ತು ಕರವಾಗಿಯೂ ಇರುವುದರಿಂದ ಆ ಕರಣಾಂಶಗಳನ್ನು ಶೇಖರಿಸಬೇಕಾಗುತ್ತ ಅವರು ಹೇಳಿ ಗಾಣದ ಎಣ್ಣೆಯು ರೀತಿಯಲ್ಲಿ ತಯಾರಾಗುವುದರಿಂದ ಪುಷ್ಟಿಕರವೂ ಆಗಿರುತ್ತದೆಂದು ವ್ಯವಸಾಯ ಪ್ರಧಾನವಾಗಿರುವ ನಮ್ಮ ಕರುಗಳಿಗೆ ಗಾಣದ ಹಿಂಡಿಯೇ ಉ ಪಯುಕ್ತವೆಂದೂ, ಗಿರಣಿಗಳ ಹಿಂಡಿ ಯೋಗ್ಯವಾದುದಲ್ಲವೆಂದೂ ಅವರು ತಿಳಿಸಿದರು ಮುಖ್ಯವಾಗಿ ಗಿರಣಿಗಳಲ್ಲಿ ಯಂತ್ರಗಳ ಮೂಲಕ ವಸ್ತುಗಳನ್ನು ಹೇರಳವಾಗಿ ತಯಾರಿಸುವುದರಿಂದ ಗ್ರಾಮಾಂತರಗಳಲ್ಲಿರುವ ನೂರಾರು ಬಡ ಕುಟುಂಬಗಳಿಗೆ ನಿರುದ್ಯೋಗವುಂಟಾಗುವುದೆಂದು ಅವರು ಹೇಳಿದರು ಆಹಾರ ಪದಾರ್ಥಗಳಿಗೆ ಉಪಯೋಗಿಸುವ ಎಣ್ಣೆಗಳು ಗಾಣದಿಂದಲೇ ತಯಾರಾಗುವಂತೆಯೂ, ಇತರ ಎಣ್ಣೆಗಳು ಗಿರಣಿಯಲ್ಲಿ ತಯಾರಾಗುವಂತೆಯೂ ಒಂದು ನಿಬಂಧನೆಯು ಏರ್ಪಾಡಾದರೆ ಇಂದಿನ ಸಮಸ್ಯೆಯು ಬಹುಮಟ್ಟಿಗೆ ಬಗೆಹರಿಯುವುದೆಂದು ಅವರು ಅಭಿಪ್ರಾಯಪಟ್ಟರು

ಸಮ್ಮೇಳನವು ನೆನ್ನೆ ಸಂಜೆ ಮತ್ತೆ ಸೇರಿ ಗಾಣದ ಕೈಗಾರಿಕೆಯ ಅಭಿವೃದ್ಧಿಗೆ ಅಗತ್ಯವಾದ ಹಲವಾರು ವಿಷಯಗಳನ್ನು ಚರ್ಚಿಸಿ ನಿರ್ಣಯಗಳನ್ನು ಮಾಡಲಾಯಿತು

ಇದೇ ಸಂಬಂಧದಲ್ಲಿ ವಾರ್ಧಾ ಗಾಣ, ನಾಡು ಗಾಣ ಮತ್ತು ಇತರರಿಂದ ತಯಾರಾದ ವಸ್ತುಗಳ ಪ್ರದರ್ಶನವನ್ನೂ ಸಹ ಏರ್ಪಡಿಸಲಾಗಿತ್ತು

ನೂತನ ಸಂಸ್ಥಾನದ ದ್ವಿತೀಯ ಯೋಜನೆ

ಒಟ್ಟು ೧೪೪॥ ಕೋಟಿ ರೂ ಕಾರ್ಯಕ್ರಮ

ಬೆಂಗಳೂರು ೨

ನೂತನ ಮೈಸೂರಿನ ದ್ವಿತೀಯ ಪಂಚ ವಾರ್ಷಿಕ ಯೋಜನೆಯು ೧೯೫೬-೫೭ ೧೯೬೦-೬೧ ರ [illegible] ಕಾರ್ಯಕ್ರಮ [illegible] ಸ್ಥೂಲವಾಗಿ ಪ್ರಕಟವಾಗಿದೆ [illegible] ಮುಂಚೆ ಇದ್ದ ಮೈಸೂರಿನ [illegible] ಕೋಟಿಯಾಗಿತ್ತು

ಹೊಸ ಅಂಕಿಅಂಶಗಳ ಪ್ರಕಾರ ವ್ಯವಸಾಯ ಮತ್ತು ಸಾಮೂಹಿಕ ಅಭಿವೃದ್ಧಿಗೆ [illegible] ಕೋಟಿ ರೂ, ನೀರಾವರಿ ಮತ್ತು ವಿದ್ಯುಚ್ಛಕ್ತಿಗೆ [illegible] ಕೋಟಿ ರೂ ಕೈಗಾರಿಕೆಗಳಿಗೆ [illegible] ಕೋಟಿ ರೂ ಸಂಚಾರ ಮತ್ತು ಸಾಗಾಣಿಕೆಗಳಿಗೆ [illegible] ಕೋಟಿ ರೂ ವಿದ್ಯಾಭ್ಯಾಸಕ್ಕೆ [illegible] ಕೋಟಿ ರೂ, ಸಾರ್ವಜನಿಕ ಆರೋಗ್ಯ [illegible] ಕೋಟಿ ರೂ ಗೃಹ ವಸತಿ ಮತ್ತು ಇತರ ಸಾಮಾಜಿಕ ಕೆಲಸಗಳಿಗೆ [illegible] ಕೋಟಿ ರೂ ಮತ್ತು ಇತರ ೭೦ ಲಕ್ಷ ರೂ ವೆಚ್ಚವಾಗುವುದು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಇಂದಿರಾ-ದೇವರ ನಾಮ. [illegible] ಮಧ್ಯಾಹ್ನ [illegible] ಸೂರ್ಯನಾರಾಯಣ [illegible] ವನಿತಾ ವಿಹಾರ [illegible] ರತ್ನಂ-ಸಂಗೀತ ಸಂಜೆ [illegible] ಸಂಗೀತ [illegible] ಸತ್ಯನಾರಾಯಣರಾವ್ [illegible] ಭಾರತೀಯ ಜನ ಜೀವನ-ಕನ್ನಡ ಭಾಷಣ [illegible] ರಂಗಭೂಮಿ-ಭಾಸ ನಾಟಕ ಚಿತ್ರ [illegible] ಗೀತ ಗೋವಿಂದ [illegible] ಕನ್ನಡ ಗೀತೆ [illegible] ಲಘು [illegible] ಚಿತ್ರ ಸಂಗೀತ.

ಇರಾಕಿನಲ್ಲಿ ಮಾರ್ಷಲ್ ಲಾ: ಪಾರ್ಲಿಮೆಂಟಿನ ಸಸ್ಪೆಂಡ್

ರಾಷ್ಟ್ರದ ನಾನಾ ನಗರಗಳಲ್ಲಿ ಘರ್ಷಣೆ ಮತ್ತು ಸಾವುನೋವು

ಇರಾಕಿನ ದೊರೆ ಫೈಸಲ್‌ರವರು ನೆನ್ನೆ ಇಲ್ಲಿನ ಪಾರ್ಲಿಮೆಂಟನ್ನು ಒಂದು ತಿಂಗಳ ಕಾಲ ಸಸ್ಪೆಂಡ್ ಮಾಡಿದರು ಅದಕ್ಕೆ ಮುಂಚೆ ಅವರು ಶಾಂತಿಯನ್ನುದ್ದೇಶಿಸಿ ಭಾಷಣ ಮಾಡಿ, ಇರಾಕು ಈಜಿಪ್ಟಿಗೆ ಪೂರ್ತಿಯೂ ಬೆಂಬಲ ನೀಡುವುದೆಂದು ತಿಳಿಸಿದರು ಇಸ್ರೇಲನ್ನು ವಿನಾಶ ಮಾಡುವುದೇ ಮಧ್ಯ ಪ್ರಾಚ್ಯದ ತೊಂದರೆಗಳಿಗೆ ಉತ್ತಮವಾದ ನಿವಾರಣೋಪಾಯವೆಂದು ಅವರು ಹೇಳಿದರು ಇರಾಕು ಅರಬ್ ಪ್ರಪಂಚದ ಯಾವ ಭಾಗದ ರಕ್ಷಣೆಗಾದರೂ ಬರುವುದೆಂದು ಅವರು ಸೂಚಿಸಿದರು ಅವಶ್ಯಕವಾದರೆ ಪಾರ್ಲಿಮೆಂಟ್ ಇರಾಕಿನ ಸೈನ್ಯಗಳನ್ನು ಕಳುಹಿಸಲಿರುವುದೆಂದೂ, ಇರಾಕಿನ ಆದ್ಯಂತ ಮಾರ್ಷಲ್ ಲಾ ವನ್ನು ಘೋಷಿಸಲಾಗಿದೆಯೆಂದೂ ತಿಳಿಸಿದರು

ಪಶ್ಚಿಮ ರಾಷ್ಟ್ರಗಳ ಕಡೆ ಇರಾಕು ವಾಲುತ್ತಿರುವುದನ್ನು ಪ್ರತಿಭಟಿಸಿ ದೇಶದ ನಾನಾ ಮುಖ್ಯ ನಗರಗಳಲ್ಲಿ ಮುಷ್ಕರ ಮತ್ತು ಗಲಭೆಗಳಾಗುತ್ತಿವೆ ಇರಾಕ್ ಎಣ್ಣೆ ಕಂಪೆನಿಯು ಪೈಪ್‌ಲೈನನ್ನು ಸಿಡಿಸಿದಮೇಲೆ ಪಶ್ಚಿಮ ರಾಷ್ಟ್ರಗಳಿಗೆ ಇರಾಕಿನಿಂದ ಇಸ್ರೇಲ್ ಮೂಲಕ ಎಣ್ಣೆಯನ್ನು ಸರಬರಾಜು ಮಾಡುತ್ತಿರುವುದು ಶಕ್ತಿಯಾಗಿ ಗಲಭೆಗಳಾಗಿವೆ ನಜಾಫ್ ಎಂಬಲ್ಲಿ ಕಳೆದ ಎರಡು ದಿನಗಳಲ್ಲಿ ೧೪೦ ಮಂದಿ ಸತ್ತಿದ್ದು, ಅನೇಕರಿಗೆ ಗಾಯಗಳಾದುವೆಂದು ತಿಳಿಯಲಾಗಿದೆ ಸಾಮೂಹಿಕ ದಸ್ತಗಿರಿಗಳಾಗಿ, ಶಾಲಾ ಕಾಲೇಜುಗಳನ್ನು ಮುಚ್ಚಲಾಗಿದೆ. ಸಿವಿಲ್ ಅಧಿಕಾರಿಗಳ ಬೆಂಬಲಕ್ಕೆ ಸೈನ್ಯವನ್ನು ಕಳುಹಲಾಗಿದೆ ಪ್ರಧಾನಿ ನೂರಿ ಸೈಯದ್‌ರವರ ವಜಾ ಮಾಡುವಂತೆ ರಾಜಕೀಯ ಮುಖಂಡರು ದೊರೆಗೆ ಮನವಿ ಮಾಡಿದ್ದಾರೆ

ಕ್ರಿಕೆಟ್ ಪಂದ್ಯ

ರಾಜಧಾನಿಯ ಜಯಪಟಗಳವರಿಗೂ, ಎಸ್ ಆರ್ ಸಿ ಟೀಮಿನವರಿಗೂ ನೆನ್ನೆ ಕ್ರಿಕೆಟ್ ಪಂದ್ಯವು ನಡೆದು ಜಯಪಟಗಳವರು ೬೪ ರನ್ನುಗಳಿಂದ ಜಯಗಳಿಸಿದರು ಆ ಟೀಮಿನ ನಂಜುಡಯ್ಯನವರು ಉತ್ತಮವಾಗಿ ಬೌಲು ಮಾಡಿ ಕೇವಲ ೭ ರನ್ನುಗಳಿಗೆ ಆರು ವಿಕೆಟ್ಟುಗಳನ್ನು ತೆಗೆದುಕೊಂಡರು

ಕಪಿಲಾ ಗಿರಣಿ ಮುಷ್ಕರ

ನಂಜನಗೂಡು ೩.

ಮೊದಲೇ ನಿರೀಕ್ಷಿಸಿದಂತೆ ಇಲ್ಲಿನ ಕಪಿಲಾ ಟೆಕ್ಸ್ ಗಿರಣಿಯ ೧,೪೦೦ ಜನ ಕೆಲಸಗಾರರು ಕಳೆದ ಎರಡು ದಿನ [illegible] ಮುಷ್ಕರ ಹೂಡಿದ್ದಾರೆ ಅವರ ಬೇಡಿಕೆಗಳನ್ನು ಈಡೇರಿಸುವ [illegible] ಸಂಧಾನಗಳು ಮುಂದುವರಿಯುತ್ತಿವೆ ಒಂದೆರಡು ದಿನಗಳಲ್ಲಿ ಅವು ಯಶಸ್ವಿಯಾಗುವ ಸೂಚನೆಗಳಿವೆ

ಈಜಿಪ್ಟಿನಿಂದ ಬೇಗನೆ ಆಂಗ್ಲೋ-ಫ್ರೆಂಚ್ ಸೇನೆ ವಾಪಸು

ಈಜಿಪ್ಟಿನಿಂದ ತಮ್ಮ ಸೈನ್ಯಗಳನ್ನು ಬೇಗನೆ ವಾಪಸು ಕರೆಸಿಕೊಳ್ಳುವುದಾಗಿ ಬ್ರಿಟನ್ ಮತ್ತು ಫ್ರಾನ್ಸುಗಳು ಅಮೆರಿಕಕ್ಕೆ ಭರವಸೆಯಿತ್ತಿವೆ. ಇದೇ ಸಮಯದಲ್ಲಿ ಅಮೆರಿಕವು ಬ್ರಿಟನ್ ಮತ್ತು ಇತರ ಯೂರೋಪ್ ರಾಷ್ಟ್ರಗಳಿಗೆ ಎಣ್ಣೆ ಸರಬರಾಜಿನ ಭರವಸೆಯನ್ನು ಇತ್ತಿರುವುದು ಗಮನಾರ್ಹವಾಗಿದೆ.

ವಿಶ್ವಸಂಸ್ಥೆಯಲ್ಲಿ ಸಿರಿಯಾ ಆಪಾದನೆಯ ತಿರಸ್ಕಾರ

ತಮ್ಮ ಗಡಿಯಲ್ಲಿ ಇಸ್ರೇಲು ಸೈನ್ಯಗಳನ್ನು ಶೇಖರಿಸುತ್ತಿದೆಯೆಂದು ಸಿರಿಯಾ ಮಾಡಿದ ಆಪಾದನೆಯನ್ನು ನೆನ್ನೆ ವಿಶ್ವಸಂಸ್ಥೆಯು [illegible] ತಿರಸ್ಕರಿಸಿತು ಎರಡು ರಾಷ್ಟ್ರಗಳ ಗಡಿಯಲ್ಲಿ ವಿಶ್ವಸಂಸ್ಥೆ ವೀಕ್ಷಕರು ಗಸ್ತು ತಿರುಗಿ ಅಲ್ಲಿ ವಿಶೇಷವಾದ ಸೈನ್ಯ ಚಟುವಟಿಕೆಯಾಗುತ್ತಿಲ್ಲವೆಂದು ಸೂಚಿಸಿದ್ದರು

ಅಂತರ ರಾಷ್ಟ್ರೀಯ ಸಹಕಾರಿಗಳಿಗೆ ಮುಖ್ಯ ಮಂತ್ರಿಯವರ ಸತ್ಕಾರ

ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಆಶ್ರಯದಲ್ಲಿ ನಗರದಲ್ಲಿ ನಡೆಯುತ್ತಿರುವ ಸಹಕಾರ ಶಿಕ್ಷಣ ಕೇಂದ್ರದ ಸದಸ್ಯರ ಗೌರವಾರ್ಥವಾಗಿ ನೆನ್ನೆ ಸಂಜೆ ಸರ್ಕಾರಿ ಭವನದಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಒಂದು ಸತ್ಕಾರ ಕೂಟವನ್ನು ಏರ್ಪಡಿಸಿದ್ದರು ಅನೇಕ ಅಧಿಕಾರಿಗಳೂ, ಮಹನೀಯರೂ ಭಾಗವಹಿಸಿದ್ದರು ವಿವಿಧ ದೇಶಾಂಗಗಳ ಸಹಕಾರಿಗಳು ಮೈಸೂರು ನಗರದಲ್ಲಿ ಸೇರಿ ಅನೇಕ ಸಮಸ್ಯೆಗಳನ್ನು ಚರ್ಚಿಸುತ್ತಿರುವ ವಿಚಾರದಲ್ಲಿ ಮುಖ್ಯ ಮಂತ್ರಿಗಳು ಸಂತೋಷವನ್ನು ವ್ಯಕ್ತಪಡಿಸಿ, ಪಾಶ್ಚಾತ್ಯರು ವಿಜ್ಞಾನ ಸಂಶೋಧನೆಯಿಂದ ಕಂಡುಹಿಡಿಯುತ್ತಿರುವ ಶಸ್ತ್ರಾಸ್ತ್ರಗಳ ಮೇಲೆ ಸರಿಯಾದ ಹತೋಟಿಯನ್ನು ಇಟ್ಟುಕೊಳ್ಳುವಂತೆ ಪೌರ್ವಾತ್ಯರು ತಮ್ಮ ಪ್ರಭಾವವನ್ನು ಬೀರಬೇಕೆಂದು ಸೂಚಿಸಿದರು. ಭಾರತ ಸರ್ಕಾರದ ಸಹಕಾರ ಇಲಾಖಾಧಿಕಾರಿಗಳಾದ ಶ್ರೀ ಸೈದ್‌ರವರೂ ಮತ್ತು ಸಹಕಾರ ಶಿಕ್ಷಣ ಅಧಿಕಾರಿಗಳಾದ ಮಿ॥ ಹಾರ್ಪರ್‌ರವರೂ ಮಾತನಾಡಿ ಶಿಕ್ಷಣ ಶಿಬಿರಕ್ಕೆ ಮೈಸೂರು ಸರ್ಕಾರದವರು ಒದಗಿಸಿಕೊಟ್ಟಿರುವ ಸೌಲಭ್ಯಗಳಿಗಾಗಿ ಕೃತಜ್ಞತೆಯನ್ನು ಸೂಚಿಸಿದರು.

ಉಪನ್ಯಾಸ

ನಗರದ ಸಾರ್ವಜನಿಕ ಪುಸ್ತಕ ಭಂಡಾರದ ಆಶ್ರಯದಲ್ಲಿ ಏರ್ಪಟ್ಟಿರುವ ಸಾಪ್ತಾಹಿಕ ವಿದ್ಯಾಭ್ಯಾಸ ವಾರಾಚರಣೆಯ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮದ್ರಾಸಿನ ಯುನಿಸ್ ಪುಸ್ತಕ ಭಂಡಾರದ ಅ॥ ಡೈರೆಕ್ಟರ್ ಶ್ರೀ ಎಂ ಆರ್ ಸತ್ಯರಾವ್‌ರವರು ಸಾರ್ವಜನಿಕ ಪುಸ್ತಕ ಭಂಡಾರಗಳಲ್ಲಿ ವಯಸ್ಕರ ವಿದ್ಯಾಭ್ಯಾಸ ಚಟುವಟಿಕೆಗಳು ಎಂಬ ವಿಷಯವಾಗಿ ಉಪನ್ಯಾಸ ಮಾಡಲಿರುವರು.

ರೈಲ್ವೆ ಸ್ಟೇಷನ್ ಮಾಸ್ಟರುಗಳಿಂದ ಸಂಬಳದ ನಿರಾಕರಣೆ

ಮದ್ರಾಸಿನಲ್ಲಿ ಸೇರಿದ್ದ ಅಖಿಲ ಭಾರತ ರೈಲ್ವೆ ಸ್ಟೇಷನ್ ಮಾಸ್ಟರುಗಳ ಸಮ್ಮೇಳನದಲ್ಲಿ ಅವರುಗಳ ಬೇಡಿಕೆಗಳಿಗಾಗಿ ಮುಷ್ಕರ ಹೂಡುವುದು ನ್ಯಾಯವೆಂಬ ನಿರ್ಣಯವನ್ನು ಅಂಗೀಕರಿಸಲಾಯಿತು. ಆದರೆ ಸಧ್ಯದ ರಾಷ್ಟ್ರೀಯ ಮತ್ತು ಅಂತರ ರಾಷ್ಟ್ರೀಯ ಪರಿಸ್ಥಿತಿ ಮತ್ತು ರೈಲ್ವೆ ಸಚಿವರ ರಾಜೀನಾಮೆ ಪರಿಣಾಮವಾಗಿ ಸ್ಟೇಷನ್ ಮಾಸ್ಟರುಗಳು ಜನವರಿ ತಿಂಗಳ ಸಂಬಳವನ್ನು ಪಡೆಯಬಾರದೆಂದು ನಿರ್ಧರಿಸಲಾಯಿತು. ಬೇಡಿಕೆಗಳನ್ನು ಫೆಬ್ರವರಿ ಅಂತ್ಯದ ಒಳಗೆ ಸಲ್ಲಿಸದಿದ್ದರೆ ಮಾರ್ಚಿಯಲ್ಲಿ ಮುಷ್ಕರ ಹೂಡಲೇಬೇಕಾಗುವುದೆಂದೂ ನಿರ್ಧಾರವಾಯಿತು

ಬ್ರಿಟನ್-ಫ್ರಾನ್ಸುಗಳಿಗೆ ರಷ್ಯಾ ಎಣ್ಣೆ ಇಲ್ಲ

ಬ್ರಿಟನ್ ಮತ್ತು ಫ್ರಾನ್ಸುಗಳಿಗೆ ರಷ್ಯದ ಎಣ್ಣೆ ಮಾರಾಟ ಮಾಡುವ ಬಗ್ಗೆ ಸಂಧಾನ ನಡೆಯುತ್ತಿಲ್ಲವೆಂದು ಮಾಸ್ಕೋ ರೇಡಿಯೋ ತಿಳಿಸಿದೆ.

ಮಾಧ್ಯಮಿಕ ಶಾಲಾ ಕಟ್ಟಡಕ್ಕಾಗಿ ಉದಾರ ದಾನ

ಕೃಷ್ಣರಾಜನಗರ ತಾಲ್ಲೂಕು ಬ್ಯಾಡರಹಳ್ಳಿಗೆ ಕಳೆದ ಶುಕ್ರವಾರ ಎಕ್ಸಿಕ್ಯುಟಿವ್ ಇಂಜನಿಯರರು, ಅಸಿಸ್ಟೆಂಟ್ ಇಂಜನಿಯರ್ ಮತ್ತು ಅವರು ಲ್ಯಾಂಡ್ ಹೋಲ್ಡ್ ಭೇಟಿಯಿತ್ತು ಅಲ್ಲಿನ ಅಪ್ ಗ್ರೇಡ್ ಶಾಲೆಯನ್ನು ಸಂದರ್ಶಿಸಿದರು. ಮಾಧ್ಯಮಿಕ ಶಾಲಾ ಕಟ್ಟಡಕ್ಕಾಗಿ ಗ್ರಾಮದ ಶ್ರೀಗಳಾದ ಗೊಪ್ಪ ಬೋರೇಗೌಡರು ೨೫೦ ರೂ, ಡಿ ಕೃಷ್ಣೆ ಅರಸ್, ಛೇರ್ಮನ್ ಲಕ್ಕೇಗೌಡರು, ಪಟೇಲ್ ಸಿದ್ದೇಗೌಡರು, ಮುದ್ದೇಗೌಡರು ತಲಾ ೧೦೦ ರೂ, ಮೂಟೆ ಲಕ್ಕೇಗೌಡರು ೭೫ ರೂ, ಸಿ ಮರಿಗೌಡರು, ಪಡುವಾರಂಡೆ ಅರಸ್, ಹಾಪಲೇಗೌಡರು, ಸೋಮೇಗೌಡರು, ಮರಿಗೌಡರು ಮತ್ತು ಅರೇಕಲ್ ಕೊಪ್ಪಲು ಲಕ್ಷ್ಮಣರಾವ್ ಜಾಧವ್ ರವರು ತಲಾ ೫೦ ರೂ ಗಳನ್ನು ವಾಗ್ದಾನ ಮಾಡಿದರು

ಸಾಹಿತ್ಯ ಸಂಘದ ವಾರ್ಷಿಕೋತ್ಸವ

ಮರಿಮಲ್ಲಪ್ಪನವರ ಪ್ರೌಢಶಾಲೆಯ ಸಾಹಿತ್ಯ ಸಂಘದ ವಾರ್ಷಿಕೋತ್ಸವವು ಕಳೆದ ಬುಧವಾರ, ಮುಖ್ಯೋಪಾಧ್ಯಾಯರಾದ ಶ್ರೀ ಬಸವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ವಿದ್ಯಾರ್ಥಿ ಶ್ರೀ ಆರ್. ಎನ್. ತ್ಯಾಗರಾಜರವರಿಂದ ಪ್ರಾರ್ಥನೆ, ಕನ್ನಡ ಪಂಡಿತ ಶ್ರೀ ಹೆಚ್ ಎಂ ವೀರಭದ್ರಯ್ಯನವರಿಂದ ಸ್ವಾಗತ, ವಿದ್ಯಾರ್ಥಿ ಗೌರಮ್ಮ ನಾಗರಾಜ್‌ರವರಿಂದ ಜೈಮಿನಿ ಭಾರತದ ವಾಚನ ಮತ್ತು, ಕಾರ್ಯದರ್ಶಿ ಬಿ ಎಸ್ ಪಾರ್ಶ್ವನಾಥರಿಂದ ಸಂಘದ ವರದಿಗಳಾದನಂತರ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ತ ರಾ. ಸುಬ್ಬರಾಯರು ಭಾಷಣ ಮಾಡಿ, ಸಂಸ್ಕೃತ, ಕನ್ನಡ, ಹಿಂದಿ ಮತ್ತು ಉರ್ದು ಸಂಘಗಳು ಒಂದಾಗಿ "ಸಾಹಿತ್ಯ ಸಂಘ" ಎಂಬ ಹೆಸರಿನಿಂದ ಕಾರ್ಯಕ್ರಮಗಳನ್ನು ಮಾಡುತ್ತಿರುವುದು ಶ್ಲಾಘ್ಯವೆಂದು ತಿಳಿಸಿದರು. ಇದರಿಂದ ಭಾಷಾ ವೈಷಮ್ಯವು ದೂರವಾಗಿ ಸಾಹಿತ್ಯದ ಅಭಿರುಚಿಯು ಹೆಚ್ಚುವುದೆಂದು ಹೇಳಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಈ ವೈಜ್ಞಾನಿಕ ಯುಗದಲ್ಲಿ ಪಾಶ್ಚಾತ್ಯ ಶಿಕ್ಷಣ ಕ್ರಮದ ಕೆಲವು ಉತ್ತಮಾಂಶಗಳನ್ನು ನಾವು ಅನುಸರಿಸುವುದು ಅತ್ಯವಶ್ಯಕವೆಂದು ಅಭಿಪ್ರಾಯಪಟ್ಟರು. ಕಾರ್ಯದರ್ಶಿ ಶ್ರೀ ಬಿ. ಕೆ ಶ್ರೀವತ್ಸರಿಂದ ವಂದನಾರ್ಪಣೆಯಾದನಂತರ ವಿದ್ಯಾರ್ಥಿಗಳು 'ಮಾರನ್ನು ಕೇಳಿದರೆ [illegible]' ಎಂಬ ಪ್ರಹಸನವನ್ನು, ಉಪಾಧ್ಯಾಯವೃಂದದವರು '[illegible]' ಎಂಬ ಸಣ್ಣ ನಾಟಕವನ್ನೂ ಅಭಿನಯಿಸಿದರು

ಅಂಚೆ ಕದ್ದುದಕ್ಕಾಗಿ ಒಂದು ವರ್ಷ ಸಜಾ

ಬೆಂಗಳೂರು ಕಂಟೋನ್ಮೆಂಟಿನಲ್ಲಿರುವ ಶ್ರೀ ಕೆ ಎಸ್ ರಂಗಸ್ವಾಮಿಯವರ ಮನೆಗೆ [illegible] ಡಮ ಎರಡು ಬಿ ೭ ಪತ್ರಿಕೆಯನ್ನು ಕದ್ದನೆಂದ ಬಾಷಾ ಯುಸೂಫ್ ಸತ್ತಾರ್ ಎಂಬುವನಿಗೆ ಅಡಿಷನಲ್ ಮ್ಯಾಜಿಸ್ಟ್ರೇಟರು ಒಂದು ವರ್ಷ ಕಠಿಣ ಸಜಾ ವಿಧಿಸಿದ್ದಾರೆ.

ಬೆಳಗಾಂ ಪ್ರಶ್ನೆಯನ್ನು ಪುನಃ ಎತ್ತುವಂತಿಲ್ಲ

ಕಾಂಗ್ರೆಸ್ ಅಧ್ಯಕ್ಷ ಢೇಬರರ ಸ್ಪಷ್ಟೀಕರಣ

ಕರ್ನಾಟಕದ ಪ್ರವಾಸವನ್ನು ನಡೆಸಿ ವಾಪಸು ಹೊರಟ ಕಾಂಗ್ರೆಸ್ ಅಧ್ಯಕ್ಷ ಢೇಬರರಿಗೆ ಮೊನ್ನೆ ಬೆಳಗಾಂ ಪೌರಸಭಾ ಸದಸ್ಯರು ಮನವಿಯೊಂದನ್ನು ಸಲ್ಲಿಸಿ ಬೆಳಗಾಂ ಪ್ರಶ್ನೆಯನ್ನು ಎತ್ತಿದಾಗ, ಅದು ಅಂತಿಮವಾಗಿ ಇತ್ಯರ್ಥವಾಗಿರುವುದೆಂದೂ ಜೋನಲ್ ಕೌನ್ಸಿಲು ಅದನ್ನು ಪರಿಶೀಲಿಸುವಂತಿಲ್ಲವೆಂದೂ ಢೇಬರರು ತಿಳಿಸಿದರು

ಅಲಂಕಾರ ವಸ್ತು ಮತ್ತು ವಿದೇಶೀ ಮದ್ಯಗಳ ಮೇಲೆ ಹೆಚ್ಚಿನ ಸುಂಕ

ಕೇಂದ್ರ ಹಣಕಾಸಿನ ಮಂತ್ರಿ ಕೃಷ್ಣಮಾಚಾರಿಯವರು ಕಳೆದ ಶುಕ್ರವಾರ ಪ್ರಕಟಿಸಿದ ಹೊಸ ತೆರಿಗೆಗಳಲ್ಲಿ ಅಲಂಕಾರ ವಸ್ತುಗಳು ಮತ್ತು ವಿದೇಶೀ ಮಾದಕ ಪದಾರ್ಥಗಳ ಮೇಲಿನ ಸುಂಕವನ್ನು ಹೆಚ್ಚಿಸಲಾಗಿದೆ

ಹಿಂದಿ ಪರೀಕ್ಷೆಗಳಿಗೆ ಆವೇದನ ಪತ್ರ

ಬರುವ ಫೆಬ್ರವರಿ ತಿಂಗಳು ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರವೇಶಿಕಾ, ವಿಶಾರದ ಮತ್ತು ಪ್ರವೀಣ ಪರೀಕ್ಷೆಗಳಿಗೆ ಆವೇದನ ಪತ್ರಗಳನ್ನು ಸ್ವೀಕರಿಸಲು ಇದೇ ೩೦ರಂದು ಕೊನೆಯ ದಿನ. ವಿಳಂಬ ಶುಲ್ಕದೊಡನೆ ೧೫ನೇ ತಾರೀಕಿನವರೆಗೆ ಕೊಡಬಹುದು. ಪತ್ರಗಳು ಸಭೆಯ ಕಾರ್ಯಾಲಯದಲ್ಲಿ ದೊರೆಯುವುವು

ಮಹಾ ಚುನಾವಣೆಯಲ್ಲಿ ಜನತಾ ರಂಗದ ಪಾತ್ರ

ನಗರದಲ್ಲಿರುವ ಜನತಾ ರಂಗವು ಬರುವ ಮಹಾ ಚುನಾವಣೆಗಳಲ್ಲಿ ಪಾರ್ಲಿಮೆಂಟ್ ಮತ್ತು ವಿಧಾನ ಸಭೆಗಳಿಗೆ ತನ್ನ ಪರವಾಗಿ ಉಮೇದುವಾರರನ್ನು ನಿಲ್ಲಿಸುವುದೆಂದು ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ ಜಿ ಸ್ವಾಮಿದಾಸರು ಹಸ್ತಪತ್ರಿಕೆ ಮೂಲಕ ತಿಳಿಸಿರುತ್ತಾರೆ. ವ್ಯಕ್ತಿ, ಸಮಾಜ ಆರ್ಥಿಕ ಆಡಳಿತ ಮತ್ತು ರಾಜಕೀಯ ಪ್ರಗತಿಯ ಸಾಧನೆಯೇ ಪಕ್ಷದ ಗುರಿ. ಅದಕ್ಕಾಗಿ ೨೨ ಅಂಶಗಳ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ

ಜೂಜಾಟಕ್ಕಾಗಿ ದಂಡ

ಮಂಡಿ ಮೊಹಲ್ಲೆಯ ಮುಸ್ತಫ ವಗೈರೆ ೧೧ ಜನರು ಶಾಂತರಾಜ ಪಾರ್ಕಿನಲ್ಲಿ [illegible] ಜೂಜಾಡುತ್ತಿದ್ದರೆಂದು ಮಂಡಿ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಮೊನ್ನೆ ನಗರದ ನ್ಯಾಯಾಧೀಶರು ಅಪರಾಧಿಗಳಿಗೆ ತಲಾ ೧೦ ರೂ ಜುಲ್ಮಾನೆಯನ್ನು ವಿಧಿಸಿದರು

ಬ್ಯಾಡ್ಮಿಂಟನ್ ಪಂದ್ಯ

ಪ್ರೌಢಶಾಲಾ ರಜತೋತ್ಸವ ಬ್ಯಾಡ್ಮಿಂಟನ್ ಪಂದ್ಯದ ಅಂಗವಾಗಿ ಮೊನ್ನೆ ದಳವಾಯಿ ಪ್ರೌಢಶಾಲೆಯ ಟೀಮು ಮಹಾರಾಜಾ ಹೈಸ್ಕೂಲು ಟೀಮನ್ನು ೧೫–೧೦ ಮತ್ತು ೧೫–೧೧ ಪಾಯಿಂಟುಗಳಿಂದ ಸೋಲಿಸಿತು

ಗೀತಾ ಪ್ರಚಾರಿಣೀ ಸಭೆ

ನಗರದಲ್ಲಿ ಗೀತಾ ಸಪ್ತಾಹ ನಡೆಸುವ ಸಂಬಂಧವಾಗಿ ಅಶೋಕ ರಸ್ತೆಯಲ್ಲಿರುವ ಗೀತಾ ಪ್ರಚಾರಿಣೀ ಸಭೆಯಲ್ಲಿ ಮೊನ್ನೆ ಸಭೆಯೊಂದು ನಡೆದು ಪುನಃ ನಾಳೆ ಸಂಜೆ ೬ ಗಂಟೆಗೆ ಸೇರಬೇಕೆಂದು ತೀರ್ಮಾನಿಸಲಾಯಿತು

ಮೈಸೂರು [illegible]
ಕಛೇರಿ, ಮೈಸೂರು
ನೋಟಿಫಿಕೇಷನ್ ನಂಬರು 108 / 56 57

ಟೆಂಡರ್ ನೋಟೀಸ್

[illegible] ಆವರಣದಲ್ಲಿ ಬೆಳೆಯುವ [illegible] ಗಳ ಗುತ್ತಿಗೆಯನ್ನು 1956ನೇ ಡಿಸೆಂಬರ್ 10 ರಿಂದ 1957ನೇ ನವೆಂಬರ್ 30ರ ವರೆಗೆ ಪಡೆಯುವ ಬಗ್ಗೆ ಸೀಲು ಮಾಡಿದ ಟೆಂಡರುಗಳನ್ನು ಕೆಳಗೆ ಸಹಿ ಮಾಡಿರುವವರಿಂದಾಗಲೀ ಅಥವಾ ಅವರಿಂದ ನೇಮಿಸಲ್ಪಟ್ಟವರಿಂದಾಗಲೀ ತಾರೀಖು 5-12-1956ರ ಸಾಯಂಕಾಲ ೪ ಘಂಟೆಯ ವರೆಗೆ ಸ್ವೀಕರಿಸಲ್ಪಡುತ್ತದೆ. ಹೆಚ್ಚಿಗೆ ವಿವರಗಳನ್ನು ಮೇಲ್ಕಂಡ ಕಛೇರಿಯ ಆಫೀಸಿನಲ್ಲಿ ಪಡೆಯಬಹುದು

(ಸಹಿ) ಡಿ ಆರ್ ಚಿಕ್ಕರುದ್ರಯ್ಯ,
ಜಿಲ್ಲಾಧಿಕಾರಿಗಳು, [illegible]

Edited, Printed and Published by
A. R. Nagarajan at Sadhvi Press
D. Subbiah Road, Mysore

ಇಂಟರ್ ಮೀಡಿಯೆಟ್ ಕೆಮಿಸ್ಟ್ರಿ

ನಿವೃತ್ತ ರಸಾಯನ ಶಾಸ್ತ್ರ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಡಿ ವಿ ವೆಂಕಟಸುಬ್ಬಯ್ಯನವರು ಇಂಟರ್ ಮೀಡಿಯೆಟ್ ಕೆಮಿಸ್ಟ್ರಿ (ಮೈಸೂರು ವಿಶ್ವವಿದ್ಯಾಲಯದ ೧೯೩೬-೫೬ನೇ ೨೦ ಪ್ರಶ್ನೆ ಪತ್ರಿಕೆಗಳಿಗೆ ಉತ್ತರ) ಎಂಬ ಗ್ರಂಥವೊಂದನ್ನು ರಚಿಸಿದ್ದಾರೆ. [illegible] ಅನೇಕ ಪಠ್ಯ ಪುಸ್ತಕಗಳ ವಿಚಾರವನ್ನು ಕ್ರೋಢೀಕರಿಸಿ ಈ ಗ್ರಂಥದಲ್ಲಿ ಕೊಡಲಾಗಿದೆ. ಕಾಲೇಜಿನ ರಸಾಯನಿಕ ಶಾಸ್ತ್ರ ವಿದ್ಯಾರ್ಥಿಗಳಿಗೆ ಇದು ಬಹು ಉಪಯುಕ್ತವಾಗಿದೆ. ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ಡಿ ವಿ ಕೆ ಮೂರ್ತಿಯವರು ಇದರ ಪ್ರಕಟಣಕಾರರು. ಇದರ ಬೆಲೆ ೪ ರೂ.

ಹೆಂಡತಿಯಿಂದ ಗಂಡನಿಗೆ ಜೀವನಾಂಶ

ರಾಜ್ಯಸಭೆಯಲ್ಲಿ ಹಿಂದೂ ದತ್ತು ಸ್ವೀಕಾರ ಮತ್ತು ಜೀವನಾಂಶ ಶಾಸನದ ಬಗ್ಗೆ ಚರ್ಚೆ ನಡೆದಾಗ ಬಾರ್ಲಿಂಗೆ ಎಂಬ ಸದಸ್ಯರು ಮಾತನಾಡಿ, ಮಹಿಳೆಯರಿಗೂ ಪುರುಷರಿಗೂ ಸರಿಸಮಾನತೆಯಿರಬೇಕೆಂಬ ಅಂಶವು ಸಕಲ ವಿಚಾರಗಳಿಗೂ ಅನ್ವಯಿಸಬೇಕೆಂದೂ, ಅದರ ಪ್ರಕಾರ ಹೆಂಡತಿಯು ಗಂಡನಿಗೆ ಜೀವನಾಂಶವನ್ನು ಕೊಡುವುದು ಅಗತ್ಯವೆಂದೂ ಸೂಚಿಸಿದರು. ಬಿ ಕೆ. ಎಸ್. ಸಿನ್ಹ ಎಂಬ ಮತ್ತೊಬ್ಬ ಸದಸ್ಯರು ಮಾತನಾಡಿ ತಮ್ಮ ಪತ್ನಿಯಿಂದ ತಾವು ಜೀವನಾಂಶ ಪಡೆಯಲು ಸಿದ್ಧವಾಗಿಲ್ಲವೆಂದು ತಿಳಿಸಿದರು

ಸ್ತೋತ್ರ ಮಂಜರಿ

ಆಸ್ಥಾನ ವಿದ್ವಾನ್ ಎಂ ಜಿ ನಂಜುಂಡಾರಾಧ್ಯರು ಮೇಲ್ಕಂಡ ಹೆಸರನ್ನುಳ್ಳ ಸ್ತೋತ್ರಗಳಿಂದ ಕೂಡಿದ ಚಿಕ್ಕ ಪುಸ್ತಕವನ್ನು ಪ್ರಕಟಿಸಿರುತ್ತಾರೆ. ಇದನ್ನು ಆಗರದ ಸಾಹುಕಾರ್ ಶ್ರೀ ಚಿಕ್ಕಮಲ್ಲಶೆಟ್ಟರ ಪತ್ನಿ, ಲಿಂಗೈಕ್ಯರಾದ ಶ್ರೀಮತಿ ನಾಗಮ್ಮನವರ ಸ್ಮರಣೆಗಾಗಿ ಭಕ್ತ ವೃಂದಕ್ಕೆ ಅವರ ಸಹೋದರರೂ, ಪ್ರಕಾಶಕರೂ ಆದ ಶ್ರೀ ಎಂ ಎಸ್ ಸಿದ್ದಪ್ಪ ಸಹೋದರರು ಅರ್ಪಿಸಿದ್ದಾರೆ. ಪುಸ್ತಕದಲ್ಲಿ ಶ್ರೀ ಗಣೇಶಾಷ್ಟಕ, ಲಿಂಗಾಷ್ಟಕ, ಪಶುಪತ್ಯಷ್ಟಕ, ಕಾಲಭೈರವಾಷ್ಟಕ, ಲಕ್ಷ್ಮ್ಯಷ್ಟಕ, ಶ್ರೀ ಸಿದ್ಧಲಿಂಗಾಷ್ಟಕ, ಅನ್ನಪೂರ್ಣಾಷ್ಟಕ, ಸರಸ್ವತ್ಯಷ್ಟಕ, ಮೃತ್ಯುಂಜಯಾಷ್ಟಕ ಮತ್ತು ಇಂದ್ರಾಕ್ಷಿ ಸ್ತೋತ್ರಗಳಿವೆ. ಇದರ ಪ್ರತಿಯೊಂದನ್ನು ಅವರಿಂದ ಸ್ವೀಕರಿಸಿದ್ದೇವೆ. ಬೆಲೆ ರೂ ೦-೧-೬

PAYING GUEST

A man seeks to be a "PAYING GUEST" A room, a bath, a breakfast and two meals are expected Contact within 10th

E N KATKAR,
Railway Protection Force,
Mysore

ಪೌರಸಭಾಧಿವೇಶನ

ನಂಜನಗೂಡು ನ ೩

ಇಲ್ಲಿನ ಪುರಸಭಾ ಮಾಹೆಯಾನಾ ಅಧಿವೇಶನವು ಈ ದಿನ ಶ್ರೀ ಕೆ. ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ಸಮಾವೇಶಗೊಂಡಿತು. ಸ[illegible] ಶಾಲೆಗೆ ಮಾಹೆಯಾನ ೫೦ ರೂ ಗಳನ್ನು ಕೊಡಲು ಸಭೆಯು ತೀರ್ಮಾನಿಸಿತು. ಉಪಾಧ್ಯಕ್ಷರಿಗೆ ಮಾಹೆಯಾನಾ ೫೦ ರೂ. ಗಳ ಗೌರವ ಸಂಭಾವನೆ ಕೊಡಬಹುದೆಂದು ಸರ್ವಾನುಮತದಿಂದ ಅಂಗೀಕರಿಸಿತು

ಅನೀತಿ ವ್ಯಾಪಾರದ ನಿರ್ಮೂಲನ ಮಸೂದೆಯ ಅಂಗೀಕಾರ

ಮಹಿಳೆಯರು ಮತ್ತು ಬಾಲಕಿಯರನ್ನು ಅನೀತಿ ವ್ಯಾಪಾರಗಳಿಗಾಗಿ ಉಪಯೋಗಿಸುವುದನ್ನು ತಪ್ಪಿಸುವ ಬಗ್ಗೆ ಲೋಕಸಭೆಯು ಮಸೂದೆಯನ್ನು ಅಂಗೀಕರಿಸಿದೆ. ಮಹಿಳೆಯರನ್ನು ಆ ದುರ್ವ್ಯಾಪಾರಕ್ಕೆ ಪ್ರೇರೇಪಿಸುವವರನ್ನು ಅತ್ಯುಗ್ರವಾಗಿ ಶಿಕ್ಷಿಸುವುದು ಅಗತ್ಯವೆಂದು ಕೇಂದ್ರ ಗೃಹ ಶಾಖಾ ಮಂತ್ರಿ ದಾತಾರರು ತಿಳಿಸಿದರು

ACADEMIC ROBES
HOODS & GOWNS
For all degrees
For sale and service
Visit —
Excelsior Tailoring House,
Sayyaji Rao Road,
MYSORE

ಮೈಸೂರು ವಿಶ್ವವಿದ್ಯಾನಿಲಯ
ಕ್ರಾಫರ್ಡ್ ಹಾಲ್, ಮೈಸೂರು
ತಾ॥ 27-11-1956

ಪ್ರಕಟಣೆ

ಕೆಳಗೆ ನಮೂದಿಸಲಾಗಿರುವ ನಿಯಮದ (1953 54ರ ಕ್ಯಾಲೆಂಡರ್ ಭಾಗ I ರ ಪುಟ ರ ಪ್ರಕಾರ ಈ ವಿಶ್ವವಿದ್ಯಾನಿಲಯದ ಪದವೀ (ರಿಜಿಸ್ಟರ್ಡ್ ಪದವೀಧರರಾಗಿ ಎನ್‌ರೋಲ್ ರುವವರು) ಪುನರ್ನವೀಕರಣ ಮತ್ತು ತಿದ್ದುಪಡಿ ಅರ್ಜಿಗಳನ್ನು ಕೆಳಗೆ ಕಾಣಿಸುವ ನಮೂನೆ ಈ ಕಛೇರಿಯನ್ನು 1956ನೇ ಡಿಸೆಂಬರ್ 15 ಳಗೆ ತಲುಪುವಂತೆ ಕಳುಹಿಸಬೇಕೆಂದು ಕೋ ಗಿದೆ.

"ನಿಯಮ 79: ರಿಜಿಸ್ಟರ್ಡ್ ಪದವೀಧರ ಸ್ಥರನ್ನು ಪ್ರತಿ ವರ್ಷ ಜನವರಿ 1 ನೇ ತಾ ಪುನರ್ನವೀಕರಣ ಮತ್ತು ತಿದ್ದುಪಡಿ ಮಾಡ ವುದು ಪುನರ್ನವೀಕರಣ ಮತ್ತು ತಿದ್ದುಪ ಅರ್ಜಿಗಳು ಹಿಂದಿನ ಡಿಸೆಂಬರ್ 15 ರೊ ರಿಜಿಸ್ಟ್ರಾರರಿಗೆ ತಲುಪಬೇಕು"

1. ಹೆಸರು ಪದವಿಗಳ ಸಹಿತ
2. ಎನ್‌ರೋಲ್‌ಮೆಂಟ್ ನಂಬರು
3 ವಿಳಾಸ

ಎಚ್. ಜೆ ನರಸಿ
ರಿಜಿಸ್ಟ್ರಾರ್

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು.

ಪ್ರಭುದೇವಾ ಥಿಯೇಟರ್
(ಸದ್ವಾ ಟಾಕೀಸ್)
6—12-1956ನೇ : ಗುರುವಾರದಿಂದ : ಅನೋಖಾ ಪ್ರಾ
ಪಸುಪು-ಕುಂಕುಮಂ
ಗುಮ್ಮಡಿ, ಜಿ ವರಲಕ್ಷ್ಮಿ, ಜಗ್ಗಯ್ಯ, ಸಾವುಕಾರ್ ಜಾನಕಿ, ಸೂರ್ಯಕಾಂ
ಮುಂತಾದವರು ಪಾತ್ರವಹಿಸಿರುವ ತೆಲುಗು ಚಿತ್ರ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[illegible]
ಬ್ರಾಂಕಾಲ್
[illegible]
7/1. [illegible]
ಬೆಂಗಳೂರು -2

ಸಂಪುಟ : ೧೫] SADHVI : TUESDAY 4—12—1956 ಮೈಸೂರು : ಮಂಗಳವಾರ ೪—೧೨—೧೯೫೬ [ಸಂಚಿಕೆ : [illegible]

ಬೆಂಗಳೂರಿನಲ್ಲಿ ಚೌ ಎನ್ ಲೈರವರಿಗೆ ಅದ್ಭುತ ಸ್ವಾಗತ

ಸಾರ್ವಜನಿಕ ಜೀವನದಲ್ಲೆಲ್ಲಾ ಸಹಕಾರ ಭಾವನೆ ಬೆಳೆಯಬೇಕು

ಸತ್ಕಾರ ಸಮಾರಂಭದಲ್ಲಿ ಡಾ|| ಕರ್ವೆ ಯವರ ಭಾಷಣ

ಮೈಸೂರು ೪

ಭಾರತದ ಯೋಜನಾ ಸಮಿತಿಯ ಸಾಮೂಹಿಕ [illegible] ಡೈರೆಕ್ಟರ್ ಪ್ರೊ|| ಡಿ. ಜಿ. ಕರ್ವೆ ಮತ್ತು ಅಂತರ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಸಹಕಾರ ಶಿಕ್ಷಣ ಕೇಂದ್ರದ ಡೈರೆಕ್ಟರ್ ಎಂ|| ಎಲ್. ಕೆ. ಹಾರ್ಕರ್ ಅವರುಗಳ ಗೌರವಾರ್ಥವಾಗಿ ನೆನ್ನೆ ಸಂಜೆ ಸಹಕಾರ ಭವನದಲ್ಲಿ ಪ್ರಾಂತೀಯ ಸಹಕಾರ ಸಭೆಯವರು ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು. ಉಪಾಹಾರದನಂತರ, ಸಮಿತಿಯ ಅಧ್ಯಕ್ಷರಾದ ಶ್ರೀ [illegible] ಶ್ರೀನಿವಾಸ್‌ರವರು ಭಾಷಣ ಮಾಡಿ ಅತಿಥಿಗಳನ್ನು ಸ್ವಾಗತಿಸಿದರು

ಪ್ರೊ|| ಕರ್ವೆ ಯವರು ತಮ್ಮ ಭಾಷಣದಲ್ಲಿ, ಜೀವನದ ಎಲ್ಲ ರಂಗಗಳಲ್ಲಿಯೂ, ಸಹಕಾರ ಮನೋಭಾವವು ಬೆಳೆಯಬೇಕೆಂದು ಹೇಳಿದರು. ಪ್ರತಿಯೊಂದು ಗ್ರಾಮದಲ್ಲೂ ಸಹಕಾರ ಚಳುವಳಿಯು ಹರಡಬೇಕೆಂದು ಅವರು ಸೂಚಿಸಿದರು. ಪಾಶ್ಚಿಮಾತ್ಯ ದೇಶಗಳಲ್ಲಿ ಜನರು ತಮ್ಮ ಎಲ್ಲ ವ್ಯವಹಾರಗಳನ್ನೂ ಸಹಕಾರ ಸಂಸ್ಥೆಗಳ ಮೂಲಕವೇ ನಡೆಸುವರೆಂದೂ ಅವರು ತಿಳಿಸಿ, [illegible] ದೇಶದ ಒಂದು ಗ್ರಾಮದಲ್ಲಿ ಸಂಸಾರಗಳಿಗಿಂತಲೂ ಹೆಚ್ಚು ಸಂಖ್ಯೆಯ ಸಹಕಾರ ಸಂಘಗಳಿರುವುವೆಂಬ ಅಂಶವನ್ನು ಪ್ರಕಟಿಸಿದರು. ಸಹಕಾರ [illegible] ಧ್ಯೇಯವನ್ನು ಹೊಂದಿದ ನಮ್ಮ ದೇಶದಲ್ಲಿಯೂ ಎಲ್ಲ ಕೆಲಸ ಕಾರ್ಯಗಳೂ ಸಹಕಾರ ತತ್ವದ ಆಧಾರದ ಮೇಲೆಯೇ ನಡೆಯಬೇಕೆಂದೂ ಅವರು ಸೂಚಿಸಿದರು

ಎಂ|| ಹಾರ್ಕರ್‌ರವರು ಮಾತನಾಡಿ, ಸಹಕಾರ ಚಳುವಳಿಯ ಪ್ರಚಾರಕ್ಕೆ ಭಾರತದಲ್ಲೂ, ಮುಖ್ಯವಾಗಿ ಮೈಸೂರಿನಲ್ಲೂ ದೊರೆಯುತ್ತಿರುವ ಬೆಂಬಲಕ್ಕಾಗಿ ಸಂತೋಷವನ್ನು ಸೂಚಿಸಿದರು.

ಇದೇ ಸಂದರ್ಭದಲ್ಲಿ ಗಾಯನ, ಪ್ರಹಸನ [illegible] ಮುಂತಾದ ಮನರಂಜಕ ಕಾರ್ಯಕ್ರಮಗಳು ಏರ್ಪಾಡಾಗಿದ್ದುವು

ಚಾಮುಂಡಿಪುರದಲ್ಲಿ ಕಳವು

ಚಾಮುಂಡಿಪುರದಲ್ಲಿ ಮೊನ್ನೆ ಸಂಜೆ ವಿದ್ಯುಚ್ಛಕ್ತಿ ಇಲಾಖೆಯ ನೌಕರ ಶ್ರೀ ನಾಗರಾಜರಾವ್ ಮನೆಯಲ್ಲಿ ಕಳ್ಳರು ಬೀಗವನ್ನು ತೆಗೆದು [illegible] ಶ್ರೀ ನಾಗರಾಜರಾಯರ ತಂಗಿ ಶ್ರೀಮತಿ [illegible] ಯವರ ಪೆಟ್ಟಿಗೆಯಲ್ಲಿದ್ದ ೧೫೦ ರೂಪಾಯಿಗಳನ್ನು ಅಪಹರಿಸಿ ಪರಾರಿಯಾಗಿರುವುದಾಗಿ ಪೋಲೀಸರಿಗೆ ದೂರು ಕೊಡಲಾಗಿದೆ

ನಗರಕ್ಕೆ ಇಬ್ಬರು ರಾಜರುಗಳ ಭೇಟಿ

ಬೆಲ್ಜಿಯಂನ ದೊರೆ ಬಾದೂನ್ ಮತ್ತು [illegible] ಅವರು ಬೆಂಗಳೂರಿಗೆ ಇದೇ ತಿಂಗಳು ೧೫ನೇ ತೇದಿ ಆಗಮಿಸುವರು. ಮಾರನೇ ದಿನ ಮೈಸೂರಿಗೆ ಬಂದು, ಇಲ್ಲಿ ಹಲವು ಪ್ರೇಕ್ಷಣೀಯ ಸ್ಥಳಗಳನ್ನು ನೋಡಿ ೧೭ರಂದು ಬೆಂಗಳೂರಿಗೆ ಹಿಂದಿರುಗಿ ಅಂದು ರಾತ್ರಿ ಮದ್ರಾಸಿಗೆ ಹೊರಡುವರು

ರಾಜಾರಾಂ ಅಗ್ರಹಾರದ ಮನೆಗಳಿಗೆ ಹೆಚ್ಚು ಬಾಡಿಗೆ

ಪುರಸಭೆಯ ಅಧಿವೇಶನದಲ್ಲಿ ತೀರ್ಮಾನ

ಮೈಸೂರು ೪

ಇಲ್ಲಿನ ಪುರಸಭೆಯ ಮುಂದುವರಿದ ಅಧಿವೇಶನವು ಮೊನ್ನೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ರಾಜಾರಾಂ ಅಗ್ರಹಾರದಲ್ಲಿರುವ ಪೌರಸಭೆಯ ಮನೆಗಳಿಗೆ ಈಗಿರುವ ಬಾಡಿಗೆಯನ್ನು ೧೦ ರಷ್ಟು ಹೆಚ್ಚಿಸುವಂತೆ ಆಡಳಿತ ಸಮಿತಿಯವರು ಸೂಚಿಸಿದ್ದ ವಿಷಯವು ಚರ್ಚಿಸಲ್ಪಟ್ಟಿತು

ಪೌರಸಭೆಯ ನೌಕರರನ್ನು ಬಿಟ್ಟು ಮಿಕ್ಕ ಬಾಡಿಗೆದಾರರಿಗೆ ೧೦ ರೂ ಗೊತ್ತುಮಾಡಬೇಕೆಂದು ಶ್ರೀ ಬಿ ಎಸ್ ಕೆಂಗೇಗೌಡರು ಸೂಚಿಸಿದ ತಿದ್ದುಪಡಿಯೊಡನೆ ವಿಷಯವು ಅಂಗೀಕರಿಸಲ್ಪಟ್ಟಿತು.

ಬಸ್ ನಿಲ್ದಾಣದ ಹೋಟೆಲನ್ನು ನಡೆಸುವ ಬಗ್ಗೆ ಟೆಂಡರುಗಳನ್ನು ಸ್ವೀಕರಿಸುವ ವಿಷಯವು ಚರ್ಚಿಸಲ್ಪಟ್ಟು, ಹೆಚ್ಚು ಹಣ ಕೊಡಲು ಮುಂದೆ ಬಂದಿರುವವರ ಟೆಂಡರನ್ನು ಅಂಗೀಕರಿಸುವಂತೆ ವಿರೋಧ ಪಕ್ಷದವರು ಸಲಹೆ ಮಾಡಿದರು. ಈಗ ಬಂದಿರುವ ಬೆಲೆಗಳು ಕಡಿಮೆಯೆಂಬ ಕಾರಣಕ್ಕಾಗಿ ಹೊಸ ಟೆಂಡರನ್ನು ಕರೆಯಲು ಸಭೆಯು ನಿರ್ಧರಿಸಿತು

ಮಕ್ಕಳ ವಿಚಾರದಲ್ಲಿ ಎಚ್ಚರಿಕೆ

ಮೈಸೂರಿನ ಒಡವೆಗಳನ್ನು ಹಾಕಿಕೊಂಡಿರುವ ಮಕ್ಕಳಿಗೆ ತಿಂಡಿ ಮುಂತಾದ ಆಹಾರ ಪದಾರ್ಥಗಳನ್ನು ಕೊಡಿಸಿ ಅವುಗಳನ್ನು ಪುಸಲಾಯಿಸಿ ಕರೆದುಕೊಂಡುಹೋಗಿ ಒಡವೆಗಳನ್ನು ಕಿತ್ತುಕೊಂಡು ಮಕ್ಕಳನ್ನು ಬಿಟ್ಟುಬಿಡುವ ಪ್ರಕರಣಗಳು ಪೋಲೀಸರಿಗೆ ಬರುತ್ತಿವೆ. ತಂದೆತಾಯಿಗಳು ಎಚ್ಚರಿಕೆಯಿಂದಿರಬೇಕೆಂದು ತಿಳಿಸಲಾಗಿದೆ.

ಪೋರ್ಚುಗೀಸ್ ವಿಮಾನಗಳಿಂದ ಭಾರತದ ಗಡಿ ಉಲ್ಲಂಘನೆ

ಕರಾಚಿಯಿಂದ ತಮ್ಮ ವಸಾಹತುಗಳಿಗೆ ಅಗತ್ಯ ವಸ್ತುಗಳನ್ನು ತರಲು ಪೋರ್ಚುಗೀಸರು ಏರ್ಪಾಡು ಮಾಡಿರುವ ವಾಯು ಸಂಚಾರ ವ್ಯವಸ್ಥೆಯ ವಿಮಾನಗಳು ಹಲವು ತಿಂಗಳಿಂದ ಭಾರತದ ಗಡಿಯನ್ನು ಉಲ್ಲಂಘಿಸುತ್ತಿರುವುದಾಗಿ ತಿಳಿದುಬಂದಿದೆ. ಗೋವಾಕ್ಕೆ ಬರುತ್ತಿರುವ ಹಡಗುಗಳೂ ಸಹಾ ಭಾರತದ ಸಮುದ್ರದ ಗಡಿಯನ್ನು ಉಲ್ಲಂಘಿಸುತ್ತಿರುವುದಾಗಿ ಹೇಳಲಾಗಿದೆ.

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೧೫ ಮತ್ತು ೮-೧೫ ಲಕ್ಷ್ಮೀ ಶ್ರೀನಿವಾಸ-ದೇವರನಾಮ. ೭-೩೦ ಹಿಂದಿ ವಾರ್ತೆ ಮಧ್ಯಾಹ್ನ ೧೨ ಮತ್ತು ೧-೫೦ ಎಸ್ ಸುಬ್ರಹ್ಮಣ್ಯ ಶ್ರೋತೃ-ಸಂಗೀತ ೧೨-೩೦ ವಿರಾಮ. ೧ ಲಕ್ಷ್ಮೀ ಶ್ರೀನಿವಾಸ-ಗಾಯನ ೨-೧೫ ಪ್ರೌಢ ಶಾಲೆಗಳಿಗಾಗಿ ಸಂಜೆ ೫-೩೦ ಮತ್ತು ೮ ಎಂ ಪುಟ್ಟರಾಜ್-ನಾಗಸ್ವರ ೭-೫ ವಿರಾಮ ಸಂಗೀತ ೬-೩೦ ರಿಕಾರ್ಡು ೭-೩೦ ನಾಟಕ ಮತ್ತು ಸಮ್ಮೇಳನ ೮-೩೦ ರಾಷ್ಟ್ರೀಯ ಕಾರ್ಯಕ್ರಮ ೬-೫೦ ರಿಕಾರ್ಡು.

ಗವರ್ನರರ ಉತ್ತರ ಭಾರತ ಪ್ರವಾಸ

[ಸ್ವಂ. ವ. ವರದಿ] ಬೆಂಗಳೂರು ೪

ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ಇದೇ ತಿಂಗಳು ಮೂರನೇ ವಾರದಲ್ಲಿ ಸಂಚಾರ ಸಮಯವಾಗಿ ಉತ್ತರ ಭಾರತದ ಪ್ರವಾಸ ಕೈಗೊಂಡು, ಕಲ್ಕತ್ತಾ, ಕಾಶಿ ಮುಂತಾದ ಸ್ಥಳಗಳಿಗೆ ಭೇಟಿಯಿತ್ತು, ಜನವರಿ ೭ನೇ ತಾರೀಖು ದೆಹಲಿಯನ್ನು ತಲುಪುವರು. ಮಾರನೇ ದಿನ ಅವರು ಪ್ರಧಾನಿ ನೆಹರೂರವರ ಭೇಟಿ ಮಾಡುವರು

ಗವರ್ನರರಿಗೆ ಮುಸ್ಲಿಮರ ಮಾನಪತ್ರ

ಸಂಸ್ಥಾನದ ಮುಸ್ಲಿಮರು ಇದೇ ತಿಂಗಳು ೧೩ನೇ ತಾರೀಖು ಗವರ್ನರ್ ಶ್ರೀ ಜಯಚಾಮರಾಜ ಒಡೆಯರಿಗೆ ಮಾನಪತ್ರವನ್ನು ಅರ್ಪಿಸುವರು.

ರಾಷ್ಟ್ರಾಧ್ಯಕ್ಷರ ೭೩ನೇ ವರ್ಷ ವರ್ಧಂತಿ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರಿಗೆ ನೆನ್ನೆ ೭೩ ವರ್ಷಗಳು ತುಂಬಿದುವು. ನೆಹರೂ, ಪಂಡಿತ ಪಂತ್ ಮುಂತಾದವರು ಅವರಿಗೆ ಅಭಿನಂದನೆಯನ್ನು ಸಲ್ಲಿಸಿದರು. ರಾಷ್ಟ್ರಾಧ್ಯಕ್ಷರು ತಮ್ಮ ಅಂಗ ರಕ್ಷಕ ಪಡೆಯಿಂದ ಗೌರವವನ್ನು ಸ್ವೀಕರಿಸಿದರು. ಭಾರತದ ಸೈನ್ಯ, ನೌಕಾ ಮತ್ತು ವಿಮಾನ ಬಲಗಳವರು ಅಭಿನಂದನಾ ಸಂದೇಶ ಕಳುಹಿಸಿದ್ದರು

ಹ್ಯಾಮರ್‌ಷೀಲ್ಡರು ಮಾತ್ರ ಹಂಗೇರಿಗೆ ಹೋಗಲು ಅವಕಾಶ

ಬುಡಾಪೆಸ್ಟಿಗೆ ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಷೀಲ್ಡರು [illegible] ನಂತರ ಭೇಟಿ ಕೊಡುವುದನ್ನು ಹಂಗೇರಿ ಸರ್ಕಾರದವರು ಸ್ವಾಗತಿಸುವುದಾಗಿ ತಿಳಿಸಲಾಗಿದೆ. ಆದರೆ ವಿಶ್ವ ಸಂಸ್ಥೆಯ ವೀಕ್ಷಕರನ್ನು ಹಂಗೇರಿಗೆ ಬಿಡುವುದಿಲ್ಲವೆಂದು ಅಲ್ಲಿನ ಸರ್ಕಾರದವರು ಹೇಳಿದ್ದಾರೆ.

ಈಜಿಪ್ಟಿನಿಂದ ಬ್ರಿಟಿಷ್ ಮತ್ತು ಫ್ರೆಂಚ್ ಪಡೆಗಳ ವಾಪಸು

ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರವರು ನೆನ್ನೆ ಕಾಮನ್ಸ್ ಸಭೆಯಲ್ಲಿ ಭಾಷಣ ಮಾಡಿ, ಪೋರ್ಟ್ ಸೈಯದ್ ಪ್ರದೇಶದಿಂದ ಬ್ರಿಟಿಷ್ ಮತ್ತು ಫ್ರೆಂಚರ ಸೇನೆಗಳನ್ನು ಹಿಂತೆಗೆಯಲು ಉಭಯ ಸರ್ಕಾರಗಳು ನಿರ್ಧರಿಸಿರುವುದಾಗಿ ಹೇಳಿದರು. ಸೇನೆಯ ವಾಪಸಾತಿ ವಿಷಯವನ್ನು ಕುರಿತು ವಿಶ್ವಸಂಸ್ಥೆಯ ಸೇನಾನಿ ಜನರಲ್ ಬರ್ನ್ಸ್‌ರೊಡನೆ ಬ್ರಿಟಿಷ್ ದಳಪತಿ ಸರ್ ಚಾರ್ಲ್ಸ್ ಕೈಟ್ಲಿಯವರು ಸಂಭಾಷಣೆ ನಡೆಸುತ್ತಿರುವರೆಂದೂ ಅವರು ಹೇಳಿದರು. ಗಾಜಾ ಪ್ರದೇಶದಿಂದ ಇಸ್ರೇಲು ವಾಪಸು ಹೋಗಬೇಕೆಂಬುದೂ, ಅಲ್ಲಿನ ಪರಿಸ್ಥಿತಿಯ ಹೊಣೆಯನ್ನು ವಿಶ್ವಸಂಸ್ಥೆಯು ವಹಿಸಬೇಕೆಂಬುದೂ ಬ್ರಿಟಿಷ್ ಸರ್ಕಾರದ ಅಭಿಪ್ರಾಯವೆಂದು ಅವರು ಹೇಳಿದರು

ಬೆಂಗಳೂರಿನಲ್ಲಿ ಚೀನಾ ಪ್ರಧಾನಿ ಚೌ ಎನ್ ಲೈ

ಗವರ್ನರರಿಂದ ಸ್ವಾಗತ : ಪ್ರಮುಖರಿಂದ [illegible]

[ಸ್ವಂ. ವ. ವರದಿ] ಬೆಂಗಳೂರು ೪

ಚೀನಾದ ಪ್ರಧಾನಿ ಚೌ ಎನ್ ಲೈ ಅವರು ಇಂದಿನ ಬೆಳಿಗ್ಗೆ ವಿಮಾನದಲ್ಲಿ ಇಲ್ಲಿಗೆ ಆಗಮಿಸಿದರು. ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ಅವರನ್ನು ಸ್ವಾಗತಿಸಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ಪರಿಚಯ ಮಾಡಿದರು. [illegible]

ಪೌರರು [illegible] ಗೌರವ ರಕ್ಷೆಯನ್ನು [illegible] ಸ್ವೀಕರಿಸಿದರು. ಸರ್ಕಾರದ ಬ್ಯಾಂಡಿನವರು ಚೀನೀ ಮತ್ತು ಭಾರತದ ರಾಷ್ಟ್ರಗೀತೆಗಳನ್ನು ನುಡಿಸಿದರು. [illegible] ಸಂಘ ಸಂಸ್ಥೆಗಳವರು ಅವರಿಗೆ ಹೂವಿನ ಹಾರಗಳನ್ನು ಅರ್ಪಿಸಿದರು

ಗವರ್ನರರು ಮಂತ್ರಿಗಳನ್ನೂ, ಶಾಸಕ ಸಭಾಧ್ಯಕ್ಷರನ್ನೂ, ಶ್ರೀ ಹನುಮಂತಯ್ಯ ಮತ್ತು ಇತರ ಕಾಂಗ್ರೆಸ್ ಮುಖಂಡರನ್ನೂ ಅವರಿಗೆ ಪರಿಚಯ ಮಾಡಿಕೊಟ್ಟರು.

ಚೀನಾದ ಪ್ರಧಾನಿಯು ಗವರ್ನರ್ ಮತ್ತು ಶ್ರೀ ನಿಜಲಿಂಗಪ್ಪನವರೊಡನೆ ಹಿಂದೂಸ್ತಾನ್ ವಿಮಾನ ಕಾರ್ಖಾನೆಗೆ ತೆರಳಿದರು. ಕಾರ್ಖಾನೆಯಲ್ಲಿ ಅವರು [illegible] ವೀಕ್ಷಿಸಿದರು. [illegible] ಎಚ್. ಟಿ.-೨ [illegible] ವಿಮಾನಗಳ ಬಗ್ಗೆ [illegible] ತೋರಿಸಿದರು. ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ [illegible] ಅವರಿಗೆ [illegible] ವಿಮಾನದ ಮಾದರಿಯೊಂದನ್ನು ಬಹುಮಾನವಾಗಿ ಒಪ್ಪಿಸಿದರು.

ಅಲ್ಲಿಂದ [illegible]

ಪೌರಸಭಾಧ್ಯಕ್ಷ-ಉಪಾಧ್ಯಕ್ಷರ ಚುನಾವಣೆ ೨೪ರಂದು

ಮೈಸೂರು ೪

ನಗರದ ಪುರಸಭೆಯ ಹೊಸ ಅಧ್ಯಕ್ಷ ಉಪಾಧ್ಯಕ್ಷರ ಚುನಾವಣೆಯು ಈ ತಿಂಗಳು ೨೪ನೇ ತಾರೀಖು ಸಂಜೆ ೪ ಗಂಟೆಗೆ ವಿಶೇಷ ಅಧಿವೇಶನದಲ್ಲಿ ನಡೆಯುವುದು.

[illegible] ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ವಿದ್ಯುಚ್ಛಕ್ತಿ [illegible] ಶ್ರೀ ಡಿ. [illegible] ಮತ್ತು [illegible] ಕಾರ್ಯದರ್ಶಿ ಶ್ರೀ ಡಿ. ಕೆ. ಶ್ರೀನಿವಾಸ [illegible] ವಿಮಾನದಲ್ಲಿ ದೆಹಲಿಗೆ ಪ್ರಯಾಣ ಮಾಡುವರು. ಮೈಸೂರಿನ ವಿದ್ಯುಚ್ಛಕ್ತಿ ಯೋಜನೆಗಳನ್ನು ಕುರಿತು ಅವರು ಕೇಂದ್ರದ ಅಧಿಕಾರಿಗಳೊಡನೆ ಚರ್ಚಿಸುವರು.

ಕೈ ಅಕ್ಕಿಯನ್ನು ಹೆಚ್ಚು ಜನಪ್ರಿಯ ಮಾಡಬೇಕು .

ಅಖಿಲ ಭಾರತ ಗ್ರಾಮ ಕೈಗಾರಿಕಾ ಕೆಲಸಗಾರರ ಸಮ್ಮೇಳನದ ನಿರ್ಣಯ

ತಂತಿ] ಕುಮ್ಟಾ ೩

ಇಲ್ಲಿ ಸೇರಿದ್ದ ದ್ವಿತೀಯ ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಕೆಲಸಗಾರರ ಸಮ್ಮೇಳನವು ಎರಡು ದಿನಗಳ ಚರ್ಚೆ ನಡೆಸಿ, ಈ ದಿನ ಕೆಳಗೆ ಕಂಡ ನಿರ್ಣಯಗಳನ್ನು ಅಂಗೀಕರಿಸಿತು

ಹೊಸ ಹಲ್ಲರುಗಳು ಮತ್ತು ಅಕ್ಕಿ ಗಿರಣಿಗಳಿಗೆ ಅವಕಾಶ ಕೊಡಬಾರದು, ಇನ್ನೊಂದು ವರ್ಷದೊಳಗೆ ಹಲ್ಲರುಗಳನ್ನು ಮುಚ್ಚಬೇಕು, ಗಿರಣಿಗಳಲ್ಲಿ ಅಕ್ಕಿಗೆ ಪಾಲಿಷ್ ಕೊಡುವುದರ ಮೇಲೆ ಹತೋಟಿ ಇಡಬೇಕು, ಕೈ ಅಕ್ಕಿಯ ಮೇಲೆ ಎಲ್ಲಾ ತರಹೆಯ ಸ್ಥಳೀಯ ತೆರಿಗೆಗಳನ್ನೂ ರದ್ದುಗೊಳಿಸಬೇಕು ಮತ್ತು ಮಿಲಿಟ್ರಿ ಫಲಾಹಾರ ಮಂದಿರಗಳು, ವಿದ್ಯಾರ್ಥಿ ನಿಲಯಗಳು, ಆಸ್ಪತ್ರೆಗಳು ಮತ್ತು ಜೈಲುಗಳಲ್ಲಿ ಕೈ ಅಕ್ಕಿಯನ್ನು ಉಪಯೋಗಿಸುವಂತೆ ಕೇಂದ್ರ ಸರ್ಕಾರದವರು ಪ್ರೇರೇಪಿಸಬೇಕು

ಮಕ್ಕಳೊಡನೆ ಆತ್ಮಹತ್ಯೆ ಮಾಡಿಕೊಳ್ಳಲೆತ್ನಿಸಿದ್ದಕ್ಕಾಗಿ ಸಜ

ಚನ್ನಮ್ಮ ಮುನಿಸ್ವಾಮಿ ಎಂಬ ೨೭ ವರ್ಷದ ಸೇಲಮ್ಮಿನ ಮಹಿಳೆಯು ತನ್ನ ೫ ವರ್ಷದ ಮಗುವನ್ನು ನದಿಗೆ ಎತ್ತಿಹಾಕಿ ಕೊಲೆ ಮಾಡಿದಳೆಂಬ ಕಾರಣಕ್ಕಾಗಿ ಆಕೆಗೆ ಪೂನಾ ನಗರ ನ್ಯಾಯಾಧೀಶರು ಜೀವಾವಧಿ ಸಜಾ ವಿಧಿಸಿರುತ್ತಾರೆ ಹಸಿವಿನ ಬಾಧೆಯನ್ನು ತಾಳಲಾರದೆ ಆಕೆಯು ತನ್ನ ಎದೆಗೆ ಎಳೆಯ ಮಗುವನ್ನು ಕಟ್ಟಿಕೊಂಡು ಇಬ್ಬರು ಮಕ್ಕಳನ್ನೂ ಪೂನಾ ಬಳಿ ಸೇತುವೆಯೊಂದರಿಂದ ನದಿಗೆ ತಳ್ಳಿ ತಾನೂ ಹಾರಿದಳೆಂದೂ, ಗಂಡು ಮಗುವು ಸತ್ತು, ಬಾಕಿಯವರನ್ನು ರಕ್ಷಿಸಲಾಯಿತೆಂದೂ ಹೇಳಲಾಗಿದೆ

ಭಾರತದಲ್ಲಿ ಕೃತಕ ಪೆಟ್ರೋಲ್

ದೇಶದಲ್ಲಿ ಕೃತಕ ಪೆಟ್ರೋಲ್ ತಯಾರಿಕೆಗಾಗಿ ೨೦ ಕೋಟಿ ರೂ ಯೋಜನೆಯೊಂದನ್ನು ಕೇಂದ್ರ ಸರ್ಕಾರದವರು ಪರಿಶೀಲಿಸುತ್ತಿರುವರೆಂದು ವರದಿಯಾಗಿದೆ

ಹರಿಕಥೆ

ಚಾಮುಂಡೀಪುರದ ಶ್ರೀ ಶಂಕರನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ನಾಳೆಯಿಂದ ವೇ|| ಬ್ರ|| ಶ್ರೀ ನದೀಪುರಂ ಶ್ರೀನಿವಾಸರಂಗಾಚಾರ್ಯರು ಪ್ರತಿ ದಿನ ಸಂಜೆ ೫ ಗಂಟೆಗೆ ಶ್ರೀಮದ್ರಾಮಾಯಣದ ಕಥಾ ಕಾಲಕ್ಷೇಪವನ್ನು ನಡೆಸುವರು ಸರ್ವರಿಗೂ ಸ್ವಾಗತವಿದೆ

GLOBE TUTORIAL COLLEGE
(Sadvidya Patashala, Mysore)
Excellent Coaching for
Inter, P. C. M., Kan., Eng.
Classes between 7-30 &
10-30 A.M

ACADEMIC ROBES
HOODS & GOWNS
For all degrees
For sale and service
Visit –
Excelsior Tailoring House,
Sayaji Rao Road,
MYSORE

ಆಯುರ್ವೇದ ಪದವೀಧರರ ಸಮ್ಮೇಳನ

ಆರೋಗ್ಯ ಮಂತ್ರಿ ಎ. ಬಿ. ಶೆಟ್ಟರ ಆರಂಭ ಭಾಷಣ

ಹಾಸನ ೩

ಸಂಸ್ಥಾನದ ಆಯುರ್ವೇದ ಮತ್ತು ಯುನಾನಿ ಪದವೀಧರರ ಸಮ್ಮೇಳನವು ಇಲ್ಲಿ ನಡೆಯಿತು ಆರೋಗ್ಯ ಮಂತ್ರಿ ಶ್ರೀ ಎ. ಬಿ. ಶೆಟ್ಟರು ಆರಂಭ ಭಾಷಣ ಮಾಡಿ ಆಯುರ್ವೇದ ಪದ್ಧತಿಯ ಉತ್ತಮಾಂಶಗಳನ್ನು ಉಳಿಸಿಕೊಂಡು, ಬದಲಾವಣೆ ಹೊಂದಿದ ಇಂದಿನ ಪರಿಸ್ಥಿತಿಗೆ ತಕ್ಕಂತೆ ಅವನ್ನು ಅಳವಡಿಸಿಕೊಳ್ಳುವುದು ಅಗತ್ಯವೆಂದು ನುಡಿದರು ಆಯುರ್ವೇದ ಕಾಂಗ್ರೆಸ್ಸಿನವರ ಶುದ್ಧಾಯುರ್ವೇದದ ಕೂಗು ಕುರುಡು ಪರಂಪರೆಯ ಭಾವನೆಯುಳ್ಳದ್ದಾಗಿರುವುದೆಂದೂ, ಹೊಸ ವಿಧಾನ ಮತ್ತು ಭಾವನೆಗಳನ್ನು ಅಳವಡಿಸಿಕೊಳ್ಳದಿದ್ದರೆ ವೈದ್ಯ ಪದ್ಧತಿಯು ಬೆಳೆಯುವುದಿಲ್ಲವೆಂದೂ ಹೇಳಿದರು.

ಮೈಸೂರು ಆಯುರ್ವೇದ ಕಾಲೇಜಿನ ಅಭಿವೃದ್ಧಿಯನ್ನು ಪ್ರಸ್ತಾಪಿಸಿ, ಅಲ್ಲಿಗೆ ಹೊಸ ಪ್ರಿನ್ಸಿಪಾಲ್ ಮತ್ತು ತಕ್ಕ ಅರ್ಹತೆಯುಳ್ಳ ಅಧ್ಯಾಪಕರನ್ನು ನೇಮಿಸಲಾಗುವುದೆಂದು ಹೇಳಿದರು ಕಾಲೇಜಿಗೆ ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವಾಗ ಸೈನ್ಸ್ ಇಂಟರ್ಮೀಡಿಯೇಟ್ ಆದವರನ್ನು ತೆಗೆದುಕೊಳ್ಳುವುದು ಅಗತ್ಯವೆಂದು ಸೂಚಿಸಿದರು ದೇಶದಲ್ಲಿ ೫ ಹೊಸ ಕಾಲೇಜುಗಳನ್ನು ಸ್ಥಾಪಿಸಲಾಗುವುದೆಂದೂ ಹೇಳಿದರು

ಪದವೀಧರರ ಸಂಘದ ಅಧ್ಯಕ್ಷ ಡಾ|| ಎಂ. ಗುಂಡಪ್ಪನವರು ಅಧ್ಯಕ್ಷತೆ ವಹಿಸಿದ್ದರು ಡಾ|| ರಾಮಾಚಾರ್ಯರು ವರದಿಯನ್ನು ಒಪ್ಪಿಸಿದರು

೧೧೪ ಗಂಟೆ ಸತತ ಸೈಕಲ್ ಸವಾರಿ

ಉತ್ತರ ಪ್ರದೇಶದ ಬರೇಲಿಯ ಅಬ್ದುಲ್ಲಾ ಎಂಬುವನು ಕಟಕ್ಕಿನಲ್ಲಿ ೧೧೪ ಗಂಟೆ ೫ ನಿಮಿಷಗಳವರೆಗೆ ಸತತ ಸೈಕಲ್ ಸವಾರಿ ಮಾಡಿ ವಿಶ್ವದ ರಿಕಾರ್ಡನ್ನು [illegible] ಸ್ಥಾಪಿಸಿದನು

ಅಡಿಗೆಯವರು ಬೇಕಾಗಿದ್ದಾರೆ

ಚಾಮರಾಜಪುರಂ 1022 ನೇ ನಂಬರು ಮನೆಯಲ್ಲಿರುವ ಸಹಾಯಕರ ಹಾಸ್ಟಲ್ಲಿಗೆ, ಮಿತ್ರಾಹಾರವನ್ನು ತಯಾರು ಮಾಡಬಲ್ಲ ಅನುಭವಸ್ಥ ಅಡಿಗೆಯವರು ಬೇಕು ಸಾಯರ್ ಆದರೆ ಉತ್ತಮ ವಿವರಗಳಿಗೆ ಕಾರ್ಯದರ್ಶಿ ಕೆ. ಮುನಿಯಪ್ಪನವರನ್ನು ಕಾಣಬಹುದು

ಮೈಸೂರು ವಿಶ್ವವಿದ್ಯಾನಿಲಯ

ಕ್ರಾಫರ್ಡ್ ಹಾಲ್, ಮೈಸೂರು
ತಾ|| 27-11-1956

ಪ್ರಕಟಣೆ

ಕೆಳಗೆ ನಮೂದಿಸಲಾಗಿರುವ ನಿಯಮ 79 (1953 54ರ ಕ್ಯಾಲೆಂಡರ್ ಭಾಗ I ರ ಪುಟ 32) ರ ಪ್ರಕಾರ ಈ ವಿಶ್ವವಿದ್ಯಾನಿಲಯದ ಪದವೀಧರರು (ರಿಜಿಸ್ಟರ್ಡ್ ಪದವೀಧರರಾಗಿ ಎನ್ರೋಲ್ ಆಗಿರುವವರು) ಪುನರ್ಮುದ್ರಣ ಮತ್ತು ತಿದ್ದುಪಡಿಗಾಗಿ ಅರ್ಜಿಗಳನ್ನು ಕೆಳಗೆ ಕಾಣಿಸಿರುವ ನಮೂನೆಯಲ್ಲಿ ಈ ಕಛೇರಿಯನ್ನು 1956ನೇ ಡಿಸೆಂಬರ್ 15 ರೊಳಗೆ ತಲುಪುವಂತೆ ಕಳುಹಿಸಬೇಕೆಂದು ಕೋರಲಾಗಿದೆ

"ನಿಯಮ 79 ರಿಜಿಸ್ಟರ್ಡ್ ಪದವೀಧರರ ರಿಜಿಸ್ಟರನ್ನು ಪ್ರತಿ ವರ್ಷ ಜನವರಿ 1ನೇ ತಾರೀಖು ಪುನರ್ಮುದ್ರಣ ಮತ್ತು ತಿದ್ದುಪಡಿ ಮಾಡಲಾಗುವುದು ಪುನರ್ಮುದ್ರಣ ಮತ್ತು ತಿದ್ದುಪಡಿಗಾಗಿ ಅರ್ಜಿಗಳು ಹಿಂದಿನ ಡಿಸೆಂಬರ್ 15 ರೊಳಗಾಗಿ ರಿಜಿಸ್ಟ್ರಾರರಿಗೆ ತಲುಪಬೇಕು"

1. ಹೆಸರು ಪದವಿಗಳ ಸಹಿತ
2. ಎನ್ರೋಲ್ಮೆಂಟ್ ನಂಬರು
3. ವಿಳಾಸ

ಎಫ್ ಜೆ ವರ್ಗೀಸ್,
ರಿಜಿಸ್ಟ್ರಾರ್

ಆಹಾರ ಸಂಶೋಧನಾಲಯಕ್ಕೆ ಮುಖ್ಯ ಮಂತ್ರಿಗಳ ಭೇಟಿ

ಮೈಸೂರು ೪

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯಕ್ಕೆ ಭೇಟಿಯಿತ್ತು, ವಿವಿಧ ಶಾಖೆಗಳಲ್ಲಿ ನಡೆಯುತ್ತಿರುವ ಕೆಲಸಕಾರ್ಯಗಳ ಪ್ರಗತಿಯನ್ನು ನೋಡಿ ಮೆಚ್ಚಿಗೆಯನ್ನು ಸೂಚಿಸಿದರು ಸಂಸ್ಥೆಯ ಡೈರೆಕ್ಟರಾದ ಡಾ|| ವಿ. ಸುಬ್ರಹ್ಮಣ್ಯಂರವರು ಅವರನ್ನು ಸ್ವಾಗತಿಸಿ, ಕಳೆದ ೬ ವರ್ಷಗಳಿಂದಲೂ ಅಲ್ಲಿ ಕೈಗೊಳ್ಳಲಾಗಿರುವ ವಿವಿಧ ಪ್ರಯೋಗಗಳಿಂದ ಸಾರ್ವಜನಿಕರಿಗೆ ಉಂಟಾಗಿರುವ ಪ್ರಯೋಜನವನ್ನು ವಿವರಿಸಿದರು ಹಣ್ಣು ಮತ್ತು ತರಕಾರಿಗಳ ರಕ್ಷಣೆಗಾಗಿ ಒಂದು ಕಾರ್ಖಾನೆಯನ್ನು ಇಲ್ಲಿ ನಿರ್ಮಿಸಲಾಗುವುದೆಂದು ಅವರು ತಿಳಿಸಿದರು

ಶ್ರೀ ನಿಜಲಿಂಗಪ್ಪನವರು ಭಾಷಣ ಮಾಡಿ, ಕರ್ನಾಟಕ ಪ್ರಾಂತದಲ್ಲಿ ನೈಸರ್ಗಿಕ ಸಂಪತ್ತು ವಿಶೇಷವಾಗಿರುವುದೆಂದೂ, ಅವುಗಳ ಪೂರ್ಣ ಪ್ರಯೋಜನವು ಮಹಾಜನರಿಗೆ ದೊರಕುವಂತೆ ಮಾಡಲು ಈ ಸಂಸ್ಥೆಯವರು ಪ್ರಯತ್ನಿಸಬೇಕೆಂದೂ ಸೂಚಿಸಿದರು ವಿಜ್ಞಾನ ಸಂಶೋಧನೆಗಾಗಿ ಅಗತ್ಯವಾದ ಧನ ಸಹಾಯವನ್ನು ಕೇಂದ್ರ ಸರ್ಕಾರದಿಂದ ಒದಗಿಸಲು ತಾವೂ ಸಹ ಪ್ರಯತ್ನಿಸುವುದಾಗಿ ಅವರು ಹೇಳಿದರು.

ಸಾಮೂಹಿಕ ವಿದ್ಯಾಭ್ಯಾಸ ದಿನಾಚರಣೆ

ಕೃಷ್ಣರಾಜೇಂದ್ರ ಗಿರಣಿ ಕಾರ್ಮಿಕರ ವಸತಿ ಕ್ಷೇತ್ರದಲ್ಲಿರುವ ಮಾಧ್ಯಮಿಕ ಶಾಲೆಯಲ್ಲಿ ಕಳೆದ ಶನಿವಾರ ಸಾಮೂಹಿಕ ವಿದ್ಯಾಭ್ಯಾಸ ದಿನಾಚರಣೆಯು ನೆರವೇರಿತು ಕಾರ್ಮಿಕ ಅಧಿಕಾರಿಗಳಾದ ಶ್ರೀ ಎಂ ದ್ವಾರಕಾನಾಥ್‌ರವರು ಮಕ್ಕಳಿಗೆ ಅನೇಕ ಉಪಯುಕ್ತ ವಿಷಯಗಳನ್ನು ತಿಳಿಸಿದರು ಸಿಹಿ ತಿಂಡಿಯನ್ನು ವಿನಿಯೋಗಿಸಲಾಯಿತು

ಮನೆಗಳು ಕ್ರಯಕ್ಕಿವೆ

[illegible] ೨ ಸಂಸಾರಕ್ಕೆ ಅನುಕೂಲವಾದ, ನಲ್ಲಿ ಕರೆಂಟ್ ಇರುವ ಮನೆ ರೂ 6,500

★

ವಿದ್ಯಾರಣ್ಯಪುರದ ಮುಖ್ಯ ರೋಡಿನಲ್ಲಿ ಆಧುನಿಕ ರೀತಿಯಲ್ಲಿ ಹೊಸದಾಗಿ ಕಟ್ಟಿರುವ, (ಕಾರ್ನರ್ ಸೈಟ್) ಎಲ್ಲಾ ಅನುಕೂಲಗಳುಳ್ಳ ತಾರಸಿ ಮನೆ ರೂ 12,000

★

ಚಾಮುಂಡಿಪುರಂ ಹೊಸ ಬಂಡಿಕೇರಿ 6ನೇ ಕ್ರಾಸ್ 2623/1 ನೇ ನಂಬರು ಮನೆ ರೂ. 1,900

★

ನರಸಿಂಹರಾಜ ಮೊಹಲ್ಲಾ ಶಿವಾಜಿ ರಸ್ತೆ 4795/2 ನಂಬರು ಬಂಗ್ಲಾ (ಹಿಂದೆ [illegible] ಗರ್ಲ್ಸ್ ಹಾಸ್ಟೆಲ್ ಇದ್ದ) ರೂ 100 ಬಾಡಿಗೆ ಬರುತ್ತೆ ರೂ 24,000

★

ವಿದ್ಯಾರಣ್ಯಪುರದ ಪಾರ್ಕ್ ಬಳಿ ನಲ್ಲಿ, ದೀಪ ಬಾವಿ ಇರುವ ತಾರಸಿ ಮನೆ. ರೂ 9,500

★

ದೇವರಾಜ ಮೊಹಲ್ಲಾ ಪೋಸ್ಟಾಫೀಸಿನ ಬಳಿ ಮನೆ ರೂ 9,000

★

ಚಾಮುಂಡೀಪುರಂ ಮಾರ್ಕೆಟ್ ರಸ್ತೆ ಅಂಗಡಿಗಳು, ಮನೆಗಳು, ರೂಂಗಳು ಇದ್ದು ಮಾಹೆಯಾನ ರೂ 250 ಬಾಡಿಗೆ ಬರುವ, ರೂ 175 ಕಂದಾಯವಿರುವ ಮನೆ ಇರುವ ನಂಬರು 2695ರಿಂದ 2696/2 ಗೆ ಬೆಲೆ ರೂ 30 000

ಬಿ. ಎಸ್. ಸುಬ್ಬರಾವ್,
ಜಗನ್ಮೋಹನ್ ಬಂಗ್ಲಾ ಬಳಿ, ಮೈಸೂರು

Edited, Printed and Published by
A. R. Nagarajan at Sadhvi Press
O Subbiah Road, Mysore

"ಗೋಪಾಲ ರತ್ನ" ಪ್ರಶಸ್ತಿ

ಹೆಚ್ಚು ಹಾಲು ಕೊಡುವ ಹಸುಗಳನ್ನು ಸಾಕುವವರಿಗೆ ಪ್ರೋತ್ಸಾಹವೀಯಲು ಅಖಿಲ ಭಾರತ ಹಾಲಿನ ಸ್ಪರ್ಧೆಯೊಂದನ್ನು ಭಾರತ ಸರ್ಕಾರದವರು ಏರ್ಪಡಿಸಲಿರುವರು. ಅತ್ಯಂತ ಹೆಚ್ಚು ಹಾಲು ಕೊಡುವ ದನಗಳ ಮಾಲೀಕರಿಗೆ ಗೋಪಾಲರತ್ನ ಎಂಬ ಪ್ರಶಸ್ತಿಯನ್ನು ಕೊಡಲಾಗುವುದು ಗಿರ್, ಹರಿಯಾನ ಮತ್ತು ಸಿಂಧಿ ಜಾತಿ ಹಸುಗಳು ಮತ್ತು ಮುರ್ರಾ ಜಾತಿಯ ಎಮ್ಮೆಗಳಲ್ಲಿ ಸ್ಪರ್ಧೆ ನಡೆಯುವುದು ಪ್ರಶಸ್ತಿಯ ಜೊತೆಗೆ ೩,೦೦೦ ರೂ ಪ್ರಥಮ ಬಹುಮಾನವಾಗುವುದು ಎರಡನೇ ಬಹುಮಾನವು ರೂ ಮತ್ತು ಪ್ರಶಸ್ತಿ ಪತ್ರಗಳನ್ನೊಳಗೊಂಡಿವೆ ಜಿಲ್ಲೆಗಳಲ್ಲಿ ಇದನ್ನು ನಡೆಸಲಾಗುವುದು.

ಬಿಹಾರಿನ ಪದವೀಧರರಿಗೆ ಭಾರತೀಯ ರೀತಿಯ ಉಡುಪು

ಪ್ರಾಚೀನ ಭಾರತದ ಪರಂಪರೆಯನ್ನನುಸರಿಸಿ, ಬಿಹಾರಿನ ವಿಶ್ವವಿದ್ಯಾಲಯದ ಪ್ರೊಫೆಸರು ಮತ್ತು ಪದವೀಧರರುಗಳಿಗೆ ಹೊಸ ಉಡುಪನ್ನು ಗೊತ್ತುಮಾಡಲಾಗಿದೆ ಉತ್ತರೀಯ ಮತ್ತು ಛದ್ದರುಗಳನ್ನು, ಬಿಳಿಯ ಅಂಗಿ ಅಥವಾ [illegible] ಅನ್ನು ಅವರುಗಳು ಧರಿಸಬೇಕು.

ಬಿ. ಎಂ [illegible] ಸ್ಮಾರಕ ಅಖಿಲ ಮೈಸೂರು ಚರ್ಚಾ ಸ್ಪರ್ಧೆ

ನಂಜನಗೂಡು ಕರ್ನಾಟಕ ಸಂಘದಾಶ್ರಯದಲ್ಲಿ ಮೇಲ್ಕಂಡ ಸ್ಪರ್ಧೆಯನ್ನು ಇದೇ ಡಿಸೆಂಬರ್ ೨೩ನೇ ಭಾನುವಾರ ಸಂಜೆ ೫ ಗಂಟೆಗೆ ಏರ್ಪಡಿಸಿದೆ. ಸಂಸ್ಥಾನದ ಎಲ್ಲ ಸಂಘ ಸಂಸ್ಥೆ ಮತ್ತು ಕಾಲೇಜುಗಳು ಭಾಗವಹಿಸಬಹುದು. ಎಂಟು ರೂ. ಪ್ರವೇಶಧನದೊಡನೆ ಇದೇ ೧೫ ರೊಳಗೆ ಶ್ರೀ ಎ ವಿ ಕೃಷ್ಣ, ಕೋಶಾಧ್ಯಕ್ಷರು, ಕರ್ನಾಟಕ ಸಂಘ, ನಂಜನಗೂಡು-ಇವರಿಗೆ ಕಳುಹಿಸಬೇಕಾಗಿ ಕಾರ್ಯದರ್ಶಿ ಎಂ. ಕೃಷ್ಣಪ್ಪನವರು ಪ್ರಾರ್ಥಿಸಿರುತ್ತಾರೆ.

ಜೀವನದ ಹರ್ಷವನ್ನು ಸವಿಯಿ

ಪುರುಷರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ಐಶ್ವರ್ಯ, ಸೌಂದರ್ಯ ಚಪಲತೆಯನ್ನು ಹೊಂದಿ ದೀರ್ಘ ಜೀವನದ ಎಲ್ಲಾ ಆನಂದಗಳನ್ನೂ ಅನುಭವಿಸಬೇಕೆಂಬ ಮಾನವರ ಮಹತ್ತರವಾದ ಆಶೆ ಪುರುಷ ಶರೀರದ ಅನೇಕ ಭಾಗಗಳಲ್ಲಿರುವ ಕೆಟ್ಟು ಹೋದ ಗ್ರಂಥಿಗಳು, ಸಂಧಿವಾತ, ಜ್ಞಾಪಕ ಶಕ್ತಿಯ ಅಭಾವ, ದುರ್ಬಲತೆ, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ, ಸಿಫಿಲಿಸ್, ಗೊನೋರಿಯಾ, [illegible] ಅಂಡ ವಾಯು ಮತ್ತು ಎಲ್ಲ ವಿಧವಾದ ಮೂತ್ರ ರೋಗಗಳಿಗೂ ಕಾರಣವಾದ ಇವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ ಡಾ|| ರಾಣಾರವರನ್ನು (ಕ್ಲಿನಿಕ್ ವೇಳೆ) ಪ್ರತಿದಿನ ಬೆಳಿಗ್ಗೆ 8 ರಿಂದ 12 ಮತ್ತು ಸಾಯಂಕಾಲ 4 ರಿಂದ 8ರ ವರೆಗೆ ಭೇಟಿ ಮಾಡಿ ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ವ್ಯಾಧಿಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು ಸೂಕ್ತ ಸಲಹೆ ಕೊಡಲಾಗುವುದು.

ಅವರ ಸಲಹೆ ಪಡೆಯುವುದರಿಂದ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗೌಪ್ಯವಾಗಿ ನಡೆಸಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿ: –

ರಾಣಾ ಮೆಡಿಕಲ್ ಹಾಲ್,
ಲೇನ್ ನಂ. 1–745 ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ [illegible]
ಮೂರನೇ ಕಟ್ಟಡ,)
ಮೈಸೂರು

ರಾಜಕಮಲ್, ಮೈಸೂರು. ★ 7—12—56 ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು
ಬಹಳ ದಿನಗಳಿಂದಲೂ ನಿರೀಕ್ಷಿಸುತ್ತಿದ್ದ, ಚಿತ್ರಭಾರತ್‌ರವರ
ಎಸ್ ಜಾನಕಿ, ವಿದ್ಯಾವತಿ, ಕಲ್ಯಾಣಕುಮಾರ್, ಬಾಲಕೃಷ್ಣ, ಹೆಚ್ ಆರ್. ಶಾಸ್ತ್ರಿ
ಮತ್ತು ರಮಾದೇವಿ ಪಾತ್ರವಹಿಸಿರುವ ಕನ್ನಡ ಚಿತ್ರ !
★ **ಭಾಗ್ಯಚಕ್ರ** ★
★ 4—12—56 ರಿಂದ ಇನ್ನು ಮೂರು ದಿನಗಳು ಮಾತ್ರ ★ **ಗುಲೇಬಕಾವಲಿ** ★ (ತಮಿಳು ಚಿತ್ರ) ★

ರಿಜಿಸ್ಟರ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : WEDNESDAY 5—12—1956 ಮೈಸೂರು : ಬುಧವಾರ ೫—೧೨—೧೯೫೬ [ಸಂಚಿಕೆ : ೧೬೨

ಪಾಕಿಸ್ತಾನದಿಂದ ತೊಂದರೆಯ ಬಗ್ಗೆ ನೆಹರೂ ಸೂಚನೆ

ವಿಮಾನ ನಿಲ್ದಾಣದಲ್ಲಿ ಚೀಣಾ ಪ್ರಧಾನಿಗೆ ಭಾರಿ ಸ್ವಾಗತ

ಎಡದಿಂದ ಬಲಕ್ಕೆ : ಗವರ್ನರ್ ಶ್ರೀ ಜಯಚಾಮರಾಜ ಒಡೆಯರ್, ಚೀಣದ ಉಪಪ್ರಧಾನಿ ಹೋ ಲುಂಗ್, ಪ್ರಧಾನಿ ಚೌ ಎನ್ ಲೈ, ಮಾರ್ಷಲ್ ಹಾಜಿ ಸೈಫಿಲ್ಬರ್ ವ್ಯಾಹುಂ ಲುಂಗ್ ಪೆಂಗ್, ಚೀಣಾ ರಾಯಭಾರಿ ಪಾನ್ ಜುಲಿ ಮತ್ತು ಮುಖ್ಯ ಮಂತ್ರಿ ನಿಜಲಿಂಗಪ್ಪ

ಭಾರತ ಮತ್ತು ಚೀಣಗಳ ಗಾಢವಾದ ಮೈತ್ರಿ

ಸಾರ್ವಜನಿಕ ಸಭೆಯಲ್ಲಿ ಚೀಣಾ ಪ್ರಧಾನಿಯವರ ಭಾಷಣ

ಬೆಂಗಳೂರು ೪

ಚೀಣದ ಪ್ರಧಾನಿ ಚೌ ಎನ್ ಲೈಯವರು ನೆನ್ನೆ ಇಲ್ಲಿನ ಪೌರಸಭೆಯವರ ಸನ್ಮಾನ ಸಮಾರಂಭದಲ್ಲಿ ಭಾಷಣ ಮಾಡಿ, ಭಾರತ ಮತ್ತು ಚೀಣಗಳ ೧೦೦ ಕೋಟಿ ಪ್ರಜೆಗಳ ಗಾಢವಾದ ಸ್ನೇಹವನ್ನು ಜಗತ್ತಿನ ಯಾವ ಶಕ್ತಿಯೂ ತಪ್ಪಿಸಲಾರದೆಂದು ತಿಳಿಸಿದರು. ಭಾರತ ಮತ್ತು ಚೀಣಗಳು ಈಗ ರಚನಾತ್ಮಕ ಕಾರ್ಯಕ್ರಮ ಕೈಗೊಂಡಿವೆಯೆಂದೂ, ಭಾರತದಿಂದ ಅನೇಕ ವಿಷಯಗಳನ್ನು ಚೀಣರು ಅರಿಯಬೇಕಾಗಿರುವುದೆಂದೂ ಅವರು ಹೇಳಿದರು. ಎರಡು ರಾಷ್ಟ್ರಗಳ ರಾಜ್ಯಭಾರ ಪದ್ಧತಿಯಲ್ಲಿ ವ್ಯತ್ಯಾಸವಿದ್ದರೂ, ಹಲವು ವಿಷಯಗಳಲ್ಲಿ ಒಂದೇ ಅಭಿಪ್ರಾಯವಿದ್ದರೂ, ಉಭಯ ರಾಷ್ಟ್ರಗಳಿಗೂ ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲಿ ಹೆಚ್ಚಿನ ಸಹಕಾರವು ಅಗತ್ಯವೆಂದೂ, ಪ್ರಪಂಚದ ಶಾಂತಿಯನ್ನು ಕಾಪಾಡುವುದರಲ್ಲಿ ಚೀಣರು ಆಸಕ್ತರಾಗಿರುವುದಾಗಿಯೂ ನುಡಿದರು.

ಆದುದರಿಂದಲೇ ಪ್ರಧಾನಿ ನೆಹರೂ ಮತ್ತು ತಾವು ಪಂಚಶೀಲದ ಆಧಾರದಲ್ಲಿ ಸಹಬಾಳ್ವೆ ತತ್ವವನ್ನು ಪ್ರತಿಪಾದಿಸಿರುವುದಾಗಿ ಅವರು ಹೇಳಿದರು. ಈ ತತ್ವವನ್ನು ಸಾಮಾನ್ಯವಾಗಿ ಅಂತರ ರಾಷ್ಟ್ರೀಯ ವ್ಯವಹಾರಗಳಲ್ಲೆಲ್ಲಾ ಅನ್ವಯಿಸಬೇಕೆಂಬುದು ತಮ್ಮಿಬ್ಬರ ಅಭಿಪ್ರಾಯವೆಂದೂ ಅವರು ಸೂಚಿಸಿದರು. ಈಗ ಜಗತ್ತಿನಲ್ಲಿ ವಸಾಹತುಶಾಹಿ ಆಕ್ರಮಣವು ಹೆಚ್ಚುತ್ತಿರುವುದಾಗಿಯೂ, ಅದರಿಂದ ಪ್ರಪಂಚದ ಶಾಂತಿ [illegible] ಸ್ಥಿತಿಯಲ್ಲೂ ಪಂಚಶೀಲ ತತ್ವವು ಬೆಳಗುವಂತೆ ಮಾಡಲು ಉಭಯ ರಾಷ್ಟ್ರಗಳ ಸಹಕಾರವು ಬೇಕಾಗಿದೆಯೆಂದೂ ಅವರು ನುಡಿದರು. [illegible] ಸಂಸ್ಥಾನವು ಸಾಂಸ್ಕೃತಿಕ ಪರಂಪರೆ [illegible] ಬೀಡಾಗಿರುವುದೆಂದೂ ಹೇಳಿದರು. ಮೇಯರ್ ಶ್ರೀ ಕೃಷ್ಣಪ್ಪನವರು ಅವರನ್ನೂ, ಉಪ ಪ್ರಧಾನಿ ಹೋ ಲುಂಗ್‌ರವರನ್ನೂ ಸ್ವಾಗತಿಸಿ ಸೀತಾರಾಮ ಲಕ್ಷ್ಮಣ ಆಂಜನೇಯ ವಿಗ್ರಹಗಳಿರುವ ಕರಂಡದಲ್ಲಿ ಅವರಿಗೆ ಬಿನ್ನವತ್ತಳೆಯನ್ನರ್ಪಿಸಿದರು.

ರಾತ್ರಿ ರೆಸಿಡೆನ್ಸಿಯಲ್ಲಿ ಚೌರವರ ಗೌರವಾರ್ಥವಾಗಿ ಔತಣವನ್ನು ಏರ್ಪಡಿಸಲಾಗಿತ್ತು. ಗವರ್ನರ್ ಶ್ರೀ ಜಯಚಾಮರಾಜ ಒಡೆಯರವರು ಭಾಷಣ ಮಾಡಿ, ಚೌರವರ ನೇತೃತ್ವದಲ್ಲಿ ಚೀಣವೂ, ನೆಹರೂರವರ ನೇತೃತ್ವದಲ್ಲಿ ಭಾರತವೂ ಭವ್ಯ ಭವಿಷ್ಯದ ಸಾಧನೆಯ ಸಂಕೇತಗಳಾಗಿದವುವೆಂದು ಹೇಳಿದರು.

ಚೌರವರು ಚೀಣೀ ಭಾಷೆಯಲ್ಲಿ ಉತ್ತರವಿತ್ತು, ತಮ್ಮ ಸಂತೋಷವನ್ನು ವ್ಯಕ್ತಪಡಿಸಿದರು

ವಿಶ್ವವಿದ್ಯಾಲಯಗಳು ಋಷ್ಯಾಶ್ರಮಗಳಂತೆ ಇರಬೇಕು

ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಮಾಸ್ತಿಯವರ ಭಾಷಣ

ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್‌ರವರು ನೆನ್ನೆ ಧಾರವಾಡದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಘಟಿಕೋತ್ಸವ ಭಾಷಣ ಮಾಡಿ ಭಾರತದ ವಿಶ್ವವಿದ್ಯಾಲಯಗಳು ವಸಿಷ್ಠರು ಮತ್ತು ಕಣ್ವರು ಮುಂತಾದ ಋಷಿವರ್ಯರುಗಳ ಆಶ್ರಮಗಳಂತಿರಬೇಕೆಂದು ಸೂಚಿಸಿದರು. ಮೈಸೂರು ಮತ್ತು ಕರ್ನಾಟಕ ವಿಶ್ವವಿದ್ಯಾಲಯಗಳು ಒಂದೇ ಸಮನಾದ ಸ್ಥಿತಿಯಲ್ಲಿರಬೇಕೆಂದೂ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿರುವಂತೆ ಮೈಸೂರು ವಿಶ್ವವಿದ್ಯಾಲಯವೂ ಎಲ್ಲಾ ಸ್ವಾತಂತ್ರ್ಯವನ್ನು ಹೊಂದಿರಬೇಕೆಂದೂ ಅವರು ತಿಳಿಸಿದರು. ಗವರ್ನರ್ ಶ್ರೀ ಜಯಚಾಮರಾಜಒಡೆಯರವರು ಇದೇ ಮೊಟ್ಟಮೊದಲಾಗಿ ಘಟಿಕೋತ್ಸವದ ಅಧ್ಯಕ್ಷತೆ ವಹಿಸಿದ್ದರು.

ಶ್ರೀ ಮಾಸ್ತಿಯವರು, ಬಿ. ಜಿ. ಖೇರ್ ಮತ್ತು ಕರ್ನಾಟಕದ ಸಾಹಿತಿ ಶ್ರೀ ಪಿ. ಜಿ. ಹಳಕಟ್ಟಿಯವರುಗಳಿಗೆ ಗೌರವ ಡಾಕ್ಟರ್ ಆಫ್ ಲೆಟರ್ಸ್ ಮತ್ತು ಬೊಂಬಾಯಿ ಮಂತ್ರಿ ದಿನಕರರಾವ್ ದೇಸಾಯ್‌ರವರಿಗೆ ಗೌರವ ಎಲ್ ಎಲ್. ಡಿ ಪ್ರಶಸ್ತಿಗಳನ್ನು ಕೊಡಲಾಯಿತು. ಆ ವಿಶ್ವವಿದ್ಯಾಲಯವು ಗೌರವ ಪ್ರಶಸ್ತಿಗಳನ್ನು ಕೊಟ್ಟಿರುವುದು ಇದೇ ಮೊದಲು

ಕ್ಯೂಬಾ ಮೇಲೆ ಕ್ರಾಂತಿಕಾರರ ದಂಡಯಾತ್ರೆ

ಕ್ಯೂಬಾ ರಾಷ್ಟ್ರದ ಅಧ್ಯಕ್ಷ ಬಟಿಸ್ಟಾರವರನ್ನು ಪದಚ್ಯುತಗೊಳಿಸಲು ಕ್ರಾಂತಿಕಾರರು ಆ ರಾಷ್ಟ್ರದ ಮೇಲೆ ದಂಡಯಾತ್ರೆಯನ್ನು ಆರಂಭಿಸಿರುವರೆಂದೂ, ಸರ್ಕಾರಿ ವಿಮಾನಗಳು ಕ್ರಾಂತಿಕಾರರನ್ನು ಕೊಂಡೊಯ್ದಿದ ಹಡಗಿನ ಮೇಲೆ ಗುಂಡು ಹಾರಿಸಿರುವುವೆಂದೂ ವರದಿಯಾಗಿದೆ. ಆ ಪ್ರದೇಶಕ್ಕೆ ಸರ್ಕಾರಿ ಸೈನ್ಯಗಳು ಹೋಗುತ್ತಿವೆ

ತಿರುವನಂತಪುರದ ಕೋರ್ಟಿಗೆ ಮುಂದೆಯೂ ಬಹಿಷ್ಕಾರ

ತಿರುವನಂತಪುರದಲ್ಲಿ ಕೇರಳ ಹೈಕೋರ್ಟಿನ ಶಾಖೆಯೊಂದನ್ನು ತೆರೆಯುವವರೆಗೂ ಕೋರ್ಟುಗಳಿಗೆ ಹೋಗಬಾರದೆಂದು ಅಲ್ಲಿನ ವಕೀಲರುಗಳು ನಿರ್ಧರಿಸಿರುತ್ತಾರೆ

ಕಪಿಲಾ ಗಿರಣಿ ಕಾರ್ಮಿಕರ ಮುಷ್ಕರ ಮುಕ್ತಾಯ

ಕಪಿಲಾ ಹತ್ತಿ ಗಿರಣಿ ಕಾರ್ಮಿಕರಿಗೂ, ಆಡಳಿತ ವರ್ಗದವರಿಗೂ ಒಪ್ಪಂದವಾದ ಪರಿಣಾಮವಾಗಿ ೭ ದಿನಗಳಿಂದ ನಡೆಯುತ್ತಿದ್ದ ಕಾರ್ಮಿಕರ ಮುಷ್ಕರವು ನೆನ್ನೆ ಮುಕ್ತಾಯವಾಯಿತು

ಸಮಾಜ ಶಿಕ್ಷಣ ಸಪ್ತಾಹ

ನಗರದ ವಯಸ್ಕರ ಶಿಕ್ಷಣ ಸಮಿತಿ ಆಶ್ರಯದಲ್ಲಿ ಕಳೆದ ೩ ನೇ ತಾರೀಖಿನಿಂದ ಏರ್ಪಟ್ಟಿರುವ ಸಮಾಜ ಶಿಕ್ಷಣ ಸಪ್ತಾಹದ ಅಂಗವಾಗಿ ನಾಳೆ ಬೆಳಿಗ್ಗೆ ೧೦ ಗಂಟೆಗೆ ಜ್ಯೋತಿ ನಗರದಲ್ಲಿ ಶ್ರೀ ಎನ್. ಜಿ. ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ಕಾರ್ಯಕ್ರಮವು ಇದೆ. ಶ್ರೀ ಎಲ್. ವಿಶ್ವನಾಥನವರು ಭಾಷಣ ಮಾಡುವರು. ಸಂಜೆ ೬ ಗಂಟೆಗೆ ಜಲಪುರಿಯಲ್ಲಿ ಶ್ರೀಮತಿ ರಾಮೇಶ್ವರಮ್ಮನವರ ಅಧ್ಯಕ್ಷತೆಯಲ್ಲಿ ಸಭೆ ಜರುಗುವುದು.

ಪುರಾಣ ಪ್ರವಚನ

ಮೈಸೂರು ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ನಾಳೆಯಿಂದ ಪ್ರತಿ ದಿನವೂ ಮಧ್ಯಾಹ್ನ ೩ ಗಂಟೆಯಿಂದ ೪ ಗಂಟೆಯವರೆಗೆ ಪದ್ಮ ಪುರಾಣದ ಅನುವಾದವು ನಡೆಯುತ್ತದೆ. ಸರ್ವರಿಗೂ ಸುಸ್ವಾಗತವಿದೆ.

ಪಾಕಿಸ್ತಾನದಿಂದ ಭಾರತಕ್ಕೆ ತೊಂದರೆಯ ಸಂಭವ

ಪಾಕಿಸ್ತಾನದ ಅಪಪ್ರಚಾರದ ಬಗ್ಗೆ ನೆಹರೂರವರ ಸೂಚನೆ

ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ನಡೆಸುತ್ತಿರುವ ಅಪಪ್ರಚಾರವನ್ನು ಕುರಿತು ನೆಹರೂರವರು ನೆನ್ನೆ ರಾಜ್ಯಸಭೆಯಲ್ಲಿ ಮಾತನಾಡಿ, ಇಂತಹ ಪ್ರಚಾರಗಳು ಸ್ವಲ್ಪ ತೊಂದರೆಯ ಪೀಠಿಕೆಯಾಗಬಹುದೆಂದು ತಿಳಿಸಿದರು. ಸಾಮಾನ್ಯವಾಗಿ ಪಾಕಿಸ್ತಾನದಿಂದ ಉಂಟಾಗಿರುವ ತೊಂದರೆಗಳು ಇದೇ ರೀತಿ ಸಂಭವಿಸಿರುವುವೆಂದೂ ಅವರು ಹೇಳಿದರು. ಅಮೆರಿಕವು ಪಾಕಿಸ್ತಾನಕ್ಕೆ ಕೊಟ್ಟಿರುವ ಶಸ್ತ್ರಾಸ್ತ್ರವನ್ನು ಭಾರತದ ವಿರುದ್ಧವಾಗಿ ಬಳಸಕೂಡದೆಂದು ಸ್ಪಷ್ಟಪಡಿಸಿದ್ದರೂ ಸಹ ಅದನ್ನು ಉಪಯೋಗಿಸಬಹುದೆಂದು ಸುಹ್ರಾವರ್ದಿಯವರ ಭಾವನೆಯಿರುವುದಾಗಿ ನೆಹರೂರವರು ಅಭಿಪ್ರಾಯಪಟ್ಟರು

ಸಿರಿಯದ ಮಂತ್ರಿಮಂಡಲದ ರಾಜೀನಾಮೆ

ಸಿರಿಯದ ಮಂತ್ರಿಮಂಡಲವು ಮಿಲಿಟರಿ ಗುಂಪೊಂದರ ಒತ್ತಾಯಕ್ಕೆ ಬಗ್ಗಿ ರಾಜೀನಾಮೆಯಿತ್ತಿರುವುದಾಗಿ ವರದಿಯಾಗಿದೆ. ಜನರಲ್ ಸರಾಜ್ ಎಂಬ ಮಿಲಿಟರಿ ಅಧಿಕಾರಿಯು ಸರ್ಕಾರದ ಎಲ್ಲಾ ಅಧಿಕಾರಗಳನ್ನೂ ವಹಿಸಿಕೊಂಡಿರುವುದಾಗಿ ಹೇಳಲಾಗಿದೆ.

ರಾಷ್ಟ್ರಾದ್ಯಂತ ಒಂದೇ ಮಟ್ಟದ ಸಂಬಳದ ವ್ಯವಸ್ಥೆ

ಕೇಂದ್ರ ಸರ್ಕಾರಕ್ಕೆ ವಿದ್ಯಾ ಸಚಿವರ ಮನವಿ

ಒಂದೇ ರೀತಿಯ ಕೆಲಸ ಮಾಡುವವರಿಗೆ ಒಂದೇ ದರ್ಜೆಯ ಸಂಬಳವನ್ನು ಗೊತ್ತುಪಡಿಸಲು ವಿಶೇಷ ಸಂಬಳ ಸಮಿತಿಯೊಂದನ್ನು ನೇಮಿಸಬೇಕೆಂದು ಮೈಸೂರಿನ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತಿದ್ದಾರೆ. ದೇಶದಲ್ಲಿ ಈ ತಾರತಮ್ಯಗಳನ್ನು ಇನ್ನುಮುಂದೆ ಸಹಿಸಲು ಸಾಧ್ಯವಿಲ್ಲವೆಂದೂ ಅವರು ಅಭಿಪ್ರಾಯಪಟ್ಟಿರುವರು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕೊಳಲು. ೭-೧೫ ಎಸ್. ಎನ್. ಸ್ವರ್ಣಲತ-ದೇವರ ನಾಮ ೭-೩೦ ಮತ್ತು ೮-೧೫ ಬಿ ವಿ ಇಂದಿರಮ್ಮ-ಕಾವ್ಯ ವಾಚನ ಮತ್ತು ದೇವರ ನಾಮ ಮಧ್ಯಾಹ್ನ ೧೨ ಎಂ. ಶಿವರಾಂ-ವೀಣಾ ವಾದನ ೧೨-೩೦ ಹೆಚ್. ಎನ್. ಸ್ವರ್ಣಲತ-ಸಂಗೀತ. ೧ [illegible] ಸಂಗೀತ ೩ ೧೫ ಪ್ರೌಢಶಾಲೆಗಳಿಗಾಗಿ ಸಂಜೆ ೫ ೩೦ ಅಬ್ದುಲ್ ರಹೀಂ-ಸಿತಾರ್. ೬ ೫ ವಿರಾಮ ಸಂಗೀತ. ೬-೩೦ ಜಾನಪದ ಗೀತೆ ೬ ೩೦ [illegible] ೮-೩೦ ನಿಮ್ಮ ಮೆಚ್ಚಿನ ಗೀತೆ. ೯-೧ ಇಂಗ್ಲಿಷ್ ಭಾಷಣ ೯-೩೦ ಕನ್ನಡ ನಾಟಕ. ೧೦-೧೦ ಕೊಳಲು.

ಹಾಸನ ಮತ್ತು ಮಂಡ್ಯ ಜಿಲ್ಲಾ ವಿದ್ಯಾ ಇಲಾಖೆಗಳನ್ನು ಮೈಸೂರು ಡಿವಿಜನ್ನಿನ [illegible] ವಂಗಳೂರಿಗೆ ವರ್ಗಾಯಿಸಲಾಗಿದೆ.

ಗಾಣದ ಎಣ್ಣೆ ಕೈಗಾರಿಕಾಗಾರರ ಸಮ್ಮೇಳನ

ಅಂಗೀಕೃತವಾದ ನಿರ್ಣಯಗಳು

ಮೈಸೂರು ೫

ಮೊನ್ನೆ ನಗರದಲ್ಲಿ ಸೇರಿದ್ದ ಸಂಸ್ಥಾನದ ಗಾಣದ ಎಣ್ಣೆ ಕೈಗಾರಿಕೋದ್ಯಮಿಗಳ ಸಮ್ಮೇಳನದಲ್ಲಿ ಕೆಳಗೆ ಕಂಡ ಕೆಲವು ನಿರ್ಣಯಗಳನ್ನು ಅಂಗೀಕರಿಸಲಾಯಿತು —

Applications should reach the undersigned at Central Food Technological Research Institute, V V Mohalla P.O. Mysore, on or before 15th December, 1956.

A. W. De SOUZA
Administrative Officer

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲ ಕಡೆಗಳಲ್ಲೂ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಬ್ರಾಂಕಾಲ್
[illegible]
[illegible]
[illegible] ಅಂಡ್ ಕೋ.,
[illegible]
71/1. [illegible]
[illegible]
ಬೆಂಗಳೂರು-2

ಸಂಪುಟ : ೧೫] SADHVI : MONDAY 10—12—1956 ಮೈಸೂರು : ಸೋಮವಾರ ೧೦—೧೨—೧೯೫೬ [ಸಂಚಿಕೆ : [illegible]

ಈ ಸಾರಿ ಘಟಿಕೋತ್ಸವದಲ್ಲಿ ೨,೮೭೫ ಮಂದಿಗೆ ಪದವಿ

ರಾಷ್ಟ್ರದೇವೋಭವ ಎಂಬ ಹೊಸ ಮಂತ್ರವನ್ನು ಜಪಿಸಬೇಕು

ಘಟಿಕೋತ್ಸವದಲ್ಲಿ ಗವರ್ನರ್ ದಿವಾಕರರ ಕರೆ

ಮೊಟ್ಟಮೊದಲನೆಯದಾಗಿ ಕನ್ನಡ ಭಾಷಣ

ಮೈಸೂರು ೧೦

ನಮ್ಮದು ಈಗ ಒಂದು ಸ್ವತಂತ್ರ ರಾಷ್ಟ್ರ ಗಿದೆ ನಮ್ಮ ಬುದ್ಧಿ ವಿಕಾಸ, ಶಾಸ್ತ್ರಜ್ಞತೆ ಇ ್ಯಾದಿಗಳಿಗೆ ಅಪಾರ ಅವಕಾಶ ದೊರೆತಿದ್ದು [illegible] ಯಾವ ಪರಕೀಯರ ತಡೆಯೂ ಇಲ್ಲ. ಹೀಗಿದ್ದ ೂ ಇನ್ನೂ ನಮ್ಮ ಸ್ವಾತಂತ್ರ್ಯದ ರಕ್ಷಣೆ ಮಾಡಿ ೊಳ್ಳಲು ಬೇಕಾದ ಏಕೀಭಾವ, ರಾಷ್ಟ್ರೀಯ ೃತ್ತಿ ಪರಸ್ಪರ ಬಾಂಧವ್ಯ ಇವು ಬೇಕೋ ಅವು ನನ್ನು ಸಾಕಷ್ಟು ಬೆಳೆಸಿಲ್ಲ. ಧರ್ಮ, ಜಾತಿ, ಪ್ರಾಂತ, ಲಿಂಗ, ಭಾಷೆ ಇವುಗಳಲ್ಲಿಯ ಭೇದಗ ಇನ್ನೂ ನಮ್ಮ ರಾಷ್ಟ್ರೀಯ ಐಕ್ಯಕ್ಕೆ ಬಾಧ ವಾಗಿಯೇ ನಿಂತಿವೆ. ಈಗಿನ ಪೀಳಿಗೆಯ ಕಥೆ ಹಾಗಿರಲಿ, ಮುಂದಿನ ಪೀಳಿಗೆ ಯಾದರೂ ಶುದ್ಧ ರಾಷ್ಟ್ರೀಯ ಭಾವ, ಬಾಂಧ ಇವುಗಳಿಂದ ಪ್ರೇರಿತವಾಗಲಿ ಎಂದು ಹಾರೈ ಬೇಕಾಗಿದೆ ದಿನವೂ ಒಂದು ಕ್ಷಣವಾದರೂ ಶ್ಮೀರದಿಂದ ಕನ್ಯಾಕುಮಾರಿ ವರೆಗಿನ ನಮ್ಮ ಭಾರತದ ನಕ್ಷೆ ನಮ್ಮೆದುರು ಬಂದು ನಿಲ್ಲ , ಆಗ ನಮಗೆ ಉಳಿದ ಯಾವ ಗಡಿ ಗೆರೆಗಳೂ ಣದಿರಲಿ, 'ರಾಷ್ಟ್ರದೇವೋ ಭವ' ಎಂಬ ಂತ್ರದ ಜಪ ಒಂದು ಕ್ಷಣವಾದರೂ ನಡೆಯ , ಇಲ್ಲದಿದ್ದರೆ ಇದು ಕೇವಲ ನಮ್ಮ [illegible] ಗಳವಾಗುವ ಸ್ವಾತಂತ್ರ್ಯವಾಗಿ [illegible] ದು-ಎಂಬುದಾಗಿ ಈ ದಿನ ಇಲ್ಲಿ ನಡೆದ ವಿಶ್ವವಿ ್ಯಾಲಯದ ಘಟಿಕೋತ್ಸವದಲ್ಲಿ [illegible] ಗವರ್ನರಾದ ಶ್ರೀ ಆರ್. ಆರ್. ದಿವಾಕರ್‌ರವರು ತಿಳಿಸಿದರು.

ಅವರು ಮುಂದುವರಿದು, ಸ್ವಾತಂತ್ರ್ಯದೊಡನೆ ಜಾಪ್ರಭುತ್ವವೂ ಸೇರಿದೆಯೆಂದೂ, ಅದರ [illegible] ನೆ, ಕರ್ತವ್ಯಗಳ ಸರಿಯಾದ ಅರಿವು ಆಗದ ದ್ದರೆ ಅದು ನಾವು [illegible] ಅವರು ಅಭಿಪ್ರಾಯಪಟ್ಟರು.

ಹೃದಯಗಳ ಏಕೀಕರಣಕ್ಕೆ ಕರೆ

ಹಲವಾರು ಶತಮಾನಗಳಿಂದ ಕರ್ನಾಟಕವು ಜಕೀಯವಾಗಿ ಛಿನ್ನಭಿನ್ನಗೊಂಡಿತ್ತು. [illegible] ರ್ಷಗಳ ಹಿಂದೆ ಕರ್ನಾಟಕದ ಏಕೀಕರಣದ ಪ್ರಥಮ ಜಾಗ್ರತಿಯು ಉದಯವಾಯಿತು ಅದು ಬಲಗೊಳ್ಳುತ್ತ ಹೋಗಿ ಕೊನೆಗೆ ಕರ್ನಾಟಕವು ಮೈಸೂರು ರಾಜ್ಯವೆಂಬ ಹೆಸ ದ ಅವತರಿಸಿತು. ಆಂದೋಲನದಿಂದ, [illegible] ಭೌಗೋಳಿಕ, ರಾಜಕೀಯ ಮತ್ತು ಆಡಳಿತ ತಂತ್ರದ ಕರ್ನಾಟಕವು ಬಂದಿತು. ಆದರೆ ಪ್ರಯತ್ನದಿಂದ ಜನರ ಹೃದಯಗಳ ಏಕೀ , [illegible] ಮುಂತಾದುವು ಇನ್ನೂ ದೃಢ ಗಬೇಕು. ನಮ್ಮೆಲ್ಲರಲ್ಲಿ [illegible] ಒಂದಾಗಿ-ಸ್ವತಂತ್ರ ಭಾರತ, ಏಕತಂತ್ರ ಕ ಟಕ ಎಂಬುದು ನಮ್ಮ ನಾಡಿಗಳಲ್ಲಿ ರಕ್ತ ಪ್ರವಹಿಸಬೇಕು ವ್ಯಕ್ತಿಯ ಜೀವನದ ಯ ಸಮಾಜ ಜೀವನದ ಸರ್ವತೋಮುಖ ಸಮೃದ್ಧಿಯುಂಟಾದರೆ ಆಗಬಲ್ಲದು. ಅದೇ ರೀತಿ ರಾಷ್ಟ್ರದ ಯಾವುದೇ ರಾಜ್ಯದ ಜನಜೀವನದಲ್ಲಿ ಈ ಭಾರತ ರಾಷ್ಟ್ರದ ಗೌರವ ಸಾಧನೆಯುಂಟಾದರೆ ಆಗುವುದು-ಎಂದು ಅವರು ನುಡಿದರು.

ಭಾರತವು ದಿವ್ಯಭವ್ಯ ಸಂಸ್ಕೃತಿಯನ್ನು ಹೊಂದಿರುವುದೆಂದು ಅವರು ಹೇಳಿ ಪುರಾತನವಾದುದೆಲ್ಲ ಹೇಗೆ ಸಾಧುವಾಗಿರುವುದಿಲ್ಲವೋ ಹಾಗೆಯೇ ಪಾಶ್ಚಿಮಾತ್ಯರ ನವೀನ ವಿಚಾರಗಳೆಲ್ಲವೂ ಗ್ರಾಹ್ಯವಲ್ಲವೆಂದೂ ಅವರು ತಿಳಿಸಿದರು.

ರಾಮಕೃಷ್ಣ ಪರಮಹಂಸ, ಅರವಿಂದರು ಮಹಾತ್ಮ ಗಾಂಧಿ, ವಿನೋಬಾಭಾವೆ ಮುಂತಾದವರ ಜೀವನಾದರ್ಶಗಳನ್ನು ಅವರು ಪ್ರಸ್ತಾಪಿಸಿ, ಭಾರತೀಯ ಸಂಸ್ಕೃತಿಯು ಸಮನ್ವಯಾತ್ಮಕ ಶಾಲಿನಿ ಎಂಬ ಲಕ್ಷಣದಿಂದ ಲಕ್ಷಿತವಾಗಿರುವುದೆಂದು ಅಭಿಪ್ರಾಯಪಟ್ಟರು ಈಗ ಆರ್ಯ, ಅನಾರ್ಯ, ದ್ರಾವಿಡ, ನಾಗ,ಸಿಂಧುಕೊಳ್ಳ, ಮುಂತಾದ ಪ್ರತ್ಯೇಕ ಸಂಸ್ಕೃತಿಗಳ ಪ್ರತ್ಯೇಕ ಅಭಿಮಾನ ತಳೆದು, ಅವನ್ನು ವಿಮರ್ಶಿಸಲು ಹೋಗಿ ವಾದ ಹೂಡಿ ಸಂಘರ್ಷ ಮಾಡುವುದೆಂದರೆ "ತನ್ನ ಹಾದಿಯಿಂದ ಹೋಗುವ ದೆವ್ವವನ್ನು ಮನೆಗೆ ಬಾ ಎಂದು ಕರೆದಂತೆಯೇ ಸರಿ"ಎಂದು ಅವರು ತಿಳಿಸಿದರು

ಅಣು ಶಕ್ತಿಯ ಸದುಪಯೋಗದ ಅಗತ್ಯ

ಈಗ ಅಣು ಶಕ್ತಿಯು ಆವಿಷ್ಕಾರವಾಗಿರುವುದೆಂದೂ, ಆದರೆ ಅದರ ನಿಯಮನಕ್ಕಾಗಿ ಅಂತಹ ಸಂಯಮ ಇನ್ನೂ ಹುಟ್ಟಿಬಂದಿಲ್ಲವೆಂದೂ, ಇದರಿಂದ ಮಾನವನ ನಾಶ ಭಸ್ಮಾಸುರನಂತೆ ಎಲ್ಲಿ ಆಗುವುದೋ ಎಂಬ ಭೀತಿಯುಂಟಾಗಿದೆಯೆಂದೂ ಹೇಳಿ, ಈ ಭಯದ ಕಾರಣದಿಂದ ಅಣು, ಯಂತ್ರ, ತಂತ್ರ ಶಕ್ತಿಗಳು ಬೇಡವೇ ಬೇಡವೆಂದು ಹೇಳುವುದು ದುರ್ಬಲತೆಯ ಲಕ್ಷಣವೆಂದು ಅಭಿಪ್ರಾಯಪಟ್ಟರು ಅಣುಶಕ್ತಿಯ ನಿಯಮನದ ರಹಸ್ಯವನ್ನು [illegible] ಸಂಯಮವನ್ನು ದೊರಕಿಸಬೇಕೆಂದೂ, ಭಯ, ನಿರಾಶೆ, ಮನೋದೌರ್ಬಲ್ಯಗಳಿಂದ ಅದು ಬೇಡವೆನ್ನುವುದು ಹೇಡಿತನವಾಗುವುದೆಂದೂ, ನಮ್ಮ [illegible] ರಹಸ್ಯಗಳನ್ನು [illegible] ವೈಜ್ಞಾನಿಕ ತಪಸ್ಸಿನಲ್ಲಿ ತೊಡಗಿ, [illegible] ಶಕ್ತಿವಿಶೇಷಗಳನ್ನು ರಚನಾತ್ಮಕ ಕಾರ್ಯಗಳಿಗಾಗಿ ಉಪಯೋಗಿಸುವುದನ್ನು, ಮಾನವ ಕುಲದಲ್ಲಿ ಶಾಂತಿ ಸಮಾಧಾನಗಳು ನೆಲೆಗೊಳ್ಳುವ ವಿಧಾನವನ್ನೂ ಅನುಸರಿಸಬೇಕೆಂದು ಅವರು ಸೂಚಿಸಿದರು

ಒಂದು ದಿವ್ಯ ಭವ್ಯ ದೀಪ [illegible] ಉರಿದು ಹೋಗುವುದು ಅಥವಾ ಕೋಟಿ ಕೋಟಿ ಜನರಿಗೆ ಮಾರ್ಗದರ್ಶಕ ಬೆಳಕನ್ನೂ ಕೊಡಬಹುದು. ನಮ್ಮೆಲ್ಲರ ಅಂತಃಕರಣದಲ್ಲಿ ಮಿಣಿ ಮಿಣಿ ಮಿನುಗುವ [illegible] ಒಂದು ಜ್ಯೋತಿಯಾಗಿ ಸಂಕ್ರಮದಿಂದ ಮುಂದುವರಿದು ಮಾನವಕುಲದ ಮೆರವಣಿಗೆಯಲ್ಲಿ ಭಾಗವಹಿಸಲಿ-ಎಂಬುದಾಗಿ ಅವರು ಹಾರೈಸಿ ತಮ್ಮ ಭಾಷಣವನ್ನು ಮುಕ್ತಾಯಗೊಳಿಸಿದರು.

ವಿಶ್ವ ವಿದ್ಯಾಲಯದ ಇತಿಹಾಸದಲ್ಲಿ ಇದೇ ಮೊಟ್ಟಮೊದಲನೆಯದಾಗಿ ಘಟಿಕೋತ್ಸವದ ಭಾಷಣವು ಕನ್ನಡದಲ್ಲಿ ನಡೆಯಿತು.

ಈ ಸಾರಿಯ ಘಟಿಕೋತ್ಸವದಲ್ಲಿ ೨,೮೭೫ ಪದವೀಧರರು

೪೪೪ ಮಂದಿ ಮಹಿಳಾ ಪದವೀಧರರು

ಮೈಸೂರು ೧೦

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವವು ಈ ದಿನ ಬೆಳಿಗ್ಗೆ, ಕುಲಪತಿಗಳಾದ ಶ್ರೀ ಜಯಚಾಮರಾಜೇಂದ್ರ ಒಡೆಯರ್‌ರ ಅಧ್ಯಕ್ಷತೆಯಲ್ಲಿ ನಡೆಯಿತು ಎಲ್ಲಾ ಶಾಖೆಗಳೂ ಸೇರಿ ಒಟ್ಟು ೨,೮೭೫ ಮಂದಿ ಪದವಿಗಳನ್ನು ಸ್ವೀಕರಿಸಿದರು ಅವರ ಪೈಕಿ ೪೪೪ ಮಂದಿ ಮಹಿಳೆಯರು

[illegible] ಗವರ್ನರರು ಕ್ರಾಫರ್ಡ್ ಭವನದ ಬಳಿ ಆಗಮಿಸಿದಾಗ ಉಪಕುಲಪತಿ ಡಾ|| ಕೆ ವಿ ಪುಟ್ಟಪ್ಪನವರೂ, ಸೆನೆಟ್ಟಿನ ಸದಸ್ಯರೂ ಅವರನ್ನು ಸ್ವಾಗತಿಸಿ, ಮೆರವಣಿಗೆಯಲ್ಲಿ ಕರೆತಂದರು [illegible] ಕಾರ್ಯಕ್ರಮಗಳು ಜರುಗಿದನಂತರ ಪದವೀಧರರಿಗೆ ಕುಲಪತಿಗಳು ಪ್ರಶಸ್ತಿಯನ್ನೂ ವಿಶೇಷ ಪಾರಿತೋಷಕಗಳನ್ನೂ, ವಿನಿಯೋಗಿಸಿದರು.

ಸಭಾ ಭವನವು ಪದವೀಧರರಲ್ಲದೆ ಆಹ್ವಾನಿತರಾದ ಸ್ತ್ರೀಪುರುಷರಿಂದ ಕಿಕ್ಕಿರಿದು ತುಂಬಿದ್ದಿತು. ಬೆಳಿಗ್ಗೆ ೯-೩೦ ಗಂಟೆಗೆ ಆರಂಭವಾಗಬೇಕಾಗಿದ್ದ ಕಾರ್ಯಕ್ರಮ ೯-೫೦ಕ್ಕೆ ಆರಂಭವಾಯಿತು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಭಾವಸಾರ ಕ್ಷತ್ರಿಯ ಪದವೀಧರರಿಗೆ ಸತ್ಕಾರ

ದಿವಾನರ ರಸ್ತೆಯಲ್ಲಿರುವ ಭಾವಸಾರ ಕ್ಷತ್ರಿಯ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೪ ಗಂಟೆಗೆ, ಈ ವರ್ಷ ಪದವಿಗಳನ್ನು ಪಡೆದ ಭಾವಸಾರ ಕ್ಷತ್ರಿಯ ವಿದ್ಯಾರ್ಥಿಗಳಿಗೆ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿದೆ. ಆ ಪದವೀಧರರೆಲ್ಲರೂ ಬರುವಂತೆ ಕೋರಲಾಗಿದೆ. ಡಾ|| ಎಂ. ವಿ. ಕೃಷ್ಣರಾಯರು ಭಾಷಣ ಮಾಡುವರು ಪ್ರೊ|| ಎಸ್. ಕೆ. ಏಕಾಂಬರಂರವರು ಅಧ್ಯಕ್ಷತೆ ವಹಿಸುವರು.

ಹಂಗೇರಿಯಲ್ಲಿ ಮತ್ತೆ ಗಲಭೆ

೧೦ ಜನರ ಮರಣ

ಮಾರ್ಷಲ್ ಲಾ ಜಾರಿ

ಜೆಕೊಸ್ಲೊವೇಕಿಯದ ಗಡಿ ಸಮೀಪದಲ್ಲಿರುವ, ಹಂಗೇರಿಯ [illegible] ಎಂಬಲ್ಲಿ ನೆನ್ನೆ ಹಂಗೇರಿಯ ಪ್ರದರ್ಶಕರು ಮತ್ತು ಹಂಗೇರಿ ಪೊಲೀಸ್ ಮತ್ತು ರಷ್ಯದ ಟ್ಯಾಂಕ್ ದಳದವರಿಗೂ ಘರ್ಷಣೆ ನಡೆದು ೧೦ ಮಂದಿ ಮಡಿದು, ಅನೇಕರು ಗಾಯಗೊಂಡರೆಂದು ವರದಿಯಾಗಿದೆ. ಬಂಧಿಸಲ್ಪಟ್ಟಿದ್ದ ಸ್ಥಳೀಯ ಕಾರ್ಮಿಕ ಸಂಘಗಳ ಸದಸ್ಯರುಗಳನ್ನು ಬಿಡುಗಡೆ ಮಾಡಬೇಕೆಂಬ ಬಗ್ಗೆ ಪ್ರದರ್ಶನ ನಡೆದು, ಘರ್ಷಣೆಯಾಯಿತೆಂದೂ, ಗಲಭೆಯು ಇತರ ಮೂರು ನಗರಗಳಿಗೂ ಹರಡಿ ಸಂಘರ್ಷಗಳಾದುವೆಂದೂ ಹೇಳಲಾಗಿದೆ ಹಂಗೇರಿಯಲ್ಲಿ ಈಗ ಮಾರ್ಷಲ್ ಲಾವನ್ನು ಜಾರಿಗೆ ತರಲಾಗಿರುವುದೆಂದು ಬುಡಾಪೆಸ್ಟ್ ರೇಡಿಯೊವು ವರದಿ ಮಾಡಿದೆ.

ತಾತ್ಕಾಲಿಕ ಪರಿಹಾರಕ್ಕಾಗಿ ಜಾಡಮಾಲಿಗಳ ಮೆರವಣಿಗೆ

ಸಂಬಳ [illegible]

ಮೈಸೂರು ೧೦

ನಗರದ ಪೌರಸಭಾ ಕೆಲಸಗಾರರ ಸಂಘದ ಸದಸ್ಯರು ನೆನ್ನೆ ಮಧ್ಯಾಹ್ನ ಮೆರವಣಿಗೆ ಹೊರಟು ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆ ಸೇರಿದ್ದರು ಸಂಘದ ಕಾರ್ಯದರ್ಶಿ ಶ್ರೀ ಎಂ. ಎ. ಉಗ್ರಪ್ಪನವರು ಭಾಷಣ ಮಾಡಿ ಈ ದಿಕ್ಕಿನ ಸಂಬಳದ ಜೊತೆಗೆ ತಾತ್ಕಾಲಿಕ ಪರಿಹಾರವನ್ನು [illegible] ಪೌರಸಭೆಯ [illegible] ಕೊಳ್ಳಲಾಗದೆಂದೂ, ಕೆಲಸದಿಂದ [illegible] ರಿಗೆ ಪರಿಹಾರವನ್ನು ಒದಗಿಸಬೇಕೆಂದೂ ಕೇಳಿದರು. ಡಾ|| ಅಂಬೇಡ್ಕರರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿ ೨ ನಿಮಿಷ ಮೌನವನ್ನು ಆಚರಿಸಲಾಯಿತು

ಮಾಜಿ ಮಂತ್ರಿ ಮಹಮೂದ್ ಷರೀಫ್ ಕಾಂಗ್ರೆಸ್ಸಿಗೆ

ಬೆಂಗಳೂರು ೧೦

ಸಂಸ್ಥಾನದ ಮಾಜಿ ಮಂತ್ರಿ, ಮಹಮೂದ್ ಷರೀಫ್ ಮತ್ತು ೩೦೦ ಕ್ಕೂ ಹೆಚ್ಚು ಮಂದಿ ಮುಸಲ್ಮಾನರು ಕಾಂಗ್ರೆಸ್ ಸಂಸ್ಥೆಗೆ ಸೇರಿದರು [illegible] ನಡೆದ ಸಂಸ್ಥಾನದ ಮುಸ್ಲಿಮರ ಸಮ್ಮೇಳನದಲ್ಲಿ ಪ್ರಗತಿಪರ ರಾಜಕೀಯ ಸಂಸ್ಥೆಗಳೊಡನೆ ಮುಸ್ಲಿಮರು ಸೇರಬೇಕೆಂದು ನಿರ್ಣಯ ಮಾಡಲಾಗಿದ್ದ ಪ್ರಕಾರ ಅವರುಗಳು ಕಾಂಗ್ರೆಸ್ ಸದಸ್ಯರಾಗಿರುವರು. ಮುಸ್ಲಿಮರು ಹೆಚ್ಚಾಗಿ ಕಾಂಗ್ರೆಸ್ಸಿಗೆ ಸೇರುವಂತೆ ಅವರು ಚಳುವಳಿಯನ್ನು ನಡೆಸುವರು.

ದಾವಣಗೆರೆಯಲ್ಲಿ ಮೂವರು ಪೋಲೀಸರಿಗೆ ಇರಿತ

ದಾವಣಗೆರೆಗೆ ಹಳ್ಳಿಗಳಿಂದ ಸೇಂದಿ ರವಾನೆ ಮಾಡುವುದನ್ನು ಪತ್ತೆ ಹಚ್ಚುವ ಕಾರ್ಯದಲ್ಲಿ ನಿರತರಾಗಿದ್ದ ಮೂವರು ಪೋಲೀಸ್ ಕಾನ್ಸ್‌ಟೆಬಲ್ಲುಗಳು ಇರಿಯಲ್ಪಟ್ಟು ಆಸ್ಪತ್ರೆಗೆ ಸೇರಿಸಲ್ಪಟ್ಟಿರುವ ಸುದ್ದಿಯು ವರದಿಯಾಗಿದೆ. ಕಳೆದ ಗುರುವಾರ ರಾತ್ರಿ ಪುಟ್ಟಸ್ವಾಮಿ, ಗುಂಡಪ್ಪ ಮತ್ತು ಹಾಸಿಂ ಎಂಬ ಮೂವರು ಕಾನ್ಸ್‌ಟೇಬಲ್ಲುಗಳು [illegible] ಎಂಬ ಹಳ್ಳಿಯಿಂದ ದಾವಣಗೆರೆಗೆ ಬರುವ ಮಾರ್ಗದಲ್ಲಿ ಒಂದು [illegible] ಕೊಂಡು ಬರುತ್ತಿದ್ದಾಗ, ಆ ಮಾರ್ಗದಲ್ಲಿ ಬರುತ್ತಿದ್ದ ಇಸ್ಮಾಯಿಲ್ ಎಂಬುವನ ಬಗ್ಗೆ ಅನುಮಾನಪಟ್ಟು, ಕಾನ್ಸ್‌ಟೇಬಲ್ ಪುಟ್ಟಸ್ವಾಮಿ ಎಂಬುವರು ಅವನನ್ನು ಹಿಡಿಯಲು ಹೋಗಲಾಗಿ, ಇಸ್ಮಾಯಿಲನು ಅವರನ್ನು ಮತ್ತು ಇತರ ಇಬ್ಬರನ್ನೂ ಇರಿದು ಪರಾರಿಯಾದನೆಂದು ವರದಿಯಾಗಿದೆ.

○ ಬಾಗೇಪಲ್ಲಿ ತಾಲ್ಲೂಕಿನ ಒಂದು ಹಳ್ಳಿಯ ಚಿಕ್ಕವೆಂಕಟರಾಯ ಎಂಬುವನು, [illegible] ಯಲ್ಲಿದ್ದ ತನ್ನ ಹೆಂಡತಿ ಸಿದ್ಧಮ್ಮ ಎಂಬಾಕೆಯನ್ನು ತನ್ನೊಡನೆ ಬರುವಂತೆ ಕರೆದು ಆಕೆಯು ನಿರಾಕರಿಸಲಾಗಿ ಅವಳ ತಲೆಯನ್ನು ಕತ್ತರಿಸಿದನೆಂದೂ, ಪೋಲೀಸರು ಅವನನ್ನು ಬಂಧಿಸಿ ತನಿಖೆ ನಡೆಸುತ್ತಿರುವರೆಂದೂ ವರದಿಯಾಗಿದೆ.

ಜಿಲ್ಲಾ ಬೋರ್ಡ್ ಅಭಿವೃದ್ಧಿ ಕಾರ್ಯಗಳಿಗೆ ಶೇಕಡ ೧೨½ ತೆರಿಗೆ

ಬೆಂಗಳೂರು ೯

ಗ್ರಾಮಗಳಲ್ಲಿ ಅಭಿವೃದ್ಧಿ ಕಾರ್ಯಗಳನ್ನು ನಡೆಸುವುದಕ್ಕಾಗಿ ಪುನರ್ರಚಿತವಾಗಲಿರುವ ಜಿಲ್ಲಾ ಬೋರ್ಡುಗಳಿಗೆ ಶೇಕಡ ೧೨½ ಯಷ್ಟು ತೆರಿಗೆ ಹಣವನ್ನು ಕೊಡಲಾಗುವುದೆಂದು ಮರಾ ಮತ್ತು ಮಂತ್ರಿ ಶ್ರೀ ಹೆಚ್. ಕೆ. ವೀರಣ್ಣಗೌಡರು ತಿಳಿಸಿದ್ದಾರೆ

ಕಾಸರಗೋಡಿಗಾಗಿ ಕನ್ನಡಿಗರ ಉಪವಾಸ ವ್ರತ

ಕಾಸರಗೋಡು ಕರ್ನಾಟಕ ಪ್ರಾಂತೀಕರಣ ಸಮಿತಿಯು ಕುಂಬ್ಳದಲ್ಲಿ ಕಳೆದ ೨ನೇ ತಾರೀಖು ನಡೆದು, ಕಾಸರಗೋಡನ್ನು ಕರ್ನಾಟಕಕ್ಕೆ ಸೇರಿಸದಿದ್ದರೆ ಕನ್ನಡಿಗರು ಉಪವಾಸ ವ್ರತವನ್ನು ಹೂಡಬೇಕೆಂದು ನಿರ್ಧರಿಸಲಾಯಿತು. ಸಂಕೇತಕ್ಕಾಗಿ ೪೮ ಗಂಟೆ ಉಪವಾಸವನ್ನು ನಡೆಸಲಾಗುವುದು. ಈಗಾಗಲೇ ೨೨ ಮಂದಿ ಉಪವಾಸವನ್ನು ನಡೆಸುತ್ತಿರುವರು.

ನೂಲು ತೆಗೆಯುವ "ರಿಕ್ಷಾ"

ರಾಜಸ್ಥಾನ ಸರ್ಕಾರದ ಉಣ್ಣೆ ಏಕ್ಸ್ಯವ ಕೇಂದ್ರದ ಕಾರ್ಯಾಗೃಹದಲ್ಲಿ ಹೊಸ ಮಾದರಿ ನೂಲುವ ಯಂತ್ರವನ್ನು ನಿರ್ಮಿಸಲಾಗಿದೆ. ಈಗ ಇರುವ ಚರಕಗಳಿಗಿಂತ ಇದು ಬೇರೆ ಮಾದರಿಯದಾಗಿದೆ. ಇದರಲ್ಲಿ ಸಾಮೂಹಿಕವಾಗಿ, ಏಕಕಾಲದಲ್ಲಿ ಹತ್ತು ಮಂದಿ ನೂಲಬಹುದು. ಇದನ್ನು ನೂಲುವ ರಿಕ್ಷಾ ಎಂದು ಕರೆಯಲಾಗಿದೆ

ಸಂಸ್ಥಾನದ ಪ್ರಜಾ ಸಮಾಜವಾದಿ ಪಾರ್ಲಿಮೆಂಟರಿ ಸಮಿತಿ

ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ಶ್ರೀ ಕೆ ಆರ್ ಕಾರಂತರ ಅಧ್ಯಕ್ಷತೆಯಲ್ಲಿ ಪಾರ್ಲಿಮೆಂಟರಿ ಸಮಿತಿಯೊಂದನ್ನು ರಚಿಸಿರುತ್ತದೆ. ಅದರಲ್ಲಿ ಶ್ರೀಗಳಾದ ಕೆ. ಕೆಂಚಪ್ಪ, ಎಂ. ಎಸ್ ಗುರುಪಾದಸ್ವಾಮಿ, ಆರ್ ಪಿ [illegible], ಎಸ್. ಎಲ್ [illegible], ಎ ಜೆಚ್ ಶಿವಾನಂದಸ್ವಾಮಿ, ಬಿ ಹುಚ್ಚೇಗೌಡ, ಎಂ ಪಿ ಈಶ್ವರಪ್ಪ, ಮತ್ತು ಎಂ ಎಂ [illegible]ನವರು ಸದಸ್ಯರಾಗಿರುವರು. ಉಮೇದುವಾರರಿಂದ ಅರ್ಜಿಗಳನ್ನು ಸ್ವೀಕರಿಸಲು ೧೯ ಜನರುಳ್ಳ ಸಮಿತಿಯನ್ನು ರಚಿಸಲಾಗಿದೆ

ಪೂರ್ವ ಖಂಡದ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆ

ಅಖಿಲಭಾರತ ಪೂರ್ವ ಮಹಾ ಮಂಡಲಿಯ ಮೈಸೂರು ಶಾಖೆಯವರು ಕೃಷ್ಣರಾಜವನದಲ್ಲಿ ನಿರ್ಮಿಸಲಿರುವ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯನ್ನು ಗವರ್ನರ್ ಶ್ರೀ ಜಯಚಾಮರಾಜ ಒಡೆಯರ್ ರವರು ನಾಳೆ ಬೆಳಗ್ಗೆ ೧೦ ಘಂಟೆಗೆ ನೆರವೇರಿಸುವರು. ಉಡುಪಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರು ಅಧ್ಯಕ್ಷತೆ ವಹಿಸುವರು. ಸದಸ್ಯರುಗಳೂ, ದಾತರೂ ದಯಮಾಡಿಸಬೇಕೆಂದು ಕೋರಲಾಗಿದೆ.

ನೂತನ ಸಿವಿಲ್ ನ್ಯಾಯಾಧೀಶರು

[illegible]ಯಿಂದ ಇಲ್ಲಿಗೆ ವರ್ಗವಾಗಿ ಬಂದಿರುವ ಶ್ರೀ ಎ.ಎಸ್. ಕೃಷ್ಣಮೂರ್ತಿಯವರು ಮೊನ್ನೆ ಇಲ್ಲಿನ ಸಿವಿಲ್ ನ್ಯಾಯಾಧೀಶರು ಮತ್ತು ಜಿಲ್ಲಾ ಮ್ಯಾಜಿಸ್ಟ್ರೇಟರಾಗಿ ಅಧಿಕಾರವನ್ನು ವಹಿಸಿಕೊಂಡರು

ನೂತನ ವರ್ಷದ ರಜಾ ದಿನಗಳು

ಬೆಂಗಳೂರು ೯

ಬರುವ ವರ್ಷದಲ್ಲಿ ಕೆಳಗೆ ಕಂಡ ದಿನಗಳಲ್ಲಿ ಸಾರ್ವತ್ರಿಕ ರಜಾದಿನ ಇರುವುದೆಂದು ಸರ್ಕಾರದ ಗೆಜೆಟ್ ಪ್ರಕಟಣೆ ತಿಳಿಸಿದೆ —

ಜನವರಿ ೧ ಹೊಸ ವರ್ಷಾರಂಭ ೧೪ ಉತ್ತರಾಯಣ ಪುಣ್ಯಕಾಲ, ೨೬ ರಿಪಬ್ಲಿಕ್ ದಿನ ಫೆಬ್ರವರಿ ೨೭ ಮಹಾಶಿವರಾತ್ರಿ, ಮಾರ್ಚಿ ೧೫ ಕಾಮನ ಹಬ್ಬ, ಏಪ್ರಿಲ್ ೧ ಚಾಂದ್ರಮಾನ ಯುಗಾದಿ, ಮೇ ೧೩ ಬುದ್ಧ ಪೂರ್ಣಿಮೆ ಆಗಸ್ಟ್ ೭ ಮೊಹರಂ ಕಡೇ ದಿನ, ೧೦ ಆಶ್ವಲಾಯನ ಉಪಾಕರ್ಮ, ೧೫ ಸ್ವಾತಂತ್ರ್ಯ ದಿನೋತ್ಸವ, ೨೮ ಗಣೇಶ ವ್ರತ, ಸೆಪ್ಟೆಂಬರ್ ೨೩ ಮಹಾಲಯ ಅಮಾವಾಸ್ಯೆ, ೨೪ ನವರಾತ್ರಿ ಉತ್ಸವಾರಂಭ, ಅಕ್ಟೋಬರ್ ೧ ದುರ್ಗಾಷ್ಟಮಿ (ಆಯುಧ ಪೂಜೆ), ೨ ಮಹಾತ್ಮಾ ಗಾಂಧಿ ಜಯಂತಿ ಮತ್ತು ಮಹಾನವಮಿ, ೩ ವಿಜಯದಶಮಿ, ೨೨ ನರಕಚತುರ್ದಶಿ, ೨೪ ಬಲಿಪಾಡ್ಯಮಿ, ಡಿಸೆಂಬರ್ ೨೫ ಕ್ರಿಸ್ಮಸ್

ಗಲಭೆಗಳಲ್ಲಿ ಪೋಲೀಸರ ಗುಂಡಿನೇಟು ತಪ್ಪಿಸಲು ಕ್ರಮ

ಮುಖ್ಯ ಮಂತ್ರಿಗಳ ಸಭೆಯಲ್ಲಿ ಪರಿಶೀಲನೆ

ಸಂಸ್ಥಾನಗಳ ಮುಖ್ಯ ಮಂತ್ರಿಗಳ ಸಭೆಯು ಮೊನ್ನೆ ದೆಹಲಿಯಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರ ಅಧ್ಯಕ್ಷತೆಯಲ್ಲಿ ನಡೆಯಿತು. ಗಲಭೆಗಳಲ್ಲಿ ಪೋಲೀಸರು ಗುಂಡನ್ನು ಪ್ರಯೋಗಿಸುವುದನ್ನು ಬಿಟ್ಟು, ಬೇರೊಂದು ಪ್ರಭಾವಶಾಲಿ ಮಾರ್ಗವನ್ನು ಅನುಸರಿಸುವ ಬಗ್ಗೆ ಪರಿಶೀಲನೆ ನಡೆಯಿತು. ಗುಂಡಿನೇಟನ್ನು ಪೂರ್ಣವಾಗಿ ತಪ್ಪಿಸಲು ಸಾಧ್ಯವಿಲ್ಲವೆಂದು ಹಲವರು ಅಭಿಪ್ರಾಯಪಟ್ಟರು

ನಿಲಸೋಗೆಯಲ್ಲಿ ಸೊಸೈಟಿಯ ಕಟ್ಟಡದ ನಿರ್ಮಾಣಕ್ಕೆ ದಾನ

ಟಿ ನರಸೀಪುರ ತಾಲ್ಲೂಕು ನಿಲಸೋಗೆಯ ಶ್ರೀ ಶ್ರೀ ಚನ್ನಂಗಾ ರಾಮಲಿಂಗೇಶ್ವರ ಸಹಕಾರ ಸಂಘದ ಕಟ್ಟಡವನ್ನು ನಿರ್ಮಿಸುವ ಸಂಬಂಧವಾಗಿ ಒಂದು ಸಮಿತಿಯನ್ನು ರಚಿಸಲಾಗಿದೆ ಶ್ರೀ ಸಣ್ಣಮಾದನಾಯಕರು ಅದರ ಅಧ್ಯಕ್ಷರಾಗಿಯೂ, ಶ್ರೀ ಎಂ ಜಿ ಮಾದಯ್ಯನವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಕೃಷ್ಣಯ್ಯ, ಎಂ. ರಂಗಯ್ಯ, ಪುಟ್ಟಮಾದನಾಯಕ, ಶಂಭುಲಿಂಗನಾಯಕ ಮತ್ತು ಆರ್ ಪುಟ್ಟಮಾದನಾಯಕರವರು ಸದಸ್ಯರುಗಳಾಗಿಯೂ ಆರಿಸಲ್ಪಟ್ಟಿರುವರು ಕಟ್ಟಡಕ್ಕಾಗಿ ಶ್ರೀ ರಾಚನಾಯಕರು ೧೦೦೧ ರೂ ಬೆಲೆಯ ಸ್ವಂತದ ನಿವೇಶನವನ್ನು ಕೊಟ್ಟಿರುತ್ತಾರೆ ಶ್ರೀ ಕಾಳಮಾದನಾಯಕರು ೧೫೫ ರೂ ಮತ್ತು ಶ್ರೀ ಪುಟ್ಟಮಾದನಾಯಕರು ೫೦೦ ರೂ ಗಳನ್ನೂ ಉದಾರವಾಗಿ ಕೊಟ್ಟಿರುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೬.೫ [illegible] ೬ ೧೫ ಎ ಸೂರ್ಯನಾರಾಯಣ-ದೇವರನಾಮ ೬ ೪೦ ಗಾನ ವಿಹಾರ [illegible] ಮಧ್ಯಾಹ್ನ [illegible] ಎಸ್ ಗೋಪಾಲಕೃಷ್ಣ-ಪಿಟೀಲು [illegible] ಸಂಜೆ [illegible] ಪಿ. ನಾರಾಯಣ ಅಯ್ಯರ್-[illegible] ಸಂಗೀತ ೬ ೩೦ ಕಾವ್ಯವಾಚನ [illegible] ಹೊಸಗನ್ನಡ ಪಿತಾಮಹರು ಭಾಷಣ ೯ ೪೦ ಚಂಬೈ ವೈದ್ಯನಾಥಭಾಗವತರ್-ಸಂಗೀತ, ಟಿ ಚೌಡಯ್ಯ ಪಿಟೀಲು ಮತ್ತು ಅಯ್ಯಸಾಮಿ ಅಯ್ಯರ್-ಮೃದಂಗ ೧೦-೧೫ ಹಿಂದೂಸ್ಥಾನಿ ಗಾಯನ

ಫೆಬ್ರವರಿ ೨೪ರಿಂದ ಮಾರ್ಚಿ ೧೪ರವರೆಗೆ ಮಹಾ ಚುನಾವಣೆ

ಭಾರತ ಸರ್ಕಾರದ ಅಂಗೀಕಾರ

ಮಹಾ ಚುನಾವಣೆಗಳನ್ನು ಫೆಬ್ರವರಿ ೨೪ರಿಂದ ಮಾರ್ಚಿ ೧೪ರವರೆಗೆ ನಡೆಸಬೇಕೆಂದು ಕೇಂದ್ರ ಚುನಾವಣಾ ಮಂಡಲವು ಮಾಡಿರುವ ಶಿಫಾರಸನ್ನು ಭಾರತ ಸರ್ಕಾರದವರು ಅಂಗೀಕರಿಸಿದ್ದಾರೆ ಈ ಬಗ್ಗೆ ಸದ್ಯದಲ್ಲೇ ಚುನಾವಣಾ ಕಾರ್ಯಕ್ರಮಗಳನ್ನು ಪ್ರಕಟಿಸಲಾಗುವುದು. ಕಳೆದ [illegible]ರಲ್ಲಿ ಆದ ಮಹಾ ಚುನಾವಣೆಗಳಲ್ಲಿ ಹತ್ತು ಸಾವಿರಕ್ಕೂ ಮೇಲ್ಪಟ್ಟು ಜನರನ್ನು ಹಲವಾರು ಕಾರಣಗಳ ಮೇಲೆ ಅನರ್ಹಗೊಳಿಸಿದ ಸಂಬಂಧವಾಗಿ ಆಕ್ರಮಗಳನ್ನು ನಿವಾರಿಸಿ ಸಾರ್ವತ್ರಿಕ ಕ್ಷಮಾದಾನ ನೀಡಲೂ ನಿರ್ಧರಿಸಲಾಗಿದೆ

ಬೆಳಗಾವಿನಲ್ಲಿ ಮರಾಠಿಗರ ಪ್ರದರ್ಶನ

ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಕಳೆದ ಶುಕ್ರವಾರ ಬೆಳಗಾವಿಗೆ ಭೇಟಿ ಕೊಟ್ಟ ಸಮಯದಲ್ಲಿ ಅಲ್ಲಿನ ಮರಾಠಾ ವಿದ್ಯಾರ್ಥಿಗಳು ಮತ್ತು ಚಿಕ್ಕ ಬಾಲಕರು ಪ್ರದರ್ಶನ ನಡೆಸಿ, ತಮಗೆ ಪೂನಾ ವಿಶ್ವವಿದ್ಯಾಲಯದ ಮೇಲ್ವಿಚಾರಣೆ ಬೇಕೆಂದೂ, ಏನೇ ಆದರೂ ನಾವು ಮೈಸೂರು ಸಂಸ್ಥಾನದಲ್ಲಿ ಉಳಿಯುವುದಿಲ್ಲವೆಂದೂ ಘೋಷಿಸಿದರು ಮುಂಜಾನೆಯಿಂದಲೂ ಪ್ರದರ್ಶನಗಳು ಆದುವು ಕನ್ನಡಿಗರು ಮತ್ತು ಮರಾಠಿಗರು ಇರುವ ಗಣಪತಿ ಗಲ್ಲಿ ಎಂಬ ಸ್ಥಳದಲ್ಲಿ ಬಿಕ್ಕಟ್ಟುಂಟಾಗಿ, ಪೋಲೀಸರು ಗಲ್ಲಿ ಮತ್ತು ಬೀದಿಗಳಲ್ಲಿ ಜನ ಸಂಚಾರವನ್ನು ಪೂರ್ಣವಾಗಿ ನಿಲ್ಲಿಸಿದ್ದರು ಅದೇ ಸಮಯದಲ್ಲಿ ಡಾ॥ ಅಂಬೇಡ್ಕರರ ನಿಧನದ ವಾರ್ತೆಯೂ ಮುಟ್ಟಿ, ಶಾಲಾ ಕಾಲೇಜುಗಳಿಂದ ವಿದ್ಯಾರ್ಥಿಗಳು ಹೊರಬಂದರು ಅವರ ಪೈಕಿ ಹಲವರು ವಿದ್ಯಾ ಮಂತ್ರಿಗಳನ್ನು ಭೇಟಿ ಮಾಡಿ ಮರಾಠಿಯಲ್ಲಿ ಪಾಠಪ್ರವಚನಗಳನ್ನು ತಪ್ಪಿಸಬಾರದೆಂದು ಸೂಚಿಸಿದರು ಮರಾಠಿ ಭಾಷೆಗೆ ಯಾವ ತೊಂದರೆಯೂ ಆಗುವುದಿಲ್ಲವೆಂದು ಸಚಿವರು ಆಶ್ವಾಸನೆಯಿತ್ತರು

ಭಾವಸಾರ ಕ್ಷತ್ರಿಯರ ಸಮ್ಮೇಳನದ ಆರಂಭೋತ್ಸವ

ಬರುವ ತಿಂಗಳು ೧೭ ನೇ ತಾರೀಖಿನಿಂದ ನಡೆಯುವ ಅಖಿಲ ಭಾರತ ಭಾವಸಾರಕ್ಷತ್ರಿಯರ ಸಮ್ಮೇಳನದ ಆರಂಭೋತ್ಸವವನ್ನು ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ನೆರವೇರಿಸುವರು ವಿದ್ಯಾರ್ಥಿಗಳ ಸಮ್ಮೇಳನವನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ೧೮ ನೇ ತಾರೀಖು ನೆರವೇರಿಸುವರು ಗವರ್ನರರ ಪತ್ನಿ ಶ್ರೀಮತಿ ತ್ರಿಪುರಸುಂದರಮ್ಮಣ್ಣಿಯವರು ಮಹಿಳಾ ಸಭೆಯ ಆರಂಭೋತ್ಸವವನ್ನು ನಡೆಸುವರು ಸಮ್ಮೇಳನಕ್ಕೆ ೩,೦೦೦ ಪ್ರತಿನಿಧಿಗಳು ಆಗಮಿಸುವ ನಿರೀಕ್ಷೆಯಿದೆಯೆಂದೂ, ೧೫,೦೦೦ ರೂ ವೆಚ್ಚವಾಗುವುದೆಂದೂ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಯು ಎಲ್ ರಾಮಚಂದ್ರರಾಯರು ತಿಳಿಸಿದ್ದಾರೆ

ಒಲಿಂಪಿಕ್ ಕ್ರೀಡೆಗಳ ಪರಿಸಮಾಪ್ತಿ

ಮೆಲ್ಬೋರ್ನಿನಲ್ಲಿ ೨೨ನೇ ತಾರೀಖಿನಿಂದ ಆರಂಭವಾದ ೧೬ನೇ ಒಲಿಂಪಿಕ್ ಕ್ರೀಡಾ ಪಂದ್ಯಗಳು ಮೊನ್ನೆ ಮುಕ್ತಾಯವಾದುವು ಕ್ರೀಡೆಗಳ ಜನ್ಮಸ್ಥಾನವಾದ ಗ್ರೀಸ್ ದೇಶದಲ್ಲಿ ಹೊತ್ತಿಸಲಾದ ಜ್ಯೋತಿಯನ್ನು ಮುಕ್ತಾಯದ ಕುರುಹಾಗಿ ನಂದಿಸಲಾಯಿತು ಎಲ್ಲಾ ದೇಶಗಳ ಧ್ವಜಗಳ ಸಾಲಿನ ಹಿಂದೆ ಕ್ರೀಡಾಗಾರರು ಮೆರವಣಿಗೆ ನಡೆಸಿದರು. ವಿಶ್ವದಲ್ಲೇ ಹೆಚ್ಚು ಪ್ರಶಸ್ತಿಗಳನ್ನು ರಷ್ಯ ಗಳಿಸಿತು ೩೭ ಚಿನ್ನದ, ೨೯ ಬೆಳ್ಳಿಯ ಮತ್ತು ೩೨ ಕಂಚಿನ ಪದಕಗಳನ್ನು ರಷ್ಯವೂ, ೩೨ ಚಿನ್ನದ, ೨೫ ಬೆಳ್ಳಿ ಮತ್ತು ೧೭ ಕಂಚಿನ ಪದಕಗಳನ್ನು ಅಮೆರಿಕವೂ ಗಳಿಸಿದುವು ಹಂಗೆರಿ ಮಹಿಳೆ ಅಗ್ನಿಸ್ ಕಲೇಟಿ ಎಂಬಾಕೆಯು ೪ ಚಿನ್ನ ಮತ್ತು ೨ ಬೆಳ್ಳಿ ಪದಕಗಳನ್ನು ಗಳಿಸಿದ್ದಾರೆ

ನೀರಾವರಿ ಸೌಕರ್ಯವಿರುವ ಕಡೆ ಒಟ್ಟು ೧॥ ಲಕ್ಷ ಎಕರೆ ಜಮೀನಿನಲ್ಲಿ ಕಾಳು ಫಸಲನ್ನು ತೆಗೆಯಲು ಸರ್ಕಾರದವರು ನಿರ್ಧರಿಸಿದ್ದಾರೆ ಇದರಿಂದ ಪ್ರತಿ ಎಕರೆಗೆ ೨೦ ಪಲ್ಲ ದವಸ ಹೆಚ್ಚು ಉತ್ಪತ್ತಿಯಾಗುವುದೆಂದು ನಿರೀಕ್ಷಿಸಲಾಗಿದೆ

City Municipal Council, Mysore
Dated 4th December 1956

NOTIFICATION

No. C 2 P R 222-C 751/54-55

Notice is hereby given to the inhabitants of the Municipality of Mysore that the Municipal Council desire to amend the byelaws relating to the Grading of Eggs, so as to authorise "the Recorder of the Egg grading Station, Mysore to launch prosecutions for offences under the byelaws by substituting the words "The Recorder" in place of "the Egg grading Officer" occurring in para 4 of the Byelaws

Any inhabitant of the Municipality objecting to the proposed amendment may within one month from the date o this notice, send his objection in writing to the Municipal Council

A VISWANATH,
Municipal Commiss

Edited, Printed and Published b
A. R. Nagarajan at Sadhvi Pre
D. Subbiah Road, Mysore

ಮೈಸೂರು ಹುರಿಗಾಳು ● ಶಾಂತಿಮಂದಿರ್ ಸ್ಟೋರ್ಸ್, ತ್ಯಾಗರಾಜಾ ರಸ್ತೆ, ಮೈಸೂರು

ನಮ್ಮಲ್ಲಿ ಸ್ವಂತವಾಗಿ ತಯಾರಿಸಿದ ಮೆಣಸಿನ ಪುಡಿ, ಚಟ್ನಿ ಪುಡಿ, ಹುಳಿ ಅನ್ನದ ಪು ಹುಳಿ ಪುಡಿ, ಗೊಜ್ಜಿನ ಹಿಟ್ಟು, ಅರಿಶಿನದ ಪುಡಿ, ಅಚ್ಚಮೆಣಸಿನ ಪುಡಿ, ಕ್ಯಾಮಿಗೆ, ಹಪ್ಪಳ, ಅ ಲಕ್ಕಿ ಮತ್ತು ಶುದ್ಧವಾದ ಸೀಗೆಕಾಯಿ ಪುಡಿ ದೊರೆಯುತ್ತೆ

ಸದರ್ನ್ ರೈಲ್ವೆ

ಡಿ ಎಸ್ (ಟ್ರಾನ್ಸ್‌ಪೋರ್ಟೇಷನ್) ಸದರ್ನ್ ರೈಲ್ವೆ, ಮೈಸೂರು, ತಾ॥ 8-12-56

ಇದೇ 1956ನೇ ಡಿಸೆಂಬರ್ 17ನೇ ತಾರೀಖು ಪೂರ್ಣಿಮ ದಿನ ಮೈಸೂರಿನಿಂದ ನಂಜನಗೂಡಿಗೆ ಮತ್ತು ವಾಪಸು ವಿಶೇಷ ರೈಲೊಂದನ್ನು ಕೆಳಗೆ ಕಂಡ ವೇಳೆಯಲ್ಲಿ ಬಿಡಲಾಗುವುದು

—: ಪೂರ್ಣಿಮ ದಿನದ ಸ್ಪೆಷಲ್ ನಂ. 1 :—

ಮೈಸೂರಿನಿಂದ ಹೊರಡುವುದು	ಬೆಳಗ್ಗೆ	8
ನಂಜನಗೂಡು ತಲಪುವುದು	,,	8-50

—: ಪೂರ್ಣಿಮ ದಿನದ ಸ್ಪೆಷಲ್ ನಂ. 2 :—

ನಂಜನಗೂಡು ಬಿಡುವುದು	ಮಧ್ಯಾಹ್ನ	12-10
ಮೈಸೂರು ತಲಪುವುದು	,,	13-15

ಈ ವಿಶೇಷ ರೈಲು ಚಾಮರಾಜಪುರಂ, ಮೈಸೂರು ಸೌತ್, ಕಡಕೊಳ ಮತ್ತು [illegible]ಪುರ ನಿಲ್ದಾಣಗಳಲ್ಲಿ ನಿಲ್ಲುವುದು

ಡಿವಿಷನಲ್ ಸೂಪರಿಂಟೆಂಡೆಂಟ್, ಮೈಸೂ

ಹಾಸನ ಟೌನ್ ಮುನಿಸಿಪಲ್ ಪ್ರೆಸಿಡೆಂಟ್ರವರ ಆಫೀಸಿನಿಂದಾ

ಪ್ರಸಿದ್ಧ ಪತ್ರಿಕೆ

ಹಾಸನದ 11ನೇ ದನಗಳ ಮತ್ತು 7ನೇ ವಸ್ತು ಪ್ರದರ್ಶನ

ಜಾತ್ರೆಯ ಸ್ಥಳದ ಸ್ಟಾಲುಗಳ ಹರಾಜು ತಾರೀಖು 15-12-56 ನೇ ಶನಿವಾರ ಬೆಳಗ್ಗೆ 9 ಗಂಟೆಯಿಂದ ಪ್ರಾರಂಭವಾಗುತ್ತೆ

ಹೆಚ್ಚಿನ ವಿವರಗಳನ್ನು ಪೌರಸಭೆಯ ಆಫೀಸಿನಲ್ಲಿ ಆಫೀಸು ನಡೆಯುವ ಕಾಲದಲ್ಲಿ ತಿಳಿದುಕೊಳ್ಳಬಹುದು

ಹಾಸನ
ತಾ॥ 3-12-56

[illegible], ಅಧ್ಯಕ್ಷ
ಹಾಸನ ಪೌರಸಭೆ ಮತ್ತು ಜಾತ್ರೆ
ದನಗಳ ಮತ್ತು ವಸ್ತು ಪ್ರದರ್ಶನ ಸಮಿತಿ, ಹಾಸನ

ರಿಜಿಸ್ಟರ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 1 ಆಣೆ

ಚಂದಾ ದರ
[illegible]
[illegible]
[illegible]
[illegible]
[illegible]

ಪುಟ : ೧೩] SADHVI । TUESDAY 11—12—1956 ಮೈಸೂರು । ಮಂಗಳವಾರ ೧೧—೧೨—೧೯೫೬ [ಸಂಚಿಕೆ : ೨೬೬

ಹುಜೂರು ಕಾರ್ಯದರ್ಶಿ ಮತ್ತು ಕಂಟ್ರೋಲರ ಮೇಲೆ ದಾವ

ಜೂರ್ ಸೆಕ್ರೆಟರಿ ಮತ್ತು ಎಲ್. ಮಹದೇವಯ್ಯನವರ ಮೇಲೆ ದಾವಾ

ಮನೆ ಮೋಟಾರು ಹರಿದು ಮರಣ
ದ ಬಗ್ಗೆ ೨೬,೯೦೦ ರೂ.
ಪರಿಹಾರಕ್ಕಾಗಿ ಕೋರಿಕೆ

ಮೈಸೂರು ೧೧

ರಾಜ ಮೊಹಲ್ಲಾ ನಿವಾಸಿ ಶ್ರೀಮತಿ ಮ್ಮ ಮತ್ತು ಆಕೆಯ ನಾಲ್ಕು ಮಕ್ಕಳು ದರ್ಬಾರ್ ಬಕ್ಷಿ ಕಛೇರಿಯಲ್ಲಿ ದಫೇದಾರ ನ ಶ್ರೀ ಕೆಂಪಯ್ಯ, ಮಹಾರಾಜರ ಹು ಕಾರ್ಯದರ್ಶಿ ಮತ್ತು ಮಹಾರಾಜರ ಅರ ಕಂಟ್ರೋಲರ್ ಶ್ರೀ ಎಲ್ ಮಹದೇವ ವರುಗಳ ಮೇಲೆ ನಗರದ ಜಿಲ್ಲಾ ನ್ಯಾಧೀಶರ ಕೋರ್ಟಿನಲ್ಲಿ ೨೬,೯೦೦ ರೂ. ಗಳ ಪರಿನಲ್ಲಿ ದಾವಾ ಹೂಡಿದ್ದಾರೆ.

ಮ್ಮನ ಗಂಡ ಮಡಿವಾಳ ಕೆಲಸದ ಯಾ ಯ್ಯನು ಕಳೆದ ತಿಂಗಳು ೧೮ನೇ ತಾರೀಖು ಸ್ವಚ್ಛ ಮಡಿ ಮಾಡಿದ ಬಟ್ಟೆಗಳನ್ನು ಕೊ ರಾಜಾರಾಂ ಅಗ್ರಹಾರದ ಕಡೆ ಫುಟ್ ಪಾ ಮೇಲೆ ವಾಪಸು ಬರುತ್ತಿದ್ದಾಗ ಮೊದಲನೆ ದಾರಿಯು ಅರಮನೆ ಜೀಪು ಕಾರನ್ನು ಟ್ಟ ಬಿಟ್ಟು, ಯಾಲಕ್ಕಯ್ಯನ ಮೇಲೆ ಹರಿ ಅಪಘಾತ ಉಂಟುಮಾಡಿರುತ್ತಾರಾಗಿಯೂ, ಅವ ರಮನೆಯಲ್ಲಿ ದಫೇದಾರರಾಗಿರುವರೆಂದೂ, ಲ್ಲವೆಂದೂ ದಾವಾ ಅರ್ಜಿಯಲ್ಲಿ ತಿಳಿ ದೆ ಅವರ ವಕೀಲ ಮತ್ತು ಮೂರನೇ ದಿಗಳು ಮೋಟಾರನ್ನು ಕೊಟ್ಟು ದಾ ಗಿ ಗಿದೆ ಎರಡನೇ ಪ್ರತಿವಾದಿಯು ಅರ ಸ್ಟೇಜಿನ ಅಧಿಕಾರಿಯೆಂದೂ, ೩ನೇ ಶ್ರೀ ಕೆಂಪಯ್ಯನವರ ಸಹೋದರರೆಂ ಸಲಾಗಿದೆ

ವಾದಿಯ ಗಂಡ ಯಾಲಕ್ಕಯ್ಯನು ೪೫ ವಯಸ್ಸಿನವನಿದ್ದು ಕುಟುಂಬದಲ್ಲಿ ಸಂಪಾದನೆ ಮಾಡುತ್ತಿದ್ದನೆಂದೂ, ಅವ ದಿಂದ ವಾದಿಗಳು ಅನಾಥರಾಗಿರುವರೆಂ ಗಾ ತಿಳಿಸಲಾಗಿದೆ. ಇವರುಗಳಿಗೆ ಬೇ ಮಾನ ಅಥವಾ ಆಸ್ತಿಯಿಲ್ಲವೆಂದು ಗಿದೆ ಈ ಮುಂದಿನ ಖರ್ಚಿಗಾಗಿ ಪರಿ ಅವರು ಕೇಳಿರುತ್ತಾರೆ ಅಂತ್ಯಕ್ರಿಯೆ ಮತ್ತು ಇತರ ಅವರ ಗಾಗಿ ೫೦೦ ರೂ., ತಿಂಗಳಿಗೆ ೧೫ ತೆ ೨೦ ವರ್ಷದ ಮುಂದಿನ ಜೀವನಕ್ಕಾಗಿ , ಮೊದಲನೇ ವಾದಿಗೆ ವರ್ಷಕ್ಕೆ ನಂತೆ ೨೦ ವರ್ಷ ಜೀವನಕ್ಕಾಗಿ ನಾಲ್ಕು ಮಕ್ಕಳು ಮೇಜರಾಗುವವರೆಗೆ ಪೋಷಣೆಗಾಗಿ ೫,೦೦೦ ರೂ.. ಮ್ಮ ಮಕ್ಕಳ ಮದುವೆಗಾಗಿ - ೨೦೦ ನಾಲ್ಕು ಜನ ಮಕ್ಕಳ ವಿದ್ಯಾಭ್ಯಾಸ ೦೦೦ ರೂ..-ಈ ರೀತಿ ಪರಿಹಾರವ ಲಾಗಿದೆ

ಪರ ಶ್ರೀಗಳಾದ ಬಿ.ಆರ್.ಸೂರ್ ಮತ್ತು ಟಿ ಎ ಶ್ರೀನಿವಾಸರಾಯರು ವಹಿಸಿರುವರು

ಮಂತ್ರಿಗಳಿಗೆ ೯೦೦ ರೂ. ವೇತನ

ಶಾಸನಸಭಾ ಸದಸ್ಯರ ಭತ್ಯದ ನಿಗದಿ

ಬೆಂಗಳೂರು ೧೧

ಸರ್ಕಾರದವರು ನೆನ್ನೆ ಏಕೀಕೃತ ಹೊಸ ಮಂತ್ರಿಗಳ ಸಂಬಳ ಮತ್ತು ಭತ್ಯವನ್ನು ನಿಗದಿ ಮಾಡಿದ್ದಾರೆ ಅದರ ಪ್ರಕಾರ, ಸಚಿವರುಗಳು ವಿಧಾನ ಸಭಾ ಮತ್ತು ಪರಿಷತ್ತುಗಳ ಅಧ್ಯಕ್ಷರುಗಳಿಗೆ ಮಾಹೆಯಾನಾ ೯೦೦ ರೂ ಸಂಬಳವೂ, ೩೦೦ ರೂ ವಾಹನ ಭತ್ಯವೂ, ಸರ್ಕಾರದ ವಾಸದ ಮನೆ ಇಲ್ಲದವರಿಗೆ ೨೫೦ ರೂ ಭತ್ಯವೂ ಗೊತ್ತುಪಡಿಸಲ್ಪಟ್ಟಿದೆ ಸಚಿವರುಗಳು ೬೫ ರೂ ಗೆ ಹೆಚ್ಚಿಲ್ಲದಂತೆ ಸರ್ಕಾರದ ವೆಚ್ಚದಲ್ಲಿ ವಿದ್ಯುಚ್ಛಕ್ತಿಯನ್ನು ಬಳಸಬಹುದು ಹೆಚ್ಚಿನ ವೆಚ್ಚವನ್ನು ಅವರುಗಳೇ ವಹಿಸಬೇಕಾಗುವುದು

ರೈಲಿನಲ್ಲಿ ಪ್ರಯಾಣ ಮಾಡುವಾಗ ಅತ್ಯುನ್ನತ ದರಗತಿಯ ೧॥ರ ಭತ್ಯ ಮತ್ತು ರಸ್ತೆ ಪ್ರಯಾಣಕ್ಕೆ ೧ ಮೈಲಿಗೆ ಆರಾಣೆ ಭತ್ಯವನ್ನು ನಿಗದಿ ಮಾಡಲಾಗಿದೆ ವಿಮಾನ ಪ್ರಯಾಣಕ್ಕೆ ಒಂದು ಪ್ರಯಾಣದ ವೆಚ್ಚ ಮತ್ತು ಐದನೇ ೧ ಭಾಗದ ಭತ್ಯ ದೊರೆಯುವುದು ಸಂಸ್ಥಾನದಲ್ಲಿ ದಿನಕ್ಕೆ ೧೦ ರೂ. ಮತ್ತು ಹೊರಗಡೆ ೨೫ ರೂ ದಿನ ಭತ್ಯವನ್ನು ನಿಗದಿ ಮಾಡಲಾಗಿದೆ ಅದೇ ರೀತಿ ಶಾಸನ ಸಭಾಧ್ಯಕ್ಷರಿಗೂ ನಿಗದಿ ಮಾಡಲಾಗಿದೆ ಮತ್ತೊಂದು ಆಜ್ಞೆಯಲ್ಲಿ ಡೆಪ್ಯುಟಿ ಸ್ಪೀಕರಿಗೆ ೫೫೦ ರೂ. ಸಂಬಳವನ್ನು ಗೊತ್ತುಪಡಿಸಲಾಗಿದೆ

ಶಾಸನ ಸಭಾ ಸದಸ್ಯರುಗಳಿಗೆ ೧॥ಯ ಫಸ್ಟ್ ಕ್ಲಾಸ್ ರೈಲು ದರ ಮತ್ತು ೬ ಆಣೆ ಮೈಲೇಜನ್ನು ಕೊಡಲಾಗುವುದು ದಿನ ಭತ್ಯವನ್ನು ಸರ್ಕಾರಿ ನಿವಾಸದಲ್ಲಿದ್ದರೆ ೧೨॥ ರೂ ನಂತೆಯೂ, ಬೇರೆ ಕಡೆ ಇದ್ದರೆ ೧೬ ರೂ ನಂತೆಯೂ ಕೊಡುವ ಬಗ್ಗೆ ಆಜ್ಞೆಯಾಗಿದೆ.

ಇಲವಾಲದ ಬಳಿ ಲಾರಿ ಅಪಘಾತ

ಕ್ಲೀನರ್ ಮರಣ, ಡ್ರೈವರನ ಬಂಧನ

ಮೈಸೂರು ೧೧

ಮಡಕೇರಿಗೆ ಹೋಗುತ್ತಿದ್ದ ಲಾರಿಯೊಂದು ಇಲವಾಲದ ಬಳಿ ಮೊನ್ನೆ ರಾತ್ರಿ ೧೧॥ ಗಂಟೆ ಸಮಯದಲ್ಲಿ ಮರಕ್ಕೆ ಡಿಕ್ಕಿ ಹೊಡೆದುದರಿಂದ ಕ್ಲೀನರನು ಸ್ಥಳದಲ್ಲೇ ಮೃತಪಟ್ಟನು ಡ್ರೈವರ್ ಮತ್ತು ಇನ್ನೊಬ್ಬರು ಅಪಾಯದಿಂದ ಪಾರಾದರು ಲಾರಿಯು ಪಕ್ಕಕ್ಕೆ ಮಗುಚಿಕೊಳ್ಳಲು ಕ್ಲೀನರ್ ಕೆಳಗೆ ಬಿದ್ದು ಅವನ ಮೇಲೆ ಲಾರಿ ಬಿತ್ತೆಂದು ಹೇಳಲಾಗಿದೆ. ಲಾರಿಯು ನಗರದಲ್ಲಿರುವ ಸಂತೆಪೇಟೆ ವರ್ತಕರಾದ ಶ್ರೀ ನಾಗರಾಜಶೆಟ್ಟಿರದು. ಮಂಡ್ಯದಿಂದ ಬೆಲ್ಲ ಮತ್ತು ದಿನಸಿಯನ್ನು ತಂದು ಅದು ಹೋಗುತ್ತಿತ್ತು. ಡ್ರೈವರನನ್ನು ಬಂಧಿಸಲಾಗಿದೆ

ಗೃಹ ಪ್ರವೇಶೋತ್ಸವ

ಶ್ರೀಮತಿ ಜಿ. ಎಸ್ ನಾಗರತ್ನಮ್ಮ ಮತ್ತು ಶ್ರೀ ಜಿ ಸೀತಾರಾಮಯ್ಯನವರು ಕಳೆದ ಶುಕ್ರವಾರ ಸರಸ್ವತೀಪುರದ ಬಡಾವಣೆಯಲ್ಲಿ [illegible] ಎಂಬ ತಮ್ಮ ಗೃಹದ ಪ್ರವೇಶೋತ್ಸವವನ್ನು ನೆರವೇರಿಸಿ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು.

ಜಾಡಮಾಲಿಗಳಿಂದ ಸಂಬಳದ ನಿರಾಕರಣೆ

ಮೈಸೂರು ೧೧

ಸರ್ಕಾರಿ ನೌಕರರಿಗೆ ಕೊಡಲಾಗಿರುವ ತಾತ್ಕಾಲಿಕ ಪರಿಹಾರವನ್ನು ತಮಗೆ ಕೊಟ್ಟಿಲ್ಲದಿರುವುದನ್ನು ಪ್ರತಿಭಟಿಸಿ ನಗರದ ಸುಮಾರು ೮೦೦ ಜಾಡಮಾಲಿಗಳು ನೆನ್ನೆ ಸಂಬಳವನ್ನು ಪಡೆಯಲು ನಿರಾಕರಿಸಿದರು ಅವರುಗಳು ನಗರದಲ್ಲೆಲ್ಲಾ ಮೆರವಣಿಗೆ ನಡೆಸಿದರು ಅವರ ಮುಖಂಡರು ನಗರ ಸಭೆ ಅಧಿಕಾರಿಗಳನ್ನು ಭೇಟಿ ಮಾಡಿದಾಗ ಇನ್ನು ಒಂದೆರಡು ದಿನಗಳಲ್ಲಿ ತಾತ್ಕಾಲಿಕ ಪರಿಹಾರವನ್ನು ಕೊಡಿಸುವುದಾಗಿ ಅಧಿಕಾರಿಗಳು ಭರವಸೆಯಿತ್ತರೆಂದು ಗೊತ್ತಾಗಿದೆ.

ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಭೆ

ಪ್ರಜಾ ಸಮಾಜವಾದಿ ಪಕ್ಷದ ನಗರ ಶಾಖೆಯ ಕಾರ್ಯಕರ್ತರ ಸಭೆಯು ನಾಳೆ ಸಂಜೆ ೬॥ ಗಂಟೆಗೆ ಹಳೇ ಸಂತೆಪೇಟೆಯಲ್ಲಿರುವ ಪಕ್ಷದ ಕಛೇರಿಯಲ್ಲಿ ಸೇರುತ್ತದೆ. ಕೆಲಸಗಾರರೆಲ್ಲರೂ ಭಾಗವಹಿಸಬೇಕೆಂದು ಕಾರ್ಯದರ್ಶಿ ಶ್ರೀ ಎಂ. ಎಸ್ ತಿಮ್ಮಯ್ಯನವರು ಕೋರಿರುತ್ತಾರೆ

ಹಂಗೇರಿಯಲ್ಲಿ ೪೮ ಗಂಟೆಗಳ ಸಾರ್ವತ್ರಿಕ ಹರತಾಳ

ಬಚ್ಚಿಟ್ಟ ಶಸ್ತ್ರಾಸ್ತ್ರಗಳಿಗಾಗಿ ರಷ್ಯಾ ಸೈನ್ಯಗಳಿಂದ ಶೋಧನೆ

ಹಂಗೇರಿಯ ಕಾರ್ಮಿಕರ ಕೇಂದ್ರ ಮಂಡಲಿಯು ನೆನ್ನೆ ಮಧ್ಯ ರಾತ್ರಿಯಿಂದ ೪೮ ಗಂಟೆಗಳ ಕಾಲದ ಸಾರ್ವತ್ರಿಕ ಮುಷ್ಕರ ನಡೆಸುವಂತೆ ಕರೆಯಿತ್ತು,ವಿಶ್ವದ ಎಲ್ಲಾ ಕಾರ್ಮಿಕರೂ ಹಂಗೇರಿ ಕಾರ್ಮಿಕರಿಗೆ ಸಹಾನುಭೂತಿ ತೋರಿಸಲು ಮುಷ್ಕರ ನಡೆಸುವಂತೆ ಕೋರಿತು.

ಬಚ್ಚಿಟ್ಟ ಶಸ್ತ್ರಾಸ್ತ್ರಗಳ ಪತ್ತೆಗಾಗಿ ನೆನ್ನೆ ಹಂಗೇರಿ ಮತ್ತು ರಷ್ಯಾ ಸೈನಿಕರು ಅನೇಕ ಕಡೆಗಳಲ್ಲಿ ಶೋಧನೆ ನಡೆಸಿದರು ಬುಡಾಪೆಸ್ಟಿನ [illegible] ಕಡೆಗಳಲ್ಲಿ ಟೆಲಿಫೋನ್ ಸಂಪರ್ಕವನ್ನು ಕಡಿದುಹಾಕಲಾಗಿದೆ

ಸರ್ಕಾರದವರು ಎಲ್ಲಾ ಕಾರ್ಮಿಕ ಸಂಸ್ಥೆಗಳ ವಿಸರ್ಜನೆಗೆ ಆಜ್ಞೆ ಮಾಡಿದ್ದಾರೆ. ಗಡಿಗಳ ಬಳಿ ಹೋರಾಟವು ಉಲ್ಬಣವಾಗಿ ೧೭ ಮಂದಿ ಮಡಿದು,೫೦ ಜನರಿಗೆ ಗಾಯವಾಗಿದೆ ಅಲ್ಲಿ ಗೆರಿಲ್ಲಾ ಯುದ್ಧವು ಪುನಃ ಆರಂಭವಾಗಿದೆ. ಸಮ್ಮರಿ ಕೋರ್ಟುಗಳನ್ನು ಸ್ಥಾಪಿಸಲು ಹಂಗೇರಿ ಅಧ್ಯಕ್ಷರು ಆಜ್ಞೆ ಮಾಡಿದ್ದಾರೆ

ಸಕ್ಕರೆ ಮತ್ತು ಮಿಲ್ ಬಟ್ಟೆಗಳ ಮೇಲೆ ಸರ್ ಚಾರ್ಜು

ಮಿಲ್ ಬಟ್ಟೆಗಳು, ಹೊಗೆಸೊಪ್ಪು ಮತ್ತು ಸಕ್ಕರೆ ಮೇಲೆ ಸಂಸ್ಥಾನಗಳಲ್ಲಿ ವಿಧಿಸಲಾಗುವ ಮಾರಾಟ ತೆರಿಗೆಯ ಬದಲು ಕೇಂದ್ರದವರು ವಿಧಿಸುವ ಅಬ್ಕಾರಿ ಸುಂಕದ ಜೊತೆಗೆ ಸರ್ ಚಾರ್ಜನ್ನು ವಿಧಿಸಬೇಕೆಂದು ನೆನ್ನೆ ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ನಿರ್ಧರಿಸಲಾಯಿತು ಇದರಿಂದ ಬರುವ ಉತ್ಪತ್ತಿಯನ್ನು ಹಂಚುವ ವಿಧಾನವನ್ನು ಗೊತ್ತುಪಡಿಸಲು ಹಣಕಾಸಿನ ಮಂಡಲಿಗೆ ಸೂಚಿಸಲಾಯಿತು

ನಾನ್ ಗೆಜೆಟೆಡ್ ನೌಕರರಿಗೆ ದೇಶಾದ್ಯಂತ ಒಂದೇ ಮಟ್ಟದ ಸಂಬಳ

ಕೇಂದ್ರ ಸರ್ಕಾರ ಪರಿಶೀಲಿಸುತ್ತಿರುವುದಾಗಿ ನಿಜಲಿಂಗಪ್ಪನವರ ಹೇಳಿಕೆ

ಪ್ರಂ ಸು ಫೋ] ಬೆಂಗಳೂರು ೧೧

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ದೆಹಲಿಯಲ್ಲಿ ನಡೆದ ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಭಾಗವಹಿಸಿ ಹಿಂದಿರುಗಿರುತ್ತಾರೆ. ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ದೇಶದ ನಾನ್ ಗೆಜೆಟೆಡ್ ನೌಕರರಿಗೆಲ್ಲಾ ಒಂದೇ ಮಟ್ಟದ ಸಂಬಳವಾಗಿರಬೇಕೆಂದು ಕೇಂದ್ರ ಸರ್ಕಾರದವರು ಭಾವಿಸುವರೆಂದೂ, ಈ ವಿಚಾರವನ್ನು ಅವರು ಪರಿಶೀಲಿಸುವರೆಂದೂ ತಿಳಿಸಿ, ಮೈಸೂರಿನ ಎನ್ ಜಿ ಓ ಗಳು ಸ್ವಲ್ಪ ತಾಳ್ಮೆಯಿಂದ ಇರಬೇಕೆಂದು ಸೂಚಿಸಿದರು.

ಮೈಸೂರು ಸಂಸ್ಥಾನದಲ್ಲಿ ರೂ ಗೆ ೨ ಸೇರಿನ ಅಕ್ಕಿಯನ್ನು ಬ್ಲಾಕ್ ಮಾರ್ಕೆಟ್ಟಿನಲ್ಲಿ ಮಾರಾಟ ಮಾಡಲಾಗುತ್ತಿರುವುದೆಂಬ ದೂರು ಕೇಂದ್ರಕ್ಕೆ ಹೋಗಿದೆಯೆಂದು ಅವರು ಸೂಚಿಸಿದರು.

ಹೈಕೋರ್ಟಿಗೆ ಬರುವ ಜನವರಿಯೊಳಗೆ ಇತರ ನ್ಯಾಯಾಧೀಶರುಗಳನ್ನು ನೇಮಿಸಿಕೊಳ್ಳಲಾಗುವುದೆಂದೂ ಅವರು ವ್ಯಕ್ತಪಡಿಸಿದರು

ಬಲ್ಗೇರಿಯದಲ್ಲಿ ೩,೦೦೦ ಜನರ ಬಂಧನ

ಬಲ್ಗೇರಿಯದಲ್ಲಿ ಕಳೆದ ಹಲವು ತಿಂಗಳಿಂದ ೩-೪ ಸಹಸ್ರ ಜನರನ್ನು ಬಂಧಿಸಿ, ಡಾನ್ಯೂಬ್ ನದಿಯಲ್ಲಿರುವ ಚಿಕ್ಕ ದ್ವೀಪದ ಸೆರೆ ಶಿಬಿರದಲ್ಲಿ ಇಡಲಾಗಿದೆಯೆಂದು ವರದಿಯಾಗಿದೆ. ಬಲ್ಗೇರಿಯದ ರೇವು ಪಟ್ಟಣಗಳಾದ ವಾರ್ನಾ ಮತ್ತು ಬರ್ಗಾಸ್ ಗಳಲ್ಲಿ ರಷ್ಯಾ ಸೈನ್ಯಗಳು ಬಂದಿಳಿದಿರುವುವೆಂದು ಗೊತ್ತಾಗಿದೆ

ಪೋರ್ಚುಗೀಸ್ ಸೈನಿಕರೊಡನೆ ಗೋವಾ ರಾಷ್ಟ್ರೀಯರ ಘರ್ಷಣೆ

ಗೋವಾದಲ್ಲಿ ಕಳೆದ ೬ ನೇ ತಾರೀಖು ಪೋರ್ಚುಗೀಸ್ ಗಸ್ತು ಸೈನಿಕರಿಗೂ, ಅಲ್ಲಿನ ರಾಷ್ಟ್ರೀಯರಿಗೂ ಘರ್ಷಣೆ ನಡೆದು ಬಾಲಕೃಷ್ಣ ಭೌಸ್ಲೆ ಎಂಬ ಗೋವಾ ಪ್ರಜೆಯು ಮೃತಪಟ್ಟನೆಂದು ವರದಿಯಾಗಿದೆ ಮುಖ್ಯ ರಾಷ್ಟ್ರೀಯರು ಹಾರಿಸಿದ ಗುಂಡಿನಿಂದ ಪೋರ್ಚುಗೀಸ್ ಸೈನಿಕನೂ ಮೃತಪಟ್ಟಿರುತ್ತಾನೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಪಿಟೀಲು. ೭-೧೫ ಮತ್ತು ೮-೧೫ ಎಸ್ ಎಸ್ ಪಟೇಲರಾಯರ ದೇವರ ನಾಮ ೭-೩೦ ಹಿಂದಿ ಪಾಠ ಮಧ್ಯಾಹ್ನ ೧೨ ಎ ಜಗನ್ನಾಥ-ಸಂಗೀತ ೧೨ ೩೦ ರೆಕಾರ್ಡು. ೧ ಎಸ್ ಎಸ್. ಪಟೇಲರಾಯರ ಸಂಗೀತ ೧-೫೦ ಪಿಟೀಲು ೨-೧೫ ಹೆಂಗಸರಿಗಾಗಿ ಸಂಜೆ ೫ ೩೦ ಮತ್ತು ೮ ಕೆ ಎಸ್ ಸತ್ಯವತಿ ನಾಗಸ್ವರ. ೬-೫ ವಿರಾಮ ಸಂಗೀತ ೬-೨೦ ರೆಕಾರ್ಡು. ೭ ೩೦ ನಾವು ಮತ್ತು ನಮ್ಮವರು ೮-೩೦ ರಾಷ್ಟ್ರೀಯ ಕಾರ್ಯಕ್ರಮ ಭಾಷಣ ೮ ೫೦ ರೆಕಾರ್ಡು. ೯-೧೫ ಆರ್ ಕೆ ರಾಮನಾಥನ್ ಸಂಗೀತ

ಕೇಂದ್ರದಿಂದ ಸಂಸ್ಥಾನಕ್ಕೆ ೨೦,೦೦೦ ಟನ್ ಅಕ್ಕಿ

ಬೆಂಗಳೂರು ೧೦

ಸಂಸ್ಥಾನದಲ್ಲಿ ಅಕ್ಕಿಯ ಅಭಾವವನ್ನು ನೀಗುವ ಸಲುವಾಗಿ ಇಲ್ಲಿನ ಸರ್ಕಾರದವರು ಕೇಂದ್ರದಿಂದ ೧೫ ಸಹಸ್ರ ಟನ್ ಅಕ್ಕಿಯನ್ನು ಕೇಳಿದ್ದರೆಂದೂ, ಇದಕ್ಕಾಗಿ ಕೇಂದ್ರದವರು ೨೦ ಸಹಸ್ರ ಟನ್ ಅಕ್ಕಿಯನ್ನು ಕಳುಹಲು ಸಿದ್ಧವಾಗಿರುವರೆಂದೂ, ಆದರೆ ರೈಲು ವ್ಯಾಗನ್ನುಗಳ ಅಭಾವದಿಂದ ಅದರ ರವಾನೆ ಕಾರ್ಯವು ತಡವಾಗಿರುವುದೆಂದೂ ಹೇಳಲಾಗಿದೆ

ಶವ ಗೃಹಕ್ಕೆ ದಾಖಲಾದವಳು ಮನೆಗೆ ವಾಪಸು

ಚಿಕ್ಕಮಗಳೂರಿನ ಆಸ್ಪತ್ರೆಯಲ್ಲಿ ಹುಡುಗಿಯೊಬ್ಬಳನ್ನು ಸತ್ತಳೆಂದು ತೀರ್ಮಾನಿಸಿ ಶವ ಗೃಹಕ್ಕೆ ಕಳುಹಿಸಿ ತರುವಾಯ 'ಶವ' ವನ್ನು ಮನೆಯವರಿಗೆ ತಲುಪಿಸಲಾಯಿತೆಂದೂ, ಹಾಗೇ ವೈದ್ಯರು ಚಿಕಿತ್ಸೆ ನಡೆಸಿದಮೇಲೆ "ಮೃತಪಟ್ಟವಳು" ಗುಣ ಹೊಂದುತ್ತಿರುವಳೆಂದೂ ಹೇಳಲಾಗಿದೆ ಈ ವಿಷಯವನ್ನು ಅಧಿಕಾರಿಗಳ ಗಮನಕ್ಕೆ ತರಲಾಗಿದೆ

ವಚನ ಗಾಯನ ತರಗತಿಗಳ ಪ್ರಾರಂಭೋತ್ಸವ

ನಗರದ ಮಹಿಳಾ ಸದನದಲ್ಲಿ ದಿವಂಗತ ಎಂ. ಡಿ. ಗೋಪಾಲಾಚಾರ್ಯರ ಸ್ಮಾರಕ ಸಂಸ್ಥೆಯ ಆಶ್ರಯದಲ್ಲಿ ನಡೆಯುತ್ತಿರುವ ಧಾರ್ಮಿಕ ಕಾಲಕ್ಷೇಪದ ಅಂಗವಾಗಿ ವಚನ ಗಾಯನ ತರಗತಿಗಳ ಪ್ರಾರಂಭೋತ್ಸವವು ಶ್ರೀ ಎಂ. ಜಿ. ನಂಜುಂಡಾರಾಧ್ಯರವರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ನಡೆಯಿತು. ಪ್ರಾರ್ಥನೆ ಮತ್ತು ಸದನದ ಅಧ್ಯಕ್ಷಿಣಿ ಶ್ರೀಮತಿ ಹೆಚ್. ಟಿ. ಶಾಂತಾರವರಿಂದ ವರದಿಯನಂತರ, ಶ್ರೀ ಬಿ. ಎಂ. ಶಿವಪ್ಪನವರ ಸುಶ್ರಾವ್ಯವಾದ ವಚನ ಗಾಯನವು ನಡೆಯಿತು ಅಧ್ಯಕ್ಷರು ತಮ್ಮ ಭಾಷಣದಲ್ಲಿ ಭಾರತೀಯ ಮಹಿಳೆಯರ ಸ್ಥಾನಮಾನಗಳು, ಸಾಂಸ್ಕೃತಿಕ ಮತ್ತು ಐತಿಹಾಸಿಕ ಕ್ಷೇತ್ರಗಳಲ್ಲೂ ಅವರಿಗಿರುವ ಪ್ರಾಮುಖ್ಯತೆ, ಗೌರವ ಮುಂತಾದುವನ್ನು ವಿವರಿಸಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳೊಡನೆ ಸಮಾರಂಭವು ಮುಕ್ತಾಯವಾಯಿತು

ಸಂತಾಪ ಸೂಚನೆ

ಗೀತಾ ಪ್ರಚಾರಿಣೀ ಸಭೆಯ ಸಂಸ್ಥಾಪಕರಾದ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಲು ಸಭೆಯ ಸ್ವಯಂಸೇವಕರು ಮೊನ್ನೆ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು

ವಿಹಾರ ಕೇಂದ್ರದ ಆರಂಭೋತ್ಸವ

ನಗರದ ಕಿಲ್ಲೆ ಮೊಹಲ್ಲಾ ಗುರುರಾವ್ ದೇವಣ್ಣನವರ ಬೀದಿಯ ೧೫೬ನೇ ಮನೆಯಲ್ಲಿ ರಿಕ್ರಿಯೇಷನ್ ಕ್ಲಬ್ಬಿನ ಪ್ರಾರಂಭೋತ್ಸವವನ್ನು ಶಾಸನಸಭಾ ಸದಸ್ಯ ಶ್ರೀ ಸಿ. ಎನ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ

ರೋಂ ವಿಶ್ವವಿದ್ಯಾಲಯದ ನೈತಿಕ ತತ್ವಶಾಸ್ತ್ರದ ಪ್ರೊಫೆಸರ್ ಡಾ|| ಫ್ರಾಂಕೊ ಲೊಂಬಾರ್ಡಿಯವರು ನಾಳೆ ಸಂಜೆ ೫|| ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವಿಶ್ವವಿದ್ಯಾಲಯದ ವಿಶೇಷೋಪನ್ಯಾಸದ ಅಂಗವಾಗಿ "ಆಧುನಿಕ ಇಟಲಿಯಲ್ಲಿ ಸಮಾಜ ಮತ್ತು ದರ್ಶನ ಶಾಸ್ತ್ರ" ಎಂಬ ವಿಚಾರವಾಗಿ ಭಾಷಣ ಮಾಡುವರು ಕಾಲೇಜಿನ ತತ್ವ ಶಾಸ್ತ್ರ ಪ್ರೊಫೆಸರ್ ಶ್ರೀ ಎನ್. ಎ. ನಿಕ್ಕಾಂರವರು ಅಧ್ಯಕ್ಷತೆ ವಹಿಸುವರು ಸರ್ವರಿಗೂ ಆಹ್ವಾನವಿದೆ.

ಕಾಂಗ್ರೆಸ್ ಸಮ್ಮೇಳನದ ಪ್ರತಿನಿಧಿಗಳಿಗೆ ವಸತಿ

ಇದೇ ೧೫ ಮತ್ತು ೧೬ ನೇ ತಾರೀಖುಗಳಲ್ಲಿ ನಗರದಲ್ಲಿ ನಡೆಯುವ ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಬರುವವರಿಗೆ ಶಿವರಾಂಪೇಟೆಯಲ್ಲಿರುವ ಶ್ರೀ ವಾಸವೀ ನಿಲಯ ಮತ್ತು ನಂಜರಾಜಬಹದ್ದೂರ್ ಛತ್ರದಲ್ಲಿ ವಸತಿಯನ್ನು ಏರ್ಪಡಿಸಲಾಗಿದೆ. ಛಳಿಗಾಲವಾದ್ದರಿಂದ ಬರುವ ಪ್ರತಿನಿಧಿಗಳು ಹಾಸಿಗೆ ಮತ್ತು ಹೊದಿಕೆಯನ್ನು ತರಬೇಕಾಗಿ ಕೋರಲಾಗಿದೆ.

ತಾಳವಾಡಿ ಫಿರ್ಕಾ ಕನ್ನಡಿಗರ ಸಮ್ಮೇಳನ

ಕೊಯಮತ್ತೂರು ಜಿಲ್ಲೆಯ ಗೋಪಿಚೆಟ್ಟಿಪಾಳ್ಯ ತಾಲ್ಲೂಕಿನ ತಾಳವಾಡಿ ಫಿರ್ಕಾ ಕನ್ನಡಿಗರ ಸಮ್ಮೇಳನವು ಕಳೆದ ಶನಿವಾರ ಶ್ರೀ ಬಿ. ಶಿವಮೂರ್ತಿಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ನಡೆಯಿತು ಶಾಸನಸಭಾ ಸದಸ್ಯರಾದ ಶ್ರೀ . . ಲಿಂಗಣ್ಣನವರು ಆರಂಭೋತ್ಸವವನ್ನು ನೆರವೇರಿಸಿದರು ಶ್ರೀ ಎಂ. ಆರ್. ಮಾದಪ್ಪನವರು ಭಾಷಣ ಮಾಡಿ ಫಿರ್ಕಾದ ೨೬ ಹಳ್ಳಿಗಳಲ್ಲಿರುವ ೭೫,೦೦೦ ಜನರ ಪೈಕಿ ಶೇಕಡ [illegible]ರಷ್ಟು ಕನ್ನಡಿಗರಿರುವುದಾಗಿಯೂ, ಅವರುಗಳು ಮೈಸೂರಿಗೆ ಸೇರಬೇಕೆಂಬ ಆಶೋತ್ತರಗಳನ್ನಿಟ್ಟುಕೊಂಡಿರುವರೆಂದೂ ತಿಳಿಸಿದರು

ಶ್ರೀ ಲಿಂಗಣ್ಣನವರು ಮಾತನಾಡಿ ಕಾಸರಗೋಡು, ತಾಳವಾಡಿ ಇವುಗಳ ಭವಿಷ್ಯವನ್ನು ಗಡಿ ಸಮಿತಿಯವರು ಪರಿಶೀಲಿಸುವರೆಂದು ಹೇಳಿ, ಎಲ್ಲರೂ ಒಗ್ಗಟ್ಟಿನಿಂದ ಇರಬೇಕೆಂದು ಕೋರಿದರು

ಕೊಯಮತ್ತೂರಿನ ಕಮ್ಯೂನಿಸ್ಟ್ ಸದಸ್ಯ ಶ್ರೀ ಮಾರಪ್ಪನವರು ಮಾತನಾಡಿ, ಆ ಪ್ರದೇಶದ ಕನ್ನಡಿಗರಿಗೆ ತುಂಬಾ ಕಷ್ಟಗಳಾಗಿವೆಯೆಂದು ಹೇಳಿದರು ೧೦,೦೦೦ ಜನರು ಭಾಗವಹಿಸಿದ್ದರು ಈ ಫಿರ್ಕಾವನ್ನು ಕೂಡಲೇ ಮೈಸೂರಿಗೆ ಸೇರಿಸುವಂತೆ ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡಾರ್ ಮತ್ತು ಮೈಸೂರಿನ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರನ್ನು ಒತ್ತಾಯಪಡಿಸಬೇಕೆಂದು ನಿರ್ಧರಿಸಲಾಯಿತು .

ಸಾಂಚಿ ವಿಹಾರಕ್ಕೆ ದಲೈ ಲಾಮಾರವರಿಂದ ಚಿನ್ನದ ದೀಪ

ಸಾಂಚಿಯ ಬೌದ್ಧ ವಿಹಾರಕ್ಕೆ ಟಿಬೆಟ್ಟಿನ ದಲೈ ಲಾಮಾರವರು ೫೦ ತೊಲ ಚಿನ್ನದ ದೀಪವನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ ಅದು ಸದಾ ಉರಿಯುತ್ತಿರಬೇಕೆಂದು ಲಾಮಾರವರು ಆಶಿಸಿದ್ದಾರೆ

೩ ರೆಕ್ಕೆ ಮತ್ತು ೪ ಕಾಲುಗಳ ಕೋಳಿಮರಿ

ಭದ್ರಾವತಿಯಲ್ಲಿ ನಾಲ್ಕು ಕಾಲುಗಳು ಮತ್ತು ಮೂರು ರೆಕ್ಕೆಗಳುಳ್ಳ ಒಂದು ಕೋಳಿ ಮರಿಯು ಹುಟ್ಟಿ ಒಂದುದಿನ ಬದುಕಿತ್ತು. ಅದನ್ನು ಸ್ಥಳೀಯ ಪಶು ವೈದ್ಯ ಆಸ್ಪತ್ರೆಯಲ್ಲಿಡಲಾಗಿದೆ

ಕಪಿಲಾ ಹತ್ತಿ ಗಿರಣಿ ಕಾರ್ಮಿಕರ ೨೬ ಬೇಡಿಕೆಗಳು

ನಂಜನಗೂಡಿನ ಕಪಿಲಾ ಹತ್ತಿ ಗಿರಣಿ ಕಾರ್ಮಿಕರಿಗೂ, ಆಡಳಿತ ವರ್ಗದವರಿಗೂ ಇತ್ತೀಚೆಗೆ ಆದ ಒಪ್ಪಂದದಲ್ಲಿ ಅಂಗೀಕರಿಸಲಾದ ೨೬ ಬೇಡಿಕೆಗಳನ್ನು ಕಾರ್ಮಿಕ ಸಂಘದ ಅಧ್ಯಕ್ಷರಾದ ಶ್ರೀ ಎಸ್. ರೇವಣ್ಣನವರು ವಿವರಿಸಿರುತ್ತಾರೆ ನಾಲ್ಕು ಮಗ್ಗಗಳ ನೆಯ್ಗೆಯವರಿಗೆ ೩೦೦ ಪಾಯಿಂಟ್ ಅಥವಾ ೧೩೦ ಗಜ ಬಟ್ಟೆಗೆ ತುಟ್ಟಿ ಭತ್ಯ ಸೇರಿ ರೂ ೨-೬-೩ ದರ ನಿಗದಿ ಮಾಡಬೇಕು, ಹಿಂದಿನಂತೆ ರಾತ್ರಿ ಕಾಲದ ಷಿಫ್ಟ್ ಭತ್ಯ ಕೊಡಬೇಕು, ನ್ಯಾಯಮಂಡಲದ ತೀರ್ಪಿನ ಅನುಸಾರ ೨೫ ಮಂದಿಗೆ ವಿಶೇಷ ಬಡ್ತಿ; ಕಾರ್ಮಿಕರೆಲ್ಲರಿಗೂ ಆಕ್ಟಿಂಗ್ ಭತ್ಯ; ವಾರ್ಪರುಗಳಿಗೆ ಶೇಕಡ ೫೦ ಮತ್ತು ಡ್ರಾಯರುಗಳಿಗೆ ೨೫ ರಷ್ಟು ಕೂಲಿ ಹೆಚ್ಚಿಸಬೇಕು, ವೈಂಡರುಗಳ ಕೂಲಿಯನ್ನು ಸುಧಾರಿಸಬೇಕು ಕೆಲಸ ಕಲಿಯುವವರಿಗೆ ದಿನಕ್ಕೆ ೧ ರೂ ಸ್ಟೈಪೆಂಡರಿಯನ್ನು ಕೊಡಬೇಕು ಈ ಅಂಶಗಳನ್ನು ಅವು ಒಳಗೊಂಡಿವೆ ಕಾವೇರಿ ವ್ಯಾಲಿ ಕಾಗದದ ಕಾರ್ಖಾನೆಯನ್ನು ಸರ್ಕಾರದವರೇ ವಹಿಸಿಕೊಳ್ಳಬೇಕೆಂದು ಶ್ರೀ ರೇವಣ್ಣನವರು ಕೋರಿರುತ್ತಾರೆ

ವಿವಾಹ ಮಹೋತ್ಸವ

ನಂಜನಗೂಡಿನ ಪತ್ರಿಕೋದ್ಯಮಿಗಳಾದ ಶ್ರೀ ಕೆ. ಎಸ್. ರಾಮಯ್ಯನವರು ತಮ್ಮ ಎರಡನೇ ಮಗ ಶ್ರೀ ಕೆ. ಆರ್. ಸತ್ಯನಾರಾಯಣರವರಿಗೆ ಅಲ್ಲಿನ ಶ್ರೀ ವೆಂಕಟೇಶ ಉಪಾಹಾರ ಶಾಲೆಯ ಶ್ರೀ ಎಸ್. ಎಸ್. ಚಂದ್ರಶೇಖರಯ್ಯನವರ ದ್ವಿತೀಯ ಪುತ್ರಿ ಸೌ|| ಸುಲಕ್ಷಣಮ್ಮನವರನ್ನು ತಂದುಕೊಂಡು ಮೊನ್ನೆ ಶ್ರೀರಂಗಪಟ್ಟಣದಲ್ಲಿ ವಿವಾಹವನ್ನು ನೆರವೇರಿಸಿದರು

ಇಂಜಕ್ಷನ್ನಿನಿಂದ ೨೨ ಮಕ್ಕಳ ಮರಣ

ಸೂಜಿಯನ್ನು ಶುದ್ಧಿ ಮಾಡದಿದ್ದುದರ ಪರಿಣಾಮ

ಯುಗೊಸ್ಲಾವಿಯದಲ್ಲಿರುವ ಮ್ಯಾಸಿಡೋನಿಯಾ ವಿಶ್ವವಿದ್ಯಾಲಯದ ಆಸ್ಪತ್ರೆಯಲ್ಲಿ ಮೆನಿಂಜೈಟಿಸ್ (ಮಿದುಳುಜ್ವರ) ಗಾಗಿ ಸೇರಿಸಲ್ಪಟ್ಟಿದ್ದ ೩೬ ಮಕ್ಕಳ ಪೈಕಿ ೨೨ ಮಕ್ಕಳು ಅಶುದ್ಧ ಇಂಜಕ್ಷನ್ ಪರಿಣಾಮವಾಗಿ ಮೃತಪಟ್ಟರೆಂದು ವರದಿಯಾಗಿದೆ ಸ್ಟ್ರೆಪ್ಟೊಮೈಸಿನ್ ಇಂಜಕ್ಷನನ್ನು ಸ್ಟೆರಿಲೈಸ್ ಮಾಡದ ಸೂಜಿಯ ಮೂಲಕ ಕೊಡಲಾಗಿತ್ತೆಂದು ಹೇಳಲಾಗಿದೆ

ಉ ನೂರವರು ಪುನಃ ಬರ್ಮಾ ಪ್ರಧಾನಿ

ಉ ನೂರವರು ಪುನಃ ಬರ್ಮಾದ ಪ್ರಧಾನಿಯಾಗುವರೆಂದು ಗೊತ್ತಾಗಿದೆ. ಅವರು ಬರ್ಮಾ ಸ್ವಾತಂತ್ರ್ಯೋತ್ಸವವು ನಡೆಯುವ ೪ನೇ ತಾರೀಕಿಗೆ ಮುಂಚೆ ಈಗಿನ ಪ್ರಧಾನಿ ಬಾಸ್ವೆಯವರಿಂದ ಅಧಿಕಾರ ವಹಿಸಿಕೊಳ್ಳಲಿರುವರೆಂದು ಬರ್ಮಾ ಸ್ಟಾರ್ ಪತ್ರಿಕೆಯು ತಿಳಿಸುತ್ತದೆ.

ಅಮೆರಿಕದಲ್ಲಿ ಶೇ|| ೧೦ ಮಂದಿಗೆ ಮಾನಸಿಕ ಅನಾರೋಗ್ಯ

ಅಮೆರಿಕದಲ್ಲಿ ಪ್ರತಿ ಹತ್ತು ಜನರಿಗೆ ಒಬ್ಬನು ಮಾನಸಿಕ ಅನಾರೋಗ್ಯದಿಂದ ಕೂಡಿರುವುದಾಗಿ ವರದಿಯಾಗಿದೆ ಬಾಲ್ಟಿಮೋರ್ ನಗರದಲ್ಲಿ ಮಾನಸಿಕ ರೋಗವೊಂದರ ಪರಿಶೀಲನೆಯ ಸಂಬಂಧವಾಗಿ ಇದು ವ್ಯಕ್ತಪಟ್ಟಿದೆ. ಸಮಿತಿಯೊಂದು ೧೩,೦೦೦ ಜನರನ್ನೂ, ೪,೦೦೦ ಮನೆಗಳನ್ನೂ ತನಿಖೆ ನಡೆಸಿ ಆಸ್ಪತ್ರೆ, ಜೈಲು ಮುಂತಾದುವುಗಳಲ್ಲೂ ಪರಿಶೀಲಿಸಿತು

ಅಮೆರಿಕದಲ್ಲಿ ಪ್ರಥಮ ರಾಕೆಟ್ ಪ್ರಯೋಗ

ಅಮೆರಿಕದ ಫ್ಲಾರಿಡಾ ಸಂಸ್ಥಾನದ ಒಂದು ಭೂಶಿರದಿಂದ ಇದೇ ಪ್ರಥಮವಾಗಿ ಪರೀಕ್ಷಾರ್ಥವಾಗಿ ರಾಕೆಟ್ಟೊಂದನ್ನು ಬಿಡಲಾಯಿತೆಂದೂ ಅದು ೧೫೦ ಮೈಲಿ ದೂರದ ಆಚೆ ಬಿದ್ದಿತೆಂದೂ, ಗೊತ್ತಾಗಿದೆ ರಾಕೆಟ್ಟು ಗಂಟೆಗೆ ೪,೦೦೦ ಮೈಲಿ ವೇಗದಲ್ಲಿ ಸುಮಾರು ೨ ಲಕ್ಷ ಮೀಟರ್ ಎತ್ತರದ ವರೆಗೆ ಹೋಗಬಲ್ಲದೆಂದು ಹೇಳಲಾಗಿದೆ

ಹೋಟೇಲು ಕೆಲಸಗಾರರ ಸಮ್ಮೇಳನ

ನಗರದಲ್ಲಿರುವ ಹೋಟೇಲು ಕೆಲಸಗಾರರ ಸಂಘದ ಉಪ ಸಮಿತಿ ಸಭೆಯು ಕಳೆದ ಶುಕ್ರವಾರ ನಡೆದು ಕೆಲಸಗಾರರ ಸಮ್ಮೇಳನದ ಆರಂಭೋತ್ಸವವನ್ನು ನೆರವೇರಿಸುವಂತೆ ಲೋಕಸಭಾ ಸದಸ್ಯ ಶ್ರೀ ಎ. ಕೆ. ಗೋಪಾಲನ್ ಮತ್ತು ಭಾಷಣ ಮಾಡಲು ಶಾಸನಸಭಾ ಸದಸ್ಯ ಶ್ರೀ ಕೆ. ಎಸ್. ವಾಸನ್‌ರವರನ್ನು ಕೋರಬೇಕೆಂದು ನಿರ್ಧರಿಸಲಾಯಿತು ೨ ರೂ ಕೊಟ್ಟು ಸ್ವಾಗತ ಸಮಿತಿ ಸದಸ್ಯರಾಗಬೇಕೆಂದೂ, ಪ್ರತಿನಿಧಿ ಶುಲ್ಕವು ೪ ಆಣೆಯೆಂದೂ ಗೊತ್ತು ಮಾಡಲಾಯಿತು

ನಿಧನ

ನಗರದ ಮಂಡಿ ಮೊಹಲ್ಲೆಯ ಸುಪ್ರಸಿದ್ಧ ದಂತದ ಕೆಲಸಗಾರರಾದ ಪರಮಾಚಾರ್‌ರವರು ಕಳೆದ ಶುಕ್ರವಾರ ದೇಹಾಲಸ್ಯ ನಿಮಿತ್ತ ನಿಧನ ಹೊಂದಿದರು ಅವರಿಂದ ಅವರ ಶಿಷ್ಯ ವರ್ಗದವರೆಲ್ಲರಿಗೂ ಅಪಾರ ಶೋಕವುಂಟಾಗಿರುತ್ತದೆ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತೇವೆ

ಸಂಸ್ಥಾನದಲ್ಲಿ ಭೂ ಸುಧಾರ
ಬಗ್ಗೆ ಸಮಿತಿಯ ರಚನೆ

ಮೈಸೂರು ಸಂಸ್ಥಾನದಲ್ಲಿ ಭೂಸುಧಾರ
ಗ್ಗೆ ವಿವಿಧ ಪ್ರದೇಶಗಳಲ್ಲಿರುವ ಶಾಸನಗಳ
ಚಾರವನ್ನು ಪರಿಶೀಲಿಸಲು ಸರ್ಕಾರದವರು
ತಿನಿಧಿಕ ಸಮಿತಿಯೊಂದನ್ನು ರಚಿಸಿರುವ
ವ್ಯವಸಾಯ ಮಂತ್ರಿ, ಶ್ರೀ ಹೆಚ್. ಎಸ್.
ಪ್ಪನವರು ತಿಳಿಸಿರುತ್ತಾರೆ ಉಳುವವನಿಗೇ
ಮಿ ಶಾಸನದ ಬಗ್ಗೆ ಉಂಟಾಗಿರುವ ಸಂ
ಯನ್ನು ಕುರಿತು ಅವರು ತಮ್ಮ ಅಭಿಪ್ರಾ
ಸೂಚಿಸಿ, ಈಗ ಇಟ್ಟಿರುವ ಹೆಜ್ಜೆಯನ್ನು ಹಿ
ಕ್ಕೆ ತೆಗೆಯುವುದಿಲ್ಲವೆಂದು ಹೇಳಿದರು.

ಭಾಗ್ಯ ಚಕ್ರ

ನಗರದ ರಾಜಕಮಲ್ ಚಿತ್ರ ಮಂದಿ
ಕಳೆದ ಶುಕ್ರವಾರದಿಂದ ಆರಂಭವಾಗಿರುವ
ತ್ರ ಭಾರತ್‌ರವರ ಭಾಗ್ಯಚಕ್ರ ಎಂಬ ಕನ್ನ
ಲನಚಿತ್ರಕ್ಕೆ ಅಂದು ಪತ್ರಿಕಾ ಪ್ರತಿನಿಧಿಗಳ
ಇತರರನ್ನೂ ಬರಮಾಡಿಕೊಂಡು ತೋ
ಯಿತು. ಎಸ್. ಪಾರ್ವತಿ, ವಿದ್ಯಾವತಿ,
ಮಕುಮಾರ್, ಬಾಲಕೃಷ್ಣ ಮೊದಲಾದ
ರಾಂತ ನಟನಟಿಯರು ಪಾತ್ರವಹಿಸಿರುವ
ಚಿತ್ರವನ್ನು ಕನ್ನಡಿಗರೆಲ್ಲರೂ ನೋಡಿ ಆ
ಬಹುದಾಗಿದೆ

ಮೈಸೂರು ಪೇಟೆ ಧಾರ

ಬಂಗಾರ ಸಣ್ಣ ಮುತ್ತು				
ಕೊಯಮುತ್ತೂರು ಸಣ್ಣ	[illegible]	[illegible]	೦	[illegible]
ರತ್ನಚೂಡಿ	[illegible]	[illegible]	೦	[illegible]
ಅಕೆಲೊಂಬಿನ ಸಣ್ಣ	[illegible]	[illegible]	೦	[illegible]
ಕಾಗಪುರಿ	[illegible]	[illegible]	೦	
ರಾಗಿ	[illegible]	[illegible]	೦	[illegible]
ಜೋಳ	[illegible]	[illegible]	೦	[illegible]
ನವಣೆ	[illegible]	೦	೦	[illegible]
ಕಂಬು	[illegible]	೦	೦	
ಕಡಲೆಕಾಯಿ	[illegible]	[illegible]	೦	[illegible]
ಎಳ್ಳು	[illegible]	[illegible]	೦	
ಹರಳುಬೀಜ	[illegible]	[illegible]	೦	[illegible]
ಹುಚ್ಚೆಳ್ಳು	[illegible]	೦	೦	[illegible]
ಹುರುಳಿ	[illegible]	[illegible]	೦	[illegible]
ಹೆಸರು	[illegible]	೦	೦	[illegible]
ಅಲಸಂದೆ	[illegible]	೦	೦	[illegible]
ಸಾಸುವೆ	[illegible]	[illegible]	೦	[illegible]
ತೊಗರಿ	[illegible]	[illegible]	೦	[illegible]
ಅವರೆ	[illegible]	೦	೦	
[illegible]	[illegible]	೦	೦	[illegible]
ಹುಣಸೇಹಣ್ಣು	[illegible]	[illegible]	೦	[illegible]
ಮೆಣಸಿನಕಾಯಿ	[illegible]	೦	೦	[illegible]
ಹತ್ತಿ	[illegible]	[illegible]	೦	
ತೆಂಗಿನಕಾಯಿ ೧೦೦೦	[illegible]	೦	೦	[illegible]

ಚಾಮುಂಡೇಶ್ವರಿ ಟಾಕೀ
13.12.56 ರಿಂದ : ಪ್ರತಿದಿನ 3 ಪ್ರದರ್
ಅರಿಸಾ ಫಿಲಂಸ್‌ರವರ ಕರುಳು ಚಿ
ಮಾದರಕು
ಮಾಣಿಕ್ಯಂ
ಭೂಮಿಕೆ : ಜಮುನಾ ಗಣೇಶ್, ಜಾನಕಿ
ಅಂಜಲಿದೇವಿ, ಸಾವಿತ್ರಿ

Edited, Printed and Publish
A. R. Nagarajan at Sadhvi
D. Subbiah Road, Mysore

ಮೈಸೂರು ಕಾಫಿ ಸಪ್ಲೈಸ್
ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು
ನಮ್ಮಲ್ಲಿ ಹೊಸದಾದ ಕಾಫಿ ಬೀಜ ಮತ್ತು ಕಾಫಿ ಪುಡಿ ಈ ಕೆಳಗೆ ಕಂಡ ದರ
ದೊರೆಯುತ್ತವೆ —
ಕಾಫಿ ಬೀಜ ಪೌಂಡು ಒಂದಕ್ಕೆ
ಪೀಬರಿ ರೂ 2-3-0 ಪ್ಲಾಂಟೇಷನ್ 'ಎ' 2-0-6 ಪ್ಲಾಂಟೇಷನ್ 'ಬಿ' 2-0
ಅರಾಬಿಕ ಚೆರ್ರಿ ರೂ. 1-14-0 — ರೋಬಸ್ಟಾ 1-
ಕಾಫಿ ಪುಡಿ ಪೌಂಡ್ ಒಂದಕ್ಕೆ
ಪೀಬರಿ ರೂ. 2 14-0 — ಪ್ಲಾಂಟೇಷನ್ 'ಎ' 2-11-0
ಚೆರ್ರಿ 2-4-0 - ಪ್ಲಾಂಟೇಷನ್ 'ಬಿ' 2-8-0
ವಿಶೇಷವಾಗಿ ಹೋಟೆಲಿನವರಿಗೆ ನಾಲ್ಕು ರಕಂ ಬ್ಲೆಂಡ್ ಮಾಡಿ ಅತ್ಯು
ತ್ತಮವಾದ ಪುಡಿಯನ್ನು ಅತಿ ಸುಲಭದ ದರದಲ್ಲಿ ಒದಗಿಸಲಾಗುತ್ತದೆ

ರಿಜಿಸ್ಟರ್ ನಂ. 793

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[illegible]

ಬ್ಲಾಂಕಾಲ
[illegible]
[illegible]
ಪತ್ರ [illegible] ಕೋ.,
[illegible]
71/1. [illegible]
[illegible]
ಬೆಂಗಳೂರು -2

ಪುಸ್ತಕ : ೧೫] SADHVI : WEDNESDAY 12—12—1956 ಮೈಸೂರು : ಬುಧವಾರ [illegible] [illegible]

ಹಂಗೇರಿ ಪ್ರಧಾನಿ ಕಾಡಾರ್‌ರವರ ಆತ್ಮಹತ್ಯವೇ?

ಹೊಟೇಲುಗಳಲ್ಲಿನ ಮಾರಾಟ ತೆರಿಗೆ ರದ್ದು

ಮೈಸೂರು ೧೧

ಮೈಸೂರು [illegible] ವಾಗಿ ಸೇಲ್ಸ್ [illegible] ರದ್ದಾಗಿರು[illegible] ವರು ಬೇರೆ [illegible] ವ್ಯಾಪಾರಿಗಳಿಂದಲೂ [illegible] ವಾರೀಕರಿಂದ ತೆರಿಗೆ [illegible] ಸರ್ಕಾರದಲ್ಲಿ [illegible] ಹೈಕೋರ್ಟಿನ ತೀರ್ಪಿಗೆ [illegible] ಮಾರಾಟ ತೆರಿಗೆ ಶಾಸನದ ೨ನೇ ಪ್ರಕಾ[illegible] ಅಕ್ರಮವಾಗಿ ವಸೂಲು ಮಾಡಿರುವ ತೆರಿಗೆಯನ್ನು ವಾಪಸು ಕೊಡಿಸುವುದು ಅಗತ್ಯವೆಂ[illegible] ಳಸಿ ಶ್ರೀಗಳಾದ ಎ. ಎಸ್. ರಾಮಯ್ಯ[illegible] ತಗಡೂರು ರಾಮಚಂದ್ರರಾಯರು ರೆವಿ[illegible] ಮಂತ್ರಿಗಳಿಗೆ ಪತ್ರ ಬರೆದಿರುತ್ತಾರೆ.

[illegible]ಂತರ ಕಾಲೇಜುಗಳ [illegible] ಕುಸ್ತಿ ಪಂದ್ಯ

[illegible]ಳೆದ ಭಾನುವಾರ ಮಹಾರಾಜಾ ಕಾಲೇಜಿನ [illegible]ಕ್ರೀಡಾಂಗಣದಲ್ಲಿ ನಡೆದ ಅಂತರ ಕಾಲೇಜು [illegible] ಕುಸ್ತಿ ಪಂದ್ಯಗಳಲ್ಲಿ ಕೆಳಗೆ ಕಂಡ[illegible] ಜಯಗಳಿಸಿರುತ್ತಾರೆ. ಅದರಲ್ಲಿ ಮಹಾರಾ[illegible] [illegible], ಶಾರದಾ ವಿಲಾಸ ಮ[illegible] ಯುವರಾಜಾ ಕಾಲೇಜುಗಳು ಭಾಗವಹಿಸಿ[illegible] [illegible] ವೈಟ್: ಮಾದಪ್ಪ, ಫ್ಲೈವೈಟ್: [illegible], ಬ್ಯಾಂಟಂ ವೈಟ್: [illegible]; [illegible] ವೈಟ್: ಎ. ಗೋಪಿನಾಥ್; [illegible] ವೈಟ್: ಗುರುಸಿದ್ದಪ್ಪ. ಶ್ರೀಗಳಾದ [illegible], [illegible], [illegible], ನರಸಿಂಹಾಚಾರ್, [illegible] [illegible] [illegible]

[illegible]

[illegible] ಅಗ್ರಹಾರದ [illegible] [illegible]ಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ರಾತ್ರಿ [illegible] ಗಂಟೆಗೆ ವಿ॥ ಎಸ್. ಕೆ. [illegible] ಭಾಗವತರಿಂದ ರುಕ್ಮಾಂಗದ ಚರಿತ್ರೆ ಎಂ[illegible] ಕಥೆಯು ವಿ॥ ಹೆಚ್. ವಿ. ಕೃಷ್ಣರಾಯ[illegible], ವಿ॥ ಅನಂತರಾಮಯ್ಯನವರ ಮೃ[illegible] ಮತ್ತು ವಿ॥ ರಾಮಣ್ಣನವರ ಹಾರ್ಮೋನಿ[illegible] ನಡೆಯುವುದು. ಸರ್ವರಿಗೂ ಸ್ವಾ[illegible]

[illegible] ಸಂಪರ್ಕ ಹೊಂದಿದ ಪತ್ನಿ [illegible] ಗಂಡನ ಕೊಲೆ

[illegible] ಗ್ರಾಮದ [illegible] ಎಂಬುವನು ತನ್ನ ಪತ್ನಿ [illegible] [illegible] [illegible] ಕೊಲೆ ಮಾಡಿ ತಾನು ಪೋಲೀಸರ[illegible] ನೆಂದು ವರದಿಯಾಗಿದೆ

ರಾಜಪ್ರಮುಖರ ಹುದ್ದೆ ರದ್ದಿನಿಂದ [illegible] ಲಕ್ಷ ರೂ. ಉಳಿತಾಯ

[illegible]

ಸಂಬಂಧವಿಲ್ಲವೆಂದು ಅವರು ಹೇಳಿ, ಅವರುಗಳಿಗೆ [illegible] [illegible] [illegible] [illegible] ಹೇಳಿದವರು [illegible] ರಿಗೆ [illegible] ನ ೫೦ ಲಕ್ಷ ರೂ. ಗಳನ್ನು ಕೊಡಬೇಕಾಗುತ್ತಿದೆಯೆಂದೂ ಅವರು ತಿಳಿಸಿರುವರು

ರೈಲು ಹರಿದು ಶತಾಯುಸ್ಸಿನವನ ಮರಣ

ಶಿವಮೊಗ್ಗದಲ್ಲಿ ಕಳೆದ ಶನಿವಾರ ಸಂಜೆ ರೈಲು ಮಾರ್ಗದಲ್ಲಿ ಹೋಗುತ್ತಿದ್ದ ಮಹಮದ್ ಎಂಬ ೧೦೦ ವರ್ಷ ವಯಸ್ಸಿನವನನ್ನು ಒಂದು ಷಟಲ್ ರೈಲು ಎತ್ತಿ ಹಾಕಿದ ಪರಿಣಾಮವಾಗಿ ಅವನು ಆಸ್ಪತ್ರೆಯಲ್ಲಿ ಮರಣ ಹೊಂದಿದನು. ಹಳೇ [illegible] ಬಳಿ ಅವನು ಕಂಬಿಯನ್ನು ದಾಟುತ್ತಿದ್ದನೆಂದು ಹೇಳಲಾಗಿದೆ. ಪೋಲೀಸರು ತನಿಖೆ ನಡೆಸುತ್ತಿರುವರು.

ವಿವಿಧ ಅಪರಾಧಗಳಿಗೆ ಶಿಕ್ಷೆ

ಮೈಸೂರು ೧೧

ಸಿದ್ದಲಿಂಗಪುರದ ಜಾತ್ರೆಯಲ್ಲಿ [illegible] [illegible] ಮತ್ತು [illegible] ಗಲಾಟೆ ಮಾಡಿದುದಕ್ಕಾಗಿ ನಗರದ ೨ನೇ ಸ್ಟಾ[illegible] ರೂ. [illegible]

[illegible]

[illegible]

[illegible]

[illegible] ಕಾರೆಯ [illegible] ಮುತ್ತು ಎಂಬುವಳು ಕಳೆದ ಶನಿವಾರ [illegible] [illegible] ವಸ್ಥಾನಕ್ಕೆ ಹೋಗಿದ್ದಾಗ ಎದೆ ನೋವು ಆರಂಭವಾಗಿ ನೀರು ಕೊಡುವಂತೆ ತಮ್ಮ ಪತ್ನಿಯನ್ನು ಕೇಳಿದರೆಂದೂ, ಅವರು ಕೊಟ್ಟ ತೀರ್ಥವನ್ನು ಕುಡಿದು ಪತ್ನಿಯ ತೊಡೆಯಮೇಲೆ ಮಲಗಿ ಇನ್ನೊಂದು ಬಾರಿ ತೀರ್ಥವನ್ನು ಸೇವಿಸಿ ನಿಧನ ಹೊಂದಿದರೆಂದೂ ವರದಿಯಾಗಿದೆ

[illegible] ಕುಂಬಾರಗೇರಿಯ ಸಿದ್ದ[illegible] ಶಾಂತಮ್ಮ ಎಂ[illegible] [illegible] ಪತ್ತಿಕೊಂಡು [illegible] ಆಸ್ಪತ್ರೆಗೆ ಸೇರಿಸಲ್ಪಟ್ಟು ಆ ದಿನ [illegible] ನಿಧನ ಹೊಂದಿದಳೆಂದು ವರದಿಯಾಗಿದೆ

ನೂತ್ನ ಮಹಾ ಮಂಡಲದ ವಿದ್ಯಾರ್ಥಿ ನಿಲಯ

[illegible]

ಮೈಸೂರು ೧೧

[illegible] ಮಹಾ ಮಂಡಲದ ಮೈಸೂರು [illegible] ವಿದ್ಯಾರ್ಥಿ ನಿಲಯದ [illegible] ಶ್ರೀ [illegible]

ನಿಲಯದ ನಿರ್ಮಾಣಕ್ಕಾಗಿ ಈಗ ಮೈಸೂರು ಸಂಸ್ಥಾನದ ಮಾಜಿ ಹಣಕಾಸಿನ ಕಾರ್ಯದರ್ಶಿ ಶ್ರೀ ಬಿ. ಎಸ್. ರಾಘವೇಂದ್ರರಾಯರು ೧೦,೦೦೦ ರೂ., ನೂತ್ನ ಮಹಾ ಮಂಡಲದ ಕೇಂದ್ರ ಸಮಿತಿ ೫,೦೦೦ ರೂ., ಪೇಜಾವರ ಮಠಾಧೀಶರು ೧,೦೦೦ ರೂ., [illegible] [illegible] ಶ್ರೀ ಕೆ. ಸೀತಾರಾಮರಾಯರು ೩,೦೦೦ ರೂ.; ಶ್ರೀ ಎಂ. ಪಿ. ರಾಘವೇಂದ್ರರಾಯರು ೨,೦೦೦ ರೂ., ಮತ್ತು ಶ್ರೀ ಕೆ. ಗೋಪಾಲಾಚಾರ್ಯರು ೧,೦೦೦ ರೂ. ಗಳನ್ನು ಉದಾರವಾಗಿ ಕೊಟ್ಟಿರುತ್ತಾರೆ. ಇನ್ನೂ ಅನೇಕ ಮಹನೀಯರು ಮತ್ತು ಮಹಿಳೆಯರಿಂದ ದ್ರವ್ಯ ಸಹಾಯವು ಬಂದಿದೆ.

(ಸಮಾರಂಭದ ವಿವರಗಳನ್ನು ನಾಳೆ ಕೊಡಲಾಗುವುದು)

[illegible]

[illegible] ಶ್ರೀ[illegible] ಗೃಹದಲ್ಲಿ ನಾಳೆ ಸಂಜೆ ೬॥ ಗಂಟೆಗೆ [illegible] [illegible]

[illegible]

[illegible]

ಜುಲೈನಲ್ಲಿ ಸತ್ಯಮಂಗಲದ ರೈಲ್ವೆ ಕೆಲಸ ಆರಂಭ

ಬೆಂಗಳೂರು ೧೧

[illegible] ಸತ್ಯಮಂಗಲ ರೈಲು ರಸ್ತೆ ನಿರ್ಮಾಣದ [illegible] ಈ ತಿಂಗಳ ಕೊನೆಯ ವೇಳೆಗೆ ಮುಗಿಯುವುದೆಂದೂ, [illegible] ಜುಲೈನಲ್ಲಿ ಕೆಲಸವು ಆರಂಭವಾಗಬಹುದೆಂದೂ ತಿಳಿದುಬಂದಿದೆ

[illegible]

ಮೈಸೂರು ೧೧

[illegible]

[illegible]

[illegible]

[illegible]

ಹಂಗೇರಿ ಪ್ರಧಾನಿ [illegible] ಆತ್ಮಹತ್ಯವೇ?

[illegible]

[illegible]

[illegible] ಎಸ್. [illegible] [illegible] ಮತ್ತು [illegible] [illegible] ೧೨-೩೦ ಮತ್ತು ಸಂಜೆ [illegible] [illegible] ಮತ್ತು ರಾತ್ರಿ [illegible] [illegible]

ಜಿಲ್ಲಾ ವಿದ್ಯಾ ಇಲಾಖಾ ಎನ್. ಜಿ. ಓಗಳ ಸಂಘ

ಮೈಸೂರು ೧೨

ಮೈಸೂರು ಜಿಲ್ಲೆಯ ವಿದ್ಯಾ ಇಲಾಖಾ ನಾನ್ ಗೆಜೆಟೆಡ್ ಆಫೀಸರ್ ಸಭೆಯು ವಿದ್ಯಾಧಿಕಾರಿಗಳಾದ ಶ್ರೀ ಹೆಚ್ ವಿ ಶ್ರೀರಂಗರಾಜುರವರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ಮಾದರಿ ಶಾಲೆಯಲ್ಲಿ ಜರುಗಿತು ಜಿಲ್ಲಾ ಇಲಾಖಾ ಎನ್ ಜಿ ಓಗಳ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಲಾಯಿತು ಶ್ರೀ ಎಸ್ ಸುಂದರರಾಜಯ್ಯಂಗಾರ್ಯರು ಅದರ ಅಧ್ಯಕ್ಷರಾಗಿಯೂ, ಶ್ರೀ ಎಸ್ ನಾಗರಾಜ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ ನೀಲಕಂಠಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀ ಎಸ್ ಜಿ ರಂಗಸ್ವಾಮಿ ಅಯ್ಯಂಗಾರ್ಯರು ಜಂಟಿ ಕಾರ್ಯದರ್ಶಿಯಾಗಿಯೂ ಮತ್ತು ಶ್ರೀ ಎಂ ಸ್ವಾಮಿಯವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು ಕಳೆದ ನವೆಂಬರ್ ೧ರಿಂದ ಎನ್ ಜಿ ಓಗಳ ಸಂಬಳವನ್ನು ಕಡಮಾಡದೆ ಪುನರ್ವಿಮರ್ಶಿಸುವಂತೆ ಸರ್ಕಾರವನ್ನು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು

ಕೃಷ್ಣ ಕುಟೀರದ ವಾರ್ಷಿಕೋತ್ಸವ ಮತ್ತು ಗೀತಾ ಜಯಂತಿ

ಚಾಮುಂಡಿಬೆಟ್ಟದ ಪಾದದಲ್ಲಿರುವ ಶ್ರೀ ಕೃಷ್ಣ ಕುಟೀರದ ಏಳನೇ ವಾರ್ಷಿಕೋತ್ಸವವೂ ಮತ್ತು ಗೀತಾ ಜಯಂತಿಯೂ ೧೪ರ ನೆರವೇರುವುವು ಅದರ ಅಂಗವಾಗಿ ನಾಳೆ ಸಂಜೆ ೫ ಗಂಟೆಗೆ ಶ್ರೀ ಆರ್ ಎಸ್ ಕೇಶವಗಿರಿದಾಸರಿಂದ ಶ್ರೀ ಸಂತ ತುಕಾರಾಮ ಚರಿತ್ರೆ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ, ನಾಳಿದ್ದು ಬೆಳಗ್ಗೆ ೭॥ ಗಂಟೆಗೆ ಭಕ್ತರೆಲ್ಲರೂ ಸೇರಿ ಸಂಪೂರ್ಣ ಭಗವದ್ಗೀತಾ ಪಾರಾಯಣ, ಭಜನೆಗಳನ್ನು ನಡೆಸುವರು ಮಧ್ಯಾಹ್ನ ೧೨ ಗಂಟೆಗೆ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗಗಳು ಇವೆ ಭಕ್ತರು ಸಹಾಯ ನೀಡಬೇಕೆಂದು ಸಾಧು ಗೀತಾನಂದರವರು ಕೋರಿರುತ್ತಾರೆ

ಮಕ್ಕಳ ಕೂಟದಲ್ಲಿ ನಕಲಿ ಪ್ರದರ್ಶನ

ಮೈಸೂರು ಮಕ್ಕಳ ಕೂಟದ ಆಶ್ರಯದಲ್ಲಿ ಕಳೆದ ಭಾನುವಾರ ಶ್ರೀ ವಿಗಡಂ ಗಣೇಶರವರು ಅನೇಕ ರೀತಿಯ ನಕಲಿ ಮತ್ತು ಆಟಗಳ ಪ್ರದರ್ಶನಗಳನ್ನು ತೋರಿಸಿ, ಮಕ್ಕಳನ್ನು ಸಂತೋಷಪಡಿಸಿದರು ಶ್ರೀಮತಿ ಲೀಲಾವತಿ ಅಂಚನಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಜೀವನದ ಹರ್ಷವನ್ನು ಸವಿಯಿರಿ

ಹುಡುಗರಿಗೆ ತಾರುಣ್ಯ !
ವೃದ್ಧರಿಗೆ ಯೌವನ !!
ಯುವಕರಿಗೆ ಅಸಮಾನ ಶಕ್ತಿ !!!

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ ಮತ್ತು ಚೆಲುವಿಕೆಯನ್ನು ಹೊಂದಿ ದೀರ್ಘ ಜೀವನದ ನಿಜ ಆನಂದಗಳನ್ನು ಅನುಭವಿಸಬೇಕೆಂಬುದು ಮಾನವರ ಮಹತ್ತರವಾದ ಆಸೆ [illegible] ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ಗ್ರಂಥಿಗಳು, ನಿಶ್ಶಕ್ತಿ, ಜ್ಞಾಪಕ ಶಕ್ತಿಯ ಅಭಾವ, ದುಸ್ವಪ್ನಗಳು, ಸ್ವಪ್ನಸ್ಖಲನ, ಮೂಲವ್ಯಾಧಿ, ನರಗಳ ದೌರ್ಬಲ್ಯ, ಹಿಸ್ಟೀರಿಯಾ, ಗೊನೋರಿಯಾ, ಕಾರ್ಶ್ಯ ಮತ್ತು ಅಂತಹ ರೋಗಗಳು ಮತ್ತು ಎಲ್ಲಾ ವಿಧವಾದ [illegible] ರೋಗಗಳಿಗೂ ಕಾರಣವಾಗಿರುವುಗಳನ್ನು ಕೂಡಲೇ ಗುಣಪಡಿಸಲು ವಿಶ್ವವಿಖ್ಯಾತರಾಗಿರುವ [illegible] (ಲೈಂಗಿಕ ಪ್ರವೀಣ) ಪ್ರತಿದಿನ ಬೆಳಗ್ಗೆ 8 ರಿಂದ 12 ಮತ್ತು ಮಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾಡಿರಿ ಇವರು ಸ್ತ್ರೀ ಪುರುಷರಿಬ್ಬರ ಗುಪ್ತ ಹಾಗೂ ಹಳೆಯ ಖಾಯಿಲೆಗಳಿಗೂ ವೈಜ್ಞಾನಿಕ ಚಿಕಿತ್ಸೆಗಳನ್ನು ಮಾಡುವರು [illegible]

ಅವರ ಸಲಹೆ ಪಡೆಯುವುದೆಂದರೆ ಹೊಸ ಜೀವನವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ಗುಪ್ತವಾಗಿ ಇಡಲಾಗುವುದು ಕೆಳಗಿನ ವಿಳಾಸದಲ್ಲಿ ಭೇಟಿ ಮಾಡಿರಿ —

ರಾಜಾ ಮೆಡಿಕಲ್ ಹಾಲ್,
ಲೇನ್ ನಂ 1-745 ಅಶೋಕಾ ರಸ್ತೆ,
(ಮೈಸೂರು ಬ್ಯಾಂಕ್ ಬಳಿ [illegible])
ಮೈಸೂರು

ಕಾಂಗ್ರೆಸ್ ರಾಜಕೀಯ ಸಮ್ಮೇಳನ

ಮೈಸೂರು ೧೧

ಬರುವ ಶನಿವಾರ ಬೆಳಗ್ಗೆ ೧೧ ಗಂಟೆಗೆ ನಗರದ ಟೌನ್‌ಹಾಲಿನಲ್ಲಿ ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನವು ಸೇರುವುದು ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜನಾಡಾರರು ಆರಂಭೋತ್ಸವ ನಡೆಸುವರು ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ ವೆಂಕಟಪ್ಪನವರು ಭಾಷಣ ಮಾಡುವರು ಮಾರನೇದಿನ ಶ್ರೀ ಎಸ್ ನಿಜಲಿಂಗಪ್ಪನವರು ಸಮಾರೋಪ ಭಾಷಣ ಮಾಡುವರು ೧,೦೦೦ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸುವರೆಂದು ನಿರೀಕ್ಷಿಸಲಾಗಿದೆ

ಕೇಡಿಗಳ ಕಳ್ಳತನಕ್ಕೆ ಮಹಿಳೆಯರ ಸಹಾಯ

ಬೆಂಗಳೂರಿನಲ್ಲಿ ಕೇಡಿಗಳು ಕಳ್ಳತನ ನಡೆಸಲು ಹೊಸ ಮಾರ್ಗವನ್ನು ಅನುಸರಿಸಿರುವಂತೆ ಕಾಣಬರುತ್ತದೆ ಕಳೆದ ೩ನೇ ತಾರೀಖು ಸರ್ಕಾರಿ ರಸ್ತೆ ಸಂಚಾರ ಇಲಾಖೆಯ ಗುಮಾಸ್ತೆ ಶ್ರೀ ರೇವಣ್ಣ ಸಿದ್ದಯ್ಯ ಎಂಬುವವರು ರಾತ್ರಿ ಕಲಾಸಿಪಾಳ್ಯದ ಹೊಸ ಬಡಾವಣೆಯಲ್ಲಿ ಹೋಗುತ್ತಿದ್ದಾಗ ೧೬ ವರ್ಷದ ಒಬ್ಬಾಕೆಯು ಅವರನ್ನು ತಡೆದು ಅಸಹ್ಯಕರವಾದ ಸಂಜ್ಞೆಗಳನ್ನು ಮಾಡುತ್ತಾ ಮಾತನಾಡಿಸಿದಳೆಂದೂ, ಆಗ ಮೂವರು ಕೇಡಿಗಳು ಅವರನ್ನು ಸುತ್ತುವರಿದು ಕೈ ಗಡಿಯಾರ, ಫೌಂಟನ್ ಪೆನ್ ಮತ್ತು ಸ್ವಲ್ಪ ನಗದನ್ನು ಕಿತ್ತುಕೊಂಡು ಪರಾರಿಯಾದರೆಂದೂ ವರದಿಯಾಗಿದೆ ಪೋಲೀಸರು ಈ ಸಂಬಂಧದಲ್ಲಿ ಮೇರಿ ಉರುಫ್ ಮೇರಿಯಮ್ಮ ಎಂಬಾಕೆಯನ್ನೂ ಸಿದ್ದರಾಮ ಮತ್ತು ಕುಮಾರ್ ಎಂಬುವರನ್ನೂ ಬಂಧಿಸಿರುತ್ತಾರೆ ಕುಮಾರ್ ಮೇರಿಯಮ್ಮನ ರಖಾವುದಾರನೆಂದು ಹೇಳಲಾಗಿದೆ ನಜೀರ್ ಎಂಬುವವನು ಪರಾರಿಯಾಗಿದ್ದಾನೆ

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 590
— ಭೇಟಿಯ ಕಾಲ —
ಬೆಳಗ್ಗೆ 7 30 ರಿಂದ 12-30 ಮತ್ತು,
ಮಧ್ಯಾಹ್ನ 4ರಿಂದ 7-30
ಇವರು [illegible]
ವಿಷಯದಲ್ಲಿ ಸಂಶೋಧಿಸಿದ
ನವರತ್ನ — ಕಲ್ಪ
[illegible]

ಇದು ಹೆಚ್ಚು, ಕೆಂಪು, ಮುತ್ತು, ಪಚ್ಚೆ ಹವಳ, ಗೋಮೇಧಿಕ, [illegible] ಮೊದಲಾದ 9 ಅಮೂಲ್ಯ ಹರಳುಗಳ ಸಂಯೋಗ ಇದರಿಂದ ನರಗಳ ದೌರ್ಬಲ್ಯ, ಅದಕ್ಕೆ ಸಂಬಂಧದ ವ್ಯಾಧಿಗಳು, [illegible] ಮೂಲವ್ಯಾಧಿ, [illegible] ಬಹುಮೂತ್ರ, [illegible] ಮತ್ತು ಇನ್ನು ಇತರ ಎಲ್ಲಾ ಸಾಮಾನ್ಯ ಹಾಗೂ ತೀವ್ರವಾದ ಖಾಯಿಲೆಗಳೂ ಸಂಪೂರ್ಣವಾಗಿ ಗುಣ ಹೊಂದುವುವು ಅತ್ಯುತ್ತಮ ಆರೋಗ್ಯದಾಯಕ ಔಷಧಿ ಇದೊಂದೇ

ಏಜಂಟ್‌ಗಳು ರಾಜಮಹೇಂದ್ರಿ, ಗುಂಟೂರು ಬೆಜವಾಡ, ಮದ್ರಾಸು ಬೆಂಗಳೂರು, ಕೊಯಮತ್ತೂರು ಮಧುರೆ, ತಿರುಚನಾಪಳ್ಳಿ ತಂಜಾವೂರು ಸೇಲಂ ಕಲ್ಲಿಕೋಟೆ ಎರ್ನಾಕುಲಂ, ಕೊಟ್ಟಾಯಂ ತ್ರಿವೇಂಡ್ರಂ ತಿರುನಲ್ವೇಲಿ [illegible] ಮತ್ತು ಹೈದರಾಬಾದುಗಳ [illegible] ಬರೆಯಿರಿ –

NAVRATNA KALPA PHARMACY,
JULLUNDUR CITY (India)

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಮತ್ತು

ಕೊಯಮತ್ತೂರು ಸಣ್ಣ	೩೬ ೧೦ ೦	೪೦ ೧೪ ೦
ರತ್ನಚೂಡಿ	೩೬ ೯ ೦	೩೮ ೨ ೦
ಆನೆಕೊಂಬಿನ ಸಣ್ಣ	೩೬ ೮ ೦	೩೭ ೨ ೦
ಕೆಂಬುಡ	೩೭ ೧೪ ೦	೩೮ ೮ ೦
ಕಡ್ಲಿ	೩೯ ೦ ೦	೪೧ ೦ ೦
ರಾಗಿ	೨೭ ೨ ೦	೪೩ ೧೦ ೦
ಜೋಳ	೪೦ ೦ ೦	೪೬ ೬ ೦
ನವಣೆ	೧೮ ೦ ೦	೧೮ ೮ ೦
ಕಂಬು	೩೯ ೦ ೦	೪೧ ೧೨ ೦
ಕಡಲೆಕಾಯಿ	೧೭ ೧೦ ೦	೧೭ ೮ ೦
ಹರಳುಬೀಜ	೮೬ ೦ ೦	೮೯ ೦ ೦
ಹುಚ್ಚೆಳ್ಳು	೮೪ ೦ ೦	೯೮ ೧೨ ೦
ಹುರುಳಿ	೩೩ ೧೦ ೦	೩೬ ೧೨ ೦
ಹೆಸರು	೮೫ ೧೨ ೦	೫೨ ೧೨ ೦
ಹಲಸಂದೆ	೯೦ ೮ ೦	೯೫ ೧೨ ೦
ತೊಗರಿ	೪೦ ೨ ೦	೪೪ ೧೨ ೦
ಅವರೆ	೮೬ ೦ ೦	
ಧನಿಯ	೪೦ ೮ ೦	
ಸಣಬಿನಬೀಜ	೩೫ ೨ ೦	೪೬ ೦ ೦
ಹುಣಸೇಹಣ್ಣು	೮ ೧೪ ೦	
ಮೆಣಸಿನಕಾಯಿ	೮ ೦ ೦	೨೯ ೦ ೦
ಹತ್ತಿ	೧೦ ೬ ೦	
ತೆಂಗಿನಕಾಯಿ ೧೦೦೦	೧೬೦ ೦ ೦	

ಬಸ್ಸಿನಲ್ಲಿ ಹದಿನೈದು ಜನರನ್ನು ಹೆಚ್ಚಾಗಿ ಕೂರಿಸಿದುದಕ್ಕಾಗಿ ಜಯಲಕ್ಷ್ಮಿ ವಿಲಾಸ ಸರ್ವೀಸಿನ ಸುಬ್ಬಾಶೆಟ್ಟಿಗೆ ೩೦ ರೂ. ದಂಡವನ್ನು ಹಾಕಲಾಗಿದೆ

S. S. L. C. REVISION CLASSES

Under the auspices of the Mysore State Aided High School Teachers Assn (*Regd*), REVISION CLASSES for the benefit of S S L C students are arranged to be held in the quadrangle of the Hardwicke High School, Mysore from the 12th of December 1956 to the 17th of January 1957.

Fee Rs 3 only for the period
Classes begin at 6 P.M sharp daily

Edited, Printed and Published by
A R Nagarajan at Sadhvi Press
D Subbiah Road, Mysore

ಆಯುರ್ವೇದ ವಿಧಾನ ಬಲವರ್ಧಕ
ಬಿಜೋಲ
ಅದ್ಭುತವಾದ ಧಾತುವರ್ಧಕ ಔಷಧ
ವಿ ಸದ್ವೈದ್ಯಶಾಲಾ ಪ್ರೈವೇಟ್ ಲಿ ನಂಜನಗೂಡು
ಯಾವಾಗಲೂ ನಂಜನಗೂಡು ಟೂತ್‌ಪೌಡರನ್ನೇ ಉಪಯೋಗಿಸಿರಿ

ಚಾಮುಂಡೇಶ್ವರಿ ಟಾಕೀಸ್, ಮೈಸೂರು

13—12—56 ರಿಂದ ಪ್ರತಿ ದಿನ 3 ಆಟಗಳು

ವೀನಸ್ ಪಿಕ್ಚರ್ಸ್‌ರವರ ತಮಿಳು ಚಿತ್ರ ★ **ಅಮರದೀಪಂ**

ನಟವರ್ಗ ಶಿವಾಜಿ ಗಣೇಶ್, ವಿ ನಾಗಯ್ಯ, ಎಂ ಎನ್ ನಂಬಿಯಾರ್, ತಂಗವೇಲು, ಪದ್ಮಿನಿ, ಸಾವಿತ್ರಿ, ಇ ವಿ ಸರೋಜ ಮುಂತಾದವರು

ವಿ ಸೂಚನೆ — ಕೆಲವು ಅನಿವಾರ್ಯ ಕಾರಣಗಳಿಂದ, ನಾಳೆ ಆರಂಭವಾಗಬೇಕಾಗಿದ್ದ "ಮಾದರಕುಲ ಮಾಣಿಕ್ಯಂ" ಚಿತ್ರವು 20 12-56 ರಿಂದ ಉಪಕ್ರಮವಾಗುವುದು

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

13—12—56ನೇ ಗುರುವಾರದಿಂದ : ಅಮೋಘ ಪ್ರಾರಂಭ

★ **ಬಾಲಸನ್ಯಾಸಮ್ಮ ಕಥಾ** ★
(ತೆಲುಗು)

ಪಾತ್ರ - ಜಿ ವರಲಕ್ಷ್ಮಿ, ಕೃಷ್ಣಕುಮಾರಿ, ಬಾಲಸರಸ್ವತಿ, ಸೂರ್ಯಕಾಂತಂ, ಜಗ್ಗಯ್ಯ ರೇಲಂಗಿ, ಗುಮ್ಮಡಿ, ಮುಂತಾದವರು

CITY MUNICIPAL OFFICES,

Mysore, Dated 30-11-1956

NOTIFICATION

Re- Quotations for the supply of Cycle badges as detailed below for the year 1957-58

Notice is hereby given that sealed tenders with samples will be received by the undersigned at the Office for the year 57 58, on or before 28.12 1956,

1 Each tender must be accompanied by a chella for having deposited the tender deposit as noted below against the item, in cash, to the Municipal Treasury as earnest money in default of which tenders will be rejected

2 Particulars may be had at the Office on all working days or on a reference to the Office

— DETAILS —

Particulars		*Deposits*
1) Full year cycle badges	15,000	Rs 100
2) FREE ,,	1,000	
3) Councillor's ,,	40	
4) Tonga driver's badges (With leather strap)	450	
5) Dog badges	1,000	
6) Devaraja Market cooly badges	100	

(Sd) A. VISWANATH,
Municipal Commissioner C. M C., Myso

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಂಪುಟ · ೧೫] SADHVI : THURSDAY 13—12—1956 ಮೈಸೂರು : ಗುರುವಾರ ೧೩—೧೨—೧೯೫೬ [ಸಂಚಿಕೆ : ೬೩೯

ಪೂರ್ವ ಜಾವಾದಲ್ಲಿ ಬಿರುಗಾಳಿಯಿಂದ ೬೯ ಮರಣ

ಪೂರ್ವ ಜಾವಾದಲ್ಲಿ ಬಿರುಗಾಳಿ ಅನಾಹುತದಿಂದ ೬೯ ಮರಣಗಳು

ಪೂರ್ವ ಜಾವದಲ್ಲಿ ಕಳೆದ ವಾರ ಬೀಸಿದ ಭಾರಿ ಬಿರುಗಾಳಿಯ ಪರಿಣಾಮವಾಗಿ ೬೯ ಮಂದಿ ಸತ್ತು ೨೦೦ ಜನರು ಪತ್ತೆಯಿಲ್ಲವೆಂದು ವರದಿಯಾಗಿದೆ. ೧೮೮ ಮಂದಿಗೆ ತೀವ್ರವಾಗಿ ಗಾಯವಾಗಿದೆ. ೭೦ ಲಕ್ಷ ರೂಪಾಯಿಗಳಷ್ಟು ನಷ್ಟ ಸಂಭವಿಸಿದೆ. ೧೩ ಸಾವಿರ ಮನೆಗಳು ನಾಶವಾಗಿ ೭,೨೦೦ ಮಂದಿ ಮನೆಮಠಗಳನ್ನು ಕಳೆದುಕೊಂಡಿದ್ದಾರೆ. ಅನೇಕ ಎಕರೆ ಭತ್ತದ ಜಮೀನಿಗೆ ನೀರು ನುಗ್ಗಿದೆ

ಬೋರ್ನಿಯೋದಲ್ಲಿ ತೀವ್ರ ಬಡತನದಿಂದ ಮಕ್ಕಳ ಮಾರಾಟ

ಫ್ರೆಂಚ್ ಬೋರ್ನಿಯೋ ಪ್ರಾಂತಕ್ಕೆ ಬಂದು ಸೇರುತ್ತಿರುವ ಜಾವಾ ಜನರ ಪುನರ್ವಸತಿಗಾಗಿ ಮಂಜೂರಾಗಿರುವ ಹಣವನ್ನು ಬೋರ್ನಿಯೋ ಅಧಿಕಾರಿವರ್ಗದವರು ದುರುಪಯೋಗಪಡಿಸಿರುವುದರಿಂದ ಜಾವನ್ನರಿಗೆ ತೀವ್ರ ಬಡತನವುಂಟಾಗಿ ಆಹಾರ ಪದಾರ್ಥಗಳನ್ನು ಕೊಳ್ಳುವುದಕ್ಕಾಗಿ ಅನೇಕರು ತಮ್ಮ ಮಕ್ಕಳನ್ನು ಮಾರಾಟ ಮಾಡುತ್ತಿರುವುದು ವರದಿಯಾಗಿದೆ. ಒಂದೊಂದು ಮಗುವಿಗೆ ೨೦ರಿಂದ ೭ ಡಾಲರುಗಳ ಬೆಲೆ ದೊರೆಯುತ್ತಿದೆ

ಗಾಂಧಿ ವಿಚಾರ ಪ್ರಾಸಂಗಿಕ ಗೋಷ್ಠಿ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ಎಂ. ಯಾಮುನಾಚಾರ್ಯರು ... ಮತ್ತು ಪಂಚಶೀಲ ಎಂಬ ವಿಷಯವಾಗಿ ಪ್ರಶ್ನೋತ್ತರ ಗೋಷ್ಠಿಯನ್ನು ನಡೆಸುವರು

ಗೀತಾ ಜಯಂತಿ ಕಾರ್ಯಕ್ರಮಗಳು

ಅಶೋಕಾ ರಸ್ತೆಯಲ್ಲಿರುವ ಗೀತಾ ಮಂದಿರದಲ್ಲಿ ಗೀತಾ ಜಯಂತಿ ಕಾರ್ಯಕ್ರಮದ ಪ್ರಯುಕ್ತ ನಾಳೆ ಸಂಜೆ ೬॥ ಗಂಟೆಗೆ ರಾಮಕೃಷ್ಣಾಶ್ರಮದ ಶ್ರೀ ಸ್ವಾಮಿ ಸೋಮನಾಥಾನಂದರವರು 'ಗೀತೆಯಲ್ಲಿ ಭಕ್ತಿಯ ಪ್ರಭಾವ' ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಸಂತೇಪೇಟೆಯ ಶ್ರೀ ಕನ್ನಿಕಾಪರಮೇಶ್ವರಿ ದೇವಸ್ಥಾನದಲ್ಲಿ ಗೀತಾ ಜಯಂತಿ ಪ್ರಯುಕ್ತ ಈ ದಿನದಿಂದ ೨೩ನೇ ತಾರೀಖು ಭಾನುವಾರದವರೆಗೆ ನಿತ್ಯ ಬೆಳಗ್ಗೆ ೭ ಗಂಟೆಗೆ ಭಗವದ್ಗೀತಾ ಪಾರಾಯಣವನ್ನು ಗೀತಾ ಪ್ರೇಮಿಗಳು ಮತ್ತು ... ಸಮಾಜದ ಬಾಲಕ ಬಾಲಕಿಯರು ಏರ್ಪಡಿಸಿದೆ

ಬೈಸಿಕಲ್ ಕಳೆದುಹೋಗಿದೆ

ನೆನ್ನೆ ಸಂಜೆ 4 30 ಗಂಟೆಯ ಸಮಯದಲ್ಲಿ ... ರಸ್ತೆಯಲ್ಲಿ ದೇವರಾಜ ಮಾರ್ಕೆಟ್ಟಿನ ... ರಡ್ಜ್ ವಿಟ್‌ವರ್ತ್ ಬೈಸಿಕಲ್ ಕಳೆದುಹೋಗಿದೆ ಶ್ರೀ ಸ್ಪೀಡ್ ಗೇರ್ ಮತ್ತು ... ಇವೆ. ಇದನ್ನು ಹಿಡಿದವರು ಕೆಳಗಿನ ವಿಳಾಸಕ್ಕೆ ತಲುಪಿಸಿದರೆ ಸೂಕ್ತ ಬಹುಮಾನವನ್ನು ಕೊಡಲಾಗುವುದು ಶ್ರೀ ಗುರುರಾಜ, ಶಾರದಾವಿಲಾಸ ಕಾಲೇಜು, ಮೈಸೂರು

ಕರ್ನಾಟಕ ಸಾಹಿತ್ಯ ಸಮ್ಮೇಳನದ ಮಾಜಿ ಅಧ್ಯಕ್ಷರುಗಳಿಗೆ ಸನ್ಮಾನ

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗೌರವ ಸಮಾರಂಭ

ಬೆಂಗಳೂರು ೧೩

ಕನ್ನಡ ಸಾಹಿತ್ಯ ಸಮ್ಮೇಳನದ ೧೮ ಮಂದಿ ಮಾಜಿ ಅಧ್ಯಕ್ಷರುಗಳನ್ನು ಅಭಿನಂದಿಸಲು ನೆನ್ನೆ ಇಲ್ಲಿನ ಕನ್ನಡ ಸಾಹಿತ್ಯ ಪರಿಷತ್ತಿನವರು ಸಮಾರಂಭವೊಂದನ್ನು ಏರ್ಪಡಿಸಿದ್ದರು ಮೈಸೂರು ಗೌರ್ನರ್ ಶ್ರೀ ಜಯಚಾಮರಾಜ ಒಡೆಯರವರು ಉತ್ಸವದ ಆರಂಭೋತ್ಸವವನ್ನು ನೆರವೇರಿಸಿದರು ಬಿಹಾರಿನ ಗೌರ್ನರ್ ಶ್ರೀ ಆರ್ ಆರ್ ದಿವಾಕರ್‌ರವರು ಅಧ್ಯಕ್ಷತೆ ವಹಿಸಿದ್ದರು

ಸಮ್ಮೇಳನದ ಮಾಜಿ ಅಧ್ಯಕ್ಷರುಗಳ ಪೈಕಿ ಶ್ರೀಗಳಾದ ಮಾಸ್ತಿ ವೆಂಕಟೇಶಯ್ಯಂಗಾರ್, ಪಿ ಜಿ ಹಳಕಟ್ಟಿ, ವೈ ನಾಗೇಶಶಾಸ್ತ್ರಿ, ಆರ್ ಆರ್. ದಿವಾಕರ್, ಹೆಚ್ ಚಂದ್ರಶೇಖರಶಾಸ್ತ್ರಿ, ಎ ಆರ್. ಕೃಷ್ಣಶಾಸ್ತ್ರಿ, ದ ರಾ ಬೇಂದ್ರೆ, ಸಿ ಕೆ ವೆಂಕಟರಾಮಯ್ಯ, ಟಿ ಟಿ ಶರ್ಮ, ವಿ ಸೀತಾರಾಮಯ್ಯ, ಆದ್ಯ ರಂಗಾಚಾರ್ಯ ಮತ್ತು ಪರಿಷತ್ತಿನ ಮಾಜಿ ಅಧ್ಯಕ್ಷ ಎ ಎನ್ ಮೂರ್ತಿರಾಯರು ಸಮಾರಂಭದಲ್ಲಿ ಭಾಗವಹಿಸಿದ್ದರು

ಪರಿಷತ್ತಿನ ಅಧ್ಯಕ್ಷ ಶ್ರೀ ಬಿ ಶಿವಮೂರ್ತಿ ಶಾಸ್ತ್ರಿಯವರು ಸ್ವಾಗತ ಬಯಸಿ, ಮೈಸೂರಿನ ಗೌರ್ನರಿಗೆ ಚಿನ್ನವಸ್ತ್ರಕೆಯನ್ನು ಅರ್ಪಿಸಿದರು ಪರಿಷತ್ತಿನ ಕಾರ್ಯದರ್ಶಿ ಶ್ರೀ ಕೆ ಆರ್ ರಾಮಯ್ಯನವರು ದಿವಾಕರ್‌ರವರಿಗೂ, ಶ್ರೀ ಹೆಚ್ ಎಸ್ ಸೀತಾರಾಂರವರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರಿಗೂ ಚಿನ್ನವಸ್ತ್ರಗಳನ್ನು ಅರ್ಪಿಸಿದರು ಶ್ರೀ ಎಂ ವಾಸುದೇವರಾವ್ ಸೂರತ್ಕಲ್‌ರವರು ೧೮ ಮಂದಿ ಅತಿಥಿಗಳಿಗೂ ... ವಸ್ತ್ರವನ್ನು ಅರ್ಪಿಸಿದರು ಮುಖ್ಯಮಂತ್ರಿಯವರು ಶ್ರೀ ಎಸ್ ಎಸ್ ಬಸವನಾಳರ ಭಾವಚಿತ್ರವನ್ನು ಅನಾವರಣ ಮಾಡಿದರು

ಶ್ರೀ ಜಯಚಾಮರಾಜ ಒಡೆಯರವರು ತಮ್ಮ ಭಾಷಣದಲ್ಲಿ ಕನ್ನಡ ಸಾಹಿತ್ಯವು ವಿವಿಧ ಮುಖವಾಗಿ ಬೆಳೆಯಬೇಕೆಂದು ಸೂಚಿಸಿದರು ಸಾಹಿತ್ಯ ಪರಿಷತ್ತು ತಮ್ಮ 'ಪಿತ್ರಾರ್ಜಿತ ಆಸ್ತಿ' ಯೆಂದು ಭಾವಿಸಲು ತಮಗೆ ಸಂತೋಷವಾಗಿದೆಯೆಂದೂ ಅವರು ಹೇಳಿದರು ಸಾಹಿತ್ಯ ಸಮ್ಮೇಳನಗಳ ಸತತ ಪ್ರಯತ್ನದಿಂದ ಕರ್ನಾಟಕ ರಾಜ್ಯವು ಸ್ಥಾಪನೆಯಾಯಿತೆಂದು ಅವರು ನುಡಿದರು

ಶ್ರೀ ಆದ್ಯ ರಂಗಾಚಾರ್ಯರು ಅತಿಥಿಗಳ ಪರವಾಗಿ ಉತ್ತರವಿತ್ತು, ಈಗ ಸಾಧಿತವಾಗಿರುವ ರಾಜಕೀಯ ಐಕ್ಯವು ಭಾವನಾ ಮತ್ತು ಮನಸಾ ಆಗಬೇಕೆಂದು ಸಲಹೆ ಮಾಡಿದರು ಕವಿ ಬೇಂದ್ರೆಯವರು ತಮ್ಮ [illegible] ಎಂಬ ಕಾವ್ಯವನ್ನು ಓದಿದರು

ದಿವಾಕರರು ತಮ್ಮ ಭಾಷಣದಲ್ಲಿ ಅನುವಂಶಿಕ ರಾಜರ ಪೈಕಿ ಈಗ ಪ್ರಜಾಪ್ರಭುತ್ವ ಪದ್ಧತಿಯನ್ನು ಮೈಸೂರಿನ ಗೌರ್ನರು ಮಾತ್ರವೇ ಅರಿತವರೆಂದು ತಿಳಿಸಿದರು

ಬೆಂಗಳೂರಿಗೆ ನೇಪಾಳದ ಪ್ರಧಾನಿಯವರ ಆಗಮನ

ನಾಳೆ ಸಂಜೆ ಮೈಸೂರಿಗೆ ಭೇಟಿ

ಪ್ರ ಸು ಸಂ] ಬೆಂಗಳೂರು ೧೩

ನೇಪಾಳದ ಪ್ರಧಾನಿ ಟಂಕಾ ಪ್ರಸಾದ ಆಚಾರ್ಯರವರು ಈ ಮಧ್ಯಾಹ್ನ ಇಲ್ಲಿಗೆ ವಿಮಾನದಲ್ಲಿ ಆಗಮಿಸಿದರು ಅವರನ್ನು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಸ್ವಾಗತಿಸಿದರು ಮಂತ್ರಿಗಳಾದ ಶ್ರೀಗಳು ಕಡಿದಾಳ್ ಮಂಜಪ್ಪ ಮತ್ತು ಚಂದಕವಿ ... ಹಾಜರಿದ್ದರು ಹೂವಿನ ಹಾರವನ್ನು ಅರ್ಪಿಸಿದನಂತರ ಅವರು ವಿಮಾನ ಬಲದ ದಳದವರಿಂದ ಗೌರವ ರಕ್ಷೆಯ ಸೆಲ್ಯೂಟನ್ನು ಸ್ವೀಕರಿಸಿದರು

ತಾಂತ್ರಿಕ ವಿಜ್ಞಾನ ಶಾಲೆ ಮತ್ತು ಕುಶಲ ಕಲೆಗಳ ಡಿಪ್ಲೊಮಾಗೆ ಭೇಟಿಯಿತ್ತರು ನಾಳೆ ವಿಮಾನ ಮತ್ತು ಟೆಲಿಫೋನ್ ಕಾರ್ಖಾನೆಗಳನ್ನು ಸಂದರ್ಶಿಸುವರು ನಾಳೆ ಸಂಜೆ ಮೈಸೂರಿಗೆ ತೆರಳಿ ರಾತ್ರಿ ಹಿಂದಿರುಗಿ ನಾಳಿದ್ದು ಒರಿಸ್ಸಾಗೆ ಪ್ರಯಾಣ ಮಾಡುವರು

○ ಟಿಬೆಟ್ಟಿನ ದಲೈಲಾಮ ಮತ್ತು ಪಂಚೇನ್ ಲಾಮರವರು ನಾಳೆ ಬೆಳಿಗ್ಗೆ ರೈಲಿನಲ್ಲಿ ಇಲ್ಲಿಗೆ ಆಗಮಿಸುವರು

○ ಗೌರ್ನರ್ ದಿವಾಕರ್‌ರವರು ಕಲ್ಕತ್ತಕ್ಕೂ ಬಿ ರಾಮಕೃಷ್ಣರಾಯರು ತಿರುವನಂತಪುರಕ್ಕೂ ಈ ದಿನ ತೆರಳಿದರು

ಹಂಗೆರಿಯಲ್ಲಿ ೩,೦೦೦ ಜನರ ಬಂಧನ

ಕಳೆದ ಮೂರು ದಿನಗಳಲ್ಲಿ ಹಂಗೆರಿಯಲ್ಲಿ ಕಾರ್ಮಿಕರ ಪ್ರತಿನಿಧಿಗಳು ಮತ್ತು ಇತರ ಪ್ರಮುಖರಾದವರ ದಸ್ತಗಿರಿಗಳಾಗಿ ಆ ಸಂಖ್ಯೆಯು ೩,೦೦೦ ಕ್ಕೂ ಹೆಚ್ಚಿರುವುದೆಂದು ವರದಿಗಳಾಗಿವೆ ದಕ್ಷಿಣ ಹಂಗೆರಿಯ ಪೆಕ್ಸ್ ಎಂಬಲ್ಲಿರುವ ಬೆಟ್ಟಗಳು ಮತ್ತು ಅರಣ್ಯ ಪ್ರದೇಶದಲ್ಲಿ ಸಶಸ್ತ್ರ ಗೆರಿಲ್ಲಾ ಹೋರಾಟವು ನಡೆಯುತ್ತಿರುವುದಾಗಿ ವರದಿಯಾಗಿದೆ

ಕಾಂಗ್ರೆಸ್ ಸ್ವಾಗತ ಸಮಿತಿ ಕಛೇರಿಯ ಟೆಲಿಫೋನ್

ನಗರದಲ್ಲಿ ಬರುವ ಶನಿವಾರ ಮತ್ತು ಭಾನುವಾರ ಸೇರುವ ಕಾಂಗ್ರೆಸ್ ರಾಜಕೀಯ ಸಮ್ಮೇಳನದ ಸ್ವಾಗತ ಸಮಿತಿ ಕಛೇರಿಯಲ್ಲಿ ಟೆಲಿಫೋನ್ ಸೌಕರ್ಯವನ್ನು ಏರ್ಪಡಿಸಲಾಗಿದೆ ಅದರ ನಂಬರು ೨೫೫. ಕಛೇರಿಯು ದೇವರಾಜ ಮಾರ್ಕೆಟ್ ಮಹಡಿ ಮೇಲೆ ಇದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭.೫ ಆಕ್ ಇಂದಿರಮ್ಮ ... ನಾಮ ೭.೩೦ ಹಿಂದಿ ಶಿಕ್ಷಣ ೮-೧೫ ಯುವಯ ಸಂಗೀತ ಮಧ್ಯಾಹ್ನ ೧೨ ಮತ್ತು ಸಂಜೆ ೬.೩೦ ಎಸ್ ಲಕ್ಷ್ಮೀಶಾಸ್ತ್ರಿ-ಸಂಗೀತ, ೧೨-೩೦ ವಾದ್ಯ ವೃಂದ ೧೨ ೪೫ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ೫ ೧೫ ಪ್ರೌಢಶಾಲೆಗಳಿಗಾಗಿ, ... ನೃತ್ಯ ಸಂಗೀತ ೭ ೩೦ ವಿಜ್ಞಾನದ ಮುನ್ನೋಟ ಭಾಷಣ. ೮ ಮಾರ್ಕಂಡೇ ... ಕೀರ್ತನ ... ೯-೧೫ ಕಥೆ ಮಂಜರಿ, ಸಂಸ್ಕೃತ ಕಾರ್ಯಕ್ರಮ ೧೦ ಚಿತ್ರ ಸಂಗೀತ. ೧೦-೧೫ ಉರ್ದು ಗೀತೆಗಳು

ಕೊಲೆ ಪ್ರಯತ್ನಕ್ಕಾಗಿ ೭ ವರ್ಷ ಕಠಿಣ ಸಜಾ

ಮೈಸೂರು ೧೩

ಚಾಮರಾಜನಗರ ತಾಲ್ಲೂಕು ಶಿವಪುರದ ನಂಜಯ್ಯ ಅಲಿಯಾಸ್ ಚಿಕ್ಕಯ್ಯ ಎಂಬುವನು ೧೩-೭-೫೬ರಲ್ಲಿ ತನ್ನ ಹೆಂಡತಿ ೧೮ ವರ್ಷದ ದೊಡ್ಡನಿಂಗಿ ಎಂಬಾಕೆಯನ್ನು ಕೊಲೆ ಮಾಡಲು ಯತ್ನಿಸಿ ಕತ್ತಿಯ ಬಳಿ ಮಚ್ಚಿನಿಂದ ಹೊಡೆದು ಗಾಯಪಡಿಸಿದನೆಂಬ ಅಪಾದನೆಗಾಗಿ ಸೆಷನ್ಸ್ ನ್ಯಾಯಾಧೀಶರಾದ ಶ್ರೀ ಎಂ. ಮುನಿಸ್ವಾಮಯ್ಯನವರು ಅವನಿಗೆ ೭ ವರ್ಷ ಕಠಿಣ ಸಜಾ ಮತ್ತು ೫೦೦ ರೂ ಜುಲ್ಮಾನೆಯನ್ನೂ, ತಪ್ಪಿದರೆ ಇನ್ನೂ ಆರು ತಿಂಗಳ ಕಠಿಣ ಸಜವನ್ನೂ ವಿಧಿಸಿದರು ದೊಡ್ಡನಿಂಗಿಯು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವಳು

ಹಂಗೆರಿಯಲ್ಲೆಲ್ಲಾ ಭಾರಿ ಹರತಾಳ

ಜಾನೋಸ್ ಕಾದಾರ್ ಸರ್ಕಾರದ ವಿರುದ್ಧವಾಗಿ ನೆನ್ನೆ ಹಂಗೆರಿಯ ೨ ಪಟ್ಟಣಗಳನ್ನು ಬಿಟ್ಟು ಮಿಕ್ಕೆಲ್ಲಾ ನಗರಗಳಲ್ಲೂ ಹರತಾಳವು ನಡೆಯಿತು ಬುಡಾಪೆಸ್ಟಿನಲ್ಲಿ ಕಾರ್ಖಾನೆಗಳಿಗೆ ಸಿದ್ಧವಾಗಿ ನಿಂತಿದ್ದ ರಷ್ಯಾ ಟ್ಯಾಂಕು ಮತ್ತು ತಂಡುಗಳನ್ನು ಮುತ್ತಿದ ಜನರನ್ನು ಚದುರಿಸಲು ಪೋಲೀಸರು ವಾಯು ಮಂಡಲಕ್ಕೆ ಗುಂಡು ಹಾರಿಸಿದರು ರಸ್ತೆಗಳಲ್ಲಿ ಸೋವಿಯಟ್ ಟ್ಯಾಂಕುಗಳು ಗಸ್ತು ತಿರುಗುತ್ತಿದ್ದರೂ, ಜನರನ್ನು ಚದುರಿಸಲಿಲ್ಲ

ಹರಿಕಥೆಗಳು

ದೇವೀರಮ್ಮಣ್ಣಿ ಅಗ್ರಹಾರದ ಶ್ರೀ ವಿಘ್ನೇಶ್ವರಸ್ವಾಮಿ ದೇವಸ್ಥಾನದಲ್ಲಿ ಈ ರಾತ್ರಿ ೮॥ ಗಂಟೆಗೆ ಏಕಾದಶಿ ಪ್ರಯುಕ್ತ ವಿ॥ ಪಿ ಆರ್. ಸುಬ್ಬರಾಮಯ್ಯನವರಿಂದ ಭಕ್ತ ತುಳಸೀದಾಸ್ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ

ದೊಡ್ಡಪೇಟೆ ಶ್ರೀ ಕನ್ನಿಕಾಪರಮೇಶ್ವರಿ ದೇವಾಲಯದಲ್ಲಿ ಈ ರಾತ್ರಿ ೯॥ ಗಂಟೆಗೆ ಧಾರವಾಡದ ವಿ॥ ಅಪ್ಪಾಜಿರಾಯ ಕೀರ್ತನಕಾರರು ಭಕ್ತ ರುಕ್ಮಾಂಗದ ಎಂಬ ಹರಿಕಥೆಯನ್ನು ನಡೆಸುವರು

ನೇಣುಹಾಕಿಕೊಂಡು ಯುವಕನ ಮರಣ

ನಗರದ ವಿ ಸುಬ್ಬಯ್ಯ ರಸ್ತೆ ... ಯಲ್ಲಿರುವ ಸುಬ್ಬಯ್ಯ ಎಂಬುವರ ಮಗ ಪುಟ್ಟಸ್ವಾಮಿ ಎಂಬ ೧೮ ವರ್ಷದ ಯುವಕನು ಈ ದಿನ ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ ಅವನ ಮನೆಯಲ್ಲಿ ನೇಣು ಹಾಕಿಕೊಂಡು ಮರಣಹೊಂದಿದನು

Please Re elect
No 30
H. S. VENKATA RAO,
BA . BL . B Ed
As a DIRECTOR
Of G. C S.

ಸನಾತನಧರ್ಮ ಮತ್ತು ವಿಜ್ಞಾನ ಪ್ರವೃತ್ತಿಗಳ ಸಮನ್ವಯ

ಮಾಧ್ವ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯಲ್ಲಿ ಮಹಾರಾಜರ ಭಾಷಣ

ಶ್ರೀ ಪೇಜಾವರ ಮಠಾಧೀಶರ ಉಪದೇಶ

ಮೈಸೂರು ೧೩

ಸನಾತನ ಧರ್ಮ ಮತ್ತು ಇಂದಿನ ವಿಜ್ಞಾನ ಪ್ರವೃತ್ತಿ ಇವೆರಡರ ಸಮನ್ವಯ ದೃಷ್ಟಿಯು ಈಗಿನ ಭಾರತೀಯರದೇ ಏಕೆ ಇಡೀ ಪ್ರಪಂಚದ ಸುಖ ಜೀವನಕ್ಕೆ ಅತಿ ಮುಖ್ಯ ಸಾಧನ. ಇದನ್ನು ಈಡೇರಿಸಲು ವಿಚಾರ ಪೂರ್ಣವಾದ ಸರ್ವ ಶಾಸ್ತ್ರಗಳ ಸಮಗ್ರ ಅಧ್ಯಯನ ಒಂದೇ ಮಾರ್ಗ. ಇಂತಹ ಅಧ್ಯಯನಕ್ಕೆ ಸರ್ವರೀತಿಯಿಂದಲೂ ಒದಗುವುದೇ ವಿದ್ಯಾರ್ಥಿಗಳ ಸನ್ಮಾರ್ಗ ಲಕ್ಷ್ಯ—ಎಂಬುದಾಗಿ ಮೈಸೂರಿನ ರಾಜ್ಯಪಾಲರಾದ ಶ್ರೀ ಜಯಚಾಮರಾಜ ಒಡೆಯರ್‌ರವರು ಮೊನ್ನೆ ಕೃಷ್ಣರಾಜವನದಲ್ಲಿ ಅಖಿಲ ಭಾರತ ಮಾಧ್ವ ಮಹಾ ಮಂಡಲದ ವಿದ್ಯಾರ್ಥಿನಿಲಯದ ಅಸ್ತಿಭಾರ ಶಿಲೆಯ ಪ್ರತಿಷ್ಠಾಪನೆ ಮಾಡುವಾಗ ತಿಳಿಸಿದರು. ಉಡುಪಿ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀ ಪಾದಂಗಳವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯಾದನಂತರ ಮಾಧ್ವ ಮಹಾ ಮಂಡಲದ ಮೈಸೂರು ಶಾಖಾ ಸಮಿತಿ ಕಾರ್ಯದರ್ಶಿಯವರಾದ ಶ್ರೀ ವಿ. ರಾಘವೇಂದ್ರರಾಯರು ಸ್ವಾಗತ ಭಾಷಣ ಮಾಡಿ, ವರದಿಯನ್ನೊಪ್ಪಿಸಿದರು

ಮಹಾರಾಜರ ಭಾಷಣ

ಮಹಾರಾಜರು ಭಾಷಣ ಮಾಡಿ ಮಾಧ್ವ ವಿದ್ಯಾರ್ಥಿನಿಲಯದ ಸ್ಥಾಪನೆಯ ಹಿನ್ನೆಲೆಯಲ್ಲಿರುವ ಭಾವನೆಯನ್ನು ಪ್ರಶಂಸಿಸಿ, ಆದರ್ಶಗಳಲ್ಲಿ ಮೇ ಹೊರತು ಒಳ ವಿವರಗಳಲ್ಲಿ ಸ್ಪರ್ಧೆ ಉಚಿತವಲ್ಲವೆಂಬ ಮಾತು ಉಚಿತವಾದುದೆಂದು ಸೂಚಿಸಿದರು

'ವೈಜ್ಞಾನಿಕತೆಯು ನಾಗರಿಕತೆಯ ಮೋಹಕ ನಾಶಕ್ಕೆ ಮರುಳಾಗಿರುವ ಜನಗಳನ್ನು ಸನ್ಮಾರ್ಗಕ್ಕೆ ಮರಳಿಸುವುದಕ್ಕಾಗಿಯೂ' ಮತ್ತು 'ಜೀವನಗಳನ್ನು ಉದ್ಧರಿಸಿಂದ ... ಸರ್ವ ಜ್ಞಾನದ ಕಡೆಗೆ ಒಯ್ಯುವ ಆಧುನಿಕ ವಿದ್ಯಾರ್ಥಿಗಳಲ್ಲಿ ನಿರತರಾಗಿರುವ ತರುಣರಿಗಾಗಿ ಈ ವಿದ್ಯಾರ್ಥಿನಿಲಯದ ಸ್ಥಾಪನೆ" ಎಂಬುದರ ಧ್ಯೇಯವನ್ನು ತಾವು ಸ್ವಾಗತಿಸುವುದಾಗಿ ಅವರು ಹೇಳಿ, ಆಧುನಿಕವೆಂದು ಕರೆಯಲಾಗುವ ವಿದ್ಯೆಯಲ್ಲಿ ಕೆಲವು ವೇಳೆ ದೋಷಕ್ಕೆ ಅವಕಾಶವಾಗುವ ಸನ್ನಿವೇಶವಿರಬಹುದಾದರೂ, ಎಲ್ಲಕ್ಕಿಂತ ಮಿಗಿಲಾಗಿ ಈ ವಿದ್ಯೆಯಲ್ಲಿ ವಿದ್ಯೆಗೇ ತಳಹದಿಯಾದ ಮತ್ತು ಗುರಿಯಾದ ವಿಚಾರ ಪರತೆಯನ್ನು ಉತ್ತಮ ರೀತಿಯಲ್ಲಿ ಸಾಧಿಸಿ ಕೊಡುವ ಮಹತ್ವವಿರುವುದೆಂದು ಅವರು ಸೂಚಿಸಿದರು. ನಾನಾ ಭಾವಗಳಿಗೆ ಅವಕಾಶವೀಯುವ ಹೊಸ ವಿಷಯಗಳ ಸಂಪೂರ್ಣ ಪರಿಚಯವೇ ವಿಚಾರ ಪರತೆಯ ಜೀವ ನಾಡಿಯೆಂದೂ, ಯುಕ್ತ ರೀತಿಯ ವಿಚಾರ ಪರತೆಯೇ ಸರ್ವ ಶ್ರೇಯಸ್ಸಿಗೂ ಮೂಲಾಧಾರವೆಂದೂ, ಇದೇ ಸನಾತನ ಧರ್ಮದ ತಿರುಳೆಂದೂ ಅವರು ಅಭಿಪ್ರಾಯಪಟ್ಟರು.

ಭಕ್ತಿ, ಶ್ರದ್ಧೆ ಮುಂತಾದುವು ನಮ್ಮ ಸಂಘದಲ್ಲೇ ಹುಟ್ಟಿ ಬೆಳೆದ ತರುಣರಿಗೆ ಅಸಂಬದ್ಧವಲ್ಲವೆಂದೂ, ಭಕ್ತಿ ಮಾರ್ಗ ಮತ್ತು ಮತಾಚಾರಗಳನ್ನು ಬೋಧಿಸುವುದರ ಮೂಲಕ ಭಕ್ತಿ ಮೂಡಿಸುವುದಕ್ಕಿಂತ, ವಿಚಾರ ಶಕ್ತಿಯಿಂದಲೇ ಭಕ್ತಿ ಶ್ರದ್ಧೆಗಳು ಹುಟ್ಟಿ ಬೆಳೆದು ಸ್ಥಿರಗೊಳಿಸುವಂತೆ ಮಾಡಬೇಕೆಂದೂ ಅವರು ಸೂಚಿಸಿದರು.

ಪೇಜಾವರ ಸ್ವಾಮಿಗಳವರ ಉಪದೇಶ

ಶ್ರೀ ಶ್ರೀ ಪೇಜಾವರ ಸ್ವಾಮಿಗಳವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು.—

ಭಾರತವು ಹಿಂದಿನಿಂದಲೂ ವಿವಿಧ ಧರ್ಮ ತತ್ವಜ್ಞಾನಗಳ ಆಶ್ರಯ ಭೂಮಿಯಾಗಿದ್ದು, ಹಲವು ಬಗೆಯ ವಿಪ್ಲವಕಾರಿ ಸ್ಥಿತ್ಯಂತರಗಳಲ್ಲೂ ತನ್ನ ವೈಶಿಷ್ಟ್ಯವನ್ನು ಉಳಿಸಿಕೊಂಡಿರುವ ಧರ್ಮಭೂಮಿಯಾಗಿದೆ. ಪ್ರಾಚೀನ ಧರ್ಮ ಸಂಸ್ಕೃತಿಗಳನ್ನು ಉಳಿಸಿಕೊಂಡು ಒಂದು ಬಗೆಯ ಏಕರೂಪತೆಯನ್ನು ದೇಶವು ಅಳವಡಿಸಿಕೊಂಡಿರುವುದು. ಈ ದೃಷ್ಟಿಯಿಂದ ಧರ್ಮವು ನಮ್ಮ ದೇಶದ ಆತ್ಮ ಮತ್ತು ಜೀವನ ಶಕ್ತಿಯೆಂಬುದಾಗಿ ಕರೆಯಬಹುದು

ಪ್ರಜಾಪ್ರಭುತ್ವ ಮತ್ತು ಧರ್ಮ

ಈಗಿನದು ಪ್ರಜಾಪ್ರಭುತ್ವ ಯುಗ, ಅದರಲ್ಲಿ ದೇಶವು ಧರ್ಮಾತೀತ ರಾಜ್ಯ ವ್ಯವಸ್ಥೆಯನ್ನು ರೂಪಿಸಿರುವುದರಿಂದ ಸಮಾಜ ಜೀವನಕ್ಕೂ, ಧರ್ಮಕ್ಕೂ ಇರುವ ಸಂಬಂಧವನ್ನು ಪರಿಶೀಲಿಸಬೇಕಾಗಿದೆ. ವಿವಿಧ ಧರ್ಮಗಳ ನೆಲೆವೀಡಾದ ಭಾರತ ರಾಷ್ಟ್ರದ ಮೇಲಾಗಲೀ, ಸರ್ಕಾರದ ಮೇಲಾಗಲೀ ಅಧಿಕೃತ ಧರ್ಮವೆಂಬುದನ್ನು ಹೇರಲು ಸಾಧ್ಯವಿಲ್ಲ. ಧರ್ಮಾತೀತ ರಾಜ್ಯ ವ್ಯವಸ್ಥೆಯಲ್ಲಿ ಧರ್ಮದ ಬಗ್ಗೆ ಯಾವ ವ್ಯಕ್ತಿಯ ಮೇಲೂ ನಿರ್ಬಂಧ ತರಬಾರದು. ಧರ್ಮಾತೀತ ರಾಜ್ಯವೆಂದರೆ ಸಾರ್ವಧಾರ್ಮಿಕ ರಾಜ್ಯವೆಂಬ ಅರ್ಥ ಬರುವುದು. ಈ ಪರಿಸ್ಥಿತಿಯಲ್ಲಿ ಜನಾಂಗಕ್ಕೆ ತಮ್ಮ ತತ್ವ, ಧರ್ಮ, ತತ್ವಜ್ಞಾನಗಳ ಪ್ರಚಾರ, ಪರಿರಕ್ಷಣೆಗಳ ಬಗ್ಗೆ ಇಮ್ಮಡಿಯಾದ ಹೊಣೆಗಾರಿಕೆ ಒದಗಿದೆ. ಧರ್ಮ ಪ್ರಚಾರಕ್ಕಾಗಿ ಸರ್ಕಾರದ ಮುಖ ನಿರೀಕ್ಷಣೆ ಮಾಡದೆ ಸ್ವಂತ ಜವಾಬ್ದಾರಿಯಿಂದ ನಡೆಸುವ ಪ್ರೇರಣೆಯು ಅಂಕುರಿತವಾಗಲು ಸಾಧ್ಯವಿದೆ

ಆಧುನಿಕ ವಿದ್ಯಾ ಜ್ಞಾನವು ಭೌತಿಕತೆ ಮತ್ತು ಆಧ್ಯಾತ್ಮಿಕತೆಗಳನ್ನು ಸಮನ್ವಯಗೊಳಿಸುವುದರಲ್ಲಿ ವಿಫಲಗೊಂಡಿದೆ. ಬಾಲ್ಯದಿಂದಲೂ ವಿದ್ಯಾರ್ಥಿಗಳ ಮನೋಭೂಮಿಕೆಯಲ್ಲಿ ನೈತಿಕ ಭಾವನೆಗಳು ಸರಿಯಾದ ವ್ಯವಸ್ಥಿತ ರೂಪದಲ್ಲಿ ಸಂಸ್ಕರಿಸಲ್ಪಟ್ಟರೆ ಮುಂದಿನ ಜೀವನ ರಂಗವು ಸ್ವಸ್ಥ, ಲಲಿತ, ಲಾಸ್ಯಗಳಿಂದ ಅಲಂಕರಿಸಬಲ್ಲದು. ಶಿಕ್ಷಣವು ವ್ಯವಹಾರದಲ್ಲಿ ಆಧ್ಯಾತ್ಮಿಕ ದೃಷ್ಟಿಯನ್ನು ಸಮನ್ವಯಗೊಳಿಸಲು ಸಮರ್ಥವಾದಲ್ಲಿ ಜೀವನದಲ್ಲಿ ಅದರ ಉಪಯುಕ್ತತೆಯನ್ನು ಸಮಾಜವು ಪಡೆಯಬಹುದು.

ಕಾಲೇಜು ಶಿಕ್ಷಣವನ್ನು ಪಡೆಯುತ್ತಿರುವ ತರುಣ ವಿದ್ಯಾರ್ಥಿಗಳಿಗೆ ಸಾಂಸ್ಕೃತಿಕ ಹಾಗೂ ನೈತಿಕ ಶಿಕ್ಷಣವನ್ನು ಒದಗಿಸಲು ದೇಶದಾದ್ಯಂತ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸಲು ಧರ್ಮ ಸಂಸ್ಥೆಗಳೆಲ್ಲವೂ ಪ್ರಯತ್ನಿಸಿದರೆ ಶಿಕ್ಷಣ ಕ್ರಮದಲ್ಲಿ ಒಂದು ದೊಡ್ಡ ಕೊರತೆಯು ಪರಿಹಾರವಾಗಿ ಧಾರ್ಮಿಕ ಶಿಕ್ಷಣವನ್ನು ಜನರಿಗೆ ಕಲ್ಪಿಸುವ ದೊಡ್ಡ ಪ್ರಶ್ನೆಯು ಸರ್ಕಾರಕ್ಕೆ ತಪ್ಪಿದಂತಾಗುವುದು. ಕಾಲೇಜುಗಳಲ್ಲಿ ಧಾರ್ಮಿಕ ಶಿಕ್ಷಣವನ್ನೇರ್ಪಡಿಸುವುದು ಅತ್ಯಂತ ಕ್ಲಿಷ್ಟವಾದ ವಿಷಯ. ಧರ್ಮಾತೀತ ರಾಜ್ಯ ಯೋಜನೆ ಹಾಗೂ ಕಾಲೇಜುಗಳಲ್ಲಿ ಧಾರ್ಮಿಕ ಶಿಕ್ಷಣದ ವ್ಯವಸ್ಥೆ ಇವೆರಡೂ ಪರಸ್ಪರ ಹೊಂದಿಕೆಯಾಗಲಾರದ ಘಟನೆ.

ನಾವು ಧರ್ಮಾತೀತ ಸರ್ಕಾರವು ಬೇಕೆನ್ನುತ್ತೇವೆ. ಧಾರ್ಮಿಕ ಶಿಕ್ಷಣದ ವಿಚಾರ
ಕೆಂದೂ ಸಾರುತ್ತೇವೆ. ಹಿಂದೂ, ಮುಸ್ಲಿಂ,
ಸ್ತ, ಬೌದ್ಧ, ಜೈನ, ಹಿಂದುಗಳಲ್ಲಿ ದ್ವೈತ,
ದ್ವೈತ, ವಿಶಿಷ್ಟಾದ್ವೈತ, ವೀರಶೈವ ಮುಂ
ಮತಾನುಯಾಯಿಗಳಿಗೆ ಏಕ ವಿಧವಾದ
ಕ ಶಿಕ್ಷಣ ರೂಪಿಸಲು ಸಾಧ್ಯವೇ ?
ಪರಿಸ್ಥಿತಿಯಲ್ಲಿ ಸರಕಾರದಿಂದ ಶೀಲ ಪ್ರ
ನೆ ಕಾರ್ಯವು ಮಾತ್ರ ನೇರವಾಗಿ ನಡೆ
ಸಾಧ್ಯ. ಶೀಲ ಪ್ರಬೋಧನೆಗೆ ಮೂಲ
ವಾದ ಧಾರ್ಮಿಕ ಶಿಕ್ಷಣದ ಕಾರ್ಯವನ್ನು
ರ್ಮಿಕ ಸಂಸ್ಥೆಗಳು ನಿರ್ವಿಕಾರ ಮತ್ತು ಶ್ರ
ಪೂರ್ಣ ಭಾವನೆಯಿಂದ ವಿಧಾಯಕ ರೀ
ಮುಂದುವರಿಯಬೇಕು ಇದೇ ಇಂದಿನ ಸ
ಪರಿಸ್ಥಿತಿಯು [illegible]
ಕ್ರ ವ್ಯಾವಹಾರಿಕ ಯೋಜನೆಯಾಗಿದೆ

ಇಂದೇ ತಪ್ಪದೇ ನೋಡಿ !
ಚಿತ್ರ ಭಾರತ್ ರವರ
ಭಾಗ್ಯಚಕ್ರ
(ಕನ್ನಡ)
ಹಿಂದೆಂದೂ ನೋಡಿರದಂತಹ ಅಪೂರ್ವ ಕಲಾಕೃತಿ
ಮೈಸೂರು
ರಾಜಕಮಲ್
ಟಾಕೀಸಿನಲ್ಲಿ

ಮೈಸೂರಿನಲ್ಲಿ ಪ್ರತಿ ತಿಂಗ
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ 5
—: ಭೇಟಿಯ ಕಾಲ :—
ಬೆಳಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಮೇಲಿನ ಕಾರ್ಯಕ್ರಮವನ್ನು ಗಮನಿ
ಮತ್ತು ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರ
ವಿಮಾನದಲ್ಲಿ ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಿಸಿರಿ
ಇದು ವಜ್ರ, ಕೆಂಪು ಮುತ್ತು, ಪಚ್ಚೆ
ಗೋಮೇಧಿಕ, ನೀಲ, ಪಚ್ಚ ರಾಗಿಣಿ ಮುತ್ತು
ಶಿಲೆ- ಈ 9 ಅಮೂಲ್ಯ ಹರಳುಗಳ ಸಂಯೋ
ನಿಮ್ಮ ಎಲ್ಲಾ ಜಾಡ್ಯ ಹಾಗೂ
ಕಾಯಿಲೆಗಳಿಗೂ ಅತ್ಯುತ್ತಮ ಆರೋಗ್ಯದಾ
ವಾದ ಔಷಧಿ ಇದೊಂದೇ.
NAVRATNA KALPA PHARMAC
JULLUNDUR CITY (India)

Edited, Printed and Publishe
A. R. Nagarajan at Sadhvi P
D Subbiah Road, Mysore

ಸದರ್ನ್ ರೈಲ್ವೆ

ಪಿ. ಆರ್ (ಟ್ರಾನ್ಸ್‌ಪೋರ್ಟೇಷನ್) ಸದರ್ನ್ ರೈಲ್ವೆ, ಮೈಸೂರು, ತಾ|| 8-12-56

ಇದೇ 1956ನೇ ಡಿಸೆಂಬರ್ 17ನೇ ತಾರೀಖು ಪೂರ್ಣಿಮೆ ದಿನ ಮೈಸೂರಿನಿಂದ ನಂಜನಗೂಡಿಗೆ ಮತ್ತು ವಾಪಸು ವಿಶೇಷ ರೈಲೊಂದನ್ನು ಕೆಳಗೆಕಂಡ ವೇಳೆಯಲ್ಲಿ ಬಿಡಲಾಗುವುದು.—

—: ಪೂರ್ಣಿಮೆ ದಿನದ ಸ್ಪೆಷಲ್ ನಂ. 1 :—

ಮೈಸೂರಿನಿಂದ ಹೊರಡುವುದು	ಬೆಳಗ್ಗೆ	8
ನಂಜನಗೂಡು ತಲುಪುವುದು	,,	8-50

—: ಪೂರ್ಣಿಮೆ ದಿನದ ಸ್ಪೆಷಲ್ ನಂ. 2 :—

ನಂಜನಗೂಡು ಬಿಡುವುದು	ಮಧ್ಯಾಹ್ನ	12-10
ಮೈಸೂರು ತಲುಪುವುದು	,,	13-15

ಈ ವಿಶೇಷ ರೈಲು ಚಾಮರಾಜಪುರಂ, ಮೈಸೂರು ಸೌತ್, ಕಡಕೊಳ ಮತ್ತು ತಾಂಡವಪುರ ನಿಲ್ದಾಣಗಳಲ್ಲಿ ನಿಲ್ಲುವುದು

ಡಿವಿಜನಲ್ ಸೂಪರಿಂಟೆಂಡೆಂಟ್, ಮೈಸೂರು

ಮೈಸೂರು ಕಾಫಿ ಸಪ್ಲೈಸ್
ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು

ನಮ್ಮಲ್ಲಿ ಹೊಸದಾದ ಕಾಫಿ ಬೀಜ ಮತ್ತು ಕಾಫಿ ಪುಡಿ ಈ ಕೆಳಗೆ ಕಂಡ ದರದಲ್ಲಿ ದೊರೆಯುತ್ತವೆ —

ಕಾಫಿ ಬೀಜ ಪೌಂಡು ಒಂದಕ್ಕೆ
ಪೀಬರಿ ರೂ. 2-3-0 ಪ್ಲಾಂಟೇಷನ್ 'ಎ' 2-0-6 ಪ್ಲಾಂಟೇಷನ್ 'ಬಿ' 2-0-0
ಅರಾಬಿಕಾ ಚೆರ್‍ರಿ ರೂ. 1-14-0 — ರೋಬಸ್ಟಾ 1-9-0

ಕಾಫಿ ಪುಡಿ ಪೌಂಡ್ ಒಂದಕ್ಕೆ
ಪೀಬರಿ ರೂ 2-13-0 — ಪ್ಲಾಂಟೇಷನ್ 'ಎ' 2-11-0
ಚೆರ್‍ರಿ 2-4-0 — ಪ್ಲಾಂಟೇಷನ್ 'ಬಿ' 2-8-0

ಸ್ಪೆಷಲ್ಲಾಗಿ ಹೋಟೇಲಿನವರಿಗೆ ನಾಲ್ಕು ರಕಂ ಬೀಜ ಬ್ಲೆಂಡ್ ಮಾಡಿ ಉತ್ತಮವಾದ ಪುಡಿಯನ್ನು ಅತಿ ಸುಲಭದ ದರದಲ್ಲಿ ಒದಗಿಸಲಾಗುತ್ತದೆ

ಪ್ರಭುದೇವಾ ಥಿಯೇಟರ
(ಪದ್ಮಾ ಟಾಕೀಸ್)
13—12—56ನೇ : ಗುರುವಾರದಿಂದ : ಅಶೋಕ್ ಪ್ರಾ
★ ಬಾಲಸನ್ಯಾಸಮ್ಮಕಥಾ
(ತೆಲುಗು)
ಪಾತ್ರ – ಜಿ ವರಲಕ್ಷ್ಮಿ, ಕೃಷ್ಣಕುಮಾರಿ, ಬಾಲಸರಸ್ವತಿ, ಸೂರ್ಯಕಾಂತಂ,
ಜಗ್ಗಯ್ಯ, ರೇಲಂಗಿ, ಗುಮ್ಮಡಿ, ಮುಂತಾದವರು

ಮೈಸೂರು ಸಿಟಿ ಮರದ ಗಾಣದ ಎಣ್ಣೆ ಕೈಗಾರಿಕಾಗಾರರ
ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್.
ಹೆಡ್ ಆಫೀಸ್ ವಾಣಿವಿಲಾಸ ರಸ್ತೆ :: ಬ್ರಾಂಚ್ . ಶ್ರೀರಾಂಪೇಟೆ, ಮೈಸೂ

ಅಪ್ಪಟವಾದ ಪುಷ್ಟಿಕ್ಕೆ ಪ್ರತಿಯಾಗಿ ಆಹಾರಕ್ಕೆ ಉಪಯೋಗವಾಗಬಲ್ಲ ವಿಶಮಾತ್ರ
ದೇವಮರದ ಗಾಣದಿಂದ ತಯಾರಾದ ಶುದ್ಧವಾದ ಎಣ್ಣೆ ನಮ್ಮ ಸೊಸೈಟಿಯಲ್ಲಿ ಸ್ವಚ್ಛ
ಅಚ್ಚೆಳ್ಳೆಣ್ಣೆ, ಹುಚ್ಚೆಳ್ಳೆಣ್ಣೆ ಮತ್ತು ಕಡಲೆಕಾಯಿ ಎಣ್ಣೆ ಮಾರಾಟಕ್ಕೆ ಸಿದ್ಧವಾಗಿದೆ ಸಾ
ಜನ ಅನುಕೂಲಕ್ಕಾಗಿ ನಮ್ಮ ಮಾರಾಟ ಶಾಖೆಯನ್ನು ನಗರದ ಶ್ರೀರಾಂಪೇಟೆಯಲ್ಲಿ ಚಾಮು
ಶ್ವರಿ ಭವನದ ಸಮೀಪದಲ್ಲಿ ತೆರೆಯಲಾಗಿದೆ ಇಂದಿನಿಂದ ಎಣ್ಣೆ ದರಗಳನ್ನು ಕಡಿಮೆ ಮಾಡಿ
ದೆಂದು ಸಂತೋಷದಿಂದ ತಿಳಿಸುತ್ತೇವೆ

		ದರ	ರಿಬೇಟ್	ನಿಗದಿ ಬೆಲೆ
ಅಚ್ಚೆಳ್ಳೆಣ್ಣೆ	ವೀಸೆ 1ಕ್ಕೆ	3—12—6	0—1—6	3—12—0
ಹುಚ್ಚೆಳ್ಳೆಣ್ಣೆ	,,	2—5—6	0—1—6	2—4—0
ಕಡಲೆಕಾಯಿ ಎಣ್ಣೆ	,,	2—3—6	0—1—6	2—2—0

ರಜಿಸ್ಟರ್ ನಂ. 792

ಸಂಸ್ಥಾನದ ವಿಷಯಗಳನ್ನೂ
ಪ್ರಚಾರಪಡಿಸುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

ಅಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಅಜೀರ್ಣ ಮತ್ತು ಗೂರಲು
ವ್ಯಾಧಿಗಳಿಗೆ ಔಷಧ
•
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
[illegible] ಪೇಟೆ,
ಬೆಂಗಳೂರು-2

ಸಂಪುಟ : ೦೫] SADHVI : FRIDAY 14—12—1956 ಮೈಸೂರು : ಶುಕ್ರವಾರ ೧೪—೧೨—೧೯೫೬ [ಸಂಚಿಕೆ : ೨೮೦

ವಿಶ್ವಸಂಸ್ಥೆಯಲ್ಲಿ ಹಂಗೆರಿ ಬಗ್ಗೆ ರಷ್ಯದ ವರ್ತನೆ ಖಂಡನೆ

ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನ

ನಾಳೆ ದಿವಸ ಕಾರ್ಯಕ್ರಮ

ಮೈಸೂರು ೧೪

ನಗರದಲ್ಲಿ ನಾಳೆ ಮತ್ತು ನಾಳಿದ್ದು ಸೇರುವ ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನದ ಕಾರ್ಯಕ್ರಮಗಳು ಈ ರೀತಿ ನಿಶ್ಚಯವಾಗಿದೆ:- ಬೆಳಗ್ಗೆ ೮-೩೦ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಶ್ರೀ ಎಸ್. ಚನ್ನಯ್ಯನವರಿಂದ ಧ್ವಜಾರೋಹಣ, ೧೧ ಗಂಟೆಗೆ ಟೌನ್‌ಹಾಲಿನಲ್ಲಿ ಮದ್ರಾಸಿನ ಮುಖ್ಯ ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜ್ ನಾಡಾರರಿಂದ ಸಮ್ಮೇಳನದ ಆರಂಭ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೆಂಕಟಪ್ಪನವರಿಂದ ಭಾಷಣ.

ಪ್ರತಿನಿಧಿಗಳು ಮತ್ತು ಆಹ್ವಾನಿತರಿಗೆ ಸಭಾಂಗಣದಲ್ಲಿ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಲಾಗಿ ಸಂಸ್ಥಾನದ ಹತ್ತು ಜಿಲ್ಲೆಗಳಿಂದ ಒಟ್ಟು ೦೦ ಪ್ರತಿನಿಧಿಗಳು ಆಗಮಿಸುವ ನಿರೀಕ್ಷೆಯು ಅವರುಗಳಿಗೆ ಭಂಜರಾಜ ಬಹದ್ದೂರ್ ಮತ್ತು ಶ್ರೀ ರಾಂಪೇಟೆ ವಾಸವೀ ನಿಲಯದ ಸ್ಥಳವನ್ನೇರ್ಪಡಿಸಿದೆ.

ನಂಜರಾಜ ನಾಟಕದ ತಮಿಳು ಭಾಷಣ ಕನ್ನಡಕ್ಕೆ ತರ್ಜುಮೆ ಮಾಡಲಾಗುವುದು ಹಾಲ್ ಹೊರಗೆ ಧ್ವನಿವರ್ಧಕವನ್ನು ಇಟ್ಟಿ ಲಾಗಿದೆ ಮಧ್ಯಾಹ್ನ ೩ ಗಂಟೆಗೆ ಸಮ್ಮೇಳನ ಮತ್ತೆ ಸೇರಿ ನಿರ್ಣಯಗಳನ್ನು ಚರ್ಚಿಸು

ನುಮಜ್ಜಯಂತಿ ರಜತ ಮಹೋತ್ಸವ

॥ ೨॥ ಬಿ ದೇವೇಂದ್ರಪ್ಪನವರು ಕಳೆದ ವರ್ಷಗಳಿಂದಲೂ ನಡೆಸುತ್ತಿರುವ ಶ್ರೀ ಹನು ಯಂತಿಯ ರಜತ ಮಹೋತ್ಸವದ ಆರಂ ತ್ಸವವನ್ನು ನಾಳೆ ಬೆಳಗ್ಗೆ ೯-೩೦ಕ್ಕೆ ನಾರಾ ಶಾಸ್ತ್ರಿ ರಸ್ತೆಯಲ್ಲಿರುವ ಶ್ರೀ ಮಾರುತಿ ಮಂ ದಿರದಲ್ಲಿ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವ ರವೇರಿಸುವರು. ಸಹಕಾರ ಮಂತ್ರಿ ಶ್ರೀ ಮಪ್ಪನಾಯಕ್‌ರವರು ಅಧ್ಯಕ್ಷತೆ ವಹಿಸು ನಾಳೆ ಸಂಜೆ ೬॥ ಕ್ಕೆ ವಿ. ದೊರೆಸ್ವಾಮಿ ಯ್ಯಂಗಾರ್ ರವರ ವೀಣಾ ವಾದನವೂ, ೭॥ ಸ್ವಾಮಿಯವರ ಮೃದಂಗದೊಡನೆಯೂ, . ನ ಕೃಷ್ಣರಾಯರಿಂದ ಹಾರ್ಮೋನಿಯಂ ನಲ್ಲಿ ಸಂಗೀತದ ಶಾಸ್ತ್ರ ಎಂಬ ವಿಷಯ ಉಪನ್ಯಾಸವೂ ಮತ್ತು ೮॥ ಕ್ಕೆ ಗಂಗೂ ಹಾನಗಲ್‌ರವರ ಹಿಂದೂಸ್ತಾನಿ ಸಂಗೀ ಗಾಯಕಿ ಶೇಷಾದ್ರಿಯವರ ಹಾರ್ಮೋನಿ ಮತ್ತು ಹಾನಗಲ್ ಶೇಷಾದ್ರಿಯವರ ತಬಲ ಡನೆಯೂ ನಡೆಯುವವು

ರ್‌ಬಿ ವೆಂಕಟಪ್ಪ ರೋಡ್ ಶ್ರೀ ಆಂಜನೇಯಸ್ವಾಮಿ ದೇವಸ್ಥಾನದ ನುಮಜ್ಜಯಂತಿ ಮಹೋತ್ಸವವು [illegible] ಪೂಜೆ, ಸಂಜೆ ಅಷ್ಟೋತ್ತರ, ಕರ್ಪೂರ ಇತ್ಯಾದಿಗಳು ಇವೆ ನಾಳೆ ಸಂಜೆ ಗೆ ಸಂಗೀತ ಮತ್ತು ೬ ಗಂಟೆಗೆ ಶ್ರೀ ಲ್. ನಾರಾಯಣದಾಸರಿಂದ ಹನುಮ ಎಂಬ ಹರಿಕಥೆಯೂ ಇದೆ

ಹಂಗೆರಿ ಬಗ್ಗೆ ರಷ್ಯದ ವರ್ತನೆಯ ಖಂಡನೆ

ವಿಶ್ವಸಂಸ್ಥೆಯ ಸಾಧಾರಣ ಸಭೆಯು ನೆನ್ನೆ ನಿರ್ಣಯವೊಂದನ್ನು ಅಂಗೀಕರಿಸಿ ಹಂಗೆರಿಯ ಸ್ವಾತಂತ್ರ್ಯಕ್ಕೆ ಅಪಚಾರ ತಂದು ರಷ್ಯವು ವಿಶ್ವ ಸಂಸ್ಥೆಯ ಪ್ರನಾಳಿಕೆಯನ್ನು ಉಲ್ಲಂಘಿಸಿರುವುದೆಂದು ಸೂಚಿಸಿತು. ವಿಶ್ವ ರಾಷ್ಟ್ರಗಳು ತಂದಿದ್ದ ಎಲ್ಲಾ ತಿದ್ದುಪಡಿಗಳನ್ನು ತಿರಸ್ಕರಿಸಲಾಯಿತು. ಈ ಕೂಡಲೇ ಹಂಗೆರಿಯಿಂದ ರಷ್ಯವು ತನ್ನ ಸೈನ್ಯಗಳನ್ನು ವಿಶ್ವ ಸಂಸ್ಥೆಯ ವೀಕ್ಷಣೆಯಲ್ಲಿ ವಾಪಸು ಕರೆಸಬೇಕೆಂದು ನಿರ್ಣಯ ಮಾಡಲಾಗಿದೆ

ದೇವರ ಪಾದದ ಬಳಿ ಇದ್ದ ಸರ್ಪದ ಮರಣ

• ಶ್ರೀರಂಗಪಟ್ಟಣದ ಸಮೀಪದಲ್ಲಿ ಕಾವೇರಿ ಮತ್ತು ಲೋಕಪಾವನಿ ನದಿಗಳ ಸಂಗಮದ ಹತ್ತಿರ ಇರುವ ಕಾಶಿ ವಿಶ್ವೇಶ್ವರ ದೇವಸ್ಥಾನದಲ್ಲಿ ೧೫ ದಿವಗಳ ಹಿಂದೆ ದೇವರ ತಲೆಗೆ ಸುತ್ತಿಕೊಂಡು ಕೆಲವು ದಿನಗಳ ನಂತರ ಪಾದದ ಬಳಿ ಬಂದು ಮಲಗಿದ್ದ ನಾಗರಹಾವು ಸುಬ್ಬರಾಯನ ಷಷ್ಠಿ ದಿನ ಗರ್ಭ ಗುಡಿಯಿಂದ ಹೊರ ಆವರಣಕ್ಕೆ ಬಂದಿತೆಂದೂ ನಂತರ ಕಳೆದ ಸೋಮವಾರ ದೇವಸ್ಥಾನದಿಂದ ಹೊರಕ್ಕೆ ಬಂದು ನಿಧನ ಹೊಂದಿತೆಂದೂ ತಿಳಿದುಬಂದಿದೆ ಅಲ್ಲಿನ ನಿವಾಸಿಗಳು ಅದರ ಅಂತ್ಯ ಸಂಸ್ಕಾರಗಳನ್ನು ಶಾಸ್ತ್ರೋಕ್ತವಾಗಿ ನಡೆಸಿದರು

ಮಹಾ ಚುನಾವಣೆಗಳ ಕಾಲದ ಅವಧಿ

ಫೆಬ್ರವರಿ ೨೫ ರಿಂದ ಮಾರ್ಚಿ ೧೪ರ ವರೆಗೆ ಚುನಾವಣೆ

ಚುನಾವಣಾ ಮಂಡಲಿಯವರು ಗೊತ್ತುಪಡಿಸಿರುವ ಕಾಲಾವಧಿ ಪ್ರಕಾರ ಮಹಾ ಚುನಾವಣೆಗಳು ಬರುವ ಮಾರ್ಚಿ ೧೪ ರೊಳಗೆ ಮುಕ್ತಾಯವಾಗಲಿವೆ ಚುನಾವಣಾ ವೇಳಾ ಪಟ್ಟಿಯನ್ನು ಸೂಚಿಸುವ ಬಗ್ಗೆ ಜನವರಿ ೩ನೇ ವಾರದಲ್ಲಿ ರಾಷ್ಟ್ರಾಧ್ಯಕ್ಷರೂ ಗವರ್ನರುಗಳೂ ಪ್ರಕಟಣೆಗಳನ್ನು ಹೊರಡಿಸಲಿರುವರು ಚುನಾವಣೆಗಳನ್ನು ಫೆಬ್ರವರಿ ೨೫ ರಿಂದ ಮಾರ್ಚಿ ೧೪ರ ಒಳಗೆ ನಡೆಸಲಾಗುವುದು ಚುನಾವಣಾ ವೇಳಾಪಟ್ಟಿ ಪ್ರಕಟವಾದ ೧೦ ದಿನಗಳಲ್ಲಿ ನಾಮಪತ್ರಗಳನ್ನು ಸ್ವೀಕರಿಸಲಾಗುವುದು ೫೦ ಕೋಟಿ ಓಟು ಪತ್ರಗಳನ್ನು ಈ ಸಾರಿ ಮುದ್ರಿಸಲಾಗುವುದು

ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ಮತ್ತು ಚೌಡಯ್ಯನವರ ಭಾವಚಿತ್ರ ಅನಾವರಣ

ದಿವಂಗತ ಶ್ರೀ ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ಮತ್ತು ಪೌರಸಭಾ ಸದಸ್ಯರಾದ ಶ್ರೀ ಟಿ ಚೌಡಯ್ಯನವರ ಭಾವಚಿತ್ರಗಳನ್ನು ನೂತನವಾಗಿ ನಿರ್ಮಿಸಿರುವ ಪೌರಸಭಾ ಪ್ರೋಹಿತ ಉಚಿತ ವಿದ್ಯಾರ್ಥಿನಿಲಯದಲ್ಲಿ ನಾಳೆ ಬೆಳಗ್ಗೆ ೮॥ ಮುಖ್ಯ ಮಂತ್ರಿ ಶ್ರೀ ಎಸ್ ನಿಜಲಿಂಗಪ್ಪನವರು ಅನಾವರಣ ಮಾಡುವರು ಪ್ರಾದೇಶಿಕ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಧ್ಯಕ್ಷತೆ ವಹಿಸುವರು

ರಹದಾರಿ ಪಡೆಯದೆ ಹೋಟೇಲು ನಡೆಸಿದ ಮೊಕದ್ದಮೆ ವಜಾ

ನಗರದ ಹೋಟೇಲು ಮಾಲೀಕರಿಬ್ಬರ ಬಿಡುಗಡೆ

ಮೈಸೂರು ೧೪

ರಹದಾರಿ ಪಡೆಯದೆ ಹೋಟೇಲುಗಳನ್ನು ನಡೆಸುತ್ತಿದ್ದರೆಂದು ಇಲ್ಲಿನ ಪೌರಸಭೆಯವರು ಗಾಯತ್ರಿ ಭವನ ಮತ್ತು ಚಾಮುಂಡೇಶ್ವರಿ ಭವನಗಳ ಮಾಲೀಕರಾದ ಶ್ರೀಗಳು ಮುನ್ನಿಲಾಲ್ ಮತ್ತು ಪಿ ವಿ. ರಾಮಯ್ಯರ್‌ರವರ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನಗರದ ದ್ವಿತೀಯ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು, ಪೌರಸಭಾ ಉಪ ನಿಯಮಗಳು ರಾಜ್ಯಾಂಗ ಬಾಹಿರವೆಂದು ಅಭಿಪ್ರಾಯಪಟ್ಟು ಆಪಾದಿತರಿಬ್ಬರನ್ನೂ ಖುಲಾಸೆ ಮಾಡಿದರು

ಆಪಾದಿತರು ತಮ್ಮ ಹೇಳಿಕೆಯಲ್ಲಿ ಬಾಡಿಗೆ ಆಧಾರದ ಮೇಲೆ-೫೫ ರೂ ಗೆ ಕಡಿಮೆ ಇಲ್ಲದೆ ೫೦೦ ರೂ ಗೆ ಮೀರದೆ ಇರುವ ಮಾಹೆಯಾನಾ ಬಾಡಿಗೆಯ ಮೌಲ್ಯವನ್ನು ರಹದಾರಿ ಶುಲ್ಕ ಕೊಡಬೇಕೆಂದು ಮಾಡಲಾಗಿರುವ ಪೌರಸಭೆಯ ನಿಯಮವು ರಾಜ್ಯಾಂಗದ ೧೪, ೨೭೬ ಮತ್ತು ೧೯ನೇ ಇತರ ಸುಪ್ರೀಂ ಕೋರ್ಟಿನ ತೀರ್ಪುಗಳಿಗೆ ವಿರೋಧವಾಗಿರುವುದೆಂದೂ, ಅದ್ದರಿಂದ ರಹದಾರಿ ಪಡೆಯದೆ ತಾವು ಹೋಟೇಲನ್ನು ನಡೆಸಿದರೂ ಅದು ಅಪರಾಧವಾಗುವುದಿಲ್ಲವೆಂದು ತಿಳಿಸಿದ್ದರು

ನ್ಯಾಯಾಧೀಶರು ತಮ್ಮ ತೀರ್ಪಿನಲ್ಲಿ, ೫೦೦ ರೂ. ಗಳ ರಹದಾರಿ ಶುಲ್ಕವನ್ನು ಗೊತ್ತುಪಡಿಸಿರುವುದು ರಾಜ್ಯಾಂಗದ ೨೭೬ನೇ ನಿಯಮಕ್ಕೆ ವಿರೋಧವೆಂದೂ, ರಹದಾರಿ ಶುಲ್ಕಕ್ಕೂ, ತೆರಿಗೆಗೂ ಮೂಲಭೂತ ವ್ಯತ್ಯಾಸವಿರುವುದೆಂದೂ, ಹಿಂದೆ ಇದ್ದ ೫೫ ರೂ ಮತ್ತು ೫೦ ರೂ ಶುಲ್ಕಗಳ ಕನಿಷ್ಠ ಮತ್ತು ತರಮಾವಧಿ ಪ್ರಮಾಣಗಳನ್ನು ಹೆಚ್ಚಿಸಲು ಪೌರಸಭೆಯವರು ಕಾರಣ ಕೊಟ್ಟಿಲ್ಲವೆಂದೂ ತಿಳಿಸಿದ್ದಾರೆ ಪೌರಸಭಾ ನೌಕರರು ಸಲ್ಲಿಸುವ ಸೇವೆಗೂ, ರಹದಾರಿ ಶುಲ್ಕಕ್ಕೂ ನ್ಯಾಯವಾದ ಸಂಬಂಧವಿರಬೇಕೆಂದೂ ಪೌರಸಭೆಯ ವೆಚ್ಚಕ್ಕೆ ಅನುಗುಣವಾಗಿ ಮಿತಿಯನ್ನು ವಿಧಿಸಬೇಕೆಂದೂ ಅವರು ಅಭಿಪ್ರಾಯಪಟ್ಟಿದ್ದಾರೆ

ಗೀತೆ ಮತ್ತು ವಚನ ಶಾಸ್ತ್ರದ ಮೇಲೆ ಉಪನ್ಯಾಸ

ನಗರದ ಅಶೋಕಾ ರಸ್ತೆಯಲ್ಲಿರುವ ಗೀತಾ ಪ್ರಚಾರಿಣೀ ಸಭೆಯಲ್ಲಿ ಗೀತಾ ಜಯಂತಿ ಅಂಗವಾಗಿ, ನಾಳೆ ಸಂಜೆ ೬॥ ಗಂಟೆಗೆ ಮಹಾರಾಜಾ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಜಿ ಮರುಳಸಿದ್ಧಯ್ಯನವರು ಗೀತೆಯೂ,ವಚನ ಶಾಸ್ತ್ರವೂ ಎಂಬ ವಿಚಾರವಾಗಿ ಉಪನ್ಯಾಸ ಮಾಡುವರು.

ಸಂಸ್ಕೃತ ಪಾಠಶಾಲೆಯಲ್ಲಿ ಪೇಜಾವರ ಮಠಾಧೀಶರ ಉಪನ್ಯಾಸ

ಉಡುಪಿ ಪೇಜಾವರ ಮಠಾಧೀಶರು ನಾಳೆ ಸಂಜೆ ೪ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ

ಬೆಂಗಳೂರಿಗೆ ದಲೈಲಾಮ ಮತ್ತು ಪಂಚೆನ್‌ಲಾಮರವರ ಆಗಮನ

ನಾಳೆ ಮೈಸೂರಿಗೆ ಭೇಟಿ

ಸ್ವಂ ಸು. ಸಂಸ್ಥೆ] ಬೆಂಗಳೂರು ೧೪

ಟಿಬೆಟ್ಟಿನ ಧಾರ್ಮಿಕ ಮತ್ತು ಅಧಿಕಾರ ಅಧಿಪತಿಗಳಾದ ದಲೈಲಾಮ ಮತ್ತು ಪಂಚೆನ್‌ಲಾಮ ಮಹನೀಯರುಗಳು ಈ ದಿನ ಪೂನಾದಿಂದ ವಿಶೇಷ ರೈಲಿನ ಎರಡು ಬೇರೆಬೇರೆ [illegible] ಗಾಡಿಗಳಲ್ಲಿ ಇಲ್ಲಿಗೆ ಆಗಮಿಸಿದರು. ಅವರನ್ನು ಕ್ರಮವಾಗಿ ವಿದ್ಯಾ ಮಂತ್ರಿ ಶ್ರೀ [illegible] ಮತ್ತು ಸ್ಥಳೀಯ ಸಂಸ್ಥೆ ಮಂತ್ರಿ ಶ್ರೀ ಆರ್. ಚನ್ನಿಗರಾಮಯ್ಯನವರು ಸ್ವಾಗತಿಸಿದರು ದಲೈಲಾಮರವರು ಶ್ರೀ [illegible] ಲೊಡನೆಯೂ ಮತ್ತು ಪಂಚೆನ್‌ಲಾಮರವರು ಶ್ರೀ ಚನ್ನಿಗರಾಮಯ್ಯನವರೊಡನೆಯೂ [illegible] ಮೋಟಾರಿನಲ್ಲಿ ತೆರಳಿದರು

[illegible] ನಿಲ್ದಾಣ ಮತ್ತು ಪೌರಸಭಾ ಕಛೇರಿ ಬಳಿ ಹಾಕಿದ್ದ ಚಪ್ಪರದಲ್ಲಿ ಇವರು ಲಾಮಗಳಿಗೆ [illegible] ಉಭಯರೂ [illegible] ವಿಜ್ಞಾನ ಶಾಲೆ ಮತ್ತು ವಿಮಾನ ಕಾರ್ಖಾನೆಗಳನ್ನು ಭೇಟಿ ಮಾಡಿದರು

ನಾಳೆ ಬೆಳಗ್ಗೆ ಅವರಿಬ್ಬರೂ ಮೈಸೂರಿಗೆ ತೆರಳುವರು ಅವರ ಜೊತೆಯಲ್ಲಿ ೧೦೦ ಮಂದಿ ಪರಿವಾರದವರು ಇರುವರು.

ಹಂಗೆರಿ ದಂಗೆಯಲ್ಲಿ ೩೦ ಸಾವಿರ ಜನರ ಮರಣ

ರಾಜ್ಯ ಸಭೆಯಲ್ಲಿ ನೆಹರೂರವರ ವಿವರಣೆ

ರಾಜ್ಯ ಸಭೆಯಲ್ಲಿ ನೆನ್ನೆ ಸಂಜೆ [illegible] ರ ಪ್ರಶ್ನೆಗೆ ನೆಹರೂರವರು ಉತ್ತರವಿತ್ತು ಹಂಗೆರಿಯಲ್ಲಿ ನಡೆಯುತ್ತಿರುವ ಘಟನೆಯು ರಾಷ್ಟ್ರೀಯ ದಂಗೆಯೆಂದೂ, ಅಧಿಕಾರ ಪಡೆದ ಗುಂಪಿನ ಹೋರಾಟವಲ್ಲವೆಂದೂ, ರಷ್ಯದ ಸೈನ್ಯಗಳು ಹಂಗೆರಿಯಲ್ಲಿ ಕಾರ್ಯಾಚರಣೆ ನಡೆಸುತ್ತಿರುವುದು ನ್ಯಾಯಬದ್ಧವಲ್ಲವೆಂದೂ ತಿಳಿಸಿದರು ಅಲ್ಲಿ ನಡೆಯುತ್ತಿರುವ ಹೋರಾಟದಲ್ಲಿ ೩೦ ಸಾವಿರ ಹಂಗೆರಿ ಜನರೂ, ೭,೦೦೦ ರಷ್ಯನರೂ ಮೃತಪಟ್ಟಿರುವುದಾಗಿ ಅವರು ಹೇಳಿದರು ರಷ್ಯವು ಹಂಗೆರಿಯೊಡನೆ ಮಾಡಿಕೊಂಡಿದ್ದ ಒಪ್ಪಂದದ ಪ್ರಕಾರವೂ ಅದರ ಸೈನ್ಯಗಳು ಹಂಗೆರಿಯಲ್ಲಿ ಕಾರ್ಯಾಚರಣೆ ನಡೆಸುವುದು ಸರಿಯಲ್ಲವೆಂದು ಅವರು ಸೂಚಿಸಿದರು.

ಕಥಾ ಕಾಲಕ್ಷೇಪ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ರಂಗಯ್ಯನವರ ಮನೆಯಲ್ಲಿ ಹನುಮಜ್ಜಯಂತಿ ಉತ್ಸವದ ಅಂಗವಾಗಿ ನಾಳೆ ಮಧ್ಯಾಹ್ನ ೪ ಗಂಟೆಗೆ ವಿ॥ ಲಿಂಗಾನಂದಸ್ವಾಮಿಗಳವರಿಂದ ಉಪನ್ಯಾಸ, ಸಂಜೆ ೫ ಗಂಟೆಗೆ ಶ್ರೀ ಮಾಯಿಗೌಡರು ಮತ್ತು ಹಿರಣ್ಣಯ್ಯನವರಿಂದ ಪುರಾಣ, ರಾತ್ರಿ ೮॥ ಗಂಟೆಗೆ ಶ್ರೀಮತಿ ಎಂ. ಕೆ ಸೀತಮ್ಮನವರಿಂದ ಸಂಗೀತ ಮತ್ತು ರಾತ್ರಿ ೧೦ ಗಂಟೆಗೆ ಭಕ್ತಾವತಿ ಶ್ರೀ ವೆಂಕಟೇಶದಾಸರಿಂದ ಹರಿಕಥೆಗಳು ಏರ್ಪಾಡಾಗಿವೆ

ವಿದ್ಯೋದಯ ಸಂಸ್ಥೆಗಳ ವಾರ್ಷಿಕೋತ್ಸವ

ಟಿ ನರಸೀಪುರ ೧೨

ಇಲ್ಲಿನ ವಿದ್ಯೋದಯ ಸಂಸ್ಥೆಗಳ ೧೨ನೇ ವಾರ್ಷಿಕೋತ್ಸವವು ಕಳೆದ ಸೋಮವಾರ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ಜರುಗಿತು ಅವರು ಭಾಷಣ ಮಾಡಿ ವಿದ್ಯಾರ್ಥಿಗಳು ಮಹಾಭಾರತ ಮತ್ತು ರಾಮಾಯಣ ಮುಂತಾದ ಪುರಾಣ ಗ್ರಂಥಗಳನ್ನು ಓದಬೇಕೆಂದು ತಿಳಿಸಿದರು ದೇಶದ ನಾನಾ ಭಾಗಗಳಲ್ಲಿ ವಿದ್ಯಾಭ್ಯಾಸದ ಏರ್ಪಾಡು ಸರಿಯಾಗಿ ಆಗಿಲ್ಲವೆಂದೂ, ಅಂತಹ ಕಡೆಗಳಲ್ಲಿ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಲು ಧನಿಕರು ಮುಂದೆ ಬರಬೇಕೆಂದೂ ಅವರು ಸೂಚಿಸಿದರು. ವಿದ್ಯೋದಯ ಸಂಸ್ಥೆಯವರು ವಿದ್ಯಾಭಿವೃದ್ಧಿಗಾಗಿ ನಡೆಸುತ್ತಿರುವ ಕೆಲಸವನ್ನು ಪ್ರಶಂಸಿಸಿದರು.

ಮಾರನೇ ದಿನ ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ವಿದ್ಯೋದಯ ಸಂಸ್ಥೆಗಳ ವಿದ್ಯಾರ್ಥಿಗಳ ಮಾತಾಪಿತೃಗಳು ಮತ್ತು ಪೋಷಕರ ಸಭೆಯು ನಡೆಯಿತು. ಶ್ರೀಗಳಾದ ರುಮಾಲೆ ಚನ್ನಬಸವಯ್ಯ ಮತ್ತು ಟಿ ಎಸ್. ಸುಬ್ಬಣ್ಣನವರು ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ತಮ್ಮ ಅಧಿಕಾರಾವಧಿಯಲ್ಲಿ ನಡೆಸಿದ ವಿದ್ಯಾದಾನ ಭೂದಾನ ಚಳುವಳಿಯು ಈಗ ಆಸಕ್ತಿಯಿಂದ ನಡೆಯದಿರುವುದಕ್ಕೆ ವಿಷಾದಿಸಿದರು ಮುಂಬರುವ ಚುನಾವಣೆಗಳಲ್ಲಿ ನಿಸ್ವಾರ್ಥತೆಯಿಂದ ದುಡಿಯುವವರನ್ನು ಮಹಾಜನರು ಆರಿಸಬೇಕೆಂದು ತಿಳಿಸಿದರು. ಸಾರ್ವಜನಿಕ ಸೇವೆಯಲ್ಲಿ ತೊಡಗಿರುವ ಶ್ರೀಗಳಾದ ಎಂ ಸಿ ಶಿವಾನಂದಶರ್ಮ, ಟಿ ಎಸ್. ಸುಬ್ಬಣ್ಣ ಮತ್ತು ರುಮಾಲೆ ಚನ್ನಬಸವಯ್ಯನವರನ್ನು ಅಭಿನಂದಿಸಿದರು

ಉಭಯ ಸಮಾರಂಭಗಳಲ್ಲೂ ವಿದ್ಯೋದಯ ಸಂಸ್ಥೆಗಳ ವ್ಯವಸ್ಥಾಪಕರಾದ ಶ್ರೀ ಎಂ ಸಿ ಶಿವಾನಂದಶರ್ಮರವರು ಸ್ವಾಗತ ಭಾಷಣ ಮಾಡಿದರು

ಅರಸೀಕೆರೆ ಬಳಿ ಕೆರೆಯಲ್ಲಿ ಆರು ಶವಗಳ ಪತ್ತೆ

ಅರಸೀಕೆರೆಯ ಬಳಿ ಒಂದು ಕೆರೆಯಲ್ಲಿ ಕಳೆದ ೬ನೇ ತಾ|| ಒಬ್ಬ ಗರ್ಭಿಣಿ ಹೆಂಗಸು, ಮೂರು ಗಂಡು ಮತ್ತು ಎರಡು ಹೆಣ್ಣು ಮಕ್ಕಳ ದೇಹಗಳು ಪತ್ತೆಯಾದುವು ಆಕೆಯು ಬಾಣಾವಾರದ ಚಿಲ್ಲರೆ ಅಂಗಡಿ ನರಸಿಂಹಶೆಟ್ಟಿ ಎಂಬುವರ ಪತ್ನಿ ಗೃಹಕೃತ್ಯದ ವಿಚಾರದಲ್ಲಿ ಮನಸ್ತಾಪವುಂಟಾಗಿ ಆಕೆಯು ಮಕ್ಕಳೊಡನೆ ಆತ್ಮಹತ್ಯೆಗೆ ಈಡಾದಳು ನಿರ್ಧರಿಸಿದರು.

ನೂತನ ಪದವೀಧರರಿಗೆ ಸತ್ಕಾರ

ಯುವರಾಜಾ ಕಾಲೇಜಿನ ಈ ವರ್ಷದ ಪದವೀಧರರನ್ನು ಸತ್ಕರಿಸಲು ಹಳೇ ವಿದ್ಯಾರ್ಥಿಗಳ ಸಂಘದವರು ಕಳೆದ ಸೋಮವಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಕಾಲೇಜಿನ ಲಲಿತ ಕಲಾ ಸಂಘದವರು ಸಂಗೀತ, ನೃತ್ಯ ಮತ್ತು ನಾಟಕಗಳನ್ನು ಏರ್ಪಡಿಸಿದ್ದರು. ಸ್ಥಳೀಯ ಕಾಂಚಿಟಿಗರ ಸಂಘದವರು ಶ್ರೀ ಚಾಮುಂಡೇಶ್ವರಿ ಭವನದಲ್ಲಿ ತಮ್ಮ ಸಂಘದ ಪದವೀಧರರಿಗೆ ೧೧ನೇ ತಾ|| ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ಸತ್ಕಾರ ಸಮಾರಂಭವನ್ನು ಏರ್ಪಡಿಸಿದ್ದರು

ಸಿನಿಮಾ ಸ್ಟುಡಿಯೋವಿನಲ್ಲಿ ಬ್ಯಾಟರಿಗಳ ಕಳುವು

ರಾಜಧಾನಿಯ ಸಂಸ್ಕೃತಿಪುರದಲ್ಲಿರುವ ನವಜ್ಯೋತಿ ಸ್ಟುಡಿಯೋವಿನಲ್ಲಿ ೯ ಬ್ಯಾಟರಿಗಳನ್ನು ಕಳವು ಮಾಡಲಾಗಿದೆಯೆಂದೂ, ಆ [illegible] ಕೃಷ್ಣಪ್ಪನೆಂದೂ ಗೊತ್ತಾಗಿದೆ ಲಕ್ಷ್ಮೀಪುರದ ಪೊಲೀಸರು [illegible] ಬಂಧಿಸಿ ತನಿಖೆ ನಡೆಸುತ್ತಿರುವರು

ಬರುವ ವರ್ಷ ೯೦೦ ಕೋಟಿ ರೂ. ಯೋಜನೆಗಾಗಿ ಹೆಚ್ಚಿನ ತೆರಿಗೆ

೧೯೫೭–೫೮ನೇ ಸಾಲಿನಲ್ಲಿ ದ್ವಿತೀಯ ಯೋಜನೆ ಅಂಗವಾಗಿ ಕೈಗೊಳ್ಳಲಾಗುವ ೯೦೦ ಕೋಟಿ ರೂ ಕಾರ್ಯಕ್ರಮವನ್ನು ಪೂರೈಸಲು ಹೆಚ್ಚಿನ ತೆರಿಗೆಗಳ[illegible] ಮತ್ತು ಪ್ರಾಂತ ಸರ್ಕಾರಗಳು ವಿಧಿಸಬೇಕೆಂದು ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯು ಸೂಚಿಸಿರುತ್ತದೆ.

ನಾದಸ್ವರ ವಿದ್ವಾಂಸ ರಾಜರತ್ನಂರವರ ನಿಧನ

ದಕ್ಷಿಣ ಭಾರತದಲ್ಲಿ ನಾದಸ್ವರ ವಿದ್ವಾಂಸರೆಂದು ಪ್ರಖ್ಯಾತಿ ಹೊಂದಿರುವ ತಿರುವಾಡುತುರೈ ಟಿ. ಎನ್. ರಾಜರತ್ನಂರವರು ಮೊನ್ನೆ ಬೆಳಗ್ಗೆ ಮದ್ರಾಸಿನಲ್ಲಿ ನಿಧನ ಹೊಂದಿದರು ಅವರಿಗೆ ೫೭ ವಯಸ್ಸು ೩ ವರ್ಷಗಳ ಹಿಂದೆ ಅವರಿಗೆ ರಾಷ್ಟ್ರಾಧ್ಯಕ್ಷರು ಸಂಗೀತದ ಪ್ರಶಸ್ತಿಯನ್ನು ನೀಡಿದ್ದರು.

ದೀಪವಿಲ್ಲದೆ ಕಾರು ನಡೆಸಿದ ಆಪಾದನೆಯಿಂದ ಖುಲಾಸೆ

ನಗರದ ಅಶೋಕಾ ರಸ್ತೆ ಬಳಿ ಇರುವ ಕಾರ್ಲ್‌ಟನ್ ಹೋಟೇಲಿನ ಮಾಲೀಕರಾದ ಶ್ರೀ. ಎಸ್ ಜೆ ವೈ ಗೋಪಾಲರಾವರು ಒಂದು ದೀಪವಿಲ್ಲದ ಕಾರನ್ನು ನಡೆಸುತ್ತಿದ್ದರೆಂದು ಲಷ್ಕರ್ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಪ್ರಥಮ ನಗರ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು ರುಜುವಾತು ಸಾಲದೆಂದು ಗೋಪಾಲರಾವರನ್ನು ಖುಲಾಸೆ ಮಾಡಿರುತ್ತಾರೆ

ಕುರುಬರ ವಿದ್ಯಾರ್ಥಿ ಸಂಘದ ಆರಂಭೋತ್ಸವ

ಕಳೆದ ಭಾನುವಾರ ನಗರದ ಕುರುಬರ ವಿದ್ಯಾರ್ಥಿ ಸಂಘದ ಆರಂಭೋತ್ಸವವನ್ನು ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ಮಹಾರಾಜಾ ಕಾಲೇಜಿನಲ್ಲಿ ನೆರವೇರಿಸಿದರು. ಸಂಘದ ಅಧ್ಯಕ್ಷರಾದ ಶ್ರೀ ಕೆ ಸಿದ್ದಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಮಂತ್ರಿಗಳು ವಿದ್ಯಾರ್ಥಿ ವೃಂದಕ್ಕೆ ಹಿತವಚನಗಳನ್ನು ನೀಡಿದರು ಮಾರನೇ ದಿನ ಸಂಘದ ಆಶ್ರಯದಲ್ಲಿ ಈ ವರ್ಷ ಪದವಿಗಳನ್ನು ಪಡೆದ ಕುರುಬರ ವಿದ್ಯಾರ್ಥಿಗಳಿಗೆ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು.

ಬೆಂಗಳೂರಿಗೆ ಎ ಐ.ಸಿ ಸಿ ಪ್ರತಿನಿಧಿಗಳು

ಮಹಾ ಚುನಾವಣೆ ಸಂಬಂಧದಲ್ಲಿ ಕಾಂಗ್ರೆಸ್ ಉಮೇದುವಾರರ ಆಯ್ಕೆಯ ಪರಿಶೀಲನೆಗಾಗಿ ಇದೇ ೧೮ನೇ ತಾರೀಖು ಎ ಐ ಸಿ.ಸಿ. ಯ ಪ್ರತಿನಿಧಿಗಳಾದ ಶ್ರೀಮನ್ನಾರಾಯಣ, ಶ್ರೀಮತಿ ಮರಕತಂ ಚಂದ್ರಶೇಖರ್ ಮತ್ತು ದೇವೇಶ್ವರ ಶರ್ಮರವರು ಬೆಂಗಳೂರಿಗೆ ಆಗಮಿಸುವರು. ೨೪ನೇ ತಾ|| ವರೆಗೆ ಅವರು ಅಲ್ಲಿದ್ದು ಉಮೇದುವಾರಿಕೆ ಅರ್ಜಿಗಳನ್ನು ಪರಿಶೀಲಿಸಿ ಉಮೇದುವಾರರನ್ನು ವಿಚಾರಿಸುವರು.

Kindly Elect
NO. 27
S. N. SUBBAKRISHNAN,
B. A, B. Com
As a DIRECTOR
Of G. C. S.

ಈಜಿಪ್ಟಿನವರಿಂದ ಬ್ರಿಟಿಷ್ ಅಧಿಕಾರಿಯ ಅಪಹಾರ

ಈಜಿಪ್ಟಿನವರು ಮೊನ್ನೆ ಪೋರ್ಟ್‌ಸೈಯದ್ದಿನಲ್ಲಿ ಬ್ರಿಟಿಷ್ ಮಿಲಿಟರಿ ಅಧಿಕಾರಿಯೊಬ್ಬನನ್ನು ಅಪಹರಿಸಿ ಒಂದು ಮೋಟಾರಿನಲ್ಲಿ ಸಾಗಿಸಿರುವುದಾಗಿಯೂ, ಅವರನ್ನು ಶೋಧಿಸಲು ಪ್ರಯತ್ನಗಳಾಗುತ್ತಿವೆಯೆಂದೂ ಗೊತ್ತಾಗಿದೆ ಈ ಸಂಬಂಧವಾಗಿ ಈಜಿಪ್ಟಿನ ೭ ಸಿಪಾಯಿಗಳನ್ನು ಬಂಧಿಸಲಾಗಿದೆ.

ಉತ್ತರ ಐರ್ಲೆಂಡಿನಲ್ಲಿ ಗಲಭೆ

ಉತ್ತರ ಐರ್ಲೆಂಡಿನಲ್ಲಿ ರಿಪಬ್ಲಿಕ್ ಮನೋಭಾವದ ತೀವ್ರವಾದಿಗಳು ಮೊನ್ನೆ ಅನೇಕ ಕಡೆ ಧಾಳಿ ನಡೆಸಿ ಲಂಡನ್‌ಡೆರಿ ನಗರದಲ್ಲಿರುವ ಬಿ ಬಿ ಸಿ ಪುನಃಪ್ರಸಾರ ಕೇಂದ್ರವನ್ನು ನಾಶಪಡಿಸಿರುತ್ತಾರೆ ಆರ್ಮಾಗ್ ಎಂಬಲ್ಲಿ ಸೈನ್ಯಗಳ ಶಿಬಿರಗಳನ್ನು ವಶಪಡಿಸಿಕೊಳ್ಳಲು ಅವರು ಪ್ರಯತ್ನಿಸಿ ವಿಫಲರಾಗಿರುವರು. ಉತ್ತರ ಐರ್ಲೆಂಡಿನ ಪೊಲೀಸರೆಲ್ಲರಿಗೂ ಎಚ್ಚರಿಕೆ ಕೊಡಲಾಗಿದೆ.

ಚುಂಚನಕಟ್ಟೆ ಜಾತ್ರೆಗೆ ಹೋಗುವವರಿಗೆ ಕಾಲರಾ ಇನಾಕ್ಯುಲೇಷನ್

ಕೃಷ್ಣರಾಜನಗರ ತಾಲ್ಲೂಕು ಚುಂಚನಕಟ್ಟೆಯಲ್ಲಿ ಬರುವ ತಿಂಗಳು ೮ನೇ ತಾರೀಖಿನಿಂದ ಜಾತ್ರೆಯು ನಡೆಯುವುದು. ಆ ಸಮಯದಲ್ಲಿ ಕಾಲರಾ ವ್ಯಾಧಿಯು ಹರಡಬಹುದಾದ ಸಂಭವವನ್ನು ತಡೆಗಟ್ಟಲು ಜಿಲ್ಲಾ ಆರೋಗ್ಯ ಇಲಾಖೆಯವರು ಕ್ರಮ ಕೈಗೊಂಡು, ಯಾತ್ರಾರ್ಥಿಗಳು ಉತ್ಸವಕ್ಕೆ ಹೋಗುವ ಎರಡು ವಾರ ಮುಂಚೆ ಕಾಲರಾ ನಿರೋಧದ ಇನಾಕ್ಯುಲೇಷನ್ ಮಾಡಿಸಿಕೊಂಡ ಬಗ್ಗೆ ಸರ್ಟಿಫಿಕೇಟನ್ನು ಹೊಂದಿರಬೇಕೆಂದು ಸೂಚಿಸಿರುತ್ತಾರೆ.

ಮೈಸೂರು ಸಿಟಿ ಮುನಿಸಿಪಾಲಿಟಿ

ತಾ|| 8.12.1956

ಅಬ್‌ಸ್ಟ್ರಾಕ್ಟ್ ಟೆಂಡರ್ ನೋಟಿಫಿಕೇಷನ್

ಮೈಸೂರು ಸಿಟಿ ಬಸ್ ಸ್ಟ್ಯಾಂಡಿನಲ್ಲಿರುವ ಮುನಿಸಿಪಲ್ ಕಟ್ಟಡದಲ್ಲಿ ಕಟ್ಟಡವನ್ನು ಸ್ವಾಧೀನ ಕೊಡುವ ತಾರೀಖಿನಿಂದ ಮೂರು ವರ್ಷ ಕಾಲದವರೆವಿಗೆ ಮಾತ್ರ ಶ್ರೇಷ್ಠ ತರಗತಿ ಶಾಖಾಹಾರಿಗಳ ಹೋಟೇಲನ್ನೂ ಮತ್ತು ಹಣ್ಣಿನ ಅಂಗಡಿ ನಡೆಸುವ ಹಕ್ಕನ್ನು ಪಡೆಯಲು ಹಾಲಿ ಮೈಸೂರು ಸಿಟಿ ಹೋಟೇಲ್ ಲೈಸೆನ್ಸ್ ಪಡೆದಿರತಕ್ಕವರುಗಳಿಂದ ಸೀಲಾದ ಟೆಂಡರನ್ನು ಕರೆಯಲಾಗಿದೆ. ಬಾಬನ್ನು ಪಡೆಯಲು ಇಚ್ಛೆ ಉಳ್ಳವರು ಮಾಹೆಯಾನ ಕೊಡುವ ಬಾಡಿಗೆಯನ್ನು ನಮೂದಿಸಿ ಮುನಿಸಿಪಲ್ ಖಜಾನೆಗೆ 250 ರೂಪಾಯಿ ಠೇವಣಿ ಬಗ್ಗೆ ಜಮಾ ಮಾಡಿದ ಚಲನ್ ಸಮೇತ ಸೀಲಾದ ಕವರಿನಲ್ಲಿ ಟೆಂಡರನ್ನು ಮುನಿಸಿಪಲ್ ಕಮಿಷನರವರ ಆಫೀಸಿನಲ್ಲಿ ತಾರೀಖು 19.12.56 ನೇ ಮಧ್ಯಾಹ್ನ 4 ಘಂಟೆಯೊಳಗಾಗಿ ಹಾಜರ್ಪಡಿಸಬಹುದು ಕಾಲಾತೀತವಾದ ಟೆಂಡರುಗಳನ್ನು ಸ್ವೀಕರಿಸುವುದಿಲ್ಲ. ವಿವರಗಳನ್ನು ಆಫೀಸು ನಡೆಯುವ ವೇಳೆಯಲ್ಲಿ ತಿಳಿಯಬಹುದು.

(ರುಜು) ಎಸ್. ಪಿ. [illegible].
ಇನ್‌ಚಾರ್ಜ್ ಮುನಿಸಿಪಲ್ ಕಮಿಷನರ್

ಬರುವ ವರ್ಷ ಸಿಂಹಳದ ನೆಲೆಗಳಿಂದ ಬ್ರಿಟಿಷರು ವಾಪ

ಬರುವ ವರ್ಷದಲ್ಲಿ ಸಿಂಹಳದಲ್ಲಿರುವ ಬ್ರಿ
ಷ್ ನೆಲೆಗಳನ್ನು ಸಿಂಹಳ ಸರ್ಕಾರಕ್ಕೆ ಒಪ್ಪಿ
ಗುತ್ತದೆಂದು ಸಿಂಹಳದ ಪ್ರಧಾನಿ ಭಂಡಾ
ಯಕೆಯವರು ತಿಳಿಸಿರುತ್ತಾರೆ.

ವಿಶ್ವಸಂಸ್ಥೆಯಲ್ಲಿ ಜಪಾನಿಗೆ ಸದಸ್ಯತ್ವ

ಜಪಾನನ್ನು ಭದ್ರತಾ ಸಮಿತಿಯು ವಿಶ್ವ
ಸ್ಥೆಯ ಸದಸ್ಯ ರಾಷ್ಟ್ರವಾಗಿ ತೆಗೆದುಕೊಂ
ಅದು ೮೦ನೇ ಸದಸ್ಯ ರಾಷ್ಟ್ರವಾಗುವುದು.
ಹೊರ ಮಂಗೋಲಿಯಕ್ಕೆ ಸದಸ್ಯತ್ವವನ್ನು
ಲು ಸಾಕಷ್ಟು ಓಟುಗಳು ದೊರೆಯಲಿಲ್ಲ.

[illegible]

[illegible] ಶ್ರೀ ಬಿ. [illegible] ಬರೆದಿರುತ್ತಾರೆ.

ಪಿ. ಕೆಂಪಾಚಾರ್
ಡೋರ್ ನಂ. ೧೧೬, [illegible]
ಕೆ. ಆರ್. ಮೊಹಲ್ಲಾ, ಮೈಸೂರು
ನಾವು ಎಂಗ್ರೇವಿಂಗ್ ಮತ್ತು [illegible]
[illegible]

ಮೈಸೂರಿನಲ್ಲಿ ಪ್ರತಿ ತಿಂಗಳ
17ನೇ ತಾರೀಖು
ವಿಶ್ವವಿಖ್ಯಾತವಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಚಿಕ್ಕಗಡಿಯಾರ ಹತ್ತಿರವಿರುವ
[illegible]
ಭೇಟಿ ಮಾಡಬಹುದು : ಫೋನ್ ನಂ.
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ರವರೆಗೆ
ಮಧ್ಯಾಹ್ನ 4 ರಿಂದ 7-30
[illegible]
ನವರತ್ನ—ಕಲ್ಪ
[illegible]
NAVRATNA KALPA PHARMA
JULLUNDUR CITY (Ind

Edited, Printed and Publis
A. R. Nagarajan at Sadhvi
[illegible] Road, Mysore

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ. ಮೈಸೂರು.

ನ್ಯೂ ಚಾಮುಂಡೇಶ್ವರಿ ಕೆಫೆ ★ ಭೋಜನ, ವಸತಿ ಮತ್ತು ಫಲಾಹಾರ ಮಂದಿರ,
[illegible] ರಸ್ತೆ, ಮೈಸೂರು.
ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರವು, ಮೈಸೂರು ಮತ್ತು ಹೊರನಾಡು [illegible]
[illegible] ಒಳ್ಳೆ ಗಾಳಿ ಬೆಳಕುಗಳುಳ್ಳ, ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿ. . ಸಿ. ಬಿ. ಎಂ. [illegible], ಪ್ರೊಪ್ರೈಟರ್ : [ಫೋನ್ ನಂ.

[illegible] ನಂ. 793

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : SATURDAY 15—12—1956 ಮೈಸೂರು : ಶನಿವಾರ ೧೫—೧೨—೧೯೫೬ [ಸಂಚಿಕೆ : ೨೭೦

ಇನ್ನು ಒಂದು ತಿಂಗಳಲ್ಲಿ ಎನ್.ಜಿ.ಓ ಗಳಿಗೆ ಹೆಚ್ಚು ಸಂಬಳ

ನಗರದ ಪೌರಸಭಾಧ್ಯಕ್ಷ ಉಪಾಧ್ಯಕ್ಷ ಚುನಾವಣೆ

ಕಾಂಗ್ರೆಸ್ ಮತ್ತು ಪ್ರಜಾಸಂಯುಕ್ತ ರಂಗದ ಉಮೇದುವಾರರು

ಮೈಸೂರು ೧೫

ಇಲ್ಲಿನ ಪೌರಸಭೆಯ, ಬರುವ ಸಾಲಿನ ಅಧ್ಯಕ್ಷ ಉಪಾಧ್ಯಕ್ಷ ಚುನಾವಣೆ ಸಂಬಂಧವಾಗಿ ಈ ದಿನ ನಾಮಪತ್ರಗಳನ್ನು ಸ್ವೀಕರಿಸಲಾಯಿತು. ಕಾಂಗ್ರೆಸ್ಸಿನ ಪರವಾಗಿ ಶ್ರೀ ಎಸ್. ಸಂಜೀವಯ್ಯನವರು ಅಧ್ಯಕ್ಷತೆಗೂ, ಶ್ರೀ ಜಿ. ಎಸ್. ರಾಮಕೃಷ್ಣಯ್ಯನವರು ಉಪಾಧ್ಯಕ್ಷತೆಗೂ ಸ್ಪರ್ಧಿಸಿರುವರು

ಪ್ರಜಾ ಸಂಯುಕ್ತ ರಂಗದ ಪರವಾಗಿ ಆ ಸ್ಥಾನಗಳಿಗೆ ಕ್ರಮವಾಗಿ ಶ್ರೀಗಳಾದ ಶ್ರೀಕಂಠಶರ್ಮ ಮತ್ತು ಹೆಚ್. ಎಲ್. ಮುದ್ದಯ್ಯನವರ ಹೆಸರುಗಳನ್ನು ಸೂಚಿಸಲಾಗಿದೆ

ಮಾರ್ಕೆಟ್ ಹಿಂಭಾಗದಲ್ಲಿ ಪರ್ಗೊಲ್ ನಿರ್ಮಾಣಕ್ಕೆ ವಿರೋಧ

ನಗರದ ದೇವರಾಜ ಮಾರ್ಕೆಟ್ಟಿನ ಸುಮಾರು ೫೦೦ ಮಂದಿ ವರ್ತಕರು ಪೌರಸಭಾಧ್ಯಕ್ಷರಿಗೆ ಮನವಿಯೊಂದನ್ನು ಕಳುಹಿಸಿ, ಮಾರ್ಕೆಟ್ ಹಿಂಭಾಗದ ಆನೆಸಾರೋಟು ರಸ್ತೆಗೆ ಸೇರಿದಂತೆ ಒಂದು ಪರ್ಗೊಲನ್ನು ನಿರ್ಮಿಸುವ ಯೋಜನೆಯನ್ನು ಕೈ ಬಿಡುವಂತೆ ತಿಳಿಸಿರುತ್ತಾರೆ. ಈ ಬಗ್ಗೆ ಪುರಸಭೆಯ ಆಡಳಿತ ಸಮಿತಿಯವರ ಶಿಫಾರಸನ್ನು ಜಾರಿಗೆ ತಂದರೆ ಗಾಡಿಗಳು ಮತ್ತು ಲಾರಿಗಳು ಸಾಮಾನುಗಳನ್ನು ಎತ್ತಿ ಇಳಿಸಲು ತೊಂದರೆಯಾಗುವುದೆಂದು ಸೂಚಿಸಿದ್ದಾರೆ. ಮಾರ್ಕೆಟ್ ವರ್ತಕರ ಸಂಘದವರೂ ಸಹ ಈ ಬಗ್ಗೆ ಹೇಳಿಕೆಯೊಂದನ್ನು ಕಳುಹಿಸುವರೆಂದೂ ಸೂಚಿಸಲಾಗಿದೆ. ಮನವಿಯ ಪ್ರತಿಯೊಂದನ್ನು ಮುಖ್ಯ ಮಂತ್ರಿಯವರಿಗೆ ಕಳುಹಲಾಗಿದೆ.

ಹನುಮಜ್ಜಯಂತಿ ರಜತೋತ್ಸವ ಕಾರ್ಯಕ್ರಮ

೧೮ ವಿ. ದೇವೇಂದ್ರಪ್ಪನವರ ಶ್ರೀ ಮಾರುತಿ ಮಂದಿರದಲ್ಲಿ ಹನುಮಜ್ಜಯಂತಿ ರಜತೋತ್ಸವದ ಅಂಗವಾಗಿ ನಾಳೆ ಬೆಳಗ್ಗೆ ಬೆಂಗಳೂರಿನ ವಿ|| [illegible]ಯ ಮತ್ತು ಭಾಗ್ಯರವರ ಹಾಡುಗಾರಿಕೆ ಮತ್ತು ವಿ|| ವೆಂಕಟರಾಯರಿಂದ ವೀಣೆಯೂ, ಸಂಜೆ ಶ್ರೀ ಎಂ. ರಾಮಾನುಜಾಚಾರ್ಯರಿಂದ ಕರ್ನಾಟಕದ ಸಂತರು ಎಂಬ ಬಗ್ಗೆ ಉಪನ್ಯಾಸ ಮತ್ತು [illegible] ಎ. ಕೆ. ಸುಬ್ಬರಾಯರ ಕೊಳಲು ಮತ್ತು ಮಾಸ್ಟರ್ ಜ್ಞಾನೇಂದ್ರನಾಥ, ಕುಮಾರಿ ಭಾರತವಾಣಿ ಮುಂತಾದವರ ನೃತ್ಯವೂ ನಡೆಯುವುವು.

ಮೈಸೂರು ಸರ್ಕಾರದ ವಿರುದ್ಧ ಮಾಜಿ ಸರ್ಕಾರಿ ವಿಮಾ ನೌಕರರ ರಿಟ್ ಅರ್ಜಿ

ಸರ್ಕಾರಿ ನೌಕರರುಗಳಿಗೆ ಒದಗಿಸಿದ [illegible] ೧೯೫೧ರ ಸಂಬಳದ ಹಂಗಾಮಿ ಪರಿಹಾರವನ್ನು ವಿಮಾ ಕಾರ್ಪೋರೇಷನ್ನಿಗೆ ವರ್ಗಾಯಿಸಲ್ಪಟ್ಟ ಹಿಂದಿನ ಮೈಸೂರು ಸರ್ಕಾರಿ ವಿಮಾ ನೌಕರರಿಗೆ ಕೊಡಲಿಲ್ಲವೆಂಬ ಕಾರಣ, ನೌಕರರ ಸಂಘದವರು ಹೈಕೋರ್ಟಿನಲ್ಲಿ ರಿಟ್ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಸಂಸ್ಥಾನಕ್ಕೆ ಟಿಬೆಟ್ಟಿನ ದಲೈಲಾಮ, ಪಂಚೆನ್ ಲಾಮರವರ ಭೇಟಿ

ಬೆಂಗಳೂರಿನ ರೈಲ್ವೆ ನಿಲ್ದಾಣದಲ್ಲಿ ಸಚಿವರು ಸ್ವಾಗತಿಸುತ್ತಿರುವ ದೃಶ್ಯಗಳು

ತಾಲ್ಲೂಕು ಕಛೇರಿಯಲ್ಲಿ ಅಕ್ಕಿ ಕಳುವಿಗಾಗಿ ದಸ್ತಗಿರಿ

ಮೈಸೂರು ೧೫

ಇಲ್ಲಿನ ತಾಲ್ಲೂಕು ಕಛೇರಿಯಲ್ಲಿ ಅಕ್ಕಿಯನ್ನು ಕದಿಯುತ್ತಿದ್ದ ಚನ್ನಯ್ಯ ಎಂಬ ಸರ್ಕಾರಿ ಜವಾನನನ್ನು ನೆನ್ನೆ ನಜರ್‌ಬಾದು ಪೋಲೀಸರು ಬಂಧಿಸಿದರು. ಅವನು ಇನಾಂಗಳ ಸ್ಪೆಷಲ್ ಅಮಲ್ದಾರರ ಸೇವಕನೆಂದು ಹೇಳಲಾಗಿದೆ. ಅವನು ಕಿಟಕಿ ಗಾಜನ್ನು ಒಡೆದು ಒಳಗಿನಿಂದ ಬಾಗಿಲನ್ನು ತೆಗೆದು ೧೭ ಸೇರು ಅಕ್ಕಿಯನ್ನು ಅಪಹರಿಸುತ್ತಿದ್ದನೆಂದು ಹೇಳಲಾಗಿದೆ.

ಕಾಲೇಜು ಪಾರ್ಲಿಮೆಂಟಿನ ಉದ್ಘಾಟನೆ

ಮಹಾರಾಜಾ ಕಾಲೇಜಿನ ಪಾರ್ಲಿಮೆಂಟರಿ ಕ್ಲಬ್ಬಿನ ಆಶ್ರಯದಲ್ಲಿ ನಾಳೆ ಬೆಳಗ್ಗೆ ೮॥ ಗಂಟೆಗೆ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಕಾಲೇಜು ಪಾರ್ಲಿಮೆಂಟಿನ ಆರಂಭೋತ್ಸವವನ್ನು ನೆರವೇರಿಸುವರು. ಸಹಕಾರ ಮಂತ್ರಿ ಶ್ರೀ ಎ. ಭೀಮಪ್ಪನಾಯಕರು ಅಧ್ಯಕ್ಷತೆ ವಹಿಸುವರು. ಮದ್ರಾಸು ಮುಖ್ಯ ಮಂತ್ರಿ ಶ್ರೀ ಕೆ. ಕಾಮರಾಜ ನಾಡಾರ್‌ರವರು ಮುಖ್ಯ ಅತಿಥಿಗಳಾಗಿ ಬರುವರು.

ಕಥಾ ಕಾಲಕ್ಷೇಪ

ಕೃಷ್ಣರಾಜ ಮೊಹಲ್ಲಾ ಮಾಧವಾಚಾರ್ ರಸ್ತೆಯಲ್ಲಿರುವ ಶ್ರೀ ಸಾವಂದಪ್ಪನವರ ಅಂಗಡಿ ಮುಂಭಾಗದಲ್ಲಿ ಈ ರಾತ್ರಿ ೮॥ ಗಂಟೆಗೆ ವಿ|| ಕುಂತೂರು ಸಿದ್ಧಪ್ಪಶಾಸ್ತ್ರಿಗಳವರು ಶಿವಜಲಂಧರ ಎಂಬ ಶಿವಕಥೆಯನ್ನು ಮಾಡುವರು

ಚಿತ್ರದುರ್ಗ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಚಿತ್ರದುರ್ಗದ ಇಂಟರ್ ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರ ಅಭಾವದ ಕಾರಣವಾಗಿ ನೆನ್ನೆ ಕಾಲೇಜಿನ ೫೫೦ ಮಂದಿ ವಿದ್ಯಾರ್ಥಿಗಳು ತರಗತಿಗಳಿಗೆ ಹೋಗಲಿಲ್ಲ. ಅವರುಗಳು ಮೆರವಣಿಗೆ ನಡೆಸಿ, ಹೆಚ್ಚಿನ ಇಂಗ್ಲಿಷ್ ಅಧ್ಯಾಪಕರುಗಳನ್ನು ನೇಮಿಸುವವರೆಗೆ ಮುಷ್ಕರವನ್ನು ಮುಂದುವರಿಸಬೇಕೆಂದು ನಿರ್ಧರಿಸಿದರು.

ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನ

ಕಾಮರಾಜ ನಾಡಾರರಿಂದ ಆರಂಭ ಭಾಷಣ

ಮೈಸೂರು ೧೫

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನವು ಈ ದಿನ ಬೆಳಗ್ಗೆ ಇಲ್ಲಿನ ಪುರಭವನದಲ್ಲಿ ನಡೆಯಿತು. ಮದ್ರಾಸು ಮುಖ್ಯ ಮಂತ್ರಿ ಶ್ರೀ ಕೆ. ಕಾಮರಾಜ ನಾಡಾರ್‌ರವರು ಅದನ್ನು ಆರಂಭಗೊಳಿಸಿದರು. ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥನೆಯಾದನಂತರ ಶ್ರೀ ಕೆ. ಪುಟ್ಟಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಶ್ರೀ ಕಾಮರಾಜ ನಾಡಾರರು ತಮ್ಮ ಭಾಷಣದಲ್ಲಿ ಪ್ರಜಾಪ್ರಭುತ್ವದಲ್ಲಿ ಪಕ್ಷಗಳ ಅಗತ್ಯವನ್ನು ವಿವರಿಸಿ, [illegible] ವಿರೋಧ ಪಕ್ಷಗಳಿದ್ದರೆ ಆಡಳಿತ ಪಕ್ಷದ ತಪ್ಪುಗಳನ್ನು ತಿದ್ದಿಕೊಳ್ಳಲು ಅವಕಾಶವಾಗುವುದೆಂದು ನುಡಿದು [illegible] ಫಲಗೊಳಿಸಲು ಸಹಕಾರ ನೀಡಬೇಕೆಂದು ತಿಳಿಸಿದರು.

ಸಮ್ಮೇಳನದ ಸಂಬಂಧವಾಗಿ ಬೆಳಗ್ಗೆ ಶ್ರೀ ಚನ್ನಯ್ಯನವರು ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣ ಮಾಡಿದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕೊಳಲು. ೭-೧೫ ರಕ್ಷ ಜನಾರ್ಧನ್—ದೇವರ ನಾಮ. ೭-೩೦ [illegible]. ೮-೧೫ ಕನ್ನಡ ಗೀತೆಗಳು. ೮-೩೦ ಟಿ. ಎಸ್. ರಾಮಚಂದ್ರನ್-ಸಂಗೀತ ೯-೩೦ ಬಾಲ ಜಗತ್. ಮಧ್ಯಾಹ್ನ ೧೨ ಮತ್ತು ೨-೧೫ ಟಿ. ನಾಗರತ್ನ-ಸಂಗೀತ. ೧೨-೩೦ ವಾದ್ಯ ವೃಂದ. ೧ ನಿಮ್ಮ ಮೆಚ್ಚಿನ ಗೀತೆಗಳು ೧-೫೦ ಕೆ. ವಿ. ಸಂಕರ್. [illegible] ೫-೫ ಪಟೇಲರ ಭಾಷಣಗಳು. ೬-೨ ವಿರಾಮ ಸಂಗೀತ ೬-೨೦ ರೆಕಾರ್ಡು. ೬-೩೦ ಹಕ್ಕಿನೋಟ ೮ ಮೂರು ಮನೆಗಳು—ಕನ್ನಡ ನಾಟಕ ೮.೩೦ ಸಂಗೀತ ೯-೧೫ ಸಂಗೀತ. ೧೦ ಆರ್. ವಿಶ್ವೇಶ್ವರನ್ ಗಾಯನ.

ಇನ್ನು ಒಂದು ತಿಂಗಳಲ್ಲಿ ಎನ್.ಜಿ.ಓ ಗಳಿಗೆ ಹೆಚ್ಚು ಸಂಬಳ

ಮುಖ್ಯ ಮಂತ್ರಿಗಳ ಸೂಚನೆ

ಮೈಸೂರು ೧೫

ಮೈಸೂರು ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರಿಗೆ ಇನ್ನು ಒಂದು ತಿಂಗಳೊಳಗೆ ಮದ್ರಾಸು ದರದಂತೆ ಸಂಬಳಗಳನ್ನು ಹೆಚ್ಚಿಸಲಾಗುವುದೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಈ ದಿನ ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನದಲ್ಲಿ ಮಾತನಾಡುತ್ತಾ ತಿಳಿಸಿದರು. ಬೊಂಬಾಯಿ ದರದಂತೆ ಕೊಟ್ಟರೆ ೭ ಕೋಟಿ ರೂ. ಮತ್ತು ಮದ್ರಾಸು ದರದಂತೆ ೩||ರಿಂದ ೪ ಕೋಟಿ ರೂ. ಬೇಕಾಗುವುದೆಂದು ಅವರು ತಿಳಿಸಿದರು.

ನಗರಕ್ಕೆ ಲಾಮಾಗಳ ಭೇಟಿ

ಗೌರವದಿಂದ ಸ್ವಾಗತ

ಮೈಸೂರು ೧೫

ಟಿಬೆಟಿನ ದಲೈಲಾಮಾ ಮತ್ತು ಪಂಚೆನ್‌ಲಾಮಾರವರು ಈ ದಿನ ಮಧ್ಯಾಹ್ನ ೧|| ಘಂಟೆಗೆ ಬೆಂಗಳೂರಿನಿಂದ ಇಲ್ಲಿಗೆ ಆಗಮಿಸಿದರು. [illegible] ಮಹಲ್ ಬಳಿ ಗೌರ್ನರ್ ಶ್ರೀ ಜಯ ಚಾಮರಾಜ ಒಡೆಯರ್, ಪುರಸಭಾಧ್ಯಕ್ಷ ಶ್ರೀ ಕೃಷ್ಣಮೂರ್ತಿರಾವ್, ಮಿಲಿಟರಿ ಸೆಕ್ರೆಟರಿ ಮುಂತಾದವರು ದಲೈಲಾಮರವರನ್ನು ಸ್ವಾಗತಿಸಿ ಪುಷ್ಪಹಾರಗಳನ್ನು ಅರ್ಪಿಸಿದರು. ನಂತರ ಗೌರ್ನರವರು ಮತ್ತು ಇತರರೂ ಸಮೀಪದ ಛತ್ರಕ್ಕೆ ತೆರಳಿ ಅಲ್ಲಿಗೆ ಆಗಮಿಸಿದ್ದ ಪಂಚೆನ್‌ಲಾಮಾರವರನ್ನು ಸ್ವಾಗತಿಸಿ ಪುಷ್ಪಹಾರಗಳನ್ನು ಅರ್ಪಿಸಿದರು. ಲಾಮಾರವರುಗಳೊಡನೆ ೧೦೦ ಮಂದಿ ಪರಿವಾರದವರು ಬಂದಿರುವರು.

ಹರಿಜನ ಸಮ್ಮೇಳನ

ಹೆಗ್ಗಡದೇವನಕೋಟೆ ತಾಲ್ಲೂಕು [illegible] ಹೋಬಳಿ ಬೇಗೂರು ಸರ್ಕಲ್ ಹರಿಜನ ಸಮ್ಮೇಳನವು ನಾಳೆ ಮಧ್ಯಾಹ್ನ ೧ ಗಂಟೆಗೆ ಬೇಗೂರು [illegible] ಭವನದಲ್ಲಿ ಸೇರುವುದು. ಮೈಸೂರಿನ [illegible] ವಿ|| ಎಲ್. ಸಿ. [illegible] ಅಧ್ಯಕ್ಷತೆ ವಹಿಸುವರು.

ಮಂಡ್ಯ ಸಕ್ಕರೆ ಕಾರ್ಖಾನೆ ಕಾರ್ಮಿಕರಿಂದ ಮುಷ್ಕರದ ನಿರ್ಧಾರ

ಮಂಡ್ಯ ಸಕ್ಕರೆ ಕಾರ್ಖಾನೆ ಕಾರ್ಮಿಕರ ಸಂಘದವರು ನೆನ್ನೆ ಏರ್ಪಡಿಸಿದ್ದ ಮತದಾನದಲ್ಲಿ ೩,೬೪೯ ಮಂದಿ ಸದಸ್ಯರು ಮುಷ್ಕರ ನಡೆಸಬೇಕೆಂದು ಅಭಿಮತವಿತ್ತರು ೧೪ ಮಂದಿ ಮಾತ್ರ ವಿರೋಧವಾಗಿ ಓಟು ಮಾಡಿದರು. ಕೈಗಾರಿಕಾ ವಿವಾದ ಶಾಸನದ ನಿಬಂಧನೆಯನ್ನು ಉಲ್ಲಂಘಿಸಿ ೫೫ ವರ್ಷ ವಯಸ್ಸಿನ ನೌಕರರನ್ನು ಅಕ್ರಮವಾಗಿ ವಜಾ ಮಾಡಿದ[illegible] ಮತ್ತು ಎಲ್ಲಾ ನೌಕರರುಗಳಿಗೂ ಒಂದೇ ಸಮನಾದ ವೇತನ ೮ ೧/೩ ದರದಂತೆ ಪ್ರಾವಿಡೆಂಟ್ ನಿಧಿಯನ್ನು ವಿಧಿಸುವುದು—ಇವುಗಳ ಬಗ್ಗೆ [illegible] ಕಾರ್ಮಿಕ ಸಂಘದವರು ನೋಟೀಸು ಕೊಟ್ಟಿರುತ್ತಾರೆ.

ಜರ್ಮನ್ ಮಹಿಳೆಯಿಂದ ಬೌದ್ಧ ಧರ್ಮಾವಲಂಬನೆ

ಪಶ್ಚಿಮ ಜರ್ಮನಿಯ ಹ್ಯಾಂಬರ್ಗ್ ನಗರದ ವಾಸಿ ೩೯ ವರ್ಷ ವಯಸ್ಸಿನ ಲೀಸಾ ಸ್ಪ್ರೀಡರ್ ಎಂಬ ಮನಶ್ಶಾಸ್ತ್ರಜ್ಞಳು ಕಳೆದ ವಾರ ಬೌದ್ಧ ಧರ್ಮವನ್ನು ಅವಲಂಬಿಸಿದರು. ಪಶ್ಚಿಮ ಯೂರೋಪಿನಲ್ಲಿ ಬೌದ್ಧ ಮತವನ್ನವಲಂಬಿಸಿರುವ ಮಹಿಳೆಯರಲ್ಲಿ ಆಕೆಯು ಮೊದಲನೆಯವಳು. ಆಕೆಯು ತಲೆ ಕೂದಲನ್ನು ಪೂರ್ಣವಾಗಿ ತೆಗೆಸಿ, ಸಿಂಹವಾಸಿ ಎಂಬ ಹೆಸರನ್ನು ಇಟ್ಟುಕೊಂಡಿರುಳು. ತನ್ನ ಜೀವಮಾನವನ್ನು ತಪಸ್ಸಿನಲ್ಲಿ ಕಳೆಯುವಳು. ಆಕೆಯು ಕಾಷಾಯ ವಸ್ತ್ರ ಧರಿಸಿರುವಳು.

ಪ್ರಾಥಮಿಕ ಶಾಲಾ ಬೋಧಕ ಸಂಘ

ನಗರದ ಪ್ರಾಥಮಿಕ ಶಾಲಾ ಬೋಧಕ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ, ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೆಚ್. ವಿ. ಶ್ರೀರಂಗರಾಜುರವರ ಅಧ್ಯಕ್ಷತೆಯಲ್ಲಿ ನಡೆದು ಶ್ರೀ ಎ. ಸಿ. ವೆಂಕಟರಾಂರವರನ್ನು ಅಧ್ಯಕ್ಷರಾಗಿಯೂ, ಶ್ರೀಮತಿ ವೆಂಕಟಸುಬ್ಬಮ್ಮನವರನ್ನು ಉಪಾಧ್ಯಕ್ಷೆಯಾಗಿಯೂ, ಶ್ರೀ ಎನ್. ಸೂರ್ಯನಾರಾಯಣ ಶಾಸ್ತ್ರಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ಚುನಾಯಿಸಲಾಯಿತು. ೧೩ ಜನರನ್ನು ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಆರಿಸಲಾಯಿತು.

ಪಿ. ಎಸ್. ಪಿ. ಉಮೇದ್ವಾರರ ಬಗ್ಗೆ ಜನಾಭಿಪ್ರಾಯ ಸಂಗ್ರಹ ಸಮಿತಿ

ನಗರದ ಪ್ರಜಾ ಸೋಷಲಿಸ್ಟ್ ಪಕ್ಷದ ಕಾರ್ಯಕರ್ತರ ಸಭೆಯು ಹಳೇ ಸಂತೆಪೇಟೆಯಲ್ಲಿರುವ ಪಕ್ಷದ ಕಛೇರಿಯಲ್ಲಿ ಮೊನ್ನೆ ಪೌರಸಭಾ ಸದಸ್ಯ ಶ್ರೀ ಎಸ್. ಗೋವಿಂದಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಮಹಾ ಚುನಾವಣೆಯಲ್ಲಿ ಪಕ್ಷದ ಪರವಾಗಿ ಸ್ಪರ್ಧಿಸಲಿಚ್ಛಿಸುವ ಉಮೇದುವಾರರ ಬಗ್ಗೆ ಜನಾಭಿಪ್ರಾಯವನ್ನು ಸಂಗ್ರಹಿಸಿ ಕಾರ್ಯಕಾರಿ ಸಮಿತಿಗೆ ವರದಿ ಒಪ್ಪಿಸಲು ಶ್ರೀಗಳಾದ ಕೆ. ಸಿ. ಶಾಂತಮೂರ್ತಿ, ವೇದಾಂತ ಹೆಮ್ಮಿಗೆ, ಎಂ. ಎನ್. ತಿಮ್ಮಯ್ಯ, ಕೆ. ಬಿ. ಶಿವಯ್ಯ ಮತ್ತು ಅಜೀಜ್‌ಸೇಠ್‌ರವರುಗಳಿರುವ ಸಮಿತಿಯನ್ನು ನೇಮಿಸಲಾಯಿತು. ಶ್ರೀಯುತರುಗಳು ಮೊನ್ನೆ ಜಿಲ್ಲೆಯ ಪ್ರವಾಸಕ್ಕಾಗಿ ತೆರಳಿದರು.

ರಾಮಾಭ್ಯುದಯ ಸಭೆಗೆ ದ್ರವ್ಯಸಹಾಯ

ನಗರದ ಶ್ರೀರಾಂಪೇಟೆಯಲ್ಲಿರುವ ಶ್ರೀ ರಾಮಾಭ್ಯುದಯ ಸಭಾ ಮಂದಿರದ ಕಟ್ಟಡದ ನಿಧಿಗಾಗಿ ಕೆಳಗೆ ಕಂಡ ಮಹನೀಯರು ಉದಾರವಾಗಿ ಸಹಾಯ ಮಾಡಿರುತ್ತಾರೆ.— ಮೈಸೂರಿನ ಶ್ರೀ ಬಿ. ಜಿ. ಸುಬ್ರಹ್ಮಣ್ಯಂ, ಎಂ. ಎಸ್. ರಾಮಾಜೋಯಿಸರು ತಲಾ ೧೦೧ ರೂ., ಡಾ॥ ಡಿ. ವೆಂಕಟಸುಬ್ಬಮ್ಮನವರು ೧೦೦ ರೂ., ಬೆಂಗಳೂರಿನ ಶ್ರೀಗಳಾದ ಡಿ. ಲಕ್ಷ್ಮೀನಾರಾಯಣ್, ವಿ. ವೆಂಕಟರಾಮಯ್ಯನವರು ಮತ್ತು ವಿ. ರಾಮಮೂರ್ತಿಯವರು ತಲಾ ೧೦೧ ರೂ., ವಿ. ಶಂಕರನಾರಾಯಣರಾವ್ ಮತ್ತು ಕಲ್ಕತ್ತದ ಬಿ. ಎಸ್. ಎ. ಭೂಷಣ್‌ರವರು ತಲಾ ೧೦೦ ರೂ. ಮತ್ತು ಶ್ರೀ ವೆಂಕಟರಾಂ ರವರು ೨೫ ರೂ.

ಗೀತಾ ಜಯಂತಿ ಕಾರ್ಯಕ್ರಮ

ಅಶೋಕಾ ರಸ್ತೆಯಲ್ಲಿರುವ ಶ್ರೀ ಗೀತಾ ಮಂದಿರದಲ್ಲಿ ಗೀತಾ ಜಯಂತಿ ಅಂಗವಾಗಿ ನಾಳೆ ಸಂಜೆ ೬॥ ಗಂಟೆಗೆ ಮಹಾರಾಜಾ ಕಾಲೇಜು ಸಂಸ್ಕೃತ ಅಧ್ಯಾಪಕರಾದ ಡಾ॥ ವೈ. ಜಿ. ಪದ್ಮರಾಜಯ್ಯನವರು ಗೀತೆಯೂ ಬೌದ್ಧ ಧರ್ಮವೂ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು.

ಉತ್ತಮವಾದ ಕಟ್ಟಡದ
ಪ್ಲಾನುಗಳು ಮತ್ತು ಬ್ಲೂಪ್ರಿಂಟ್
ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್
ಸಲಾಕೆ ಎಸ್ಟಿಮೇಟ್ ಮಾಡಿಕೊಡುವುದಕ್ಕೂ
ಗಾಯತ್ರಿ ಟಾಕೀಸ್ ಎದುರು
ಪ್ಯಾಟ್ [illegible]ಯಲ್ಲಿ
ಬಿ. ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿ

ಐ. ಸಿ. ಎಸ್. ಅಧಿಕಾರಿಯ ಸಜಾ ಶಿಕ್ಷೆ ಖಾಯಂ

ದ್ವಿತೀಯ ಮಹಾ ಯುದ್ಧದ ಕಾಲದಲ್ಲಿ ಬರ್ಮಾ ನಿರಾಶ್ರಿತರ ವ್ಯವಸ್ಥೆಯ ಆಡಳಿತಗಾರರಾಗಿದ್ದ ಎಸ್. ಕೆ. ಘೋಷ್ ಎಂಬ ಐ. ಸಿ. ಎಸ್. ಅಧಿಕಾರಿಗೆ ವಿಧಿಸಲಾಗಿದ್ದ ೫ ವರ್ಷ ಕಠಿಣ ಸಜಾ ಮತ್ತು ೨೨ ಲಕ್ಷ ರೂ. ದಂಡ, ತಪ್ಪಿದರೆ ಮತ್ತೊಂದು ವರ್ಷ ಸಜಾವನ್ನು ಸುಪ್ರೀಂ ಕೋರ್ಟಿನವರು ಖಾಯಂ ಮಾಡಿದ್ದಾರೆ. ಇವರು ಹೂಡಿದ್ದ ಅಪೀಲನ್ನು ವಜಾ ಮಾಡಲಾಗಿದೆ. ನಂಬಿಕೆ ದ್ರೋಹಕ್ಕಾಗಿ ಅವರ ಮೇಲೆ ಹಲವಾರು ಆಪಾದನೆಗಳನ್ನು ಮಾಡಲಾಗಿತ್ತು.

ಹೆಂಡತಿ, ಮಕ್ಕಳ ಪಾಲನೆಗಾಗಿ ಖೈದಿಯ ನೇತ್ರದಾನ

ತನ್ನ ಹೆಂಡತಿ ಮತ್ತು ಮಗುವಿನ ಪಾಲನೆಗಾಗಿ ಜಪಾನಿನ ಮಾಜಿ ಖೈದಿಯೊಬ್ಬನು ವಿಷಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುತ್ತಾನೆ. ಇವನು ಕೆಲವು ದಿನಗಳ ಹಿಂದೆ ತಾನೆ ಜೈಲಿನಿಂದ ಹೊರಕ್ಕೆ ಬಂದಿದ್ದನು. ಜೀವನ ನಡೆಸಬೇಕಾದರೆ ತಾನು ಮತ್ತೆ ಅಪರಾಧಗಳನ್ನು ಮಾಡಬೇಕಾಗುವುದೆಂದು ಇವನು ತನ್ನ ಹೆಂಡತಿಗೆ ಬರೆದ ಪತ್ರದಲ್ಲಿ ತಿಳಿಸಿ, ತನ್ನ ಕಣ್ಣುಗಳನ್ನು ಮಾರಿ ಹೆಂಡತಿ ಮತ್ತು ಮಗುವು ಜೀವಿಸಬೇಕೆಂದು ಸೂಚಿಸಿರುವನು.

ಪೋಷಕ ಬೋಧಕ ಸಂಘದ ಆರಂಭೋತ್ಸವ

ಮಂಡಿಪೇಟೆ ನವಾಬ್ ಬೀದಿಯಲ್ಲಿರುವ ಪ್ರಾಥಮಿಕ ಬಾಲಕರ ಶಾಲೆಯ ಪೋಷಕ ಬೋಧಕ ಸಂಘದ ಆರಂಭೋತ್ಸವವನ್ನು ನಾಳೆ ಸಂಜೆ ೪ ಗಂಟೆಗೆ ಡಿ. ಡಿ. ಸಿ. ಐ. ಯವರಾದ ಶ್ರೀ ಟಿ. ವಾಸುದೇವಯ್ಯನವರ ಅಧ್ಯಕ್ಷತೆಯಲ್ಲಿ ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೆಚ್. ವಿ. ಶ್ರೀರಂಗರಾಜುರವರು ನೆರವೇರಿಸುವರು.

ಹರಿಕಥೆ ಮತ್ತು ಶಿವಕಥೆ

ಲಷ್ಕರ್ ಮೊಹಲ್ಲಾ ಕಬೀರ್ ರಸ್ತೆಯಲ್ಲಿರುವ ಶ್ರೀ ಕಂಠಿಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ನಗರದ ವೀರಶೈವ ಸಜ್ಜನ ಸಂಘದ ಆಶ್ರಯದಲ್ಲಿ ನೆನ್ನೆಯಿಂದ ೧ ತಿಂಗಳವರೆಗೆ ನಿತ್ಯವೂ ಸಂಜೆ ೭ ಗಂಟೆಗೆ ಹರಿಕಥೆ ಮತ್ತು ಶಿವಕಥೆಗಳನ್ನು ಭದ್ರಾವತಿಯ ವೇ॥ ಬ್ರಹ್ಮಶ್ರೀ ಜಿ. ಬಿ. ಎಸ್. ವೆಂಕಟೇಶ ದಾಸರು ನಡೆಸುವರು. ಸರ್ವರಿಗೂ ಪ್ರವೇಶವುಂಟು. ಮಹಿಳೆಯರಿಗೆ ಪ್ರತ್ಯೇಕ ಸ್ಥಳವನ್ನು ಏರ್ಪಡಿಸಲಾಗಿದೆ.

ಎನ್. ಸಿ. ಸಿ. ದಿನಾಚರಣೆ

ರಾಷ್ಟ್ರೀಯ ಕೆಡೆಟ್ ಕೋರ್ ದಿನಾಚರಣೆಯು ನಾಳೆ ಸಂಜೆ ೪॥ ಗಂಟೆಗೆ ವೈಸ್ ಛಾನ್ಸಲರ್ ಶ್ರೀ ಕೆ. ವಿ. ಪುಟ್ಟಪ್ಪನವರ ಅಧ್ಯಕ್ಷತೆಯಲ್ಲಿ ಕ್ರಾಫರ್ಡ್ ಭವನದಲ್ಲಿ ನೆರವೇರುವುದು.

ಪಿ. ಕೆಂಪಾಚಾರ್
ಡೋರ್ ನಂ. ೧೯೬, ತೊಗರಿ ಬೀದಿ
ಕೆ. ಆರ್. ಮೊಹಲ್ಲಾ, ಮೈಸೂರು
ನಾವು ಎನ್‌ಗ್ರೇವಿಂಗ್ ಮತ್ತು ಲೆಡ್ ಬ್ಲಾಕುಗಳನ್ನು ತಯಾರಿಸಿ ಕೊಡುತ್ತೇವೆ. ಒಮ್ಮೆ ಭೇಟಿ ಕೊಡಿ

ರುಚಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
(ನಮ್ಮ ಅಂಗಡಿ ಶಾಖೆಯನ್ನು ನಾವು ಎಲ್ಲಿಯೂ ತೆರೆದಿಲ್ಲ)
ಡಿ. ಸುಬ್ಬಯ್ಯಾ ರೋಡ್, ಮೈಸೂರು

ಮೈಸೂರು ಸಂಸ್ಥಾನಕ್ಕೆ ವರಮಾನ ತೆರಿಗೆಯಲ್ಲಿ ಶೇ॥ ೫.೯೩ರಷ್ಟು ಹಣ

ಕಾರ್ಪೊರೇಷನ್ ತೆರಿಗೆ ಮುಂತಾದ ಕೇಂದ್ರಕ್ಕೆ ಸಂಬಂಧಪಟ್ಟ ಆದಾಯಗಳನ್ನು ಬಿಟ್ಟು ವರಮಾನದ ಮೇಲೆ ವಿಧಿಸುವ ತೆರಿಗೆಗಳ ಒಟ್ಟು ಹಣದಲ್ಲಿ ಶೇಕಡ ೭೫ರಷ್ಟು ಹಣವನ್ನು ಬರುವ ವರ್ಷ ಕೇಂದ್ರ ಸರ್ಕಾರದವರು ಸಂಸ್ಥಾನಗಳಿಗೆ ಕೊಡಬೇಕೆಂದು ಕೇಂದ್ರದ ಹಣಕಾಸಿನ ಸಮಿತಿಯವರು ಶಿಫಾರಸು ಮಾಡಿರುವರು. ಅದರ ಪ್ರಕಾರ ಮೈಸೂರು ಸಂಸ್ಥಾನಕ್ಕೆ ಶೇಕಡ ೫.೯೩ರಷ್ಟು ಹಣವು ಬರಲಿದೆ.

ಬಣಜಿಗ ಪದವೀಧರರಿಗೆ ಸತ್ಕಾರ

ಸರಸ್ವತಿಪುರದಲ್ಲಿರುವ ಬಣಜಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿ ಕಳೆದ ಸೋಮವಾರ ನಿಲಯದ ಪದವೀಧರರಿಗೆ ಸತ್ಕಾರ ಸಮಾರಂಭವನ್ನು ಏರ್ಪಡಿಸಲಾಗಿತ್ತು. ಶ್ರೀ ಸಿದ್ಧರಾಮಣ್ಣನವರಿಂದ ಸ್ವಾಗತವಾದನಂತರ ಶ್ರೀಗಳಾದ ಶಿವಶಂಕರಯ್ಯ ಮತ್ತು ಧರಣೇಂದ್ರಯ್ಯನವರು ಪದವೀಧರರನ್ನು ಅಭಿನಂದಿಸಿ ಮಾತನಾಡಿದರು. ಪದವೀಧರರುಗಳ ಪರವಾಗಿ ಶ್ರೀಗಳು ಎಂ. ವಿ. ಶ್ರೀನಿವಾಸ್, ಬಿ. ಎನ್. ರಾಮಯ್ಯ ಮತ್ತು ರಂಗೇಗೌಡರು ಕೃತಜ್ಞತೆಯನ್ನು ಸೂಚಿಸಿದರು. ಡಾ॥ ಬಿ. ಕುಪ್ಪುಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ಮಾಧ್ವ ವಿದ್ಯಾರ್ಥಿ ನಿಲಯದ ಮಿತ್ರವೃಂದದ ಮುಕ್ತಾಯ ಸಮಾರಂಭ

ಸರಸ್ವತಿಪುರದಲ್ಲಿರುವ ಮಾಧ್ವ ವಿದ್ಯಾರ್ಥಿ ನಿಲಯದ ಮಿತ್ರ ವೃಂದದ ಮುಕ್ತಾಯ ಸಮಾರಂಭವು ನಾಳೆ ಸಂಜೆ ೫ ಗಂಟೆಗೆ ಪೇಜಾವರ ಮಠಾಧೀಶರಾದ ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಜರುಗುವುದು. ನಿವೃತ್ತ ಇಂಗ್ಲೀಷ್ ಪ್ರೊಫೆಸರ್ ಶ್ರೀ ಎಸ್. ವಿ. ರಂಗಣ್ಣನವರು ಭಾಷಣ ಮಾಡುವರು.

ಹಿಂದಿ ಪ್ರಬಂಧ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು

ಶಿಶು ಸಾಹಿತ್ಯ ಮಂಡಲಿಯ ಆಶ್ರಯದಲ್ಲಿ ಕಳೆದ ತಿಂಗಳು ಏಳರಂದು ನಡೆದ ಶ್ರೀರಂಗನಾಯಕಮ್ಮ ಹಿಂದಿ ಪ್ರಬಂಧ ಸ್ಪರ್ಧೆಯಲ್ಲಿ ನ್ಯಾಷನಲ್ ಲೀಗಿನ ಶ್ರೀಮತಿ ಎಸ್. ಶಾರದಾಂಬಾ ಮತ್ತು ಶ್ರೀಮತಿ ಬಿ. ಎಸ್. ಲೀಲಾವತಿ ಮತ್ತು ಹಿಂದಿ ಪ್ರಚಾರ ಸಭೆಯ ಶ್ರೀಮತಿ ಎಸ್. ಆರ್. ವಿಜಯಲಕ್ಷ್ಮಿಯವರಿಗೆ ಕ್ರಮವಾಗಿ ಪ್ರಥಮ ಮೂರು ಬಹುಮಾನಗಳು ಬಂದಿವೆ.

Please Re-elect
No. 30
H. S. VENKATA RAO,
B A., B L. B Ed
As a DIRECTOR
Of G. C. S.

ದಿ ಗ್ರ್ಯಾಜುಯೇಟ್ಸ್ ಕೋ-ಆಪರೇಟಿವ್ ಸೊಸೈಟಿ
ಲಿಮಿಟೆಡ್, ಮೈಸೂರು

ಇದರಿಂದ ಸೊಸೈಟಿಯ ಮೆಂಬರುಗಳಿಗೆ ತಿಳಿಯಪಡಿಸುವುದೇನೆಂದರೆ :—

ಇದೇ ಮಾಹೆ 16 ನೇ ತಾರೀಖು ಬೆಳಿಗ್ಗೆ ೮-೩೦ ಗಂಟೆಗೆ ಸೊಸೈಟಿಯ ೩೩ ನೇ ವರ್ಷದ ಜನರಲ್ ಬಾಡಿ ಮೀಟಿಂಗು ಎಕ್ಸಿಬಿಷನ್ ಕಟ್ಟಡದಲ್ಲಿ ನಡೆಯುತ್ತದೆ. ಮಧ್ಯಾಹ್ನ 12 ಗಂಟೆಗೆ ಮೆಂಬರುಗಳಿಗೆ ಭೋಜನಕ್ಕೆ ಸಹಾ ಏರ್ಪಡಿಸುತ್ತೆ. ಮೆಂಬರುಗಳು ಇದನ್ನೇ ಆಹ್ವಾನವೆಂದು ಮನ್ನಿಸಿ ದಯಮಾಡಿಸಬೇಕಾಗಿ ವಿನಂತಿ.

ಎಂ. ಕೃಷ್ಣಪ್ಪ,
ಸೆಕ್ರೆಟರಿ

THE CHAMPION METROPOLITAN COLLEGE OF COMMERCE
"Co-operators Home" 100' Road, Mysore
GRADUATES AND UNDERGRADUATES may now join a new batch of students who are being admitted for COST & WORKS ACCOUNTANCY classes.
M. S PUTTANNA,
Vice-Principal.
P. SUBBARAYA SASTRY,
Principal.

ವಿವಾಹ ಮಹೋತ್ಸವಗಳು

ತುಮಕೂರಿನ ಸುಪ್ರಸಿದ್ಧ ಕಾಂಗ್ರೆಸ್ ಪ್ರಮುಖರಾದ ಶ್ರೀ ಟಿ. ಸಿ. ನಂಜುಂಡಯ್ಯನವರು ತಮ್ಮ ಕುಮಾರಿ ಸೌ॥ ಜೀವರತ್ನರವರನ್ನು [illegible] ಸಾಗರದ ಶ್ರೀ ಬಸಪ್ಪನವರ ಪುತ್ರ ಶ್ರೀ ಬಿ. ಮುದ್ದಣ್ಣನವರಿಗೆ ಕೊಟ್ಟು, ಮೊನ್ನೆ ವಿವಾಹವನ್ನು ತುಮಕೂರಿನಲ್ಲಿ ನೆರವೇರಿಸಿದರು.

ಟಿ. ನರಸೀಪುರದ ನಿವೃತ್ತ ಉಪಾಧ್ಯಾಯರಾದ ಶ್ರೀ ಆರ್. ನಾಗೇಶಯ್ಯನವರು ತಮ್ಮ ಕುಮಾರ ಶ್ರೀ ಎನ್. ನಾಗರಾಜ್‌ರವರಿಗೆ ತುಮಕೂರಿನ ಜಿಲ್ಲಾ ಸರ್ವೇ ಸೂಪರ್‌ವೈಸರಾದ ಶ್ರೀ ಹೆಚ್. ಎಸ್. ಕೃಷ್ಣಯ್ಯರ್‌ರವರ ಮಗಳು ಸೌ॥ ಸೌಭಾಗ್ಯವನ್ನು ತಂದುಕೊಂಡು ಮೊನ್ನೆ ತುಮಕೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಕೇಂದ್ರ ಅಬಕಾರಿ ಅಧಿಕಾರಿಗಳ ವರ್ಗ

ಮೈಸೂರು ವಿಭಾಗದ ಕೇಂದ್ರ ಅಬಕಾ[illegible] ಅಧಿಕಾರಿಗಳಾಗಿದ್ದ ಶ್ರೀ ಎನ್. ನಾಗೇಶ್ವರರವರನ್ನು ಮದ್ರಾಸು ಸರ್ಕಲ್ [illegible] ಆಗಿ ನೇಮಿಸಿ, ಮದ್ರಾಸಿನ ಶ್ರೀ ಆರ್. [illegible] ರಾಜಶೇಖರರನ್ನು ಮೈಸೂರಿಗೆ ವರ್ಗಾಯಿಸಲಾಗಿದೆ. ಶ್ರೀ [illegible]ರಾಜರವರು ಮೊನ್ನೆ ಇಲ್ಲಿಗೆ ಬಂದು ಅಧಿಕಾರ ವಹಿಸಿಕೊಂಡರು.

ಸಹಾಯಾರ್ಥ ಸಿನಿಮಾ ಪ್ರದರ್ಶನ

ಚನ್ನಪಟ್ಟಣ ತಾಲ್ಲೂಕು ಮಳೂರಿನ ಶ್ರೀ ರಾಮಾಪ್ರಮೇಯಸ್ವಾಮಿ [illegible]ಗಾಗಿ [illegible] ಬೆಳಿಗ್ಗೆ ೧೦ ಗಂಟೆಗೆ ಒಲಂಪಿಯಾ ಟಾಕೀಸಿನಲ್ಲಿ ದಾಗ್ ಎಂಬ ಹಿಂದಿ ಚಿತ್ರದ ಸಹಾಯಾರ್ಥ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಜಿಲ್ಲಾಧಿಕಾರಿಗಳಾದ ಶ್ರೀ ಡಿ. ಆರ್. ಚನ್ನರುದ್ರಯ್ಯನವರು ಅಧ್ಯಕ್ಷತೆ ವಹಿಸುವರು. ಮಹಾ ಜನರ ಉದಾರ ಸಹಾಯವನ್ನು ಕೋರಲಾಗಿದೆ.

Kindly Elect
NO. 27
S. N. SUBBAKRISHNAN,
B. A., B. Com.
As a DIRECTOR
Of G. C. S.

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತರಾಗಿರುವ
ನವರತ್ನ-ಕಲ್ಪ
[illegible],
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ 5
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4ರಿಂದ 7-30
[illegible]
[illegible]
[illegible]
[illegible]
[illegible]
ನವರತ್ನ—ಕಲ್ಪ
[illegible]
[illegible]
[illegible]
[illegible]
[illegible]
[illegible]
[illegible]
NAVRATNA KALPA PHARMACY
JULLUNDUR CITY (India

Edited, Printed and Published
A. R. Nagarajan at Sadhvi P
D. Subbiah Road, Mysore

[illegible] ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 6 ಕಾಸು

ಬ್ರಾಂಕಾಲ್
ಅಜೀರ್ಣ ಮತ್ತು ನೋವು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಹೊರಗೂ ಪ್ರತಿನಿಧಿಗಳಿಗೆ
ಬರೆಯಿರಿ
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. ಅವೆನ್ಯೂ
ಶ್ರೀನಿವಾಸ ಮಂದಿರ ರಸ್ತೆ,
ಬೆಂಗಳೂರು-2

ಪುಟ : ೧೫] SADHVI : SUNDAY 16-12-1956 ಮೈಸೂರು : ಭಾನುವಾರ ೧೬-೧೨-೧೯೫೬ [ಸಂಚಿಕೆ : ೧೧೨

ಬ್ರಿಟಿಷ್ ಪಡೆಗಳ ಮೇಲೆ ಈಜಿಪ್ಟಿನವರ ರಾಕೆಟ್ ಧಾಳಿ

ಸೂರು ನಗರ ಕ್ಷೀಣವಾಗುವುದನ್ನು ತಪ್ಪಿಸಬೇಕು

ಗ್ರೆಸ್ ರಾಜಕೀಯ ಸಮ್ಮೇಳನದಲ್ಲಿ ಸ್ವಾಗತಾಧ್ಯಕ್ಷರ ಭಾಷಣ

ಮೈಸೂರು ೧೫

ನ್ನೆ ಇಲ್ಲಿ ನಡೆದ ಪ್ರಾದೇಶಿಕ ಕಾಂಗ್ರೆಸ್ ಕೀಯ ಸಮ್ಮೇಳನದಲ್ಲಿ ಸ್ವಾಗತ ಸಮಿತಿ ಅಧ್ಯಕ್ಷರಾದ ಶ್ರೀ ಕೆ ಪುಟ್ಟಸ್ವಾಮಿಯವರು ಪ್ರತಿನಿಧಿಗಳಿಗೆ ಸ್ವಾಗತ ಬಯಸುತ್ತಾ ಈ ತಿಳಿಸಿದರು:-

ರ್ಥಿಕ ವಿಷಮತೆಯನ್ನು ದೂರ ಮಾಡಲು ರದವರು ಈಗಾಗಲೇ ಕೆಲವು ಕ್ರಮಗಳ ಕೈಗೊಂಡಿದ್ದಾರೆ ಅವುಗಳಲ್ಲಿ ಭೂ ಸುಧಾರ ಅಡಕವಾಗಿವೆ ಈ ಬಗ್ಗೆ ಮೈಸೂರು ವ ಬೇರೆಬೇರೆ ಭಾಗಗಳಲ್ಲಿ ಬೇರೆಬೇರೆ ಶಾ ನಿವೆ ಇವೆಲ್ಲವನ್ನೂ ಸಂಯೋಜಿಸಿ ಇಡೀ ಕ್ಕೆ ಏಕ ರೀತಿಯಾಗಿ ಅನ್ವಯಿಸುವಂತೆ ವಾಗಿ ಶಾಸನವೊಂದನ್ನು ಜಾರಿಗೆ ತಂದು ದಾರರಿಗೂ, ಭೂಮಿ ಹೀನರಿಗೂ ಅನುಕೂ ಮಾಡಿಕೊಡುವುದು ಅಗತ್ಯವಾಗಿದೆ ಉಳು ಗೇ ಭೂಮಿ ಬೇಕು ಎಂದು ಸಾರುತ್ತಿರುವ ಬಾ ಭಾವೆಯವರ ಕ್ರಾಂತಿಕಾರಿ ಮತ್ತು ರಿ ಘೋಷಣೆಗೆ ಹೊಂದಿಕೊಳ್ಳುವಂತೆ ಧಾರಣೆಗೆ ಸಂಬಂಧಿಸಿದ ಶಾಸನಗಳು ರೂ ಕ್ಕೆಂದು ಹಾರೈಸುತ್ತೇನೆ

ಜದ ಎಲ್ಲಾ ಕಾರ್ಯಕ್ಷೇತ್ರಗಳಲ್ಲೂ ಗೆ ಮಧ್ಯಮ ವರ್ಗದವರು ವಹಿಸಿರುವ ಗಣನೀಯವಾಗಿದೆ ಈಗ ಪ್ರಾರಂಭವಾಗು ಔದ್ಯೋಗಿಕ ಕ್ರಾಂತಿ ಮತ್ತು ಭೂಸುಧಾ ಂದ ಈ ವರ್ಗದವರ ಜೀವನದ ವಿಧಾನ ಸ್ಪಷ್ಟವಾಗಬೇಕಾಗಿದೆ. ಅನೇಕರಿಗೆ, ಅದರ ನಗರಗಳಲ್ಲಿರುವವರಿಗೆ ಈಗ ಜೀವನವನ್ನು ವುದು ಕಷ್ಟವಾಗಿದೆ ಹೀಗಾಗಿ ಮಧ್ಯಮ ಕ್ಷೀಣಿಸತೊಡಗಿರುವುದು ಕಳವಳಕ್ಕೆ ವಾಗಿದೆ. ಇದನ್ನು ತಡೆಗಟ್ಟಿ ಮಧ್ಯಮ ಏಕೈಕ ವರ್ಗವಾಗಿ ರಾಜ್ಯದಲ್ಲಿ ನೆಲೆ ಮಾಡುವುದು ಅತಿ ಮುಖ್ಯ.

ವ ಒಂದು ಶತಮಾನದಿಂದಲೂ ಮೈಸೂ ನಗರವು ಅಭಿವೃದ್ಧಿ ಹೊಂದಿ ಶಿಕ್ಷಣ ಸಂಸ್ಕೃ ಕೇಂದ್ರವಾಗಿ ಬೆಳೆದಿದೆ. ರಾಜಾಶ್ರಯದಲ್ಲಿ ಕಲಾವಿದರು ಇಲ್ಲಿ ಪ್ರಖ್ಯಾತರಾದರು. ಮೈಸೂರು ವಿಶ್ವವಿದ್ಯಾಲಯದ ಕೇಂದ್ರ ದೆ. ಈಚೆಗೆ ನಗರದ ಪ್ರಾಮುಖ್ಯತೆ ಇ ಯಾಗುತ್ತಿರುವುದು ಈ ನಗರದ ವೈಶಿಷ್ಟ್ಯ ರಿಮೆಯನ್ನೂ ಉಳಿಸಿಕೊಳ್ಳುವುದು ಕ ಕರ್ತವ್ಯ ಹಲವಾರು ಕೈ ಗಾರಿಕೆಗಳ ವ ಹೊಸ ವಲಯಗಳಲ್ಲಿ ಸ್ಥಾಪಿಸುವು ಕ್ಕೆ. ಚಾಮರಾಜನಗರ-ಸತ್ಯಮಂಗಲ, ಮೈಸೂರು ರೈಲು ಮಾರ್ಗಗಳನ್ನು ಏ ವತೆ ಮೈಸೂರು ಉದ್ಯೋಗ-ವ್ಯಾಪಾರ ವಾಗಿ ಅದರ ಪ್ರಾಮುಖ್ಯತೆ ಉಳಿಯಬ ದೇಶದ ನಾಯಕರೆಲ್ಲರೂ ಈ ಬಗ್ಗೆ ಆ ಸಬೇಕು.

ಅಂಬಳೆ ಸುಬ್ರಹ್ಮಣ್ಯಯ್ಯರ್ ಮತ್ತು ಚೌಡಯ್ಯನವರ ಸೇವಾ ಪ್ರಶಂಸೆ

ಮುಖ್ಯ ಮಂತ್ರಿಗಳಿಂದ ಭಾವಚಿತ್ರಗಳ ಅನಾವರಣ

ಮೈಸೂರು ೧೫

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೂರಡಿ ರಸ್ತೆಯಲ್ಲಿರುವ ಪೌರಸಭಾ ಪೋಷಿತ ಉಚಿತ ವಿದ್ಯಾರ್ಥಿನಿಲಯದಲ್ಲಿ ಮೊನ್ನೆ ಬೆಳಗ್ಗೆ ದಿ|| ಅಂಬಳೆ ಸುಬ್ರಹ್ಮಣ್ಯ ಅಯ್ಯರ್ ಮತ್ತು ಪೌರಸಭಾ ಸದಸ್ಯ ಶ್ರೀ ಚೌಡಯ್ಯನವರ ಭಾವ ಚಿತ್ರಗಳನ್ನು ಅನಾವರಣ ಮಾಡಿದರು ಪ್ರಾದೇಶಿಕ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥನೆ ಮತ್ತು ಶ್ರೀ ಸುಂದರಮೂರ್ತಿ ಮತ್ತು ಪಾರ್ಟಿಯವರಿಂದ ಗಾಯನವಾದನಂತರ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಸ್ವಾಗತ ಭಾಷಣ ಮಾಡಿ ನಿಲಯದ ವರದಿಯನ್ನು ಒಪ್ಪಿಸಿದರು ಶ್ರೀ ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ ಶ್ರೀ ಸುಬ್ರಹ್ಮಣ್ಯ ಅಯ್ಯರ್ ಮತ್ತು ಚೌಡಯ್ಯನವರನ್ನು ಪ್ರಶಂಸಿಸಿದರು ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರವರು ಕೇವಲ ಒಬ್ಬ ವ್ಯಕ್ತಿಯಾಗಿರದೆ ಒಂದು ಸಂಸ್ಥೆಯಂತಿದ್ದರೆಂದೂ, ದಕ್ಷ ಅಧಿಕಾರಿಗಳಾಗಿದ್ದರೆಂದೂ ತಿಳಿಸಿದರು ಶ್ರೀ ಚೌಡಯ್ಯನವರು ಬಹಳ ದಿಂದ ಪಟ್ಟಣಕ್ಕೆ ಒಂದು ಉತ್ತಮ ಸಾರ್ವಜನಿಕ ಸೇವೆ ಸಲ್ಲಿಸಿರುವುದಾಗಿ ನುಡಿದರು. ಈ ನಿಲಯದ ಅಭಿವೃದ್ಧಿಗೆ ಅಗತ್ಯವಾದ ಸಹಾಯವನ್ನು ಸರ್ಕಾರದವರು ಮಾಡುವುದಾಗಿ ಭರವಸೆಯಿತ್ತರು

ಶ್ರೀ ಸುಬ್ರಹ್ಮಣ್ಯ ಅಯ್ಯರ್‌ರವರ ಪುತ್ರ ಶ್ರೀ ಎ ಶೇಷಾದ್ರಿಯವರು ತಮ್ಮ ತಂದೆಯವರ ಬಗ್ಗೆ ಮಾಡಿದ ಪ್ರಶಂಸೆಗಾಗಿ ಕೃತಜ್ಞತೆಯನ್ನು ಸೂಚಿಸಿದರು. ಶ್ರೀ ಚೌಡಯ್ಯನವರೂ ಸಹಾ ಕೃತಜ್ಞತೆಯನ್ನು ವ್ಯಕ್ತಪಡಿಸಿದರು. ಅಧ್ಯಕ್ಷರಿಂದ ಸೂಕ್ತ ಭಾಷಣವಾದನಂತರ ಸಮಾರಂಭವು ಮುಕ್ತಾಯವಾಯಿತು

ಗಾಂಧಿ ವ್ಯಾಸಂಗ ಗೋಷ್ಠಿ

ರಮಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿಚಾರ ಪರಿಷತ್ತಿನ ಆಶ್ರಯದಲ್ಲಿ ನಾಳೆ ಸಂಜೆ ೬|| ಗಂಟೆಗೆ ಶ್ರೀ ಎಸ್. ವಿ ಮಂಜುನಾಥರಾವ್‌ರಿಂದ ಮೂಲ ಶಿಕ್ಷಣ ಸಿದ್ಧಾಂತಗಳ ಬಗ್ಗೆ ವ್ಯಾಸಂಗ ಗೋಷ್ಠಿಯು ನಡೆಯುವುದು

ಆಯುರ್ವೇದ ಕಾಲೇಜಿಗೆ ಹೊಸ ಪ್ರಿನ್ಸಿಪಾಲರು

ನಗರದಲ್ಲಿರುವ ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎಸ್ ವೆಂಕಟನಾರಾಯಣರಾಯರನ್ನು ಬೆಂಗಳೂರು ದೇಶೀಯ ವೈದ್ಯ ಪದ್ಧತಿ ಇಲಾಖಾಧಿಕಾರಿಯ ಟೆಕ್ನಿಕಲ್ ಅಸಿಸ್ಟೆಂಟರಾಗಿಯೂ, ನಗರದ ಕ್ಷಯರೋಗ ಆಸ್ಪತ್ರೆಯ ಡಾ|| ಎ ಎಸ್. ಚನ್ನಬಸಪ್ಪನವರನ್ನು ಕಾಲೇಜು ಪ್ರಿನ್ಸಿಪಾಲರಾಗಿಯೂ ವರ್ಗಾಯಿಸಲಾಗಿದೆ. ಬೆಂಗಳೂರಿನ ಡಾ|| ಟಿ ರಾಜಗೋಪಾಲ ಶೆಟ್ಟರನ್ನು ಇಲ್ಲಿನ ಕ್ಷಯರೋಗ ಆಸ್ಪತ್ರೆಗೆ ಕಳುಹಲಾಗಿದೆ

ದೇಶದ ರಾಜಕೀಯ ಐಕ್ಯತೆಗೆ ಪ್ರಾಮುಖ್ಯತೆ ಅತ್ಯಗತ್ಯ

ರಾಜಕೀಯ ಸಮ್ಮೇಳನದಲ್ಲಿ ಕಾಮರಾಜ ನಾಡಾರರ ಭಾಷಣ

ಮೈಸೂರು ೧೫

ಮೈಸೂರು ಪ್ರಾದೇಶಿಕ ಕಾಂಗ್ರೆಸ್ ರಾಜಕೀಯ ಸಮ್ಮೇಳನವನ್ನು ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡಾರರು ನೆನ್ನೆ ಆರಂಭಿಸುತ್ತ, ದೇಶದಲ್ಲಿ ರಾಜಕೀಯ ಐಕ್ಯತೆಯು ಅತ್ಯಗತ್ಯವೆಂದೂ, ಅದರಿಂದಲೇ ಪ್ರಗತಿ ಸಾಧ್ಯವೆಂದೂ ಹೇಳಿದರು. ಸಂಸ್ಥಾನ ಪುನರ್ವಿಂಗಡಣೆಯಿಂದ ಉಂಟಾದ ಭಾಷಾವಾರು ಅಂಧ ಶ್ರದ್ಧೆಯ ಪರಿಣಾಮವಾಗಿ ದೇಶದ ಐಕ್ಯತೆಗೆ ಕುಂದು ಬರುವಂತಾಗಿತ್ತೆಂದು ಅವರು ಸೂಚಿಸಿ, ಗಾಂಧಿಜಿಯವರ ಆದರ್ಶ ಮತ್ತು ನೆಹರೂರವರ ನಾಯಕತ್ವದ ಪರಿಣಾಮವಾಗಿ ಆ ದೋಷ ಅತ್ತ ಪರಿಹಾರವಾಯಿತೆಂದು ತಿಳಿಸಿದರು ಗಾಂಧಿಜಿಯವರ ಸ್ವರಾಜ್ಯ ಹೋರಾಟವು ಮಂತ್ರಿತ್ವ, ಅಧಿಕಾರ ವ್ಯಾಮೋಹ ಮತ್ತು ಸ್ಥಾನ ಹಂಚಿಕೆಗಳಲ್ಲಿ ಪರ್ಯವಸಾನವಾಗುವುದು ನಾಚಿಕೆಗೇಡು ತನವೆಂದು ಅಭಿಪ್ರಾಯಪಟ್ಟರು

ಈಗ ದ್ವಿತೀಯ ಪಂಚವಾರ್ಷಿಕ ಯೋಜನೆ ಕೈಗೊಳ್ಳಲಾಗಿರುವುದೆಂದೂ ಅದು ಸರ್ಕಾರದವರ ಕಾರ್ಯಕ್ರಮವಾಗಿರದೆ, ಪ್ರಜೆಗಳ ಯೋಜನೆಯಾಗಿ ಪರಿಣಮಿಸಬೇಕೆಂದೂ ಸೂಚಿಸಿದರು.

ಮೈಸೂರಿನ ರಾಜಕೀಯವನ್ನು ಪ್ರಸ್ತಾಪಿಸುತ್ತಾ, ಚುನಾವಣೆಗಳಲ್ಲಿ ಬಲಾಢ್ಯವಾದ ವಿರೋಧ ಪಕ್ಷಗಳು ಇಲ್ಲವೆಂಬ ಆತ್ಮ ತೃಪ್ತಿಯನ್ನು ಕಾಂಗ್ರೆಸ್ಸಿನವರು ಹೊಂದಬಾರದೆಂದೂ, ಪ್ರಭಾವಯುತ ಪ್ರತಿಪಕ್ಷವಿಲ್ಲದಿರುವುದೂ ಒಂದು ವರ ಪ್ರಸಾದವಲ್ಲವೆಂದೂ ಅವರು ಹೇಳಿ, ವಿರೋಧ ಪಕ್ಷವಿಲ್ಲದಿದ್ದರೆ, ಕಾಂಗ್ರೆಸ್ಸಿನೊಳಗೇ ವಿರುದ್ಧ ಗುಂಪುಗಳು ಹುಟ್ಟಿಕೊಳ್ಳುವುವೆಂದು ತಿಳಿಸಿದರು. ಪ್ರಜಾ ಪ್ರಭುತ್ವವು ಸರಿಯಾಗಿ ನಡೆಯಬೇಕಾದರೆ ವಿರೋಧ ಪಕ್ಷಗಳಿರಬೇಕೆಂದೂ ಅವರು ಸೂಚಿಸಿದರು.

ಅಧ್ಯಕ್ಷ ಭಾಷಣ

ಅಧ್ಯಕ್ಷತೆ ವಹಿಸಿದ್ದ ಶ್ರೀ ಎಸ್. ಚನ್ನಯ್ಯನವರು ತಮ್ಮ ಭಾಷಣದಲ್ಲಿ ಮುಂದಿನ ಚುನಾವಣೆಗಳಲ್ಲಿ ಪ್ರತಿಯೊಬ್ಬ ಕಾಂಗ್ರೆಸ್ ಉಮೇದುವಾರನೂ ಜಯಗಳಿಸುವಂತೆ ಮಾಡುವುದು ಕಾಂಗ್ರೆಸ್ಸಿನವರೆಲ್ಲರ ಕರ್ತವ್ಯವೆಂದು ಸೂಚಿಸಿದರು ಕಾಂಗ್ರೆಸ್ಸನ್ನು ಅಧಿಕಾರ ಸಂಪಾದನೆಯ ಯಂತ್ರವನ್ನಾಗಿ ಯಾರೂ ಉಪಯೋಗಿಸಕೂಡದೆಂದು ಅವರು ಎಚ್ಚರಿಸಿದರು. ಕಾಂಗ್ರೆಸ್ ಸಂಸ್ಥೆಯು ಕಲ್ಪವೃಕ್ಷದಂತಿದೆಯೆಂದೂ, ಪ್ರತಿಯೊಬ್ಬರೂ ಅದನ್ನು ರಕ್ಷಿಸಿ ಬೆಳೆಸಬೇಕೆಂದೂ ಅವರು ಹೇಳಿದರು ಕಾಂಗ್ರೆಸ್ಸಿಗರು ನೀತಿಭ್ರಷ್ಟರಾದರೆ ಆ ವೃಕ್ಷವೂ ಹಾಳಾಗುವುದೆಂದು ಹೇಳಿದರು.

ಹಿಂದುಳಿದ ಜನರನ್ನು ಮುಂದೆ ತರಬೇಕಾಗಿರುವುದೆಂದೂ, ಯಾವ ಒಂದು ಪಂಗಡವನ್ನು ಕೈಬಿಟ್ಟರೂ ದೇಶದ ಪ್ರಗತಿ ಸಾಧನೆಯಾಗುವುದಿಲ್ಲವೆಂದೂ ಅಧ್ಯಕ್ಷರು ನುಡಿದರು. ಕಾಂಗ್ರೆಸ್ಸಿನವರು ರಚನಾತ್ಮಕ ಕಾರ್ಯಗಳನ್ನು ನಡೆಸಬೇಕೆಂದೂ, ಗಾಂಧಿಜಿಯವರ ಅತ್ಯಂತ ಪ್ರಿಯವಾದ ಈ ಕಾರ್ಯಕ್ರಮವನ್ನು ಅವರು ಮರೆಯಬಾರದೆಂದೂ ಹೇಳಿ, ಮುಂದೆ ರಚನಾತ್ಮಕ ಕಾರ್ಯ ನಡೆಸಲು ಆಂದೋಳನ ನಡೆಸಬೇಕಾಗಿರುವುದೆಂದು ಸೂಚಿಸಿದರು. ಕಾಂಗ್ರೆಸ್ ಸಂಸ್ಥೆಯಲ್ಲಿ ಐಕ್ಯವು ಕಾಯಬೇಕೆಂದು ಅವರು ಹಾರೈಸಿದರು.

ಮಧ್ಯಾಹ್ನ ಶ್ರೀ ಟಿ ಸುಬ್ರಹ್ಮಣ್ಯರವರು ಹೊಸ ಮೈಸೂರು ರಾಜ್ಯದ ಸಂಘಟನೆಗೆ ಸ್ವಾಗತ ಬಯಸುವ ಬಗ್ಗೆ ನಿರ್ಣಯವೊಂದನ್ನು ಮಂಡಿಸಿದರು. ಶ್ರೀ ಡಿ ಸೂರ್ಯನಾರಾಯಣರಾಯರು ಅನುಮೋದಿಸಿದರು.

ತಾಳವಾಡಿ ಫಿರ್ಕಾ, ಹೊಸೂರು ಮುಂತಾದ ಕನ್ನಡ ಪ್ರದೇಶಗಳನ್ನು ಮೈಸೂರಿಗೆ ಸೇರಿಸಬೇಕೆಂದು ಶ್ರೀಗಳಾದ ಮೂಡಲಗಿರಿಗೌಡ ಮತ್ತು ಆರ್. ಅನಂತರಾಮಯ್ಯನವರು ತಿದ್ದುಪಡಿಗಳನ್ನು ತಂದರು. ಸೂಚಕರು ಉತ್ತರವಿತ್ತು, ಈ ಬಗ್ಗೆ ಚಳುವಳಿಗಳು ಅಪ್ರಸ್ತುತವಾಗುವುವೆಂದೂ, ಝೋನಲ್ ಕೌನ್ಸಿಲ್ ಗಳು ಪ್ರಶ್ನೆಯನ್ನು ಪರಿಶೀಲಿಸುವುವೆಂದೂ ಎಚ್ಚರಿಸಿದರು ಶ್ರೀ ಚನ್ನಯ್ಯನವರು ಹಿತವಚನಗಳನ್ನಿತ್ತ ನಂತರ ತಿದ್ದುಪಡಿಗಳು ವಾಪಸಾಗಿ, ನಿರ್ಣಯವನ್ನು ಅಂಗೀಕರಿಸಲಾಯಿತು

ಭೂದಾನ ಚಳುವಳಿಗೆ ಸ್ವಾಗತ ನೀಡುವ ನಿರ್ಣಯವನ್ನು ಶ್ರೀ ಎ ಪಿ ಬಿ .. ರವರೂ ಮತ್ತು ಭಾರತದ ವಿದೇಶಾಂಗ ನೀತಿಗೆ ಬೆಂಬಲ ನೀಡುವ ನಿರ್ಣಯವನ್ನು ಶ್ರೀ ಟಿ. ಮರಿಯಪ್ಪನವರೂ ಮಂಡಿಸಿ ಅವುಗಳು ಅಂಗೀಕೃತವಾದುವು.

ಬ್ರಿಟಿಷ್ ಸೈನ್ಯಗಳ ಮೇಲೆ ಈಜಿಪ್ಟಿನವರ ರಾಕೆಟ್ ಧಾಳಿ

ಪೋರ್ಟ್ ಸೈಯದ್‌ನಲ್ಲಿ ನೆನ್ನೆ ಬ್ರಿಟಿಷ್ ಟ್ಯಾಂಕು ಪಡೆಯೊಂದರ ಮೇಲೆ ಈಜಿಪ್ಟಿನ ಕಮ್ಯಾಂಡೊ ಸೈನಿಕರು ಹಠಾತ್ತನೆ ರಾಕೆಟ್ ಮತ್ತು ಗ್ರೆನೇಡ್ ಧಾಳಿ ನಡೆಸಿದರು. ಹೋಗುತ್ತಿರುವ ಬ್ರಿಟಿಷ್ ಪಡೆಗಳ ಮೇಲೆ ಧಾಳಿ ನಡೆಸಲಾಯಿತು. ಈ ಬಗ್ಗೆ ಈಜಿಪ್ಟ್ ಅಧಿಕಾರಿಗಳಿಗೆ ವಿಶ್ವಸಂಸ್ಥೆಯ ದಳದ ಪ್ರಧಾನಾಧಿಕಾರಿಯು ಪ್ರತಿಭಟನೆ ಸೂಚಿಸಿದ್ದಾರೆ.

ಗಂಧದೆಣ್ಣೆ ಕಾರ್ಮಿಕರಿಂದ ಮುಷ್ಕರದ ನಿರ್ಧಾರ

ಇಲ್ಲಿನ ಸರ್ಕಾರಿ ಗಂಧದೆಣ್ಣೆ ಕಾರ್ಖಾನೆ ಕಾರ್ಮಿಕರು ಮೊನ್ನೆ ಮುಷ್ಕರದ ಬಗ್ಗೆ ಸರ್ವಾನುಮತದ ಮತದಾನವನ್ನಿತ್ತರು. ಶ್ರೀ ಬಿ. ಬಾಲಯ್ಯನವರು ಅಧ್ಯಕ್ಷತೆ ವಹಿಸಿದ್ದರು

ಕೃಷ್ಣರಾಜಸಾಗರಕ್ಕೆ ನೇಪಾಳದ ಪ್ರಧಾನಿ ಭೇಟಿ

ನೇಪಾಳದ ಪ್ರಧಾನಿ ಟಂಕಾ ಪ್ರಸಾದ ಆಚಾರ್ಯರವರು ಮೊನ್ನೆ ಕೃಷ್ಣರಾಜಸಾಗರಕ್ಕೆ ಭೇಟಿಯಿತ್ತು ಬೃಂದಾವನದ [illegible] ದೃಶ್ಯಗಳನ್ನು ವೀಕ್ಷಿಸಿ ಸಂತೋಷವನ್ನು ವ್ಯಕ್ತಪಡಿಸಿದರು. ರಾತ್ರಿ ಅಲ್ಲಿಯೇ ಭೋಜನ ಮಾಡಿ ಬೆಂಗಳೂರಿಗೆ ಹಿಂದಿರುಗಿದರು.

ಕಾಮರಾಜ ನಾಡಾರರಿಗೆ ಪೌರಸಭೆಯ ಸತ್ಕಾರ

ಮೈಸೂರು ೧೬—

ಮದರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜ ನಾಡಾರ್‌ರವರ ಗೌರವಾರ್ಥವಾಗಿ ನೆನ್ನೆ ನಗರದ ಪೌರಸಭೆಯವರು ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು ಅಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಅವರನ್ನು ಸ್ವಾಗತಿಸಿ, ದೇಶಕ್ಕಾಗಿ ಅವರು ಮಾಡಿರುವ ಸೇವೆಯನ್ನು ಪ್ರಶಂಸಿಸಿದರು ಮೈಸೂರು ನಗರದ ಅಭಿವೃದ್ಧಿಗಾಗಿ ಪೌರಸಭೆಯವರು ಕೈಗೊಂಡಿರುವ ವಿಷಯಗಳನ್ನು ಅವರು ವಿವರಿಸಿದರು

ಕಾಮರಾಜರು ಉತ್ತರಿಸುತ್ತಾ, ಮೈಸೂರು ನಗರದ ಸೌಂದರ್ಯವನ್ನು ಕೊಂಡಾಡಿದರು ಭರತಖಂಡಕ್ಕೆ ಬಂದವರು ಮೈಸೂರನ್ನು ನೋಡದಿದ್ದರೆ ತಮ್ಮ ದೇಶವನ್ನೇ ನೋಡಿದಂತಾಗುವುದಿಲ್ಲವೆಂದು ಅವರು ಹೇಳಿದರು ರಸ್ತೆ ಗ್ರಾಮ ನೈರ್ಮಲ್ಯ, ದೀಪ, ನೀರು ಮುಂತಾದುವುಗಳಲ್ಲದೆ ಬಡಜನರ ವಸತಿ ಸೌಕರ್ಯಗಳನ್ನು ಒದಗಿಸುವುದು ಪೌರಸಭೆಗಳ ಒಂದು ಮುಖ್ಯ ಕರ್ತವ್ಯವಾಗಿದೆಯೆಂದು ಅವರು ಹೇಳಿದರು ಬಡತನವು ವಿಶೇಷವಾಗಿರುವ ಈ ದೇಶದಲ್ಲಿ ದೊಡ್ಡದೊಡ್ಡ ಕಟ್ಟಡಗಳನ್ನು ಕಟ್ಟಿಸಲಾಗದಿದ್ದರೂ, ದೀನದಲಿತರಿಗೆ ಸಣ್ಣ ಸಣ್ಣ ಗುಡಿಸಿಲುಗಳನ್ನಾದರೂ ಕಟ್ಟಿಸಿಕೊಡಬೇಕೆಂದು ಅವರು ಸೂಚಿಸಿದರು

ಡಾ॥ ಶ್ಯಾಮಾಶಂಕರ್ ಮತ್ತು ವೃಂದದವರಿಂದ ಗಾನ ಗೋಷ್ಠಿಯು ನಡೆಯಿತು

ಅಂಧಕಾಸುರ ಸಂಹಾರ ಉತ್ಸವ

ನಾಳೆ ರಾತ್ರಿ ೮-೩೦ ಘಂಟೆಗೆ ಕೋಟೆ ತ್ರಿನಯನೇಶ್ವರಸ್ವಾಮಿ ದೇವಸ್ಥಾನದ ಅಂಧಕಾಸುರ ಸಂಹಾರ ಉತ್ಸವವು ಅರಮನೆಯ ಮುಂಭಾಗದಲ್ಲಿ ಜರಗುತ್ತದೆ

ತಾಳವಾಡಿ ಫಿರ್ಕಾ ಪ್ರಜೆಗಳ ಪ್ರದರ್ಶನ

ಕೊಯಮತ್ತೂರು ಜಿಲ್ಲೆಯ ಗೋಬಿಚೆಟ್ಟಿಪಾಳ್ಯ ತಾಲ್ಲೂಕು ತಾಳವಾಡಿ ಫಿರ್ಕಾದ ಸುಮಾರು ೭೦೦ ಜನರು ನೆನ್ನೆ ಇಲ್ಲಿಗೆ ಆಗಮಿಸಿ ಟೌನ್‌ಹಾಲಿನಲ್ಲಿ ಕಾಂಗ್ರೆಸ್ ರಾಜಕೀಯ ಸಮ್ಮೇಳನ ಸೇರಿದ್ದ ಸಮಯದಲ್ಲಿ ಪ್ರದರ್ಶನ ನಡೆಸಿದರು ತಾಳವಾಡಿ ಫಿರ್ಕಾವನ್ನು ಮೈಸೂರಿಗೆ ಸೇರಿಸಬೇಕೆಂದು ಒತ್ತಾಯಪಡಿಸಲಾಯಿತು ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜನಾಡಾರರ ಮುಂದೆ ಅವರು ತಮ್ಮ ಅಭಿಪ್ರಾಯ ಸೂಚಿಸಲು ನಗರಕ್ಕೆ ಆಗಮಿಸಿದ್ದರು ಅಲ್ಲಿನ ಶ್ರೀ ಯು ಆರ್ ಮಾದಪ್ಪನವರು ನೇತೃತ್ವವನ್ನು ವಹಿಸಿದ್ದರು

ವಿಧಾನ ಸಭಾಧ್ಯಕ್ಷತೆಗೆ ಕಾಂಗ್ರೆಸ್ ಉಮೇದುವಾರರು

ಬೊಂಬಾಯಿ ಮಾಜಿ ಡೆಪ್ಯುಟಿ ಸ್ಪೀಕರ್ ಎಸ್ ಆರ್ ಕಂಠಿಯವರಿಗೆ ಹುದ್ದೆ

ಮೈಸೂರು ೧೬—

ವಿಸ್ತೃತ ಮೈಸೂರಿನ ವಿಧಾನ ಸಭೆಯ ಅಧ್ಯಕ್ಷತೆಗೆ ಶಾಸನಸಭಾ ಕಾಂಗ್ರೆಸ್ ಪಕ್ಷದ ಉಮೇದುವಾರರಾಗಿ ಬೊಂಬಾಯಿ ವಿಧಾನಸಭೆ ಮಾಜಿ ಉಪಾಧ್ಯಕ್ಷ ಶ್ರೀ ಎಸ್ ಆರ್ ಕಂಠಿಯವರನ್ನು ಸರ್ವಾನುಮತದಿಂದ ಆರಿಸಲು ನಾಳೆ ಇಲ್ಲಿ ಸೇರಲಿರುವ ಪಕ್ಷದ ಸಭೆಯು ನಿರ್ಧರಿಸಲಿರುವುದಾಗಿ ಗೊತ್ತಾಗಿದೆ ಶ್ರೀ ಟಿ ಸುಬ್ರಹ್ಮಣ್ಯರವರು ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಮುಂದುವರಿಯುವರು

ಹಾಕಿ ಪಂದ್ಯದಲ್ಲಿ ಮೈಸೂರಿನವರ ವಿಜಯ

ಮೈಸೂರು ಸಂಸ್ಥಾನ ಪೋಲೀಸಿನವರಿಗೂ, ಮದರಾಸು ಸಂಸ್ಥಾನ ಪೋಲೀಸಿನವರಿಗೂ ನೆನ್ನೆ ನಡೆದ ಪಂದ್ಯದಲ್ಲಿ ಮೈಸೂರಿನವರು ೪-೧ ಗೋಲುಗಳಿಂದ ವಿಜಯಗಳಿಸಿದರು

ಗಂಡು ನಾಯಿ ಮತ್ತು ಹೆಣ್ಣು ನರಿಯ ಸಖ್ಯ

ಸೊರಬದ ಬಳಿ ಚಿಟ್ನೂರು ಗ್ರಾಮದ ಪಟೇಲರ ಮನೆಯಲ್ಲಿ ೬ ವರ್ಷಗಳಿಂದಲೂ ಇರುವ ರಾಜಣ್ಣ ಎಂಬ ಗಂಡು ನಾಯಿಯು ಹೆಣ್ಣುನರಿಯೊಡನೆ ಸಖ್ಯ ಬೆಳೆಸಿದ್ದ ವಿಷಯವು ವರದಿಯಾಗಿದೆ ಎಂದಿನಂತೆ ಅದು ಕಳೆದ ತಿಂಗಳು ಒಂದು ದಿನ ಜಾನುವಾರುಗಳ ಜೊತೆಯಲ್ಲಿ ಅಡವಿಗೆ ಹೋಗಿ ೪ ದಿನಗಳಾದರೂ ವಾಪಸು ಬರಲಿಲ್ಲವೆಂದೂ ಅದನ್ನು ಗ್ರಾಮಸ್ಥರು ಹುಡುಕಲು ಹೊರಟಾಗ ಹೆಣ್ಣು ನರಿಯೊಡನೆ ಇರುವುದು ಪತ್ತೆಯಾಯಿತೆಂದೂ ಹೇಳಲಾಗಿದೆ ಜನರು ನರಿಯನ್ನು ಓಡಿಸಿ, ಆಹಾರವಿಲ್ಲದೆ ಸಣ್ಣಗಾಗಿದ್ದ ನಾಯಿಯನ್ನು ಮನೆಗೆ ಕರೆತಂದರು

ಬೊಂಬಾಯಿ ಮಂತ್ರಿಯ ಮೇಲೆ ಗುಜರಾತಿಗಳ ಧಾಳಿ

ಬೊಂಬಾಯಿಯ ಸಮಾಜ ಯೋಗಕ್ಷೇಮ ಮಂತ್ರಿ ಶ್ರೀಮತಿ ಇಂದುಮತಿ ಚಿಮನ್‌ಲಾಲ್‌ರವರ ಮೇಲೆ ಮಹಾಗುಜರಾತ್ ಪ್ರದರ್ಶನಕಾರರು ಅಹಮದಾಬಾದಿನಲ್ಲಿ ಧಾಳಿ ಮಾಡಿ ಸ್ವಲ್ಪ ಗಾಯಪಡಿಸಿದ್ದಾರೆ ಕಪ್ಪು ಬಾವುಟ ಪ್ರದರ್ಶನ ಮಾಡುತ್ತ ಧ್ವಜದ ಕೋಲಿನಿಂದ ಹೊಡೆಯಲಾಯಿತೆಂದು ಹೇಳಲಾಗಿದೆ ಮಹಿಳೆಯರ ಎರಡು ಗುಂಪುಗಳಿಗೆ ಘರ್ಷಣೆಯಾಗಿ ಇಬ್ಬರು ದೊಡ್ಡವರಿಗೂ ಮೂರು ಮಕ್ಕಳಿಗೂ ಗಾಯವಾಯಿತು

ಲಂಡನ್ನಿನಲ್ಲಿ ನೆಹರೂ ಮತ್ತು ಬ್ರಿಟಿಷ್ ಪ್ರಧಾನಿ ಸಮಾಗಮ

ಅಮೆರಿಕಾ ಅಧ್ಯಕ್ಷರೊಡನೆ ಮಾತುಕತೆಗಾಗಿ ಭಾರತದ ಪ್ರಧಾನಿಯ ಪ್ರವಾಸ

ಪ್ರಧಾನಿ ನೆಹರೂರವರು ತಮ್ಮ ಪುತ್ರಿಯೊಡಗೂಡಿ ದೆಹಲಿಯಿಂದ ಅಮೆರಿಕಾ ಪ್ರವಾಸಕ್ಕಾಗಿ ಹೊರಡುತ್ತಾರೆ ಅವರು ಅಧ್ಯಕ್ಷ ಐಸೆನ್‌ಹೋವರರೊಡನೆ ದೀರ್ಘ ಸಮಾಲೋಚನೆ ನಡೆಸುವರು ಐಸೆನ್‌ಹೋವರರನ್ನು ಭಾರತಕ್ಕೆ ಭೇಟಿ ಕೊಡುವಂತೆ ಅವರು ಕೋರುವರು

ನೆನ್ನೆ ಅವರು ಲಂಡನ್ನನ್ನು ತಲುಪಿದರು ವಿಶ್ರಾಂತಿ ಪಡೆದು ಜಮೈಕಾದಿಂದ ಹಿಂದಿರುಗಿದ ಬ್ರಿಟಿಷ್ ಪ್ರಧಾನಿ ಈಡನ್ನರೊಡನೆ ನೆಹರೂರವರು ೪೫ ನಿಮಿಷ ಕಾಲ ಸಂಭಾಷಣೆ ನಡೆಸಿದರು ಪಶ್ಚಿಮ ಏಷ್ಯಾ ಮತ್ತು ಹಂಗೆರಿ ಬಿಕ್ಕಟ್ಟಿನನಂತರ ಇದೇ ಮೊದಲಾಗಿ ಉಭಯ ನಾಯಕರ ಸಮಾಗಮವಾಗಿರುವುದು ಈಜಿಪ್ಟ್ ಘಟನೆಯ ಪರಿಣಾಮವಾಗಿ ಭಾರತವು ಬ್ರಿಟನ್ನನ್ನು ಟೀಕಿಸಿದರೂ ಅದರೊಡನೆ ಜಗಳವಾಡಿಲ್ಲವೆಂದು ನೆಹರೂ ತಿಳಿಸಿದರು

ಹೋಟೇಲು ಕಾರ್ಮಿಕರ ಪ್ರದರ್ಶನ ಮುಕ್ತಾಯ

ನಗರದ ಶ್ರೀರಾಮಪೇಟೆಯಲ್ಲಿರುವ ನ್ಯೂ ಚಾಮುಂಡೇಶ್ವರಿ ಕೆಫೆ ಮುಂದೆ ಇಬ್ಬರು ಕಾರ್ಮಿಕರು ಎರಡು ದಿನಗಳಿಂದ ನಡೆಸುತ್ತಿದ್ದ ಪ್ರದರ್ಶನವನ್ನು ನೆನ್ನೆ ಮುಕ್ತಾಯಗೊಳಿಸಿದರು ಅಸಿಸ್ಟೆಂಟ್ ಲೇಬರ್ ಕಮಿಷನರರು ಅವರ ದೂರನ್ನು ಪರಿಶೀಲನೆಗೆ ತೆಗೆದುಕೊಂಡಿರುವುದರಿಂದ ಕಾರ್ಮಿಕರ ಸಂಘದವರು ಸತ್ಯಾಗ್ರಹವನ್ನು ನಿಲ್ಲಿಸುವಂತೆ ಸೂಚಿಸಿದ್ದರು

ಸತ್ಯಾಗಾಲಂ ಶ್ರೀನಿವಾಸ ದೇಶಿಕಾಚಾರ್ಯರ ನಿಧನ

ರಾಜಧಾನಿಯ ಶ್ರೀಮನ್ಮಹಾರಾಜರವರ ಸಂಸ್ಕೃತ ಮಹಾ ಪಾಠಶಾಲಾ ಸರಸ್ವತಿ ಪುಸ್ತಕ ಭಂಡಾರದ ಅಧಿಕಾರಿಗಳಾಗಿದ್ದು ನಿವೃತ್ತರಾದ ಸತ್ಯಾಗಾಲಂ ಶ್ರೀನಿವಾಸ ದೇಶಿಕಾಚಾರ್ಯರು ಕಳೆದ ಶುಕ್ರವಾರ ರಾತ್ರಿ ತಮ್ಮ ೭೭ನೇ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ತುಂಬಾ ವಿಷಾದಿಸುತ್ತೇವೆ ದಿವಂಗತರು ಒಳ್ಳೆಯ ಆಸ್ತಿಕ ಶಿರೋಮಣಿಗಳಾಗಿದ್ದರು ಅವರಿಗೆ ಪತ್ನಿಯೂ ಮತ್ತು ನಾಲ್ಕು ಮಂದಿ ಪುತ್ರರೂ ಇರುವರು ಭಗವಂತನು ಮೃತರ ಆತ್ಮಕ್ಕೆ ಶಾಂತಿಯನ್ನು ಕರುಣಿಸಲೆಂದು ಕೋರಿ ಅವರ ಬಂಧು ವರ್ಗಕ್ಕೆ ನಮ್ಮ ಹೃತ್ಪೂರ್ವಕ ಅನುಕಂಪವನ್ನು ಸೂಚಿಸುತ್ತೇವೆ

Edited Printed and Published by
A R Nagarajan at Sadhvi Press
D Subb al Road, Mysore

ವಿಶ್ವಸಂಸ್ಥೆಯ ದಳದಿಂದ ಪೋರ್ಟ್ ಸೈಯದ್ ವಶ

ವಿಶ್ವಸಂಸ್ಥೆಯ ದಳಗಳು ನೆನ್ನೆ ಪೋರ್ಟ್ ಸೈಯದ್ ನಗರವನ್ನು ಪೂರ್ಣವಾಗಿ ವಶ ಕೊಂಡುವು ರೇವು ಬಳಿ ಬ್ರಿಟಿಷ್ ಪ ತ್ರಯಾಣಕ್ಕಾಗಿ ಶೇಖರವಾಗಿವೆ

ಗೀತಾ ಜಯಂತಿ ಕಾರ್ಯಕ್ರಮ

ಅಶೋಕಾ ರಸ್ತೆ ಗೀತಾ ಮಂದಿರದಲ್ಲಿ ಜಯಂತಿ ಅಂಗವಾಗಿ ನಾಳೆ ಸಂಜೆ ೬ ಶ್ರೀ ನದೀಪುರಂ ಶ್ರೀನಿವಾಸ ರಂಗಾಚಾ ಭಕ್ತ ಮಯೂರಧ್ವಜ ಎಂಬ ಹರಿಕಥೆ ಮಾಡುವರು

ಪಿ ಕೆ ಎ ಚಾ ಚಾರ್
ಡೋರ್ ನಂ ೧೪೬ ತೂಗುದೀಪ ಬೀದಿ
ಕೆ ಆರ್ ಮೊಹಲ್ಲಾ, ಮೈಸೂರು
ನಾವು ಎಂಗ್ರೇವಿಂಗ್ ಮತ್ತು ಬ್ಲಾ
ನ್ನು ತಯಾರು ಮಾಡುತ್ತೇವೆ ಒಮ್ಮೆ ಭೇಟಿ

ಮೈಸೂರಿನಲ್ಲಿ ಪ್ರತಿ ತಿಂಗ
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ-ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ
— ಭೇಟಿಯ ಕಾಲ —
ಬೆಳಿಗ್ಗೆ 7 30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7 30
ಮೇಲಿನ ಕಾರ್ಯಕ್ರಮವನ್ನು ಗಮನಿ
ಮತ್ತು ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ವ
ವಿಮಾನದಲ್ಲಿ ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಿಸಿ
ಇದು ವಜ್ರ, ಕೆಂಪು ಮುತ್ತು, ಪಚ್ಚೆ
ಗೋಮೇಧಿಕ ನೀಲ ಪದ್ಮರಾಗಗಳು ಮತ್ತು
ಶಿಲಾ—ಈ 9 ಅಮೂಲ್ಯ ಹರಳುಗಳ ಸಂ
ಇದ್ದು ಎಲ್ಲಾ ಸಾಮಾನ್ಯ ಹಾಗೂ
ಖಾಯಿಲೆಗಳಿಗೂ ಅತ್ಯುತ್ತಮ ಆರೋಗ್ಯ
ವಾದ ಔಷಧಿ ಅದೊಂದೇ
NAVRATNA KALPA PHARMAC
JULLUNDUR CITY (India)

ಕೇವಲ ಎರಡು ನಾಟಕಗಳು ಮಾತ್ರ!
ವಿಖ್ಯಾತ ಚಲನ ಚಿತ್ರ ನಟರಾದ ಎಂ ಆರ್ ರಾಧ ಮತ್ತು ಪಾರ್ಟಿಯವರು
ಭಾರತದ ನಾಟಕ ಪ್ರಪಂಚದಲ್ಲಿ ಕ್ರಾಂತಿಯನ್ನುಂಟುಮಾಡಿರುವ
★ ರಕ್ತ ಕಣ್ಣೀರು ★
ಎಂಬ ನಾಟಕವನ್ನು ಮೈಸೂರು ಟೌನ್‌ಹಾಲಿನಲ್ಲಿ
ಇದೇ 25 12 56 ನೇ ಮಂಗಳವಾರ ಮತ್ತು 26-12 56 ನೇ ಬುಧವಾರ
ಸಂಜೆ 6 ಗಂಟೆಗೆ ಅಭಿನಯಿಸುವರು
ಟಿಕೆಟ್ಟುಗಳು ದೊರೆಯುವ ಸ್ಥಳ ① ಒಸದೇಶದ ಪ್ರೆಸ್ ದೇವರಾಜ ಮಾರ್ಕೆಟ್
② ವಿರೂಪಾಕ್ಷ ಸ್ಟೋರ್ಸ್ ಸಾರದಿ ರಸ್ತೆ
ಅಶೋಕ ಆರ್ಟ್ ಆರ್ಟಿಸು ಮೈಸೂರು — ಪ್ರಕಟಣೆ ಪ್ರಚಾ

ಬಟ್ಟೆಗಳ ಶುಭ್ರತೆಗೆ
ಅಶೋಕ ಮತ್ತು ಅಶೋಕ
ನಂ. 908 ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು

ಅರುಣ್ ಕಾಫಿ ವರ್ಕ್ಸ್
ಹಳೇ ಪೋಸ್ಟ್ ಆಫೀಸ್ ರೋಡು, ಮೈಸೂರು
ನಮ್ಮಲ್ಲಿ ಹೊಸದಾದ ಕಾಫಿ ಬೀಜ ಮತ್ತು ಕಾಫಿ ಪುಡಿ ಈ ಕೆಳಗೆ ಕಂಡ ದರದಲ್ಲಿ ದೊರೆಯುತ್ತವೆ —
: ಕಾಫಿ ಬೀಜ ಪೌಂಡು ಒಂದಕ್ಕೆ :
ಪ್ಲಾಂಟೇಷನ್ ಪೀಬರಿ ರೂ 2 3 0 — ಪ್ಲಾಂಟೇಷನ್ (ಎ) ರೂ 2 0 0
ಅರಾಬಿಕಾ ಚೆರ್ರಿ ರೂ 1 14 0 — ರೊಬಸ್ಟಾ 1 [illegible] 0
— ಕಾಫಿ ಪುಡಿ ಪೌಂಡು ಒಂದಕ್ಕೆ
ಪ್ಲಾಂಟೇಷನ್ ಪೀಬರಿ ರೂ [illegible] 13 0 — ಪ್ಲಾಂಟೇಷನ್ 'ಬಿ' ರೂ 2 11 0
ಚೆರ್ರಿ ರೂ 2 4 0 — ಸ್ಪೆಷಲ್ ಹೌಸ್ ಬ್ಲೆಂಡ್ ರೂ 2 8 0
ಹೋಟೇಲ್ ಸ್ಪೆಷಲ್ ರೂ 2 6 0
ಉತ್ತಮವಾದ ದಿನಸಿಗಳೂ ಸ್ಟೇಷನರಿ ಸಾಮಾನುಗಳೂ ಸಹ ದೊರೆಯುತ್ತವೆ

ಮೈಸೂರು ಕಾಫಿ ಸಪ್ಲೈಸ್
ಹಳೇ ಮೈಸೂರು ಬ್ಯಾಂಕ್ ರಸ್ತೆ, ಮೈಸೂರು
ನಮ್ಮಲ್ಲಿ ಹೊಸದಾದ ಕಾಫಿ ಬೀಜ ಮತ್ತು ಕಾಫಿ ಪುಡಿ ಈ ಕೆಳಗೆ ಕಂಡ ದರದ ದೊರೆಯುತ್ತವೆ —
ಕಾಫಿ ಬೀಜ ಪೌಂಡು ಒಂದಕ್ಕೆ
ಪೀಬರಿ ರೂ [illegible] 3 0 ಪ್ಲಾಂಟೇಷನ್ 'ಎ' 2-0 6 ಪ್ಲಾಂಟೇಷನ್ 'ಬಿ' 0-
ಅರಾಬಿಕಾ ಚೆರ್ರಿ ರೂ 1-14-0 — ರೊಬಸ್ಟಾ 1-9-
ಕಾಫಿ ಪುಡಿ ಪೌಂಡ್ ಒಂದಕ್ಕೆ
ಪೀಬರಿ ರೂ 2-13 0 — ಪ್ಲಾಂಟೇಷನ್ 'ಎ' [illegible] 11-0
ಚೆರ್ರಿ 2-4-0 — ಪ್ಲಾಂಟೇಷನ್ 'ಬಿ' 2 8 0
ಸ್ಪೆಷಲ್ಲಾಗಿ ಹೋಟೇಲಿನವರಿಗೆ ನಾಲ್ಕು ರಕಂ ಬೀಜ ಬ್ಲೆಂಡ್ ಮಾಡಿ ಉತ್ತ ವಾದ ಪುಡಿಯನ್ನು ಅತಿ ಸುಲಭದ ದರದಲ್ಲಿ ಒದಗಿಸಲಾಗುತ್ತದೆ

ಟೆಲಿಫೋನ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[illegible]

ಬ್ರಾಂಕಾಲ್
[illegible]

ಸಪ್ಲೈ ಅಂಡ್ ಕೋ.,
[illegible]
71/1 [illegible]
[illegible]
ಬೆಂಗಳೂರು-2

ಸಂಪುಟ : ೧೫] SADHVI : TUESDAY 18—12—1956 ಮೈಸೂರು : ಮಂಗಳವಾರ ೧೮—೧೨—೧೯೫೬ [ಸಂಚಿಕೆ : ೧೪೪

ಯೆಮೆನ್ ರಾಜ್ಯದ ಮೇಲೆ ಬ್ರಿಟಿಷ್ ಸೇನೆಗಳ ಆಕ್ರಮಣವೇ

ಶ್ವವಿದ್ಯಾನಿಲಯದ ಪರೀಕ್ಷೆಗಳು ಮುಂದಕ್ಕೆ

ಮೈಸೂರು ೧೭

ಬರುವ ಫೆಬ್ರವರಿ ೨೫ ರಿಂದ ಮಾರ್ಚ್ ೧೫ ರ ರೆಗೆ ಮಹಾ ಚುನಾವಣೆಗಳು ನಡೆಯುತ್ತಿದ ರಿಂದ ಮಾರ್ಚ್ ೪ ರಿಂದ ಆರಂಭವಾಗಬೇಕಾಗಿ ದ್ದ ವಿಶ್ವವಿದ್ಯಾನಿಲಯದ ಪರೀಕ್ಷೆಗಳನ್ನು ಮಾ ರ್ಚ್ ೨೫ಕ್ಕೆ ಮುಂದುವರಿಸಲಾಗುವುದೆಂದು ತಿಳಿ ದು ಬಂದಿದೆ ವಿಶ್ವವಿದ್ಯಾನಿಲಯದ ಅಧ್ಯಾಪಕ ರುಗಳು ಚುನಾವಣಾಧಿಕಾರಿಗಳಾಗಿ ನೇಮಿಸಲ್ಪ ಡುವುದರಿಂದ ಈ ಬದಲಾವಣೆಯನ್ನು ಮಾಡ ಲಾಗುವುದು

ಕನ್ಯಕಾಪರಮೇಶ್ವರಿ ಸೊಸೈಟಿಯ ಡೈರೆಕ್ಟರುಗಳು

ನಗರದ ಕನ್ಯಕಾಪರಮೇಶ್ವರಿ ಕೋ ಆಪರೇ ಟಿವ್ ಸೊಸೈಟಿಯ ಡೈರೆಕ್ಟರುಗಳ ಚುನಾವಣೆ ಯು ಮೊನ್ನೆ ನಡೆದು, ಕೆಳಗೆ ಕಂಡವರು ಆರಿಸ ಲ್ಪಟ್ಟರು:- ಶ್ರೀಗಳಾದ ಕೆ ಆರ್ ತಿಮ್ಮ ರಾಯಶೆಟ್ಟಿ, ಪಿ ಗೋಪಾಲಕೃಷ್ಣಶೆಟ್ಟಿ, ಬಿ ಎಲ್ ನಾರಾಯಣಸ್ವಾಮಿ ಶೆಟ್ಟಿ, ಸಿ ಆರ್ ವೆಂಕಟಸುಬ್ಬಯ್ಯಶೆಟ್ಟಿ, ಎ ಎಲ್ ಸುಂದರ ನಾರಾಯಣಶೆಟ್ಟಿ, ಬಿ ನಂಜಪ್ಪಶೆಟ್ಟಿ, ಪಿ ಎಸ್ ನಾಗರಾಜಶೆಟ್ಟಿ, ವಿ ಎ ಕೊಣ್ಣಪ್ಪಶೆಟ್ಟಿ, ಸಿ ಸುಬ್ರಾಯಶೆಟ್ಟಿ, ಎಸ್ ನಾಗರಾಜಶೆಟ್ಟಿ, ಬಿ ಲಕ್ಷ್ಮಣಶೆಟ್ಟಿ, ಕೆ ಯಂಗಯ್ಯಶೆಟ್ಟಿ, ಶ್ರೀರಾಮಶೆಟ್ಟಿ ಕೆ ಅಶ್ವತ್ಥನಾರಾಯಣ ಶೆಟ್ಟಿ ಮತ್ತು ಪುಟ್ಟಯ್ಯ ನಾಗರಾಜಶೆಟ್ಟಿ

ಡಿ|| ಶಂಕರಾನಂದ ಭಾರತೀ ಸ್ವಾಮಿಗಳವರ ಬಗ್ಗೆ ಉಪನ್ಯಾಸ

ಅಶೋಕಾ ರಸ್ತೆಯಲ್ಲಿರುವ ಗೀತಾ ಮಂದಿರದ ಗೀತಾ ಜಯಂತಿ ಅಂಗವಾಗಿ ನಾಳೆ ಸಂಜೆ ೬|| ಘಂಟೆಗೆ ಕಾರ್ಯದರ್ಶಿ ಯವರ ವರದಿ, ಮಹಾರಾಜಾ ಕಾಲೇಜು ತತ್ವ ಶಾಸ್ತ್ರಾಧ್ಯಾಪಕರಾದ ಶ್ರೀ ವಿ ಮುದ್ದುಲಿಂಗಯ್ಯ ನವರಿಂದ "ಗೀತೆಯೂ ಸಮಾಜ ಕಲ್ಯಾಣವೂ" ಎಂಬ ವಿಷಯವಾಗಿ ಉಪನ್ಯಾಸ ಮತ್ತು ಅಡ್ವೋಕೇಟ್ ಶ್ರೀ ಕೆ ಶೇಷಾದ್ರಿಯವರಿಂದ ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳವರ ಬಗ್ಗೆ ಉಪನ್ಯಾಸಗಳು ಇವೆ. ಪ್ರಾ [illegible] ಗೀತಾ ಪಾರಾಯಣ, ಭಜನೆ ಮಂಗಳಾರತಿಯಿಂದ ನಾಮ ಸಂಕೀರ್ತನ ಮತ್ತು [illegible] ಯವರ ಉತ್ಸವವು ಜರುಗುವುದು.

ಕಾಂಗ್ರೆಸ್ ರಾಜಕೀಯ ಸಮ್ಮೇಳನ ಸಮಿತಿಯ ಕೃತಜ್ಞತೆ

ನಗರದಲ್ಲಿ ಕಳೆದ ೧೫ ಮತ್ತು ೧೬ರಂದು ನಡೆದ ಕಾಂಗ್ರೆಸ್ ರಾಜಕೀಯ ಸಮ್ಮೇಳನವು ಯಶಸ್ವಿಯಾಗಿ ನಡೆಯುವಂತೆ ಸಹಾಯ ನೀಡಿದವರಿಗೆಲ್ಲಾ ಸ್ವಾಗತ ಸಮಿತಿಯ ಪರವಾಗಿ ಕಾರ್ಯದರ್ಶಿ ಶ್ರೀ ಡಿ ಸೂರ್ಯನಾರಾಯಣರಾವ್ ಕೃತಜ್ಞತೆಯನ್ನು ಅರ್ಪಿಸಿರುತ್ತಾರೆ

[illegible] ಪಿ ಮೋನಪ್ಪನವರಿಗೆ ೧ ವರ್ಷ [illegible]

ಸಂಸ್ಥಾನದ ಪೊಲೀಸು ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ಪಿ ಕೆ ಮೋನಪ್ಪನವರ ಸೇವಾವಧಿಯನ್ನು ಒಂದು ವರ್ಷಕಾಲ ಹೆ [illegible] ದೆ

ಯೆಮೆನ್ ರಾಜ್ಯದ ಮೇಲೆ ಬ್ರಿಟನ್ನಿನ ಆಕ್ರಮಣ ?

ಅರೇಬಿಯದ ದಕ್ಷಿಣದ ದೇಶವಾದ ಯೆಮೆನ್ ರಾಜ್ಯದಲ್ಲಿ ಬ್ರಿಟನ್ನು ಹೊಸ ಆಕ್ರಮಣ ಕ್ರಮ ನಡೆಸಿರುವುದಾಗಿ ಕೈರೋದಲ್ಲಿರುವ ಯೆಮೆನ್ ರಾಜ್ಯದ ರಾಯಭಾರಿಯು ಅರಬ್ ಲೀಗಿಗೆ ತಿಳಿಸಿರುವರೆಂದು ವರದಿಯಾಗಿದೆ ಬ್ರಿಟಿಷ್ ಟ್ಯಾಂಕುಗಳು, ಶಸ್ತ್ರ ಮೋಟಾರುಗಳು ಮತ್ತು ಸೈನಿಕರು ದಕ್ಷಿಣದ ಗಡಿಯನ್ನು ದಾಟುತ್ತಿರುವುದಾಗಿ ಹೇಳಲಾಗಿದೆ.

ಅನಾಥಾಲಯಕ್ಕೆ ಉಡುಪಿ ಸ್ವಾಮಿಗಳವರ ಭೇಟಿ

ನಗರದ ಸುಬ್ಬರಾಯನಕೆರೆ ಬಳಿ ದಿ|| ಎಂ ವೆಂಕಟಕೃಷ್ಣಯ್ಯನವರಿಂದ ೬೦ ವರ್ಷಗಳ ಹಿಂದೆ ಸ್ಥಾಪಿತವಾದ ಅನಾಥಾಲಯಕ್ಕೆ ಉಡುಪಿ ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು ನೆನ್ನೆ ಭೇಟಿಯಿತ್ತು ಅಲ್ಲಿನ ಕೆಲಸಕಾರ್ಯಗಳನ್ನು ನೋಡಿ ಮೆಚ್ಚಿಗೆಯನ್ನು ಸೂಚಿಸಿದರು ಆಲಯದ ಸಮಿತಿ ಅಧ್ಯಕ್ಷರಾದ ಶ್ರೀ ಹೆಚ್ ಸುಬ್ಬರಾಯರೂ, ಕಾರ್ಯದರ್ಶಿಗಳಾದ ಶ್ರೀ ಎಂ ಎಸ್ ಶ್ರೀನಿವಾಸರಾಯರೂ ಮತ್ತಿತರರೂ ಸ್ವಾಮಿಗಳವರನ್ನು ಸ್ವಾಗತಿಸಿದರು ಶ್ರೀಗಳವರು ವಿದ್ಯಾರ್ಥಿಗಳಿಗೆ ಹಿತವಚನವನ್ನಿತ್ತು, ಅವರು ತಮ್ಮ ನಿತ್ಯಕರ್ಮಗಳನ್ನು ಭಕ್ತಿಪೂರ್ವಕವಾಗಿ ಮಾಡಬೇಕೆಂದು ಸೂಚಿಸಿ, ವಿದ್ಯಾಭ್ಯಾಸಂಗದನಂತರ ಸಮಾಜಕ್ಕೆ ಸೇವೆ ಸಲ್ಲಿಸಲು ಸಿದ್ಧತೆಯನ್ನು ಪಡೆದುಕೊಳ್ಳಬೇಕೆಂದು ತಿಳಿಸಿದರು "ಧರ್ಮವು ಜೀವನದ ಎಲ್ಲ ಕ್ಷೇತ್ರಗಳಿಗೂ ಅನ್ವಯಿಸುತ್ತದೆಂದೂ, ಅದನ್ನು ಒಂದೊಂದು ಭಾಗವಾಗಿ ಪ್ರತ್ಯೇಕಿಸಬಾರದೆಂದೂ ಅವರು ನುಡಿದರು ಆಲಯಕ್ಕೆ ತಮ್ಮ ಪ್ರೋತ್ಸಾಹವನ್ನು ಸೂಚಿಸಲು ಪ್ರತಿ ವರ್ಷವೂ ೨೫ ರೂ. ಧನ ಸಹಾಯ ಮಾಡುವುದಾಗಿ ಶ್ರೀಗಳವರು ಅಪ್ಪಣೆ ಕೊಡಿಸಿರುವರು

ಗೀತಾ ಜಯಂತಿ ಮಹೋತ್ಸವ

ನಗರದ ಸಂತೆಪೇಟೆಯಲ್ಲಿರುವ ಕೊಂಕಣಿಗರ ಶ್ರೀರಾಮ ಮಂದಿರದಲ್ಲಿ ಕೊಂಕಣಿಗರ ವಿದ್ಯಾರ್ಥಿ ನಿಲಯದವರು ಗೀತಾ ಜಯಂತಿ ಮಹೋತ್ಸವದ ಪ್ರಯುಕ್ತ ನಾಳೆ ಸಂಜೆ ಆರರಿಂದ ೭ ಗಂಟೆಯವರೆಗೆ ಮಿ|| ಟಿ ಕೆ ವೇಣುಗೋಪಾಲರಾವ್ ರವರಿಂದ ಗೀತಾ ಸಂಸ್ಕೃತ ಅನುವಾದವನ್ನು ಏರ್ಪಡಿಸುತ್ತಾರೆ ಸಂಜೆ ೭ ಗಂಟೆಯಿಂದಾಚೆ, ಪ್ರತಿ ನಿತ್ಯವೂ ನಡೆಯುತ್ತಿರುವ ವೆಂಕಟೇಶ [illegible] ಕಥೆಯ ಮಂಗಳವೂ ನಡೆಯುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ವೀಣೆ ೭-೧೫ ಮತ್ತು ೮ ೧೫ ಎಂ ಎ ನಿರ್ಮಲಾದೇವಿ-ದೇವರನಾಮಗಳು ೭-೩೦ ಹಿಂದಿ ಶಿಕ್ಷಣ ಮಧ್ಯಾಹ್ನ ೧೨ ಸಂಗೀತ ೧೨-೩೦ ರೇಡಿಯೋ ೧ ಎಂ ಎ ನಿರ್ಮಲಾದೇವಿ-ಸಂಗೀತ ೧ ೫೦ ವೀಣೆ ೨-೧೫ ಗಾಯನ ಸಂಜೆ ೫-೩೦ ಮತ್ತು ೮ ಬಿ ಪಾಠಕ್ ನಾಗೇಶ್ವರ ೬-೫ ವಿರಾಮ ಸಂಗೀತ ೭ ೨೦ ರೇಡಿಯೋ ೭ ೩೦ ನಾಟಕ ಮತ್ತು ನಮ್ಮವರು ೮-೩೦ ರಾಷ್ಟ್ರೀಯ ಕಾರ್ಯಕ್ರಮ ೮-೫೦ ೧೦ ಸುರ್ [illegible] ಬಿ ಕೇಶವಾಚಾರ್.ಕೊಳಲು.

[illegible]

[illegible]

ನಗರದ ಪದವೀಧರರ ಸಹಕಾರ ಸಂಘದ ಸರ್ವ ಸದಸ್ಯರ ಸಭೆಯು ಮೊನ್ನೆ ನಡೆದು ಪ್ರಸಕ್ತ ಸಾಲಿನ ಅಧಿಕಾರ ವರ್ಗಕ್ಕೆ ಕೆಳಗೆ ಕಂಡವರು ಚುನಾಯಿತರಾದರು ಶ್ರೀ ಎಂ ಎ [illegible] ಸ್ವಾಮಿ ಅಯ್ಯಂಗಾರ್-ಅಧ್ಯಕ್ಷರು, ಶ್ರೀ ಎಸ್ [illegible]-ಉಪಾಧ್ಯಕ್ಷರು, ಶ್ರೀ [illegible] ಎಸ್ ಟಿ. ರಂಗಾಚಾರ್ ಮತ್ತು [illegible] ಕೆ. [illegible]-ಗೌರವ ಕಾರ್ಯದರ್ಶಿಗಳು ಮತ್ತು ಶ್ರೀಗಳಾದ ಎಸ್ ಶ್ರೀರಂಗಾಚಾರ್, ಎ. ಕೆ. [illegible], ಹೆಚ್ ಎಸ್ [illegible], [illegible], ಸಿ [illegible], ಎಸ್ [illegible], ಟಿ. [illegible] ಮತ್ತು ಎಂ ಎಸ್ ಶ್ರೀಕಂಠ [illegible]

[illegible]

[illegible]

[illegible]

[illegible]

ತಿರುಪ್ಪಾವೈ ಕಾಲಕ್ಷೇಪ

ರಾಜಧಾನಿಯ ಹಳೇ [illegible] ಶ್ರೀ ಶ್ರೀನಿವಾಸ ದೇವಸ್ಥಾನದಲ್ಲಿ ಇಂದಿನಿಂದ ಪ್ರತಿ ದಿನ ಸಂಜೆ ೭ರಿಂದ [illegible] ಗಂಟೆಯವರೆಗೆ ವಿ|| ವಿ. ಟಿ. ತಿರುನಾರಾಯಣ ಅಯ್ಯಂಗಾರ್ ಅವರು ಆಂಡಾಳ್ ತಿರುಪ್ಪಾವೈ ಕಾಲಕ್ಷೇಪವನ್ನು ನಡೆಸುವರು ಸರ್ವರಿಗೂ ಸ್ವಾಗತವಿದೆ

ವಿಧಾನ ಸಭೆ ಮತ್ತು ಪರಿಷತ್ತು ಅಧ್ಯಕ್ಷರಿಗೆ ಅವಿರೋಧ ಆಯ್ಕೆ

[illegible]

ಬೆಂಗಳೂರು ೧೭

ವಿಧಾನ ಸಭೆ ಅಧ್ಯಕ್ಷರಾಗಿ ಶ್ರೀ ಎಸ್. ಆರ್ [illegible]

ವಿಧಾನ ಸಭೆ ಮತ್ತು ಪರಿಷತ್ತುಗಳಿಗೆ [illegible] ಶ್ರೀ ಎಸ್ [illegible] ಮತ್ತು ಶ್ರೀ [illegible]

ಈ ದಿನ ಹೈಕೋರ್ಟ್ ನ್ಯಾಯಾಧೀಶರಾದ ಶ್ರೀ [illegible] ಶ್ರೀನಿವಾಸರಾಯರ ಸಮ್ಮುಖದಲ್ಲಿ ಶ್ರೀಗಳಾದ ಬಿ ಎಸ್ [illegible] ಮತ್ತು ಎಂ ಎಸ್ [illegible] ಅಧ್ಯಕ್ಷರಾಗಿ ಪ್ರಮಾಣ ವಚನ ಸ್ವೀಕರಿಸಿದರು

[illegible]

[illegible]

[illegible]

[illegible]

[illegible]

[illegible] ಶ್ರೀ ಪುಟ್ಟಬಸಪ್ಪನವರು ಕಾರ್ಯದರ್ಶಿಯಾಗಿಯೂ, ಶ್ರೀ ಕೆ ನರಸೇಗೌಡರು [illegible] ಮತ್ತು [illegible] ಜಿಲ್ಲಾ [illegible] ಆರಿಸಲ್ಪಟ್ಟರು.

ನ್ಯಾಷನಲ್ ಕೇಡೆಟ್ ಕೋರ್
ದಿನಾಚರಣೆ

ಮೈಸೂರು ೧೮

ನಗರದ ನ್ಯಾಷನಲ್ ಕೇಡೆಟ್ ಕೋರ್ ದಿನಾಚರಣೆಯು ಮೊನ್ನೆ ಸಂಜೆ ಕ್ರಾಫರ್ಡ್ ಭವನದಲ್ಲಿ ನಡೆಯಿತು. ವಿಶ್ವವಿದ್ಯಾಲಯದ ಉಪಸ್ನಾನಪತಿಗಳಾದ ಡಾ|| ಕೆ. ವಿ. ಪುಟ್ಟಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಮೊದಲು ಸರ್ಕಲ್ ಕಮ್ಯಾಂಡರ್ ಶ್ರೀ ಡಿ. ಹೆಚ್. ದಾದಾಭಾಯಿಯವರು ಕೇಡೆಟ್ಟುಗಳ ಕವಾಯಿತನ್ನು ಪರಿಶೀಲಿಸಿದರು. ಶ್ರೀ ಎಂ. ಎ. ರಾಮಸ್ವಾಮಿಯವರು ಸ್ವಾಗತ ಭಾಷಣ ಮಾಡಿ, ಕೇಡೆಟ್ಟುಗಳು ನಡೆಸುತ್ತಿರುವ ಕಾರ್ಯಕಲಾಪಗಳನ್ನು ವಿವರಿಸಿದರು. ಡಾ|| ರಾಜೇಂದ್ರ ಪ್ರಸಾದ್ ಮತ್ತು ಪ್ರಧಾನಿ ನೆಹರೂರವರಿಂದ ಬಂದಿದ್ದ ಸಂದೇಶಗಳನ್ನು ಓದಿ ವಿವರಿಸಲಾಯಿತು.

ಶ್ರೀ ದಾದಾಭಾಯಿಯವರು ಭಾಷಣ ಮಾಡಿ, ಮಾನವ ವರ್ಗವು ಪ್ರತಿ ಕ್ಷಣದಲ್ಲಿಯೂ ಪ್ರಗತಿಪಥದಲ್ಲಿ ಮುಂದುವರಿಯುತ್ತಿರುವುದೆಂದು ತಿಳಿಸಿ ಸಮಾಜದಲ್ಲಿ ತಮ್ಮ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಲು ಯುವಕರೆಲ್ಲರೂ ಶಿಸ್ತಿನ ಸಿಪಾಯಿಗಳಾಗಬೇಕೆಂದು ಸೂಚಿಸಿದರು. ಪ್ರತಿಯೊಬ್ಬರೂ ದೇಶಾಭಿಮಾನದಿಂದ ಪ್ರೇರಿತರಾಗಿ ಆತ್ಮಸಾಕ್ಷಿಯಂತೆ ತಮ್ಮ ಕರ್ತವ್ಯದಲ್ಲಿ ತೊಡಗಬೇಕೆಂದು ಅವರು ಹೇಳಿದರು.

ಡಾ|| ಪುಟ್ಟಪ್ಪನವರು ಪ್ರಮಾಣ ಪತ್ರಗಳನ್ನು ವಿನಿಯೋಗಿಸಿ ಕೇಡೆಟ್ಟುಗಳಿಗೆ ಹಿತವಚನಗಳನ್ನಿತ್ತರು. ಕವಿಗಳಿಗೂ, ಸೈನ್ಯಕ್ಕೂ ನಿಕಟ ಸಂಬಂಧವಿದ್ದ ಉದಾಹರಣೆಗಳನ್ನು ಅವರು ನಿರೂಪಿಸಿ, ಕನ್ನಡದ ಕವಿ ಆದಿಪಂಪನು ಒಬ್ಬ ಸೇನಾಪತಿಯಾಗಿದ್ದನೆಂದು ಹೇಳಿದರು. ಸರಿಯಾದ ರಕ್ಷಣೆಯಿದ್ದರೆ ಮಾತ್ರ ಜೀವನದ ಎಲ್ಲ ಕ್ಷೇತ್ರಗಳೂ ಯಶಸ್ವಿಯಾಗಿ ಕೆಲಸ ಮಾಡಬಲ್ಲವೆಂದು ಅವರು ತಿಳಿಸಿ ಕೇಡೆಟ್ಟುಗಳು ತಮ್ಮ ಶಿಕ್ಷಣದಿಂದ ಸಮಾಜ ಸೇವೆಗೆ ಸಿದ್ಧತೆಯನ್ನು ಪಡೆದುಕೊಳ್ಳಬೇಕೆಂದು ಸೂಚಿಸಿದರು.

ಈಗಿನ ಕಾಲದಲ್ಲಿ ಯುದ್ಧದ ಕಲ್ಪನೆಯೇ ಬದಲಾಗಿರುತ್ತದೆ. ಹಾಗೆಯೇ ಸೈನಿಕರ ಮನೋಭಾವದಲ್ಲಿಯೂ ಪರಿವರ್ತನೆಯುಂಟಾಗಿರುತ್ತದೆ. ಆಧುನಿಕ ಯುದ್ಧಗಳಿಗೆ ಇಡೀ ಪ್ರಪಂಚವೇ ರಂಗಸ್ಥಳವಾಗಿರುತ್ತದೆ. ಕೇವಲ ಯುದ್ಧರಂಗದಲ್ಲಿ ಮಾತ್ರವೇ ಅಲ್ಲದೆ ಸಮಾಜದಲ್ಲಿ ರೋಗರುಜಿನ, ಪ್ರವಾಹ, ಭೂಕಂಪ, ಅಗ್ನಿಪ್ರಳಯ ಮುಂತಾದ ಅನಾಹುತಗಳನ್ನು ಎದುರಿಸುವುದರಲ್ಲಿಯೂ ಸೈನಿಕರು ತಮ್ಮ ಪಾತ್ರವನ್ನು ವಹಿಸಬೇಕಾಗಿದೆ. ಕೇವಲ ಪಶುವಿನಂತೆ ಹೊಡೆಯುವುದು ಅಥವಾ ಮಡಿಯುವುದೇ ಸೈನಿಕನ ಕೆಲಸವಲ್ಲ. ಪರಕೀಯರ ಆಜ್ಞಾಧಾರಿಗಳಾಗಿ ನಮ್ಮ ಸೈನಿಕರು [illegible] ಕಾಲವೊಂದಿತ್ತು. ಈಗ ಅದು ಕಳೆದುಹೋಗಿದೆ. ಬುದ್ಧಿ, ನೀತಿ ಮತ್ತು ಆತ್ಮೋನ್ನತಿಯ ಸಾಧನೆಗಳ ಮೂಲಕ ತಮ್ಮ ಸುಶಿಕ್ಷಿತರಾದ ಸೈನಿಕರು ಸ್ವಸಂತೋಷದಿಂದ ದೇಶಕ್ಕಾಗಿ ದುಡಿಯಲು ಈಗ ತೊಡಗಿದ್ದಾರೆ. ಈ ಕಾರ್ಯದಲ್ಲಿ ವಿಶ್ವವಿದ್ಯಾಲಯವು ಅವರಿಗೆ ಎಲ್ಲ ನೆರವನ್ನೂ ನೀಡುವುದು — ಎಂಬುದಾಗಿ ಅವರು ಹೇಳಿದರು.

ಉಪಾಹಾರ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

M. C. F. CANTEEN

Quotations are invited with samples for the supply of 60 lbs. of Coffee Powder per month for the above Canteen for a period of 6 months from the date of commencement of supplies

V. V RANGIAH,
Hon. Secretary, M C F Canteen
Belagola, K. R Sagara Post

ತಿರುವನಂತಪುರದ ವಕೀಲರ
ಕೋರ್ಟು ಬಹಿಷ್ಕಾರ ಮುಕ್ತಾಯ

ತಿರುವನಂತಪುರದ ವಕೀಲರು ಕೋರ್ಟುಗಳಿಗೆ ಬಹಿಷ್ಕಾರದ ಕಾರ್ಯಕ್ರಮವನ್ನು ರದ್ದುಗೊಳಿಸಿರುತ್ತಾರೆ. ಮೊನ್ನೆ ಅವರು ಕೋರ್ಟುಗಳಿಗೆ ಹೋಗಿದ್ದರು. ಹೈಕೋರ್ಟು ಪೀಠವನ್ನು ತಿರುವನಂತಪುರದಲ್ಲಿ ಸ್ಥಾಪಿಸಬೇಕೆಂದು ಅವರು ಚಳುವಳಿ ನಡೆಸುತ್ತಿದ್ದರು. ಈ ಬೇಡಿಕೆಯನ್ನು ಈಡೇರಿಸುವುದಾಗಿ ಗವರ್ನರ್ ಬಿ. ರಾಮಕೃಷ್ಣರಾಯರು ಆಶ್ವಾಸನೆ ಇತ್ತಿರುವರು.

ಅಹಮದಾಬಾದಿನಲ್ಲಿ ಪುನಃ
ಮಹಾಗುಜರಾತ್ ಚಳುವಳಿ

- ಅಹಮದಾಬಾದಿನಲ್ಲಿ ಪುನಃ ಮಹಾಗುಜರಾತ್ ಬೆಂಬಲಿಗರ ಹಿಂಸಾ ಚಟುವಟಿಕೆಗಳು ಆರಂಭವಾಗಿವೆ. ಜನರು ಬೀದಿ ದೀಪಗಳನ್ನು ಒಡೆದು, ಎರಡು ಪೌರಸಭಾ ಬಸ್ಸುಗಳಿಗೆ ಬೆಂಕಿ ಹಾಕಿರುತ್ತಾರೆ. ೪ ಜನ ಅಧಿಕಾರಿಗಳು ಮತ್ತು ೯ ಮಂದಿ ಪೋಲೀಸರಿಗೆ ಗಾಯವಾಗಿದೆ. ಜನರ ಗುಂಪಿನ ಮೇಲೆ ಅಶ್ರುವಾಯುವನ್ನು ಬಿಡಲಾಯಿತು. ಜನರು ಕಲ್ಲು ತೂರಿದರು.

ಮಿತ್ರ ವೃಂದದ ಸಮಾರೋಪ ಸಮಾರಂಭ

ಮಾಧ್ವ ಮಹಾ ಮಂಡಲಿ ವಿದ್ಯಾರ್ಥಿನಿಲಯದ ಮಿತ್ರ ವೃಂದದ ಸಮಾರೋಪ ಸಮಾರಂಭವು ಶ್ರೀ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ನೆರವೇರಿತು. ಪ್ರಾರ್ಥನೆ ಮತ್ತು ಅಧ್ಯಕ್ಷರಾದ ಶ್ರೀ ಕೆ. ವಿಠಲೋಪಾಧ್ಯಾಯರಿಂದ ಸ್ವಾಗತ, ಶ್ರೀ ಕೆ. ಮಾಧವರಾಯರಿಂದ ವರದಿಗಳಾದುವು. ಶ್ರೀ ಎಸ್. ವಿ. ರಂಗಣ್ಣನವರು ಸಮಾರೋಪ ಭಾಷಣವನ್ನು ಮಾಡಿದರು. ವಿವಿಧ ಸ್ಪರ್ಧೆಗಳಲ್ಲಿ ಗೆದ್ದ ವಿದ್ಯಾರ್ಥಿಗಳಿಗೆ ಬಹುಮಾನ ಹಂಚಲಾಯಿತು. ನಾಟಕ ಮತ್ತು ಕಾರ್ಯದರ್ಶಿಯವರಿಂದ ವಂದನಾರ್ಪಣೆಯಾದಮೇಲೆ ರಾಷ್ಟ್ರಗೀತೆಯೊಂದಿಗೆ ಸಮಾರಂಭವು ಮುಕ್ತಾಯವಾಯಿತು.

ಪಿ. ಕೆಂಪಾಚಾರ್
ಡೋರ್ ನಂ, ೧೯೬ ದೊಡ್ಡಿ ಬೀದಿ
ಕೆ ಆರ್ ಮೊಹಲ್ಲಾ, ಮೈಸೂರು
ನಾವು ಎಂಗ್ರೇವಿಂಗ್ ಮತ್ತು ಲೈನ್ ಬ್ಲಾಕುಗಳನ್ನು ತಯಾರು ಮಾಡುತ್ತೇವೆ. ಒಮ್ಮೆ ಭೇಟಿ ಕೊಡಿ

ಮೈಸೂರು ಸಿಟಿ ಮುನಿಸಿಪಾಲಿಟಿ
ಮೈಸೂರು ಸಿಟಿ ಮುನಿಸಿಪಲ್
ಕಮಿಷನರ್‌ರವರ ಆಫೀಸಿನಿಂದಾ
ತಾ|| 11-12-56

ಟೆಂಡರ್ ನೋಟಿಫಿಕೇಷನ್

ಮೈಸೂರು ಸಿಟಿ ಮುನಿಸಿಪಲ್ ಫಾರಂ ತೆಂಗಿನ ಫಸಲನ್ನು 1957ನೇ ಜನವರಿ 1ನೇ ತಾರೀಖಿನಿಂದ 1959ನೇ ಡಿಸೆಂಬರ್ 31ನೇ ತಾರೀಖಿನವರೆಗೂ ರಕ್ಷಿಸಿಕೊಳ್ಳಲು ಈ ಕೆಳಗೆ ಕಂಡ ನಿಬಂಧನೆಗಳನ್ನನುಸರಿಸಿ ಇದೇ 26-12-56ನೇ ಸಾಯಂಕಾಲ 4 ಘಂಟೆಯೊಳಗೆ ಸೀಲ್ ಮಾಡಿದ ಟೆಂಡರುಗಳನ್ನು ಮುನಿಸಿಪಲ್ ಕಮಿಷನರ್‌ರವರಿಗೆ ಕೊಡಲು ಕರೆಯಲಾಗಿದೆ.

ಪ್ರತಿ ಟೆಂಡರ್ ಅರ್ಜಿ ಜೊತೆಯಲ್ಲಿ ಟೆಂಡರ್ ಡಿಪಾಜಿಟ್ಟಿಗಾಗಿ 1000-0-0 (ಒಂದು ಸಾವಿರ ರೂಪಾಯಿಗಳನ್ನು) ಮೈಸೂರು ಸಿಟಿ ಮುನಿಸಿಪಲ್ ಖಜಾನೆಯಲ್ಲಿ ಜಮಾ ಮಾಡಿ ಅದರ ಚಲನ್ನನ್ನು ಟೆಂಡರ್ ಅರ್ಜಿಯೊಂದಿಗೆ ಲಗತ್ತು ಮಾಡಿ ಲಕ್ಕೋಟೆಯಲ್ಲಿಟ್ಟು ಸೀಲು ಮಾಡಿ 1957-59ನೇ ಸಾಲುಗಳ ತೆಂಗಿನ ಫಸಲು ಗುತ್ತಿಗೆ ಸಲುವಾಗಿ ಎಂದು ನಮೂದಿಸಿ ಮುನಿಸಿಪಲ್ ಕಮಿಷನರ್‌ರವರಿಗೆ ರೂಬರೂ ಆಗಲೀ ಯಾ ಪೋಸ್ಟ್ ಮೂಲಕವಾಗಲೀ 1956ನೇ ಡಿಸೆಂಬರ್ 26ನೇ ತಾರೀಖು ಸಾಯಂಕಾಲ 4 ಘಂಟೆಯೊಳಗೆ ತಲುಪಿಸಬೇಕು. ಅನಂತರ ಬರತಕ್ಕ ಟೆಂಡರುಗಳನ್ನು ಅಂಗೀಕರಿಸುವುದಿಲ್ಲ.

ನಿಬಂಧನೆಗಳನ್ನು ಮುನಿಸಿಪಲ್ ಆಫೀಸಿನಲ್ಲಿ ತಿಳಿಯಬಹುದು.

(ರುಜು) ಎ. ವಿಶ್ವನಾಥ್,
ಮುನಿಸಿಪಲ್ ಕಮಿಷನರು

ಡಚ್ ನ್ಯೂಗಿನಿಯಲ್ಲಿ ದಂಗೆ

ನ್ಯೂಗಿನಿ ದ್ವೀಪದ ಪಶ್ಚಿಮಕ್ಕೆ ಸೇರಿರುವ ಭಾಗದ ಹಲವಾರು ಕಡೆ ದಂಗೆಗಳಾಗಿ ಸ್ಥಳೀಯರು ೧೨ ಜನರನ್ನು ಕೊಂದು, ಕ್ರೈಸ್ತ ಮಿಷನ್ ಶಾಲೆಗಳನ್ನೂ, ವಿಮಾನಗಳ ಆಶ್ರಯ ಸ್ಥಾನಗಳನ್ನೂ ನಾಶಪಡಿಸಿರುತ್ತಾರೆ. ಸತ್ತವರೆಲ್ಲರೂ ಇಂಡೋನೇಷ್ಯದವರು ಅಥವಾ [illegible]

ಹನುಮಜ್ಜಯಂತಿ ಕಾರ್ಯಕ್ರಮ

ರಾ|| ಬ|| ಬಿ. ಸುರೇಂದ್ರಕೃಷ್ಣನವರ ಶ್ರೀ ಮಾರುತೀ ಮಂದಿರದಲ್ಲಿ ಹನುಮಜ್ಜಯಂತಿ ಕಾರ್ಯಕ್ರಮದ ಅಂಗವಾಗಿ ನಾಳೆ ಬೆಳಗ್ಗೆ ವಿ|| ಬಿ ಆರ್ ದಾಸಪ್ಪನವರು ಮತ್ತು ಮದ್ರಾಸಿನ ಶ್ರೀ ಲಕ್ಷ್ಮಿದಾಸರಿಂದ ಗಾಯನ, ಸಂಜೆ ವಿ|| ವೀಣಾ ಚೂಡಾಮಣಿಯವರಿಂದ ಸಂಗೀತ, ಶ್ರೀ ಡಿ. ಸುಬ್ಬರಾಮಯ್ಯನವರಿಂದ ಕರ್ನಾಟಕ ಸಂಗೀತದ ಹಿರಿಮೆ ಬಗ್ಗೆ ಭಾಷಣ ಮತ್ತು ಸಂಗೀತ ಕಲಾನಿಧಿ ಮಹಾರಾಜಪುರಂ ವಿಶ್ವನಾಥ ಅಯ್ಯರ್‌ರವರ ಸಂಗೀತ ಕಛೇರಿಗಳು ನಡೆಯುವುವು. ಈ ಸಂಜೆ ೭ ಘಂಟೆಗೆ ಶ್ರೀ ಸ. ರಾ. ಸುಬ್ಬರಾಯರ ಬದಲು ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಭಾಷಣ ಮಾಡುವರು.

ನಂಜನಗೂಡಿನಲ್ಲಿ ಪೌರ ಕಂದಾಯದ
ಪುನರ್ವಿಮರ್ಶೆ ಮುಂದೆ ಹೋಗಲಿ

ನಂಜನಗೂಡಿನ ಪೌರಸಭೆಯವರು ಕಂದಾಯವನ್ನು ಪುನರ್ವಿಮರ್ಶಿಸುತ್ತಿರುವರಷ್ಟೆ? ಆಹಾರ ಪದಾರ್ಥಗಳ ಬೆಲೆಯು ಹೆಚ್ಚಿ, ಜನರು ಪರಿತಪಿಸುತ್ತಿರುವಾಗ ಕಂದಾಯದ ಹೊರೆಯನ್ನು ಹೆಚ್ಚಿಸುವುದು ಸರಿಯಲ್ಲ. ಇನ್ನು ಕೊಂಚ ಕಾಲವಾದರೂ ಪುನರ್ವಿಮರ್ಶೆಯನ್ನು ಮುಂದುವರಿಸುವುದು ಸೂಕ್ತ — ಎಂಬುದಾಗಿ ಅಲ್ಲಿನ ನಿವಾಸಿ ಶ್ರೀ ಎಂ. ಎಸ್. ಬಸವರಾಜಯ್ಯನವರು ಪತ್ರ ಬರೆದು ತಿಳಿಸಿರುತ್ತಾರೆ.

CHANGE OF NAME

I, K Basaviah alias Puttaswamy, Kalasi, T No 618, General Fittings Shop, Southern Railway Workshop, Mysore permitted to change my name to K Basaviah alias Puttaswamy to K B. Puttaswamy

Edited, Printed and Published by A. R. Nagarajan at Sadhvi Press D. Subbiah Road, Mysore

ಭಾರತಕ್ಕೆ ರಷ್ಯದ ರಕ್ಷಣಾ
ಮಂತ್ರಿಯ ಭೇಟಿ

ರಷ್ಯದ ರಕ್ಷಣಾ ಮಂತ್ರಿ ಮಾರ್ಷಲ್ ಜುಕೊವ್ ಬರುವ ತಿಂಗಳು ೨೬ ರಂದು ದೆಹಲಿಯಲ್ಲಿ ನಡೆಯುವ ರಿಪಬ್ಲಿಕ್ ದಿನಾಚರಣೆಯಲ್ಲಿ ಭಾಗವಹಿಸಲು ಭಾರತಕ್ಕೆ ಆಗಮಿಸುವರು. ಅವರು ಬೆಂಗಳೂರಿಗೂ ಭೇಟಿ ಕೊಡುವ ಸಂಭವವಿದೆ.

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ಹುಹು

ಕೊಯಮುತ್ತೂರು ಸಣ್ಣ	[illegible]	[illegible]	೦	[illegible]	[illegible]
ರತ್ನಚೂಡಿ	[illegible]	[illegible]	೦	[illegible]	[illegible]
ಕಂಬೂಕ	[illegible]	[illegible]	೦	[illegible]	[illegible]
ರಾಗಿ	[illegible]	[illegible]	೦	[illegible]	[illegible]
ಜೋಳ	[illegible]	[illegible]	೦	[illegible]	[illegible]
ಕಂಬು	[illegible]	[illegible]	[illegible]		
ಕಡಲೆಕಾಯಿ	[illegible]	[illegible]	೦	[illegible]	[illegible]
ಹುಚ್ಚೆಳ್ಳು	[illegible]	[illegible]	೦	[illegible]	[illegible]
ಹರಳುಬೀಜ	[illegible]	[illegible]	೦	[illegible]	[illegible]
ತೊಗರಿ	[illegible]	೦	೦	[illegible]	[illegible]
ಹೆಸರು	[illegible]	[illegible]	೦	[illegible]	[illegible]
ಹಲಸಂದೆ	[illegible]	[illegible]	೦	[illegible]	[illegible]
ಕೊಬರಿ	[illegible]	[illegible]	೦	[illegible]	[illegible]
ಧನಿಯ	[illegible]	[illegible]	೦	[illegible]	[illegible]
ಸೆಣಬಿನಬೀಜ	[illegible]	[illegible]	[illegible]	[illegible]	[illegible]
ಮೂಲಂಗಿ	[illegible]	೦	೦	[illegible]	[illegible]
ಮೆಣಸಿನಕಾಯಿ	[illegible]	೦	೦	[illegible]	[illegible]
ಹತ್ತಿ	[illegible]	[illegible]	೦		
ಹೊಗೆಸೊಪ್ಪು	[illegible]	೦	೦		
ತೆಂಗಿನಕಾಯಿ ೧೦೦೦ಕ್ಕೆ	[illegible]	೦	೦	[illegible]	[illegible]

|| ಶ್ರೀ ||
ಗಾಯತ್ರಿ ಟಾಕೀಸ್
ಇಂದು ಕಡೇ ದಿನ
ಬೀಚ್ ಹೆಡ್
(BEACH HEAD)
19-12-56 ರಿಂದ : 2 ದಿನ
ಸಬಾಕಾ
(SABAKA)
ಮೈಸೂರು ಶ್ರೀಮನ್ಮಹಾರಾಜರ ಅತ್ಯಮೋ
ದಸರಾ ಉತ್ಸವ, ಜಂಬೂ, ಅರಮನೆ ದರ್ಬಾರ್
ವಗೈರೆ ದೃಶ್ಯಗಳನ್ನು ಮೈಸೂರಿನಲ್ಲಿಯೇ
ಚಿತ್ರಿಸಿ, ಇಲ್ಲಿಯೇ ತಯಾರಿಸಲ್ಪಟ್ಟಿ
ರುವ ಇಂಗ್ಲಿಷ್ ಚಿತ್ರ

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಮೆಂಬರು : ಐ. ಎಸ್. ಬಿ ಎಂ ಎ

ಲೈಸೆನ್ಸ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
[illegible]
[illegible]
[illegible]
[illegible]
[illegible]

ಸಂಪುಟ : ೧೫] SADHVI : WEDNESDAY 19—12—1956 ಮೈಸೂರು : ಬುಧವಾರ ೧೯—೧೨—೧೯೫೬ [ಸಂಚಿಕೆ : [illegible]

ಅಹಮದಾಬಾದಿನಲ್ಲಿ ಮತ್ತೆ ಗುಜರಾತಿಗಳ ಪ್ರದರ್ಶನ

ಅಹಮದಾಬಾದಿನಲ್ಲಿ ಶ್ರುವಾಯು-ಲಾಠಿಪ್ರಯೋಗ

ಬೊಂಬಾಯಿ ಮುಖ್ಯ ಮಂತ್ರಿ ವಿರುದ್ಧ ಪ್ರದರ್ಶನ

ಅಹಮದಾಬಾದು ಕಾಂಗ್ರೆಸ್ಸಿನವರ ಸಭೆಯೊಂದರಲ್ಲಿ ನೆನ್ನೆ ಸಂಜೆ ಬೊಂಬಾಯಿ ಮುಖ್ಯ ಮಂತ್ರಿ ವೈ. ಬಿ. ಚವಾನರು ಭಾಷಣ ಮಾಡುತ್ತಿದ್ದಾಗ ಹಿಂಸಾತ್ಮಕ ಮಹಾ ಗುಜರಾತು ಪ್ರದರ್ಶನಕಾರರ ಮೇಲೆ ಪೋಲೀಸರು ಹಲವಾರು ಬಾರಿ ಅಶ್ರುವಾಯು ಮತ್ತು ಲಾಠಿ ಪ್ರಯೋಗ ಮಾಡಿದರು. ಕಾಂಗ್ರೆಸ್ ಭವನಕ್ಕೆ ನುಗ್ಗಲು ಜನರ ಗುಂಪು ಪ್ರಯತ್ನಿಸಿ ಜೋರಾಗಿ ಕಲ್ಲುಗಳನ್ನು ಎಸೆಯಿತೆಂದು ಹೇಳಲಾಗಿದೆ.

ಮುಖ್ಯ ಮಂತ್ರಿಯವರು ಅಲ್ಲಿಗೆ ಆಗಮಿಸಿದಾಗ ಜನರು ಪೋಲೀಸರ ಅಡ್ಡಿಯನ್ನು ಮೀರಿ ಅವರ ಮೋಟಾರಿನ ಮೇಲೆ ನುಗ್ಗಲು ಯತ್ನಿಸಿ "ನಮಗೆ ಮಹಾ ಗುಜರಾತು ಬೇಕು, ಚವಾನರೇ ವಾಪಸು ಹೋಗಿ" ಎಂದು ಕೂಗಿದರು. ಮುಖ್ಯ ಮಂತ್ರಿಯವರ ಮೋಟಾರಿನ ಮೇಲೆ ಕಲ್ಲು ಬೀರಿ ಜಖಂಗೊಳಿಸಲಾಯಿತು. ಕಪ್ಪು ಬಾವುಟವನ್ನು ಪ್ರದರ್ಶಿಸಲಾಯಿತು.

ಸಭೆಯಿಂದ ಮುಖ್ಯ ಮಂತ್ರಿಯವರು ವಾಪಸು ಬಂದಾಗಲೂ ಜನರು ಕಲ್ಲನ್ನು ಬೀರಿ ಮೋಟಾರಿನ ಗಾಜನ್ನು ಒಡೆದರು. ಈ ಸಂದರ್ಭದಲ್ಲಿ [illegible] ಪತ್ರಿಕೋದ್ಯಮಿ ಮತ್ತು ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿ ಡೊಂಗ್ರೆಯವರಿಗೆ ಪೆಟ್ಟು ತಗಲಿತು.

ಹಲವು ಪ್ರದರ್ಶಕಕಾರರು ಮುಖ್ಯ ಮಂತ್ರಿ [illegible] ಕಾರಿನಲ್ಲಿದ್ದ ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿ ಠಾಕೂರ್‌ಬಾಯಿದೇಸಾಯಿ ಮತ್ತು ಮಂತ್ರಿ ಶ್ರೀಮತಿ ಇಂದುಮತಿ ಚಮನ್‌ಲಾಲರನ್ನು ಹೊರಕ್ಕೆ ಎಳೆಯಲು ಪ್ರಯತ್ನಿಸಿದರು. ಕಾರಿನ [illegible] ಕೀಳಲಾಯಿತು.

ಅಮೆರಿಕಾ ವಿಮಾನಗಳಿಂದ ಷ್ಯಾ ವಾಯುಗಡಿ ಉಲ್ಲಂಘನೆ

ಕಳೆದ ೧೧ನೇ ತಾರೀಖು ಅಮೆರಿಕದ ಮೂರು ಜೆಟ್ ವಿಮಾನಗಳು ವ್ಲಾಡಿವೊಸ್ಟಾಕ್ ಬಳಿ ರಷ್ಯಾ ವಾಯು ಗಡಿಯನ್ನು ಉಲ್ಲಂಘಿಸಿದುದಾಗಿ ರಷ್ಯವು ಅಮೆರಿಕಕ್ಕೆ ಪ್ರತಿಭಟನೆ ಕಳುಹಿಸಿದೆ. ಈ ಕೃತ್ಯವು ಅಮೆರಿಕದ ಮಿಲಿಟರಿಯಿಂದ ಉದ್ದೇಶಪೂರ್ವಕವಾಗಿ ನಡೆಯಿತೆಂದೂ ವಾದಿಸಲಾಗಿದೆ. ಇದರಿಂದ ಅಂತರ್ರಾಷ್ಟ್ರೀಯ ಸ್ಥಿತಿಯು ಮತ್ತಷ್ಟು ಕೆಡುವುದೆಂದೂ ತಿಳಿಸಲಾಗಿದೆ.

ಕಳ್ಳತನಗಳಿಗಾಗಿ ಸಜಾ

ನಂಜನಗೂಡು ೧೮

[illegible] ಶ್ರೀ ಗುರುರಾಜಾಚಾರ್ಯರ ಮನೆಯಲ್ಲಿ ಕಳ್ಳತನ ಮಾಡಿದನೆಂದು [illegible] ಮಜೀದ್ [illegible] ಎಂಬಾತನಿಗೆ ಪ್ರಥಮ ದರ್ಜೆ ನ್ಯಾಯಾಧೀಶರಾದ [illegible] ಎಂ. ಸಿದ್ದಪ್ಪನವರು ೧ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ.

[illegible] ಕಳ್ಳತನಗಳನ್ನು ನಡೆಸಿದನೆಂಬ ಆಪಾದನೆಗಾಗಿ [illegible] ಎಂಬುವನಿಗೆ ೨ ವರ್ಷ ಸಜಾ ವಿಧಿಸಲಾಗಿದೆ.

ಭಾರತದ ದ್ವಿತೀಯ ಯೋಜನೆಗೆ ಅಮೆರಿಕದ ಸಹಾಯದ ನಿರೀಕ್ಷೆ

ಪ್ರಧಾನಿ ನೆಹರೂರವರೊಡನೆ ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ನಡೆಸುತ್ತಿರುವ ಮಾತುಕತೆಗಳ ಫಲವಾಗಿ ಭಾರತದ ದ್ವಿತೀಯ ಯೋಜನೆಗೆ ಅಮೆರಿಕವು ಭಾರಿ ಪ್ರಮಾಣದ ಸಹಾಯವನ್ನು ನೀಡಲು ಮುಂದೆ ಬರಲಿರುವುದೆಂದು ಗೊತ್ತಾಗಿದೆ. ಈ ಬಗ್ಗೆ ಅಮೆರಿಕಾ ಅಧ್ಯಕ್ಷರು ಈ ವಾರದಲ್ಲಿ ಸೂಚನೆ ಕೊಡಲಿರುವರೆಂದೂ, ಯೋಜನೆಯ ವಿವರಗಳಿಗಾಗಿ ಅವರು ನೆಹರೂರವರನ್ನು ಕೇಳುವರೆಂದೂ ತಿಳಿದುಬಂದಿದೆ.

ಸೋವಿಯತ್ ಯೂನಿಯನ್ ಒಂದು [illegible] ಬಳಸಿಕೊಂಡು ಭಾರತಕ್ಕೆ ಅಗತ್ಯ ಸಾಮಾನುಗಳನ್ನು ಅವರು ಮಾಡಿಕೊಳ್ಳುವ ಬಗ್ಗೆ ಉಂಟಾಗುವ [illegible] ಭಾರತದ ಮೇಲೆ ಬೀಳಬಾರದೆಂದೂ, ಪ್ರಜಾಸತ್ತಾತ್ಮಕ ರಾಷ್ಟ್ರವಾದ ಭಾರತಕ್ಕೆ ಅಮೆರಿಕವು ಹೆಚ್ಚು ಸಹಾಯವನ್ನು ಕಲ್ಪಿಸುವುದು ಅಗತ್ಯವೆಂದೂ ಐಸೆನ್‌ಹೋವರರು ಭಾವಿಸಿರುವರೆಂದು ವರದಿಯಾಗಿದೆ.

ಬೀದಿಯಲ್ಲಿ ಹೊಡೆದಾಟ ಮತ್ತು ಬೈದಾಟಕ್ಕಾಗಿ ಶಿಕ್ಷೆ

ಮೈಸೂರು ೧೮

ಕೃಷ್ಣರಾಜ ಮೊಹಲ್ಲಾದ ಬಿ. ಯು. ಕೆ. ಕೃಷ್ಣ ಮತ್ತು ಆರ್. ಆರ್. ನಾರಾಯಣಯ್ಯ, [illegible] ಎಂಬುವರು ಕಳೆದ ತಿಂಗಳು ೨೭ನೇ ತಾರೀಕು ಬೀದಿಯಲ್ಲಿ ಹೊಡೆದಾಡುತ್ತಿದ್ದುದಕ್ಕಾಗಿ ತಲಾ ೧೦ ರೂ ಮತ್ತು ಮೂರನೆಯವರಿಗೆ ೫ ರೂ ಜುಲ್ಮಾನೆಯನ್ನೂ, ಸಾಬೂಲಾಲ್, ಸೈಯದ್ ಅನ್ವರ್, [illegible] ಮತ್ತು ರಾಜಗೋಪಾಲ್ ಎಂಬುವರು ನೆನ್ನೆ ಸಂತೆಪೇಟೆಯಲ್ಲಿ ಗಲಾಟೆ ಮಾಡಿ ಹೊಡೆದಾಡುತ್ತಿದ್ದುದಕ್ಕಾಗಿ ಅವರುಗಳಿಗೆ ತಲಾ ೫ ರೂಪಾಯಿ ಜುಲ್ಮಾನೆಯನ್ನೂ ನಗರದ ಪ್ರಥಮ ನ್ಯಾಯಾಧೀಶರು ಈ ದಿನ ವಿಧಿಸಿದರು.

ಎಂ ಸ್ಟೆ ಎಂ [illegible]ನೇ ನಂಬರು ಕಾರಿನ ಡ್ರೈವರ್ ಅಬ್ದುಲ್ ಘನಿ ಎಂಬಾತನು ದೀಪವಿಲ್ಲದೆ ಕಾರನ್ನು ಓಡಿಸುತ್ತಿದ್ದು ಪೋಲೀಸರು ಹೇಳಿದರೂ ನಿಲ್ಲಿಸದಿದ್ದುದಕ್ಕಾಗಿ ನೆನ್ನೆ ೧೦ ರೂ ಜುಲ್ಮಾನೆಯನ್ನು ವಿಧಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಸಂಗೀತ ೭-೧೫ ಎಂ ಎಸ್ ಲಕ್ಷ್ಮೀನರಸಿಂಹಾಚಾರ್ ದೇವರ ನಾಮ. ೭.೩೦ ಮತ್ತು ೮ ೧೫ ಸಿ. ವಿ. ವೀರಭದ್ರಶೆಟ್ಟಿ-ಶಾಸ್ತ್ರ ವಾಚನ. ಮಧ್ಯಾಹ್ನ ೧೨ ವೀರಭದ್ರಯ್ಯ-ಪಿಟೀಲು. ೧೨-೩೦ ಎಂ. ಎಸ್ ಲಕ್ಷ್ಮೀನರಸಿಂಹಾಚಾರ್-ಸಂಗೀತ. ೧ ಪಿಟೀಲು ವಾದನ ೧-೩೦ ಸಂಗೀತ ೨-೧೫ ಗಾಯನ ಕಛೇರಿ ಸಂಜೆ ೫ ೩೦ ಎಂ ಪಿ [illegible] ಹಿಂದಿ ಸಂಗೀತ ಪಿಟೀಲು ೬.೫ ವಿರಾಮ ಸಂಗೀತ ೭ ೩೦ ತಾಳ ವಾದ್ಯ ಕಛೇರಿ ೮ ವಿ ವೀರಭದ್ರಯ್ಯ-ಪಿಟೀಲು ೮-೩೦ ವಿರಾಮ ೯-೧೫ ಇಂಗ್ಲಿಷ್ ಭಾಷಣ ೯-೩೦ ಮಹಾ ಯೋಗಿ ನಾಟಕ. ೧೦-೧೫ ವಿರಾಮ.

ಭಾರತದ ಮೇಲೆ ಅಮೆರಿಕಾ ಶಸ್ತ್ರದ ಪ್ರಯೋಗವಿಲ್ಲ

ಪಾಕಿಸ್ತಾನದ ಪ್ರಧಾನಿಯವರ ಭರವಸೆ

ಅಮೆರಿಕದಿಂದ ನೆರವಾಗಿ ಬಂದಿರುವ ಶಸ್ತ್ರಾಸ್ತ್ರಗಳನ್ನು ಭಾರತದ ಮೇಲೆ ಆಕ್ರಮಣ ನಡೆಸಲು ಪಾಕಿಸ್ತಾನವು ಬಳಸುವುದಿಲ್ಲವೆಂದು ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು ತಿಳಿಸಿರುತ್ತಾರೆ. ಪಾಕಿಸ್ತಾನದ ಮೇಲೆ ಆಕ್ರಮಣ ನಡೆದರೆ ಆಗ ಆ ಶಸ್ತ್ರಾಸ್ತ್ರಗಳನ್ನು ಬಳಸಲಾಗುವುದೆಂದು ಅವರು ಹೇಳಿರುವರು. ಭಾರತದ ವಿರುದ್ಧವಾಗಿ ಅದನ್ನು ಬಳಸುವುದಿಲ್ಲವೆಂಬ ಲಿಖಿತ ಮತ್ತು ಗಂಭೀರ ಭರವಸೆ ಕೊಟ್ಟು, ಪಾಕಿಸ್ತಾನವು ಅಮೆರಿಕದ ಶಸ್ತ್ರಾಸ್ತ್ರಗಳನ್ನು ಪಡೆಯುತ್ತಿರುವುದಾಗಿ ಸುಹ್ರಾವರ್ದಿಯವರು ಹೇಳಿ, ಈ ಭರವಸೆಯನ್ನು ತಾವು ಪಾಲಿಸುವುದಾಗಿ ತಿಳಿಸಿರುವರು.

ವಸಾಹತುಶಾಹಿ ದ್ವೇಷಿಸಲು ಶಿಕ್ಷಣ

ಬರುವ ೨೨ರಿಂದು ಈಜಿಪ್ಟಿನಲ್ಲಿ ಆರಂಭವಾಗುವ ಶಾಲಾ ಕಾಲೇಜುಗಳಲ್ಲಿ ವಸಾಹತುಶಾಹಿಯನ್ನು ದ್ವೇಷಿಸುವ ಶಿಕ್ಷಣವನ್ನು ಕಲಿಸಲಾಗುವುದೆಂದು ಗೊತ್ತಾಗಿದೆ.

‘ಮಹಾ ಮೈಸೂರು’ ಹೆಸರು

ವಿಧಾನ ಸಭೆಯ [illegible] ಸದಸ್ಯರಾದ ಶ್ರೀ ಬಿ ಎಸ್. [illegible]ನವರು ಮಹಾ ಮೈಸೂರು ಎಂದು ಕರೆಯುವ ಬಗ್ಗೆ ಸಭೆಯಲ್ಲಿ ಠರಾವೊಂದನ್ನು ಮಂಡಿಸಲಿರುವರು.

ಜೋಗದಲ್ಲಿ ಪ್ರವಾಸಿಗರ ಹೋಟೇಲು

ಪ್ರವಾಸಿಗರ ಸಲುವಾಗಿ ಜೋಗ್ ಜಲಪಾತದ ಬಳಿ ಆಧುನಿಕ ಹೋಟೇಲೊಂದನ್ನು ಏರ್ಪಡಿಸಲು ಸರ್ಕಾರದವರು ಆಲೋಚಿಸಿದ್ದಾರೆ. ಅದಕ್ಕೆ ೩ ಲಕ್ಷ ರೂ ವೆಚ್ಚದ ಅಂದಾಜು ಮಾಡಲಾಗಿದೆ.

ಅಂಬೇಡ್ಕರರ ದಿನಾಚರಣೆ

ನಗರದ [illegible] ಯುವಕರ ಸಂಘದ ಆಶ್ರಯದಲ್ಲಿ ಮೊನ್ನೆ ಅಂಬೇಡ್ಕರರ ದಿನಾಚರಣೆಯನ್ನು ನೆರವೇರಿಸಿ, ಸಂಜೆ ಅವರ ಭಾವಚಿತ್ರದ ಮೆರವಣಿಗೆಯನ್ನು ನಡೆಸಲಾಯಿತು. ಸಾವಿರಾರು ಮಕ್ಕಳಿಗೆ ಭೋಜನವನ್ನು ಏರ್ಪಡಿಸಲಾಗಿತ್ತು.

೧೫೦ ಮಂದಿ ಕಾಂಗ್ರೆಸ್ ಉಮೇದುವಾರರಿಗೆ ಸಮಿತಿ ಭೇಟಿ

ಬೆಂಗಳೂರು ೧೮

ಮೈಸೂರು ಸಂಸ್ಥಾನದಲ್ಲಿ ಕಾಂಗ್ರೆಸ್ ಉಮೇದುವಾರರುಗಳನ್ನು ಆರಿಸುವ ಬಗ್ಗೆ ನೇಮಿಸಲ್ಪಟ್ಟಿರುವ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣ, ಲೋಕೇಶ್ವರಿಶರ್ಮ ಮತ್ತು ಶ್ರೀಮತಿ ಮರಕತಂ ಚಂದ್ರಶೇಖರರವರು ಇಲ್ಲಿಗೆ ಆಗಮಿಸಿ ನಿನ್ನೆ ೧೫೦ ಮಂದಿ ಉಮೇದುವಾರರಿಗೆ ಭೇಟಿಯಿತ್ತರು. ಈ ದಿನ ಮಧ್ಯಾಹ್ನ ಅವರು ಬೊಂಬಾಯಿ ಕರ್ನಾಟಕ ಮತ್ತು ಹೈದರಾಬಾದು ಕನ್ನಡ ಪ್ರದೇಶದವರನ್ನು ಭೇಟಿ ಮಾಡುವರು.

ವಿಧಾನ ಸಭೆ ಮತ್ತು ಪರಿಷತ್ತುಗಳ ಅಧ್ಯಕ್ಷರು

ಕಂಠಿ ಮತ್ತು ಸುಬ್ರಹ್ಮಣ್ಯರವರ ಅವಿರೋಧ ಆಯ್ಕೆ

ಸಾಧ್ವಿ ಪ್ರತಿನಿಧಿಯಿಂದ

ಸ್ವಂ ವ. ತಂತಿ] ಬೆಂಗಳೂರು ೧೮

ಈ ದಿನ ಬೆಳಿಗ್ಗೆ ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಅಧ್ಯಕ್ಷರುಗಳ ಚುನಾವಣೆ ನಡೆಯಿತು.

ಶ್ರೀ ಎಸ್. ಆರ್. ಕಂಠಿಯವರು ವಿಧಾನ ಸಭೆಗೂ ಮತ್ತು ಶ್ರೀ ಆರ್. ಸುಬ್ರಹ್ಮಣ್ಯರವರು ಪರಿಷತ್ತಿಗೂ ಅವಿರೋಧವಾಗಿ ಅಧ್ಯಕ್ಷರಾಗಿ ಆರಿಸಲ್ಪಟ್ಟರು. ಅದಕ್ಕೆ ಮುಂಚೆ ಸಭಾ ಸದಸ್ಯರುಗಳು ಪ್ರಮಾಣ ವಚನ ಸ್ವೀಕರಿಸಿದರು. ಪ್ರಾರಂಭದಲ್ಲಿ ಹಿರಿಯರಾದ ಬಿ. ಎಸ್. [illegible] ಮತ್ತು ಎಂ. ಎಸ್. [illegible]ರವರು ಅಧ್ಯಕ್ಷತೆ ವಹಿಸಿದ್ದರು.

ಆಯ್ಕೆಯಾದನಂತರ ಅಭಿನಂದನಾ ಭಾಷಣಗಳು ಆದುವು. ಉಭಯ ಅಧ್ಯಕ್ಷರುಗಳು ತಕ್ಕ ಉತ್ತರವಿತ್ತರು.

ಶ್ರೀ ಎಸ್. ಆರ್. ಕಂಠಿಯವರು ತಮ್ಮ ಭಾಷಣದಲ್ಲಿ ಬೊಂಬಾಯಿ ಶಾಸನ ಸಭೆ ಬಗ್ಗೆ ತಮ್ಮ ಅನುಭವವನ್ನು ವಿವರಿಸಿ, ಸಭೆಯ ಎಲ್ಲಾ ಪಕ್ಷಗಳ ಹಕ್ಕುಗಳನ್ನು ರಕ್ಷಿಸುವ ಭರವಸೆಯಿತ್ತರು.

ಈ ದಿನ ಸಭೆಯ ಒಟ್ಟು ೨೦೮ ಮಂದಿ ಸದಸ್ಯರಲ್ಲಿ ೧೮೬ ಜನರು ಪ್ರಮಾಣ ವಚನ ಸ್ವೀಕರಿಸಿದರು. ಶ್ರೀ ನಿಜಲಿಂಗಪ್ಪನವರು ಅಸ್ವಸ್ಥರಾಗಿದ್ದುದರಿಂದ ಪ್ರಮಾಣ ವಚನ ಸ್ವೀಕರಿಸಲಿಲ್ಲ. ಪರಿಷತ್ತಿನಲ್ಲಿ ೪೮ ಮಂದಿ ಪ್ರಮಾಣ ವಚನ ಸ್ವೀಕರಿಸಿದರು.

ರಾಜಾಜಿಯವರಿಗೆ ಆಗ್ರಾ ವಿಶ್ವವಿದ್ಯಾಲಯದ ಗೌರವ

ಆಗ್ರಾ ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭವು ಬರುವ ತಿಂಗಳು ಜರುಗುವಾಗ ಸಿ. ರಾಜಗೋಪಾಲಾಚಾರಿಯವರಿಗೆ ಗೌರವ ಡಾಕ್ಟರ್ ಆಫ್ ಲೆಟರ್ಸ್ ಪ್ರಶಸ್ತಿಯನ್ನು ಕೊಡಲಾಗುವುದು. ರಾಜಾಜಿಯವರು ಘಟಿಕೋತ್ಸವದ ಭಾಷಣ ಮಾಡುವರು.

ಮಾವೋ ಟುಂಗರಿಂದ ಇಂಗ್ಲಿಷ್ ಅಧ್ಯಯನ

ಚೀನದ ಅಧ್ಯಕ್ಷ ಮಾವೋ ಟುಂಗ್‌ರವರು ಇಂಗ್ಲಿಷ್ ಭಾಷೆಯನ್ನು ಕಲಿಯಲು ತೊಡಗಿದ್ದಾರೆ. ಪ್ರತಿ ದಿನವೂ ಹಲವು ಪದಗಳನ್ನು ಅವರು ಕಲಿಯುತ್ತಿರುವರು.

ನಾದಬ್ರಹ್ಮ ಸಂಗೀತ ಸಭೆಯ ಆರಂಭೋತ್ಸವ

ನಗರದಲ್ಲಿ ಹೊಸದಾಗಿ ಏರ್ಪಟ್ಟಿರುವ ನಾದಬ್ರಹ್ಮ ಸಂಗೀತ ಸಭೆಯ ಆರಂಭೋತ್ಸವವನ್ನು ನಾಳೆ ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಡಿವಿಷನಲ್ ಕಮಿಷನರ್ ಶ್ರೀ ಜಿ. ವಿ. ನಾಗರಾಜರಾಯರು ನೆರವೇರಿಸ[illegible] ವಿ|| ಆರ್. ಎನ್. ದೊರೆಸ್ವಾಮಿಯವರ ವೀಣಾವಾದನವು ವಿ|| ಕೆ. ಹರಿಕೃಷ್ಣ[illegible]ರವರ ಮೃದಂಗದೊಡನೆ ನಡೆಯುವುದು.

ಸಹಕಾರದ ಮೂಲಕ ಜನಜೀವನದ ಸರ್ವತೋಮುಖ ಪ್ರಗತಿ

ಸಹಕಾರ ಶಿಕ್ಷಣ ಶಾಲೆಯ ಆರಂಭ
ಸಮಾರಂಭದಲ್ಲಿ [illegible]

ಮೈಸೂರು ೧೭

ಇಲ್ಲಿನ ಸಹಕಾರ ಶಿಕ್ಷಣ ಶಾಲೆಯ ದ್ವಿತೀಯ ತಂಡದ [illegible] ಸಹಕಾರ ಮಂತ್ರಿ ಶ್ರೀ [illegible] ರವರು ಆರಂಭ [illegible] ಜನಜೀವನದ ಸರ್ವತೋಮುಖ ಪ್ರಗತಿ [illegible] ಸಹಕಾರ ಸಂಸ್ಥೆಗಳ [illegible] ಗತ್ಯವೆಂದು ಎಚ್ಚರಿಸಿದರು. ಸಹಕಾರ ಸಂಸ್ಥೆಗಳಲ್ಲಿ ಸರ್ಕಾರದವರೂ [illegible] ಕೇಂದ್ರ ಸರ್ಕಾರದವರು ರಚಿಸಿದ್ದ ಸಮಿತಿಯೊಂದು ಸೂಚಿಸಿರುವಂತೆ ಅವರು ತಿಳಿಸಿದರು. ಸಹಕಾರ ಸಂಸ್ಥೆಗಳಲ್ಲಿ ಖಾಸಗಿಯವರ ಬದಲು ಅಧಿಕಾರಿಗಳು ಕೆಲಸ ಮಾಡುತ್ತಿರುವುದು ಪ್ರಶಂಸಾರ್ಹವಲ್ಲವೆಂಬ ಅಭಿಪ್ರಾಯವು ಸರಿಯಲ್ಲವೆಂದು ಅವರು ಹೇಳಿದರು.

ಸಹಕಾರ ಸಂಸ್ಥೆಗಳಲ್ಲಿ ಶಿಕ್ಷಣ ಪಡೆದವರ ಸಂಖ್ಯೆಯು ಕಡಿಮೆ ಎಂದೂ ಸಹಕಾರಿಗಳಾದ ಆದರ್ಶ ನಿರ್ವಹಿಸಲು ಶಿಕ್ಷಣವು ಅಗತ್ಯವೆಂದೂ ಅವರು ಸೂಚಿಸಿದರು.

ಶಾಲೆಯ ಪ್ರಿನ್ಸಿಪಲ್‌ರಾದ ಶ್ರೀ ಜೆ. ಕೆ. ಬಂಗಾರಯ್ಯನವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರಾದ ಶ್ರೀ ಸಿ. ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷತೆ ವಹಿಸಿದ್ದರು.

ನಗರದಲ್ಲಿ ಮನಶ್ಶಾಸ್ತ್ರಜ್ಞರ ಸಮ್ಮೇಳನ

ಈ ತಿಂಗಳು ೨೯ನೇ ತಾರೀಖಿನಿಂದ ನಗರದಲ್ಲಿ ದಕ್ಷಿಣ ಪ್ರದೇಶದ ಮನಶ್ಶಾಸ್ತ್ರಜ್ಞರ ಸಮ್ಮೇಳನವು ಡಾ। ಎಂ. ವಿ. ಗೋಪಾಲಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಲಿರುವುದು. ವಿದ್ಯಾಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅದರ ಆರಂಭೋತ್ಸವವನ್ನು ನೆರವೇರಿಸುವರು. ಮದ್ರಾಸು, ಬೊಂಬಾಯಿ, ಕೇರಳ, ಆಂಧ್ರ ಮತ್ತು ಮೈಸೂರಿನ [illegible] ಭಾಗವಹಿಸುವರು [illegible] ನ ಸಂಶೋಧನೆಗಳ [illegible] ಪ್ರಿನ್ಸಿಪಲ್ [illegible] ತಿಯೊಂದನ್ನು ರಚಿಸಲಾಗಿದೆ.

ಮೈಸೂರಿನಲ್ಲಿ ೧೫೦ ಲಕ್ಷ ರೂ ಗ್ರಾಮಾಂತರ ವಿದ್ಯುಚ್ಛಕ್ತಿ ಯೋಜನೆ

ಸಂಸ್ಥಾನದ ಗ್ರಾಮಾಂತರದ ವಿದ್ಯುಚ್ಛಕ್ತಿ ಸೌಲಭ್ಯವನ್ನು ವಿಸ್ತರಿಸುವ ಬಗ್ಗೆ ಭಾರತ ಸರ್ಕಾರದವರು ೧೫೯ [illegible] ಲಕ್ಷ ರೂ. ಯೋಜನೆಯನ್ನು ಮಂಜೂರು ಮಾಡಿರುತ್ತಾರೆಂದು ವರದಿಯಾಗಿದೆ. ಇದು ಹಳೇ ಮೈಸೂರಿಗೆ ಅನ್ವಯಿಸುವುದು. ಈ ಪೈಕಿ ಈಗಾಗಲೇ ೨೦ ಲಕ್ಷ ರೂ.ವನ್ನು ವೆಚ್ಚ ಮಾಡಿ ೮೭೦ ಹಳ್ಳಿಗಳಿಗೆ ವಿದ್ಯುತ್ ಸೌಕರ್ಯವನ್ನು ಕಲ್ಪಿಸಲಾಗಿದೆ.

ಜಾಯಿಕಾಯಿ ಹಲಗೆಗಳು

ಉತ್ತಮವಾದ ಜಾಯಿಕಾಯಿ ಹಲಗೆಗಳು ದೊರೆಯುತ್ತವೆ. ಕೆಳಗೆ ಕಂಡ ವಿಳಾಸದಲ್ಲಿ ವಿಚಾರಿಸಿ —

ಸಾಧ್ವಿ ಆಫೀಸ್, ಮೈಸೂರು

ಪಿ. ಕೆಂಪಾಚಾರ್

ಡೋರ್ ನಂ ೧೯೬ [illegible]
ಕೆ ಆರ್ ಮೊಹಲ್ಲಾ ಮೈಸೂರು
ಸಾಧು ಎನ್‌ಗ್ರೇವಿಂಗ್ ಮತ್ತು ಲೆಟರ್ ಬ್ಲಾಕುಗಳನ್ನು ತಯಾರು ಮಾಡುತ್ತೇನೆ ಒಮ್ಮೆ ಭೇಟಿ ಕೊಡಿ

ಪಶ್ಚಿಮ ಜೋನಲ್ ಕೌನ್ಸಿಲ್ಲಿನ ಮೈಸೂರು ಪ್ರತಿನಿಧಿಗಳು

ಬೊಂಬಾಯಿ ಮತ್ತು ಮೈಸೂರು ಪ್ರಾಂತಗಳು ಸೇರಿ ಏರ್ಪಟ್ಟಿರುವ ಪಶ್ಚಿಮ ಜೋನಲ್ ಕೌನ್ಸಿಲ್ಲಿನಲ್ಲಿ ಮೈಸೂರಿನ ಪರವಾಗಿ ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪ ಮತ್ತು ಸಚಿವರುಗಳಾದ ಶ್ರೀಗಳು ಎ. ಪಿ. ಪಾಟೀಲ್ ಮತ್ತು ಕೆಚ್. [illegible] ವೀರಣ್ಣಗೌಡ ಇವರುಗಳು [illegible] ಕೌನ್ಸಿಲ್ ಸಭೆಯು ಬೊಂಬಾಯಿ ಮತ್ತು ಬೆಂಗಳೂರುಗಳ[illegible] ಕೇಂದ್ರ ಗೃಹ ಮಂತ್ರಿಯವರು [illegible] ವಹಿಸುವರು [illegible] ತಿಂಗಳು [illegible] ಸಭೆ ಸೇರಲಿದೆ.

ಐಚ್ಛಿಕ ಬೀಜಗಣಿತ ಸಂಗ್ರಹ

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಶ್ರೀ ಎನ್. ಎ. ಬ್ರಹ್ಮಣ್ಯರವರಿಂದ ರಚಿತವಾಗಿರುವ ಐಚ್ಛಿಕ ಬೀಜಗಣಿತ ಸಂಗ್ರಹ ಎಂಬ ಪುಸ್ತಕದ ಪ್ರತಿಯೊಂದನ್ನು ಅವರಿಂದ ಸ್ವೀಕರಿಸಿದ್ದೇವೆ. ಇದರಲ್ಲಿ ೧೯೪೦ರಿಂದ ಈಚೆಗೆ ಇಸವಿವರೆಗಿನ ಎಸ್. ಎಸ್. ಎಲ್. ಸಿ. ಪ್ರಶ್ನೆ ಪತ್ರಿಕೆಗಳ ಉತ್ತರಗಳನ್ನು ಅಧ್ಯಾಯ ಕ್ರಮದಲ್ಲಿ ವಿಂಗಡಿಸಿ ಕೊಡಲಾಗಿದೆ. ಶ್ರೀ ಬಿ. ಸುಬ್ಬಣ್ಣಾಚಾರ್ಯರು ಇದಕ್ಕೆ ಮುನ್ನುಡಿಯನ್ನು ಬರೆದಿರುವರು. ಪುಸ್ತಕದ ಪ್ರತಿಗಳು ಗ್ರಂಥಕರ್ತರಲ್ಲೂ ಮತ್ತು ಪ್ರಕಾಶಕರಾದ, ರಾಮಮಂದಿರ, ಅಗ್ರಹಾರದಲ್ಲಿರುವ ಶ್ರೀಕಾಂತಾ ಬಿಸಿನೆಸ್ ಸಿಂಡಿಕೇಟ್ ನವರಲ್ಲೂ ದೊರೆಯುತ್ತವೆ. ಬೆಲೆ ೧ ರೂಪಾಯಿ.

ಹನುಮಜ್ಜಯಂತಿ ಕಾರ್ಯಕ್ರಮ

ಗಾನವಿಶಾರದ ಬಿ. ದೇವೇಂದ್ರಪ್ಪನವರ ಶ್ರೀ ಮಾರುತಿ ಮಂದಿರದಲ್ಲಿ ಹನುಮಜ್ಜಯಂತಿ ಅಂಗವಾಗಿ ನಿನ್ನೆ ಬೆಳಿಗ್ಗೆ ಶ್ರೀ ಬಿ. ಕೃಷ್ಣಪ್ಪ ಮತ್ತು [illegible] ಶ್ರೀ ನೂಕಲ ಸತ್ಯನಾರಾಯಣಶಾಸ್ತ್ರಿಯವರ ಸಂಗೀತ ಮತ್ತು ಸಂಜೆ ೬ ಕ್ಕೆ [illegible] ಪುಟ್ಟಸ್ವಾಮಯ್ಯನವರ ಗಾಯನ, [illegible] ಬಿ. ಶಿವಮೂರ್ತಿಶಾಸ್ತ್ರಿಯವರಿಂದ "ಕರ್ನಾಟಕ ಸಂಗೀತಕ್ಕೆ [illegible] ಗಳ ಕಾಣಿಕೆ" ಎಂಬ ವಿಷಯವಾಗಿ ಭಾಷಣ ಮತ್ತು [illegible] ಚೆಂಬೈ ವೈದ್ಯನಾಥಭಾಗವತರ ಸಂಗೀತಗಳು ನಡೆಯುವುವು.

[illegible] ಜಾರಿ ಮರಣ

[illegible] ಬಿ. ಟಿ. ಸಿ. ಬಸ್ಸೊಂದರಲ್ಲಿ ಪ್ರಯಾಣ ಮಾಡುತ್ತಿದ್ದ ಸಿಂಗಾರಂ ಎಂಬ ೮೦ ವರ್ಷದವನೊಬ್ಬನು ಓಡುತ್ತಿದ್ದ ಬಸ್ಸಿನಿಂದ ಜಾರಿ ಕೆಳಕ್ಕೆ ತಪ್ಪಿದನೆಂದೂ, ನಂತರ ಆಸ್ಪತ್ರೆಯಲ್ಲಿ ಮೃತನಾದನೆಂದೂ ವರದಿಯಾಗಿದೆ. ಪೋಲೀಸರು ತನಿಖೆ ನಡೆಸುತ್ತಿರುವರು.

ಮನೆಗಳು ಭೋಗ್ಯಕ್ಕಿವೆ

1) 3310/1 [illegible] ಮೇನ್ ಹೌಸ್ ಮತ್ತು ಔಟ್‌ಹೌಸ್ ಇರುವ, ಎಲ್ಲ ದೀಪಗಳುಳ್ಳ ಮನೆ ರೂ 4,000
2) 678 ಬಿ. ಜಿ. ಗಾರ್ಡನ್ಸ್ ಮೈಸೂರು ವಿಶಾಲವಾದ ಮನೆ ರೂ 7,000
3) 678/1 do 3,000

ವಿವರಗಳಿಗೆ —

ಜಯ ಅಂಡ್ ಕಂಪೆನಿ,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಫೋನ್ 520 ಮೈಸೂರು

Edited Printed and Published by
A R Nagarajan at Sadhvi Press
D Subbiah Road, Mysore

ವಿದ್ಯುಚ್ಛಕ್ತಿ ನೌಕರರ ವಿವಾದ ಬಗೆಹರಿಯಬೇಕು

ಮುಷ್ಕರದ ಮತಗಣನೆಗಾಗಿ ನೌಕರರ ಸಂಘದ ಸಮಿತಿಯ ನಿರ್ಧಾರ

ಬೆಂಗಳೂರು ೧೮

ಸಂಸ್ಥಾನ ಸರ್ಕಾರ ಮತ್ತು ವಿದ್ಯುಚ್ಛಕ್ತಿ ಇಲಾಖಾ ನೌಕರರ ಸಂಘದ ನಡುವೆ ಉಂಟಾಗಿರುವ ವಿವಾದದ ಪ್ರಶ್ನೆಗಳೆಲ್ಲವನ್ನೂ ಬರುವ ತಿಂಗಳು ೧೫ರೊಳಗೆ ಇತ್ಯರ್ಥ ಮಾಡಲು ಸರ್ಕಾರದವರು ಸಂಧಾನ ನಡೆಸದಿದ್ದರೆ ಮುಷ್ಕರದ ಬಗ್ಗೆ ನೌಕರರ ಮತದಾನವನ್ನು ತೆಗೆದುಕೊಳ್ಳಬೇಕೆಂದು ಸಂಘದ ಕಾರ್ಯಕಾರಿ ಸಮಿತಿಯು ನಿರ್ಧರಿಸಿರುತ್ತದೆ. ಎಲ್ಲಾ ಹಂಗಾಮಿ ನೌಕರರನ್ನೂ ಕೈಗಾರಿಕಾ ನೌಕರರನ್ನಾಗಿ ಪರಿಗಣಿಸಿ ಎಲ್ಲಾ ಕಾರ್ಮಿಕ ಶಾಸನವನ್ನೂ ಇವರಿಗೆ ಅನ್ವಯಿಸುವುದು, ನೌಕರರ ಸ್ಥಿತಿಗತಿಗಳ ಪರಿಶೀಲನೆಗಾಗಿ ಸಂಬಳದ ಸಮಿತಿಯನ್ನು ಗೊತ್ತುಪಡಿಸುವುದು, ಮುಂದೆ ಹುಟ್ಟಬಹುದಾದ ವಿವಾದಗಳ ಬಗ್ಗೆ ಉಭಯರ ಪ್ರತಿನಿಧಿಗಳಿರುವ ಸಂಧಾನ ಸಮಿತಿಯ ರಚನೆ, ಗೃಹ ವಸತಿಯನ್ನು ಕಲ್ಪಿಸುವುದು ಇವೇ ಮುಂತಾಗಿ ಹಲವಾರು ಪ್ರಶ್ನೆಗಳು ಇತ್ಯರ್ಥವಾಗಬೇಕಾಗಿವೆಯೆಂದು ಹೇಳಲಾಗಿದೆ.

ಪಾಕಿಸ್ತಾನದ ಸೈನಿಕರ ಬಿಲ್ಲೆಯ ಬದಲಾವಣೆ

ಪಾಕಿಸ್ತಾನದ ಸೈನ್ಯದಳಗಳವರು ಧರಿಸುತ್ತಿರುವ ಬ್ರಿಟಿಷ್ ಚಕ್ರವರ್ತಿ ಕಿರೀಟದ ಬದಲು ಬಾಲಚಂದ್ರ ಮತ್ತು ಐದು ನಕ್ಷತ್ರಗಳುಳ್ಳ ಬಿಲ್ಲೆಗಳನ್ನು ಧರಿಸುವರು. [illegible] ಮಾರ್ಚಿ [illegible] ಹೊತ್ತಿಗೆ ಈ ಪದ್ಧತಿಯು ಜಾರಿಗೆ ಬರುವುದು. ಪಾಕಿಸ್ತಾನವು ಇಸ್ಲಾಮಿಕ್ ರಿಪಬ್ಲಿಕ್ ಆದುದರಿಂದ ಈ ಬದಲಾವಣೆಯಾಗಿದೆ.

ಜನತಾರಂಗದ ಚುನಾವಣಾ ಪ್ರಚಾರ

ನಗರದಲ್ಲಿರುವ ಜನತಾರಂಗದ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಶ್ರೀ ಅನಂತಶೆಟ್ಟರ ಅಧ್ಯಕ್ಷತೆಯಲ್ಲಿ ನಡೆದು, ಬರುವ ಮಹಾ ಚುನಾವಣೆಗಳ ಸಮಯದಲ್ಲಿ ಪಕ್ಷದ ಪರವಾಗಿ ಹುರುಪಿನಿಂದ ಪ್ರಚಾರವನ್ನು ನಡೆಸಬೇಕೆಂದು ತೀರ್ಮಾನಿಸಲಾಯಿತು. ಪಕ್ಷದ ಪರವಾಗಿ ಉಮೇದುವಾರರನ್ನು ನಿಲ್ಲಿಸಲಾಗುವುದು. ಈ ಸಂಬಂಧವಾಗಿ ಕಾರ್ಯದರ್ಶಿ ಶ್ರೀ ಬಿ. ಸ್ವಾಮಿಯವರು ೧೫ ತಿಂಗಳ ಕಾಲ ನಾನಾ ಕಡೆ ಪ್ರವಾಸ ಮಾಡಿದ್ದಾರೆ.

ವಿದ್ಯಾರ್ಥಿ ಪರಿಷತ್ತಿನ ಆರಂಭ ಭಾಷಣ

ನಗರದಲ್ಲಿರುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಆರಂಭ ಭಾಷಣವನ್ನು ಮಹಾರಾಜಾ ಕಾಲೇಜಿನ ಅಧ್ಯಾಪಕರಾದ ಶ್ರೀ ಎಸ್. ವಿ. ಪರಮೇಶ್ವರಭಟ್ಟರು ನಾಳೆ ಸಂಜೆ ೫ ೪೫ ಗಂಟೆಗೆ ಸಹಕಾರಭವನದಲ್ಲಿ ಮಾಡುವರು. ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ರಾಮಣ್ಣನವರು ಅಧ್ಯಕ್ಷತೆ ವಹಿಸುವರು. ವಿ॥ ಬಿ. ಆರ್. ಶಾಮಾಚಾರ್ಯರ ವೇಣುವಾದನವೂ ನಡೆಯುವುದು.

ಪ್ರಥಮ ಗ್ರಾಮಾಂತರ ವಿಶ್ವವಿದ್ಯಾಲಯ

ಗುಜರಾತಿನ ಆನಂದ್ ಎಂಬಲ್ಲಿ ಸರ್ದಾ[illegible] ಪಟೇಲರ ನಾಮಾಂಕಿತದಲ್ಲಿ ಗ್ರಾಮಾಂತರ ವಿ[illegible] ಪೀಠವೊಂದನ್ನು ಕಳೆದ ಶನಿವಾರ ತೆರೆಯಲಾಯಿತು. ಅಂದು ಪಟೇಲರ ೬ನೇ ಪುಣ್ಯದಿ[illegible] ವ್ಯಾಪೀಠವು ಭಾರತದಲ್ಲೇ ಪ್ರಥಮ ಗ್ರಾಮಾಂತರ ವಿಶ್ವವಿದ್ಯಾಲಯವಾಗಿದೆ. ಆರ್ಟ್ಸ್, ಸೈ[illegible] ಮುಂತಾದ ಐದು ಕಾಲೇಜುಗಳನ್ನು ಅದಕ್ಕೆ [illegible] ರಿಸಲಾಗಿದೆ. ಅಲ್ಲಿ ಹಿಂದಿಯಲ್ಲಿ ಶಿಕ್ಷಣವೀ[illegible] ಲಾಗುವುದು. ವಿಶ್ವವಿದ್ಯಾಲಯದ ೬,೦೦೦ [illegible] ದ್ಯಾರ್ಥಿಗಳ ಪೈಕಿ ೩ ಸಾವಿರ ಮಂದಿಗೆ ಹಾ[illegible] ಲ್ ಸೌಕರ್ಯವನ್ನು ಕಲ್ಪಿಸಲಾಗಿದೆ.

ಅಶೋಕಾರೋಡು ರಸ್ತೆಯಲ್ಲಿ ಏಕಮುಖ ವಾಹನ ಸಂಚಾರದಿಂದ ತೊಂದರೆ

ದೇವರಾಜಾ ಮಾರ್ಕೆಟ್ಟಿಗೆ ಹತ್ತಿರದಲ್ಲಿ[illegible] ಅಶೋಕಾರೋಡು ಬೀದಿಯಲ್ಲಿ ಏಕಮುಖ [illegible] ಚಾರ ವ್ಯವಸ್ಥೆಯನ್ನು ಪೌರಸಭೆಯವರು ಏ[illegible] ಡಿಸಲು ಆಲೋಚಿಸುತ್ತಿರುವುದನ್ನು ಕೈಬಿಡಬೇ[illegible] ಕೆಂದೂ, ಇದರಿಂದ ವರ್ತಕರು ತಮ್ಮ ಸರ[illegible] ಳನ್ನು ವಾಹನಗಳಿಂದ ಇಳಿಸಿಕೊಳ್ಳಲು [illegible] ವಾಗದೆ ತೊಂದರೆಯಾಗುವುದೆಂದೂ ನಗರ [illegible] ಪೌರಸಭಾ ಮಾರ್ಕೆಟ್ ವರ್ತಕರ ಸಂಘದ [illegible] ರ್ಯಕಾರಿ ಸಮಿತಿಯು ನಿರ್ಣಯ ಮಾಡಿರು[illegible]

ಸಂಸ್ಕೃತ ವಿದ್ಯಾರ್ಥಿಗಳ ಬೀಳ್ಕೊಡು[illegible]

ಮಹಾರಾಜಾ ಪ್ರೌಢ ಶಾಲೆಯ ಸಂಸ್ಕೃತ [illegible] ಭವ ಆಶ್ರಯದಲ್ಲಿ ಕಳೆದ ರವಿವಾರ ಸಂಸ್ಕೃತ [illegible] ದ್ಯಾರ್ಥಿಗಳ ಬೀಳ್ಕೊಡುಗೆ ಸಮಾರಂಭವು [illegible] ಲಾ ಮುಖ್ಯೋಪಾಧ್ಯಾಯ ಶ್ರೀ ಜಿ. ವಿ. [illegible] ರ್ಯನಾರಾಯಣರವರ ಅಧ್ಯಕ್ಷತೆಯಲ್ಲಿ [illegible] ಗಿತು. ಸಂಸ್ಕೃತ ಕಾಲೇಜಿನ ಪ್ರಾಧ್ಯಾಪಕರಾದ ಶ್ರೀ ಟಿ. ಆರ್. ವಿಲೋಚನ ಶರ್ಮರವರು ಸಂ[illegible] ತ ವಿದ್ಯಾಭ್ಯಾಸದ ವಿಷಯವಾಗಿ ಉಪನ್ಯಾ[illegible] ಮಾಡಿ, ವಿದ್ಯಾರ್ಥಿಗಳಿಗೆ ಹಿತ ವಚನವನ್ನಿ[illegible] ರು. ಮೊದಲು ಸಂಘದ ಉಪಾಧ್ಯಕ್ಷ ಶ್ರೀ [illegible] ಬಸವಯ್ಯನವರಿಂದ ಸ್ವಾಗತ ನಂತರ ಸಂ[illegible] ಕಾರ್ಯದರ್ಶಿಯವರಿಂದ ವರದಿಗಳಾದಮೇ[illegible] ಧ್ಯಕ್ಷರ ಭಾಷಣಾನಂತರ ಶ್ರೀ ಕೆ. ಎಸ್. [illegible] ದೀವರವರು ವಂದನಾರ್ಪಣೆ ಮಾಡಿದರು. [illegible] ಗೀತೆ ಮತ್ತು ಸಿಹಿ ತಿಂಡಿ ವಿನಿಯೋಗಗಳೊ[illegible] ಸಮಾರಂಭವು ಮುಕ್ತಾಯವಾಯಿತು.

ಬಂಗ್ಲೆ ಮಾರಾಟಕ್ಕೆ ಇದೆ

ನಜರ್‌ಬಾದ್ ಮೇನ್ ರೋಡಿನಲ್ಲಿ [illegible] ದೀಪ, ಫ್ಲಷ್, ವಿಶಾಲವಾದ ಕಾಂಪೌ[illegible] ವಗೈರೆ ಉಳ್ಳ, ಅರ್ಧ ತಾರಸಿ, ಅರ್ಧ ಮ[illegible] ಳೂರು ಹೆಂಚಿನ ಬಂಗ್ಲೆ ಬೆಲೆ ಸುಮಾ[illegible] 15,000 ರೂ. ವಿವರಗಳಿಗೆ ಕೆಳಗಿನ ವಿ[illegible] ದಲ್ಲಿ ವಿಚಾರಿಸಿರಿ

ಎಸ್. ಸುಂದರರಾವ್,
ಅಡ್ವೋಕೇಟ್, ಮೈಸೂರು

ಚಾಮುಂಡೇಶ್ವರಿ ಟಾಕೀಸ್, ಮೈಸೂರು

20-12-56 ರಿಂದ [illegible] ಪ್ರಾರಂಭ
ದಿನವಹಿ ೪ ಪ್ರದರ್ಶನಗಳು
ಬಹುದಿನಗಳಿಂದಲೂ ನಿರೀಕ್ಷೆಯಲ್ಲಿದ್ದ,
ಲಲಿತಾ ಫಿಲಂಸ್‌ರವರ ತಮಿಳು ಚಿತ್ರ

ಮಾದರಕುಲ ಮಾಣಿಕ್ಯಂ

ನಟವರ್ಗ: ಜೆಮಿನಿ ಗಣೇಶ್, ನಾಗೇಶ್ವರರಾವ್,
ಅಂಜಲಿದೇವಿ ಸಾವಿತ್ರಿ, ಕಣ್ಣಾಂಬ, ರಂಗಾ
ರಾವ್, ಎಂ. ಎನ್. ರಾಜಂ, ಸಾರಂಗಪಾಣಿ
ತಂಗವೇಲು, ಫ್ರೆಂಡ್ ರಾಮಸ್ವಾಮಿ
ಮುಂತಾದವರು
ಮೊದಲನೇ ೪ ವಾರಗಳಲ್ಲಿ ಎಲ್ಲಾ ವಿಧವಾದ
ಕಾಂಪ್ಲಿಮೆಂಟರಿ, ಫ್ರೀ ಪಾಸುಗಳು ಮತ್ತು
ರಿಯಾಯಿತಿಗಳನ್ನೂ ಮನ್ನಾ ಮಾಡಲಾಗಿದೆ
[AN EMERALD RELEASE

[illegible] ನಂ. 793

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[illegible] 3 [illegible]

ಬ್ರಾಂಕಾಲ್
[illegible]
[illegible]
[illegible]
ಸಪ್ಲೈ ಅಂಡ್ ಕೋ.,
[illegible]
71/1. [illegible]
[illegible]
ಬೆಂಗಳೂರು-2

ಸಂಪುಟ ೧ : ೧೫] SADHVI : THURSDAY 20--12--1956 ಸಾಧ್ವಿ : ಗುರುವಾರ ೨೦—೧೨—೧೯೫೬ [ಸಂಚಿಕೆ : [illegible]

ಸಂಸ್ಥಾನಕ್ಕೆ ಉಳಿದ ಕನ್ನಡ ಪ್ರದೇಶಗಳ ಸೇರ್ಪಡೆಗೆ ಯತ್ನ

ಉಳಿದ ಕನ್ನಡ ಪ್ರದೇಶಗಳನ್ನು ಸಂಸ್ಥಾನಕ್ಕೆ ಸೇರಿಸುವ ಪ್ರಯತ್ನ

ಶಾಸನ ಸಭೆಗಳ ಜಂಟಿ ಅಧಿವೇಶನದಲ್ಲಿ ಗವರ್ನರರ ಹೇಳಿಕೆ

ಬೆಂಗಳೂರು ೨೦

ವಿಧಾನ ಸೌಧದಲ್ಲಿ ನೆನ್ನೆ ಇದೇ ಮೊಟ್ಟಮೊದಲಾಗಿ ಸೇರಿದ ನೂತನ ಮೈಸೂರಿನ ವಿಧಾನ ಸಭೆ ಮತ್ತು ಪರಿಷತ್ತಿನ ಜಂಟೀ ಅಧಿವೇಶನವನ್ನುದ್ದೇಶಿಸಿ ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ಭಾಷಣ ಮಾಡಿ ರಾಜ್ಯ ಪುನರ್ವಿಂಗಡಣೆಯಲ್ಲಿ ಕಾಸರಗೋಡು, ಮಡಕಶಿರ, ದಕ್ಷಿಣ ಸೋಲಾಪುರ ಮತ್ತು ಇತರ ಕನ್ನಡ ಭಾಗಗಳನ್ನು ಮೈಸೂರಿಗೆ ಸೇರಿಸುವಂತೆ ಮುಂದೆಯೂ ತಮ್ಮ ಸರ್ಕಾರದವರು ಒತ್ತಾಯ ಮಾಡುವುದಾಗಿಯೂ ಜೋನಲ್ ಕೌನ್ಸಿಲುಗಳ ಮೂಲಕ ಈ ಕುಂದುಕೊರತೆಯು ನಿವಾರಣೆಯಾಗುವುದೆಂದು ತಾವು ಆಶಿಸುವುದಾಗಿಯೂ ತಿಳಿಸಿದರು. ರಾಜ್ಯ ಪುನರ್ವಿಂಗಡಣೆ ಶಾಸನ ಮಾಡುವಾಗ ವಿವಾದಗಳು ಉಂಟಾಗಿದ್ದರೂ, ಯಾವ ಅಪಘಾತವೂ ಇಲ್ಲದೆ ನೂತನ ಸಂಸ್ಥಾನವು ಸ್ಥಾಪಿತವಾದುದಕ್ಕಾಗಿ ಅವರು ಹರ್ಷವನ್ನು ವ್ಯಕ್ತಪಡಿಸಿದರು. ಸಂಸ್ಥಾನ ಪುನರ್ವಿಂಗಡಣೆಯಂತಹ ಭಾರಿ ಪ್ರಮಾಣದ ಬದಲಾವಣೆಯಲ್ಲಿ ಪ್ರತಿಯೊಂದು ದೃಷ್ಟಿಕೋಣದವರನ್ನೂ ತೃಪ್ತಿಪಡಿಸಲು ಸಾಧ್ಯವಿಲ್ಲವೆಂದು ಅವರು ಹೇಳಿ ತಮ್ಮ ಸರ್ಕಾರವು ಭಾಷಾವಾರು ಅಲ್ಪಸಂಖ್ಯಾತರ ಹಿತರಕ್ಷಣೆ ಮಾಡುವುದಾಗಿ ಭರವಸೆಯಿತ್ತರು.

ನೂತನ ಸಂಸ್ಥಾನದಲ್ಲಿ ಸೇರಿರುವ ಐದು ಬೇರೆ ಬೇರೆ ಭಾಗಗಳಲ್ಲಿ ಪ್ರಸ್ತುತ ವಿವಿಧ ಕಾನೂನು, ವಿದ್ಯಾಭ್ಯಾಸ, ಆಡಳಿತ ಪದ್ಧತಿಗಳಿವೆಯೆಂದೂ, ಅವನ್ನು ಸಂಯೋಜಿಸಿ ಸಮಾನವಾದ ವ್ಯವಸ್ಥೆಯನ್ನು ಮಾಡಬೇಕಾಗಿರುವುದೆಂದೂ, ಈ ಬಗ್ಗೆ ಆದಷ್ಟು ಬೇಗನೆ ಕ್ರಮ ಕೈಗೊಳ್ಳಲಾಗುವುದೆಂದೂ ಗವರ್ನರರು ಹೇಳಿದರು.

ನಾಗರಿಕ ಸೇವಕರಿಗೆ ಒಂದೇ ಮಟ್ಟದ ಸಂಬಳದ ಪ್ರಶ್ನೆಯು ಉದ್ಭವಿಸುತ್ತದೆಂದೂ ಅತ್ಯಂತ ಹೆಚ್ಚು ಸಂಬಳ ಬರುವ ಬೊಂಬಾಯಿ ಮತ್ತು ಅತ್ಯಂತ ಕಡಿಮೆ ಮಟ್ಟದ ಹಿಂದಿನ ಮೈಸೂರು ನೌಕರರು ಇರುವರೆಂದೂ, ಮೈಸೂರಿಗೆ ಹೊಸದಾಗಿ ಸೇರಿದವರ ಸಂಬಳದಲ್ಲಿ ಕೈಹಾಕದೆ ಎಲ್ಲರಿಗೂ ಒಂದೇ ರೀತಿಯ ಸಂಬಳ ಶ್ರೇಣಿಯನ್ನು ಏರ್ಪಡಿಸಬೇಕಾಗಿರುವುದೆಂದೂ, ಅವರು ನುಡಿದರು. ಸಂಸ್ಥಾನದ ಹುಟ್ಟುವಳಿಯು [illegible] ಕೊಂಡಿರುವುದನ್ನು ಅವರು ಸೂಚಿಸಿ, ಈ ಬಗ್ಗೆ [illegible] ಹಣ ಸಹಾಯವನ್ನು ಕೇಂದ್ರ ಸರ್ಕಾರದವರು ಒದಗಿಸಬೇಕೆಂದು ಹಾರೈಸಿದರು.

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣ ನೂತನ ಸಂಸ್ಥಾನದಲ್ಲಿ ಆಗುವ ಅತ್ಯಂತ ಮಹತ್ವದ ಘಟನೆಯೆಂದೂ ಬಿಹಾರ್-ಬಂಗಾಳ ಪ್ರದೇಶವನ್ನು ಬಿಟ್ಟರೆ ಮೈಸೂರು ಸಂಸ್ಥಾನದಲ್ಲಿ ಹೇರಳವಾಗಿ ದೊರೆಯುವ ಖನಿಜ ಸಂಪತ್ತಿನ ಶೋಧನೆ ನಡೆಸಿ ಅದನ್ನು ಜನರ ಉಪಯೋಗಕ್ಕಾಗಿ ಪಡೆಯಲು ಮುಂದಾಲೋಚನೆಯಿಂದ ವ್ಯವಸ್ಥೆ ಮಾಡಲಾಗುವುದೆಂದೂ ಗವರ್ನರರು ಹೇಳಿದರು.

ನಂತರ ಅವರು ಮೈಸೂರಿನ ಎರಡು ವಿಶ್ವವಿದ್ಯಾಲಯಗಳು ಮತ್ತು ಕಾಲೇಜು ವ್ಯಾಸಂಗದ ಸಮಸ್ಯೆಗಳನ್ನು ವಿವರಿಸಿ, ಮೈಸೂರು ನಗರದಲ್ಲಿ ದೇಶೀಯ ವೈದ್ಯ ಕಾಲೇಜನ್ನು ಪುನರ್ವ್ಯವಸ್ಥೆಗೊಳಿಸಲಾಗುತ್ತಿರುವುದೆಂದು ಸೂಚಿಸಿದರು.

ಗೇಣಿ ಮತ್ತು ಇನಾಮುದಾರರ ಹಿತಕ್ಕೆ ತೊಂದರೆಯಾಗದಂತೆ ಸದ್ಯದಲ್ಲಿ ಮೈಸೂರು ಮತ್ತು ಬೊಂಬಾಯಿ ಗೇಣಿ ಶಾಸನಗಳನ್ನು ತಿದ್ದುಪಡಿ ಮಾಡಿ, ಮುಂದೆ ಒಂದು ವರ್ಷದ ವರೆಗೆ ಸದ್ಯದ ಪರಿಸ್ಥಿತಿಯು ಮುಂದುವರಿಯುವಂತೆ ಮಾಡಲಾಗುವುದೆಂದು ಅವರು ನುಡಿದರು.

ನೂತನ ಸಂಸ್ಥಾನವು ಸ್ಥಾಪಿಸಲ್ಪಟ್ಟಾಗ ಅಂತರ ರಾಷ್ಟ್ರೀಯ ಪರಿಸ್ಥಿತಿಯು ಉಗ್ರಸ್ಥಿತಿಯುಂಟಾಗಿದ್ದಿತೆಂದೂ, ಯೂರೋಪು ಮತ್ತು ಮಧ್ಯ ಪೂರ್ವದಲ್ಲಿ ವಿಶ್ವವನ್ನು ವ್ಯಾಪಿಸುವ ಜ್ವಾಲೆಯುಂಟಾಗಿದ್ದು ವಿಶ್ವಸಂಸ್ಥೆಯ ಮತ್ತು ಭಾರತದ ಪ್ರಯತ್ನದಿಂದ ಬಿಕ್ಕಟ್ಟು ಸ್ವಲ್ಪ ಮಟ್ಟಿಗೆ ಸುಧಾರಿಸಿತೆಂದೂ ಅವರು ಹೇಳಿ ನೆಹರೂರವರ ಅಮೆರಿಕಾ ಪ್ರವಾಸದ ಉದ್ದೇಶವು ಸಫಲವಾಗಲೆಂದು ಹಾರೈಸಿದರು.

ನೂತನ ಸಂಸ್ಥಾನದ ಸ್ಥಾಪನೆಯಿಂದ ಕನ್ನಡ ಜನರ ಬಹುಕಾಲದ ಬೇಡಿಕೆಯು ಸಫಲಗೊಂಡು ಒಂದೇ ಆಡಳಿತದ ವಿಭಾಗವು ಏರ್ಪಟ್ಟಿತೆಂದೂ, ತಮ್ಮ ಸರ್ಕಾರವು ಪ್ರಜೆಗಳ ಪುರೋಭಿವೃದ್ಧಿಯನ್ನು ಸಾಧಿಸಿ ಭಾರತದಲ್ಲಿ ಮೈಸೂರು ಒಂದು ಪ್ರಗತಿಯುತ ಮತ್ತು ಅಭ್ಯುದಯದ ರಾಜ್ಯವಾಗಿ ಪರಿಣಮಿಸಲು ಪ್ರಯತ್ನಿಸುವುದೆಂದೂ ಸೂಚಿಸಿದರು.

ಗವರ್ನರರನ್ನು ವಿಧಾನ ಸೌಧದ ಬಳಿ ಉಭಯ ಶಾಸನಸಭಾಧ್ಯಕ್ಷರು ಮತ್ತು ಸಭಾ ಕಾರ್ಯದರ್ಶಿ ಶ್ರೀ ಜಿ ಎಸ್ ವೆಂಕಟರಮಣಯ್ಯರ್‌ರವರು ಸ್ವಾಗತಿಸಿದರು.

೩ ರೂ. ಸಾಲಕ್ಕಾಗಿ ಇಬ್ಬರ ಆತ್ಮಹತ್ಯೆ : ಒಬ್ಬನ ಕೊಲೆ

೩ ರೂ ಗಳ ಸಾಲಕ್ಕಾಗಿ ಚಿಂತಾಮಣಿಯಲ್ಲಿ ಸಾಲ ಕೊಟ್ಟವನು ಮತ್ತು ಸಾಲ ಪಡೆದವನಿಗೆ ವ್ಯಾಜ್ಯ ನಡೆದು, ಸಾಲವನ್ನು ವಾಪಸು ಕೊಡುವಂತೆ ಕೇಳಿದಾಗ ಪೆದ್ದಣ್ಣ ಎಂಬುವನು ಒರಟುತನದಿಂದ ನಡೆದುಕೊಂಡನೆಂದು ಅವನನ್ನು ನರಸಿಂಹರೆಡ್ಡಿ ಎಂಬುವನು ಕೊಡಲಿಯಿಂದ ಹೊಡೆದು [illegible] ಗಂಟೆಗಳನಂತರ ಅವನು ಮೃತಪಟ್ಟನೆಂದೂ, ನರಸಿಂಹರೆಡ್ಡಿಯೂ, ಅವನ [illegible] ವೆಂಕಟರಾಮಪ್ಪನೂ ಊರಿನಿಂದ ಓಡಿಹೋಗಿ ಮದನಪಲ್ಲಿ ಬಳಿ ಒಂದು ಬಾವಿಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡರೆಂದೂ ವರದಿಯಾಗಿದೆ

ಚಿಕ್ಕಮಗಳೂರಿನಲ್ಲಿ ಸೈಕಲ್ ಡಬ್ಬಲ್ ರೈಡಿಂಗಿಗೆ ನಿಷೇಧ

ಚಿಕ್ಕಮಗಳೂರಿನಲ್ಲಿ ಸೈಕಲ್ಲಿನ ಡಬ್ಬಲ್ ರೈಡಿಂಗನ್ನು ನಿಷೇಧಿಸಲು ಅಲ್ಲಿನ ಪೌರಸಭೆಯು ನಿರ್ಧರಿಸಿದೆ

ಶಾಂತಿ ಸಂರಕ್ಷಣೆಯೇ ಭಾರತದ ಮುಖ್ಯ ಗುರಿ

ಅಮೆರಿಕಾ ಪ್ರಜೆಗಳಿಗೆ ನೆಹರೂರವರ ರೇಡಿಯೋ ಟೆಲಿವಿಷನ್ ಭಾಷಣ

ನೆನ್ನೆ ಪ್ರಧಾನಿ ನೆಹರೂರವರು ವಾಷಿಂಗ್ಟನ್ನಿನಲ್ಲಿ ಅಮೆರಿಕಾ ಪ್ರಜೆಗಳನ್ನುದ್ದೇಶಿಸಿ ರೇಡಿಯೋ ಟೆಲಿವಿಷನ್ ಭಾಷಣ ಮಾಡಿ ಶಾಂತಿ ರಕ್ಷಣೆಯೇ ಭಾರತದ ನೀತಿಯ ಪ್ರಾಮುಖ್ಯ ಗುರಿಯೆಂದು ತಿಳಿಸಿದರು. ಅದನ್ನು ಅನುಸರಿಸುವುದರಲ್ಲಿ ಭಾರತವು ಯಾವ ಮಿಲಿಟರಿ ಒಕ್ಕೂಟಕ್ಕೂ ಸೇರುವುದಿಲ್ಲವೆಂದು ಅವರು ತಿಳಿಸಿ, ಇತರ ರಾಷ್ಟ್ರಗಳ ವ್ಯವಹಾರದಲ್ಲಿ ಪ್ರವೇಶಿಸುವುದು ಸರಿಯಲ್ಲವೆಂದು ಭಾರತವು ಅಭಿಪ್ರಾಯಪಟ್ಟಿರುವುದಾಗಿ ಹೇಳಿದರು. ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರ ವ್ಯಕ್ತಿತ್ವವನ್ನು ನೆಹರೂರವರು ಪ್ರಶಂಸಿಸಿ, ಭಾರತಕ್ಕೆ ಅವರು ಬರಬೇಕೆಂದೂ, ಬಂದರೆ ಅವರನ್ನು ಭಾರತವು ಸೂಕ್ತ ರೀತಿಯಲ್ಲಿ ಗೌರವಿಸುವುದೆಂದೂ ತಿಳಿಸಿದರು. ಜಗತ್ತಿನಲ್ಲಿ ಇತ್ತೀಚೆಗೆ ಆದ ಎರಡು ದುರಂತಗಳನ್ನು ಅವರು ಪ್ರಸ್ತಾಪಿಸಿ, ಬಲಾಢ್ಯ ರಾಷ್ಟ್ರಗಳು ವಸಾಹತುಶಾಹಿಯ ಹಳೇ ವಿಧಾನದಿಂದ ಚಿಕ್ಕ ರಾಷ್ಟ್ರಗಳ ಮೇಲೆ ಆಕ್ರಮಣ ಮಾಡಿರುವುದೆಂದೂ, ಅದರ [illegible] ಇಂತಹ ಆಕ್ರಮಣವನ್ನು ತಡೆಯುವುದಾಗಿಯೂ ನುಡಿದರು. ವಿಶ್ವ ರಾಷ್ಟ್ರಗಳು [illegible] ಅವರು ತಿಳಿಸಿದರು

ಯುವಜನರ ಹಬ್ಬ

ನಗರದಲ್ಲಿರುವ ಜಿಲ್ಲಾ ಕ್ರೀಡಾ ಸಮಿತಿ ಆಶ್ರಯದಲ್ಲಿ ನಾಳೆ ಯುವಜನರ ಹಬ್ಬವನ್ನು ಆಚರಿಸಲಾಗುವುದು. ಬೆಳಿಗ್ಗೆ ೮ ಗಂಟೆಗೆ [illegible] ಯವರು [illegible] ಮಾಡಿ, [illegible] ಕ್ರೀಡೆಗಳು ನಡೆಯುವುವು. ಸಂಜೆ ೪ ಗಂಟೆಗೆ ವಿದ್ಯಾವರ್ಧಕ [illegible] ಶಾಲೆಯಲ್ಲಿ ಪ್ರದರ್ಶನ, ಜಿಲ್ಲಾಧಿಕಾರಿಗಳಾದ ಶ್ರೀ [illegible] ಅಧ್ಯಕ್ಷತೆಯಲ್ಲಿ [illegible] ಬಹುಮಾನ ವಿತರಣಾ ಸಮಾರಂಭವು ಜರುಗುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ.

ಬೆಳಿಗ್ಗೆ ೭.೫ ಗಾಂಧಿ ಭಜನೆ ೭-೧೫ [illegible] ಶ್ರೀರಾಮು-ದೇವರ ನಾಮ. ೭-೩೦ ಹಿಂದಿ [illegible] ೮ ಗಂ [illegible]. ಮಧ್ಯಾಹ್ನ ೧೨ ಏ ಎಲ್ [illegible] ಸಂಗೀತ ೧೨-೩೦ ವಾದ್ಯ ವೃಂದ ೧೨-೪೫ ವನಿತಾ ವಿಭಾಗ ೧-೫೦ ಸಿತಾರ್ ಸಂಜೆ ೫-೩೦ ಸಂಗೀತ ೬-೫ ವಿರಾಮ ಸಂಗೀತ. ೬ ೨೦ ಕೃಷ್ಣ ಗೀತೆ ೭ ೩೦ [illegible] ೮ [illegible] ಮುರುಳಿ ಕೃಷ್ಣ ಸಂಗೀತೋತ್ಸವ ೯-೧೫ ವಸಂತ [illegible] ೯-೩೦ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ೧೦ ಚಿತ್ರ ಸಂಗೀತ

ಶಿವಲಿಂಗಪ್ಪನವರ ಸತ್ಯಾಗ್ರಹದ ಬಗ್ಗೆ ಚರ್ಚೆ

[illegible]

[illegible] ಬೆಂಗಳೂರು ೨೦

[illegible] ಶಿವಲಿಂಗಪ್ಪ [illegible]

[illegible] ಶ್ರೀ ಕೆ. ಹನುಮಂತಯ್ಯನವರು [illegible]

[illegible]

ಶಾಸನಸಭಾ ಭವನಕ್ಕೆ [illegible] ಪ್ರವೇಶ ಪ್ರಯತ್ನ

ಬೆಂಗಳೂರು ೨೦

[illegible]

ಕಾಂಗ್ರೆಸ್ ಸದಸ್ಯತ್ವದ ಬಗ್ಗೆ ಸೂಚನೆ

[illegible] ಕಾಂಗ್ರೆಸ್ [illegible]

ತಮಿಳು ವಿದ್ಯಾರ್ಥಿ ಸಂಘದಲ್ಲಿ ಕಾಮರಾಜ ನಾಡಾರರ ಭಾಷಣ

ಮೈಸೂರು ೨೦

ಸೇಂಟ್ ಫಿಲೋಮಿನಾ ಕಾಲೇಜಿನ ತಮಿಳು ಸಂಘದ ಮುಕ್ತಾಯ ಭಾಷಣವನ್ನು ಮದ್ರಾಸಿನ ಮುಖ್ಯ ಮಂತ್ರಿ ಶ್ರೀ ಕಾಮರಾಜರು ಕಳೆದ ಭಾನುವಾರ [illegible] ಮಾಡಿದರು

ಕುಮಾರಿ [illegible]ರಿಂದ ಪ್ರಾರ್ಥನೆಯಾದನಂತರ ರೆ ಧ ಮಸ್ಕರೆವರು ಸ್ವಾಗತ ಭಾಷಣ ಮಾಡಿದರು ಸಂಘದ ಪರವಾಗಿಯೂ ಮತ್ತು ತಮಿಳು ಜನಳ ವರ್ತಕರ ಸಂಘದ ಪರವಾಗಿಯೂ ಶ್ರೀ ಕಾಮರಾಜರಿಗೆ ಬಿನ್ನವತ್ತಳೆಗಳನ್ನು ಅರ್ಪಿಸಲಾಯಿತು ಮೈಸೂರಿನಿಂದ ಕೊಯಮುತ್ತೂರಿಗೆ ನೇರವಾದ ಬಸ್ ಸೌಕರ್ಯವನ್ನು ಒದಗಿಸಿಕೊಡಬೇಕೆಂದು ವರ್ತಕರು ಕೋರಿದ್ದು ಆ ಕಾರ್ಯದರ್ಶಿಗಳು ವಾರ್ಷಿಕ ವರದಿಯನ್ನು ಒಪ್ಪಿಸಿದರು

ಬೆಂಗಳೂರಿನ ಮಹಾರಾಣಿ ಕಾಲೇಜಿನ ತಮಿಳು ಅಧ್ಯಾಪಕಿ ಶ್ರೀಮತಿ ಕೆ ನಾಗಾಂಬಾಳ್ ರವರು ತಮಿಳಿನಲ್ಲಿ ಸ್ವಾರಸ್ಯವಾದ ಭಾಷಣ ಮಾಡಿ ಮೈಸೂರು ಸಂಸ್ಥಾನದಲ್ಲಿ ತಮಿಳರ ವಿದ್ಯಾಭ್ಯಾಸಂಗಕ್ಕೆ ಹೆಚ್ಚಿನ ಸೌಲಭ್ಯಗಳನ್ನು ಕಲ್ಪಿಸಬೇಕೆಂದು ಕೋರಿದರು

ಶ್ರೀ ಕಾಮರಾಜರು ಮಾತನಾಡಿ ತಮಿಳರು ತಮ್ಮ ಸರಳ ಸ್ವಭಾವದಿಂದಲೂ ಸ್ನೇಹಪರತೆಯಿಂದಲೂ ಜಗತ್ತಿನ ಎಲ್ಲ ಭಾಗಗಳಲ್ಲಿಯೂ ಜನರೊಡನೆ ಬೆರೆತು ಸುಖಸಂತೋಷದಿಂದ ಬಾಳಬಲ್ಲರೆಂದು ನುಡಿದರು ಪರರಿಗೆ ಉಪಕಾರಿಯಾಗಿರುವುದರಿಂದಲೇ ಪ್ರತಿಯೊಂದು ಸಮಾಜವೂ ತನ್ನ ಉನ್ನತಿಯನ್ನು ಸಾಧಿಸಬಲ್ಲದೆಂದು ಅವರು ಹೇಳಿ ಹೊರನಾಡುಗಳಲ್ಲಿರುವ ತಮಿಳರು ತಮ್ಮ ಗುಣಾತಿಶಯಗಳಿಂದ ತಮಿಳುನಾಡಿ[illegible]ರ್ತಿಯನ್ನು ತರಬೇಕೆಂದು ಸೂಚಿಸಿದರು ನಿಜವಾದ ಹಿರಿಮೆಯು ಹಣದಲ್ಲಿಲ್ಲವೆಂದೂ ಗುಣದಲ್ಲಿರುವುದಾಗಿಯೂ ಅವರು ನುಡಿದರು ಪ್ರಜಾಪ್ರಭುತ್ವದಲ್ಲಿ ಜಾತಿಗಳಿಗೆ ಸ್ಥಾನವಿಲ್ಲವೆಂದು ಅವರು [illegible] ಆವಶ್ಯಕತೆಗಳನ್ನು ಪೂರೈಸುವಂತೆ ಸರ್ಕಾರಗಳಿಗೆ [illegible] ಒತ್ತಾಯ ಮಾಡಬೇಕೆಂದು [illegible] ತಮಿಳು ಜನರ ಆವಶ್ಯಕತೆಗಳನ್ನು ಪೂರೈಸುವುದರಲ್ಲಿ ತಾವು ಸಕಲ ಪ್ರಯತ್ನಗಳನ್ನೂ ಮಾಡುವುದಾಗಿ ನುಡಿದರು

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ತಾಳಗುಪ್ಪ-ಹೊನ್ನಮರಡುಗಳಿಗೆ ರೈಲು ಮಾರ್ಗ

ಬೆಂಗಳೂರು ೨೦

ತಾಳಗುಪ್ಪದಿಂದ ಹೊನ್ನಮರಡುವಿಗೆ [illegible] ಮೈಲಿ ರೈಲು ಮಾರ್ಗದ ಸರ್ವೆ ಮತ್ತು ನಿರ್ಮಾಣದ ವೆಚ್ಚವನ್ನು ಈಗ ಮೈಸೂರು ಸರ್ಕಾರದವರೆ ವಹಿಸಬೇಕೆಂದೂ, ಮುಂದೆ ಈ ಮಾರ್ಗವು ಲಾಭಯುಕ್ತವಾಗಿ ಕಂಡುಬಂದರೆ ಕೇಂದ್ರ ಸರ್ಕಾರದವರು ಇದನ್ನು ವಹಿಸಿಕೊಂಡು ಇದಕ್ಕಾಗಿ ತಗಲಿರುವ ವೆಚ್ಚವನ್ನು ಮೈಸೂರು ಸರ್ಕಾರಕ್ಕೆ ವಾಪಸು ಕೊಡುವುದಾಗಿಯೂ ಕೇಂದ್ರ ರೈಲ್ವೆ ಉಪ ಮಂತ್ರಿ ಶ್ರೀ ಅಳಗೇಶನ್‌ರವರು ಭರವಸೆ ನೀಡಿರುವುದಾಗಿ ಸಂಸ್ಥಾನದ ಮರಾಮತ್ತು ಮಂತ್ರಿ ಶ್ರೀ ಹೆಚ್ ಕೆ ವೀರಣ್ಣಗೌಡರು ತಿಳಿಸಿರುತ್ತಾರೆ

ವಿಶ್ವಸಂಸ್ಥೆಯಲ್ಲಿ ಜಪಾನಿನ ಪ್ರತಿನಿಧಿ

ಜಪಾನಿಗೆ ಪ್ರವೇಶ ಕೊಡಲು ವಿಶ್ವಸಂಸ್ಥೆಯ ಸಾಧಾರಣ ಸಭೆಯು ಮೊನ್ನೆ ಸರ್ವಾನುಮತದಿಂದ ನಿರ್ಧರಿಸಿತು ಜಪಾನಿನ ವಿದೇಶಾಂಗ ಮಂತ್ರಿ ಶಿಗೆಮಿಟ್ಸು ಮತ್ತು ಇತರ ಪ್ರತಿನಿಧಿಗಳು ಸಭೆಗೆ ಆಗಮಿಸಿ ತಮ್ಮ ಸ್ಥಾನಗಳನ್ನು ಅಲಂಕರಿಸಿದರು

ಹನುಮಜ್ಜಯಂತಿ ಕಾರ್ಯಕ್ರಮ

ಗನವಿಹಾರದ ಬಿ ವೇಂಕಟಕೃಷ್ಣನವರ ಶ್ರೀ ಮಾರುತೀ ಮಂದಿರದಲ್ಲಿ ನಾಳೆ ಬೆಳಿಗ್ಗೆ ಶ್ರೀ ವೈ ಎಸ್ ಶ್ರೀನಿವಾಸಮೂರ್ತಿ ಮತ್ತು ಕುಮಾರ ನ ವಿ! ರಂಗಸ್ವಾಮಿಯವರಿಂದ ಸಂಗೀತ ಮತ್ತು ಸಂಜೆ ಆರ್ ವಿ|| ಕೃಷ್ಣಮೂರ್ತಿ ವೆಂಕಟನಾರಾಯಣರಾಯರಿಂದ ಗಾಯನ, ಡಾ|| ಬಿ ಕೆ ದಾಸರಿಂದ ಭಕ್ತ ಹನುಮಾನ್ ಎಂಬ ವಿಷಯವಾಗಿ ಭಾಷಣ ಮತ್ತು ಮದ್ರಾಸಿನ ಟಿ ಕೆ ರಂಗಾಚಾರಿಯವರಿಂದ ಸಂಗೀತವೂ ನಡೆಯುವುವು

ಏಳು ಸಂಬಳ ಸಮಿತಿಗಳ ನೇಮಕ

ಐ ಎ ಟಿ ಯು ಸಿ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಶ್ರೀ [illegible]ಯವರು ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸುತ್ತಾ ಭಾರತ ಸರ್ಕಾರದವರು ಶೀಘ್ರದಲ್ಲೇ ಏಳು ಸಂಬಳ ಸಮಿತಿಗಳನ್ನು ನೇಮಕಮಾಡಲಿರುವುದಾಗಿ ತಿಳಿಸಿರುತ್ತಾರೆ ದ್ವಿತೀಯ ಪಂಚವಾರ್ಷಿಕ ಯೋಜನೆ ಸಫಲವಾಗಲು ಕೈಗಾರಿಕಾ ನೌಕರರ ಸಂಬಳದ ಬಗ್ಗೆ ಒಪ್ಪಂದವಾಗಬೇಕೆಂದು ಅವರು ಸೂಚಿಸುವರು

ರೈಲು ನೌಕರರಿಗೆ ವಿರಾಮ ವೇತನ

ರೈಲ್ವೆ ನೌಕರರುಗಳಿಗೆ ವಿರಾಮ ವೇತನವನ್ನು ಕಲ್ಪಿಸುವ ಬಗ್ಗೆ ಆದಷ್ಟು ಬೇಗನೆ ಒಂದು ಯೋಜನೆಯನ್ನು ಜಾರಿಗೆ ತರಲಾಗುವುದೆಂದು ರೈಲ್ವೆ ಮಂತ್ರಿ ಜಗಜೀವನರಾಂರವರು ಮೊನ್ನೆ ಲೋಕಸಭೆಯಲ್ಲಿ ತಿಳಿಸಿದರು

ಹೆಚ್ ವೆಂಕಟರಾಮಯ್ಯನವರ ನಿಧನ

ನಗರದ ವಿದ್ಯಾನಿಧಿ ಪುಸ್ತಕಾಲಯದ ಮಾಲೀಕರಾದ ಶ್ರೀ ಹೆಚ್ ವೆಂಕಟರಾಮಯ್ಯನವರು ಮೊನ್ನೆ ರಾತ್ರಿ ತಮ್ಮ [illegible]ನೇ ವಯಸ್ಸಿನಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ ಅವರಿಗೆ ಪತ್ನಿಯೂ, ಇಬ್ಬರು ಗಂಡು ಮಕ್ಕಳೂ ಒಬ್ಬ ಮಗಳೂ ಇರುವರು ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧು ಮಿತ್ರರಿಗೆ ನಮ್ಮ ಹೃತ್ಪೂರ್ವಕ ಅನುತಾಪವನ್ನು ವ್ಯಕ್ತಪಡಿಸುತ್ತೇವೆ

ಮತ್ತೊಮ್ಮೆ ರಾಷ್ಟ್ರಾಧ್ಯಕ್ಷ ರಾಜೇಂದ್ರ ಪ್ರಸಾದರು

ರಾಷ್ಟ್ರಾಧ್ಯಕ್ಷತೆಗೆ ಮತ್ತೊಮ್ಮೆ [illegible] ಸೂಚಿಸುವುದಕ್ಕೆ ಡಾ|| ರಾಜೇಂದ್ರ ಪ್ರ ಒಪ್ಪಿರುವರೆಂದು ತಿಳಿದುಬಂದಿದೆ ಅವರ ಸ್ಪರ್ಧಿಸಬೇಕೆಂದು ಮೊದಲು ಅಪೇಕ್ಷಿಸ ಕಾಂಗ್ರೆಸ್ಸಿನ ಹಿರಿಯ ನಾಯಕರ [illegible] ಮತದ ಅಪೇಕ್ಷೆಯಂತೆ ನಡೆ[illegible] ಒಪ್ಪಿರುವರು

ರಷ್ಯಾ-ಪೋಲೆಂಡುಗಳ ಒಪ್ಪ

ಪೋಲೆಂಡಿನಲ್ಲಿ ರಷ್ಯದ ಸೈನ್ಯಗಳನ್ನು ಮಿಯಾಗಿಡುವ ಬಗ್ಗೆ ರಷ್ಯಾ ಮತ್ತು ಪೋ ಡುಗಳಿಗೆ ಒಪ್ಪಂದವಾಗಿದೆ ಅದರ ಪ್ರ ರಷ್ಯದ ಸೈನ್ಯಗಳು ಪೋಲೆಂಡಿನಲ್ಲಿರುವ ನೆಲೆಗಳಿಂದ ಬೇರಾವ ಕಡೆಗೆ ಹೋಗಬೇ ದರೂ ಪೋಲೆಂಡಿನ ಸಲಹೆ ಪಡೆಯಬೇ ದು ಮತ್ತು ಆ ಸೈನ್ಯಗಳಿಂದ ಪೋಲೆಂ ವರ್ಭೌಮತ್ವಕ್ಕೆ ಚ್ಯುತಿ ಇರಬಾರದೆಂದೂ, ಒಳಾಡಳಿತ ವ್ಯವಹಾರಗಳಲ್ಲಿ ಪ್ರವೇ ದೆಂದೂ ಸಹ ಗೊತ್ತುಪಡಿಸಲಾಗಿದೆ

ಪಿ ಕೆ ಎಂ ಪಾಟಾರ್
ಡೋರ್ ನಂ ೧೧೮ [illegible]
ಕೆ ಆರ್ ಮೊಹಲ್ಲಾ, ಮೈಸೂರು
ಹಾವು ಎಗ್ರೀವಿಂಗ್ ಮತ್ತು [illegible]
ನ್ನು ತಯಾರು ಮಾಡುತ್ತೇವೆ ಒಪ್ಪ

Edited Printed and Publishe
A K Nagarajan at Sadhvi P
D Subbiah Road, Mysore

ಮೈಸೂರು ಸಿಟಿ ಮರದ ಗಾಣದ ಎಣ್ಣೆ ಕೈಗಾರಿಕಾಗಾರರ
ಸಹಕಾರ ಸಂಘ ಲಿಮಿಟೆಡ್, ಮೈಸೂರು

H O ವಾಣಿವಿಲಾಸ ರಸ್ತೆ : ಬ್ರಾಂಚ್ ಶಿವರಾಂಪೇಟೆ

ಗಮನಿಸಿರಿ ಇಂದಿನಿಂದ ಎಣ್ಣೆಯ ದರಗಳನ್ನು ಕಡಿಮೆ ಮಾಡಿರುತ್ತೇವೆ

ಎಣ್ಣೆಗಳು	ಬೆಲೆ	ರಿಬೇಟ್	ನಿಗದಿ ಬೆಲೆ
ಕಡಲೇಕಾಯಿಎಣ್ಣೆ ವೀಸೆ 1ಕ್ಕೆ	ರೂ 6	0 1 6	2 1 0
ಹುಚ್ಚೆಳ್ಳೆಣ್ಣೆ „	2 3 6	0 1 6	2 2 0
ಅಚ್ಚೆಳ್ಳೆಣ್ಣೆ „	3 13 6	0 1 6	3 12 0
ಕೊಬ್ಬರಿ	4 0	0 1 6	3 0 6

ಅರುಣ್ ಕಾಫಿ ವರ್ಕ್ಸ್
ಹೆಡ್ ಪೋಸ್ಟ್ ಆಫೀಸ್ ರೋಡು ಮೈಸೂರು

ನಮ್ಮಲ್ಲಿ ಹೊಸದಾದ ಕಾಫಿ ಬೀಜ ಮತ್ತು ಕಾಫಿ ಪುಡಿ ಈ ಕೆಳಗೆ ಕಂಡ ದರದಲ್ಲಿ ದೊರೆಯುತ್ತವೆ —

— ಕಾಫಿ ಬೀಜ ಪೌಂಡು ಒಂದಕ್ಕೆ :
ಪ್ಲಾಂಟೇಷನ್ ಪೀಬರಿ ರೂ 2 3 0 — ಪ್ಲಾಂಟೇಷನ್ 'ಎ' ರೂ 2 0 0
ಅರಾಬಿಕಾ ಚೆರ್ರಿ ರೂ 1 14 0 — ರೋಬಸ್ಟಾ 1 9 0
— ಕಾಫಿ ಪುಡಿ ಪೌಂಡು ಒಂದಕ್ಕೆ :—
ಪ್ಲಾಂಟೇಷನ್ ಪೀಬರಿ ರೂ 13 0 — ಪ್ಲಾಂಟೇಷನ್ 'ಎ' ರೂ 2 11 0
ಚೆರ್ರಿ ರೂ 2 4 0 — ಸ್ಪೆಷಲ್ ಹೌಸ್ ಬ್ಲೆಂಡ್ ರೂ 2-8 0
ಹೊಟೇಲ್ ಸ್ಪೆಷಲ್ ರೂ 2-0-0
ಉತ್ತಮವಾದ ದಿನಸಿಗಳೂ ಸ್ಟೇಷನರಿ ಸಾಮಾನುಗಳೂ ಸಹ ದೊರೆಯುತ್ತವೆ

SRI GAYATHRI TALKIE
Grand Gala Opening From 21st Dec. 1956.
Daily 3 Shows

To-day Last day.—SABAKA

ಚಾಮುಂಡೇಶ್ವರಿ ಟಾಕೀಸ್ ★ 20 12—56 ನೇ ಗುರುವಾರದಿಂದ ಅಮೋಘ ಪ್ರಾರ
ಪ್ರತಿ ದಿನ ಮೂರು ಪ್ರದರ್ಶನಗಳು

ಬಹುದಿನಗಳಿಂದಲೂ ನಿರೀಕ್ಷಿಸುತ್ತಿದ್ದ ಲಲಿತಾ ಫಿಲಂಸ್‌ರವರ
ಜೆಮಿನಿ ಗಣೇಶ್ ನಾಗೇಶ್ವರಂ ಪ್ ಅಂಜಲಿದೇವಿ ಸಾವಿತ್ರಿ ಕನ್ನಾಂಬ
ರಂಗಾರಾವ್ ಎಂ ಎನ್ ರಾಜಂ [illegible]ರಂಗಸ್ವಾಮಿ,ತಂಗವೇಲು ಫ್ರೆಂಡ್
ರಾಮಸ್ವಾಮಿ ಮುಂತಾದವರು ಪಾತ್ರವಹಿಸಿರುವ ತಮಿಳು ಚಿತ್ರ

★ ಮಾದರಕುಲ ಮಾಣಿಕ್ಯ

ಮೊದಲನೇ 4 ವಾರಗಳಲ್ಲಿ ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಫ್ರೀ ಪಾಸುಗಳು ಮತ್ತು ರಿಯಾಯಿತಿಗಳನ್ನೂ ರದ್ದು ಮಾಡಲಾಗಿದೆ [AN EMERALD REL

[illegible] ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿ ಮೂರು ಕಾಸು

ಸಂಪುಟ : [illegible]] SADHVI : FRIDAY 21—12—1956 ಮೈಸೂರು : ಶುಕ್ರವಾರ [illegible] [ಸಂಚಿಕೆ : [illegible]

- ನೆಹರೂ ಮತ್ತು ಐಸೆನ್‌ಹೋವರರ ಜಂಟಿ ಹೇಳಿಕೆ -

ಗವರ್ನರರೇ-ಮಹಾರಾಜರೇ ?

ವಿಧಾನ ಪರಿಷತ್ತಿನಲ್ಲಿ ಪ್ರಶ್ನೆ ಮೇಲೆ ಅಧ್ಯಕ್ಷರ ಸ್ಪಷ್ಟೀಕರಣ

ಬೆಂಗಳೂರು ೨೦

ನೆನ್ನೆ ವಿಧಾನ ಪರಿಷತ್ತಿನಲ್ಲಿ ಅಧ್ಯಕ್ಷ ಶ್ರೀ ಸು ಪ್ರಹ್ಮಣ್ಯರವರು ಸೂಚಿಸುತ್ತಾ ರಾಜ್ಯಪಾಲರನ್ನು ಸಭೆಯಲ್ಲಿ ಗವರ್ನರ್ ಎಂದು ಕರೆಯಬೇಕೆಂದು ತಿಳಿಸಿದರು

ಶ್ರೀ ಎ ಜಿ ರಾಮರಾಯರು ಭಾಷಣ ಮಾಡುತ್ತಾ ಹಿಸ್ ಹೈನೆಸ್ ದಿ ಮಹಾರಾಜಾ [illegible] ಹೇಳಿದಾಗ ಮಂಗಳೂರಿನ ಶ್ರೀ ಕೆ ಕೆ ಶೆಟ್ಟಿಯವರು ರಾಜ್ಯಪಾಲರ ಅಂಕಿತದ ಬಗ್ಗೆ ಸ್ಪಷ್ಟೀಕರಣ ಅವಶ್ಯಕವೆಂದು ಕೋರಿದ್ದರು

ಅರಿಯಲೂರು ರೈಲು ದುರಂತದಲ್ಲಿ ಇನ್ನಿಬ್ಬರ ಮರಣ

ಕಳೆದ ತಿಂಗಳು ತಿರುಚ್ಚಿ ಬಳಿ ಅರಿಯಲೂರು ಹತ್ತಿರ ಆದ ರೈಲು ದುರಂತದಲ್ಲಿ ಗಾಯಗೊಂಡ ಇನ್ನಿಬ್ಬರು ನೆನ್ನೆ ಮೃತಪಟ್ಟರು ಸತ್ತವರ ಸಂಖ್ಯೆಯು ಈಗ [illegible]ಕ್ಕೆ ಏರಿದೆ

ಅಮೆರಿಕದ ಅಧ್ಯಕ್ಷ

ಐಸೆನ್‌ಹೋವರ್

ರೇಡಿಯೋವಿನಲ್ಲಿ ಚುನಾವಣಾ ಭಾಷಣಗಳಿಗೆ ಅವಕಾಶವಿಲ್ಲ

ರೇಡಿಯೋಗಳ ಮೂಲಕ ವಿವಿಧ ಪಾರ್ಟಿಗಳು ತಮ್ಮ ಪಕ್ಷದ ಚುನಾವಣಾ ಪ್ರಣಾಳಿಕೆಗಳನ್ನು ೧೦ ನಿಮಿಷಗಳ ಕಾಲ ಪ್ರಸಾರ ಮಾಡಲು ಭಾರತ ಸರ್ಕಾರದವರು ಕಾಂಗ್ರೆಸ್, ಪ್ರಜಾ ಸಮಾಜವಾದಿ, ಕಮ್ಯೂನಿಸ್ಟ್ ಮತ್ತು ಜನಸಂಘ ಈ ನಾಲ್ಕು ಅಂಗೀಕೃತ ಪಕ್ಷಗಳಿಗೆ ಅವಕಾಶವೀಯುವರು ಆದರೆ ರಾಜಕೀಯ ಮುಖಂಡರು ಚುನಾವಣಾ ಭಾಷಣ ಮಾಡಲು ಅವಕಾಶವೀಯುವುದಿಲ್ಲವೆಂದು ತಿಳಿದುಬಂದಿದೆ

○ ಲೋಕಸಭೆಯಲ್ಲಿ ನೆನ್ನೆ ಕೇಂದ್ರ ಆಹಾರ ಮಂತ್ರಿ ಅಜಿತ್ ಪ್ರಸಾದ್ ಜೈನರವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಮೈಸೂರು ಸಂಸ್ಥಾನದಲ್ಲಿ ಇತ್ತೀಚೆಗೆ ಮಳೆಯಾಗಿ ಪರಿಸ್ಥಿತಿ ಉತ್ತಮಗೊಂಡಿರುವುದೆಂದೂ ಅಲ್ಲಿ ಕ್ಷಾಮ ಭಯವಿಲ್ಲವೆಂದೂ ತಿಳಿಸಿದರು

ಮಲೆನಾಡಿನ ಅಭಿವೃದ್ಧಿಗಾಗಿ ಪ್ರತ್ಯೇಕ ನಿಧಿ ಬೇಕಾಗಿಲ್ಲ

ವ್ಯವಸಾಯ ಸಚಿವ ಉದ್ದಪ್ಪನವರ ಹೇಳಿಕೆ

ಬೆಂಗಳೂರು ೨೦

ವಿಧಾನ ಪರಿಷತ್ತಿನಲ್ಲಿ ನೆನ್ನೆ ಶ್ರೀ ಎಂ ಪಿ ಗೋವಿಂದಗೌಡರ ಪ್ರಶ್ನೆಗೆ ವ್ಯವಸಾಯ ಮಂತ್ರಿ ಶ್ರೀ ಕೆ ಎಸ್ ಉದ್ದಪ್ಪನವರು ಉತ್ತರವಿತ್ತು, ಮಲೆನಾಡಿನ ಅಭಿವೃದ್ಧಿಗಾಗಿ ಪ್ರತ್ಯೇಕ ನಿಧಿಯನ್ನು ಏರ್ಪಡಿಸಬೇಕಾಗಿಲ್ಲವೆಂದೂ, ಪಂಚವಾರ್ಷಿಕ ಯೋಜನೆಗಳಲ್ಲಿ ಸಾಕಷ್ಟು ಹಣವನ್ನು ಒದಗಿಸಲಾಗಿದೆಯೆಂದೂ ತಿಳಿಸಿದರು ಮಲೆನಾಡು ಸಮ್ಮೇಳನದ ನಿರ್ಣಯಗಳು ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ ತಿಳಿಸಿದರು

ಆ ಪ್ರದೇಶದಲ್ಲಿ ಆರೋಗ್ಯ ರಕ್ಷಣೆಗೆ ವಿಶೇಷ ಗಮನ ಕೊಡಲಾಗುತ್ತಿದೆಯೆಂದೂ ಅಲ್ಲಿ ಮಲೇರಿಯವು ಈಗ ಪೂರ್ಣವಾಗಿ ತಪ್ಪಿದೆಯೆಂದೂ ಅವರು ನುಡಿದರು

ನೆನ್ನೆ ವಿಧಾನ ಸಭೆಯಲ್ಲಿ [illegible] ಮಿನ ಶ್ರೀ ಎ ಪಿ [illegible] ಸಂ[illegible] ಯಲ್ಲಿ ಪ್ರವಚನ [illegible]

ಸಭಾ ಪ್ರಾರಂಭದಲ್ಲಿ ಶ್ರೀ ಜೆ ಎಂ ಇಮಾಮ್ [illegible] ಅಧ್ಯಕ್ಷರನ್ನಾಗಿ ಶ್ರೀ ಬಿ ಎಸ್ [illegible] ರವರನ್ನು ನೇಮಿಸಿದ ಬಗ್ಗೆ ಕ್ರಿಯಾಲೋಪವನ್ನೆತ್ತಿದರು ಹಾಗೆಯೇ ಹಿಂದಿನ ಸಭಾಧ್ಯಕ್ಷ ಉಪಾಧ್ಯಕ್ಷರನ್ನು ಸಭಾಸದರುಗಳನ್ನಾಗಿ ತೆಗೆದುಕೊಂಡ ಬಗ್ಗೆಯೂ ಆಕ್ಷೇಪಿಸಿದರು ಅಧ್ಯಕ್ಷರು ಅದನ್ನು ತಳ್ಳಿಹಾಕಿದರು ಗವರ್ನರರ ಆಜ್ಞೆಯ ಪ್ರಕಾರ ಹಂಗಾಮಿ ಅಧ್ಯಕ್ಷರು ಸಭೆಯನ್ನು ನಡೆಸಬಹುದೆಂದು ಅಧ್ಯಕ್ಷರು ನುಡಿದರು

ಗವರ್ನರರು ತಮ್ಮ ಭಾಷಣದಲ್ಲಿ ಸಂಸ್ಥಾನದಲ್ಲೆಲ್ಲಾ ಒಂದೇ ಸಮನಾದ ಕಂದಾಯ ಶಾಸನಗಳನ್ನು ಜಾಗ್ರತೆ ತರಲಾಗುವುದೆಂದು ತಿಳಿಸಿದರು ನೂತನ ಸಂಸ್ಥಾನದ ದ್ವಿತೀಯ ಪಂಚ ವಾರ್ಷಿಕ ಯೋಜನೆಯು ೧೫೦ ಕೋಟಿ ರೂ [illegible]ಗುವುದೆಂದು ಅವರು ತಿಳಿಸಿದರು

ಸಂಸ್ಥಾನದ ಮಾವು ಅಭಿವೃದ್ಧಿ ಯೋಜನೆ ನೆರವಿಗೆ ಸಾವೇರ್ ಪ್ರವೀಣರು

ಸಂಸ್ಥಾನದಲ್ಲಿ ಮಾವು ಅಭಿವೃದ್ಧಿ ಯೋಜನೆಯಲ್ಲಿ ಸಲಹೆ ನೀಡಲು ಸಾವೇರು ಪ್ರವೀಣರು ಬೆಂಗಳೂರಿಗೆ ಆಗಮಿಸಿರುತ್ತಾರೆ ಯೋಜನೆಗಾಗಿ ಸುಮಾರು ೬೦ ಲಕ್ಷ ರೂ ಅನ್ನು ಒದಗಿಸಲಾಗುವುದು

ಗಾಂಧಿಜಿಯ ಸ್ನೇಹಿತರಿಂದ ತಮ್ಮ ಶವದ ದಾನ

ಮಹಾತ್ಮಾ ಗಾಂಧಿಯವರ ನಿಕಟ ಸ್ನೇಹಿತರಲ್ಲೊಬ್ಬರಾದ ವಿ ಎಸ್ ಆಪ್ಟೆ ಎಂಬುವರು ಮೊನ್ನೆ ಪೂನಾ ನಗರದಲ್ಲಿ ಮೃತಪಟ್ಟರು ಅವರಿಗೆ ೬೯ ವರ್ಷ ವಯಸ್ಸು ಅವರು ಮಹಾರಾಷ್ಟ್ರದವರು ಅವರ ಇಚ್ಛೆ ಪ್ರಕಾರ ಅವರ ದೇಹವನ್ನು ಅಗ್ನಿ ಸಂಸ್ಕಾರ ಮಾಡದೆ, ಆಯುರ್ವೇದ ಮಹಾ ವಿದ್ಯಾಲಯದ ವಿದ್ಯಾರ್ಥಿಗಳು ಶರೀರ ಶಾಸ್ತ್ರವನ್ನು ಅಭ್ಯಾಸ ಮಾಡಲು ಒಪ್ಪಿಸಲಾಗುವುದು

ಇಸ್ರೇಲು ಈಜಿಪ್ಟಿಗೆ ಗಾಜಾ ಪ್ರದೇಶ ಬಿಟ್ಟುಕೊಡುವುದಿಲ್ಲ !

ಈಜಿಪ್ಟ್ ಆಳ್ವಿಕೆಗೆ ಗಾಜಾ ಪ್ರದೇಶವನ್ನು ವಾಪಸು ಕೊಡುವುದಿಲ್ಲವೆಂದು ಇಸ್ರೇಲಿನ ಪ್ರಧಾನಿ ಬೆನ್ ಗುರಿಯನ್‌ರವರು ತಿಳಿಸಿರುತ್ತಾರೆ. ಗಾಜಾ ಪ್ರದೇಶದ ಮೇಲೆ ಇಸ್ರೇಲಿಗೆ ಹಕ್ಕಿಲ್ಲವೆಂದು [illegible] ವನ್ನು ಅವರು ಟೀಕಿಸಿದರು. ಗಾಜಾ ಪಟ್ಟಿಯು ನ್ಯಾಯವಾಗಿ [illegible] ಇಸ್ರೇಲು ಆ ಪ್ರದೇಶದ ಮೇಲೆ ತನ್ನ ಹಕ್ಕೊತ್ತಾಯವನ್ನು ಹೊಂದಿರುವುದೆಂದೂ ಅವರು ಹೇಳಿರುವರು

ಜೋಹಾನ್ಸ್‌ಬರ್ಗಿನಲ್ಲಿ ಗಲಭೆ

ಜೋಹಾನ್ಸ್‌ಬರ್ಗಿನಲ್ಲಿ ರಾಷ್ಟ್ರದ್ರೋಹದ ಆಪಾದನೆ ಮೇಲೆ ೧೫೬ ಮಂದಿಯನ್ನು ವಿಚಾರಣೆಗೆ ಗುರಿಪಡಿಸಿ ಮೊಕದ್ದಮೆಯು ನೆನ್ನೆ ಆರಂಭವಾದಾಗ ನಗರದ ಮಧ್ಯದಲ್ಲಿ ಸಹಸ್ರಾರು ಜನ [illegible] ಗಲಭೆ ನಡೆಸಲಾಗಿ ಮೊಕದ್ದಮೆಯು ಮುಂದೆ ಹೋಯಿತು ಆಪಾದಿತರನ್ನು ಕೋರ್ಟಿಗೆ ಕರೆತಂದಾಗ ಜನರು ಪೋಲೀಸರ ಮೇಲೆ ಕಲ್ಲು ಬೀರಿದರು

ಹನುಮಜ್ಜಯಂತಿ ಕಾರ್ಯಕ್ರಮ

[illegible] ಶ್ರೀ ಮಾರುತೀ ಮಂದಿರದಲ್ಲಿ ಹನುಮಜ್ಜಯಂತಿ ಪ್ರಯುಕ್ತ ನಾಳೆ ಬೆಳಗ್ಗೆ ಕುಮಾರಿ [illegible] ಗಾಯನ, ವಿ| ರಂಗಪ್ಪನವರ ಕೊಳಲು ಮತ್ತು ಕುಮಾರಿ ಲೀಲಾ ಮತ್ತು ಇಂದಿರಾರವರ ಸಂಗೀತ ಸಂಜೆ ಸಂಗೀತ ಕಲಾನಿಧಿ ಮುಸಿರಿ ಸುಬ್ರಹ್ಮಣ್ಯ ಅಯ್ಯರ್‌ರವರ ಸಂಗೀತ, ಶ್ರೀ ಎ ಶ್ರೀಧರಮೂರ್ತಿಯವರಿಂದ ವಾಲ್ಮೀಕಿ ರಾಮಾಯಣದಲ್ಲಿ ಶ್ರೀ ಮಾರುತಿ ಎಂಬ ಬಗ್ಗೆ ಭಾಷಣ ಮತ್ತು ಶ್ರೀಮತಿ ಪಾರ್ವತಿ [illegible]ರವರ ಗಾಯನಗಳು ಏರ್ಪಾಟಾಗಿದೆ

ವೆಂಕಟಕೃಷ್ಣಯ್ಯನವರ ಸ್ಮಾರಕ ಭಾಷಣ

ಬೆಂಗಳೂರಿನಲ್ಲಿರುವ ಮೈಸೂರು ಸಂಸ್ಥಾನದ ಪತ್ರಿಕೋದ್ಯಮಿಗಳ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫|| ಗಂಟೆಗೆ ಸುಪ್ರಸಿದ್ಧ ಸಾಹಿತಿಗಳಾದ ಶ್ರೀ ಎಂ ವಿ ಸೋಮಶೇಖರರಾಯರು ದಿ|| ಎಂ ವೆಂಕಟಕೃಷ್ಣಯ್ಯನವರ ಜೀವನದ ಬಗ್ಗೆ ಸ್ಮಾರಕೋಪನ್ಯಾಸ ಮಾಡುವರು ಗೋಖಲೆ ಸಾರ್ವಜನಿಕ ವಿಚಾರಗಳ ಸಂಸ್ಥೆಯ ಸ್ಥಾಪಕರೂ, ಅಧ್ಯಕ್ಷರೂ ಆದ ಶ್ರೀ ಡಿ ವಿ ಗುಂಡಪ್ಪನವರು ಅಧ್ಯಕ್ಷತೆ ವಹಿಸುವರು

ಹಿಂದೀ ಪರೀಕ್ಷೆಗೆ ಆವೇದನ ಪತ್ರ

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಆವೇದನ ಪತ್ರಗಳನ್ನು [illegible] ವರೆಗೆ ಸ್ವೀಕರಿಸಲಾಗುತ್ತದೆ [illegible] ದಂಡದೊಡನೆ ಸ್ವೀಕರಿಸಲು ೩ನೇ ತಾರೀಖು ಕೊನೇ ದಿನ ಆವೇದನ ಪತ್ರಗಳನ್ನೂ ಮತ್ತು ಹೆಚ್ಚಿನ ವಿವರಗಳನ್ನೂ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿರುವ ಸಭಾ ಕಾರ್ಯಾಲಯದಲ್ಲಿ ಪಡೆಯಬಹುದು.

ಭಾರತ ಮತ್ತು ಅಮೆರಿಕೆಗಳ ನಡುವೆ ವಿಶಾಲ ಒಪ್ಪಂದವಿದೆ

ನೆಹರೂ ಮತ್ತು ಐಸೆನ್‌ಹೋವರರ ಜಂಟಿ ಹೇಳಿಕೆ

ಪ್ರಧಾನಿ ನೆಹರೂ ಮತ್ತು ಅಧ್ಯಕ್ಷ ಐಸೆನ್‌ಹೋವರರು ತಮ್ಮ [illegible] ಭಾರತ ಮತ್ತು [illegible] ಜಂಟಿ ಹೇಳಿಕೆಯೊಂದನ್ನು ಹೊರಡಿಸಿ, ಭಾರತ ಮತ್ತು ಅಮೆರಿಕೆಗಳಿಗೆ [illegible] ಒಪ್ಪಂದವಿರುವುದೆಂದು ತಿಳಿಸಿರುತ್ತಾರೆ. ಎರಡು ದೇಶಗಳೂ ಸ್ವತಂತ್ರ ಪ್ರಜಾಪ್ರಭುತ್ವ [illegible] ಗಾಢವಾದ [illegible] ದಿರುವುದೆಂದೂ, ವ್ಯಕ್ತಿಯ ಗೌರವ ಮತ್ತು [illegible] ಅವಶ್ಯಕತೆಗೆ [illegible] ಯ ಸರ್ಕಾರಗಳು ತಮ್ಮ ಶಕ್ತಿ ಮತ್ತು ನೀತಿಗಳನ್ನು [illegible] ಹೇಳಿಕೆಯು ಸೂಚಿಸುತ್ತದೆ.

ಉಭಯ ರಾಷ್ಟ್ರಗಳ ನೀತಿ ಬಗ್ಗೆ ತಿಳಿಸುತ್ತ

ಭಾರತದ ಪ್ರಧಾನಿ

ಜವಹರಲಾಲ್ ನೆಹರೂ

ತೀವ್ರವಾಗಿರುವಂತ ಇತರ ರಾಷ್ಟ್ರಗಳ [illegible] ಪ್ರಗತಿಯು [illegible] ಮತ್ತು [illegible] ವ್ಯವಹಾರ [illegible] ದವಾಗುವುದೆಂದೂ ಹೇಳಿಕೆಯು ತಿಳಿಸುತ್ತದೆ

ಈ ಸಮಾಲೋಚನೆಗಾಗಿ ಇಬ್ಬರು ನಾಯಕರೂ ಬಹು ದಿನಗಳಿಂದಲೂ ಕಾತರರಾಗಿದ್ದರೆಂದೂ, ಈಗ ದೊರೆತ ಸನ್ನಿವೇಶದಲ್ಲಿ [illegible] ದ ಬಿಚ್ಚು ಮನಸ್ಸಿನ ವಿಚಾರ ವಿನಿಮಯಕ್ಕೆ ಅವಕಾಶವುಂಟಾಯಿತೆಂದೂ ಹೇಳಿಕೆಯಲ್ಲಿ ತಿಳಿಸಲಾಗಿದೆ

○ ಸಿಂಧ್ಯ, ಗೊಬ್ಬುರ [illegible] ಯಲ್ಲಿರುವ [illegible] ಶ್ರೀ ಟಿ ಸುಬ್ರಹ್ಮಣ್ಯಂರವರು [illegible] ಮತ್ತು ಜಮೀನುಗಳಲ್ಲಿ ಗೊಬ್ಬರದ ತಯಾರಿಕೆಯಲ್ಲಿ ಹೆಚ್ಚಿನ ಸಂಶೋಧನೆ ನಡೆಸುತ್ತಿದ್ದಾರೆ ಅವರ ಗೌರವಾರ್ಥವಾಗಿ ಕಳೆದ ಭಾನುವಾರ ಅವರ ಸ್ನೇಹಿತರು ನಗರದಲ್ಲಿ ಒಂದು ಸನ್ಮಾನ ಕೂಟವನ್ನು ಏರ್ಪಡಿಸಿದ್ದರು

ನಿಮ್ನ ವರ್ಗದ ಅಧಿಕಾರಿಗಳಿಗೆ ಐ ಎ ಎಸ್. ಹುದ್ದೆ ಕೊಡಬೇಕು

ಕೇಂದ್ರ ಮಂತ್ರಿ, ದಾತಾರರಿಗೆ
ಎನ್ ರಾಚಯ್ಯನವರ ಅರಿಕೆ

ದೆಹಲಿ ೧೮

ಕೇಂದ್ರ ಗೃಹ ಶಾಖಾ ಮಂತ್ರಿ ಬಿ ಎನ್ ದಾತಾರ್‌ರವರನ್ನು [illegible] ಲೋಕಸಭೆಯ ಮೈಸೂರು ಸದಸ್ಯರಾದ ಶ್ರೀ ಎನ್ ರಾಚಯ್ಯನವರು ಭೇಟಿ ಮಾಡಿ ಮೈಸೂರಿನಲ್ಲಿರುವ ನಿಮ್ನವರ್ಗದ ಅಧಿಕಾರಿಗಳನ್ನು ಐ ಎ ಎಸ್ ಹುದ್ದೆಗಳಿಗೆ ನೇಮಿಸಬೇಕೆಂದು ಕೋರಿದರು. ಈ ಸಂಬಂಧವಾಗಿ ಮೈಸೂರು ಮುಖ್ಯಮಂತ್ರಿ ಶ್ರೀ ನಿಜಲಿಂಗಪ್ಪನವರನ್ನೂ ಅವರು [illegible] ರಿರುತ್ತಾರೆ. ಅಧಿಕಾರದಲ್ಲಿರುವ ನಿಮ್ನ ವರ್ಗದವರಿಗೆ ಅಖಿಲ ಭಾರತಾಧಿಕಾರದಲ್ಲಿ ಸೂಕ್ತ ಪ್ರಾತಿನಿಧ್ಯವೀಯಲಾಗುವುದೆಂದು ಶ್ರೀ ದಾತಾರ್‌ರವರು ಸೂಚಿಸಿದರೆಂದು ಹೇಳಲಾಗಿದೆ.

ಶ್ರೀ ಎನ್ ರಾಚಯ್ಯನವರು ರೈಲ್ವೆ ಮಂತ್ರಿಯವರನ್ನು ಭೇಟಿ ಮಾಡಿ ಚಾಮರಾಜನಗರ ಸತ್ಯಮಂಗಲ ರೈಲು ಮಾರ್ಗದ ವಿಚಾರವನ್ನು ಬೇಗನೆ ಕಾರ್ಯಗತ ಮಾಡಬೇಕೆಂದು ಕೋರಿದರು. ಶ್ರೀ ಜಗಜೀವನರಾಂರವರು ಬರುವ ಪ್ರವಾಸಗಳಲ್ಲಿ ಈ ಸಂಬಂಧವಾಗಿ ಮೈಸೂರಿಗೆ ಭೇಟಿ ಕೊಡುವ ನಿರೀಕ್ಷೆಯಿದೆ

ಸರ್ಕಸ್ ಟಿಕೆಟ್ ಕೊಳ್ಳುವಾಗ ಅಶ್ರುವಾಯು ಪ್ರಯೋಗ

ಕಲ್ಕತ್ತದಲ್ಲಿ ರಷ್ಯದ ಸರ್ಕಸ್ ನೋಡಲು ದೊಡ್ಡ ಜನ ವಿಪರೀತವಾಗಿ ಸೇರಿ ಮಹಿಳೆಯರಿಗೆ ಟಿಕೆಟ್ ಕೊಡುವ ಸ್ಥಳದ ಮೇಲೆ ನುಗ್ಗದಂತೆ ತಡೆಯಲು ಪೊಲೀಸರು ಅಶ್ರುವಾಯುವನ್ನು ಪ್ರಯೋಗಿಸಿದರು

[illegible] ಬೋಧಕ ಸಂಘದ ವಾರ್ಷಿಕೋತ್ಸವ

[illegible] ಯಲ್ಲಿ ನಡೆದ [illegible] ಡಿ ಸಿ ಪಿ ಐಯವರಾದ ಶ್ರೀ ಟಿ ವಾಸುದೇವಯ್ಯನವರ ಅಧ್ಯಕ್ಷತೆಯಲ್ಲಿ [illegible] ಬೋಧಕ ಸಂಘದ ಎರಡನೇ ವಾರ್ಷಿಕೋತ್ಸವವು ನಡೆಯಿತು. ಜಿಲ್ಲಾ ವಿದ್ಯಾಧಿ[illegible] ಜುರವರು ಉಪಾಧ್ಯಾಯ[illegible] ಮತ್ತು [illegible] ಕರ್ತವ್ಯವನ್ನು ಕುರಿತು ಭಾಷಣ ಮಾಡಿದರು. ನಗರದ ಹೈಸ್ಕೂಲ್ ಇನ್ಸ್‌ಪೆಕ್ಟರ್ ಶ್ರೀ ಗುರುರಾಜರಾಯರು ಸ್ವಾಗತ ಭಾಷಣ ಮಾಡಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ವಿ ವಿ ವಿಶ್ವೇಶ್ವರಯ್ಯನವರು ವರದಿಯನ್ನು ಒಪ್ಪಿಸಿದರು. ಶ್ರೀಮತಿ ಪದ್ಮಮ್ಮನವರು ವಂದನೆಗಳನ್ನು ಸಲ್ಲಿಸಿದರು

ಲಕ್ಷ್ಮಿ * 21-12-56 ರಿಂದ ಪ್ರತಿದಿನ 3 ಆಟಗಳು,
ರಾಜಾಪ್ರೊಡಕ್ಷನ್ಸ್‌ರವರ ತಮಿಳು ಚಿತ್ರ
ಮನಂಪೋಲುವಾಳ್ವು
ಭೂಮಿಕೆ. ಎನ್ ಟಿ ರಾಮರಾವ್,
ರಂಗರಾವ್, ಸಾವಿತ್ರಿ

ಅಕಾಬಾದಿಂದ ಭೂಮಧ್ಯ ಸಮುದ್ರಕ್ಕೆ ಎಣ್ಣೆ ಪೈಪು ಲೈನ್

ಕೆಂಪು ಸಮುದ್ರದಲ್ಲಿರುವ ಅಕಾಬಾ ಖಾರಿಯಿಂದ ಭೂಮಧ್ಯ ಸಮುದ್ರಕ್ಕೆ ಎಣ್ಣೆ ಪೈಪು ಲೈನ್ ಹಾಕಲು ಇಸ್ರೇಲು ಮಾಡಿಕೊಂಡಿರುವ ಪ್ರಯತ್ನದಲ್ಲಿ ಫ್ರಾನ್ಸು ಪಾಲು ವಹಿಸುವುದೆಂದು ಫ್ರೆಂಚ್ ವಿದೇಶಾಂಗ ಮಂತ್ರಿ ಪೀನೂರವರು ತಿಳಿಸಿರುತ್ತಾರೆ. ಇಸ್ರೇಲ್ ಪ್ರದೇಶದಲ್ಲಿ ೧೬೦ ಮೈಲಿ ದೂರ ಈ ಲೈನು ಹಾಕಲ್ಪಡುವುದು. ಅದಕ್ಕೆ ೩ ಕೋಟಿ ಪೌಂಡು ವೆಚ್ಚವಾಗುವುದು

ಹರಿಕಥೆ

ಮೈಸೂರು ಬಂಡಿಕೇರಿ ಶ್ರೀ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಶನಿವಾರದ ಪ್ರಯುಕ್ತ ನಾಳೆ ಸಾಯಂಕಾಲ ೫ ಗಂಟೆಗೆ ಭಕ್ತ ಪುಂಡಲೀಕ ಎಂಬ ಕಥೆಯನ್ನು ಹರಿದಾಸ್ ಪಿ ಆರ್ ಸುಬ್ಬರಾಮಯ್ಯನವರು ಮಾಡುವರು. ಸರ್ವರಿಗೂ ಸ್ವಾಗತವಿದೆ

ಎನ್. ಜಿ. ಓ.ಗಳ ಸಮ್ಮೇಳನ

ಸಂಸ್ಥಾನದ ನಾನ್ ಗೆಜೆಟೆಡ್ ಆಫೀಸರ್ಸ ಸಮ್ಮೇಳನವು ಇದೇ [illegible] ತಾರೀಖು ಬೆಂಗಳೂರಿನಲ್ಲಿ ಸೇರುವುದು. ಬೊಂಬಾಯಿ ಮಟ್ಟದ ಸಂಬಳವನ್ನು ಎಲ್ಲ ನೌಕರರಿಗೂ ಕೊಡುವಂತೆ ಸರ್ಕಾರದವರನ್ನು ಒತ್ತಾಯಪಡಿಸಲು ಸಮ್ಮೇಳನವನ್ನು ಕರೆಯಲಾಗಿದೆ

ಪ್ರಕಟಣೆ

ಕೆಳಗೆ ಕಾಣಿಸಿರುವ ಖಾಯಿಲೆಗಳಿಗೆ ಚಿಕಿತ್ಸೆ ಮಾಡುವುದರಲ್ಲಿ ಹೆಸರುವಾಸಿಯಾಗಿರುವ

ಕವಿರಾಜ್ ಓಂಪ್ರಕಾಶ್ ಬಿ ಎ ಭಿಷಗಾಚಾರ್ಯ ಧನ್ವಂತರಿಯವರು ತಮ್ಮ ಪ್ರವಾಸ ಕಾರ್ಯಕ್ರಮದಲ್ಲಿ ಕೆಳಗೆ ಕಂಡಂತೆ ಸಲಹೆ ನೀಡಲು ದೊರೆಯುವರು

ಇದೇ ಡಿಸೆಂಬರ್ 26 ರಂದು ಬೆಳಿಗ್ಗೆ
8 ರಿಂದ 11ರ ವರೆಗೆ
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಆಂಧ್ರ ಭವನದಲ್ಲಿ

ಮೇಲೆ ಕಂಡ [illegible] ರೋಗಗಳಿಂದ ನರಳುತ್ತಿರುವವರು "ಸಲಹೆ" [illegible] ಮಾಡಿ, [illegible] ಮತ್ತು ಪರಿಣಾಮಕಾರಿ ಚಿಕಿತ್ಸೆಯನ್ನು ಪಡೆಯಬಹುದು

1 ಪೋಲಿಯೊ, 2 ದೇಹದ ಯಾವುದೇ ಅಂಗದ ಪಾರ್ಶ್ವವಾಯು (ಮುಖ, ಕತ್ತು, ಸೊಂಟ, ಕೈ ಕಾಲುಗಳು ಅರ್ಧ ಅಥವಾ ಪೂರ್ಣ ಶರೀರ), 3 [illegible] 4 [illegible], 5 [illegible] ಅಥವಾ [illegible], 6 [illegible] ಅಥವಾ [illegible], 7 [illegible]

ARYAVARTA POLIO ASHRAM,
114 E Kamla Nagar Delhi 6
Phone 27838

ಮೇಲ್ಕಂಡ ರೋಗಗಳ ಚಿಕಿತ್ಸೆ ಬಗ್ಗೆ "ಪೋಲಿಯೊ ಮೈಲಿಟಿಸ್ ಮತ್ತು ಆಯುರ್ವೇದ" ಎಂಬ ಸಚಿತ್ರ ಇಂಗ್ಲಿಷ್ ಪುಸ್ತಕದ ಬೆಲೆ ರೂ. 7-8-0
ಅಂಚೆ ವೆಚ್ಚ ರೂ 0-14-0
ವಿ ಸೂ ಸಲಹೆ ಇಂಗ್ಲಿಷ್ ಅಥವಾ ಹಿಂದಿಯಲ್ಲಿ ಮಾತ್ರ

ಅಮೆರಿಕದ ಪ್ರತಿನಿಧಿ ಸಭೆಯಲ್ಲಿ ಪ್ರಥಮ ಭಾರತೀಯ ಸದಸ್ಯರಾಗಿರುವ
ದಲೀಪ್‌ಸಿಂಗ್ ಸೌಂಡ್‌ರವರು

ಮೊನ್ನೆ ಪ್ರಧಾನಿ ನೆಹರೂರವರು ವಾಷಿಂಗ್ಟನ್ನಿನಲ್ಲಿ [illegible]

ಸರ್ಕಾರಿ ರಿಕಾರ್ಡುಗಳಲ್ಲಿ ಜಾತಿ ಹೆಸರುಗಳಿರಬಾರದು

ಸರ್ಕಾರಿ ದಾಖಲೆಗಳು ಮತ್ತು ಕೋರ್ಟು ನಡವಳಿಕೆಗಳಲ್ಲಿ ಜಾತಿ ಸೂಚಕ ಚಿಹ್ನೆಗಳಿರುವುದನ್ನು ರದ್ದುಗೊಳಿಸುವ ಬಗ್ಗೆ ಭಾರತ ಸರ್ಕಾರದವರು ಪ್ರಾಂತ ಸರ್ಕಾರಗಳಿಗೆ ಪತ್ರ ಬರೆದಿರುವರೆಂದೂ, ಉತ್ತರ ಬಂದನಂತರ ಈ ವಿಚಾರವನ್ನು ಮತ್ತೆ ಪರಿಶೀಲಿಸಲಾಗುವುದೆಂದೂ ಕೇಂದ್ರ ಗೃಹ ಶಾಖಾ ಮಂತ್ರಿ ಬಿ ಎನ್ ದಾತಾರ್‌ರವರು ಲೋಕ ಸಭೆಯಲ್ಲಿ ತಿಳಿಸಿರುತ್ತಾರೆ

ವಿದ್ಯಾವರ್ಧಕ ಶಾಲೆ ಹಿರಿಯ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ವಿದ್ಯಾವರ್ಧಕ ಪ್ರೌಢ ಶಾಲೆಯ ಹಿರಿಯ ವಿದ್ಯಾರ್ಥಿ ಸಂಘದ ಎರಡನೇ ವಾರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ವಸ್ತು ಪ್ರದರ್ಶನ ಕಟ್ಟಡದಲ್ಲಿ ನೆರವೇರುವುದು. ಯುವರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಎಲ್ ಸೀಬಯ್ಯನವರು ಅಧ್ಯಕ್ಷತೆ ವಹಿಸುವರು. ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಅಧ್ಯಕ್ಷರಾದ ಶ್ರೀ ನಾ ಭದ್ರಯ್ಯನವರು ಮುಖ್ಯ ಭಾಷಣ ಮಾಡುವರು. ಶಾಲೆಯ ಹಿರಿಯ ವಿದ್ಯಾರ್ಥಿಗಳೆಲ್ಲರೂ ಭಾಗವಹಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಮನೆಗಳು ಭೋಗ್ಯಕ್ಕಿವೆ

1) 3810/1 [illegible] ಮೇನ್ ರೋಡ್ ಮತ್ತು ಔಟ್‌ಹೌಸ್ ಇರುವ; ಹಳ್ಳಿ,ಹೆಂಚುಗಳುಳ್ಳ ಮನೆ ರೂ 4,000
2) 678 ಬಿ ಬಿ ಗಾರ್ಡನ್ಸ್, ಮೈಸೂರು. ವಿಶಾಲವಾದ ಮನೆ ರೂ 7,000
3) 678/1 do 3,000

ವಿಚಾರಿಸಿ —
ಜಯ ಅಂಡ್ ಕಂಪೆನಿ,
ಹಳೇ ಮೈಸೂರು ಬ್ಯಾಂಕ್ ರಸ್ತೆ,
ಫೋನ್ 20 : ಮೈಸೂರು

[illegible] ಫುಟ್‌ಬಾ ಪಂದ್ಯಗಳು

[illegible]ಗಳಲ್ಲಿ ಕಳೆದ ಭಾ [illegible] ಫ್ರೆಂಡ್ಸ್ ಯೂನಿಯನ್ ಟೀಮಿನವರು [illegible] ಯಂಗ್ ಇಲೆವೆನ್ಸ್ ಟೀಮಿನವ [illegible] ನಡೆದ ಫುಟ್ ಬಾಲ್ ಪಂದ್ಯದಲ್ಲಿ ನಗರ [illegible] ಇಲೆವೆನ್ಸ್ ಟೀಮಿನವರು ಫ್ರೆಂಡ್ಸ್ [illegible] ಯುನ್ ಟೀಮಿನವರನ್ನು ಒಂದು ಗೋ [illegible] ಸೋಲಿಸಿದ್ದಾರೆ.

ಇದೇ ಊರಿನ ಮುನಿಸಿಪಲ್ ಹೈಸ್ಕೂ [illegible] ಟೀಮಿನವರು, ಯಂಗ್ ಇಲೆವೆನ್ಸ್ ಟೀಮಿ [illegible]ಗೂ ಕಳೆದ ಮಂಗಳವಾರ ಪಂದ್ಯವು ನಡೆ [illegible] ಯಂಗ್ ಇಲೆವೆನ್ಸ್ ಟೀಮಿನವರು ೪-೧ ಗೋ [illegible]ನಿಂದ ಮುನಿಸಿಪಲ್ ಹೈಸ್ಕೂಲ್ ಟೀಮಿ [illegible]ನ್ನು ಸೋಲಿಸಿದ್ದಾರೆ.

ಬುಧವಾರ ಇಂಟರ್‌ಮೀಡಿಯೇಟ್ [illegible] ಜ್ ಟೀಮಿನವರಿಗೂ ಮತ್ತು ಹೈಸ್ಕೂಲ್ [illegible] ಮಿನವರಿಗೂ ಪಂದ್ಯವು ನಡೆದು ಕಾಲೇಜ್ [illegible] ಮಿನವರು ಮೂರು ಗೋಲುಗಳನ್ನು ಹೊ [illegible] ಅತ್ಯುತ್ತಮವಾದ ಆಟವಾಡಿ ಜಯಗಳಿಸಿದ್ದಾ

SREE GANES
TALKIES
From 22-12-56 For 3 day
AN ALLIGAT
Named DAIS
(Vistavision-Technicolor)
A hilarious Comedy Hit
Featuring:- Donald Sinden
Diana Dors

From 25-12-56 For 2 day
FOR BETTER-FOR W
In Eastman Color

Edited, Printed and Publishe
A R. Nagarajan at Sadhvi P
D. Subbiah Road, Mysore

ಒಲಂಪಿಯಾ
ಕಿಶೋರ್ ಕುಮಾರ್, ವೈಜಯಂತಿಮಾಲಾ,
ರಾಧಾಕಿಷನ್ ಪಾತ್ರವಹಿಸಿರುವ

21-12-56ರಿಂದ ಅಮೋಘ 3ನೇ ವಾರ
ಮೋಹನ್ ಸೈಗಾಲ್‌ರವರ ಹಿಂದಿ ಚಿತ್ರ
★ ನ್ಯೂ ಡೆಲ್ಲಿ

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
20—12—56ನೇ ಗುರುವಾರದಿಂದ : ಅಮೋಘ 2 ನೆಯ ವಾರ
★ ಬಾಲಸನ್ಯಾಸಮ್ಮ ಕಥಾ ★
(ತೆಲುಗು)
ಪಾತ್ರ ಜಿ ವರಲಕ್ಷ್ಮಿ, ಕೃಷ್ಣಕುಮಾರಿ, ಬಾಲಸರಸ್ವತಿ, ಸೂರ್ಯಕಾಂತಂ,
ಜಗ್ಗಯ್ಯ, ರೇಲಂಗಿ ಗುಮ್ಮಡಿ, ಮುಂತಾದವರು

RAGOTINE
FINE RAGI MALT - An Ideal Food Beverage
FINE RAGI MALT Contains energising extracts of
WHEAT & MALTED RAGI
FINE CHEMICAL WORKS, MYSORE

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು

ಟೆಲಿಫೋನ್ ನಂ. 793

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
[illegible]

ಬ್ರಾಂಕಾಲ್
[illegible]
71/1. [illegible]
[illegible]

ಸಂಪುಟ : ೧೮] SADHVI : SATURDAY 22—12—1956 ಮೈಸೂರು : ಶನಿವಾರ ೨೨—೧೨—೧೯೫೬ [ಸಂಚಿಕೆ : [illegible]

ಸಂಸ್ಥಾನದ ಆಯವ್ಯಯದಲ್ಲಿ ೪॥ ಕೋಟಿ ರೂ. ಖೋತಾ

ಗವರ್ನರರ ಕಾರಿಗೂ ಟಾಂಗಾ ಗಾಡಿಗೂ ಡಿಕ್ಕಿ

ದುರೆಗೂ, ಗಾಡಿಯಲ್ಲಿದ್ದವರಿಗೂ ಪೆಟ್ಟು

ಮೈಸೂರು ೨೨

ನೆನ್ನೆ ರಾತ್ರಿ ಸುಮಾರು ೯॥ ಗಂಟೆ ಸಮಯದ ಜಗನ್ಮೋಹನ ಬಂಗಲೆ ರಸ್ತೆ ಮತ್ತು ಸಯ್ಯಾಜಿ ರಾವ್ ರಸ್ತೆ ಸಂಧಿಸುವ ಹಾರ್ಡ್ವಿಕ್ ಬೋರ್ಡ್ [illegible]ದಲ್ಲಿ ಗವರ್ನರರ ಮೋಟಾರಿಗೂ, ಟಾಂಗಾ ಗಾಡಿಯೊಂದಕ್ಕೂ ಡಿಕ್ಕಿಯಾಗಿ ಗಾಡಿಯ ಕು[illegible] ಪೆಟ್ಟು ಬಿದ್ದಿತು ಅದರಲ್ಲಿದ್ದ ಇಬ್ಬರಿಗೆ ಸ್ವಲ್ಪ ಗಾಯವಾಯಿತು ಜಗನ್ಮೋಹನ ಭವನದ ಕಡೆಯಿಂದ ಕಾರು ಬಂದಿತು ಟಾಂಗಾ ಗಾ[illegible] ಸ್ವಲ್ಪ ಮಟ್ಟಿಗೆ ಜಖಂ ಆಗಿದೆ ಕಾರಿನಲ್ಲಿ ಮಹಾರಾಜರು ಕುಳಿತಿದ್ದರು ಅವರ ಕಾರು [illegible] ಸ್ವಲ್ಪ ಹೊತ್ತಿನನಂತರ ಅರಮನೆಯ [illegible]ದು ಕಾರು ಬಂದು ಗಾಯವಾದವರನ್ನು ಆಸ್ಪತ್ರೆಗೆ ಕರೆದುಕೊಂಡುಹೋಗಿ ಅವರಿಗೆ ಚಿಕಿತ್ಸೆ ಮಾಡಲಾಯಿತು ಟಾಂಗಾದವನ್ನು ಒಬ್ಬ [illegible]ಡುಗನು ಹೊಡೆಯುತ್ತಿದ್ದನೆಂದು ಹೇಳಲಾಗಿದೆ

[ಇದೇ ಸ್ಥಳದಲ್ಲಿ ಕೆಲವು ತಿಂಗಳ ಹಿಂದೆ ಸಿಟಿ ಬಸ್ಸಿಗೂ ಮಹಾರಾಜರ ಕಾರಿಗೂ ಡಿಕ್ಕಿ ಹೊಡೆ[illegible] ಸಂಭವವು ಬಸ್ಸು ಡ್ರೈವರನ [illegible]ಯಿಂದ ತಪ್ಪಿತು ಹಾರ್ಡ್ವಿಕ್ ರೋಡು [illegible] ಈ ಸ್ಥಳದಲ್ಲಿ ಮಹಾರಾಜರ ಕಾರನ್ನು ನಿಲ್ಲಿಸುವುದೇ ಇಂತಹ ಅಪಘಾತಗಳಿಗೆ ಕಾರಣ ಉಭಯತ್ರರ ಹಿತ ದೃಷ್ಟಿಯಿಂದ ಇನ್ನು ಮುಂದಾದರೂ ಹಾರ್ಡ್ವಿಕ್ ರೋಡ್ ಇರುವ ಕಡೆ ಮಹಾರಾಜರ ಕಾರುಗಳನ್ನು ನಿಲ್ಲಿಸಿ ಸಂಚಾರ ನಿಯಮಗಳನ್ನು ಪಾಲಿಸುವುದಲ್ಲದೆ ಇಂತಹ ಅಪಘಾತಗಳನ್ನು ತಪ್ಪಿಸುವುದು ಸೂಕ್ತವಾಗಿದೆ — ಸಂ]

ದಳವಾಯಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿ ಸಂಘ

ನಗರದಲ್ಲಿರುವ ದಳವಾಯಿ ಮಾಧ್ಯಮಿಕ ಶಾಲಾ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು [illegible] ಸಂಜೆ ೫ ಗಂಟೆಗೆ ರಾವ್ ಬಹದ್ದೂರ್ ಎಂ. [illegible]ಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗುವು[illegible]

ಡಿ ಉಲ್ಲಂಘನೆ ಬಗ್ಗೆ ಪೋರ್ಚು ಗಲ್ಲಿಗೆ ಭಾರತದ ಎಚ್ಚರಿಕೆ

[illegible] ಗಲ್ಲಿನ ವಿಮಾನಗಳು ಇನ್ನು ಮುಂ[illegible] ಭಾರತದ ವಾಯುಮಂಡಲವನ್ನು ಉಲ್ಲಂಘಿ[illegible]ವನ್ನು ತಪ್ಪಿಸಲು ಕ್ರಮ ಕೈಗೊಳ್ಳಲಾಗುವು[illegible] ಭಾರತವು ಪೋರ್ಚುಗಲ್ಲಿಗೆ ಎಚ್ಚರಿಕೆ [illegible]ರುವುದಾಗಿ ಲೋಕಸಭೆಯಲ್ಲಿ ನೆನ್ನೆ ಹೊ[illegible] ವ್ಯವಹಾರಗಳ ಉಪಮಂತ್ರಿ ಅನಿಲ್ [illegible] ರವರು ತಿಳಿಸಿರುತ್ತಾರೆ ಯಾವ ವಿಧ[illegible] ಕ್ರಮ ತೆಗೆದುಕೊಳ್ಳಲಾಗುವುದೆಂಬುದ[illegible] ಸಚಿವರು ಸ್ಪಷ್ಟಪಡಿಸದೆ ಸದಸ್ಯರು ಅದನ್ನು [illegible] ನೋಡುತ್ತಿರಬೇಕೆಂದು ಮಾತ್ರ ಸೂಚ[illegible] ವಾಯು ಗಡಿ ಉಲ್ಲಂಘನೆ ಬಗ್ಗೆ [illegible] ಭಾರತ ಸರ್ಕಾರದವರು ಎಚ್ಚರಿಕೆಗ[illegible] ಕೊಟ್ಟಿದ್ದುದಾಗಿ ಅವರು ಹೇಳಿರುವರು.

ರಾಜಕೀಯ ಸಂತ್ರಸ್ತರಿಗೆ ಜಮೀನು

ವಿಧಾನ ಸಭೆಯಲ್ಲಿ ವಿಪುಲ ಪ್ರಶ್ನೋತ್ತರ

ಬೆಂಗಳೂರು ೨೨

ರಾಜಕೀಯ ಸಂತ್ರಸ್ತರಿಗೆ ಜಮೀನು ಕೊಟ್ಟ ವಿಚಾರವಾಗಿ ನೆನ್ನೆ ವಿಧಾನ ಸಭೆಯಲ್ಲಿ ವಿಪುಲ ಪ್ರಶ್ನೋತ್ತರಗಳಾದುವು ಶ್ರೀ ಡಿ ಎಂ ಮಾದಪ್ಪನವರು ಪ್ರಶ್ನೆಗಳನ್ನು ಹಾಕಿದರು ರೆವಿನ್ಯೂ ಸಚಿವ ಶ್ರೀ ಎಂ ವಿ ಪಾಟೀಲರು ಉತ್ತರವಿತ್ತು, ಲ್ಯಾಂಡ್ ರೆವಿನ್ಯೂ ಕೋಡು ಆಧಾರದ ಮೇಲೆ ಜಮೀನನ್ನು ಕೊಡಲಾಗಿದೆಯೆಂದು ತಿಳಿಸಿದರು ಅರ್ಜಿಗಳು ಬಂದನಂತರ ರಾಜಕೀಯ ಸಂತ್ರಸ್ತರ ಪಟ್ಟಿಯನ್ನು ಮಾಡಲಾಯಿತೆಂದು ಅವರು ಹೇಳಿದರು ಕಾಂಗ್ರೆಸ್ಸಿನವರಲ್ಲದೆ ಇತರ ರಾಜಕೀಯ ಪಕ್ಷಗಳ ಸಂತ್ರಸ್ತರಿಗೂ ಕೊಡಲಾಗುವುದೆಂದು ಅವರು ನುಡಿದರು ವಿದ್ಯಾ ಮಂತ್ರಿಗಳು ಮಾತನಾಡಿ, ಸಮಾಜವಾದಿಗಳಿಗೂ ಮತ್ತು ಕಮ್ಯೂನಿಸ್ಟರಿಗೂ ಕೊಡಲಾಗಿದೆಯೆಂದು ತಿಳಿಸಿದರು

ಸ್ವಾತಂತ್ರ್ಯ ಚಳುವಳಿಯಲ್ಲಿ ಭಾಗವಹಿಸದೆ, ಜೈಲಿಗೆ ಹೋಗದೆ ಇರುವವರಿಗೆ ಜಮೀನನ್ನು ಕೊಟ್ಟಿದ್ದರೆ ಅವನ್ನು ಪರಿಶೀಲಿಸಲಾಗುವುದೆಂದು ರೆವಿನ್ಯೂ ಸಚಿವರು ಹೇಳಿದಾಗ, ಮಂಡ್ಯ ಜಿಲ್ಲೆಯಲ್ಲಿ ಕಾಂಗ್ರೆಸ್ ಸಂಸ್ಥೆಗೆ ಇತ್ತೀಚೆಗೆ ಸೇರಿದವರಿಗೆ ಜಮೀನು ಕೊಡಲು ಶಿಫಾರಸು ಆಗಿರುವ ವಿಚಾರವನ್ನು ತನಿಖೆ ಮಾಡಲಾಗುವುದೆಂದು ಸೂಚಿಸಿದರು ಗೋವಾ ಮತ್ತು ಕರ್ನಾಟಕ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿದವರಿಗೆ ಕೊಡಲಾಗುವುದೇ ಎಂದು ಕೇಳಿದಾಗ, ಸಭಾಧ್ಯಕ್ಷರು ಅದು ಬೇರೆ ಪ್ರಶ್ನೆಯೆಂದು ಹೇಳಿದರು

ರಾಜಕೀಯ ಸಂತ್ರಸ್ತರಿಗೆ ಒಟ್ಟು ೬೦೦ ಎಕರೆ ಜಮೀನನ್ನು ಕೊಡಲಾಗಿದೆಯೆಂದು ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿದರು ಮಹಿಳೆಯರು ಅರ್ಜಿ ಹಾಕಿಕೊಂಡರೆ ಅದನ್ನು ಪರಿಶೀಲಿಸಲಾಗುವುದೆಂದೂ ತಿಳಿಸಲಾಯಿತು

ಕಾಶ್ಮೀರದಿಂದ ಪಾಕಿಸ್ತಾನದ ಸೈನ್ಯವು ಹೊರಡಬೇಕು

ಪತ್ರಿಕಾ ಸಮ್ಮೇಳನದಲ್ಲಿ ನೆಹರೂರವರ ಕರೆ

ನೆಹರೂರವರು ನೆನ್ನೆ ನ್ಯೂಯಾರ್ಕಿನಲ್ಲಿ ಪತ್ರಿಕಾ ಸಮ್ಮೇಳನವೊಂದರಲ್ಲಿ ಮಾತನಾಡಿ ಕಾಶ್ಮೀರದ ಸಮಸ್ಯೆಯು ಸರಳವಾದ ವಿಷಯವೆಂದೂ, ಅಲ್ಲಿ ಪಾಕಿಸ್ತಾನವು ಆಕ್ರಮಣ ನಡೆಸಿರುವುದೆಂದೂ, ಇದು ಕೊನೆಗೊಳ್ಳಬೇಕೆಂದೂ ಹೇಳಿದರು. ಪಾಕಿಸ್ತಾನವು ಕಾಶ್ಮೀರದಿಂದ ತನ್ನ ಬಲವನ್ನು ವಾಪಸು ಕರೆಸಬೇಕು ಕಾಶ್ಮೀರವು ಕಾನೂನು ಮತ್ತು ರಾಜ್ಯಾಂಗಬದ್ಧವಾಗಿಯೂ, ಪ್ರಜಾಭಿಪ್ರಾಯದ ಮೂಲಕವೂ ಭಾರತದಲ್ಲಿ ಐಕ್ಯಗೊಂಡಿರುವುದು, ಪಾಕಿಸ್ತಾನವು ತನ್ನ ಕರ್ತವ್ಯವನ್ನು ಮಾಡುವವರೆಗೆ ಭಾರತವು [illegible] ಕಾಗುವುದಿಲ್ಲ, ಪಾಕಿಸ್ತಾನದ ವರ್ತನೆಯು ನಮಗೆ ಸಾಕಾದಷ್ಟು ಬೇಸರವನ್ನುಂಟು ಮಾಡಿರುತ್ತದೆ ಎಂಬುದಾಗಿ ಅವರು ನುಡಿದರು

ಸಂಸ್ಥಾನದ ಐದು ತಿಂಗಳ ಆಯವ್ಯಯದ ಅಂದಾಜು

೪॥ ಕೋಟಿ ರೂ. ಖೋತಾ ನಿರೀಕ್ಷೆ

ಸ್ವಂ ಸು ಪ್ರೋ] ಬೆಂಗಳೂರು ೨೨

ಈ ದಿನ ವಿಧಾನ ಸಭೆಯಲ್ಲಿ ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಸಂಸ್ಥಾನದ ಐದು ತಿಂಗಳ ಆಯವ್ಯಯದ ಅಂದಾಜು ಪಟ್ಟಿಯನ್ನು ಮಂಡಿಸಿದರು ಅದರ ಪ್ರಕಾರ ಕಳೆದ ನವೆಂಬರ್ ೧ರಿಂದ ಬರುವ ಮಾರ್ಚಿ ಅಖೈರು ವರೆಗೆ ೨೧.೩ ಕೋಟಿ ರೂ ವರಮಾನವೂ, ೨೫.೮ ಕೋಟಿ ರೂ ವೆಚ್ಚವೂ ಆಗಿ, ೪.೫ ಕೋಟಿ ರೂ. ಖೋತಾ ಬರುವ ನಿರೀಕ್ಷೆಯಿದೆ ಕೇಂದ್ರ ಸರ್ಕಾರದಿಂದ ೧೫ ಕೋಟಿ ರೂ ಸಹಾಯ ಬರುವುದೆಂದು ಹಣಕಾಸಿನ ಮಂತ್ರಿಯವರು ನಿರೀಕ್ಷಿಸಿರುತ್ತಾರೆ

ಶ್ರೀ ಮರಿಯಪ್ಪನವರು ತಮ್ಮ ಭಾಷಣದಲ್ಲಿ ನೂತನ ಸಂಸ್ಥಾನದ ಆಯವ್ಯಯ ಪಟ್ಟಿ ತಯಾರಿಕೆಯು ಕೆಲಂಸ ಗೊಂದಲದ ಪ್ರಶ್ನೆಯಾಗಿರುತ್ತದೆಂದೂ, ೨-೩ ವರ್ಷಗಳನಂತರ ಪರಿಸ್ಥಿತಿಯು ಸ್ಥಿಮಿತಕ್ಕೆ ಬರಬಹುದೆಂದೂ ತಿಳಿಸಿದರು

ನಾನ್ ಗೆಜೆಟೆಡ್ ನೌಕರರ ಸಂಬಳದ ವಿಚಾರವನ್ನು ಪ್ರಸ್ತಾಪಿಸಿ, ಅದರ ಬಗ್ಗೆ ಸಹಾನುಭೂತಿಯನ್ನು ವ್ಯಕ್ತಪಡಿಸಿದರು ಹಿಂದಿನ ಸರ್ಕಾರದವರು ರಚಿಸಿದ ಮ್ಯಾಕ್ಫರ್ಸನ್ ಸಮಿತಿಯವರು ನಾನ್ ಗೆಜೆಟೆಡ್ ನೌಕರರ ಬಗ್ಗೆ ಮಾಡಿರುವ ಶಿಫಾರಸನ್ನು ಅವರು ಪ್ರಸ್ತಾಪಿಸಿ, ಕೇವಲ ೯೦ ರಷ್ಟು ಮುಂದೆ ಇರುವ ನಾನ್ ಗೆಜೆಟೆಡ್ ನೌಕರರನ್ನು ತೃಪ್ತಿಪಡಿಸುವುದೇ ಸರ್ಕಾರದ ಉದ್ದೇಶವೆಂದು ತಿಳಿಸಿದರು. ಸಮಿತಿಯವರ ಶಿಫಾರಸನ್ನು ಜಾರಿಗೆ ಕೊಟ್ಟರೆ ೪ ಕೋಟಿ ರೂ ವೆಚ್ಚವಾಗುವುದೆಂದು ಅವರು ಹೇಳಿದರು

ಮಿಲಿಟರಿ ಕೂಟಗಳು ಕೊನೆಗೊಳ್ಳಬೇಕು

ವಿಶ್ವಸಂಸ್ಥೆಯ ಸಭೆಯಲ್ಲಿ

ನೆಹರೂರವರಿಂದ ೩ ಸೂತ್ರಗಳ ನಿರೂಪಣೆ

ಪ್ರಧಾನಿ ನೆಹರೂರವರು ನೆನ್ನೆ ರಾತ್ರಿ ವಿಶ್ವಸಂಸ್ಥೆಯ ಸಾಧಾರಣ ಸಭೆಯನ್ನು ಉದ್ದೇಶಿಸಿ ಭಾಷಣ ಮಾಡಿ ಮಿಲಿಟರಿ ಕೂಟ ಮತ್ತು ಒಪ್ಪಂದಗಳು, ಒಂದು ರಾಷ್ಟ್ರದಲ್ಲಿ ಮತ್ತೊಂದು ರಾಷ್ಟ್ರದ ಸೈನ್ಯಗಳ ಆಕ್ರಮಣ ಇವು ಕೊನೆಗಾಣಬೇಕೆಂದೂ, ಆ ಮೂಲಕ ಶೀತ ಯುದ್ಧವು ಮುಕ್ತಾಯವಾಗಿ ಜಗತ್ತಿನಲ್ಲಿ ಶಾಂತಿ ಸ್ಥಾಪನೆಯುಂಟಾಗಲು ತಕ್ಕ ವಾತಾವರಣವು ಕಲ್ಪಿತವಾಗುವುದೆಂದೂ ತಿಳಿಸಿದರು.

ರಾಷ್ಟ್ರಗಳ ಸ್ವಾತಂತ್ರ್ಯ, ಸಾರ್ವತ್ರಿಕ ಶಸ್ತ್ರಸನ್ನ್ಯಾಸ, ಇತರ ದೇಶಗಳಲ್ಲಿ ವಿದೇಶೀ ಸೈನ್ಯಗಳ ಠಾಣ್ಯಗಳ ರದ್ದು ಈ ಮೂರು ಸೂತ್ರಗಳನ್ನು ಅವರು ನಿರೂಪಿಸಿ ಅವನ್ನು ಸಾಧಿಸಿದರೆ ಶಾಂತಿ ವಾತಾವರಣವು ಏರ್ಪಡುವುದೆಂದು ಅಭಿಪ್ರಾಯಪಟ್ಟರು

ವಿಶ್ವಸಂಸ್ಥೆ ಮತ್ತು ಪ್ರಪಂಚದ ಅಭಿಪ್ರಾಯವು ಜಗತ್ತಿನ ಅತ್ಯಂತ ಎಲ್ಲಾ ರಾಷ್ಟ್ರಗಳನ್ನೂ ಸಹ ತಮ್ಮ [illegible] ಪಕ್ಷವಾಗುವುದೆಂಬುವನ್ನು ಈಜಿಪ್ಟ್ ಮತ್ತು ಹಂಗೇರಿ ಘಟನೆಗಳು ತೋರಿಸಿಕೊಟ್ಟಿರುವುದಾಗಿ ಅವರು ಅಭಿಪ್ರಾಯಪಟ್ಟರು

೫ ತಿಂಗಳ ವೆಚ್ಚಕ್ಕೆ ಗವರ್ನರರ ಮಂಜೂರಾತಿ

ವಿಧಾನ ಸಭೆಯಲ್ಲಿ [illegible]

ಸ್ವಂ ಸು. ಪ್ರೋ] ಬೆಂಗಳೂರು ೨೨

ಕಳೆದ ನವೆಂಬರ್ ೧ ರಿಂದ ಮಾರ್ಚ್ ಅಖೈರುವರೆಗೆ ಸರ್ಕಾರದವರು ಒಟ್ಟು [illegible] ಕೋಟಿ ರೂ ವೆಚ್ಚ ಮಾಡಬಹುದೆಂದು ಗವರ್ನರರು [illegible] ಹೊರಡಿಸಿರುವ ವಿಶೇಷ ಗೆಜೆಟ್ ಪ್ರಕಟನೆ ಬಗ್ಗೆ ಈ ದಿನ ವಿಧಾನ ಸಭೆಯಲ್ಲಿ [illegible] ಕ್ಷೇತ್ರದ ಸದಸ್ಯ ಶ್ರೀ [illegible] ಪ್ರಶ್ನಿಸಿ [illegible] ಕ್ರಮಬದ್ಧವಲ್ಲವೆಂದು ಆಕ್ಷೇಪಿಸಿದರು. ಒಟ್ಟು [illegible] ರೀತಿಯಿಂದ ಹಣವನ್ನು ವೆಚ್ಚ ಮಾಡ[illegible] ವಿಧಾನಸಭೆಯಲ್ಲಿ ಅಪ್ರೋಪ್ರಿಯೇಷನ್ ಮಸೂದೆಯನ್ನು ತರಬೇಕಾಗಿತ್ತೆಂದು [illegible] ಸೂಚಿಸಿದರು

ಈ ವಿಚಾರವನ್ನು ತಾವು ಸರ್ಕಾರದೊಡನೆ [illegible] ರೂಲಿಂಗ್ ಕೊಡುವುದಾಗಿ ಅಧ್ಯಕ್ಷರು ತಿಳಿಸಿದರು.

ಗವರ್ನರರಿಂದ ಮಂಜೂರಾದ ವೆಚ್ಚದ ವಿವ[illegible] ರೀತಿ ಇದೆ -

ವಿದ್ಯುಚ್ಛಕ್ತಿ ಯೋಜನೆಗೆ ಬಂಡವಾಳ ೭.೩೧ ಕೋಟಿ ರೂ., ಕೈಗಾರಿಕೆ ಮತ್ತು ಸರಬರಾ[illegible] ೬.೯೧ ಕೋಟಿ ರೂ, ಸಿವಿಲ್ ವರ್ಕ್ಸ್ ೪.೧ ಕೋಟಿ ರೂ, ವಿದ್ಯಾಭ್ಯಾಸ ೩.೭೨ ಕೋಟಿ ರೂ, ಸಾಮೂಹಿಕ ಅಭಿವೃದ್ಧಿ ಯೋಜನೆ ರಾ[illegible] ವಿಸ್ತರಣ ಮುಂತಾದುವು ೫.೨೨ ಕೋಟಿ ರೂ., ಕೈಗಾರಿಕೆಗೆ ಬಂಡವಾಳ ೩.೨೨ ಕೋಟಿ ರೂ, ಪೊಲೀಸು ೧೧ ಕೋಟಿ ರೂ., ರೆವಿನ್ಯೂ ಖಾತೆ ಬಿಟ್ಟು ಮಿಕ್ಕ ಸಿವಿಲ್ ಖಾತೆಗಳ ಕಾಂಗಾರಿ ೨.೮ ಕೋಟಿ ರೂ, ಸರ್ಕಾರ ವ್ಯಾಪಾರದ ಮೇಲೆ ಬಂಡವಾಳ ೧.೩೫ ಕೋಟಿ ರೂ, ಸಾಲ ಮುಂಗಡ ಮುಂತಾದುವು ೩.೮ ಕೋಟಿ ರೂ [illegible] ಕೇಂದ್ರ ಸಂಸ್ಥಾನ ಸಾಲದ [illegible] ೨.೯೮ ಕೋಟಿ ರೂ.,

ಈ ಪೈಕಿ ವರಮಾನದಿಂದ ೩೦.೫ ಕೋಟಿ ರೂ ವೆಚ್ಚವನ್ನು ಮತ್ತು ಬಂಡವಾಳ ಖಾತೆ ೨೦.೩೫ ಕೋಟಿ ರೂ ವೆಚ್ಚವನ್ನು ಮಾಡಲಾಗುವುದು

ಚಿತ್ರದುರ್ಗ ಕಾಲೇಜು ವಿದ್ಯಾರ್ಥಿಗಳ ಮುಷ್ಕರದ ಮುಕ್ತಾಯ

ಚಿತ್ರದುರ್ಗದ ಇಂಟರ್ ಕಾಲೇಜಿನ ವಿದ್ಯಾರ್ಥಿಗಳು ಕಳೆದ ೧೮ರಿಂದಲೂ ನಡೆಸುತ್ತಿದ್ದ ಮುಷ್ಕರವನ್ನು, ಕಾಲೇಜಿನಲ್ಲಿ ಇಂಗ್ಲಿಷ್ ಅಧ್ಯಾಪಕರನ್ನು ಒದಗಿಸಿಕೊಡಲಾಗುವುದೆಂದು ಅಧಿಕಾರಿಗಳು ಭರವಸೆಯಿತ್ತನಂತರ ನೆನ್ನೆ ಮುಕ್ತಾಯಗೊಳಿಸಿದರು

ಸಂಸ್ಥಾನದ ಪುರೋಭಿವೃದ್ಧಿಯಲ್ಲಿ ಮುಸ್ಲಿಮರ ಪಾತ್ರ

ಮಾನಪತ್ರ ಸಮಾರಂಭದಲ್ಲಿ ಗವರ್ನರರ ಭಾಷಣ

ಬೆಂಗಳೂರು ೨೨

ಇಲ್ಲಿನ ಮುಸ್ಲಿಮರು ನೊನ್ನೆ ಇತ್ತ ಮಾನಪತ್ರಕ್ಕೆ ಉತ್ತರವಾಗಿ ಗವರ್ನರ್ ಶ್ರೀ ಜಯಚಾಮರಾಜಒಡೆಯರರು ಮಾತನಾಡಿ, ಸಂಸ್ಥಾನದ ಮುಸ್ಲಿಮರ ಬಗ್ಗೆ ಇತರರು ತೋರ್ಪಡಿಸುವ ಸೌಹಾರ್ದವೇ ಮುಸ್ಲಿಮರ ರಕ್ಷಾಕವಚವಾಗಿ ಪರಿಣಮಿಸಿರುವುದೆಂದು ತಿಳಿಸಿದರು ಮುಸ್ಲಿಮರೂ ಇತರರಂತೆಯೇ ಮೈಸೂರನ್ನು ಪ್ರಗತಿಯುತ ದೇಶವಾಗಿ ಮಾಡಿರುವರೆಂದೂ ಅವರು ನುಡಿದರು ಈಗ ಮುಸ್ಲಿಮರು ಮತ್ತು ಇತರರು ಎಂಬ ಪ್ರಭೇದವು ವಿಸ್ಮಯವಾಗಿ ಕಾಣುವುದೆಂದು ಅವರು ಹೇಳಿ, ಒಂದು ಮತಕ್ಕೂ ಮತ್ತೊಂದಕ್ಕೂ ಇರುವ ಭಿನ್ನತೆಯು ಕೇವಲ ಕಾಲ್ಪಿಕ ವಿಷಯವೆಂದೂ, ಮತ್ತು ವೈಯಕ್ತಿಕ ಅನುಸರಣೆಗೆ ಮಾತ್ರ ಸೇರಿದುದೆಂದೂ ಸೂಚಿಸಿದರು ನೂತನ ಮೈಸೂರು ಸಂಸ್ಥಾನದ ರಚನೆ ವಿಚಾರವನ್ನು ಅವರು ಪ್ರಸ್ತಾಪಿಸಿ ಈಗ ಕಾನೂನಿನ ರಾಜ್ಯಭಾರವು ಜಾರಿಯಲ್ಲಿರುವುದೆಂದೂ, ಯಾವೊಬ್ಬ ವ್ಯಕ್ತಿಯ ಅಥವಾ ಗುಂಪಿನ ಕಾಲವಿದಲ್ಲವೆಂದೂ ತಿಳಿಸಿದರು ಪ್ರಜಾ ಸಾಮಾನ್ಯರ ಅಭಿಮತವೇ ಈಗ ಪ್ರಧಾನವೆಂದೂ, ಅದೇ ಸಾರ್ವಭೌಮವಾದುದೆಂದೂ ಅವರು ಹೇಳಿ ಅದರಿಂದ ನಮಗೆ ಸ್ವರ್ಣಯುಗವು ಪ್ರಾಪ್ತಿಯಾಗಿಲ್ಲದಿದ್ದರೂ, ಪ್ರಗತಿಯುತ ದಾರಿ ಸಿಕ್ಕಿದೆಯೆಂದು ಹೇಳಿದರು ಮೈಸೂರಿನ ಹಿಂದಿನ ಆಡಳಿತವನ್ನು ಪ್ರಸ್ತಾಪಿಸಿ, ರಾಜತ್ವದಿಂದ ಈಗ ಪ್ರಜಾಪ್ರಭುತ್ವವು ಜಾರಿಗೆ ಬಂದಿರುವುದೆಂದು ಅವರು ನುಡಿದರು

ಶ್ರೀ ಎಂ ಆರ್ ಖಲೀಲಿಯವರು ಅಶೋಕ ಸ್ತಂಭವಿರುವ ರಜತ ಕರಂಡದಲ್ಲಿ ಬಿನ್ನವತ್ತಳೆಯನ್ನು ಅರ್ಪಿಸಿ, ಮೈಸೂರು ಅರಸು ಮನೆತನದ ಅತ್ಯಂತ ಪ್ರೀತ್ಯ ವ್ಯಕ್ತಿಗಳಲ್ಲಿ ಗವರ್ನರರೂ ಒಬ್ಬರೆಂದು ತಿಳಿಸಿದರು ಮುಸ್ಲಿಮರು ತಮ್ಮ ತಾಯ್ನುಡಿಯನ್ನು ಅಭ್ಯಾಸ ಮಾಡುವುದಕ್ಕೆ ಅವಕಾಶ ದೊರೆಯುವುವೆಂಬ ಆದರಲ್ಲಿ ಹಾರೈಸಲಾಗಿತ್ತು

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮಾತನಾಡಿ ಹಿಂದೆ ರಾಜ್ಯಾಂಗ ಸಭೆಯಲ್ಲಿ ಮುಸ್ಲಿಂ ಪ್ರತಿನಿಧಿಗಳು ಪ್ರತ್ಯೇಕ ಚುನಾವಣೆಗಳನ್ನು ವಿರೋಧ ಮಾಡಿದ ಬಗ್ಗೆ ಪ್ರಶಂಸಿಸಿದರು ಕರ್ನಾಟಕದ ಪುರೋಭಿವೃದ್ಧಿಗೆ ಎಲ್ಲರ ಸಹಕಾರವನ್ನೂ ಅವರು ಕೋರಿದರು

ಸಂಸ್ಥಾನದ ಇಂಜನಿಯರುಗಳ ಸಂಘದ ವಾರ್ಷಿಕೋತ್ಸವ

ಇಂಜನಿಯರುಗಳ ಸಂಘದ ಮೈಸೂರು ಸಂಸ್ಥಾನ ಶಾಖೆಯ ವಾರ್ಷಿಕಾಧಿವೇಶನವು ಇದೇ ೨೯ನೇ ತಾರೀಖು ಬೆಂಗಳೂರಿನಲ್ಲಿ ಸೇರಿ ದ್ವಿತೀಯ ಪಂಚ ವಾರ್ಷಿಕ ಯೋಜನೆ ಬಗ್ಗೆ ಚರ್ಚಾಗೋಷ್ಠಿಯನ್ನು ನಡೆಸುವುದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಪ್ರಾರಂಭೋತ್ಸವವನ್ನು ನೆರವೇರಿಸುವರು

ಇಂದಿರಾ ಗಾಂಧಿಯವರಿಗೆ ಐಸೆನ್‌ಹೋವರರ ಪತ್ನಿ ಔತಣ

ಪಂಡಿತ ನೆಹರೂರವರ ಪುತ್ರಿ ಇಂದಿರಾ ಗಾಂಧಿಯವರ ಗೌರವಾರ್ಥವಾಗಿ ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರ ಪತ್ನಿಯವರು ಒಂದು ಔತಣವನ್ನು ಏರ್ಪಡಿಸಿ, ೬೦ ಮಂದಿ ಪ್ರಮುಖ ಮಹಿಳೆಯರನ್ನು ಆಹ್ವಾನಿಸಿದ್ದರು ಆ [illegible] ಉಪಾಧ್ಯಕ್ಷರು, ಶ್ರೇಷ್ಠ ನ್ಯಾಯಾಧೀಶರು ಮತ್ತು ವಿದೇಶಾಂಗ ಮಂತ್ರಿಗಳ ಪತ್ನಿಯರು ಭಾಗವಹಿಸಿದ್ದರು

ಹಾಸನದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರ

ಬೆಂಗಳೂರಿನ ನೇತ್ರ ಚಿಕಿತ್ಸಾ ಸಂಘದ ಆಶ್ರಯದಲ್ಲಿ ಬರುವ ತಿಂಗಳು ಎರಡನೇ ವಾರದಲ್ಲಿ ಉಚಿತ ನೇತ್ರ ಚಿಕಿತ್ಸಾ ಶಿಬಿರವನ್ನು ಹಾಸನದಲ್ಲಿ ಏರ್ಪಡಿಸಲಾಗುವುದು ೧,೦೦೦ ಶಸ್ತ್ರ ಚಿಕಿತ್ಸೆಗಳನ್ನೂ, ೩,೦೦೦ ಪರೀಕ್ಷೆಗಳನ್ನೂ ಮಾಡಲಾಗುವುದು ನೇತ್ರ ರೋಗಿಗಳಿಗೆ ಉಚಿತ ಊಟ ಮತ್ತು ವಸತಿ ಸೌಕರ್ಯವನ್ನು ಕಲ್ಪಿಸಲಾಗುವುದು ಪ್ರಮುಖ ವೈದ್ಯರು ಚಿಕಿತ್ಸೆ ನಡೆಸುವರು

ವಿದ್ಯಾರ್ಥಿಗಳಿಗೆ ಪಂಪನ ಆದರ್ಶ

ಎಸ್. ವಿ ಪರಮೇಶ್ವರಭಟ್ಟರ ಭಾಷಣ

ಮೈಸೂರು ೨೨

ಅಖಿಲ ಭಾರತ ವಿದ್ಯಾರ್ಥಿ ಪರಿಷತ್ತಿನ ನಗರ ಶಾಖೆಯ ಆರಂಭ ಭಾಷಣವನ್ನು ಮೊನ್ನೆ ಸಹಕಾರ ಭವನದಲ್ಲಿ ಮಹಾರಾಜಾ ಕಾಲೇಜಿನ ಶ್ರೀ ಎಸ್ [illegible]ರಮೇಶ್ವರ ಭಟ್ಟರು ಮಾಡಿದರು ಪರಿಷತ್ತಿನ ಅಧ್ಯಕ್ಷ ಶ್ರೀ ಬಿ. ರಾಮಣ್ಣನವರು ಅಧ್ಯಕ್ಷತೆ ವಹಿಸಿದ್ದರು

ಪ್ರಾರ್ಥನೆ ಮತ್ತು ಕಾರ್ಯದರ್ಶಿ ಶ್ರೀ ಕೆ ಆರ್ ತಮ್ಮಯ್ಯನವರಿಂದ ವರದಿಯಾದನಂತರ ಶ್ರೀ ಬಿ ಆರ್ ಶಾಮಾಚಾರ್ ಮತ್ತು ಪಾರ್ಟಿಯವರಿಂದ ಸುಶ್ರಾವ್ಯವಾದ ಗಾಯನವು ನಡೆಯಿತು

ಶ್ರೀ ಪರಮೇಶ್ವರಭಟ್ಟರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಕನ್ನಡದ ಆದಿಕವಿ ಪಂಪನ ರಾಷ್ಟ್ರಭಕ್ತಿ, ದೇಶದ ಐಕ್ಯತೆ ಮುಂತಾದುವನ್ನು ಪಾಲಿಸಬೇಕೆಂದು ಹೇಳಿದರು. ಪಂಪನು ರಾಷ್ಟ್ರಪ್ರೇಮ, ಪ್ರಕೃತಿಪ್ರೇಮ, ಕಲೆ ಮತ್ತು ಸಂಗೀತದಲ್ಲಿ ಆಸಕ್ತಿ, ಧರ್ಮದಲ್ಲಿ ಶ್ರದ್ಧೆ ಇವುಗಳನ್ನು ಪ್ರತಿಪಾದಿಸುತ್ತಿದ್ದುದಾಗಿ ಅವರು ಹೇಳಿದರು

ಅಧ್ಯಕ್ಷರ ಭಾಷಣವಾದನಂತರ ಶ್ರೀ ಜಿ ಗಂಗಾಧರರವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಹನುಮಜ್ಜಯಂತಿ ಕಾರ್ಯಕ್ರಮ

ಶ್ರೀ ಬಿ ದೇವೇಂದ್ರಪ್ಪನವರ ಶ್ರೀ ಮಾರುತಿ ಮಂದಿರದಲ್ಲಿ ಹನುಮಜ್ಜಯಂತಿ ಪ್ರಯುಕ್ತ ನಾಳೆ ಬೆಳಗ್ಗೆ ವಿ॥ ಚಕ್ರಕೋಡಿ ನಾರಾಯಣ ಶಾಸ್ತ್ರಿಯವರು, ಶ್ರೀ ನೀಲಗಿರಿ ನರಸಿಂಹಾಚಾರ್ಯರ ಮಕ್ಕಳು ಶ್ರೀಗಳು ನಾರಾಯಣಾಚಾರ್ ಮತ್ತು ಚಲುವಾಚಾರ್ಯರು ಮತ್ತು ಬಿ ದೇವೇಂದ್ರಪ್ಪನವರ ಸಂಗೀತಗಳು ನಡೆಯುವುವು ಸಂಜೆ ವಿ ಆರ್ ಎಸ್ ಕೇಶವಮೂರ್ತಿಯವರ ವೀಣೆ, ಡಾ॥ ಶ್ರೀಕಂಠಶಾಸ್ತ್ರಿಯವರಿಂದ ಕರ್ನಾಟಕ ಸಂಗೀತದ ವೈಶಿಷ್ಟ್ಯ ಎಂಬ ವಿಚಾರವಾಗಿ ಭಾಷಣ ಮತ್ತು ಸಂಗೀತ ಕಲಾನಿಧಿ ಚಿಟ್ಟೂರು ಸುಬ್ರಹ್ಮಣ್ಯ ಪಿಳ್ಳೆಯವರ ಸಂಗೀತಗಳು ಇವೆ

ವಿವಾಹ ಮಹೋತ್ಸವ

ನಗರದ ಅಡ್ವೊಕೇಟರಾದ ಶ್ರೀ ಕೆ ಎಂ ಸುಬ್ಬರಾಯರು ತಮ್ಮ ಹಿರಿಯ ಕುಮಾರ ಶ್ರೀ ರಾಮಚಂದ್ರರವರಿಗೆ ಕೊತ್ವಾಲರಾಮಯ್ಯ ರಸ್ತೆಯಲ್ಲಿರುವ ಶ್ರೀ ಸಿ ನಂಜುಂಡಯ್ಯನವರ ಕುಮಾರಿ ಸೌ। ಸಾವಿತ್ರಮ್ಮನವರನ್ನು ತಂದುಕೊಂಡು ಮೊನ್ನೆ ವಿವಾಹವನ್ನು ನೆರವೇರಿಸಿದರು ನೆನ್ನೆ ಸಂಜೆ ಸ್ವಾಗತ ಸಮಾರಂಭವನ್ನು ಸಹಕಾರ ಭವನದಲ್ಲಿ ಏರ್ಪಡಿಸಲಾಗಿತ್ತು

ಭದ್ರತಾ ಸಮಿತಿಗೆ ಸ್ವೀಡನ್, ಇರಾಕ್, ಕೊಲಂಬಿಯಗಳು

ಭದ್ರತಾ ಸಮಿತಿ ಸದಸ್ಯರಾಗಿ ಸ್ವೀಡನ್, ಕೊಲಂಬಿಯಾ ಮತ್ತು ಇರಾಕುಗಳನ್ನು ವಿಶ್ವಸಂಸ್ಥೆಯ ಸಾಧಾರಣ ಸಭೆಯು ಆರಿಸಿದೆ ಈ ರಾಷ್ಟ್ರಗಳ ಪ್ರತಿನಿಧಿಗಳು ಭದ್ರತಾ ಸಮಿತಿಯಲ್ಲಿ ಎರಡು ವರ್ಷ ಕಾಲ ಕೂಡಬಹುದು

ಮೈಸೂರು ಪೇಟೆ ಧಾರಣೆ

ಬಂಗಾರ ತೊಲ ಒಂದು

ಕೊಯಮುತ್ತೂರು ಬೆಲ್ಲ	೨೮	೪	೦	೨೮	೦	೦
[illegible]	೪೫	೪	೦	೨೬	೪	೦
[illegible] ಬೆಲ್ಲ	೨೬	೧೪	೦			
ರಾಗಿ	೨೮	೧೪	೦	೪೪	೨	೦
ಜೋಳ	೪೨	೧೦	೦	೪೪	೨	೦
ಕಂಬು	೨೯	೧೨	೦			
ಕಡಲೆಕಾಯಿ	೧೪	೧೦	೦	೨೨	೧೨	೦
ಹರಳುಬೀಜ	೪೯	೦	೦	೫೦	೧೦	೦
ಹುಚ್ಚೆಳ್ಳು	೪೬	೦	೦	೪೫	೨	೦
ಹುರುಳಿ	೧೬	೧೨	೦	೨೫	೬	೦
ಹೆಸರು	೪೬	೧೦	೦	೫೧	೬	೦
ಹಲಸಂದೆ	೪೨	೦	೦	೫೭	೧೨	೦
ಸೆಣಬಿನ ಬೀಜ	೪೧	೦	೦	೪೬	೨	೦
ಧನಿಯ	೩೪	೦	೦	೨೬	೨	೦
ತೊಗರಿ	೪೪	೨	೦	೪೯	೦	೦
ಉದ್ದು	೪೮	೦	೦	೫೯	೪	೦
ಹುಣಸೇಹಣ್ಣು	೪	೧	೦	೬	೦	೦
ಮೆಣಸಿನಕಾಯಿ	೪	೦	೦	೨೧	೧೨	೦
ತೆಂಗಿನಕಾಯಿ ೧೦೦೦	೧೩೦	೪	೦			

ವಿವಿಧ ಅಪರಾಧಗಳಿಗೆ ಶಿಕ್ಷೆ

ನಂಜನಗೂಡು ೨೧

ಗುಂಡ್ಲುಪೇಟೆ ತಾಲ್ಲೂಕು ದೊಡ್ಡ ಹುಂಡಿ ಗ್ರಾಮದ ಬಸಪ್ಪನವರ ಜಮೀನಿನಲ್ಲಿ ಸಿದ್ದೈರ, ಮಂಚಟ್ಟಿ, ಮತ್ತು ಮಾದ ಎಂಬುವರು ಕಳೆದ ತಿಂಗಳು ೧೭ನೇ ತಾರೀಖು ಜೋಳದ ತೆನೆ ಮತ್ತು ತೆಂಗಿನಕಾಯಿಗಳನ್ನು ಕದ್ದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಮಾದ ಎಂಬುವನಿಗೆ ಆರು ತಿಂಗಳ ಕಠಿಣ ಸಜಾ ಮತ್ತು ಉಳಿದ ಇಬ್ಬರಿಗೆ ತಲಾ ೧ ವರ್ಷ ಕಠಿಣ ಸಜಾವನ್ನು ಇಲ್ಲಿನ ನ್ಯಾಯಾಧೀಶರು ವಿಧಿಸಿರುತ್ತಾರೆ

ಟಿವನ್ನಹಳ್ಳಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದನೆಂದು ಕೇರಿ ಪುಟ್ಟರಂಗನಿಗೆ ೧ ವಾರ ಕಠಿಣ ಸಜಾ ವಿಧಿಸಿರುವರು. ಅದೇ ಕಾರಣಕ್ಕಾಗಿ ಮೈಸೂರಿನ ರಾಜಾ ಅಲಿಯಾಸ್ ರಾಮು ಮತ್ತು ಕೆರಳನಾಂಬಿಯ ಭೋಗ ಮತ್ತು ಹುಚ್ಚ ಶೆಟ್ಟಿಯವರಿಗೆ ಆರು ತಿಂಗಳ ಸಜಾ ವಿಧಿಸಲಾಗಿದೆ

ಗಂಡನೊಡನೆ ವ್ಯಾಜ್ಯವಾದಿ ಮಕ್ಕಳ ಕೊಲೆ; ಆತ್ಮಹತ್ಯ ಯತ್ನ

ಹಲಚೇರಿ ಬಳಿ ಒಂದು ಹಳ್ಳಿಯ ಕೌಸಲ್ಯ ಎಂಬ ೨೭ ವರ್ಷ ವಯಸ್ಸಿನ ಮಹಿಳೆಯು ತನ್ನ ೩ ಮಕ್ಕಳನ್ನು ಭಾವಿಗೆ ಎತ್ತಿಹಾಕಿ ಕಾವೇರಿ ನದಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಳ್ಳಲೆತ್ನಿಸಿದ್ದಳೆಂದು ಹೇಳಲಾಗಿದೆ ಒಬ್ಬ ಯುವಕನು ಆಕೆಯನ್ನು ಪಾರು ಮಾಡಿದನು ಕೊಲೆ ಮತ್ತು ಆತ್ಮಹತ್ಯ ಪ್ರಯತ್ನಕ್ಕಾಗಿ ಆಕೆಯ ಮೇಲೆ ಮೊಕದ್ದಮೆ ಹೂಡಲಾಗುವುದು ಅವಳು ಗಂಡನೊಡನೆ ಜಗಳವಾಡಿದ್ದಳೆಂದು ಹೇಳಲಾಗಿದೆ

ಚುನಾವಣೆ ವೆಚ್ಚದ ಪರಮಾವಧಿ

ಮಹಾ ಚುನಾವಣೆಗಳಲ್ಲಿ ಉಮೇದುವಾರರು ಮಾಡಬಹುದಾದ ಪರಮಾವಧಿ ವೆಚ್ಚವನ್ನು ನಿಗದಿಪಡಿಸುವ ತಿದ್ದುಪಡಿಯನ್ನು ಲೋಕಸಭೆಯಲ್ಲಿ ತರಲಾಗಿದೆ ಅದರ ಪ್ರಕಾರ ಪಾರ್ಲಿಮೆಂಟಿನ ಉಮೇದುವಾರನು ದ್ವಿಸದಸ್ಯ ಕ್ಷೇತ್ರದಲ್ಲಿ ೩೫,೦೦೦ ರೂ ಮತ್ತು ಏಕ ಸದಸ್ಯ ಕ್ಷೇತ್ರದಲ್ಲಿ ೨೫,೦೦೦ ರೂ ವೆಚ್ಚ ಮಾಡಬಹುದು ಶಾಸನ ಸಭೆಗೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಕ್ರಮವಾಗಿ ೧೧ ಸಾವಿರ ಮತ್ತು ೬ ಸಾವಿರ ರೂ. ಗಳನ್ನು ಖರ್ಚು ಮಾಡಬಹುದು

ಸಂಗೀತ ಕಛೇರಿ

ನಗರದ ಸಂಗೀತ ಕಲಾಭಿವರ್ಧಿನೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೪ ಗಂಟೆಗೆ ಶ್ರೀರಾಂಪೇಟೆಯಲ್ಲಿರುವ ಶ್ರೀ ವಿಠಲರಾಯರ ರಾಮಚಂದ್ರ ಮಂದಿರದಲ್ಲಿ ವಿ॥ ಎಂ ಎಸ್. ಗೋವಿಂದ ಸ್ವಾಮಿಯವರ ಗಾಯನ ಕಛೇರಿಯು ವಿ। ಬಿ ಎಸ್ ಶಿವಣ್ಣಯ್ಯನವರ ಪಿಟೀಲು ಮತ್ತು ವಿ॥ ಎಂ ಎಸ್ ಶೇಷಪ್ಪನವರ ಮೃದಂಗಗಳೊಡನೆ ಜರುಗುವುದು

ಶಿಶು ಸಾಹಿತ್ಯ ಕೇಂದ್ರಗಳಲ್ಲಿ [illegible]

ನಗರದ ಶಿಶು ಸಾಹಿತ್ಯ ಸಮಿತಿಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಇಟ್ಟಿಗೆಗೂಡು ಕ್ರೀಡಾ ಕೇಂದ್ರದಲ್ಲಿ ಅಂತರ ಕೇಂದ್ರಗಳ [illegible] ಸ್ಪರ್ಧೆಯು ನಡೆಯುವುದು ಪೌರಸಭಾ ಸದಸ್ಯರಾದ ಶ್ರೀ ವೆಂಕಟಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು

ಫುಟ್ ಬಾಲ್ ಪಂದ್ಯ

ನಗರದ ಡಿ ಬನುಮಯ್ಯ ಕಾಮರ್ಸ್ ಕಾಲೇಜಿನ ಮೈದಾನದಲ್ಲಿ ಮೊನ್ನೆ ಸಂಜೆ ಫುಟ್ ಬಾಲ್ ಪಂದ್ಯದಲ್ಲಿ ಮೈಸೂರು ಫ್ರೆಂಡ್ಸ್ ಯೂನಿಯನ್ ಟೀಮಿನವರು ಚಾಂಪಿಯನ್ ಕ್ಲಬ್ಬಿನವರನ್ನು ೩-೧ ಗೋಲುಗಳಿಂದ ಸೋಲಿಸಿರುತ್ತಾರೆ

ಮಕ್ಕಳಿಗೆ ಶಿಸ್ತು ಕಲಿಸುವ ಯೋಜನೆ

ದ್ವಿತೀಯ ಪಂಚ ವಾರ್ಷಿಕ ಯೋಜ ಅಂತ್ಯದ ವೇಳೆಗೆ ರಾಷ್ಟ್ರೀಯ ಶಿಸ್ತಿನ ಯೋ ಪ್ರಕಾರ ೫೦ ಲಕ್ಷ ಬಾಲಕಬಾಲಿಕೆಯರಿಗೆ ಡ ವೀಯಲಾಗುವುದೆಂದು ಕೇಂದ್ರ ಶಿಕ್ಷ ಸ್ತಾ ಉಪ ಮಂತ್ರಿ ಡಾ. ಕೆ ಶ್ರೀಮಾಲಿಯ ಳಿಸುತ್ತಾರೆ ಈ ಬಗ್ಗೆ ವಿಶೇಷ ಮಂತ್ರಿ ದೆಯನ್ನು ಏರ್ಪಡಿಸಲು ನಿರ್ಧರಿಸಲಾಗಿದೆ ಅವ ವಹಿಸುವರೆಂದು ಅವರು ತಿಳಿಸಿದರು.

ಕೋವಿ ತಯಾರಕನಿಗೆ ಹುಚ್ಚು ಹತ್ತಿ ಇಬ್ಬರ ಕೊಲೆ

ಕರಾಚಿಯಲ್ಲಿ ಕೋವಿ ತಯಾರಕನೆ ಸಿದ್ಧನಾಗಿರುವ ದಿಲ್ ಮಹಮದ್ ಎಂಬಾ ಮೊನ್ನೆ ಅಧ್ಯಕ್ಷರ ಹುಚ್ಚು ಹಿಡಿದು ಬಂದೂಕಿನಿಂದ ಇಬ್ಬರನ್ನು ಕೊಂದು ೧೭ ಮಂದಿಯನ್ನು ಗಾಯಗೊಳಿಸಿರುವುದಾಗಿ ದಿಯಾಗಿದೆ.

ನಾಟಕ ಮತ್ತು ನೃತ್ಯ

ಮೈಸೂರು ಗೀತಾ ಪ್ರಚಾರಿಣೀ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫.೩೦ ಗಂಟೆಗೆ ಯ ಪ್ರಯೋಜಕರು ಪಿ. ಸೀತಾರಾ ಒಂದು ಸಾಮಾಜಿಕ ನಾಟಕವನ್ನು ಅಭಿನ ರು ಕುಮಾರಿ ಪದ್ಮಾರಾಧಾರವರ ನೃತ್ಯ ಜರುಗುವುದು. ಸರ್ವರಿಗೂ ಸ್ವಾಗತವಿದೆ

ಚಾಮರಾಜನಗರ ಆಸ್ಪತ್ರೆಗೆ ಬೇರೊಬ್ಬ ವೈ ಬೇಕಾದ ಅಗತ್ಯ

ಚಾಮರಾಜನಗರ ತಾಲ್ಲೂಕು ಗ್ರಾಮದಲ್ಲಿರುವ ಆಸ್ಪತ್ರೆಯಲ್ಲಿ ಜನರಿಗೆ ಯಾಗಿ ಔಷಧಿಗಳು ದೊರೆಯುತ್ತಿಲ್ಲವೆಂ ಅಲ್ಲಿನ ವೈದ್ಯರು ಸರಿಯಾಗಿ ವರ್ತಿಸುತ್ತಿ ದೂ, ಬೇರೊಬ್ಬ ವೈದ್ಯರನ್ನು ಕಳುಹಬೇಕೆಂ ಅಲ್ಲಿನ ಜನರು ಜಿಲ್ಲಾ ವೈದ್ಯಾಧಿಕಾರಿಗ ಕೋರಿರುವುದಾಗಿ ಗ್ರಾಮದ ನಿವಾಸಿಯೊಬ್ಬ ಪತ್ರ ಬರೆದು ತಿಳಿಸಿರುತ್ತಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರ

ಬೆಳಗ್ಗೆ ೬ ೫ ಸಂಗೀತ. ೬-೧೫ ಮ ೮-೧೫ ಜಿ ವಿ ರಂಗನಾಯಕಮ್ಮ ಮತ್ತು ವಿ ಲೀಲಾ ದೇವರ ನಾಮ ೬.೩೦ ರಿಕಾರ್ಡ್ ೮-೩೦ ಎ ಕೆ ಸುಬ್ಬರಾವ್ ಕೊಳಲು ೯- ಬಾಲ ಜಗತ್ ಮಧ್ಯಾಹ್ನ ೧೨ ಮತ್ತು ೨- ಪಿ ಆರ್ ಸುಂದರರಾಜ-ಸಂಗೀತ ೧೨- ವಾದ್ಯ ವೃಂದ ೧ ರಿಕಾರ್ಡ್ ೧-೫೦ ಸಂ ಸಂಜೆ ೫ ಪಾಶ್ಚಾತ್ಯ ಸಂಗೀತ ೫-೩೦ ಎಸ್ ಕಲ್ಯಾಣಿ ಅಯ್ಯಂಗಾರ್-ಸಂಗೀತ ವಿರಾಮ ಸಂಗೀತ ೬-೩೦ ಮತ್ತು ೭- ವಾರ್ತೆ ೮ ಕೊಳಲು ರಾತ್ರಿ-ನಾಟಕ ೮- ಪ್ರಚಲಿತ ವಿಷಯ-ಶಿಶಿರ ಶಶಿ ೮-೪೫ ರ್ತೆ ೯-೧೫ ಕ್ರೀಡಾ ವಿಮರ್ಶೆ ೯-೩೦ ಗೀತೋತ್ಸವ-ಮದ್ರಾಸ್ ರಿಲೇ.

ಉತ್ತಮವಾದ ಕಟ್ಟಡದ
ಪ್ಲಾನುಗಳು ಮತ್ತು ಬ್ಲೂಪ್ರಿಂ
ಮಾಡಿಕೊಡುವುದಕ್ಕೂ ಮತ್ತು ಸಿಮೆಂ
ಸರಾಕ್ ಎಸ್ಟಿಮೇಟ್ ಮಾಡಿಕೊಡುವು
ಗಾಯತ್ರಿ ಟಾಕೀಸ್ ಎದುರು
ಕ್ವಾರ್ಟ್ ಅಂಗಡಿಯಲ್ಲಿ
ಬಿ. ಸು ಶಿ ಸಾ ಸು ಪ್ರ,
ಇನ್ಸ್‌ಪೆಕ್ಟರ್ ಮತ್ತು ಲೈಸೆನ್ಸ್ ಹೋಲ್ಡ
ಇವರಲ್ಲಿ ವಿಚಾರಿಸಿರಿ

Edited, Printed and Publishe
A. R. Nagarajan at Sadhvi P
D. Subbiah Road, Mysore

ಚಾಮುಂಡೇಶ್ವರಿ ಟಾಕೀಸ್
30-12-56 ನೇ ಗುರುವಾರದಿಂದ ಅಪೂರ್ವ ಪ್ರಾರಂಭ ಪ್ರತಿ ದಿನ 3 ಆಟ
ಗಮನಿಸಿ.— ಮ್ಯಾಟಿನಿ 2—40, 1ನೇ ಆಟ 6—20, 2ನೇ ಆಟ 10 ಘಂಟೆ
★ ಮಾದರಕುಲ ಮಾಣಿಕ್ಯಂ
ನಟವರ್ಗ:— ಜೆಮಿನಿ ಗಣೇಶ್, ಸಾವಿತ್ರಿ, ನಾಗೇಶ್ವರರಾವ್, ಅಂಜಲಿದೇವಿ, ರ
ಎಂ ಎನ್ ರಾಜಂ, ರಂಗಾರಾವ್, ಕಣ್ಣಾಂಬ, ಸಾರಂಗಪಾಣಿ, ಫ್ರೆಂಡ್ ರಾಮಸ್ವಾ
[AN EMERALD REL

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರ್ತಕರಿಗೆ ಅನುಕೂಲ

ಇಂದಿನ ಪತ್ರಿಕೆ ೬ ಪುಟ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ : ೧೨] SADHVI : SUNDAY 23—12—1956 ಮೈಸೂರು : ಭಾನುವಾರ ೨೩—೧೨—೧೯೫೬ [ಸಂಚಿಕೆ : ೧೪೯

ಸರ್ಕಾರದ ನೆರವು ಪಡೆವ ಶಾಲಾ ಅಧ್ಯಾಪಕರಿಗೆ ಪರಿಹಾರ

ಹಾಯ ಪಡೆವ ಶಾಲಾ ಅಧ್ಯಾ ಕರಿಗೆ ತಾತ್ಕಾಲಿಕ ಪರಿಹಾರ

ಧಾನ ಪರಿಷತ್ತಿನಲ್ಲಿ ವಿದ್ಯಾ ಮಂತ್ರಿಗಳ ಹೇಳಿಕೆ

ಬೆಂಗಳೂರು ೨೨

ವಿಧಾನ ಪರಿಷತ್ತಿನಲ್ಲಿ ನೆನ್ನೆ ವಿದ್ಯಾ ಮಂತ್ರಿ ಕಡಿದಾಳ್ ಮಂಜಪ್ಪನವರು ಮಾತನಾಡಿ, ಹಾಯ ಪಡೆವ ವಿದ್ಯಾ ಸಂಸ್ಥೆಗಳಲ್ಲಿರುವ ಉ ಧ್ಯಾಯರುಗಳಿಗೆ ಕಳೆದ ಆಗಸ್ಟ್ ೧ರಿಂದ ತ್ಕಾಲಿಕ ಪರಿಹಾರವನ್ನು ಕೊಡಲಾಗುವುದೆಂ , ಅದಕ್ಕಾಗಿ ೪.೭೮ ಲಕ್ಷ ರೂ. ಅನ್ನು ಮಂ ರು ಮಾಡಲಾಗಿದೆಯೆಂದೂ ತಿಳಿಸಿದರು. ಇ ದ ೬,೧೮೧ ಮಂದಿ ಉಪಾಧ್ಯಾಯರಿಗೆ ಪರಿ ದ ದೊರೆತಂತಾಗುವುದೆಂದು ಅವರು ಸೂಚಿ ದು

ಲಾರದ ಎ.ಜಿ.ಓ.ಗಳಿಂದ ದ್ರಾಸ್ ಮಟ್ಟದ ಸಂಬಳದ ತಿರಸ್ಕಾರ

ಕೋಲಾರದ ನಾನ್ ಗೆಜೆಟೆಡ್ ನೌಕರರ ಸಂ ಕಾರ್ಯಕಾರಿ ಸಮಿತಿ ಸಭೆಯು ಕಳೆದ ೧೭ ತಾರೀಖು ನಡೆದು ಮದ್ರಾಸಿನಂತೆ ವೇತನ ನ್ನು ಹೆಚ್ಚಿಸುವುದರಿಂದ ಯಾವ ಪ್ರಯೋಜನ ಆಗುವುದಿಲ್ಲವೆಂದೂ, ಸೆಕ್ರೆಟೇರಿಯಟ್ಟಿನ ಸಿಸ್ಟೆಂಟುಗಳಿಗೆ ಮಾತ್ರ ಅದರಿಂದ ಭ್ಯವಾಗುವುದೆಂದೂ ಘೋಷಿಸಿ ಮದ್ರಾಸು ಬಳ ವರ್ಗವನ್ನು ತಿರಸ್ಕರಿಸುವಂತೆ ಕೇಂದ್ರ ತಿಗೆ ಶಿಫಾರಸು ಮಾಡಿರುತ್ತದೆ

ಗಾಂಧಿ ವ್ಯಾಸಂಗ ಗೋಷ್ಠಿ

ನಾವಿಲಾಸ ಅಗ್ರಹಾರದಲ್ಲಿರುವ ಗಾಂಧಿ ವಿ ರ ಪರಿಷತ್ತಿನಲ್ಲಿ ನಾಳೆ ಸಂಜೆ ೫-೪೫ ಕ್ಕೆ ಶ್ರೀ ಎಸ್. ಬಿ. ಮಂಜುನಾಥಶರ್ಮರ ಪ್ರಶ್ನೋತ್ತರ ಗೋಷ್ಠಿ ನಡೆಸುವರು.

ರಾಮಾ ಲೀಗಿನ ವಾರ್ಷಿಕೋತ್ಸವ

ಮೈಸೂರು ಶ್ರೀರಾಮಾ ಲೀಗಿನ ೨೮ ನೇ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಹಾ ಲ್ ಪ್ರೌಢ ಶಾಲೆಯಲ್ಲಿ ನಡೆಯಲಿರುವುದು ಮಲ್ಲಪ್ಪನವರ ಪ್ರೌಢ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಬಸವಣ್ಣನವರು ಅ ತೆ ವಹಿಸುವರು ಶ್ರೀಮತಿ ಬಸವಣ್ಣನವರು ಬಹುಮಾನ ವಿನಿಯೋಗ ಮಾಡುವರು

ಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಳಿಗ್ಗೆ ೭-೫ ಸಂಗೀತ ೭-೧೫ ದೇವರ ನಾಮ ೭-೪೦ ಗಾನ ವಿಹಾರ ೮-೧೫ ರಿಜಿ ಮಧ್ಯಾಹ್ನ ೧೨ ಸಂಗೀತ ೧೨-೩೦ ಮ ೧-೫೦ ಆರ್ ಸುಬ್ಬಾಶಾಸ್ತ್ರಿ-ಪಿಟೀಲು ಸಾಯಂ ೬-೧೫ ಸಂಗೀತ ಸಂಜೆ ೫-೩೦ ನಾಗಮ್ಮ-ಗಾಯನ ೬-೫ ವಿರಾಮ ಸಂ ೬-೨೦ ಜಾನಪದ ಗೀತೆ ೬-೩೦ ವ ಸತ್ಯನಾರಾಯಣ ಹಿಂದಿ ಭಜನೆ ೮ ಶಿವೋತ್ಸವ-ಮದ್ರಾಸು ರಿಲೆ. ೯-೧೫ ಶ್ರೀ ಗೀತೆಗಳು ೯-೩೦ ಸಂಗೀತೋತ್ಸವ-ಪ್ರಸಾರ ರಿಲೆ

ವರ್ಷದ ಒಂದು ಭಾಗದ ಆಯವ್ಯಯದ ಮಂಡನೆ

ಕ್ರಮ ಬದ್ಧತೆ ಬಗ್ಗೆ ಕ್ರಿಯಾಲೋಚನ ತಿರಸ್ಕಾರ

ಬೆಂಗಳೂರು ೨೨

ವಿಧಾನ ಸಭೆಯಲ್ಲಿ ನೆನ್ನೆ ಸಚಿವ ಶ್ರೀ ಟಿ ಮರಿಯಪ್ಪನವರು ಆಯವ್ಯಯ ಪಟ್ಟಿಯನ್ನು ಮಂಡಿಸಿದ ಬಗ್ಗೆ ಧಾರವಾಡದ ಶ್ರೀ ಎಸ್ ಬಿ ಪೂಜಾರ್ ರವರು ೫ ಕ್ರಿಯಾಲೋಚನಗಳನ್ನೆತ್ತಿ, ೫ ತಿಂಗಳ ತಾತ್ಕಾಲಿಕ ಅವಧಿಗೆ ಆಯವ್ಯಯ ಅಂದಾಜು ಪಟ್ಟಿಯನ್ನು ಮಂಡಿಸಿದ ಬಗ್ಗೆ ಆಕ್ಷೇಪಣೆ ಮಾಡಿದರು ಅದನ್ನು ಅಧ್ಯಕ್ಷರು ತಳ್ಳಿಹಾಕಿದರು ಹಣಕಾಸಿನ ಸಚಿವರು ಈ ರೀತಿ ಆಯವ್ಯಯ ಪಟ್ಟಿಯನ್ನು ಮಂಡಿಸುವುದು ಸರಿಯಲ್ಲವೆಂದು ಸದಸ್ಯರು ರಾಜ್ಯಾಂಗದ ೨೦೬ನೇ ನಿಬಂಧನೆಯನ್ನು ಎತ್ತಿ ತೋರಿಸಿ ತಿಳಿಸಿದರು

ಅಧ್ಯಕ್ಷರು ರೂಲಿಂಗ್ ಇತ್ತು, ಸಂಸ್ಥಾನ ಪುನರ್ವಿಂಗಡಣೆ ಪರಿಣಾಮವಾಗಿ ನವೆಂಬರ್ ೧ರಿಂದ ಹೊಸ ಸಂಸ್ಥಾನವು ಅಸ್ತಿತ್ವಕ್ಕೆ ಬಂದಿರುವುದೆಂದೂ, ಅಲ್ಲಿಂದ ಐದು ತಿಂಗಳೊಳಗಾಗಿಯೇ ಆಯವ್ಯಯ ಪಟ್ಟಿಯನ್ನು ಮಂಡಿಸಿದುದು ಕ್ರಮವಾಗಿದೆಯೆಂದೂ ಸೂಚಿಸಿದರು

ಗವರ್ನರು ನವೆಂಬರ್ ೧ಕ್ಕೆ ಮುಂಚೆ ವೆಚ್ಚದ ಬಗ್ಗೆ ಸರ್ಟಿಫೈ ಮಾಡಿ ಹೊರಡಿಸಿರುವ ಆಜ್ಞೆಯ ಮೇಲೆ ಮುಂದೆ ಏನೂ ಮಾಡಬೇಕಾಗಿಲ್ಲವೆಂದೂ, ಒಟ್ಟುಗೂಡಿಸಿದ ನಿಧಿಯಿಂದ ಹಣವನ್ನು ವಾಪಸು ಪಡೆಯಬೇಕಾದರೆ ಕಾನೂನು ಆಗಬೇಕಾಗಿರುವುದೆಂದೂ, ಈ ಐದು ತಿಂಗಳಲ್ಲಿ ಶಾಸನ ಸಭೆಯು ಸೇರಿದರೆ ಅದರ ಅನುಮತಿಯನ್ನು ಪಡೆಯುವುದು ಸೂಕ್ತವೆಂದು ಭಾರತ ಸರ್ಕಾರದ ಮತ್ತು ಮೈಸೂರು ಶಾಸನಸಭಾ ಅಧಿಕಾರ ವರ್ಗದ ಅಭಿಪ್ರಾಯವಾಗಿತ್ತೆಂದೂ ತಿಳಿಸಿದರು

ಮಧ್ಯ ಸುಮಾತ್ರಾದಲ್ಲಿ ಸೈನಿಕರ ದಂಗೆ

ಸಿವಿಲ್ ಗವರ್ನರರ ಶರಣಾಗತಿ

ಮಧ್ಯ ಸುಮಾತ್ರ ದ್ವೀಪದಲ್ಲಿ ಇಂಡೊನೇಷ್ಯಾ ಸೈನ್ಯವು ದಂಗೆಯೆದ್ದು ಅಲ್ಲಿನ ಗವರ್ನರರಿಂದ ಅಧಿಕಾರವನ್ನು ವಹಿಸಿಕೊಂಡಿರುವುದಾಗಿ ವರದಿಯಾಗಿದೆ ಸಿವಿಲ್ ಗವರ್ನರ್ ರುಸ್ಲಾನ್ ಮೂಲ್ಯ ಹರದಜೋಯರವರು ಶರಣಾಗತರಾಗಿದ್ದಾರೆ ಕರ್ನಲ್ ಅಹಮದ್ ಹುಸೇನ್ ಎಂಬ ದಳಪತಿಯು ಅಧಿಕಾರಕ್ಕೆ ಬಂದಿರುತ್ತಾರೆ ಈ ವಿಚಾರವನ್ನು ಪರಿಶೀಲಿಸಲು ಇಂಡೋನೇಷ್ಯಾ ಮಂತ್ರಿಮಂಡಲವು ಜರೂರು ಸಭೆ ನಡೆಸಿದೆ ಇಂಡೋನೇಷ್ಯಾದಲ್ಲೆಲ್ಲಾ ಜರೂರು ಪರಿಸ್ಥಿತಿಯನ್ನು ಘೋಷಿಸಲು ಆಲೋಚಿಸಲಾಗುತ್ತಿದೆ

ಸಟ್ಟಾ ಜೂಜಿಗಾಗಿ ದಂಡ

ನರಸಿಂಹರಾಜ ಮೊಹಲ್ಲಾದ ರಾಜಣ್ಣ ಮತ್ತು ರಜಾಕ್ ಎಂಬುವರು ಕಳೆದ ಸೋಮವಾರ ಸಟ್ಟಾ ಜೂಜಾಡಿದರೆಂದು ಅಲ್ಲಿನ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅವರುಗಳಿಗೆ ತಲಾ ೧೨ ರೂ ದಂಡವನ್ನು ವಿಧಿಸಲಾಗಿದೆ

ಅಂಬೇಡ್ಕರರ ನಿಧನಕ್ಕಾಗಿ ಪೌರಸಭೆಯ ಸಂತಾಪ

ಮೈಸೂರು ೨೨

ನಗರದ ಪೌರಸಭೆಯ ಅಧಿವೇಶನವು ನೆನ್ನೆ ನಡೆದು, ಡಾ|| ಅಂಬೇಡ್ಕರರ ನಿಧನಕ್ಕಾಗಿ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಅಂಗೀಕರಿಸಿ, ಎರಡು ನಿಮಿಷ ಮೌನವನ್ನಾಚರಿಸಲಾಯಿತು

ಶ್ರೀ ಸಿ ಎನ್ ನಾರಾಯಣರಾಯರು ಮಾತನಾಡಿ, ಇತ್ತೀಚೆಗೆ ಕೋರ್ಟಿನಲ್ಲಿ ಹೋಟೇಲು ಶುಲ್ಕದ ಬಗ್ಗೆ ಆದ ತೀರ್ಪಿನ ವಿಚಾರವನ್ನು ಪ್ರಸ್ತಾಪಿಸಿ, ರಹದಾರಿ ಶುಲ್ಕದ ಬಗ್ಗೆ ಪೌರಸಭೆಯವರು ಮೊಕದ್ದಮೆ ಹೂಡುವುದಕ್ಕೆ ಮುಂಚೆ ಸಂಬಂಧಪಟ್ಟ ಎಲ್ಲಾ ವಿಚಾರವನ್ನೂ ಸಂಗ್ರಹಿಸಿ ನಂತರ ಮೊಕದ್ದಮೆ ಹೂಡುವುದು ಒಳ್ಳೆಯದೆಂದು ಸಲಹೆ ಮಾಡಿದರು ಅಧ್ಯಕ್ಷರು ಉತ್ತರವಿತ್ತು, ಈ ವಿಚಾರವನ್ನು ಗಮನದಲ್ಲಿಟ್ಟುಕೊಳ್ಳಲಾಗುವುದೆಂದು ತಿಳಿಸಿದರು

ಹನುಮಜ್ಜಯಂತಿ ಕಾರ್ಯಕ್ರಮ

ಗಾನವಿಶಾರದ ಬಿ ದೇವೇಂದ್ರಪ್ಪನವರ ಮಾರುತೀ ಮಂದಿರದಲ್ಲಿ ಹನುಮಜ್ಜಯಂತಿ ಪ್ರಯುಕ್ತ ನಾಳೆ ಸಂಜೆ ಮದ್ರಾಸಿನ ವೆ ನಾಗ ನಲಿಕೆರೆ ಮಣಿ ಮಹಾಲಿಂಗಂ ಮತ್ತು ಪಂಟಿಮುವರಿಂದ ಕೊಳಲು ವಾದನವಿದೆ ರಾತ್ರಿ ೮ ಗಂಟೆಗೆ ಶ್ರೀ ಮಾರುತಿಯ ಉತ್ಸವವು ಜರುಗುವುದು ಆ ದಿನ ರಾತ್ರಿ ೧೦ ಗಂಟೆಗೆ ಸಂಗೀತ ಸುಧಾಕರ ಸಿ ದ್ಧರಾಮಕೃಷ್ಣ ಜಂಬಲದಿನ್ನಿ ಗದಗ್ ರವರ ಹಿಂದೂಸ್ತಾನಿ ಸಂಗೀತವು ನಡೆಯುವುದು

ಕಾಲು ಜಾರಿ ಕೆರೆಯಲ್ಲಿ ಬಿದ್ದು ಸಾವು

ನಗರದ ಕಾರಂಜಿಕೆರೆಗೆ ಮೊನ್ನೆ ಮಧ್ಯಾಹ್ನ ಪದ್ಮಾವತಿ ಮತ್ತು ಗೌರಿ ಎಂಬ ಬಾಲಕಿಯರೊಡನೆ ಬಟ್ಟೆ ಒಗೆಯಲು ಹೋಗಿದ್ದ ಸುಶೀಲಾಬಾಯಿ ಎಂಬ ೧೪ ವರ್ಷದ ಹುಡುಗಿಯು ಕಾಲು ಜಾರಿ ಬಿದ್ದು ನೀರಿನಲ್ಲಿ ಮುಳುಗಿದಳೆಂದು ವರದಿಯಾಗಿದೆ ಆಕೆಯು ಆದಮಾಲ ಇಂಗ್ಲಿಷ್ ಟ್ಯಾಂಡಿಸ ನಿವೃತ್ತ ಪೋಲೀಸ್ ಶ್ರೀ ಶೇರ್‌ಸಿಂಗ್‌ರವರ ಪುತ್ರಿಯೆಂದು ಹೇಳಲಾಗಿದೆ

ಸರ್ಕಾರಿ ಭವನದ ಬಳಿ ತಿರುವಾಂಕೂರು ಮಾಜಿ ಸಚಿವರ ಸತ್ಯಾಗ್ರಹ

ತಿರುವನಂತಪುರದಲ್ಲಿ ಹೈಕೋರ್ಟಿನ ಶಾಖೆಯೊಂದನ್ನು ವಿಸರ್ಜಿಸುವಂತೆ ಒತ್ತಾಯಪಡಿಸಲು ಮಾಜಿ ತಿರುವಾಂಕೂರು ಸಂಸ್ಥಾನದ ಮುಖ್ಯ ಮಂತ್ರಿ ಟಿ ಕೆ ನಾರಾಯಣಪಿಳ್ಳೆ ಮತ್ತು ಮಾಜಿ ಕಾರ್ಯದರ್ಶಿ ಪದ್ಮನಾಭ ಪಿಳ್ಳೆಯವರು ಮೊನ್ನೆ ಕೇರಳ ಸರ್ಕಾರದ ಕಛೇರಿ ಮುಂದೆ ಉಪವಾಸ ಸತ್ಯಾಗ್ರಹವನ್ನಾರಂಭಿಸಿದರು

ತ್ರಿವಳಿ ಮಕ್ಕಳ ಜನನ

ಕೊಳ್ಳೇಗಾಲ ತಾಲ್ಲೂಕು ಹರದುಗೌಡನ ಹಾಳ್ಯದ ಶ್ರೀ ಎಂ ಮಾದಪ್ಪನವರ ಪತ್ನಿ ಶಿವಮ್ಮನವರಿಗೆ ಕಳೆದ ೧೮ನೇ ತಾರೀಖು ೩ ಮಕ್ಕಳು ಏಕ ಕಾಲದಲ್ಲಿ ಜನಿಸಿದುವು ಒಂದು ಮಗುವು ಸ್ವಲ್ಪ ಹೊತ್ತಿನಲ್ಲೇ ಮೃತಪಟ್ಟಿತು ಉಳಿದ ಮಕ್ಕಳೂ, ತಾಯಿಯೂ ಆರೋಗ್ಯವಾಗಿರುತ್ತಾರೆ.

ಎ. ಜಿ. ಓ. ಗಳಿಗೆ ಮದ್ರಾಸ್ ಮಟ್ಟದ ಸಂಬಳ

ಬೆಂಗಳೂರು ೨೨

ಸಂಸ್ಥಾನದ ನಾನ್ ಗೆಜೆಟೆಡ್ ನೌಕರರುಗಳಿಗೆ ಮದ್ರಾಸಿನ ಮಟ್ಟಕ್ಕಿಂತ ಕಡಿಮೆಯುಳ್ಳದ್ದಂತೆ ವೇತನ ಕೊಡುವ ಬಗ್ಗೆ ಮ್ಯಾಥಿಯೂಸ್ ಸಮಿತಿಯವರು ಸರ್ಕಾರಕ್ಕೆ ಶಿಫಾರಸು ಮಾಡಿರುವರು ಅದನ್ನು ಸೂಕ್ತ ಬದಲಾವಣೆ ಮಾಡಿ ಅಂಗೀಕರಿಸಲಾಗುವುದೆಂದು ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ತಿಳಿಸಿರುತ್ತಾರೆ

ಜವಾಹರ್ ಸುರಂಗದ ಆರಂಭೋತ್ಸವ

ಭಾರತದ ಉಪಾಧ್ಯಕ್ಷ ಡಾ|| ರಾಧಾಕೃಷ್ಣನವರು ನೆನ್ನೆ ಕಾಶ್ಮೀರದ ಬಾನಿಹಾಲ್ ಬಳಿ ಬೆಟ್ಟದಲ್ಲಿ ಕೊರೆದು ಏರ್ಪಡಿಸಿರುವ ೧|| ಮೈಲಿ ಉದ್ದದ ಸುರಂಗ ಮಾರ್ಗದ ಆರಂಭೋತ್ಸವವನ್ನು ನೆರವೇರಿಸಿದರು ಇದು ಏಷ್ಯಾದಲ್ಲೇ ಅತ್ಯಂತ ದೀರ್ಘ ಸುರಂಗ ಮಾರ್ಗವೆಂದೂ, ಅದನ್ನು ರಿಕಾರ್ಡ್ ಅವಧಿಯಲ್ಲಿ ನಿರ್ಮಿಸಲಾಯಿತೆಂದೂ ಗೊತ್ತಾಗಿದೆ ಅದಕ್ಕೆ ಜವಹರಲಾಲ್ ನೆಹರೂರವರ ಹೆಸರಿಡಲಾಗಿದೆ ಜರ್ಮನ್ ತಜ್ಞರು ಅದನ್ನು ನಿರ್ಮಿಸಿರುತ್ತಾರೆ ಇದರ ನಿರ್ಮಾಣದಿಂದ ಕಾಶ್ಮೀರಕ್ಕೆ ಹೋಗುವ ದಾರಿಯು ೧೮ ಮೈಲಿಯಷ್ಟು ಕಡಿಮೆಯಾಗಿದೆ.

ನಿಜಾಮರು ಪಾಕಿಸ್ತಾನದ ಮೇಲೆ ದಾವಾ ಹಾಕುವ ಹಕ್ಕು

ಲಂಡನ್ ಬ್ಯಾಂಕೊಂದರಲ್ಲಿ ನಿಜಾಮರು ೧೦ ಲಕ್ಷ ಪೌಂಡು ಹಣವನ್ನು ಇಟ್ಟು ಅದನ್ನು ಅಲ್ಲಿರುವ ಪಾಕಿಸ್ತಾನದ ಹೈಕಮೀಷನರು ತಮ್ಮ ಲೆಕ್ಕಕ್ಕೆ ವರ್ಗಾಯಿಸಿಕೊಂಡ ಸಂದರ್ಭದಲ್ಲಿ ಬ್ರಿಟನ್ನಿನ ಅಪೀಲು ಕೋರ್ಟು ತೀರ್ಪಿತ್ತು ಆ ಹಣದ ಬಗ್ಗೆ ನಿಜಾಮರು ತಮ್ಮ ಹಕ್ಕು ಸಾಧನೆ ಮಾಡಿಕೊಳ್ಳಲು ಇಂಗ್ಲೆಂಡಿನಲ್ಲಿ ವ್ಯವಹಾರ ಹೂಡಬಹುದೆಂದು ತಿಳಿಸಿದ್ದಿತು ಮಾಜಿ ಹೈದರಾಬಾದು ಮಂತ್ರಿ ನವಾಬ್ ಜಂಗರು ಈ ಹಣವನ್ನು ಪಾಕಿಸ್ತಾನದ ರಾಯಭಾರಿ ಲೆಕ್ಕಕ್ಕೆ ವರ್ಗಾಯಿಸಿದ್ದರು.

ಸರ್ಕಾರಿ ಸಿಬ್ಬಂದಿ ಖೋತಾ ?

ಬೆಂಗಳೂರು ೨೨

ವಿಧಾನ ಪರಿಷತ್ತಿನಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡಿ, ಸರ್ಕಾರದವರು ಸಿಬ್ಬಂದಿಯ ವೆಚ್ಚವನ್ನು ಕಡಿಮೆ ಮಾಡುವರೆಂಬ ಸೂಚನೆಯನ್ನಿತ್ತರು ಆದರೆ ಸಿಬ್ಬಂದಿಯನ್ನು ಖೋತಾ ಮಾಡಲಾಗುವುದೇ ಎಂಬುದನ್ನು ಸ್ಪಷ್ಟಪಡಿಸಲಿಲ್ಲ ಹಿಂದಿನ ಮೈಸೂರಿನಲ್ಲಿ ಸಿಬ್ಬಂದಿಗಾಗಿ ೮ ಕೋಟಿ ರೂ ವೆಚ್ಚವಾಗುತ್ತಿತ್ತೆಂದೂ, ಹೊಸ ಸಂಸ್ಥಾನದಲ್ಲೂ ಅದೇ ಪ್ರಮಾಣದ ವೆಚ್ಚ ಮಾತ್ರವಾಗಬಹುದೆಂದೂ ಈ ವೆಚ್ಚವನ್ನು ಕಡಿಮೆ ಮಾಡುವುದು ಸರ್ಕಾರದ ಕರ್ತವ್ಯವೆಂದೂ ಸಚಿವರು ಸೂಚಿಸಿದರು.

ವಾರ ಭವಿಷ್ಯ

ತಾ|| [illegible] ರಿಂದ [illegible] ರವರೆಗೆ

ಮೇಷ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ನೌಕರಿಯಲ್ಲಿ ಸಮಸ್ಯೆ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ

ವೃಷಭ — ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಮಿಥುನ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅಸಮರ್ಪಕ ವೃಥಾ ವೈಮನಸ್ಯ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ ಕುಟುಂಬದಲ್ಲಿ ಅಶಾಂತಿ

ಕರ್ಕ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಉತ್ಸಾಹ ಶುಭ ಕಾರ್ಯಗಳು ಜರುಗುವುವು

ಸಿಂಹ — ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಸಾಧಾರಣ ಪರಿಸ್ಥಿತಿ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ಕನ್ಯಾ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಪ್ರವಾಸ ಸಂಭವ

ತುಲಾ — ಆರೋಗ್ಯ ತೃಪ್ತಿಕರ ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ಉದ್ಯೋಗದಲ್ಲಿ ಉತ್ಸಾಹ ಶುಭ ಕಾರ್ಯಗಳು ಜರುಗುವುವು.

ವೃಶ್ಚಿಕ — ಆರೋಗ್ಯ ಸಮರ್ಪಕ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಪ್ರಗತಿ

ಧನು — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಮಂಗಳ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸಂಭವ

ಮಕರ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ಉತ್ಸಾಹ ಪ್ರವಾಸ ಹಿತಕರವಾಗಿರುವುದು

ಕುಂಭ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ನಿರುತ್ಸಾಹ ವಿದ್ವಜ್ಜನರ ಭೇಟಿ

ಮೀನ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಕೈಗೊಂಡ ಕಾರ್ಯಗಳಲ್ಲಿ ಜಯ ಆಪ್ತರಿಂದ ನೆರವು

GLOBE TUTORIAL COLLEGE
(Sadvidya Pat shala, Mysore)
Excellent Coaching for
Inter, P. C. M., Kan., Eng
Classes between 5 30 &
10 30 A M

ಬಂಗ್ಲೆ ಮಾರಾಟಕ್ಕೆ ಇದೆ

ನಜರ್‌ಬಾದ್ ಮೇನ್ ರೋಡಿನಲ್ಲಿ ಹಳ್ಳಿ, ಟೈಲ್ಸ್, ಫ್ಲಾಟ್, ವಿಶಾಲವಾದ ಕಾಂಪೌಂಡ್ ಪಕ್ಕದ ಔಟ್, ಔಟ್ ಹೌಸ್, ಒಳ್ಳೆ ಮಂಗಳೂರು ಹೆಂಚಿನ ಬಂಗ್ಲೆ ಬೆಲೆ ಸುಮಾರು 1 ,000 ರೂ ವಿವರಗಳಿಗೆ ಕೆಳಗಿನ ವಿಳಾಸದಲ್ಲಿ ವಿಚಾರಿಸಿರಿ

ಎಸ್. ಸುಂದರರಾವ್,
ಅಡ್ವೊಕೇಟ್, ಮೈಸೂರು

ವಿಶ್ವದ ಬಿಕ್ಕಟ್ಟಿನ ಪರಿಹಾರಕ್ಕಾಗಿ ನೆಹರೂ ಪ್ರಯತ್ನ ಪಡಬೇಕು

ಬ್ರಿಟಿಷ್ ಪಾರ್ಲಿಮೆಂಟಿಗೆ ನಿರ್ಣಯ

ಪ್ರಧಾನಿ ನೆಹರೂರವರು ತಮ್ಮ ಪ್ರಭಾವವನ್ನುಪಯೋಗಿಸಿ ಹಂಗೇರಿಯಿಂದ ರಷ್ಯವು ತನ್ನ ಸೈನ್ಯವನ್ನು ವಾಪಸು ಕರೆಸುವಂತೆ ಮಾಡಬೇಕೆಂದೂ ರಷ್ಯಾ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಪುನಃ ಸ್ನೇಹವು ಬೆಳೆದು ಆ ಮೂಲಕ ವಿಶ್ವದ ಸಮಸ್ಯೆಗಳನ್ನು ಶಾಂತಿಯುತವಾಗಿ ಬಗೆಹರಿಸಲು ಯತ್ನಿಸಬೇಕೆಂದೂ ಅವರನ್ನು ಬ್ರಿಟಿಷ್ ಸರ್ಕಾರವು ಪ್ರಾರ್ಥಿಸುವಂತೆ ಸೂಚಿಸುವ ನಿರ್ಣಯವೊಂದನ್ನು ಕಾಮನ್ಸ್ ಸಭೆಯಲ್ಲಿ ೭ ಮಂದಿ ಕಾರ್ಮಿಕ ಸದಸ್ಯರು ಮಂಡಿಸಿದ್ದಾರೆ

ಸಹಕಾರ ಸಂಘಗಳ ಮೂಲಕ ಸರ್ಕಾರಿ ಉತ್ಪತ್ತಿಗಳ ಮಾರಾಟ

ಮಂತ್ರಿ ಭೀಮಪ್ಪ ನಾಯಕರ ಹೇಳಿಕೆ

ಸರ್ಕಾರದ ಕಾರ್ಖಾನೆಗಳಲ್ಲಿ ಉತ್ಪತ್ತಿಯಾಗುವ ಮಾಲುಗಳನ್ನು ಸಹಕಾರ ಸಂಘಗಳ ಮೂಲಕವೇ ಮಾರಾಟ ಮಾಡಲು ನಿರ್ಧರಿಸಲಾಗಿದೆಯೆಂದು ಸಹಕಾರ ಮಂತ್ರಿ ಶ್ರೀ ಎ ಭೀಮಪ್ಪ ನಾಯಕರು ಹಾಸನದಲ್ಲಿ ತಾಲ್ಲೂಕು ವಿವಿಧೋದ್ದೇಶ ಸಹಕಾರ ಸಂಘದಲ್ಲಿ ಭಾಷಣ ಮಾಡುತ್ತಾ ತಿಳಿಸಿದ್ದಾರೆ ಸಹಕಾರದಲ್ಲಿ ಶಿಕ್ಷಣವೀಯಲು ೩-೪ ಶಾಲೆಗಳನ್ನು ತೆರೆಯಲಾಗುವುದೆಂದೂ ಅವರು ಹೇಳಿದರು

ನಾದಬ್ರಹ್ಮ ಸಂಗೀತ ಸಭೆ

ನಾದಬ್ರಹ್ಮ ಸಂಗೀತ ಸಭೆಯು ಕಳೆದ ಗುರುವಾರ ಸಂಜೆ ಮೈಸೂರಿನ ಡಿವಿಜನಲ್ ಕಮಿಷನರ್ ಶ್ರೀ ಜಿ ಎಂ ನಾಗರಾಜರಾಯರಿಂದ ಪುರಭವನದಲ್ಲಿ ಉದ್ಘಾಟಿಸಲ್ಪಟ್ಟಿತು ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥನೆಯಾದನಂತರ ಶ್ರೀ ಆರ್ ಎಂ ದೊರೆಸ್ವಾಮಿಯವರು ಮುಖ್ಯ ಅತಿಥಿಗಳನ್ನೂ ಅಭ್ಯಾಗತರನ್ನೂ ಸ್ವಾಗತಿಸಿ ಪ್ರತಿ ತಿಂಗಳೂ ಉತ್ತಮವಾದ ಸಂಗೀತ ಕಛೇರಿಗಳನ್ನೇರ್ಪಡಿಸಿ ಕಲಾಭಿಮಾನಿಗಳಿಗೆ ಒಳ್ಳೆಯ ಸಂಗೀತವನ್ನು ಒದಗಿಸುವುದರ ಜೊತೆಗೆ ಗಾನಾಭಿರುಚಿ ಬೆಳೆಯುವಂತೆ ಮಾಡುವುದು ಸಭೆಯ ಉದ್ದೇಶವೆಂದು ಹೇಳಿದರು ಶ್ರೀ ಜಿ ಎಂ ನಾಗರಾಜರಾಯರು ಭಾಷಣ ಮಾಡಿ ಮೈಸೂರು ಸಂಗೀತಕ್ಕೆ ಬಹುಮಟ್ಟಿಗೆ ಪ್ರೋತ್ಸಾಹವಿತ್ತು ಅನೇಕ ಮಹಾ ವಿದ್ವಾಂಸರುಗಳು ಮೈಸೂರಿನ ಕೀರ್ತಿಯನ್ನು ಎಲ್ಲೆಡೆಯಲ್ಲಿಯೂ ಬೆಳಗಿದಂತೆ ನಾದಬ್ರಹ್ಮ ಸಂಗೀತ ಸಭೆಯು ಕಲಾ ಪ್ರೋತ್ಸಾಹದ ಧ್ಯೇಯವನ್ನಿಟ್ಟುಕೊಂಡಿರುವುದನ್ನು ಶ್ಲಾಘಿಸಿದರು ಆ|| ವಿ|| ಆರ್ ಎಂ ದೊರೆಸ್ವಾಮಿಯವರ ವೀಣಾ ವಾದನವು ವಿ|| ಹರಿಶ್ಚಂದ್ರರವರ ಮೃದಂಗದೊಡನೆ ಸುಶ್ರಾವ್ಯವಾಗಿ ನಡೆಯಿತು.



ಅಮೆರಿಕದ ವಿದೇಶಾಂಗ ಮಂತ್ರಿ ಡಲೆಸ್ ಮತ್ತು ಪ್ರಧಾನಿ ನೆಹರೂರವರ ಭೇ

ಆನೆಯನ್ನುಳಿಸಲು ಮನುಷ್ಯನ ಕೊಲೆಗಾಗಿ ಜೀವಾವಧಿ ಸಜಾ

ಮನುಷ್ಯನನ್ನು ಬಲಿಕೊಟ್ಟರೆ ಆನೆಯ ಪ್ರಾಣವು ಉಳಿಯುವುದೆಂದು ಬಗೆದ ಕೃಷ್ಣ[illegible] ಅಪ್ಪಸ್ವಾಮಿ ಚೆಟ್ಟಿಯಾರ್ ಎಂಬಾತನು ಗುರುವಾಯೂರು ದೇವಾಲಯದ ಜವಾನನೊಬ್ಬನನ್ನು ಕೊಲೆ ಮಾಡಿದುದಕ್ಕಾಗಿ ಅವನಿಗೆ ಜೀವಾವಧಿ ಸಜಾ ವಿಧಿಸಲಾಗಿದೆ ದೇವಸ್ಥಾನದ ಆನೆಯ ಆರೋಗ್ಯವು ಸರಿಯಾಗಿರಲಿಲ್ಲವೆಂದೂ, ಅದಕ್ಕಾಗಿ ಆನೆಯ ಮಾವುತನ ಬಳಿ ಕೆಲಸ ಮಾಡುತ್ತಿದ್ದ ಅಪರಾಧಿಯು ಜವಾನನನ್ನು ಬಲಿ ಕೊಟ್ಟನೆಂದೂ ಹೇಳಲಾಗಿದೆ ಆನೆಯ ಬಗ್ಗೆ ಅವನಿಗೆ ವಿಶೇಷ ಮಮತೆಯಿದ್ದಿತೆಂದೂ, ನರಬಲಿ ಕೊಟ್ಟರೆ, ಅದು ಬದುಕುವುದೆಂಬ ನಂಬಿಕೆಯಿಂದ ತಾನು ಕೃತ್ಯ ನಡೆಸಿದುದಾಗಿಯೂ ಅಪರಾಧಿಯು ತಿಳಿಸಿರುವನು

ತೀರ್ಥಹಳ್ಳಿ ಕಾಂಗ್ರೆಸ್ ಪ್ರಮುಖರೊಬ್ಬರ ಆತ್ಮಹ

ತೀರ್ಥಹಳ್ಳಿ ತಾಲ್ಲೂಕು ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಬಿ ಎಂ ಶಂಕರಪ್ಪ ತಮ್ಮ ಗ್ರಾಮ ಬಿಳುವೆಯಲ್ಲಿರುವ ಸ್ವಂ ಯಲ್ಲಿ ಮೊನ್ನೆ ನೇಣುಹಾಕಿಕೊಂಡು ಆ ಮಾಡಿಕೊಂಡರೆಂದು ವರದಿಯಾಗಿದೆ ಕದ ಮೇಲೆ ತಾಲ್ಲೂಕು ಕಾಂಗ್ರೆಸ್ ಅಧ್ಯ ಎ ಗುರುಮೂರ್ತಿಯವರೂ, ಪ್ಯಾಟರ ರೂ ಗ್ರಾಮಕ್ಕೆ ಹೋಗಿದ್ದರು ಪೋಲೀಸರು ಜರು ಕ್ರಮ ನಡೆಸಿದರು

ಭಾರತಕ್ಕೆ ವಿಶ್ವ ಬ್ಯಾಂಕಿನಿ ೯|| ಕೋಟಿ ರೂ. ಸಾಲ

ಭಾರತದ ಕಬ್ಬಿಣ ಮತ್ತು ಉಕ್ಕು ಕಾ ಕಂಪೆನಿಗೆ ವಿಶ್ವ ಬ್ಯಾಂಕು ೯|| ರೂ ಸಾಲ ಕೊಡಲು ನಿರ್ಧರಿಸಿರುತ್ತದೆ

ಅರುಣ್ ಕಾಫಿ ವರ್ಕ್ಸ್
ಹಳೇ ಪೋಸ್ಟ್ ಆಫೀಸ್ ರೋಡು, ಮೈಸೂರು

ನಮ್ಮಲ್ಲಿ ಹಸನಾದ ಕಾಫಿ ಬೀಜ ಮತ್ತು ಕಾಫಿ ಪುಡಿ ಈ ಕೆಳಗೆ ಕಂಡ ದರದಲ್ಲಿ ದೊರೆಯುತ್ತವೆ —

—. ಕಾಫಿ ಬೀಜ ಪೌಂಡು ಒಂದಕ್ಕೆ : —
ಪ್ಲಾಂಟೇಷನ್ ಪೀಬೆರಿ ರೂ 2 3 0 — ಪ್ಲಾಂಟೇಷನ್ 'ಎ' ರೂ 2 0 0
ಅರಾಬಿಕಾ ಚೆರ್ರಿ ರೂ 1 14 0 — ರೊಬಸ್ಟಾ 1 9 0
—. ಕಾಫಿ ಪುಡಿ ಪೌಂಡು ಒಂದಕ್ಕೆ :—
ಪ್ಲಾಂಟೇಷನ್ ಪೀಬೆರಿ ರೂ 2 13 0 — ಪ್ಲಾಂಟೇಷನ್ 'ಎ' ರೂ 2 11 0
ಚೆರ್ರಿ ರೂ 2 4 0 — ಸ್ಪೆಷಲ್ ಹೌಸ್ ಬ್ಲೆಂಡ್ ರೂ 2 8 0
ಹೋಟೇಲ್ ಸ್ಪೆಷಲ್ ರೂ. 2-8-0
ಉತ್ತಮವಾದ ದಿನಸಿಗಳೂ, ಶ್ರೀಗಂಧದ ಸಾಮಾನುಗಳೂ ಸಹ ದೊರೆಯುತ್ತವೆ

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
ಮುಂದಿನ ಬದಲಾವಣೆ
ಭಕ್ತ ಮಾರ್ಕಂಡೇಯ
(ಕನ್ನಡ)
ಪಾತ್ರ:- ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ಮಾಸ್ಟರ್
ಆನಂದ್, ರಘುರಾಮಯ್ಯ, ಸೂರ್ಯಕಲಾ, ಬೇಬಿ-ಉಮಾ
ಪದ್ಮಿನಿ ಪ್ರಿಯದರ್ಶಿನಿ, ನರಸಿಂಹರಾಜು,
ಬಾಲಸರಸ್ವತಿ, ಡಿಕ್ಕಿ ಮಾಧವರಾವ್

Edited, Printed and Published by A R Nagarajan at Sadhvi Press, D Subbiah Road, Mysore

ರಿಜಿಸ್ಟರ್ಡ್ ನಂ. 793

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಅಪ್ರತಿಮ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರುಗಳು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71|1 [illegible]
ಶ್ರೀ [illegible] ರಸ್ತೆ,
ಬೆಂಗಳೂರು-2

ಸಂಪುಟ : ೧೮] SADHVI : MONDAY 24-12-1956 ಮೈಸೂರು : ಸೋಮವಾರ ೨೪-೧೨-೧೯೫೬ [ಸಂಚಿಕೆ : ೨೯೦

ಇಂಡೋನೇಷ್ಯಾ ಮಂತ್ರಿಮಂಡಲದ ಪತನದ ಸಂಭವ

ಇಂಡೋನೇಷ್ಯಾ ಸರ್ಕಾರಕ್ಕೆ ಎರಡು ಪ್ರಾಂತಗಳ ತಿರಸ್ಕಾರ

ಮಂತ್ರಿಮಂಡಲದ ರಾಜೀನಾಮೆ ಸಂಭವ

ಸುಮಾತ್ರಾ ದ್ವೀಪದ ಎರಡು ಪ್ರಾಂತಗಳು ಇಂಡೋನೇಷ್ಯಾ ಸರ್ಕಾರದ ಹತೋಟಿಗೆ ಒಳಗಾಗಲು ತಿರಸ್ಕರಿಸಿರುವುದಾಗಿಯೂ, ಅದರ ಪರಿಣಾಮವಾಗಿ ಮಂತ್ರಿಮಂಡಲದವರು ರಾಜೀನಾಮೆ ಕೊಡಬಹುದೆಂದೂ ಅಧಿಕೃತ ರಾಜಕೀಯ ವಲಯಗಳಲ್ಲಿ ಸುದ್ದಿ ಹರಡಿದೆ. ಮತ್ತು ಸುಮಾತ್ರದಲ್ಲಿ ಸೈನ್ಯಗಳ ದಂಗೆಯಾದ ನಂತರ ಉತ್ತರ ಭಾಗದ ಮಿಲಿಟರಿ ನಾಯಕರೂ ಅದಕ್ಕೆ ಸೇರಿದರು. ಉತ್ತರ ಸುಮಾತ್ರದಲ್ಲಿ ಯುದ್ಧ ಸನ್ನಿವೇಶಕ್ಕೆ ನುಡಿಗೆ ಪರಿಸ್ಥಿತಿಯನ್ನು ಘೋಷಿಸಲಾಗಿದೆಯೆಂದೂ, ಆದರೆ ಅದು ಸಮರ್ಥಿಸಲ್ಪಟ್ಟಿಲ್ಲವೆಂದೂ ಸಹ ವರದಿಯಾಗಿದೆ. ಜಾವಾ ದ್ವೀಪದವರನ್ನಲ್ಲದೆ, ಹೊರಗಿನ ದ್ವೀಪಗಳ ಹಿತಕ್ಕಾಗಿ ಕೇಂದ್ರ ಸರ್ಕಾರದ ಮೇಲೆ ಬಲತ್ಕಾರ ಹಾಕುವುದೇ ದಂಗೆಕಾರರ ಉದ್ದೇಶವೆಂದು ಹೇಳಲಾಗಿದೆ. ಈ ಸಂಬಂಧದಲ್ಲಿ ಅಲ್ಲಿನ ವಿದೇಶಾಂಗ ಮಂತ್ರಿ ರುಸ್ಲಾಂ ಅಬ್ದುಲ್ ಗನಿಯವರ ಮೇಲೆ ಮೊಕದ್ದಮೆ ಹೂಡಲಾಗುತ್ತಿದೆ

ಇಂಡೋನೇಷ್ಯಾ ಸರ್ಕಾರದವರು, ದಂಗೆಯೆದ್ದಿರುವ ಉತ್ತರ ಸುಮಾತ್ರಾ ಪ್ರಾಂತದ ದಂಡನಾಯಕ ಕರ್ನಲ್ ಸಿಂಬೋಲೋನರವರನ್ನು ವಜಾ ಮಾಡಿರುತ್ತಾರೆ

ನ್ನಪಟ್ಟಣದಲ್ಲಿ ಕೇಂದ್ರ ರೇಷ್ಮೆ ಶಿಕ್ಷಣ ಶಾಲೆ

ಚನ್ನಪಟ್ಟಣದಲ್ಲಿ ಅಖಿಲ ಭಾರತ ರೇಷ್ಮೆ ತರಬೇತಿ ಶಿಕ್ಷಣ ಶಾಲೆಯನ್ನು ಸ್ಥಾಪಿಸಲು ಕೇಂದ್ರ ರೇಷ್ಮೆ ಬೋರ್ಡಿನ ಸ್ಥಾಯೀ ಸಮಿತಿಯವರು ನಿರ್ಧರಿಸಿರುತ್ತಾರೆ. ಪ್ರಾಂತಗಳಲ್ಲಿ ರೇಷ್ಮೆ ಹುಳುಗಳ ಕಾವಲು ಕೇಂದ್ರಗಳ ನಿರ್ಮಿಸಲಾಗುವುದು ಮೈಸೂರು, ಪಶ್ಚಿಮ ಬಂಗಾಳ, ಮದ್ರಾಸು, ಬೊಂಬಾಯಿ ಮತ್ತು ಬಿಹಾರ್‌ಗಳಲ್ಲಿ ರೇಷ್ಮೆ ಕೈಗಾರಿಕೆಯನ್ನು ಮಗೊಳಿಸಲು ೨,೧೫,೫೦೦ ರೂ. ಗ್ರಾಂಟು ಮತ್ತು ೬೦ ಸಾವಿರ ರೂ. ಸಾಲವನ್ನು ಮಂಜೂರು ಮಾಡಲಾಗಿದೆ.

ಳೂರು ರೇಡಿಯೋ ಶಾಲಾ ಕಾರ್ಯಕ್ರಮ

ಳಿಗ್ಗೆ ೭-೫ ವಾರ್ತಾ ಮತ್ತು ಪದ್ಯ-ಕೀರ್ತನ ೭ ೩೦ ಗಾನ ವಿಹಾರ ೮-೧೫ ಉದಯ ಸಂಗೀತ ಮಧ್ಯಾಹ್ನ ೧೨ ಎ. ಪಿ. ಸಿದ್ಧ ಗೋಕಲು ೧೨ ೩೦ ಗಾನ ಮಂಜರಿ. ವನಿತಾ ವಿಹಾರ ೧-೫೦ ಮುಖ ೬-೧೫ ಸಂಗೀತ ಕಛೇರಿ ಸಂಜೆ ೫-೩೦ ರಾಮಚಂದ್ರರಾವ್-ಸಂಗೀತ. ೬-೫ ಮು ಸಂಗೀತ ೬-೩೦ ಎಸ್ ವಾರ್ತೆ- ವಾಚನ ೮ ಪರ ಲೋಕದಲ್ಲಿ ಭಾರತ ೮-೩೦ ಸಿತಾರ್ ೮-೪೦ ದೇಶ ೯ ೧೫ ಕ್ರಿಸ್ಮಸ್ ಸಂಗೀತ ೯ ೩೦ ಮದನಮೋಹನ ಮಾಳವೀಯ-ಜಾತ ಸಂಗೀತೋತ್ಸವ ಮದ್ರಾಸು ೧೦

ಸಂಸ್ಥಾನದ ನೌಕರರಿಗೆಲ್ಲಾ ಒಂದೇ ಮಟ್ಟದ ಸಂಬಳ

ವಿಧಾನ ಪರಿಷತ್ತಿನಲ್ಲಿ ವಿದ್ಯಾ ಮಂತ್ರಿಗಳ ಸೂಚನೆ

ಬೆಂಗಳೂರು ೨೪

ವಿಧಾನ ಪರಿಷತ್ತಿನಲ್ಲಿ ಮೊನ್ನೆ ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡುತ್ತ, ಸಂಸ್ಥಾನದ ಸರ್ಕಾರಿ ನೌಕರರಿಗೆ ಒಂದೇ ಮಟ್ಟದ ಸಂಬಳವನ್ನೇರ್ಪಡಿಸಲು ಸರ್ಕಾರದವರು ಒಂದು ಯೋಜನೆಯನ್ನು ಸಿದ್ಧಗೊಳಿಸುವರೆಂದು ತಿಳಿಸಿದರು ಕೇಂದ್ರ ಅಥವಾ ಬೊಂಬಾಯಿ ಮಟ್ಟದ ಸಂಬಳವನ್ನು ಕೊಡಲು ಸಾಧ್ಯವಾಗುವುದಿಲ್ಲವೆಂದು ಅವರು ಅಭಿಪ್ರಾಯಪಟ್ಟರು ನೂತನ ಸಂಸ್ಥಾನದ ಹಣಕಾಸಿನ ಸ್ಥಿತಿಯು ಬಿಗಿಯಾಗಿರುವುದೆಂದು ಅವರು ತಿಳಿಸಿದರು

ಒಂದೇ ಮಟ್ಟದ ಸಂಬಳದ ಪ್ರಶ್ನೆಯಲ್ಲಿ ಹಲವು ತೊಂದರೆಗಳಿವೆ, ಕೇಂದ್ರದಿಂದ ಎಲ್ಲ ನೆರವು ಸಿಗುವುದಿಲ್ಲ, ಹೊಸ ತೆರಿಗೆ ಹಾಕಲು ಜನರು ಒಪ್ಪುವುದಿಲ್ಲ, ಸರ್ಕಾರದವರು ತಮ್ಮ ವೆಚ್ಚವನ್ನು ಕಡಿಮೆ ಮಾಡಿಕೊಳ್ಳುವುದು ಅಗತ್ಯ ಅದರಿಂದ ಎನ್ ಜಿ. ಓ ಗಳು ಮುಂದೆಯೂ ತೊಂದರೆಗೀಡಾಗಬೇಕೆಂಬ ಅರ್ಥವಲ್ಲ ಎಂದು ಅವರು ಸೂಚಿಸಿದರು

ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರಾಗಿ ಶ್ರೀ ಹೆಚ್ ಕೆ. ಕುಮಾರಸ್ವಾಮಿ

ಬೆಂಗಳೂರಿನಲ್ಲಿರುವ ಸಂಸ್ಥಾನದ ಅಪೆಕ್ಸ್ ಬ್ಯಾಂಕಿನ ಖಾಲಿಯಾದ ಉಪಾಧ್ಯಕ್ಷ ಸ್ಥಾನಕ್ಕೆ ಅರುಣ ಪತ್ರಿಕೆಯ ಸಂಪಾದಕರೂ, ಸಂಸ್ಥಾನದ ಮಾರ್ಕೆಟಿಂಗ್ ಕೋ ಆಪರೇಟಿವ್ ಸೊಸೈಟಿಯ ಅಧ್ಯಕ್ಷರೂ ಆದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರು ಸರ್ವಾನುಮತದಿಂದ ಚುನಾಯಿತರಾಗಿರುತ್ತಾರೆ

ಮಹಿಳೆಯ ಮೇಲೆ ದುರಾತ್ಮರ ಧಾಳಿ

ಕಾಂತಿಗ್ರಾಮದ ಬಳಿ ಇರುವ ದೇವೀಹಳ್ಳಿಯ ಶ್ರೀ ಲಕ್ಕೇಗೌಡರ ಪತ್ನಿ ಬ್ಯಾವಮ್ಮ ಎಂಬ ೩೫ ವರ್ಷದ ಮಹಿಳೆಯು ತಮ್ಮ ತೌರೂರಿಗೆ ಹೋಗುತ್ತಿದ್ದಾಗ ದಾರಿಯಲ್ಲಿ ಯಾರೋ ಆಕೆಯನ್ನು ತೀವ್ರವಾಗಿ ಗಾಯಗೊಳಿಸಿ ಹೊಲವೊಂದರಲ್ಲಿ ಬಿಸಾಡಿದ್ದರೆಂದೂ, ಆಕೆಯು ಚೇತರಿಕೆಯಾಗಿ ಅಳುತ್ತಾ ಬಿದ್ದಿದ್ದುದನ್ನು ಮೂರು ದಿನಗಳ ನಂತರ ದನ ಮೇಯಿಸುವವರು ಕಂಡರೆಂದೂ ಕಾಂತಿಗ್ರಾಮದ ಪೋಲೀಸರು ಆಕೆಯನ್ನು ಹಾಸನದ ಆಸ್ಪತ್ರೆಗೆ ಸೇರಿಸಿರುವುದಾಗಿಯೂ ವರದಿಯಾಗಿದೆ

ಗವರ್ನರ್‌ಗಿರಿ ರಬ್ಬರ್ ಸಹಿಯಂತೆ

ಗವರ್ನರ್‌ಗಿರಿಯನ್ನು ಮಧ್ಯ ಪ್ರದೇಶದ ಗವರ್ನರ್ ಡಾ|| ಪಟ್ಟಾಭಿ ಸೀತಾರಾಮಯ್ಯನವರು ರಬ್ಬರ್ ಸಹಿಗೆ ಹೋಲಿಸಿದ್ದಾರೆ ಮಂತ್ರಿಗಳಂತೆ ಗವರ್ನರರು ಸ್ವತಂತ್ರವಾಗಿ ಸಂಚರಿಸುವಂತಿಲ್ಲವೆಂದು ಅವರು ತಿಳಿಸಿ, ತಮ್ಮ ಸ್ವಂತ ಸಂಸ್ಥಾನವಾದ ಆಂಧ್ರಕ್ಕೆ ಆಗಾಗ್ಗೆ ಭೇಟಿ ಕೊಡಲು ಸಾಧ್ಯವಾಗಿಲ್ಲವೆಂದು ನುಡಿದಿದ್ದಾರೆ.

ಕಾಂಗ್ರೆಸ್ ಉಮೇದುವಾರರ ಆಯ್ಕೆ

ಬೆಂಗಳೂರು ೨೪

ಪಾರ್ಲಿಮೆಂಟ್ ಮತ್ತು ಸಂಸ್ಥಾನ ಶಾಸನ ಸಭೆಯ ಸ್ಥಾನಗಳಿಗೆ ಕಾಂಗ್ರೆಸ್ ಉಮೇದುವಾರರನ್ನು ಆರಿಸುವ ಸಂಬಂಧದಲ್ಲಿ ಮೊನ್ನೆ ರಾತ್ರಿ ಪ್ರಾದೇಶಿಕ ಚುನಾವಣಾ ಸಮಿತಿಯು ಸ್ಪರ್ಧಿಗಳ ಪಟ್ಟಿಯನ್ನು ಅಖೈರಾಗಿ ಸಿದ್ಧಗೊಳಿಸಿತು ಕೇಂದ್ರ ಕಾಂಗ್ರೆಸ್ ಸಮಿತಿಯವರು ನೇಮಿಸಿರುವ ಪ್ರದೇಶ ಚುನಾವಣಾ ಸಹಾಯಕ ಸದಸ್ಯರುಗಳಾದ ಶ್ರೀಮನ್ನಾರಾಯಣ, ದೇವೇಶ್ವರ ಶರ್ಮ ಮತ್ತು ಶ್ರೀಮತಿ ಮರಕತಂ ಚಂದ್ರಶೇಖರರವರಲ್ಲದೆ ಶ್ರೀಗಳಾದ ಎಸ್. ನಿಜಲಿಂಗಪ್ಪ, ಟಿ ಸುಬ್ರಹ್ಮಣ್ಯ ಕೆ ಸಿ ರೆಡ್ಡಿ ಮತ್ತು ಎಂ ವಿ ಕೃಷ್ಣಪ್ಪನವರೂ ಭಾಗವಹಿಸಿದ್ದರು ಪಟ್ಟಿಯ ವಿವರಗಳು ರಹಸ್ಯವಾಗಿವೆ

ಕೇಂದ್ರ ಮಂತ್ರಿ ಶ್ರೀ ಕೆ ಸಿ ರೆಡ್ಡಿ ಮತ್ತು ಎಂ ವಿ ಕೃಷ್ಣಪ್ಪನವರು ಕೋಲಾರ ಮತ್ತು ತುಮಕೂರು ಜಿಲ್ಲೆಗಳಿಂದ ಲೋಕ ಸಭೆಗೆ ಸ್ಪರ್ಧಿಸುವರೆಂದು ಹೇಳಲಾಗಿದೆ. ಮೂರನೇ ಒಂದು ಭಾಗದಷ್ಟು ಹೊಸಬರನ್ನು ತೆಗೆದುಕೊಳ್ಳಲಾಗಿದೆಯೆಂದೂ ತಿಳಿದುಬಂದಿದೆ

ಚೀಣ, ಭಾರತ ಮತ್ತು ಪಾಕಿಸ್ತಾನಗಳಿಗೆ ಸಂಧಾನ ?

ಕಾಶ್ಮೀರದ ಪ್ರಶ್ನೆ ಬಗ್ಗೆ ಭಾರತ ಮತ್ತು ಪಾಕಿಸ್ತಾನಗಳಿಗೆ ಹೊಸ ಮಾತುಕತೆಗಳು ನಡೆಯಬೇಕೆಂದು ಪಾಕಿಸ್ತಾನವು ಆಶಿಸುತ್ತಿರುವುದಾಗಿಯೂ, ಈ ಮಾತುಕತೆಗಳಲ್ಲಿ ಚೀಣವು ಮಧ್ಯಸ್ಥಿಕೆ ವಹಿಸುವಂತೆ ಪಾಕಿಸ್ತಾನವು ಕೇಳಬಹುದೆಂದೂ ಲಂಡನ್ನಿನ ಅಬ್ಸರ್ವರ್ ಪತ್ರಿಕೆಯು ತಿಳಿಸುತ್ತದೆ

ಸಿರಿಯಾ ಸರ್ಕಾರದ ರಾಜೀನಾಮೆ

ಸಿರಿಯದ ಪ್ರಧಾನ ಮಂತ್ರಿ ಸಾಬ್ರಿ ಎಲ್ ಅಸ್ಸಾಲಿಯವರು ತಮ್ಮ ಸರ್ಕಾರದ ರಾಜೀನಾಮೆಯನ್ನು ಅಲ್ಲಿನ ಅಧ್ಯಕ್ಷ ಕುವೇಟ್ಲಿಯವರಿಗೆ ಒಪ್ಪಿಸಿದ್ದಾರೆ

ಬೊಂಬಾಯಿ ಮಟ್ಟದ ಸಂಬಳಕ್ಕಾಗಿ ತಾಲ್ಲೂಕು ಎನ್.ಜಿ.ಓ.ಗಳ ಒತ್ತಾಯ

ಮೈಸೂರು ತಾಲ್ಲೂಕು ಎನ್ ಜಿ ಓ ಗಳ ಸಂಘದ ಸಭೆಯು ಮೊನ್ನೆ ತಹಸೀಲ್ದಾರ್ ಶ್ರೀ ಎಂ. ವಿ ಭಟ್ಟಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆದು, ಸಂಸ್ಥಾನದ ಎಲ್ಲಾ ನಾನ್ ಗೆಜೆಟೆಡ್ ನೌಕರರಿಗೂ ಬೊಂಬಾಯಿ ಮಟ್ಟದ ಸಂಬಳ ಮತ್ತು ಕೇಂದ್ರ ಸರ್ಕಾರದ ತುಟ್ಟಿಭತ್ಯವನ್ನು ಕಳೆದ ನವೆಂಬರ್ ೧ರಿಂದ ಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಮಾಡಿತು ಬೆಂಗಳೂರಿನಲ್ಲಿ ನಾಳೆ ಸೇರುವ ಎನ್. ಜಿ. ಓ ಗಳ ಸಂಸ್ಥಾನ ಸಮ್ಮೇಳನಕ್ಕೆ ಶ್ರೀಗಳಾದ ಟಿ ಆರ್ ಶೇಷ ಅಯ್ಯಂಗಾರ್, ಎಂ ಆರ್ ಪುಟ್ಟರಂಗಯ್ಯ ಮತ್ತು ಹೆಚ್ ಎಸ್ ರಾಮಸ್ವಾಮಿಯವರನ್ನು ಪ್ರತಿನಿಧಿಗಳಾಗಿ ಚುನಾಯಿಸಲಾಯಿತು

ನೇರಳೆ ಮಾದಯ್ಯ ವಿಧಾನ ಸಭಾ ಉಪಾಧ್ಯಕ್ಷರು

ಸ್ವಂ ಸು ಸಂಕಿ] ಬೆಂಗಳೂರು ೨೪

ನೇರಳೆ ಶ್ರೀ ಎಂ ಮಾದಯ್ಯನವರು ಈ ದಿನ ವಿಧಾನ ಸಭೆಯ ಉಪಾಧ್ಯಕ್ಷರಾಗಿ ಚುನಾಯಿತರಾದರು ವಿರೋಧ ಪಕ್ಷದ ಪರವಾಗಿ ಸ್ಪರ್ಧಿಸಿದ್ದ ಶ್ರೀ ಎಂ ಚಿಕ್ಕಲಿಂಗಯ್ಯನವರು ತಮ್ಮ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡರು

ಜಿಲ್ಲೆಗಳ ಪುನರ್ವಿಂಗಡನೆ ವಿಷಯ ಪರಿಶೀಲನೆಯಲ್ಲಿ

ಸಂಸ್ಥಾನದ ಜಿಲ್ಲೆಗಳ ಪುನರ್ವಿಂಗಡನೆ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ

○ ಹುಬ್ಬಳ್ಳಿಯಲ್ಲಿ ಮೆಡಿಕಲ್ ಕಾಲೇಜನ್ನು ೧ ಕೋಟಿ ೩೦ ಲಕ್ಷ ರೂ. ವೆಚ್ಚದಲ್ಲಿ ಆದಷ್ಟು ಬೇಗನೆ ನಿರ್ಮಿಸಲಾಗುವುದೆಂದು ಶ್ರೀ ನಿಜಲಿಂಗಪ್ಪನವರು ವಿಧಾನ ಸಭೆಯಲ್ಲಿ ಈ ದಿನ ಪ್ರಶ್ನೆಯೊಂದಕ್ಕೆ ಉತ್ತರವಿತ್ತರು

೧೦೦ ರೂ. ಗಿಂತ ಕಡಿಮೆ ಇರುವವರಿಗೆ ೧೫ ರೂ. ಹೆಚ್ಚು ಸಂಬಳ

ಕಡಿಮೆ ಸಂಬಳ ಬರುವವರಿಗೆ ಕನಿಷ್ಠ ಪಕ್ಷ ೧೦೦ ರೂ ಆದರೂ ದೊರೆಯಬೇಕೆಂದೂ, ಅದಕ್ಕಿಂತ ಕಡಿಮೆ ಬರುವವರಿಗೆ ತಲಾ ೧೫ ರೂ ಅನ್ನು ಹೆಚ್ಚಿಸಬೇಕಾದರೆ ಎಲ್ಲಾ ಸಂಸ್ಥಾನಗಳಲ್ಲೂ ಒಟ್ಟು ಸೇರಿ ೨.೨ ಕೋಟಿ ರೂ ಹೆಚ್ಚು ವೆಚ್ಚವಾಗುವುದೆಂದೂ, ಈ ಸಂಬಂಧವಾಗಿ ಕೇಂದ್ರದವರೂ ಸಹಾಯ ನೀಡುವರೆಂದೂ ಕೇಂದ್ರ ಹಣಕಾಸಿನ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ

ಪೌರಸಭಾಧ್ಯಕ್ಷರಾಗಿ ಸಂಜೀವಯ್ಯನವರ ಆಯ್ಕೆ

ಮೈಸೂರು ೨೪

ಈ ದಿನ ಮಧ್ಯಾಹ್ನ ನಗರದ ಪೌರಸಭೆಯ ಅಧ್ಯಕ್ಷ ಚುನಾವಣೆಯು ನಡೆದು ಕಾಂಗ್ರೆಸ್ ಪಕ್ಷದ ಉಮೇದುವಾರರಾದ ಶ್ರೀ ಎಸ್ ಸಂಜೀವಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟರು ಇವರಿಗೆ ೨೬ ಓಟುಗಳೂ, ಇವರ ಪ್ರತಿಸ್ಪರ್ಧಿ ಪ್ರಜಾ ಸಂಯುಕ್ತ ರಂಗದ ಉಮೇದುವಾರರಾದ ಶ್ರೀ ಶ್ರೀಕಂಠಶರ್ಮರವರಿಗೆ ೧೫ ಓಟುಗಳೂ ಬಂದುವು.

ಕಾಲೇಜು ಭೌತ ವಿಜ್ಞಾನ ಸಂಘ

ನಗರದ ಯುವರಾಜರ ಕಾಲೇಜಿನ ಭೌತ ವಿಜ್ಞಾನ ಸಂಘದ ಆಶ್ರಯದಲ್ಲಿ ಕಳೆದ ಸೋಮವಾರದಿಂದ ಭಾಷಣ ಸ್ಪರ್ಧೆಗಳನ್ನೇರ್ಪಡಿಸಲಾಗಿತ್ತು ಅನೇಕರು ಭಾಗವಹಿಸಿದ್ದರು ಇದೇ ಸ್ಪರ್ಧೆ ಜನವರಿ ತಿಂಗಳಲ್ಲಿ ಮುಂದುವರಿಯಲಿದೆ. ಕಳೆದ ೨೦ನೇ ತಾರೀಕು, ಪ್ರಿ ಟಿ ಫ್ ಭೌತ ವಿಜ್ಞಾನ ಸಂಘದ ಸದಸ್ಯರಾದ ಶ್ರೀ ಎಸ್ ಕೆ ಕುಮಾರ್ ಇವರಿಂದ "ರಾಕೆಟ್ಟು"ಗಳ ಮೇಲೆ ಭಾಷಣಗಳನ್ನೇರ್ಪಡಿಸಲಾಗಿತ್ತು ಗಣಿತ ಶಾಸ್ತ್ರದ ಪ್ರಾಧ್ಯಾಪಕರೂ, ರಾಗೂ ಸಂಘದ ಅಧ್ಯಕ್ಷರೂ ಆದ ಶ್ರೀ ಎಂ ಟಿ ರಾಮಸ್ವಾಮಿ ಅಯ್ಯಂಗಾರ್ಯರು ಪರಿಚಯ ಭಾಷಣ ಮಾಡಿದರು ಸಂಘದ ಕಾರ್ಯದರ್ಶಿ ಶ್ರೀ ಎ ಎಚ್ ರಾಮಚಂದ್ರರವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು

ಪೌರಸಭಾಧಿವೇಶನ

ವಿವಿಧ ಸಮಿತಿಗಳಿಗೆ ಚುನಾವಣೆ

ಮೈಸೂರು ೨೪

ನಗರದ ಪೌರಸಭಾಧಿವೇಶನವು ನೆನ್ನೆ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು

ಶ್ರೀ ಎಂ ಎ ತಿಮ್ಮಯ್ಯನವರು ಮಾತನಾಡಿ, ಡಿಸೆಂಬರ್ ತಿಂಗಳು ಮುಗಿಯುತ್ತಬಂದಿದರೂ ಇನ್ನೂ ಆಡಳಿತದ ವರದಿಯನ್ನು ಸಭೆ ಮುಂದೆ ತರದಿರುವುದನ್ನು ಆಕ್ಷೇಪಿಸಿದರು ಪ್ರತಿ ವರ್ಷವೂ ಅಕ್ಟೋಬರ್ ಅಥವಾ ನವೆಂಬರಿನಲ್ಲಿ ಅದನ್ನು ಮಂಡಿಸಲಾಗುತ್ತಿತ್ತೆಂದು ಅವರು ಹೇಳಿ ಈ ವರ್ಷ ಕರ್ತವ್ಯಲೋಪವಾಗಿರುವುದೆಂದು ತಿಳಿಸಿದರು

ವಿದ್ಯುಚ್ಛಕ್ತಿ ಮಗ್ಗಗಳ ಕಾರ್ಖಾನೆಗಳನ್ನು ನಗರದಿಂದ ಹೊರಗಡೆ ಸಾಗಿಸಬೇಕೆಂದು ಪೌರಸಭೆಯವರು ಕೊಟ್ಟಿರುವ ಸೂಚನೆಯಿಂದ ತುಂಬಾ ತೊಂದರೆಯಾಗಿರುವುದೆಂದೂ ಅನೇಕ ಕೈಗಾರಿಕೋದ್ಯಮಿಗಳು ಒಂದು ಅಥವಾ ಎರಡು ಮಗ್ಗಗಳನ್ನು ಇಟ್ಟುಕೊಂಡಿರುವರೆಂದೂ ಉಳಿದವರು ತಮ್ಮ ಮಗ್ಗಗಳ ಸಂಖ್ಯೆಯನ್ನು ಕಡಿಮೆ ಮಾಡಿಕೊಂಡಿರುವರೆಂದೂ ಪೌರಸಭೆಯವರ ಸೂಚನೆಯಿಂದ ಅವರುಗಳಿಗೆ ಕಷ್ಟನಷ್ಟಗಳಾಗುವುವೆಂದೂ ಶ್ರೀ ಎಸ್ ಗೋವಿಂದಯ್ಯನವರು ತಿಳಿಸಿದರು

ಶ್ರೀ ಬಿ ಜಿ ದಾಸರು ಮಾತನಾಡಿ, ಮಾರ್ಕೆಟ್ಟುಗಳ ಬಳಿ ವಾಸಿಸುವ ಕುಷ್ಠರೋಗಿಗಳನ್ನು ಕುಷ್ಠರೋಗದ ಕೇಂದ್ರಕ್ಕೆ ರವಾನಿಸಲು ವ್ಯವಸ್ಥೆ ಮಾಡಲು ಸಲಹೆ ಮಾಡಿದರು

ಶ್ರೀ ಟಿ ಕೆ ಶೆಟ್ಟಯ್ಯನವರು ಮಾತನಾಡಿ, ಮದ್ರಾಸಿನ ಮುಖ್ಯಮಂತ್ರಿ ಶ್ರೀ ಕಾಮರಾಜ ನಾಡಾರರಿಗೆ ಕೊಟ್ಟ ಪೌರಸಭಾ ಆತಿಥ್ಯದ ಬಗ್ಗೆ [illegible] ತೆಗೆದುಕೊಳ್ಳದಿದ್ದುದರ [illegible] ವಿಚಾರಿಸಿದರು

ಅಧ್ಯಕ್ಷರು ಉತ್ತರ [illegible] ಮಾತನಾಡಿ ಶ್ರೀ ಕಾಮರಾಜ ನಾಡಾರರಿಗೆ ಸ್ವಾಗತವನ್ನು ಏರ್ಪಡಿಸಿದ ಬಗ್ಗೆ ಅಧ್ಯಕ್ಷರ ಸಂಪ್ರದಾಯ ಭತ್ಯದಿಂದ ವೆಚ್ಚ ಮಾಡಲಾಯಿತೆಂದು ತಿಳಿಸಿದರು ಕುಷ್ಠರೋಗಿಗಳ ಸಮಸ್ಯೆಯು ಗಮನಾರ್ಹವಾದುದೆಂದೂ, ಅದನ್ನು ಯಾವ ರೀತಿ ಬಗೆಹರಿಸಬೇಕೆಂಬುವನ್ನು ಶೀಘ್ರವಾಗಿ ಯೋಚಿಸಬೇಕಾಗಿದೆಯೆಂದೂ ಅಧ್ಯಕ್ಷರು ನುಡಿದರು

ಸ್ಟೇಡಿಯಂ ವಿಚಾರವನ್ನು ಕುರಿತು ದೊಡ್ಡಕೆರೆ ಮೈದಾನದಲ್ಲಿ ಅದನ್ನು ನಿರ್ಮಿಸಬೇಕೆಂದು ಯೋಜಿಸಲಾಗಿದೆಯೆಂದೂ, ಅಲ್ಲಿ ಒಂದು ಭಾಗವನ್ನು ಫುಟ್‌ಬಾಲ್ ಸಂಸ್ಥೆಗೆ ಬಿಟ್ಟುಕೊಟ್ಟಿರುವುದರಿಂದ ಆ ಕೆಲಸವು ಸ್ವಲ್ಪ ತಡವಾಗಿದೆಯೆಂದೂ ಅವರು ಹೇಳಿದಾಗ, ಶ್ರೀ ಎಂ ಎ ತಿಮ್ಮಯ್ಯನವರು ಮಧ್ಯೆ ಮಾತನಾಡಿ ಮೈದಾನವನ್ನು ಪೂರ್ತಿಯಾಗಿ ಬಿಟ್ಟುಕೊಡಲಾಗುವುದೆಂದು ಸೂಚಿಸಿದರು ಅದನ್ನು ಕೇಳಿ ಅಧ್ಯಕ್ಷರು ಸಂತೋಷವನ್ನು ವ್ಯಕ್ತಪಡಿಸಿದರು

ಮಾರ್ಕೆಟ್ಟುಗಳಲ್ಲಿ ಸಬ್‌ಲೆಟ್ ಮಾಡುವುದು ವಿಪರೀತವಾಗಿರುವುದೆಂದೂ, ಅದನ್ನು ತಡೆಗಟ್ಟಬೇಕೆಂದೂ ಸದಸ್ಯರು ಸೂಚಿಸಿದರು ಶ್ರೀ ಶ್ರೀಕಂಠಶರ್ಮರವರು ಬೇಕರಿ ಮತ್ತು ಬ್ರೆಡ್ ಅಂಗಡಿಗಳಿಗೆ ರಹದಾರಿ ಕೊಡುವ ವಿಧಾನದ ವಿಚಾರವನ್ನು ಪ್ರಸ್ತಾಪಿಸಿ, ಇತರ ಅಂಗಡಿಗಳಲ್ಲಿ ಬ್ರೆಡ್ ಬಿಸ್ಕತ್ತು ಮುಂತಾದುವನ್ನೂ ಮಾರುವವರಿಗೂ, ಈ ಪದಾರ್ಥವನ್ನೇ ಮಾಡುವವರಿಗೂ ಇರುವ ಅಂತರವನ್ನು ಸಭೆಯ ಗಮನಕ್ಕೆ ತಂದರು ಅಧ್ಯಕ್ಷರು ಈ ವಿಷಯವನ್ನು ಪರಿಶೀಲಿಸಲಾಗುವುದೆಂದು ಹೇಳಿದರು

ನಂತರ ಸಭೆಯು ವಿವಿಧ ಸಮಿತಿಗಳಿಗೆ ಕೆಳಗೆ ಕಂಡಂತೆ ಆಯ್ಕೆಯು ನಡೆಯಿತು ವಿರೋಧ ಪಕ್ಷದ ಪೈಕಿ ಹಾಜರಿದ್ದ ಸದಸ್ಯರಲ್ಲಿ ಹಲವರ ಹೆಸರನ್ನು ಸೂಚಿಸಲಾಗಿ ಅವರುಗಳು ತಾವು ಸೇರುವುದಿಲ್ಲವೆಂದು ತಿಳಿಸಿದರು

ಆಡಳಿತ ಸಮಿತಿ —ಶ್ರೀಗಳು ಎಸ್ ಲಿಂಗಣ್ಣ, ಜೋಗಿಸಿದ್ದಯ್ಯ, ಅಫಸರ್ ಉದ್ದೀನ್ ಖುರೇಷಿ, ಎ ಕೃಷ್ಣಮೂರ್ತಿರಾವ್, ಎಂ ವೆಂಕಟಲಿಂಗಯ್ಯ, ಕೆ ಕರಿಯಣ್ಣ, ಯಾಕೂಬ್ ಖಾನ್ ಮತ್ತು ಆರ್ ಸೀತಾರಾಮ್

ವರ್ಕ್ಸ್ ಸಮಿತಿ —ಶ್ರೀಗಳು ಜಿ ಆರ್ ರಂಗಸ್ವಾಮಯ್ಯ, ಡಿ ಲಿಂಗಯ್ಯ, ಬಿ ಎ ಕೆಂಗೇಗೌಡ ಮತ್ತು ಟಿ. ನರಸಿಂಹಯ್ಯಂಗಾರ್

ಆರೋಗ್ಯ ಸಮಿತಿ —ಶ್ರೀಗಳು ಚೌಡಯ್ಯ, ಶೆಟ್ಟಿನೊ, ಡಾ|| ಬಿ ಜಿ ದಾಸ್ ಮತ್ತು ಕೆಂಪೇಗೌಡ

ಟೌನ್‌ಹಾಲ್ ಸಮಿತಿ —ಶ್ರೀಗಳು ಎ ಶ್ರೀನಿವಾಸನ್, ಫಾದರ್ ಆಡಿಯೊ, ಕೆ ಸಿದ್ದಯ್ಯ ಮತ್ತು ಎಂ ಕೆ ಲಿಂಗಯ್ಯ

ಆಡಿಟ್ ಸಮಿತಿ —ಶ್ರೀಗಳು ವೆಂಕಟಲಿಂಗಯ್ಯ, ಜಿ ಎಸ್ ರಾಮಕೃಷ್ಣಯ್ಯ ಮತ್ತು ಕ್ಯಾಸ್ಪರ್ ಬಾಡರ್

ಲೀಗಲ್ ಸಮಿತಿ.—ಶ್ರೀಗಳು ಟಿ ನರಸಿಂಹಯ್ಯಂಗಾರ್ (ಅಧ್ಯಕ್ಷರು), ಶ್ರೀಕಂಠಶರ್ಮ, ಬಿ ಎ ಕೆಂಗೇಗೌಡ

ಪ್ರಾವಿಡೆಂಟ್ ಫಂಡ್ ಸಮಿತಿ —ಶ್ರೀಗಳು ಚೌಡಯ್ಯ, ಹೆಚ್ ಕೆಂಪೇಗೌಡ, ಡಾ ಬಿ ಜಿ ದಾಸ್

ನಂತರ ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು ಜಲಪುರಿಗೆ ಶಿವಯೋಗಿಪುರ ಎಂದು ನಾಮಕರಣ ಮಾಡಬೇಕೆಂಬ ವಿಷಯವನ್ನು ಆಡಳಿತ ಸಮಿತಿಗೆ ಒಪ್ಪಿಸಲಾಯಿತು ಶ್ರೀ [illegible] ನೂರ್ ಹುಸೇನರು ವಿರೋಧಿಸಿ ಜಾತ್ಯತೀತ ರಾಜ್ಯದಲ್ಲಿ ಜಾತಿಗೆ ಬೆಂಬಲವಿರುವ ಹೆಸರುಗಳನ್ನು ಇಡಬಾರದೆಂದು ತಿಳಿಸಿದರು

A Provision Shop situated in a good locality on Vanivilas Road is open for immediate occupation with stocks and good-will Owner going out of City

Contact —

M A SRINIVASA IYENGAR,
1045 Nanjaraj Agrahar,
MYSORE

Edited, Printed and Published by A R Nagarajan at Sadhvi Press, D Subbiah Road, Mysore

ಮುಖ್ಯೋಪಾಧ್ಯಾಯರಿಗೆ ಸನ್ಮಾನ

ನಂಜನಗೂಡು ೨೨

ಇಲ್ಲಿನ ಪ್ರೌಢಶಾಲಾ ಸಂಘದ ದಿನಾಚರಣೆಯು ೧೭ನೇ ತಾರೀಕು, ಡಿ ಡಿ ಪಿ ಐ ಯವರಾದ ಶ್ರೀ ಟಿ ವಾಸುದೇವಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು ಮುಖ್ಯೋಪಾಧ್ಯಾಯರಾಗಿ ನಿವೃತ್ತರಾಗುವ ಶ್ರೀ ಸಿ ಕೆ ಲಕ್ಷ್ಮೀನಾರಾಯಣರವರಿಗೆ ಸನ್ಮಾನ ಪತ್ರವನ್ನು ಅರ್ಪಿಸಲಾಯಿತು ಮೈಸೂರಿನ ಶ್ರೀ ಎಸ್ ಎ ಸ್ವಾಮಿಯವರು ಭಾಷಣ ಮಾಡಿ ವಿದ್ಯಾರ್ಥಿಗಳು ಚಿಕ್ಕಂದಿನಿಂದಲೇ ಚಿತ್ರಕಲಾಭ್ಯಾಸ ಮಾಡುವುದು ಒಳ್ಳೆಯದೆಂದು ತಿಳಿಸಿದರು ಮುಖ್ಯೋಪಾಧ್ಯಾಯರು ಉತ್ತರವಿತ್ತು ಊರಿನಲ್ಲಿ ವಿವಿಧೋದ್ದೇಶ ಶಾಲೆಯು ಸ್ಥಾಪಿಸಲ್ಪಡುವಂತೆ ಪುರ ಪ್ರಮುಖರು ಪ್ರಯತ್ನಿಸಬೇಕೆಂದು ತಿಳಿಸಿದರು. ಅಧ್ಯಕ್ಷರು ಭಾಷಣ ಮಾಡಿದನಂತರ ಸಭೆಯು ಮುಕ್ತಾಯವಾಯಿತು

ಧರ್ಮದರ್ಶಿಗಳ ಸಭೆ

ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದ ಧರ್ಮದರ್ಶಿಗಳ ಸಭೆಯು ಕಳೆದ ೧೭ರಂದು ನಡೆದು, ದೇವಸ್ಥಾನದ ದೊಡ್ಡ ತೇರುಗಳನ್ನು ೧,೫೦೦ ರೂ ವೆಚ್ಚದಿಂದ ರಿಪೇರಿ ಮಾಡಿಸಿ ಬಣ್ಣ ಹಾಕಿಸಬೇಕೆಂದೂ, ದೇವಸ್ಥಾನದಲ್ಲಿ ವಿದ್ಯುದ್ದೀಪಗಳ ರಿಪೇರಿಗಾಗಿ ೩,೦೦೦ ರೂ ವೆಚ್ಚ ಮಾಡಬೇಕೆಂದೂ, ಸನ್ನಿಧಿಗಳ ಬಾಗಿಲುಗಳಿಗೆ ಬೆಳ್ಳಿ ಚೌಕಟ್ಟುಗಳನ್ನು ಹಾಕಿಸಬೇಕೆಂದೂ ನಿರ್ಧರಿಸಲಾಯಿತು ಊರಿನ ನದಿ ಸೋಪಾನಘಟ್ಟಗಳನ್ನು ಬೇಗನೆ ಸರ್ಕಾರದವರು ೩೫,೦೦೦ ರೂ ಅಂದಾಜಿನ ವೆಚ್ಚದಲ್ಲಿ ರಿಪೇರಿ ಮಾಡಿಸುವಂತೆ ಪ್ರಾರ್ಥಿಸಲು ನಿರ್ಧರಿಸಲಾಯಿತು

ಸಂಸ್ಥಾನದ ಸಮಾಜ ಕಲ್ಯಾಣ ಸಂಸ್ಥೆಯ ಅಧ್ಯಕ್ಷಿಣಿ ಶ್ರೀಮತಿ ಎಂ ಆರ್ ಲಕ್ಷ್ಮಮ್ಮನವರು ಇಲ್ಲಿಗೆ ಭೇಟಿ ಕೊಟ್ಟು, ಸಂಸ್ಥೆಯ ತಾಲ್ಲೂಕು ಪ್ರತಿನಿಧಿ ಶ್ರೀಮತಿ ಲಲಿತಮ್ಮನವರು ರಾಜೀನಾಮೆಯಿತ್ತ ಕಾರಣ, ಅವರ ಸ್ಥಾನಕ್ಕೆ ಶ್ರೀಮತಿ ಅಮೃತಾಬಾಯಿಯವರನ್ನು ನೇಮಿಸಿರುವರು

ಕಾಗದಪತ್ರಗಳು ಮತ್ತು ಹಣ ಸಿಕ್ಕಿವೆ

ನಾರಾಯಣಶಾಸ್ತ್ರಿ ರಸ್ತೆಯ ಸದ್ವಿದ್ಯಾ ಪಾಠಶಾಲೆ ಬಳಿ ಕಳೆದ ಶನಿವಾರ ಸಂಜೆ ಸ್ವಲ್ಪ ಹಣವನ್ನೊಳಗೊಂಡ ಕೆಲವು ಕಾಗದಪತ್ರಗಳು ಸಿಕ್ಕಿವೆ ಮಾಲಿಕರು ಸರಿಯಾದ ಗುರುತು ಕೊಟ್ಟು, ಸಾಧನಾ ಸಾಹಿತ್ಯ ಮಂದಿರದಲ್ಲಿ ಪಡೆಯಬಹುದು

ಕಾಶಿ ಕರ್ನಾಟಕ ಸಂಘದಲ್ಲಿ
ಚರ್ಚಾ ಮತ್ತು ಸಂಗೀತ ಸ್ಪ

ಸ್ವಂ ಬಾ] ಕಾಶಿ,

ಇಲ್ಲಿನ ಕರ್ನಾಟಕ ಸಂಘದ ೪ ಕ್ರ
ಸಂಘದ ವಾರ್ಷಿಕೋತ್ಸವದ ಅಂಗವಾಗಿ
೧೭ನೇ ತಾರೀಖು ಚರ್ಚಾ ಸ್ಪರ್ಧೆಯೂ, ಸ
ತ ಸ್ಪರ್ಧೆಯೂ ಶ್ರೀ ಚಲ್ಲಂರವರ ಅಧ್ಯಕ್ಷತೆ
ಜರುಗಿದುವು ಚರ್ಚಾ ಸ್ಪರ್ಧೆಯಲ್ಲಿ ಮೈ
ನ ಶ್ರೀ ಟಿ ಸಿ ಶಾಂತರಾಜು ಮತ್ತು ಶ್ರೀ ಗ
ರ್ರವರಿಗೆ ಬಹುಮಾನಗಳು ಬಂದುವು ವಿ
ದ್ಯಾಲಯಗಳ ಆಡಳಿತವು "ವಿದ್ಯಾರ್ಥಿ
ಯುಳ್ಳ ಇರತಕ್ಕದ್ದು" ಎಂಬುದು ಚರ್ಚಾ
ಯವಾಗಿತ್ತು

ಸಂಗೀತ ಸ್ಪರ್ಧೆಯಲ್ಲಿ ಶ್ರೀ ಸೀತಾರಾ
ರಿಗೆ ಪ್ರಥಮ ಮತ್ತು ಶ್ರೀಮತಿ ಪ್ರಮಿ
ರಿಗೆ ದ್ವಿತೀಯ ಬಹುಮಾನಗಳೂ, ಶ್ರೀ ವಿ
ಥ್ರವರಿಗೆ ವಿಶೇಷ ಪುರಸ್ಕಾರವೂ ದೊ

ಮದ್ರಾಸಿನಲ್ಲಿ ತಮಿಳು ಅಧಿ
ಭಾಷೆ

ಮದ್ರಾಸು ಸರ್ಕಾರದ ವ್ಯವಹಾರಕ್ಕಾಗಿ
ಳನ್ನು ಅಧಿಕೃತ ಭಾಷೆಯಾಗಿ ಬಳಸುವ
ಸರ್ಕಾರದವರು ವ್ಯವಸ್ಥೆ ಮಾಡಲಿದ್ದಾರೆ
ಬಗ್ಗೆ ಮಸೂದೆಯೊಂದನ್ನು ತರಲಾಗುವು
ಕ್ರಮಕ್ರಮವಾಗಿ ತಮಿಳನ್ನು ಸರ್ಕಾರದ
ವ್ಯವಹಾರದಲ್ಲಿ ಉಪಯೋಗಿಸಲಾಗುವುದೆಂ
ಅಲ್ಲಿಯವರೆಗೆ ಇಂಗ್ಲೀಷನ್ನು ಬಳಸಲಾಗುವು
ದೂ ಗೊತ್ತಾಗಿದೆ.

ನೀಲಗಿರಿಯಲ್ಲಿ ಕಚ್ಚಾ ಫಿಲ
ಕಾರ್ಖಾನೆ

ನೀಲಗಿರಿಯಲ್ಲಿ ಕಚ್ಚಾ ಫಿಲಂ ತಯಾರಿ
ಗಿ ಪ್ರಾರಂಭಿಕ ವ್ಯವಸ್ಥೆ ಮಾಡಲು ಭಾರ
ಕಾರದ ವಾರ್ತಾ ಇಲಾಖೆಯು ಅಧಿಕಾರಿ
ಎಸ್ ಗೋಪಾಲರವರನ್ನು ವಿಶೇಷ ಅಧಿ
ಯಾಗಿ ನೇಮಿಸಲಾಗಿದೆ ಅದಕ್ಕೆ ೭ ಅಥವಾ
ಕೋಟಿ ರೂ ವೆಚ್ಚವಾಗುವುದೆಂದು ತಿಳಿ
ದಿದೆ

ಪೋರ್ಟ್ ಸೈಯದ್ದಿನಿಂದ
ಅಖೈರಾಗಿ ಬ್ರಿಟಿಷರು ವಾಪ

ಆಂಗ್ಲೋ ಫ್ರೆಂಚ್ ಸೈನಿಕರು ನೆನ್ನೆ ಪ
ತ್ನ ಅಖೈರಾಗಿ ಪೋರ್ಟ್ ಸೈಯದ್ ಬಂದ
ದ ವಾಪಸು ಹೊರಟರು ರೇವಿಗೆ ೬೦೦
ಈಜಿಪ್ಟ್ ಪೋಲೀಸರು ಹೋಗಿರುತ್ತಾರೆ
ಅದು ಅವರ ಹತೋಟಿಯಲ್ಲಿ ಇದೆ

JOTHI ELECTRIC LAUNDRY
NAZARBAD, MYSORE
Central office:—NEW STATUE SQUARE
GRAND REDUCTION IN DRY CLEANING RATES
Woollen Coats Rs 1-8-0 per piece
Woollen Pants Rs 1-0-0 per piece
Silk Sarees Rs 1-8-0 per saree
Real Dry cleaning with American Triplex Dry cleaning Machine
Public Patronage is solicited

RAGOTINE
FINE RAGI MALT - An Ideal Food Beverage
FINE RAGI MALT Contains energising extracts of
WHEAT & MALTED RAGI
FINE CHEMICAL WORKS, MYSORE

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು

ಪ್ರಭುದೇವಾ ಥಿಯೇಟರ್ ✱ ಮುಂದಿನ ಬದಲಾವಣೆ
(ಪದ್ಮಾ ಟಾಕೀಸ್)
ವಿಕ್ರಮ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ
★ ಭಕ್ತ ಮಾರ್ಕಂಡೇಯ ★
ಪಾತ್ರ ನಾಂಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ಮಾಸ್ಟರ್ ಆನಂದ್, ರಘುರಾಮಯ್ಯ, ಬೇಬಿ ಉಮಾ, ಪದ್ಮಿನಿ ಪ್ರಿಯದರ್ಶಿನಿ ನರಸಿಂಹರಾಜು, ಬಾಲಸರಸ್ವತಿ, ಚಿಕ್ಕ ಮಾಧವರಾ

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪ್ರತಿ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಒಂದೂವರೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ ಮೂರು ಕಾಸು

ಸಂಪುಟ : ೧೫] SADHVI : TUESDAY 25—12—1956 ಮೈಸೂರು : ಮಂಗಳವಾರ ೨೫—೧೨—೧೯೫೬ [ಸಂಚಿಕೆ : ೨೮೦

ದೆಹಲಿ ಸೈನ್ಯಾಧಿಕಾರಿಯ ದರೋಡೆ : ೨ ಕೊಲೆ, ಆತ್ಮಹತ್ಯೆ

ಮೈಸೂರಿನಿಂದ ಆಯುರ್ವೇದ ಕಾಲೇಜಿನ ವರ್ಗಾವಣೆ ಇಲ್ಲ

ವಿಧಾನ ಪರಿಷತ್ತಿನಲ್ಲಿ ಆರೋಗ್ಯ ಮಂತ್ರಿಗಳ ಸ್ಪಷ್ಟ ಹೇಳಿಕೆ

ಬೆಂಗಳೂರು ೨೪

ವಿಧಾನ ಪರಿಷತ್ತಿನಲ್ಲಿ ನೆನ್ನೆ ಶ್ರೀ ಪಿ. ಸೀತಾ ಮಯ್ಯನವರ ಪ್ರಶ್ನೆಗೆ ಆರೋಗ್ಯ ಮಂತ್ರಿ ಶ್ರೀ ಬಿ. ಶೆಟ್ಟಿಯವರು ಉತ್ತರವಿತ್ತು, ಆಯು ೇದ ಕಾಲೇಜನ್ನು ಮೈಸೂರಿನಿಂದ ಇಲ್ಲಿಗೆ ವ ಯಿಸುವ ಪ್ರಶ್ನೆಯನ್ನು ಅನ್ಯರಾಗಿ ಕೈಬಿಡ ಗಿದೆಯೆಂದು ತಿಳಿಸಿದರು ಮೈಸೂರಿನ ಪ್ರಜೆ ು ಕಾಲೇಜನ್ನು ವರ್ಗಾಯಿಸಕೂಡದೆಂದು ಬಲವಾಗಿ ಒತ್ತಾಯ ಮಾಡಿದ್ದರೆಂದು ಅವರು ಸಿದರು

ಕಾಲೇಜಿನ ಆಡಳಿತವನ್ನು ವಿಶ್ವವಿದ್ಯಾಲಯ ಒಪ್ಪಿಸುವ ವಿಷಯವನ್ನು ಸಧ್ಯದಲ್ಲೇ ಪರಿಶೀ ಲಾಗುವುದೆಂದೂ, ಈಗ ಕಾಲೇಜಿನ ಮತ್ತು ಯುರ್ವೇದ ಆಸ್ಪತ್ರೆ ಆಡಳಿತವನ್ನು ವೈದ್ಯ ಇ ಖೆಯ ಡೈರೆಕ್ಟರಿಗೆ ವಹಿಸಲಾಗಿದೆಯೆಂದೂ ವರು ಸೂಚಿಸಿದರು

ನಗರದ ನೂತನ ಪೌರಸಭಾಧ್ಯಕ್ಷ

ಎಸ್. ಸಂಜೀವಯ್ಯನವರು

ದಲ್ಲಿ ಹೊಸ ಅಣು ಅಸ್ತ್ರದ ಸ್ಫೋಟನೆ

ೆದ ತಿಂಗಳು ೧೩—೧೪ರಲ್ಲಿ ರಷ್ಯದ ವಿ ಗಳು ಸೈಬೀರಿಯದಲ್ಲಿ ಹೊಸ ಮಾದರಿ ಅಣು ಅಸ್ತ್ರವೊಂದನ್ನು ಸಿಡಿಸಿದರೆಂದು ಗೊ ದೆ

ಸನದ ಅರಮನೆ ಮಾರಾಟದ ಪ್ರಶ್ನೆ

ಧಾನ ಸಭೆಯಲ್ಲಿ ನೆನ್ನೆ ವಿದ್ಯಾ ಮಂತ್ರಿ ಶ್ರೀ ಮಂಜಪ್ಪನವರು, ಹಾಸನದಲ್ಲಿರುವ ನೆಯ ಮಾರಾಟದ ಬಗ್ಗೆ ಬಂದ ಪ್ರಶ್ನೆ ಗಳಿಗೆ ಉತ್ತರವಿತ್ತು, ಅರಮನೆ ಅಧಿಕಾರ ಭವನವನ್ನು ಈಗಾಗಲೇ ಮಾರಾಟ ಮಾ ವರೆಂದು ತಿಳಿಸಿದರು, ಸರ್ಕಾರದವರು ಅದ ಲಂದಲ್ಲಿ ಅರಮನೆಗೆ ೩೦,೦೦೦ ರೂ ಗೆ ತ್ತೆಂದೂ, ಅರಮನೆಯವರು ಈಗ ೧ ಲ ಗೆ ವಿಕ್ರಯ ಮಾಡಿರುವರೆಂದೂ ತಿಳಿಸ ದರು

ಉಳಿದ ಕನ್ನಡ ಪ್ರದೇಶಗಳನ್ನು ಮೈಸೂರಿಗೆ ಸೇರಿಸುವ ಪ್ರಯತ್ನ

ಕೇಂದ್ರ ಮತ್ತು ಪ್ರಾಂತ ಸರ್ಕಾರಗಳೊಡನೆ ಪತ್ರ ವ್ಯವಹಾರ

ಬೆಂಗಳೂರು ೨೪

ವಿಧಾನ ಸಭೆಯು ನೆನ್ನೆ ಗವರ್ನರರ ಭಾಷಣಕ್ಕೆ ಕೃತಜ್ಞತೆ ಸಲ್ಲಿಸುವ ನಿರ್ಣಯವನ್ನು ಅಂಗೀಕರಿಸಿತು

ಈ ಬಗ್ಗೆ ನಡೆದ ಚರ್ಚೆಗೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಉತ್ತರವಿತ್ತು, ಮೈಸೂರಿಗೆ ಸೇರಬೇಕಾಗಿರುವ ಕನ್ನಡ ಪ್ರದೇಶಗಳನ್ನು ಸಂಸ್ಥಾನಕ್ಕೆ ಸೇರಿಸುವ ವಿಚಾರವಾಗಿ ಭಾರತ ಸರ್ಕಾರ ಮತ್ತು ನೆರೆ ಸಂಸ್ಥಾನಗಳ ಮುಖ್ಯ ಮಂತ್ರಿಗಳೊಡನೆ ತಾವು ಪತ್ರ ವ್ಯವಹಾರ ನಡೆಸುತ್ತಿರುವುದಾಗಿ ತಿಳಿಸಿದರು ಸಂಸ್ಥಾನದಲ್ಲಿ ಬಹುಮಟ್ಟಿಗೆ ಅನ್ಯ ಭಾಷೆಯುರುವ ಸಣ್ಣ ಪ್ರದೇಶಗಳನ್ನು ಆಯಾ ಭಾಷಾ ಪ್ರದೇಶಗಳಿಗೆ ಬಿಟ್ಟುಕೊಡಲು ತಾವು ಹಿಂಜರಿಯುವುದಿಲ್ಲವೆಂದೂ ಅವರು ಹೇಳಿದರು

ಮಹಾರಾಷ್ಟ್ರ ಭಾಷೆಯನ್ನಾಡುವ ಪ್ರದೇಶಗಳು ಬೊಂಬಾಯಿಗೆ ಸೇರಲಿಚ್ಛಿಸುವುವೆಂಬ ವಿಚಾರವನ್ನು ಕುರಿತು ಅವರು ಸಂಶಯವನ್ನು ವ್ಯಕ್ತಪಡಿಸಿ, ಆ ಪ್ರದೇಶದ ಜನರು ಮೈಸೂರಿನಲ್ಲಿರುವವರೆಗೆ ಅವರುಗಳ ಬಗ್ಗೆ ಸಹಾನುಭೂತಿಯಿಂದ ವರ್ತಿಸಲಾಗುವುದೆಂದು ಮುಖ್ಯ ಮಂತ್ರಿಯವರು ಸೂಚಿಸಿದರು. ಭಾಷಾವಾರು ಅಲ್ಪ ಸಂಖ್ಯಾತರ ಹಿತವನ್ನು ನಿರ್ಲಕ್ಷಿಸುವುದಿಲ್ಲವೆಂದೂ ಅವರು ಒತ್ತಿ ಹೇಳಿದರು

ಚಿನ್ನದ ಗಣಿ ಆಡಳಿತದ ಸಲಹೆಗಾರರಿಗೆ ೪ ಲಕ್ಷ ರೂ. ವೇತನ

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮಾತನಾಡಿ ಕೋಲಾರದ ಚಿನ್ನದ ಗಣಿಗಳ ಆಡಳಿತದಲ್ಲಿ ಸಲಹೆ ನೀಡುವ ಜಾನ್ ಟೇಲರ್ ಕಂಪೆನಿಯವರಿಗೆ ವರ್ಷಕ್ಕೆ ೪ ಲಕ್ಷ ರೂ ಸಂಭಾವನೆ ಕೊಡಲಾಗುವುದೆಂದು ತಿಳಿಸಿದರು. ಟೇಲರ್ ಮತ್ತು ಸನ್ಸ್ ಕಂಪೆನಿಯವರಿಗೆ ಗಣಿ ಕೆಲಸದಲ್ಲಿ ವಿಶೇಷ ಪರಿಶ್ರಮವಿರುವುದೆಂದೂ, ಅವರಿಗೆ ೧ ಶತಮಾನದ ಅನುಭವವಿದ್ದು, ಪ್ರಪಂಚದಲ್ಲೇ ಅತ್ಯಂತ ಶ್ರೇಷ್ಠ ಇಂಜನಿಯರುಗಳ ಪೈಕಿ ಅವರೂ ಸೇರಿರುವರೆಂದೂ ತಿಳಿಸಿದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕ್ಲಾರಿಯೊನೆಟ್. ೭-೧೫ ಮತ್ತು ೮-೧೫ ಎಂ ಜಿ ಸುಲೋಚನ-ದೇವರನಾಮ ೭-೩೦ ಹಿಂದಿ ವಾರ್ತೆ ಮಧ್ಯಾಹ್ನ ೧೨ ಜಯಲಕ್ಷ್ಮಿ, ರಾಧಾಕೃಷ್ಣ—ಗಾಯನ. ೧೨-೩೦ ಗಾನ ಮಂಜರಿ ೧ ಎಂ ಜಿ ಸುಲೋಚನ-ಸಂಗೀತ ೧-೫೦ ಕ್ಲಾರಿಯೊನೆಟ್ ೩ ೧೫ ಸಂಗೀತ ಸಂಜೆ ೫-೩೦ ಮತ್ತು ೮ ಎಂ ಎ ವರದಸ್ವಾಮಿ ಗೋಟುವಾದ್ಯ ೭-೫ ವಿರಾಮ ಸಂಗೀತ ೭-೩೦ ಗೀತಾವಳಿ ೮-೩೦ ನಾವು ಮತ್ತು ನಮ್ಮವರು ೮-೩೦ ದೆಹಲಿಯಿಂದ ೯-೧೫ ಕೋರ್ಟು ಮದರ್-ರೂಪಕ ೯-೩೫ ಕೆ ಪಿ. ಅರುಣಾಚಲಂ-ನಾಗಸ್ವರ ೧೦ ಅಕ್ಬರ್ ವಿಶೇಷ ಕಾರ್ಯಕ್ರಮ

ಸೈನ್ಯಾಧಿಕಾರಿಯಿಂದ ೮೯ ಸಾವಿರ ರೂ. ದರೋಡೆ ಪ್ರಯತ್ನ

ಇಬ್ಬರ ಕೊಲೆ ಮತ್ತು ಆತ್ಮಹತ್ಯೆ

ನವದೆಹಲಿಯ ಅಂಚೆ ಕಛೇರಿ ಬಳಿ ನೆನ್ನೆ ಕ್ಷಣಾರ್ಧದಲ್ಲಿ ಒಬ್ಬ ಸೈನ್ಯಾಧಿಕಾರಿಯಿಂದ ೮೯ ಸಾವಿರ ರೂ ದರೋಡೆ, ಇಬ್ಬರ ಕೊಲೆ ಮೂವರಿಗೆ ಗಾಯ ಮತ್ತು ಕೊನೆಯಲ್ಲಿ ಆತ್ಮಹತ್ಯೆಯ ಘಟನೆಗಳು ನಡೆದ ವಿಚಾರವು ವರದಿಯಾಗಿದೆ

ಬೆಳಿಗ್ಗೆ ೧೦|| ಗಂಟೆಗೆ ರಾಜ ಸಬ್ ಆಫೀಸಿಗೆ ಹಣ ಬಟವಾಡೆ ಮಾಡಲು ದತ್ತಾರಾಂ ಮತ್ತು ಕೃಷನ್ ಲಾಲ್ ಎಂಬ ಇಬ್ಬರು ಖಜಾನೆ ಗುಮಾಸ್ತರು ಒಬ್ಬ ಪೋಲೀಸನೊಡನೆ ಹೊರಟು ಸ್ವಲ್ಪ ದೂರದಲ್ಲಿ ಖಾಸಗಿ ಉಡುಪು ಧರಿಸಿದ್ದ ಒಬ್ಬ ಮೇಜರನು ಮೋಟಾರಿನಿಂದ ಹಿಂದೆ ಬಂದು ಒಬ್ಬ ಗುಮಾಸ್ತನ ಎದೆಗೆ ಗುಂಡು ಹೊಡೆದು ಅವನ ಬಳಿ ಇದ್ದ ೩೯ ಸಾವಿರ ರೂ ಅನ್ನು ಕಿತ್ತುಕೊಂಡು, ನಂತರ ಮತ್ತೊಬ್ಬ ಗುಮಾಸ್ತ ಮತ್ತು ಪೋಲೀಸನ ಮೇಲೆ ಗುಂಡು ಹಾರಿಸಿ, ೫೦ ಸಾವಿರ ರೂ ಇದ್ದ ಚೀಲವನ್ನು ಕಿತ್ತುಕೊಂಡು ಮೋಟಾರಿನಲ್ಲಿ ಓಡುತ್ತಾ ನೂರಾರನ್ನು ರಿವಾಲ್ವರಿಂದ ಗಾಯಗೊಳಿಸಿದನೆಂದೂ, ಆ ದೃಶ್ಯ ನೋಡಿ ಹಿಂದಿನಿಂದ ಕೂಡಲೇ ಅಂಚೆ ವ್ಯಾನಿನಲ್ಲಿ ಇಬ್ಬರು ಪೋಲೀಸರು ಅವನನ್ನು ಅಟ್ಟಿಸಿಕೊಂಡುಹೋಗಿ ಅವನ ಕಾರು ಮುಂದುವರಿಯದಂತೆ ತಡೆದರೆಂದೂ, ಮುಂದೆ ಅಧಿಕಾರಿಯು ಕಾರನ್ನು ಒಬ್ಬ ಸಬ್ ಇನ್ಸ್ಪೆಕ್ಟರು ತಡೆದು ಅವನು ಶರಣಾಗತನಾಗುವಂತೆ ಸೂಚಿಸಲು ಅವನು ತನ್ನ ತಲೆಗೆ ಗುಂಡಿನಿಂದ ಹೊಡೆದುಕೊಂಡು ಮೃತಪಟ್ಟನೆಂದೂ ವರದಿಯಾಗಿದೆ ಕಾರಿನಲ್ಲಿ ಹಣವಲ್ಲದೆ, ಹುಸಿ ಬರೆದ ಮೋಟಾರು ನಂಬರ್ ಪ್ಲೇಟು, ರಿವಾಲ್ವರ್ ಮತ್ತು ಎರಡು ಸೀಸೆ ಫ್ರೆಂಚ್ ಮದ್ಯವು ದೊರೆಯಿತು ಅವನ ಹೆಸರು ಮೇಜರ್ [illegible] ಎಂದು ಹೇಳಲಾಗಿದೆ.

ಅವನನ್ನು ಹಿಡಿದ ಸಾಹಸಕ್ಕಾಗಿ ಒಬ್ಬ ಪೋಲೀಸನಿಗೆ ೫೦೦, ಮೋಟಾರ್ ಡ್ರೈವರನಿಗೆ ೩೦೦ ಮತ್ತೊಬ್ಬ ಕಾನ್ಸ್ಟೇಬಲ್ಲನಿಗೆ ೨೦೦ ರೂ ಬಹುಮಾನವನ್ನು ಕೊಡಲಾಯಿತು

ವಿದೇಶಗಳಿಗೆ ಅಮೆರಿಕದ ೪೦೦ ಕೋಟಿ ಡಾಲರ್ ನೆರವು

ಬರುವ ವರ್ಷದಲ್ಲಿ ಅಮೆರಿಕಾ ಸರ್ಕಾರದವರು ವಿದೇಶಗಳಿಗೆ ೪೦೦ ಕೋಟಿ ಡಾಲರುಗಳ ನೆರವನ್ನು ನೀಡುವ ಸಲುವಾಗಿ ಯೋಜನೆಯೊಂದನ್ನು ಸಿದ್ಧಗೊಳಿಸುತ್ತಿರುವರೆಂದು ವರದಿಯಾಗಿದೆ ಸೂಯೆಜ್ ಕಾಲುವೆಯ ಪಾತ್ರ ವಿಸ್ತಾರ ಮಾಡಿ ಆಳಗೊಳಿಸಲು ಈಜಿಪ್ಟಿಗೆ ವಿಶ್ವ ಬ್ಯಾಂಕಿನ ಸಾಲ ಕೊಡಲಾಗುವುದೆಂದೂ ಸಹಾ ಗೊತ್ತಾಗಿದೆ ಈ ಸಂಬಂಧವಾಗಿ ಪ್ರತ್ಯಕ್ಷ ಪರಿಶೋಧಕರ ವಿದೇಶಾಂಗ ಸಹಾಯ ಸಮಿತಿಯೊಂದು ಭಾರತ, ಪಾಕಿಸ್ತಾನ, ಬರ್ಮಾ, ಫಾರ್ಮೋಸಾ, ವಿಯಟ್ನಾಂ, ಜಪಾನ್, ದಕ್ಷಿಣ ಕೊರಿಯಾ ಮುಂತಾದ ದೇಶಗಳಿಗೆ ಒಟ್ಟು ೬೦ ದಿನಗಳ ಭೇಟಿಯಾಗುವುದಿದೆ

ನಾನ್ ಗೆಜೆಟೆಡ್ ನೌಕರರಿಗೆ ಸಧ್ಯದಲ್ಲೇ ಹೆಚ್ಚಿನ ಸಂಬಳ

ಬೆಂಗಳೂರು ೨೪

ವಿಧಾನ ಸಭೆಯಲ್ಲಿ ನೆನ್ನೆ ಹಣಕಾಸಿನ ಮಂತ್ರಿ ಶ್ರೀ ಟಿ. ಮರಿಯಪ್ಪನವರು ಮಾತನಾಡಿ, ಮೈಸೂರಿನ ನಾನ್ ಗೆಜೆಟೆಡ್ ನೌಕರರ ಸಂಬಳವನ್ನು ಹೆಚ್ಚಿಸುವ ಬಗ್ಗೆ ಸಧ್ಯದಲ್ಲೇ ಆಜ್ಞೆ ಹೊರಡಿಸಲಾಗುವುದೆಂದೂ, ಸಂಬಳವನ್ನು ಇಲಾಖಾಧಿಕಾರಿಗಳ ಸಮಿತಿ ವರದಿ ಆಧಾರದ ಮೇಲೆ ಗೊತ್ತುಪಡಿಸಲಾಗುವುದೆಂದೂ ತಿಳಿಸಿದರು.

ಬೊಂಬಾಯಿಯಲ್ಲಿ ೧೪೫ ಪ್ರಜಾಸಮಾಜವಾದಿಗಳ ಬಂಧನ

[illegible] ಕನ್ನಡ ಪ್ರದೇಶವನ್ನು ಪ್ರತಿಭಟಿಸಿ ನೆನ್ನೆ ಬೊಂಬಾಯಿಯಲ್ಲಿ [illegible] ಪ್ರತಿನಿಧಿ ಕಛೇರಿ ಮುಂದೆ ಪ್ರದರ್ಶನ [illegible] ಇಲ್ಲಿನ ಪ್ರಜಾಸಮಾಜವಾದಿಗಳು [illegible] ಮಾಡಿ ಪ್ರತಿಬಂಧಕಾಜ್ಞೆಯನ್ನು [illegible] ನಡೆಸಿದರೆಂದೂ, ೧೪೫ ಮಂದಿಯನ್ನು ಬಂಧಿಸಲಾಯಿತೆಂದೂ ವರದಿಯಾಗಿದೆ.

ನಗರದ ನೂತನ ಪೌರಸಭಾ ಉಪಾಧ್ಯಕ್ಷ

ಜಿ.ಎಸ್. ರಾಮಕೃಷ್ಣಯ್ಯನವರು

ಚೀಣ ಮತ್ತು ಪಾಕಿಸ್ತಾನಗಳ ಸೌಹಾರ್ದದ ಪ್ರತಿಜ್ಞೆ

ಚೀಣದ ಪ್ರಧಾನಿಯು ಬರುವ ತಿಂಗಳು ಆದಿ ಭಾಗದಲ್ಲಿ ಪಾಕಿಸ್ತಾನದ ರಾಜಧಾನಿ ಕರಾಚಿಗೆ ಭೇಟಿ ಕೊಡುವರು ಅದಕ್ಕಾಗಿ ಅವರು ಪಾಕಿಸ್ತಾನದ ಪ್ರವಾಸವನ್ನು ನಿಗದಿಗೊಳಿಸುತ್ತಿದ್ದಾರೆ ನೆನ್ನೆ ಪ್ರಧಾನಿ ಚೌ ಮತ್ತು ಪಾಕಿಸ್ತಾನದ ಪ್ರಧಾನಿ ಸುಹ್ರಾವರ್ದಿಯವರು [illegible] ಜಂಟಿ ಹೇಳಿಕೆ ಹೊರಡಿಸಿ, ಎರಡು ರಾಷ್ಟ್ರಗಳ ನಡುವೆ ಸ್ನೇಹದ ಬಗ್ಗೆ ಪ್ರತಿಜ್ಞೆ ಕೊಡುವುದಾಗಿ ತಿಳಿಸಿದ್ದಾರೆ

ಮದ್ರಾಸಿನಲ್ಲಿ ಮರಣ ದಂಡನೆ ರದ್ದಿಲ್ಲ

ಸಧ್ಯದ ಪರಿಸ್ಥಿತಿಯಲ್ಲಿ ಮದ್ರಾಸು ಪ್ರಾಂತದಲ್ಲಿ ಮರಣ ದಂಡನೆಯನ್ನು ತಪ್ಪಿಸುವುದಿಲ್ಲವೆಂದು ಅಲ್ಲಿನ ವಿದ್ಯಾ ಮಂತ್ರಿ ಸಿ. ಸುಬ್ರಹ್ಮಣ್ಯರವರು ತಿಳಿಸುತ್ತಾರೆ

ಪೌರಸಭೆಯ ಅಧ್ಯಕ್ಷ ಉಪಾಧ್ಯಕ್ಷರುಗಳ ಆಯ್ಕೆ

ಕಾಂಗ್ರೆಸ್ ಸ್ಪರ್ಧಿಗಳ ವಿಜಯ

ಮೈಸೂರು ೨೫

ನಗರದ ಪೌರಸಭೆಯ ವಿಶೇಷ ಅಧಿವೇಶನವು ನಿನ್ನೆ ನಡೆದು, ನೂತನ ಸಾಲಿಗೆ ಕಾಂಗ್ರೆಸ್ ಸ್ಪರ್ಧಿಗಳಾದ ಶ್ರೀ ಎಸ್ ಸಂಜೀವಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಜಿ ಎಸ್ ರಾಮಕೃಷ್ಣಯ್ಯನವರು ಉಪಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು ಅವರಿಬ್ಬರಿಗೂ ತಲಾ ೨೩ ಓಟುಗಳು ಬಂದುವು

ಪ್ರತಿಸ್ಪರ್ಧಿಗಳಾದ ಶ್ರೀಗಳು ಶ್ರೀಕಂಠಶರ್ಮ ಮತ್ತು ಹೆಚ್ ಎಸ್ ಮುದ್ದಯ್ಯನವರಿಗೆ ತಲಾ ೧೨ ಓಟುಗಳು ಬಂದುವು

ಶ್ರೀಗಳಾದ ಶ್ರೀಕಂಠಶರ್ಮ, ಎಂ ಸಿ ಮಹದೇವಸ್ವಾಮಿ, ಎಸ್ ಲಿಂಗಣ್ಣ, ಎಂ ಕೆ ಲಿಂಗಯ್ಯ, ಹೆಚ್ ಎಸ್ ಮುದ್ದಯ್ಯ, ಜೋಗಿಸಿದ್ಧಯ್ಯ ಮುಂತಾದವರು ನೂತನ ಅಧ್ಯಕ್ಷ ಉಪಾಧ್ಯಕ್ಷರುಗಳನ್ನು ಅಭಿನಂದಿಸಿದರು

ಶ್ರೀಗಳಾದ ಸಂಜೀವಯ್ಯನವರೂ, ಜಿ ಎಸ್ ರಾಮಕೃಷ್ಣಯ್ಯನವರೂ ಧನ್ಯವಾದಗಳನ್ನು ಸೂಚಿಸಿ ಪೌರಸಭೆಯ ಕಾರ್ಯನಿರ್ವಹಣೆಯಲ್ಲಿ ಎಲ್ಲರ ಸಹಕಾರವನ್ನು ಕೋರಿದರು

ಶ್ರೀ ಸಂಜೀವಯ್ಯನವರು ೧೯೨೩ರಲ್ಲಿ ಮಧ್ಯಮ ವರ್ಗದ ರೈತ ಕುಟುಂಬದಲ್ಲಿ ಜನಿಸಿದರು ಅವರು ನಾಯಕ ಕುಲದವರು ೧೯೪೪ರಲ್ಲಿ ಪದವೀಧರರಾದರು ಬೆಂಗಳೂರು ಅಕೌಂಟ ಕಛೇರಿಯಲ್ಲಿ ನೌಕರರಾಗಿದ್ದ, ಬಿ ಕಾಂ ಮತ್ತು ಬಿ ಎಲ್ ಪಾಸಾಗಿ ನಗರದಲ್ಲಿ ವಕೀಲ ವೃತ್ತಿಯನ್ನವಲಂಬಿಸಿದರು ನಂತರ ಪೌರಸಭಾ ಸದಸ್ಯರಾಗಿ ಆರಿಸಲ್ಪಟ್ಟು ಕಳೆದ ವರ್ಷ ಸಭೆಯ ಉಪಾಧ್ಯಕ್ಷರಾಗಿ ಕೆಲಸ ನಿರ್ವಹಿಸಿದ್ದರು

ಶ್ರೀ ಜಿ ಎಸ್ ರಾಮಕೃಷ್ಣಯ್ಯನವರು ಹರಿಜನ ಕೋಮಿನ ಮುಖಂಡರು ಹರಿಜನರ ನೆಯ್ಗೆ ಸಂಘ [illegible] ಕಾರ್ಮಿಕರ ಸಂಘ ಮುಂತಾದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಭಾಗವಹಿಸಿ ಜನಮನ್ನಣೆಗಳಿಸಿರುವರು

ಮೈಸೂರು ಜಿಲ್ಲಾ ಕ್ರೀಡೆಗಳು

ಮೈಸೂರು ಜಿಲ್ಲಾ ಕ್ರೀಡಾ ಮತ್ತು ವ್ಯಾಯಾಮ ಸಂಘದವರು ಶನಿವಾರ ನಡೆಸಿದ ವ್ಯಾಯಾಮ ಸ್ಪರ್ಧೆಯಲ್ಲಿ ಹಾರ್ಡ್ವಿಕ್ ಶಾಲೆಯ ಕಂಚಯ್ಯ ಮತ್ತು ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟಿನ ಕುಮಾರಿ ರಜನಿಯವರಿಗೆ ಬಾಲಕ ಬಾಲಿಕೆಯರ ಜೂನಿಯರ್ ಚಾಂಪಿಯನ್ ಷಿಪ್ ದೊರಕಿತು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೆಚ್ ವಿ ಶ್ರೀರಂಗರಾಜುರವರು ಅದರ ಆರಂಭೋತ್ಸವವನ್ನು ನೆರವೇರಿಸಿದರು ಜಿಲ್ಲಾಧಿಕಾರಿಗಳಾದ ಶ್ರೀ ಡಿ ಆರ್ ಚನ್ನರುದ್ರಯ್ಯನವರು ಬಹುಮಾನಗಳನ್ನು ವಿನಿಯೋಗಿಸಿದರು ೧೦೦ ಮೀಟರ್ ಸೀನಿಯರ್ ಪಂದ್ಯಗಳಲ್ಲಿ ದಳವಾಯಿ ಶಾಲೆಯ ರಾಜಣ್ಣ ಮತ್ತು ಗುಡ್ ಷೆಫರ್ಡ್ ಕಾನ್ವೆಂಟಿನ ಲಿನೆಟ್ ಆರ್ಚಾರ್ಡ್‌ರಿಗೆ ಪ್ರಥಮ ಬಹುಮಾನಗಳು ಬಂದುವು

ಚಾಂಪಿಯನ್‌ಷಿಪ್ ಪಡೆದ ಶ್ರೀ ಎ ಕಂಚಯ್ಯನವರು ಜೂನಿಯರ್ ೧೦೦ ಗಜ ಮತ್ತು ೧೦೦ ಗಜ ರಿಲೆ ಓಟದಲ್ಲಿ ಪ್ರಥಮ ಬಹುಮಾನವನ್ನು ೨೦೦ ಗಜ ಓಟ, ಹೈಜಂಪು ಮತ್ತು ಲಾಂಗ್ ಜಂಪುಗಳಲ್ಲಿ ೨ನೇ ಬಹುಮಾನವನ್ನೂ ಗಳಿಸಿರುವರು ಹೈಜಂಪಿನಲ್ಲಿ ಮೊದಲನೇ ಬಹುಮಾನವನ್ನು ವೆಂಕಟಪತಿಯವರು ಪಡೆದಿರುವರು ಸೀನಿಯರ್ ಹೈಜಂಪಿನಲ್ಲಿ ಸಿದ್ದವೀರಯ್ಯನವರಿಗೆ ೨ನೇ ಬಹುಮಾನವೂ ೧,೫೦೦ ಗಜ ಓಟದಲ್ಲಿ ಎಂ ನಂಜಯ್ಯನವರಿಗೆ ೨ನೇ ಬಹುಮಾನವೂ ಬಂದಿವೆ

ಹಿಂದೂ ಮಹಾ ಸಭೆಗೆ ಮುಸಲ್ಮಾನ ಸದಸ್ಯರು

ಬಿಹಾರಿನ ಮಾಜಿ ಮುಸ್ಲಿಂ ಲೀಗ್ ಸದಸ್ಯರೂ, ವಕೀಲರೂ ಆದ ಸೈಯದ್ ಬದ್ರುದ್ದೀನ್ [illegible]ರವರು ಅಲ್ಲಿನ ಪ್ರಾಂತ ಹಿಂದೂ ಮಹಾ ಸಭೆಯ ಸದಸ್ಯರಾಗಿ ಸೇರಿರುತ್ತಾರೆ ಹಿಂದೂ ಮಹಾ ಸಭೆಗೆ ಮುಸ್ಲಿಮರು ಸದಸ್ಯರಾದುದು ಇದೇ ಮೊದಲು

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರ್ ಮತ್ತು ಅವರ ಪತ್ನಿಯೊಡನೆ ಪ್ರಧಾನಿ ನೆಹರೂ ಮತ್ತು ಇಂದಿರಾ ಗಾಂಧಿಯವರು

ಮಾರುತಿ ಉತ್ಸವ

ಮೈಸೂರು ೨೫

ಗಾನವಿಶಾರದ ಬಿ ದೇವೇಂದ್ರಪ್ಪನವರು ನಡೆಸಿದ ಹನುಮಜ್ಜಯಂತಿ ರಜತ ಮಹೋತ್ಸವದ ಸಮಾರಂಭವು ನಿನ್ನೆ ಮಾಸ್ಟರ್ ಮಹಾಲಿಂಗಂರವರ ದಿವ್ಯವಾದ ವೇಣುಗಾನದೊಡನೆ ಮುಕ್ತಾಯವಾಯಿತು ಅನಂತರ ಮಾರುತಿ ಉತ್ಸವವು ರಾತ್ರಿ ೧೧ ಘಂಟೆಯಿಂದ ಬೆಳಗಿನ ಝಾವ ೩—೩೦ ಘಂಟೆವರೆಗೆ ವೈಭವದಿಂದ ಜರುಗಿತು ವಿದ್ಯುದ್ದೀಪಗಳಿಂದ ಅಲಂಕೃತವಾಗಿದ್ದ ೫ ರಥಗಳಲ್ಲಿ ಉತ್ಸವವು ಬೆಳೆಯಿತು ಅಮೋಘವಾದ ನಾದಸ್ವರ ವಾದನವು ಕರ್ಣಾನಂದಕರವಾಗಿತ್ತು ಸಯ್ಯಾಜಿರಾವ್ ರಸ್ತೆ ಮಾರ್ಗವಾಗಿ ಕೋಟೆ ಆಂಜನೇಯ ಗುಡಿಗೆ ಉತ್ಸವವು ತೆರಳಿ ಶಿವರಾಂಪೇಟೆ ಮಾರ್ಗವಾಗಿ ಹಿಂದಿರುಗಿತು ಸಂಗೀತ, ಸಾಹಿತ್ಯ, ನೃತ್ಯ ಮುಂತಾದುವುಗಳ ಸುಗ್ಗಿಯಿಂದ ಪುರನಿವಾಸಿಗಳನ್ನು ಆನಂದಗೊಳಿಸಿದ ಶ್ರೀ ದೇವೇಂದ್ರಪ್ಪನವರಿಗೆ ಎಲ್ಲರೂ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸಿದರು

ದ್ವಿತೀಯ ಯೋಜನೆಯಲ್ಲಿ ಸಂಸ್ಥಾನದ ಪ್ರತಿ ಪ್ರಜೆಗೂ ೭೬ ರೂ. ವೆಚ್ಚ

ನೂತನ ಮೈಸೂರು ಸಂಸ್ಥಾನದ ದ್ವಿತೀಯ ಯೋಜನೆಯು ೧೪೪ ೮೫ ಕೋಟಿ ರೂ ನಷ್ಟಾಗುವುದೆಂದೂ, ಪ್ರತಿ ಪ್ರಜೆಗೆ ೭೬ ರೂ ನಂತೆ ವೆಚ್ಚದ ಅಂದಾಜಾಗಿರುವುದೆಂದೂ ಗೊತ್ತಾಗಿದೆ

ರಾಷ್ಟ್ರೀಯ ಸ್ವಯಂಸೇವಕ ಶಿಬಿರದ ಮುಕ್ತಾಯ ಸಮಾರಂಭ

ನಂಜನಗೂಡಿನ ರಾಷ್ಟ್ರೀಯ ಸ್ವಯಂಸೇವಕ ಸಂಘದ ಆಶ್ರಯದಲ್ಲಿ ನಡೆಯುತ್ತಿರುವ ಶಿಬಿರದ ಮುಕ್ತಾಯ ಸಮಾರಂಭವನ್ನು ನಾಳೆ ಸಂಜೆ ೬॥ ಗಂಟೆಗೆ ಶ್ರೀ ಯಾದವರಾವ್ ಜೋಷಿಯವರು ನೆರವೇರಿಸುವರು ಶಿಬಿರವು ಅಲ್ಲಿನ ಪರಶುರಾಮ ಕ್ಷೇತ್ರದಲ್ಲಿ ಸ್ಥಾಪಿಸಲ್ಪಟ್ಟಿದೆ.

ಪ್ರಜಾಸಮಾಜವಾದಿ ಕಾರ್ಯಕರ್ತರ ಸಭೆ

ಮೈಸೂರು ನಗರದ ದಕ್ಷಿಣ ವಿಭಾಗದ ಪ್ರಜಾಸಮಾಜವಾದಿ ಕಾರ್ಯಕರ್ತರ ಸಭೆಯು ನಾಳೆ ಸಂಜೆ ೪॥ ಗಂಟೆಗೆ ಪ್ರಭುದೇವಾ ಟಾಕೀಸ್ ಬಳಿಯಲ್ಲಿರುವ ಆರ್ಯ ಭವನದಲ್ಲಿ ನಡೆಯುವುದು ಕಾರ್ಯಕರ್ತರೆಲ್ಲರೂ ಭಾಗವಹಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ

ಮದ್ರಾಸಿನಲ್ಲಿ ಅಲ್ಯೂಮಿನಂ ಕಾರ್ಖಾನೆ

ಮದ್ರಾಸು ಸಂಸ್ಥಾನದಲ್ಲಿ ಪ್ರಥಮ ಅಲ್ಯೂಮಿನಂ ಕಾರ್ಖಾನೆಯನ್ನು ಸ್ಥಾಪಿಸಲಾಗುವುದೆಂದು ಕೇಂದ್ರ ಕೈಗಾರಿಕೆ ಮಂತ್ರಿ ಮೊರಾರ್ಜಿ ದೇಸಾಯರು ತಿಳಿಸಿರುತ್ತಾರೆ

Edited, Printed and Published by A R Nagarajan at Sadhvi Press, D Subbial Road, Mysore

ತಾಲ್ಲೂಕು ಪ್ರಾಥಮಿಕ ಉಪಾಧ್ಯಾಯರ ಸಮ್ಮೇಳನ

ಕೃಷ್ಣರಾಜನಗರ ೨೪

ಕೃಷ್ಣರಾಜನಗರ ತಾಲ್ಲೂಕು ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಮ್ಮೇಳನವು ಕಳೆದ ೨೦ನೇ ತಾರೀಕು ಚುಂಚನಕಟ್ಟೆಯಲ್ಲಿ ಮೈಸೂರು ಡಿವಿಜನ್ ವಿದ್ಯಾ ಇಲಾಖೆ ಡೆಪ್ಯುಟಿ ಡೈರೆಕ್ಟರವರಾದ ಶ್ರೀ ಟಿ ವಾಸುದೇವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು ದೇವತಾ ಪ್ರಾರ್ಥನೆ ಮತ್ತು ಸಂಘದ ಅಧ್ಯಕ್ಷರಿಂದ ಸ್ವಾಗತ ಭಾಷಣವಾದನಂತರ ಕಾರ್ಯದರ್ಶಿಗಳು ವರದಿಯನ್ನೊಪ್ಪಿಸಿದರು ಶ್ರೀ ಸಿ ಕೆ ಪುಟ್ಟಣ್ಣಯ್ಯನವರಿಂದ ಭಾರತ ವಾಚನ ನಡೆಯಿತು ಮೈಸೂರು ಮರಿಮಲ್ಲಪ್ಪನವರ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಬಸವಯ್ಯನವರು ಭಾಷಣ ಮಾಡಿದರು ಸುಮಾರು ೧೬ ೧೭ ವರ್ಷ ಸರ್ವೀಸ್ಸಾಗಿ ಪ್ರಾಥಮಿಕ ಶಾಲೆಗಳಲ್ಲಿರುವ ಸ್ಕೂಲ್ ಫೈನಲ್ ಆದ ಉಪಾಧ್ಯಾಯರನ್ನು ಮಾಧ್ಯಮಿಕ ಶಾಲಾ ದರ್ಜೆಗೆ ಏರಿಸುವಾಗ ಸಿ ಆರ್ ಬಿ ನಿಯಮ ಅನುಸರಿಸಿ ಖಾಲಿ ಜಾಗಗಳಿಗೆ ೧/೩ ಭಾಗದಷ್ಟು ಮಾತ್ರ ತೆಗೆದುಕೊಳ್ಳುತ್ತಿರುವುದರ ಬದಲು ೨/೩ ಭಾಗದಷ್ಟು ಸ್ಥಳವನ್ನಾದರೂ ಇವರಿಗೆ ಮೀಸಲಾಗಿಟ್ಟು ಪ್ರಥಮ ಸ್ಥಾನ ಕೊಟ್ಟು ಅವರವರ ಸೀನಿಯಾರಿಟಿಗೆ ಧಕ್ಕೆಯಾಗದಂತೆ ಆರಿಸಿಕೊಳ್ಳುವಂತೆ ಸರ್ಕಾರಕ್ಕೆ ಶಿಫಾರ್ಸು ಮಾಡಬೇಕೆಂದು" ನಿರ್ಣಯ ಮಾಡಲಾಯಿತು ಅಧ್ಯಕ್ಷರು ನಿರ್ಣಯವನ್ನು ಸರ್ಕಾರದ ಅವಗಾಹನೆಗೆ ತರುವುದಾಗಿ ಭರವಸೆ ಕೊಟ್ಟರು

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ [illegible]					
[illegible] ಸಣ್ಣ	[illegible]	[illegible]	[illegible]	[illegible]	[illegible]
[illegible]					
ಸೇಲಂ ಸಣ್ಣ	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
ದಪ್ಪ	[illegible]	[illegible]			
[illegible] ಸಣ್ಣ	[illegible]	[illegible]			
ರಾಗಿ	[illegible]	[illegible]	[illegible]	[illegible]	[illegible]
ಜೋಳ	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
ಹೆಸರು	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
ತೊಗರಿ	[illegible]	[illegible]			
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]			
[illegible]	[illegible]	[illegible]	[illegible]	[illegible]	[illegible]

ಜನವರಿ ೨೬ ರಿಂದ ಸೈನ್ಯಗಳ ಹಿಂದಿಯಲ್ಲಿ ಕವಾಯಿತು

ಬರುವ ಜನವರಿ ೨೬ನೇ ತಾರೀಕು
ಲ್ ದಿನದಿಂದ ಭಾರತದ ಸೈನ್ಯಗಳಿಗೆ ಹಿಂ
ಪೆಯಲ್ಲಿ ಕವಾಯಿತು, ಪೆರೇಡುಗಳನ್ನು
ವಂತೆ ಆಜ್ಞೆಯಾಗಿದೆ ಈಗಾಗಲೇ ಗ
ದ ವಿದೇಶೀ ಪ್ರಮುಖರಿಗೆ ಗೌರವರಕ್ಷೆ ಕೊ
ಗ ಹಿಂದಿ ಪದಗಳನ್ನು ಉಪಯೋಗಿಸಲಾಗು
ಸೆಲ್ಯೂಟ್, ಜನರಲ್, ಕಂಪೆನಿ, ಗಾರ್ಡ್,
ಟೋ, ಪೆರೇಡ್, ಫೈಲ್ ಮತ್ತು ಕ್ಯೂ
ಗಳಿಗೆ ಸರಿಯಾದ ಹಿಂದಿ ಪದಗಳು ಸಿಗುತ್ತ

ವಿಧಾನ ಸೌಧಕ್ಕೆ ಪ್ರೇಕ್ಷಕರ ಭೇಟಿ ಕಾಲದ ನಿಗದಿ

ವಿಧಾನ ಸೌಧಕ್ಕೆ ಎಲ್ಲಾ ಹೊತ್ತ
ಪ್ರೇಕ್ಷಕರು ಬರುತ್ತಿರುವುದರಿಂದ ಅಧಿಕಾ
ಕೆಲಸ ನಡೆಸುವುದಕ್ಕೆ ತೊಂದರೆಯಾಗುತ್ತ
ದೆಂದೂ, ಅದನ್ನು ತಪ್ಪಿಸಲು ಈ ವಾ
ಕೆಲಸದ ಕಾಲದಲ್ಲಿ ಪ್ರೇಕ್ಷಕರನ್ನು ಬಿಡ
ದಿಲ್ಲವೆಂದೂ ತಿಳಿಸಲಾಗಿದೆ ಶನಿವಾರ
ಭಾನುವಾರಗಳಲ್ಲಿ ಮಧ್ಯಾಹ್ನದ ಹೊತ್ತಿ
ತ್ರ ಭವನವನ್ನು ನೋಡಬಹುದೆಂದು ಪ್ರ
ಯೊಂದು ತಿಳಿಸಿದೆ ಅದಕ್ಕೆ ರಹದಾರಿ
ಯನ್ನು ಪಡೆಯಬೇಕು

LIFE Rs 14 only for 19
READERS DIGEST :
Rs 12 for 12 issues
Subscribe to day alone,
lest you may miss
NEWSPAPER HOUSE, MYS

A Provision Shop sit
in a good locality on Va
Road is open for imme
occupation with stocks a
good-will Owner going
of City
Contact —
M A SRINIVASA IYENG
1045, Nanjaraj Agrahar
MYSORE

SRI GAYATH
TALKIES
Xmas Greetings to Our P
From To-day For 2 da
THE PRODIGA
(In Cinemascope & Techni
Starring — Lana Turne
and Edmund Purdom

[illegible] ನಂ. 793

[illegible]

ಸಾಧ್ವಿ ದಿನ ಪತ್ರಿಕೆಗೆ

[illegible]

[illegible]

[illegible]

] SADHVI : WEDNESDAY 26—12—1956 ಮೈಸೂರು : ಬುಧವಾರ ೨೬—೧೨—೧೯೫೬ [

ನವರಿ ೧ರಿಂದ ನೌಕರರಿಗೆ ಹೊಸ ಮಟ್ಟದ ಸಂಬಳ

ಬೊಂಬಾಯಿ ಸರ್ಕಾರ ಸಂಬಳಕ್ಕಾಗಿ ಒಪ್ಪಿಗೆ

[illegible]

ಬೆಂಗಳೂರು ೨೬

[illegible]

ವಿಮಾನಗಳಿಗೆ ಡಿಕ್ಕಿಯಿಂದ ಇಬ್ಬರ ಮರಣ

[illegible]

[illegible]

ಸರ್ವೋದಯ ದಿನದಿಂದ ಶಾಲೆಗಳ ಆರಂಭದ ಬದಲಿ ಪ್ರಶ್ನೆ

ವಿಧಾನ ಸಭೆಯಲ್ಲಿ [illegible] ಸಚಿವರ ಉತ್ತರ

ಬೆಂಗಳೂರು ೨೬

ವಿಧಾನ ಸಭೆಯಲ್ಲಿ ನೆನ್ನೆ [illegible] ಮಂತ್ರಿ ಶ್ರೀ ಟಿ ಮರಿಯಪ್ಪನವರು [illegible] ಸರ್ವೋದಯ ದಿನದಿಂದ ಶಾಲೆಗಳನ್ನು ಆರಂಭಿಸಬೇಕೆಂದು ಗೊತ್ತುಪಡಿಸಿದ್ದುದನ್ನು ಬದಲಾಯಿಸಿದ ಬಗ್ಗೆ [illegible] ಪ್ರಶ್ನೆಗೆ ಉತ್ತರವಿತ್ತು [illegible] ದೃಷ್ಟಿಯಿಂದ ಕಾಲವ ಬದಲಾವಣೆಯಾಯಿತೆಂದೂ, ಅದರಲ್ಲಿ ಮೂಲಭೂತ ನೀತಿ ವ್ಯತ್ಯಾಸವೇನೂ ಇಲ್ಲವೆಂದೂ ತಿಳಿಸಿದರು [illegible] ದಿನಗಳಿಗೂ ಸಂಬಂಧವಿಲ್ಲವೆಂದೂ, ಅದೇ ಪದ್ಧತಿಯನ್ನು ಮುಂದುವರಿಸಿದ್ದರೆ ಹೊರಗಿನಿಂದ ಬಂದ ಕನ್ನಡ ಪ್ರದೇಶಗಳವರಿಗೆ ತುಂಬಾ ಅನಾನುಕೂಲವಾಗುತ್ತಿತ್ತೆಂದೂ ಸಚಿವರು ನುಡಿದರು ಮೇಲಾಗಿ [illegible] ಇತರ ಭಾಗಗಳ ರೀತಿಯನ್ನೇ ಅನುಸರಿಸುವಂತೆ ಕೇಂದ್ರ ವಿದ್ಯಾ ಮಂಡಲಿಯು ಸೂಚಿಸಿದ್ದುದಾಗಿಯೂ ಅವರು ಹೇಳಿದರು

ಸಚಿವರುಗಳು ತಮ್ಮ ಪ್ರವಾಸಗಳನ್ನು ಬಹಳವಾಗಿ ಕಡಿಮೆ ಮಾಡಿಕೊಂಡಿರುವರೆಂದೂ ಅವರು ನುಡಿದರು. ಅರಮನೆಯಲ್ಲಿ ಗವರ್ನರರು [illegible] ಭಾಗವಹಿಸಬೇಕಾಗಿದ್ದುದು ತಪ್ಪಿಹೋಯಿತು [illegible] ಯೇನೂ ಇಲ್ಲವೆಂದು ಅವರು ತಿಳಿಸಿದರು

ಈಜಿಪ್ಟ್ ಬಾಲಕಬಾಲಕಿಯರಿಗೆ ಯುದ್ಧ ಶಿಕ್ಷಣ

[illegible]

[illegible]

ಬ್ರಿಟನ್, ಫ್ರಾನ್ಸ್, ಇಸ್ರೇಲುಗಳಿಂದ ಪರಿಹಾರಕ್ಕಾಗಿ ಒತ್ತಾಯ

ವಿಶ್ವಸಂಸ್ಥೆಗೆ ಈಜಿಪ್ಟಿನ [illegible]

ಸೂಯೆಜ್ ಮತ್ತು ಸಿನಾಯ್ [illegible] ಯಲ್ಲಿ ಈಜಿಪ್ಟಿಗೆ [illegible] ಯಲ್ಲಿ ಈಜಿಪ್ಟಿಗೆ ಆದ ನಷ್ಟವನ್ನು ತುಂಬಿಕೊಡಲು ಬ್ರಿಟನ್, ಫ್ರಾನ್ಸ್ ಮತ್ತು ಇಸ್ರೇಲುಗಳು ಪರಿಹಾರವನ್ನು ಕೊಡಬೇಕೆಂದು ಸೂಚಿಸುವ ನಿರ್ಣಯವನ್ನು ಈಜಿಪ್ಟ್ ನೆನ್ನೆ ವಿಶ್ವಸಂಸ್ಥೆಗೆ ಕಳುಹಿಸಿತು ಈ ಬಗ್ಗೆ ಸಂಸ್ಥೆಯ ಸಭೆಗೆ ಸೂಕ್ತ ವರದಿಯನ್ನು ಕಾರ್ಯದರ್ಶಿ ಹ್ಯಾಮರ್‌ಷೀಲ್ಡರು ಒಪ್ಪಿಸುವಂತೆ ಅದರಲ್ಲಿ ಕೇಳಲಾಗಿದೆ

ಕ್ರಿಸ್ಮಸ್ ಹಬ್ಬದ ಅಪಘಾತಗಳಲ್ಲಿ ೫೮೬ ಅಮೆರಿಕನ್ನರ ಮರಣ

ಈ ಸಾರಿ ಅಮೆರಿಕದಲ್ಲಿ ಕ್ರಿಸ್ಮಸ್ ಹಬ್ಬದ ವಾಹನ ಸಂಚಾರದಲ್ಲಿ ಆದ ಅಪಘಾತಗಳಿಂದ ೫೮೬ ಮಂದಿ ಮೃತಪಟ್ಟಿರುವುದಾಗಿಯೂ, ಹಿಂದಿನ ವರ್ಷಗಳಿಗಿಂತ ಇದು ಅತಿ ಹೆಚ್ಚಾಗಿರುವುದಾಗಿಯೂ ವರದಿಯಾಗಿದೆ

ನಗರದಲ್ಲಿ ಮಹಾತ್ಮ [illegible] ಸಮ್ಮೇಳನ

ದಕ್ಷಿಣ ಪ್ರದೇಶದ [illegible]

[illegible]

[illegible]

ಕ್ರಿಸ್ಮಸ್ ಶುಭಾಶಯ ಸ್ವೀಕಾರ

[illegible]

[illegible] ಜನವರಿ ೧ರಿಂದ ಹೆಚ್ಚು ಸಂಬಳ

[illegible]

[illegible]

[illegible] ಮಂತ್ರಿಗಳ [illegible]

[illegible]

[illegible] ಬೆಂಗಳೂರು [illegible]

[illegible]

[illegible]

[illegible]

ವಿಶ್ವದಲ್ಲಿ ಸೌಹಾರ್ದಕ್ಕೆ ಕಾಮನ್‌ವೆಲ್ತಿನ ಆದರ್ಶ

ಅಮೆರಿಕಾ-ಚೀಣಾ ವೈಮನಸ್ಯದ ಬಗ್ಗೆ ನೆಹರೂರವರ ಹೇಳಿಕೆ

ಪ್ರಧಾನಿ ನೆಹರೂರವರು ಕೆನಡಾ ರಾಜಧಾನಿ ಒಟ್ಟಾವಾದಲ್ಲಿ ನಡೆಸಿದ ಪತ್ರಿಕಾ ಸಮ್ಮೇಳನದಲ್ಲಿ ಭಾಷಣ ಮಾಡಿ, ಚೀಣವು ಅಮೆರಿಕದೊಡನೆ ವಿಪರೀತವಾದ ವೈಮನಸ್ಯ ಹೊಂದಿದ್ದರೂ ಅದು ತೀವ್ರಗೊಳ್ಳದೆ ಕ್ರಮೇಣ ಮಾಯವಾಗುವುದೆಂದು ಹೇಳಿದರು ಚೀಣಾ ಮೇಲೆ ಪಾಶ್ಚಾತ್ಯರು ಹಾಕಿರುವ ವ್ಯಾಪಾರ ನಿರ್ಬಂಧಗಳನ್ನು ಕೊನೆಗಾಣಿಸಬೇಕೆಂದೂ, ಕೊರಿಯಾ ಯುದ್ಧ ಮುಂತಾದ ಘಟನೆಗಳಿಂದ ಅಮೆರಿಕವು ಚೀಣಕ್ಕೆ ರಾಜತಾಂತ್ರಿಕ ಮನ್ನಣೆಯುತ್ತಿಲ್ಲವೆಂದೂ ಅವರು ಹೇಳಿರುವರು

ಆಂಗ್ಲೋ-ಫ್ರೆಂಚರು ಈಜಿಪ್ಟಿನ ಮೇಲೆ ನಡೆಸಿದ ಆಕ್ರಮಣವನ್ನು ಅವರು ಪ್ರಸ್ತಾಪಿಸಿ ಅದರಿಂದ ಕಾಮನ್‌ವೆಲ್ತ್ ಸಂಬಂಧವು ಕೆಡಲಿಲ್ಲವೆಂದೂ ಜಗತ್ತಿನಲ್ಲಿ ಸೌಹಾರ್ದ ಮೂಡಲು ಕಾಮನ್‌ವೆಲ್ತ್ ರೀತಿಯಲ್ಲಿ ನಡೆಯುವುದು ಸೂಕ್ತವೆಂದೂ ಅವರು ಸೂಚಿಸಿದರು

ಮೋಸದಿಂದ ಮೋಟಾರು ಟೈರು ಪಡೆದುದಕ್ಕಾಗಿ ೧ ವರ್ಷ ಸಜಾ

ಬಳ್ಳಾರಿಯಲ್ಲಿ ಮೂರು ವರ್ಷಗಳ ಹಿಂದೆ ತಾನು ವಾಸ್ತುಶಿಲ್ಪ ಇಲಾಖೆಯ ಅಧಿಕಾರಿಗಳಲ್ಲೊಬ್ಬನೆಂದು ಹೇಳಿಕೊಂಡು ಅಲ್ಲಿನ ಮೋಟರು ಭಾಗಗಳ ಅಂಗಡಿಯಲ್ಲಿ ೪ ಮೋಟಾರು ಟೈರುಗಳನ್ನು ತೆಗೆದುಕೊಂಡು ವಂಚನೆ ಮಾಡಿದುದಕ್ಕಾಗಿ ಹಾಸನದ ಎ ಕೆ ಸುಬ್ರಹ್ಮಣ್ಯಂ ಎಂಬುವನಿಗೆ ಬಳ್ಳಾರಿಯ ನ್ಯಾಯಾಧೀಶರು ೧ ವರ್ಷ ಕಠಿಣ ಸಜಾ ವಿಧಿಸಿರುತ್ತಾರೆ ಅಪರಾಧಿಯು ತನ್ನ ತಪ್ಪನ್ನು ಒಪ್ಪಿಕೊಂಡನು ಅವನು ೧೫೫೦ ರೂ ಗೆ ಮೈಸೂರು ಬ್ಯಾಂಕು ಚೆಕ್ಕು ಕೊಟ್ಟದ್ದು ಅದು ತಿರಸ್ಕರಿಸಲ್ಪಟ್ಟಿದ್ದಿತು

ಅಂತರ ಕ್ರೀಡಾ ಕೇಂದ್ರಗಳ ಚರ್ಚಾ ಸ್ಪರ್ಧೆ

ನಗರದ ಶಿಶು ಸಾಹಿತ್ಯ ಸಮಿತಿ ಆಶ್ರಯದಲ್ಲಿ ಕಳೆದ ಭಾನುವಾರ ಇಟ್ಟಿಗೆಗೂಡು ಕೇಂದ್ರದಲ್ಲಿ ಅಂತರ ಕ್ರೀಡಾ ಕೇಂದ್ರಗಳ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಲಾಗಿತ್ತು ಪೌರಸಭಾ ಸದಸ್ಯರಾದ ಶ್ರೀ ಎಂ ವೆಂಕಟಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು ಸರಸ್ವತಿಪುರ ಕೇಂದ್ರದ ಶ್ರೀಮತಿ ಎಂ ಬಿ ಸುಶೀಲ ಮತ್ತು ನರಸಿಂಹರಾಜ ಮೊಹಲ್ಲಾ ಕೇಂದ್ರದ ಶ್ರೀಮತಿ ವಿಜಯಲಕ್ಷ್ಮಿಯವರುಗಳಿಗೆ ಮೊದಲನೇ ಬಹುಮಾನ ಕೃಷ್ಣಮೂರ್ತಿಪುರದ ಕೇಂದ್ರದ ಎಸ್ ಎ ಪ್ರಭಾಳಿಗೆ ಎರಡನೇ ಬಹುಮಾನಗಳು ಬಂದುವು ಅಧ್ಯಕ್ಷರು ಬಹುಮಾನಗಳನ್ನು ವಿನಿಯೋಗಿಸಿ ಮಕ್ಕಳ ಪುಸ್ತಕ ಸಮಿತಿಯವರ ಕಾರ್ಯ ಚಟುವಟಿಕೆಗಳನ್ನು ಪ್ರಶಂಸಿಸಿದರು

ಸಚಿತ್ರ ರಾಮನಾಮ

ಮೈಸೂರು ಆರ್ಯವೈಶ್ಯ ಸಭಾದ ಚಂದ್ರಗಿರಿ ಕೃಷ್ಣಶೆಟ್ಟರು ಭದ್ರಾಚಲ ಶ್ರೀರಾಮ ದೇವಾಲಯಕ್ಕೆ ಸಮರ್ಪಿಸಲು ವಿವಿಧ ಬಣ್ಣದ ಶಾಯಿಯಲ್ಲಿ ಸುಂದರವಾಗಿ ಸಚಿತ್ರ ರಾಮನಾಮ ವೆಂಬ ಪುಸ್ತಕವನ್ನು ರಚಿಸಿರುತ್ತಾರೆ ಅದನ್ನು ಪರಕಾಲ ಮಠದ ಸ್ವಾಮಿಗಳವರೂ ರಾಷ್ಟ್ರಾಧ್ಯಕ್ಷರೂ ರಾಜ್ಯಪಾಲರೂ ಸರ್ ಎಂ ವಿಶ್ವೇಶ್ವರಯ್ಯ ಶ್ರೀಗಳಾದ ಹೆಚ್ ಎಲ್ ದೇವರಾಜ ಅರಸ್, ಜಿ ಆರ್ ಜೋಸ್ಯರ್ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿ ರಾಯರು ಪರಾಂಬರಿಸಿ ಮೆಚ್ಚಿಗೆ ಪತ್ರಗಳನ್ನು ಬರೆದಿರುತ್ತಾರೆ

ರೈಲ್ವೆ ರೀಜನಲ್ ಅಕೌಂಟ್ಸ್ ಗುಮಾಸ್ತರ ತೊಂದರೆ

ನಗರದಲ್ಲಿ ರೈಲ್ವೆ ರೀಜನಲ್ ಅಕೌಂಟ್ಸ್ ಕಛೇರಿಯು ಕೆಲಸ ಮಾಡುತ್ತಿದ್ದು ಹೊಸ ವ್ಯವಸ್ಥೆ ಪ್ರಕಾರ ಈ ಕಛೇರಿಯನ್ನು ಮೂರು ವಿಭಾಗವಾಗಿ ವಿಂಗಡಿಸಿ ಮೈಸೂರು ಹುಬ್ಬಳ್ಳಿ ಮತ್ತು ಗುಂತಕಲ್ಲುಗಳಲ್ಲಿ ಒಂದೊಂದು ಇರಬೇಕೆಂದು ಗೊತ್ತುಪಡಿಸಲಾಯಿತು ಅದೇ ರೀತಿ ಗುಮಾಸ್ತರನ್ನು ವಿಂಗಡಿಸಿ, ನೌಕರರುಗಳಿಗೆ ವಸತಿ ಸೌಕರ್ಯವನ್ನೇರ್ಪಡಿಸುವವರೆಗೆ ಎಲ್ಲರೂ ಮೈಸೂರಿನಲ್ಲೇ ಇರಬೇಕೆಂದು ತೀರ್ಮಾನವಾಗಿತ್ತು ಆದರೆ ಹುಬ್ಬಳ್ಳಿಯ ಅಧಿಕಾರಿಯು ನೌಕರರ ಕಷ್ಟಸುಖಗಳನ್ನು ಗಮನಿಸದೆ, ಅವರುಗಳನ್ನು ಕರೆದುಕೊಂಡು ಹೋಗಲು ಪ್ರಯತ್ನಿಸಿದಾಗ, ಅದರ ಮೇಲೆ ಜನರಲ್ ಮ್ಯಾನೇಜರಿಗೆ ಅಹವಾಲು ಹೇಳಿಕೊಳ್ಳಲಾಗಿ ಏಪ್ರಿಲ್‌ವರೆಗೂ ಈಗಿನಂತೆಯೇ ಇರಲೆಂದು ಸೂಚಿಸಲ್ಪಟ್ಟಿತ್ತೆಂದು ಹೇಳಲಾಗಿದೆ

ಅದನ್ನು ಪರಿಗಣಿಸದೆ, ೪೦ ಜನ ಗುಮಾಸ್ತರನ್ನು ಕಳೆದ ೨೧ ನೇ ತಾರೀಕು ರಿಲೀವ್ ಮಾಡಿ ೨೪ರಂದು ಹುಬ್ಬಳ್ಳಿಯಲ್ಲಿ ಕೆಲಸಕ್ಕೆ ರಿಪೋರ್ಟ್ ಮಾಡಿಕೊಳ್ಳಬೇಕೆಂದು ಸೂಚಿಸಲಾಯಿತು ಅವರುಗಳ ಪ್ರಯಾಣಕ್ಕಾಗಿ ರಿಸರ್ವ್ ಕಂಪಾರ್ಟ್‌ಮೆಂಟ್ ಏರ್ಪಡಿಸುವುದಾಗಿ ಭರವಸೆಯಿತ್ತು, ಅದರಂತೆ ನಡೆಸದೆ ಪ್ರಯಾಣಕ್ಕೆ ಸಿದ್ಧರಾಗಿ ಬಂದಿದ್ದ ನೌಕರರೆಲ್ಲರೂ ರೈಲಿನಲ್ಲಿ ನಿಲ್ಲುವುದಕ್ಕೂ ಸ್ಥಳವಿಲ್ಲದೆ ಪರದಾಡಬೇಕಾಯಿತು ಎಂಬುದಾಗಿ ರೈಲು ನೌಕರರ ಹಿತೈಷಿಗಳೊಬ್ಬರು ಪತ್ರ ಬರೆದು ಇಂತಹ ತೊಂದರೆಗಳನ್ನು ಮೇಲ್ಪಟ್ಟ ಅಧಿಕಾರಿಗಳು ತಪ್ಪಿಸುವುದು ಅಗತ್ಯವೆಂದು ಕೋರಿರುತ್ತಾರೆ

ಮರಿಮಲ್ಲಪ್ಪನವರ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಮರಿಮಲ್ಲಪ್ಪನವರ ಮಾಧ್ಯಮಿಕ ಮತ್ತು ಪ್ರೌಢಶಾಲಾ ಸಂಘದ ವಾರ್ಷಿಕೋತ್ಸವವು ಕಳೆದ ಶನಿವಾರ ವಿಧಾನ ಪರಿಷತ್ತಿನ ಮಾಜಿ ಅಧ್ಯಕ್ಷ ಶ್ರೀ ಪಿ ಗೋಪಾಲಕೃಷ್ಣಶೆಟ್ಟರ ಅಧ್ಯಕ್ಷತೆಯಲ್ಲಿ ನೆರವೇರಿತು ವಿದ್ಯಾರ್ಥಿ ಆರ್ ಎ ತ್ಯಾಗರಾಜರವರಿಂದ ಪ್ರಾರ್ಥನೆ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಶ್ರೀ ಕೆ ಬಸವಯ್ಯನವರಿಂದ ಸ್ವಾಗತವಾದನಂತರ ಉಪಾಧ್ಯಾಯ ಕಾರ್ಯದರ್ಶಿ ಶ್ರೀ ಟಿ ಎಂ ಗೋಪಾಲರಾಯರು ಸಂಘದ ವರದಿಯನ್ನು ಓದಿದರು ಅಧ್ಯಕ್ಷರು ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿನಿಯೋಗಿಸಿ ಹಿತವಚನವನ್ನಿತ್ತರು ಕುಮಾರಿ ಅನುರಾಧರವರಿಂದ ನೃತ್ಯ, ಶಾಲಾ ವಿದ್ಯಾರ್ಥಿಗಳಿಂದ ದೀಪಾವಳಿ ಎಂಬ ನಾಟಕಗಳಾದುವು ಕಲಾವಿದ ಶ್ರೀ ಟಿ ಜಿ ಘಟೇಕರ್‌ರವರು ಮನ್ಮಥ ದಹನವನ್ನು ಸೂಚಿಸುವ ದೃಶ್ಯವನ್ನು ಏರ್ಪಡಿಸಿದ್ದರು ಮಾಧ್ಯಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಸಿ ಎಸ್ ಸದಾಶಿವಯ್ಯನವರು ವಂದನಾರ್ಪಣೆ ಮಾಡಿದರು

ಶ್ವೇತಾದ್ರಿ ಪ್ರವಾಸ

ಚಾಮರಾಜನಗರದ ಸರ್ಕಾರಿ ಮಾಧ್ಯಮಿಕ ಶಾಲೆಯ ಭಾರತ ಸೇವಾದಳದ ೩೩ ಮಂದಿ ಸ್ವಯಂಸೇವಕರೂ ಮತ್ತು ೮ ಜನ ಉಪಾಧ್ಯಾಯರೂ ಚಾಮರಾಜನಗರಕ್ಕೆ ೨೨ ಮೈಲಿ ದೂರದಲ್ಲಿರುವ ಬಿಳಿಗಿರಿರಂಗನ ಬೆಟ್ಟಕ್ಕೆ ಸೇವಾದಳದ ಉಪಾಧ್ಯಾಯರಾದ ಶ್ರೀ ಟಿ ರಂಗಸ್ವಾಮಿಯವರ ನೇತೃತ್ವದಲ್ಲಿ ೧೫ನೇ ತಾರೀಕು ಪ್ರವಾಸ ಹೊರಟು ೧೬ನೇ ತಾರೀಕು ಬೆಟ್ಟದ ಮೇಲಿನ ಪ್ರೇಕ್ಷಣೀಯ ಸ್ಥಳಗಳನ್ನು ನೋಡಿಕೊಂಡು ರಾತ್ರಿ ಚಾಮರಾಜನಗರಕ್ಕೆ ವಾಪಸು ಬಂದರು

ಪ್ರಧಾನಿ ನೆಹರೂರವರು ಕಳೆದ ೧೬ ರಂದು ವಾಷಿಂಗ್ಟನ್ನನ್ನು ತಲುಪಿದಾಗ ಅಮೆರಿಕದ ಉಪಾಧ್ಯಕ್ಷ ರಿಚರ್ಡ್ ನಿಕ್ಸನ್ನರು ಅವರನ್ನು ಸ್ವಾಗತಿಸುತ್ತಿರುವುದು

ಮದ್ರಾಸ್ ಪ್ರಾಂತದಲ್ಲಿ ಸೈಕಲ್ ತೆರಿಗೆ ರದ್ದಿನ ಪ್ರಯತ್ನ

ಮದ್ರಾಸಿನ ಸ್ಥಳೀಯ ಸಂಸ್ಥೆಗಳ ಮಂತ್ರಿ ಎಸ್ ಎಸ್ ರಾಮಸ್ವಾಮಿ ಪಡಯಾಚಿಯವರು ಅಲ್ಲಿನ ಶಾಸನ ಸಭೆಯಲ್ಲಿ ಮಾತನಾಡುತ್ತಾ, ಪೌರಸಭೆಗಳು ಸೈಕಲ್ ತೆರಿಗೆಗಳನ್ನು ರದ್ದು ಮಾಡಲು ನಿರ್ಣಯ ಮಾಡಿ ಕಳುಹಿಸಿದರೆ ಅದನ್ನು ಸರ್ಕಾರದವರು ಆಯಾ ಸಂದರ್ಭಗಳಿಗನುಸಾರವಾಗಿ ಪರಿಶೀಲಿಸುವರೆಂದು ತಿಳಿಸಿರುವರು ಬೈಸಿಕಲ್ಲು ಬಡವರ ವಾಹನವೆಂಬುದನ್ನು ತಾವು ಅರಿತಿರುವುದಾಗಿ ಅವರು ಹೇಳಿ ಪೌರಸಭೆಗಳಿಗೆ ಸಾಲಸೋಲಗಳಿಲ್ಲದಿದ್ದರೆ ಈ ತೆರಿಗೆಯನ್ನು ರದ್ದು ಮಾಡಲು ಅವಕಾಶವೀಯುವುದಾಗಿ ನುಡಿದರು

A Provision Shop situated in a *good locality* on Vanivilas Road is open for immediate occupation with stocks and good-will Owner going out of City

Contact —
M A SRINIVASA IYENGAR
1045 Nan raj Agrahar,
MYSORE

Edited Printed and Published by A R Nagarajan at Sadhvi Press, D Subbiah Road, Mysore

ಎಲ್ಲಾ ಭಾಷೆಗಳಲ್ಲೂ ದೇವನಾಗರಿ ಲಿಪಿ ಬಳಸಲು

ದೇಶದಲ್ಲಿರುವ ನಾನಾ ಭಾಷೆಗಳಿಗೆಲ್ಲಾ ಒ
ದೇ ವಿಧವಾದ ಲಿಪಿಯಿರಬೇಕೆಂದು ರೈಲ್ವೆ ಮ
ತ್ರಿ ಜಗಜೀವನರಾಂರವರು ತಿಳಿಸಿರುತ್ತಾರೆ ಅ
ರಿಂದ ಜನಸಮೂಹದಲ್ಲಿ ಜ್ಞಾನ ಪ್ರಸಾರಕ್ಕೆ
ಲಭವಾಗುವುದೆಂದೂ ಅವರು ಹೇಳಿ, ದೇವನಾ
ರಿ ಲಿಪಿಯನ್ನು ಅದಕ್ಕಾಗಿ ಉಪಯೋಗಿಸಬ
ದೆಂದು ಸಲಹೆ ಮಾಡಿರುತ್ತಾರೆ

ಪ್ರಕಟಣೆ

ಮೈಸೂರು ೬ ಭಾಗದ ನಾನಾ
ಗಳು ಮತ್ತು ಕೋಟೆಗಳಲ್ಲಿರುವ ಈ
ಸುಂಕದ ಫಸಲನ್ನು ಮೈಸೂರಿನಲ್ಲಿರುವ
[illegible] ಮತ್ತು ತೋಟಗಳ [illegible]
ಸೂಪರಿಂಟೆಂಡೆಂಟರು 1956ನೇ ಡಿಸೆಂಬರ್ 3
ನೇ ತಾರೀಖು ಸೋಮವಾರ ಬೆಳಿಗ್ಗೆ 9-30
ಟೆಗೆ ಬಹಿರಂಗ ಹರಾಜು ಮೂಲಕ ಮಾ
ಮಾಡುವರೆಂದು ಸಾರ್ವಜನಿಕರ ಅವಗಾಹನೆ
ಈ ಮೂಲಕ ಪ್ರಕಟಿಸಲಾಗಿದೆ

ಹರಾಜಿನ ಷರತ್ತು ಮುಂತಾದುವು ಮೇಲ್ಕಂಡ
ಕಛೇರಿಯಲ್ಲಿ ಎಲ್ಲಾ ಕೆಲಸದ ದಿನಗಳಲ್ಲೂ
10-30 ಗಂಟೆಯಿಂದ ಸಂಜೆ 5-30
ದೊರೆಯುವುವು

ಎಂ ಜೆ. ಮರಿಗೌಡ,
ಸೂಪರಿಂಟೆಂಡೆಂಟು, ಸರ್ಕಾರಿ ಉದ್ಯಾನ
ಲಾಲ್‌ಬಾಗ್ ಬೆಂಗಳೂರು-2
ತಾ|| 10 ಡಿಸೆಂಬರ್ 1956

ಚಾಮುಂಡೇಶ್ವರಿ ಟಾಕೀಸ್
27-12-56 ರಿಂದ • ಜನಪ್ರಿಯ 2ನೇ ವಾರ : ಪ್ರತಿ ದಿನ 3 ಆಟ
ಸಮಯ — ಮ್ಯಾಟಿನಿ 2—40, 1ನೇ ಆಟ 6—20, 2ನೇ ಆಟ 10 ಘಂಟೆ
★ ಮಾದರಕುಲ ಮಾಣಿಕ್ಯಂ ★
ನಟವರ್ಗ — ಜೆಮಿನಿ ಗಣೇಶ, ಸಾವಿತ್ರಿ, ನಾಗೇಶ್ವರರಾವ್, ಅಂಜಲಿದೇವಿ, ರಂಗ
ಎಂ ಎನ್ ರಾಜಂ, ರಂಗಾರಾವ್, ರೇಲಂಗಿ, ಸಾರಂಗಪಾಣಿ, ಫ್ರೆಂಡ್ ರಾಮಸ್ವಾಮಿ
[AN EMERALD RELE

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
28-12-56ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನಗಳು
ವಿಕ್ರಮ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ
★ ಭಕ್ತ ಮಾರ್ಕಂಡೇಯ ★
([illegible] ಎಲ್ಲಾ [illegible])
ಪಾತ್ರವರ್ಗ — ಪುಷ್ಪವಲ್ಲಿ ನಾಗೇಂದ್ರರಾವ್ ಮಾಸ್ಟರ್ ಆನಂದ್, ರಘುರಾಮಯ್ಯ ಬೇಬಿ ಉಮಾ, ಪದ್ಮಿನಿ ಪ್ರಿಯದರ್ಶಿನಿ, ನರಸಿಂಹರಾಜು, ಬಾಲಕೃಷ್ಣ, ಡಿಕ್ಕಿ ಮಾಧವರಾವ್

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿಯ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ [illegible]
ಅಂಚೆ ಮೂಲಕ
ತಿಂಗಳಿಗೆ [illegible] ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ ೧೫] SADHVI : THURSDAY 27—12—1956 ಮೈಸೂರು : ಗುರುವಾರ ೨೭—೧೨—೧೯೫೬ [ಸಂಚಿಕೆ : ೧೫೩

ಕಲ್ಕತ್ತದಲ್ಲಿ ಸಹಸ್ರಾರು ಬಟ್ಟೆ ವರ್ತಕರ ಅನಿರ್ದಿಷ್ಟ ಹರತಾಳ

ಸಚಿವರು ಮತ್ತು ಶಾಸನ ಸಭಾಧ್ಯಕ್ಷರುಗಳ ಸಂಬಳಗಳಿಗೆ

ಬೆಂಗಳೂರು ೨೬

ಸಂಸ್ಥಾನದ ೧೩ ಮಂದಿ ಸಚಿವರು ಮತ್ತು ಉಭಯ ಶಾಸನ ಸಭಾಧ್ಯಕ್ಷರುಗಳ ಸಂಬಳ ಸಾರಿಗೆಗಳನ್ನು ಗೊತ್ತು ಪಡಿಸುವ ಮಸೂದೆಯಲ್ಲಿ ರೀತಿ ತಿಳಿಸಲಾಗಿದೆ —

ಸಚಿವರಿಗೆ ೯೦೦ ರೂ [illegible] ೬೦೦ ರೂ ಸಂಬಳ ಮತ್ತು ಅಧ್ಯಕ್ಷರುಗಳ ಅದೇ ಮೇರೆ ೨೧,೬೦೦ ರೂ ತಿಂಗಳಿಗೆ ೦ ರೂ ನಂತೆ ಸಚಿವರಿಗೆ ವಾರ್ಷಿಕ ೨೮,೮೦೦ ಮತ್ತು ಅಧ್ಯಕ್ಷರಿಗೆ ೪,೮೦೦ ರೂ ವಾಹನ ಭತ್ಯ ಕ್ರಮವಾಗಿ ಒಟ್ಟು ೮೧,೦೦೦ ರೂ ಮತ್ತು ೧೨ ೦೦೦ ರೂ ಪ್ರಯಾಣ ಭತ್ಯ, ಮನೆ ಬಾಡಿಗೆ ೬ ಮಂದಿ ಸಚಿವರಿಗೆ ತಿಂಗಳಿಗೆ ೨೫೦ ರೂ ನಂತೆ ೯ ೦೦೦ ರೂ ಅಧ್ಯಕ್ಷರಿಗೆ ಒಟ್ಟು ೦೦೦ ರೂ ಮೋಟಾರುಗಳ ಖರ್ಚು ತಿಂಗಳಿಗೆ ೨ ೦೦೦ ರೂ ನಂತೆ ೧೩ ಸಚಿವರ ಮತ್ತು ೦ ರೂ ಮೋಟಾರುಗಳ ಸಿಬ್ಬಂದಿಗೆ ೬೦೦ ರೂ ಮತ್ತು ೧೩,೬೦೦ ರೂ

ಶಾಸನಸಭಾ ಉಪಾಧ್ಯಕ್ಷರುಗಳಿಗೆ ತಿಂಗಳಿಗೆ ೦ ರೂ ನಂತೆ ೮ ೪೦೦ ರೂ ಸಂಬಳ ಶಾಸನ ಸದಸ್ಯರಿಗೆ ಮಾಹೆಯಾನ ೧೫೦ ರೂ ವೇತನಕ್ಕಾಗಿ ೪ ೭೦ ೦೦೦ ರೂ ಮತ್ತು ಪ್ರಯಾಣ ಭತ್ಯಗಳಿಗಾಗಿ ಒಟ್ಟು ೫ ಲಕ್ಷ ರೂ ಶಾಸನಸಭಾ ಸದಸ್ಯರುಗಳಿಗೆ ಮನೆಯಿದ್ದವರಿಗೆ ದಿನ ೧೨ ರೂ ಮತ್ತು ಇಲ್ಲದವರಿಗೆ ೧೬॥ ರೂ ಭತ್ಯವನ್ನು ಗೊತ್ತು ಪಡಿಸಲಾಗಿದೆ ಈ ಬಗ್ಗೆ ದ ಮಸೂದೆಗಳು ಅಂಗೀಕೃತವಾದುವು ಉಪ ಮಂತ್ರಿಗಳಿಗೆ ತಿಂಗಳಿಗೆ ೬೦೦ ರೂ ಸಂಬಳ ಮತ್ತು ಭತ್ಯವನ್ನೂ ಮುಂಗಡವಾಗಿ ಗೊತ್ತು ಪಡಿಸಲಾಗಿದೆ

ಅಕ್ರಮ ವ್ಯವಹಾರಕ್ಕಾಗಿ ವಿಮಾನಾಧಿಕಾರಿ ಬಂಧನ

೪೮ ೦೦೦ ರೂ ಬಗ್ಗೆ ಅಕ್ರಮ ವ್ಯವಹಾರ ನಡೆಸಿದರೆಂದು ಪೂನಾ ವಿಮಾನ ದಳದ ಸ್ಕ್ವಾಡ್ರನ್ ಲೀಡರ್ ಲಾಲ್ ಎಂಬುವವರನ್ನು ಮಿಲಿಟರಿಯವರು ಬಂಧಿಸಿರುತ್ತಾರೆ ಅವರ ವಿರುದ್ಧ ಪೂನಾ ಸರಲ್ಲಿ ಮೊಕದ್ದಮೆಯನ್ನು ದಾಖಲು ಮಾಡಲಾಗಿದೆ ಕಳೆದ ೨೧ನೇ ತಾರೀಖು ಗಳ ತನಿಖೆ ನಡೆದಾಗ ಅಕ್ರಮಗಳು ಪತ್ತೆಯಾದುವು

ಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೫ ಗಾಂಧಿ ಕಥಾವಳಿ ೭ ೧೫ ಎ ಸ್ತುತಿ ದೇವರನಾಮ ೭-೩೦ ಹಿಂದಿ ವಾರ ಕೀರ್ತನೆ ಮಧ್ಯಾಹ್ನ ೧೨ ಮತ್ತು ೧ ೫೦ ಚಕ್ರವರ್ತಿ ಸಂಗೀತ ೧೨ ೩೦ ವಾದ್ಯ ೧ ೪೫ ವನಿತಾ ವಿಹಾರ ೨ ೧೫ ಸಂ ಕಚೇರಿ ಸಂಜೆ ೫-೩೦ ಎಸ್ ಬಿ ಶೇಷ ಗಿರಿ ಸಂಗೀತ ೬ ೫ ವಿರಾಮ ಸಂಗೀತ ೦ ಗೀತಾವಳಿ ೭ ೩೦ ವಾರ್ತಾವಲೋಕನ ಮತ್ತು ೧೦ ಸಂಗೀತೋತ್ಸವ ಮದ್ರಾಸ್ ೯-೧೫ ಗಾನ ಮಂಜರಿ ೯ ೩೦ ಇಂದ್ರ ನ್ ಹಿಂದಿ ಕಾರ್ಯಕ್ರಮ

ವಿರಾಮ ವೇತನ ಮಂಜೂರಾತಿಗೆ ವಿಳಂಬವಾಗುವುದಿಲ್ಲ

ಹಣಕಾಸಿನ ಮಂತ್ರಿಯವರ ಭರವಸೆ

ಬೆಂಗಳೂರು ೨

ವಿಧಾನಸಭೆಯಲ್ಲಿ ನೆನ್ನೆ ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ಒಂದು ಪ್ರಶ್ನೆಗೆ ಉತ್ತರವಿತ್ತು ವಿಶ್ರಾಂತಿ ಪಡೆದ ನೌಕರರಿಗೆ ಪೆನ್ಷನ್ ಮಂಜೂರಾತಿಯಲ್ಲಿ ಕೆಲ ವಿಳಂಬವಾಗುತ್ತಿರುವುದು ದುರದೃಷ್ಟಕರವೆಂದೂ ಅದನ್ನು ತಪ್ಪಿಸಲು ಕಾಗದಪತ್ರಗಳನ್ನು ಬೇಗನೆ ಮಂಜೂರು ಮಾಡುವುದಕ್ಕೆ ಸರ್ಕಾರದವರು ಸೂಚನೆಯಿತ್ತಿರುವರೆಂದೂ ತಿಳಿಸಿದರು

೯೧ ಸಂದರ್ಭಗಳಲ್ಲಿ ನೌಕರರ ಮರಣಾನಂತರ ವಿರಾಮ ವೇತನವು ಸಂದಾಯವಾಗಿಲ್ಲವೆಂದೂ ಸಚಿವರು ಹೇಳಿದರು

ಇಂಡೋನೇಷ್ಯಾ ದಂಗೆಯಿಂದ ದೇಶದ ಅಸ್ತಿತ್ವಕ್ಕೆ ಧಕ್ಕೆ

ಮಧ್ಯ ಮತ್ತು ಉತ್ತರ ಸುಮಾತ್ರದಲ್ಲಿ ಕಳೆದ ವಾರ ಸೈನ್ಯವು ಹೂಡಿದ ದಂಗೆಯು ವಿಫಲವಾಗಿ ಕಾನೂನು ಕ್ರಮ ನಡೆಸಲು ಇಂಡೋನೇಷ್ಯಾ ಸೈನ್ಯವು ಸಿದ್ಧವಾಗುತ್ತಿರುವುದಾಗಿಯೂ ಸೈನಿಕರ ದಳವನ್ನು ರದ್ದು ಮಾಡಲಾಗಿರುವುದೆಂದೂ ವರದಿಯಾಗಿದೆ ಅಧ್ಯಕ್ಷ ಸುಕರ್ನೋರವರು ರೇಡಿಯೋವಿನಲ್ಲಿ ನೆನ್ನೆ ಭಾಷಣ ಮಾಡಿ ಈ ದಂಗೆಯಿಂದ ದೇಶದ ಅಸ್ತಿತ್ವಕ್ಕೆ ಅಭದ್ರವಾಗಿರುವುದೆಂದು ತಿಳಿಸಿದರು

ಫುಟ್ ಬಾಲ್ ಸಮಿತಿಯವರ ಶಿಸ್ತಿನ ಕ್ರಮ

ಮೈಸೂರು ಬ್ಲೂಸ್ ಫುಟ್ ಬಾಲ್ ಕ್ಲಬ್ಬಿನ ಕಾರ್ಯದರ್ಶಿಯವರಾದ ಶ್ರೀ ಎಂ ಎಸ್ ತಿಮ್ಮಪ್ಪನವರು ಕಳೆದ ತಿಂಗಳು ೧೮ರಲ್ಲಿ ಬೆಂಗಳೂರಿನಲ್ಲಿ ಸೇರಿದ್ದ, ಅಧಿಕೃತವಲ್ಲದ ಫುಟ್ ಬಾಲ್ ಸಮ್ಮೇಳನದಲ್ಲಿ ನಗರದ ಪ್ರತಿನಿಧಿಯೆಂದು ಅಕ್ರಮವಾಗಿ ಹೇಳಿಕೊಂಡು ಭಾಗವಹಿಸಿದುದಕ್ಕಾಗಿ ಅವರನ್ನು ಮೈಸೂರು ವಿಭಾಗದ ಫುಟ್ ಬಾಲ್ ಸಮಿತಿಯವರು ಸಂಸ್ಥೆಯ ಸದಸ್ಯತ್ವದಿಂದ ತೆಗೆದುಹಾಕಿರುತ್ತಾರೆ ಕಳೆದ ಭಾನುವಾರ ಈ ಬಗ್ಗೆ ವಿಶೇಷ ಸಭೆಯು ನಡೆದು ಅದರಲ್ಲಿ ೩೦ ೪ ಓಟುಗಳಿಂದ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಯಿತು

ವಿಧಾನ ಸಭಾ ಉಪಾಧ್ಯಕ್ಷರಾಗಿ ಎಂ ಕೆ ರಾಮಪುರಿಯವರ ಆಯ್ಕೆ

ಗುಲ್ಬರ್ಗದ ಶ್ರೀ ಮಹೇಶ್ವರಪ್ಪ ಯಶವಂತರಾವ್ ರಾಮಪುರಿಯವರು ವಿಧಾನ ಪರಿಷತ್ತಿನ ಉಪಾಧ್ಯಕ್ಷರಾಗಿ ನೆನ್ನೆ ಸರ್ವಾನುಮತದಿಂದ ಚುನಾಯಿತರಾದರು

ಜನವರಿ ೧ರಿಂದ ಉತ್ತರ ಕರ್ನಾಟಕದ ರಸ್ತೆ ಸಂಚಾರ ವ್ಯವಸ್ಥೆ ರಾಷ್ಟ್ರೀಕರಣ

ಬೊಂಬಾಯಿ ಕರ್ನಾಟಕದ ನಾಲ್ಕು ಜಿಲ್ಲೆಗಳ ರಸ್ತೆ ಸಂಚಾರ ವ್ಯವಸ್ಥೆಯನ್ನು ಬರುವ ೧ನೇ ತಾರೀಖಿನಿಂದ ಮೈಸೂರು ಸರ್ಕಾರದವರು ತಮ್ಮ ವಶಕ್ಕೆ ತೆಗೆದುಕೊಳ್ಳುವರೆಂದು ಗೃಹ ಮಂತ್ರಿ ಶ್ರೀ ಎಂ ವಿ ರಾಮರಾಯರು ತಿಳಿಸಿರುತ್ತಾರೆ

ಜಲಿಯನ್‌ವಾಲಾಬಾಗ್ ಸ್ಮೃತಿಕೆ ಪೋರ್ಟ್ ಸೈಯದ್ದಿಗೆ

ಪೋರ್ಟ್ ಸೈಯದ್ದಿನಲ್ಲಿ ಹುತಾತ್ಮರಾದವರ ಸ್ಮಾರಕಕ್ಕಾಗಿ ಉಪಯೋಗಿಸಲು ಅಮೃತಸರದ ನಿವಾಸಿಯೊಬ್ಬರು ಜಲಿಯನ್‌ವಾಲಾಬಾಗ್ ಸ್ಮೃತಿಕೆಯನ್ನು ಈಜಿಪ್ಟಿನ ರಾಯಭಾರಿಗೆ ಕಳುಹಿಸಿಕೊಟ್ಟಿರುತ್ತಾರೆ ೧೯೧೯ರಲ್ಲಿ ಬ್ರಿಟಿಷರ ಕೈಯಿಂದ ನೂರಾರು ಜನರು ಜಲಿಯನ್‌ವಾಲಾಬಾಗಿನಲ್ಲಿ ಕೊಲೆ ಮಾಡಲ್ಪಟ್ಟಿದ್ದರೆಂದೂ ಅದೇ ರೀತಿ ಪೋರ್ಟ್ ಸೈಯದ್ದಿನಲ್ಲೂ ಆಗಿರುವುದಾಗಿಯೂ ಅವರು ಹೇಳಿರುತ್ತಾರೆ ಈಜಿಪ್ಟ್ ರಾಯಭಾರಿಯು ಇದಕ್ಕಾಗಿ ಕೃತಜ್ಞತೆಯನ್ನು ಸೂಚಿಸಿರುತ್ತಾರೆ

ಕೇಂದ್ರ ಸರ್ಕಾರದ ನೌಕರರಿಂದ ೧ ದಿನದ “ ವೇತನ ಸತ್ಯಾಗ್ರಹ ”

ಬರುವ ತಿಂಗಳು ೨ನೇ ತಾರೀಖು ವೇತನ ಸತ್ಯಾಗ್ರಹವನ್ನು ನಡೆಸುವುದಕ್ಕೆ ಕೇಂದ್ರ ಸರ್ಕಾರದ ನೌಕರರ ಸಂಘವು ಆಲೋಚಿಸಿದೆ ಸಂಘದಲ್ಲಿ ಒಟ್ಟು ೭ ಲಕ್ಷ ಸದಸ್ಯರಿರುವರು ಸಂಘದ ಶಾಖೆಗಳೆಲ್ಲವೂ ಸತ್ಯಾಗ್ರಹಕ್ಕೆ ಒಪ್ಪಿರುವುದಾಗಿ ಹೇಳಲಾಗಿದೆ ಆ ದಿನ ನೌಕರರಾರೂ ಸಂಬಳವನ್ನು ಪಡೆಯದೆ ಮೆರವಣಿಗೆ ಸಭೆ ಮುಂತಾದುವನ್ನು ನಡೆಸುವರು ಸಂಬಳದ ವಿಚಾರವಾಗಿ ಕೆಲಸಗಾರರ ಮನೋಭಾವವನ್ನು ತಿಳಿಸಲು ಈ ರೀತಿ ಸಾಂಕೇತಿಕ ಪ್ರದರ್ಶನ ಮಾಡಲಾಗುವುದು

ರಷ್ಯಕ್ಕೆ ಚೀನಾ ಪ್ರಧಾನಿಯೊಡನೆ ಮೌಟ್ಸೆ ಟುಂಗರ ಭೇಟಿ

ಚೀನದ ಪ್ರಧಾನಿ ಚೌ ಎನ್ ಲೈಯವರು ಮಾಸ್ಕೋಗೆ ಬರುವ ತಿಂಗಳು ಹೋಗುವಾಗ ಅವರೊಡನೆ ಅಲ್ಲಿನ ಅಧ್ಯಕ್ಷ ಮೌಟ್ಸೆ ಟುಂಗರೂ ತೆರಳುವರೆಂದು ತಿಳಿದುಬಂದಿದೆ ಚೌ ಎನ್ ಲೈರವರು ನೆನ್ನೆ ಶಾಂತಿನಿಕೇತನಕ್ಕೆ ಭೇಟಿಯಿತ್ತು ಅಲ್ಲಿನ ವಿಶ್ವವಿದ್ಯಾಲಯದ ಯೋಗಕ್ಷೇಮ ನಿಧಿಗಾಗಿ ೨೦,೦೦೦ ರೂ ಗಳನ್ನು ಕೊಟ್ಟಿರುತ್ತಾರೆ

ಹರಿಕಥೆ

ಕೃಷ್ಣಮೂರ್ತಿಪುರದ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಶ್ರೀ ಹರಿನಾರಾಯಣದಾಸರು ಸಂತ ತುಳಸೀದಾಸ್ ಎಂಬ ಕೀರ್ತನೆಯನ್ನು ನಡೆಸುವರು

ಸೀತಾವಿಲಾಸ ಅಗ್ರಹಾರದಲ್ಲಿರುವ ಸೀತಾರಾಮ ದೇವಸ್ಥಾನದಲ್ಲಿ ಈ ರಾತ್ರಿ ೭॥ ಗಂಟೆಗೆ ಏಕಾದಶಿ ಪ್ರಯುಕ್ತ ವೇ॥ ಬ್ರಹ್ಮಶ್ರೀ ವೇಣುಗೋಪಾಲದಾಸರಿಂದ ಭಕ್ತ ಪ್ರಹ್ಲಾದ ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ ಸರ್ವರಿಗೂ ಸ್ವಾಗತವುಂಟು

ಫುಟ್‌ಬಾಲ್ ಪಂದ್ಯ

ಹಾಸನದಲ್ಲಿ ನಡೆಯುತ್ತಿರುವ ಫುಟ್ ಬಾಲ್ ಟೂರ್ನಮೆಂಟಿನಲ್ಲಿ ಮೊನ್ನೆ ಆದ ಪಂದ್ಯದಲ್ಲಿ ಮೈಸೂರು ಫ್ರೆಂಡ್ಸ್ ಯೂನಿಯನ್ ಫುಟ್ ಬಾಲ್ ಕ್ಲಬ್ಬಿನವರು ಹಾಸನದ ಸೆಲೆಕ್ಟ್ ಯೂನಿಯನ್ ಟೀಮಿನವರನ್ನು [illegible] ೦ ಗೋಲುಗಳಿಂದ ಸೋಲಿಸಿದ್ದಾರೆ

ಸರ್ಕಾರಿ ಕೈಗಾರಿಕೆಗಳಲ್ಲಿ ಹೊಸ ಪ್ರಮಾಣದ ಸಂಬಳವಿಲ್ಲ

ವಿಧಾನ ಸಭೆಯಲ್ಲಿ ಹಣಕಾಸಿನ ಸಚಿವರ ಹೇಳಿಕೆ

ಸ್ವಂ ಸು ತಂತಿ] ಬೆಂಗಳೂರು ೨೬

ಈ ದಿನ ವಿಧಾನ ಸಭೆಯಲ್ಲಿ ಹಣಕಾಸಿನ ಮಂತ್ರಿ ಶ್ರೀ ಟಿ ಮರಿಯಪ್ಪನವರು ಪ್ರಶ್ನೆಯೊಂದಕ್ಕೆ ಉತ್ತರವಿತ್ತು ಎ [illegible] ಗಳ ಸಂಬಳದ ವಿಚಾರವನ್ನು ಕ್ರಿಯಾತ್ಮಕವಾಗಿ ಪರಿಶೀಲಿಸುತ್ತಿರುವುದಾಗಿಯೂ, ಹೊಸ ಸಂಬಳದ ಪ್ರಶ್ನೆಯು ಸರ್ಕಾರಿ ಕೈಗಾರಿಕೆಗಳಲ್ಲಿರುವ ನೌಕರರಿಗೆ ಅನ್ವಯವಾಗುವುದಿಲ್ಲವೆಂದೂ, ಅವರಿಗಾಗಿಯೇ ಬೇರೊಂದು ಸಮಿತಿ ರಚಿಸುವುದಕ್ಕೆ [illegible] ಸಮಿತಿಯು ಶಿಫಾರಸು ಮಾಡಿರುವುದೆಂದೂ, ಆ ವಿಷಯವು ಪರಿಶೀಲನೆಯಲ್ಲಿರುವುದಾಗಿಯೂ ತಿಳಿಸಿದರು ಹೊಸ ಸಂಬಳದ ಪ್ರಮಾಣವು ಮದ್ರಾಸು ಮಟ್ಟಕ್ಕಿಂತಲೂ ಉತ್ತಮವೆಂದು ಸೂಚಿಸಿದರು

ಸಭೆಯಲ್ಲಿ ಶ್ರೀ ಬಿ ವಿ ನಾರಾಯಣರೆಡ್ಡಿಯವರು ತೆಲುಗಿನಲ್ಲಿ ಪ್ರಶ್ನೆಗಳನ್ನು ಕೇಳಿದಾಗ ಮಂತ್ರಿ ಶ್ರೀ ಪಾಟೀಲರು ಉತ್ತರ ಕೊಡಲು ಸಾಧ್ಯವಾಗಲಿಲ್ಲ ಅಧ್ಯಕ್ಷರು ಸದಸ್ಯರನ್ನು ಇಂಗ್ಲಿಷ್ ಅಥವಾ ಕನ್ನಡದಲ್ಲಿ ಅದನ್ನು ಮತ್ತೆ ಮಾತನಾಡುವಂತೆ ಆಜ್ಞಾಪಿಸಿದರು

ಮಲ್ಪೆ ಮತ್ತು ಮಂಗಳೂರುಗಳನ್ನು ಪಕ್ಕಾ ರೇವುಗಳಾಗಿ ಮಾಡುವಂತೆ ಕೇಂದ್ರವನ್ನು ಕೋರಲಾಗಿದೆಯೆಂದು ಮರಾಮತ್ತು ಸಚಿವರು ತಿಳಿಸಿರುವರು

ಕಲ್ಕತ್ತದಲ್ಲಿ ಬಟ್ಟೆ ವರ್ತಕರ ಹರತಾಳ

ಮಾರಾಟ ತೆರಿಗೆ ವಸೂಲಾತಿ ಕ್ರಮದ ಬಗ್ಗೆ ಪ್ರತಿಭಟನೆ

ಕಲ್ಕತ್ತದ ಸುಮಾರು ಏಳುಸಾವಿರ ಬಟ್ಟೆ ವರ್ತಕರ ಪೈಕಿ ಬಹು ಮಂದಿ, ಮಾರಾಟ ತೆರಿಗೆ ವಸೂಲಾತಿ ಕ್ರಮದ ಬಗ್ಗೆ ಪ್ರತಿಭಟಿಸಲು ನೆನ್ನೆಯಿಂದ ಅನಿರ್ದಿಷ್ಟ ಕಾಲದ ಹರತಾಳವನ್ನಾರಂಭಿಸಿದರು ತೆರಿಗೆಯನ್ನು ಚಿಲ್ಲರೆ ವ್ಯಾಪಾರಿಗಳಿಂದ ವಸೂಲು ಮಾಡದೆ, ಮೂಲ ಸ್ಥಳದಲ್ಲೇ ತೆಗೆದುಕೊಳ್ಳಬೇಕೆಂಬುದೇ ಅವರ ಅಪೇಕ್ಷೆಯು ಅಂಗಡಿಗಳನ್ನು ತೆರೆಯಲು ಇಚ್ಛಿಸಿದವರ ಮೇಲೆ ಭಯೋತ್ಪಾದನೆ ಮಾಡಿದರೆಂದು ೫೦ ಜನರನ್ನು ಪೋಲೀಸರು ಬಂಧಿಸಿರುತ್ತಾರೆ

ಸೂಯೆಜ್ ಕಾಲುವೆ ನಿರ್ಮಾಪಕನ ಪ್ರತಿಮೆಯ ಉಚ್ಚಾಟನೆ

ಸೂಯೆಜ್ ಕಾಲುವೆಯನ್ನು ೧೫೦ ವರ್ಷಗಳ ಹಿಂದೆ ನಿರ್ಮಾಣ ಮಾಡಿದ ಫ್ರೆಂಚ್ ಇಂಜಿನಿಯರ್ ಫರ್ಡಿನೆಂಡ್ ಡಿ ಲೆಸೆಪ್ಸ್‌ರವರ ಪ್ರತಿಮೆಯನ್ನು ಕಳೆದ ಸೋಮವಾರ ಈಜಿಪ್ಟಿನವರು ಡೈನಾಮೈಟ್ ಹಾಕಿ ಸಿಡಿಸಿ ಕಾಲುವೆಗೆ ಉರುಳಿಸಿದರೆಂದು ವರದಿಯಾಗಿದೆ

ಶುಭಾಶಯ

ನಗರದ ಶ್ರೀ ಗಣೇಶ ಟಾಕೀಸಿನವರು ಕಳುಹಿಸಿರುವ ಕ್ರಿಸ್ಮಸ್ ಮತ್ತು ಹೊಸ ವರ್ಷದ ಶುಭಾಶಯಗಳಿಗಾಗಿ ಕೃತಜ್ಞತೆಯನ್ನು ಸೂಚಿಸಿದ್ದೇವೆ

ನಗರದ ಸ್ಕೌಟುಗಳಿಗೆ ಬಹುಮಾನಗಳು

ಮೈಸೂರು ೨೬

ನಗರದಲ್ಲಿರುವ ಸ್ಕೌಟುಗಳಿಗೆ ಭಾರತ ಚಮೂ ದಳದ ಕೇಂದ್ರ ಕಛೇರಿಯವರು ಕೆಳಗೆ ಕಂಡಂತೆ ಬಹುಮಾನಗಳನ್ನು ಹಂಚಿರುತ್ತಾರೆ:

ಆನರರಿ ಚಾರ್ಜಸ್ ಆಫ್ ಡೆಪ್ಯುಟಿ ಕ್ಯಾಂಪ್ ಚೀಫ್: ಶ್ರೀಗಳಾದ ಬಿ. ಟಿ. ಶ್ರೀನಿವಾಸಯ್ಯಂಗಾರ್, ಎಂ. ಎಸ್. ಶ್ರೀನಿವಾಸರಾವ್ ಮತ್ತು ಎಂ. ಜಿ. ವೆಂಕಟರಾವ್; ವಂದನೆಯ ಪದಕ: ಜಿಲ್ಲಾ ಸ್ಕೌಟು ಸಂಘದ ಮಾಜಿ ಅಧ್ಯಕ್ಷ ಶ್ರೀ ಕೆ. ಪುಟ್ಟಸ್ವಾಮಿ; ದೀರ್ಘ ಸೇವಾ ಪದಕ: ಶ್ರೀಗಳಾದ ಎಂ. ಆರ್. ರಾಮಸ್ವಾಮಿ, ಕೆ. ವಿ. ವೆಂಕಟಸುಬ್ಬಯ್ಯ ಮತ್ತು ಎಂ. ಎಲ್. ಸುಬ್ಬನರಸಿಂಹಯ್ಯ; ಅರ್ಹತೆ ಪದಕ: ಶ್ರೀಗಳಾದ ಎಂ. ಎಸ್. ತಿರುಮಲಾಚಾರ್, ರತ್ನಂ ಕೃಷ್ಣ ಅಯ್ಯಂಗಾರ್, ಎಸ್. ಸೂರ್ಯನಾರಾಯಣ ಮತ್ತು ವಿ. ಗೋವಿಂದರಾಜ್.

ದಿಂಡಿ ಮಹೋತ್ಸವ

ಕಬೀರ್ ರಸ್ತೆಯ ಶ್ರೀ ಪಾಂಡುರಂಗಸ್ವಾಮಿ ದೇವಾಲಯದಲ್ಲಿ ಸಂತ್ ಸೋಪಾನ ದೇವರ ಪುಣ್ಯತಿಥಿಯ ದಿಂಡಿ ಮಹೋತ್ಸವವು ಇಂದಿನಿಂದ ಭಾನುವಾರದ ವರೆಗೆ ನಡೆಸಲ್ಪಡುವುದು ಭಾನುವಾರ ಮಧ್ಯಾಹ್ನ ಸಂತರ್ಪಣೆಯು ಇದೆ. ಈ ದಿನದಿಂದ ನಿತ್ಯವೂ ಬೆಳಗ್ಗೆ ಅಭಿಷೇಕ, ಪೂಜೆ ಮತ್ತು ಅಖಂಡ ಭಜನೆಗಳು ನಡೆಯುವುವು ಈ ದಿನ, ನಾಳೆ ಮತ್ತು ನಾಳಿದ್ದು ಸಂಜೆ ೬ ಗಂಟೆಗೆ ವಿ|| ಎಂ. ಎಲ್. ನಾರಾಯಣದಾಸರು ರಾಮಾಂಜನೇಯ ಸಂವಾದ, ಕೃಷ್ಣಾರ್ಜುನರ ಕಾಳಗ ಮತ್ತು ಸುಭದ್ರಾ ಕಲ್ಯಾಣ ಎಂಬ ಕಥೆಗಳನ್ನು ಮಾಡುವರು. ೨ನೇ ತಾರೀಖು ಸಂಜೆ ಉತ್ಸವವಿದೆ.

ಶ್ರೀರಂಗಪಟ್ಟಣದಲ್ಲಿ ಕ್ರಿಕೆಟ್ ಪಂದ್ಯ

ಶ್ರೀರಂಗಪಟ್ಟಣದಲ್ಲಿ ಕಳೆದ ಭಾನುವಾರ ಕೆ. ಎಂ. ಪಿ. ಸಿ. ಸಿ. ಯವರಿಗೂ, ರಂಗನಾಥ ಕ್ರಿಕೆಟ್ ಕ್ಲಬ್ಬಿನವರಿಗೂ ನಡೆದ ಪಂದ್ಯದಲ್ಲಿ ಕೆ. ಎಂ. ಪಿ. ಸಿ. ಸಿ. ಯವರು ೯ ವಿಕೆಟ್ಟುಗಳಿಂದ ಜಯಗಳಿಸಿದರು.

ಬಳ್ಳಾರಿಯಲ್ಲಿ ಸಮಾಜವಾದಿಗಳ ಸಮ್ಮೇಳನ

ಸಂಸ್ಥಾನದ ಸಮಾಜವಾದಿಗಳ ಸಮ್ಮೇಳನವು ಕಳೆದ ಸೋಮವಾರ ಬಳ್ಳಾರಿಯಲ್ಲಿ ಸೇರಿತು. ಶ್ರೀ ಎಸ್. ಶಿವಪ್ಪನವರು ಅಧ್ಯಕ್ಷತೆ ವಹಿಸಿದ್ದರು. ಆಂಧ್ರ ಸಮಾಜವಾದಿ ಮುಖಂಡ ಪಿ. ವಿ. ಜಿ. ರಾಜುರವರು ಆರಂಭೋತ್ಸವವನ್ನು ನೆರವೇರಿಸಿ ಸಮಾಜವಾದಿ ಪಕ್ಷವು ಸ್ಥಾಪಿಸಲ್ಪಟ್ಟು ೧ ವರ್ಷದಲ್ಲೇ ಅದರ ಸದಸ್ಯರ ಸಂಖ್ಯೆಯು ೩ ಲಕ್ಷಕ್ಕೆ ಏರಿರುವುದೆಂದು ತಿಳಿಸಿದರು. ಮೈಸೂರು ಸಂಸ್ಥಾನದಲ್ಲಿ ಸಮಾಜವಾದಿಗಳ ಪ್ರಭಾವವು ಕಡಿಮೆಯಾಗಿರುವುದಕ್ಕೆ ಅವರು ವಿಷಾದಿಸಿದರು. ಆಂಧ್ರ ಮತ್ತು ಮದ್ರಾಸುಗಳಲ್ಲಿ ೨೭ ಸಾವಿರ ಮತ್ತು ೬೮ ಸಾವಿರ ಸದಸ್ಯರಿರುವಾಗ ಮೈಸೂರಿನಲ್ಲಿ ೮,೦೦೦ ಮಾತ್ರ ಸದಸ್ಯರಿರುವರೆಂದು ಅವರು ಹೇಳಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಕಾಂಗ್ರೆಸ್ಸಿನಲ್ಲಿ ಸರ್ವಾಧಿಕಾರ ಪ್ರವೃತ್ತಿಯು ಹೆಚ್ಚುತ್ತಿರುವುದೆಂದು ಸೂಚಿಸಿ, ಕಾಂಗ್ರೆಸ್ ಸರ್ಕಾರಗಳು ದಕ್ಷತೆಯಿಲ್ಲದ ಮತ್ತು ಲಂಚಗುಳಿತನದ ಆಡಳಿತವನ್ನು ನಡೆಸುತ್ತಿರುವುದಾಗಿ ಸೂಚಿಸಿದರು.

ದೆಹಲಿಗೆ ಗವರ್ನರರ ಪ್ರಯಾಣ

ಗವರ್ನರ್ ಶ್ರೀ ಜಯಚಾಮರಾಜಒಡೆಯರು ಈ ದಿನ ದೆಹಲಿಯ ಅಭಿಮುಖವಾಗಿ ಬೆಂಗಳೂರಿಗೆ ತೆರಳಿದರು. ಅವರು ಮದ್ರಾಸಿಗೆ ಭೇಟಿ ಕೊಟ್ಟು ಅಲ್ಲಿಂದ ಕಲ್ಕತ್ತಾ, ಕಾಶಿ ಮುಂತಾದುವುಗಳನ್ನು ಸಂದರ್ಶಿಸಿ ದೆಹಲಿಯನ್ನು ತಲಪುವರು. ಪ್ರಧಾನಿ ನೆಹರೂ ಮುಂತಾದವರನ್ನು ಅವರು ಭೇಟಿ ಮಾಡಲಿರುವರು.

ವಿವಾಹೋಪನಯನ

ನಗರದ ರಮಾವಿಲಾಸ ರಸ್ತೆಯಲ್ಲಿರುವ ಹರಿಕಥಾ ವಿ|| ಹರಿಸರ್ವೋತ್ತಮದಾಸರು ಕಳೆದ ಭಾನುವಾರ ತಮ್ಮ ದ್ವಿತೀಯ ಪುತ್ರ ಚಿ|| ಸುತೀರ್ಥಕುಮಾರನಿಗೆ ಉಪನಯನವನ್ನೂ, ಸೋಮವಾರ ತಮ್ಮ ಪುತ್ರಿ ಸೌ|| ಸುನಂದಾರವರನ್ನು ಬಾಗಿಲಕೋಟೆಯ ಶ್ರೀ ಅಣ್ಣಾಚಾರ್ಯ ಬಿಂದಾಚಾರ್ಯ ನಾಗಸಂಪಿಗೆಯವರ ದ್ವಿತೀಯ ಪುತ್ರ ಶ್ರೀ ಭೀಮಸೇನರಾಯರಿಗೆ ಕೊಟ್ಟು ವಿವಾಹವನ್ನೂ ನೆರವೇರಿಸಿದರು

ಕಾಂಗ್ರೆಸ್ಸಿಗೆ ದಕ್ಷಿಣ ಭಾರತದ ಮುಸ್ಲಿಮರ ಬೆಂಬಲ

ದಕ್ಷಿಣ ಭಾರತದ ಮುಸ್ಲಿಮರ ಸಮ್ಮೇಳನವು ಮದ್ರಾಸಿನಲ್ಲಿ ಕಳೆದ ಸೋಮವಾರ ಸೇರಿತ್ತು. ಕೇಂದ್ರ ವಿದೇಶಾಂಗ ವ್ಯವಹಾರ ಇಲಾಖಾ ಮಂತ್ರಿ ಡಾ|| ಸೈಯದ್ ಮಹಮೂದ್‌ರವರು ಅಧ್ಯಕ್ಷತೆ ವಹಿಸಿದ್ದರು. ೭೦೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು. ಮುಸ್ಲಿಮರಿಗಾಗಿಯೇ ಪ್ರತ್ಯೇಕ ರಾಜಕೀಯ ಸಂಸ್ಥೆಗಳನ್ನು ಕಟ್ಟುವುದು ಸರಿಯಲ್ಲವೆಂದು ಸಮ್ಮೇಳನವು ಸೂಚಿಸಿ, ಮುಸ್ಲಿಂ ಲೀಗಿನಂತಹ ಸಂಸ್ಥೆಗಳಿಂದ ದೇಶಕ್ಕೆ ಹಾನಿಯೆಂದು ನಿರ್ಣಯವನ್ನು ಮಾಡಲಾಯಿತು. ಕಾಂಗ್ರೆಸ್ ಸಂಸ್ಥೆಗೆ ಮುಸಲ್ಮಾನರು ಸೇರಿ ಅದಕ್ಕೆ ಬೆಂಬಲ ನೀಡಬೇಕೆಂದೂ ಸೂಚಿಸಲಾಯಿತು.

ಮೈಸೂರು ಸರ್ಕಾರಿ ಉದ್ಯಾನವನಗಳ ಸೂಪರಿಂಟೆಂಡೆಂಟರ ಕಛೇರಿ, ಲಾಲ್‌ಬಾಗ್,
ಬೆಂಗಳೂರು-2

ಪ್ರಕಟಣೆ

ಮೈಸೂರು ಕುಕ್ಕರಹಳ್ಳಿ ಕೆರೆಯ ಹಿಂದಿನ ಇಳಿಜಾರಿನಲ್ಲಿ ತಂತಿ ಬೇಲಿ ಹಾಕಿರುವ ಸುಮಾರು ಐದು ಎಕರೆ ಪ್ರದೇಶದಲ್ಲಿ ಬೆಳೆದಿರುವ ಹುಲ್ಲನ್ನು ಕುಯ್ಯುವ ಹಕ್ಕನ್ನು 1956ನೇ ಡಿಸೆಂಬರ್ 29ನೇ ತಾರೀಖು ಶನಿವಾರ ಬೆಳಗ್ಗೆ 9-30 ಗಂಟೆಗೆ ಮೈಸೂರಿನಲ್ಲಿರುವ ಪಾರ್ಕ್ಸ್ ಮತ್ತು ತೋಟಗಳ ಅಸಿಸ್ಟೆಂಟ್ ಸೂಪರಿಂಟೆಂಡೆಂಟರು ಬಹಿರಂಗ ಹರಾಜಿನಲ್ಲಿ ಮಾರಾಟ ಮಾಡುವರೆಂದು ಈ ಮೂಲಕ ಸಾರ್ವಜನಿಕರ ತಿಳುವಳಿಕೆಗೆ ಪ್ರಕಟಿಸಲಾಗಿದೆ. ಗುತ್ತಿಗೆ ಅವಧಿಯು 1-1-1957ರಿಂದ 31-12-57ರ ವರೆಗೆ ಇರುತ್ತದೆ. ಮಾರಾಟದ ಷರತ್ತು ಇತ್ಯಾದಿಗಳನ್ನು ಮೇಲ್ಕಂಡ ಕಛೇರಿಯಲ್ಲಿ ಕೆಲಸದ ದಿನ ಬೆಳಗ್ಗೆ 10-30 ಗಂಟೆಯಿಂದ ಸಂಜೆ 5-30ರ ವರೆಗೆ ಪಡೆಯಬಹುದು

ಎಂ. ಹೆಚ್. ಮರಿಗೌಡ,
ಸೂಪರಿಂಟೆಂಡೆಂಟರು

ರಾಷ್ಟ್ರೀಯ ಕಲಾ, ಮಹಾ ವಿದ್ಯಾಲ ವಾರ್ಷಿಕೋತ್ಸವ

ನೂರಡಿ ರಸ್ತೆಯಲ್ಲಿರುವ ರಾಷ್ಟ್ರೀಯ ಮಹಾ ವಿದ್ಯಾ ಶಾಲೆಯ ದ್ವಿತೀ ವಾರ್ಷಿಕೋತ್ಸವವು ಶಾಲೆಯಲ್ಲಿ ಸಂಜೆ ೬|| ಗೆ ವಿದ್ಯಾ ಮಂತ್ರಿ ಶ್ರೀ ಕಬೀರ್ ಮಂ ವರ ಅಧ್ಯಕ್ಷತೆಯಲ್ಲಿ ನೆರವೇರುವುದು.

SREE GANES
TALKIES
From 27-12-56 : For 2 d
As Long As They Are Hap
(In Eastman Color)
With :- Diana Dors

Gala Release on 28-12-56
PICNIC
(Cinemascope - Technicolor)

Special New Year Attraction

Edited, Printed and Publi
by A. R. Nagarajan at Sa
Press, D. Subbiah Road, My


ಆಯುರ್ವೇದ ವಿಧಾನ ಬಿ. ವಿ. ಪಂಡಿತರ
ಬಿಜೋರಿ
ಅತ್ಯುತ್ತಮ ಧಾತುವರ್ಧಕ ಸಿದ್ಧೌಷಧ
ವಿ ಸದ್ವೈದ್ಯಶಾಲಾ ನಂಜನಗೂಡು
ಯಾವಾಗಲೂ ನಂಜನಗೂಡು ಟೂತ್ ಪೌಡರನ್ನೇ ಉಪಯೋಗಿಸಿರಿ.

ಅರುಣ್ ಕಾಫಿ ವರ್ಕ್ಸ್
ಹಳೇ ಪೋಸ್ಟ್ ಆಫೀಸ್ ರೋಡು, ಮೈಸೂರು

ನಮ್ಮಲ್ಲಿ ಹಸನಾದ ಕಾಫಿ ಬೀಜ ಮತ್ತು ಕಾಫಿ ಪುಡಿ ಈ ಕೆಳಗೆ ಕಂಡ ದರದಲ್ಲಿ ದೊರೆಯುತ್ತವೆ:—

—: ಕಾಫಿ ಬೀಜ ಪೌಂಡು ಒಂದಕ್ಕೆ :—
ಪ್ಲಾಂಟೇಷನ್ ಪೀಬರಿ ರೂ. 2-3-0 — ಪ್ಲಾಂಟೇಷನ್ 'ಎ' ರೂ 2-0-0
ಅರಾಬಿಕಾ ಚೆರ್ರಿ ರೂ. 1-14-0 — ರೋಬಸ್ಟಾ 1-9-0
—: ಕಾಫಿ ಪುಡಿ ಪೌಂಡು ಒಂದಕ್ಕೆ :—
ಪ್ಲಾಂಟೇಷನ್ ಪೀಬರಿ ರೂ. 2-13-0 — ಪ್ಲಾಂಟೇಷನ್ 'ಎ' ರೂ. 2-11-0
ಚೆರ್ರಿ ರೂ. 2-4-0 — ಸ್ಪೆಷಲ್ ಹೌಸ್ ಬ್ಲೆಂಡ್ ರೂ. 2-8-0
ಹೋಟೇಲ್ ಸ್ಪೆಷಲ್ ರೂ. 2-8-0
ಉತ್ತಮವಾದ ದಿನಸಿಗಳೂ, ಸ್ಟೇಷನರಿ ಸಾಮಾನುಗಳೂ ಸಹ ದೊರೆಯುತ್ತವೆ.

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಮೆಂಬರು : ಐ. ಎಸ್. ಟಿ. ಎಂ. ಎ.

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
28-12-56ನೇ ಶುಕ್ರವಾರದಿಂದ ಆಮೋಘ ಪ್ರಾರಂಭ
ಪ್ರತಿದಿನ ಮೂರು ಪ್ರದರ್ಶನಗಳು
ವಿಕ್ರಮ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ
★ **ಭಕ್ತ ಮಾರ್ಕಂಡೇಯ** ★
(ಶಾಲ್ಯ ವಾರಗಳು ಎಲ್ಲಾ ಸ್ತ್ರೀ ಪಾಪಿಗಳಿಗೂ ಮಿತ್ರ ಮಾಡಲಾಗಿದೆ)
ಪಾತ್ರ:- ನಾಗಯ್ಯ, ಪುಷ್ಪವಲ್ಲಿ, ನಾಗೇಂದ್ರರಾವ್, ಮಾಸ್ಟರ್ ಆನಂದ್, ರಘುರಾಮಯ್ಯ, ಬೇಬಿ ಉಮಾ, ಪದ್ಮಿನಿ ಪ್ರಿಯದರ್ಶಿನಿ, ನರಸಿಂಹರಾಜು, ಬಾಲಸರಸ್ವತಿ, ಟಿಕ್ಕಿ, ಮಾಧವರಾ

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲಿಯೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಇಂದಿನ ಪತ್ರಿಕೆ 3 ಪುಟ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಸಂಚಾಲಕರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71|1. ಅವೆನ್ಯೂ
ಶ್ರೀನಿವಾಸ ಬಿಲ್ಡಿಂಗ್ ರೋಡ್,
ಬೆಂಗಳೂರು-2

ಂಪುಟ : ೧೫] SADHVI : FRIDAY 28—12—1956 ಮೈಸೂರು : ಶುಕ್ರವಾರ ೨೮—೧೨—೧೯೫೬ [ಸಂಚಿಕೆ : ೧೫೦

ಕನ್ನಡವನ್ನು ಅಧಿಕೃತ ಭಾಷೆಯಾಗಿ ಮಾಡಲು ಯೋಚನೆ

ಜಿಲ್ಲಾ ಹೋಟೇಲು ಕೆಲಸಗಾರರ ಸಮ್ಮೇಳನ

ಮ್ಮ ವೇತನಕ್ಕಾಗಿ ಸಮಿತಿ ನೇಮಕಕ್ಕೆ ಮನವಿ

ಮೈಸೂರು ೨೭

ಜಿಲ್ಲಾ ಹೋಟೇಲು ಕೆಲಸಗಾರರ ಸಮ್ಮೇಳನವು ನಗರದ ಸಹಕಾರ ಭವನದಲ್ಲಿ ನೆನ್ನೆ ಬೆಂಗಳೂರು ಕಾರ್ಮಿಕ ಮುಖಂಡರಾದ ಶ್ರೀ ಎ. ನಾರಾಯಣರ ಅಧ್ಯಕ್ಷತೆಯಲ್ಲಿ ನಡೆಯಿತು. ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಕೆಂಪಯ್ಯನವರು ಸ್ವಾಗತ ಭಾಷಣ ಮಾಡಿದರು. ಅಧ್ಯಕ್ಷರು ತಮ್ಮ ಭಾಷಣದಲ್ಲಿ ಹೋಟೇಲು ಕೆಲಸಗಾರರಿಗೆ ಒದಗುತ್ತಿರುವ ತೊಂದರೆಗಳನ್ನು ಪ್ರಸ್ತಾಪಿಸಿ ಮಾಲೀಕರು ಕಾನೂನಿನ ನೆರಳಿನಲ್ಲಿ ಹಲವು ಉಪಾಯಗಳನ್ನು ಮಾಡಿ ನೌಕರರ ಹಕ್ಕುಗಳನ್ನು ಕಡೆಗಣಿಸುತ್ತಿರುವುದರಿಂದಲೂ, ಈ ಬಗ್ಗೆ ಕಾನೂನಿನ ಸುಧಾರಣೆಯು ಅಗತ್ಯವೆಂದೂ, ಕಾರ್ಮಿಕರೆಲ್ಲರೂ ಒಗ್ಗಟ್ಟಿನಿಂದ ಇರಬೇಕೆಂದೂ ಸೂಚಿಸಿದರು.

ಹೋಟೇಲು ಕಾರ್ಮಿಕರ ಸಂಬಳಸಾರಿಗೆಗಳು ತೀರಾ ಕಡಿಮೆಯಾಗಿದ್ದು, ಅವುಗಳ ಪರಿಶೀಲನೆಗಾಗಿ ಸಮಿತಿಯೊಂದನ್ನು ನೇಮಿಸಿ ಗೊತ್ತಾದ ಸಂಬಳದ ದರ ನಿಗದಿ ಮಾಡುವಂತಾಗಬೇಕೆಂದು ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಕೆಲಸಗಾರರಿಗೆ ನೌಕರಿಯ ಭದ್ರತೆ, ಊಟ ವಸತಿ ಮತ್ತು ವಿಶ್ರಾಂತಿ ಸೌಕರ್ಯ, ಜಿಲ್ಲಾ ಹೋಟೇಲುಗಳಲ್ಲಿ ಅಂಗಡಿ ಸಿಬ್ಬಂದಿ ಕಾನೂನಿನ ಜಾರಿ, ಮುಂತಾದುವುಗಳ ಬಗ್ಗೆ ನಿರ್ಣಯವು ಅಂಗೀಕೃತವಾಯಿತು. ಸುಪ್ರೀಂ ಕೋರ್ಟಿನ ತೀರ್ಪಿನಂತೆ ಕೆಲಸಗಾರರಿಗೆ ಪರಿಹಾರ ಸಿಗುವುದಕ್ಕೆ ತಡೆಯಾಗಿರುವುದೆಂದೂ, ಆದ್ದರಿಂದ ಸರ್ಕಾರವು ವಿಶೇಷಾಜ್ಞೆಯನ್ನು ಹೊರಡಿಸಿ ಅದನ್ನು ದೊರಕಿಸಬೇಕೆಂದೂ ಕೋರಲಾಯಿತು.

ಕೆಲಸಗಾರರು ಮೆರವಣಿಗೆ ನಡೆಸಿದರು. ನಗರದ ಶ್ರೀ ಶಾಂತಾರಾಂ ಪೈಯವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯು ಜರುಗಿತು.

ಸರ್ಕಾರಕ್ಕೆ ಪಾವತಿಯಾಗಬೇಕಾಗಿದ್ದ ೭ ಸಾವಿರ ರೂ. ಮಂಚ ಮಾಯವೇ?

ಸಭೆಯಲ್ಲಿ ಮೂಲ್ಕಾ ಗೋವಿಂದರೆಡ್ಡಿಯವರ ಸೂಚನೆ

ಬೆಂಗಳೂರು ೨೭

ಮಂತ್ರಿಗಳ ಸಂಬಳಸಾರಿಗೆ ಸಂಬಂಧಪಟ್ಟ ಮಸೂದೆ ಮೇಲೆ ಶ್ರೀ ಮೂಲ್ಕಾ ಗೋವಿಂದರೆಡ್ಡಿಯವರು ಮಾತನಾಡಿ ಸರ್ಕಾರಕ್ಕೆ ಪಾವತಿಯಾಗಬೇಕಾಗಿದ್ದ ೭ ಸಾವಿರ ರೂ. ಬೆಲೆಯ ಒಂದು ಮಂಚವು ಮಾಯವಾಗಿದೆಯೆಂದು ಹೇಳಿದರು. ಇದನ್ನು ಕೇಳಿ ಸಭಾಧ್ಯಕ್ಷರು ವಿಸ್ಮಿತರಾದರು. ಶ್ರೀ ರೆಡ್ಡಿಯವರು ಮತ್ತೆ ಇದೇ ವಿಷಯವನ್ನು ಒತ್ತಿ ಹೇಳಿದಾಗ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಮಾತನಾಡಿ, ಅದು ನಿಜವಾಗಿದ್ದರೆ ಒಂದು ವಿಪರೀತದ ವಿಚಾರವೆಂದೂ, ಆ ಬಗ್ಗೆ ತನಿಖೆ ಮಾಡುವುದಾಗಿಯೂ ತಿಳಿಸಿದರು.

ಮುಂದೆಯೂ ದಸರಾ ಮಹೋತ್ಸವ ನಡೆಸಲು ನಿರ್ಧಾರ

ವಿವರಗಳ ಪರಿಶೀಲನೆಗಾಗಿ ಸಮಿತಿ ನೇಮಕ

ಬೆಂಗಳೂರು ೨೭

ಮೈಸೂರಿನಲ್ಲಿ ನವರಾತ್ರಿ ಉತ್ಸವವನ್ನು ಮುಂದೆಯೂ ನಡೆಸಲು ಸರ್ಕಾರದವರು ನಿರ್ಧರಿಸಿರುವುದಾಗಿಯೂ, ಆದರೆ ಜಂಬೂಸವಾರಿಯನ್ನು ನಡೆಸಬೇಕಾಗಿಲ್ಲವೆಂದು ಅಭಿಪ್ರಾಯಪಟ್ಟಿರುವುದಾಗಿಯೂ ವರದಿಯಾಗಿದೆ. ಉತ್ಸವವನ್ನು ನಡೆಸುವ ವಿಧಾನದಲ್ಲಿ ಬದಲಾವಣೆ ಮಾಡಬೇಕಾದರೆ ಸೂಕ್ತ ಸಲಹೆ ನೀಡುವುದಕ್ಕಾಗಿ ಮಾಜಿ ದಿವಾನರಾದ ಶ್ರೀ ಎನ್. ಮಾಧವರಾಯರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಇದರಲ್ಲಿ ಕೆಳಗೆ ಕಂಡ ಸದಸ್ಯರಿರುವರು :—

ಶ್ರೀಗಳಾದ ಎಂ. ಜಿ. ನಂಜುಂಡಾರಾಧ್ಯ, ಡಾ॥ ಕೆ. ವಿ. ಪುಟ್ಟಪ್ಪ, ಮೈಸೂರು ಪುರಸಭಾಧ್ಯಕ್ಷರು, ಪುರಾತನ ಇಲಾಖಾ ಕಾರ್ಯದರ್ಶಿ, ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು, ವೈ. ದಾಸಪ್ಪ, ಶ್ರೀಮತಿ ರುಕ್ಮಿಣಿ ಅರುಂಡೇಲ್, ಕರ್ನಾಟಕ ವಿಶ್ವವಿದ್ಯಾಲಯದ ವೈಸ್ ಛಾನ್ಸಲರ್ ಡಿ. ಸಿ. ಪಾವಟೆ, ಸಂಸ್ಥಾನದ ಕೈಗಾರಿಕೆ ಮತ್ತು ವಾಣಿಜ್ಯ ಡೈರೆಕ್ಟರು, ವಿದ್ಯಾ ಇಲಾಖಾಧಿಕಾರಿಗಳು, ಕೈಲ್ಯದ ಒಬ್ಬ ಪ್ರತಿನಿಧಿ ಮತ್ತು ಹೈದರಾಬಾದು ಕರ್ನಾಟಕದ ಒಬ್ಬ ಪ್ರತಿನಿಧಿಗಳು. ಶ್ರೀ ಎ. ಎಸ್. ಮೂರ್ತಿರಾಯರು ಸಮಿತಿಯ ಕಾರ್ಯದರ್ಶಿಯವರಾಗಿರುತ್ತಾರೆ.

ಸಮಿತಿಯು ಬರುವ ಮಾರ್ಚಿ ಕೊನೆಯ ಹೊತ್ತಿಗೆ ವರದಿಯನ್ನು ಒಪ್ಪಿಸಲಿರುವುದೆಂದು ಗೊತ್ತಾಗಿದೆ.

ಸಂಸ್ಥಾನ ಸಮಾಜ ಕಲ್ಯಾಣ ಸಂಸ್ಥೆಗೆ ಹೊಸ ಅಧ್ಯಕ್ಷರು ಮತ್ತು ಸದಸ್ಯರು

ಸಂಸ್ಥಾನದ ಸಮಾಜ ಕಲ್ಯಾಣ ಸಂಸ್ಥೆಯ ಅಧ್ಯಕ್ಷರಾಗಿ ಶ್ರೀಮತಿ ಲಕ್ಷ್ಮೀಕೃಷ್ಣಪ್ಪನವರನ್ನು ನೇಮಿಸಿ, ಸಮಿತಿಯನ್ನು ೩ ವರ್ಷದ ಅವಧಿಗೆ ಪುನರ್ರಚಿಸಲಾಗಿದೆ. ಅದರಲ್ಲಿ ಶ್ರೀಮತಿಗಳಾದ ಎಂ. ಆರ್. ಲಕ್ಷಮ್ಮ, ಉಮಾಬಾಯಿ ಕುಂದಾಪುರ, ಲೀಲಾವತಿ ಅಂಜನಪ್ಪ, ಶಿದ್ದಮ್ಮ ಚಿ ಅಂಗಡಿ, ಸುಧಾ ವೆಂಕಟಶಿವರೆಡ್ಡಿ, ಯಶೋಧರ ದಾಸಪ್ಪ, ಇಂದಿರಾಬಾಯಿ ವಾಸುದೇವಮೂರ್ತಿ, ಕಾವೇರಮ್ಮ ಕುಪ್ಪುಸ್ವಾಮಿ, ಪ್ರೇಮ ಎ. ಪೈ ಪಿ. ವಿ. ಆರ್. ರಾವ್ ಮತ್ತು ಬಿ. ಎಸ್. ಗೋಪಾಲಕೃಷ್ಣರವರು ಸದಸ್ಯರಾಗಿರುವರು. ವಿದ್ಯಾ ಇಲಾಖಾ ಕಾರ್ಯದರ್ಶಿಯವರು ಸಮಿತಿಯ ಕಾರ್ಯದರ್ಶಿಯಾಗಿರುವರು.

ಹೆಚ್. ಎಚ್. ಪಾಳೇಗಾರರು ಗವರ್ನರರ ಕಾರ್ಯದರ್ಶಿಗಳು

ಗವರ್ನರರ ಕಾರ್ಯದರ್ಶಿ ಶ್ರೀ ಸಿ. ನಾರಾಯಣರವರನ್ನು ಸೆಟಲ್‌ಮೆಂಟ್ ಕಮೀಷನರ್ ಮತ್ತು ಆಹಾರ ಸರಬರಾಜಿನ ಡೈರೆಕ್ಟರಾಗಿ ಅಪೆಕ್ಸ್ ಬ್ಯಾಂಕಿನ ಅಧ್ಯಕ್ಷರಾಗಿ ನೇಮಿತರಾಗಿರುವ ಶ್ರೀ ಎಂ. ಕೆ. ಅಪ್ಪಾಜಪ್ಪನವರ ಸ್ಥಾನದಲ್ಲಿ ನೇಮಿಸಲಾಗಿದೆ. ಶ್ರೀ ಹೆಚ್. ಎಚ್. ಪಾಳೇಗಾರರನ್ನು ಗವರ್ನರರ ಕಾರ್ಯದರ್ಶಿಯಾಗಿ ವರ್ಗಾಯಿಸಲಾಗಿದೆ. ಅವರು ಮುಂದೆ ತಿಳಿಸುವವರೆಗೂ ಕೃಷ್ಣರಾಜೇಂದ್ರ ಗಿರಣಿಗೆ ಅಧ್ಯಕ್ಷರಾಗಿರುವರು.

ಹಳೆಯ ಮೈಸೂರಿನ ಎಲ್ಲ ನೌಕರರಿಗೂ ಹೆಚ್ಚು ಸಂಬಳ

ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರ ಸ್ಪಷ್ಟೀಕರಣ

ಬೆಂಗಳೂರು ೨೮

ಹೊಸದಾಗಿ ಕೊಡಲಾಗುವ ಸಂಬಳದ ಸ್ಕೇಲುಗಳು ಹಳೆಯ ಮೈಸೂರಿನ ಎಲ್ಲಾ ನೌಕರ ವರ್ಗದವರಿಗೂ ಸಮನಾಗಿ ದೊರೆಯುವುವೆಂದು ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ನೆನ್ನೆ ಹೇಳಿಕೆಯೊಂದರಲ್ಲಿ ತಿಳಿಸಿರುತ್ತಾರೆ. ಮದ್ರಾಸಿನಿಂದ ಮೈಸೂರಿಗೆ ಬಂದ ಹಲವು ವರ್ಗಗಳ ನೌಕರರಿಗೂ ಈ ಸೌಲಭ್ಯವು ದೊರೆಯುವುದಾಗಿಯೂ ಅವರು ಹೇಳಿರುವರು.

ಬೊಂಬಾಯಿ ಕರ್ನಾಟಕದ ಅಧಿಕಾರಿಗಳ ಸಂಬಳವು ಹೊಸ ಸ್ಕೇಲಿಗಿಂತ ಹೆಚ್ಚಿದ್ದರೂ ಅದನ್ನು ಮುಂದುವರಿಸಲಾಗುವುದೆಂದು ಅವರು ಸ್ಪಷ್ಟಪಡಿಸಿರುವರು. ಯಾರ ಸಂಬಳವನ್ನೂ ಕಡಿಮೆ ಮಾಡುವುದಿಲ್ಲವೆಂದೂ ಅವರು ಹೇಳುವರು.

ಶ್ರೀ ಮಂಜಪ್ಪನವರು ಅದನ್ನು ವಿವರಿಸಿ, ಭತ್ಯ ಸಮೇತ ೫೦ ರೂ. ಗೆ ಕಡಿಮೆಯಿಲ್ಲದೆ, ಎಲ್ಲರಿಗೂ ಒಂದೇ ಸಮನಾದ ಸಂಬಳವು ದೊರೆಯುವುದೆಂದೂ, ತುಂಬಾ ಕಡಿಮೆ ವೇತನದವರಿಗೆ ಹೊಸ ಸ್ಕೇಲಿನ ಶೇಕಡ ೧೦೦ರಷ್ಟು ಪ್ರಯೋಜನ ದೊರೆಯುವುದೆಂದೂ ತಿಳಿಸುತ್ತಾರೆ.

ಕಾಂಗ್ರೆಸ್ ಉಮೇದುವಾರರ ಆಯ್ಕೆ

ದೆಹಲಿಗೆ ಮುಖ್ಯ ಮಂತ್ರಿ ಮತ್ತು ಕಾಂಗ್ರೆಸ್ ಅಧ್ಯಕ್ಷರುಗಳ ಪ್ರಯಾಣ

ಬೆಂಗಳೂರು ೨೮

ಬರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ಉಮೇದುವಾರರ ಪಟ್ಟಿಯನ್ನು ಆಖೈರುಗೊಳಿಸುವ ಸಂಬಂಧದಲ್ಲಿ ಮೈಸೂರಿನ ಪರವಾಗಿ ಸಲಹೆ ಕೊಡುವುದಕ್ಕಾಗಿ ಮುಖ್ಯ ಮಂತ್ರಿ ಶ್ರೀ ಎಸ್. ನಿಜಲಿಂಗಪ್ಪ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ವಿ. ವೆಂಕಟಪ್ಪ ಮತ್ತು ಪ್ರಾದೇಶಿಕ ಸಮಿತಿ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಈ ದಿನ ವಿಮಾನದಲ್ಲಿ ದೆಹಲಿಗೆ ತೆರಳಿದರು. ಈಗಿನ ಹಲವು ಸದಸ್ಯರನ್ನು ಆರಿಸಿಲ್ಲವೆಂದೂ, ಐದು-ಆರು ಕ್ಷೇತ್ರಗಳ ಬಗ್ಗೆ ಅಖೈರಾಗಿ ನಿರ್ಧರಿಸಿಲ್ಲವೆಂದೂ ಹೇಳಲಾಗಿದೆ. ಹೊಸ ಉಮೇದುವಾರರಲ್ಲಿ ಶ್ರೀ ಎಸ್. ಚನ್ನಯ್ಯನವರ ಹೆಸರೂ ಸೇರಿದೆಯೆಂದೂ, ಅವರು ಮೈಸೂರು ಮತ್ತು ಮಂಡ್ಯ ಜಿಲ್ಲೆಗಳ ಒಟ್ಟು ನಾಲ್ಕು ಕ್ಷೇತ್ರಗಳಲ್ಲಿ ಯಾವುದಾದರೊಂದನ್ನು ಆರಿಸಿಕೊಳ್ಳಲು ಪ್ರಾದೇಶಿಕ ಚುನಾವಣಾ ಸಮಿತಿಯು ಸೂಚಿಸಿದೆಯೆಂದೂ, ಗೊತ್ತಾಗಿದೆ. ಮೂವರು ನಾಯಕರೂ ನಾಳೆ ಹಿಂತಿರುಗುವರು.

ಮಾನಸಶಾಸ್ತ್ರ ಪ್ರದರ್ಶನ

ಮೈಸೂರು ೨೮

ನಾಳೆ ಬೆಳಿಗ್ಗೆ ೧೦ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ಮನಶ್ಶಾಸ್ತ್ರ ಸಮ್ಮೇಳನದ ಅಂಗವಾಗಿ ಬರೋಡಾ ವಿಶ್ವವಿದ್ಯಾಲಯದ ಶ್ರೀ ಪಿ. ಎಸ್. ಮೆನನ್ನರು ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು.

ಸಂಸ್ಥಾನದಲ್ಲಿ ಕನ್ನಡವನ್ನು ಅಧಿಕೃತ ಭಾಷೆ ಮಾಡುವ ಪ್ರಶ್ನೆ

ಪರಿಶೀಲನೆಯಲ್ಲಿರುವುದಾಗಿ ಸರ್ಕಾರದ ಹೇಳಿಕೆ

ಸ್ವಂ. ವ. ಫೋನ್] ಬೆಂಗಳೂರು ೨೮

ಈ ದಿನ ವಿಧಾನ ಸಭೆಯಲ್ಲಿ ಶ್ರೀ ಕೆ. ಪುಟ್ಟಸ್ವಾಮಿ ಸಚಿವ ಶ್ರೀ ಆರ್. ಚನ್ನಿಗರಾಮಯ್ಯನವರು ಮುಖ್ಯ ಮಂತ್ರಿಯವರ ಗೈರು ಹಾಜರಿಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಕನ್ನಡವನ್ನು ಅಧಿಕೃತ ಭಾಷೆಯನ್ನಾಗಿ ಮಾಡುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ತಿಳಿಸಿದರು.

ಬೆಂಗಳೂರು, ಮೈಸೂರುಗಳಲ್ಲಿ ಹೊಸ ಕಾಲೇಜುಗಳಿಲ್ಲ

ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡಿ, ಬೆಂಗಳೂರು ಮೈಸೂರುಗಳಲ್ಲಿ ಕಾಲೇಜುಗಳು ವಿಪರೀತವಾಗಿರುವುದೆಂದೂ, ಇತರ ಜಿಲ್ಲಾ ಕೇಂದ್ರಗಳಲ್ಲಿ ಇನ್ನು ಮುಂದೆ ಕಾಲೇಜುಗಳನ್ನು ವಿಸ್ತರಿಸಲಾಗುವುದೆಂದೂ ಸೂಚಿಸಿದರು. ಸಹಾಯ ಪಡೆದ ಕಾಲೇಜುಗಳ ಅಧ್ಯಾಪಕರಿಗೂ ಕಳೆದ ಆಗಸ್ಟಿನಿಂದ ತಾತ್ಕಾಲಿಕ ಪರಿಹಾರ ಕೊಡಲು ಆಜ್ಞೆ ಮಾಡಲಾಗಿರುವುದೆಂದೂ ಅವರು ತಿಳಿಸಿದರು.

ಚಿನ್ನದ ಗಣಿಗಳ ರಾಷ್ಟ್ರೀಕರಣಕ್ಕಾಗಿ ಕೇಂದ್ರದ ಸಾಲ

ವಿಧಾನ ಪರಿಷತ್ತಿನಲ್ಲಿ ಶ್ರೀ ಕಡಿದಾಳ್ ಮಂಜಪ್ಪನವರು ಈ ದಿನ ಪ್ರಶ್ನೆಯೊಂದಕ್ಕೆ ಉತ್ತರವಾಗಿ ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಪರಿಹಾರಕ್ಕಾಗಿ ಮೈಸೂರು ಸರ್ಕಾರಕ್ಕೆ ಕೇಂದ್ರವು ೪೫ ರೂ. ಬಡ್ಡಿ ದರದ ಮೇಲೆ ೧೫ ವರ್ಷದ ಅವಧಿಯ ೪೫ ಲಕ್ಷ ರೂ. ಸಾಲವನ್ನು ಮಂಜೂರು ಮಾಡಿರುತ್ತಾರೆಂದು ತಿಳಿಸಿದರು.

ಕಾಶ್ಮೀರದಲ್ಲಿ ಜನಮತಗಣನೆ ಬಗ್ಗೆ ವಾಗ್ದಾನ

ಭಾರತ ಹಿಂತೆಗೆಯುವಂತಿಲ್ಲವೆಂದು ಶೇಕ್ ಅಬ್ದುಲ್ಲಾ ಅಭಿಪ್ರಾಯ

ಕಾಶ್ಮೀರದ ಮಾಜಿ ಮುಖ್ಯ ಮಂತ್ರಿ ಶೇಕ್ ಅಬ್ದುಲ್ಲಾರವರು ಅಲ್ಲಿನ ರಾಜ್ಯಾಂಗ ಸಭಾಧ್ಯಕ್ಷ ಜಿ. ಎಂ. ಸಾದಿಕ್‌ರವರಿಗೆ ಪತ್ರವೊಂದನ್ನು ಬರೆದು ಪಾಕಿಸ್ತಾನಕ್ಕೆ ಬಂದಿರುವ ಅಮೆರಿಕದ ಮಿಲಿಟರಿ ಸಹಾಯದಿಂದ ಕಾಶ್ಮೀರದ ಪ್ರಶ್ನೆಯ ಹಿನ್ನೆಲೆಯು ವ್ಯತ್ಯಾಸವಾಗಿರುವುದೆಂದು ನೆಹರೂರವರು ಹೇಳಿರುವುದಕ್ಕೆ ಸವಾಲು ಹಾಕಿರುತ್ತಾರೆ. ಭಾರತದ ಇಚ್ಛೆಗೆ ಸರಿಯಿಲ್ಲದ ಕೆಲಸವನ್ನು ಬೇರೊಂದು ರಾಷ್ಟ್ರವು ನಡೆಸಿದರೆ ಅದರಿಂದ ಕಾಶ್ಮೀರದ ಜನರು ತಮ್ಮ ಭವಿಷ್ಯ ನಿರ್ಧಾರ ಮಾಡಿಕೊಳ್ಳುವುದನ್ನು ತಪ್ಪಿಸುವುದು ಅಸಂಗತವೆಂದು ಅವರು ತಿಳಿಸಿ, ಭಾರತವು ಅಂತರ ರಾಷ್ಟ್ರೀಯ ಶಾಂತಿಗೆ ಅಪಾಯ ತರದೆ, ಜನಮತಗಣನೆ ಬಗ್ಗೆ ತಾನು ಕೊಟ್ಟ ವಚನದಿಂದ ಹಿಂತೆಗೆಯಲು ಸಾಧ್ಯವಿಲ್ಲವೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ.

ಮೇಜರ್ ಮಹದೇವಯ್ಯನವರ ಮೇಲೆ ಮೊಕದ್ದಮೆ

ಮಾಹೆಯಾನಾ ೩೦೦ ರೂ ಜೀವನಾಂಶಕ್ಕಾಗಿ ಒತ್ತಾಯ

ಮೈಸೂರು ೨೭

ಬೆಂಗಳೂರಿನ ತುಳಸಿ ತೋಟದ ನಿವಾಸಿ ಶ್ರೀಮತಿ ಶಕುಂತಲಾ ಎಂ ೨೧ ವರ್ಷದ ಮಹಿಳೆಯ ಪರವಾಗಿ ಅರಮನೆ ಕಂಟ್ರೋಲರ್ ಮತ್ತು ಸೆಕ್ರೆಟರಿ ಆಗಿದ್ದ ಬೆಂಗಳೂರಿನ ಮೇಜರ್ ಎಲ್ ಮಹದೇವಯ್ಯನವರ ಮೇಲೆ ಇಲ್ಲಿನ ಪ್ರಥಮ ದರ್ಜೆ ನ್ಯಾಯಾಧೀಶರ ಕೋರ್ಟಿನಲ್ಲಿ ಕ್ರಿಮಿನಲ್ ತರಹದ ಅರ್ಜಿಯೊಂದನ್ನು ಸಲ್ಲಿಸಿ ಮಹಿಳೆಗೆ ಶ್ರೀ ಮಹದೇವಯ್ಯನವರಿಂದ ತಿಂಗಳಿಗೆ ೩೦೦ ರೂ ನಂತೆ ಜೀವನಾಂಶವನ್ನು ಕೊಡಿಸಬೇಕೆಂದು ಕೋರಲಾಗಿದೆ ಅರ್ಜಿಯ ವಿವರಗಳು ಈ ರೀತಿ ಇವೆ —

ಈ ಮಹಿಳೆಯು ನಿವೃತ್ತ ನೌಕರರೊಬ್ಬರ ಮಗಳು [illegible]ರಿಂದ ಮೈಸೂರು ನಗರದಲ್ಲಿ ವಾಸವಾಗಿದ್ದಳು ಆಕೆಯು ವಿದ್ಯಾಭ್ಯಾಸವಾದನಂತರ ಕಳೆದ [illegible]ನೇ ಜೂನ್ ತಿಂಗಳಲ್ಲಿ ಒಂದು ದಿನ ಅರಮನೆಗೆ ಸೇರಿದ ಶಾಲೆಗಳ ಪೈಕಿ ಒಂದರಲ್ಲಿ ಉಪಾಧ್ಯಾಯಿನಿ ಕೆಲಸ ಕೊಡಿಸುವಂತೆ ಪ್ರತಿವಾದಿಯನ್ನು ಕೇಳಲು ಭೇಟಿ ಮಾಡಿದಳು ಪ್ರತಿವಾದಿಯು ಕೆಲಸವನ್ನು ಕೊಡಿಸುವುದಾಗಿ ಭರವಸೆಯಿತ್ತು ಆಗಾಗ್ಗೆ ತಮ್ಮನ್ನು ಕಾಣುವಂತೆ ತಿಳಿಸಿದ್ದರು

ಅದರಂತೆ ಆಕೆಯು ಕೆಲಸ ಸಿಗುವುದೆಂಬ ನಂಬಿಕೆಯ ಮೇಲೆ ಅವರ ಬಳಿ ಹೋಗುತ್ತಿದ್ದಳು ಪ್ರತಿವಾದಿಯು ಆಕೆಯಲ್ಲಿ ಅನುರಕ್ತನಾಗಿ ಆಕೆಯನ್ನು ಎಲ್ಲೆಲ್ಲೋ ಕರೆದುಕೊಂಡು ಹೋಗುತ್ತಿದ್ದರು ವಿವಾಹವಾದನಂತರ ತಕರಾರು [illegible] ವಿವಾಹದ ಸಂಬಂಧವನ್ನು ಬೆಳೆಸಿ [illegible] ಇಷ್ಟಕ್ಕೆ ವಿರುದ್ಧವಾಗಿ ಮತ್ತು ಬಲಾತ್ಕಾರದಿಂದ ನಡೆಸಿದ್ದು ಆಕೆಗೆ ಪ್ರತಿವಾದಿಯು ವಿವಾಹವಾಗುವ [illegible]ವನ್ನು ಕೊಡುತ್ತಿದ್ದರು

ಇದಾದ ಮೇಲೆ ಮಹಾರಾಜರೊಡನೆ ಆಕೆಯನ್ನು ಭೇಟಿ ಮಾಡಿಸುವುದಾಗಿಯೂ ತಮ್ಮ ಆಸ್ತಿಯಲ್ಲಿ ಅರ್ಧ ಭಾಗವನ್ನು ಕೊಡಲಿರುವುದಾಗಿಯೂ ಪ್ರತಿವಾದಿಯು ಆಸೆ ತೋರಿಸಿದರು ಅಲ್ಲದೆ ಆಕೆಯನ್ನು ವಿವಾಹವಾಗುವುದಾಗಿಯೂ ಭಾಷೆ ಕೊಟ್ಟಿದ್ದರು

ಅರ್ಜಿದಾರರು ಕೇವಲ ಅಜ್ಞ ವ್ಯಕ್ತಿಯಾಗಿದ್ದು ಅವರ ಪ್ರಲೋಭನೆಗೆ ಒಪ್ಪಿದಳು ಹೇಗಾದರೂ ತನಗೆ ಉದ್ಯೋಗ ದೊರೆಯುವುದೆಂಬ ಆಸೆಯು ಆಕೆಯಲ್ಲಿತ್ತು ಆದರೆ [illegible] ಪ್ರತಿವಾದಿಯು ಜಾಲದಲ್ಲಿ ಸಿಕ್ಕಿಸಿ ವಂಚಿಸಿದರು

ಪದೇಪದೇ ಸಂಬಂಧ ಬೆಳೆಸಿದ ಪರಿಣಾಮವಾಗಿ ಅರ್ಜಿದಾರಳು ಬೆಂಗಳೂರಿನಲ್ಲಿ ಕಳೆದ ಸೆಪ್ಟೆಂಬರ್ [illegible] ರಲ್ಲಿ ಗಂಡು ಮಗುವನ್ನು ಪ್ರಸವಿಸಿದಳು ಎರಡು ದಿನಗಳನಂತರ ಶ್ರೀ ಎಲ್ ಮಹದೇವಯ್ಯನವರಿಗೆ ಪತ್ರ ಬರೆದು ಬೆಂಗಳೂರಿಗೆ ಬಂದು ತನ್ನನ್ನೂ ಮಗುವನ್ನೂ ನೋಡಿ ಉಭಯರ ಜೀವನಕ್ಕೆ ವ್ಯವಸ್ಥೆ ಮಾಡುವಂತೆ ತಿಳಿಸಿದ್ದಳು

ಪ್ರತಿವಾದಿಯು ಬರಲೂ ಇಲ್ಲ, ಅಥವಾ ಇದುವರೆಗೂ ಉತ್ತರ ಕೊಡಲಿಲ್ಲ ಇಲ್ಲಿಂದೀಚೆಗೆ ಕಳೆದ ಅಕ್ಟೋಬರ್ [illegible]ನೇ ತಾರೀಕು ವಕೀಲರ ಮೂಲಕ ರಿಜಿಸ್ಟರ್ ನೋಟೀಸು ಕೊಟ್ಟು ತಾಯಿ ಮತ್ತು ಮಗುವಿನ ಸಂರಕ್ಷಣೆಗಾಗಿ ಪ್ರತಿವಾದಿಯು ತಿಂಗಳಿಗೆ ೩೦೦ ರೂ ನಂತೆ ಕೊಡಬೇಕೆಂದೂ ತಪ್ಪಿದರೆ ಸಿವಿಲ್ ಮತ್ತು ಕ್ರಿಮಿನಲ್ ವ್ಯಾಜ್ಯಗಳ ಮೂಲಕ ಇತ್ಯರ್ಥಪಡಿಸಬೇಕಾಗುವುದೆಂದೂ ತಿಳಿಸಲಾಗಿತ್ತು ಆದರ್ಯಾವುದರೂ ಉತ್ತರ ಬರಲಿಲ್ಲ ಈಗ ತಾಯಿ ಮಕ್ಕಳಿಬ್ಬರೂ ಬಹಳ ಕಷ್ಟ ಸ್ಥಿತಿಯಲ್ಲಿದ್ದು ಉಪವಾಸ ಮಾಡುತ್ತಿರುವುದಾಗಿಯೂ ತಿಳಿಸಲಾಗಿದೆ

ಪ್ರತಿವಾದಿಗೆ ಮಾಹೆಯಾನ ೨,೦೦೦ ರೂ ವರಮಾನ ಬರುತ್ತಿದೆ ಫಿರ್ಯಾದಿಯವರಿಗೆ ಅವರ ತೊಂದರೆ ಮತ್ತು ಕಷ್ಟನಷ್ಟಗಳಿಗಾಗಿ ಸಿವಿಲ್ ಕೋರ್ಟಿನ ಮೂಲಕವೂ ವ್ಯವಹಾರ ನಡೆಸುವ ಹಕ್ಕನ್ನು ಹೊಂದಿರುತ್ತಾಳೆ ಮಧ್ಯದಲ್ಲಿ ಆಕೆಗೆ ೩೦೦ ರೂ ಗಳನ್ನು ಕೊಡಲು ಕೋರ್ಟಿನಲ್ಲಿ ಡಿಪಾಜಿಟ್ ಮಾಡಬೇಕು ಅಥವಾ ಮಾಡಿಸಬೇಕು ಅಲ್ಲದೆ ಇನ್ನೂ ಬೇರೆ ವಿಧವಾದ ಪರಿಹಾರವನ್ನು ಕೋರ್ಟಿನವರು ನ್ಯಾಯದ ದೃಷ್ಟಿಯಲ್ಲಿ ಕೊಡಿಸಿ ಕೊಡಬೇಕು

ಬೆಂಗಳೂರು ವಕೀಲರಾದ ಶ್ರೀ ಎಸ್ ಆರ್ ಹೊಯ್ಸಳರವರು ವಕಾಲತ್ತು ವಹಿಸಿರುವರು ಈ ಅರ್ಜಿಯು ಜನವರಿ [illegible]ರಂದು ಪರಿಶೀಲಿಸಲ್ಪಡುವುದು

ಭಾರತಕ್ಕೆ ಮತ್ತೊಮ್ಮೆ ಚೌ ಎನ್ ಲೈ ಭೇಟಿ

ಚೀನಾದ ಪ್ರಧಾನಿ ಚೌ ಎನ್ ಲೈಯವರು ಈ ತಿಂಗಳು [illegible] ದೆಹಲಿಗೆ ಬಂದು ನೆಹರೂರವರನ್ನು ಭೇಟಿ ಮಾಡುವರೆಂದೂ ಅನಂತರ ರಷ್ಯಾ, ಪೋಲೆಂಡು ಮತ್ತು ಅಫ್ಘಾನಿಸ್ತಾನಗಳಲ್ಲಿ ಪ್ರವಾಸ ಮಾಡಿ [illegible] ಬರುವ ತಿಂಗಳು ನೆಹರೂರವರನ್ನು ದೆಹಲಿಯಲ್ಲಿ ಕಾಣುವರೆಂದೂ ವರದಿಯಾಗಿದೆ

ಹತ್ತು ವರ್ಷಗಳಲ್ಲಿ ಪ್ರತಿಯೊಬ್ಬನಿಗೂ ೨೦೦ ರೂ ವರಮಾನ

ದ್ವಿತೀಯ ಯೋಜನೆಯನ್ನು ಸಾಧಿಸಿದರೆ ಸರ್ಕಾರದ ವ್ಯವಸ್ಥೆಯೇ ಪೂರ್ತಿಯಾಗಿ ಬದಲಾಯಿಸುವುದೆಂದು ಕೇಂದ್ರ ಮಂತ್ರಿ ಶ್ರೀ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ, ಬರುವ ೧೦ ೧೫ ವರ್ಷಗಳಲ್ಲಿ ಒಬ್ಬ ಮನುಷ್ಯನ ವರಮಾನವು ಮಾಹೆಯಾನ ೨೦೦ರೂ ಗೆ ಹೆಚ್ಚುವುದೆಂದು ಅವರು ಹೇಳಿರುವರು

ಬೋರಯ್ಯ ಬಸವಯ್ಯ ಕಂಪೆನಿ ಕಾರ್ಮಿಕರ ವಿವಾದ ಕೈಗಾರಿಕಾ ನ್ಯಾಯಾಲಯಕ್ಕೆ

ನಗರದ ಇಂಜನಿಯರಿಂಗ್ ಕಂಟ್ರಾಕ್ಟರಾದ ಶ್ರೀ ಬೋರಯ್ಯ ಬಸವಯ್ಯ ಕಂಪೆನಿಯ ಕಾರ್ಮಿಕರಿಗೂ ಆಡಳಿತ ವರ್ಗದವರಿಗೂ ಇರುವ ವಿವಾದವನ್ನು ಸರ್ಕಾರದವರು ಕೈಗಾರಿಕಾ ನ್ಯಾಯಾಲಯದವರಿಗೆ ಒಪ್ಪಿಸಿರುತ್ತಾರೆ ಸರ್ಕಾರದವರು ಕೊಡುತ್ತಿರುವಂತೆ ಹೆಚ್ಚು ತುಟ್ಟಿಭತ್ಯ [illegible] ಮತ್ತು [illegible]ನೇ ಸಾಲುಗಳ ಬೋನಸ್ಸು [illegible]ರಿಂದ ಬಡ್ತಿ ೧ ವರ್ಷ ಸರ್ವಿಸ್ಸಿನವರಿಗೂ ಪ್ರಾವಿಡೆಂಟ್ ನಿಧಿಯ ಸೌಕರ್ಯ ಮುಂತಾದ ಹಲವಾರು ಬೇಡಿಕೆಗಳನ್ನು ಕಾರ್ಮಿಕ ಸಂಘದವರು ಮುಂದಿರಿಸಿದರು

ಚಾಮರಾಜೇಶ್ವರ ದೇವಸ್ಥಾನದಲ್ಲಿ ಅವ್ಯವಸ್ಥೆ

ಚಾಮರಾಜನಗರದ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿದ್ಯುದ್ದೀಪದ ವ್ಯವಸ್ಥೆಯಿದ್ದರೂ ಉರಿಸುತ್ತಿಲ್ಲ ದೇವಸ್ಥಾನಕ್ಕೆ ಬೇಕಾದಷ್ಟು ವರಮಾನವಿದ್ದರೂ ಅದನ್ನು ಸರಿಯಾಗಿ ವಿನಿಯೋಗಿಸುತ್ತಿಲ್ಲ ನೌಕರರಿಗೆ [illegible]ನೇ ತಾರೀಕಾದರೂ ಸಂಬಳ ಕೊಡುತ್ತಿಲ್ಲ ಧರ್ಮದರ್ಶಿಗಳು ಈ ವಿಚಾರವನ್ನು ಗಮನಿಸಿಲ್ಲವೆಂದು ಕಂಡುಬರುತ್ತವೆ ಈ ತೊಂದರೆಗಳು ತಪ್ಪಿ ಕ್ರಮವರಿತು ಅಲ್ಲಿ ಕೆಲಸ ನಡೆಸುವುದು ಸೂಕ್ತವೆಂದು ಅಭಿಮಾನಿಗಳಿಬ್ಬರು ಪತ್ರ ಬರೆದಿರುತ್ತಾರೆ

ದೇಶಕ್ಕೆಲ್ಲಾ ಒಂದೇ ಸರ್ಕಾರಕ್ಕಾಗಿ ಜನಸಂಘದ ಕರೆ

ಭಾರತೀಯ ಜನಸಂಘವು ಚುನಾವಣಾ ಪ್ರಣಾಳಿಕೆಯೊಂದನ್ನು ಹೊರಡಿಸಿ ದೇಶಕ್ಕೆಲ್ಲಾ ಒಂದೇಒಂದು ಸರ್ಕಾರವಿದ್ದು ಆಡಳಿತವನ್ನು ಗ್ರಾಮಗಳ ಮಟ್ಟಕ್ಕೆ ವಿಕೇಂದ್ರೀಕರಿಸಬೇಕೆಂದು ತಿಳಿಸಿರುತ್ತದೆ ಭಾರತವು ಸಂಸ್ಥಾನಗಳ ಕೂಟವಾಗಬಾರದೆಂದೂ, ಒಂದು ರಾಜ್ಯವಾಗಬೇಕೆಂದೂ ತಿಳಿಸಲಾಗಿದೆ ಹಿಂದೂ ಧರ್ಮಶಾಸ್ತ್ರಕ್ಕೆ ಸಂಬಂಧಪಟ್ಟ ಕಾನೂನುಗಳನ್ನು ರದ್ದು ಮಾಡಬೇಕೆಂದು ಸೂಚಿಸಲಾಗಿದೆ ಸಂಘವು ಲೋಕಸಭೆಗೆ ೨೦೦ ಮತ್ತು ಶಾಸನ ಸಭೆಗಳಿಗೆ ಒಟ್ಟು ೮೦೦ ಸ್ಪರ್ಧಿಗಳನ್ನು ನಿಲ್ಲಿಸಲಿದೆ

ವಿದ್ಯುಚ್ಛಕ್ತಿ ನೌಕರರು ಮುಷ್ಕರದ ಕರೆಗೆ ಕಿವಿಗೊಡಬಾರದು

ಸರ್ಕಾರಿ ವಿದ್ಯುಚ್ಛಕ್ತಿ ಇಲಾಖಾ ನೌಕರರ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಅಪ್ಪಚ್ಚುರವರು ಹೇಳಿಕೆಯೊಂದನ್ನು ಇತ್ತು, ಸಂಘದ ಅಧ್ಯಕ್ಷ ಶ್ರೀ ಕಣ್ಣನ್‌ರವರು ಮುಷ್ಕರದ ಬಗ್ಗೆ ಹಾಕಿರುವ ಗೊಡ್ಡು ಬೆದರಿಕೆಗೆ ನೌಕರರಾರೂ ಕಿವಿಗೊಡಬಾರದೆಂದು ತಿಳಿಸಿರುತ್ತಾರೆ ಎಲ್ಲ ಕಡೆಗಳಲ್ಲೂ ಮಧುರ ವಾತಾವರಣದಿಂದಲೇ ಸಮಸ್ಯೆಗಳನ್ನು ತೀರ್ಮಾನ ಮಾಡುವ ಕಾಲವೀಗ ಇರುವುದೆಂದೂ ಅವರು ಹೇಳಿರುತ್ತಾರೆ ಶ್ರೀ ಕಣ್ಣನ್‌ರವರು ಎರಡು ವರ್ಷಗಳ ಹಿಂದೆ ನಡೆದ ಮುಷ್ಕರವನ್ನು ಯಾರನ್ನೂ ಕೇಳದೆ ವಾಪಸು ತೆಗೆದುಕೊಂಡುದಕ್ಕಾಗಿ ಅವರು ಖಂಡಿಸಿರುತ್ತಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಸಿಟೀಲು ೭ ೧೫ ಮತ್ತು ೮ ೧೫ ರಿಂದಂ ಶೇಷಾದ್ರಿ ಗಾಯನ ೭ ೩೦ ಸಹನಾಯ್ ಮಧ್ಯಾಹ್ನ ೧೨ ಸಂಗೀತ. ೧೨ ೩೦ ಸುಗಮ ಸಂಗೀತ ೧೨–೪೫ ಬಾಲ ಜಗತ್ ೧–೩೦ ದಿಲ್ರುಬಾ ಸಂಜೆ ೫ ೩೦ ವಿ ನಾರಾಯಣ ಅಯ್ಯಂಗಾರ್—ವೀಣೆ ೬–೫ ವಿರಾಮ ಸಂಗೀತ ೬–೨೦ ವಚನ ಗಾನ ೭ ೩೦ ಪ್ರಪಂಚ [illegible] ೮ ಸಂಗೀತೋತ್ಸವ ೮ ೩೦ ರೇಡಿಯೊ ನ್ಯೂಸ್ ರೀಲ್ ೮–೪೦ ಪ್ರಸಾರ ಗೀತೆ ೯–೧೫ ದಿಮ್ಮಿಯ ಇತಿಹಾಸ—ಕನ್ನಡ ಕಾರ್ಯಕ್ರಮ ೯ ೩೦ ರಾಷ್ಟ್ರೀಯ ಕಾರ್ಯಕ್ರಮ

ಶ್ರೀ ಮಾದೇಶ್ವರನ ಚರಿತ್ರೆ

[illegible] ಪಂಡಿತ ರತ್ನ ಬಿ ಶಿವಮೂರ್ತಿಶಾಸ್ತ್ರಿಗಳು ಮೇಲ್ಕಂಡ ಶಿರೋನಾಮೆಯ ಕನ್ನಡ ಗ್ರಂಥವನ್ನು ರಚಿಸಿದ್ದಾರೆ – ಇದರಲ್ಲಿ ಕೊಳ್ಳೇಗಾಲದ ತಾಲ್ಲೂಕು ಮಲೆಯ ಮಾದೇಶ್ವರಸ್ವಾಮಿಯವರ ಮಹಿಮೆ ಮತ್ತು ಜೀವನ ಚರಿತ್ರೆ ಮುಂತಾದುವನ್ನು ಚಿತ್ರಗಳ ಸಮೇತ ವಿವರಿಸಲಾಗಿದೆ ಕುಂತೂರು ಶ್ರೀ ಪ್ರಭುಸ್ವಾಮಿ ಬೆಟ್ಟ ದೇವಾಲಯದ ನೋಟ ಮುಂತಾದ ಚಿತ್ರಗಳೊಡನೆ ಈಗಿನ ಮಹಾರಾಜರು, ಹಿಂದಿನ ಮಹಾರಾಜರು ಮತ್ತು ಮುಮ್ಮಡಿ ಕೃಷ್ಣರಾಜ ಒಡೆಯರುಗಳ ಚಿತ್ರಗಳನ್ನು ಕೊಡಲಾಗಿದೆ ಗ್ರಂಥವನ್ನು ಈಗಿನ ಮಹಾರಾಜರಿಗೆ ಕಾಣಿಕೆಯಾಗಿ ಅರ್ಪಿಸಲಾಗಿದೆ ಇದರಿಂದ ಬರುವ ಹಣವನ್ನು ಮಾದೇಶ್ವರಸ್ವಾಮಿಯವರ ಸೇವಾರ್ಥಕ್ಕಾಗಿ ವಿನಿಯೋಗಿಸಲಾಗುವುದು ಸಾವಿರ ಲಕ್ಷಾಂತರ ಮಂದಿ ಭಕ್ತರು ಮಾದೇಶ್ವರನ ಮಹಿಮೆಯನ್ನು ತಿಳಿಯಲೆಂಬುದೇ ಗ್ರಂಥಕರ್ತರ ಉದ್ದೇಶ ಬೆಲೆ ೧ ರೂಪಾಯಿ

○ ಇಂಡಿಯನ್ ಪೊಲೀಸು ಸರ್ವಿಸ್ ಅಧಿಕಾರಿಗಳಾದ ಶ್ರೀ ಆರ್ ಎ ಮುಂಶ್ಕರ್‌ರವರನ್ನು [illegible]ಕ್ಷತಿ ತನಿಖೆಯ ವಿಶೇಷಾಧಿಕಾರಿಗಳಾಗಿ ನೇಮಿಸಲಾಗಿದೆ

SRI GAYATHRI
TALKIES
To day Last day
Knights of the Round Table
(In Cinemascope & Technicolor)
From 29 12 56 For 3 days
M G M s
GONE WITH THE WIND
Technicolor
All your favour to Stars
Matinee 3 P M , 1st Show 7 P M
Morning Shows on Sat & Sun
WIZARD OF OZ

Edited Printed and Published by A R Nagarajan at Sadhvi Press, D Subbiah Road, Mysore

ಒಲಂಪಿಯಾ
ಕಿಶೋರ್ ಕುಮಾರ್, ವೈಜಯಂತಿಮಾಲಾ, ರಾಧಾಕಿಶನ್ ಪಾತ್ರವಹಿಸಿರುವ
28-12-56ರಿಂದ ಅಮೋಘ 4ನೇ ವಾರ
ಮೋಹನ್ ಸೈಗಾಲ್‌ರವರ ಹಿಂದಿ ಚಿತ್ರ
★ ನ್ಯೂ ಡೆಲ್ಲಿ

Central Food Technological Research Institute, Mysore

TENDER NOTIFICATION

SEALED TENDERS are invited from reputed sanitary ware dealers and contractors for supplying required fittings for the Processing Division of the Institute Tender paper giving detailed specification of the fittings could be had from the *Administrative Officer, Central Food Technological* Research Institute, Mysore on payment of Rs 5 per set which is non refundable

Completed Tenders together with earnest money of Rs 450 will have to be sent to the Director, Central Food Technological Research Institute, so as to reach him on or before the 11th January 1957 —4 P M Tenders received will be opened at 4 15 P M the same day in the presence of the Contractors or their representatives, who may be present at the time The approximate value of the work is Rs 9,00 and the supplies will have to be completed within 1½ month from the date of award For any time taken beyond the stipulated period of supply, a penalty of Rs 5 per day would be levied

An Agreement to satisfy these conditions will have to be executed by the successful tenderer before commencing the supply The Director, C F T R I, Mysore, reserves the right not to accept the lowest or any other tender without assigning any reasons thereof

A W De SOUZA
Administrative Off

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು.

ಟೆಲಿಫೋನ್ ನಂ 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧[illegible]] SADHVI : SATURDAY 29—12—1956 ಮೈಸೂರು : ಶನಿವಾರ ೨೯—೧೨—೧೯೫೬ [ಸಂಚಿಕೆ : [illegible]

ಮಧ್ಯ ಪೂರ್ವಕ್ಕೆ ಅಮೆರಿಕದ ಸೈನ್ಯಗಳ ರವಾನೆ ಸಂಭವ

ಮನಶ್ಶಾಸ್ತ್ರ ಸಮ್ಮೇಳನದಲ್ಲಿ ವಸ್ತು ಪ್ರದರ್ಶನ

ಮೈಸೂರು ೨೮

ನಗರದಲ್ಲಿ ಈ ದಿನ ಸಂಜೆ ಆರಂಭವಾಗಲಿರುವ ೨೪ನೇ ದಕ್ಷಿಣ ಪ್ರದೇಶ ಮನಶ್ಶಾಸ್ತ್ರ ಸಮ್ಮೇಳನದ ಅಂಗವಾಗಿ ಮಹಾರಾಜಾ ಕಾಲೇಜಿನಲ್ಲಿ ಏರ್ಪಡಿಸಿರುವ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ಈ ದಿನ ಬೆಳಿಗ್ಗೆ ಬರೋಡಾ ವಿಶ್ವವಿದ್ಯಾಲಯದ ಪ್ರೊಫೆಸರ್ ಟಿ ಕೆ ಎನ್ ಮೆನನ್ನರು ಆರಂಭಗೊಳಿಸಿದರು ಮನಶ್ಶಾಸ್ತ್ರವು ಕೇವಲ ತಾತ್ವಿಕ ವಿಚಾರಗಳಿಗೆ ಮಾತ್ರವೇ ಸಂಬಂಧಪಡದೆ ಭೌತಿಕ ಪ್ರಪಂಚದ ಅನೇಕ ವ್ಯವಹಾರಗಳಲ್ಲಿಯೂ ಅದರ ಪ್ರಭಾವವು ವಿಶೇಷವಾಗುತ್ತದೆಂದು ಅವರು ಹೇಳಿದರು

ಮೈಸೂರು ವಿಶ್ವವಿದ್ಯಾಲಯದ ಮನಶ್ಶಾಸ್ತ್ರ ಪ್ರಾಧ್ಯಾಪಕರಾದ ಡಾ॥ ಬಿ ಕುಪ್ಪುಸ್ವಾಮಿಯವರು ಅಧ್ಯಕ್ಷತೆ ವಹಿಸಿ ಮಾತನಾಡಿ ಶ್ರೀ ಮೆನನ್ನರ ಪರಿಚಯ ಮಾಡಿಕೊಟ್ಟರು ಕಾರ್ಯದರ್ಶಿಗಳಾದ ಶ್ರೀ ಬಿ ಕೃಷ್ಣನವರು ಮೊದಲು ಎಲ್ಲರನ್ನೂ ಸ್ವಾಗತಿಸಿದರು

ಪ್ರದರ್ಶನದಲ್ಲಿ ಮನಶ್ಶಾಸ್ತ್ರಕ್ಕೆ ಸಂಬಂಧಿಸಿದ ವಸ್ತುಗಳನ್ನೂ ಚಿತ್ರಗಳನ್ನೂ ಇಡಲಾಗಿದೆ ಇದು [illegible]ದೊಡನೆ ಸಾರ್ವಜನಿಕರಿಗೆ ಪ್ರವೇಶವಿದೆ ಇನ್ನೂ ನಾಲ್ಕು ದಿನಗಳವರೆಗೆ ಬೆಳಿಗ್ಗೆ ಮತ್ತು ಸಂಜೆ ಅದು ತೆರೆಯಲ್ಪಟ್ಟಿರುವುದು

ನಾಳೆ ೨ ಗಂಟೆ ಕಾಲ ನೀರು ನಿಲ್ಲುವುದು

ನಾಳೆ (ಭಾನುವಾರ) ಬೆಳಿಗ್ಗೆ ನಗರದಲ್ಲಿ [illegible] ಪ್ರಯುಕ್ತ ಬೆಳಿಗ್ಗೆ ೧೧ ಗಂಟೆಯಿಂದ ಮಧ್ಯಾಹ್ನ ೧ ಗಂಟೆವರೆಗೆ ಮಾತ್ರ ನೀರು ಇರುವುದಿಲ್ಲವೆಂದು ಪೌರಸಭೆಯವರು ತಿಳಿಸಿರುತ್ತಾರೆ

ಬರುವ ವರ್ಷ ಭಾರತಕ್ಕೆ ಐಸೆನ್‌ಹೋವರರ ಭೇಟಿ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ತಮ್ಮ ಆಹ್ವಾನವನ್ನು ಮನ್ನಿಸಿ ಭಾರತಕ್ಕೆ ಬರುವ ವರ್ಷ ಚುನಾವಣೆಗಳನಂತರ ಭೇಟಿ ಕೊಡಲಿರುವುದಾಗಿ ದೆಹಲಿಗೆ ಹಿಂದಿರುಗಿದ ನೆಹರೂರವರು ತಿಳಿಸಿರುತ್ತಾರೆ ಅಮೆರಿಕಾ ಅಧ್ಯಕ್ಷರೊಡನೆ ತಾವು ನಡೆಸಿದ ಸಂಭಾಷಣೆಯಲ್ಲಿ ಕಾಶ್ಮೀರದ ವಿಷಯವೂ ಬಂದಿತ್ತೆಂದು ಅವರು ಹೇಳಿದರು ಈ ಬಗ್ಗೆ ವಿವರವನ್ನು ತಿಳಿಯಲಿಲ್ಲ ಗೋವಾ ವಿಷಯದಲ್ಲಿ ಡಲೆಸ್‌ರವರು ತಮ್ಮ ಅಭಿಪ್ರಾಯವನ್ನು ಬದಲಾಯಿಸಿಕೊಂಡಿರುವುದಾಗಿಯೂ ಅವರು ಹೇಳಿದರು

ವಿಧಾನ ಸೌಧದ ಆರಂಭೋತ್ಸವ ನಡೆಸದಿದ್ದುದಕ್ಕೆ ಆಕ್ಷೇಪಣೆ

ನೆನ್ನೆ ವಿಧಾನ ಸಭೆಯಲ್ಲಿ ಶ್ರೀ ವಿ ಅರ್ [illegible]ರವರು ಮಾತನಾಡಿ ಜಗತ್ಪ್ರಸಿದ್ಧವಾಗಿರುವ ವಿಧಾನ ಸೌಧದ ಆರಂಭೋತ್ಸವವನ್ನು ನೆರವೇರಿಸದಿದ್ದುದಕ್ಕೆ ಆಕ್ಷೇಪಿಸಿದರು ಅಧ್ಯಕ್ಷರು ಮಾತನಾಡಿ ಉತ್ಸವವನ್ನು ನಡೆಸುವ ವಿಚಾರವು ಸರ್ಕಾರಕ್ಕೆ ಸೇರಿದ್ದೆಂದೂ, ಅದರ ಸೌಧದಲ್ಲಿ ಗಾಂಧೀಜಿ, ರಾಜೇಂದ್ರ ಬಾಬು ಮುಂತಾದ ರಾಷ್ಟ್ರ ನಾಯಕರ ಭಾವಚಿತ್ರಗಳನ್ನು ಸರ್ಕಾರ ಹಾಕಬೇಕೆಂದೂ ಸಲಹೆ ಮಾಡಿದರು

ಪ್ರಧಾನಿ ನೆಹರೂ

ಅಮೆರಿಕಾ ಮತ್ತು ಕೆನಡಾಗಳ ಪ್ರವಾಸವನ್ನು ಮುಗಿಸಿಕೊಂಡು ನೆನ್ನೆ ಭಾರತಕ್ಕೆ ಹಿಂದಿರುಗಿದರು

ಅಮೆರಿಕಾ ಪ್ರವಾಸದಿಂದ ನೆಹರೂ ವಾಪಸು

ಅಮೆರಿಕ ಮತ್ತು ಕೆನಡ ಪ್ರವಾಸವನ್ನು ಮುಗಿಸಿ ಹಿಂದಿರುಗಿದ ಪ್ರಧಾನಿ ನೆಹರೂರವರು ನೆನ್ನೆ ಬೊಂಬಾಯಿಗೆ ಆಗಮಿಸಿ ದೆಹಲಿಗೆ ತೆರಳಿದರು ಬೊಂಬಾಯಿ ನಿಲ್ದಾಣದಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಅವರು ಸಂಭಾಷಿಸಿ ಅಮೆರಿಕಾ ಅಧ್ಯಕ್ಷರೊಡನೆ ತಾವು ನಡೆಸಿದ ಮಾತುಕತೆಗಳ ಪರಿಣಾಮವಾಗಿ ಅನೇಕ ವಿಚಾರಗಳಲ್ಲಿ [illegible] ಅಭಿಪ್ರಾಯವಿರುವುದು ಕಂಡು ಬಂದಿತೆಂದೂ ವಿಶ್ವದಲ್ಲಿ ಈಗಿರುವ [illegible] ಬಗ್ಗೆ ಭಾರತಕ್ಕೆ ಗಣನೀಯವಾದ [illegible] ವುದೆಂದೂ ಅವರು ಹೇಳಿದರು

ಮಧ್ಯ ಪೂರ್ವಕ್ಕೆ ಅಮೆರಿಕದ ಸೈನ್ಯಗಳ ರವಾನೆಯೇ?

ಮಧ್ಯ ಪೂರ್ವ ಪ್ರದೇಶದಲ್ಲಿ [illegible] ಅಮೆರಿಕದ ಸೈನ್ಯಗಳನ್ನು ಕಳುಹಿಸುವ [illegible] ದಕ್ಕೆ ಅವಕಾಶ [illegible] ಅಧ್ಯಕ್ಷರು ಕಾಂಗ್ರೆಸ್ [illegible] ಅನುಮತಿಯನ್ನು ಕೋರುವ ವಿಷಯವನ್ನು [illegible] ಪ್ರದೇಶ [illegible] ನಿಷ್ಪಕ್ಷ ಪ್ರದೇಶದಿಂದ [illegible] ದೆಂದು ಅವರು [illegible] ಒಂದಿದೆ ಈ ಸಂಬಂಧವಾಗಿ [illegible] ಕಾಂಗ್ರೆಸ್ ಸಭೆಯಲ್ಲಿ [illegible] ಮುಖ ತನ್ನ ಸಂಭವವು

೨ ನೇ ತಾ॥ ಅಂಚೆ ನೌಕರರಿಂದ ಸಂಬಳದ ನಿರಾಕರಣೆ

ಮೈಸೂರು ೨೮

ಅಂಚೆ ಮತ್ತು ತಂತಿ ನೌಕರರ ರಾಷ್ಟ್ರೀಯ ಫೆಡರೇಷನ್ನಿಗೆ ಸೇರಿರುವ ಮೈಸೂರು ವಿಭಾಗದ ಪ್ರತಿನಿಧಿಗಳು ನೆನ್ನೆ ಸಭೆ ನಡೆಸಿ ಎರಡನೆ ಸಂಬಳದ ಸಮಿತಿಯನ್ನು ರಚಿಸಲು [illegible] ಸರ್ಕಾರ [illegible] ಪ್ರತಿಭಟಿಸಲು [illegible] ತೆಗೆದುಕೊಳ್ಳಲು [illegible] ನಿರಾಕರಿಸಿ [illegible] ದಿನ [illegible] ನಡೆ [illegible] ತೀರ್ಮಾನಿಸಲಾಯಿತು

ಇಂಡೋನೇಷ್ಯದಲ್ಲಿ ಅಂತರ್ಯುದ್ಧದ ಭೀತಿ?

[illegible] ಅವರ ತೀವ್ರ [illegible] ಸೈನ್ಯಗಳ [illegible] ಯುದ್ಧ ನಡೆಸಬಹುದೆಂದು ಭೀತಿ ಉಂಟಾಗಿರುತ್ತದೆ [illegible] ಸೈನ್ಯಗಳ ನೆರವಿಗೆ ಹೋಗುವಂತೆ ವಿಮಾನ ಬಲಗಳಿಗೆ ಆಜ್ಞೆ ಮಾಡಲಾಗಿದೆ [illegible] ವಶಪಡಿಸಿಕೊಂಡಿರುವುದಾಗಿ ವರದಿಯಾಗಿದೆ

ಇಸ್ರೇಲಿ ಪ್ರದೇಶದ ಮೇಲೆ ಈಜಿಪ್ಟಿನ ದಾಳಿ

ಇಸ್ರೇಲಿ ಪ್ರದೇಶದ ಮೇಲೆ ಈಜಿಪ್ಟಿನ ಸೈನಿಕ ತಂಡಗಳು ದಾಳಿಗಳನ್ನು ನಡೆಸಿರುವುದಾಗಿ ಇಸ್ರೇಲು ವಿಶ್ವಸಂಸ್ಥೆಗೆ ದೂರು ಕೊಟ್ಟಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಸಂಜೆ [illegible] ಕನ್ನಡ [illegible] ಸಂಗೀತೋತ್ಸವ [illegible]

ಅಖಿಲ ಭಾರತ ಸ್ಕೌಟು ಜಾಂಬೂರಿ

ರಾಜಸ್ತಾನದ ರಾಜಧಾನಿ ಜಯಪುರದಲ್ಲಿ ಮೊನ್ನೆ ಅಖಿಲ ಭಾರತ ಸ್ಕೌಟ್ ಜಾಂಬೂರಿಯ [illegible] ಗವರ್ನರ್ ಗುರುಮುಖ್‌ನಿಹಾಲ್ ಸಿಂಗರು ಆರಂಭೋತ್ಸವವನ್ನು ನೆರವೇರಿಸಿ ಭಾಷಣ ಮಾಡುತ್ತಾ, ಅಭಿವೃದ್ಧಿ ಯೋಜನೆಗಳಲ್ಲಿ ಸ್ಕೌಟುಗಳು ಶ್ರಮದಾನ ಮಾಡುವುದಕ್ಕೆ ಸಿದ್ಧವಾಗಬೇಕೆಂದು ಸೂಚಿಸಿದರು ಬಡತನ, ಅಜ್ಞಾನ ಮುಂತಾದುವುಗಳಲ್ಲಿ ತೊಳಲುತ್ತಿರುವ ಜನರ ಮಧ್ಯೆ ಪರಸ್ಪರ ಸಹಕಾರ ಮತ್ತು ಶ್ರಮದ ಸ್ಫೂರ್ತಿಯನ್ನುಂಟುಮಾಡಬೇಕೆಂದು ಅವರು ತಿಳಿಸಿದರು ನಿಜವಾದ ಸ್ಕೌಟು ಪ್ರತಿಕೂಲ ಸ್ಥಿತಿಯಲ್ಲೂ ಪ್ರಶಾಂತಮನಸ್ಕನಾಗಿ ಬದುಕುವನೆಂದೂ, ಕಷ್ಟ ಮತ್ತು ಇತರ ಆತಂಕಗಳನ್ನು ಧೈರ್ಯ ಮತ್ತು ಸ್ಥೈರ್ಯದಿಂದ ಎದುರಿಸುವನೆಂದೂ ಹೇಳಿದರು ಸ್ಕೌಟು ಚಳುವಳಿಯು ಶಿಸ್ತನ್ನು ಕಲಿಸುವುದೆಂದು ಅವರು ತಿಳಿಸಿದರು

ಕೊಲ್ಹಾಪುರದ ಮಾಜಿ ಮುಖ್ಯ ಮಂತ್ರಿಗೆ ೩ ವರ್ಷ ಸಜಾ

೯॥ ಲಕ್ಷ ರೂ ಬಗ್ಗೆ ನಂಬಿಕೆ ದ್ರೋಹ ಮತ್ತು ಫೋರ್ಜರಿ ಅಪಾದನೆ

ಛತ್ರಪತಿ ಶಹಾಜಿ ರಾಜೆಯವರು ರಾಜರು [illegible] ರಾಜೆಯವರ ಹೆಸರಿನಲ್ಲಿ ಏರ್ಪಡಿಸಿದ್ದ ಟ್ರಸ್ಟಿನ ೯೫೦೦೦ ರೂ ಬಗ್ಗೆ ನಂಬಿಕೆ ದ್ರೋಹ ಮಾಡಿದರೆಂದು ಕೊಲ್ಹಾಪುರದ ಮಾಜಿ ಮುಖ್ಯ ಮಂತ್ರಿ ಡಿ ಎ ಸುರ್ವೆ ಯವರಿಗೆ ಶೆಷನ್ಸ್ ನ್ಯಾಯಾಧೀಶರು ೩ ವರ್ಷ ಕಠಿಣ ಸಜಾ ಮತ್ತು ೧೦,೦೦೦ ರೂ ದಂಡ, ತಪ್ಪಿದರೆ ಮತ್ತೊಂದು ವರ್ಷ ಸಜಾವನ್ನೂ, ಕಾಗದ ಪತ್ರಗಳನ್ನು ಫೋರ್ಜರಿ ಮಾಡಿದ್ದಕ್ಕಾಗಿ ೩ ವರ್ಷ ಸಜಾ ಮತ್ತು ೫೦೦೦ ರೂ ದಂಡ, ತಪ್ಪಿದರೆ ಇನ್ನಾರು ತಿಂಗಳ ಸಜಾವನ್ನೂ ವಿಧಿಸಿದರು

ಸಂಸ್ಥಾನದಲ್ಲಿ ಪುನಃ ಯೋಜನಾ ಸಲಹಾ ಸಮಿತಿ ನೇಮಕ

ವಿಧಾನ ಪರಿಷತ್ತಿನಲ್ಲಿ ಕಡಿದಾಳ್ ಮಂಜಪ್ಪನವರ ಸೂಚನೆ

ಸ್ವಂ ಸು ಪ್ರೆ ೯] ಬೆಂಗಳೂರು ೨೮

ಈ ದಿನ ವಿಧಾನ ಪರಿಷತ್ತಿನಲ್ಲಿ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರು ನಿರ್ಣಯವೊಂದನ್ನು ತಂದು ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಪುನರ್ ವಿಮರ್ಶೆಗಾಗಿ ಉಭಯ ಶಾಸನ ಸಭೆಗಳ ಸದಸ್ಯರುಳ್ಳ ಸಮಿತಿಯೊಂದನ್ನು ರಚಿಸುವಂತೆ ಸೂಚಿಸಿದರು ಮರಾಮತ್ತು ಮಂತ್ರಿ ಶ್ರೀ ವೀರಣ್ಣಗೌಡರು ವಿರೋಧಿಸಿ, ಈಗಾಗಲೇ ಜಾರಿಗೆ ಬರುತ್ತಿರುವ ಯೋಜನೆಯನ್ನು ಪುನರ್ವಿಮರ್ಶಿಸುವುದರಲ್ಲಿ ಅರ್ಥವಿಲ್ಲವೆಂದು ಹೇಳಿದರು

ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡಿ, ಹಿಂದಿನ ಮೈಸೂರಿನಲ್ಲಿದ್ದ ಯೋಜನಾ ಸಲಹಾ ಸಮಿತಿಯಂತಹ ಬೇರೊಂದು ಸಮಿತಿಯನ್ನು ಸಂಸ್ಥಾನದಲ್ಲಿ ರಚಿಸುವರೆಂದು ತಿಳಿಸಿದ ನಂತರ ನಿರ್ಣಯವನ್ನು ವಾಪಸು ತೆಗೆದುಕೊಳ್ಳಲಾಯಿತು

ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆ ೬೩

ಪರಿಷತ್ತಿನ ರದ್ಧತಿಗೆ ಕೆಲವು ಸದಸ್ಯರ ಒತ್ತಾಯ

ಬೆಂಗಳೂರು ೨೮

ವಿಧಾನ ಪರಿಷತ್ತಿನ ಸದಸ್ಯರ ಸಂಖ್ಯೆಯನ್ನು ೬೩ಕ್ಕೆ ಹೆಚ್ಚಿಸುವ ಮಸೂದೆಯೊಂದನ್ನು ನೆನ್ನೆ ಮುಖ್ಯ ಮಂತ್ರಿ ಶ್ರೀ ನಿಜಲಿಂಗಪ್ಪನವರು ಪರಿಷತ್ತಿನಲ್ಲಿ ಮಂಡಿಸಿದರು ಹೆಚ್ಚು ಚರ್ಚೆಯಿಲ್ಲದೆ ಅದನ್ನು ಅಂಗೀಕರಿಸಲಾಯಿತು

ವಿಧಾನ ಸಭೆಯಲ್ಲೂ ಈ ವಿಷಯವು ಬಂದು ಮಸೂದೆಯನ್ನು ರದ್ದು ಮಾಡಬೇಕೆಂದು ವಿರೋಧ ಸದಸ್ಯರು ಒತ್ತಾಯಪಡಿಸಿದರು ಸದಸ್ಯರ ಸಂಖ್ಯೆಯನ್ನು ಹೆಚ್ಚಿಸುವ ಅಗತ್ಯವಿಲ್ಲವೆಂದೂ ತಿಳಿಸಿದರು ವಿಧಾನ ಪರಿಷತ್ತು ಬಿಳಿಯಾನೆ ಸಾಕಿದಂತಾಗಿದೆಯೆಂದು ಸೂಚಿಸಲಾಯಿತು ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ವಿದ್ಯುಚ್ಛಕ್ತಿ ನೌಕರರ ಮತ್ತೊಂದು ಸಂಘದ ಸ್ಥಾಪನೆ

ಸಂಸ್ಥಾನದ ವಿದ್ಯುಚ್ಛಕ್ತಿ ನೌಕರರ ಪೈಕಿ ಹಲವರು ಬೆಂಗಳೂರಿನಲ್ಲಿ ಬೇರೊಂದು ಸಂಘವನ್ನು ಸ್ಥಾಪಿಸಿಕೊಂಡಿದ್ದಾರೆ ಐ. ಎನ್ ಟಿ ಯು ಸಿ ತತ್ವವನ್ನು ಅವರುಗಳು ಒಪ್ಪಿ, ತಮ್ಮದೇ ಆದ ಬೇರೊಂದು ಸಂಘವನ್ನು ರಚಿಸಿರುವರು ಅವರ ಅಧ್ಯಕ್ಷರಾಗಿ ಶ್ರೀ ಮುನಿವೆಂಕಟೇಗೌಡರು ಆರಿಸಲ್ಪಟ್ಟಿದ್ದಾರೆ ಕಾರ್ಮಿಕ ಮುಂದಾಳುಗಳಾದ ಶ್ರೀ ಬಿ ವೆಂಕಟೇಶ್‌ರವರು ಸಭೆಯಲ್ಲಿ ಮಾತನಾಡಿ ಗಣಿಗಳಲ್ಲಿ ನೌಕರರ ಮುಷ್ಕರವು ನಿಷ್ಫಲವಾದುದಕ್ಕೆ ಪಕ್ಷ ಮುಂದಾಳುತನವಿಲ್ಲದಿದ್ದುದೇ ಕಾರಣವೆಂದು ತಿಳಿಸಿದರು

ಸೂಯೆಜ್ ಕಾಲುವೆ ಸಂಚಾರಕ್ಕೆ ಅಡ್ಡಿ ತೆಗೆಯುವ ಕಾರ್ಯಾರಂಭ

ಸೂಯೆಜ್ ಕಾಲುವೆಯಲ್ಲಿ ಹಡಗುಗಳ ಸಂಚಾರಕ್ಕೆ ಅಡ್ಡಿಯಾಗಿ ಮುಳುಗಿಸಲ್ಪಟ್ಟಿರುವ ನೌಕೆಗಳನ್ನು ಎತ್ತಿ, ಮಾರ್ಗವನ್ನು ಸುಗಮ ಮಾಡುವ ಕಾರ್ಯವು ಮೊನ್ನೆ ಆರಂಭವಾಯಿತೆಂದು ವರದಿಯಾಗಿದೆ. ಕಾಲುವೆ ಮಧ್ಯ ಭಾಗದಲ್ಲಿರುವ ಇಸ್ಮಾಲಿಯಾ ಮತ್ತು ದಕ್ಷಿಣದಲ್ಲಿರುವ ಸೂಯೆಜ್‌ಗಳ ಬಳಿ ಕೆಲಸವು ನಡೆಯುತ್ತಿದೆ ಈ ಕೆಲಸದಲ್ಲಿ ಬ್ರಿಟಿಷ್ ಹಡಗುಗಳೂ ಭಾಗವಹಿಸುವವು ಮೊದಲು ಈಜಿಪ್ಟು ಬ್ರಿಟನ್ನಿನ ಹಡಗುಗಳ ಉಪಯೋಗಕ್ಕೆ ಆಕ್ಷೇಪಿಸಿ, ಈಗ ಒಪ್ಪಿರುತ್ತದೆ

ಹಳ್ಳದಕೇರಿಯಲ್ಲಿ ಕೋತಿಗಳ ಕಾಟ

ಹಳ್ಳದಕೇರಿಯಲ್ಲಿ ಅನೇಕ ದಿನಗಳಿಂದಲೂ ಕೋತಿ ಕಾಟವು ವಿಪರೀತವಾಗಿದೆ ನಿತ್ಯವೂ ಮನೆಗಳ ಒಳಗಡೆ ನುಗ್ಗಿ ಅವು ಪಾತ್ರೆಗಳನ್ನು ಹೊತ್ತುಕೊಂಡುಹೋಗುವುದೇ ಮುಂತಾದ ಚೇಷ್ಟೆಗಳನ್ನು ಮಾಡುತ್ತಿವೆ ಅವುಗಳ ಗಲಾಟೆಯನ್ನು ತಡೆಯಲು ಅಸಾಧ್ಯವಾಗಿದೆ ಈ ತೊಂದರೆಯನ್ನು ಪೌರಸಭೆಯವರು ತಪ್ಪಿಸುವುದು ಸೂಕ್ತವಾಗಿದೆ-ಎಂಬುದಾಗಿ ಅಲ್ಲಿನ ನಿವಾಸಿಯೊಬ್ಬರು ಬರೆದಿರುತ್ತಾರೆ

ಎಸ್ ಬಿ. ಚಲುವಯ್ಯನವರ ನಿಧನ

ಮೈಸೂರು ಕೆ ಆರ್ ಮೊಹಲ್ಲಾ ಪ್ರಮುಖ ನಿವಾಸಿ ಶ್ರೀ ಎಸ್ ಬಿ ಚಲುವಯ್ಯನವರು ಕಳೆದ ಸೋಮವಾರ ತಮ್ಮ ೭೫ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ ಅವರ ಆತ್ಮಕ್ಕೆ ಚಿರ ಶಾಂತಿ ದೊರೆಯಲಿ

ಉತ್ತಮವಾದ ಕಟ್ಟಡದ
ಪ್ಲಾನುಗಳುಮತ್ತು ಬ್ಲೂಪ್ರಿಂಟ್
ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್
ಸಲಾಕೆ ಎಸ್ಟಿಮೇಟ್ ಮಾಡಿಕೊಡುವುದಕ್ಕೂ,
ಗಾಯತ್ರಿ ಟಾಕೀಸ್ ಎದುರು
ಶಾಪ್ ಅಂಗಡಿಯಲ್ಲಿ
ಬಿ. ಮುನಿಸ್ವಾಮಪ್ಪ,
ಡಿಸೈನರ್ ಮತ್ತು ಲೈಸನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿರಿ

Edited, Printed and Published by A K Nagarjun at Sadhvi Press D Subbaiah Road, Mysore

ನೆಹರೂರವರು ತಮ್ಮ ಪುತ್ರಿಯೊಡನೆ ಅಮೆರಿಕಾ ಶ್ರೇಷ್ಠ ನ್ಯಾಯಾಧೀಶ ವಾರೆನ್ ಮತ್ತು ಅವರ ಪತ್ನಿಯವರ ಆತಿಥ್ಯಕ್ಕಾಗಿ ತೆರಳಿದಾಗ ತೆಗೆದ ಚಿತ್ರ

ಕೃಷ್ಣರಾಜನಗರದಲ್ಲಿ ಚೂರಿ ಇರಿತದಿಂದ ಒಬ್ಬನ ಮರಣ

ಕೃಷ್ಣರಾಜನಗರದ ಬಟ್ಟೆ ವರ್ತಕರಾದ ಶ್ರೀ ಎಲ್ಲಪ್ಪರಾವ್ ಎಂಬುವರು ಕಳೆದ ಬುಧವಾರ ಇರಿತದ ಪರಿಣಾಮವಾಗಿ ಮೃತಪಟ್ಟರೆಂದು ವರದಿಯಾಗಿದೆ. ಸಹಾಯಕ್ಕಾಗಿ ಬಂದ ಅವರ ಮಗ ತುಕಾರಾಮರಾಯರಿಗೂ ಚೂರಿ ಪೆಟ್ಟು ಬಿದ್ದುದಾಗಿಯೂ, ರಸ್ತೆ ಮತ್ತು ಹೋಟೇಲೊಂದರ ಪಕ್ಕದ ಬಳಿ ಇನ್ನಿಬ್ಬರನ್ನು ಗಾಯಗೊಳಿಸಲಾಯಿತೆಂದೂ ಹೇಳಲಾಗಿದೆ ಪೊಲೀಸರು ಈ ಸಂಬಂಧವಾಗಿ ಹೋಟೇಲಿನ ಮೂವರು ಕೆಲಸಗಾರರನ್ನು ಬಂಧಿಸಿರುತ್ತಾರೆ ತುಕಾರಾಮರಾಯರನ್ನು ಆಸ್ಪತ್ರೆಗೆ ಸೇರಿಸಲಾಗಿದೆ. ಶ್ರೀ ಎಲ್ಲಪ್ಪರಾಯರ ಮನೆಯಲ್ಲಿ ಬಾಡಿಗೆಗೆ ಇರುವ ದಾದಿಯೊಬ್ಬಳಿಗೂ, ಮಾರ್ವಾಡಿಗೂ ಜಗಳವಾಗಿ ಮಧ್ಯಪ್ರವೇಶಿಸಿದವರಿಗೆ ಪೆಟ್ಟು ಬಿದ್ದಿತೆಂದು ತಿಳಿದು ಬಂದಿದೆ.

೧,೨೮೦ ಪೌಂಡು ತೂಕದ ಮೀನು

ಕಲ್ಲಿಕೋಟೆ ಬಳಿ ಅರಬ್ಬೀ ಸಮುದ್ರದಲ್ಲಿ ಮೊನ್ನೆ ಬೆಸ್ತರು ೧,೨೮೦ ಪೌಂಡು ತೂಕದ ಭಾರಿ ಮೀನನ್ನು ಪ್ರಯಾಸಪಟ್ಟು ಹಿಡಿದರು ಅದರ ಪಿತ್ತಕೋಶವೇ ೨೪೦ ಪೌಂಡಿನಷ್ಟಿದೆ ಮಲಬಾರು ತೀರದಲ್ಲಿ ಇಷ್ಟೊಂದು ಭಾರಿಯಾದ ಮೀನು ಇದುವರೆಗೆ ಸಿಕ್ಕಿರಲಿಲ್ಲ

ಶುಭಾಶಯ

ನಗರದ ಗಾಯತ್ರಿ ರೇಡಿಯೋ ಕಾರ್ಪೋರೇಷನ್ನಿನ ಶ್ರೀ ಎಸ್ ದೇವರಾಜ ಅರಸುರವರೂ ಮತ್ತು ಬೆಂಗಳೂರು ಪ್ರಜಾವಾಣಿ ಪತ್ರಿಕಾ ಸಂಪಾದಕರೂ ಕಳುಹಿಸಿರುವ ನೂತನ ವರ್ಷದ ಶುಭಾಶಯವನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ

ಮೈಸೂರು ಪೇಟೆ ಧಾರಣೆ

ಬಂಗಾರ ಸಣ್ಣ ತೂಕ		
ಕೊಯಮುತ್ತೂರುಸಣ್ಣ	೨೮ ೧೨ ೬	೨೮ ೪ ೦
ರೆಕ್ಕಬೂದಿ ತುಟ್ಟು		
ಸೇಲಂ ಸಣ್ಣ	೨೮ ೪ ೦	೨೭ ೦ ೦
ದಪ್ಪ	೨೬ ೮ ೦	೨೩ ೧೦ ೦
ಕಂಬಾಳಿ	೨೮ ೧೦ ೦	೨೮ ೧೪ ೦
ರಾಗಿ	೩೬ ೦ ೪	೪೪ ೬ ೦
ಜೋಳ	೪೪ ೪ ೦	೪೪ ೧೨ ೦
ನವಣೆ	೧೮ ೮ ೦	
ಕಂಬು	೩೦ ೦ ೦	
ಕಡಲೆಕಾಯಿ	೧೬ ೧೨ ೦	೨೨ ೧೪ ೦
ಹುಚ್ಚೆಳ್ಳು	೩೬ ೪ ೦	೪೬ ೧೦ ೦
ಹರಳುಬೀಜ	೪೬ ೮ ೦	೪೬ ೧೨ ೦
ಹುರುಳಿ	೨೨ ೨ ೦	೨೮ ೧೦ ೦
ಹಲಸಂದೆ	೪೦ ೦ ೦	೬೦ ೦ ೦
ಹೆಸರು	೪೮ ೦	೪೯ ೧೪ ೦
ಕಡಲೆ	೪೭ ೦ ೦	
ಉದ್ದು	೬೩ ೪ ೦	
ತೊಗರಿ	೬೬ ೪ ೦	
ಸೆಣಬಿನ ಬೀಜ	೨೪ ೨ ೦	೩೬ ೮ ೨
ಧನಿಯ	೪ ೨ ೦	
ಮೆಣಸಿನಕಾಯಿ	೮ ೦ ೦	೨೨ ೬ ೦
ಸೀಗೆಕಾಯಿ	೭ ೦ ೦	೯ ೨ ೦
ಹುಣಸೇಹಣ್ಣು	೪ ೨ ೦	೪ ೭ ೦
ತೆಂಗಿನಕಾಯಿ ೧೦೦ಕ್ಕೆ	೧೧೦ ೦ ೦	೧೩೪ ೦ ೦

ಸೇವಾದಳದ ವಾರ್ಷಿಕೋತ್ಸವ

ಭಾರತ ಸೇವಾದಳದ ೩೪ ನೇ ವಾರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ನೆರವೇರುವುದು ಡಿ. ಡಿ ಪಿ ಐ ಯವರಾದ ಶ್ರೀ ಟಿ ವಾಸುದೇವಯ್ಯನವರು ಅಧ್ಯಕ್ಷತೆ ವಹಿಸುವರು ಶ್ರೀ ಅಗರಂ ರಂಗಯ್ಯನವರು ಸ್ವಯಂಸೇವಕರನ್ನು ಉದ್ದೇಶಿಸಿ ಭಾಷಣ ಮಾಡುವರು

The Cauvery Valley Paper Mills Ltd.,

(In Liquidation)

Statue Square Mysore

SALE NOTICE

Offers are invited for the purchase of the undermentioned articles till 15th January 1957 up to 5 P M

Electrical goods, such as *Electric Motors of* [illegible] *Cycles* starter and switches etc Chinaclay Sulphuric Acid Rubber and leather beltings Asbestos powder and Asbestos rope, Magnesia Compound, Shell Verina greese

For particulars of sale conditions etc please contact the undersigned

S SANJEEVIAH,
BA B Com BL
Y S LINGAIAH,
BA BL.
Official Liquidators,
The Cauvery Valley Paper Mills Ltd,
(In Liquidation)
Clock Tower Square,
Mysore
26-12 56

ಗೃಹಕೃತ್ಯದ ನೋಟೀಸು

ನಂಜನಗೂಡು ತಾಲ್ಲೂಕು ದೊಡ್ಡಕವ
ಲಂದೆ ಹೋಬಳಿ ಗಟ್ಟವಾಡಿ ಗ್ರಾಮದಲ್ಲಿರುವ ಚ
ಪ್ಪನ ಹೆಂಡತಿ ಕೆಂಪಮ್ಮನಾದ ನಾನು ಈ ನೋ
ಟೀಸ್ ಮೂಲಕ ತಿಳಿಯಪಡಿಸುವುದೇನೆಂ
ಪವತಿದಾರ ನನ್ನ ಗಂಡ ಕೆಂಚಪ್ಪನವ
ಕೆಂಪಮ್ಮನಾದ ನನಗೂ ಗುರುಸಿದ್ದಪ್ಪ, ರೇವ
ಬಸಮ್ಮ, ಮಾದಮ್ಮ ಎಂಬ ನಾಲ್ಕು ಮ
ಇರುತ್ತಾರೆ ಸದರಿ ಮಕ್ಕಳ ಪೈಕಿ ಗುರು
ಪ್ಪ, ಬಸಮ್ಮ, ಮಾದಮ್ಮ ಎಂಬ ಮ
ನನ್ನ ಗಂಡ ಕೆಂಚಪ್ಪನವರೇ ಲಗ್ನ ವಗೈರೆ
ಕಾರ್ಯಗಳನ್ನು ಮಾಡಿರುತ್ತಾರೆ ೪ನೇ
ರೇವಣ್ಣ ಎಂಬುವನಿಗೆ ಇನ್ನೂ ಲಗ್ನವಾ
ನಮಗೆ ಷೆಡ್ಯೂಲಿನಲ್ಲಿ ನಮೂದಾಗುವ
ನು ಮತ್ತು ಮನೆ ಪಿತ್ರಾರ್ಜಿತವಾಗಿ
ನಮ್ಮ ಸ್ವಾಧೀನದಲ್ಲಿರುತ್ತೆ ಪೌತಿದಾರ
ಗಂಡ ಕೆಂಚಪ್ಪನವರು ತಮ್ಮ ಜೀವಿತ ಕಾಲ
ಷೆಡ್ಯೂಲು ಸ್ವತ್ತುಗಳನ್ನು ನಾಲ್ಕು ಭಾಗ
ವಿಂಗಡಿಸಿ ಒಂದನೇ ಗುರುಸಿದ್ದಪ್ಪನ
ಒಂದು ಭಾಗ, 2ನೇ ಮಗ ರೇವಣ್ಣನ
ಒಂದು ಭಾಗ ಮತ್ತು ಸದರಿಯವನ ಲ
ಖರ್ಚಿಗೆ ಒಂದು ಭಾಗ, ನನ್ನ ಜೀವನಾ
ಒಂದು ಭಾಗ ಈ ವಿಧವಾಗಿ ವಿಲೆ ಮಾ
ತ್ತಾರೆ, ಮತ್ತು ಷೆಡ್ಯೂಲ್ ಸ್ವತ್ತುಗಳ ಪೈ
ಮುದ್ದಹಳ್ಳಿ ಚನ್ನಸ್ವಾಮಪ್ಪನವರಲ್ಲಿ ಮಾ
ಮೂರು ನೂರು ರೂಪಾಯಿಗಳ ಸಾಲಗಳ
ಸಹ ಗುರುಸಿದ್ದಪ್ಪನಿಗೆ ಒಂದು ಭಾಗ
ರೇವಣ್ಣನಿಗೆ ೩ ಭಾಗ ಸಾಲಗಳನ್ನೂ
ಬಿಟ್ಟು ತಂದೆ ಸದರಿ ಕೆಂಚಪ್ಪನವರು ವಿಭಾ
ಮಾಡಿರುತ್ತಾರೆ ಮೇಲ್ಕಂಡ ವಿಚಾರವು
ರುವಲ್ಲಿ ನನ್ನ ಒಂದನೆಯ ಮಗ ಗುರುಸಿದ್ದ
ದುರ್ಜನರ ಸಹವಾಸದಲ್ಲಿ ಸೇರಿ ಷೆಡ್ಯೂ
ಸ್ವತ್ತುಗಳ ಪೈಕಿ ಕೆಲವು ಭಾಗವನ್ನು ಪರ
ಮಾಡುತ್ತಾನೆಂತ ನನಗೆ ಬಾಜಾರಿ ಮಾತು
ಬಂದಿರುತ್ತೆ ಇದೇ ಕಾರಣ ನಾನು ಸ
ರಿಗೂ ತಿಳಿಯಪಡಿಸುವುದೇನೆಂದರೆ—ಷೆಡ್ಯೂ
ಸೊತ್ತುಗಳ ಪೈಕಿ ನಾಲ್ಕನೆಒಂದು ಭಾಗ
ಉಳಿದ ಮೂರು ಭಾಗಗಳನ್ನು ಮೇಲ್ಕಂಡ ಗು
ಸಿದ್ದಪ್ಪನು ಪರಾಧೀನ ಮಾಡುವುದಕ್ಕೆ
ತನ್ನ ಹಿಸ್ಸೆ ಬಾಬತು ಸಾಲ ಕೊಡದೆ
ಕೊಳ್ಳುವುದಕ್ಕಾಗಲಿ ಅರ್ಹನಾಗಿರುವುದಿಲ್ಲ
ರಿ ಗುರುಸಿದ್ದಪ್ಪನಿಂದ ಷೆಡ್ಯೂಲ್ ಸ್ವತ್ತುಗ
ಯಾರೇ ಆಗಲಿ ಆಧಾರ, ಭೋಗ್ಯ, ಕ್ರ
ವಗೈರೆ ಏನು ಮಾಡಿಸಿಕೊಂಡಾಗ್ಯೂ ಊ
ವಾಗತಕ್ಕದ್ದಲ್ಲ ತಿಳಿಯುವುದು

ಷೆಡ್ಯೂಲ್ ನಂಜನಗೂಡು ತಾಲ್ಲೂಕು ದೊ
ಕವಲಂದೆ ಹೋಬಳಿ ಗಟ್ಟವಾಡಿ ಗ್ರಾಮಕ್ಕೆ
ವುದು ಪೂರ್ವಕ್ಕೆ ಹೊನ್ನಪ್ಪನವರ ಜಮೀನು
ಮಕ್ಕೆ ಬಸಪ್ಪ ವಗೈರೆಯವರ ಜಮೀನು ದ
ಪಾರಿ ಹಾಗ ಉತ್ತರಕ್ಕೆ ಮಲ್ಲಪ್ಪನ ಜಮೀನು
ಮಧ್ಯೆ ಇರುವ ಸರ್ವೆ ನಂಬರುಗಳು 312,29
ಈ ಎರಡು ನಂಬರುಗಳ ಒಟ್ಟು ವಿಸ್ತೀರ್ಣ ೪
8 ಗುಂಟೆ, ಕಂದಾಯ ರೂ 6-12-0 ಉಳ್ಳ
ಒಂದು ಬಿಟ್ಟೋ ಗ್ರಾಮದಲ್ಲಿರುವುದು-ಪೂರ್ವ
ಸೋಮಪ್ಪನ ಮನೆ, ಪಶ್ಚಿಮಕ್ಕೆ ಮಲ್ಲಪ್ಪ
ಯರ ಮನೆ, ದಕ್ಷಿಣಕ್ಕೆ ತಿರುಗಾಟದ ದಾರಿ,
ತ್ತರಕ್ಕೆ ಹೊನ್ನಪ್ಪ ವಗೈರೆಯವರ ಹಾರಿ
ಮಧ್ಯೆ ಇರುವ ಹೆಂಚಿನ ಬಾಬತು ಹಾಲು,
ಮನೆ ಈ ಸೊತ್ತುಗಳಲ್ಲಿ ಗುರುಸಿದ್ದಪ್ಪನ
ನಾಲ್ಕನೇಒಂದು ಭಾಗ ಹೊತ್ತು
ಕೆಂಪಮ್ಮನ ಎಡಗೈ ಹೆಬ್ಬೆಟ್ಟಿನ ಗುರ್ತು

SREE GANESH TALKIES
Gala Release On 29—12—56 : Daily 3 Shows



NEW YEAR SPECIAL ATTRACTION
All Complimentaries Suspended

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 6 ಪುಟ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
•
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜಂಟರುಗಳು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1. [illegible]
[illegible] ರಸ್ತೆ,
ಬೆಂಗಳೂರು-2

ಸಂಪುಟ : ೧೫] SADHVI : SUNDAY 30—12—1956 ಮೈಸೂರು : ಭಾನುವಾರ ೩೦—೧೨—೧೯೫೬ [ಸಂಚಿಕೆ : ೨೫೬

೫೭ರ ಪ್ರಥಮಾರ್ಧದಲ್ಲಿ ೫೦೦ ಸರಕುಗಳ ಆಮದು ಖೋತ

ವಿಜ್ಞಾನ ಮತ್ತು ಪಾರಿಭಾಷೆಗಳ ಸಾಧಕಬಾಧಕ ಪರಿಶೀಲನೆ ಅಗತ್ಯ

ದಕ್ಷಿಣ ಪ್ರದೇಶ ಮನಶ್ಶಾಸ್ತ್ರಜ್ಞರ ಸಮ್ಮೇಳನದಲ್ಲಿ ಅಧ್ಯಕ್ಷರ ಭಾಷಣ

ಮೈಸೂರು ೩೦

ಸಚಿವ ಕಡಿದಾಳ್ ಮಂಜಪ್ಪನವರು ದಕ್ಷಿಣ ಪ್ರಾದೇಶಿಕ ಮನಶ್ಶಾಸ್ತ್ರ ಸಮ್ಮೇಳನವನ್ನು ನೆನ್ನೆ ಆರಂಭಗೊಳಿಸಿದರು. ಡಾ|| ಎಂ. ವಿ. ಗೋಪಾಲಸ್ವಾಮಿಯವರ ಅನಾರೋಗ್ಯದ ನಿಮಿತ್ತ ಮಹಾರಾಜಾ ಕಾಲೇಜಿನ ಮನಶ್ಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಬಿ. ಕುಪ್ಪುಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿಗಳು ಡೆಜ್ ವೈ. ಕಸ್ತೂರಿ ಮತ್ತು ಕೆ. ಸತ್ಯವತಿಯವರಿಂದ ಪ್ರಾರ್ಥನೆಯಾದನಂತರ ವೈಸ್ ಚಾನ್ಸಲರ್ ಡಾ|| ಕೆ. ವಿ. ಪುಟ್ಟಪ್ಪನವರು ಸ್ವಾಗತ ಭಾಷಣ ಮಾಡಿ, ಭಾರತಕ್ಕೆ ಮನಶ್ಶಾಸ್ತ್ರವೆಂಬುದು ಹೊಸದಲ್ಲವೆಂದೂ, ಬಹು ಪುರಾತನ ಕಾಲದಿಂದಲೂ ಉನ್ನತ ಮಟ್ಟದಲ್ಲಿ ಅಂತ ವಿಜ್ಞಾನ ಪದ್ಧತಿಯನ್ನು ಇಲ್ಲಿ ಅಭ್ಯಸಿಸಲಾಗುತ್ತಿತ್ತೆಂದೂ, ಮಾನಸಿಕ ಘರ್ಷಣೆ ಬಗ್ಗೆ ಆಧುನಿಕ ವಿಧಾನಗಳು ಉಪನಿಷತ್ತು, ಭಗವದ್ಗೀತೆ, ಯೋಗಸೂತ್ರ ಮುಂತಾದುವುಗಳಲ್ಲಿ ಉತ್ತಮವಾಗಿರುವ ಉದ್ಬೋಧನೆಗಳನ್ನು ಮತ್ತಷ್ಟು ಅಭಿವೃದ್ಧಿಗೊಳಿಸುವುದಾಗಿಯೂ ಅವರು ತಿಳಿಸಿದರು.

ಪ್ರಾಚೀನ ಋಷಿಗಳು ತಮ್ಮ ಆತ್ಮೋದ್ಧಾರ ಮತ್ತು ಇತರರ ಆಧ್ಯಾತ್ಮಿಕ ಉನ್ನತಿಗಾಗಿ ಮಾಡಿದ ಕಾರ್ಯಗಳನ್ನು ಆಧುನಿಕ ಮನಶ್ಶಾಸ್ತ್ರವು ಇನ್ನೂ ಕಂಡುಕೊಂಡಿಲ್ಲವೆಂದೂ ಅವರು ಹೇಳಿದರು. ಆದ್ದರಿಂದ ದೇಶದ ಮನಶ್ಶಾಸ್ತ್ರ [illegible] ವರುಗಳು ಆಧುನಿಕ ಮನಶ್ಶಾಸ್ತ್ರದಲ್ಲಿ ವ್ಯಕ್ತಿಗೆ ಶಿಕ್ಷಣವೀಯುವುದಲ್ಲದೆ, ಪ್ರಾಚೀನ [illegible] ಸಿದ್ಧಾಂತ ಮನಶ್ಶಾಸ್ತ್ರದಲ್ಲಿ ಸಂಶೋಧನೆ ನಡೆಸಿ ಅದರಿಂದ ವಿಶೇಷ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕೆಂದು ತಿಳಿಸಿದರು.

ಸಾಹಿತಿಗಳು, ಕಲಾವಿದರೇ ಮುಂತಾದವರ ಮನೋಸ್ಥಿತಿಯನ್ನು ಪರಿಶೀಲಿಸಬೇಕೆಂದೂ ಅವರು ನುಡಿದರು. ಭೌತಿಕ ವಿಜ್ಞಾನವು ವಿಪರೀತವಾಗಿ ಬೆಳೆದಿರುವ ಈ ಕಾಲದಲ್ಲಿ ಅವುಗಳನ್ನು ಆಧುನಿಕ ಯುದ್ಧ ಕ್ರಮದಲ್ಲಿ ಪ್ರಯೋಗಿಸುವುದು ವಿನಾಶಕರವೆಂದು ಅವರು ಹೇಳಿದರು.

ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಮ್ಮ ಭಾಷಣದಲ್ಲಿ ಮತ್ತೊಬ್ಬರ ಮನಸ್ಸಿನಲ್ಲಿರುವ ವಿಚಾರವನ್ನು ದೂರದಿಂದಲೇ ಅರಿಯುವ ಶಕ್ತಿಯು ಭಾರತದಲ್ಲಿ ಹಿಂದೆ ಇದ್ದುದನ್ನು ಜ್ಞಾಪಿಸಿದರು. ಆಧುನಿಕ ಮನಶ್ಶಾಸ್ತ್ರಜ್ಞರೆಂತಲೂ ನಮ್ಮ ಪ್ರಾಚೀನರಲ್ಲಿ ವಿಶೇಷ ಜ್ಞಾನವಿದ್ದಿತೆಂದೂ, ಮನಶ್ಶಾಸ್ತ್ರಜ್ಞರು ಪತಂಜಲಿಯವರ ಯೋಗ ಸೂತ್ರವನ್ನು ಪರಿಶೀಲಿಸಬೇಕೆಂದೂ ತಿಳಿಸಿದರು.

ನಂತರ ಶ್ರೀ ಹಫೀಜ್‌ರವರು ಡಾ|| ಎಂ. ವಿ. ಗೋಪಾಲಸ್ವಾಮಿಯವರ ಅಧ್ಯಕ್ಷ ಭಾಷಣವನ್ನು ಓದಿದರು. ಸಿನಿಮಾ, ರೇಡಿಯೋ, ವಿಮಾನ, ಟೆಲಿ [illegible] ಟರ್ ಮುಂತಾದುವು ಈಗ ಜನರ ಮನಸ್ಸನ್ನು ಆಕರ್ಷಿಸಿವೆಯೆಂದೂ, ಮುಂದೆ ಆರ್ಥಿಕವಾದ ಅಭ್ಯುದಯ ಸಾಧನೆಗೆ ಅವು ಉಪಯುಕ್ತವೆಂದು ಜನರು ಭಾವಿಸಿರುವರೆಂದೂ, ಅಣು ಭೇದನವಾದ ಮೇಲೆ ಅಣು ಬಾಂಬು, ಜಲಜನಕ ಬಾಂಬುಗಳು ಸೃಷ್ಟಿಯಾಗಿ ಜಗತ್ತನ್ನು ತಲ್ಲಣಗೊಳಿಸುತ್ತಿರುವುದಾಗಿಯೂ ಭಾಷಣದಲ್ಲಿ ತಿಳಿಸಲಾಗಿತ್ತು.

ವಿಜ್ಞಾನವು ನಾಗರಿಕತೆ ಮತ್ತು ಸಂಸ್ಕೃತಿಯನ್ನು ಹಾಳುಮಾಡುತ್ತಿಲ್ಲವೆಂದೂ, ಅದನ್ನು ತನ್ನ ಸ್ವಾರ್ಥಕ್ಕಾಗಿ ಬಳಸುವ ಮನುಷ್ಯನ ಅವಿದ್ಯೆಯೇ ಅನರ್ಥದ ನಾಶಕ್ಕೆ ಕಾರಣವೆಂದೂ ಡಾ|| ಗೋಪಾಲಸ್ವಾಮಿಯವರು ಅಭಿಪ್ರಾಯಪಟ್ಟರು. ಆದ್ದರಿಂದ ವಿಜ್ಞಾನದ ನಿಜವಾದ ಸ್ವಭಾವವೇನೆಂಬುದನ್ನೂ, ಅದರ ಪ್ರತಿಭೆ ಮತ್ತು ಉದಾತ್ತತೆಯನ್ನು ಪರೀಕ್ಷಿಸುವುದು ಮನಶ್ಶಾಸ್ತ್ರಜ್ಞರ ಕೆಲಸವಾಗಿರುವುದೆಂದೂ ಅವರು ಹೇಳಿದ್ದರು. ಹೊಸದಾಗಿ ಕಂಡುಹಿಡಿಯಲ್ಪಡುವ ವಸ್ತುಗಳು ಪ್ರಕೃತಿಯ ಸ್ವಭಾವವನ್ನು ತಿಳಿಸುತ್ತಿರುವುದಲ್ಲದೆ ಜಡ ಮತ್ತು ಚೇತನಗಳ ನಡುವೆ ಇರುವ ಅಂತರವು ಎಷ್ಟು ಕಡಿಮೆಯೆಂದು ತೋರಿಸುವುದಾಗಿ ಅವರು ನುಡಿದರು. ವಿಜ್ಞಾನ ಮತ್ತು ಪಾರಿಭಾಷಿಕ ವಿದ್ಯೆಗಳು ಪರಸ್ಪರಾಶ್ರಿತ ಪರಂಪರೆಯ ವಿಷಯಗಳನ್ನು ಹೊರಸೂಸುತ್ತಿರುವುವೆಂದೂ, ಕೈಗಾರಿಕಾಕರಣದಿಂದ ಹೆಚ್ಚು ಸ್ವಾತಂತ್ರ್ಯ ಮತ್ತು ದಾಸ್ಯ, ಹೆಚ್ಚು ಏಕಾಂತತೆ ಮತ್ತು ಸಹೋದರತ್ವ, ಹೆಚ್ಚು ನಾಗರೀಕತೆ ಮತ್ತು ಪಾಶವೀಕತನ ಇವುಗಳು ಉಂಟಾಗುತ್ತವೆಂದೂ ಅವರು ತಿಳಿಸಿ, ಮನುಷ್ಯನು ಎಷ್ಟು ಸ್ಥಿತಿಯನ್ನು ಪರಿಶೀಲಿಸಲು ತಕ್ಕ ಧೈರ್ಯವನ್ನು ತಾಳಬೇಕಾದ ಕಾಲವು ಈಗ ಸನ್ನಿಹಿತವಾಗಿರುವುದೆಂದು ಸೂಚಿಸಿದ್ದರು.

ಶ್ರೀಮತಿ ಹೆಚ್ ಎಸ್ ಅನಸೂಯ ಮತ್ತು ಶ್ರೀ ಬಿ ಎಸ್ ವರದರಾಜರವರಿಂದ ಸಂಗೀತ, ಶ್ರೀಮತಿ ಜಯಶ್ರೀಯವರ ನೃತ್ಯ ಮತ್ತು ವಿದ್ಯಾರ್ಥಿಗಳಿಂದ ನಾಟಕಗಳಾದುವು.

ವಿದ್ಯಾಭ್ಯಾಸ ಇಲಾಖೆಯಲ್ಲಿ ಸೀನಿಯಾರಿಟಿ ಬಗ್ಗೆ ಅಲಕ್ಷ್ಯ

ವಿಧಾನ ಸಭೆಯಲ್ಲಿ ಸಚಿವ ಕಡಿದಾಳ್ ಮಂಜಪ್ಪನವರ ಒಪ್ಪಿಗೆ

ಬೆಂಗಳೂರು ೩೦

ವಿದ್ಯಾ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ವಿಧಾನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ವಿದ್ಯಾಭ್ಯಾಸ ಇಲಾಖೆಯು ಹಲವು ವಿದ್ಯಮಾನಗಳಲ್ಲಿ ಸೀನಿಯಾರಿಟಿಯನ್ನು ಅಲಕ್ಷಿಸಲಾಗಿರುವುದೆಂದು ಒಪ್ಪಿಕೊಂಡು, ಅವನ್ನು ಬೇಗನೆ ಸರಿಪಡಿಸಲಾಗುವುದೆಂದು ತಿಳಿಸಿದರು. ಇಲಾಖೆಯ ಮೇಲ್ಪಟ್ಟದ ಅಧಿಕಾರ ಹುದ್ದೆಗಳಿಗೆ ನೇಮಕ, ಪ್ರಮೋಷನ್ ಮುಂತಾದುವುಗಳ ಬಗ್ಗೆ ಸೀನಿಯಾರಿಟಿಯನ್ನು ಕಡೆಗಣಿಸಿ ನೇಮಕ ಮಾಡುವ ಪದ್ಧತಿಯು ಸಾಮಾನ್ಯವಾಗಿ ಇಲ್ಲವೆಂದೂ, ಪ್ರಥಮ ಮತ್ತು ದ್ವಿತೀಯ ದರ್ಜೆ ಹುದ್ದೆಗಳಿಗೆ ಟೀಕೆಗೊಳಗಾದ ಅಧಿಕಾರಿಗಳನ್ನು ನೇಮಿಸಲಾಗಿರುವುದೆಂಬುದು ನಿಜವಲ್ಲವೆಂದೂ ಅವರು ಸೂಚಿಸಿದರು

ಮಧ್ಯ ಪ್ರದೇಶದ ಗವರ್ನರ್ ಗುರುಮುಖ್ ನಿಹಾಲ್‌ಸಿಂಗ್

ಮೊನ್ನೆ ಜಯಪುರದಲ್ಲಿ ಅಖಿಲ ಭಾರತ ಸ್ಕೌಟ್ ಜಾಂಬೂರಿಯನ್ನು ಆರಂಭಗೊಳಿಸಿದರು

ಭಾರತಕ್ಕೆ ಆಮದಾಗುವ ವಸ್ತುಗಳಲ್ಲಿ ಭಾರಿ ಖೋತಾ

ಬರುವ ವರ್ಷ ಜನವರಿಯಿಂದ ಜೂನ್ ಅಷ್ಟರೊಳಗೆ ೫೦೦ ವಿಧದ ಸರಕುಗಳ ಆಮದಿನಲ್ಲಿ ಖೋತಾ ಮತ್ತು ಅತ್ಯವಶ್ಯಕವಲ್ಲದ ಅನೇಕ ವಸ್ತುಗಳಿಗೆ ರಹದಾರಿ ರದ್ದು—ಈ ಎರಡು ನೀತಿಗಳನ್ನು ಭಾರತ ಸರ್ಕಾರದವರು ಅವಲಂಬಿಸುವರು. ಅವರಿಂದ ಆ ಅವಧಿಯಲ್ಲಿ ೫೦ ಕೋಟಿ ರೂ. ವಿದೇಶೀ ವಿನಿಮಯ ನಾಣ್ಯವು ಉಳಿತಾಯವಾಗುವುದೆಂದು ನಂಬಲಾಗಿದೆ. ಉಪಭೋಗ ವಸ್ತುಗಳ ಆಮದಿನಲ್ಲಿ ಹೆಚ್ಚು ಖೋತಾ ಮಾಡಲಾಗುವುದು. ವರ್ಷದ ಆದಿಯಲ್ಲಿ ಭಾರತದ ವಿದೇಶೀ ವಿನಿಮಯ ನಾಣ್ಯಗಳ ಒಟ್ಟು ಹಣವು ೭೪೨ ಕೋಟಿ ರೂ ನಷ್ಟು ಇದ್ದು ಈಗ ೫೩೩ ಕೋಟಿ ರೂ ನಷ್ಟು ಉಳಿದಿದೆಯೆಂದು ಹೇಳಲಾಗಿದೆ. ದ್ವಿತೀಯ ಪಂಚ ವಾರ್ಷಿಕ ಯೋಜನೆಗೆ ಬೇಕಾಗುವ ಸಾಮಾನುಗಳನ್ನು ಹೆಚ್ಚಾಗಿ ಆಮದು ಮಾಡಿಕೊಳ್ಳಲಾಗುವುದು

ಹುಂಜಗಳ ಕಾಳಗದಲ್ಲಿ ಮಾಲೀಕನ ಮರಣ

ಬಿಹಾರಿನ ಧೋರಿಯಾ ಬಳಿ ಒಂದು ಹಳ್ಳಿಯಲ್ಲಿ ಮೊನ್ನೆ ಕಾಲುಗಳಿಗೆ ಮೊನಚಾದ ಚಾಕುಗಳನ್ನು ಕಟ್ಟಿದ್ದ ಹುಂಜಗಳ ಕಾಳಗವೊಂದನ್ನು ನಡೆಸಲಾಯಿತೆಂದೂ, ಅದರ ಪರಿಣಾಮವಾಗಿ ಒಂದು ಹುಂಜವು ಮತ್ತೊಂದರ ಯಜಮಾನನನ್ನು ಕೊಂದಿತೆಂದೂ ವರದಿಯಾಗಿದೆ. ಬಲವಾದ ಕಾಳಗವಾದಮೇಲೆ ಸೋತುಹೋದ ಹುಂಜವು ವಿಪರೀತ ಆಯಾಸಗೊಂಡು ತನ್ನ ಯಜಮಾನನನ್ನು ಆಶ್ರಯಿಸಿತೆಂದೂ, ಮತ್ತೊಂದು ಅದರ ಮೇಲೆ ಪೂರ್ಣ ಬಲ ಪ್ರಯೋಗ ಮಾಡಿ ಯಜಮಾನನನ್ನು ತೀವ್ರವಾಗಿ ಗಾಯಗೊಳಿಸಿದುದರಿಂದ ಸ್ವಲ್ಪ ಹೊತ್ತಿನನಂತರ ಅವನು ಮೃತಪಟ್ಟನೆಂದು ಹೇಳಲಾಗಿದೆ

ಮೈಸೂರು ಮತ್ತು ಕರ್ನಾಟಕ ವಕೀಲರ ಸಮ್ಮೇಳನಗಳ ಐಕ್ಯ

ಬೆಂಗಳೂರು ೨೯

ಮೈಸೂರು ಮತ್ತು ಕರ್ನಾಟಕ ವಕೀಲರ ಸಮ್ಮೇಳನಗಳನ್ನು ಐಕ್ಯಗೊಳಿಸಿ ಅದನ್ನು ಮೈಸೂರು ಸಂಸ್ಥಾನದ ಬಾರ್ ಫೆಡರೇಷನ್ ಎಂದು ಕರೆಯಲು ಇಲ್ಲಿ ಸೇರಿದ್ದ ಶಾಖಾ ವಕೀಲರುಗಳ ಸಂಘದ ಪ್ರತಿನಿಧಿಗಳ ಸಮ್ಮೇಳನದಲ್ಲಿ ನಿರ್ಧರಿಸಲಾಯಿತು. ಹೈಕೋರ್ಟ್ ನ್ಯಾಯಾಧೀಶ ಶ್ರೀ ನಿಟ್ಟೂರು ಶ್ರೀನಿವಾಸರಾಯರು ಆರಂಭಗೊಳಿಸಿದರು. ಶ್ರೀ ಯತಿರಾಜುಲುರವರು ಅಧ್ಯಕ್ಷತೆ ವಹಿಸಿದ್ದರು. ಮೈಸೂರು ನಗರದಲ್ಲಿ ಬರುವ ಮೇ ತಿಂಗಳಲ್ಲಿ ಫೆಡರೇಷನ್ನಿನ ಪ್ರಥಮ ಸಮ್ಮೇಳನವು ಸೇರುವುದು.

ನೂರವರು ಬರ್ಮಾದ ಪ್ರಧಾನಿ

ಬರ್ಮಾದ ಪ್ರಧಾನಿಯಾಗಿ ಪುನಃ ಉ ನೂರವರನ್ನು ತರಲು ಅಲ್ಲಿ ಆಡಳಿತ ನಡೆಸುತ್ತಿರುವ ಫ್ಯಾಸಿಸ್ಟ್ ವಿರೋಧ ಪಕ್ಷವು ನಿರ್ಧರಿಸಿರುತ್ತದೆ. ಅವರು ಅಧಿಕಾರ ವಹಿಸುವ ದಿನವನ್ನು ಇನ್ನೂ ಗೊತ್ತುಪಡಿಸಿಲ್ಲ

ಟಿ. ಜಿ. ನಾರಾಯಣ ಅಯ್ಯಂಗಾರ್ಯರ ನಿಧನ

ಶಿವಮೊಗ್ಗದ ಸುಪ್ರಸಿದ್ಧ ಅಡ್ವೊಕೇಟರಾದ ಶ್ರೀ ಟಿ ಜಿ ನಾರಾಯಣಅಯ್ಯಂಗಾರ್ಯರು ನೆನ್ನೆ ರಾತ್ರಿ ಶಿವಮೊಗ್ಗದಲ್ಲಿ ನಿಧನಹೊಂದಿದರೆಂದು ವಾರ್ತೆ ಬಂದಿದೆ. ಅವರು ಹಿಂದೆ ಸಂಸ್ಥಾನದ ವಕೀಲರುಗಳ ಸಮ್ಮೇಳನದ ಅಧ್ಯಕ್ಷರಾಗಿದ್ದರು

ನಗರದಲ್ಲಿ ಅಖಿಲ ಭಾರತ ಕೈ ಕಸಬುಗಳ ವಾರಾಚರಣೆ

ನಗರದ ವಸ್ತು ಪ್ರದರ್ಶನದ ಕಟ್ಟಡದಲ್ಲಿ ೨ನೇ ಜನವರಿ ೫ನೇ ತಾರೀಖಿನಿಂದ ೧೧ ರವರೆಗೆ ಅಖಿಲ ಭಾರತ ಕೈ ಕಸಬುಗಳ ವಾರಾಚರಣೆ ನೆರವೇರಿಸಲಾಗುವುದು. ಅದರ ಅಂಗವಾಗಿ ಕೈ ಕಸಬು, ಕೈಗಾರಿಕೆ ಮತ್ತು ಉತ್ಪನ್ನ ವಸ್ತುಗಳ ಪ್ರದರ್ಶನವೊಂದನ್ನು ಏರ್ಪಡಿಸಲಾಗುವುದು. ಸಾರ್ವಜನಿಕರು ತಮ್ಮ ಮಾಲುಗಳು ಮತ್ತು ಇತರ ಉಪಯುಕ್ತ ವಸ್ತುಗಳನ್ನು ಆಯಾ ತಾಲ್ಲೂಕು ಅಮಲ್ದಾರರಿಗಾಗಲೀ, ಗ್ರಾಮ ಕೈಗಾರಿಕೆ ಯೋಜನೆ ಮೈಸೂರು ಸೂಪರಿಂಟೆಂಡೆಂಟರಿಗಾಗಲೀ ಮುಂಚೆಯೇ ಕಳುಹಿಸುವಂತೆ ಜಿಲ್ಲಾಧಿಕಾರಿಗಳು ಮನವಿ ಮಾಡಿರುತ್ತಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ ೭ ೧೫ ಪ್ರಮು ಕೋಡು ಎ ಸುಬ್ರಹ್ಮಣ್ಯಅಯ್ಯರ್—ಸಂಗೀತ ೭-೩೦ ಗಾನವಿಹಾರ ೮ ೧೫ ದಿನಾರ್ಧ ಮಧ್ಯಾಹ್ನ ೧೨ ಸಂಗೀತ ೧೨-೩೦ [illegible] ನಾಗೇಂದ್ರಪ್ಪ—ಕ್ಲಾರಿಯೊನೆಟ್ ೧-೩೦ ದಿನಾರ್ಧ ೧-೫೦ ಮುಖವೀಣೆ ೨ ೧೫ ಸಂಗೀತ ಸಂಜೆ ೫-೩೦ ರಂಗಪ್ಪ—ಕೊಳಲು ೬ ೫ ದಿನಾರ್ಧ ೬-೨೦ ಜಾನಪದಗೀತೆ ೬-೩೦ ವಿಮಲಾ ಹತ್ತಂಗಡಿ—ಸಂಗೀತ ೮ ವರ್ಷದ ಹಿನ್ನೋಟ. ಪ್ರೊ॥ ಜೋ ಸಿ [illegible]—ಭಾಷಣ. ೮ ೧೫ [illegible] ದಿಂದ ೮ ೩೦ ಮತ್ತು ೯ ೩೦ ಸಂಗೀತೋತ್ಸವ ೯-೧೫ ವಿಜ್ಞಾನ ವಿಮರ್ಶ

ವಾರ ಭವಿಷ್ಯ

ತಾ|| ೩೦ ೧೨ ೫೬ ರಿಂದ ೬-೧ ೫೭ರ ವರೆಗೆ

ಮೇಷ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ಸಮಸ್ಯೆ. ಶತ್ರುರಿಂದ ವಂಚನೆ

ವೃಷಭ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಗತಿ ಕಮ್ಮಿ ನೂತನ ಸಂಬಂಧಗಳು

ಮಿಥುನ —ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಕ್ಷೇತ್ರದಲ್ಲಿ ಸಮಸ್ಯೆಗಳು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ ಮಿತ್ರರಿಂದ ದ್ರೋಹ ಸಂಭವ

ಕರ್ಕ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ಶುಭ ಕಾರ್ಯಗಳು ಜರುಗುವುವು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಸಿಂಹ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ಉದ್ಯೋಗದಲ್ಲಿ ನಿರುತ್ಸಾಹ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ.

ಕನ್ಯಾ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಶತ್ರುಗಳಿಂದ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ನಿರಾಶೆ ಉದ್ಯೋಗದಲ್ಲಿ ನಿರುತ್ಸಾಹ. ಕುಟುಂಬದಲ್ಲಿ ಅಶಾಂತಿ

ತುಲಾ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಕೈಗೊಂಡ ಕಾರ್ಯಗಳಲ್ಲಿ ಜಯ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ.

ವೃಶ್ಚಿಕ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಆಪ್ತರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ನಿರುತ್ಸಾಹ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಧನು —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರೋತ್ಸಾಹ ಹೊಸ ಉದ್ಯಮಗಳನ್ನು ಆರಂಭಿಸಲು ಸುಸಮಯ ಶುಭ ಕಾರ್ಯಗಳು ಜರುಗುವುವು

ಮಕರ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ. ಮಂಗಳ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ.

ಕುಂಭ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರ ವ್ಯವಹಾರಗಳಲ್ಲಿ ಅಡ್ಡಿ ಉದ್ಯೋಗದಲ್ಲಿ ನಿರುತ್ಸಾಹ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ಮೀನ —ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ನೌಕರಿಯಲ್ಲಿ ಪ್ರಶಂಸೆ ವಿದ್ವಜ್ಜನರ ಭೇಟಿ

ದಕ್ಷಿಣ ಕೊರಿಯದಲ್ಲಿ ಬಸ್ಸು ಉರಿದು ೩೩ ಜನರ ಮರಣ

ದಕ್ಷಿಣ ಕೊರಿಯದ ಪ್ರಸಾನ್ ಬಳಿ ಮೊನ್ನೆ ರಾತ್ರಿ ಪ್ರಯಾಣಿಕರಬಸ್ಸೊಂದರ ಪೆಟ್ರೋಲ್ ಟ್ಯಾಂಕು ಸಿಡಿದು ಜ್ವಾಲೆಯು ಆವರಿಸಿ ೩೩ ಮಂದಿ ಸುಟ್ಟುಹೋಗಿ, ೨೭ ಜನರಿಗೆ ತೀವ್ರ ಗಾಯವಾಗಿದೆ

ಲೋಕಸಭೆಯಲ್ಲಿ ಮೈಸೂರು ಸಂಸ್ಥಾನಕ್ಕೆ ೨೬ ಸ್ಥಾನಗಳು

ಬರುವ ಚುನಾವಣೆಗಳ ಸಮಯದಲ್ಲಿ ಲೋಕಸಭೆಯಲ್ಲಿ ಒಟ್ಟು ೫೦೦ ಸ್ಥಾನಗಳಿಗೂ, ಪ್ರಾಂತ ಶಾಸನ ಸಭೆಗಳಲ್ಲಿ ಒಟ್ಟು ೩,೧೦೨ ಸ್ಥಾನಗಳಿಗೂ ಆಯ್ಕೆ ನಡೆಯಲಿದೆ. ಲೋಕಸಭೆಯಲ್ಲಿ ಮೈಸೂರು ಸಂಸ್ಥಾನಕ್ಕೆ ಒಟ್ಟು ೨೬ ಸ್ಥಾನಗಳನ್ನು ಕೊಡಲಾಗಿದೆ.

ಕಳೆದ ತಿಂಗಳು ಟಿಬೆಟ್ಟಿನ ದಲೈ ಲಾಮಾರವರು ದೆಹಲಿಗೆ ಆಗಮಿಸಿದಾಗ ವಿಮಾನ ನಿಲ್ದಾಣದಲ್ಲಿ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್ ಮತ್ತು ಪ್ರಧಾನಿ ನೆಹರೂರವರು ಸ್ವಾಗತಿಸುತ್ತಿರುವುದು

ಆಯುರ್ವೇದ ಮತ್ತು ಅಲೋಪತಿಗಳ ಸಹಜೀವನ ಅಗತ್ಯ

ಭಾರತೀಯ ವೈದ್ಯರ ಸಮ್ಮೇಳನಕ್ಕೆ ಗವರ್ನರ್ ರಾಮಕೃಷ್ಣರಾಯರ ಕರೆ

ಕೇರಳದ ಗವರ್ನರ್ ಬಿ ರಾಮಕೃಷ್ಣರಾಯರು ಕಳೆದ ಬುಧವಾರ ಅಖಿಲ ಭಾರತ ವೈದ್ಯರ ಸಮ್ಮೇಳನದ ಆರಂಭೋತ್ಸವವನ್ನು ತಿರುವನಂತಪುರದಲ್ಲಿ ನೆರವೇರಿಸುತ್ತಾ, ನಿಪುಣರಾದ ವೈದ್ಯರುಗಳು ಆಯುರ್ವೇದೀಯ ಮತ್ತು ಯುನಾನಿ ಪದ್ಧತಿಗಳಲ್ಲಿ ಸಂಶೋಧನೆ ನಡೆಸಿದರೆ ತಮ್ಮ ಪದ್ಧತಿಗೆ ಸೇರಿಸಬಹುದಾದಂತಹ ಹಲವು ಉಪಯುಕ್ತ ವಿಷಯಗಳು ಅವುಗಳಲ್ಲಿ ಸಿಗಬಹುದೆಂದು ತಿಳಿಸಿದರು ಅದರಿಂದ ಮಾನವನ ತಿಳವಳಿಕೆಗೆ ಇನ್ನೂ ಹೆಚ್ಚಿನ ಜ್ಞಾನವನ್ನು ತಂದುಕೊಟ್ಟಂತಾಗುವುದೆಂದೂ ಹೇಳಿದರು.

ಸಹಸ್ರಾರು ವರ್ಷಗಳಿಂದಲೂ ನಡೆದುಕೊಂಡು ಬರುತ್ತಿರುವ ಸ್ಥಳೀಯ ವೈದ್ಯ ಪದ್ಧತಿಗಳು ವಿಜ್ಞಾನರಹಿತವೂ ಮತ್ತು ಅನರ್ಹವೂ ಅಲ್ಲವೆಂದೂ, ಅವನ್ನು ಆಧುನಿಕ ವಿಜ್ಞಾನದ ಸಹಾಯದಿಂದ ಪರೀಕ್ಷಿಸಿ ನಿರ್ವಿಕಾರ ದೃಷ್ಟಿಯಿಂದ ಅಭ್ಯಾಸ ಮಾಡಬೇಕೆಂದೂ ಅವರು ಹೇಳಿದರು ಆಧುನಿಕ ಮತ್ತು ಸ್ಥಳೀಯ ವೈದ್ಯ ಪದ್ಧತಿಗಳ ನಡುವೆ ಸಹಜೀವನವು ಅಗತ್ಯವೆಂದು ಅವರು ಸೂಚಿಸಿದರು

ಹೊಟೇಲುಗಳಲ್ಲಿ ಮಾರಾಟ ತೆರಿಗೆ ಇನ್ನೂ ಜಾರಿಯೇ?

ಹೊಟೇಲುಗಳಿಗೆ ಮಾರಾಟ ತೆರಿಗೆ ವಿಧಾಯಕ ಮಾಡುವುದನ್ನು ಹೈಕೋರ್ಟಿನವರು ರದ್ದುಪಡಿಸಿದ್ದಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿದೆ ಆ ತೀರ್ಪನ್ನು ಮಾನ್ಯ ಮಾಡುವುದು ಅಧಿಕಾರಿಗಳ ಕರ್ತವ್ಯವಾದರೂ, ಹೊಟೇಲುಗಳಿಗೆ ತೆರಿಗೆ ವಸೂಲಿ ಅಧಿಕಾರಿಗಳನ್ನು ಕಳುಹಲಾಗುತ್ತಿದೆ. ತೆರಿಗೆಯ ಕಂತಿನ ಹಣವನ್ನು ಮುಂಗಡವಾಗಿ ಕೊಡಬೇಕೆಂದೂ, ಇಲ್ಲದಿದ್ದಲ್ಲಿ ಕ್ರಮ ಜರುಗಿಸಲಾಗುವುದೆಂದೂ ಅಧಿಕಾರಿಗಳು ಬೆದರಿಸುತ್ತಿರುವರು ಇದರಿಂದ ಬಡ ಹೊಟೇಲು ಮಾಲೀಕರಿಗೆ ತುಂಬಾ ತೊಂದರೆಯಾಗಿದೆ ವರ್ಷಾಂತ್ಯದಲ್ಲಿ ಕೊಡತಕ್ಕ ಹಣವನ್ನು ಈಗಲೇ ಕೇಳಲಾಗುತ್ತಿದೆ ಹೈಕೋರ್ಟಿನವರ ಆಜ್ಞೆಯ ದೃಷ್ಟಿಯಿಂದ ತೆರಿಗೆ ವಸೂಲಾತಿ ಕ್ರಮಗಳನ್ನು ಬಿಡುವುದು ಸಂಬಂಧಪಟ್ಟವರ ಕರ್ತವ್ಯ—ಎಂಬುದಾಗಿ ಹೊಟೇಲು ಮಾಲೀಕರೊಬ್ಬರು ಪತ್ರ ಬರೆದು ತಿಳಿಸುತ್ತಾರೆ

ನ್ಯಾಯಾಂಗ ಇಲಾಖಾ ಅಸಿಸ್ಟೆಂಟ್ ಕಾರ್ಯದರ್ಶಿಗಳು

ಆಕ್ಟಿಂಗ್ ಮುನ್ಸೀಫರಾದ ಶ್ರೀ ಬಿ. ಹನುಮಂತಯ್ಯ ಮತ್ತು ಆಫಿಸಿಯೇಟಿಂಗ್ ಮುನ್ಸೀಫರಾದ ಶ್ರೀ ಬಿ ಕೆ. ಮರುಡಪ್ಪ ಮತ್ತು ಶ್ರೀ ಎಂ. ಎಲ್. ರಾಮಸ್ವಾಮಿಯವರನ್ನು ಸರ್ಕಾರದ ನ್ಯಾಯಾಂಗ ಇಲಾಖಾ ಅಸಿಸ್ಟೆಂಟ್ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ. ಶ್ರೀ ಆರ್ ಸಂಜೀವಲುರವರು ಇಲಾಖೆಯ ಡೆಪ್ಯುಟಿ ಸೆಕ್ರೆಟರಿಯಾಗಿ ನೇಮಕವಾಗಿರುವರು

Edited, Printed and Published by A. R Nagarajan at Sadhvi Press, D. Subbial Road, Mysore

ಮದ್ರಾಸು ವಿಶ್ವವಿದ್ಯಾಲಯದ ಶತಮಾನೋತ್ಸವ

ಬರುವ ತಿಂಗಳು ೨೮ ನೇ ತಾರೀಖು ಮದ್ರಾಸಿನ ವಿಶ್ವವಿದ್ಯಾಲಯದ ಶತಮಾನೋತ್ಸವವನ್ನು ಮೈಸೂರಿನ ಗವರ್ನರ್ ಶ್ರೀ ಜಯಚಾಮರಾಜ ಒಡೆಯರವರು ಆರಂಭಗೊಳಿಸುವರು ವಿಶ್ವವಿದ್ಯಾಲಯಗಳ ಗ್ರಾಂಟ್ ಸಮಿತಿ ಅಧ್ಯಕ್ಷ ಸಿ ಡಿ ದೇಶಮುಖ್‌ರವರು ಪ್ರದರ್ಶನವನ್ನು ತೆರೆಯುವರು.

ಶಿವಕಥಾ ಕಾಲಕ್ಷೇಪ

ಲಿಂಗೈಕ್ಯರಾದ ಸದಾಶಿವ ಶಿವಾಚಾರ್ಯಸ್ವಾಮಿಗಳ ೮ನೇ ಆರಾಧನೆ ಪ್ರಯುಕ್ತ ಅರಮನೆ ಜಪದಕಟ್ಟೆ ಮಠದಲ್ಲಿ ನೆನ್ನೆ ರಾತ್ರಿ ೭|| ಕಂಕೂರು ಸಿದ್ಧಪ್ಪಶಾಸ್ತ್ರಿಗಳಿಂದ ರಾಜಶೇಖರ ವಿಲಾಸವೆಂಬ ಶಿವಕಥೆಯನ್ನು ಏರ್ಪಡಿಸಲಾಗಿತ್ತು

೪ ಜನ ಇಸ್ರೇಲಿಗಳಿಗಾಗಿ ೫|| ಸಾವಿರ ಈಜಿಪ್ಟರ ಬಿಡುಗ

ಈಜಿಪ್ಟಿನವರು ಬಂಧಿಸಿರುವ ನಾಲ್ವರು ಇಸ್ರೇಲಿ ಬಂದಿಗಳನ್ನು ಬಿಡುಗಡೆ ಮಾಡಿದರೆ, ವೆ ೫,೫೦೦ ಮಂದಿ ಈಜಿಪ್ಟ್ ಸೆರೆಯಾಳುಗಳನ್ನು ಬಿಡುವುದಾಗಿ ಇಸ್ರೇಲ್ ಸರ್ಕಾರದವ ಳಿಸುತ್ತಾರೆ. ಇಸ್ರೇಲು ೫,೫೮೦ ಮಂದಿ ಪ್ಟರನ್ನು ಬಂಧಿಸಿದೆ

ಬರೋಡಾ ಮಹಾರಾಜರು ಕಾಂಗ್ರೆಸ್ ಉಮೇದುವಾರ

ಬರೋಡದ ಮಾಜಿ ಅರಸರಾದ ಫತೆ ಸಿ ಗಾಯಕವಾಡರು ಲೋಕ ಸಭೆಗೆ ಕಾಂಗ್ರೆ ಉಮೇದುವಾರರಾಗಿ ನಿಲ್ಲಲು ಅರಿಸಲ್ಪ ತ್ತಾರೆ.

ಸಿ. ಬಿ. ನೀಲಕಂಠಯ್ಯನವರ ನಿಧ

ನಗರದ ಮಾಜಿ ಪೊಲೀಸು ಸಬ್ ಇನ್ಸ ರ್ ಶ್ರೀ ಎಸ್. ಪ್ರೇಮಚಂದ್ರರವರ ತಂದೆ ಸಿ. ಬಿ. ನೀಲಕಂಠಯ್ಯನವರು ನೆನ್ನೆ ತಮ್ಮ ೮೦ನೇ ವಯಸ್ಸಿನಲ್ಲಿ ನಿಧನ ಹೊಂ ರೆಂದು ತಿಳಿಸಲು ವಿಷಾದಿಸುತ್ತೇವೆ. ಮೃ ಆತ್ಮಕ್ಕೆ ಶಾಂತಿಯನ್ನು ಕೋರಿ, ಬಂಧು ವರ್ಗದವರಿಗೆ ಹೃತ್ಪೂರ್ವಕವಾದ ಅನುಕಂಪವನ್ನು ಸೂಚಿಸುತ್ತೇವೆ



City Municipal Council, Mysore

26th December 1956

NOTIFICATION

Notice is hereby given to the inhabitants of the Munic pality of Mysore that the Municipal Council desire to ame the schedule of rates for levy of Toll at the several gat existing in this City as noted below.—

1) On every goods vehicle or a stage carriage as defined in the Motor vehicle Act 1939(Central Act IV of 1939) other than those exempted from Municipal Toll under the Mysore Motor Vehicle Taxation and Tolls Act 1951. 2 0
2) On every Motor car as defined in the Motor Vehicles Act 1939 (Central Act IV of 1939) other than those exempted from Municipal Toll under the Mysore Motor Vehicles Taxation and Tolls Act 1951 1 0
3) Trailers attached to goods vehicle 1 0
4) On every 4 wheeled carriage 0 8
5) On every 2 wheeled carriage on springs other than Jutka 0 4
6) On every Jatka laden 0 2
7) On every Jutka unladen 0 1
8) On every other vehicle with spring including a tricycle or bicycle 0 2
9) On every cart or other vehicle not on springs drawn by 2 buffaloes, bullocks, horses, ponies, asses or mule if laden 0 4
10) do if not laden 0 2
11) On every cart or other vehicle not on spring drawn by a single bullock, buffaloe, horse, pony, ass or mule-if laden 0 1
12) do if not laden 0 1

Any inhabitant of the Municipality objecting to proposed amendment may within one month from the d of this notice send his objections in writing to the Munic Council.

A. VISWANATH
Municipal Commiss

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪ್ರತಿಗೆ ಮೂರು ಕಾಸು

ಸಂಪುಟ : ೧೫] SADHVI : MONDAY 31-12-1956 ಮೈಸೂರು : ಸೋಮವಾರ ೩೧-೧೨-೧೯೫೬ [ಸಂಚಿಕೆ : [illegible]

ಕಾಶ್ಮೀರದ ಬಗ್ಗೆ ಚೌ ಎನ್ ಲೈ ಸಲಹೆಗೆ ಪಾಕಿಸ್ತಾನ್ ತಿರಸ್ಕಾರ

ಜನಲಿ ವರ್ತಕರ ಸಂಘದ ವಾರ್ಷಿಕೋತ್ಸವ

ಮೈಸೂರು ೩೧

ನಗರದ ಜನಲಿ ವರ್ತಕರ ಸಂಘದ ೧೩ನೇ ವಾರ್ಷಿಕೋತ್ಸವವು ನೆನ್ನೆ ಬೆಳಗ್ಗೆ ವಸ್ತು ಪ್ರದರ್ಶನಾಲಯದಲ್ಲಿ ನಡೆಯಿತು. ಸಂಸ್ಥಾನದ ಪಾನ್ಸ್ ಸಂಘದ ಅಧ್ಯಕ್ಷರಾದ ಶ್ರೀ ಡಿ ಎಂ ಜೋಯಿಸರು ಅಗ್ರಾಸನವನ್ನು ವಹಿಸಿದ್ದರು.

ಸಂಘದ ಅಧ್ಯಕ್ಷರಾದ ಶ್ರೀ ಆರ್. ಎಸ್. ನಷ್ಪಶೆಟ್ಟರು ಸ್ವಾಗತ ಭಾಷಣ ಮಾಡಿದನಂತರ, ಕಾರ್ಯದರ್ಶಿಗಳಾದ ಶ್ರೀ ಎ ಎಸ್. ಸುಂದರ ನಾರಾಯಣಶೆಟ್ಟರು ವರದಿಯನ್ನು ಒಪ್ಪಿಸಿ ಸಂಘವು ದಿನೇದಿನೇ ಹೊಂದುತ್ತಿರುವ ಪ್ರಗತಿಯನ್ನು ನಿರೂಪಿಸಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಮಾಜವಾದ ಮಾದರಿಯ ಧ್ಯೇಯವನ್ನು ಹೊಂದಿರುವ ಈಗಿನ ಪ್ರಚಲಿತ ಪದ್ಧತಿಯಿಂದ ಖಾಸಗೀ ಉದ್ಯಮ ವಿಶೇಷ ಧಕ್ಕೆಯುಂಟಾಗುತ್ತಿರುವುದೆಂದು ಹೇಳಿ, ಇದನ್ನು ಯಶಸ್ವಿಯಾಗಿ ಎದುರಿಸಬೇಕಾದರೆ ಬರುವ ಚುನಾವಣೆಗಳಲ್ಲಿ ವರ್ತಕರೆಲ್ಲ ಒಂದುಗೂಡಿ ತಮ್ಮ ಸಂಘವನ್ನು ರಚಿಸಬೇಕೆಂದು ಸೂಚಿಸಿದರು. ಇದಕ್ಕಾಗಿ ಬರುವ ತಿಂಗಳಲ್ಲಿ ಬೆಂಗಳೂರಿನಲ್ಲಿ ಒಂದು ಸಭೆಯನ್ನು ಕರೆಯುವುದಾಗಿಯೂ, ಅದರಲ್ಲಿ ವರ್ತಕರೆಲ್ಲರೂ ಭಾಗವಹಿಸಬೇಕೆಂದೂ ಅವರು ಕೋರಿದರು. ಕೇಂದ್ರವಾಗಿರುವ ಮೈಸೂರು ನಗರದಲ್ಲಿ ವ್ಯಾಪಾರ ವ್ಯವಹಾರವು ಕ್ಷೀಣಿಸುತ್ತಿರುವುದರಿಂದ ಅದನ್ನು ಅಭಿವೃದ್ಧಿಪಡಿಸಿ, ಇಲ್ಲಿಂದ ಮಂಗಳೂರು ಮುಂತಾದ ಕಡೆಗೆ ಸಾಗಾಣಿಕಾ ಅನುಕೂಲಗಳನ್ನು ಕಲ್ಪಿಸಿ ಈ ಕೊರತೆಯನ್ನು ಸರ್ಕಾರದವರು ನಿವಾರಿಸಬೇಕೆಂದು ಸೂಚಿಸಿದರು

ಉಪಾಧ್ಯಕ್ಷರಾದ ಶ್ರೀ ರಾಜಾರಾಮರಾಯರು ವರ್ತಕರೆಲ್ಲರೂ ಏಕಮನಸ್ಸಿನಿಂದ ನಡೆಯಬೇಕೆಂದು ಮನವಿ ಮಾಡಿದನಂತರ ವಂದನಾರ್ಪಣೆಯೊಡನೆ ಸಭೆಯು ಮುಗಿಯಿತು.

ಹ ರಿ ಕ ಥೆ

ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಾಲಯದಲ್ಲಿ ಅಮಾವಾಸ್ಯೆ ಪ್ರಯುಕ್ತ ಈ ದಿನ ೭ ಗಂಟೆಗೆ ಕುಮಾರಿ ಯಶೋದಮ್ಮನವರಿಂದ ಭಕ್ತ ಕಬೀರ್ ಎಂಬ ಹರಿಕಥೆಯು ಜರುಗುವುದು

ಒಂದೇ ಪ್ರಸವದಲ್ಲಿ ಐದು ಶಿಶುಗಳ ಜನನ

ಮಾತೃರಿಯ ಪೆಂಗಿ ಆಸ್ಪತ್ರೆಯಲ್ಲಿ ಮೊನ್ನೆ ಸಲಿಕಾಳಯದ ಆರ್ ಕಮಲಮ್ಮಾಳ್ ಎಂಬ ೩೫ ವರ್ಷದ ಮಹಿಳೆಯು ಒಂದೇ ಪ್ರಸವದಲ್ಲಿ ಐದು ಹೆಣ್ಣು ಮಕ್ಕಳನ್ನು ಹಡೆದಿರುತ್ತಾಳೆ. ತಾಯಿ ಮತ್ತು ಮಕ್ಕಳು ಆರೋಗ್ಯವಾಗಿರುವರು. ಇದು ಆಕೆಯ ಐದನೇ ಬಾಣಂತನ. ಐದು ಮಕ್ಕಳನ್ನೂ ಸರ್ಕಾರಿ ವೆಚ್ಚದಲ್ಲಿ ಪಾಲನೆಯಲ್ಲಿರಿಸಲಾಗಿದೆ. ಅಲ್ಲಿನ ಮೇಯರ್ ಡಾ ಎಂ ಖಾಸಿಮ್‌ರವರು ತಾಯಿಗೆ ೫೦೦ ರೂ ಬಹುಮಾನವನ್ನಿತ್ತಿರುವರು.

ಭಾರತ ಸೇವಾದಳದ ವಾರ್ಷಿಕೋತ್ಸವ

ಮೈಸೂರು ೩೧

ಭಾರತ ಸೇವಾದಳದ ೩೧ನೇ ವಾರ್ಷಿಕೋತ್ಸವ ಸಮಾರಂಭವನ್ನು ನಗರದ ಶಾಖೆಯವರು ನೆನ್ನೆ ಸದ್ವಿದ್ಯಾ ಪಾಠಶಾಲೆಯಲ್ಲಿ ಆಚರಿಸಿದರು. ವಿದ್ಯಾ ಇಲಾಖೆಯ ಡೆಪ್ಯುಟಿ ಡೈರೆಕ್ಟರ್ ಶ್ರೀ ವಾಸುದೇವಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಪ್ರಾರ್ಥನೆಯಾದಮೇಲೆ ಶ್ರೀ ಎಂ ಎನ್ ರಾಮಚಂದ್ರ ಜೋಯಿಸರಿಂದ ಸ್ವಾಗತಭಾಷಣವಾದನಂತರ ಸ್ವಯಂಸೇವಕ ಸೇವಿಕೆಯರಿಂದ ಲೆಜಿಂ ವ್ಯಾಯಾಮ, ಡಂಬೆಲ್ಸ್ ಮುಂತಾದ ಪ್ರದರ್ಶನಗಳು ಜರುಗಿದುವು. ಸ್ವಯಂಸೇವಕರ ನಾಯಕರಾದ ಶ್ರೀ ಗಂಗಾಧರರಾಯರು ವರದಿಯನ್ನು ಒಪ್ಪಿಸಿದನಂತರ ಅಧ್ಯಕ್ಷರು ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನೂ, ಪ್ರಶಸ್ತಿ ಪತ್ರಗಳನ್ನೂ ವಿನಿಯೋಗಿಸಿದರು

ಉತ್ತರ ಕರ್ನಾಟಕದಿಂದ ಬಂದಿದ್ದ ಶ್ರೀಮತಿ ರಾಮಾ ವೆಂಕಣ್ಣ ನಾಯಕರು ಕರನಿರಾಕರಣ ಚಳುವಳಿಯಲ್ಲಿ ಸೇವಾದಳದ ಪಾತ್ರ ಎಂಬ ವಿಚಾರವಾಗಿ ಭಾಷಣ ಮಾಡಿದರು. ಶ್ರೀ ಅಗರಂ ರಂಗಯ್ಯನವರು ಸೇವಾದಳದ ಇತಿಹಾಸವನ್ನೂ, ಸ್ವಾತಂತ್ರ್ಯ ಸಾಧನೆಯಲ್ಲಿ ಅದರ ಪಾತ್ರವನ್ನೂ ನಿರೂಪಿಸಿ ರಾಷ್ಟ್ರೀಯ ಪುನರ್ರಚನಾ ಕಾರ್ಯಗಳಲ್ಲಿ ಇನ್ನುಮುಂದೆ ಅದು ವಹಿಸಬೇಕಾದ ಕರ್ತವ್ಯವನ್ನು ತಿಳಿಸಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸೇವಾದಳದ ಕಾರ್ಯ ಚಟುವಟಿಕೆಗಳಿಗಾಗಿ ಅಭಿನಂದನೆಯನ್ನು ಸಲ್ಲಿಸಿ ಸ್ವಾತಂತ್ರ್ಯ ಸಾಧನೆಯನಂತರ ಸೇವಾದಳದ ಕಾರ್ಯಕಲಾಪಗಳು ರಚನಾತ್ಮಕ ಮಾರ್ಗದಲ್ಲಿ ಮುಂದುವರಿಯುತ್ತಿರುವುದೆಂದು ಹೇಳಿ, ಸ್ವಯಂಸೇವಕರ ಶಿಸ್ತು, ಸಂಘಟನೆಗಳಿಂದ ಉಚ್ಚ ಶಿಕ್ಷಣವನ್ನು ಪಡೆದು ನಾಡಿನ ಸರ್ವತೋಮುಖವಾದ ಸೇವೆಗೆ ಸಿದ್ಧತೆಯನ್ನು ಹೊಂದಬೇಕೆಂದು ಸೂಚಿಸಿದರು.

ಇಂದಿನ ನೃತ್ಯದ ದೃಶ್ಯ ಪ್ರದರ್ಶನವಾದನಂತರ ಸೇವಾದಳದ ಅಧ್ಯಕ್ಷರಾದ ಶ್ರೀ ಹೆಚ್. ಸುಬ್ಬರಾಯರಿಂದ ವಂದನಾರ್ಪಣೆಯಾಗಿ, ರಾಷ್ಟ್ರಗೀತೆಯೊಡನೆ ಸಮಾರಂಭವು ಮುಗಿಯಿತು.

ನೆಹರೂ ಮತ್ತು ಚೌ ಎನ್ ಲೈ ಯವರ ಸಮಾಗಮ

ಚೀಣದ ಪ್ರಧಾನಿ ಚೌ ಎನ್ ಲೈಯವರು ನೆನ್ನೆ ಮಧ್ಯಾಹ್ನ ದೆಹಲಿಗೆ ಆಗಮಿಸಿ, ನೆಹರೂರವರೊಡನೆ ಪುನಃ ಮಾತುಕತೆಗಳನ್ನು ಆರಂಭಿಸಿದರು. ಉಭಯ ಪ್ರಧಾನಿಗಳೂ ತಮ್ಮಗಳ ಇತ್ತೀಚಿನ ಪ್ರವಾಸದಲ್ಲಿ ತಿಳಿಬಂದ ಅಂಶಗಳ ಮೇಲೆ ಉಂಟಾದ ಅಭಿಪ್ರಾಯಗಳ ವಿನಿಮಯ ಮಾಡಿಕೊಂಡರು. ಈ ಎರಡನೇ ಭೇಟಿಗೆ ಹೆಚ್ಚಿನ ಮಹತ್ವವನ್ನು ಕಲ್ಪಿಸಲಾಗಿದೆ. ಪಾಕಿಸ್ತಾನದ ಪ್ರಧಾನಿಯವರೊಡನೆ ತಾವು ನಡೆಸಿದ ಮಾತುಕತೆಗಳನ್ನು ಚೌರವರು ವಿವರಿಸಿದರು. ಉಭಯರೂ ಭಕ್ರಾ-ನಾಂಗಲ್ ಯೋಜನೆ ಸ್ಥಳಕ್ಕೆ ತೆರಳಿದರು. ಅಲ್ಲೇ ಮಾತುಕತೆಯನ್ನು ಮುಂದುವರಿಸುವರು

ಕಾಶ್ಮೀರದ ಬಗ್ಗೆ ಚೌ ಎನ್ ಲೈ ಕರೆಗೆ ಪಾಕಿಸ್ತಾನದ ನಿರಾಕರಣೆ

ಪರಸ್ಪರ ಒಪ್ಪಂದದ ಬದಲು

ವಿಶ್ವ ಸಂಸ್ಥೆಗೆ ಕೊಂಡೊಯ್ಯಲು ಸಿದ್ಧತೆ

ಏಷ್ಯಾ-ಆಫ್ರಿಕಾ ರಾಷ್ಟ್ರಗಳ ಒಗ್ಗಟ್ಟನ್ನು ಉಳಿಸುವ ಸಲುವಾಗಿ ಕಾಶ್ಮೀರದ ಪ್ರಶ್ನೆಯನ್ನು ಭಾರತ ಮತ್ತು ಪಾಕಿಸ್ತಾನಗಳು ಪರಸ್ಪರ ಇತ್ಯರ್ಥಗೊಳಿಸಬೇಕೆಂದು ಚೀಣದ ಪ್ರಧಾನಿ ಚೌ ಎನ್ ಲೈಯವರು ಪಾಕಿಸ್ತಾನಕ್ಕೆ ಮಾಡಿದ್ದ ಸಲಹೆಯನ್ನು ಅದು ನಿರಾಕರಿಸಿರುವುದೆಂದು ವರದಿಯಾಗಿದೆ. ವಿಶ್ವ ಸಂಸ್ಥೆಯ ಭದ್ರತಾ ಸಮಿತಿಗೆ ಈ ಪ್ರಶ್ನೆಯನ್ನು ಕೊಂಡೊಯ್ಯಲು ಅದು ಸಿದ್ಧತೆಗಳನ್ನು ಮಾಡಿಕೊಳ್ಳುತ್ತಿದೆ. ಕಾಶ್ಮೀರದ ವಿಚಾರವಾಗಿ ಪಾಕಿಸ್ತಾನದ ವಾದವನ್ನು ಚೌರವರು ಕೇಳಿ, ವಸಾಹತುಶಾಹಿಗಳಿಂದ ಏಷ್ಯಾ ರಾಷ್ಟ್ರಗಳ ನಡುವೆ ವ್ಯಾಜ್ಯಗಳು ಸೃಷ್ಟಿಸಲ್ಪಟ್ಟಿವೆಂದೂ, ಈ ಜಗಳಗಳನ್ನು ಸದಾ ಬೆಳೆಸುತ್ತಿರುವುದೇ ವಸಾಹತುಶಾಹಿ ರಾಷ್ಟ್ರಗಳ ಕೆಲಸವೆಂದೂ ಚೌರವರು ಅಭಿಪ್ರಾಯಪಟ್ಟಿರುತ್ತಾರೆ

ಆಲ್ಜೀರಿಯದಲ್ಲಿ ರಾಷ್ಟ್ರೀಯರಿಗೂ ಐರೋಪ್ಯರಿಗೂ ಘರ್ಷಣೆ

ಆಲ್ಜೀರಿಯದಲ್ಲಿ ಮೊನ್ನೆ ಬೊಫಾರಿಕ್ ನಗರದ ಮೇಯರ್ ಆಮಾದಿ ಫ್ರೋಜರ್ ಎಂಬ ೭೫ ವರ್ಷದವರ ಶವವನ್ನು ಅಂತ್ಯಕ್ರಿಯೆಗಾಗಿ ಮೆರವಣಿಗೆಯಲ್ಲಿ ತೆಗೆದುಕೊಂಡುಹೋಗುತ್ತಿದ್ದಾಗ ಐರೋಪ್ಯರಿಗೂ, ಆಲ್ಜೀರಿಯದವರಿಗೂ ಘರ್ಷಣೆಯಾಗಿ ೬ ಮಂದಿ ಮುಸ್ಲಿಮರು ಕೊಲ್ಲಲ್ಪಟ್ಟರು. ಮೇಯರರನ್ನು ಆಲ್ಜೀರಿಯದವನೊಬ್ಬನು ಗುಂಡಿನಿಂದ ಹೊಡೆದು ಕೊಂದುಹಾಕಿದ್ದನು.

ಬರುವ ಆಗಸ್ಟಿನಲ್ಲಿ ೧೮೫೭ರ ಕ್ರಾಂತಿಯ ಶತಮಾನೋತ್ಸವ

ಬರುವ ವರ್ಷ ಆಗಸ್ಟ್ ೧೫ ಮತ್ತು ೧೬ರಂದು ೧೮೫೭ರ ಕ್ರಾಂತಿಯ ಶತಮಾನೋತ್ಸವವನ್ನು ಆಚರಿಸಲು ನಿರ್ಧರಿಸಲಾಗಿದೆ. ಅದರ ಅಂಗವಾಗಿ ದೀಪೋತ್ಸವ, ಪ್ರಭಾತಫೇರಿ, ಧ್ವಜ ವಂದನೆ, ನೃತ್ಯ, ನಾಟಕ ಮತ್ತು ಸಂಗೀತಗಳು ನಡೆಯುವುವು. ಝಾನ್ಸಿ ಲಕ್ಷ್ಮೀಬಾಯಿಯವರು ಮೃತಪಟ್ಟ ಸ್ಥಳದಲ್ಲಿ ಸ್ಮಾರಕವೊಂದನ್ನು ನಿರ್ಮಿಸಲಾಗುವುದು. ೧೮೫೭ರಿಂದ ೧೯೪೭ರ ವರೆಗೆ ಭಾರತ ಸ್ವಾತಂತ್ರ್ಯದಲ್ಲಿ ಮೃತಪಟ್ಟವರ ಸ್ಮಾರಕವನ್ನು ಕ್ರಮೇಣ ನಿರ್ಮಿಸಲಾಗುವುದು

ಅಂಬರ್ ಚರಖದಲ್ಲಿ ೧೬,೬೦೦ ಮಂದಿಗೆ ಶಿಕ್ಷಣ

ದೇಶಾದ್ಯಂತ ಇರುವ ನಾನಾ ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಸಂಸ್ಥೆಯ ಕೇಂದ್ರಗಳಲ್ಲಿ ಇದುವರೆಗೆ ೧೬,೬೦೦ ಮಂದಿಗೆ ಅಂಬರ್ ಚರಖಾ ನೂಲುವುದನ್ನು ಕಲಿಸಲಾಗಿದೆ. ಅವರೆಲ್ಲರಿಗೂ ಚರಖಗಳನ್ನು ಕೊಡಲಾಗಿದೆ. ಪ್ರತಿಯೊಬ್ಬನೂ ದಿನಕ್ಕೆ ೬ ಲಡಿ ದಾರವನ್ನು ತೆಗೆಯಬೇಕು. ಈಗ ೨೪೮ ಪರಿಶ್ರಮಾಲಯಗಳಲ್ಲಿ ಶಿಕ್ಷಣ ಪಡೆದ ೪೦,೦೦೦ ಮಂದಿ ನೂಲುವವರಿದ್ದಾರೆ

ಸಂಸ್ಥಾನ ಶಾಸನಸಭೆಗಳ ಅಧಿವೇಶನದ ಪರಿಸಮಾಪ್ತಿ

ಸಂಸ್ಥಾನ ಎನ್. ಜಿ. ಓ. ಗಳ ಸಂಬಳದ ಬಗ್ಗೆ ಅಸ್ಪಷ್ಟ ಪರಿಸ್ಥಿತಿ

ಸ್ವಂ ಸು ಪ್ರೋ॥] ಬೆಂಗಳೂರು ೩೧

ಈ ದಿನ ಉಭಯ ಶಾಸನಸಭೆಗಳ ಅಧಿವೇಶನವೂ ಮುಕ್ತಾಯವಾಯಿತು. ವಿಧಾನ ಸಭೆಯಲ್ಲಿ ಶ್ರೀ ಪಿ ಆರ್. ರಾಮಯ್ಯನವರು ನಾನ್ ಗೆಜೆಟೆಡ್ ನೌಕರರ ಸಂಬಳವನ್ನು ಹೆಚ್ಚಿಸಬೇಕೆಂದು ಸೂಚಿಸಿ ನಿರ್ಣಯವನ್ನು ಮಂಡಿಸಿದರು. [illegible] ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು, ಈ ವಿಚಾರವು ಇನ್ನೂ ಪರಿಶೀಲನೆಯಲ್ಲಿರುವುದೆಂದೂ, ಕೆಲವರಿಗೆ ಹೆಚ್ಚು, ಮತ್ತೆ ಕೆಲವರಿಗೆ ಮುಂಚಿನ ಮಟ್ಟ, ಬೇರೆಯವರಿಗೆ ಹಳೇ ಮೈಸೂರು ಸಂಬಳಗಳು ಇರಬಹುದೆಂದೂ ಅವರು ಸೂಚಿಸುತ್ತಿದ್ದರು.

ಶ್ರೀ ಎ.ಎಸ್. ಕಂಬಳಿಯವರು ಬೊಂಬಾಯಿ ಗೇಣಿ ಶಾಸನವನ್ನು ಕರ್ನಾಟಕದ ನಾಲ್ಕು ಜಿಲ್ಲೆಗಳಲ್ಲಿ ತರಬಾರದೆಂದು ಸೂಚಿಸಿದರು. ನಿರ್ಣಯವನ್ನು ಸಭೆಯ ಮುಂದಿನ ಅಧಿವೇಶನದಲ್ಲಿ ತೆಗೆದುಕೊಳ್ಳಲಾಗುವುದು

ಉಭಯ ಸಭೆಗಳೂ ಅಂತರ ಸಂಸ್ಥಾನ ಲೆಜಿಸ್ಲೇಚರ್ ಸಂಘದ ಸದಸ್ಯರಾಗಲು ಒಪ್ಪಿ ನಿರ್ಣಯವನ್ನು ಅಂಗೀಕರಿಸಿದುವು.

ರಾಜಾಜಿ ತಮಿಳು ಭಾರತದ ಪ್ರಕಟಣೋತ್ಸವ

ರಾಜಾಜಿಯವರು ತಮಿಳಿನಲ್ಲಿ ರಚಿಸಿರುವ ಮಹಾಭಾರತ ಗ್ರಂಥದ ಪ್ರಕಟಣೋತ್ಸವವನ್ನು ಮೈಸೂರಿನ ಗವರ್ನರ್ ಶ್ರೀ ಜಯಚಾಮರಾಜ ಒಡೆಯರು ನೆನ್ನೆ ಮದ್ರಾಸಿನಲ್ಲಿ ನೆರವೇರಿಸಿದರು. ಗವರ್ನರರು ಭಾಷಣ ಮಾಡಿ ರಾಜಾಜಿಯವರು ಸತ್ಯದ ಪರವಾಗಿ ಏಕಾಂಗಿಯಾಗಿಯೂ ನಿಲ್ಲಬಲ್ಲ ಅಪೂರ್ವ ವ್ಯಕ್ತಿಗಳಲ್ಲೊಬ್ಬರೆಂದು ಹೇಳಿ, ಪುರಾತನವಾದ ಭಾರತೀಯ ಗ್ರಂಥಗಳು, ತತ್ವಶಾಸ್ತ್ರ ಮತ್ತು ಕಾವ್ಯಗಳ ಅಧ್ಯಯನದಿಂದ ಅವರು ಈ ಅಮೂಲ್ಯ ಶಕ್ತಿಯನ್ನು ಪಡೆದಿರುವುದಾಗಿ ಹೇಳಿದರು. ರಾಜಾಜಿಯವರು ತಮ್ಮ ಗ್ರಂಥಕ್ಕೆ ವ್ಯಾಸರ್ ವಿರುಂದು (ವ್ಯಾಸರ ಔತಣ) ಎಂಬುದಾಗಿ ಕರೆದಿದ್ದಾರೆ. ಪ್ರಕಟವಾದ ಒಂದು ಗಂಟೆಯಲ್ಲಿ ಸಾವಿರ ಪ್ರತಿಗಳು ಮಾರಾಟವಾದುವು

ಕಾಂಗ್ರೆಸ್ಸಿಗೆ ಸುಚೇತಾ ಕೃಪಲಾನಿ

ಪ್ರಜಾ ಸಮಾಜವಾದಿ ಪಕ್ಷದ ಸದಸ್ಯೆ ಸುಚೇತಾ ಕೃಪಲಾನಿಯವರು ಕಾಂಗ್ರೆಸ್ ಪಕ್ಷಕ್ಕೆ ಸೇರಿರುತ್ತಾರೆ. ಅವರು ಕಾಂಗ್ರೆಸ್ ಪರವಾಗಿ ದೆಹಲಿಯಿಂದ ಲೋಕ ಸಭೆಗೆ ಸ್ಪರ್ಧಿಸಲಿರುವರು. ಶ್ರೀಮತಿಯವರು ಪ್ರಜಾ ಸಮಾಜವಾದಿ ಪಕ್ಷಕ್ಕೆ ಇತ್ತೀಚೆಗೆ ರಾಜೀನಾಮೆಯಿತ್ತಿದ್ದರು.

○ಬೆಂಗಳೂರು ಉದ್ಯೋಗ ವಿನಿಮಯ ಕೇಂದ್ರದ ಅಸಿಸ್ಟೆಂಟ್ ರಿಕ್ರೂಟಿಂಗ್ ಅಧಿಕಾರಿಗಳು ಬರುವ ೩ ನೇ ತಾರೀಖಿನಿಂದ ೭ನೇ ತಾರೀಖಿನವರೆಗೆ ಹಾಸನದಲ್ಲಿ ಉದ್ಯೋಗಗಳನ್ನು ಹುಡುಕುತ್ತಿರುವವರ ಅರ್ಜಿಗಳನ್ನು ಸ್ವೀಕರಿಸುವರು.

ಗ್ರಾಮಾಧಿಕಾರಿಗಳ ಆನುವಂಶಿಕ ಹಕ್ಕಿನ ರದ್ದಿನ ಪ್ರಶ್ನೆ

ವಿಧಾನ ಪರಿಷತ್ತಿನಲ್ಲಿ ಸಚಿವರ ಹೇಳಿಕೆ

ಬೆಂಗಳೂರು ೨೯

ಗ್ರಾಮಾಧಿಕಾರಿಗಳ ವಂಶಪಾರಂಪರ್ಯದ ಹಕ್ಕನ್ನು ರದ್ದುಗೊಳಿಸಬೇಕೆಂದು ಸೂಚಿಸುವ ನಿರ್ಣಯವನ್ನು ವಿಧಾನ ಪರಿಷತ್ತಿನಲ್ಲಿ ನೆನ್ನೆ ಶ್ರೀ ಕೆ ರಂಗಪ್ಪನವರು ತಂದು ರೆವಿನ್ಯೂ ಸಚಿವ ಶ್ರೀ ಮಲ್ಲನಗೌಡ ಪಾಟೀಲರ ಕೋರಿಕೆ ಮೇಲೆ ವಾಪಸು ಪಡೆದರು ರಾಜಾಧಿರಾಜರುಗಳ ಆನುವಂಶಿಕ ಹಕ್ಕು ಹೋಗಿರುವಾಗ ಇವುಗಳೂ ಹೋಗಬೇಕೆಂದು ಅವರು ತಿಳಿಸಿದರು ಶ್ರೀಗಳಾದ ಬಿ ಕೆ ಪುಟ್ಟರಾಮಯ್ಯ, ವೈ ಧರ್ಮಪ್ಪ, ಎಂ ಪಿ ಎಲ್. ಶಾಸ್ತ್ರಿ ಮತ್ತು ಜಿ ಹೆಚ್ ವೀರಣ್ಣನವರು ವಿರೋಧಿಸಿದರು

ಶ್ರೀ ಪಿ. ಸೀತಾರಾಮಯ್ಯನವರು ತಿದ್ದುಪಡಿ ಸೂಚಿಸಿ ಅವರುಗಳಿಗೆ ಪೂರ್ತಿ ಪರಿಹಾರವನ್ನು ಕೊಡಬೇಕೆಂದು ತಿಳಿಸಿದರು ಶ್ರೀ ಎಂ ಪಿ ಎಲ್. ಶಾಸ್ತ್ರಿಯವರು ಮಾತನಾಡಿ, ಪಾಶ್ಚಾತ್ಯರ ಅಂಧಾನುಕರಣೆಯು ಸರಿಯಲ್ಲವೆಂದು ಹೇಳಿದರು ಶ್ರೀ ವೈ ಧರ್ಮಪ್ಪನವರು ಮಾತನಾಡಿ, ಗ್ರಾಮಾಧಿಕಾರಿಗಳ ಹಕ್ಕನ್ನು ರದ್ದುಪಡಿಸುವುದು ಕೃತಘ್ನತನವಾಗುವುದೆಂದು ತಿಳಿಸಿದರು. ಗ್ರಾಮಾಧಿಕಾರಿಗಳ ಗ್ರೇಡನ್ನು ಹೆಚ್ಚಿಸಬೇಕೆಂದು ಶ್ರೀ ಕೆಂಪಹೊನ್ನಯ್ಯನವರು ಸಲಹೆ ಮಾಡಿದರು

ರೆವಿನ್ಯೂ ಸಚಿವರು ಉತ್ತರವಿತ್ತು, ನಿರ್ಣಯದ ತತ್ವವನ್ನು ಸರ್ಕಾರದವರು ಒಪ್ಪಿರುವರೆಂದೂ, ಆದರೆ ಈ ಬಗ್ಗೆ ಹಣಕಾಸಿನ ವೆಚ್ಚವೇನೆಂಬುದನ್ನು ಪರಿಶೀಲಿಸಬೇಕಾಗಿದೆಯೆಂದೂ, ಹೊಸ ಮೈಸೂರಿನಲ್ಲಿ ಒಂದೇ ರೀತಿಯ ಪದ್ಧತಿ ತರಲು ಕಾಲ ಹಿಡಿಯುವುದೆಂದೂ ತಿಳಿಸಿದರು

ಪಾಂಡವಪುರ ಪುರಸಭಾಧ್ಯಕ್ಷರ ಮೇಲೆ ಅಲ್ಲಿನ ಕೆಲವು ಸದಸ್ಯರು ಕೊಟ್ಟಿರುವ ದೂರನ್ನು ಲಂಚ ನಿರೋಧ ಇಲಾಖೆಗೆ ಒಪ್ಪಿಸಲಾಗಿರುವುದೆಂದು ಸಚಿವ ಶ್ರೀ ಆರ್ ಚನ್ನಿಗರಾಮಯ್ಯನವರು ತಿಳಿಸಿ, ಸಬ್ ಡಿವಿಜನ್ ಅಧಿಕಾರಿಗಳೂ ಈ ವಿಚಾರವನ್ನು ಪರಿಶೀಲಿಸಿರುವರೆಂದೂ, ಅವರ ವರದಿಯನ್ನು ನಿರೀಕ್ಷಿಸಲಾಗಿರುವುದೆಂದೂ ಹೇಳಿದರು

ಸಂಸ್ಥಾನ ಸರ್ಕಾರದ ಸಾಲ ೪೬ ಕೋಟಿ ರೂ.

೧೯೫೬ರ ಬಡ್ಜೆಟ್ ವರದಿಯ ಪ್ರಕಾರ ಮೈಸೂರು ಸರ್ಕಾರದ ಸಾಲವು ೫೬ ೫೭ ರಲ್ಲಿ ೪೬ ಕೋಟಿ ರೂ ಇರುವುದೆಂದೂ, ಹಿಂದಿನಂತಲೂ ೭-೬೨ ಕೋಟಿ ರೂ ಸಾಲವು ಹೆಚ್ಚುವುದೆಂದೂ ಗೊತ್ತಾಗಿದೆ ಹೊಸ ಸಾಲದಲ್ಲಿ ಕೇಂದ್ರದವರೇ ೮-೫೫ ಕೋಟಿ ರೂ. ಕೊಟ್ಟಿರುತ್ತಾರೆ

ಕೊರಿಯದ ಐಕ್ಯಕ್ಕಾಗಿ ಮಿಲಿಟರಿ ಕ್ರಮವೇ?

ಕೊರಿಯವನ್ನು ಐಕ್ಯಗೊಳಿಸುವ ಬಗ್ಗೆ ತಮ್ಮ ಸರ್ಕಾರದವರು ಏಕೈಕರಾಗಿ ಮಿಲಿಟರಿ ಕಾರ್ಯಾಚರಣೆ ನಡೆಸುವ ಕಾಲವು ಬೇಗನೆ ಸನ್ನಿಹಿತವಾಗುತ್ತಿರುವುದೆಂದು ದಕ್ಷಿಣ ಕೊರಿಯಾ ಅಧ್ಯಕ್ಷ ರೀಯವರು ಹೊಸ ವರ್ಷದ ಸಂದೇಶದಲ್ಲಿ ತಿಳಿಸಿರುತ್ತಾರೆ

ನಂಜುಮಳಿಗೆ ಬಳಿ ತರಕಾರಿ ಮಾರ್ಕೆಟ್ ಬಗ್ಗೆ ಆಕ್ಷೇಪಣೆ

ಚಾಮುಂಡಿಪುರದ ನಂಜುಮಳಿಗೆ ಬಳಿ ತರಕಾರಿ ಮಾರ್ಕೆಟ್ಟು ಇರುವುದಷ್ಟೆ. ಅಲ್ಲಿ ಸರಿಯಾದ ವ್ಯವಸ್ಥೆಯಿಲ್ಲದೆ, ಜನರು ಕೊಳಕು ಮತ್ತು ಗಲೀಜು ಮಾಡುತ್ತಿರುವರು ಇದರಿಂದ ಅಕ್ಕಪಕ್ಕದ ಶಿಶು ವಿಹಾರ ಮತ್ತು ವಿದ್ಯಾರ್ಥಿ ನಿಲಯಗಳಲ್ಲಿರುವವರಿಗೆ ತೊಂದರೆಯಾಗುತ್ತಿದೆ. ಈ ವಿಚಾರವನ್ನು ಪುರಸಭೆಯವರ ಗಮನಕ್ಕೆ ತರಲಾಗಿದೆ. ಈಗಲಾದರೂ ಅವರು ಜನರಿಗಾಗುವ ತೊಂದರೆಯನ್ನು ತಪ್ಪಿಸುವುದು ಅಗತ್ಯ-ಎಂಬುದಾಗಿ ಹಲವು ವಿದ್ಯಾರ್ಥಿಗಳು ಕೋರಿ ಪತ್ರ ಬರೆದಿರುತ್ತಾರೆ

Edited, Printed and Published by A. R. Nagarajan at Sadhvi Press, 3 Subbiah Road, Mysore

ಪ್ರಜಾಸತ್ತೆ ಮತ್ತು ಶಾಂತಿ ಮಾರ್ಗದಿಂದ ಸಮಾಜವಾದಿ ಸಮಾಜ

ಭವ್ಯ ಭಾರತದ ಅಭ್ಯುದಯಕ್ಕಾಗಿ ಕಾಂಗ್ರೆಸ್ ಚುನಾವಣಾ ಘೋಷಣೆ

ಭವ್ಯವಾದ ನವಭಾರತವನ್ನು ಸೃಷ್ಟಿಸುವ ಉದಾತ್ತ ಧ್ಯೇಯದಿಂದ ಪ್ರಜಾಸತ್ತೆ ಮತ್ತು ಶಾಂತಿ ಮಾರ್ಗಗಳ ಮೂಲಕ ದೇಶದಲ್ಲಿ ಪೂರ್ಣ ಸಮಾಜವಾದಿ ಸಮಾಜದ ಸ್ಥಾಪನೆಯೇ ತನ್ನ ಗುರಿಯೆಂದು ಕಾಂಗ್ರೆಸ್ಸು ಮಹಾ ಚುನಾವಣೆಗಳ ಪೂರ್ವದಲ್ಲಿ ಹೊರತಿಸಲಿರುವ ಚುನಾವಣಾ ಪ್ರಣಾಳಿಕೆಯ ಕರಡು ತಿಳಿಸುತ್ತದೆ ಸಂಸ್ಥೆಯು ಪ್ರಜಾಭ್ಯುದಯ ಮತ್ತು ವಿಶ್ವ ಶಾಂತಿಗಾಗಿ ಶ್ರಮಿಸುವ ದೃಢ ನಿಶ್ಚಯವನ್ನು ಸೂಚಿಸಿ, ಮಹಾ ಜನರು ಹಿಂದೆ ಕಾಂಗ್ರೆಸ್ಸಿಗೆ ಇತ್ತ ಅಸಾಧಾರಣ ಬೆಂಬಲವನ್ನು ಈಗಲೂ ಕೊಡುವುದೆಂದು ಆಶಿಸಿದೆ ನೆಹರೂರವರು ಅಮೆರಿಕಕ್ಕೆ ತೆರಳುವ ಮುಂಚೆ ಈ ಪ್ರಣಾಳಿಕೆಯನ್ನು ತಯಾರಿಸಿದ್ದರು

ಅಂತರ ರಾಷ್ಟ್ರೀಯ ಮತ್ತು ಒಳನಾಡಿನ ಸಮಸ್ಯೆಗಳಲ್ಲಿ ಭಾರತವು ಪ್ರಕಾಶಮಾನವಾಗುತ್ತಿರುವುದೆಂದೂ, ಅದರ ಸಾಧನೆಗಳು ಗಣನೀಯವಾದುವೆಂದೂ, "ನಮ್ಮಗಳ ಸ್ವಪ್ನದ ಭಾರತದ" ನಿರ್ಮಾಣಕ್ಕಾಗಿ ಈಗಗಾಲೇ ತಳಹದಿಯನ್ನು ಹಾಕಲಾಗಿದೆಯೆಂದೂ ಘೋಷಣೆಯು ತಿಳಿಸಿರುತ್ತದೆ. ಆರ್ಥಿಕ ಕ್ರಾಂತಿಯೂ, ಅಲ್ಲದೆ ಸಾಮಾಜಿಕ ಕ್ರಾಂತಿಯೂ ಸಫಲಗೊಳ್ಳುತ್ತಿವೆಯೆಂದೂ, ಈ ಎರಡೂ ಈಗ ಕ್ರಮಕ್ರಮವಾಗಿ ರೂಪುಗೊಳ್ಳುತ್ತಿರುವುವೆಂದೂ ಸೂಚಿಸಲಾಗಿದೆ ಆದರೆ ಕ್ರಾಂತಿಯು ಭಾರತದ ಮನೋಭಾವಕ್ಕೆ ತಕ್ಕಂತೆ ಶಾಂತಿಯುತವಾಗಿಯೂ, ಸಹಕಾರ ಭಾವನೆಯಿಂದಲೂ ಆಗುತ್ತಿರುವುದೆಂದೂ, ಈಗಾಗಲೇ ಆಗಿರುವ ಗಣನೀಯವಾದ ಪ್ರಗತಿಯಲ್ಲದೆ ಇನ್ನೂ ಬದಲಾವಣೆಗಳಾಗುವುವೆಂದೂ, ಕಡೆಯಲ್ಲಿ ಪೂರ್ಣ ಸಮಾಜವಾದಿ ಸಮಾಜವನ್ನು ಸ್ಥಾಪಿಸಿ ಸಕಲರಿಗೂ ಸ್ವಾತಂತ್ರ್ಯ, ಕಲ್ಯಾಣ ಮತ್ತು ಸಮಾನಾವಕಾಶವನ್ನು ಕಲ್ಪಿಸಲಾಗುವುದೆಂದೂ ಪ್ರಣಾಳಿಕೆಯು ಹೇಳಿದೆ

ಒಟ್ಟು ೨೫ ಪ್ಯಾರಾಗಳಿರುವ ಘೋಷಣೆಯಲ್ಲಿ ಯುದ್ಧವು ಆಗದಂತೆ ಮಾಡುವುದು ಮತ್ತು ರಾಷ್ಟ್ರಗಳ ನಡುವ ಸ್ನೇಹ ಸಂಬಂಧ ಬೆಳೆಸುವುದು ದೇಶದ ವಿದೇಶಾಂಗ ನೀತಿಯಾಗಿರಬೇಕೆಂದೂ, ಗೋವಾವು ಮುಂದೆಯೂ ವಸಾಹತು ಪ್ರದೇಶವಾಗಿರುವುದನ್ನು ಸಹಿಸಲು ಸಾಧ್ಯವಿಲ್ಲವೆಂದೂ, ಭಾರತ ಮತ್ತು ಪಾಕಿಸ್ತಾನಗಳ ನಡುವೆ ಸಮಸ್ಯೆಗಳನ್ನು ಶಾಂತಿಯುತವಾಗಿ ಇತ್ಯರ್ಥಪಡಿಸಬೇಕೆಂದೂ, ಕಾಶ್ಮೀರದಲ್ಲಿ ಪಾಕಿಸ್ತಾನವು ಆಕ್ರಮಣ ನಡೆಸಿದ್ದರೂ, ಭಾರತವು ಶಾಂತಿಯುತವಾಗಿ ನಡೆದುಕೊಳ್ಳಬೇಕೆಂದೂ ತಿಳಿಸಲಾಗಿದೆ ಪಂಚಶೀಲ ತತ್ವವನ್ನೂ ಸಹಾ ಪ್ರತಿಪಾದಿಸಲಾಗಿದೆ

"ಹಿತ ಶತ್ರು"

ಶ್ರೀ ಮಧುಕರರವರಿಂದ ವಿರಚಿಸಲ್ಪಟ್ಟು ಬೆಂಗಳೂರು ಚಾತಕ ಪ್ರಕಾಶನದವರು ಪ್ರಕಟಿಸಿರುವ ಹಿತ ಶತ್ರು ಎಂಬ ಪತ್ತೆದಾರಿ ಕಿರು ಕಾದಂಬರಿಯ ಪ್ರತಿಯೊಂದನ್ನು ಆದರದಿಂದ ಸ್ವೀಕರಿಸುತ್ತೇವೆ ಬೇರೆ ಒಂದು ವಾಣಿಜ್ಯ ಸಂಸ್ಥೆಯನ್ನು ಕಬಳಿಸಬೇಕೆಂಬ ಉದ್ದೇಶದಿಂದ ಅದರ ಮಾಲೀಕನ ಸ್ನೇಹ ಬೆಳೆಸಿ ಅವನನ್ನು ವಿದೇಶ ವ್ಯಾಸಂಗಕ್ಕೆ ಕಳುಹಿಸಿ ಅಲ್ಲಿ ಕೊಲೆ ಮಾಡಿಸಲು ಪ್ರಯತ್ನಿಸಿದ ಒಬ್ಬ ವರ್ತಕನನ್ನು ಚತುರನಾದ ಪತ್ತೇದಾರನು ಕಂಡುಹಿಡಿದುದನ್ನು ಲೇಖಕರು ಬಹಳ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ ಕ್ರೌನ್ ಹದಿನಾರನೇ ಒಂದು ಆಕಾರದ ೧೪೪ ಪುಟಗಳ ಈ ಪುಸ್ತಕದ ಬೆಲೆ ಎಂಟಾಣೆ

ವಿವಾಹ ಮಹೋತ್ಸವ

ತೀರ್ಥಹಳ್ಳಿ ತಾಲ್ಲೂಕು ಮೇಲೂರಿನಲ್ಲಿರುವ ಕಿಶೋರ್ ಸಿಲ್ಕ್ ಇಂಡಸ್ಟ್ರೀಸ್ ಕಂಪೆನಿಯ ಅಕೌಂಟೆಂಟರಾದ ಶ್ರೀ ಎಸ್. ಕೆ ಗುರುರಾಜಾಚಾರ್ಯರು ತಮ್ಮ ತಂಗಿ ಸೌ॥ ಜಯಲಕ್ಷ್ಮಿಯನ್ನು ಬೆಂಗಳೂರು ಹಿಂದೂಸ್ತಾನ್ ಮೆಷಿನ್ ಟೂಲ್ಸ್ ಕಂಪೆನಿ ನೌಕರರಾದ ಶ್ರೀ ಡಿ ಮಾಧವಮೂರ್ತಿಯವರಿಗೆ ಕೊಟ್ಟು ಕಳೆದ ೨೦ನೇ ತಾರೀಕು ವಿವಾಹ ಮಹೋತ್ಸವವನ್ನು ಮೇಲೂರಿನಲ್ಲಿ ನೆರವೇರಿಸಿದರು

ದೆಹಲಿಯಲ್ಲಿ ಕಾರ್ಮಿಕ ಸಚಿವ ಸಮ್ಮೇಳನ

ವೇತನ ಸಮಿತಿಗಳ ರಚನೆಗೆ ಒಪ್ಪಿಗೆ

ದೆಹಲಿಯಲ್ಲಿ ಕಳೆದ ವಾರ ಕಾರ್ಮಿಕ ಸಚಿವರುಗಳ ಸಮ್ಮೇಳನವು ನಡೆಯಿತು. ಕೇಂದ್ರ ಮಂತ್ರಿ ಖಂಡೂಭಾಯಿ ದೇಸಾಯಿರು ಆರಂಭ ಭಾಷಣ ಮಾಡಿದರು ರಾಷ್ಟ್ರೀಯ ಸ್ವಭಾವವುಳ್ಳ ಹಲವು ಮುಖ್ಯ ಕೈಗಾರಿಕೆಗಳಲ್ಲಿ ವೇತನ ಸಮಿತಿಗಳನ್ನು ಸ್ಥಾಪಿಸುವುದಕ್ಕೆ ಸಚಿವರುಗಳು ಒಪ್ಪಿದರು ನಾನಾ ಕಾರ್ಮಿಕ ಶಾಸನಗಳ ಅಂಗವಾಗಿ ನ್ಯಾಯ ಕಾರ್ಮಿಕ ಕೋರ್ಟುಗಳನ್ನು ಸ್ಥಾಪಿಸಲು ಸಮ್ಮೇಳನವು ಶಿಫಾರಸು ಮಾಡಿತು. ಕೆಲಸಗಾರರ ಪ್ರಾವಿಡೆಂಟ್ ನಿಧಿಯನ್ನು ಶೇಕಡ ೬॥ಯಿಂದ ೮॥ಗೆ ಹೆಚ್ಚಿಸಲು ಸಾಮಾನ್ಯವಾಗಿ ಒಪ್ಪಲಾಯಿತು ದ್ವಿತೀಯ ಯೋಜನೆಯಲ್ಲಿ ಗೊತ್ತುಪಡಿಸಿರುವಂತೆ ಕೈಗಾರಿಕೆಗಳ ಆಡಳಿತದಲ್ಲಿ ಕಾರ್ಮಿಕರು ಪಾಲು ವಹಿಸಬೇಕೆಂಬ ತತ್ವವನ್ನು ಸಮಿತಿಯು ಒಪ್ಪಿತು. ಈ ಬಗ್ಗೆ ಯೋಜನೆಯನ್ನು ಹಾಕಲು ಆಲೋಚಿಸಲಾಗಿದೆ ಮತ್ತು ಕಾರ್ಮಿಕ ಸಚಿವರುಗಳ ವಿಶೇಷ ಸಮ್ಮೇಳನವೂ ಸಹ ನಡೆಯಲಿದೆ

ಕೇಂದ್ರ ಮಂತ್ರಿಯವರು ತಮ್ಮ ಭಾಷಣದಲ್ಲಿ ರಾಷ್ಟ್ರೀಯ ವಿಮಾ ಯೋಜನೆ ಅಂಗವಾಗಿ ವಿಮೆ ಮಾಡಿರುವ ಕೆಲಸಗಾರರ ಸಂಸಾರದವರಿಗೆ ವೈದ್ಯಕೀಯ ಸೌಲಭ್ಯವನ್ನು ಕಲ್ಪಿಸಲು ಭಾರತ ಸರ್ಕಾರದವರು ನಿರ್ಧರಿಸಿರುವುದಾಗಿ ತಿಳಿಸಿರುವರು

ತಿರುವನಂತಪುರದಲ್ಲಿ ವೃದ್ಧ ಮಹಿಳೆಯ "ಕೋರ್ಟು ಸತ್ಯಾಗ್ರಹ"

ತಿರುವನಂತಪುರದಲ್ಲಿ ಹೈಕೋರ್ಟು ಶಾಖೆಯ ಸ್ಥಾಪನೆಗಾಗಿ ಲಕ್ಷ್ಮಿಕುಟ್ಟಿಪಿಳ್ಳೆ ಎಂಬ ೮೨ ವರ್ಷದ ವೃದ್ಧೆಯೊಬ್ಬರು ಕಳೆದ ಶುಕ್ರವಾರ ಸರ್ಕಾರಿ ಕಛೇರಿ ಮುಂದೆ ಸತ್ಯಾಗ್ರಹ ನಡೆಸಿದರು ಅವರೊಡನೆ ಇನ್ನಿಬ್ಬರು ಮಹಿಳೆಯರೂ ಇದ್ದರು ಅಲ್ಲಿನ ಮಾಜಿ ಮುಖ್ಯ ಮಂತ್ರಿ ಟಿ. ಕೆ. ನಾರಾಯಣಪಿಳ್ಳೆಯವರು ಕಳೆದ ೨೧ ಮತ್ತು ೨೨ರಂದು ಪ್ರತಿಬಂಧಕಾಜ್ಞೆ ಉಲ್ಲಂಘಿಸಿ ಮೆರವಣಿಗೆ ನಡೆಸಿದ್ದಕ್ಕಾಗಿ ಅವರು ಮತ್ತು ಇನ್ನೂ ಮೂವರ ಮೇಲೆ ಮೊಕದ್ದಮೆ ಹೂಡಲಾಗಿದೆ

೧೦ ರೂ.ಗಳಿಗೆ ೧ ಸೆಟ್ ಕೃತಕ ಹಲ್ಲು

ಬೊಂಬಾಯಿಯ ಸೇಂಟ್ ಜಾರ್ಜ್ ಆಸ್ಪತ್ರೆಯಲ್ಲಿ ತೆರೆಯಲಾಗಿರುವ ಚಿಕಿತ್ಸಾ ಕೇಂದ್ರದಲ್ಲಿ ಸಾಮಾನ್ಯ ಮನುಷ್ಯನೂ ಕೊಳ್ಳಬಲ್ಲಷ್ಟು ಸುಲಭ ಬೆಲೆಯಲ್ಲಿ ಕೃತಕ ಹಲ್ಲುಗಳು ಸಿಗುತ್ತವೆಂದು ಹೇಳಲಾಗಿದೆ ಒಂದು ಪೂರ್ತಿ ಸೆಟ್ಟು ಹಲ್ಲಿಗೆ ೧೦ ರೂ ಮಾತ್ರ ಆಗುವುದು. ಬೊಂಬಾಯಿ ಆರೋಗ್ಯ ಸಚಿವರು ಚಿಕಿತ್ಸಾ ಕೇಂದ್ರದ ಆರಂಭೋತ್ಸವವನ್ನು ಮೊನ್ನೆ ನೆರವೇರಿಸಿದರು

ಕುಂದಾ ವಿದ್ಯುದ್ಯೋಜನೆ ಬಗ್ಗೆ ಕೆನಡಾ-ಭಾರತ ಒಪ್ಪಂದ

ನೀಲಗಿರಿ ಬಳಿ ೩೬ ಕೋಟಿ ರೂ. ವೆಚ್ಚದಿಂದ ನಿರ್ಮಿಸಲಾಗುವ ಕುಂದಾ ವಿದ್ಯುದ್ಯೋಜನೆ ಬಗ್ಗೆ ಕೆನಡವು ೧೦ ಕೋಟಿ ರೂ ಬಂಡವಾಳವನ್ನು ಒದಗಿಸುವ ಬಗ್ಗೆ ಭಾರತ ಮತ್ತು ಕೆನಡಗಳಿಗೆ ಮೊನ್ನೆ ಒಪ್ಪಂದವಾಯಿತು. ಯೋಜನೆಯ ಆದಿಯಲ್ಲಿ ೧,೮೦,೦೦೦ ಕಿಲೊವಾಟ್ ಶಕ್ತಿಯನ್ನು ಉತ್ಪತ್ತಿ ಮಾಡುವುದು ನಂತರ ೩,೪೦,೦೦೦ ಕಿಲೊವಾಟ್ ವಿದ್ಯುಚ್ಛಕ್ತಿಯು ಬರುವುದು

ಭಾರತೀಯ ಕನ್ಯಾ ಮಹಾ ವಿದ್ಯಾಲಯದ ವಾರ್ಷಿಕೋ

ಮೈಸೂರು

ನಗರದ ಚಾಮರಾಜ ರಸ್ತೆಯಲ್ಲಿರುವ ರ ರಾಷ್ಟ್ರೀಯ ಸಂಸ್ಕೃತ ಸಂಶೋಧನಾಲಯ ಶ್ರೀಮಾನ್ ಜಿ ಆರ್. ಜೋಸ್ಯರ್‌ರವರು ನಡೆ ಯುವ ಭಾರತೀಯ [illegible] ವಿದ್ಯಾಲ ೩ನೇ ವಾರ್ಷಿಕೋತ್ಸವವು ಮೊನ್ನೆ ಸಂಜೆ ವೇರಿಸಲ್ಪಟ್ಟಿತು. ವಿದ್ಯಾ ಮಂತ್ರಿ ಶ್ರೀ ಕಡಿ ಮಂಜಪ್ಪನವರು ಅಗ್ರಾಸನವನ್ನು ವಹಿಸಿದ್ದ

ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದ ಕ, ವೇ॥ ಬ್ರ॥ ಶ್ರೀ ವೆಂಕಟಾಚಾರ್ಯರು ಸ್ಕೃತದಲ್ಲಿ ಸ್ವಾಗತ ಪದ್ಯ ಮಾಲಿಕೆಯನ್ನು ಸಿದರು ಶ್ರೀ ಜೋಸ್ಯರ್‌ರವರು ಸ್ವಾಗತ ಭಾ ಮಾಡಿ, ವಿದ್ಯಾಲಯವು ಬಾಲಕಿಯರ ಕ್ಕಾಗಿ ವಹಿಸುತ್ತಿರುವ ಆಸಕ್ತಿಯನ್ನು ವಿವ ದು ಶ್ರೀಮನ್ಮಹಾರಾಜರವರ ಅಧ್ಯಕ್ಷತೆ ಈ ಶಾಲೆಯ ಸಮಾರಂಭವು ಕೆಲವು ಹಿಂದೆ ನಡೆದಾಗ ಇದಕ್ಕೆ ಸರ್ಕಾರದವರಿಂದ ಕ್ತವಾದ ಸಹಾಯವು ಒದಗುವುದಾಗಿ ಕೊಟ್ಟ ಭರವಸೆಯು ಈಡೇರಿಲ್ಲವೆಂದು ಸೂಚಿಸ

ವಿವಿಧ ಸ್ಪರ್ಧೆಗಳಲ್ಲಿ ಜಯಶಾಲಿಗಳಾದವ ಸಚಿವರು ಬಹುಮಾನಗಳನ್ನು ವಿನಿಯೋಗ ಈ ಸಂಸ್ಥೆಯಲ್ಲಿ ನಡೆಯುತ್ತಿರುವ ಕೆಲಸಕಾರ್ಯ ಗಳಿಗಾಗಿ ಮೆಚ್ಚಿಗೆಯನ್ನು ಸೂಚಿಸಿ ಅದಕ್ಕೆ ಕ್ತವಾದ ಸಹಾಯ ನೀಡುವ ವಿಚಾರವನ್ನು ಶೀಲಿಸುವುದಾಗಿ ನುಡಿದರು ನಮ್ಮ ನಾಡಿನ ರು ಹಿತರುಣಿಯರು ರಾಮಾಯಣ, ಮಹಾಭ ತ ಮುಂತಾದ ಗ್ರಂಥಗಳಲ್ಲಿ ಉಕ್ತವಾಗಿರುವ ರತೀಯ ಸಂಸ್ಕೃತಿಯನ್ನು ಅರಿತು ಅದರ ಡೆದುಕೊಳ್ಳಬೇಕೆಂದು ಸೂಚಿಸಿದರು

ವಂದನಾರ್ಪಣೆ ಮತ್ತು ರಾಷ್ಟ್ರ ಗೀತೆ ನೆ ಸಮಾರಂಭವು ಮುಗಿಯಿತು ಇದೇ ಸ ಭದಲ್ಲಿ ಸಂಗೀತ, ನೃತ್ಯ ಮತ್ತು ನಾಟಕ ಪ್ರ ರ್ಶನಗಳನ್ನೂ ಏರ್ಪಡಿಸಲಾಗಿತ್ತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರ

ಬೆಳಗ್ಗೆ ೭-೫ ಗೋಟುವಾದ್ಯ ೭-೧೫ ನಾಗಮಣಿ-ದೇವರನಾಮ ೭-೩೦ ನಾಡಿ ರ ೮-೧೫ ಉದಯ ಸಂಗೀತ ಮಧ್ಯಾಹ್ನ ಮತ್ತು ಸಂಜೆ ೫ ೩೦ ಬಿ. ವರದರಾಜಯ್ಯಂ ರ್-ಸಂಗೀತ ೧೨ ೩೦ ರಿಕಾರ್ಡು ೧- ವನಿತಾವಿಹಾರ ೧-೫೦ ಗೋಟುವಾ ೩-೧೫ ಸಂಗೀತಕಛೇರಿ ಸಂಜೆ ೬-೫ ವಿ ಸಂಗೀತ. ೬-೩೦ ಅನ್ನಪೂರ್ಣ ರಘುಪತಿ ಕಾವ್ಯವಾಚನ ೭-೩೦ ಅಂತರರಾಷ್ಟ್ರೀಯ ಗದಲ್ಲಿ : ವಿಮರ್ಶೆ ೮ ರಂಗಭೂಮಿ : ಸ ಕಾರ್ಯಕ್ರಮ. ೮-೪೫ ಚಿತ್ರ ಸಂಗೀತ ೯- ಗೀತಾವಳಿ. ೯-೩೦ ಸಂಗೀತೋತ್ಸವ ಮ [illegible]

ಹಂಗೇರಿ ಸರ್ಕಾರದವರು ಅಲ್ಲಿನ ಅರ್ಥ ಮಂತ್ರಿ ಮಿಕಾಲ್ಸ್ ಕ್ರಿಸ್ಲರ್ ಮತ್ತು ಯ ನಾ ಮಂತ್ರಿ ಜಾನಾಸ್ ಮಾರ್ಟಿನ್‌ರ ವಜಾ ಮಾಡಿರುತ್ತಾರೆ

SRI GAYATH
TALKIES
Last day To
GONE WITH THE WI
From 1—1—1957
New Year's Special Attractio
M.G M's Thrilling Picture
R A N S O
Starring :- Glenn Ford and
Dona Reed

ಬಟ್ಟೆಗಳ ಶುಭ್ರತೆಗೆ
ಅಶೋಕ ನಂ. 908 ಮತ್ತು ಅಶೋಕ ನಂ. 44
ಸಾಬೂನುಗಳನ್ನೇ ಉಪಯೋಗಿಸಿರಿ
ಅಶೋಕ ಸೋಪ್ ಫ್ಯಾಕ್ಟರಿ, ಮೈಸೂರು.